ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ-23

ಗದಾಪರ್ವ, ಸೌಪ್ತಿಕಪರ್ವ ಮತ್ತು ಸ್ತ್ರೀಪರ್ವ

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೨೩

ಗದಾಪರ್ವ, ಸೌಪ್ತಿಕಪರ್ವ ಮತ್ತು ಸ್ತ್ರೀಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ವಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಗದಾಪರ್ವ, ಸೌಪ್ತಿಕಪರ್ವ ಮತ್ತು ಸ್ತ್ರೀಪರ್ವ-ಭಾರತತಾತ್ಪರ್ಯನಿರ್ಣಯ-ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಗದಾಪರ್ವ, ಸೌಪ್ತಿಕಪರ್ವ ಮತ್ತು ಸ್ತ್ರೀಪರ್ವ - ಭಾಗ ೨ಸಿ

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-01-3

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XXXVI + 583 = 619
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ ಮತ್ತು ಸಂಸ್ಕೃತ ಶ್ಲೋಕ ಲಿಪ್ಯಂತರ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಅಕ್ಷರ ಜೋಡಣೆ	-	ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ
ಮುದ್ರಕರು	-	ಪವನ್ ಪ್ರಿಂಟರ್ಸ್, ಬೆಂಗಳೂರು.
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.



ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ನುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಅಶ್ವತ್ಥಾಮರಿಂದ ಉಪಪಾಂಡವರ ಸಂಹಾರ. ಧೃಷ್ಟದ್ಯುಮ್ನನ ವಧೆ, ದುರ್ಯೋಧನನ ಮರಣ, ಅಶ್ವತ್ಥಾಮರಿಂದ 'ಬ್ರಹ್ಮಶಿರೋಸ್ತ್ರ ಪ್ರಯೋಗ, ಅಶ್ವತ್ಥಾಮರಿಗೆ ಶ್ರೀಕೃಷ್ಣನ ಶಾಪ. ಇಷ್ಟು ಸೌಪ್ತಿಕ ಪರ್ವದ ಪ್ರಮುಖ ಘಟ್ಟಗಳು.

ತೊಡೆ ಮುರಿದು ಬಿದ್ದ ದುರ್ಯೋಧನನು ಪಾಂಡವರ ಸಂಹಾರಕ್ಕಾಗಿ ಅಶ್ವತ್ಥಾಮರಿಗೆ ವರಣೆ ಕೊಡುತ್ತಾನೆ. ಅಂದುರಾತ್ರಿ ಭೀಮಾರ್ಜುನರಿಗೆ ಹೆದರಿ ಕೃಪ-ಕೃತವರ್ಮ- ಅಶ್ವತ್ಥಾಮರು ಗೊಂಡಾರಣ್ಯಕ್ಕೆ ಪ್ರವೇಶಿಸುತ್ತಾರೆ. ಅಲ್ಲಿ ನಿದ್ರೆ ಬಾರದೆ ಚಿಂತಿಸುತ್ತಾ ಕುಳಿತಿರುವ ಅಶ್ವತ್ಥಾಮರಿಗೆ ರಾತ್ರಿಕಾಲದಲ್ಲಿ ಗೂಬೆಯೊಂದು ಸಾವಿರಾರು ಕಾಗೆಗಳನ್ನು ಸಂಹರಿಸುತ್ತಿರುವ ದೃಶ್ಯವು ಕಾಣಿಸುತ್ತದೆ. ಅಶ್ವತ್ಥಾಮರು ಇದು ಭಗವಂತನೇ ನೀಡಿದ ಪ್ರೇರಣೆ ಎಂದು ಪಾಂಡುಪುತ್ರರನ್ನು ಸಂಹರಿಸಲು ಹೊರಡುತ್ತಾರೆ. ಪಾಂಡವರ ಶಿಬಿರದ ದ್ವಾರದಲ್ಲಿ ಶಿವನು ರಕ್ಷಕನಾಗಿ ನಿಂತಿರುವುದನ್ನು ಅವನ ಸುತ್ತಲೂ ಕೋಟಿ ರೂಪಗಳಿಂದ ನಿಂತಿರುವ ವಾಸುದೇವನನ್ನೂ ಕಾಣುತ್ತಾನೆ. ಭಯಗೊಂಡ ಅಶ್ವತ್ಥಾಮಾ ಮಾನಸಯಜ್ಞವನ್ನು ಆಚರಿಸಿ ಶ್ರೀಹರಿಯನ್ನು ಸಂತೋಷಗೊಳಿಸಿ ಶಿವನ ಮೂಲಕ ಆಯುಧಗಳನ್ನು ಉಪಪಾಂಡವರ ವಧೆಗಾಗಿ ಸ್ವೀಕರಿಸುತ್ತಾನೆ.

ಯುದ್ಧದಲ್ಲಿ ನಡೆಯುವ ವಧೆ ಶ್ರೀಹರಿಯ ಪೂಜೆ ಎಂಬ ಅನುಸಂಧಾನವಿದ್ದಾಗ ದೇವರೇ ಆ ವಧೆಗೆ ಸಹಕಾರ ನೀಡುತ್ತಾನೆ. ಉಪಪಾಂಡವರ ವಧೆಯು ಭಗವತ್ಸಂಕಲ್ಪವೆಂದೇ ಭಾವಿಸಬೇಕು. ಶಿವನಲ್ಲಿ ನಿಂತು ಸಂಹಾರಗೈವ ಶಕ್ತಿಯೂ ವಿಷ್ಣುವಿನದ್ದೇ ಎಂಬುದಕ್ಕೆ ನಿದರ್ಶನ ಉಪಪಾಂಡವರ ವಧೆ. ಆದರೆ ಅಶ್ವತ್ಥಾಮರು ಇಲ್ಲಿಗೆ ಮುಗಿಸದೆ ಸಮಸ್ತ ಪಾಂಡವರ ಸಂಹಾರಕ್ಕಾಗಿ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸುತ್ತಾರೆ. ಮುಂದೆ ವ್ಯಾಸರು ಬಂದು ಬುದ್ಧಿವಾದ ಹೇಳುತ್ತಾರೆ. ಇಷ್ಟಾದರೂ ಅಶ್ವತ್ಥಾಮರು ಬ್ರಹ್ಮಶಿರೋಸ್ತ್ರವನ್ನು ಉತ್ತರೆಯ ಗರ್ಭಕ್ಕೆ ಪ್ರಯೋಗಿಸುತ್ತಾರೆ. ಕೃಷ್ಣನು ಅಸ್ತ್ರವನ್ನು ಹಿಂತೆಗೆದುಕೊ ಎಂದಾಗ ಅಶ್ವತ್ಥಾಮರು ಕೃಷ್ಣನನ್ನು 'ನಿನಗೆ ತಂಗಿಮಗನ ಸಂತತಿಯಲ್ಲಿ ಮೋಹ' ಎಂದು ಹಂಗಿಸುತ್ತಾರೆ. ಈ ಪ್ರಸಂಗದಲ್ಲಿ ಕೃಷ್ಣನು ಸಿಟ್ಟಾಗುತ್ತಾನೆ.

'ಪಶ್ಯ ಮೇ ದುರ್ಮತೇ ವೀರ್ಯಂ ಯತ್ತೇ ಶಕ್ಯಂ ಕುರುಷ್ವತತ್' ಎಂದು ಘರ್ಜಿಸುತ್ತಾನೆ. ಅಶ್ವತ್ಥಾಮರನ್ನು ಉಗ್ರವಾಗಿ ಶಪಿಸುತ್ತಾನೆ, ದೇವರು ಶಪಿಸಿದ ಎಂಬ ಅಪರೂಪದ ಪ್ರಸಂಗವಿಲ್ಲಿದೆ. ಕೃಷ್ಣರೂಪದ ಶಾಪವನ್ನು ವ್ಯಾಸರೂಪದಿಂದಲೂ ಅನುಮೋದಿಸುತ್ತಾರೆ. ಎಂದೂ ಲಿಪ್ತನಾಗದಿರುವ ವ್ಯಕ್ತಿತ್ವ. ಅಶ್ವತ್ಥಾಮರಂತಹ ಜ್ಞಾನಿಗಳಿಗೂ ಕಲಿ ಸಮಾಗಮದ ಪ್ರಖರತೆ ಇಷ್ಟು ಘನವಾಗಿದೆ ಎಂದರೆ ನಮ್ಮಂಥವರ ಪಾಡೇನು? ಕಲಿ ಬಾಧೆಯನ್ನು ಶ್ರೀಹರಿಯ ಅನುಗ್ರಹದಿಂದಲೇ ದಾಟಬೇಕೇ ವಿನಾ ಬೇರೆ ಯಾವ ಉಪಾಯವೂ ಇಲ್ಲ ಎಂಬುದನ್ನು ಇಂತಹ ಪ್ರಸಂಗಗಳಿಂದ ಅರ್ಥೈಸಿಕೊಳ್ಳಬೇಕು. ಈ ಕಲಿಬಾಧೆಗೆ ಎಂದೂ ಆಪ್ತವಾಗದಿರುವ ವೈರತ್ವ ಭೀಮಸೇನನದ್ದು. ಅಂತಹ ಭೀಮನ ಅಪರ ಅವತಾರರಾದ ಶ್ರೀಮದಾಚಾರ್ಯರ ತತ್ವವಾದದ ಕಂಪಿನಲ್ಲಿ ಜೀವನ ಸಾಗಿಸಿದಾಗ ಕಲಿಯ ಕಂಪನಕ್ಕೆ ನಾವು ತುತ್ತಾಗೆವು. ಇಲ್ಲವಾದಲ್ಲಿ ಕಲಿಯ ಬಾಧೆ ತಪ್ಪಿದ್ದಲ್ಲ. ಕಲಿಯ ಕಾರ್ಯವನ್ನು ಹತ್ತಿಕ್ಕಿ ಕೃಷ್ಣನ ಅನುಗ್ರಹದಿಂದ ಕಲಿಯನ್ನು ನಿಗ್ರಹಿಸಿದ ಅಪ್ರತಿಮ ವೀರ ಭೀಮಸೇನ. ಕಲಿಯುಗದಲ್ಲಿ ವಾಸಿಸುತ್ತಿರುವ ನಮಗೆ ಭೀಮನ ಅನುಗ್ರಹ ಬಹಳ ಬೇಕು. ಇದಕ್ಕಾಗಿ ಕಲಿಯನ್ನು ನಿಗ್ರಹಿಸಿದ ಮಹಾಭಾರತದ ಕಥೆಯನ್ನು ಓದಬೇಕು.

ಇಂತಹ ಪ್ರಸಂಗಗಳನ್ನು ವ್ಯಾಸರ ಮಾತಿಗೆ ಚ್ಯುತಿಬಾರದಂತೆ ಅಂದವಾಗಿ ಅನುವಾದಿಸಿಕೊಟ್ಟವರು ನಮ್ಮವರೇ ಆದ ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯರು. ಶ್ರೀಮದಾಚಾರ್ಯರ ಸೇವೆಯನ್ನು ಪಾಜಕ ಕ್ಷೇತ್ರದಲ್ಲಿ ವಿಶೇಷವಾಗಿ ಮಾಡಿದ ಕಾರಣದಿಂದಲೇ ಕಲಿಯನ್ನು ನಿಗ್ರಹಿಸಿದ ಪ್ರಸಂಗವನ್ನು ಅನುವಾದಿಸಲು ಇವರಿಗೆ ಪ್ರಸಂಗ ಒದಗಿ ಬಂದಿದೆ ಎಂದು ಭಾವಿಸುತ್ತೇವೆ. ಸದಾಚಾರ ಸಂಪನ್ನರು-ವಿಮರ್ಶಕರು-ವಿದ್ವಾಂಸರೂ ಆದ ಇವರಿಂದ ಅನೇಕ ಮುಖದ ಜ್ಞಾನಕಾರ್ಯಗಳು ನಡೆಯಲೆಂದು ಶ್ರೀಕೃಷ್ಣ-ಮುಖ್ಯಪ್ರಾಣರಲ್ಲಿ ಪ್ರಾರ್ಥಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪ್ರಕಾಶಕರ ನುಡಿ

ಮಹಾಭಾರತದಲ್ಲಿ ಸೌಪ್ತಿಕ, ಸ್ತ್ರೀಪರ್ವಗಳು ಮಹತ್ವಪೂರ್ಣವಾದವುಗಳು. ಮಾರ್ಗಶಿರ ಶುದ್ಧ ತ್ರಯೋದಶಿಯಿಂದ ಆರಂಭಗೊಂಡ ಮಹಾಭಾರತ ಯುದ್ಧವು ಮಾರ್ಗಶಿರ ಬಹುಳ ಅಮಾವಾಸ್ಯೆಯಂದು ದುರ್ಯೋಧನನ ಸಂಹಾರದಲ್ಲಿ ಉಪಸಂಹಾರ ಹೊಂದಿತು. ಇಂತಹ ದುರ್ಯೋಧನನ ಮರಣದ ಕೊನೆಯ ಘಟನೆಗಳನ್ನು ನಿರೂಪಿಸುವ ಪರ್ವ ಸೌಪ್ತಿಕ ಪರ್ವ. ರಣರಂಗದಲ್ಲಿ ಹತನಾಗಿ ಬಿದ್ದ ದುರ್ಯೋಧನನು ಮರಳಿನಿಂದಲೇ ಅಶ್ವತ್ಥಾಮಾಚಾರ್ಯರಿಗೆ ತನ್ನ ರಾಜ್ಯದಲ್ಲಿ ಪಟ್ಟಾಭಿಷೇಕಗೈಯ್ಯುತ್ತಾನೆ. ಕೌರವರ ಪ್ರೀತಿಗಾಗಿ ಅಶ್ವತ್ಥಾಮಾಚಾರ್ಯರು ಉಪಪಾಂಡವ ವಧೆಯ ಸಂಕಲ್ಪವನ್ನು ಮಾಡುತ್ತಾರೆ. ರುದ್ರದೇವರ ಅನುಗ್ರಹದಿಂದ ಭಗವತ್ಸಂಕಲ್ಪವನ್ನನುಸರಿಸಿ ಉಪಪಾಂಡವರನ್ನು ವಧೆಗೈದ ಅಶ್ವತ್ಥಾಮರು ಕೌರವನಿಗೆ ಮೃತಪುತ್ರರ ಬಿಸಿ ರಕ್ತದಿಂದ ತಣಿಸಿ ಸುಖದಿಂದ ಅವನು ಪ್ರಾಣತೆತ್ತುವಂತೆ ಸಹಕರಿಸುತ್ತಾರೆ. ತಾನು ಸತ್ಕರ್ಮವನ್ನೇ ಮಾಡಿ ಸಾಯುತ್ತಿದ್ದೇನೆ ಎಂದು ಭಾವಿಸುತ್ತಾ ಮರಣೋನ್ಮುಖನಾದ ಕೌರವನು ಪಾಂಡವರಿಗೆ, ಜಗತ್ತಿಗೆ ಅನ್ಯಾಯ ಮಾಡಿದ ಮಹಾಪರಾಧದಿಂದ ಮುಂದೆ ಅಂಧಂತಮಸ್ಸನ್ನೇ ಪ್ರವೇಶಿಸುತ್ತಾನೆ.

ಇತ್ತ ಉಪಪಾಂಡವ ವಧೆಯಿಂದ ಕ್ರುದ್ಧನಾದ ಭೀಮನು ದ್ರೌಣಿಯನ್ನು ಹಣಿಯಲು ಹವಣಿಸುತ್ತಾನೆ. ಕೃಷ್ಣನು ಅವನನ್ನು ಸಮಾಧಾನ ಪಡಿಸುತ್ತಾನೆ. ಇಷ್ಟಾದರೂ ಕೌರವನ ಮೇಲಿನ ಮೋಹದಿಂದ ಕ್ರುದ್ಧನಾದ ದ್ರೌಣಿಯು ಅಪಾಂಡವ ಹೇತುವಿನಿಂದ ಬ್ರಹ್ಮಶಿರೋಸ್ತ್ರವನ್ನೇ ಪ್ರಯೋಗಿಸುತ್ತಾನೆ. ಇದಕ್ಕೆ ಪ್ರತಿಯಾಗಿ ಕೃಷ್ಣನ ಆಜ್ಞೆಯಿಂದ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸುತ್ತಾನೆ. ಈ ಉಲ್ಬಣವಾದ ಅಸ್ತ್ರಗಳಿಂದ ಜಗತ್ತೇ

ಕ್ಷಯವಾಗುವ ಸ್ಥಿತಿ ಮುಟ್ಟಿದಾಗ ವ್ಯಾಸರು ಬಂದು ಅಸ್ತ್ರೋಪಸಂಹಾರಕ್ಕೆ ಆದೇಶಿಸುತ್ತಾರೆ. ಆದರೆ ನೈಷ್ಠಿಕ ಬ್ರಹ್ಮಚರ್ಯದಿಂದ ವಂಚಿತನಾದ ಅಶ್ವತ್ಥಾಮರು ಬ್ರಹ್ಮಶಿರೋಸ್ತ್ರವನ್ನು ಉಪಸಂಹರಿಸಲು ಅಸಮರ್ಥರಾದಾಗ ಪ್ರಾಜಾಪತ್ಯ ಬ್ರಹ್ಮಚರ್ಯದಲ್ಲಿ ನಿರತನಾದ ಅರ್ಜುನನು ಅಶ್ವತ್ಥಾಮರ ಬ್ರಹ್ಮಾಸ್ತ್ರವನ್ನು ತಾನೇ ಉಪಸಂಹರಿಸುತ್ತಾನೆ. ಇಷ್ಟಾದರೂ ಅಶ್ವತ್ಥಾಮರ ಕ್ರೌರ್ಯ ಮುಕ್ತಾಯವಾಗುವುದಿಲ್ಲ. ಉತ್ತರೆಯ ಗರ್ಭದಲ್ಲಿರುವ ಶಿಶುವಿನ ಮೇಲೆ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸುತ್ತಾರೆ. ಇಂತಹ ಸ್ಥಿತಿಯಲ್ಲಿ ಉತ್ತರೆಯು ಕೃಷ್ಣನಲ್ಲಿ ಪ್ರಾರ್ಥಿಸಿದಾಗ ಕೃಷ್ಣನು ಆ ಶಿಶುವನ್ನು ರಕ್ಷಿಸುತ್ತಾನೆ. ಅಶ್ವತ್ಥಾಮರನ್ನು ಹೆಡೆಮುರಿ ಕಟ್ಟಿದ ಭೀಮಸೇನನು ಅವನ ಶಿರೋಮಣಿಯನ್ನು ಅಪಹರಿಸುತ್ತಾನೆ. ಈ ಎಲ್ಲ ಸ್ಥಿತಿಗಳನ್ನು ಕೇಳಿಸಿಕೊಂಡು ದುಃಖಿತಪ್ತನಾದ ಧೃತರಾಷ್ಟ್ರನಿಗೆ ವಿದುರ ಸಂಜಯರು ಸಾಂತ್ವನ ಹೇಳುತ್ತಾರೆ. ಹೀಗೆ ಸ್ತ್ರೀಪರ್ವವು ಮುಂದುವರೆಯುತ್ತದೆ.

ಮೃತಪುತ್ರರನ್ನೆಲ್ಲ ನೋಡಬೇಕೆಂದು ಧೃತರಾಷ್ಟ್ರನು ಕುರುಭೂಮಿಗೆ ಸಾಗುತ್ತಾನೆ. ಎಲ್ಲರೂ ಭೀಮನ ಪರಾಕ್ರಮದಿಂದಲೇ ಹತರಾಗಿದ್ದಾರೆಂದು ಭೀಮನನ್ನೇ ಸಂಹರಿಸಲು ಹವಣಿಸುತ್ತಾನೆ. ಈ ಪ್ರಸಂಗದಲ್ಲಿ ಕೃಷ್ಣನು ಉಕ್ಕಿನ ಪ್ರತಿಮೆಯನ್ನು ತಳ್ಳಿ ಧೃತರಾಷ್ಟ್ರನ ಕ್ರೌರ್ಯವೇನೆಂಬುದನ್ನು ತೋರಿಸುತ್ತಾನೆ. ಮುಂದೆ ಗಾಂಧಾರಿಯು ಕೃಷ್ಣನ ಮೇಲೆ ಕ್ರುದ್ಧಳಾಗಿ ಸಮಸ್ತ ಯಾದವ ಕುಲದ ಸಂಹಾರ ಶಾಪವನ್ನು ನೀಡುತ್ತಾಳೆ. ಗಾಂಧಾರಿಯ ಕ್ರೋಧವನ್ನು ವ್ಯಾಸರು ಉಪಶಮನ ಮಾಡುತ್ತಾಳೆ. ಇದರಿಂದ ಅತಿಯಾಗಿ ಸಂಪಾದಿಸಿದ ತನ್ನ ಪಾತಿವ್ರತ್ಯದ ಫಲವನ್ನು ಗಾಂಧಾರಿಯು ಕೃಷ್ಣ ಶಾಪದಿಂದ ಕಳೆದು-ಕೊಳ್ಳುವಂತಾಗುತ್ತದೆ. ಸತ್ತವರಿಗೆಲ್ಲ ಉದಕಾಂಜಲಿಗಳನ್ನು ನೀಡಿ ಸಮಾಧಾನವನ್ನು ಹೊಂದುವಂತಹ ಪ್ರಸಂಗವು ಸ್ತ್ರೀಪರ್ವದಲ್ಲಿ ಮೂಡಿ ಬಂದಿದೆ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಸೌಪ್ತಿಕ, ಸ್ತ್ರೀ ಪರ್ವದ ಭಾಗವನ್ನು ಅರ್ಥಸಹಿತ ಒಂದು ಸಂಪುಟಗಳಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ

ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಸೌಪ್ತಿಕ ಪರ್ವದ ಆರಂಭದ ಕೆಲವು ಅಧ್ಯಾಯಗಳನ್ನು ಅನುವಾದಿಸಿಕೊಟ್ಟ ಅದಮಾರು ಕಿರಿಯಪಟ್ಟ ಪರಮಪೂಜ್ಯ ಶ್ರೀ ಶ್ರೀ ಈಶಪ್ರಿಯತೀರ್ಥ ಶ್ರೀಪಾದರನ್ನು ಕೃತಜ್ಞತಾ ಪೂರ್ವಕ ವಂದಿಸುತ್ತೇವೆ.

ಸೌಪ್ತಿಕ, ಐಷಿಕ, ಸ್ತ್ರೀ ವಿಲಾಪ, ಶ್ರಾದ್ಧಪರ್ವಗಳ ಅನುವಾದವನ್ನು ಸುಂದರವಾಗಿ ಮಾಡಿಕೊಟ್ಟ ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯರನ್ನು ತತ್ವಸಂಶೋಧನ ಸಂಸತ್ನ ವತಿಯಿಂದ ವಿಶೇಷವಾಗಿ ಕೃತಜ್ಞತಾ ಪೂರ್ವಕವಾಗಿ ಅಭಿನಂದಿಸುತ್ತೇವೆ.

ಅದೇ ರೀತಿಯಲ್ಲಿ ಇಂತಹ ಅದ್ಭುತವಾದ ಈ ಕೃತಿ ಹೊರಬರಲು ಆರ್ಥಿಕವಾಗಿ ಎಲ್ಲ ರೀತಿಯ ಸಹಕಾರ ನೀಡಿರುವಂತಹ ನಮ್ಮ ಘನವೆತ್ತ ಕರ್ನಾಟಕ ಸರ್ಕಾರಕ್ಕೆ, ಅದರ ಎಲ್ಲ ಪದಾಧಿಕಾರಿಗಳಿಗೆ ಸಂಶೋಧನ ಸಂಸತ್ನ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅದೇ ರೀತಿಯಲ್ಲಿ ಈ ಶ್ರೀಮಹಾಭಾರತ ಶುದ್ಧಪಾಠದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಸಮರ್ಥವಾಗಿ ಆ ಯೋಜನೆ ಕಾರ್ಯಗತ ಆಗುವಲ್ಲಿ ಪೂರ್ಣಪ್ರಮಾಣದಲ್ಲಿ ಶ್ರಮಿಸುತ್ತಿರುವ ನಮ್ಮ ನಾಡಿನ ಖ್ಯಾತ ಪ್ರವಚನಕಾರರೂ, ವಿದ್ವಾಂಸರೂ ಆಗಿರುವಂತಹ ಡಾ॥ ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ಮನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣದ ಬೃಹತ್ ಯೋಜನೆಯಲ್ಲಿ ಈ ಇಳಿ ವಯಸ್ಸಿನಲ್ಲಿಯೂ ನಮ್ಮ ಜೊತೆಗೇ ಇದ್ದುಕೊಂಡು ಸಂಪೂರ್ಣ ಸಹಕಾರವನ್ನು

ನೀಡುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟು ಹಾಗೂ ಪುಟ ಸಂಯೋಜನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು. ಹಾಗೆಯೇ ತಿದ್ದುಪಡಿಯಲ್ಲಿ ಸಹಕಾರ ಮಾಡಿಕೊಟ್ಟಿರುವ ಶ್ರೀಯುತ ಶ್ರೀವತ್ಸ ಆಚಾರ್ಯ (ಸಿದ್ಧಾಂತಿ) ಇವರಿಗೂ ಧನ್ಯವಾದಗಳು. ಹಾಗೆಯೇ ನಮಗೆ ಬೇಕಾದ ಕ್ಲೃಪ್ತ ಸಮಯದಲ್ಲಿ ಸುಂದರವಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಪವನ್ ಪ್ರಿಂಟರ್ಸ್‌ನ ಮಂಜುನಾಥ್‌ರವರಿಗೂ ನಮ್ಮ ಸಂಸ್ಥೆಯ ಪರವಾಗಿ ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಶ್ರಮಿಸಿದ ಸಂಶೋಧನ ಮಂದಿರದ ಎಲ್ಲಾ ಕಾರ್ಯಕಾರಿಣಿ ವರ್ಗಕ್ಕೂ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಸೌಪ್ತಿಕ, ಸ್ತ್ರೀ ಪರ್ವದ ಅಧ್ಯಯನವನ್ನು ಮಾಡಿ ತನ್ಮೂಲಕ ಸಾಧನೆ ಮಾರ್ಗವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಗವಂತನನ್ನು ಒಲಿಸಿಕೊಳ್ಳುವುದರ ಬಗ್ಗೆ ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಂತೆ ಎಲ್ಲರೂ ಕೈ ಜೋಡಿಸುವ ಮೂಲಕ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದು ಅಪೇಕ್ಷಿಸುತ್ತಿದ್ದೇನೆ.

ಪ್ರಕಾಶಕರು

ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್

ನಿರ್ದೇಶಕರು, ತತ್ತ್ವಸಂಶೋಧನಸಂಸತ್,

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಸಂಪುಟ ಪ್ರವೇಶಿಸುವ ಮುನ್ನ

ಶ್ರೀಮನ್‌ಮಹಾಭಾರತವು ವೀರರಸ ಪ್ರಧಾನವಾಗಿ ಕಂಡರೂ ಅದರ ಗುರಿ ಭಕ್ತಿರಸದ ಬೋಧನೆ. ವಸ್ತುತಃ ಎಲ್ಲ ರಸಗಳ ಸವಿಜಿತಣವನ್ನು ಉಣಬಯಸಿದಷ್ಟು ನೀಡುವ ಮಹಾಕಾವ್ಯವಿದು. ಬ್ರಹ್ಮದೇವನಿಂದಾರಂಭಿಸಿ ಪಂಕ್ತಿಯ ಕೊನೆಯಲ್ಲಿರುವ ವ್ಯಕ್ತಿಗೂ ಸಂತೃಪ್ತಿಯನ್ನು ನೀಡುವ ಅದ್ಭುತ ಕಾವ್ಯ. ಅದಕ್ಕೆಂದೆ 'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್' (ಇಲ್ಲಿರುವುದೇ ಬೇರೆಡೆಯಲ್ಲಿ ಕಾಣುವೆವು, ಇಲ್ಲಿ ಇಲ್ಲದ್ದು ಇನ್ನೆಲ್ಲೂ ಸಿಗದು) ಎಂದುರು ಮಹಾಭಾರತವನ್ನು ಉಂಡ ಭಾವುಕರು. ನಮ್ಮ ಕನ್ನಡದ ಹಿರಿಯ ಕವಿ ಗದುಗಿನ ನಾರಾಯಣಪ್ಪರು ಹೀಗೆ ಉದ್ಗರಿಸಿರುವರು-

'ಆರಸು ಗಳಿಗೆ ಇದು ವೀರ
ದ್ವಿಜರಿಗೆ ಪರಮವೇದದ ಸಾರ
ಯೋಗೀಶ್ವರರ ತತ್ತ್ವವಿಚಾರ
ಮಂತ್ರಿ ಜನಕೆ ಬುದ್ಧಿಗುಣ
ವಿದ್ಯಾಪರಿಣತರ ಅಲಂಕಾರ
ಕಾವ್ಯಕೆ ಗುರು.....' ಎಂದು.

ಸೌಪ್ತಿಕಪರ್ವ

ಪಕೃತ ಸಂಪುಟದಲ್ಲಿ ಸೌಪ್ತಿಕ ಮತ್ತು ಸ್ತ್ರೀಪರ್ವಗಳು ಅನುವಾದಗೊಂಡಿವೆ.

ಭೀಭತ್ಸರಸದ ಪಾರಾಕಾಷ್ಠೆಯನ್ನು ಸೌಪ್ತಿಕಪರ್ವದಲ್ಲಿ ಕಾಣಬಹುದಾಗಿದೆ. ಹಾಗೆಯೇ ಕರುಣಾರಸದ ಪರಾಕಾಷ್ಠೆಯನ್ನು ಸ್ತ್ರೀಪರ್ವದಲ್ಲಿ ಕಾಣಬಹುದಾಗಿದೆ. ವಸ್ತುತಃ ಭೀಷ್ಮ, ದ್ರೋಣ ಮುಂತಾದ ಪರ್ವಗಳಲ್ಲಿ ಭೀಭತ್ಸವನ್ನು ಕಾಣಬಹುದಾಗಿದ್ದರೂ ಸೌಪ್ತಿಕದಲ್ಲಿ ಆ ರಸವು ವಿಶೇಷವಾಗಿ ಪ್ರಕಟವಾಗಿದೆ.

ಅಶ್ವತ್ಥಾಮನಿಗೆ ಯುದ್ಧಕ್ಕೆ ಸ್ಫೂರ್ತಿ-

ಯುದ್ಧಾನಂತರದಲ್ಲಿ ಕೌರವರ ಸೇನೆಯಲ್ಲಿ ಉಳಿದವರು ಮೂವರು, ಅಶ್ವತ್ಥಾಮ, ಕೃಪ ಮತ್ತು ಕೃತವರ್ಮ. ಈ ಮೂವರು ಸೋಲಿನ ಅಸಮಧಾನವನ್ನು ಒಡಲಲ್ಲಿ ತುಂಬಿಕೊಂಡು ಪಾಂಡವರಿಂದ ಭೀತರಾಗಿ ರಣರಂಗದಿಂದ ಹೊರ ನಡೆದರು. ಕಾಡಿನಲ್ಲಿ ಯಾರೂ ಸುಳಿಯದ ರಹಸ್ಯಸ್ಥಳದಲ್ಲಿ ದೊಡ್ಡ ಆಲದ ಮರದ ಬುಡದಲ್ಲಿ ಹುಲುಸಾಗಿ ಬೆಳೆದ ಪೊದೆಯ ನಡುವೆ ಅಡಗಿ ಕುಳಿತರು. ಅತ್ಯಂತವಾಗಿ ಬಳಳಿದ

ಅವರಲ್ಲಿ ಈರ್ವರು ನಿದ್ರೆಗೆ ಶರಣಾದರು. ಅತ್ಯಮರ್ಷಿಯಾದ ಪಾಂಡವರಿಗೆ ವಿಶೇಷವಾಗಿ ಪಾಂಚಾರಲಿಗೆ ಪ್ರತೀಕಾರ ಮಾಡಲು ಹವಣಿಸುತ್ತಿದ್ದ ಅಶ್ವತ್ಥಾಮನಿಗೆ ನಿದ್ರೆ ಬಾರಲಿಲ್ಲ. ಆಗ ಅಲ್ಲೊಂದು ಘಟನೆಯು ಜರುಗಿತು. ಇವರು ತಂಗಿದ್ದ ಆಲದ ಮರದಲ್ಲಿ ಸಾವಿರಾರು ಕಾಗೆಗಳು ಗೂಡು ಕಟ್ಟಿಕೊಂಡು ವಿಶ್ರಮಿಸುತ್ತಿದ್ದವು. ರಾತ್ರಿಯಲ್ಲಿ ಸಂಚರಿಸುವ ಗೂಗೆಯೊಂದು ಅಲ್ಲಿಗಾಗಮಿಸಿತು. ಆ ಗೂಗೆಯು ಅಲ್ಲಿರುವ ಎಲ್ಲ ಕಾಗೆಗಳನ್ನು ಕುಕ್ಕಿ ಕುಕ್ಕಿ ಸಂಹರಿಸಿತು. ಆ ಕಾಗೆಗಳ ಹಿಂಡು ಒಂಟಿ ಗೂಗೆಯಿಂದ ಸಾವನ್ನಪ್ಪಿತು. ಈ ಘಟನೆಯು ಅಶ್ವತ್ಥಾಮನಿಗೆ ಪಾಂಡವರ ಸೇನೆಯನ್ನು ಸೆದೆಬಡಿಯಲು ಸ್ಫೂರ್ತಿಯಾಯಿತು.

ಪ್ರಪಂಚದಲ್ಲಿನ ಅತಿ ಕ್ರೂರ ಘಟನೆ-

ಯುದ್ಧದಲ್ಲಿ ಹೋರಾಡಿ ಆಯಾಸಗೊಂಡ ಪಾಂಡವರ ಸೇನೆಯು ಮೈಮರೆತು ಮಲಗಿದೆ, ಈ ಸರಿರಾತ್ರಿಯಲ್ಲಿ ಆ ಶಿಬಿರಕ್ಕೆ ನುಗ್ಗಿ ಶತ್ರುಸೇನೆಯನ್ನು ಸದೆ ಬಡಿಯಲು ನನಗೆ ಇದು ಸೂಚಿಸುತ್ತಿದೆ' ಎಂದು ಭಾವಿಸಿದ ಅಶ್ವತ್ಥಾಮನು ಶಿಬಿರಕ್ಕೆ ನುಗ್ಗಿದ ತನ್ನ ಮನಸ್ಸಿಗೆ ತೋಚಿದಂತೆ ಮಲಗಿದ್ದ ಪಾಂಚಾಲರನ್ನು ಪಾಂಡವರ ಪುತ್ರರನ್ನು ಅಳಿದುಳಿದ ಸೇನೆಯನ್ನು ತರಿದನು. ರುದ್ರನರ್ತನದಿಂದ ಕುಣಿದನು. ಶಿಬಿರಕ್ಕೆ ಬೆಂಕಿಯಿಟ್ಟು ತನ್ನ ಒಳ ಕಿಚ್ಚನ್ನು ಹೊರಹಾಕಿದನು. ಆ ಯುದ್ಧದಲ್ಲಿ ಪಾಂಚಾಲರ ಧೃಷ್ಟದ್ಯುಮ್ನ, ಶಿಖಂಡಿ ಮುಂತಾದ ದ್ರೌಪದಿಯ ಸಹೋದರರು, ಪ್ರತಿವಿಂಧ್ಯ ಮೊದಲಾದ ದ್ರೌಪದಿಯ ಪುತ್ರರು, ಪಾಂಡವರ ಒಂದು ಅಕ್ಷೌಹಿಣಿ ಸೇನೆಯು, ಉಳಿದ ಗಜಪಡೆ, ಅಶ್ವಪಡೆ, ಪದಾತಿಗಳು, ರಥಿಕರು, ಸೇನಾಸಹಾಯಕರು, ಉಪಚಾರಕರು, ಪರಿಚಾರಕರು, ಸ್ತ್ರೀಯರು, ವೈದ್ಯರು, ಮಕ್ಕಳು ಹೀಗೆ ಅಪಾರ ಪ್ರಮಾಣದಲ್ಲಿ ಜೀವದ ಮತ್ತು ಆಸ್ತಿಯ ಹಾನಿಯು ಉಂಟಾಯಿತು.

ಪ್ರಪಂಚದ ಸಮಗ್ರ ಇತಿಹಾಸದಲ್ಲಿ ಇಂತಹ ಭಾರೀ ಕ್ರೌರ್ಯ ಅಧರ್ಮದ ಪರಾಕಾಷ್ಠವನ್ನು ಬೀಭತ್ಸವನ್ನು ಕಾಣಲಾರೆವು. ಇತ್ತೀಚೆಗೆ ನಡೆದ ಯಾವ ಭಯೋತ್ಪಾದಕರ ದಾಳಿಯೂ ಇದರ ಒಂದಂಶಕ್ಕೂ ಸರಿಯಾಗಲಾರದು ಎಂದರೆ ಅತಿಶಯೋಕ್ತಿಯಾಗದು.

ಕಲಿಯ ಪ್ರಭಾವ -

ಆ ರಾತ್ರಿಯಲ್ಲಿ ಅಶ್ವತ್ಥಾಮನು ಯುದ್ಧಕ್ಕೆ ಸಾಗುವ ಮುನ್ನ ತನ್ನ ತೀರ್ಮಾನವನ್ನು ತನ್ನೊಡನಿದ್ದ ಕೃಪ-ಕೃತವರ್ಮರಿಗೆ ತಿಳಿಸಿದನು. ಈ ಧರ್ಮಬಾಹಿರವಾದ

ಬರ್ಬರಕೃತ್ಯವು ಸಲ್ಲದು ಎಂದು ಕೃಪರು ಆತನಿಗೆ ತಿಳಿ ಹೇಳಿದರು- 'ನಿಃಶಸ್ತ್ರರು, ಮಲಗಿದವರು, ರಥಹೀನರು ಇಂತಹವರ ಮೇಲೆ ಎರಗುವುದು ತಪ್ಪು. ಮತ್ತು ಶಿಬಿರದಲ್ಲಿ ಸ್ತ್ರೀಯರು, ವೈದ್ಯರು ಮತ್ತುಳಿದ ಪರಿಚಾರಕರು ಇರುವರು. ಇವರ ಮೇಲೆ ಶಸ್ತ್ರಗಳನ್ನು ಪ್ರಯೋಗಿಸುವುದು ತಪ್ಪು. ಈ ವರೆಗಿನ ಯುದ್ಧದಲ್ಲಿ ಆದ ಸೋಲಾಗಲೀ ಗೆಲುವಾಗಲೀ ದೈವ ನಿಶ್ಚಯದಂತೆ ನಡೆದಿದೆ. ಒಂದೊಂಮ್ಮೆ ನೀನು ಶತ್ರುಗಳಿಗೆ ಪ್ರತೀಕಾರ ಮಾಡಲೇಬೇಕೆಂದು ಬಯಸುವದಾದಲ್ಲಿ ಪ್ರಾಜ್ಞಳಾದ ಗಾಂಧಾರಿದೇವಿಯನ್ನು, ವಿದುರರನ್ನು ಸಂದರ್ಶಿಸಿ ತೀರ್ಮಾನಿಸುವುದು ಒಳಿತು. ಅಥವಾ ಬೆಳಗಾದ ನಂತರ ನಾವು ಮೂವರು ಸೇರಿ ಯುದ್ಧವನ್ನು ಸಾರುವ. ನಮ್ಮ ಅದಟಿನ ಮುಂದೆ ಪಾಂಡವರ ಸೇನೆಯು ಅತಿ ದುರ್ಬಲ, ಜಯವು ನಮ್ಮದೆ, ತುಂಬ ಬಳಲಿರುವಿ, ಮಲಗು ಸ್ವಲ್ಪವಿಶ್ರಮಿಸು' ಎಂದು.

ಪಾಂಡವರು ಧರ್ಮದಿಂದ ಹೋರಾಡಿರುವರಾ ? ಪ್ರಯೋಪವೇಶಕ್ಕೆ ಕುಳಿತಿದ್ದ , ಎಲ್ಲರಿಗೂ ಗುರುಗಳಾದ ನನ್ನ ತಂದೆಯನ್ನು ಆ ಪಾಪಿ ಧೃಷ್ಟದ್ಯುಮ್ನನು ಕೊಂದಿದ್ದು ಸರಿಯೇ ? ಹೂತಿದ್ದ ರಥದ ಚಕ್ರವನ್ನು ಮೇಲೆತ್ತುತ್ತಿದ್ದ ಕರ್ಣನ ಶಿರವನ್ನು ತರಿದಿದ್ದು ಸರಿಯೇ ? ಮಾವ! ಮನುಷ್ಯನು ಒಂದು ರೀತಿಯಲ್ಲಿ ಯೋಚಿಸುತ್ತಾನೆ. ಆತನ ಯೋಚನೆಗೆ ಪೂರಕವಾಗಿ ಯಾರು ಸ್ಪಂಧಿಸುವರೋ ಅವರು ಆತನಿಗೆ ಹಿತಕಾರರು. ಯಾರು ಸ್ಪಂದಿಸುವುದಿಲ್ಲವೋ ಅವರನ್ನು ಆತನು ಶತ್ರುಗಳು ಎಂದೇ ಭಾವಿಸುವನು. ವಸ್ತುತಃ ತಾನೇ ಹಿಂದೆ ತೀರ್ಮಾನಿಸಿದ್ದನ್ನು ಕಾಲಾನಂತರದಲ್ಲಿ ತಪ್ಪು ಎಂದು ಒಪ್ಪುವನು. ಆದರೂ ತತ್ಕಾಲದ ತೀರ್ಮಾನವನ್ನು ಬಿಡಲು ಒಪ್ಪನು. ಆದ್ದರಿಂದ ನಾನು ಈ ಕೂಡಲೆ ಪಾಂಡವರ ವಿನಾಶಕ್ಕೆ ಹೊರಡುವೆನು ಎನ್ನುತ್ತಾ ರಥವನ್ನೇರಿದನು.

ದುರ್ಯೋಧನನು ಬಾಲ್ಯದಿಂದಾರಂಭಿಸಿ ಪಾಂಡವರಿಗೆ ವಿಷವಿಕ್ಕುವುದು, ಅಗ್ನಿಯಿಕ್ಕುವುದು, ಆಸ್ತಿಯನ್ನು ಲಪಟಾಯಿಸುವುದು ಈ ಮುಂತಾದ ದ್ರೋಹವನ್ನೆಸಗಿದ್ದರೂ ಅದಾವುದೂ ಅಶ್ವತ್ಥಾಮನ ಚಿಂತನಗೆ ಬರಲಿಲ್ಲ. ಏಕಾಕಿಯಾಗಿದ್ದ ಅಭಿಮನ್ಯುವನ್ನು ಆರು ಮಂದಿ ಅತಿರಥಮಹಾರಥರು ಒಟ್ಟಾಗಿ ಬಲಿತೆಗೆದುಕೊಂಡಿದ್ದರು. ಪಾಂಡವರ ಸೋದರಮಾವನಾದ ಶಲ್ಯರಾಜನನ್ನು ಮೋಸಗೊಳಿಸಿ ತನ್ನೆಡೆಗ ದುರ್ಯೋಧನನು ಸೆಳೆದುಕೊಂಡಿದ್ದನು. ಇದಾವುದೂ ಅನ್ಯಾಯವೆಂದು ಅಶ್ವತ್ಥಾಮನ ಅರಿವಿಗೆ ಬರಲಿಲ್ಲ. ಕಲಿಯ ಪ್ರಭಾವವು ಮಾನವನ ವಿವೇಕವನ್ನೇ ಮಸಡುಗೊಳಿಸುವುದು ಎನ್ನಲು ಈ ಅಶ್ವತ್ಥಾಮನು ಒಂದು ಉದಾಹರಣೆ.

ವಿಧಿನಿರ್ಣಯ - ಧೃತರಾಷ್ಟ್ರನು ಪಾಂಡವರಿಗಾದ ಅಪಾರ ಹಾನಿಯನ್ನು ಕೇಳಿ ಒಳಗೆ ಹರ್ಷಿಸಿದನು. ಸಂಜಯನಲ್ಲಿ ಪ್ರಶ್ನಿಸಿದನು. ಈ ಅಶ್ವತ್ಥಾಮನು ಇಂಥಹ ಮಹತ್ಕಾರ್ಯವನ್ನು ಈ ಮೊದಲೆ ಏಕೆ ಮಾಡಲಿಲ್ಲ?

'ಕೋ ಹಿ ತೇಷಾಂ ಸಮಕ್ಷಂ ತಾನ್ ಹನ್ಯಾದಪಿ ಮರುತ್ಪತಿಃ ? (ಕೃಷ್ಣ ಪಾಂಡವರು ಮತ್ತು ಸಾತ್ಯಕಿ ಇವರ ಉಪಸ್ಥಿತಿಯಲ್ಲಿ ಯಾವ ವಾಯುದೇವನು ಪಾಂಡವರ ಪಕ್ಷೀಯರನ್ನು ಸಂಹರಿಸಲು ಸಮರ್ಥನಾಗನು?)' ಎಂದು ಸಂಜಯನು ಧೃತರಾಷ್ಟ್ರನಿಗೆ ಉತ್ತರಿಸುತ್ತಾನೆ. ಇವರುಗಳ ಅನುಪಸ್ಥಿತಿಯಲ್ಲಿ ಈ ದುರ್ಘಟನೆಯು ನಡೆಯಿತು. ವಿಧಿಯು ಈ ಅವಘಡವನ್ನು ನಿಶ್ಚಯಿಸಿತ್ತು, ಅಶ್ವತ್ಥಾಮನನ್ನು ನಿಮಿತ್ತನನ್ನಾಗಿ ಮಾಡಿಕೊಂಡು ತನ್ನ ನಿರ್ಣಯವನ್ನು ಕಾರ್ಯಗತಗೊಳಿಸಿತು.

ಶ್ರೀವಾಸುದೇವನ ಆಜ್ಞೆಯಿಂದ ರುದ್ರದೇವನು ಪಾಂಡವರ ಸೇನೆಯನ್ನು ಸಂರಕ್ಷಿಸಲು ಆ ಶಿಬಿರಲ್ಲಿ ಸನ್ನಿಹಿತನಾಗಿದ್ದನು. ಆ ಪಿನಾಕಧರನು ತನ್ನ ಅಂಶೋತ್ಪನ್ನನಾದ ಅಶ್ವತ್ಥಾಮನನ್ನು ಈಗಲೂ ತಡೆದನು. ನಂತರದಲ್ಲಿ ಹರಿಯ ಇಚ್ಛೆ ಏನೆಂದು ತಿಳಿದು ಆ ಅಶ್ವತ್ಥಾಮನಿಗೆ ಸವಡನ್ನಿತ್ತನು. ಈ ಅಂಶವನ್ನು ಶ್ರೀಮದಾಚಾರ್ಯರು ತಮ್ಮ ತಾತ್ಪರ್ಯ ನಿರ್ಣಯದಲ್ಲಿ ಸೂಚಿಸಿದ್ದಾರೆ.

ಉಗ್ರರೂಪಧರಂ ರುದ್ರಂ ಸ್ವೀಯಾಂ ತನುಮೇವ ಸಃ ।
ಪರೀತಂ ವಾಸುದೇವೇನ ಬಹುಕೊಟಿ ಸ್ವರೂಪಿಣಾ ॥
ದೃಷ್ಟ್ವೈವ ವಾಸುದೇವಂ ತಂ ಅತ್ರಸದ್ ಗೌತಮೀಸುತಃ ।

(ತನ್ನ ಮೂಲರೂಪಿಯಾದ ಉಗ್ರರೂಪವನ್ನು ಧರಿಸಿದ ಅಸಂಖ್ಯಾತ ವಾಸುದೇವ ರೂಪಗಳಿಂದ ಸುತ್ತುವರೆದು ನಿಂತ ರುದ್ರನನ್ನು ಕಂಡ ಅಶ್ವತ್ಥಾಮನು ಬೆಚ್ಚಿದ.)

ಅರಕ್ಷಂ ಪಾರ್ಥಶಿಬಿರಮ್ ಇಯಂತಂ ಕಾಲಮೇವ ತು ।
ತದಿಚ್ಛಯೈವ ನಿರ್ದಿಷ್ಟೋ ದಾತ್ಸ್ಯೇ ಮಾರ್ಗಂ ತವಾದ್ಯ ಚ ॥

(ಆಗ ಅಶ್ವತ್ಥಾಮನು ರುದ್ರದೇವನನ್ನು ಉದ್ದೇಶಿಸಿ ಆಚರಿಸಿದ ಮಾನಸೀ ಯಜ್ಞಕ್ಕೆ ಮೆಚ್ಚಿದ ರುದ್ರದೇವನು ನುಡಿದನು- ಈವರೆಗೆ ಹರಿಯ ಆಜ್ಞೆಯಂತೆ ಪಾಂಡವರ ಶಿಬಿರವನ್ನು ಸಂರಕ್ಷಿಸಿರುವೆ. ಇನ್ನು ಅವನ ಇಚ್ಛೆಯಂತೆ ನಿನಗೆ ಅವಕಾಶವನ್ನು ನೀಡುವೆ. - ಮ.ಭಾ.ತಾ.ನಿ-28.126,127,132)

ಒಟ್ಟಿನಲ್ಲಿ ಓರ್ವ ಅಶ್ವತ್ಥಾಮನಿಂದಲೇ ಅತಿ ಸಮರ್ಥರಾದ ಧೃಷ್ಟದ್ಯುಮ್ನಾದಿ ಮಾಹಾರಥಿಕರನ್ನು ಸಂಹರಿಸುವುದು ಅಶಕ್ಯ. ರುದ್ರದೇವನೇ ಅವನಲ್ಲಿ , ಅವನ ಅಸ್ತ್ರಗಳಲ್ಲಿ ಸನ್ನಿಹಿತನಾಗಿ ಹರಿಯ ಆಜ್ಞೆಯಂತೆ ಈ ಕಾರ್ಯವನ್ನು ನಡೆಸಿರುವನು. ಅದಕ್ಕಾಗಿಯೇ ಶ್ರೀಕೃಷ್ಣನು ಅಂದಿನ ರಾತ್ರಿಯಂದು ಪಾಂಡವರನ್ನು ಕರೆದುಕೊಂಡು ಬೆರೆಡೆಗೆ ತೆರಳಿದ್ದನು.

ಅಶ್ವತ್ಥಾಮನು ಮತ್ತು ಧೃಷ್ಟದ್ಯುಮ್ನಾನಾದಿ ಪಾಂಡವರ ಸೇನೆಯವರೂ ಯುದ್ಧ ಆರಂಭವಾದಾಗಿನಿಂದಲೂ ನಿತ್ಯದಲ್ಲಿಯೂ ಈ ಘಟನೆಯನ್ನು ಸ್ವಪ್ನದಲ್ಲಿ ಭಾಗಶಃ ಕಾಣುತ್ತಿದ್ದರು ಎಂದು ಆಚಾರ್ಯರು ತಿಳಿಸಿದ್ದಾರೆ-

'ಅವಶ್ಯಂ ಭಾವಿನಂ ಮೃತ್ಯುಂ ಧೃಷ್ಟದ್ಯುಮ್ನೋ ವಿಚಿಂತ್ಯ ತಮ್ ।
ತೂಷ್ಣೀಂ ಬಭೂವ ಸ್ವಪ್ನೇऽಪಿ ನಿತ್ಯಂ ಪಶ್ಯತಿ ತಾಂ ಮೃತಿಮ್ ॥'

ಮಭಾ.ತಾ.ನಿ.28.138

(ಅಶ್ವತ್ಥಾಮನು ಸಂಹರಿಸುವ ಸಂದರ್ಭದಲ್ಲಿ ಅವಶ್ಯವಾಗಿ ಸಂಭವಿಸುವ ಮೃತ್ಯು ಇದು ಎಂದು ಆಲೋಚಿಸಿ ಸುಮ್ಮನಾದನು ಧೃಷ್ಟದ್ಯುಮ್ನ. ಆತನು ಈಗ ಒದಗಿದ ಮೃತ್ಯುವನ್ನು ನಿತ್ಯದಲ್ಲೂ ಸ್ವಪ್ನದಲ್ಲಿ ಕಾಣುತ್ತಿದ್ದನು.)

ಐಷೀಕಾಸ್ತ್ರಪ್ರಯೋಗ-

ರಾತ್ರಿಯಲ್ಲಿ ಶಿಬಿರದಲ್ಲಿ ಮಲಗಿದ್ದ ಪಾಂಡುಪುತ್ರರನ್ನು ಮತ್ತು ಪಾಂಚಾಲರನ್ನು ಅಶ್ವತ್ಥಾಮನು ಸಂಹರಿಸಿದ್ದನ್ನು ತಿಳಿದ ಭೀಮಸೇನನು ಅಶ್ವತ್ಥಾಮನ ನಿಗ್ರಹಕ್ಕೆ ಹೊರಟನು. ಆಗ ಶ್ರೀಕೃಷ್ಣನು ಧರ್ಮನಂದನ ಮತ್ತು ಅರ್ಜುನನೊಡನೆ ಭೀಮನ ಬಳಿಗೆ ಸಾಗಿದನು. ಕೃಷ್ಣನು ಈ ಸಂದರ್ಭದಲ್ಲಿ ಅಶ್ವತ್ಥಾಮನ ದುಷ್ಟಭಾವವನ್ನು ಧರ್ಮನಂದನನಿಗೆ ತಿಳಿಸಿದನು. ಈ ಹಿಂದೆ ಈತನು ದ್ವಾರಕೆಗ ಬಂದಿದ್ದನು, ನನ್ನ ಸುದರ್ಶನಾಸ್ತ್ರವನ್ನು ಯಾಚಿಸಿದನು, ಆದರೆ ಅದನ್ನು ಎತ್ತಲಾರದೆ ವಿಫಲನಾದನು. ಆಗ ನಾನು ಅವನನ್ನು ವಿಚಾರಿಸಿದೆ, ಏತಕ್ಕಾಗಿ ಈ ಅಸ್ತ್ರವನ್ನು ಬಯಸಿರುವಿ? ಈ ಹಿಂದೆ ಬಲರಾಮನಾಗಲಿ, ಪ್ರದ್ಯುಮ್ನನಾಗಲಿ, ಅರ್ಜುನನಾಗಲಿ ಮತ್ತೆ ಬೇರೇ ಯಾರಾಗಲಿ ನನ್ನ ಪರಮಾಪ್ತರೂ ಬಯಸದ ಈ ಬಯಕೆ ನಿನಗೆ ಏಕೆ ಬಂತು? ಆತನು ಉತ್ತರಿಸಿದನು 'ಈ ಶ್ರೇಷ್ಠ ಅಸ್ತ್ರದಿಂದ ದುರ್ಯೋಧನನ ಎಲ್ಲ ಶತ್ರುಗಳನ್ನು ನಿಗ್ರಹಿಸಿ ಆತನಿಗೆ ಅಸಪತ್ನವಾದ ರಾಜ್ಯದ ಸಿರಿಯನ್ನು ಅನುಭವಿಸುವಂತೆ ಮಾಡುವ

ಇಚ್ಛೆಯಿಂದ ಈ ಅಸ್ತ್ರವನ್ನು ಬಯಸಿರುವೆನು' ಎಂದು. ಕರ್ಣನು ದುರ್ಯೋಧನನ ಆಪ್ತ ಅದಕ್ಕೆ ಕಾರಣ ಆತನಿಗೆ ಅಂಗರಾಜ್ಯವನ್ನು ನೀಡಿದವನು ದುರ್ಯೋಧನ. ಹಾಗಾಗಿ ದುರ್ಯೋಧನನಿಗಾಗಿ ಸೆಣಸಿದ. ಅಶ್ವತ್ಥಾಮನಾದರೋ ಅರ್ಧಪಾಂಚಾಲಕ್ಕೆ ಸ್ವಾಮಿ, ಈ ಸ್ವಾಮ್ಯಕ್ಕೆ ಕಾರಣರು ಭೀಮಾರ್ಜುನರು, ಆದರೆ ಈತನು ನಿಮ್ಮಲ್ಲಿ ದ್ವೇಷವನ್ನು ಸಾಧಿಸುತ್ತಿರುವನು, ಇದು ವಿಧಿಯ ನಿರ್ಣಯ. ಮತ್ತೂ ಸಹ ಈತನು ಅಜಿತೇಂದ್ರಿಯನು, ಆದ್ದರಿಂದಲೇ ಈತನ ತಂದೆ ಅರ್ಜುನನಿಗೆ ಬ್ರಹ್ಮಶಿರಾಸ್ತ್ರವನ್ನು ಉಪದೇಶಿಸಿದನು, ಈತನಿಗೆ ಉಪದೇಶಿಸರಲಿಲ್ಲ. ಆದರೆ ಈತನು ಕಾಡಿಬೇಡಿ ಅವನ ತಂದೆಯಿಂದ ಆ ಅಸ್ತ್ರವನ್ನು ಪಡೆದನು. ಉಪದೇಶಿಸಿದ ದ್ರೋಣರು ಆತನಿಗೆ ತಿಳಿಸಿದ್ದರು 'ಯಾವುದೇ ಕಾರಣಕ್ಕೂ ಎಂತಹ ಸಂದರ್ಭದಲ್ಲೂ ಈ ಅಸ್ತ್ರವನ್ನು ಪ್ರಯೋಗಿಸಬಾರದು' ಎಂದು. ಆದರೆ ಈತನು ಈಗ ಭೀಮನ ಮೇಲೆ ಆ ಅಸ್ತ್ರವನ್ನು ಪ್ರಯೋಗಿಸುವನು. ಇಂತಹ ಸಂದರ್ಭದಲ್ಲಿ ನಾವು ಅಲ್ಲಿ ಇರಲೇಬೇಕು ಎಂದು ತಿಳಿಸಿದ ಕೃಷ್ಣನು, ಧರ್ಮನಂದನನಿಗೆ ಅರ್ಜುನನಿಗೆ ಲಗುಬಗೆಯಿಂದ ಭೀಮನ ಬಳಿ ಸಾಗಲು ಪ್ರಚೋದಿಸಿದನು.

ಕೃಷ್ಣನು ಊಹಿಸಿದಂತೆ ಅಶ್ವತ್ಥಾಮನು ಆ ಅಸ್ತ್ರವನ್ನು ಪ್ರಯೋಗಿಸಿದನು. ಅಶ್ವತ್ಥಾಮನು ಸಮಗ್ರ ಪಾಂಡವರ ನಾಶವನ್ನು ಸಂಕಲ್ಪಿಸಿ ಆ ಅಸ್ತ್ರವನ್ನು ಪ್ರಯೋಗಿಸಿದನು. ಕೃಷ್ಣನ ಸೂಚನೆಯಂತೆ ಅರ್ಜುನನೂ ಅದಕ್ಕೆ ಪ್ರತಿಯಾಗಿ ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸಿದನು. ಆ ಕೂಡಲೇ ಆವಿರ್ಭೂತರಾದ ವ್ಯಾಸರು ಆ ಎರಡು ಅಸ್ತ್ರಗಳ ಮಧ್ಯೆ ನಿಂತರು. 'ಈರ್ವರಿಗೂ ಅಸ್ತ್ರವನ್ನು ಉಪಸಂರಿಸಿ, ಇಲ್ಲದ ಪಕ್ಷದಲ್ಲಿ ಭೀಕರ ಬರಗಾಲದಿಂದ ಈ ದೇಶದ ಜನತೆಯು ಪೀಡಿತವಾಗುವುದು' ಎಂದು ಎಚ್ಚರಿಸಿದರು. ಅವರ ಆದೇಶದಂತೆ ಅರ್ಜುನನು ತಾನು ಪ್ರಯೋಗಿಸಿದ ಅಸ್ತ್ರಕ್ಕೆ ಆ ಕೂಡಲೇ ಉಪಸಂಹಾರವನ್ನು ಹೇಳಿದನು. ಆದರೆ ಅಶ್ವತ್ಥಾಮನು ಅಸ್ತ್ರದ ಉಪಸಂಹೃತಿಗೆ ಸಮರ್ಥನಾಗಲಿಲ್ಲ. ಅಜಿತೇಂದ್ರಿಯರು ಉಪಸಂಹರಿಸಲು ಸಮರ್ಥರಲ್ಲ, ಹಾಗಾಗಿ ಆತನು ಕೈಚೆಲ್ಲಿದನು.

ಇಲ್ಲಿ ಎರಡು ಸಂದೇಹಗಳಿವೆ, 1) ಅಶ್ವತ್ಥಾಮನನ್ನು ನಿಗ್ರಹಿಸಿದ್ದು ಭೀಮನೋ ಅರ್ಜುನನೊ?

ಭಾಗವತದಲ್ಲಿ ' **ಅಥೋಪೇತ್ಯ ಸ್ವಶಿಬಿರಂ ಗೋವಿಂದಪ್ರಿಯಸಾರಥಿಃ ।**
ನ್ಯವೇದಯತ್ ತಂ ಪ್ರಿಯಾಯೈ ಶೋಚಂತ್ಯಾತ್ಮಜಾನ್ ಹತಾನ್ ॥

(1.7.41. ಕೃಷ್ಣಸಾರಥಿಯಾದ ಅರ್ಜುನನು ತನ್ನ ಶಿಬಿರಕ್ಕೆ ಆಗಮಿಸಿ ಮೃತರಾದ ಮಕ್ಕಳಿಗಾಗಿ ದುಃಖಿಸುತ್ತಿರುವ ಪ್ರಿಯೆಗೆ ಆ ಮಣಿಯನ್ನು ಇತ್ತನು.) ಆದರೆ ಪ್ರಕೃತ ಭಾರತದಲ್ಲಿ 'ನಕುಲಂ ಸಾರಥಿಂ ಕೃತ್ವಾ'- ನಕುಲಸಾರಥಿಯಾದ ಭೀಮಸೇನನು ಅಶ್ವತ್ಥಾಮನನ್ನು ನಿಗ್ರಹಿಸಲು ಹೊರಟನು ಎಂದಿದೆ. ಇದಕ್ಕೆ ಶ್ರೀಮದಾಚಾರ್ಯರು ಭಾಗವತತಾತ್ಪರ್ಯದಲ್ಲಿ 1.7.15ನೇ ಪದ್ಯದಲ್ಲಿ ಸ್ಕಂದಪುರಾಣದ ವಚನವನ್ನು ಉಲ್ಲೇಖಿಸಿ ಈ ವಿರೋಧವನ್ನು ಪರಿಹಸಿರುವರು

'ಪಾರ್ಥಾನುಯಾತಮಾತ್ಮಾನಂ ದ್ರೌಣಿಃ ಸ್ವಪ್ನೇ ದದರ್ಶ ಹ' ಅಂದರೆ ಭಾಗವತದಲ್ಲಿ ತಿಳಿಸಿರುವಂತೆ ಅಶ್ವತ್ಥಾಮನು ನಿತ್ಯದಲ್ಲಿ ಸ್ವಪ್ನವನ್ನು ಕಾಣುತ್ತಿದ್ದನು- ಅರ್ಜುನನು ತನ್ನನ್ನು ನಿಗ್ರಹಿಸಿದಂತೆ. ಮಹಾಭಾರತದಲ್ಲಿ ತಿಳಿಸಿರುವುದು ನಿಜಘಟನೆ ಎಂದು ತಿಳಿಯುವುದು.

2) ಬ್ರಹ್ಮಶಿರಾಸ್ತ್ರದಿಂದ ಭೀಮನಿಗೆ ಹಾನಿಯು ಇತ್ತೋ ಇಲ್ಲವೋ?

ಪ್ರಕೃತ ಭಾರತದಲ್ಲಿ ಧರ್ಮನಂದನನಿಗೆ ಕೃಷ್ಣನು ಹೇಳುತ್ತಾನೆ-

'ವೇದ ಚಾಸ್ತ್ರಂ ಬ್ರಹ್ಮಶಿರಃ ತಸ್ಮಾದ್ರಕ್ಷ್ಯೋ ವೃಕೋದರಃ- ಅಶ್ವತ್ಥಾಮನು ಬ್ರಹ್ಮಶಿರಾಸ್ತ್ರವನ್ನು ಬಲ್ಲವನಾಗಿರುವನು, ಆದರಿಂದ ವೃಕೋದರನನ್ನು ಸಂರಕ್ಷಿಸಬೇಕು' ಎಂದು. ಆದರೆ ಪ್ರಕೃತ ಮಹಾಭಾರತದಲ್ಲಿ ಅಸ್ತ್ರಪ್ರಯೋಗದ ಸಂದರ್ಭದಲ್ಲಿ ವ್ಯಾಸರು ಇಲ್ಲಿಗೆ ಆಗಮಿಸಿ ನುಡಿಯುವರು- 'ಅಸ್ತ್ರಂ ಬ್ರಹ್ಮಶಿರೋ ಯತ್ರ ಪರಮಾಸ್ತ್ರೇಣ ಬಾಧ್ಯತೇ ।

ಸಮಾ ದ್ವಾದಶಪರ್ಜನ್ಯಃ ತದ್ರಾಷ್ಟ್ರೇ ನಾಭಿವರ್ಷತಿ ॥ -

ಬ್ರಹ್ಮಶಿರಾಸ್ತ್ರವು ಬ್ರಹ್ಮಶಿರಾಸ್ತ್ರದಿಂದ ಬಾಧಿತವಾದಲ್ಲಿ ಆ ರಾಷ್ಟ್ರದಲ್ಲಿ ಹನ್ನೆರಡು ವರ್ಷಗಳ ಪರ್ಯಂತ ಮಳೆಬೀಳುವುದಿಲ್ಲ.'(ಮಹಾ.ಭಾರ. ಐ.6.26.) ಅಂದರೆ ವ್ಯಾಸರು ಭೀಮಸೇನನಿಗೆ ಯಾವ ವಿಧವಾದ ಹಾನಿಯನ್ನು ಪ್ರಸ್ಥಾಪಿಸಿಲ್ಲ. ಮತ್ತೂ ಸಹ ಇದೇ ಅಶ್ವತ್ಥಾಮನು ಹಿಂದೆ ನಾರಾಯಣಾಸ್ತ್ರವನ್ನು ಭೀಮಸೇನನ ಮೇಲೆ ಪ್ರಯೋಗಿಸಿದ್ದನು. ಆದರೆ 'ಅಗ್ನಿಯ ಮೇಲೆ ಅಗ್ನಿಯು ಎರಗಿದಂತಾಯಿತು' ಎಂದು ಮಹಾಭಾರತವು ತಿಳಿಸಿದೆ, ಭೀಮನಿಗೆ ಅಸ್ತ್ರದಿಂದ ಯಾವ ಬಾಧಕವೂ ಇಲ್ಲ ಎಂದು ತಿಳಿಸಿದೆ.

ಈ ಸಂದರ್ಭದಲ್ಲಿ ಶ್ರೀಮದಾಚಾರ್ಯರ ಉಪದೇಶವು ಹೀಗಿದೆ-

'ಅವಧ್ಯೋ ಭೀಮಸೇನಸ್ತದ್ ಅಸ್ತ್ರಂ ಚಾಮೋಘಮೇವತತ್ । ಭೀಮಸೇನನು ಅವಧ್ಯ, ಈ ಅಸ್ತ್ರವೂ ಅಮೋಘ ಈ ಎರಡು ನಿಯಮಗಳನ್ನು ಭಗವಂತನೇ ನಿರ್ಧರಿಸಿರುವನು' (ಮಹಾಭಾರ.ತಾ.28.157.) ಇದಕ್ಕೆ ಕಾರಣವನ್ನು ತಿಳಿಸುತ್ತಾರೆ-

'ಗಾಯತ್ರೀ ತತ್ರ ಮಂತ್ರೋ ಯದ್ ಬ್ರಹ್ಮಾ ತಧ್ಯಾನದೇವತಾ- ಈ ಅಸ್ತ್ರಕ್ಕೆ ಗಾಯತ್ರಿಯು ಮಂತ್ರ, ಬ್ರಹ್ಮನೇ ಮುಖ್ಯದೇವತೆ.' (ಮಹಾಭಾರತ ತಾ.28.158.)

ಲಕ್ಷಾಲಂಕಾರದ ವೈಶಿಷ್ಟ್ಯ- ಶ್ರೀವಾದಿರಾಜರು ದಾರಿತಪ್ಪುವ ಸಂದರ್ಭದಲ್ಲಿ ಬೆಳಕಾಗಿ ಅನುಗ್ರಹಿಸಿರುವರು. ಈ ಪರ್ವದ ಅಧ್ಯಾಯ ನಾಲ್ಕು ಇಪ್ಪತ್ತೆರಡನೆಯ ಶ್ಲೋಕದಲ್ಲಿ-

'ಅಪಾಂಡವಾಯೇತಿ ರುಷಾ ವಾಚಮುತ್ಸೃಜ್ಯ ದಾರುಣಮ್ ।- ಅಶ್ವತ್ಥಾಮನು ಕೋಪದಿಂದ ಪಾಂಡುಪುತ್ರನ ನಾಶಕ್ಕಾಗಿ ಎಂದು ಹೇಳುತ್ತಾ ಅಸ್ತ್ರವನ್ನು ಎಸೆದನು' ಎಂದಿದೆ. ಮತ್ತು ಇದೇ ಪರ್ವದ ಆರನೇ ಅಧ್ಯಾಯದ ಹತ್ತೊಂಭತ್ತನೆಯ ಶ್ಲೋಕದಲ್ಲಿ - 'ಅಪಾಂಡವಾಯೇತಿ ಮುನೇ- ಮುನಿಯೇ! ಪಾಂಡುಪುತ್ರನ ನಾಶಕ್ಕಾಗಿ' ಎಂದು ಸಂಕಲ್ಪಿಸಿ ಅಸ್ತ್ರವನ್ನು ಪ್ರಯೋಗಿಸಿರುವೆನು' ಎಂದು ಅಶ್ವತ್ಥಾಮನೇ ಹೇಳಿಕೊಂಡಿರುವನು. ಇದರಿಂದ ಅಶ್ವತ್ಥಾಮನು ಕೇವಲ ಭೀಮಸೇನನ ವಿನಾಶಕ್ಕಾಗಿ ಅಸ್ತ್ರವನ್ನು ಪ್ರಯೋಗಿಸಿರುವನು ಎಂದು ತಿಳಿಯುತ್ತದೆ. ಆದರೆ ಮುಂದೆ ಈ ಅಸ್ತ್ರವನ್ನು ಉಪಶಮನಮಾಡು ಎಂದು ವ್ಯಾಸರು ಆದೇಶಿಸುವಾಗ ಅಶ್ವತ್ಥಾಮನು ನುಡಿಯುವನು 'ತದಿದಂ ಪಾಡುಪುತ್ರಾಣಾಮ್ ಅಂತಾಯೈವ ಸುಸಂಹಿತಮ್' - ಈ ಅಸ್ತ್ರವು ಪಾಂಡುಪುತ್ರರ ವಿನಾಶಕ್ಕಾಗಿ ಪ್ರಯೋಗಿಸಲಾಗಿದೆ' ಎಂದು. ಹೀಗೆ ಹಿಂದಿನ ಮುಂದಿನ ವಾಕ್ಯಗಳಲ್ಲಿ ವಿರೋಧವು ಕಾಣುವುದು. ಶ್ರೀವಾದಿರಾಜರು ತಿಳಿಸುತ್ತಾರೆ 'ಅಪಾಂಡವಾಯ' ಎನ್ನುವುದು ಭಾವಪ್ರಧಾನನಿರ್ದೇಶ ಎಂದು. ಇದರಿಂದ ಅಪಾಂಡವಾಯ ಎನ್ನುವ ಶಬ್ದವು ಪಾಂಡವರನಾಶಕ್ಕಾಗಿ ಎಂಬ ಭಾವವನ್ನು ಹೊಂದಿದೆ ಎಂದು ತಿಳಿಸಿದಂತಾಗುವುದು. ಈ ಕಾರಣದಿಂದಲೇ ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ 128.161ನೇ ಶ್ಲೋಕದಲ್ಲಿ 'ಅಪಾಂಡವತ್ವವಿಧಿತ್ಸಯಾ' ಎಂದು ಪ್ರಯೋಗಿಸಿ ಈ ಮಹಾಭಾರತದ ವಾಕ್ಯದ ವ್ಯಾಖ್ಯಾನವನ್ನು ಸೂಚಿಸಿರುವರು.

ಉಪಸಂಹಾರವು ತಿಳಿಯದಿದ್ದರೂ ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸಿದ್ದನು ಅಶ್ವತ್ಥಾಮನು. ತನ್ನಿಮಿತ್ತವಾಗಿ ಶ್ರೀವ್ಯಾಸರು ಆತನಿಗೆ ಶಿಕ್ಷೆ ಎಂದು ಆತನ ತಲೆಯಲ್ಲಿ

ಆತನ ಹುಟ್ಟಿನಿಂದ ಜೊತೆಗಿದ್ದ ಶಿರೋರತ್ನವನ್ನು ಭೀಮನಿಗೆ ನೀಡಲು ಆದೇಶಿಸಿದರು. ಅಶ್ವತ್ಥಾಮನೇ ತಿಳಿಸುವಂತೆ ' ನ ಚ ರಕ್ಷೋಗಣಭಯಂ ನ ತಸ್ಕರಭಯಂ ತಥಾ' ಇಂತಹ ಅನೇಕ ಮಹಿಮಾಯುಕ್ತವಾದದ್ದು ಆ ಮಣಿ. ಅದರ ಸಾನ್ನಿಧ್ಯದಿಂದ ಅಶ್ವತ್ಥಾಮನಿಗೆ ನಿದ್ರೆ ಬಾಯಾರಿಕೆ ರೋಗ ಮುಂತಾದವುಗಳ ಬಾಧೆಯಿರಲಿಲ್ಲ. ಇಂತಹ ಮಣಿಯನ್ನು ನೀಡು ಎಂದು ಆದೇಶಿಸಿದ್ದರಿಂದ ಅನಿವಾರ್ಯವಾಗಿ ಆತನು ನೀಡಲೇ ಬೇಕಾಯಿತು. ಇದರಿಂದ ಆತನು ಈ ಕಲ್ಪಮುಗಿಯುವವರೆಗೂ ಅನೇಕವಿಧ ರೋಗರುಜಿನ, ದೇಹದಲ್ಲಿ ದುರ್ಗಂಧ ಮುಂತಾದವುಗಳನ್ನು ಅನುಭವಿಸುವಂತಾಯಿತು. ಹಾಗಾಗಿ ಆ ಮಣಿಯನ್ನು ನೀಡುವಾಗ ಆತನು ನುಡಿಯುವನು– 'ಅಯಂ ಮಣಿರಯಂ ಚಾಹಮ್' ಎಂದು. ಶಬ್ದತಾಡಿತ ಅರ್ಥ 'ಈ ಮಣಿಯು ಮತ್ತು ಈ ನಾನು' ಎಂದು ಅಸಂಗತವಾಗಿ ತೋರುವುದು. ಶ್ರೀವಾದಿರಾಜರು ಪ್ರಕೃತ ವಾಕ್ಯವನ್ನು ವ್ಯಾಖ್ಯಾನಿಸುತ್ತಾ ತಿಳಿಸುವರು ಇಲ್ಲಿರುವ 'ಚ' ಶಬ್ದವು 'ಏವ' ಎಂಬ ಅರ್ಥದಲ್ಲಿದೆ ಎಂದು. ಇದರಿಂದ ಈ ವಾಕ್ಯದ ಭಾವವು ಹೀಗಾಗುವುದು– ಈ ಮಣಿಯು ನಾನೇ' ಅಂದರೆ 'ಈ ಮಣಿಯು ನನ್ನ ಜೀವವಿದ್ದಂತೆ, ಇದಿಲ್ಲದೆ ನನ್ನ ಅಸ್ತಿತ್ವವೇ ಇಲ್ಲ ' ಎಂದು ಅಶ್ವತ್ಥಾಮನು ತಿಸುತ್ತಿರುವನು ಎಂದು ರಾಜರು ಉಪದೇಶಿಸಿರುವರು. ಹೀಗೆ ಆಚಾರ್ಯರು ಮತ್ತು ರಾಜರು ಅಲ್ಲಲ್ಲಿ ನಮಗೆ ಮಾರ್ಗದರ್ಶನವನ್ನು ನೀಡುರುವುದನ್ನು ಕಾಣಬಹುದಾಗಿದೆ.

ಸ್ತ್ರೀಪರ್ವ

ಮೊದಲೇ ತಿಳಿಸಿದಂತೆ ಮಹಾಭಾರತದ ಉದ್ದೇಶ ಪರತತ್ತ್ವ ಉಪದೇಶ, ಆದರೆ ಈ ಉಪದೇಶವು ಮನದಲ್ಲಿ ಪ್ರತಿಷ್ಟಿತವಾಗಬೇಕಾದಲ್ಲಿ ಮನವು ಶುದ್ಧವಾಗಿರಬೇಕು. ಅದಕ್ಕಾಗಿ ಧರ್ಮದ ಮತ್ತು ನೀತಿಯ ಉಪದೇಶಗಳನ್ನೂ ಮಹಾಭಾರತದಲ್ಲಿ ಹೇರಳವಾಗಿ ಕಾಣಬಹುದಾಗಿದೆ.

ಪ್ರಕೃತ ಸ್ತ್ರೀಪರ್ವದ ಆದಿಯಲ್ಲಿ ಪುತ್ರಶೋಕದಿಂದ ತಪ್ತನಾದ ಧೃತರಾಷ್ಟ್ರನಿಗೆ ಸಂಜಯ ವಿದುರ ಮತ್ತು ವ್ಯಾಸರು ಉಪದೇಶಿಸುವರು. ಸಮಾಜದಲ್ಲಿ ಈ ಮೂವರ ಸ್ಥಾನವು ಯಾವ ಅಂತಸ್ತಿನದು, ಅವರ ಅರಿವಿನ ಹರವು ಎಷ್ಟು ಈ ಎಲ್ಲವನ್ನೂ ವಾಚಕರು ಬಲ್ಲರಾಗಿದ್ದಾರೆ. ಮತ್ತು ವಾವೆಯಿಂದ ಅವರು ಧೃತರಾಷ್ಟ್ರನಲ್ಲಿ ಯಾವತರಹದ ಅಧಿಕಾರವನ್ನು ಹೊಂದಿದ್ದಾರೆ ಎನ್ನುವುದನ್ನೂ ವಾಚಕರು ತಿಳಿದವರೇ ಆಗಿರುವರು. ಪ್ರಕೃತ ಈ ಮೂವರ ಉಪದೇಶಗಳನ್ನು ಉಪದೇಶಕರ ವ್ಯಕ್ತಿತ್ವ ಅಧಿ

ಕಾರ ಅನುಬಂಧ ಮತ್ತು ಅವರ ಅರಿವಿನ ಹರವು ಇವುಗಳನ್ನು ಮನದಲ್ಲಿ ಇಟ್ಟುಕೊಂಡು ಗಮನಿಸಬೇಕು, ಆಗ ನಾವು ಭಾರತದಲ್ಲಿನ ಕುಸರೀ ಕೆಲಸದ ಸೊಬಗನ್ನು ಮನಗಾಣಬಹುದಾಗಿದೆ.

ಸಂಜಯನು ಸಮಾನ್ಯ ಮನುಷ್ಯ, ವಾವೆಯಲ್ಲಿ ಧೃತರಾಷ್ಟ್ರನ ಸಾರಥಿ, ತನ್ನ ಹದ್ದಿನಲ್ಲಿ ಆತ ಮಾತನಾಡಬೇಕು. ಹಾಗಾಗಿ ಅವನ ಮಾತು- 'ಮಹಾರಾಜ! ನಾವು ಒಂದು ಕೆಲಸವನ್ನು ಮಾಡಿದ ಅನಂತರದಲ್ಲಿ ಪಾಶ್ಚಾತ್ತಾಪ ಪಡುವಂತಾಗಬಾರದು, ಆದರೆ ನಿಮ್ಮ ಮಗನನ್ನು ನೀವು ನಿಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲಿಲ್ಲ, ದೊಡ್ಡವರು, ಜ್ಞಾನಿಗಳೂ ತಿಳಿಹೇಳಿದಾಗ ಅಸಡ್ಡೆ ಮಾಡಿದಿರಿ. ಈಗ ದುಃಖಿಸಿ ಪ್ರಯೋಜನವಿಲ್ಲ ಮೇಲೇಳಿ ಮುಂದಿನ ಕರ್ಮಗಳ ಚಿಂತೆಯನ್ನು ಮಾಡಿ' ಎನ್ನುತ್ತಾನೆ.

ವಿದುರ ದೊಡ್ಡ ಜ್ಞಾನಿ, ಆತನ ಸಮಕಾಲೀನರಾದ ಅನೇಕ ರಾಜ-ಮಹಾರಾಜರು, ಮಂತ್ರಿ- ಮಾಗದರು ಮುಂತಾದವರು ತಮ್ಮ ಸಮಸ್ಯೆಗಳಿಗೆ ತಮ್ಮ ಆಡಳಿತದ ಬಗ್ಗೆ ಇವನ ಉಪದೇಶದಿಂದ ಪರಿಹಾರವನ್ನು ಕಾಣುತ್ತಿದ್ದರು. ಈತನು ವಾವೆಯಲ್ಲಿ ಧೃತರಾಷ್ಟ್ರನ ಸೋದರ, ದೊಡ್ಡವಿದ್ಯೆಯ ಆಗರ. ಹಾಗಾಗಿ ಅವನ ಮಾತನಲ್ಲಿ ಸಲಿಗೆ ಇದೆ, ಗಾಢತೆಯು ಇದೆ, ಅಧಿಕಾರವಿದೆ- ' ಸಾವು ಗೆಲವು ವಿಧಿಯ ಅಧೀನ. ಯುದ್ಧಲ್ಲಿ ಪಾಲ್ಗೊಂಡೂ ಬದುಕಿ ಉಳಿದವರು ಇದ್ದಾರೆ, ಹಾಗೆಯೇ ಯುದ್ಧದಲ್ಲಿ ಪಾಲ್ಗೊಳ್ಳದೆ ಮರಣವನ್ನು ಹೊಂದಿದವರೂ ಇದ್ದಾರೆ. ಮನುಜನು ಹುಟ್ಟುವಾಗಲೆ ಸಾವಿನ ದಿನವೂ ನಿಗದಿಯಾಗಿರುತ್ತದೆ. ಮತ್ತು ಹುಟ್ಟುವ ಮುನ್ನ ಜೀವಿಯ ಸುಳಿವು ನಮಗೆ ಇರುವುದಿಲ್ಲ, ಮರಣಾನಂತರದಲ್ಲಿಯೂ ಆತನ ಸುಳಿವು ನಮಗಾಗದು. ಜೀವಿತ ಕಾಲದಲ್ಲಿ ಎರಡು ದಿನಗಳಲ್ಲಿ ಮಾತ್ರ ಆತನ ಒಡನಾಟ. ಇಂತಹ ವ್ಯಕ್ತಿಗಳ ಬಗ್ಗೆ ಯಾಕಿಷ್ಟು ಅಬ್ಬರ? ಮತ್ತೆ ಕ್ಷತ್ರಿಯನು ಯುದ್ಧದಲ್ಲಿ ಮಡಿದಾಗ ಪ್ರಾಪ್ತವಾಗುವ ಉತ್ತಮ ಗತಿಯು ಮತ್ತಾವುದೇ ಯಜ್ಞದಿಂದಾಗಲಿ, ದಾನದಿಂದಾಗಲಿ ಮತ್ತಾವುದೇ ಕರ್ಮದಿಂದಾಗಲಿ ಸಿಗದು, ಹೀಗಿರುವಾಗ ತಿಳಿಯದವರಂತೆ ರೋದಿಸುವುದು ತರವೆ?

ಶ್ರೀವ್ಯಾಸರು ವಾವೆಯಲ್ಲಿ ತಂದೆ, ಸರ್ವಜ್ಞರು- ನೀನು ಗಮನಿಸಿದಂತೆ ವಿದುರನು ಈ ಯುದ್ಧವನ್ನು ನಿಲ್ಲಿಸ ಬೇಕೆಂದು ಎಲ್ಲ ವಿಧದಲ್ಲಿಯೂ ಯತ್ನಿಸಿದ. ಆದರೆ ಫಲಿಸಿತೆ? ನಿನ್ನ ಪುತ್ರನನ್ನು ಭೂಭಾರಹರಣಕ್ಕಾಗಿಯೇ ವಿಧಿಯು ಸೃಷ್ಟಿಸಿದೆ. ಭಾರದಿಂದ

ಆರ್ತಳಾದ ಭೂಮಿಯು ತನ್ನ ದುಃಖದ ನಿವೃತ್ತಿಗಾಗಿ ದೇವತೆಗಳಲ್ಲಿ ಪ್ರಾರ್ಥಿಸಿದಳು. ಆಗ ನಾರಾಯಣನು ಹೇಳಿದನು 'ನಿನ್ನ ದುಃಖವನ್ನು ದುರ್ಯೋಧನನು ಪರಿಹರಿಸಲಿದ್ದಾನೆ, –

ಧೃತರಾಷ್ಟ್ರಸ್ಯ ಪುತ್ರಾಣಾಂ ಯಸ್ತು ಜ್ಯೇಷ್ಠಃ ಶತಸ್ಯ ವೈ ।
ದುರ್ಯೋಧನ ಇತಿ ಖ್ಯಾತಃ ಸ ತೇ ಕಾರ್ಯಂ ಕರಿಷ್ಯತಿ ॥

ಆತನಿಗೆ ಈ ಕಾರ್ಯದಲ್ಲಿ ಸಹಾಯಕ್ಕಾಗಿ ಶಕುನಿ ಕರ್ಣ ದುಃಶಾಶನ ಮುಂತಾದವರು ಇದ್ದಾರೆ ನೀನು ಚಿಂತಿಸದಿರು' ಎಂದು. ಆಗ ನಾನೂ ಅಲ್ಲಿದ್ದೆ. ಈ ವಿಷಯವನ್ನು ಧರ್ಮನಂದನನು ನಾರದರಿಂದ ತಿಳಿದಿದ್ದನು. ಆತನೂ ಸಹ ಯುದ್ಧವನ್ನು ನಿಲ್ಲಿಸಲು ತುಂಬ ಯತ್ನಿಸಿದ, ಆದರೆ ಫಲಿಸಲಿಲ್ಲ. ಕುಲದ ಕ್ಷಯಕ್ಕಾಗಿಯೇ ವಿಧಿಯು ನಿನ್ನ ಪುತ್ರನನ್ನು ಹುಟ್ಟಿಸಿದೆ. ಹೀಗಿರುವಾಗ ಮನುಜಯತ್ನವು ಅದರ ಮುಂದೆ ನಡೆಯದು. ನೀನು ಎಲ್ಲವನ್ನು ಬಲ್ಲವ. ಇಂತಹ ಶಾಸ್ತ್ರದ ಪರಿಚಯವು ಇಲ್ಲ ಎಂದಿಲ್ಲ. ಹೀಗಿರುವಾಗ ರೋದಿಸುವುದರಿಂದ ಯಾವ ಪುರುಷಾರ್ಥವನ್ನು ಹೊಂದುವಿ? ಎಂದು. ಇಲ್ಲಿ ದೈವದ ರಹಸ್ಯ ದೇವಲೋಕದ ಸುದ್ದಿಯನ್ನು ವ್ಯಾಸರು ಹೇಳುತ್ತಿದ್ದಾರೆ. ಹೀಗೆ ಮಹಾಭಾರತದಲ್ಲಿ ಆ ವ್ಯಕ್ತಿಗಳು ಆಡುವಮಾತು ಅವರ ವ್ಯಕ್ತಿತ್ವದ ಕನ್ನಡಿಯಾಗಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಮೃತರಿಗಾಗಿ ಅವರ ಅನುಬಂಧಿಗಳು ರೋದಿಸುವುದನ್ನು ಈ ಪರ್ವದಲ್ಲಿ ಮುಖ್ಯವಾಗಿ ವರ್ಣಿಸಲಾಗಿದೆ, ಕರುಣಾರಸದ ಆವಿಷ್ಕಾರವನ್ನು ವಾಚಕರು ಕಾಣಬಹುದಾಗಿದೆ. ಸಾಮಾನ್ಯವಾಗಿ ಮರಣಾನಂತರದಲ್ಲಿ ಮೃತಾನುಬಂಧಿಗಳು ರೋದಿಸುವ ಸಂದರ್ಭಗಳನ್ನು ಅನೇಕ ಪುರಾಣ ಕಾವ್ಯಗಳಲ್ಲಿ ಇರಬಹುದು, ಅಲ್ಲಿ ಕರುಣಾರಸದ ಅಭಿವ್ಯಕ್ತಿಗೆ ಬೇಕಾದ ಸಂಭಾಷಣೆಗಳೂ ಇರಬಹುದು, ಆದರೆ ಪ್ರಕೃತದಲ್ಲಿಯ ಸನ್ನಿವೇಶವೇ ಅದ್ಭುತ. ತನ್ನ ಗಂಡನಿಗೆ ಇಲ್ಲದ ದರ್ಶನ ಭಾಗ್ಯ ತನಗೇಕೆ? ಎಂದು ಕಣ್ಣಿಗೆ ವಸ್ತ್ರವನ್ನು ಬಿಗಿದು ಹೊರ ಪ್ರಪಂಚವನ್ನು ತನ್ನ ಕಣ್ಣುಗಳಿಂದ ಹತ್ತಾರು ವರ್ಷಗಳಿಂದ ಕಾಣದ ಗಾಂಧಾರಿದೇವಿಯು ಇಂದು ವ್ಯಾಸರ ವರವಿಶೇಷದಿಂದ (ಅಥವಾ ಶಾಪವಿಶೇಷದಿಂದಲೋ) ದಿವ್ಯದೃಷ್ಟಿಯನ್ನು ಹೊಂದಿರುವಳು. ಸಮಗ್ರ ರಣರಂಗವನ್ನು ಆಕೆ ಕಾಣುತ್ತಿದ್ದಾಳೆ. ಯಾರ ದೇಹವು ಎಲ್ಲಿದೆ, ಯಾವ ಅವಸ್ಥೆಯಲ್ಲಿದೆ, ಆ ದೇಹದಿಂದ ತುಂಡಾಗಿ ಬೇರೆಲ್ಲೋ ಬಿದ್ದಿರುವ

ರುಂಡ ಮುಂಡ ಮುಂತಾದವು ಎಲ್ಲಿ ಬಿದ್ದಿವೆ, ಯಾರಿಂದ ಮೃತರಾದರು, ಹೇಗೆ ಮೃತರಾದರು, ಮೃತರ ಅನುಬಂಧಿಗಳು ಯಾರು, ಅವರ ಮನದಲ್ಲಿ ಆಗುತ್ತಿರುವ ತುಮುಲವೇನು ಈ ಮುಂತಾದವು ಎಲ್ಲವನ್ನೂ ಆಕೆ ಕಾಣುತ್ತಿದ್ದಾಳೆ. ಅದರಲ್ಲೂ ಜೀವನದ ಕೊನೆಯಲ್ಲಿರುವ ಕಣ್ಣುಗಳನ್ನು ಹೊಂದಿರದ ಆಕೆಯು ತನ್ನ ನೂರೂ ಮಕ್ಕಳನ್ನು ಕಳೆದುಕೊಂಡಿರುವಳು, ಆ ರಣರಂಗದಲ್ಲಿ ಆಕೆಯ ನೂರಾರು ಸೊಸೆಯರು ರೋದಿಸಿತ್ತರುವರು, ಗಾಂಧಾರಿಗೆ ಏಕ ಮಾತ್ರ ಪುತ್ರಿ, ಸೈಂಧವನ ಪತ್ನಿ ದುಃಶಲಾ, ಆಕೆಯೂ ಈಗ ವಿಧವೆ , ಆಕೆಯು ತನ್ನ ಗಂಡನ ತಲೆಯನ್ನು ಆ ಭೀಕರ ರಣರಂಗದಲ್ಲಿ ತಪಾಸಾಣೆ ಮಾಡುತ್ತಿರುವಳು. ಹೀಗೆ ಎಲ್ಲರ ದುಃಖವನ್ನೂ ತನ್ನ ಒಡಲಲ್ಲಿ ತುಂಬಿಕೊಳ್ಳುತ್ತಿರುವಳು. ದುಃಖವು ಉಂಬಳಿಸಿ ಉಂಬಳಿಸಿ ಹೊರಹೊಮ್ಮುತ್ತಿದೆ. ಇಲ್ಲಿ ಕರುಣಾರಸದ ಪರಾಕಾಷ್ಟವನ್ನು ಶ್ರೀವ್ಯಾಸರು ವಾಚಕರಿಗೆ ವಿಶಿಷ್ಠವಾಗಿ ಉಣಬಡಿಸಿರುವರು. ಇಂತಹ ಕಥಾಹಂದರವು ಮತ್ತೆಲ್ಲೂ ಸಿಗಲಾರದು. ಇಂತಹ ಸಾವಿರಾರು ಸನ್ನಿವೇಶಗಳನ್ನು ಮಹಾಭಾರತದಲ್ಲಿ ಹೆಣೆದು ಪರತತ್ವ ಮತ್ತು ಧರ್ಮದ ಉಪದೇಶವು ಇಲ್ಲಿರುವುದರಿಂದ, ಮಹಾಭಾರತವನ್ನು ಓದಿದವರು ಅಂದರು ' ಕೋ ಹ್ಯನ್ಯಃ ಪುಂಡರೀಕಾಕ್ಷಾದ್ ಮಾಹಾಭಾರತಕೃದ್ಭವೇತ್' ಎಂದು.

ಸಮಗ್ರ ಮಹಾಭಾರತದ ಯುದ್ಧವನ್ನು ಮೆಲುಕಾಡುವ ಗಾಂಧಾರಿದೇವಿಯು ಶ್ರೀಕೃಷ್ಣನನ್ನು ಮತ್ತು ಭೀಮಸೇನನ್ನು ಆಕ್ಷೇಪಿಸುವಳು. ಗಾಂಧಾರಿಯ ಮಾತನ್ನು ಆಲಿಸಿದಾಗ 'ಅಪಶ್ಯತಾಮ್ ಆತ್ಮತತ್ವಮ್- ತನ್ನತನವನ್ನು ಅರಿಯದ' 'ಆತ್ಮಾನಂ ಬಹುಮನ್ಯತೇ- ತಾನು ಮಹಾಪುರುಷ' ಎಂದೇ ಎಲ್ಲ ಮನುಜರು ಭಾವಿಸಿಕೊಳ್ಳುವರು' ಎನ್ನುವ ಶ್ರೀಮದ್ಭಾಗವತದ ಮಾತು ನೆನಪಿಗೆ ಬರುವುದು.

'ಕೃಷ್ಣ! ಯುದ್ಧವನ್ನು ತಪ್ಪಿಸುವ ಎಲ್ಲ ಸಾಮರ್ಥ್ಯವು ನಿನಗಿದ್ದರೂ ಈ ಭೀಕರ ಜ್ಞಾತಿನಾಶವನ್ನು ಏಕೆ ತಪ್ಪಸಲಿಲ್ಲ? ಆದ್ದರಿಂದ 'ನಿನ್ನ ಅನುಬಂಧಿಗಳಾದ ಎಲ್ಲ ಯಾದವರು ಭೋಜರು ಮಾಧವರು ಇದೇ ರೀತಿಯಾಗಿ ಪರಸ್ಪರಕಲಹದಿಂದ ಸಾವನ್ನು ಕಾಣಲಿ, ಅವರ ಹೆಂಡಂದಿರೂ ವಿಧೆಯರಾಗಿ ರೋದಿಸಲಿ'' ಎಂದು ಶಪಿಸುವಳು. ಪತಿವ್ರತೆಯಾದ ಧರ್ಮಭೀರುವಾದ ಆಕೆಯ ಮಾತಿನಂತೆ ಮುಂದೆ ಯಾದವರು ಅದೇ ರೀತಿಯಲ್ಲಿ ಸಾವನ್ನು ಕಾಣುವರು. ಇದರಿಂದ ಕೃಷ್ಣನನ್ನು ಅಪರಾಧಿಸ್ಥಾನದಲ್ಲಿ ತಂದು ನಿಲ್ಲಿಸಿದಂತೆ ತೋರುವುದು. ಆದರೆ ಹದ್ದುಮೀರಿ ವರ್ತಿಸುತ್ತಿದ್ದ ತನ್ನ ಮಗನನ್ನು ಈ ವೃದ್ಧದಂಪತಿಗಳು ತಮ್ಮ ಸುಪರ್ದಿನಲ್ಲಿ

ಇಟ್ಟಿಕೊಳ್ಳಲಾಗದೆ, ವಾವೆಯಲ್ಲಿ ಹೊರಗಿನವನಾದ ಸಂಧಿಗಾಗಿ ಹಸ್ತಿನೆಗೆ ಆಗಮಿಸಿ ಪ್ರಯತ್ನಿಸಿದ್ದ ಕೃಷ್ಣನನ್ನು ಈ ಅನರ್ಥಕ್ಕೆ ಗುರಿಯಾಗಿಸುವುದು ಎಷ್ಟು ಸಮಂಜಸ? ಕುರುಕುಲಪಿತಾಮಹ ಭೀಷ್ಮ, ಈ ಸಮಗ್ರ ಕ್ಷತ್ರಿಯರ ಗುರು ದ್ರೋಣ ಈ ಮುಂತಾದವರು ಈ ಅನರ್ಥಕ್ಕೆ ಮುಖ್ಯಹೊಣೆಗಾರರು. ಎಲ್ಲದಕ್ಕೂ ಮಿಗಿಲಾಗಿ ಮಹಾಸ್ವಾರ್ಥಿಗಳು ವೃದ್ಧಾತಿಕ್ರಮಿಗಳು ನೀತಿಬಾಹಿರರೂ ಆದ ಈಕೆಯ ಪುತ್ರರು ಅನ್ಯರ ಮಾತನ್ನು ಒಪ್ಪುವ ಜಾಯಮನದವರೆ? ಈ ಅನರ್ಥಕ್ಕೆ ಮುಖ್ಯಕಾರಣಾನಾದ ಈಕೆಯ ಸಾಕ್ಷಾತ್ ಸಹೋದರನಾದ ಶಕುನಿ. ಇವರೆಲ್ಲರನ್ನೂ ಮರೆತು ಗಾಂಧಾರಿಯು ಕೃಷ್ಣನನ್ನು ಅಪರಾಧಿ ಎಂದು ದೂರುತ್ತಿರುವಳು.

ದುರ್ಯೋಧನನ ತೊಡಗೆ ಪೆಟ್ಟಿತ್ತು ಸಂಹರಿಸಿದ್ದು ಧರ್ಮವೇ? ದುಃಶಾಸನನ ರಕ್ತನ್ನು ಪಾನಮಾಡಿದ್ದು ಸರಿಯೇ? ಜೀವನದ ಸಂಜೆಯಲ್ಲಿರುವ ಅಂಧದಂಪತಿಗಳಿಗೆ ಊರುಗೋಲಾಗಿ ನೂರು ಮಾಂದಿ ಮಕ್ಕಳಲ್ಲಿ ಓರ್ವನನ್ನಾದರೂ ಉಳಿಸಬಹುದಿತ್ತಲ್ಲವೇ? ಅಹುದು ಎಲ್ಲ ನನ್ನ ಪುತ್ರರೂ ನಿಮಗೆ ತುಂಬಾ ದ್ರೋಹವನ್ನು ಬಗೆದಿರುವರು ಎನ್ನುವುದನ್ನು ಒಪ್ಪುವೆ, ಆದರೆ ನಮ್ಮ ಮೆಲಿನ ಕರುಣೆಯಿಂದಲಾದರೂ ಆ ನೂರು ಮಂದಿಯಲ್ಲಿ ಕಡಿಮೆ ತಪ್ಪನ್ನು ಎಸಿಗಿದ ಯಾರಾದರೂ ಒಬ್ಬನನ್ನಾದರೂ ಬಿಡಬಹುದಿತ್ತಿಲ್ಲವೆ? ಎಂದು ಗಾಂಧಾರಿದೇವಿಯು ಭೀಮನನ್ನು ಆಕ್ಷೇಪಿಸುತ್ತಾಳೆ. ಗಾಂಧಾರಿಯ ಈ ಮಾತಿನಿಂದ ಎಂತಹ ಕಲ್ಲುಹೃದಯವೂ ಕರಗುವುದು. ಭೀಮನನ್ನು ಅತ್ಯಂತನಿಷ್ಕರುಣಿಯನ್ನಾಗಿ ವಾಚಕರು ಭಾವಿಸುವಂತಾಗುವುದು.

ತಂದೆಯಿಲ್ಲದ ಅನಾಥ ಮಕ್ಕಳು ಪಾಂಡವರು ಆಸರೆಯನ್ನು ಬಯಸಿ ದೊಡ್ಡಪ್ಪನನ್ನು ಅರಸಿ ಬಂದಾಗ ಈತನ ಪುತ್ರರು ವಿಷವಿಕ್ಕಿ, ಬೆಂಕಿಯನ್ನಿಟ್ಟು ಸಂಹರಿಸಲು ಯತ್ನಿಸಿದರು, ತುಂಬಿದ ಸಭೆಯಲ್ಲಿ ಇವರ ಪತ್ನಿಯನ್ನು ಅಪಮಾನಿಸಲು ಯತ್ನಿಸಿದರು, ದ್ರೌಪದಿ! ನಿನ್ನ ಗಂಡಂದಿರು ಎಣ್ಣೆತೆಗೆದ ಷಂಡತಿಲವಿದ್ದಂತೆ ಎಂದುರು, ಅವರ ಆಸ್ತಿಯನ್ನು ಕಸಿದಿಕೊಂಡು ಅಡವಿಪಾಲು ಮಾಡಿದರು, ಕಾಡಿಗೆ ಹೊರಟಾಗ ಅವರ ಧ್ವನಿ-ನಡಿಗೆಗಳನ್ನು ಅನುಕರಿಸಿ ಅಪಹಾಸ್ಯ ಮಾಡಿದರು, ಐದು ಗ್ರಾಮವನ್ನು ಕೇಳಿದರೂ ಸೂಜಿಯ ಮೊನೆಯಷ್ಟೂ ಸ್ಥಳವಿಲ್ಲ ಎಂದರು, ವಂಚಿಸಿ ಪಾಂಡವರ ಅನುಬಂಧಿಗಳನ್ನು ತಮ್ಮಡೆ ಸೆಳೆದುಕೊಂಡು ಸೇನೆಯನ್ನು ಬೆಳೆಸಿಕೊಂಡರು. ಹೀಗೆ ಕೌರವರ ತಪ್ಪಿನ ಪಟ್ಟಿಯು ಬೆಳೆಯುವುದು. ಇಂತಹ ತಪ್ಪಿನ ಸರಮಾಲೆಯ ಯಾವ

ಸಂದರ್ಭದಲ್ಲೂ ತನ್ನ ಮಕ್ಕಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳದ, ವಿದುರ ವ್ಯಾಸ ನಾರದ ಭೀಷ್ಮ ಮುಂತಾದ ಹಿರಿಯರ ತಿಳಿದವಠ ಹಿತಬಯಸುವವರ ಮಾತನ್ನು ಅತಿಕ್ರಮಿಸಿ, ಈಗ ಪರಿತಪಿಸಿ ಭೀಮನನ್ನು ನಿಷ್ಕರುಣಿ ಎನ್ನುವುದು ಸರಿಯೆ? ವ್ಯಾಸರು ಗಾಂಧಾರಿದೇವಿಯನ್ನೇ ಪ್ರಶ್ನಿಸುವರು 'ಆಶೀರ್ವದಿಸು ಎಂದು ಬೇಡಿದ ನಿನ್ನ ಮಗನಿಗೆ 'ಯತ್ರ ಧರ್ಮಸ್ತತೋ ಜಯಃ' ಎಂದು ಹೇಳಿ, ನಿರಾಶನನ್ನಾಗಿಸಿ ಕಳುಹಿಸಿದ ನೀನು, ಈಗ ಜಯಿಸಿದ ಪಾಂಡವರನ್ನು ಧರ್ಮಬಾಹಿರರನ್ನಾಗಿ ಕಾಣುತ್ತಿರುವಿ. ನಿನ್ನ ಹಿಂದಿನ ನಿಲುವನ್ನು ನೆನಪಿಸಿಕೊ' ಎಂದು. ಅದಕೆಂದೇ ಮಹಾಭಾರತವು ಹೇಳುತ್ತದೆ 'ಪಾಪಸ್ಯ ಫಲಂ ನೇಚ್ಛಂತಿ ಪಾಪಂ ಕುರ್ವಂತಿ ಮಾನವಾಃ' ಎಂದು. ಈ ಒಂದು ವ್ಯಾಸರ ಪ್ರಶ್ನೆಯು ಸಮಗ್ರ ಯುದ್ಧದಲ್ಲಿ ಕೃಷ್ಣನು ಮಾಡಿದ ತಂತ್ರಗಳು, ಪಾಂಡವರ ನಿಲುವು, ಭೀಮನ ನಡಿಗೆ ಇವೆಲ್ಲವೂ ಧರ್ಮದ ಚೌಕಟ್ಟಿನಲ್ಲವೆ ಎಂದು ಸಮರ್ಥಿಸುತ್ತದೆ.

ರಕ್ತದ ಗುಣ- ಯುದ್ಧಾನಂತರದಲ್ಲಿ ದೊಡ್ಡಪ್ಪ ಮತ್ತು ದೊಡ್ಡಮ್ಮನಿಗೆ ನಮಿಸಲು ಬಂದರು ಪಾಂಡವರು. ಧೃತರಾಷ್ಟ್ರನು ಭೀಮನನ್ನು ಅಪ್ಪಿ-ಹಿಸುಕಿ ಸಂಹರಿಸಲು ಬಯಸಿದ್ದನು.ಆದರೆ ಕೃಷ್ಣನು ತನ್ನ ತಂತ್ರದಿಂದ ವಿಫಲಗೊಳಿಸಿದನು (ಧೃತರಾಷ್ಟ್ರನು ಯಶಸ್ವಿಯಾಗುತ್ತಿದ್ದನೊ ಇಲ್ಲವೋ ಅದು ಬೇರೇ ವಿಷಯ). ಗಾಂಧಾರಿಯು ಶಾಪವನ್ನೀಯಲು ಹವಣಿಸುತ್ತಿದ್ದಳು. ಆದರೆ ಆಗ ವ್ಯಾಸರು ಉಪದೇಶಿಸಿ ತಪವನ್ನು ಹಾನಿಗೊಳಿಸಕೊಳ್ಳುವುದು ಬೇಡ ಎಂದು ತಿಳಿಹೇಳಿದರು. ಆದರೂ ಕಣ್ಣಿಗೆ ಕಟ್ಟಿದ ಬಟ್ಟೆಯ ಸಂದಿನಲ್ಲಿ ಧರ್ಮನಂದನನ ತುದಿಗಾಲನ್ನು ಕಂಡ ಆಕೆ ಆತನ ಉಗರಿನ ಬಣ್ಣವನ್ನು ಕೆಡಿಸಿ, ತನ್ನ ಅಂತರಂಗದ ಬಣ್ಣವನ್ನು ಬಯಲು ಮಾಡಿಕೊಂಡಳು. ದರಿಂದ ಈ ದಂಪತಿಗಳು ಅಂತರಂಗದಲ್ಲಿ ಎಷ್ಟು ಆಮರ್ಷವನ್ನು ತುಂಬಿಕೊಂಡೊದ್ದರು ಎಂದು ತಿಳಿದಂತಾಗುವುದು. 'ಮಾತಾಪಿತೃಗಳ ರಕ್ತದ ಗುಣಗಳನ್ನು ಮಕ್ಕಳಲ್ಲಿ ಕಾಣಬಹುದು' ಎಂದು ತಿಳಿದವರು ಹೇಳುವರು. ಹಾಗಾಗಿ ದುರ್ಯೋಧನಾದಿಗಳಲ್ಲಿದ್ದ ದ್ವೇಷ ಅಮರ್ಷ ಸ್ವಾರ್ಥ ಮುಂತಾದ ದುರ್ಗುಣಗಳ ಮೂಲ ಬೀಜವು ಈ ತಂದೆತಾಯಿಯರಲ್ಲಿ ಇದ್ದಿರಬಹುದಲ್ಲವೆ?

ಶ್ರೀಮದಾಚಾರ್ಯರ ಉಪದೇಶ- ಬಲರಾಮ, ಅಶ್ವತ್ಥಾಮ, ಗಾಂಧಾರಿಯಿಂದಾರಂಭಿಸಿ ಪಾಂಡವರ ನಡೆಯ ಬಗ್ಗೆ ಶಂಕಿಸುವ ಸಮಸ್ತರ ಸಮಸ್ತ ಸಂದೇಹಗಳಿಗೆ ಆಚಾರ್ಯರು ಉತ್ತರಿಸಿರುವರು. ಪೈಂಗಿಶ್ರುತಿಯ ಅಭಿಮತವನ್ನು ತಿಳಿಸುತ್ತಾ-

'ನಿಕೃತ್ಯಾ ನಿಕೃತಿಂ ಹಾನ್ಯಾನ್ನಿಕೃತ್ಯಾ ನೈವ ಧಾರ್ಮಿಕಾನ್- ಮೋಸಗಾರರನ್ನು ಮೋಸದಿಂದಲೇ ನಿಗ್ರಹಿಸಬೇಕು, ಧಾರ್ಮಿಕರಲ್ಲಿ ವಂಚನೆ ಸಲ್ಲದು' (ತಾ.ನಿ.28.215)

ದುಃಶಾಸನನ ರಕ್ತವನ್ನು ಪಾನಮಾಡಲಿಲ್ಲ, ಪಾನಮಾಂಡಿದಂತೆ ನಟಿಸಿದೆ. ಇದಕ್ಕೆ ಸಾಕ್ಷಿಯಾಗಿ ಕರ್ಣನಿರುವನು , ಈ ನಟನೆಯಾದರೂ ಪ್ರತಿಜ್ಞೆಯ ಪಾಲನೆಗಾಗಿ, ಪ್ರತೀಕಾರಕ್ಕಾಗಿ, ತಪ್ಪೆಸೆಗುವರಿಗೆ ಎಚ್ಚರಿಕೆಗಾಗಿ ಎನ್ನುತ್ತಾನೆ ಭೀಮನು. (ತಾ.ನಿ.28.217,218.)

'ಸರ್ವೈಃ ಸಮೇತೈಃ ಕೃಷ್ಣಸ್ಯ ಬಂಧನಾಯ ವಿನಿಶ್ಚಿತಮ್' – ಕೃಷ್ಣನು ಸಂಧಾನಕ್ಕೆಂದು ಹಸ್ತಿನೆಗೆ ಬಂದಾಗ ಕೌರವರೆಲ್ಲರೂ ಒಟ್ಟು ಸೇರಿ ಕೃಷ್ಣನ ಬಂಧನಕ್ಕೆ ಮಸಲತ್ತು ಮಾಡಿದ್ದರು. ಕೃಷ್ಣನು ಧರ್ಮೋಪದೇಶವನ್ನು ಮಾಡಿತ್ತಿದ್ದಾಗ ಮಧ್ಯೆ ಮಧ್ಯೆ ದುರ್ಯೋಧನನು ಎದ್ದು ಹೊಗುತ್ತಿದ್ದನು, ಆಗ ಉಳಿದ ಆತನ ಸಹೋದರರು ಆತನನ್ನು ಅನುಸರಿಸಿ ಹೊರಹೋಗುತ್ತಿದ್ದರು. ಇಂತಹ ವಿಷ್ಣುದ್ವೇಷಾದಿಗಳು ಅವರಲ್ಲಿ ಅನೇಕವಿರುವುದರಿಂದ ಯಾರೂ ಕ್ಷಮ್ಯರಲ್ಲ.

ಶ್ರೀವಾದಿರಾಜರ ಅನುಗ್ರಹ- ಸೋದೇರಾಜರು ತಮ್ಮ ಲಕ್ಷಾಲಂಕರದಲ್ಲಿ ನಾವು ಅರ್ಥವಾಗದೆ ತೊಂದರೆಗೆ ಒಳಗಾಗುವ ಸಂದರ್ಭಗಳಲ್ಲಿ ಅನುಗ್ರಹಿಸಿರುತ್ತಾರೆ. ಸ್ತ್ರೀಪರ್ವದ ಮೊದಲ ಅಧ್ಯಾಯದಲ್ಲಿ ಮೂರನೇ ಶ್ಲೋಕದಲ್ಲಿ 'ಶಾಪಶ್ಚಾನ್ಯೋನ್ಯಕಾರಿತಃ' ಎಂದಿದೆ. ಇದು, 'ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ ಅಶ್ವತ್ಥಾಮನಿಗೆ ಶಾಪವು ಪ್ರಾಪ್ತವಾಯಿತು ಅದರ ವಿವರವನ್ನು ತಿಳಿಸಿ' ಎಂದು ಜನಮೇಜಯರಾಜನು ಪ್ರಶ್ನಿಸುವ ಸಂದರ್ಭ. ಈ ಸಂದರ್ಭದಲ್ಲಿ ಕೇವಲ ಅಶ್ವತ್ಥಾಮಾಚಾರ್ಯರಿಗೆ ಶಾಪವಿತ್ತ ಪ್ರಸಂಗವು ಇದೆ ಹೊರತಾಗಿ ಪರಸ್ಪರವಾಗಿ ಶಾಪವಿತ್ತ ಪ್ರಸಂಗವು ಇಲ್ಲ. ಆದರೆ 'ಪರಸ್ಪರವಾಗಿ ಶಾಪವಿತ್ತ ಪ್ರಸಂಗವನ್ನು ತಿಳಿಸಿ' ಎಂದು ಜನಮೇಜಯನು ಪ್ರಶ್ನಿಸಿದಂತೆ ತೋರುವುದು. ಹಾಗಾಗಿ ಲಾಕ್ಷಾಲಂಕಾರಕಾರರು ತಿಳಿಸುತ್ತಾರೆ 'ಶ್ರೀಕೃಷ್ಣನು ಶ್ರೀವ್ಯಾಸರು ಅನ್ಯೋನ್ಯವಾಗಿ ಚರ್ಚಿಸಿ ಇತ್ತ ಶಾಪದ ಪ್ರಸಂಗ' ಎಂದು ಅರ್ಥೈಸಬೇಕೆಂದು ತಿಳಿಸಿರುತ್ತಾರೆ. ಅಂದರೆ 'ಅನ್ಯೋನ್ಯಕಾರಿತಃ' ಎಂಬುವಲ್ಲಿ ಮಧ್ಯಮಪದಲೋಪೀ ಸಮಾಸ ಎಂದು ತಿಳಿಸಿರುವರು.

ಹೀಗೆ ಮುಂದೆ ಇದೇ ಪರ್ವದಲ್ಲಿ ವಿದುರನ ಉಪದೇಶದ ಪ್ರಸಂಗದಲ್ಲಿ ಎರಡನೇ ಅಧ್ಯಾಯದ ಆರನೇ ಶ್ಲೋಕ- 'ಅಭಾವಾದೀನಿ ಭೂತಾನಿ' 'ಅಭಾವನಿಧನಾನಿ' ಎಂದಿದೆ. ಝಟಿತಿ ಇಲ್ಲಿಯ ಅಭಾವ ಶಬ್ದಕ್ಕೆ ಅರ್ಥವು ಏನೆಂದು ತಿಳಿಯದು. ರಾಜರು ಇಲ್ಲಿನ ಅಭಾವ ಶಬ್ದಗಳು ಪ್ರಾಗಭಾವ ಮತ್ತು ಪ್ರಧ್ವಂಸಾಭಾವಗಳನ್ನು ತಿಳಿಸುತ್ತದೆ ಎಂದು ತಿಳಿಸುತ್ತಾರೆ. ಹೀಗೆ ಇನ್ನೂ ಅತಿ ಮಹತ್ವದ ಅನೇಕ ವಿಷಯಗಳನ್ನು ನಾವು ಲಾಕ್ಷಾಲಂಕಾರದಲ್ಲಿ ಕಾಣಬಹುದಾಗಿದೆ.

ಪರಮಪೂಜ್ಯ ಪಾರ್ಯಾಯ ಪೀಠಾಧೀಶ್ವರರು ಅತ್ಯಂತ ಕಾರುಣ್ಯದಿಂದ ಶ್ರೀಮಹಾಭಾರತದ ಈ ಭಾಗವನ್ನು ಅನುವಾದಿಸಲು ಅವಕಾಶಮಾಡಿಕೊಟ್ಟಿರುವರು. ನಾನು ವಿದ್ವಾಂಸನೂ ಅಲ್ಲ ಪ್ರಸಿದ್ಧನೂ ಅಲ್ಲ, ಆದರೂ ವೇದವ್ಯಾಸರ ಸೇವೆಗೆ ಅವಕಾಶಮಾಡಿಕೊಟ್ಟು ಅನುಗ್ರಹಿಸಿರುವರು, ಅದಕ್ಕೆ ಕಾರಣ ನನ್ನ ಪೂರ್ವಿಕರಾದ ಬಿದರಹಳ್ಳಿ ಶ್ರೀನಿವಾಸತೀರ್ಥರ ಬಗ್ಗೆ ಪರಮಪೂಜ್ಯರಿಗೆ ಇರುವ ಗೌರವ ಮತ್ತು ನನ್ನ ತೀರ್ಥಪಾದರಾದ ಬಿದರಹಳ್ಳಿಶ್ರೀನಿವಾಸಾಚಾರ್ಯರರನ್ನು ಆದರಿಸಬೇಕೆಂಬ ಸದಾಶಯಗಳು ಎಂದು ಭಾವಿಸಿರುವೆನು. ಹೊರತಾಗಿ ನನ್ನಲ್ಲಿ ಗುರುತಿಸುವಂತಹ ಯಾವಗುಣಗಳು ಇಲ್ಲ. ಈ ಸೇವೆಯು ಗುರುಗಳಿಗೆ ಮೆಚ್ಚಿಕೆಯಾಗಿದ್ದ ಪಕ್ಷದಲ್ಲಿ, ಸದ್ಗುಣಗಳು ಮೈಗೂಡುವಂತೆ ಪರಮಪೂಜ್ಯರು ಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಪರಮಾತ್ಮನಲ್ಲಿ ಪ್ರಾರ್ಥಿಸಲಿ ಎಂದು ವಿನಮ್ರನಾಗಿ ಅನಂತನಮನ ಪೂರ್ವಕವಾಗಿ ಪ್ರಾರ್ಥಿಸುವೆನು.

ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ
ಪೂರ್ಣಪ್ರಜ್ಞ ಸಂಶೋಧನ ಮಂದಿರ, ಬೆಂಗಳೂರು

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೨೩

ಗದಾಪರ್ವ

ಪುಟ ಸಂ.

19. ದೇವತೆಗಳು ವರಣನನ್ನು ಜಲಕ್ಕೆ ಅಧಿಪತಿಯನ್ನಾಗಿ ಅಭಿಷೇಕ ಮಾಡಿದ್ದು. ಬಲರಾಮನು ಅಗ್ನಿತೀರ್ಥ ಮತ್ತು ಕೌಬೇರತೀರ್ಥಕ್ಕೆ ಹೋದದ್ದು ಮತ್ತು ಅವುಗಳ ಮಹಿಮೆಯ ವರ್ಣನೆ. ಬಲರಾಮನು ಬದರಪಾಚನತೀರ್ಥಕ್ಕೆ ಹೋದದ್ದು. ಶ್ರುತಾವತೀ ಮತ್ತು ಅರುಂಧತಿಯರ ಮಹಿಮಾವರ್ಣನೆ. 1

20. ಬಲಭದ್ರನು ಇಂದ್ರತೀರ್ಥಕ್ಕೆ ಹೋದುದು. ಆ ತೀರ್ಥದ ಮಹಿಮೆಯ ವರ್ಣನೆ 22

21. ದೇವಲ ಮತ್ತು ಜೈಗೀಷವ್ಯರ ಚರಿತ್ರೆಯ ವರ್ಣನೆ. ಬಲರಾಮನು ಆದಿತ್ಯತೀರ್ಥದಿಂದ ಸೋಮತೀರ್ಥಕ್ಕೆ ಹೋದುದು. 27

22. ದಧೀಚಿ ಮತ್ತು ಸಾರಸ್ವತರ ಚರಿತ್ರೆಗಳ ವರ್ಣನೆ 40

23. ವೃದ್ಧಕನ್ಯೆಯ ಚರಿತ್ರೆಯ ವರ್ಣನೆ 51

24. ಬಲರಾಮನಿಗೆ ಋಷಿಗಳಿಂದ ಕುರುಕ್ಷೇತ್ರದ ಬಗ್ಗೆ ವರ್ಣನೆ 58

25. ಸುತ್ರಾವರುಣ ಆಶ್ರಮದಲ್ಲಿ ಭೀಮ-ದುರ್ಯೋಧನರ ಮಧ್ಯೆ ಗದಾಯುದ್ಧನಡೆಯುತ್ತಿರುವ ವಿಷಯವನ್ನು ನಾರದರಿಂದ ಕೇಳಿ ತಿಳಿದ ಬಲರಾಮನು ಅದನ್ನು ನೋಡುವ ಇಚ್ಛೆಯಿಂದ ಕುರುಕ್ಷೇತ್ರದ ಕಡೆಗೆ ಹೋಗುವುದು. 64

26. ಗದಾಯುದ್ಧಕ್ಕೆ ಸನ್ನದ್ಧರಾದ ಭೀಮ ಮತ್ತು ದುರ್ಯೋಧನರ ವರ್ಣನೆ. ಭೀಮ ಮತ್ತು ದುರ್ಯೋಧನರ ಪೌರುಷದ ಮಾತುಗಳು. 73

27. ಭೀಮ ಮತ್ತು ದುರ್ಯೋಧನರ ಗದಾಯುದ್ಧದ ವರ್ಣನೆ 92

28. ಭೀಮಸೇನನು ದುರ್ಯೋಧನನ ತೊಡೆಯನ್ನು ಮುರಿದನು. 106

29. ದುರ್ಯೋಧನನ ಅನ್ಯಾಯವನ್ನು ಸ್ಮರಿಸುತ್ತಾ ಭೀಮನು ಎಡಗಾಲಿನಿಂದ ಅವನ ತಲೆಯನ್ನು ತುಳಿದದ್ದು. ಧರ್ಮರಾಜನು ದುರ್ಯೋಧನನನ್ನು ಸಮಾಧಾನಪಡಿಸಿದ್ದು. 119

30. ಭೀಮನು ಅನ್ಯಾಯ ಮಾಡಿದ್ದಾನೆ ಎಂದು ಅಂದುಕೊಂಡು ಬಲರಾಮನು ನೇಗಿಲನ್ನು ಹಿಡಿದುಕೊಂಡು ಭೀಮನ ಕಡೆಗೆ ಬರುವುದು. ಕೃಷ್ಣನು ಅವನನ್ನು ಸಮಾಧಾನಪಡಿಸಿದ್ದು ಮತ್ತು ಬಲರಾಮನು ದ್ವಾರಕೆಗೆ ಹೋದದ್ದು. ಧರ್ಮರಾಜನು ಕೃಷ್ಣ ಮತ್ತು ಭೀಮರ ಜೊತೆಗೆ ಮಾತನಾಡಿದ್ದು. 126

31. ಪಾಂಚಾಲರೇ ಮೊದಲಾದವರು ಭೀಮನನ್ನು ಸ್ತುತಿಸಿದ್ದು. ಕೃಷ್ಣ ಮತ್ತು ದುರ್ಯೋಧನರು ಪರಸ್ಪರವಾಗಿ ಬೈದುಕೊಂಡಿದ್ದು. ದುರ್ಯೋಧನನು ತನ್ನ ತಾನೇ ಕೊಂಡಾಡುತ್ತಿದ್ದಾಗ ಅವನ ತಲೆಯ ಮೇಲೆ ದೇವತೆಗಳಿಂದ ಪುಷ್ಪವೃಷ್ಟಿ, ಭೀಷ್ಮಾದಿಗಳ ಮರಣದಿಂದಾಗಿ ದುಃಖಿತರಾದ ಪಾಂಡವರನ್ನು ಕೃಷ್ಣನು ಸಮಾಧಾನಪಡಿಸುವುದು. 138

32. ಪಾಂಚಾಲ ಮೊದಲಾದವರು ತಮ್ಮ ತಮ್ಮ ಶಿಬಿರಗಳಿಗೆ ಹೋದ ಮೇಲೆ ಪಾಂಡವರು ದುರ್ಯೋಧನನ ಶಿಬಿರಕ್ಕೆ ಹೋಗಿ, ತಮ್ಮ ರಥಗಳಿಂದ ಕೆಳಗಿಳಿದದ್ದು. ಶ್ರೀಕೃಷ್ಣನು ರಥದಿಂದ ಮೊದಲು ಅರ್ಜುನನನ್ನು ಇಳಿಸಿ ತಾನು ಇಳಿದ ಬಳಿಕ ಅಗ್ನಿಯು ಆ ರಥವನ್ನು ಸುಟ್ಟು ಭಸ್ಮ ಮಾಡಿದ್ದು. ರಥವು ಸುಟ್ಟುಹೋಗಿದ್ದಕ್ಕೆ ಕಾರಣವನ್ನು ಅರ್ಜುನನಿಗೆ ಶ್ರೀಕೃಷ್ಣನು ತಿಳಿಸಿದ್ದು. ಶ್ರೀಕೃಷ್ಣನ ಮಾತಿನಂತೆ ಪಾಂಡವರು ಓಘವತೀತೀರದಲ್ಲಿ ರಾತ್ರಿಯಲ್ಲಿ ವಾಸಮಾಡಿದ್ದು. ಯುಧಿಷ್ಠಿರನು ಕೇಳಿಕೊಂಡ ಪ್ರಕಾರ ಶ್ರೀಕೃಷ್ಣನು ಗಾಂಧಾರಿಯನ್ನು ಸಮಾಧಾನಪಡಿಸಿದ್ದು. 156

33. ಗಾಂಧಾರಿಯನ್ನು ಸಮಾಧಾನಪಡಿಸಿದ ರೀತಿಯ ಬಗ್ಗೆ ಜನಮೇಜಯ ಪ್ರಶ್ನಿಸಿದಾಗ ವೈಶಂಪಾಯನರು ಅದನ್ನು ಹೇಳಿದ್ದು. ಶ್ರೀಕೃಷ್ಣನು ಗಾಂಧಾರಿ ಮತ್ತು ಧೃತರಾಷ್ಟ್ರರನ್ನು ಸಮಾಧಾನಪಡಿಸಿ ಪುನಃ ಪಾಂಡವರ ಸಮೀಪಕ್ಕೆ ಬಂದುದು. 169

34. ದುರ್ಯೋಧನನು ಪ್ರಲಾಪ ಮಾಡಿದ ರೀತಿಯನ್ನು ಸಂಜಯನು ಧೃತರಾಷ್ಟ್ರನಿಗೆ ಹೇಳುವುದು. ವಾದಿಕರು ಅಶ್ವತ್ಥಾಮನಿಗೆ ದುರ್ಯೋಧನನು ಕೆಳಬಿದ್ದ ವಿಷಯವನ್ನು ತಿಳಿಸುವುದು. 185

35. ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ದುರ್ಯೋಧನನು ನೆಲಕ್ಕೆ ಬಿದ್ದುದನ್ನು ನೋಡಿ ದುಃಖಿಸಿದ್ದು. ಅಶ್ವತ್ಥಾಮ ಮತ್ತು ದುರ್ಯೋಧನರ ಮಾತುಕತೆ. ಅಶ್ವತ್ಥಾಮನು ರಾತ್ರಿಯಲ್ಲಿ ಪಾಂಡವರನ್ನು ಕೊಲ್ಲುವ ಪ್ರತಿಜ್ಞೆಯನ್ನು ಮಾಡಿದ್ದು. ದುರ್ಯೋಧನನ ಮಾತಿನಂತೆ ಕೃಪನು ಅಶ್ವತ್ಥಾಮನಿಗೆ ಸೇನಾದಿಪತಿಯನ್ನಾಗಿ ಅಭಿಷೇಕ ಮಾಡಿದ್ದು. 194

★ ★ ★ ★ ★

ಸೌಪ್ತಿಕ ಪರ್ವ

1. ಸಂಜಯ ಧೃತರಾಷ್ಟ್ರರ ಸಂವಾದ, ದ್ರೋಣಪುತ್ರ, ಕೃತವರ್ಮ, ಕೃಪಾಚಾರ್ಯರು ವನವನ್ನು ಸೇರಿ ಒಂದೆಡೆ ಕುಳಿತುಕೊಳ್ಳುವುದು, ಅಲ್ಲಿ ರಾತ್ರಿಯಲ್ಲಿ ಗೂಬೆಯೊಂದು ಅನೇಕ ಕಾಗೆಗಳನ್ನು ಸಂಹರಿಸಿದ್ದನ್ನು ಕಂಡ ಅಶ್ವತ್ಥಾಮನು ಪಾಂಡವರನ್ನು ಸಂಹರಿಸಲು ನಿರ್ಧರಿಸಿ, ಆ ವಿಷಯವನ್ನು ಕೃಪ, ಕೃತವರ್ಮರಿಗೆ ತಿಳಿಸಿದನು. 205

2. ಕೃಪರಿಂದ ಅಶ್ವತ್ಥಾಮನಿಗೆ ಕರ್ತವ್ಯಕರ್ಮದ ಉಪದೇಶ. 219

3. ಕೃಪರ ಮಾತನ್ನು ಕೇಳಿದ ಅಶ್ವತ್ಥಾಮನು ಕೃಪ-ಕೃತವರ್ಮರಿಗೆ ತನ್ನ ಅಭಿಪ್ರಾಯವನ್ನು ತಿಳಿಸಿದನು. 227

4. ಅಶ್ವತ್ಥಾಮ-ಕೃಪರ ಸಂವಾದ 234

5. ಮಲಗಿದವರನ್ನು ಸಂಹರಿಸುವುದು ಅಧರ್ಮ ಎಂದು ಕೃಪರು ತಿಳಿಹೇಳಿದರೂ, ತಂದೆಯ ಮರಣದಿಂದ ಕುಪಿತನಾದ ಅಶ್ವತ್ಥಾಮನು ಶತ್ರುಗಳನ್ನು ಸಂಹರಿಸಬೇಕೆಂಬ ಬಯಕೆಯಿಂದ ಶತ್ರುಗಳ ಶಿಬಿರದೆಡೆಗೆ ಸಾಗಿದನು ಸ್ನೇಹದಿಂದ ಕೃಪ-ಕೃತವರ್ಮರೂ ಆತನನ್ನು ಹಿಂಬಾಲಿಸಿದರು. 241

6. ಶಿಬಿರದ ದ್ವಾರದಲ್ಲಿ ಮಹಾಭೂತವನ್ನು ಅಶ್ವತ್ಥಾಮನು ಕಂಡನು, ಅದನ್ನು ಗೆಲ್ಲಲು ಅಶ್ವತ್ಥಾಮನಿಂದ ಪ್ರಯುಕ್ತವಾದ ಎಲ್ಲ ಅಸ್ತ್ರಗಳನ್ನು ಆ ಭೂತವು ನುಂಗಿತು. ಚಿಂತೆಗೆ ಒಳಗಾದ ಅಶ್ವತ್ಥಾಮನು ಮಹಾದೇವನನ್ನು ಉಪಾಸಿಸಿದನು. 251

7. ಅಶ್ವತ್ಥಾಮನಿಂದ ಶಿವನ ಸ್ತುತಿ, ಆತನ ಮುಂಭಾಗದಲ್ಲಿ ಅಗ್ನಿಯ ಪ್ರಾದುರ್ಭಾವ, ಆತನ ಸಮೀಪಕ್ಕೆ ನಾನಾವಿಧಗಳಾದ ಭಯಂಕರಗಳಾದ ಭೂತಗಳ ಆಗಮನ, ರುದ್ರಾಂತರ್ಯಾಮಿಗೆ ತನ್ನನ್ನೇ

ಹವಿಸ್ಸನ್ನಾಗಿಸಿಕೊಂಡು ಕುಂಡವನ್ನು ಪ್ರವೇಶಿಸಿದನು. ಅಶ್ವತ್ಥಾಮನಿಗೆ ರುದ್ರದೇವನು ಖಡ್ಗವನ್ನು ನೀಡಿ ಅಶ್ವತ್ಥಾಮನಲ್ಲಿ ಲೀನನಾಗುವನು, ಅನಂತರದಲ್ಲಿ ಅಶ್ವತ್ಥಾಮನು ಪಾಂಡವರ ಶಿಬಿರವನ್ನು ಪ್ರವೇಶಿಸುವುದು. 259

8. ಶಿಬಿರದ ದ್ವಾರದಲ್ಲಿ ಕೃಪ-ಕೃತವರ್ಮರನ್ನು ನಿಲ್ಲಿಸಿ ಶಿಬಿರವನ್ನು ಪ್ರವೇಶಿಸಿದ ಅಶ್ವತ್ಥಾಮನಿಂದ ಧೃಷ್ಟದ್ಯುಮ್ನ ಮುಂತಾದ ಪಾಂಚಾಲರ ಮತ್ತು ದ್ರೌಪದಿಯ ಪುತ್ರರ ಸಂಹಾರ, ಹೆದರಿ ಹೊರಬರುವವರನ್ನು ಕೃಪ-ಕೃತವರ್ಮರು ಸಂಹರಿಸಿದರು. 276

9. ಅಶ್ವತ್ಥಾಮಾದಿಗಳು ದುರ್ಯೋಧನನಿಗಾಗಿ ಶೋಕಿಸಿದರು, ಮಲಗಿದ ಪಾಂಡವಪುತ್ರರು ಮುಂತಾದವರನ್ನು ಸಂಹಾರಮಾಡಿದ್ದನ್ನು ಅಶ್ವತ್ಥಾಮನು ದುರ್ಯೋಧನನಿಗೆ ತಿಳಿಸಿದನು. ಅಶ್ವತ್ಥಾಮಾದಿಗಳು ನಗರಕ್ಕೆ ತೆರಳಿದರು. ವ್ಯಾಸಾನುಗ್ರಹದಿಂದ ಪ್ರಾಪ್ತವಾದ ದಿವ್ಯಜ್ಞಾನವು ಸಂಜಯನಿಗೆ ಪರಿಸಮಾಪ್ತವಾಯಿತು. 311

ಐಷಿಕ ಪರ್ವ

1. ಅದೃಷ್ಟವಶಾತ್ ಬದುಕುಳಿದ ಧೃಷ್ಟದ್ಯುಮ್ನನ ಸಾರಥಿಯು ಆ ರಾತ್ರಿಯಲ್ಲಿ ಸೇನಾಶಿಬಿರದ ಸುದ್ದಿಯನ್ನು ಧರ್ಮರಾಜನಿಗೆ ಅರುಹಿದನು. ಕೇಳಿದ ಧರ್ಮರಾಜನು ಶಿಬಿರಕ್ಕೆ ಆಗಮಿಸಿದನು. ಮೃತರಾದವರನ್ನು ಕಂಡು ದುಃಖಿಸಿದನು. ದ್ರೌಪದಿಯನ್ನು ಅಲ್ಲಿಗೆ ಕರೆದುತರಲು ನಕುಲನಿಗೆ ಆದೇಶಿಸಿದನು. 324

2. ನಕುಲನು ದ್ರೌಪದಿಯನ್ನು ಶಿಬಿರಕ್ಕೆ ಕರೆದುತಂದನು. ಅಶ್ವತ್ಥಾಮನ ಶಿರೋಮಣಿಯನ್ನು ಕಿತ್ತುತರಲು ದ್ರೌಪದಿಯಿಂದ ಪ್ರಚೋದಿತನಾದ ಭೀಮಸೇನನು ನಕುಲನನ್ನು ಸಾರಥಿಯನ್ನಾಗಿ ಮಾಡಿಕೊಂಡು ಅಶ್ವತ್ಥಾಮನಲ್ಲಿಗೆ ಹೊರಟನು. 333

3. ದ್ರೋಣಪುತ್ರನನ್ನು ಕೊಲ್ಲಲು ಭೀಮಸೇನನು ಹೊರಡಲು, ಕೃಷ್ಣನು ಅಶ್ವತ್ಥಾಮನ ದುರ್ವರ್ತನೆಗಳನ್ನು ಧರ್ಮನಂದನನಿಗೆ ತಿಳಿಸಿ, ಭೀಮನನ್ನು ಆತನಿಂದ ಸಂರಕ್ಷಿಸಬೇಕು ಎಂದೂ ತಿಳಿಸಿದನು. 342

4. ಕೃಷ್ಣಮುಂತಾದವರು ವೇದವ್ಯಾಸರ ಸಮೀಪದಲ್ಲಿದ್ದ ದ್ರೋಣಪುತ್ರನನ್ನು ಕಂಡರು. ಕೃಷ್ಣಾದಿಗಳನ್ನು ಕಂಡ ಅಶ್ವತ್ಥಾಮನು ಪಾಂಡವರ ನಾಶಕ್ಕಾಗಿ ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸಿದನು. 351

5. ಕೃಷ್ಣನ ಆದೇಶದಂತೆ ಅರ್ಜುನನು ದ್ರೋಣರು ಉಪದೇಶಿಸಿದ ಅಸ್ತ್ರವನ್ನು ಪ್ರಯೋಗಿಸಿದನು. ನಾರದ ಮತ್ತು ವ್ಯಾಸರು ಅಲ್ಲಿಗೆ ಆಗಮಿಸಿದರು. 358

6. ಅರ್ಜುನನು ವ್ಯಾಸರ, ನಾರದರ ಆಜ್ಞೆಯಂತೆ ತಾನು ಪ್ರಯೋಗಿಸಿದ ಬ್ರಹ್ಮಶಿರಾಸ್ತ್ರವನ್ನು ಉಪಸಂಹಾರಗೊಳಿಸಿದನು. ಈ ದರ್ಭಾಸ್ತ್ರವು ಉತ್ತರೆಯ ಗರ್ಭವನ್ನು ಪ್ರವೇಶಿಸಿ ಗರ್ಭವನ್ನು ಸಂಹರಿಸಿದರೂ ತನ್ನಿಂದ ಆ ಗರ್ಭವನ್ನು ಪುನರುಜ್ಜೀವನಗೊಳಿಸುವುದಾಗಿ ಕೃಷ್ಣನಿಂದ ಪ್ರತಿಜ್ಞೆ, ಬ್ರಹ್ಮಚರ್ಯೆಯ ಸ್ಖಲಿತ್ಯದಿಂದ ಆ ಅಸ್ತ್ರವನ್ನು ಉಪಸಂಹರಿಸಲು ಅಸಮರ್ಥನಾದ ದ್ರೋಣಪುತ್ರನು ವ್ಯಾಸರನ್ನು ಕೃಷ್ಣನನ್ನೂ ತಿರಸ್ಕರಿಸುತ್ತಾ ಉತ್ತರೆಯ ಗರ್ಭದಲ್ಲಿ ದರ್ಭಾಸ್ತ್ರವನ್ನು ಗುರಿಯಾಗಿಸಿದನು. 364

7. ತನ್ನ ಮಾತನ್ನು ಅತಿಕ್ರಮಿಸಿ ಅಸ್ತ್ರವನ್ನು ಪ್ರಯೋಗಿಸಿದ ಅಶ್ವತ್ಥಾಮನಿಗೆ ಕೃಷ್ಣನು ಶಾಪವಿತ್ತನು. ಅದನ್ನು ವ್ಯಾಸರು ಅನುಮೋದಿಸಿದರು. ಭೀಮಸೇನನು ಅಶ್ವತ್ಥಾಮನ ಶಿರೋಮಣಿಯನ್ನು ದ್ರೌಪದಿಗೆ ನೀಡಿ ಸಮಾಧಾನಪಡಿಸಿದನು. 379

8. ದ್ರೌಪದಿಯ ಸೂಚನೆಯಂತೆ ಧರ್ಮರಾಜನು ಮಣಿಯನ್ನು ಶಿರದಲ್ಲಿ ಧರಿಸುವುದು. 384

9. ಒಬ್ಬನೇ ದ್ರೋಣಪುತ್ರನು ಅನೇಕರನ್ನು ಹೇಗೆ ಸಂಹರಿಸಿದನು ಎಂದು ಕೃಷ್ಣನಲ್ಲಿ ಯುಧಿಷ್ಠಿರನು ಪ್ರಶ್ನಿಸಲು, ರುದ್ರದೇವನ ಅನುಗ್ರಹದಿಂದ ಎಂದು ಉತ್ತರಿಸಿದ ಕೃಷ್ಣನು, ರುದ್ರದೇವನ ಮಹಿಮೆಯನ್ನು ತಿಳಿಸಿದನು. 387

10. ಕೃಷ್ಣನು ಧರ್ಮನಂದನನಿಗೆ ರುದ್ರದೇವನ ಕೋಪದಿಂದ ದೇವತೆಗಳ ಯಜ್ಞದ ನಾಶ ಮತ್ತು ಆತನ ಅನುಗ್ರಹದಿಂದ ದೇವತೆಗಳಿಗೆ ಸಮೃದ್ಧಿ ಈ ಮುಂತಾದವುಗಳನ್ನು ತಿಳಿಸಿ, ಈ ಮಹದೇವನ ಬಲದಿಂದಲೇ ಅಶ್ವತ್ಥಾಮನು ನಿನ್ನ ಪುತ್ರರನ್ನು ಸಂಹರಿಸಿದನು ಎಂದು ತಿಳಿಸಿದನು. 393

★ ★ ★ ★ ★

ಸ್ತ್ರೀಪರ್ವ

1. ತನ್ನ ಮಕ್ಕಳು, ಮೊಮ್ಮಕ್ಕಳನ್ನು ಉದ್ದೇಶಿಸಿ ರೋದಿಸುತ್ತಿರುವ ಧೃತರಾಷ್ಟ್ರನಿಗೆ ಸಂಜಯನಿಂದ ಸಾಂತ್ವನದ ನುಡಿಗಳು. 399

2. ವಿದುರನು ಶಾಸ್ತ್ರಾರ್ಥವಿಷಯವನ್ನು ಧೃತರಾಷ್ಟ್ರನಿಗೆ ತಿಳಿಸಲು ದುಃಖವು ಶಮನವಾಗುವುದು. 408

3. ವಿದುರನಿಂದ ಧೃತರಾಷ್ಟ್ರನಿಗೆ ಶೋಕಪರಿಹಾರಕ್ಕಾಗಿ ಶಾಸ್ತ್ರಾರ್ಥಕಥನ 416

4. ವಿದುರನಿಂದ ಧೃತರಾಷ್ಟ್ರನಿಗೆ ಶೋಕವು ಪರಿಹಾರವಾಗಲು ಶಾಸ್ತ್ರೋಪದೇಶ. 421

5. ಧೃತರಾಷ್ಟ್ರನಿಗೆ ವಿದುರನಿಂದ ಸಂಸಾರಾಟವಿಯ ವರ್ಣನೆ. 425

6. ಹಿಂದಿನ ಅಧ್ಯಾಯದಲ್ಲಿ ಒಗಟಿನಂತೆ ತಿಳಿಸಿದ ವಿಚಾರಗಳ ಸ್ಫುಟೀಕರಣ. 430

7. ವಿದುರನು ಧೃತರಾಷ್ಟ್ರನಿಗೆ ತತ್ವಗಳನ್ನು ಉಪದೇಶಿಸಿದನು. 433

8. ವ್ಯಾಸರಿಂದ ಧೃತರಾಷ್ಟ್ರನಿಗೆ ಶೋಕಪರಿಹಾರಕ ಉಪದೇಶ. 439

9. ಪುನಃ ಶೋಕತಪ್ತನಾದ ಧೃತರಾಷ್ಟ್ರನಿಗೆ ವಿದುರನಿಂದ ಉಪದೇಶ. 449

10. ಪುನಃ ಶೋಕತಪ್ತನಾದ ಧೃತರಾಷ್ಟ್ರನಿಗೆ ವಿದುರನಿಂದ ಉಪದೇಶ. 453

11. ಮೃತಬಂಧುಗಳನ್ನು ಕಾಣಲು ರಣಭೂಮಿಗೆ ಹೊರಟ ಧೃತರಾಷ್ಟ್ರನಿಗೆ ಮಾರ್ಗಮಧ್ಯದಲ್ಲಿ ಅಶ್ವತ್ಥಾಮಾದಿ ಮೂವರ ಭೇಟ್ಟಿ, ಅವರು ಧೃತರಾಷ್ಟ್ರನಿಗೆ ಸಮಾಧಾನಕರ ಮಾತುಗಳನ್ನು ಹೇಳುವುದು, ಅವರು ತನುತಮಗೆ ಅಭಿಮತವಾದ ಸ್ಥಳಕ್ಕೆ ತೆರಳುವುದು. 458

12. ಧರ್ಮರಾಜನು ಕೃಷ್ಣಾದಿಗಳಿಂದ ಕೂಡಿಕೊಂಡು ಧೃತರಾಷ್ಟ್ರನ ಸಮೀಪಕ್ಕೆ ತೆರಳಿದನು, ಧೃತರಾಷ್ಟ್ರನು ಧರ್ಮರಾಜನನ್ನು ಮೃದುವಾಗಿ ಆಲಿಂಗನ ಮಾಡಿಕೊಂಡನು, ಅನಂತರದಲ್ಲಿ ಕೃಷ್ಣನು ಮುಂದೆ ಸರಿಸಿದ ಭೀಮನ ಲೋಹದ ಪ್ರತಿಮೆಯನ್ನು ಬಿಗಿಯಾಗಿ ಆಲಿಂಗಿಸಿ ಭಂಜಿಸಿದನು. 463

13. ಕೃಷ್ಣನ ಉಪದೇಶದಿಂದ ಕೋಪವನ್ನು ಬಿಟ್ಟ ಧೃತರಾಷ್ಟ್ರನು ಭೀಮಾದಿಗಳನ್ನು ಆಲಿಂಗಿಸಿಕೊಂಡನು. 471

14. ಕೃಷ್ಣ ಯುಧಿಷ್ಠಿರಾದಿಗಳು ಗಾಂಧಾರಿಯ ಸಮೀಪಕ್ಕೆ ತೆರಳಿದರು, ಗಾಂಧಾರಿಯು ಯುಧಿಷ್ಠಿರನನ್ನು ಶಪಿಸುವಳು ಎನ್ನುವುದನ್ನು ಮೊದಲೇ ತಿಳಿದ ವ್ಯಾಸರು ಗಾಂಧಾರಿಯ ಕೋಪವನ್ನು ಶಮನಗೊಳಿಸಿದರು. 476

15. ಭೀಮಸೇನ, ಗಾಂಧಾರಿಯರ ಸಂವಾದ, ಯುಧಿಷ್ಠಿರಾದಿಗಳು ಗಾಂಧಾರಿಗೆ ನಮಿಸುವುದು, ಕುಂತಿ ಮತ್ತು ಗಾಂಧಾರಿಯರು ದ್ರೌಪದಿಗೆ ಸಾಂತ್ವನವನ್ನು ಹೇಳಿದರು. 482

16. ವ್ಯಾಸರ ಅನುಗ್ರಹದಿಂದ ದಿವ್ಯದೃಷ್ಟಿಯನ್ನು ಗಾಂಧಾರಿಯು ಹೊಂದುವುದು, ಧೃತರಾಷ್ಟ್ರ ಧರ್ಮನಂದನಾದಿಗಳು ಮಹಿಳೆಯರಿಂದ ಕೂಡಿಕೊಂಡು ರಣರಂಗಕ್ಕೆ ಬರುವುದು, ಮಹಿಳೆಯರ ರೋದನ, ಗಾಂಧಾರಿಯು ರೋದಿಸುತ್ತಿರುವ ತನ್ನ ಸೊಸೆಯರನ್ನು ಕೃಷ್ಣನಿಗೆ ತೋರಿಸುವುದು. 494

17. ಪುತ್ರ ದುರ್ಯೋಧನನನ್ನು ಕಂಡ ಗಾಂಧಾರಿಯ ರೋದನ. 507

18. ಕೃಷ್ಣನಲ್ಲಿ ಸೊಸೆಯರ ರೋದನವನ್ನು ಕಂಡ ಗಾಂಧಾರಿಯ ಅಳಲು. 514

19. ಕೃಷ್ಣನಲ್ಲಿ ಮೃತರಾದ ತನ್ನ ಮಕ್ಕಳಿಗಾಗಿ ಗಾಂಧಾರಿಯ ಅಳಲು 520

20. ಕೃಷ್ಣನಲ್ಲಿ ಅಭಿಮನ್ಯುವಿಗಾಗಿ ಗಾಂಧಾರಿಯ ಅಳಲು 524

21. ಕೃಷ್ಣನಲ್ಲಿ ಕರ್ಣನಿಗಾಗಿ ಗಾಂಧಾರಿಯ ಅಳಲು 531

22. ಬಾಹ್ಲೀಕನಿಗಾಗಿ ಗಾಂಧಾರಿಯ ಅಳಲು. 535

23. ಶಲ್ಯ-ಭೀಷ್ಮಾದಿಗಳಿಗಾಗಿ ಗಾಂಧಾರಿಯ ಅಳಲು 539

24. ಗಾಂಧಾರಿಯು ಭೂರಿಶ್ರವಸ್ ಮುಂತಾದವರ ಸ್ತ್ರೀಯರಿಗಾಗಿ ಪರಿತಪಿಸುವುದು. 548

25. ಗಾಂಧಾರಿಯು ಕುರು-ಪಾಂಡವರ ಸಂಕ್ಷಯಕ್ಕೆ ಕೃಷ್ಣನೇ ಕಾರಣ, ಆದ್ದರಿಂದ ಕೃಷ್ಣನ ಎಲ್ಲ ಬಂಧುಗಳು ಪರಸ್ಪರ ಕಲಹದಿಂದ ನಾಶವಾಗಲಿ ಎಂದು ಶಪಿಸಿದಳು. 555

26. ದುಃಖದಿಂದ ಭೂಮಿಯಲ್ಲಿ ಬಿದ್ದಿದ್ದ ಗಾಂಧಾರಿಗೆ ಶ್ರೀಕೃಷ್ಣನು ಸಮಾಧಾನವನ್ನು ಹೇಳಿದನು. ಧರ್ಮರಾಜನ ಸೂಚನೆಯಂತೆ ಸಂಜಯ ಮತ್ತು ವಿದುರರು ಮೃತರಿಗೆ ಉತ್ತರಕ್ರಿಯೆಗಳನ್ನು ನಡೆಸಿದರು 567

27. ಮೃತರಿಗೆ ತರ್ಪಣವನ್ನೀಯಲು ಧೃತರಾಷ್ಟ್ರಾದಿಗಳು ಗಂಗಾತೀರಕ್ಕೆ ತೆರಳುವುದು, ತರ್ಪಣವನ್ನು ಈಯುವ ಸಂದರ್ಭದಲ್ಲಿ ಕುಂತಿಯು, ಕರ್ಣನು ತನ್ನ ಪುತ್ರ ಎಂದು ಧರ್ಮರಾಜಾದಿಗಳಿಗೆ ತಿಳಿಸುವುದು, ಧೃತರಾಷ್ಟ್ರಾದಿಗಳು ತಮ್ಮ ತಮ್ಮ ಬಂಧುಗಳಿಗೆ ತರ್ಪಣವನ್ನು ನೀಡಿದರು. 576

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಗದಾಪರ್ವ

ಹತ್ತೊಂಬತ್ತನೆಯ ಅಧ್ಯಾಯ

ದೇವತೆಗಳು ವರುಣನನ್ನು ಜಲಕ್ಕೆ ಅಧಿಪತಿಯನ್ನಾಗಿ ಅಭಿಷೇಕ ಮಾಡಿದ್ದು. ಬಲರಾಮನು ಅಗ್ನಿತೀರ್ಥ ಮತ್ತು ಕೌಬೇರತೀರ್ಥಕ್ಕೆ ಹೋದದ್ದು ಮತ್ತು ಅವುಗಳ ಮಹಿಮೆಯ ವರ್ಣನೆ. ಬಲರಾಮನು ಬದರಪಾಚನತೀರ್ಥಕ್ಕೆ ಹೋದದ್ದು. ಶ್ರುತಾವತೀ ಮತ್ತು ಅರುಂಧತಿಯರ ಮಹಿಮಾವರ್ಣನೆ.

ಜನಮೇಜಯಃ

ಅತ್ಯದ್ಭುತಮಿದಂ ಬ್ರಹ್ಮನ್ ಶ್ರುತವಾನಸ್ಮಿ ತತ್ತ್ವತಃ ॥೧॥

ಜನಮೇಜಯ– ಬ್ರಹ್ಮಜ್ಞಾನಿಯೇ! ನಾನು ಬಹಳ ಅದ್ಭುತವಾದ ವಿಷಯಗಳನ್ನು ಯಥಾರ್ಥವಾಗಿ ನಿನ್ನಿಂದ ಕೇಳಿ ತಿಳಿದೆನು.

ಅಭಿಷೇಕಂ ಕುಮಾರಸ್ಯ ದೈತ್ಯಾನಾಂ ಚ ವಧಂ ತಥಾ ।
ಶ್ರುತ್ವಾ ಮೇ ಪರಮಾ ಪ್ರೀತಿರ್ಭೂಯಃ ಕೌತೂಹಲಂ ಹಿ ಮೇ ॥೨॥

ಕುಮಾರನ ಪಟ್ಟಾಭಿಷೇಕ, ದೈತ್ಯರ ವಧೆ ಇವನ್ನು ಕೇಳಿ ನನಗೆ ಪುನಃ ಆನಂದ ಮತ್ತು ಕುತೂಹಲವು ಉಂಟಾಗಿದೆ.

ಅಪಾಂಪತಿಃ ಕಥಂ ಹ್ಯಸ್ಮಿನ್ನಭಿಷಿಕ್ತಃ ಕದಾ ಸುರೈಃ ।
ತನ್ಮೇ ಬ್ರೂಹಿ ಮಹಾಪ್ರಾಜ್ಞ ಕುಶಲೋ ಹ್ಯಸಿ ಸತ್ತಮ ॥೩॥

ಮಹಾಜ್ಞಾನಿಯೇ! ದೇವತೆಗಳು ನೀರಿನೊಡೆಯನಾದ ವರುಣನಿಗೆ ಇಲ್ಲಿ ಹೇಗೆ ಮತ್ತು ಯಾವಾಗ ಪಟ್ಟದಲ್ಲಿ ಅಭಿಷೇಕವನ್ನು ಮಾಡಿದರು? ನೀನು ಇದನ್ನು ಹೇಳಲು ಸಮರ್ಥನಾಗಿರುವಿ.

ವೈಶಂಪಾಯನಃ

ಶೃಣು ರಾಜನ್ನಿದಂ ಚಿತ್ರಂ ಪೂರ್ವಕಾಲೇ ಯಥಾऽಭವತ್ ॥೪॥

ವೈಶಂಪಾಯನ– ರಾಜನೇ! ಹಿಂದಿನ ಕಾಲದಲ್ಲಿ ನಡೆದ ವಿಚಿತ್ರವಾದ ಘಟನೆಯನ್ನು ಯಥಾವತ್ತಾಗಿ ಕೇಳು.

ಆದೌ ಕೃತಯುಗೇ ತಸ್ಮಿನ್ ವರ್ತಮಾನೇ ಯಥಾವಿಧಿ ।
ವರುಣಂ ದೇವತಾಃ ಸರ್ವಾಃ ಸಮೇತ್ಯೇದಮಥಾಬ್ರುವನ್ ॥೫॥

ಕೃತಯುಗದ ಪ್ರಾರಂಭದಲ್ಲಿ ಎಲ್ಲಾ ದೇವತೆಗಳು ಒಟ್ಟಾಗಿ ವರುಣನನ್ನು ಸಮೀಪಿಸಿ ಹೀಗೆ ಹೇಳಿದರು.

ದೇವಾಃ

ಯಥಾऽಸ್ಮಾನ್ ಸುರರಾಟ್ ಶಕ್ರೋ ಭಯೇಭ್ಯಸ್ತ್ರಾತಿ ಸರ್ವದಾ ।
ತಥಾ ತ್ವಮಪಿ ಸರ್ವಾಸಾಂ ಸರಿತಾಂ ವೈ ಪತಿರ್ಭವ ॥೬॥

ದೇವತೆಗಳು– ಯಾವ ರೀತಿಯಲ್ಲಿ ದೇವೇಂದ್ರನಾದ ಇಂದ್ರನು ನಮ್ಮನ್ನು ಭಯದಿಂದ ರಕ್ಷಿಸುತ್ತಾನೆಯೋ ಹಾಗೆಯೇ ನೀನೂ ಕೂಡ ಎಲ್ಲಾ ನದಿಗಳಿಗೆ ಅಧಿಪತಿಯಾಗು.

ವಾಸಶ್ಚ ತೇ ಸದಾ ದೇವ ಸಾಗರೇ ಮಕರಾಲಯೇ ।
ಸಮುದ್ರೋऽಯಂ ತವ ವಶೇ ಭವಿಷ್ಯತಿ ನದೀಪತಿಃ ॥೭॥

ನೀನು ಯಾವಾಗಲೂ ಮೊಸಳೆಗಳಿಂದ ತುಂಬಿದ ಸಾಗರದಲ್ಲಿ ಆಶ್ರಯವನ್ನು ಪಡೆ. ನದಿಗಳ ಪತಿಯಾದ ಸಮುದ್ರವು ನಿನ್ನ ಅಧೀನದಲ್ಲಿ ಇರುತ್ತದೆ.

ಸೋಮೇನ ಸಾರ್ಧಂ ತವ ಚ ಹಾನಿರ್ವೃದ್ಧಿರ್ಭವಿಷ್ಯತಿ ॥೮॥

ಚಂದ್ರನ ವೃದ್ಧಿ ಮತ್ತು ಕ್ಷಯಕ್ಕೆ ಅನುಸಾರವಾಗಿ ನಿನ್ನಲ್ಲಿಯೂ ಉಬ್ಬರ - ಇಳಿತಗಳು ಉಂಟಾಗುವವು.

ವೈಶಂಪಾಯನಃ

ಏವಮಸ್ತ್ವಿತಿ ತಾನ್ ದೇವಾನ್ ವರುಣೋ ವಾಕ್ಯಮಬ್ರವೀತ್ ॥೯॥

ವೈಶಂಪಾಯನ– ಹಾಗೆಯೇ ಆಗಲಿ ಎಂದು ವರುಣನು ದೇವತೆಗಳಿಗೆ ಹೇಳುತ್ತಾನೆ.

ಸಮಾಗಮ್ಯ ತು ತೇ ಸರ್ವೇ ವರುಣಂ ಸಾಗರಾಲಯಮ್ ।
ಅಪಾಂಪತಿಂ ಪ್ರಚಕ್ರುರ್ಹಿ ವಿಧಿದೃಷ್ಟೇನ ಕರ್ಮಣಾ ॥೧೦॥

ಆ ಎಲ್ಲಾದೇವತೆಗಳು ಬಂದು ಸಾಗರದಲ್ಲಿದ್ದ ವರುಣನನ್ನು ಶಾಸ್ತ್ರೋಕ್ತ ಕ್ರಿಯೆಗಳಿಂದ ಜಲಾಧಿಪತಿಯನ್ನಾಗಿ ಅಭಿಷೇಕಮಾಡಿದರು.

ಅಭಿಷಿಚ್ಯ ತತೋ ದೇವಾ ವರುಣಂ ಪಯಸಾಂ ಪತಿಮ್ ।
ಸ್ವಾನ್ಯೇವ ಜಗ್ಮುಃ ಸ್ಥಾನಾನಿ ಪೂಜಯಿತ್ವಾ ಜಲೇಶ್ವರಮ್ ॥೧೧॥

ದೇವತೆಗಳು ವರುಣನನ್ನು ಜಲಾಧಿಪತಿಯನ್ನಾಗಿ ಅಭಿಷೇಕ ಮಾಡಿ, ಅವನನ್ನು ಪೂಜಿಸಿ ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋದರು.

ಅಭಿಷಿಕ್ತಸ್ತತೋ ದೇವೈಃ ವರುಣೋಽಪಿ ಮಹಾಯಶಾಃ ।
ಸರಿತಃ ಸಾಗರಾಂಶ್ಚೈವ ನದಾಂಶ್ಚೈವ ಸರಾಂಸಿ ಚ ॥೧೨॥

ಪಾಲಯಾಮಾಸ ವಿಧಿನಾ ಯಥಾ ದೇವಾನ್ ಶತಕ್ರತುಃ ॥೧೩॥

ಅನಂತರ ದೇವತೆಗಳಿಂದ ಅಭಿಷಿಕ್ತನಾದ, ಮಹಾಕೀರ್ತಿವಂತನಾದ ವರುಣನು ನದಿಗಳನ್ನು, ಸಾಗರಗಳನ್ನು, ನದಗಳನ್ನು ಮತ್ತು ಸರೋವರಗಳನ್ನು, ಇಂದ್ರನು ದೇವತೆಗಳನ್ನು ಪಾಲಿಸಿದಂತೆ ಪಾಲಿಸಿದನು.

ತತಸ್ತತ್ರಾಪ್ಲುಪಸ್ಪೃಶ್ಯ ದತ್ತ್ವಾ ಚ ವಿವಿಧಂ ವಸು ।
ಅಗ್ನಿತೀರ್ಥಂ ಮಹಾಪ್ರಾಜ್ಞೋ ಜಗಾಮಾಥ ಪ್ರಲಂಬಹಾ ॥೧೪॥

ಪ್ರಲಂಬಾಸುರನನ್ನು ಕೊಂದ ಬಲರಾಮನು ಆ ತೀರ್ಥದಲ್ಲಿ ಆಚಮನಾದಿಗಳನ್ನು ಮಾಡಿ, ವಿವಿಧ ಸಂಪತ್ತನ್ನು ದಾನಮಾಡಿ ಅಲ್ಲಿಂದ ಅಗ್ನಿತೀರ್ಥಕ್ಕೆ ಹೋದನು.

ನಷ್ಟೋ ನ ದೃಶ್ಯತೇ ಯತ್ರ ಶಮೀಗರ್ಭೋ ಹುತಾಶನಃ ।
ಲೋಕಾಲೋಕವಿನಾಶೇ ಚ ಪ್ರಾದುರ್ಭೂತೇ ತದಾ ನೃಪ ॥೧೫॥

ಉಪತಸ್ಥುರ್ಮಹಾತ್ಮಾನಂ ಸರ್ವಲೋಕಪಿತಾಮಹಮ್ ॥೧೬॥

ರಾಜನೇ ! ಹಿಂದೆ ಈ ಅಗ್ನಿತೀರ್ಥದಲ್ಲಿ ಶಮೀಗರ್ಭನಾದ ಅಗ್ನಿಯು ಕಳೆದುಹೋದನು. ಆಗ ಲೋಕಾಲೋಕಗಳು ನಾಶವಾಗಲು ಪ್ರಾರಂಭವಾದಾಗ ದೇವತೆಗಳು ಲೋಕಪಿತಾಮಹನಾದ ಬ್ರಹ್ಮನನ್ನು ಉಪಾಸನೆ ಮಾಡಿದರು.

ದೇವಾಃ

ಅಗ್ನಿಃ ಪ್ರನಷ್ಟೋ ಭಗವಾನ್ ಕಾರಣಂ ನ ಚ ವಿದ್ಮಹೇ ।
ಸರ್ವಲೋಕಕ್ಷಯೋ ಮಾ ಭೂತ್ ಸಂಪಾದಯತು ನೋಽನಲಮ್ ॥

ದೇವತೆಗಳು– ಪೂಜ್ಯನಾದ ಅಗ್ನಿಯು ಕಳೆದುಹೋಗಿದ್ದಾನೆ. ಕಾರಣವೇನೆಂದು ತಿಳಿಯುತ್ತಿಲ್ಲ. ಸರ್ವಲೋಕವು ನಾಶವಾಗದಿರಲಿ. ನಮಗೆ ಅಗ್ನಿಯನ್ನು ಸಂಪಾದಿಸಿಕೊಡು.

ಜನಮೇಜಯಃ

ಕಿಮರ್ಥಂ ಭಗವಾನಗ್ನಿಃ ಪ್ರನಷ್ಟೋ ಲೋಕಭಾವನಃ ।
ವಿಜ್ಞಾತಶ್ಚ ಕಥಂ ದೇವೈಸ್ತನ್ಮಮಾಚಕ್ಷ್ವ ಪೃಚ್ಛತಃ ॥೧೮॥

ಜನಮೇಜಯ– ಲೋಕವನ್ನು ರಕ್ಷಿಸುವ ಅಗ್ನಿಯು ಯಾಕಾಗಿ ಕಳೆದುಹೋದನು? ದೇವತೆಗಳು ಅದನ್ನು ಹೇಗೆ ತಿಳಿದುಕೊಂಡರು? ಇದನ್ನೆಲ್ಲವನ್ನು ಪ್ರಶ್ನಿಸುತ್ತಿದ್ದೇನೆ. ನನಗೆ ಹೇಳು.

ವೈಶಂಪಾಯನಃ

ಭೃಗೋಃ ಶಾಪಭಯಾದ್ ಭೀತೋ ಜಾತವೇದಾಃ ಪ್ರತಾಪವಾನ್ ।
ಶಮೀಗರ್ಭಮಥಾಸಾದ್ಯ ನನಾಶ ಭಗವಾಂಸ್ತತಃ ॥೧೯॥

ವೈಶಂಪಾಯನ– ಭೃಗುವಿನ ಶಾಪದ ಭಯದಿಂದಾಗಿ ಪ್ರತಾಪಿಯಾದ ಅಗ್ನಿಯು ಶಮೀವೃಕ್ಷದ ಒಳಗೆ ಸೇರಿಕೊಂಡು ಕಾಣದಾದನು.

ಪ್ರನಷ್ಟೇ ತು ತದಾ ವಹ್ನೌ ದೇವಾಃ ಸರ್ವೇ ಸವಾಸವಾಃ ।
ಅನ್ವೇಷಯಂಸ್ತದಾ ಸರ್ವೇ ಜ್ವಲನಂ ಭೃಶದುಃಖಿತಾಃ ॥೨೦॥

ಅಗ್ನಿಯು ಅದೃಶ್ಯನಾದಾಗ ಬಹಳದುಃಖಿತರಾದ ಎಲ್ಲಾ ಇಂದ್ರಾದಿದೇವತೆಗಳು ಅವನನ್ನು ಹುಡುಕಾಡಿದರು.

ತತೋಽಗ್ನಿತೀರ್ಥಮಾಗಮ್ಯ ಶಮೀಗರ್ಭಸ್ಥಮೇವ ಹಿ ।
ದದೃಶುರ್ಜ್ವಲನಂ ತತ್ರ ವಸಮಾನಂ ಯಥಾವಿಧಿ ॥೨೧॥

ಅನಂತರ ಅಗ್ನಿತೀರ್ಥಕ್ಕೆ ಬಂದು ಅಲ್ಲಿ ಶಮೀವೃಕ್ಷದ ಒಳಗೆ ವಾಸಿಸುತ್ತಿದ್ದ ಅಗ್ನಿಯನ್ನು ನೋಡಿದರು.

ದೇವಾಃ ಸರ್ವೇ ಮಹಾರಾಜ ಬೃಹಸ್ಪತಿಪುರೋಗಮಾಃ ।
ಜ್ವಲನಂ ತೇ ಸಮಾಸಾದ್ಯ ಪ್ರೀತಾ ಭೂವನ್ ಸವಾಸವಾಃ ॥೨೨॥

ಮಹಾರಾಜನೇ! ಇಂದ್ರಾದಿದೇವತೆಗಳು ಬೃಹಸ್ಪತಿಯನ್ನು ಮುಂದಿಟ್ಟುಕೊಂಡು ಅಗ್ನಿಯನ್ನು ಹೊಂದಿ ಸಂತುಷ್ಟರಾದರು.

ಪುನರ್ಯಥಾಗತಂ ಜಗ್ಮುಃ ಸರ್ವಭಕ್ಷಶ್ಚ ಸೋಽಭವತ್ ॥೨೩॥

ಭೃಗೋಃ ಶಾಪಾನ್ಮಹೀಪಾಲ ಯದುಕ್ತಂ ಬ್ರಹ್ಮವಾದಿನಾ ।
ತತ್ಸೈವಾಪ್ಲುತ್ಯ ಮತಿಮಾನ್ ಬ್ರಹ್ಮಯೋನಿಂ ಜಗಾಮ ಹ ॥೨೪॥

ಅವರೆಲ್ಲಾ ಪುನಃ ತಮ್ಮ ಸ್ಥಾನಕ್ಕೆ ಹೋದರು. ಅಗ್ನಿಯಾದರೂ ಭೃಗುವಿನ ಶಾಪದಿಂದಾಗಿ ಸರ್ವಭಕ್ಷಕ (ಎಲ್ಲವನ್ನೂ ತಿನ್ನುವವನು) ಆದನು. ರಾಜನೇ! ಬ್ರಹ್ಮಜ್ಞಾನಿಯಾದ ಮುನಿಯು ಏನು ಹೇಳಿದನೋ ಹಾಗೆಯೇ ಆಯಿತು.

ಸಸರ್ಜ ಭಗವಾನ್ ಯತ್ರ ಸರ್ವಲೋಕಪಿತಾಮಹಃ ॥೨೫॥

ಬುದ್ಧಿವಂತನಾದ ಬಲರಾಮನು ಅಲ್ಲಿ ಅವಗಾಹಸ್ನಾನವನ್ನು ಮಾಡಿ ಬ್ರಹ್ಮಯೋನಿತೀರ್ಥಕ್ಕೆ ಹೋದನು. ಆ ಬ್ರಹ್ಮಯೋನಿತೀರ್ಥದಲ್ಲಿ ಸರ್ವಲೋಕ ಪಿತಾಮಹನಾದ ಚತುರ್ಮುಖಬ್ರಹ್ಮನು ಜಗತ್ತಿನ ಸೃಷ್ಟಿಯನ್ನು ಮಾಡಿದನು.

ತತ್ರಾಪ್ಲುತ್ಯ ತತೋ ಬ್ರಹ್ಮಾ ಸಹ ದೇವೈಃ ಪುರಾ ಪ್ರಭುಃ ।
ಸಸರ್ಜ ಚಾನ್ನಾನಿ ತಥಾ ದೇವತಾನಾಂ ಯಥಾವಿಧಿ ॥೨೬॥

ಹಿಂದೆ ಅಲ್ಲಿ ಚತುರ್ಮುಖನು ದೇವತೆಗಳೊಡನೆ ಸ್ನಾನವನ್ನು ಮಾಡಿ ದೇವತೆಗಳಿಗೆ ಯೋಗ್ಯವಾದ ಅನ್ನಗಳನ್ನು ಸೃಷ್ಟಿಸಿದನು.

ತತ್ರ ಸ್ನಾತ್ವಾ ಚ ದತ್ತ್ವಾ ಚ ವಸೂನಿ ವಿವಿಧಾನಿ ಚ ।
ಕೌಬೇರಂ ಪ್ರಯಯೌ ತೀರ್ಥಂ ಯತ್ರ ತಪ್ತ್ವಾ ತಪೋ ಮಹತ್ ॥೨೭॥

ಧನಾಧಿಪತ್ಯಂ ಸಂಪ್ರಾಪ್ತೋ ರಾಜನ್ನೈಲಬಿಲಃ ಪ್ರಭುಃ ॥೨೮॥

ಬಲರಾಮನು ಅಲ್ಲಿ ಸ್ನಾನವನ್ನು ಮಾಡಿ, ವಿವಿಧ ಸಂಪತ್ತುಗಳನ್ನು ದಾನಮಾಡಿ ಕೌಬೇರತೀರ್ಥಕ್ಕೆ ಹೋದನು. ರಾಜನೇ! ಈ ಕೌಬೇರತೀರ್ಥದಲ್ಲಿ ಸಮರ್ಥನಾದ ಐಲಬಿಲ (ಕುಬೇರ)ನು ಬಹಳ ತಪಸ್ಸನ್ನು ಮಾಡಿ ಧನಾಧಿಪತ್ಯವನ್ನು ಪಡೆದನು.

ತತ್ರಸ್ಥಮೇವ ತಂ ರಾಜನ್ ಧನಾನಾಂ ನಿಧಯಸ್ತಥಾ ।
ಉಪತಸ್ಥುರ್ನರಶ್ರೇಷ್ಠ ತತ್ತೀರ್ಥಂ ಲಾಂಗಲೀ ತದಾ ॥೨೯॥

ಗತ್ವಾ ಸ್ನಾತ್ವಾ ಚ ವಿಧಿವದ್ ಬ್ರಾಹ್ಮಣಾನಾಂ ದದೌ ಧನಮ್ ॥೩೦॥

ರಾಜನೇ! ಅಲ್ಲಿದ್ದ ಕುಬೇರನ ಬಳಿಗೆ ಎಲ್ಲಾ ಸಂಪತ್ತಿನ ನಿಧಿಗಳು ಬಂದು ಸೇರಿದವು. ನರೋತ್ತಮನೇ! ಬಲರಾಮನು ಆ ತೀರ್ಥಕ್ಕೆ ಹೋಗಿ, ಸ್ನಾನವನ್ನು ಮಾಡಿ ವಿಧ್ಯುಕ್ತರೀತಿಯಲ್ಲಿ ಬ್ರಾಹ್ಮಣರಿಗೆ ಸಂಪತ್ತನ್ನು ದಾನಮಾಡಿದನು.

ದದೃಶೇ ತತ್ರ ತತ್ಸ್ಥಾನಂ ಕೌಬೇರೇ ಕಾನನೇ ಪ್ರಭುಃ ॥೩೧॥

ಪುರಾ ಯತ್ರ ತಪಸ್ತಪ್ತಂ ವಿಪುಲಂ ಸುಮಹಾತ್ಮನಾ ।
ಯತ್ರ ರಾಜ್ಞಾ ಕುಬೇರೇಣ ವರಾ ಲಬ್ಧಾಶ್ಚ ಪುಷ್ಕಲಾಃ ॥೩೨॥

ಅಲ್ಲಿ ಕುಬೇರನ ವನದಲ್ಲಿ ಬಲರಾಮನು ಕುಬೇರನ ತಪಸ್ಸಿನ ಸ್ಥಳವನ್ನು ಕಂಡನು. ಯಾವ ಸ್ಥಳದಲ್ಲಿ ಕುಬೇರನಿಗೆ ಯಥೇಷ್ಟವಾದ ವರಗಳು ಲಭಿಸಿದವೋ ಆ ಸ್ಥಳವನ್ನು ನೋಡಿದನು.

ಧನಾಧಿಪತ್ಯಂ ಸಖ್ಯಂ ಚ ರುದ್ರೇಣಾಮಿತತೇಜಸಾ ।
ಸುರತ್ವಂ ಲೋಕಪಾಲತ್ವಂ ಪುತ್ರಂ ಚ ನಲಕೂಬರಮ್ ॥೩೩॥

ಯತ್ರ ಲೇಭೇ ಮಹಾಬಾಹೋ ಧನಾಧಿಪತಿರಂಜಸಾ ।
ಅಭಿಷಿಕ್ತಶ್ಚ ಯತ್ರೈವ ಸಮಾಗಮ್ಯ ಮರುದ್ಗಣೈಃ ॥೩೪॥

ವಾಹನಂ ಚಾಸ್ಯ ತದ್ದತ್ತಂ ಹಂಸಯುಕ್ತಂ ಮನೋಜವಮ್ ।
ವಿಮಾನಂ ಪುಷ್ಪಕಂ ದಿವ್ಯಂ ನೈರ್ಋತೈಶ್ವರ್ಯಮೇವ ಚ ॥೩೫॥

ಮಹಾಬಾಹೋ! ಕುಬೇರನು ಆ ಸ್ಥಳದಲ್ಲಿಯೇ ಧನಾಧಿಪತ್ಯವನ್ನೂ, ಅಮಿತತೇಜೋವಂತನಾದ ರುದ್ರನ ಜೊತೆಗೆ ಸ್ನೇಹವನ್ನೂ, ದೇವತಾತ್ವವನ್ನೂ, ಲೋಕಾಧಿಪತ್ಯವನ್ನೂ ಮತ್ತು ನಲಕೂಬರ ಎಂಬ ಮಗನನ್ನೂ ಪಡೆದನು. ಮರುದ್ಗಣಗಳೂ ಅಲ್ಲಿಯೇ ಬಂದು ಕುಬೇರನಿಗೆ ಪಟ್ಟಾಭಿಷೇಕವನ್ನು ಮಾಡಿದ್ದು. ಕುಬೇರನಿಗೆ ಆ ಮರುತ್ತುಗಳು ಹಂಸಯುಕ್ತವಾದ, ಮನೋವೇಗವುಳ್ಳ, ದಿವ್ಯವಾದ ಪುಷ್ಪಕವಿಮಾನವನ್ನು ಕೊಟ್ಟರು. ಜೊತೆಗೆ ಕುಬೇರರನ್ನು ಯಕ್ಷರ ರಾಜನನ್ನಾಗಿ ಮಾಡಿದರು.

ತತ್ರಾಪ್ಲುತ್ಯ ಮಹಾರಾಜ ದತ್ತ್ವಾ ದೇಯಾನ್ ಸುಪುಷ್ಕಲಾನ್ ।
ಜಗಾಮ ತ್ವರಿತೋ ರಾಮಸ್ತೀರ್ಥಂ ಶ್ವೇತಾನುಲೇಪನಃ ॥೩೬॥

ನಿಷೇವಿತಂ ಮಹಾಸತ್ತ್ವೈರ್ನಾಮ್ನಾ ಬದರಪಾಚನಮ್ ॥೩೭॥

ರಾಜನೇ! ಶ್ವೇತಬಣ್ಣದ ಅನುಲೇಪನವುಳ್ಳ ಬಲರಾಮನು ಆ ತೀರ್ಥದಲ್ಲಿ ಸ್ನಾನವನ್ನು ಮಾಡಿ, ವಿಧ್ಯುಕ್ತವಾಗಿ ಬಹಳವಾದ ದಾನವನ್ನು ಮಾಡಿ, ಅಲ್ಲಿಂದ ಕೂಡಲೇ ಬದರಪಾಚನತೀರ್ಥಕ್ಕೆ ಹೋದನು. ಆ ಬದರಪಾಚನ ತೀರ್ಥವನ್ನು ಅನೇಕ ಪ್ರಾಣಿಗಳು ಆಶ್ರಯಿಸಿದ್ದವು.

ತಪಸ್ವಿಸಿದ್ಧಚರಿತಂ ಯತ್ರ ಕನ್ಯಾ ಧೃತವ್ರತಾ ॥೩೮॥

ಭರದ್ವಾಜಸ್ಯ ದುಹಿತಾ ರೂಪೇಣಾಪ್ರತಿಮಾ ಭುವಿ ।
ಶ್ರುತಾವತೀ ನಾಮ ವಿಭೋ ಕೌಮಾರಬ್ರಹ್ಮಚಾರಿಣೀ ॥೩೯॥

ತಪಶ್ಚಚಾರ ಸಾತ್ಯುಗ್ರಂ ನಿಯಮೈರ್ಬಹುಭಿಃ ಪ್ರಭೋ ।
ಭರ್ತಾ ಮೇ ದೇವರಾಜಃ ಸ್ಯಾದಿತಿ ನಿಶ್ಚಿತ್ಯ ಭಾಮಿನೀ ॥೪೦॥

ವಿಭುವೇ! ಪ್ರಭುವೇ! ತಪಸ್ವಿಗಳು ಮತ್ತು ಸಿದ್ಧಪುರುಷರು ಅಲ್ಲಿ ಸಂಚಾರಮಾಡುತ್ತಿದ್ದರು. ಅಲ್ಲಿಯೇ ಭರದ್ವಾಜನ ಮಗಳಾದ ಲೋಕಸುಂದರಿಯಾದ ಶ್ರುತಾವತಿಯು ಕುಮಾರಿಯಾಗಿರುವಾಗಲೇ ಬ್ರಹ್ಮಚಾರಿಣಿಯಾಗಿ ವ್ರತವನ್ನು ಕೈಗೊಂಡು ವ್ರತವನ್ನು ಆಚರಿಸಿದ್ದಳು. ಆ ಭಾಮಿನಿಯು, ತನಗೆ ದೇವರಾಜನಾದ ಇಂದ್ರನು ಪತಿಯಾಗಬೇಕೆಂದು ನಿಶ್ಚಯಿಸಿಕೊಂಡು ಅನೇಕ ನಿಯಮಗಳಿಂದ ತಪಸ್ಸನ್ನು ಆಚರಿಸಿದಳು.

ಸಮಾಸ್ತಸ್ಯಾ ವ್ಯತಿಕ್ರಾಂತಾ ಬಹ್ವ್ಯಃ ಕುರುಕುಲೋದ್ವಹ ।
ಚರಂತ್ಯಾ ನಿಯಮಾಂಸ್ತಾಂಸ್ತಾನ್ ಸ್ತ್ರೀಭಿಸ್ತೀವ್ರಾನ್ ಸುದುಶ್ಚರಾನ್ ॥೪೧॥

ಕುರುಕುಲಸಂಭೂತನೇ! ಸ್ತ್ರೀಯರಿಗೆ ಮಾಡಲು ಕಷ್ಟಸಾಧ್ಯವಾದ ಆ ನಿಯಮಗಳನ್ನು ಆಚರಿಸುತ್ತಾ ತಪಸ್ಸನ್ನು ಮಾಡುತ್ತಿರುವಾಗ ಅನೇಕ ವರ್ಷಗಳು ಕಳೆದವು.

ತಸ್ಯಾಸ್ತು ತೇನ ವೃತ್ತೇನ ತಪಸಾ ಚ ವಿಶಾಂಪತೇ ।
ಭಕ್ತ್ಯಾ ಪರಮಯಾ ಪ್ರೀತೋ ಭಗವಾನ್ ಪಾಕಶಾಸನಃ ॥೪೩॥

ಆಜಗಾಮಾಶ್ರಮಂ ತಸ್ಯಾಃ ತ್ರಿದಶಾಧಿಪತಿಸ್ತದಾ ।
ಆಸ್ಥಾಯ ರೂಪಂ ಬ್ರಹ್ಮರ್ಷೇರ್ವಸಿಷ್ಠಸ್ಯ ಮಹಾತ್ಮನಃ ॥೪೩॥

ರಾಜನೇ! ಅವಳ ಆ ಆಚರಣೆ, ತಪಸ್ಸು ಮತ್ತು ಉತ್ತಮವಾದ ಭಕ್ತಿಯಿಂದ ಪ್ರೀತನಾದ, ದೇವತೆಗಳ ಅಧಿಪತಿಯಾದ ಭಗವಾನ್ ಇಂದ್ರನು ಮಾಹಾತ್ಮನಾದ ಬ್ರಹ್ಮರ್ಷಿ ವಸಿಷ್ಠನ ರೂಪವನ್ನು ಧಾರಣೆ ಮಾಡಿಕೊಂಡು ಆ ಶ್ರುತಾವತಿಯ ಆಶ್ರಮಕ್ಕೆ ಬಂದನು.

ಸಾ ತಂ ದೃಷ್ಟ್ವೋಗ್ರತಪಸಂ ವಸಿಷ್ಠಂ ಜಪತಾಂ ವರಮ್ ।
ಆಚಾರ್ಯೈರ್ಬಹುಭಿರ್ಜುಷ್ಟಂ ಪೂಜಯಾಮಾಸ ಭಾರತ ॥೪೪॥

ಭರತಕುಲೋದ್ಭವನೇ! ಬಂದಿರುವ ಉತ್ತಮಜಪಾನುಷ್ಠಾನವುಳ್ಳ, ಕಠಿಣವಾದ ತಪಸ್ಸುಳ್ಳ ವಸಿಷ್ಠರನ್ನು ನೋಡಿ, ಆ ಶ್ರುತಾವತಿಯು ಅನೇಕ ಉಪಚಾರಗಳಿಂದ ಪೂಜಿಸಿದಳು.

ಉವಾಚ ವಿನಯಜ್ಞಾ ಸಾ ಕಲ್ಯಾಣೀ ಚ ಪ್ರಿಯಂವದಾ ॥೪೫॥

ನಯ-ವಿನಯವನ್ನು ತಿಳಿದ ಮಂಗಳಸ್ವರೂಪಿಯಾದ ಆಕೆಯು ಮಧುರವಾಗಿ ಮಾತನಾಡುತ್ತಾ ಹೇಳಿದಳು.

ಶ್ರುತಾವತೀ

ವದಸ್ವ ಮುನಿಶಾರ್ದೂಲ ಕಿಮಾಜ್ಞಾಪಯಸಿ ಪ್ರಭೋ ।
ಸರ್ವಮದ್ಯ ಯಥಾಶಕ್ತಿ ತವ ದಾಸ್ಯಾಮಿ ಸುವ್ರತಾ ॥೪೬॥

ಶಕ್ರಭಕ್ತ್ಯಾ ಚ ತೇ ಪಾಣಿಂ ನ ದಾಸ್ಯಾಮಿ ಕಥಂಚನ ॥೪೭॥

ವ್ರತೈಶ್ಚ ನಿಯಮೈಶ್ಚೈವ ತಪಸಾ ಚ ತಪೋಧನ ।
ಶಕ್ರಸ್ತೋಷಯಿತವ್ಯೋ ವೈ ಮಯಾ ತ್ರಿಭುವನೇಶ್ವರಃ ॥೪೮॥

ಶ್ರುತಾವತೀ– ಪ್ರಭುವೇ! ಮುನಿಗಳಲ್ಲಿಯೇ ಶ್ರೇಷ್ಠನಾದವನೇ! ನನಗೆ ಏನನ್ನು ಆಜ್ಞಾಪಿಸುತ್ತಿ? ಹೇಳು! ಒಳ್ಳೆಯ ವ್ರತವನ್ನು ಆಚರಿಸುವವನೇ! ಎಲ್ಲವನ್ನೂ ನನ್ನ ಶಕ್ತಿಗನುಸಾರವಾಗಿ ಇಂದು ಕೊಡುತ್ತೇನೆ. ಆದರೆ ನಿನ್ನನ್ನು ವಿವಾಹವಾಗಲಾರೆ. ಏಕೆಂದರೆ ನಾನು ಇಂದ್ರನ ಭಕ್ತಳಾಗಿದ್ದೇನೆ. ತಪೋಧನನೇ! ವ್ರತ-ನಿಯಮಗಳಿಂದ ಹಾಗೂ ತಪಸ್ಸಿನಿಂದ ನಾನು ತ್ರಿಲೋಕಾಧಿಪತಿಯಾದ ಇಂದ್ರನನ್ನೇ ಆರಾಧಿಸಬೇಕು.

ವೈಶಂಪಾಯನಃ

ಇತ್ಯುಕ್ತೋ ಭಗವಾನ್ ದೇವಃ ಸ್ಮಯನ್ನಿವ ನಿರೀಕ್ಷ್ಯ ತಾಮ್ ।
ಉವಾಚ ನಿಯಮಂ ಜ್ಞಾತ್ವಾ ಸಾಂತ್ವಯನ್ನಿವ ಭಾರತ ॥೪೯॥

ವೈಶಂಪಾಯನ– ಭರತಕುಲೋದ್ಭವನೇ! ಅವಳ ಮಾತನ್ನು ಕೇಳಿದ ಇಂದ್ರದೇವನು ಮುಗುಳ್ನಗುತ್ತಾ, ಅವಳನ್ನು ನೋಡಿ, ಅವಳ ನಿಯಮಗಳನ್ನೂ ತಿಳಿದುಕೊಂಡು ಅವಳನ್ನು ಸಮಾಧಾನಪಡಿಸುತ್ತಾ ಹೀಗೆ ಹೇಳುತ್ತಾನೆ.

ಇಂದ್ರಃ

ಉಗ್ರಂ ತಪಶ್ಚರಸಿ ಹಿ ವಿದಿತಾ ಮೇऽಸಿ ಸುವ್ರತೇ ।
ಯದರ್ಥಮಯಮಾರಂಭಸ್ತವ ಕಲ್ಯಾಣಿ ಹೃದ್ಗತಃ ॥೫೦॥

ತತ್ಸರ್ವಂ ಚ ತಥಾಭೂತಂ ಭವಿಷ್ಯತಿ ವರಾನನೇ ।
ತಪಸಾ ಲಭ್ಯತೇ ಸರ್ವಂ ಸರ್ವಂ ತಪಸಿ ತಿಷ್ಠತಿ ॥೫೧॥

ಇಂದ್ರ– ಉತ್ತಮವಾದ ವ್ರತವನ್ನು ಆಚರಿಸುವವಳೇ! ಉಗ್ರವಾದ ತಪಸ್ಸನ್ನು ಆಚರಿಸಿರುವೆ. ಇದು ನನಗೆ ಗೊತ್ತು. ಮಂಗಳಸ್ವರೂಪಳೇ! ಯಾವ ಪ್ರಯೋಜನಕ್ಕಾಗಿ ಈ ತಪಸ್ಸು-ನಿಯಮಾನುಷ್ಠಾನವನ್ನು ಆರಂಭಿಸಿಕೊಂಡಿರುವಿಯೋ ಅದೆಲ್ಲವೂ ಹಾಗೆಯೇ ಆಗುವುದು. ತಪಸ್ಸಿನಿಂದ ಎಲ್ಲವೂ ಸಿಗುತ್ತದೆ. ತಪಸ್ಸಿನಲ್ಲಿ ಎಲ್ಲವೂ ಇದೆ.

ಯಾನಿ ಸ್ಥಾನಾನಿ ಸರ್ವಾಣಿ ವಿಬುಧಾನಾಂ ಶುಭಾನನೇ ।
ತಪಸಾ ತಾನಿ ಲಭ್ಯಂತೇ ತಪೋಮೂಲಂ ಮಹತ್ಸುಖಮ್ ॥೫೨॥

ಶುಭಾನನೆಯೇ! ದೇವತೆಗಳ ಸ್ಥಾನಗಳೆಲ್ಲವೂ ತಪಸ್ಸಿನಿಂದಲೇ ಪ್ರಾಪ್ತವಾದವುಗಳು. ಎಲ್ಲಾ ಸುಖಗಳಿಗೂ ತಪಸ್ಸೇ ಕಾರಣ.

ಇತಿ ಕೃತ್ವಾ ತಪೋ ಘೋರಂ ದೇಹಂ ಸಂತ್ಯಜ್ಯ ಮಾನವಾಃ ।
ದೇವತ್ವಂ ಯಾಂತಿ ಕಲ್ಯಾಣಿ ಶೃಣು ಚೇದಂ ವಚೋ ಮಮ ॥೫೩॥

ಮಾನವರು ಇಂತಹ ತಪಸ್ಸನ್ನು ಮಾಡಿ, ದೇಹವನ್ನು ಬಿಟ್ಟು ದೇವತ್ವವನ್ನು ಹೊಂದುತ್ತಾರೆ. ಕಲ್ಯಾಣಿಯೇ! ನನ್ನ ಈ ಮಾತನ್ನು ಕೇಳು.

ಪಚಸ್ವೈತಾನಿ ಸುಭಗೇ ಬದರಾಣಿ ಶುಭವ್ರತೇ ॥೫೪॥

ಶುಭವ್ರತಳೇ! ಶುಭವಾದ ಭಾಗ್ಯವುಳ್ಳವಳೇ! ಈ ಬದರದ ಹಣ್ಣುಗಳನ್ನು ಬೇಯಿಸು.

ವೈಶಂಪಾಯನಃ

ಪಚೇತ್ಯುಕ್ತ್ವಾ ಸ ಭಗವಾನ್ ಜಗಾಮ ಬಲಸೂದನಃ ॥೫೫॥

ಆಮಂತ್ರ್ಯ ತಾಂ ತು ಕಲ್ಯಾಣೀಂ ತತೋ ಜಪ್ಯಂ ಜಜಾಪ ಸಾ ।
ಅವಿದೂರೇ ತತಸ್ತಸ್ಮಾದ್ ಆಶ್ರಮಾತ್ ತೀರ್ಥ ಉತ್ತಮೇ ॥೫೬॥

ವೈಶಂಪಾಯನ– ಬೇಯಿಸು ಎಂದು ಹೇಳಿ ಭಗವಾನ್ ಇಂದ್ರನು ಕಲ್ಯಾಣಿಯಾದ ಅವಳ ಒಪ್ಪಿಗೆಯನ್ನು ಪಡೆದುಕೊಂಡು ಹೋದನು. ಅನಂತರ ಅವಳು ಅಲ್ಲಿಂದ ಸಮೀಪದಲ್ಲಿಯೇ ಇದ್ದ ಉತ್ತಮ ತೀರ್ಥಕ್ಷೇತ್ರದಲ್ಲಿ ಜಪಿಸಬೇಕಾದ ಮಂತ್ರಗಳನ್ನು ಜಪಿಸಿದಳು.

ತಚ್ಚ ತೀರ್ಥಂ ಮಹಾರಾಜ ಯತ್ರ ಜಪ್ಯಂ ಜಜಾಪ ಸಾ ।
ಇಂದ್ರತೀರ್ಥಂ ಮಹಾರಾಜ ತ್ರಿಷು ಲೋಕೇಷು ವಿಶ್ರುತಮ್ ॥೫೭॥

ಮಹಾರಾಜನೇ! ಯಾವ ತೀರ್ಥದಲ್ಲಿ ಶ್ರುತಾವತಿಯು ಜಪವನ್ನು ಜಪಿಸಿದಳೋ ಅದು ಇಂದ್ರತೀರ್ಥವೆಂದು ಮೂರುಲೋಕಗಳಲ್ಲಿಯೂ ಪ್ರಸಿದ್ಧವಾಯಿತು.

ತಸ್ಯಾ ಜಿಜ್ಞಾಸನಾರ್ಥೇ ತು ಭಗವಾನ್ ಪಾಕಶಾಸನಃ ।
ಬದರಾಣ್ಯಾಮಪಚನಂ ಚಕಾರ ವಿಬುಧಾಧಿಪಃ ॥೫೮॥

ದೇವತೆಗಳಿಗೆ ಒಡೆಯನಾದ ಭಗವಾನ್ ಇಂದ್ರನು ಅವಳ ಮನಸ್ಸಿನ ಭಾವವನ್ನು ತಿಳಿಯಲಿಕ್ಕಾಗಿ ಬದರಹಣ್ಣುಗಳು ಬೇಯದಂತೆ ಮಾಡಿದನು.

ತತಃ ಸಾ ಪ್ರಯತಾ ರಾಜನ್ ವಾಗ್ಯತಾ ವಿಗತಕ್ಲಮಾ ।
ತತ್ಪರಾ ಶುಚಿಸಂವೀತಾ ಪಾವಕೇ ಸಮಧಿಶ್ರಯತ್ ॥೫೯॥

ರಾಜನೇ! ಅನಂತರ ಅವಳು ವಾಂಗ್ನಿಯಮಕ್ಕೊಳಗಾಗಿ, ಉದ್ವೇಗಕ್ಕೊಳಗಾಗದೆ ಪ್ರಯತ್ನಪೂರ್ವಕವಾಗಿ ಬದರಫಲಗಳನ್ನು ಬೆಂಕಿಯಲ್ಲಿ ಬೇಯಲು ಇಟ್ಟಳು.

ಅಪಚತ್ ಪುರುಷವ್ಯಾಘ್ರ ಬದರಾಣಿ ಶುಭವ್ರತಾ ॥೬೦॥

ಪುರುಷಶ್ರೇಷ್ಠನೇ! ಮಂಗಳಕರವಾದ ವ್ರತವನ್ನು ಆಚರಿಸುತ್ತಿದ್ದ ಆಕೆ ಬದರಫಲಗಳನ್ನು ಬೇಯಿಸಿದಳು.

ತಸ್ಯಾಃ ಪಚಂತ್ಯಾಃ ಸುಚಿರಂ ಕಾಲೋಽಗಾತ್ ಪುರುಷರ್ಷಭ ।
ನ ಚ ಸ್ಮ ತಾನಿ ಪಚ್ಯಂತೇ ದಿನಂ ಚ ಕ್ಷಯಮಭ್ಯಯಾತ್ ॥೬೧॥

ಪುರುಷವೃಷಭನೇ! ಹೀಗೆ ಅವಳು ಬೇಯಿಸುತ್ತಿದ್ದಾಗ ಬಹಳ ಸಮಯವು ಕಳೆದುಹೋಯಿತು. ಆದರೆ ಫಲಗಳು ಬೇಯಲಿಲ್ಲ, ದಿನಗಳು ಕಳೆದುಹೋಗುತ್ತಿದ್ದವು.

ಹುತಾಶನೇನ ದಗ್ಧಶ್ಚ ಯಸ್ತಸ್ಯಾಃ ಕಾಷ್ಠಸಂಚಯಃ ।
ಅಕಾಷ್ಠಮಗ್ನಿಂ ಸಾ ದೃಷ್ಟ್ವಾ ಸ್ವಶರೀರಮಥಾಪಚತ್ ॥೬೨॥

ಅವಳು ಸಂಗ್ರಹಿಸಿದ್ದ ಕಟ್ಟಿಗೆಯ ರಾಶಿಯು ಉರಿದು ಮುಗಿಯಿತು. ಕಟ್ಟಿಗೆ ಇಲ್ಲದ್ದನ್ನು ನೋಡಿ ಅವಳು ತನ್ನ ಶರೀರವನ್ನೇ ಕಟ್ಟಿಗೆಯನ್ನಾಗಿ ಉಪಯೋಗಿಸಿದಳು.

ಪಾದೌ ಪ್ರಕ್ಷಿಪ್ಯ ಸಾ ಪೂರ್ವಂ ಪಾವಕೇ ಚಾರುದರ್ಶನಾ ।
ದಗ್ಧೌ ದಗ್ಧೌ ಪುನಃ ಪಾದಾವುಪಾವರ್ತಯತಾನಘ ॥೬೩॥

ಸುಂದರಿಯಾದ ಆಕೆಯು ಮೊದಲಿಗೆ ತನ್ನ ಕಾಲಿನ ಪಾದಗಳನ್ನೇ ಬೆಂಕಿಯಲ್ಲಿ ಇರಿಸಿದಳು. ದೋಷರಹಿತನೇ! ಪಾದಗಳು ಉರಿಯುತ್ತಿದ್ದಂತೆಯೇ ಮತ್ತೆ ಅವುಗಳು ಬೆಳೆಯತೊಡಗಿದವು.

ಚರಣೌ ದಹ್ಯಮಾನೌ ಚ ನಾಚಿಂತಯದನಿಂದಿತಾ ।
ದುಃಖಿಂ ಕಮಲಪತ್ರಾಕ್ಷೀ ಮಹರ್ಷೇಃ ಪ್ರಿಯಕಾಮ್ಯಯಾ ॥೬೪॥

ಕಮಲದ ಕಣ್ಣುಗಳುಳ್ಳ, ಪರಿಶುದ್ಧಳಾದ ಅವಳು ತನ್ನ ಕಾಲುಗಳು ಸುಡುತ್ತಿದ್ದರೂ ಮಹರ್ಷಿಯ ಅನುಗ್ರಹವನ್ನು ಅಪೇಕ್ಷಿಸುವವಳಾಗಿ ತನಗೆ ಆಗುತ್ತಿರುವ ದುಃಖದ ಬಗ್ಗೆ ಚಿಂತಿಸುತ್ತಿರಲಿಲ್ಲ.

ನ ವೈಮನಸ್ಯಂ ತಸ್ಯಾಸ್ತು ಮುಖಭೇದೋಽಥವಾಽಭವತ್ ।
ಶರೀರಮಗ್ನಿನಾ ದೀಪ್ಯ ಜಲಮಧ್ಯೇ ಯಥಾ ಸ್ಥಿತಾ ॥೬೫॥

ಅವಳ ಮನಸ್ಸಿನಲ್ಲಿ ಯಾವುದೇ ವಿಕಾರವುಂಟಾಗಲಿಲ್ಲ, ಮುಖದಲ್ಲಿ ಯಾವುದೇ ವ್ಯತ್ಯಾಸವು ಕಾಣಿಸಲಿಲ್ಲ. ಅವಳ ಶರೀರವು ಅಗ್ನಿಯ ಮಧ್ಯದಲ್ಲಿ ಸುಡುತ್ತಿದ್ದರೂ ಅವಳು ನೀರಿನ ಮಧ್ಯದಲ್ಲಿ ಇದ್ದ ಹಾಗೆ ಇದ್ದಳು.

ತಚ್ಚಾಸ್ಯಾ ವಚನಂ ನಿತ್ಯಮಾವರ್ತದ್ ಹೃದಿ ಭಾರತ ।
ಸರ್ವಥಾ ಬದರಾಣ್ಯೇವ ಪಕ್ತವ್ಯಾನೀತಿ ಕನ್ಯಕಾ ॥೬೬॥

ಭರತಕುಲೋದ್ಭವನೇ! ಋಷಿರೂಪದಲ್ಲಿದ್ದ ಇಂದ್ರನು ಹೇಳಿದ್ದ ''ಹೇಗಾದರೂ ಬದರಫಲಗಳನ್ನು ಬೇಯಿಸು'' ಎಂಬ ಮಾತು ಅವಳ ಹೃದಯದಲ್ಲಿ ಯಾವಾಗಲೂ ಸುತ್ತುತ್ತಿತ್ತು.

ಸಾ ತದ್ ಹೃದಿ ದೃಢಂ ಕೃತ್ವಾ ಮಹರ್ಷೇರ್ವಚನಂ ಶುಭಾ ।
ಅಪಚದ್ ಬದರಾಣ್ಯೇವ ನ ಚಾಪಚ್ಯಂತ ಭಾರತ ॥೬೭॥

ಮಂಗಳಮಯಳಾದ ಆಕೆಯು ಋಷಿಯ ಮಾತನ್ನು ಹೃದಯದಲ್ಲಿ ದೃಢಗೊಳಿಸಿ ಬದರಗಳನ್ನು ಬೇಯಿಸಿದಳು. ಭಾರತನೇ! ಬದರಗಳು ಬೇಯಲಿಲ್ಲ.

ತಸ್ಯಾಶ್ಚ ಚರಣೌ ವಹ್ನಿರ್ದದಾಹ ಭಗವಾನ್ ಭೃಶಮ್ ।
ನ ಚ ತಸ್ಯಾ ಮನೋದುಃಖಂ ಸ್ವಲ್ಪಮಪ್ಯಭವತ್ ತದಾ ॥೬೮॥

ಭಗವಾನ್ ಅಗ್ನಿದೇವನು ಅವಳ ಕಾಲುಗಳನ್ನು ಸುಟ್ಟುಹಾಕಿದನು. ಆದರೆ ಆಗ ಅವಳಿಗೆ ಸ್ವಲ್ಪವೂ ಮನಸ್ಸಿಗೆ ಖೇದವು ಉಂಟಾಗಲಿಲ್ಲ.

ಅಥ ತತ್ ಕರ್ಮ ದೃಷ್ಟ್ವಾಸ್ಯಾಃ ಪ್ರೀತಸ್ತ್ರಿಭುವನೇಶ್ವರಃ ।
ತತಃ ಸ ದರ್ಶಯಾಮಾಸ ಕನ್ಯಾಯೈ ರೂಪಮಾತ್ಮನಃ ॥೬೯॥

ಹೀಗೆ ನಡೆದ ನಂತರ ಮೂರುಲೋಕಗಳ ಅಧಿಪತಿಯಾದ ದೇವೇಂದ್ರನು ಅವಳ ಈ ಕಾರ್ಯವನ್ನು ನೋಡಿ ಅವಳ ಬಗ್ಗೆ ಸಂತುಷ್ಟನಾದನು. ಕನ್ಯೆಗೆ ತನ್ನ ನಿಜವಾದ ರೂಪವನ್ನು ತೋರಿಸಿದನು.

ಉವಾಚ ಚ ಸುರಶ್ರೇಷ್ಠಃ ತಾಂ ಕನ್ಯಾಂ ಸುದೃಢವ್ರತಾಮ್ ॥೭೦॥

ಬಹಳ ದೃಢವಾದ ವ್ರತವನ್ನು ಆಚರಿಸುತ್ತಿದ್ದ ಆ ಕನ್ಯೆಗೆ ಇಂದ್ರನು ಹೀಗೆ ಹೇಳಿದನು.

ಇಂದ್ರಃ

ಪ್ರೀತೋಽಸ್ಮಿ ತೇ ಶುಭೇ ಭಕ್ತ್ಯಾ ತಪಸಾ ವಿಪುಲೇನ ಚ ।
ತಸ್ಮಾದ್ ಯೋಽಭಿಮತಃ ಕಾಮಃ ಸ ತೇ ಸಂಪತ್ಸ್ಯತೇ ಶುಭೇ ॥೭೧॥

ಇಂದ್ರ– ಮಂಗಳೆಯೇ! ನಿನ್ನ ಬಹಳವಾದ ಭಕ್ತಿಯಿಂದ, ಬಹಳವಾದ ತಪಸ್ಸಿನಿಂದ ನಾನು ಸಂತುಷ್ಟನಾಗಿದ್ದೇನೆ. ಶುಭಳೇ! ನಿನ್ನ ಯಾವ ಕಾಮನೆಯು ಇದೆಯೋ ಅದು ನಿನಗೆ ಲಭಿಸುವುದು.

ದೇಹಂ ತ್ಯಕ್ತ್ವಾ ಮಹಾಭಾಗೇ ತ್ರಿದಿವೇ ಚ ನಿವತ್ಸ್ಯಸಿ ॥೭೨॥

ಈ ದೇಹವನ್ನು ಬಿಟ್ಟಮೇಲೆ ಸ್ವರ್ಗದಲ್ಲಿ ವಾಸ ಮಾಡುವಿ.

ಇದಂ ಚ ತೇ ತೀರ್ಥವರಂ ಖ್ಯಾತಂ ಲೋಕೇ ಭವಿಷ್ಯತಿ ।
ಸರ್ವಪಾಪಾಪಹಂ ಸುಭ್ರು ನಾಮ್ನಾ ಬದರಪಾಚನಮ್ ॥೭೩॥

ಒಳ್ಳೆಯ ಕಣ್ಣಿನ ಹುಬ್ಬುಳ್ಳವಳೆ! ಈ ಉತ್ತಮವಾದ ತೀರ್ಥವು ಬದರಪಾಚನವೆಂಬ ಹೆಸರನ್ನು ಪಡೆಯುವುದು ಮತ್ತು ಸಕಲಪಾಪಪರಿಹಾರಕವೆಂದು ಲೋಕದಲ್ಲಿ ಪ್ರಸಿದ್ಧವಾಗುವುದು.

ವಿಖ್ಯಾತಂ ತ್ರಿಷು ಲೋಕೇಷು ಬ್ರಹ್ಮರ್ಷಿಭಿರಭಿಪ್ಲುತಮ್ ॥೭೪॥

ಬ್ರಹ್ಮಜ್ಞಾನಿಗಳು ಬಂದು ನೆಲೆಸುವ ಈ ತೀರ್ಥವು ಮೂರುಲೋಕಗಳಲ್ಲಿಯೂ ಪ್ರಸಿದ್ಧವಾಗುವುದು.

ಅಸ್ಮಿನ್ ಖಲು ಮಹಾಭಾಗೇ ಶುಭೇ ತೀರ್ಥವರೇ ಪುರಾ ।
ನ್ಯಸ್ಯ ಸಪ್ತರ್ಷಯೋ ಯಾತಾ ಹಿಮವಂತಮರುಂಧತೀಮ್ ॥೭೫॥

ಮಹಾಭಾಗ್ಯವಂತಳೇ! ಮಂಗಳೆಯೇ! ಈ ಉತ್ತಮವಾದ ತೀರ್ಥದಲ್ಲಿಯೇ ಹಿಂದೆ ಸಪ್ತರ್ಷಿಗಳು ಅರುಂಧತಿಯನ್ನು ಇರಿಸಿ ತಾವು ಹಿಮಾಲಯಕ್ಕೆ ಹೋದರು.

ತತಸ್ತೇ ಸುಮಹಾಭಾಗಾ ಗತ್ವಾ ತತ್ರ ಸುಸಂಶಿತಾಃ ।
ವೃತ್ಯರ್ಥಂ ಫಲಮೂಲಾನಿ ಸಮಾಹರ್ತುಂ ಯಯುಃ ಕಿಲ ॥೭೬॥

ಅನಂತರ ಕಠಿಣವಾದ ವ್ರತವನ್ನು ಆಚರಿಸುತ್ತಿದ್ದ ಅರುಂಧತಿಯು ತನ್ನ ಜೀವನಕ್ಕಾಗಿ ಹಣ್ಣುಮತ್ತು ಗೆಡ್ಡೆಗಳನ್ನು ಸಂಗ್ರಹಿಸಲಿಕ್ಕಾಗಿ ಹೋದಳು.

ತೇಷಾಂ ವೃತ್ಯರ್ಥಿನಾಂ ತತ್ರ ವಸತಾಂ ಹಿಮವದ್ ವನೇ ।
ಅನಾವೃಷ್ಟಿರನುಪ್ರಾಪ್ತಾ ತದಾ ದ್ವಾದಶವಾರ್ಷಿಕೀ ॥೭೭॥

ಈ ಕಡೆ ಸಪ್ತರ್ಷಿಗಳು ಹಿಮಾಲಯದಲ್ಲಿ ಜೀವನವನ್ನು ಮಾಡುತ್ತಿದ್ದಾಗ ಹನ್ನೆರಡು ವರ್ಷಗಳ ಕಾಲ ಮಳೆಯು ಬರಲಿಲ್ಲ.

ತೇऽತ್ರ ಕೃತ್ವಾऽऽಶ್ರಮಂ ರಾಜನ್ ನ್ಯವಸಂತ ತಪಸ್ವಿನಃ ।
ಅರುಂಧತ್ಯಪಿ ಕಲ್ಯಾಣೀ ತಪೋನಿತ್ಯಾऽಭವತ್ ತದಾ ॥೭೮॥

ತಪಸ್ವಿಗಳು ಅಲ್ಲಿಯೇ ಆಶ್ರಮಗಳನ್ನು ನಿರ್ಮಿಸಿಕೊಂಡು ವಾಸಿಸತೊಡಗಿದರು. ಆಗ ಮಂಗಳಮಯಳಾದ ಅರುಂಧತಿಯೂ ಕೂಡ ತಪಸ್ಸಿನಲ್ಲಿ ತೊಡಗಿದಳು.

ಅರುಂಧತೀಂ ತತೋ ದೃಷ್ಟ್ವಾ ತೀರ್ಥೇ ನಿಯಮಮಾಸ್ಥಿತಾಮ್ ।
ಅಥಾಗಮತ್ ತ್ರಿಣಯನಃ ಸಂಪ್ರೀತೋ ವರದಸ್ತದಾ ॥೭೯॥

ಬ್ರಹ್ಮರೂಪಂ ತದಾ ಕೃತ್ವಾ ಮಹಾದೇವೋ ಮಹಾಯಶಾಃ ।
ತಾಮಭ್ಯೇತ್ಯಾಬ್ರವೀದ್ ದೇವೋ ಭಿಕ್ಷಾಮಿಚ್ಛಾಮ್ಯಹಂ ಶುಭೇ ॥೮೦॥

ತೀರ್ಥದಲ್ಲಿ ನಿಯಮವನ್ನು ಪಾಲಿಸುತ್ತಿದ್ದ ಅರುಂಧತಿಯನ್ನು ನೋಡಿ ಸಂತುಷ್ಟನಾದ, ಮಹಾಯಶೋವಂತನಾದ ರುದ್ರನು ಬ್ರಾಹ್ಮಣನ ರೂಪವನ್ನು ತಾಳಿ ವರವನ್ನು ಕೊಡಲಿಕ್ಕಾಗಿ ಅಲ್ಲಿಗೆ ಬಂದನು. ಅವಳ ಹತ್ತಿರ ಬಂದು ಮಹಾದೇವ ರುದ್ರನು ''ಶುಭಳೇ! ನಾನು ಭಿಕ್ಷೆಯನ್ನು ಬಯಸುತ್ತೇನೆ'' ಎಂದು ಹೇಳಿದನು.

ಪ್ರತ್ಯುವಾಚ ತತಃ ಸಾ ತು ಬ್ರಾಹ್ಮಣಂ ಚಾರುದರ್ಶನಾ ॥೮೧॥

ಸುಂದರಿಯಾದ ಅರುಂಧತಿಯು ಆ ಬ್ರಾಹ್ಮಣನಿಗೆ ಹೀಗೆ ಉತ್ತರಿಸುತ್ತಾಳೆ.

ಅರುಂಧತೀ

ಕ್ಷೀಣೋऽನ್ನಸಂಚಯೋ ವಿಪ್ರ ಬದರಾಣೀಹ ಭಕ್ಷಯ ॥೮೨॥

ಅರುಂಧತೀ– ಬ್ರಾಹ್ಮಣನೇ! ಅನ್ನವೆಲ್ಲವೂ ಖಾಲಿಯಾಗಿದೆ. ಇಲ್ಲಿ ಬದರಫಲಗಳನ್ನು ತಿನ್ನು!

ಇಂದ್ರಃ

ತತೋऽಬ್ರವೀನ್ಮಹಾದೇವಃ ಪಚಸ್ವೈತಾನಿ ಭಾಮಿನಿ ।
ಇತ್ಯುಕ್ತಾ ಸಾऽಪಚತ್ ತಾನಿ ಬ್ರಾಹ್ಮಣಪ್ರಿಯಕಾಮ್ಯಯಾ ॥೮೩॥

ಇಂದ್ರ– ಅನಂತರ ಮಹಾದೇವ ರುದ್ರನು ಅವಳಿಗೆ ''ಸುಂದರಿಯೇ! ಈ ಬದರಫಲಗಳನ್ನು ಬೇಯಿಸು'' ಎಂದು ಹೇಳಿದನು. ಬ್ರಾಹ್ಮಣನ ಅನುಗ್ರಹವನ್ನು ಬಯಸಿದವಳಾಗಿ ಅರುಂಧತಿಯು ಬದರಫಲಗಳನ್ನು ಬೇಯಿಸಿದಳು.

ಅಧಿಶ್ರಿತ್ಯ ಸಮಿದ್ದೇಗ್ನೌ ಬದರಾಣಿ ಯಶಸ್ವಿನೀ ॥೮೪॥

ಕೀರ್ತಿವಂತಳಾದ ಅರುಂಧತಿಯು ಉರಿಯುತ್ತಿದ್ದ ಬೆಂಕಿಯಲ್ಲಿ ಬದರಗಳನ್ನು ಬೇಯಿಸಿದಳು.

ದಿವ್ಯಾ ಮನೋರಮಾಃ ಪುಣ್ಯಾಃ ಕಥಾಃ ಶುಶ್ರಾವ ಸಾ ಶುಭಾ ।
ಅತೀತಾ ಸಾ ತ್ವನಾವೃಷ್ಟಿಘೋರಾ ದ್ವಾದಶವಾರ್ಷಿಕೀ ॥೮೫॥

ಮಂಗಳಮಯಳಾದ ಅರುಂಧತಿಯು ದಿವ್ಯವಾದ, ಮನೋಹಾರಿಯಾದ ಪುಣ್ಯಪ್ರದಕಥೆಗಳನ್ನು ಕೇಳಿಸಿಕೊಂಡಳು. ಭಯಂಕರವಾದ ಹನ್ನೆರಡು ವರ್ಷಗಳ ಬರಗಾಲವೂ ಕಳೆದುಹೋಯಿತು.

ಅನಶ್ನಂತ್ಯಾಃ ಪಚಂತ್ಯಾಶ್ಚ ಶೃಣ್ವಂತ್ಯಾಶ್ಚ ಕಥಾಃ ಶುಭಾಃ ।
ಅಹ್ನಾ ಸಮಃ ಸ ತಸ್ಯಾಸ್ತು ಕಾಲೋಽತೀತಃ ಸುದಾರುಣಃ ॥೮೬॥

ಊಟವನ್ನು ಬಿಟ್ಟು, ಮಂಗಳವಾದ ಕಥೆಗಳನ್ನು ಕೇಳುತ್ತಾ, ಬದರಗಳನ್ನು ಬೇಯಿಸುತ್ತಿದ್ದಾಗ ದಿನ-ವರ್ಷಲೆಕ್ಕದಲ್ಲಿ ದುಃಖದಾಯಕವಾದ ಬಹಳ ಕಾಲವು ಕಳೆದುಹೋಯಿತು.

ತತಸ್ತೇ ಮುನಯಃ ಪ್ರಾಪ್ತಾಃ ಫಲಾನ್ಯಾದಾಯ ಪರ್ವತಾತ್ ।
ತತಃ ಸ ಭಗವಾನ್ ಪ್ರೀತಃ ಪ್ರೋವಾಚಾರುಂಧತೀಂ ತದಾ ॥೮೭॥

ಅನಂತರ ಮುನಿಗಳು ಪರ್ವತದಿಂದ ಫಲಗಳನ್ನು ತೆಗೆದುಕೊಂಡು ಬಂದರು. ಭಗವಾನ್ ರುದ್ರನು ಸಂತುಷ್ಟನಾಗಿ ಅರುಂಧತಿಗೆ ಹೀಗೆ ಹೇಳುತ್ತಾನೆ.

ಮಹಾದೇವಃ

ಉಪಸರ್ಪಸ್ವ ಭದ್ರಂ ತೇ ಯಥಾಪೂರ್ವಂ ಹಿ ತಾನೃಷೀನ್ ।
ಪ್ರೀತೋಽಸ್ಮಿ ತೇ ಮಹಾಭಾಗೇ ತಪಸಾ ನಿಯಮೇನ ಚ ॥೮೮॥

ಮಹಾದೇವ– ಮಹಾಭಾಗ್ಯವಂತಳೇ! ನಿನ್ನ ತಪಸ್ಸಿನಿಂದ ಮತ್ತು ನಿಯಮದಿಂದ ನಾನು ಸಂತುಷ್ಟನಾಗಿದ್ದೇನೆ. ಹಿಂದಿನ ರೀತಿಯಲ್ಲಿಯೇ ಆ ಋಷಿಗಳನ್ನು ಸೇವಿಸು. ನಿನಗೆ ಮಂಗಳವಾಗಲಿ.

ಇಂದ್ರಃ

ತತಸ್ತಾಂ ದರ್ಶಯಾಮಾಸ ಸ್ವರೂಪಂ ಭಗವಾನ್ ಹರಃ ।
ತತೋಽಬ್ರವೀತ್ ತದಾ ತೇಭ್ಯಃ ತಸ್ಯಾಸ್ತಚ್ಚರಿತಂ ಮಹತ್ ॥೮೯॥

ಇಂದ್ರ– ಅನಂತರ ಭಗವಾನ್ ರುದ್ರನು ತನ್ನ ಮೂಲಸ್ವರೂಪವನ್ನು ತೋರಿಸಿದನು. ಅವನು ಋಷಿಗಳಿಗೆ ಅವಳು ಮಾಡಿದ ಮಹತ್ಕಾರ್ಯವನ್ನು ತಿಳಿಸಿದನು.

ಮಹಾದೇವಃ

ಭವದ್ಭಿರ್ಹಿಮವತ್ಪೃಷ್ಠೇ ಯತ್ತಪಃ ಸಮುಪಾರ್ಜಿತಮ್ ।
ಅಸ್ಯಾಶ್ಚ ಯತ್ತಪೋ ವಿಪ್ರಾಃ ಸಮಮೇತನ್ಮತಂ ಮಮ ॥೯೦॥

ಮಹಾದೇವ– ವಿಪ್ರರೇ! ನೀವು ಹಿಮಾಲಯದಲ್ಲಿ ಯಾವ ತಪಸ್ಸನ್ನು ಆಚರಿಸಿದ್ದೀರೋ, ಇವಳು ಆಚರಿಸಿದ ತಪಸ್ಸು ಅದಕ್ಕೆ ಸಮಾನವಾಗಿದೆ.

ಅನಯಾ ಹಿ ತಪಸ್ವಿನ್ಯಾ ತಪಸ್ತಪ್ತಂ ಸುದುಶ್ಚರಮ್ ।
ಅನಶ್ನಂತ್ಯಾ ಪಚಂತ್ಯಾ ಚ ಸಮಾ ದ್ವಾದಶ ವಾರಿತಾಃ ॥೯೧॥

ಹನ್ನೆರಡುವರ್ಷಗಳ ಕಾಲ ಇವಳು ಆಹಾರವನ್ನು ಬಿಟ್ಟು ಕಠಿಣವಾದ ತಪಸ್ಸನ್ನು ಆಚರಿಸಿದ್ದಾಳೆ.

ಇಂದ್ರಃ

ತತಃ ಪ್ರೋವಾಚ ಭಗವಾನ್ ತಾಮೇವಾರುಂಧತೀಂ ಪುನಃ ॥೯೨॥

ಇಂದ್ರ– ಭಗವಾನ್ ರುದ್ರನು ಪುನಃ ಅರುಂಧತಿಗೆ ಹೀಗೆ ಹೇಳುತ್ತಾನೆ.

ಮಹಾದೇವಃ

ವರಂ ವೃಣೀಷ್ವ ಕಲ್ಯಾಣಿ ಯಸ್ತೇಽಭಿಲಷಿತೋ ಹೃದಿ ॥೯೩॥

ಮಹಾದೇವ– ಮಂಗಳಸ್ವರೂಪಳೇ! ನಿನ್ನ ಮನಸ್ಸಿನಲ್ಲಿ ಯಾವ ಅಪೇಕ್ಷೆ ಇದೆಯೋ ಅಂತಹ ವರವನ್ನು ಕೇಳು.

ಇಂದ್ರಃ

ಸಾऽಬ್ರವೀತ್ ಪೃಥುತಾಮ್ರಾಕ್ಷೀ ದೇವಂ ಸಪ್ತರ್ಷಿಸಂಸದಿ ॥೯೪॥

ಇಂದ್ರ– ವಿಶಾಲವಾದ ತಾಮ್ರವರ್ಣದ ಕಣ್ಣುಳ್ಳ ಅರುಂಧತಿಯು ಸಪ್ತರ್ಷಿಗಳ ಸಭೆಯಲ್ಲಿ ರುದ್ರನಿಗೆ ಹೀಗೆ ಹೇಳಿದಳು.

ಅರುಂಧತೀ

ಭಗವನ್ ಯದಿ ತುಷ್ಟೋ ಮೇ ತೀರ್ಥಂ ಸ್ಯಾದಿದಮುತ್ತಮಮ್ ।
ಸಿದ್ಧದೇವರ್ಷಿಚರಿತಂ ನಾಮ್ನಾ ಬದರಪಾಚನಮ್ ॥೯೫॥

ಅರುಂಧತೀ– ಪೂಜ್ಯನೇ! ನೀನು ನನ್ನ ಮೇಲೆ ಸಂತುಷ್ಟನಾಗಿದ್ದರೆ ಈ ತೀರ್ಥವು ಉತ್ತಮತೀರ್ಥವಾಗಲಿ. ಸಿದ್ಧರು, ದೇವತೆಗಳು ಮತ್ತು ಋಷಿಗಳಿಂದ ಸೇವಿತವಾಗಲಿ. ಇದರ ಹೆಸರು ಬದರಪಾಚನ ಎಂದು ಪ್ರಸಿದ್ಧವಾಗಲಿ.

ತಥಾऽಸ್ಮಿನ್ ದೇವದೇವೇಶ ತ್ರಿರಾತ್ರಮುಷಿತೋ ಶುಚಿಃ ।
ಪ್ರಾಪ್ನುಯಾದುಪವಾಸೇನ ಫಲಂ ದ್ವಾದಶವಾರ್ಷಿಕಮ್ ॥೯೬॥

ದೇವತೆಗಳಿಗೂ ಈಶನಾದ ರುದ್ರನೇ! ಹಾಗೆಯೇ ಇಲ್ಲಿ ಶುಚಿರ್ಭೂತನಾಗಿ ಉಪವಾಸವನ್ನು ಮಾಡುತ್ತ, ಮೂರು ದಿನಗಳ ಕಾಲ ಇಲ್ಲಿ ವಾಸವನ್ನು ಮಾಡಿದರೆ ಹನ್ನೆರಡು ವರ್ಷ ಉಪವಾಸ ಮಾಡಿದ್ದರ ಫಲವನ್ನು ಹೊಂದಲಿ.

ಇಂದ್ರಃ

ಏವಮಸ್ತ್ವಿತಿ ತಾಂ ದೇವಃ ಪ್ರತ್ಯುವಾಚ ತಪಸ್ವಿನೀಮ್ ।
ಸಪ್ತರ್ಷಿಭಿಃ ಸ್ತುತೋ ದೇವಃ ತದಾ ಯಾತಸ್ತ್ರಿವಿಷ್ಟಪಮ್ ॥೯೭॥

ಇಂದ್ರ– ರುದ್ರನು ಆ ತಪಸ್ವಿನಿ ಹಾಗೆಯೇ ಆಗಲಿ ಎಂದು ಹೇಳಿದನು. ಸಪ್ತರ್ಷಿಗಳಿಂದ ಸ್ತುತಿಸಲ್ಪಟ್ಟ ರುದ್ರನು ಸ್ವರ್ಗಕ್ಕೆ ಹೋದನು.

ಋಷಯೋ ವಿಸ್ಮಯಂ ಜಗ್ಮುಸ್ತಾಂ ದೃಷ್ಟ್ವಾ ಚಾಪ್ಯರುಂಧತೀಮ್ ।
ಅಶ್ರಾಂತಾಮವಿವರ್ಣಾಂ ಚ ಕ್ಷುತ್ತಿಪಾಸಾಸಹಾಂ ಸತೀಮ್ ॥೯೮॥

ಹಸಿವು-ನೀರಡಿಕೆಗಳನ್ನು ಸಹಿಸಿಕೊಂಡು, ಯಾವುದೇ ಆಯಾಸಕ್ಕೊಳಗಾಗದೆ, ಮುಖದಲ್ಲಿ ಕಳೆಗುಂದದೆ ಇದ್ದ ಅರುಂಧತಿಯನ್ನು ನೋಡಿ ಸಪ್ತರ್ಷಿಗಳು ಬಹಳವಾಗಿ ಆಶ್ಚರ್ಯಪಟ್ಟರು.

ಏವಂ ಸಿದ್ಧಿಃ ಪರಾ ಪ್ರಾಪ್ತಾ ಅರುಂಧತ್ಯಾ ವಿಶಿಷ್ಟಯಾ ॥೯೯॥

ವಿಶಿಷ್ಟಳಾದ ಅರುಂಧತಿಯು ಹೀಗೆ ಉತ್ತಮವಾದ ಸಿದ್ಧಿಯನ್ನು ಪಡೆದುಕೊಂಡಳು.

ತ್ವಯಾ ತಥಾ ಮಹಾಭಾಗೇ ಮದರ್ಥಂ ಸಂಶಿತವ್ರತೇ ।
ವಿಶೇಷೋ ಹಿ ತ್ವಯಾ ಭದ್ರೇ ವ್ರತೇ ಹ್ಯಸ್ಮಿನ್ ಸಮರ್ಪಿತಃ ॥೧೦೦॥

ಮಹಾಭಾಗ್ಯವಂತಳೇ! ನೀನೂ ಕೂಡ ನನ್ನ ಅನುಗ್ರಹಕ್ಕಾಗಿ ಕಠಿಣವಾದ ತಪಸ್ಸನ್ನು ಆಚರಿಸಿರುವಿ. ಈ ವ್ರತದಲ್ಲಿ ಬಹಳ ವಿಶೇಷವಾಗಿ ನಿನ್ನನ್ನು ಅರ್ಪಿಸಿಕೊಂಡಿರುವಿ.

ಯಥಾ ತಥಾ ದದಾಮ್ಯದ್ಯ ನಿಯಮೇನ ಸುತೋಷಿತಃ ॥೧೦೧॥

ನಿನ್ನ ನಿಯಮಗಳಿಂದ ಸಂತುಷ್ಟನಾದ ನಾನು ನಿನಗೆ ಬೇಕಾದ್ದನ್ನು ಕೊಡುವೆನು.

ವಿಶಿಷ್ಟಂ ತವ ಕಲ್ಯಾಣಿ ಪ್ರಯಚ್ಛಾಮಿ ಪರಂ ವರಮ್ ।
ಅರುಂಧತ್ಯಾ ವರಸ್ತಸ್ಯಾ ಯೋ ದತ್ತೋ ವೈ ಮಹಾತ್ಮನಾ ॥೧೦೨॥

ಮಂಗಳಸ್ವರೂಪಳೇ! ಮಹಾತ್ಮನಾದ ಶಂಕರನು ಅರುಂಧತಿಗೆ ಯಾವ ವರವನ್ನು ಕೊಟ್ಟಿದ್ದನೋ ಅದಕ್ಕಿಂತಲೂ ಉತ್ತಮವಾದ ವಿಶಿಷ್ಟ ವರವನ್ನು ನಿನಗೆ ಕೊಡುವೆನು.

ತಸ್ಯಾ ವರಪ್ರದಾನೇನ ತವ ಕಲ್ಯಾಣಿ ತೇಜಸಾ ।
ಪ್ರವಕ್ಷ್ಯಾಮ್ಯಪರಂ ಭೂಯೋ ವರಮತ್ರ ಯಥಾವಿಧಿ ॥೧೦೩॥

ಯಸ್ತೇ ತ್ವೇಕಾಂ ರಜನೀಂ ತೀರ್ಥೇ ವತ್ಸ್ಯತೇ ಸುಸಮಾಹಿತಃ ।
ಸ ಸ್ನಾತ್ವಾ ಪ್ರಾಪ್ನುಯಾಲ್ಲೋಕಾನ್ ದೇಹನ್ಯಾಸಾಚ್ಚ ದುರ್ಲಭಾನ್ ॥

ನಿನ್ನ ತಪಸ್ಸಿನ ಪ್ರಭಾವದಿಂದಾಗಿ ಇನ್ನೂ ಒಂದು ವರವನ್ನು ಕೊಡುವೆನು. ಯಾವನು ಶುದ್ಧ ಅಂತಃಕರಣದಿಂದ ವಿಧಿವತ್ತಾಗಿ ಈ ನಿನ್ನ ತೀರ್ಥದಲ್ಲಿ ಒಂದು ರಾತ್ರಿಯ ಕಾಲ

ವಾಸಮಾಡಿ, ಮರುದಿನ ಇಲ್ಲಿ ಸ್ನಾನ ಮಾಡುತ್ತಾನೆಯೋ ಅವನು ದೇಹಾವಸಾನ ಹೊಂದಿದ, ಮೇಲೆ ಉತ್ತಮವಾದ ಲೋಕವನ್ನು ಹೊಂದುವನು.

ವೈಶಂಪಾಯನಃ

ಇತ್ಯುಕ್ತ್ವಾ ಭಗವಾನ್ ದೇವಃ ಸಹಸ್ರಾಕ್ಷಃ ಪ್ರತಾಪವಾನ್ ।
ಶ್ರುತಾವತೀಂ ತತೋ ಗೃಹ್ಯ ಜಗಾಮ ತ್ರಿದಿವಂ ಪುನಃ ॥೧೦೫॥

ವೈಶಂಪಾಯನ– ಪ್ರತಾಪಿಯಾದ ದೇವೇಂದ್ರನು ಹೀಗೆ ಹೇಳಿ ಶ್ರುತಾವತಿಯನ್ನು ಕರೆದುಕೊಂಡು ಪುನಃ ಸ್ವರ್ಗಕ್ಕೆ ಹೋದನು.

ಗತೇ ವಜ್ರಧರೇ ರಾಜನ್ ತತೋ ವರ್ಷಂ ಪಪಾತ ಹ ।
ಪುಷ್ಪಾಣಾಂ ಭರತಶ್ರೇಷ್ಠ ದಿವ್ಯಾನಾಂ ದಿವ್ಯಗಂಧಿನಾಮ್ ॥೧೦೬॥

ರಾಜನೇ! ಭರತೋತ್ತಮನೇ! ಇಂದ್ರನು ಹೋದಮೇಲೆ ಅಲ್ಲಿ ಅಲೌಕಿಕ ಪರಿಮಳವನ್ನು ಬೀರುವ ದೇವಲೋಕದ ಹೂಗಳ ಮಳೆಯು ಸುರಿಯಿತು.

ನೇದುರ್ದುಂದುಭಯಶ್ಚಾಪಿ ಸಮಂತಾತ್ ಸುಮಹಾಸ್ವನಾಃ ।
ಮರುತಶ್ಚ ವವುರ್ಯುಕ್ತಾಃ ಪುಣ್ಯಗಂಧಾ ವಿಶಾಂಪತೇ ॥೧೦೭॥

ಎಲ್ಲಾ ಕಡೆಯೂ ಒಳ್ಳೆಯ ಧ್ವನಿಯುಳ್ಳ ದೇವದುಂದುಭಿಗಳು ಮೊಳಗಿದವು. ರಾಜನೇ! ಪರಿಮಳವನ್ನು ಹೊತ್ತುಕೊಂಡ ಮಂದಮಾರುತವು ಬೀಸಿತು.

ಉತ್ಸೃಜ್ಯ ತು ಕೃಶಂ ದೇಹಂ ಜಗಾಮೇಂದ್ರಸ್ಯ ಭಾರ್ಯತಾಮ್ ।
ತಪಸೋಗ್ರೇಣ ಸಾ ಲಬ್ಧ್ವಾ ರೇಮೇ ತೇನ ಸಹಾಚ್ಯುತ ॥೧೦೮॥

ಚ್ಯುತಿರಹಿತನೇ! ಶ್ರುತಾವತಿಯು ಉಗ್ರವಾದ ತಪಸ್ಸಿನ ಪ್ರಭಾವದಿಂದ, ತನ್ನ ಕೃಶವಾದ ಶರೀರವನ್ನು ಬಿಟ್ಟು, ಇಂದ್ರನ ಮಡದಿಯಾಗಿ ಇಂದ್ರನೊಡನೆ ಉತ್ತಮ ಸುಖವನ್ನು ಅನುಭವಿಸಿದಳು.

ಜನಮೇಜಯಃ

ಕಾ ನು ತಸ್ಯಾಭವನ್ಮಾತಾ ಕ್ವ ಸಂವೃದ್ಧಾ ಚ ಶೋಭನಾ ।
ಶ್ರೋತುಮಿಚ್ಛಾಮ್ಯಹಂ ಬ್ರಹ್ಮನ್ ಕೌತೂಹಲಮತೀವ ಮೇ ॥೧೦೯॥

ಜನಮೇಜಯ– ಶ್ರುತಾವತಿಯ ತಾಯಿ ಯಾರು? ಮಂಗಳಕರಳಾದ ಆಕೆ ಎಲ್ಲಿ ಬೆಳೆದಳು? ಬ್ರಹ್ಮಜ್ಞಾನಿಯೇ! ಇದನ್ನು ಕೇಳಿ ತಿಳಿದುಕೊಳ್ಳುವ ಕುತೂಹಲವು ಉಂಟಾಗಿದೆ. ಕೇಳಲು ಬಯಸುತ್ತೇನೆ.

ವೈಶಂಪಾಯನಃ

ಭರದ್ವಾಜಸ್ಯ ವಿಪ್ರರ್ಷೇಃ ಸ್ಕನ್ನಂ ರೇತೋ ಮಹಾತ್ಮನಃ ।
ದೃಷ್ಟ್ವಾऽಪ್ಸರಸಮಾಯಾಂತೀಂ ಘೃತಾಚೀಂ ಪೃಥುಲೋಚನಾಮ್ ॥

ಸ ತು ಜಗ್ರಾಹ ತದ್ರೇತಃ ಕರೇಣ ಜಪತಾಂ ವರಃ ।
ತದಾऽಪತತ್ ಪರ್ಣಪುಟೇ ತತ್ರ ಸಾ ಸಂಭವಚ್ಛುಭಾ ॥೧೧೧॥

ತಸ್ಯಾಃ ಸ ಜಾತಕರ್ಮಾದಿ ಕೃತ್ವಾ ಸರ್ವಂ ತಪೋಧನಃ ।
ನಾಮ ತಸ್ಯಾಸ್ತು ಕೃತವಾನ್ ಭಾರದ್ವಾಜೋ ಮಹಾಮುನಿಃ ॥೧೧೨॥

ಶ್ರುತಾವತೀತಿ ಧರ್ಮಾತ್ಮಾ ದೇವರ್ಷಿಗಣಸಂಸದಿ ।
ಸ ಚ ತಾಮಾಶ್ರಮೇ ನ್ಯಸ್ಯ ಜಗಾಮ ಹಿಮವದ್ ವನಮ್ ॥೧೧೩॥

ವಿಶಾಲನೇತ್ರಳಾದ ಘೃತಾಚೀ ಎಂಬ ಅಪ್ಸರೆಯು ಬರುತ್ತಿರುವುದನ್ನು ನೋಡಿ ಮಹಾತ್ಮನಾದ ಭರದ್ವಾಜನ ವೀರ್ಯವು ಸ್ಖಲಿಸಿತು. ಮಂತ್ರಜಾಪಕರಲ್ಲಿ ಶ್ರೇಷ್ಠನಾದ ಭರದ್ವಾಜನು ಆ ರೇತಸ್ಸನ್ನು ಕೈಯಲ್ಲಿ ಹಿಡಿದುಕೊಂಡನು. ಆಗ ಅದು ಒಂದು ಎಲೆಯ ಪಾತ್ರೆಯಲ್ಲಿ ಬಿದ್ದಿತು. ಅಲ್ಲಿ ಮಂಗಳಸ್ವರೂಪಳಾದ ಈ ಹೆಣ್ಣು ಜನಿಸಿದಳು. ತಪೋಧನನಾದ ಭರದ್ವಾಜನು ಆ ಹೆಣ್ಣುಮಗುವಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ಪೂರೈಸಿ ಶ್ರುತಾವತೀಎಂಬುದಾಗಿ ನಾಮಕರಣವನ್ನು ಮಾಡಿದನು. ಧಾರ್ಮಿಕನಾದ ಭರದ್ವಾಜನು ದೇವರ್ಷಿಗಳ ಸಮೂಹದಲ್ಲಿ ಈ ಶ್ರುತಾವತಿಯನ್ನು ಒಪ್ಪಿಸಿ ತಾನು ತಪಸ್ಸಿಗಾಗಿ ಹಿಮವತ್ಪರ್ವತಕ್ಕೆ ಹೋದನು.

ತತ್ರಾಪ್ಯುಪಸ್ಪೃಶ್ಯ ಮಹಾನುಭಾವೋ
ವಸೂನಿ ದತ್ತ್ವಾ ಚ ಮಹಾದ್ವಿಜೇಭ್ಯಃ ।
ಜಗಾಮ ತೀರ್ಥಂ ಸುಸಮಾಹಿತಾತ್ಮಾ
ಶಕ್ರಸ್ಯ ತತ್ ತೀರ್ಥವರಂ ತದಾನೀಮ್ ॥೧೧೪॥

ಮಹಾನುಭಾವನಾದ ಬಲರಾಮನು ಅಲ್ಲಿ ಅವಗಾಹಸ್ನಾನವನ್ನು ಮಾಡಿ, ಉತ್ತಮ ಬ್ರಾಹ್ಮಣರಿಗೆ ಅನೇಕ ಸಂಪತ್ತನ್ನು ದಾನ ಮಾಡಿದನು. ಸಮಾಹಿತಮನಸ್ಕನಾದ ಬಲರಾಮನು ಅಲ್ಲಿಂದ ಇಂದ್ರತೀರ್ಥಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ಶ್ರುತಾವತೀಮಾಹಾತ್ಮ್ಯಂ ನಾಮ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಬಲಭದ್ರನು ಇಂದ್ರತೀರ್ಥಕ್ಕೆ ಹೋದುದು. ಆ ತೀರ್ಥದ ಮಹಿಮೆಯ ವರ್ಣನೆ

ವೈಶಂಪಾಯನಃ

ಇಂದ್ರತೀರ್ಥಂ ತತೋ ಗತ್ವಾ ಯದೂನಾಂ ಪ್ರವರೋ ಬಲೀ ।
ವಿಪ್ರೇಭ್ಯೋ ಧನರತ್ನಾನಿ ಸ್ನಾತ್ವಾ ದತ್ತ್ವಾ ಯಥಾವಿಧಿ ॥೧॥

ವೈಶಂಪಾಯನ– ಅನಂತರ ಯದುಗಳಲ್ಲಿ ಶ್ರೇಷ್ಠನಾದ ಬಲರಾಮನು ಇಂದ್ರತೀರ್ಥಕ್ಕೆ ಹೋಗಿ, ಅಲ್ಲಿ ವಿಧ್ಯುಕ್ತರೀತಿಯಲ್ಲಿ ಸ್ನಾನವನ್ನು ಮಾಡಿ, ಬ್ರಾಹ್ಮಣರಿಗೆ ಧನ ಮತ್ತು ರತ್ನಗಳನ್ನು ದಾನ ಮಾಡಿದನು.

ತತ್ರ ಹ್ಯಮರರಾಜೋ ವೈ ಈಜೇ ಕ್ರತುಶತೇನ ಹ ।
ಬೃಹಸ್ಪತೇಶ್ಚ ದೇವೇಶಃ ಪ್ರದದೌ ವಿಪುಲಂ ಧನಮ್ ॥೨॥

ಆ ತೀರ್ಥದಲ್ಲಿ ದೇವೇಂದ್ರನು ನೂರು ಯಾಗಗಳನ್ನು ಮಾಡಿದ ತನ್ನ ಗುರುವಾದ ಬೃಹಸ್ಪತಿಗೆ ಬೇಕಾದಷ್ಟು ಸಂಪತ್ತನ್ನು ದಾನ ಮಾಡಿದ್ದನು.

ಅನರ್ಗಲಾನ್ ಸಜಾರೂಥ್ಯಾನ್ ಸರ್ವಾನ್ ವಿವಿಧದಕ್ಷಿಣಾನ್ ।
ಆಜಹಾರ ಕ್ರತೂಂಸ್ತತ್ರ ಯಥೋಕ್ತಾನ್ ವೇದಪಾರಗೈಃ ॥೩॥

ಇಂದ್ರನು ಅಲ್ಲಿ ವಿವಿಧದಕ್ಷಿಣೆಗಳುಳ್ಳ ಯಾಗಗಳನ್ನು ವೇದಜ್ಞರ ಮೂಲಕ ಶಾಸ್ತ್ರೋಕ್ತರೀತಿಯಲ್ಲಿ ಯಾವುದೇ ವಿಘ್ನಗಳಿಲ್ಲದೆ ಮಾಡಿದನು.

ಕ್ರತೂಂಸ್ತಾನ್ ಭರತಶ್ರೇಷ್ಠ ಶತಕೃತ್ವೋ ಮಹಾದ್ಯುತಿಃ ।
ಪೂರಯಾಮಾಸ ವಿಧಿವದ್ ತತಃ ಖ್ಯಾತಃ ಶತಕ್ರತುಃ ॥೪॥

ಭರತೋತ್ತಮನೇ! ಮಹಾಕಾಂತಿಮಂತನಾದ ಇಂದ್ರನು ಆ ಯಾಗಗಳನ್ನು ನೂರು ಬಾರಿ ವಿಧಿವತ್ತಾಗಿ ಮಾಡಿದನು. ಅದರಿಂದಾಗಿ ಅವನು ಶತಕ್ರತು ಎಂಬುದಾಗಿ ಪ್ರಸಿದ್ಧನಾದನು.

ತಸ್ಯ ನಾಮ್ನಾ ತು ತತ್ ತೀರ್ಥಂ ಶಿವಂ ಪುಣ್ಯಜಲಾವೃತಮ್ ।
ಇಂದ್ರತೀರ್ಥಮಿತಿ ಖ್ಯಾತಂ ಸರ್ವಪಾಪಪ್ರಮೋಚನಮ್ ॥೫॥

ಮಂಗಳಮಯವಾದ ಪುಣ್ಯಜಲವುಳ್ಳ ಆ ತೀರ್ಥವು ಅವನ ಹೆಸರಿನಿಂದಲೇ ಇಂದ್ರತೀರ್ಥ ಎಂಬುದಾಗಿ ಪ್ರಸಿದ್ಧವಾಯಿತು. ಅದು ಸಕಲಪಾಪಗಳನ್ನು ಪರಿಹಾರ ಮಾಡುವಂತಹದ್ದು.

ಉಪಸ್ಪೃಶ್ಯ ತು ತತ್ರಾಪಿ ವಿಧಿವನ್ಮುಸಲಾಯುಧಃ ।
ಬ್ರಾಹ್ಮಣಾನ್ ಪೂಜಯಿತ್ವಾ ಚ ಪಾನಾಚ್ಛಾದನಭೋಜನೈಃ ॥೬॥

ಬಲರಾಮನು ಅಲ್ಲಿಯೂ ಆಚಮನಾದಿಗಳನ್ನು ಮಾಡಿ ಶಾಸ್ತ್ರೋಕ್ತರೀತಿಯಲ್ಲಿ ಬ್ರಾಹ್ಮಣರನ್ನು ಆರಾಧಿಸಿ ಜಲ, ಬಟ್ಟೆ ಮತ್ತು ಅನ್ನಗಳನ್ನು ದಾನ ಮಾಡಿದ್ದನು.

ಶುಭಂ ತೀರ್ಥವರಂ ತಸ್ಮಾದ್ ರಾಮತೀರ್ಥಂ ಜಗಾಮ ಹ ॥೭॥

ಅಲ್ಲಿಂದ ಮುಂದೆ ಶುಭಕರವಾದ ರಾಮತೀರ್ಥಕ್ಕೆ ಹೋದನು.

ಯತ್ರ ರಾಮೋ ಮಹಾಭಾಗೋ ಭಾರ್ಗವಃ ಸುಮಹಾತಪಾಃ ।
ಅಸಕೃತ್ ಪೃಥಿವೀಂ ಕೃತ್ವಾ ಹತಕ್ಷತ್ರಿಯಪುಂಗವಾಮ್ ॥೮॥

ಆ ರಾಮತೀರ್ಥದಲ್ಲಿ ಮಹಾತಪಸ್ವಿಯಾದ ಪರಶುರಾಮನು ಅನೇಕ ಬಾರಿ ಕ್ಷತ್ರಿಯರನ್ನು ನಾಶಮಾಡಿ, ಪೃಥಿವಿಯನ್ನು ಕ್ಷತ್ರಿಯರಹಿತವನ್ನಾಗಿ ಮಾಡಿದನು.

ಉಪಾಧ್ಯಾಯಂ ಪುರಸ್ಕೃತ್ಯ ಕಾಶ್ಯಪಂ ಮುನಿಪುಂಗವಮ್ ।
ಅಯಜದ್ ವಾಜಪೇಯೇನ ಸೋಽಶ್ವಮೇಧಶತೇನ ಚ ॥೯॥

ಗುರುವಾದ, ಮುನಿಶ್ರೇಷ್ಠರಾದ ಕಾಶ್ಯಪರನ್ನು ಮುಂದಿಟ್ಟುಕೊಂಡು ವಾಜಪೇಯ ಯಾಗವನ್ನೂ, ನೂರು ಅಶ್ವಮೇಧಯಾಗಗಳನ್ನೂ ಮಾಡಿದನು.

ಪ್ರದದೌ ದಕ್ಷಿಣಾರ್ಥಂ ಚ ಪೃಥಿವೀಂ ಸಾಗರಾಂಬರಾಮ್ ॥೧೦॥

ಯಾಗದ ದಕ್ಷಿಣೆಯಾಗಿ ಸಮುದ್ರಪರ್ಯಂತ ವ್ಯಾಪಿಸಿದ ಭೂಮಿಯನ್ನು ದಾನ ಮಾಡಿದನು.

ರಾಮೋ ದತ್ತ್ವಾ ಧನಂ ತತ್ರ ದ್ವಿಜೇಭ್ಯೋ ಜನಮೇಜಯ ।
ಉಪಸ್ಪೃಶ್ಯ ಯಥಾನ್ಯಾಯಂ ಪೂಜಯಿತ್ವಾ ತಥಾ ದ್ವಿಜಾನ್ ॥೧೧॥

ಜನಮೇಜಯನೇ! ಬಲರಾಮನು ಅಲ್ಲಿ ನ್ಯಾಯಬದ್ಧವಾಗಿ ಆಚಮನಾದಿಗಳನ್ನು ಮಾಡಿ ಬ್ರಾಹ್ಮಣರಿಗೆ ಸಂಪತ್ತನ್ನು ದಾನಮಾಡಿ ಅವರನ್ನು ಪೂಜಿಸಿದನು.

ಪುಣ್ಯತೀರ್ಥೇ ಶುಭೇ ದೇಶೇ ವಸು ದತ್ತ್ವಾ ಹಲಾಯುಧಃ ।
ಮುನೀಂಶ್ಚೈವಾಭಿವಾದ್ಯಾಥ ಯಾಮುನಂ ತೀರ್ಥಮಾಗತಮ್ ॥೧೨॥

ಹಲಾಯುಧನು ಶುಭಕರವಾದ ಆ ಪುಣ್ಯತೀರ್ಥದಲ್ಲಿ ಸಂಪತ್ತನ್ನು ದಾನಮಾಡಿ, ಮುನಿಗಳನ್ನು ನಮಿಸಿ ಯಾಮುನತೀರ್ಥಕ್ಕೆ ಹೋದನು.

ಯತ್ರಾನಯಾಮಾಸ ತದಾ ರಾಜಸೂಯಮಪಾಂಪತಿಃ ॥೧೩॥

ದಿತೇಃ ಸುತಾನ್ ಮಹಾಭಾಗೋ ವರುಣೋ ವೈ ಸಿತಪ್ರಭಃ ।
ಯತ್ರ ನಿರ್ಜಿತ್ಯ ಸಂಗ್ರಾಮೇ ಮಾನುಷಾನ್ ದಾನವಾಂಸ್ತಥಾ ॥೧೪॥

ಗಂಧರ್ವಾನ್ ರಾಕ್ಷಸಾಂಶ್ಚೈವ ವರುಣಃ ಪರವೀರಹಾ ॥೧೫॥

ಗೌರಬಣ್ಣವುಳ್ಳ ಭಾಗ್ಯಶಾಲಿಯಾದ ಹಾಗೂ ಜಲಾಭಿಮಾನಿಯಾದ ಶತ್ರುಸಂಹಾರಕ ವರುಣನು ಯುದ್ಧದಲ್ಲಿ ದೈತ್ಯರನ್ನೂ, ಮನುಷ್ಯರನ್ನೂ, ದಾನವರನ್ನೂ ಗಂದರ್ವರನ್ನೂ ಮತ್ತು ರಾಕ್ಷಸರನ್ನು ಸೋಲಿಸಿ ಈ ತೀರ್ಥದಲ್ಲಿ ರಾಜಸೂಯಯಾಗವನ್ನು ನಡೆಸಿದನು.

ತಸ್ಮಿನ್ ಕ್ರತುವರೇ ವೃತ್ತೇ ಸಂಗ್ರಾಮಃ ಸಮಜಾಯತ ।
ದೇವಾನಾಮಸುರಾಣಾಂ ಚ ತ್ರೈಲೋಕ್ಯಸ್ಯ ಕ್ಷಯಾವಹಃ ॥೧೬॥

ಆ ಉತ್ತಮಯಾಗವು ನಡೆಯುತ್ತಿದ್ದಾಗ ದೇವತೆಗಳಿಗೂ ಅಸುರರಿಗೂ ಲೋಕಕ್ಷಯಕಾರಿಯಾದ ಯುದ್ಧವು ನಡೆಯಿತು.

ರಾಜಸೂಯೇ ಕ್ರತುಶ್ರೇಷ್ಠೇ ನಿವೃತ್ತೇ ಜನಮೇಜಯ ।
ಜಾಯತೇ ಸುಮಹಾಘೋರಃ ಸಂಕ್ಷಯಃ ಕ್ಷತ್ರಿಯಾನ್ ಪ್ರತಿ ॥೧೭॥

ಜನಮೇಜಯನೇ! ಉತ್ತಮ ಯಜ್ಞವಾದ ರಾಜಸೂಯಯಾಗವು ಪೂರ್ಣಗೊಳ್ಳುತ್ತಿರಲು ಕ್ಷತ್ರಿಯಕುಲನಾಶಕವಾದ ಘೋರಯುದ್ಧವು ನಡೆಯುತ್ತದೆ.

ಹಲಾಯುಧಸ್ತದಾ ರಾಮಃ ತಸ್ಮಿಂಸ್ತೀರ್ಥವರೇ ಶುಭೇ ।
ತತ್ರ ಸ್ನಾತ್ವಾ ಚ ದತ್ತ್ವಾ ಚ ದ್ವಿಜೇಭ್ಯೋ ವಸು ಮಾಧವಃ ॥೧೮॥

ಹಲಾಯುಧನಾದ ಬಲರಾಮನು ಆಗ ಆ ಉತ್ತಮತೀರ್ಥದಲ್ಲಿ ಸ್ವತಃ ತಾನು ಸ್ನಾನಾದಿಗಳನ್ನು ಮಾಡಿ ಬ್ರಾಹ್ಮಣರಿಗೆ ಸಂಪತ್ತಿನ ದಾನವನ್ನು ಮಾಡಿದನು.

ವನಮಾಲೀ ತತೋ ಹೃಷ್ಟಃ ಸ್ತೂಯಮಾನೋ ದ್ವಿಜಾತಿಭಿಃ ।
ತಸ್ಮಾದಾದಿತ್ಯತೀರ್ಥಂ ಚ ಜಗಾಮ ಕಮಲೇಕ್ಷಣಃ ॥೧೯॥

ಕಮಲದಂತೆ ಕಣ್ಣುಗಳುಳ್ಳ, ವನಮಾಲಾಧಾರಿಯಾದ ಬಲರಾಮನನ್ನು ಬ್ರಾಹ್ಮಣರು ಕೊಂಡಾಡುತ್ತಾರೆ. ಬಲರಾಮನು ಅಲ್ಲಿಂದ ಆದಿತ್ಯತೀರ್ಥಕ್ಕೆ ಹೋಗುತ್ತಾನೆ.

ಯತ್ರೇಷ್ಟ್ವಾ ಭಗವಾನ್ ಜ್ಯೋತಿರ್ಭಾಸ್ಕರೋ ರಾಜಸತ್ತಮ ।
ಜ್ಯೋತಿಷಾಮಾಧಿಪತ್ಯಂ ಚ ಪ್ರಭಾವಂ ಚಾಭ್ಯಪದ್ಯತ ॥೨೦॥

ರಾಜಶ್ರೇಷ್ಠನೇ! ಭಗವಾನ್ ಭಾಸ್ಕರನು ಈ ತೀರ್ಥದಲ್ಲಿ ಯಾಗವನ್ನು ಮಾಡಿ ಜ್ಯೋತಿಷ್ಪತಿತ್ವವನ್ನು ಮತ್ತು ವಿಶಿಷ್ಟಸಾಮರ್ಥ್ಯವನ್ನು ಹೊಂದಿದನು.

ತಸ್ಯಾ ನದ್ಯಾಸ್ತು ತೀರೇ ವೈ ಸರ್ವೇ ದೇವಾಃ ಸವಾಸವಾಃ ।
ವಿಶ್ವೇ ತಥಾ ಸಮರುತೋ ಗಂಧರ್ವಾಪ್ಸರಸಶ್ಚ ಹ ॥೨೧॥

ದ್ವೈಪಾಯನಃ ಶುಕಶ್ಚೈವ ಕೃಷ್ಣಶ್ಚ ಮಧುಸೂದನಃ ।
ಯಕ್ಷಾಶ್ಚ ರಾಕ್ಷಸಾಶ್ಚೈವ ಪಿಶಾಚಾಶ್ಚ ವಿಶಾಂಪತೇ ।
ಏತೇ ಚಾನ್ಯೇ ಚ ಬಹವೋ ಯೋಗಸಿದ್ಧಾಃ ಸಹಸ್ರಶಃ ॥೨೨॥

ರಾಜನೇ! ಆ ನದಿಯ ತೀರದಲ್ಲಿ ಇಂದ್ರಾದಿ ಎಲ್ಲಾ ಜ್ಞಾನಿಗಳೂ, ವಿಶ್ವೇದೇವತೆಗಳು, ಮರುದ್ದೇವತೆಗಳು, ಗಂಧರ್ವರು, ಅಪ್ಸರೆಯರು, ವೇದವ್ಯಾಸ, ಶುಕ, ಮಧುಸೂದನನಾದ ಶ್ರೀಕೃಷ್ಣ, ಯಕ್ಷರು, ರಾಕ್ಷಸರು, ಪಿಶಾಚಗಳು, ಇವರು ಮತ್ತು ಇನ್ನೂ ಅನೇಕರು ಸಾವಿರಾರು ಸಂಖ್ಯೆಯಲ್ಲಿ ಯೋಗಸಿದ್ಧರಾದರು.

ತಸ್ಮಿಂಸ್ತೀರ್ಥೇ ಸರಸ್ವತ್ಯಾಃ ಶಿವೇ ಪುಣ್ಯೇ ಪರಂತಪ ॥೨೩॥

ಯತ್ರ ಹತ್ವಾ ಪುರಾ ವಿಷ್ಣುಃ ಕೈಟಭಂ ಮಧುಮೇವ ಚ ।
ಆಪ್ಲುತೋ ಭರತಶ್ರೇಷ್ಠ ತೀರ್ಥಪ್ರವರ ಉತ್ತಮೇ ॥೨೪॥

ಶತ್ರುತಾಪಕನೇ! ಸರಸ್ವತಿನದಿಯ ಆ ಮಂಗಳಮಯವಾದ, ಪುಣ್ಯಪ್ರದವಾದ ತೀರ್ಥದಲ್ಲಿ ಹಿಂದೆ ವಿಷ್ಣುವು ಮಧು ಮತ್ತು ಕೈಟಭರನ್ನು ಸಂಹರಿಸಿ ಅವಗಾಹಸ್ನಾನವನ್ನು ಮಾಡಿದ್ದನು.

ದ್ವೈಪಾಯನಶ್ಚ ಧರ್ಮಾತ್ಮಾ ತತ್ರೈವಾಪ್ಲುತ್ಯ ಭಾರತ ।
ಸಂಪ್ರಾಪ್ತಃ ಪರಮಂ ಯೋಗಂ ಸಿದ್ಧಿಂ ಚ ಪರಮಾಂ ಗತಃ ॥೨೫॥

ಭರತಕುಲೋದ್ಭವನೇ! ಧರ್ಮಾತ್ಮನಾದ ವೇದವ್ಯಾಸನೂ ಕೂಡ ಆ ತೀರ್ಥದಲ್ಲಿಯೇ ಅವಗಾಹಸ್ನಾನವನ್ನು ಮಾಡಿ ಉತ್ತಮವಾದ ಯೋಗಸಿದ್ಧಿಯನ್ನು ಹೊಂದಿದನು.

ಅಸಿತೋ ದೇವಲಶ್ಚೈವ ತಸ್ಮಿನ್ನೇವ ಮಹಾತಪಾಃ ।
ಪರಮಂ ಯೋಗಮಾಸ್ಥಾಯ ಯೋಗಯುಕ್ತೋಽಭವನ್ಮುನಿಃ ॥೨೬॥

ಮಹಾತಪಸ್ವಿಯಾದ ಅಸಿತ ದೇವಲಮುನಿಯೂ ಕೂಡ ಆ ತೀರ್ಥದಲ್ಲಿಯೇ ಯೋಗವನ್ನು ಆಚರಿಸಿ ಯೋಗಯುಕ್ತನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಭಾರ್ಗವತೀರ್ಥವರ್ಣನಂ ನಾಮ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ದೇವಲ ಮತ್ತು ಜೈಗೀಷವ್ಯರ ಚರಿತ್ರೆಯ ವರ್ಣನೆ. ಬಲರಾಮನು ಆದಿತ್ಯತೀರ್ಥದಿಂದ ಸೋಮತೀರ್ಥಕ್ಕೆ ಹೋದುದು.

ವೈಶಂಪಾಯನಃ

ತಸ್ಮಿನ್ನೇವ ತು ಧರ್ಮಾತ್ಮಾ ವಸತಿ ಸ್ಮ ತಪೋಧನಃ ।
ಗಾರ್ಹಸ್ಥ್ಯಂ ಧರ್ಮಮಾಸ್ಥಾಯ ಹ್ಯಸಿತೋ ದೇವಲಃ ಪುರಾ ॥೧॥

ವೈಶಂಪಾಯನ– ಹಿಂದೆ ಅಸಿತದೇವಲನು ಧಾರ್ಮಿಕನಾಗಿದ್ದುಕೊಂಡು, ತಪಸ್ಸನ್ನಾಚರಿಸುತ್ತಾ, ಗೃಹಸ್ಥಧರ್ಮವನ್ನು ಪರಿಪಾಲಿಸುತ್ತಾ ಆ ತೀರ್ಥದಲ್ಲಿ ವಾಸಮಾಡಿಕೊಂಡಿದ್ದನು.

ಧರ್ಮನಿತ್ಯಃ ಶುಚಿರ್ದಾಂತೋ ಯಜ್ಞಶೀಲೋ ಮಹಾತಪಾಃ ।
ಕರ್ಮಣಾ ಮನಸಾ ವಾಚಾ ಸಮಃ ಸರ್ವೇಷು ಸಾಧುಷು ॥೨॥

ಮಹಾತಪಸ್ವಿಯಾದ ಅಸಿತ ದೇವಲನು ಸದಾ ಧರ್ಮದಲ್ಲಿಯೇ ಇದ್ದುಕೊಂಡು, ಅಂತರಂಗ ಮತ್ತು ಬಹಿರಂಗ ಶುದ್ಧಿಗಳನ್ನು ಸಂಪಾದಿಸಿಕೊಂಡು ಯಾಗದಲ್ಲಿ ತೊಡಗಿಕೊಳ್ಳುತ್ತಿದ್ದನು. ಕರ್ಮಗಳಿಂದ, ಮನಸ್ಸಿನಿಂದ ಮತ್ತು ಮಾತಿನಿಂದ ಎಲ್ಲಾ ಸಾಧು-ಸಜ್ಜನರನ್ನೂ ಸಮಾನವಾಗಿ ಕಾಣುತ್ತಿದ್ದನು.

ಅಕ್ರೋಧನೋ ಮಹಾರಾಜ ತುಲ್ಯನಿಂದಾಪ್ರಿಯಾಪ್ರಿಯಃ ॥೩॥

ಮಹಾರಾಜನೇ! ಅವನು ಯಾರ ಮೇಲೆಯೂ ಕೋಪಿಸಿಕೊಳ್ಳುತ್ತಿರಲಿಲ್ಲ, ನಿಂದನೆ-ಸ್ತುತಿಗಳನ್ನು, ಇಷ್ಟಾನಿಷ್ಟಗಳನ್ನು ಸಮಾನವಾಗಿ ಕಾಣುತ್ತಿದ್ದನು.

ಕಾಂಚನೇ ಲೋಷ್ಟಕೇ ಚೈವ ಸಮದರ್ಶೀ ಮಹಾತಪಾಃ ।
ದೇವಾನ್ ವೈ ಪೂಜಯನ್ನಿತ್ಯಮತಿಥೀಂಶ್ಚ ದ್ವಿಜೈಃ ಸಹ ॥೪॥

ಮಹಾತಪಸ್ವಿಯಾದ ದೇವಲನು ಕಲ್ಲನ್ನೂ ಬಂಗಾರವನ್ನೂ ಸಮಾನವಾಗಿ ನೋಡುತ್ತಿದ್ದನು. ದೇವತೆಗಳನ್ನು, ಅತಿಥಿಗಳನ್ನು ಮತ್ತು ಬ್ರಾಹ್ಮಣರನ್ನು ಪೂಜಿಸುತ್ತಿದ್ದನು.

ಬ್ರಹ್ಮಚರ್ಯರತೋ ನಿತ್ಯಂ ಸದಾ ಧರ್ಮಪರಾಯಣಃ ।
ತತ್ರಾಭ್ಯೇತ್ಯ ಮಹಾರಾಜ ಯೋಗಮಾಸ್ಥಾಯ ಭಿಕ್ಷುಕಃ ॥೫॥

ಜೈಗೀಷವ್ಯೋ ಮುನಿರ್ಧೀಮಾನ್ ತಸ್ಮಿಂಸ್ತೀರ್ಥೇ ಸಮಾಹಿತಃ ।
ದೇವಲಸ್ಯಾಶ್ರಮೇ ರಾಜನ್ ನ್ಯವಸತ್ ಸ ಮಹಾದ್ಯುತಿಃ ॥೬॥

ಯಾವಾಗಲೂ ಬ್ರಹ್ಮಚರ್ಯವ್ರತದಲ್ಲಿ ಆಸಕ್ತನಾಗಿದ್ದನು. ನಿತ್ಯವೂ ಧರ್ಮದಲ್ಲಿಯೇ ಇರುತ್ತಿದ್ದನು. ಮಹಾರಾಜನೇ! ಜೈಗೀಷವ್ಯ ಎಂಬ ಒಬ್ಬ ಭಿಕ್ಷುಕನು ಯೋಗಾಚರಣೆಯನ್ನು ಮಾಡುತ್ತಾ ದೇವಲನ ಆಶ್ರಮಕ್ಕೆ ಬಂದನು. ಅಲ್ಲಿ ಬುದ್ಧಿವಂತನಾದ ಆ ಮುನಿಯು ಮನೋನಿಗ್ರಹವನ್ನು ಸಂಪಾದಿಸಿಕೊಂಡು ಕಾಂತಿಯುಕ್ತನಾಗಿ ಅಲ್ಲಿಯೇ ದೇವಲನ ಆಶ್ರಮದಲ್ಲಿ ವಾಸಿಸತೊಡಗಿದನು.

ಯೋಗನಿತ್ಯೋ ಮಹಾರಾಜ ಸಿದ್ಧಿಂ ಪ್ರಾಪ್ತೋ ಮಹಾತಪಾಃ ॥೭॥

ಮಹಾತಪಸ್ವಿಯಾದ ಆ ಜೈಗೀಷವ್ಯನು ನಿತ್ಯವೂ ಯೋಗಸಾಧನೆಯನ್ನು ಮಾಡುತ್ತಾ ಯೋಗಸಿದ್ಧಿಯನ್ನು ಸಂಪಾದಿಸಿಕೊಂಡನು.

ತಂ ತತ್ರ ವಸಮಾನಂ ತು ಜೈಗೀಷವ್ಯಂ ಮಹಾಮುನಿಮ್ ।
ನ ಜ್ಞಾತಸ್ತೇನ ಮುನಿನಾ ದೇವಲೇನ ಮಹಾತ್ಮನಾ ॥೮॥

ಅಲ್ಲಿ ವಾಸಮಾಡುತ್ತಿದ್ದ ಮಹಾತಪಸ್ವಿ ಜೈಗೀಷವ್ಯನನ್ನು ಮಹಾತ್ಮನಾದ ದೇವಲಮುನಿಯು ನೋಡಿರಲಿಲ್ಲ.

ಏವಂ ತಯೋರ್ಮಹಾರಾಜ ದೀರ್ಘಕಾಲೋ ವ್ಯತಿಕ್ರಮತ್ ॥೯॥

ಅವರಿಬ್ಬರೂ ಹೀಗಿರಲು ಬಹಳ ವರ್ಷಗಳ ದೀರ್ಘಕಾಲವು ಕಳೆದುಹೋಯಿತು.

ಜೈಗೀಷವ್ಯೋ ಮುನಿಸ್ತಂ ತು ದದರ್ಶಾಥ ಸ ದೇವಲಮ್ ।
ಆಹಾರಕಾಲೇ ಮತಿಮಾನ್ ಪರಿವ್ರಾಡ್ ಜನಮೇಜಯ ॥೧೦॥

ಜನಮೇಜಯನೇ! ಅನಂತರ ನಿತ್ಯಸಂಚಾರಿಯಾದ, ಬುದ್ಧಿವಂತ ಜೈಗೀಷವ್ಯ ಮುನಿಯು ತನ್ನ ಭೋಜನಸಮಯದಲ್ಲಿ ದೇವಲನನ್ನು ನೋಡಿದನು.

ಉಪಾತಿಷ್ಠತ ಧರ್ಮಾತ್ಮಾ ಭೈಕ್ಷಕಾಲೇ ಸ್ಮ ದೇವಲಮ್ ॥೧೧॥

ಧರ್ಮಾತ್ಮನಾದ ಜೈಗೀಷವ್ಯ ಮುನಿಯು ಭಿಕ್ಷಾಕಾಲದಲ್ಲಿ ದೇವಲಮುನಿಯ ಹತ್ತಿರ ಬಂದು ಅವನಿಗೆ ಸೇವೆಯನ್ನು ಸಲ್ಲಿಸಿದನು.

ಸ ದೃಷ್ಟ್ವಾ ಭಿಕ್ಷುರೂಪೇಣ ಪ್ರಾಪ್ತಂ ತಂ ತು ಮಹಾಮುನಿಮ್ ।
ಗೌರವಂ ಪರಮಂ ಚಕ್ರೇ ಪ್ರೀತಿಂ ಚ ಪರಮಾಂ ತದಾ ॥೧೨॥

ಆ ದೇವಲನು ಭಿಕ್ಷುರೂಪದಿಂದ ಬಂದ ಜೈಗೀಷವ್ಯಮುನಿಯನ್ನು ಕಂಡು ಬಹಳವಾದ ಗೌರವನನ್ನು ತೋರಿದನು. ಬಹಳವಾದ ಪ್ರೇಮ (ಪ್ರೀತಿಯನ್ನು)ವನ್ನು ಮಾಡಿದನು.

ದೇವಲಸ್ತು ಯಥಾಶಕ್ತಿ ಪೂಜಯಾಮಾಸ ಭಾರತ ।
ಋಷಿದೃಷ್ಟೇನ ವಿಧಿನಾ ಸಮಾಹೂಯ ಸಮಾಹಿತಃ ॥೧೩॥

ದೇವಲನು ಇಂದ್ರಿಯನಿಗ್ರಹವುಳ್ಳವನಾಗಿ, ತನ್ನ ಶಕ್ತಿಗೆ ಅನುಗುಣವಾಗಿ ಋಷಿ-ಮುನಿಗಳು ವೇದಾದಿಗಳ ಮೂಲಕ ತೋರಿಸಿಕೊಟ್ಟ ಸಂಪ್ರದಾಯಕ್ಕೆ ಅನುಸಾರವಾಗಿ ಪೂಜಿಸಿದನು.

ಕದಾಚಿತ್ ತಸ್ಯ ನೃಪತೇ ದೇವಲಸ್ಯ ಮಹಾತ್ಮನಃ ।
ಚಿಂತಾ ಸುಮಹತೀ ಜಾತಾ ಮುನಿಂ ದೃಷ್ಟ್ವಾ ಮಹಾದ್ಯುತಿಮ್ ॥೧೪॥

ರಾಜನೇ! ಒಂದು ಬಾರಿ ಮಹಾಕಾಂತಿಯುಳ್ಳ ಆ ಮುನಿಯನ್ನು ನೋಡಿ ಮಹಾತ್ಮನಾದ ದೇವಲನಿಗೆ ಬಹಳವಾದ ಚಿಂತೆಯು ಉಂಟಾಯಿತು.

ಸಮಾಸ್ತು ಸಮತಿಕ್ರಾಂತಾ ಬಹ್ವ್ಯಃ ಪೂಜಯತೋ ಮಮ ।
ನ ಚಾಯಮಲಸೋ ಭಿಕ್ಷುರಭ್ಯಭಾಷತ ಕಿಂಚನ ॥೧೫॥

ಇವನನ್ನು ಆರಾಧಿಸಲು ಆರಂಭಿಸಿ ಅನೇಕ ವರ್ಷಗಳೇ ಕಳೆದುಹೋದವು. ಆದರೆ ಈ ಸೋಮಾರಿಯಾದ ಮುನಿಯು ಏನನ್ನೂ ಮಾತನಾಡುತ್ತಿಲ್ಲ.

ಏವಂ ವಿಗಣಯನ್ನೇವ ಸ ಜಗಾಮ ಮಹೋದಧಿಮ್ ।
ಅಂತರಿಕ್ಷಗತಃ ಶ್ರೀಮಾನ್ ಕಲಶಂ ಗೃಹ್ಯ ದೇವಲಃ ॥೧೬॥

ಹೀಗೆ ವಿಚಾರಮಾಡುತ್ತಾ ದೇವಲನು ಕಲಶವನ್ನು ಕೈಯಲ್ಲಿ ಹಿಡಿದುಕೊಂಡು ಆಕಾಶಮಾರ್ಗದಿಂದ ಸಮುದ್ರಕ್ಕೆ ಹೋದನು.

ಗಚ್ಛನ್ನೇವ ಚ ಧರ್ಮಾತ್ಮಾ ಸಮುದ್ರಂ ಸರಿತಾಂ ಪತಿಮ್ ।
ಜೈಗೀಷವ್ಯಂ ತತೋಽಪಶ್ಯದ್ ಗತಂ ಪ್ರಾಗೇವ ಭಾರತ ॥೧೭॥

ಭರತಕುಲೋದ್ಭವನೇ! ನದಿಗಳ ಪತಿಯಾದ ಸಮುದ್ರದ ಕಡೆಗೆ ದೇವಲನು ಹೋಗುತ್ತಾ ಇರುವಾಗ ತನಗಿಂತ ಮೊದಲೇ ಹೋಗಿದ್ದ ಜೈಗೀಷವ್ಯಮುನಿಯನ್ನು ನೋಡಿದನು.

ತತಃ ಸವಿಸ್ಮಿತಶ್ಚಿಂತಾಂ ಜಗಾಮಾಥಾಸಿತಃ ಪ್ರಭುಃ ।
ಕಥಂ ಭಿಕ್ಷುರಯಂ ಪ್ರಾಪ್ತಃ ಸಮುದ್ರಂ ಸುಮಹಾತಪಾಃ ॥೧೮॥

ಇತ್ಯೇವಂ ಚಿಂತಯಾಮಾಸ ಮಹರ್ಷಿರಸಿತಸ್ತದಾ ।
ಸ್ನಾತ್ವಾ ಸಮುದ್ರೇ ವೈ ತಿಷ್ಠನ್ ಅಥ ಜಪ್ಯಂ ಜಜಾಪ ಹ ॥೧೯॥

ಇದನ್ನು ನೋಡಿದಾಗ ಅಸಿತ ದೇವಲನಿಗೆ ಬಹಳ ಆಶ್ಚರ್ಯವುಂಟಾಯಿತು. ಮಹಾತಪಸ್ವಿಯಾದ ಈ ಮುನಿಯು ಸಮುದ್ರಕ್ಕೆ ಹೇಗೆ ಬಂದನು ಎಂಬುದಾಗಿ ಚಿಂತೆಗೊಳಗಾದನು. ಸಮುದ್ರದಲ್ಲಿ ಸ್ನಾನವನ್ನು ಮಾಡಿ, ಮಂತ್ರಗಳನ್ನು ಜಪಿಸುತ್ತಾ ನಿಂತುಕೊಂಡನು.

ಕೃತಜಪ್ಯಾಹ್ನಿಕಃ ಶ್ರೀಮಾನಾಶ್ರಮಂ ಚ ಜಗಾಮ ಹ ।
ಕಲಶಂ ಜಲಪೂರ್ಣಂ ವೈ ಗೃಹೀತ್ವಾ ಜನಮೇಜಯ ॥೨೦॥

ಜನಮೇಜಯನೇ! ಆಹ್ನಿಕಗಳನ್ನೂ, ಮಂತ್ರಜಪವನ್ನೂ ಮುಗಿಸಿಕೊಂಡ ದೇವಲನು ನೀರು ತುಂಬಿದ ಕಲಶವನ್ನು ಹಿಡಿದುಕೊಂಡು ಆಶ್ರಮಕ್ಕೆ ಹೋದನು.

ತತಃ ಸ ಪ್ರವಿಶನ್ನೇವ ಸ್ವಮಾಶ್ರಮಪದಂ ಮುನಿಃ ।
ಆಸೀನಮಾಶ್ರಮೇ ಪುಣ್ಯೇ ಜೈಗೀಷವ್ಯಮಪಶ್ಯತ ॥೨೧॥

ಅನಂತರ ಅವನು ತನ್ನ ಆಶ್ರಮವನ್ನು ಪ್ರವೇಶಿಸುತ್ತಿರುವಾಗಲೇ ಆ ಪುಣ್ಯಾಶ್ರಮದಲ್ಲಿ ಕುಳಿತುಕೊಂಡಿದ್ದ ಜೈಗೀಷವ್ಯಮುನಿಯನ್ನು ನೋಡಿದನು.

ನ ವ್ಯಾಹರತಿ ಚೈವೈನಂ ಜೈಗೀಷವ್ಯಃ ಕಥಂಚನ ।
ಕಾಷ್ಠಭೂತೋ ಶ್ರಮಪದೇ ವಸತಿ ಸ್ಮ ಮಹಾತಪಾಃ ॥೨೨॥

ಜೈಗೀಷವ್ಯಮುನಿಯು ಎಷ್ಟುಪ್ರಯತ್ನಪಟ್ಟರೂ ಸ್ವಲ್ಪವೂ ಮಾತನಾಡುತ್ತಿರಲಿಲ್ಲ. ಮಹಾತಪಸ್ವಿಯಾದ ಆತನು ಕಾಷ್ಠಮೌನವನ್ನು ಆಚರಿಸುತ್ತಾ, ಕಠಿಣವಾದ ಆಸನದಲ್ಲಿ ಕುಳಿತುಕೊಂಡು ತಪಸ್ಸನ್ನು ಆಚರಿಸುತ್ತಿದ್ದನು.

ತಂ ದೃಷ್ಟ್ವಾ ಚಾಪ್ಲುತಂ ತೋಯೇ ಸಾಗರೇ ಸಾಗರೋಪಮಮ್ ।
ಪ್ರವಿಷ್ಟಮಾಶ್ರಮಪದಂ ಪೂರ್ವಮೇವ ದದರ್ಶ ಸಃ ॥೨೩॥

ಅಸಿತೋ ದೇವಲಃ ಶ್ರೀಮಾನ್ ಚಿಂತಯಾಮಾಸ ಬುದ್ಧಿಮಾನ್ ।
ದೃಷ್ಟ್ವಾ ಪ್ರಭಾವಂ ತಪಸೋ ಜೈಗೀಷವ್ಯಸ್ಯ ಯೋಗಜಮ್ ॥೨೪॥

ಚಿಂತಯಾಮಾಸ ರಾಜೇಂದ್ರ ತಂ ತದಾ ಮುನಿಸತ್ತಮಃ ।
ಮಯಾ ದೃಷ್ಟಃ ಸಮುದ್ರೇ ಚ ಆಶ್ರಮೇ ಚ ಕಥಂ ನ್ವಯಮ್ ॥೨೫॥

ಸಮುದ್ರದ ಹಾಗೆ ಅಗಾಧವಾದ ಪ್ರಭಾವವನ್ನು ಹೊಂದಿದ ಜೈಗೀಷವ್ಯಮುನಿಯು ಸಮುದ್ರದ ನೀರಲ್ಲಿ ಸ್ನಾನವನ್ನು ಮಾಡಿ ತನಗಿಂತಲೂ ಮೊದಲೇ ಆಶ್ರಮಕ್ಕೆ ಬಂದಿದ್ದುದನ್ನು ಕಂಡನು. ಬುದ್ಧಿವಂತನಾದ ಅಸಿತ ದೇವಲನು ಮುನಿಯ ಯೋಗದಿಂದ ಉಂಟಾದ ತಪಸ್ಸಿನ ಸಾಮರ್ಥ್ಯವನ್ನು ಕಂಡು ಹೀಗೆ ಆಲೋಚಿಸಿದನು: ಈ ಮುನಿಯನ್ನು ಸಮುದ್ರದಲ್ಲಿಯೂ ಆಶ್ರಮದಲ್ಲಿಯೂ ನೋಡಿದೆನು. ಇದು ಹೇಗೆ ಸಾಧ್ಯವಾಯಿತು? ಎಂದು.

ಏವಂ ವಿಗಣಯನ್ನೇವ ಸ ಮುನಿರ್ಮಂತ್ರಪಾರಗಃ ।
ಉತ್ಪಪಾತಾಶ್ರಮಾತ್ ತಸ್ಮಾದಂತರಿಕ್ಷಂ ವಿಶಾಂಪತೇ ॥೨೬॥

ಜಿಜ್ಞಾಸಾರ್ಥಂ ತದಾ ಭಿಕ್ಷೋರ್ಜೈಗೀಷವ್ಯಸ್ಯ ದೇವಲಃ ।
ಸೋಽಂತರಿಕ್ಷೇಣ ತಾನ್ ಸಿದ್ಧಾನ್ ಸಮಪಶ್ಯತ್ ಸಮಾಗತಾನ್ ॥೨೭॥

ರಾಜನೇ! ಮಂತ್ರಸಿದ್ಧಿಯನ್ನು ಹೊಂದಿದ್ದ ದೇವಲಮುನಿಯು ಹೀಗೆ ಆಲೋಚಿಸಿ ಜೈಗೀಷವ್ಯಮುನಿಯ ಬಗ್ಗೆ ತಿಳಿದುಕೊಳ್ಳಲಿಕ್ಕಾಗಿ ಆಶ್ರಮದಿಂದ ಆಕಾಶಕ್ಕೆ ಜಿಗಿದನು. ಆಕಾಶದಲ್ಲಿ ಹೋಗುತ್ತಾ ಅಲ್ಲಿಗೆ ಬಂದ ಆ ಸಿದ್ಧಪುರುಷರನ್ನು ನೋಡಿದನು.

ಜೈಗೀಷವ್ಯಂ ಚ ತೈಃ ಸಿದ್ಧೈಃ ಪೂಜ್ಯಮಾನಮಪಶ್ಯತ ।
ನ ವ್ಯಾಹರತ ಚೈವೈನಂ ಜೈಗೀಷವ್ಯಃ ಕಥಂಚನ ॥೨೮॥

ಅಲ್ಲಿ ಸಿದ್ಧಪುರುಷರು ಜೈಗೀಷವ್ಯಮುನಿಯನ್ನು ಪೂಜಿಸುತ್ತಿರುವುದನ್ನು ಕಂಡನು. ಆದರೆ ಬಂದ ದೇವಲನನ್ನು ಜೈಗೀಷವ್ಯಮುನಿಯು ಸ್ವಲ್ಪವೂ ಮಾತನಾಡಿಸಲಿಲ್ಲ.

ತತೋಽಸಿತಃ ಸುಸಂರಬ್ಧೋ ವ್ಯವಸಾಯೀ ದೃಢವ್ರತಃ ।
ಅಪಶ್ಯದ್ ವೈ ದಿವಂ ಯಾತಂ ಜೈಗೀಷವ್ಯಂ ಸ ದೇವಲಃ ॥೨೯॥

ಅನಂತರ ಬಹಳ ವ್ರತಗಳನ್ನಾಚರಿಸುತ್ತಿದ್ದ ದೇವಲನು ದೃಢನಿಶ್ಚಯವನ್ನು ಮಾಡಿಕೊಂಡನು. ದೇವಲನು ಸ್ವರ್ಗಕ್ಕೆ ಹೋಗುತ್ತಿದ್ದ ಜೈಗೀಷವ್ಯಮುನಿಯನ್ನು ನೋಡಿದನು.

ತಸ್ಮಾಚ್ಚ ಪಿತೃಲೋಕಂ ತಂ ವ್ರಜಂತಂ ಸೋಽನ್ವಪಶ್ಯತ ॥೩೦॥

ಅಲ್ಲಿಂದ ಪಿತೃಲೋಕಕ್ಕೆ ಹೋಗುತ್ತಿದ್ದ ಮುನಿಯನ್ನೂ ನೋಡಿದನು.

ತಸ್ಮಾದಾದಿತ್ಯಲೋಕಂ ಚ ವ್ರಜಂತಂ ಸೋಽನ್ವಪಶ್ಯತ ॥೩೧॥

ಅಲ್ಲಿಂದ ಆದಿತ್ಯಲೋಕಕ್ಕೆ ಹೋಗುತ್ತಿದ್ದ ಜೈಗೀಷವ್ಯಮುನಿಯನ್ನು ನೋಡಿದನು.

ತಸ್ಮಾದಭಿಸಮುತ್ಪ್ಲುತ್ಯ ಸೋಮಲೋಕಮಭಿಷ್ಟುತಮ್ ।
ವ್ರಜಂತಮನ್ವಪಶ್ಯತ್ ತಂ ಜೈಗೀಷವ್ಯಂ ಸ ದೇವಲಃ ॥೩೨॥

ಅಲ್ಲಿಂದ ಜೈಗೀಷವ್ಯಮುನಿಯು ಸಮೃದ್ಧವಾದ ಸೋಮಲೋಕಕ್ಕೆ (ಚಂದ್ರಲೋಕ) ಹಾರಿ ಹೋಗುತ್ತಿದ್ದುದನ್ನು ನೋಡಿದನು.

ಲೋಕಾನ್ ಸಮುತ್ಪತಂತಂ ಚ ಶುಭಾನೇಕಾಗ್ನಿಯಾಜಿನಾಮ್ ॥೩೩॥

ಅಗ್ನಿಯಲ್ಲಿ ಹೋಮಮಾಡಿ ಹೋಗುವವರ ಅನೇಕ ಶುಭಲೋಕಗಳಿಗೆ ಹಾರಿಹೋಗುತ್ತಿದ್ದುದನ್ನು ನೋಡಿದನು.

ಅಗ್ನಿಷ್ಟೋಮೇನ ಚ ತಥಾ ಯೇ ಯಜಂತಿ ತಪೋಧನಾಃ ।
ತತ್ಸ್ಥಾನಮನುಸಂಪ್ರಾಪ್ತಮನ್ವಪಶ್ಯತ ದೇವಲಃ ॥೩೪॥

ಅಗ್ನಿಷ್ಟೋಮಯಾಗದಿಂದ ತಪಸ್ವಿಗಳು ಯಜ್ಞವನ್ನು ಮಾಡಿ ಯಾವ ಲೋಕವನ್ನು ಹೊಂದುವರೋ ಆ ಲೋಕಗಳಿಗೆ ಹೋಗುತ್ತಿರುವುದನ್ನು ನೋಡಿದನು.

ವಾಜಪೇಯಂ ಕ್ರತುವರಂ ತಥಾ ಬಹುಸುವರ್ಣಕಮ್ ।
ಆಹರನ್ ಯೇ ಮಹಾಪ್ರಾಜ್ಞಾಸ್ತೇಷಾಂ ಲೋಕೇಷ್ವಪಶ್ಯತ ॥೩೫॥

ಬಹಳ ಸಂಪತ್ತನ್ನು ಸಂಗ್ರಹಿಸಿಕೊಂಡು ವಾಜಪೇಯ ಎಂಬ ಉತ್ತಮ ಯಾಗವನ್ನು ಯಾವ ಮಹಾಜ್ಞಾನಿಗಳು ಮಾಡುವರೋ ಅವರು ಹೋಗುವ ಲೋಕಗಳಲ್ಲಿ ಈ ಜೈಗೀಷವ್ಯಮುನಿಯನ್ನು ನೋಡಿದನು.

ಯಜಂತೇ ಪೌಂಡರೀಕೇಣ ರಾಜಸೂಯೇನ ಚೈವ ಯೇ ।
ತೇಷಾಂ ಲೋಕೇಷ್ವಪಶ್ಯಚ್ಚ ಜೈಗೀಷವ್ಯಂ ಸ ದೇವಲಃ ॥೩೬॥

ಪುಂಡರೀಕಯಾಗವನ್ನು ಮಾಡಿ, ರಾಜಸೂಯಯಾಗವನ್ನು ಮಾಡಿ ಯಾವ ಲೋಕವನ್ನು ಹೊಂದುವರೋ ಆ ಲೋಕಗಳಲ್ಲಿ ಜೈಗೀಷವ್ಯಮುನಿಯನ್ನು ದೇವಲನು ನೋಡಿದನು.

ದ್ವಾದಶಾಹೈಶ್ಚ ಸತ್ರೈಶ್ಚ ಯಜಂತೇ ವಿವಿಧೈರ್ನೃಪ ।
ತೇಷಾಂ ಲೋಕೇಷ್ವಪಶ್ಯಚ್ಚ ಜೈಗೀಷವ್ಯಂ ಸ ದೇವಲಃ ॥೩೭॥

ರಾಜನೇ! ಹನ್ನೆರಡು ದಿನಗಳಲ್ಲಿ ನಡೆಯುವ ವಿವಿಧ ಯಾಗಗಳನ್ನು ಮಾಡಿ ಯಾವ ಲೋಕವನ್ನು ಪಡೆಯುತ್ತಾರೆಯೋ ಆ ಲೋಕಗಳಲ್ಲಿ ಜೈಗೀಷವ್ಯಮುನಿಯನ್ನು ನೋಡಿದನು.

ಮೈತ್ರಾವರುಣಯೋರ್ಲೋಕಾನ್ ಆದಿತ್ಯಾನಾಂ ತಥೈವ ಚ ।
ಸಲೋಕತಾಮನುಪ್ರಾಪ್ತಮಪಶ್ಯತ ತತೋಽಸಿತಃ ॥೩೮॥

ಮೈತ್ರಾ-ವರುಣಿಗಳ ಲೋಕವನ್ನು, ಆದಿತ್ಯರ ಲೋಕವನ್ನು ಹೊಂದಿದ ಜೈಗೀಷವ್ಯಮುನಿಯನ್ನು ದೇವಲನು ನೋಡಿದನು.

ರುದ್ರಾಣಾಂ ಚ ವಸೂನಾಂ ಚ ಸ್ಥಾನಂ ಯಚ್ಚ ಬೃಹಸ್ಪತೇಃ ।
ತಾನಿ ಸರ್ವಾಣ್ಯತೀತಂ ಚ ತಮಪಶ್ಯತ್ ತತೋಽಸಿತಃ ॥೩೯॥

ಜೈಗೀಷವ್ಯಮುನಿಯು ರುದ್ರರ, ಆದಿತ್ಯರ ಹಾಗೂ ಬೃಹಸ್ಪತಿಯ ಲೋಕಗಳನ್ನೂ ದಾಟಿ ಮುಂದೆ ಹೋಗುತ್ತಿದ್ದುದನ್ನು ದೇವಲನು ನೋಡಿದನು.

ಆರುಹ್ಯ ಚ ಗವಾಂ ಲೋಕಂ ಪ್ರಶಾಂತಂ ಬ್ರಹ್ಮಸತ್ರಿಣಾಮ್ ।
ಲೋಕಾನಪಶ್ಯದ್ ಗಚ್ಛಂತಂ ಜೈಗೀಷವ್ಯಂ ತತೋಽಸಿತಃ ॥೪೦॥

ಅನಂತರ ಬ್ರಹ್ಮಯಾಗವನ್ನು ಮಾಡಿದವರು ಹೊಂದುವ ಪ್ರಶಾಂತವಾದ ಗೋಲೋಕಗಳಿಗೆ ಹೋಗುತ್ತಿದ್ದ ಜೈಗೀಷವ್ಯಮುನಿಯನ್ನು ಅಸಿತನು ನೋಡಿದನು.

ತ್ರೀಲ್ಲೋಕಾನ್ ಪ್ರವರಾನ್ ವಿಪ್ರಮುತ್ತಂತಂ ಸ್ವತೇಜಸಾ ।
ಪತಿವ್ರತಾನಾಂ ಲೋಕಾಂಶ್ಚ ವ್ರಜಂತಂ ಸೋಽನ್ವಪಶ್ಯತ ॥೪೧॥

ಜೈಗೀಷವ್ಯಮುನಿಯು ತನ್ನ ತಪಸ್ಸಿನ ಪ್ರಭಾವದಿಂದ ಮೂರು ಲೋಕಗಳಿಗೆ ಹೋಗುತ್ತಿರುವುದನ್ನು ನೋಡಿದನು. ಪತಿವ್ರತಾಸ್ತ್ರೀಯರು ಹೊಂದುವ ಲೋಕಕ್ಕೆ ಜೈಗೀಷವ್ಯಮುನಿಯು ಹೋಗುವುದನ್ನೂ ನೋಡಿದನು.

ತದಾ ಮುನಿವರಂ ಭೂಯೋ ಜೈಗೀಷವ್ಯಂ ತಥಾಽಸಿತಃ ।
ನಾನ್ವಪಶ್ಯತ ಯೋಗಸ್ಥಂ ಜೈಗೀಷವ್ಯಮರಿಂದಮ ॥೪೨॥

ಶತ್ರುಸಂಹಾರಕನೇ! ಆಗ ಯೋಗಾರೂಢನಾದ ಜೈಗೀಷವ್ಯಮುನಿಯನ್ನು ದೇವಲನು ಕಾಣದಾದನು.

ಸೋಽಚಿಂತಯನ್ಮಹಾಭಾಗೋ ಜೈಗೀಷವ್ಯಸ್ಯ ದೇವಲಃ ।
ಪ್ರಭಾವಂ ಸುವ್ರತತ್ವಂ ಚ ಸಿದ್ಧಿಂ ಯೋಗಸ್ಯ ಚಾತುಲಾಮ್ ॥೪೩॥

ಮಹಾತ್ಮನಾದ ಅಸಿತ ದೇವಲನು ಜೈಗೀಷವ್ಯಮುನಿಯ ತಪಸ್ಸಿನ ಪ್ರಭಾವವನ್ನೂ, ಒಳ್ಳೆಯ ವ್ರತಾಚರಣೆಯನ್ನೂ, ಅಸದೃಶವಾದ ಯೋಗಸಿದ್ಧಿಯನ್ನೂ ಮನಗಂಡನು.

ಅಸಿತೋಽಪೃಚ್ಛತ ತದಾ ಸಿದ್ಧಾಲ್ಲೋಕೇಷು ಸತ್ತಮಾನ್ ।
ಪ್ರಯತಃ ಪ್ರಾಂಜಲಿರ್ಭೂತ್ವಾ ಧೀರಸ್ತಾನ್ ಬ್ರಹ್ಮಚಾರಿಣಃ ॥೪೪॥

ಆಗ ಧೀರನಾದ ಅಸಿತನು ಕೈಮುಗಿದುಕೊಂಡು, ಆ ಲೋಕಗಳಲ್ಲಿದ್ದ ಬ್ರಹ್ಮಚಾರಿಗಳಾದ ಸಿದ್ಧಪುರುಷರಲ್ಲಿ ಪ್ರಯತ್ನಪೂರ್ವಕವಾಗಿ ಕೇಳಿದನು.

ಜೈಗೀಷವ್ಯಂ ನ ಪಶ್ಯಾಮಿ ತಂ ಶಂಸಂತು ತಪೋಧನಾಃ ।
ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ॥೪೫॥

ತಪಸ್ವಿಗಳೇ! ಜೈಗೀಷವ್ಯಮುನಿಯು ಕಾಣಿಸುತ್ತಿಲ್ಲ. ಅವನು ಎಲ್ಲಿದ್ದಾನೆ ಎಂಬುದನ್ನು ಹೇಳಿರಿ. ಇದನ್ನು ಕೇಳಲು ನಾನು ತುಂಬಾ ಕುತೂಹಲಿಯಾಗಿದ್ದೇನೆ.

ಸಿದ್ಧಾಃ

ಶೃಣು ದೇವಲ ಭೂತಾರ್ಥಂ ಶಂಸತಾಂ ನೋ ದೃಢವ್ರತ ।
ಜೈಗೀಷವ್ಯೋ ಗತೋ ಲೋಕಂ ಶಾಶ್ವತಂ ಬ್ರಹ್ಮಣೋಽಕ್ಷಯಮ್ ॥೪೬॥

ಸಿದ್ಧರು– ದೃಢವ್ರತವುಳ್ಳ ದೇವಲನೇ! ಲೋಕದ ಪ್ರಾಣಿಗಳ ಹಿತಕ್ಕಾಗಿ ಹೇಳುತ್ತಿರುವ ನಮ್ಮ ಮಾತನ್ನು ಕೇಳು. ಜೈಗೀಷವ್ಯಮುನಿಯು ನಾಶರಹಿತವಾದ, ಶಾಶ್ವತವಾದ ಬ್ರಹ್ಮಲೋಕಕ್ಕೆ ಹೋಗಿರುತ್ತಾನೆ.

ವೈಶಂಪಾಯನಃ

ಶ್ರುತ್ವಾ ತು ವಚನಂ ತೇಷಾಂ ಸಿದ್ಧಾನಾಂ ಬ್ರಹ್ಮಚಾರಿಣಾಮ್ ।
ಅಸಿತೋ ದೇವಲಸ್ತೂರ್ಣಮುತ್ಪಪಾತ ದ್ರುತಂ ತದಾ ॥೪೭॥

ವೈಶಂಪಾಯನ– ಬ್ರಹ್ಮಚಾರಿಗಳಾದ ಸಿದ್ಧರ ಮಾತನ್ನು ಕೇಳಿದ ದೇವಲನು ತಕ್ಷಣವೇ ವೇಗವಾಗಿ ಮೇಲಕ್ಕೆ ಹಾರಿದನು.

ತತಃ ಸಿದ್ಧಾಸ್ತ ಊಚುಸ್ತಂ ದೇವಲಂ ಪುನರೇವ ಹ ॥೪೮॥

ಆಗ ಸಿದ್ಧರು ದೇವಲನಿಗೆ ಮತ್ತೆ ಹೇಳುತ್ತಾರೆ.

ಸಿದ್ಧಾಃ

ನ ದೇವಲಗತಿಸ್ತತ್ರ ತವ ಗಂತುಂ ತಪೋಧನ ।
ಬ್ರಹ್ಮಣಃ ಸದನಂ ವಿಪ್ರ ಜೈಗೀಷವ್ಯೋ ಯದಾಪ್ತವಾನ್ ॥೪೯॥

ಸಿದ್ಧರು– ತಪಸ್ವಿಯೇ! ಜೈಗೀಷವ್ಯಮುನಿಯು ಹೋದ ಬ್ರಹ್ಮನ ಲೋಕಕ್ಕೆ ಅಸಿತ ದೇವಲನು ಹೋಗಲು ಸಾಧ್ಯವಿಲ್ಲ. ಅದು ಅವನ ಗಮನಕ್ಕೆ ಯೋಗ್ಯವಲ್ಲ.

ಜೈಗೀಷವ್ಯಮುನಿಯು ರುದ್ರರ, ಆದಿತ್ಯರ ಹಾಗೂ ಬೃಹಸ್ಪತಿಯ ಲೋಕಗಳನ್ನೂ ದಾಟಿ ಮುಂದೆ ಹೋಗುತ್ತಿದ್ದುದನ್ನು ದೇವಲನು ನೋಡಿದನು.

ಆರುಹ್ಯ ಚ ಗವಾಂ ಲೋಕಂ ಪ್ರಶಾಂತಂ ಬ್ರಹ್ಮಸತ್ರಿಣಾಮ್ ।
ಲೋಕಾನಪಶ್ಯದ್ ಗಚ್ಛಂತಂ ಜೈಗೀಷವ್ಯಂ ತತೋಽಸಿತಃ ॥೪೦॥

ಅನಂತರ ಬ್ರಹ್ಮಯಾಗವನ್ನು ಮಾಡಿದವರು ಹೊಂದುವ ಪ್ರಶಾಂತವಾದ ಗೋಲೋಕಗಳಿಗೆ ಹೋಗುತ್ತಿದ್ದ ಜೈಗೀಷವ್ಯಮುನಿಯನ್ನು ಅಸಿತನು ನೋಡಿದನು.

ತ್ರೀಲ್ಲೋಕಾನ್ ಪ್ರವರಾನ್ ವಿಪ್ರಮುತ್ಪತಂತಂ ಸ್ವತೇಜಸಾ ।
ಪತಿವ್ರತಾನಾಂ ಲೋಕಾಂಶ್ಚ ವ್ರಜಂತಂ ಸೋಽನ್ವಪಶ್ಯತ ॥೪೧॥

ಜೈಗೀಷವ್ಯಮುನಿಯು ತನ್ನ ತಪಸ್ಸಿನ ಪ್ರಭಾವದಿಂದ ಮೂರು ಲೋಕಗಳಿಗೆ ಹೋಗುತ್ತಿರುವುದನ್ನು ನೋಡಿದನು. ಪತಿವ್ರತಾಸ್ತ್ರೀಯರು ಹೊಂದುವ ಲೋಕಕ್ಕೆ ಜೈಗೀಷವ್ಯಮುನಿಯು ಹೋಗುವುದನ್ನೂ ನೋಡಿದನು.

ತದಾ ಮುನಿವರಂ ಭೂಯೋ ಜೈಗೀಷವ್ಯಂ ತಥಾಽಸಿತಃ ।
ನಾನ್ವಪಶ್ಯತ ಯೋಗಸ್ಥಂ ಜೈಗೀಷವ್ಯಮರಿಂದಮ ॥೪೨॥

ಶತ್ರುಸಂಹಾರಕನೇ! ಆಗ ಯೋಗಾರೂಢನಾದ ಜೈಗೀಷವ್ಯಮುನಿಯನ್ನು ದೇವಲನು ಕಾಣದಾದನು.

ಸೋಽಚಿಂತಯನ್ಮಹಾಭಾಗೋ ಜೈಗೀಷವ್ಯಸ್ಯ ದೇವಲಃ ।
ಪ್ರಭಾವಂ ಸುವ್ರತತ್ವಂ ಚ ಸಿದ್ಧಿಂ ಯೋಗಸ್ಯ ಚಾತುಲಾಮ್ ॥೪೩॥

ಮಹಾತ್ಮನಾದ ಅಸಿತ ದೇವಲನು ಜೈಗೀಷವ್ಯಮುನಿಯ ತಪಸ್ಸಿನ ಪ್ರಭಾವವನ್ನೂ, ಒಳ್ಳೆಯ ವ್ರತಾಚರಣೆಯನ್ನೂ, ಅಸದೃಶವಾದ ಯೋಗಸಿದ್ಧಿಯನ್ನೂ ಮನಗಂಡನು.

ಅಸಿತೋಽಪೃಚ್ಛತ ತದಾ ಸಿದ್ಧಾಲ್ಲೋಕೇಷು ಸತ್ತಮಾನ್ ।
ಪ್ರಯತಃ ಪ್ರಾಂಜಲಿರ್ಭೂತ್ವಾ ಧೀರಸ್ತಾನ್ ಬ್ರಹ್ಮಚಾರಿಣಃ ॥೪೪॥

ಆಗ ಧೀರನಾದ ಅಸಿತನು ಕೈಮುಗಿದುಕೊಂಡು, ಆ ಲೋಕಗಳಲ್ಲಿದ್ದ ಬ್ರಹ್ಮಚಾರಿಗಳಾದ ಸಿದ್ಧಪುರುಷರಲ್ಲಿ ಪ್ರಯತ್ನಪೂರ್ವಕವಾಗಿ ಕೇಳಿದನು.

ಜೈಗೀಷವ್ಯಂ ನ ಪಶ್ಯಾಮಿ ತಂ ಶಂಸಂತು ತಪೋಧನಾಃ ।
ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ॥೪೫॥

ತಪಸ್ವಿಗಳೇ! ಜೈಗೀಷವ್ಯಮುನಿಯು ಕಾಣಿಸುತ್ತಿಲ್ಲ. ಅವನು ಎಲ್ಲಿದ್ದಾನೆ ಎಂಬುದನ್ನು ಹೇಳಿರಿ. ಇದನ್ನು ಕೇಳಲು ನಾನು ತುಂಬಾ ಕುತೂಹಲಿಯಾಗಿದ್ದೇನೆ.

ಸಿದ್ಧಾಃ

ಶೃಣು ದೇವಲ ಭೂತಾರ್ಥಂ ಶಂಸತಾಂ ನೋ ದೃಢವ್ರತ ।
ಜೈಗೀಷವ್ಯೋ ಗತೋ ಲೋಕಂ ಶಾಶ್ವತಂ ಬ್ರಹ್ಮಣೋಽಕ್ಷಯಮ್ ॥೪೬॥

ಸಿದ್ಧರು– ದೃಢವ್ರತವುಳ್ಳ ದೇವಲನೇ! ಲೋಕದ ಪ್ರಾಣಿಗಳ ಹಿತಕ್ಕಾಗಿ ಹೇಳುತ್ತಿರುವ ನಮ್ಮ ಮಾತನ್ನು ಕೇಳು. ಜೈಗೀಷವ್ಯಮುನಿಯು ನಾಶರಹಿತವಾದ, ಶಾಶ್ವತವಾದ ಬ್ರಹ್ಮಲೋಕಕ್ಕೆ ಹೋಗಿರುತ್ತಾನೆ.

ವೈಶಂಪಾಯನಃ

ಶ್ರುತ್ವಾ ತು ವಚನಂ ತೇಷಾಂ ಸಿದ್ಧಾನಾಂ ಬ್ರಹ್ಮಚಾರಿಣಾಮ್ ।
ಅಸಿತೋ ದೇವಲಸ್ತೂರ್ಣಮುತ್ಪಪಾತ ದ್ರುತಂ ತದಾ ॥೪೭॥

ವೈಶಂಪಾಯನ– ಬ್ರಹ್ಮಚಾರಿಗಳಾದ ಸಿದ್ಧರ ಮಾತನ್ನು ಕೇಳಿದ ದೇವಲನು ತಕ್ಷಣವೇ ವೇಗವಾಗಿ ಮೇಲಕ್ಕೆ ಹಾರಿದನು.

ತತಃ ಸಿದ್ಧಾಸ್ತ ಊಚುಸ್ತಂ ದೇವಲಂ ಪುನರೇವ ಹ ॥೪೮॥

ಆಗ ಸಿದ್ಧರು ದೇವಲನಿಗೆ ಮತ್ತೆ ಹೇಳುತ್ತಾರೆ.

ಸಿದ್ಧಾಃ

ನ ದೇವಲಗತಿಸ್ತತ್ರ ತವ ಗಂತುಂ ತಪೋಧನ ।
ಬ್ರಹ್ಮಣಃ ಸದನಂ ವಿಪ್ರ ಜೈಗೀಷವ್ಯೋ ಯದಾಪ್ತವಾನ್ ॥೪೯॥

ಸಿದ್ಧರು– ತಪಸ್ವಿಯೇ! ಜೈಗೀಷವ್ಯಮುನಿಯು ಹೋದ ಬ್ರಹ್ಮನ ಲೋಕಕ್ಕೆ ಅಸಿತ ದೇವಲನು ಹೋಗಲು ಸಾಧ್ಯವಿಲ್ಲ. ಅದು ಅವನ ಗಮನಕ್ಕೆ ಯೋಗ್ಯವಲ್ಲ.

ವೈಶಂಪಾಯನಃ

ತೇಷಾಂ ತದ್ವಚನಂ ಶ್ರುತ್ವಾ ಸಿದ್ಧಾನಾಂ ದೇವಲಸ್ತದಾ ।
ಆನುಪೂರ್ವ್ಯೇಣ ಲೋಕಾಂಸ್ತಾನ್ ಸರ್ವಾನವತತಾರ ಚ ॥೫೦॥

ವೈಶಂಪಾಯನ– ಆಗ ದೇವಲನು ಅವರ ಮಾತನ್ನು ಕೇಳಿ, ಎಲ್ಲಾ ಲೋಕಗಳಿಂದಲೂ ಕ್ರಮವಾಗಿ ಇಳಿದು ಬಂದನು.

ಸ್ವಂ ಚಾಶ್ರಮಪದಂ ಪುಣ್ಯಮಾಜಗಾಮ ಪತಂಗವತ್ ।
ಪ್ರವಿಶನ್ನೇವ ಚಾಪಶ್ಯತ್ ಜೈಗೀಷವ್ಯಂ ಸ ದೇವಲಃ ॥೫೧॥

ಚಿಟ್ಟೆಯ ಹಾಗೆ ಹಾರಿ ತನ್ನ ಪುಣ್ಯವಾದ ಆಶ್ರಮಕ್ಕೆ ಬಂದನು. ತನ್ನ ಆಶ್ರಮಕ್ಕೆ ಪ್ರವೇಶ ಮಾಡುತ್ತಲೇ ದೇವಲನು ಜೈಗೀಷವ್ಯ ಮುನಿಯನ್ನು ಕಂಡನು.

ತತೋ ಬುದ್ಧ್ಯಾ ವ್ಯಗಣಯದ್ ದೇವಲೋ ಧರ್ಮಯುಕ್ತಯಾ ।
ದೃಷ್ಟ್ವಾ ಪ್ರಭಾವಂ ತಪಸೋ ಜೈಗೀಷವ್ಯಸ್ಯ ಯೋಗಜಮ್ ॥೫೨॥

ಆಗ ದೇವಲನು ಜೈಗೀಷವ್ಯಮುನಿಯ ಯೋಗದಿಂದುಂಟಾದ ತಪಸ್ಸಿನ ಸಾಮರ್ಥ್ಯದ ಬಗ್ಗೆ ಧರ್ಮದ ಹಿನ್ನೆಲೆಯುಳ್ಳ ಬುದ್ಧಿಯಿಂದ ಆಲೋಚಿಸಿದನು.

ತತೋಽಬ್ರವೀನ್ಮಹಾತ್ಮಾನಂ ಜೈಗೀಷವ್ಯಂ ಸ ದೇವಲಃ ।
ವಿನಯಾವನತೋ ರಾಜನ್ನುವಾಚ ಸುಮಹಾತಪಾಃ ॥೫೩॥

ಅನಂತರ ಮಹಾತಪಸ್ವಿಯಾದ ದೇವಲನು ವಿನಯದಿಂದ ತಲೆಬಾಗಿ ಜೈಗೀಷವ್ಯಮುನಿಗೆ ಹೀಗೆ ಹೇಳುತ್ತಾನೆ.

ದೇವಲಃ

ಮೋಕ್ಷಧರ್ಮಂ ಸಮಾಸ್ಥಾತುಮಿಚ್ಛೇಯಂ ಭಗವನ್ನಹಮ್ ॥೫೪॥

ದೇವಲ– ಪೂಜ್ಯನೇ! ನಾನು ಮೋಕ್ಷಧರ್ಮವನ್ನು ಆಚರಿಸಲು ಇಷ್ಟಪಡುತ್ತೇನೆ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಉಪದೇಶಂ ಚಕಾರ ಸಃ ।
ವಿಧಿಂ ಯೋಗಸ್ಯ ಪರಮಂ ಕಾರ್ಯಾಕಾರ್ಯಂ ಚ ಸರ್ವಶಃ ॥೫೫॥

ಅವನ ಮಾತನ್ನು ಕೇಳಿದ ಆ ಜೈಗೀಷವ್ಯಮುನಿಯು ಅವನಿಗೆ ಯೋಗದ ವಿಧಿಯನ್ನು, ಮಾಡಬೇಕಾದ ಮತ್ತು ಮಾಡಬಾರದ ಕಾರ್ಯಗಳೆಲ್ಲವನ್ನೂ ಉಪದೇಶ ಮಾಡಿದನು.

ಸನ್ನ್ಯಾಸೇ ಕೃತಬುದ್ಧಿಂ ತಂ ತತೋ ದೃಷ್ಟ್ವಾ ಮಹಾತಪಾಃ ।
ಸರ್ವಾಶ್ಚಾಸ್ಯ ಕ್ರಿಯಾಶ್ಚಕ್ರೇ ವಿಧಿದೃಷ್ಟೇನ ಕರ್ಮಣಾ ॥೫೬॥

ಸನ್ಯಾಸಸ್ವೀಕರಿಸಲು ನಿಶ್ಚಯಿಸಿಕೊಂಡಿದ್ದ ದೇವಲನನ್ನು ನೋಡಿ ಮಹಾತಪಸ್ವಿಯಾದ ಜೈಗೀಷವ್ಯಮುನಿಯು ಅವನಿಗೆ ಶಾಸ್ತ್ರವಿಧಿಗಳು ವಿಧಿಸಿದ ಎಲ್ಲಾ ಕ್ರಿಯೆಗಳನ್ನು ಮಾಡಿದನು.

ಸನ್ನ್ಯಾಸೇ ಕೃತಬುದ್ಧಿಂ ತಂ ಭೂತಾನಿ ಪಿತೃಭಿಃ ಸಹ ।
ತತೋ ದೃಷ್ಟ್ವಾ ಪ್ರರುರುದುಃ ಕೋಽಸ್ಮಾನ್ ಸಂವಿಭಜಿಷ್ಯತಿ ॥೫೭॥

ಸನ್ಯಾಸವನ್ನು ಸ್ವೀಕರಿಸಲು ನಿಶ್ಚಯಿಸಿಕೊಂಡ ದೇವಲನನ್ನು ನೋಡಿ ಪಿತೃಗಳನ್ನೊಳಗೊಂಡ ಎಲ್ಲಾ ಜೀವರು ಜೋರಾಗಿ ಅಳತೊಡಗಿದರು. ಮುಂದೆ ದೇವ-ಪಿತೃಕಾರ್ಯಗಳಿಂದ ವಿಭಾಗಮಾಡಿ, ನಮ್ಮನ್ನು ಯಾರು ಪೂಜಿಸುತ್ತಾರೆ ಎಂಬುದಾಗಿ ಚಿಂತಾಮಗ್ನರಾದರು.

ತೇಷಾಮೇವ ತದಾ ಶ್ರುತ್ವಾ ದುಃಖಾರ್ತಾನಾಂ ಸ ದೇವಲಃ ।
ದಿಶೋ ದಶ ವ್ಯಾಹರತಾಂ ಮೋಕ್ಷಂ ತ್ಯಕ್ತುಂ ಮನೋ ದಧೇ ॥೫೮॥

ಆಗ ಹತ್ತುದಿಕ್ಕುಗಳಲ್ಲಿಯೂ ಹೀಗೆ ದುಃಖಿಸುತ್ತಾ ಮಾತನಾಡುತ್ತಿದ್ದ ಜೀವರನ್ನು ನೋಡಿದ ದೇವಲನು ಮೋಕ್ಷವನ್ನು ಬಿಡಲು ನಿಶ್ಚಯಿಸಿಕೊಂಡನು.

ತತಸ್ತು ಫಲಮೂಲಾನಿ ಪತಿತಾನಿ ಚ ಭಾರತ ।
ಪುಷ್ಪಾಣ್ಯೋಷಧಯಶ್ಚೈವ ರೋರೂಯಂತೇ ಸಹಸ್ರಶಃ ॥೫೯॥

ಪುನರ್ನೋ ದೇವಲಃ ಕ್ಷುದ್ರೋ ನೂನಂ ಛೇತ್ಸ್ಯತಿ ದುರ್ಮತಿಃ ।
ಅಭಯಂ ಸರ್ವಭೂತೇಭ್ಯೋ ಯೋ ದತ್ತ್ವಾ ನಾವಬುಧ್ಯತೇ ॥೬೦॥

ಭರತಕುಲೋದ್ಭವನೇ! ಆಗ ಕೆಳಗೆ ಬಿದ್ದ ಹಣ್ಣುಗಳು, ಗೆಡ್ಡೆಗಳು, ಪುಷ್ಪಗಳು ಎಲ್ಲವೂ ಸಾವಿರಾರು ಸಂಖ್ಯೆಯಲ್ಲಿ ಮತ್ತೆ ಮತ್ತೆ ಅಳತೊಡಗಿದವು. ಅಳುತ್ತಾ ಅವು ಹೀಗೆ

ಮಾತನಾಡಿಕೊಳ್ಳುತ್ತಿದ್ದವು- ಕೆಟ್ಟ ಬುದ್ಧಿಯ ಈ ಕ್ಷುದ್ರ ದೇವಲನು ಎಲ್ಲಾ ಜೀವರಿಗೆ ಅಭಯದಾನವನ್ನು ಮಾಡಿ, ಈಗ ನಿಶ್ಚಯವಾಗಿ ನಮ್ಮನ್ನು ನಾಶಮಾಡುತ್ತಾನೆ. ತಾನು ಕೊಟ್ಟ ಅಭಯದಾನವನ್ನು ತಾನೇ ಸ್ಮರಿಸಿಕೊಳ್ಳುವುದಿಲ್ಲ.

ತತೋ ಭೂಯೋ ವ್ಯಗಣಯತ್ ಸ್ವಬುದ್ಧ್ಯಾ ಮುನಿಸತ್ತಮಃ ।
ಮೋಕ್ಷೇ ಗಾರ್ಹಸ್ಥ್ಯಧರ್ಮೇ ವಾ ಕಿಂ ನು ಶ್ರೇಯಸ್ಕರಂ ಭವೇತ್ ॥

ಅನಂತರ ಮುನಿಶ್ರೇಷ್ಠನಾದ ದೇವಲನು ಮೋಕ್ಷ ಮತ್ತು ಗೃಹಸ್ಥಧರ್ಮಗಳಲ್ಲಿ ತನಗೆ ಶ್ರೇಯಸ್ಸನ್ನು ಉಂಟುಮಾಡುವಂತಹದ್ದು ಯಾವುದು ಎಂಬುದನ್ನು ವಿಚಾರ ಮಾಡಿದನು.

ಇತಿ ಸಂಚಿಂತ್ಯ ಬಹುಧಾ ದೇವಲೋ ರಾಜಸತ್ತಮ ।
ತ್ಯಕ್ತ್ವಾ ಗಾರ್ಹಸ್ಥ್ಯಧರ್ಮಂ ತು ಮೋಕ್ಷಧರ್ಮಮರೋಚಯತ್ ॥೬೨॥

ರಾಜಶ್ರೇಷ್ಠನೇ! ದೇವನು ಹೀಗೆ ಅನೇಕ ರೀತಿಯಲ್ಲಿ ಆಲೋಚಿಸಿ ಗೃಹಸ್ಥ ಧರ್ಮವನ್ನು ಪರಿತ್ಯಾಗಮಾಡಿ ಮೋಕ್ಷಧರ್ಮವನ್ನೇ ಇಷ್ಟಪಟ್ಟನು.

ಏವಮಾದೀನಿ ಸಂಚಿಂತ್ಯ ದೇವಲೋ ನಿಶ್ಚಯಾನ್ವಿತಃ ।
ಪ್ರಾಪ್ತವಾನ್ ಪರಮಾಂ ಸಿದ್ಧಿಂ ಪರಂ ಯೋಗಂ ಚ ಭಾರತ ॥೬೩॥

ಭರತಕುಲೋದ್ಭವನೇ! ಹೀಗೆ ಅನೇಕ ರೀತಿಯಲ್ಲಿ ವಿಚಾರಮಾಡಿ ನಿಶ್ಚಯಕ್ಕೊಳಗಾದ ದೇವಲನು ಉತ್ತಮವಾದ ಯೋಗವನ್ನೂ, ಉತ್ತಮವಾದ ಸಿದ್ಧಿಯನ್ನೂ ಪಡೆದನು.

ತತೋ ದೇವಾಃ ಸಮಾಗತ್ಯ ಬೃಹಸ್ಪತಿಪುರೋಗಮಾಃ ।
ಜೈಗೀಷವ್ಯಂ ತಪಸ್ಯಂತಂ ಪ್ರಶಶಂಸುರ್ಮನೀಷಿಣಃ ॥೬೪॥

ಆಗ ಬೃಹಸ್ಪತಿಮೊದಲಾದ ದೇವತೆಗಳು ಬಂದು ತಪಸ್ಸನ್ನಾಚರಿಸುತ್ತಿದ್ದ ಜೈಗೀಷವ್ಯ ಮುನಿಯನ್ನು ಹೊಗಳಿದರು.

ಅಥಾಬ್ರವೀದ್ ಋಷಿವರೋ ದೇವಾನ್ ವೈ ನಾರದಸ್ತಥಾ ।
ಜೈಗೀಷವ್ಯೇ ತಪೋ ನಾಸ್ತಿ ವಿಸ್ಮಾಪಯತಿ ಸೋಽಸಿತಮ್ ॥೬೫॥

ಆಗ ಜ್ಞಾನಿಶ್ರೇಷ್ಠನಾದ ನಾರದನು ಹೇಳುತ್ತಾನೆ : ಜೈಗೀಷವ್ಯನಲ್ಲಿ ತಪಸ್ಸೇ ಇಲ್ಲ! ತನ್ನ ತಪಸ್ಸಿನಿಂದ ಅಸಿತದೇವಲನನ್ನು ಆಶ್ಚರ್ಯಪಡುವಂತೆ ಮಾಡಿದನು ಎಂದು.

ತಮೇವಂವಾದಿನಂ ವೀರಂ ಪ್ರತ್ಯೂಚುಸ್ತ್ರಿದಿವೌಕಸಃ ।
ಮೈವಮಿತ್ಯೇವ ಶಂಸಂತೋ ಜೈಗೀಷವ್ಯಂ ಮಹಾಮುನಿಮ್ ॥೬೬॥

ಏವಂಪ್ರಭಾವೋ ಧರ್ಮಾತ್ಮಾ ಜೈಗೀಷವ್ಯಸ್ತಥಾऽಸಿತಃ ।
ತಯೋರಿದಂ ಸ್ಥಾನವರಂ ತೀರ್ಥಂ ಚೈವ ಮಹಾತ್ಮನೋಃ ॥೬೭॥

ದೇವತೆಗಳು ಜೈಗೀಷವ್ಯಮುನಿಯನ್ನು ಹೊಗಳುತ್ತಾ, ಹೀಗೆ ಹೇಳುತ್ತಿದ್ದ ನಾರದನಿಗೆ ಉತ್ತರಿಸುತ್ತಾರೆ: '' ಜೈಗೀಷವ್ಯಮುನಿ ಮತ್ತು ಅಸಿತದೇವಲರಿಬ್ಬರೂ ಧಾರ್ಮಿಕರು. ಅವರಿಬ್ಬರಿಗೂ ಸಂಬಂಧಿಸಿಕೊಂಡಿರುವ ಈ ತೀರ್ಥಕ್ಷೇತ್ರವು ಬಹಳ ಪ್ರಸಿದ್ಧವಾಗಿದೆ''.

ತತ್ರಾಪ್ಯುಪಸ್ಪೃಶ್ಯ ತತೋ ಮಹಾತ್ಮಾ
ದತ್ತ್ವಾ ಚ ವಿತ್ತಂ ಹಲಭೃತ್ ದ್ವಿಜೇಭ್ಯಃ ।
ಅವಾಪ್ಯ ಧರ್ಮಂ ಪರಮಾರ್ಥಕರ್ಮಾ
ಜಗಾಮ ಸೋಮಸ್ಯ ಮಹತ್ ಸ ತೀರ್ಥಮ್ ॥೬೮॥

ಆ ತೀರ್ಥದಲ್ಲಿಯೂ ಮಹಾತ್ಮನಾದ ಹಲಧಾರಿ ಬಲರಾಮನು ಸ್ನಾನಾದಿಗಳನ್ನು ಮಾಡಿ, ಬ್ರಾಹ್ಮಣರಿಗೆ ವಿಪುಲವಾದ ಸಂಪತ್ತನ್ನು ದಾನ ಮಾಡಿದನು. ಪಾರಮಾರ್ಥಿಕ ಕ್ರಿಯೆಗಳನ್ನು ಆಚರಿಸುತ್ತಾ ಇದ್ದ ಬಲರಾಮನು ಧರ್ಮವನ್ನು ಸಂಪಾದಿಸಿಕೊಂಡು ಅಲ್ಲಿಂದ ಉತ್ತಮವಾದ ಸೋಮತೀರ್ಥಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ಜೈಗೀಷವ್ಯಾಸಿತಚರಿತಂ ನಾಮ ಏಕವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ದಧೀಚಿ ಮತ್ತು ಸಾರಸ್ವತರ ಚರಿತ್ರೆಗಳ ವರ್ಣನೆ

ವೈಶಂಪಾಯನಃ

ಯತ್ರೇಜಿವಾನುಡುಪತೀ ರಾಜಸೂಯೇನ ಭಾರತ ।
ತಸ್ಮಿನ್ ಸತ್ರೇ ಮಹಾನಾಸೀತ್ ಸಂಗ್ರಾಮಸ್ತಾರಕಾಮಯಃ ॥೧॥

ವೈಶಂಪಾಯನ– ಭರತಕುಲೋದ್ಭವನೇ! ಯಾವ ತೀರ್ಥದಲ್ಲಿ ಚಂದ್ರನು ರಾಜಸೂಯಯಾಗವನ್ನು ಮಾಡಿದ್ದನೋ, ಆ ತೀರ್ಥದಲ್ಲಿ ನಕ್ಷತ್ರಗಳಲ್ಲಿ ಬಹಳ ಮಹತ್ತರವಾದ ಸಂಗ್ರಾಮವು ನಡೆಯಿತು.

ತತಸ್ತತ್ರಾಪ್ಲುಪಸ್ಪೃಶ್ಯ ದತ್ತ್ವಾ ದಾನಾನಿ ಚಾತ್ಮವಾನ್ ।
ಸಾರಸ್ವತಸ್ಯ ಧರ್ಮಾತ್ಮಾ ಮುನೇಸ್ತೀರ್ಥಂ ಜಗಾಮ ಸಃ ॥೨॥

ಸ್ವರೂಪಬಲವುಳ್ಳ ಧಾರ್ಮಿಕನಾದ ಬಲರಾಮನು ಅಲ್ಲಿಯೂ ಸ್ನಾನಾದಿಗಳನ್ನು ಮಾಡಿ, ದಾನಾದಿಗಳನ್ನು ಕೊಟ್ಟು ಮುಂದೆ ಸಾರಸ್ವತ ತೀರ್ಥಕ್ಕೆ ಹೋದನು.

ಯತ್ರ ದ್ವಾದಶವಾರ್ಷಿಕ್ಯಾಮನಾವೃಷ್ಟ್ಯಾಂ ಮಹಾಯಶಾಃ ।
ವೇದಾನಧ್ಯಾಪಯಾಮಾಸ ತದಾ ಸಾರಸ್ವತೋ ಮುನಿಃ ॥೩॥

ಆ ಸಾರಸ್ವತತೀರ್ಥದಲ್ಲಿ ಹನ್ನೆರಡು ವರ್ಷಗಳ ಕಾಲ ಮಳೆಬರದೆ ಇದ್ದ ಸಂದರ್ಭದಲ್ಲಿ ಮಹಾತ್ಮನಾದ ಸಾರಸ್ವತ ಮುನಿಯು ವೇದಗಳನ್ನು ಉಪದೇಶಿಸಿದನು.

ಜನಮೇಜಯಃ

ಕಥಂ ದ್ವಾದಶವಾರ್ಷಿಕ್ಯಾಮನಾವೃಷ್ಟ್ಯಾಂ ದ್ವಿಜೋತ್ತಮಾನ್ ।
ವೇದಾನಧ್ಯಾಪಯಾಮಾಸ ತದಾ ಸಾರಸ್ವತೋ ಮುನಿಃ ॥೪॥

ಜನಮೇಜಯ– ಹನ್ನೆರಡು ವರ್ಷಗಳ ಕಾಲ ಮಳೆ ಬರದಿರಬೇಕಾದರೆ ಆಗ ಸಾರಸ್ವತಮುನಿಯು ಹೇಗೆ ಬ್ರಾಹ್ಮಣರಿಗೆ ವೇದವನ್ನು ಹೇಳಿಕೊಟ್ಟನು?

ವೈಶಂಪಾಯನಃ

ಆಸೀತ್ ಪೂರ್ವಂ ಮಹಾರಾಜ ಮುನಿರ್ಧೀಮಾನ್ ದ್ವಿಜೋತ್ತಮಃ ।
ದಧೀಚಿರಿತಿ ವಿಖ್ಯಾತೋ ಬ್ರಹ್ಮಚಾರೀ ಜಿತೇಂದ್ರಿಯಃ ॥೫॥

ವೈಶಂಪಾಯನ– ಮಹಾರಾಜನೇ! ಹಿಂದೆ ದಧೀಚಿ ಎಂದು ಪ್ರಸಿದ್ಧನಾದ ಬುದ್ಧಿವಂತನಾದ ಬ್ರಾಹ್ಮಣೋತ್ತಮನು ಇದ್ದನು. ಅವನು ಬ್ರಹ್ಮಚಾರಿಯಾಗಿದ್ದುಕೊಂಡು ಇಂದ್ರಿಯನಿಗ್ರಹವನ್ನು ಹೊಂದಿದ್ದನು.

ತಸ್ಯಾತಿತಪಸಃ ಶಕ್ರೋ ಬಿಭೇತಿ ಸತತಂ ವಿಭೋ ।
ನ ಚ ಲೋಭಯಿತುಂ ಶಕ್ಯಃ ಫಲೈರ್ಬಹುವಿಧೈರಪಿ ॥೬॥

ವಿಭುವೇ! ಅವನ ತೀವ್ರವಾದ ತಪಸ್ಸಿನಿಂದಾಗಿ ಇಂದ್ರನು ಯಾವಾಗಲೂ ಭಯಗ್ರಸ್ತನಾದನು. ಯಾವುದೇ ವಿಧದ ಫಲಗಳಿಂದಲೂ ದಧೀಚಿಮುನಿಯನ್ನು ಲೋಭಕ್ಕೊಳಪಡಿಸಲು ಇಂದ್ರನಿಗೆ ಸಾಧ್ಯವಾಗಲಿಲ್ಲ.

ಪ್ರಲೋಭನಾರ್ಥೇ ತಸ್ಯಾಥ ಪ್ರಾಹಿಣೋತ್ ಪಾಕಶಾಸನಃ ।
ದಿವ್ಯಾಮಪ್ಸರಸಾಂ ಮುಖ್ಯಾಂ ದರ್ಶನೀಯಾಮಲಂಬುಸಾಮ್ ॥೭॥

ಇಂದ್ರನು ಅವನನ್ನು ಪ್ರಲೋಭನೆಗೊಳಪಡಿಸಲಿಕ್ಕಾಗಿ ಅಲೌಕಿಕ ಸುಂದರಳಾದ ಅಲಂಬುಸಾ ಎಂಬ ಮುಖ್ಯ ಅಪ್ಸರಸ್ತ್ರೀಯನ್ನು ಕಳುಹಿಸಿದನು.

ತಸ್ಯ ತರ್ಪಯತೋ ದೇವಾನ್ ಸರಸ್ವತ್ಯಾಂ ಮಹಾತ್ಮನಃ ।
ಸಮೀಪತೋ ಮಹಾರಾಜ ಸೋಪಾತಿಷ್ಠತ ಭಾಮಿನೀ ॥೮॥

ಮಹಾತ್ಮನಾದ ದಧೀಚಿಮುನಿಯು ಸರಸ್ವತೀನದಿಯಲ್ಲಿ ದೇವತೆಗಳಿಗೆ ತರ್ಪಣಕೊಡುತ್ತಿದ್ದ ಸಂದರ್ಭದಲ್ಲಿ ಆ ಸುಂದರ ಅಪ್ಸರಸ್ತ್ರೀಯು ಅವನ ಸಮೀಪಕ್ಕೆ ಬಂದಳು.

ತಾಂ ದಿವ್ಯವಪುಷಂ ದೃಷ್ಟ್ವಾ ತಸ್ಯರ್ಷೇರ್ಭಾವಿತಾತ್ಮನಃ ।
ರೇತಃ ಸ್ಕನ್ನಂ ಸರಸ್ವತ್ಯಾಂ ತತ್ ಸಾ ಜಗ್ರಾಹ ನಿಮ್ನಗಾ ॥೯॥

ಅವಳ ಅಲೌಕಿಕಶರೀರವನ್ನು ನೋಡಿ ಪರಿಪಕ್ವಮನಸ್ಸುಳ್ಳ ಆ ಋಷಿಯ ರೇತಸ್ಸು ಸರಸ್ವತೀನದಿಯಲ್ಲಿ ಬಿದ್ದಿತು. ಅದನ್ನು ಆ ಸರಸ್ವತೀನದಿಯು ಸ್ವೀಕರಿಸಿದಳು.

ಕುಕ್ಷೌ ಚಾಪ್ಯದಧದ್ದಸ್ಯಾ ತದ್ರೇತಃ ಪುರುಷರ್ಷಭ ।
ಸಾ ದಧಾರ ಚ ತಂ ಗರ್ಭಂ ಪುತ್ರಹೇತೋರ್ಮಹಾತ್ಮನಃ ॥೧೦॥

ಪುರುಷಶ್ರೇಷ್ಠನೇ! ಬಿದ್ದ ಆ ರೇತಸ್ಸನ್ನು ನೋಡಿದ ಸರಸ್ವತಿಯು ಅದನ್ನು ತನ್ನ ಹೊಟ್ಟೆಯಲ್ಲಿ ಧರಿಸಿಕೊಂಡಳು. ಮಹಾತ್ಮನಾದ ದಧೀಚಿಗೆ ಪುತ್ರನನ್ನು ಹೊಂದುವುದಕ್ಕಾಗಿ ಸರಸ್ವತಿಯು ಗರ್ಭವತಿಯಾದಳು.

ಸುಷುವೇ ಚಾಪಿ ಸಮಯೇ ಪುತ್ರಂ ಸಾರಸ್ವತಂ ವರಮ್ ।
ಜಗಾಮ ಪುತ್ರಮಾದಾಯ ತಮೃಷಿಂ ಪ್ರತಿ ಚ ಪ್ರಭೋ ॥೧೧॥

ಯೋಗ್ಯವಾದ ಕಾಲದಲ್ಲಿ ಉತ್ತಮವಾದ ಸಾರಸ್ವತ ಎಂಬ ಮಗನನ್ನು ಹಡೆದಳು. ಪ್ರಭುವೇ! ಮಗುವನ್ನು ಹಿಡಿದುಕೊಂಡು ದಧೀಚಿಋಷಿಯ ಸಮೀಪಕ್ಕೆ ಬಂದಳು.

ಋಷಿಸಂಸದಿ ತಂ ದೃಷ್ಟ್ವಾ ದಧೀಚಿಮೃಷಿಸತ್ತಮಮ್ ।
ತತಃ ಪ್ರೋವಾಚ ರಾಜೇಂದ್ರ ದದತೀ ಪುತ್ರಮಸ್ಯ ವೈ ॥೧೨॥

ಋಷಿಗಳ ಸಭೆಯಲ್ಲಿ ಕುಳಿತಿದ್ದ, ಋಷಿಶ್ರೇಷ್ಠನಾದ ದಧೀಚಿಯನ್ನು ನೋಡಿ ಅವನಿಗೆ ಮಗನನ್ನು ಕೊಡುತ್ತಾ ಹೀಗೆ ಹೇಳಿದಳು.

ಸರಸ್ವತೀ ನದೀ

ಬ್ರಹ್ಮರ್ಷೇ ತವ ಪುತ್ರೋಽಯಂ ತ್ವದ್ಭಕ್ತ್ಯಾ ಧಾರಿತೋ ಮಯಾ ॥೧೩॥

ಸರಸ್ವತೀನದಿ– ಬ್ರಹ್ಮಜ್ಞಾನಿಯೇ! ಇವನು ನಿನ್ನ ಮಗ. ನಿನ್ನ ಮೇಲಿನ ಭಕ್ತಿಯಿಂದಾಗಿ ನಾನು ನನ್ನ ಗರ್ಭದಲ್ಲಿ ಧರಿಸಿಕೊಂಡಿದ್ದೆನು.

ದೃಷ್ಟ್ವಾ ತೇಽಪ್ಸರಸಂ ರೇತೋ ಯತ್ ಸ್ಕನ್ನಂ ಪ್ರಾಗಲಂಬುಸಾಮ್ ।
ತತ್ ಕುಕ್ಷಿಣಾಽಹಂ ಬ್ರಹ್ಮರ್ಷೇ ಭಕ್ತ್ಯಾ ಧೃತವತೀ ತವ ॥೧೪॥

ಅಲಂಬುಸಾ ಅಪ್ಸರಸ್ತ್ರೀಯನ್ನು ನೋಡಿ ನಿನ್ನಿಂದ ರೇತಸ್ಖಲನವಾದುದನ್ನು ನೋಡಿ ಆ ರೇತಸ್ಸನ್ನು ನಿನ್ನ ಮೇಲಿನ ಭಕ್ತಿಯಿಂದ ನಾನು ನನ್ನ ಹೊಟ್ಟೆಯಲ್ಲಿ ಧರಿಸಿದೆ.

ನ ವಿನಾಶಮಿದಂ ಗಚ್ಛೇತ್ ತತ್ತೇಜ ಇತಿ ನಿಶ್ಚಯಾತ್ ॥೧೫॥

ನಿನ್ನ ತೇಜಸ್ಸು ನಾಶವಾಗಬಾರದು ಎಂಬುದೇ ನನ್ನ ನಿಶ್ಚಯವಾಗಿತ್ತು.

ಪ್ರತಿಗೃಹ್ಣೀಷ್ವ ಪುತ್ರಂ ಸ್ವಂ ಮಯಾ ದತ್ತಮನಿಂದಿತಮ್ ॥೧೬॥

ಯಾವುದೇ ಕಳಂಕವಿಲ್ಲದ ಈ ಮಗನನ್ನು ನಾನು ಕೊಡುತ್ತಿದ್ದೇನೆ. ಸ್ವೀಕರಿಸು.

ವೈಶಂಪಾಯನಃ

ಇತ್ಯುಕ್ತಃ ಪ್ರತಿಜಗ್ರಾಹ ಪ್ರೀತಿಂ ಚಾವಹದುತ್ತಮಾಮ್ ।
ಪಿತೃವಚ್ಚೋಪಜಿಘ್ರತ್ ತಂ ಮೂರ್ಧ್ನಿ ಪ್ರೇಮ್ಣಾ ದ್ವಿಜೋತ್ತಮಃ ॥೧೭॥

ವೈಶಂಪಾಯನ– ಹೀಗೆ ಹೇಳಿದಾಗ ದಧೀಚಿಯು ಮಗನನ್ನು ಸ್ವೀಕರಿಸಿದನು ಮತ್ತು ಬಹಳ ಆನಂದವನ್ನು ಹೊಂದಿದನು. ಬ್ರಾಹ್ಮಣೋತ್ತಮನಾದ ಆ ಋಷಿಯು, ತಂದೆಯು ಮಗನ ನೆತ್ತಿಯನ್ನು ಆಘ್ರಾಣಿಸುವಂತೆ ತಾನೂ ಈ ಮಗನ ತಲೆಯನ್ನು ಮೂಸಿದನು.

ಪರಿಷ್ವಜ್ಯ ಚಿರಂ ಕಾಲಂ ತದಾ ಭರತಸತ್ತಮ ।
ಸರಸ್ವತ್ಯೈ ವರಂ ಪ್ರಾದಾತ್ ಪ್ರೀಯಮಾಣೋ ದ್ವಿಜೋತ್ತಮಃ ॥೧೮॥

ಭರತಕುಲಶ್ರೇಷ್ಠನೇ! ತುಂಬ ಹೊತ್ತಿನವರೆಗೆ ಆ ಮಗನನ್ನು ಆಲಿಂಗಿಸಿ, ಬಹಳವಾಗಿ ಸಂತೋಷಪಟ್ಟು ಸರಸ್ವತೀನದಿಗೆ ವರವನ್ನು ಕೊಟ್ಟನು.

ದಧೀಚಃ

ವಿಶ್ವೇ ದೇವಾಃ ಸಪಿತರೋ ಗಂಧರ್ವಾಪ್ಸರಸಾಂ ಗಣಾಃ ।
ತೃಪ್ತಿಂ ಯಾಸ್ಯಂತಿ ಸುಭಗೇ ತರ್ಪ್ಯಮಾಣಾಸ್ತ್ವದಂಭಸಾ ॥೧೯॥

ದಧೀಚಿ– ಭಾಗ್ಯವಂತಳೇ! ನಿನ್ನ ನೀರಿನಿಂದ ತರ್ಪಣವನ್ನು ಸ್ವೀಕರಿಸಿ ವಿಶ್ವೇದೇವತೆಗಳು, ಪಿತೃಗಳು, ಗಂಧರ್ವರು, ಅಪ್ಸರಸ್ತ್ರೀಯರು ಇವರೆಲ್ಲರೂ ತೃಪ್ತರಾಗಲಿ.

ವೈಶಂಪಾಯನಃ

ಇತ್ಯುಕ್ತ್ವಾ ತಾಂ ಸ ತುಷ್ಟಾವ ವಚೋಭಿರ್ವಿವಿಧೈಸ್ತದಾ ।
ಪ್ರೀತಃ ಪರಮಹೃಷ್ಟಾತ್ಮಾ ಯಥಾವಚ್ಛೃಣು ಪಾರ್ಥಿವ ॥೨೦॥

ವೈಶಂಪಾಯನ– ಸರಸ್ವತಿಗೆ ಹೀಗೆ ಹೇಳಿ, ಮನಸ್ಸಿನಲ್ಲಿ ತುಂಬಾ ಸಂತೋಷವನ್ನು ಹೊಂದಿದ ಮುನಿಯು ವಿವಿಧ ಮಾತುಗಳಿಂದ ಅವಳನ್ನು ಸ್ತುತಿಸಿದನು.

ದಧೀಚಃ

ಪ್ರಸ್ರುತಾऽಸಿ ಮಹಾಭಾಗೇ ಸರಸೋ ಬ್ರಹ್ಮಣಃ ಪುರಾ ।
ಜಾನಂತಿ ತ್ವಾಂ ಸರಿಚ್ಶ್ರೇಷ್ಠೇ ಮುನಯಃ ಸಂಶಿತವ್ರತಾಃ ॥೨೧॥

ದಧೀಚಿ– ಮಹಾಭಾಗ್ಯವಂತಳೇ! ನೀನು ಹಿಂದೆ ಬ್ರಹ್ಮಸರೋವರದಿಂದ ಹರಿದು ಬಂದವಳಾಗಿರುವಿ. ನದಿಗಳಲ್ಲಿ ಶ್ರೇಷ್ಠಳಾದವಳೇ, ಕಠಿಣವ್ರತದೀಕ್ಷಿತರಾದ ಮುನಿಗಳು ನಿನ್ನ ಬಗ್ಗೆ ತಿಳಿದುಕೊಂಡಿದ್ದಾರೆ.

ಮಮ ಪ್ರಿಯಕರೀ ಚಾಪಿ ಸತತಂ ಪ್ರಿಯದರ್ಶನೇ ।
ತಸ್ಮಾತ್ ಸಾರಸ್ವತಂ ಪುತ್ರಮದಧಾ ವರವರ್ಣಿನಿ ॥೨೨॥

ಮನೋಹರದರ್ಶನವುಳ್ಳವಳೇ! ಯಾವಾಗಲೂ ನನಗೆ ಪ್ರಿಯವಾದುದನ್ನು ಮಾಡುತ್ತಿರುವಿ. ಉತ್ತಮವರ್ಣವುಳ್ಳವಳೇ (ಸುಂದರಿಯೇ)! ಆದುದರಿಂದಲೇ ನೀನು ನನಗೆ ಮಗನನ್ನು ಕೊಟ್ಟಿರುವಿ.

ತವೈವ ನಾಮ್ನಾ ಪ್ರಥಿತಃ ಪುತ್ರಸ್ತೇ ಲೋಕಭಾವನಃ ।
ಸಾರಸ್ವತ ಇತಿ ಖ್ಯಾತೋ ಭವಿಷ್ಯತಿ ಮಹಾತಪಾಃ ॥೨೩॥

ಲೋಕಪ್ರಸಿದ್ಧನಾದ ನಿನ್ನ ಮಗನು ನಿನ್ನ ಹೆಸರಿನಿಂದಲೇ ಸಾರಸ್ವತ ಎಂಬ ಹೆಸರಿನಿಂದ ಪ್ರಸಿದ್ಧನಾಗುವನು ಮತ್ತು ಮಹಾತಪಸ್ವಿಯೂ ಆಗುವನು.

ಏಷ ದ್ವಾದಶವಾರ್ಷಿಕ್ಯಾಮನಾವೃಷ್ಟ್ಯಾಂ ದ್ವಿಜೋತ್ತಮಾನ್ ।
ಸಾರಸ್ವತೋ ಮಹಾಭಾಗೇ ವೇದಾನಧ್ಯಾಪಯಿಷ್ಯತಿ ॥೨೪॥

ಮಹಾಭಾಗ್ಯವಂತಳೇ! ಇವನು ಮುಂದೆ ಹನ್ನೆರಡುವರ್ಷಗಳ ಬರಗಾಲ ಬಂದಾಗ ಬ್ರಾಹ್ಮಣರಿಗೆ ವೇದಾಧ್ಯಯನವನ್ನು ಮಾಡಿಸುವನು.

ಪುಣ್ಯಾಭ್ಯಶ್ಚ ಸರಿದ್ಭ್ಯಸ್ತ್ವಂ ಮತಾ ಪುಣ್ಯತಮಾ ಶುಭೇ ।
ಭವಿಷ್ಯಸಿ ಮಹಾಭಾಗೇ ಮತ್ಪ್ರಸಾದಾತ್ ಸರಸ್ವತಿ ॥೨೫॥

ಮಹಾಭಾಗಳೇ! ಸರಸ್ವತಿಯೇ! ನನ್ನ ಅನುಗ್ರಹದಿಂದ ನೀನು ಪುಣ್ಯನದಿಗಳಲ್ಲೆಲ್ಲಾ ಅತ್ಯಂತ ಪುಣ್ಯತಮಳು ಆಗುವಿ.

ವೈಶಂಪಾಯನಃ

ಏವಂ ಸಾ ಸಂಸ್ತುತಾ ತೇನ ವರಂ ಲಬ್ಧ್ವಾ ಮಹಾನದೀ ।
ಪುತ್ರಮಾದಾಯ ಮುದಿತಾ ಜಗಾಮ ಭರತರ್ಷಭ ॥೨೬॥

ವೈಶಂಪಾಯನ– ಭರತೋತ್ತಮನೇ! ಮುನಿಯು ಹೀಗೆ ಅವಳನ್ನು ಸ್ತುತಿಮಾಡಿ ವರವನ್ನು ಕೊಟ್ಟಾಗ, ಮಹಾನದಿಯಾದ ಸರಸ್ವತಿಯು ಮಗನನ್ನು ತೆಗೆದುಕೊಂಡು ಸಂತೋಷದಿಂದ ಹೋದಳು.

ಏತಸ್ಮಿನ್ನೇವ ಕಾಲೇ ತು ವಿರೋಧೇ ದೇವದಾನವೈಃ ।
ಶಕ್ರಃ ಪ್ರಹರಣಾನ್ವೇಷೀ ತ್ರೀನ್ ಲೋಕಾನ್ ವಿಚಚಾರ ಹ ॥೨೭॥

ಇದೇ ಸಮಯದಲ್ಲಿ ದೇವತೆಗಳು ಮತ್ತು ದೈತ್ಯರಿಗೆ ವಿರೋಧವುಂಟಾದ್ದರಿಂದ ಇಂದ್ರನು ಯೋಗ್ಯವಾದ ಆಯುಧವನ್ನು ಹುಡುಕುತ್ತಾ, ಮೂರು ಲೋಕಗಳಲ್ಲಿ ಸಂಚರಿಸಿದನು.

ನ ಚೋಪಲೇಭೇ ಭಗವಾನ್ ಶಕ್ರಃ ಪ್ರಹರಣಂ ತದಾ ।
ಯದ್ಧ್ವಿ ತೇಷಾಂ ಭವೇದ್ಯೋಗಂ ವಧಾಯ ವಿಬುಧದ್ವಿಷಾಮ್ ॥೨೮॥

ಭಗವಾನ್ ಇಂದ್ರನು ಆಯುಧವನ್ನು ಹೊಂದಲಿಲ್ಲ. ಆಯುಧವಿದ್ದರೇನೇ ಅವನಿಗೆ ತನ್ನ ಶತ್ರುಗಳನ್ನು ಸದೆಬಡಿಯಬಹುದಿತ್ತು.

ತತೋಽಬ್ರವೀತ್ ಸುರಾನ್ ಶಕ್ರೋ ನ ಮೇ ಶಕ್ಯಾಃ ಸುರಾರಯಃ ।
ಋತೇಽಸ್ಥಿಭಿರ್ದಧೀಚಸ್ಯ ನಿಹಂತುಂ ದೇವಸತ್ತಮಾಃ ॥೨೯॥

ಆಗ ಇಂದ್ರನು ದೇವತೆಗಳನ್ನು ಕುರಿತು ಹೀಗೆ ಹೇಳುತ್ತಾನೆ: ''ದೇವೋತ್ತಮರೇ! ದಧೀಚಮುನಿಯ ಅಸ್ಥಿಗಳು ಸಿಕ್ಕಲಿಲ್ಲವಾದರೆ ನನಗೆ ದೈತ್ಯರನ್ನು ಕೊಲ್ಲಲು ಸಾಧ್ಯವಾಗುವುದಿಲ್ಲ.

ತಸ್ಮಾದ್ ಯತ್ನಾದ್ ಋಷಿಶ್ರೇಷ್ಠೋ ಯಾಚ್ಯತಾಂ ಕಾರ್ಯಸಿದ್ಧಯೇ ।
ದಧೀಚಾಸ್ಥೀನಿ ದೇಹೀತಿ ತೈರ್ವಧಿಷ್ಯೇ ರಣೇ ರಿಪೂನ್ ॥೩೦॥

ಆದ್ದರಿಂದ ನಮ್ಮ ಕಾರ್ಯಸಾಧನೆಗಾಗಿ ಪ್ರಯತ್ನಪೂರ್ವಕವಾಗಿ ದಧೀಚಮುನಿಯನ್ನು ''ದಧೀಚಮುನಿಯೇ! ನಿನ್ನ ದೇಹದ ಎಲುಬುಗಳನ್ನು ಕೊಡು'' ಎಂದು ಬೇಡಬೇಕು. ಆ ಎಲುಬುಗಳಿಂದ ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುವೆನು''.

ಸ ದೇವೈರ್ಯಾಚಿತೋಽಸ್ಥೀನಿ ಯತ್ನಾದ್ ಋಷಿವರಸ್ತದಾ ।
ಪ್ರಾಣತ್ಯಾಗಂ ಕುರುಶ್ರೇಷ್ಠ ಚಕಾರೈವಾವಿಚಾರಯನ್ ॥೩೧॥

''ನಮಗೆ ಸಹಾಯವನ್ನು ಮಾಡು'' ಎಂದು ದೇವತೆಗಳು ಬೇಡಿಕೊಂಡಾಗ ದಧೀಚಮುನಿಯು ಯಾವುದೇ ವಿಚಾರವನ್ನು ಮಾಡದೆ ತನ್ನ ಪ್ರಾಣವನ್ನು ಬಿಟ್ಟನು.

ಸ ಲೋಕಾನಕ್ಷಯಾನ್ ಪ್ರಾಪ್ತೋ ದೇವಪ್ರಿಯಕರಸ್ತದಾ ।
ತಸ್ಯಾಸ್ಥೀನಿ ತತಃ ಶಕ್ರಃ ಸಂಪ್ರಹೃಷ್ಟಮನಾಸ್ತದಾ ॥೩೨॥

ಕಾರಯಾಮಾಸ ದಿವ್ಯಾನಿ ತದಾ ಪ್ರಹರಣಾನ್ಯುತ ।
ವಜ್ರಾಣಿ ಚ ಗದಾಶ್ಚೈವ ಗುರೂನ್ ದಂಡಾಂಶ್ಚ ಪುಷ್ಕಲಾನ್ ॥೩೩॥

ದೇವತೆಗಳಿಗೆ ಪ್ರಿಯವಾದುದನ್ನು ಮಾಡಿದುದರ ಫಲವಾಗಿ ಅವನು ನಾಶವಾಗದ ಅಕ್ಷಯಲೋಕಗಳನ್ನು ಹೊಂದುತ್ತಾನೆ. ಸಂತುಷ್ಟನಾದ ಇಂದ್ರನು ದಧೀಚಮುನಿಯ ಎಲುಬುಗಳಿಂದ ವಜ್ರ, ಭಾರವಾದ ಗದೆ, ಸಮೃದ್ಧವಾದ ದಂಡ ಮೊದಲಾದ ಆಯುಧಗಳನ್ನು ಮಾಡಿಸಿಕೊಳ್ಳುತ್ತಾನೆ.

ಸ ಹಿ ತೀವ್ರೇಣ ತಪಸಾ ಸಂವೃತ್ತಃ ಪರಮರ್ಷಿಣಾ ।
ಪ್ರಜಾಪತಿಸುತೇನಾಥ ಭೃಗುಣಾ ಲೋಕಭಾವನಃ ॥೩೪॥

ಅತಿಕಾಯಃ ಸ ತೇಜಸ್ವೀ ಲೋಕಸಾರೋ ವಿನಿರ್ಮಿತಃ ।
ಜಜ್ಞೇ ಶೈಲಗುರುಃ ಪ್ರಾಂಶುರ್ಮಹಿಮ್ನಾ ಪ್ರಥಿತಃ ಪ್ರಭುಃ ॥೩೫॥

ನಿತ್ಯಮುದ್ವಿಜತೇ ಚಾಸ್ಯ ತೇಜಸಾ ಪಾಕಶಾಸನಃ ॥೩೬॥

ಆ ದಧೀಚನಾದರೂ ಮಹಾತಪಸ್ಸಿನಿಂದ ಕೂಡಿದ, ಬ್ರಹ್ಮಪುತ್ರನಾದ ಭೃಗುವಿನಿಂದ ಜನಿಸಿದವನು. ಲೋಕಕ್ಕೆ ಕ್ಷೇಮವನ್ನು ಉಂಟುಮಾಡುವವನಾಗಿದ್ದನು. ವಿಶಾಲವಾದ ಶರೀರವನ್ನು ಹೊಂದಿದ್ದನು. ಸಕಲಲೋಕಗಳ ಸಾರವು ಒಂದೆಡೆ ಸೇರಿ ಇವನು

ಜನಿಸಿದಂತಿತ್ತು. ಪರ್ವತದಂತೆ ಭಾರವಾಗಿದ್ದನು ಮತ್ತು ಎತ್ತರವಾದ ಶರೀರವನ್ನು ಪಡೆದಿದ್ದನು. ತನ್ನ ಮಹಿಮೆಯಿಂದಾಗಿ ಲೋಕದಲ್ಲಿ ಪ್ರಸಿದ್ಧನಾಗಿದ್ದನು. ಅವನ ತೇಜಸ್ಸಿನಿಂದಾಗಿ ಇಂದ್ರನು ಯಾವಾಗಲೂ ಉದ್ವೇಗಕ್ಕೆ ಒಳಗಾಗುತ್ತಿದ್ದನು.

ತೇನ ವಜ್ರೇಣ ಭಗವಾನ್ ಮಂತ್ರಯುಕ್ತೇನ ಭಾರತ ।
ವಿಚಕರ್ತ ವಿಸೃಷ್ಟೇನ ಬ್ರಹ್ಮತೇಜೋದ್ಭವೇನ ಚ ॥೩೭॥

ದೈತ್ಯದಾನವವೀರಾಣಾಂ ಜಘಾನ ನವತೀರ್ನವ ॥೩೮॥

ಹೀಗೆ ಬ್ರಹ್ಮತೇಜಸ್ಸಿನಿಂದ ಹುಟ್ಟಿದ ಹಾಗೂ ಇಂದ್ರನಿಂದ ಮಂತ್ರೋಚ್ಚಾರಣಪೂರ್ವಕವಾಗಿ ಪ್ರಯೋಗಿಸಲ್ಪಟ್ಟ ವಜ್ರಾಯುಧದಿಂದ ಎಂಟುನೂರ ಹತ್ತು ದೈತ್ಯ-ದಾನವವೀರರನ್ನು ಕೊಂದನು.

ಅಥ ಕಾಲೇ ವ್ಯತಿಕ್ರಾಂತೇ ಮಹತ್ಯತಿಭಯಂಕರೀ ।
ಅನಾವೃಷ್ಟಿರನುಪ್ರಾಪ್ತಾ ರಾಜನ್ ದ್ವಾದಶವಾರ್ಷಿಕೀ ॥೩೯॥

ರಾಜನೇ! ಹೀಗೆ ಕಾಲವು ಕಳೆದುಹೋದಾಗ ಅತಿಭಯಂಕರವಾದ ಹನ್ನೆರಡು ವರ್ಷಗಳ ಬರಗಾಲವು ಬಂದೊದಗಿತು.

ತಸ್ಯಾಂ ದ್ವಾದಶವಾರ್ಷಿಕ್ಯಾಮನಾವೃಷ್ಟ್ಯಾಂ ಮಹರ್ಷಯಃ ।
ವೃತ್ತ್ಯರ್ಥಂ ಪ್ರಾದ್ರವನ್ ರಾಜನ್ ಕ್ಷುಧಾರ್ತಾಃ ಸರ್ವತೋದಿಶಃ ॥೪೦॥

ರಾಜನೇ! ಆ ಹನ್ನೆರಡುವರ್ಷಗಳ ಬರಗಾಲದಲ್ಲಿ ಹಸಿದ ಮಹರ್ಷಿಗಳು ತಮ್ಮ ಜೀವನೋಪಾಯವನ್ನು ಹುಡುಕುತ್ತಾ ಎಲ್ಲಾ ದಿಕ್ಕುಗಳಿಗೂ ಓಡತೊಡಗಿದರು.

ದಿಗ್ಭ್ಯಸ್ತಾನ್ ಪ್ರದ್ರುತಾನ್ ದೃಷ್ಟ್ವಾ ಮುನಿಃ ಸಾರಸ್ವತಸ್ತದಾ ।
ಗಮನಾಯ ಮನಶ್ಚಕ್ರೇ ತಂ ಪ್ರೋವಾಚ ಸರಸ್ವತೀ ॥೪೧॥

ಎಲ್ಲಾ ದಿಕ್ಕುಗಳಲ್ಲಿ ಓಡುತ್ತಿದ್ದ ಆ ಮುನಿಗಳನ್ನು ನೋಡಿದ ಸಾರಸ್ವತ ಮುನಿಯು ತಾನೂ ಕೂಡ ಹೋಗಲು ಇಚ್ಛಿಸಿದನು. ಆಗ ಸರಸ್ವತಿಯು ಅವನಿಗೆ ಹೀಗೆ ಹೇಳುತ್ತಾಳೆ.

ನ ಗಂತವ್ಯಮಿತಃ ಪುತ್ರ ತವಾಹಾರಮಹಂ ಸದಾ ।
ದಾಸ್ಯಾಮಿ ಮತ್ಸ್ಯಪ್ರವರಾನ್ ಉಷ್ಯತಾಮಿತಿ ಭಾರತ ॥೪೨॥

ಮಗನೇ! ನೀನು ಇಲ್ಲಿಂದ ಹೋಗುವುದು ಬೇಡ. ನಿನಗೆ ನಾನು ಆಹಾರವನ್ನು ಯಾವಾಗಲೂ ಕೊಡುವೆನು. ನಿನಗೆ ತಿನ್ನಲು ಒಳ್ಳೆಯ ಮೀನುಗಳನ್ನು ಕೊಡುವೆನು. ನೀನು ಇಲ್ಲಿಯೇ ವಾಸಮಾಡು, ಎಂದು.

ಇತ್ಯುಕ್ತಸ್ತರ್ಪಯಾಮಾಸ ಸ ಪಿತ್ರ್ಯಾನ್ ದೇವತಾಸ್ತಥಾ ।
ಆಹಾರಮಕರೋನ್ನಿತ್ಯಂ ಪ್ರಾಣಾನ್ ವೇದಾಂಶ್ಚ ಧಾರಯನ್ ॥೪೩॥

ಹೀಗೆ ಹೇಳಿದಾಗ, ಸಾರಸ್ವತಮುನಿಯು ಪಿತೃದೇವತೆಗಳನ್ನು ನಿತ್ಯದಲ್ಲಿಯೂ ತೃಪ್ತಿಪಡಿಸುತ್ತಾ, ತನ್ನ ಆಹಾರವನ್ನು ಸಂಪಾದಿಸಿಕೊಂಡು ಪ್ರಾಣವನ್ನೂ, ವೇದಗಳನ್ನೂ ರಕ್ಷಿಸಿ ಧರಿಸಿಕೊಂಡನು.

ಅಥ ತಸ್ಯಾಮತೀತಾಯಾಮನಾವೃಷ್ಟ್ಯಾಂ ಮಹರ್ಷಯಃ ।
ಅನ್ಯೋನ್ಯಂ ಪರಿಪಪ್ರಚ್ಛುಃ ಪುನಃ ಸ್ವಾಧ್ಯಾಯಕಾರಣಾತ್ ॥೪೪॥

ಅನಂತರ ಆ ಬರಗಾಲವು ಮುಗಿದುಹೋಗಲು ದೇವತೆಗಳು ಪುನಃ ತಮ್ಮ ಅಧ್ಯಯನದ ಬಗ್ಗೆ ಪರಸ್ಪರವಾಗಿ ಕೇಳಿಕೊಂಡರು.

ತೇಷಾಂ ಕ್ಷುಧಾಪರೀತಾನಾಂ ನಷ್ಟಾ ವೇದಾ ವಿಧಾವತಾಮ್ ।
ಸರ್ವೇಷಾಮೇವ ರಾಜೇಂದ್ರ ನ ಕಿಂಚಿತ್ ಪ್ರತಿಭಾತಿ ಹ ॥೪೫॥

ರಾಜೇಂದ್ರನೇ! ಹಸಿವಿನಿಂದ ಕಂಗೆಟ್ಟು ಓಡುತ್ತಿದ್ದ ಅವರಲ್ಲಿ ಇದ್ದ ವೇದಗಳು ನಾಶವಾಗಿದ್ದವು. ಅವರಿಗೆ ಯಾವುದೂ ಸ್ಮರಣೆಗೆ ಬರಲಿಲ್ಲ.

ಅಥ ಕಶ್ಚಿದ್ ಋಷಿಸ್ತೇಷಾಂ ಸಾರಸ್ವತಮುಪೇಯಿವಾನ್ ।
ಕುರ್ವಾಣಂ ಸಂಶಿತಾತ್ಮಾನಂ ಸ್ವಾಧ್ಯಾಯಂ ಮುನಿಪುಂಗವಮ್ ॥೪೬॥

ಅನಂತರ ಯಾವನೋ ಒಬ್ಬ ಋಷಿಯು ಸಾರಸ್ವತಮುನಿಯ ಸಮೀಪಕ್ಕೆ ಬಂದನು. ಮುನಿಶ್ರೇಷ್ಠನಾದ ಸಾರಸ್ವತಮುನಿಯು ಆಗ ವ್ರತದೀಕ್ಷಿತನಾಗಿ ಸ್ವಾಧ್ಯಾಯವನ್ನು ಮಾಡುತ್ತಿದ್ದನು.

ಸ ಗತ್ವಾऽऽಚಷ್ಟ ತೇಭ್ಯಶ್ಚ ಸಾರಸ್ವತಮಿತಿ ಪ್ರಭುಮ್ ।
ಸ್ವಾಧ್ಯಾಯಮಮರಪ್ರಖ್ಯಂ ಕುರ್ವಾಣಂ ವಿಜನೇ ವನೇ ॥೪೭॥

ಆ ಋಷಿಯು ಉಳಿದ ಋಷಿಗಳಿಗೆ, ದೇವತುಲ್ಯವಾದ ಕಾಂತಿಯುಳ್ಳ ಸಾರಸ್ವತಮುನಿಯು ನಿರ್ಜನಪ್ರದೇಶದಲ್ಲಿ ಸ್ವಾಧ್ಯಾಯವನ್ನು ಮಾಡುತ್ತಿರುವ ಬಗ್ಗೆ ಹೇಳಿದನು.

ತತಃ ಸರ್ವೇ ಸಮಾಜಗ್ಮುಸ್ತತ್ರ ರಾಜನ್ ಮಹರ್ಷಯಃ ।
ಸಾರಸ್ವತಂ ಮುನಿಶ್ರೇಷ್ಠಮಿದಮೂಚುಃ ಸಮಾಗತಾಃ ॥೪೮॥

ಅಸ್ಮಾನಧ್ಯಾಪಯಸ್ವೇತಿ ತಾನುವಾಚ ತತೋ ಮುನಿಃ ।
ಶಿಷ್ಯತ್ವಮುಪಗಚ್ಛಧ್ವಂ ವಿಧಿನಾ ಚ ಮಮೇತ್ಯುತ ॥೪೯॥

ರಾಜನೇ! ಆನಂತರ ಎಲ್ಲಾ ಋಷಿಗಳು ಅಲ್ಲಿಗೆ ಬಂದರು. ಬಂದ ಎಲ್ಲಾ ಋಷಿಗಳು ಸಾರಸ್ವತಮುನಿಗೆ ನಮಗೂ 'ಅಧ್ಯಯನವನ್ನು ಮಾಡಿಸು' ಎಂದು ಹೇಳಿದರು. ಆಗ ಸಾರಸ್ವತಮುನಿಯು ಅವರಿಗೆ 'ವಿಧಿವಿಹಿತಕ್ರಮದಲ್ಲಿ ನನ್ನ ಶಿಷ್ಯತ್ವವನ್ನು ಸ್ವೀಕರಿಸಿ' ಎಂದು ಹೇಳಿದನು.

ತತೋಽಬ್ರವೀದ್ ಋಷಿಗಣೋ ಬಾಲಸ್ತ್ವಮಸಿ ಪುತ್ರಕ ।
ಸ ತಾನಾಹ ನ ಮೇ ಧರ್ಮೋ ನಶ್ಯೇದಿತಿ ತತೋ ಮುನೀನ್ ॥೫೦॥

ಆಗ ಋಷಿಗಳು ಅವನಿಗೆ 'ಬಾಲಕನೇ! ನೀನು ಚಿಕ್ಕವನಾಗಿರುವಿ' ಎಂದು ಹೇಳಿದರು. ಆಗ ಸಾರಸ್ವತನು ತನ್ನ ಧರ್ಮವು ನಾಶವಾಗದಿರಲಿ ಎಂಬುದಕ್ಕಾಗಿ ಆ ಮುನಿಗಳಿಗೆ ಹೀಗೆ ಹೇಳುತ್ತಾನೆ.

ಸಾರಸ್ವತಃ

ಯೋ ಹ್ಯಧರ್ಮೇಣ ಗೃಹ್ಣೀಯಾತ್ ಪ್ರಬ್ರೂಯಾದ್ ವಾ ಹ್ಯಧರ್ಮತಃ।
ಮ್ರಿಯೇತೇ ತಾವುಭೌ ಕ್ಷಿಪ್ರಂ ಸ್ಯಾತಾಂ ವಾ ವೈರಿಣಾವುಭೌ ॥೫೧॥

ಸಾರಸ್ವತ– ಯಾರಾದರೂ ಧರ್ಮವಿರುದ್ಧವಾಗಿ ಪಾಠವನ್ನು ಸ್ವೀಕರಿಸುತ್ತಾರೋ, ಯಾರು ಧರ್ಮವಿರುದ್ಧವಾಗಿ ಪಾಠವನ್ನು ಹೇಳಿಕೊಡುತ್ತಾರೆಯೋ ಅವರಿಬ್ಬರು ಕೂಡ ಬೇಗದಲ್ಲಿಯೇ ಸಾಯುತ್ತಾರೆ ಅಥವಾ ಪರಸ್ಪರ ವೈರಿಗಳಾಗುತ್ತಾರೆ.

ನ ಹಾಯನೈರ್ನ ಪಲಿತೈರ್ನ ವಿತ್ತೈರ್ನ ಚ ಬಂಧುಭಿಃ ।
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಃ ಸ ನೋ ಮಹಾನ್ ॥

ವಯಸ್ಸು ಬೆಳೆಯುವುದರಿಂದಾಗಲೀ, ಕೂದಲು ಬೆಳ್ಳಗಾಗುವುದರಿಂದಾಗಲೀ, ಸಂಪತ್ತಿನಿಂದಾಗಲೀ ಅಥವಾ ಬಹಳ ಬಂಧು-ಬಾಂಧವರಿಂದಾಗಲೀ ಯಾರೂ ಉತ್ತಮರಾಗುವುದಿಲ್ಲ. ಋಷಿಗಳು ಮಾಡಿಕೊಟ್ಟ ಹಾಗೂ ಪರಂಪರಾಪ್ರಾಪ್ತವಾದದ್ದೇ ಶ್ರೇಷ್ಠವಾದ ಧರ್ಮವು.

ವೈಶಂಪಾಯನಃ

ತಚ್ಛ್ರುತ್ವಾ ವಚನಂ ತಸ್ಯ ಮುನಯಸ್ತೇ ತಪೋಧನಾಃ ।
ತತೋ ವೇದಾನನುಪ್ರಾಪ್ಯ ಪುನರ್ಧರ್ಮಂ ಪ್ರಚಕ್ರಿರೇ ॥೫೩॥

ವೈಶಂಪಾಯನ– ಅವನ ಮಾತನ್ನು ಕೇಳಿಸಿಕೊಂಡ ತಪಸ್ವಿಗಳಾದ ಆ ಮುನಿಗಳು ಸಾರಸ್ವತಮುನಿಯಿಂದ ವೇದಗಳ ಉಪದೇಶ ಪಡೆದು ಪುನಃ ಧರ್ಮಾಚರಣೆಯನ್ನು ಮಾಡಿದರು.

ಷಷ್ಟಿರ್ಮುನಿಸಹಸ್ರಾಣಿ ಶಿಷ್ಯತ್ವಂ ಪ್ರತಿಪೇದಿರೇ ।
ಸಾರಸ್ವತಸ್ಯ ವಿಪ್ರರ್ಷೇರ್ವೇದಾಧ್ಯಯನಕಾರಣಾತ್ ॥೫೪॥

ವೇದಾಧ್ಯಯನಕ್ಕಾಗಿ ಅರವತ್ತುಸಾವಿರ ಶಿಷ್ಯರು ಬ್ರಾಹ್ಮಣೋತ್ತಮನಾದ ಸಾರಸ್ವತಮುನಿಯ ಶಿಷ್ಯತ್ವವನ್ನು ಪಡೆದರು.

ಮುಷ್ಟಿಂ ಪೃಥಕ್ ಪೃಥಕ್ ಸರ್ವೇ ದರ್ಭಾಣಾಂ ಚಾಪ್ಯುಪಾಹರನ್ ।
ತಸ್ಯಾಸನಾರ್ಥಂ ವಿಪ್ರರ್ಷೇಃ ಬಾಲಸ್ಯಾಪಿ ವಶೇ ಸ್ಥಿತಾಃ ॥೫೫॥

ಅವರೆಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಕೈಯಲ್ಲಿ ಮುಷ್ಟಿಪರಿಮಿತವಾದ ದರ್ಭೆಗಳನ್ನು ಆ ಸಾರಸ್ವತಮುನಿಯ ಆಸನಕ್ಕಾಗಿ ತಂದುಕೊಟ್ಟರು. ಸಾರಸ್ವತಮುನಿಯು ಬಾಲಕನಾಗಿದ್ದರೂ ಎಲ್ಲರೂ ಅವನ ವಶಕ್ಕೊಳಗಾಗಿದ್ದರು.

ತತ್ರಾಪಿ ದತ್ತ್ವಾ ವಸು ರೌಹಿಣೇಯೋ
ಮಹಾಬಲಃ ಕೇಶವಪೂರ್ವಜನ್ಮಾ ।
ಜಗಾಮ ತೀರ್ಥಂ ಮುದಿತಃ ಕ್ರಮೇಣ
ತಂ ವೃದ್ಧಕನ್ಯಾಶ್ರಮಮೇವ ಧೀರಃ ॥೫೬॥

ಆ ಸಾರಸ್ವತತೀರ್ಥದಲ್ಲಿಯೂ ಮಹಾಬಲಶಾಲಿಯಾದ ಕೇಶವಾಗ್ರಜ ಬಲರಾಮನು ಸಂಪತ್ತನ್ನು ದಾನಮಾಡಿ, ಅಲ್ಲಿಂದ ಧೈರ್ಯಶಾಲಿಯಾದ ಬಲರಾಮನು ಕ್ರಮವಾಗಿ ವೃದ್ಧಕನ್ಯಾಶ್ರಮಕ್ಕೆ ಸಂತೋಷದಿಂದ ಬಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಸಾರಸ್ವತಮಾಹಾತ್ಮ್ಯಂ ನಾಮ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ವೃದ್ಧಕನ್ಯೆಯ ಚರಿತ್ರೆಯ ವರ್ಣನೆ

ಜನಮೇಜಯಃ

ಕಥಂ ಕುಮಾರೀ ಭಗವನ್ ತಪೋಯುಕ್ತಾ ಹ್ಯಭೂತ್ ಪುರಾ ।
ಕಿಮರ್ಥಂ ಚ ತಪಸ್ತೇಪೇ ಕೋ ವಾಸ್ಯಾ ನಿಯಮೋಽಭವತ್ ॥೧॥

ಜನಮೇಜಯ– ಪೂಜ್ಯರೇ! ಹಿಂದೆ ಕುಮಾರಿಯು ಹೇಗೆ ತಪಸ್ಸನ್ನು ಮಾಡಿದಳು? ಯಾವ ಉದ್ದೇಶದಿಂದ ತಪಸ್ಸನ್ನಾಚರಿಸಿದಳು? ಅವಳ ನಿಯಮಗಳು ಯಾವುವು?

ಸುದುಷ್ಕರಮಿದಂ ಬ್ರಹ್ಮನ್ ತತ್ತಃ ಶ್ರುತಮನುತ್ತಮಮ್ ।
ಆಖ್ಯಾಹಿ ತತ್ತ್ವಮಖಿಲಂ ಕಥಂ ಸಾ ತಪಸಿ ಸ್ಥಿತಾ ॥೨॥

ಬ್ರಹ್ಮಜ್ಞಾನಿಯೇ! ನೀನು ಹೇಳಿದ ವಿಷಯವು ಸರಿಸಾಟಿಯಿಲ್ಲದ್ದಾಗಿದೆ ಮತ್ತು ಮಾಡಲು ಬಹಳ ಕಷ್ಟಕರವಾದುದು. ಕನ್ಯೆಯು ತಪಸ್ಸಿನಲ್ಲಿ ಹೇಗೆ ನಿರತಳಾದಳು?

ವೈಶಂಪಾಯನಃ

ಋಷಿರಾಸೀನ್ಮಹಾವೀರ್ಯಃ ಕುಣಿರ್ಗಾರ್ಗ್ಯೋ ಮಹಾಯಶಾಃ ।
ತಪ್ತ್ವಾ ತು ವಿಪುಲಂ ರಾಜನ್ ತಪಸ್ತು ತಪತಾಂ ವರಃ ॥೩॥

ವೈಶಂಪಾಯನ– ಗರ್ಗವಂಶದಲ್ಲಿ ಬಂದ ಕುಣಿ ಎಂಬ ಬಹಳ ಕೀರ್ತಿಶಾಲಿಯಾದ ಋಷಿಯು ಇದ್ದನು. ರಾಜನೇ! ಅವನು ಬಹಳವಾದ ತಪಸ್ಸನ್ನು ಆಚರಿಸಿ ತಪಸ್ವಿಗಳಲ್ಲಿಯೇ ಶೇಷ್ಠನಾಗಿದ್ದನು.

ವಯಸ್ಸು ಬೆಳೆಯುವುದರಿಂದಾಗಲೀ, ಕೂದಲು ಬೆಳ್ಳಗಾಗುವುದರಿಂದಾಗಲೀ, ಸಂಪತ್ತಿನಿಂದಾಗಲೀ ಅಥವಾ ಬಹಳ ಬಂಧು-ಬಾಂಧವರಿಂದಾಗಲೀ ಯಾರೂ ಉತ್ತಮರಾಗುವುದಿಲ್ಲ. ಋಷಿಗಳು ಮಾಡಿಕೊಟ್ಟ ಹಾಗೂ ಪರಂಪರಾಪ್ರಾಪ್ತವಾದದ್ದೇ ಶ್ರೇಷ್ಠವಾದ ಧರ್ಮವು.

ವೈಶಂಪಾಯನಃ

ತಚ್ಛ್ರುತ್ವಾ ವಚನಂ ತಸ್ಯ ಮುನಯಸ್ತೇ ತಪೋಧನಾಃ ।
ತತೋ ವೇದಾನನುಪ್ರಾಪ್ಯ ಪುನರ್ಧರ್ಮಂ ಪ್ರಚಕ್ರಿರೇ ॥೫೩॥

ವೈಶಂಪಾಯನ– ಅವನ ಮಾತನ್ನು ಕೇಳಿಸಿಕೊಂಡ ತಪಸ್ವಿಗಳಾದ ಆ ಮುನಿಗಳು ಸಾರಸ್ವತಮುನಿಯಿಂದ ವೇದಗಳ ಉಪದೇಶ ಪಡೆದು ಪುನಃ ಧರ್ಮಾಚರಣೆಯನ್ನು ಮಾಡಿದರು.

ಷಷ್ಟಿರ್ಮುನಿಸಹಸ್ರಾಣಿ ಶಿಷ್ಯತ್ವಂ ಪ್ರತಿಪೇದಿರೇ ।
ಸಾರಸ್ವತಸ್ಯ ವಿಪ್ರರ್ಷೇರ್ವೇದಾಧ್ಯಯನಕಾರಣಾತ್ ॥೫೪॥

ವೇದಾಧ್ಯಯನಕ್ಕಾಗಿ ಅರವತ್ತುಸಾವಿರ ಶಿಷ್ಯರು ಬ್ರಾಹ್ಮಣೋತ್ತಮನಾದ ಸಾರಸ್ವತಮುನಿಯ ಶಿಷ್ಯತ್ವವನ್ನು ಪಡೆದರು.

ಮುಷ್ಟಿಂ ಪೃಥಕ್ ಪೃಥಕ್ ಸರ್ವೇ ದರ್ಭಾಣಾಂ ಚಾಪ್ಯುಪಾಹರನ್ ।
ತಸ್ಯಾಸನಾರ್ಥಂ ವಿಪ್ರರ್ಷೇಃ ಬಾಲಸ್ಯಾಪಿ ವಶೇ ಸ್ಥಿತಾಃ ॥೫೫॥

ಅವರೆಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಕೈಯಲ್ಲಿ ಮುಷ್ಟಿಪರಿಮಿತವಾದ ದರ್ಭೆಗಳನ್ನು ಆ ಸಾರಸ್ವತಮುನಿಯ ಆಸನಕ್ಕಾಗಿ ತಂದುಕೊಟ್ಟರು. ಸಾರಸ್ವತಮುನಿಯು ಬಾಲಕನಾಗಿದ್ದರೂ ಎಲ್ಲರೂ ಅವನ ವಶಕ್ಕೊಳಗಾಗಿದ್ದರು.

ತತ್ರಾಪಿ ದತ್ತ್ವಾ ವಸು ರೌಹಿಣೇಯೋ
ಮಹಾಬಲಃ ಕೇಶವಪೂರ್ವಜನ್ಮಾ ।
ಜಗಾಮ ತೀರ್ಥಂ ಮುದಿತಃ ಕ್ರಮೇಣ
ತಂ ವೃದ್ಧಕನ್ಯಾಶ್ರಮಮೇವ ಧೀರಃ ॥೫೬॥

ಆ ಸಾರಸ್ವತತೀರ್ಥದಲ್ಲಿಯೂ ಮಹಾಬಲಶಾಲಿಯಾದ ಕೇಶವಾಗ್ರಜ ಬಲರಾಮನು ಸಂಪತ್ತನ್ನು ದಾನಮಾಡಿ, ಅಲ್ಲಿಂದ ಧೈರ್ಯಶಾಲಿಯಾದ ಬಲರಾಮನು ಕ್ರಮವಾಗಿ ವೃದ್ಧಕನ್ಯಾಶ್ರಮಕ್ಕೆ ಸಂತೋಷದಿಂದ ಬಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ಸಾರಸ್ವತಮಾಹಾತ್ಮ್ಯಂ ನಾಮ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ವೃದ್ಧಕನ್ಯೆಯ ಚರಿತ್ರೆಯ ವರ್ಣನೆ

ಜನಮೇಜಯಃ

ಕಥಂ ಕುಮಾರೀ ಭಗವನ್ ತಪೋಯುಕ್ತಾ ಹ್ಯಭೂತ್ ಪುರಾ ।
ಕಿಮರ್ಥಂ ಚ ತಪಸ್ತೇಪೇ ಕೋ ವಾಸ್ಯಾ ನಿಯಮೋಽಭವತ್ ॥೧॥

ಜನಮೇಜಯ– ಪೂಜ್ಯರೇ! ಹಿಂದೆ ಕುಮಾರಿಯು ಹೇಗೆ ತಪಸ್ಸನ್ನು ಮಾಡಿದಳು? ಯಾವ ಉದ್ದೇಶದಿಂದ ತಪಸ್ಸನ್ನಾಚರಿಸಿದಳು? ಅವಳ ನಿಯಮಗಳು ಯಾವುವು?

ಸುದುಷ್ಕರಮಿದಂ ಬ್ರಹ್ಮನ್ ತತ್ತಃ ಶ್ರುತಮನುತ್ತಮಮ್ ।
ಆಖ್ಯಾಹಿ ತತ್ತ್ವಮಖಿಲಂ ಕಥಂ ಸಾ ತಪಸಿ ಸ್ಥಿತಾ ॥೨॥

ಬ್ರಹ್ಮಜ್ಞಾನಿಯೇ! ನೀನು ಹೇಳಿದ ವಿಷಯವು ಸರಿಸಾಟಿಯಿಲ್ಲದ್ದಾಗಿದೆ ಮತ್ತು ಮಾಡಲು ಬಹಳ ಕಷ್ಟಕರವಾದುದು. ಕನ್ಯೆಯು ತಪಸ್ಸಿನಲ್ಲಿ ಹೇಗೆ ನಿರತಳಾದಳು?

ವೈಶಂಪಾಯನಃ

ಋಷಿರಾಸೀನ್ಮಹಾವೀರ್ಯಃ ಕುಣಿರ್ಗಾರ್ಗ್ಯೋ ಮಹಾಯಶಾಃ ।
ತಪ್ತ್ವಾ ತು ವಿಪುಲಂ ರಾಜನ್ ತಪಸ್ತು ತಪತಾಂ ವರಃ ॥೩॥

ವೈಶಂಪಾಯನ– ಗರ್ಗವಂಶದಲ್ಲಿ ಬಂದ ಕುಣಿ ಎಂಬ ಬಹಳ ಕೀರ್ತಿಶಾಲಿಯಾದ ಋಷಿಯು ಇದ್ದನು. ರಾಜನೇ! ಅವನು ಬಹಳವಾದ ತಪಸ್ಸನ್ನು ಆಚರಿಸಿ ತಪಸ್ವಿಗಳಲ್ಲಿಯೇ ಶೇಷ್ಠನಾಗಿದ್ದನು.

ತಪಸಾ ಸಂಯುತಾ ಸುಭ್ರೂಃ ಸಮುತ್ಪನ್ನಾ ಮಹಾತ್ಮನಃ ॥೪॥

ಅಂತಹ ಮಹಾತ್ಮನಿಗೆ ತಪೋಯುಕ್ತಳಾದ, ಸುಂದರಹುಬ್ಬುಳ್ಳ ಒಬ್ಬಳು ಮಗಳು ಹುಟ್ಟಿದಳು.

ತಾಂ ಚ ದೃಷ್ಟ್ವಾ ಭೃಶಂ ಪ್ರೀತಃ ಕುಣಿರ್ಗಾರ್ಗ್ಯೋ ಮಹಾಯಶಾಃ ।
ಜಗಾಮ ತ್ರಿದಿವಂ ರಾಜನ್ ಸಂತ್ಯಜ್ಯ ಸ್ವಕಲೇಬರಮ್ ॥೫॥

ಮಹಾಯಶೋವಂತನಾದ, ಗರ್ಗಗೋತ್ರೋತ್ಪನ್ನನಾದ ಕುಣಿಯು ಅವಳನ್ನು ನೋಡಿ ಬಹಳ ಸಂತೋಷಪಟ್ಟನು. ರಾಜನೇ! ಅವನು ತನ್ನ ಶರೀರವನ್ನು ಬಿಟ್ಟು ಸ್ವರ್ಗಕ್ಕೆ ಹೋದನು.

ಸುಭ್ರೂಃ ಸಾಽಪ್ಯಥ ಕಲ್ಯಾಣೀ ಪುಂಡರೀಕನಿಭೇಕ್ಷಣಾ ।
ಮಹತಾ ತಪಸೋಗ್ರೇಣ ಕೃತ್ವಾಽಽಶ್ರಮಮನಿಂದಿತಾ ॥೬॥

ಉಪವಾಸೈಃ ಪೂಜಯಂತೀ ಪಿತೄನ್ ದೇವಾಂಶ್ಚ ಸಾ ಪುರಾ ॥೭॥

ಅನಂತರ ಕಮಲದ ಹಾಗೆ ನೇತ್ರವುಳ್ಳ ಕಲ್ಯಾಣಿಯಾದ ಆ ಸುಂದರಿಯು ಆಶ್ರಮವೊಂದನ್ನು ನಿರ್ಮಿಸಿಕೊಂಡು, ಬಹಳವಾದ ತಪಸ್ಸನ್ನಾಚರಿಸುತ್ತಾ, ಉಪವಾಸಗಳನ್ನು ನಡೆಸುತ್ತಾ ಪಿತೃಗಳನ್ನೂ, ದೇವತೆಗಳನ್ನೂ ಪೂಜಿಸುತ್ತಿದ್ದಳು. ಪರಿಶುದ್ಧಳಾಗಿ ಜೀವಿಸುತ್ತಿದ್ದಳು.

ತಸ್ಯಾಸ್ತು ತಪಸೋಗ್ರೇಣ ಮಹಾನ್ ಕಾಲೋಽತ್ಯಗಾನ್ನೃಪ ॥೮॥

ರಾಜನೇ! ಅವಳು ತುಂಬಾ ಸಮಯದ ತನಕ ಆ ರೀತಿಯಲ್ಲಿ ಕಠಿಣ ತಪಸ್ಸನ್ನು ಆಚರಿಸಿದಳು.

ಸಾ ಪಿತ್ರಾ ದೀಯಮಾನಾಽಪಿ ಪತಿಂ ನೈಚ್ಛದನಿಂದಿತಾ ।
ಆತ್ಮನಃ ಸದೃಶಂ ಸಾ ತು ಭರ್ತಾರಂ ನಾನ್ವಪದ್ಯತ ॥೯॥

ಹಿಂದೆ ತನ್ನ ತಂದೆಯು ತನಗೊಬ್ಬ ಪತಿಯನ್ನು ಮದುವೆ ಮಾಡಿಕೊಡುವವನಿದ್ದರೂ ದೋಷದೂರಳಾದ ಆ ಸುಂದರಿಯು ಪತಿಯನ್ನು ಅಪೇಕ್ಷಿಸಲಿಲ್ಲ. ತನಗೆ ಸಮಾನನಾದ ಗಂಡನನ್ನು ಹೊಂದಲಿಲ್ಲ.

ತತಃ ಸಾ ತಪಸೋಗ್ರೇಣ ಪೀಡಯಿತ್ವಾऽऽತ್ಮನಸ್ತನುಮ್ ।
ಪಿತೃದೇವಾರ್ಚನರತಾ ಬಭೂವ ವಿಜನೇ ವನೇ ॥೧೦॥

ಅವಳು ನಿರ್ಜನ ಕಾಡಿನಲ್ಲಿ ಕಠಿಣ ತಪಸ್ಸನ್ನು ಆಚರಿಸುತ್ತಾ, ತನ್ನ ಶರೀರವನ್ನು ದಂಡಿಸುತ್ತಾ, ಪಿತೃದೇವತೆಗಳನ್ನು ಪೂಜಿಸುವುದರಲ್ಲಿಯೇ ನಿರತಳಾಗುತ್ತಿದ್ದಳು.

ಸಾತ್ಮಾನಂ ಮನ್ಯಮಾನಾ ತು ಕೃತಕೃತ್ಯಂ ಶ್ರಮಾನ್ವಿತಾ ।
ಜಗಾಮ ವೃದ್ಧಭಾವಂ ಚ ಕೌಮಾರಬ್ರಹ್ಮಚಾರಿಣೀ ॥೧೧॥

ಹೀಗೆ ತಪಸ್ಸಿನ ಶ್ರಮವನ್ನು ಹೊಂದಿ, ತಾನು ಕೃತಕೃತ್ಯಳಾದಳು. ಕುಮಾರಾವಸ್ಥೆಯಿಂದಲೇ ಬ್ರಹ್ಮಚಾರಿಣಿಯಾಗಿದ್ದು ಅವಳು ಮುದುಕಿಯಾದಳು.

ವಾರ್ಧಕ್ಯೇನ ಚ ರಾಜೇಂದ್ರ ತಪಸೈವ ಚ ಕರ್ಶಿತಾ ॥೧೨॥

ಸಾ ನಾಶಕದ್ ಯದಾ ಗಂತುಂ ಪದಾತ್ ಪದಮಪಿ ಸ್ವಯಮ್ ।
ಚಕಾರ ಗಮನೇ ಬುದ್ಧಿಂ ಪರಲೋಕಾಯ ವೈ ತದಾ ॥೧೩॥

ರಾಜೇಂದ್ರನೇ! ಮುಪ್ಪಿನ ಕಾರಣದಿಂದ ಮತ್ತು ಕಠಿಣತಪಸ್ಸಿನಿಂದಾಗಿ ಕೃಶಳಾದ ಅವಳು ಸ್ವಯಂ ಒಂದು ಹೆಜ್ಜೆಯನ್ನು ಮುಂದಿಟ್ಟು ನಡೆಯಲೂ ಅಶಕ್ತಳಾದಳು. ಆಗ ತಾನು ಪರಲೋಕಕ್ಕೆ ಹೋಗುವ ನಿಶ್ಚಯವನ್ನು ಮಾಡಿಕೊಂಡಳು.

ಮೋಕ್ತುಕಾಮಾಂ ತು ತಾಂ ದೃಷ್ಟ್ವಾ ಶರೀರಂ ನಾರದೋऽಬ್ರವೀತ್ ॥

ಹೀಗೆ ನಿಶ್ಚಯಿಸಿಕೊಂಡು ಶರೀರವನ್ನು ಬಿಡಲು ಅಪೇಕ್ಷೆಪಟ್ಟ ಆ ವೃದ್ಧಕನ್ಯೆಗೆ ನಾರದನು ಹೀಗೆ ಹೇಳುತ್ತಾನೆ

ನಾರದಃ

ಅಸಂಸೃತಾಯಾಃ ಕನ್ಯಾಯಾಃ ಕುತೋ ಲೋಕಾಸ್ತವಾನಘೇ ।
ಏವಂ ಹಿ ಶ್ರುತಮಸ್ಮಾಭಿರ್ದೇವಲೋಕೇ ಮಹಾವ್ರತೇ ॥೧೫॥

ತಪಃ ಪರಮಕಂ ಪ್ರಾಪ್ಯ ನ ತು ಲೋಕಾಸ್ತ್ವಯಾ ಜಿತಾಃ ।

''ಪಾಪರಹಿತಳೇ! ಮಹಾವ್ರತವುಳ್ಳವಳೇ! ಸಂಸ್ಕಾರಹೊಂದದ ಕನ್ಯೆಗೆ ಪರಲೋಕಗಳು ಹೇಗೆ ಸಿಗಲು ಸಾಧ್ಯ? ಎಂಬುದಾಗಿ ಶಾಸ್ತ್ರಗಳು ಹೇಳುವುದನ್ನು ನಾವು

ಲೋಕದಲ್ಲಿ ಕೇಳಿದ್ದೇವೆ. ನೀನು ಬಹಳ ತಪಸ್ಸನ್ನು ಆಚರಿಸಿದ್ದಿ. ಆದರೆ ಲೋಕಗಳನ್ನು ಪಡೆಯುವ ಸಾಮರ್ಥ್ಯವನ್ನು ಹೊಂದಲಿಲ್ಲ.'' ಎಂದು.

ವೈಶಂಪಾಯನಃ

ತನ್ನಾರದವಚಃ ಶ್ರುತ್ವಾ ಸಾऽಬ್ರವೀದ್ ಋಷಿಸಂಸದಿ ॥೧೬॥

ವೈಶಂಪಾಯನ– ನಾರದನ ಮಾತನ್ನು ಕೇಳಿ ಅವಳು ಋಷಿಗಳ ಸನ್ನಿಧಾನದಲ್ಲಿ ಹೀಗೆ ಹೇಳುತ್ತಾಳೆ.

ವೃದ್ಧಕನ್ಯಾ

ತಪಸೋऽರ್ಧಂ ಪ್ರಯಚ್ಛಾಮಿ ಪಾಣಿಗ್ರಾಹಸ್ಯ ಸತ್ತಮಾಃ ॥೧೭॥

ವೃದ್ಧಕನ್ಯೆ– ''ಸಜ್ಜನರೇ! ಯಾವನು ನನ್ನನ್ನು ಮದುವೆ ಮಾಡಿಕೊಳ್ಳುತ್ತಾನೆಯೋ ಅವನಿಗೆ ನನ್ನ ತಪಸ್ಸಿನ ಅರ್ಧಭಾಗವನ್ನು ಕೊಡುತ್ತೇನೆ.'' ಎಂದು.

ವೈಶಂಪಾಯನಃ

ಇತ್ಯುಕ್ತೇऽಸ್ಯಾಸ್ತು ಜಗ್ರಾಹ ಪಾಣಿಂ ಗಾಲವಸಂಭವಃ ।
ಋಷಿಃ ಪ್ರಾಕ್ ಶೃಂಗವಾನ್ನಾಮ ಸಮಯಂ ಚೇಮಮಬ್ರವೀತ್ ॥೧೮॥

ವೈಶಂಪಾಯನ– ಅವಳು ಹೀಗೆ ಹೇಳಿದಾಗ ಗಾಲವಋಷಿಯ ಮಗನಾದ ಶೃಂಗವಾನ್ ಎಂಬ ಋಷಿಯು ಅವಳನ್ನು ವಿವಾಹವಾಗುತ್ತಾನೆ. ಅದಕ್ಕಿಂತ ಪೂರ್ವಭಾವಿಯಾಗಿ ಒಂದು ನಿಯಮವನ್ನೂ ಹೇಳುತ್ತಾನೆ.

ಶೃಂಗವಾನ್

ಸಮಯೇನ ತವಾದ್ಯಾಹಂ ಪಾಣಿಂ ಸ್ಪೃಕ್ಷ್ಯಾಮಿ ಶೋಭನೇ ।
ಯದ್ಯೇಕರಾತ್ರಂ ವಸ್ತವ್ಯಂ ತ್ವಯಾ ಸಹ ಮಮೇತಿ ಹ ॥೧೯॥

ಶೃಂಗವಾನ್– ಮಂಗಳೆಯೇ! ಒಂದು ಶರತ್ತನ್ನು ವಿಧಿಸಿ, ನಾನು ನಿನ್ನನ್ನು ವಿವಾಹವಾಗಲು ಇಚ್ಛಿಸುತ್ತೇನೆ. ವಿವಾಹವಾದ ನಂತರ ಒಂದು ರಾತ್ರಿ ನನ್ನ ಜೊತೆಗೆ ನೀನು ವಾಸವನ್ನು ಮಾಡಬೇಕು.

ವೈಶಂಪಾಯನಃ

ತಥೇತಿ ಸಾ ಪ್ರತಿಶ್ರುತ್ಯ ತಸ್ಯ ಪಾಣಿಂ ದದೌ ತತಃ ।
ಚಕ್ರೇ ಚ ಪಾಣಿಗ್ರಹಣಂ ತದುದ್ವಾಹ ಚ ಗಾಲವಃ ॥೨೦॥

ವೈಶಂಪಾಯನ– ಹಾಗೆ ಆಗಲಿ ಎಂದು ಪ್ರತಿಜ್ಞೆಗೈದು ಶೃಂಗವಾನನಿಗೆ ತನ್ನ ಕೈಯನ್ನು ನೀಡಿ ಅವನನ್ನು ವಿವಾಹವಾಗುತ್ತಾಳೆ. ಗಾಲವನು ಅವಳ ಕೈಯನ್ನು ಹಿಡಿದು ಮದುವೆ ಮಾಡಿಕೊಳ್ಳುತ್ತಾನೆ.

ಸಾ ರಾತ್ರ್ಯಾವಭವದ್ ರಾಜನ್ ತರುಣೀ ದಿವ್ಯರೂಪಿಣೀ ।
ದಿವ್ಯಾಭರಣವಸ್ತ್ರಾ ಚ ದಿವ್ಯಸ್ರಗನುಲೇಪನಾ ॥೨೧॥

ರಾಜನೇ! ರಾತ್ರಿಯಲ್ಲಿ ಅವಳು ಅಲೌಕಿಕ ಸೌಂದರ್ಯವುಳ್ಳ ತರುಣಿಯಾಗಿ ಮಾರ್ಪಟ್ಟಳು. ಅಲೌಕಿಕವಾದ ಆಭರಣಗಳನ್ನೂ, ವಸ್ತ್ರಗಳನ್ನೂ, ಗಂಧಾದಿಲೇಪನಗಳನ್ನೂ ಹೊಂದಿದ್ದಳು.

ತಾಂ ದೃಷ್ಟ್ವಾ ಗಾಲವಃ ಪ್ರೀತೋ ದೀಪಯಂತೀಮಿವಾತ್ಮನಾ ।
ಉವಾಸ ಚ ಕ್ಷಪಾಮೇಕಾಂ ಪ್ರಭಾತೇ ಸಾಽಬ್ರವೀಚ್ಚ ತಮ್ ॥೨೨॥

ತನ್ನ ಸೌಂದರ್ಯದಿಂದ ಪ್ರಕಾಶಿಸುತ್ತಿದ್ದ ಅವಳನ್ನು ನೋಡಿದ ಗಾಲವನು ಸಂತುಷ್ಟನಾದನು. ಅವಳು ಒಂದು ರಾತ್ರಿ ಅವನೊಡನೆ ವಾಸಮಾಡಿ ಅವನಿಗೆ ಹೀಗೆ ಹೇಳುತ್ತಾಳೆ.

ವೃದ್ಧಕನ್ಯಾ

ಯಸ್ತ್ವಯಾ ಸಮಯೋ ಬ್ರಹ್ಮನ್ ಕೃತೋ ಬ್ರಹ್ಮರ್ಷಿಸಂಸದಿ ।
ತೇನೋಷಿತಾಽಸ್ಮಿ ಭದ್ರಂ ತೇ ಸ್ವಸ್ತಿ ತೇಽಸ್ತು ವ್ರಜಾಮ್ಯಹಮ್ ॥೨೩॥

ವೃದ್ಧಕನ್ಯಾ– 'ಬ್ರಹ್ಮಜ್ಞಾನಿಯೇ! ಬ್ರಹ್ಮಜ್ಞಾನಿಗಳ ಸಭೆಯಲ್ಲಿ ನೀನು ಯಾವ ನಿಯಮವನ್ನು ವಿಧಿಸಿದ್ದಿಯೋ ಅದಕ್ಕನುಗುಣವಾಗಿ ನಿನ್ನೊಡನೆ ವಾಸಮಾಡಿದ್ದೆ. ನಿನಗೆ ಮಂಗಳವಾಗಲಿ. ನಾನು ಹೊರಟುಹೋಗುತ್ತೇನೆ'.

ವೈಶಂಪಾಯನಃ

ಸಾ ತು ಧ್ಯಾತ್ವಾಽಬ್ರವೀದ್ ಭೂಯೋ ಯೋಽಸ್ಮಿಂಸ್ತೀರ್ಥೇ ಸಮಾಹಿತಃ ।
ಉಷಿತ್ವಾ ರಜನೀಮೇಕಾಂ ತರ್ಪಯಿತ್ವಾ ದಿವೌಕಸಃ ॥೨೪॥

ಚತ್ವಾರಿಂಶತಮಷ್ಟೌ ಚ ದ್ವೌ ಚಾಷ್ಟೌ ಸಮ್ಯಗಾಚರೇತ್ ।
ಬ್ರಹ್ಮಚರ್ಯಂ ಹಿ ಶಾಂತಾತ್ಮಾ ಫಲಂ ತಸ್ಯ ಲಭೇತ ಸಃ ॥೨೫॥

ವೈಶಂಪಾಯನ– ಅವಳು ಮತ್ತೆ ಧ್ಯಾನವನ್ನು ಮಾಡಿ ಹೀಗೆ ಹೇಳುತ್ತಾಳೆ - ಯಾವನು ಶುದ್ಧಮನಸ್ಸಿನಿಂದ ಮನೋನಿಗ್ರಹವನ್ನು ಸಂಪಾದಿಸಿಕೊಂಡು ಈ ತೀರ್ಥದಲ್ಲಿ ಒಂದು ರಾತ್ರಿಕಾಲ ವಾಸಮಾಡಿ, ದೇವತೆಗಳನ್ನು ತೃಪ್ತಿಪಡಿಸುತ್ತಾನೆಯೋ ಅಂತಹವನು ಐವತ್ತೆಂಟು ವರ್ಷಗಳ ಕಾಲ ಆಚರಿಸಿದ ಬ್ರಹ್ಮಚರ್ಯದ ಫಲವನ್ನು ಹೊಂದುತ್ತಾನೆ.

ಏವಮುಕ್ತ್ವಾ ತತಃ ಸಾಧ್ವೀ ದೇಹಂ ತ್ಯಕ್ತ್ವಾ ದಿವಂ ಗತಾ ॥೨೬॥

ಹೀಗೆ ಹೇಳಿ ಸಾಧುಸ್ವಭಾವದ ಆಕೆ ದೇಹವನ್ನು ತ್ಯಜಿಸಿ ಸ್ವರ್ಗಕ್ಕೆ ಹೋದಳು.

ಋಷೇರಪ್ಯಭವದ್ ದೀನೋ ರೂಪಂ ತಸ್ಯಾ ವಿಚಿಂತಯನ್ ।
ಸಮಯೇನ ತಪೋಽರ್ಧಂ ಚ ಕೃಚ್ಛ್ರಾತ್ ಪ್ರತಿಗೃಹೀತವಾನ್ ॥೨೭॥

ಶೃಂಗವಾನ್ ಋಷಿಯಾದರೂ ಅವಳ ರೂಪವನ್ನು ಚಿಂತಿಸುತ್ತಾ, ತನ್ನ ನಿಯಮದಿಂದಾಗಿ ದುಃಖಿತನಾದನು. ಬಹಳ ಕಷ್ಟದಿಂದ ಅವಳ ತಪಸ್ಸಿನ ಅರ್ಧಭಾಗವನ್ನು ಸ್ವೀಕರಿಸಿದನು.

ಸಾಧಯಿತ್ವಾ ತದಾಽಽತ್ಮಾನಂ ತಸ್ಯಾಃ ಸಂಗತಿಮನ್ವಯಾತ್ ।
ದುಃಖಿತೋ ಭರತಶ್ರೇಷ್ಠ ತಸ್ಯಾ ರೂಪಬಲಾಹೃತಃ ॥೨೮॥

ಭರತಶ್ರೇಷ್ಠನೇ! ಆ ಗಾಲವನು ಆಕೆಯ ರೂಪದಿಂದ ಆಕರ್ಷಿತನಾಗಿ ದುಃಖಿತನಾಗಿದ್ದನು. ಆದ್ದರಿಂದ ಅವನು ತನ್ನ ದೇಹವನ್ನು ಪರಿತ್ಯಜಿಸಿ, ಅವಳನ್ನೇ ಅನುಸರಿಸಿಕೊಂಡು ಹೋದನು.

ಏತತ್ ತೇ ವೃದ್ಧಕನ್ಯಾಯಾ ವ್ಯಾಖ್ಯಾತಂ ಚರಿತಂ ಮಹತ್ ।
ತಥೈವ ಬ್ರಹ್ಮಚರ್ಯಂ ಚ ಸ್ವರ್ಗಸ್ಯ ಚ ಮತಿಃ ಶುಭಾ ॥೨೯॥

ಇದು ವೃದ್ಧಕನ್ಯೆಯ ವಿಶಿಷ್ಟವಾದ ಚರಿತ್ರೆ ಮತ್ತು ಅವಳ ಬ್ರಹ್ಮಚರ್ಯ, ಸ್ವರ್ಗಗಮನದ ನಿಶ್ಚಯ - ಇವುಗಳ ವಿವರಣೆ.

ತತ್ರಸ್ಥೋಽಪಿ ಚ ಶುಶ್ರಾವ ಹತಂ ಶಲ್ಯಂ ಹಲಾಯುಧಃ ॥೩೦॥

ಬಲರಾಮನು ಅಲ್ಲಿದ್ದಾಗ ಇತ್ತಕಡೆ ಯುದ್ಧದಲ್ಲಿ ಶಲ್ಯನು ಮರಣ ಹೊಂದಿದ ವಾರ್ತೆಯನ್ನು ಕೇಳಿದನು.

ತತ್ರಾಪಿ ದತ್ತ್ವಾ ದಾನಾನಿ ದ್ವಿಜಾತಿಭ್ಯಃ ಪರಂತಪ ।
ಶುಶೋಚ ಶಲ್ಯಂ ಸಂಗ್ರಾಮೇ ನಿಹತಂ ಪಾಂಡವೈಸ್ತದಾ ॥೩೧॥

ಶತ್ರುನಾಶಕನೇ! ಬಲರಾಮನು ಅಲ್ಲಿಯೂ ಬ್ರಾಹ್ಮಣರಿಗೆ ದಾನಗಳನ್ನು ಮಾಡಿದನು. ಪಾಂಡವರು ಯುದ್ಧದಲ್ಲಿ ಶಲ್ಯನನ್ನು ಕೊಂದಿದ್ದನ್ನು ಕೇಳಿ ದುಃಖಿಸಿದನು.

ಸಮಂತಪಂಚಕದ್ವಾರಾತ್ ತತೋ ನಿಷ್ಕ್ರಮ್ಯ ಮಾಧವಃ ।
ಪಪ್ರಚ್ಛರ್ಷಿಗಣಾನ್ ರಾಮಃ ಕುರುಕ್ಷೇತ್ರಸ್ಯ ಯತ್ ಫಲಮ್ ॥೩೨॥

ಬಲರಾಮನು ಸ್ಯಮಂತಪಂಚಕ ದ್ವಾರದಿಂದ ಹೊರಟು ಕುರುಕ್ಷೇತ್ರದ ಪಲಗಳ ಬಗ್ಗೆ ಋಷಿಗಣಗಳಲ್ಲಿ ಪ್ರಶ್ನಿಸಿದನು.

ತೇ ಪೃಷ್ಟಾ ಯದುಸಿಂಹೇನ ಕುರುಕ್ಷೇತ್ರಫಲಂ ವಿಭೋ ।
ಸಮಾಚಖ್ಯುರ್ಮಹಾತ್ಮಾನಸ್ತಸ್ಮೈ ಸರ್ವಂ ಯಥಾತಥಮ್ ॥೩೩॥

ವಿಭುವೇ! ಅವನು ಪ್ರಶ್ನಿಸಿದಾಗ ಮಹಾತ್ಮರಾದ ಋಷಿಗಳು ಅವನಿಗೆ ಕುರುಕ್ಷೇತ್ರದ ಫಲವನ್ನು ಯಥಾವತ್ತಾಗಿ ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ವೃದ್ಧಕನ್ಯಾಚರಿತಂ ನಾಮ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾಲ್ಕನೆಯ ಅಧ್ಯಾಯ

ಬಲರಾಮನಿಗೆ ಋಷಿಗಳಿಂದ ಕುರುಕ್ಷೇತ್ರದ ಬಗ್ಗೆ ವರ್ಣನೆ

ಋಷಯಃ

ಪ್ರಜಾಪತೇರುತ್ತರವೇದಿರುಚ್ಯತೇ
ಸನಾತನಂ ರಾಮ ಸಮಂತಪಂಚಕಮ್ ।
ಸಮೀಜಿರೇ ಯತ್ರ ದಿವೌಕಸಃ ಪುರಾ
ಪರೇಣ ಸತ್ರೇಣ ಮಹಾವರಪ್ರದಾಃ ॥೧॥

ಋಷಿಗಳು– ಬಲರಾಮನೇ! ಈ ಸಮಂತಪಂಚಕಕ್ಷೇತ್ರವು ಸನಾತನವಾಗಿದೆ. ಇದನ್ನು ಪ್ರಜಾಪತಿಯ ಉತ್ತರಯಜ್ಞವೇದಿಕೆ ಎಂದು ಕರೆಯುತ್ತಾರೆ. ಮಹಾವರಗಳನ್ನು ಕೊಡುವ ದೇವತೆಗಳು ಹಿಂದೆ ಇಲ್ಲಿ ಉತ್ತಮ ಯಾಗವನ್ನು ಮಾಡಿದ್ದರು.

ಪುರಾ ಹಿ ರಾಜರ್ಷಿವರೇಣ ಧೀಮತಾ
ಬಹೂನಿ ವರ್ಷಾಣ್ಯಮಿತೇನ ತೇಜಸಾ ।
ಪ್ರಕೃಷ್ಟಮೇತತ್ ಕುರುಣಾ ಮಹಾತ್ಮನಾ
ತತಃ ಕುರುಕ್ಷೇತ್ರಮಿಹೋಚ್ಯತೇ ಬುಧೈಃ ॥೨॥

ಹಿಂದೆ ಅಪರಿಮಿತತೇಜಸ್ಸುಳ್ಳ, ಜ್ಞಾನಿಯಾದ, ಶ್ರೇಷ್ಠರಾಜರ್ಷಿಯಾದ ಕುರುವು ಈ ಕ್ಷೇತ್ರದಲ್ಲಿ ಅನೇಕ ವರ್ಷಗಳ ಕಾಲ ಕ್ಷೇತ್ರಕರ್ಷಣವನ್ನು (ಭೂಮಿಯನ್ನು ಉಳುವುದನ್ನು) ಮಾಡಿದ್ದನು. ಆದ್ದರಿಂದ ಇದನ್ನು ಜ್ಞಾನಿಗಳು ಕುರುಕ್ಷೇತ್ರವೆಂದು ಕರೆಯುತ್ತಾರೆ.

ರಾಮಃ

ಕಿಮರ್ಥಂ ಕುರುಣಾ ಕೃಷ್ಟಂ ಕ್ಷೇತ್ರಮೇತನ್ಮಹಾತ್ಮನಾ ।
ಏತದಿಚ್ಛಾಮ್ಯಹಂ ಶ್ರೋತುಂ ಕಥ್ಯಮಾನಂ ತಪೋಧನಾಃ ॥೩॥

ಬಲರಾಮ– ಮಹಾತ್ಮನಾದ ಕುರುವು ಯಾವುದಕ್ಕಾಗಿ ಇಲ್ಲಿ ಕರ್ಷಣವನ್ನು ಮಾಡಿದ್ದನು? ಮಹಾತಪಸ್ವಿಗಳೇ, ಇದನ್ನು ಕೇಳಿತಿಳಿಯಲು ಬಯಸುತ್ತೇನೆ.

ಋಷಯಃ

ಪುರಾ ಕಿಲ ಕುರುಂ ರಾಮ ಕೃಷಂತಂ ಸಹಸೋತ್ಥಿತಮ್ ।
ಅಭ್ಯೇತ್ಯ ಶಕ್ರಸ್ತ್ರಿದಿವಾತ್ ಪರ್ಯಪೃಚ್ಛತ ಕಾರಣಮ್ ॥೪॥

ಋಷಿಗಳು– ಹಿಂದೆ ಸದಾ ಪ್ರಯತ್ನಶೀಲನಾದ ಕುರುಮಹಾರಾಜನು ಕ್ಷೇತ್ರಕರ್ಷಣವನ್ನು ಮಾಡುತ್ತಿದ್ದಾಗ, ಇಂದ್ರನು ಸ್ವರ್ಗದಿಂದ ಬಂದು ಕರ್ಷಣಕ್ಕೆ ಕಾರಣವನ್ನು ಕೇಳಿದನು.

ಇಂದ್ರಃ

ಕಿಮಿದಂ ವರ್ತತೇ ಕರ್ಮ ಪ್ರಯತ್ನೇನ ಪರೇಣ ಹ ।
ರಾಜರ್ಷೇ ಕಿಮಭಿಪ್ರೇತಂ ಯದಿಯಂ ಕೃಷ್ಯತೇ ಮಹೀ ॥೫॥

ಇಂದ್ರ– ರಾಜರ್ಷಿಯೇ! ಉತ್ತಮವಾದ ಪ್ರಯತ್ನಪೂರ್ವಕವಾಗಿ ಈ ಕರ್ಷಣಕ್ರಿಯೆಯನ್ನು ಏಕೆ ಮಾಡುತ್ತಿರುವಿ? ಭೂಮಿಯನ್ನು ಉಳುತ್ತಿರುವ ನಿನ್ನ ಅಭಿಪ್ರಾಯವು ಏನು?

ಕುರುಃ

ಇಹ ಯೇ ಪುರುಷವ್ಯಾಘ್ರಾ ಜನಿಷ್ಯಂತಿ ಶತಕ್ರತೋ ।
ತೇ ಗಮಿಷ್ಯಂತಿ ಸುಕೃತಾಲ್ಲೋಕಾನ್ ಪಾಪವಿವರ್ಜಿತಾಃ ॥೬॥

ಕುರು– ಇಂದ್ರನೇ! ಇಲ್ಲಿ ಯಾವ ಪುರುಷಶ್ರೇಷ್ಠರು ಜನಿಸುತ್ತಾರೆಯೋ ಅವರು ಪಾಪಗಳನ್ನು ಕಳೆದುಕೊಂಡು ಶುಭಪುಣ್ಯದಿಂದ ಹೊಂದುವ ಲೋಕಗಳನ್ನು ಪಡೆಯುವರು.

ಋಷಯಃ

ಅಪಹಾಸ್ಯ ತು ತಂ ಶಕ್ರೋ ಜಗಾಮ ತ್ರಿದಿವಂ ಪುನಃ ।
ರಾಜರ್ಷಿರಪ್ಯನಿರ್ವಿಣ್ಣಃ ಕೃಷತ್ಯೇವ ವಸುಂಧರಾಮ್ ॥೭॥

ಋಷಿಗಳು– ಇಂದ್ರನು ಅವನನ್ನು ಹಾಸ್ಯಮಾಡಿ ಸ್ವರ್ಗಕ್ಕೆ ಹೋದನು. ರಾಜರ್ಷಿ ಕುರುವು ಯಾವುದೇ ಉದ್ವೇಗಕ್ಕೊಳಗಾಗದೆ ಭೂಮಿಯನ್ನು ಉಳುತ್ತಲೇ ಇದ್ದನು.

ಆಗಮ್ಯಾಗಮ್ಯ ಚೈವೇಹ ಭೂಯೋ ಭೂಯೋऽಪಹಾಸ್ಯ ಚ ।
ಶತಕ್ರತುರನಿರ್ವಿಣ್ಣಂ ದೃಷ್ಟ್ವಾ ದೃಷ್ಟ್ವಾ ಜಗಾಮ ಹ ॥೮॥

ಇಂದ್ರನು ಮತ್ತೆ ಮತ್ತೆ ಬಂದು ಅಪಹಾಸ್ಯ ಮಾಡುತ್ತಿದ್ದನು ಮತ್ತು ಔದಾಸೀನ್ಯಕ್ಕೆ ಒಳಗಾಗದ ಕುರುವನ್ನು ನೋಡಿ ಮತ್ತೆ ಹೊರಟುಹೋಗುತ್ತಿದ್ದನು.

ಯದಾ ತು ತಪಸೋಗ್ರೇಣ ಚಕರ್ಷ ವಸುಧಾಂ ನೃಪಃ ॥೯॥

ತತಃ ಶಕ್ರೋऽಬ್ರವೀದ್ ದೇವಾನ್ ರಾಜರ್ಷೇರ್ಯಚ್ಚಿಕೀರ್ಷಿತಮ್ ।
ತಚ್ಛ್ರುತ್ವಾಥಾಬ್ರುವನ್ ದೇವಾಃ ಸಹಸ್ರಾಕ್ಷಮಿದಂ ವಚಃ ॥೧೦॥

ಯಾವಾಗ ಕುರುಮಹಾರಾಜನು ತೀವ್ರವಾದ ತಪಸ್ಸಿನಿಂದ ಭೂಮಿಯನ್ನು ಉಳುಮೆ ಮಾಡಿದನೋ ಆಗ ಇಂದ್ರನು ಕುರುವಿನ ಕಾರ್ಯದ ಬಗ್ಗೆ ದೇವತೆಗಳಿಗೆ ಹೇಳಿದನು. ಅದನ್ನು ಕೇಳಿಸಿಕೊಂಡ ದೇವತೆಗಳು ಇಂದ್ರನಿಗೆ ಈ ಮಾತನ್ನು ಹೇಳಿದರು.

ದೇವಾಃ

ವರೇಣ ಚ್ಛಂದ್ಯತಾಂ ಶೀಘ್ರಂ ರಾಜರ್ಷಿರ್ಯದಿ ಶಕ್ಯತೇ ॥೧೧॥

ದೇವತೆಗಳು– ಸಾಧ್ಯವಾಗುವುದಾದರೆ ಬೇಗನೆ ರಾಜರ್ಷಿಗೆ ವರವನ್ನು ಕೊಟ್ಟು ನಮಗೆ ಅನುಕೂಲನನ್ನಾಗಿ ಮಾಡೋಣ.

ಯದಿ ಹ್ಯತ್ರ ಪ್ರಸೂತಾ ವೈ ಸ್ವರ್ಗಂ ಗಚ್ಛಂತಿ ಮಾನವಾಃ ।
ಅಸ್ಮಾನನಿಷ್ಟ್ವಾ ಕ್ರತುಭಿರ್ಭಾಗೋ ನೋ ನ ಭವಿಷ್ಯತಿ ॥೧೨॥

ಒಂದು ವೇಳೆ ಮಾನವರು ಯಾಗವನ್ನು ಮಾಡದೇ ಇಲ್ಲಿ ಹುಟ್ಟಿದಮಾತ್ರಕ್ಕೆ ಸ್ವರ್ಗಕ್ಕೆ ಹೋಗುವುದಾದರೆ ನಮಗೆ ಯಾಗದ ಹವಿರ್ಭಾಗಗಳು ಸಿಗಲಾರವು.

ಋಷಯಃ

ಆಗಮ್ಯ ತು ತತಃ ಶಕ್ರಃ ತದಾ ರಾಜರ್ಷಿಮಬ್ರವೀತ್ ॥೧೩॥

ಋಷಿಗಳು– ಅನಂತರ ಇಂದ್ರನು ಬಂದು ರಾಜರ್ಷಿಗೆ ಹೀಗೆ ಹೇಳುತ್ತಾನೆ.

ಇಂದ್ರಃ

ಅಲಂ ಖೇದೇನ ಭವತಃ ಕ್ರಿಯತಾಂ ವಚನಂ ಮಮ ॥೧೪॥

ಇಂದ್ರ– ನೀನು ಶ್ರಮಪಡುವುದನ್ನು ನಿಲ್ಲಿಸು. ನಾನು ಹೇಳಿದಂತೆ ಮಾಡು.

ಮಾನವಾ ಯೇ ನಿರಾಹಾರಾ ದೇಹಂ ತ್ಯಕ್ಷ್ಯಂತ್ಯತಂದ್ರಿತಾಃ ।
ಯುದ್ಧೇ ವಾ ನಿಹತಾಃ ಸಮ್ಯಗ್ ಅಪಿ ತಿರ್ಯಗ್ಗತಾ ನೃಪ ॥೧೫॥

ತೇ ಸ್ವರ್ಗಭಾಜೋ ರಾಜೇಂದ್ರ ಭವಂತ್ವಿಹ ಮಹಾಮತೇ ॥೧೬॥

ಮಹಾಜ್ಞಾನಿಯಾದ ರಾಜನೇ! ಯಾವ ಮನುಷ್ಯರು ಇಲ್ಲಿ ಆಹಾರವನ್ನು ಪರಿತ್ಯಾಗಮಾಡಿ, ಆಲಸ್ಯಕ್ಕೊಳಗಾಗದೆ ದೇಹತ್ಯಾಗವನ್ನು ಮಾಡುವರೋ ಅಥವಾ ಯಾರು ಯುದ್ಧದಲ್ಲಿ ಚೆನ್ನಾಗಿ ಹೋರಾಟವನ್ನು ಮಾಡಿ ಮಡಿಯುತ್ತಾರೋ ಅವರು ಸ್ವರ್ಗವನ್ನು ಪಡೆಯಲಿ.

ಋಷಯಃ

ತಥಾऽಸ್ತ್ವಿತಿ ತತೋ ರಾಜಾ ಕುರುಃ ಶಕ್ರಮುವಾಚ ಹ ॥೧೭॥

ಋಷಿಗಳು– ಹಾಗೆಯೇ ಆಗಲಿ ಎಂದು ಕುರುಮಹಾರಾಜನು ಇಂದ್ರನಿಗೆ ಹೇಳಿದನು.

ತತಸ್ತಮಭ್ಯನುಜ್ಞಾಯ ಪ್ರಹೃಷ್ಟೇನಾಂತರಾತ್ಮನಾ ।
ಜಗಾಮ ತ್ರಿದಿವಂ ಭೂಯಃ ಕ್ಷಿಪ್ರಂ ಬಲಿ(ಲ)ನಿಷೂದನಃ ॥೧೮॥

ಅನಂತರ ಬಲಿಯನ್ನು ಮಣಿಸಿದ ಇಂದ್ರನು ಕುರುವಿನ ಒಪ್ಪಿಗೆಯನ್ನು ಪಡೆದು, ಸಂತುಷ್ಟವಾದ ಮನಸ್ಸುಳ್ಳವನಾಗಿ ಕೂಡಲೇ ಸ್ವರ್ಗಕ್ಕೆ ಹೋದನು.

ಏವಮೇತದ್ ಯದುಶ್ರೇಷ್ಠ ಕೃಷ್ಟಂ ರಾಜರ್ಷಿಣಾ ಪುರಾ ।
ಶಕ್ರೇಣ ಚಾಭ್ಯನುಜ್ಞಾತಃ ಪುಣ್ಯೇ ಪ್ರಾಣಾನ್ ಮುಮೋಚ ಹ ॥೧೯॥

ಹೀಗೆ ಹಿಂದೆ ರಾಜರ್ಷಿಯಾದ ಕುರುವು ಇಲ್ಲಿ ಕ್ಷೇತ್ರಕರ್ಷಣವನ್ನು ಮಾಡಿದ್ದನು. ಶಕ್ರನ ಒಪ್ಪಿಗೆಯನ್ನು ಪಡೆದು ಈ ಪುಣ್ಯಕ್ಷೇತ್ರದಲ್ಲಿ ಪ್ರಾಣವನ್ನು ಬಿಟ್ಟನು.

ಅಪಿ ಚಾತ್ರ ಸ್ವಯಂ ಶಕ್ರೋ ಜಗೌ ಗಾಥಾಂ ಸುರೇಶ್ವರಃ ।
ಕುರುಕ್ಷೇತ್ರನಿಬದ್ಧಾಂ ವೈ ತಾಂ ಶೃಣುಷ್ವ ಹಲಾಯುಧ ॥೨೦॥

ಸುರೇಶ್ವರನಾದ ಇಂದ್ರನು ಸ್ವತಃ ತಾನೇ ಈ ಕ್ಷೇತ್ರದ ಬಗೆಗೆ ಕಥೆಯನ್ನು ಹೇಳಿದನು. ಬಲರಾಮನೇ! ಅದನ್ನು ಕೇಳು.

ಇಂದ್ರಃ

ಪಾಂಸವೋಽಪಿ ಕುರುಕ್ಷೇತ್ರೇ ವಾಯುನಾ ಸಮುದೀರಿತಾಃ ।
ಅಪಿ ದುಷ್ಕೃತಕರ್ಮಾಣಃ ತೇ ಯಾಂತಿ ಪರಮಾಂ ಗತಿಮ್ ॥೨೧॥

ಇಂದ್ರ– ಈ ಕುರುಕ್ಷೇತ್ರದ ಧೂಳು ಕೂಡ ಗಾಳಿಯ ಮೂಲಕ ದುಷ್ಕರ್ಮವನ್ನು ಮಾಡಿದ ಪಾಪಿಗಳಿಗೆ ಸೋಂಕಿದಾಗ ಅಂತಹ ಪಾಪಿಗಳೂ ಕೂಡ ಉತ್ತಮ ಗತಿಯನ್ನು ಹೊಂದುವರು.

ಕುರುಕ್ಷೇತ್ರಂ ಗಮಿಷ್ಯಾಮಿ ಕುರುಕ್ಷೇತ್ರೇ ವಸಾಮ್ಯಹಮ್ ।
ಇತ್ಯೇವಂ ನಿಶ್ಚಿತೋ ಭೂತ್ವಾ ತೇನೈವ ಸ್ವರ್ಗಮೇಷ್ಯತಿ ॥೨೨॥

ನಾನು ಕುರುಕ್ಷೇತ್ರಕ್ಕೆ ಹೋಗುವೆನು, ನಾನು ಕುರುಕ್ಷೇತ್ರದಲ್ಲಿ ವಾಸವನ್ನು ಮಾಡುವೆನು, ಎಂದು ನಿಶ್ಚಯವನ್ನು ಮಾಡಿಕೊಳ್ಳುವುದರಿಂದಲೇ ಸ್ವರ್ಗವನ್ನು ಹೊಂದುವರು.

ಕುರುಕ್ಷೇತ್ರಂ ಗಮಿಷ್ಯಾಮಿ ಕುರುಕ್ಷೇತ್ರೇ ವಸಾಮ್ಯಹಮ್ ।
ತಥಾ ಸ್ಥಾನಂ ಚ ಮೌನಂ ಚ ವೀರಾಸನಮುಪಾಸ್ಮಹೇ ॥೨೩॥

ಏವಂ ಪ್ರಲಪಮಾನೋಽಪಿ ಚಿಂತಯಂಶ್ಚ ಮುಹುರ್ಮುಹುಃ ।
ದೂರಸ್ಥೋ ಯದಿ ವಾ ತಿಷ್ಠಲ್ಲಭೇತ್ ಸ್ವರ್ಗಂ ಸುನಿಶ್ಚಿತಮ್ ॥೨೪॥

ನಾನು ಕುರುಕ್ಷೇತ್ರಕ್ಕೆ ಹೋಗುವೆನು, ನಾನು ಕುರುಕ್ಷೇತ್ರದಲ್ಲಿ ವಾಸವನ್ನು ಮಾಡುವೆನು. ಹಾಗೆಯೇ ಆ ಕ್ಷೇತ್ರವನ್ನು ಗೌರವಿಸಿ, ಮೌನವ್ರತವನ್ನು ಆಚರಿಸಿ ವೀರಾಸನದಲ್ಲಿ ತಪಸ್ಸನ್ನಾಚರಿಸುವೆನು. ಹೀಗೆ ಬಾಯಿಯಲ್ಲಿ ಉಚ್ಚರಿಸುವವನೂ,

ಮನಸ್ಸಿನಲ್ಲಿ ಮತ್ತೆ ಆಲೋಚಿಸುವವನೂ ಕೂಡ ದೂರದಲ್ಲಿರಲಿ ಅಥವಾ ಹತ್ತಿರದಲ್ಲಿರಲಿ, ಖಂಡಿತವಾಗಿಯೂ ಸ್ವರ್ಗವನ್ನು ಹೊಂದುತ್ತಾನೆ.

ಋಷಯಃ

ಸುರರ್ಷಯೋ ಬ್ರಾಹ್ಮಣಸತ್ತಮಾಶ್ಚ
ತಥಾ ನೃಗಾದ್ಯಾ ನರದೇವಮುಖ್ಯಾಃ ।
ಇಷ್ಟ್ವಾ ಮಹಾರ್ಹೈಃ ಕ್ರತುಭಿರ್ನ್ಯಸಿಂಹಾಃ
ಸನ್ನ್ಯಸ್ತದೇಹಾಃ ಸುಗತಿಂ ಪ್ರಪನ್ನಾಃ ॥೨೫॥

ಋಷಿಗಳು– ದೇವತೆಗಳು, ಮಾನವೋತ್ತಮರು, ನೃಗಮೊದಲಾದ ನರೋತ್ತಮ ರಾಜಶ್ರೇಷ್ಠರು ಬಹಳ ಮೌಲ್ಯವುಳ್ಳ ಯಾಗಗಳಿಂದ ಇಲ್ಲಿ ಯಾಗ ಮಾಡಿ, ದೇಹವನ್ನು ತ್ಯಾಗಮಾಡಿ ಉತ್ತಮಗತಿಯನ್ನು ಹೊಂದಿದರು.

ನರಂದುಕಾರಂದುಕಯೋರ್ಯದಂತರಂ
ರಾಮಹ್ರದಾನಾಂ ಚ ನರಂದುಕಸ್ಯ ।
ಏತತ್ ಕುರುಕ್ಷೇತ್ರಸ್ಯಮಂತಪಂಚಕಂ
ಪಿತಾಮಹಸ್ಯೋತ್ತರವೇದಿರುಚ್ಯತೇ ॥೨೬॥

ಒಂದು ದಿಕ್ಕಿನಲ್ಲಿ ನರಂದುಕ ಎಂಬ ಪ್ರದೇಶವು ಅವಧಿಯಾಗಿದೆ. ಇನ್ನೊಂದು ದಿಕ್ಕಿನಲ್ಲಿ ಅರಂದುಕ ಎಂಬ ಪ್ರದೇಶವು ಅವಧಿ (ಗಡಿ/ಸೀಮೆ) ಯಾಗಿದೆ. ಮತ್ತೊಂದು ದಿಕ್ಕಿನಲ್ಲಿ ರಾಮಸರೋವರವು ಅವಧಿಯಾಗಿದೆ. ನಾಲ್ಕನೆಯ ದಿಕ್ಕಿನಲ್ಲಿ ನರಂದುಕ(ಮಚಕ್ರುಕ) ಪ್ರದೇಶವು ಅವಧಿಯಾಗಿದೆ. ಹೀಗೆ ನಾಲ್ಕು ಅವಧಿಗಳ ಮಧ್ಯೆ ಇರುವ ಸ್ಯಮಂತಪಂಚಕವೆಂದು ಪ್ರಸಿದ್ಧವಾದ ಕುರುಕ್ಷೇತ್ರವು ಬ್ರಹ್ಮದೇವರ ಯಜ್ಞವೇದಿಕೆ ಎಂದು ಪ್ರಸಿದ್ಧವಾಗಿದೆ.

ಇದಂ ಶಿವಂ ಪುಣ್ಯತಮಂ ದಿವೌಕಸಾಂ
ಸುಸಮ್ಮತಂ ಸ್ವರ್ಗಗುಣೈಃ ಸಮನ್ವಿತಮ್ ।
ಅತಶ್ಚ ಸರ್ವೇऽತ್ರ ವಸುಂಧರಾಧಿಪಾ
ಹತಾ ಗಮಿಷ್ಯಂತಿ ಮಹಾತ್ಮನಾಂ ಗತಿಮ್ ॥೨೭॥

ಪುಣ್ಯಪ್ರದವಾದ ಈ ಮಂಗಳಕ್ಷೇತ್ರವು ದೇವತೆಗಳಿಗೂ ಸಮ್ಮತವಾಗಿದೆ. ಸಕಲಗುಣಗಳಿಂದ ಕೂಡಿದ್ದಾಗಿದೆ. ಆದ್ದರಿಂದಲೇ ಎಲ್ಲಾ ರಾಜರೂ ಇಲ್ಲಿ ಪ್ರಾಣಬಿಟ್ಟು ಮಹಾತ್ಮರು ಸೇರುವ ಸ್ಥಳಕ್ಕೆ ಹೋಗುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಕುರುಕ್ಷೇತ್ರಶಂಸನಂ ನಾಮ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಮಿತ್ರಾವರುಣಾಶ್ರಮದಲ್ಲಿ ಭೀಮ-ದುರ್ಯೋಧನರ
ಮಧ್ಯೆ ಗದಾಯುದ್ಧ ನಡೆಯುತ್ತಿರುವ ವಿಷಯವನ್ನು ನಾರದರಿಂದ
ಕೇಳಿ ತಿಳಿದ ಬಲರಾಮನು ಅದನ್ನು ನೋಡುವ ಇಚ್ಛೆಯಿಂದ
ಕುರುಕ್ಷೇತ್ರದ ಕಡೆಗೆ ಹೋಗುವುದು.

ವೈಶಂಪಾಯನಃ

ಕುರುಕ್ಷೇತ್ರಂ ತತೋ ಗತ್ವಾ ದತ್ತ್ವಾ ದೇಯಾಂಶ್ಚ ಸಾತ್ವತಃ ।
ಆಶ್ರಮಂ ಸುಮಹದ್ ದಿವ್ಯಮಗಮಜ್ಜನಮೇಜಯ ॥೧॥

ವೈಶಂಪಾಯನ- ಜನಮೇಜಯನೇ! ಸಾತ್ವತವಂಶದಲ್ಲಿ ಬಂದ ಬಲರಾಮನು ಕುರುಕ್ಷೇತ್ರಕ್ಕೆ ಹೋಗಿ, ಅಲ್ಲಿ ಕೊಡಬೇಕಾದ ದಾನದ ಪದಾರ್ಥಗಳನ್ನು ದಾನಮಾಡಿ, ಅಲೌಕಿಕವಾದ, ಮಹತ್ವಪೂರ್ಣವಾದ ಆಶ್ರಮಕ್ಕೆ ಹೋದನು.

ಮಧೂಕಾಮ್ರವನೋಪೇತಂ ಪ್ಲಕ್ಷನ್ಯಗ್ರೋಧಸಂಕುಲಮ್ ।
ಚಿರಬಿಲ್ವಯುತಂ ಪುಣ್ಯಂ ಪನಸಾರ್ಜುನಸಂಕುಲಮ್ ॥೨॥

ತಂ ದೃಷ್ಟ್ವಾ ಯಾದವಶ್ರೇಷ್ಠಃ ಪ್ರವರಂ ಪುಣ್ಯಲಕ್ಷಣಮ್ ।
ಪಪ್ರಚ್ಛ ತಾನೃಷೀನ್ ಸರ್ವಾನ್ ಕಸ್ಯಾಯಂ ಹ್ಯಾಶ್ರಮೋ ವರಃ ॥೩॥

ಆ ಆಶ್ರಮವು ಮಧೂಕವೃಕ್ಷ ಮತ್ತು ಮಾವಿನ ವೃಕ್ಷಗಳ ವನಗಳಿಂದ ಕೂಡಿತ್ತು. ಗೋಳಿ, ಅಶ್ವತ್ಥ, ಚಿರಬಿಲ್ವ ಹಲಸು, ಅರ್ಜುನ ವೃಕ್ಷಗಳಿಂದ ಕೂಡಿತ್ತು. ಇಂತಹ

ಉತ್ತಮವಾದ, ಪುಣ್ಯಪ್ರದವಾದ ಆಶ್ರಮವನ್ನು ನೋಡಿ ಬಲರಾಮನು ಅಲ್ಲಿದ್ದ ಋಷಿಗಳನ್ನು 'ಇದು ಯಾರ ಆಶ್ರಮ?' ಎಂಬುದಾಗಿ ಕೇಳಿದನು.

ತೇ ಚ ಸರ್ವೇ ಮಹಾತ್ಮಾನಮೂಚೂ ರಾಜನ್ ಹಲಾಯುಧಮ್ ॥೪॥

ರಾಜನೇ! ಆ ಎಲ್ಲಾ ಋಷಿಗಳು ಮಹಾತ್ಮನಾದ ಬಲರಾಮನಿಗೆ ಹೇಳಿದರು

ಋಷಯಃ

ಶೃಣು ವಿಸ್ತರಶೋ ರಾಮ ಯಸ್ಯಾಯಂ ಪೂರ್ವಮಾಶ್ರಮಃ ।
ಅತ್ರ ವಿಷ್ಣುಃ ಪುರಾ ದೇವಃ ತಪ್ತವಾಂಸ್ತಪ ಉತ್ತಮಮ್ ॥೫॥

ಋಷಿಗಳು– 'ಬಲರಾಮನೇ! ಹಿಂದೆ ಇದು ಯಾರ ಆಶ್ರಮವಾಗಿತ್ತೆಂಬುದನ್ನು ಹೇಳುತ್ತೇವೆ. ಕೇಳು! ಹಿಂದೆ ಇಲ್ಲಿ ವಿಷ್ಣುವು ಉತ್ತಮವಾದ ತಪಸ್ಸನ್ನು ಮಾಡಿದನು.

ಅತ್ರಾಸ್ಯ ವಿಧಿವದ್ ಯಜ್ಞಾಃ ಸರ್ವೇ ವೃತ್ತಾಃ ಪುರಾತನಾಃ ॥೬॥

ಇಲ್ಲಿ ಅವನು ವಿಧಿವತ್ತಾಗಿ ಅನೇಕ ಸನಾತನ ಯಾಗಗಳನ್ನು ನಡೆಸಿದ್ದನು.

ಅತ್ರೈವ ಬ್ರಾಹ್ಮಣೀ ವೃದ್ಧಾ ಕೌಮಾರಬ್ರಹ್ಮಚಾರಿಣೀ ।
ಯೋಗಯುಕ್ತಾ ದಿವಂ ಯಾತಾ ತಪೋಯುಕ್ತಾ ವಿಶಾಂಪತೇ ॥೭॥

ರಾಜನೇ! ಇಲ್ಲಿಯೇ ಕೌಮಾರಾವಸ್ಥೆಯಿಂದಲೇ ಬ್ರಹ್ಮಚಾರಿಣಿಯಾಗಿದ್ದ ತಪಸ್ಸಿನ ಸಿದ್ಧಿಯನ್ನು ಪಡೆದುಕೊಂಡಿದ್ದ ಒಬ್ಬ ತಪಸ್ವಿ ಬ್ರಾಹ್ಮಣಕನ್ಯೆಯು ಯೋಗ ಸಾಮರ್ಥ್ಯದಿಂದ ಸ್ವರ್ಗಕ್ಕೆ ಹೋದಳು.

ಬಭೂವ ಶ್ರೀಮತೀ ರಾಜನ್ ಶಾಂಡಿಲ್ಯಸ್ಯ ಮಹಾತ್ಮನಃ ।
ಸುತಾ ಧೃತವ್ರತಾ ಸಾಧ್ವೀ ನಿಯತಾ ಬ್ರಹ್ಮಚಾರಿಣೀ ॥೮॥

ರಾಜನೇ! ನಿಯಮಬದ್ಧವಾದ ಬ್ರಹ್ಮಚರ್ಯವ್ರತನಿಷ್ಠಳಾದ, ಸಾಧುಸ್ವಭಾವದ ಅವಳು ಮಹಾತ್ಮನಾದ ಶಾಂಡಿಲ್ಯಮುನಿಯ ಮಗಳಾಗಿದ್ದಳು.

ಸಾऽಪಿ ಪ್ರಾಪ್ಯ ಪರಂ ಯೋಗಂ ಗತ್ವಾ ಸ್ವರ್ಗಮನುತ್ತಮಮ್ ।
ಭುಕ್ತ್ವಾ ऽऽಶ್ರಮೇऽಶ್ವಮೇಧಸ್ಯ ಫಲಂ ಫಲವತಃ ಶುಭಮ್ ॥೯॥

ಅವಳು ಈ ಆಶ್ರಮದಲ್ಲಿ ದಿವ್ಯಫಲವನ್ನು ಕೊಡುವ ಅಶ್ವಮೇಧಯಾಗದ ಫಲವನ್ನು ಹೊಂದಿ, ಉತ್ತಮ ಯೋಗಶಕ್ತಿಯನ್ನು ಸಂಪಾದಿಸಿಕೊಂಡು ಅಸದೃಶವಾದ ಸ್ವರ್ಗವನ್ನು ಹೊಂದಿದಳು.

ಗತಾ ಸ್ವರ್ಗಂ ಮಹಾರಾಜ ಪೂಜಿತಾ ಚ ಮಹಾತ್ಮಭಿಃ ॥೧೦॥

ಮಹಾರಾಜನೇ! ಸ್ವರ್ಗಕ್ಕೆ ಹೋದ ಆಕೆಯು ಅಲ್ಲಿ ಮಹಾತ್ಮರಿಂದ ಪೂಜ್ಯಳಾದಳು'.

ಋಷೀಣಾಂ ವಚನಂ ಶ್ರುತ್ವಾ ಜಗಾಮಾಶ್ರಮಮುತ್ತಮಮ್ ॥೧೧॥

ಬಲರಾಮನು ಋಷಿಗಳ ಮಾತನ್ನು ಕೇಳಿ ಉತ್ತಮವಾದ ಆಶ್ರಮಕ್ಕೆ ಹೋದನು.

ಅಭಿಗಮ್ಯಾಶ್ರಮಂ ಪುಣ್ಯಂ ಸ ದೃಷ್ಟ್ವಾ ಯದುನಂದನಃ ।
ಋಷೀಂಸ್ತಾನಭಿವಾದ್ಯಾಥ ಪಾರ್ಶ್ವೇ ಹಿಮವತೋಽಚ್ಯುತಃ ॥೧೨॥

ಯದುವಂಶದ ಬಲರಾಮನು, ಹಿಮಾಲಯದ ಪಕ್ಕದಲ್ಲಿ ಇದ್ದ, ಪುಣ್ಯಕರವಾದ ಆಶ್ರಮವನ್ನು ನೋಡಿ ಋಷಿಗಳಿಗೆ ನಮಸ್ಕರಿಸಿದನು.

ಸಂಧ್ಯಾಕರ್ಮಾಣಿ ಸರ್ವಾಣಿ ನಿರ್ವರ್ತ್ಯಾರುರುಹೇಽಚಲಮ್ ॥೧೩॥

ಸಂಧ್ಯಾಕರ್ಮಗಳನ್ನು ಪೂರೈಸಿ ಪರ್ವತವನ್ನು ಏರಿದನು.

ನಾತಿದೂರಂ ತತೋ ಗತ್ವಾ ರಾಮಸ್ತಾಲಧ್ವಜೋ ಬಲೀ ।
ಪುಣ್ಯೇ ತೀರ್ಥವರೇ ಸ್ನಾತ್ವಾ ವಿಸ್ಮಯಂ ಪರಮಂ ಗತಃ ॥೧೪॥

ತಾಲಧ್ವಜನಾದ ಬಲರಾಮನು ಸ್ವಲ್ಪದೂರ ಹೋಗಿ, ಪುಣ್ಯಪ್ರದವಾದ ಉತ್ತಮ ತೀರ್ಥದಲ್ಲಿ ಸ್ನಾನವನ್ನು ಮಾಡಿ ಬಹಳ ಆಶ್ಚರ್ಯವನ್ನು ಹೊಂದಿದನು.

ಪ್ರಭವಂ ಸ ಸರಸ್ವತ್ಯಾಃ ಪ್ಲಕ್ಷಪ್ರಸ್ರವಣಂ ಬಲಃ ।
ಸಂಪ್ರಾಪ್ತಃ ಕಾರಪಚನಂ ತೀರ್ಥಪ್ರವರಮುತ್ತಮಮ್ ॥೧೫॥

ಬಲರಾಮನು ಸರಸ್ವತಿಯ ಉಗಮಸ್ಥಾನವಾದ 'ಪ್ಲಕ್ಷಪ್ರಸ್ರವಣ' ಎಂಬ ತೀರ್ಥಕ್ಕೆ ಹೋದನು. ಅಲ್ಲಿಂದ ಮುಂದೆ ಉತ್ತಮತೀರ್ಥವಾದ ಕಾರಪಚನ ಎಂಬ ಹೆಸರಿನ ತೀರ್ಥವನ್ನು ಹೊಂದಿದನು.

ಹಲಾಯುಧಸ್ತು ತತ್ರಾಪಿ ದತ್ತ್ವಾ ದಾನಂ ಮಹಾಬಲಃ ।
ಆಪ್ಲುತಃ ಸಲಿಲೇ ಶೀತೇ ತಸ್ಮಾಚ್ಚಾಪಿ ಜಗಾಮ ಹ ॥೧೬॥

ಮಹಾಬಲಶಾಲಿಯಾದ ಬಲರಾಮನು ಅಲ್ಲಿಯೂ ದಾನವನ್ನು ಮಾಡಿ, ತಂಪಾದ ನೀರಿನಲ್ಲಿ ಅವಗಾಹ ಸ್ನಾನವನ್ನು ಮಾಡಿ ಅಲ್ಲಿಂದಲೂ ಮುಂದೆ ಹೋದನು.

ಆಶ್ರಮಂ ಪರಮಪ್ರೀತೋ ಮಿತ್ರಸ್ಯ ವರುಣಸ್ಯ ಚ ॥೧೭॥

ಬಹಳ ಪ್ರೀತನಾಗಿ ಮಿತ್ರ ಮತ್ತು ವರುಣರ ಆಶ್ರಮಕ್ಕೆ ಹೋದನು.

ಇಂದ್ರಾಗ್ನೀ ಅರ್ಯಮಾ ಚೈವ ಯತ್ರ ಪ್ರಾಕ್ ಪ್ರೀತಿಮಾಪ್ನುವನ್ ।
ತಂ ದೇಶಂ ಕಾರಪಚನಂ ಸ ತಸ್ಮಾದಾಜಗಾಮ ಹ ॥೧೮॥

ಅಲ್ಲಿಂದ ಕಾರಪಚನ ತೀರ್ಥಕ್ಕೆ ಹೋದನು. ಆ ಕಾರಪಚನ ತೀರ್ಥದಲ್ಲಿ ಹಿಂದೆ ಇಂದ್ರ, ಅಗ್ನಿ ಮತ್ತು ಅರ್ಯಮರು ಬಹಳವಾದ ತೃಪ್ತಿಯನ್ನು ಹೊಂದಿದ್ದರು.

ಸ್ನಾತ್ವಾ ತತ್ರಾಪಿ ಧರ್ಮಾತ್ಮಾ ಪರಾಂ ತುಷ್ಟಿಮವಾಪ್ಯ ಚ ।
ಋಷಿಭಿಶ್ಚೈವ ಸಿದ್ಧೈಶ್ಚ ಸಹಿತೋ ವೈ ಮಹಾಬಲಃ ॥೧೯॥

ಅಲ್ಲಿಯೂ ಧರ್ಮಾತ್ಮನಾದ ಬಲರಾಮನು ಸ್ನಾನವನ್ನು ಮಾಡಿ, ಬಹಳ ಸಂತೋಷವನ್ನು ಹೊಂದಿದನು. ಅಲ್ಲಿ ಋಷಿಗಳ ಮತ್ತು ಸಿದ್ಧಪುರುಷರ ಸಮಾಗಮವನ್ನು ಮಾಡಿದನು.

ಉಪವಿಷ್ಟಃ ಕಥಾಃ ಶುಭ್ರಾಃ ಶುಶ್ರಾವ ಯದುನಂದನಃ ॥೨೦॥

ಬಲರಾಮನು ಅಲ್ಲಿ ಕುಳಿತುಕೊಂಡು ಮಂಗಳವಾದ ಕಥೆಗಳನ್ನು ಕೇಳಿದನು.

ತಥಾ ತು ತಿಷ್ಠತಾಂ ತೇಷಾಂ ನಾರದೋ ಭಗವಾನ್ ಋಷಿಃ ।
ಆಜಗಾಮಾಥ ತಂ ದೇಶಂ ಯತ್ರ ರಾಮೋ ವ್ಯವಸ್ಥಿತಃ ॥೨೧॥

ಅವರೆಲ್ಲಾ ಅಲ್ಲಿ ಹಾಗಿರಲು ಭಗವಾನ್ ನಾರದ ಋಷಿಯು ಬಲರಾಮನಿದ್ದಲ್ಲಿಗೆ ಬಂದನು.

ಜಟಾಮಂಡಲಸಂವೀತಃ ಕುಶಚೀರೀ ಮಹಾಯಶಾಃ ।
ಹೇಮದಂಡಧರೋ ರಾಜನ್ ಕಮಂಡಲುಧರಸ್ತಥಾ ॥೨೨॥

ರಾಜನೇ! ಆ ಮಹಾತ್ಮನಾದ ನಾರದನು ಜಟಾಧಾರಿಯಾಗಿದ್ದನು. ಸೊಂಟದಲ್ಲಿ ದರ್ಭೆಯನ್ನೂ ಮೈಯಲ್ಲಿ ನಾರುಮಡಿಯನ್ನೂ ಧರಿಸಿದ್ದನು. ಬಂಗಾರದ ದಂಡವನ್ನು ಹಿಡಿದುಕೊಂಡಿದ್ದನು. ಹಾಗೆಯೇ ಕಮಂಡಲುವನ್ನು ಧರಿಸಿದ್ದನು.

ಕರ್ಣಪೀಯೂಷಶಬ್ದಾಂ ತಾಂ ಗೃಹ್ಯ ವೀಣಾಂ ಮನೋರಮಾಮ್ ।
ನೃತ್ಯೇ ಗೀತೇ ಚ ಕುಶಲೋ ದೇವಬ್ರಾಹ್ಮಣಪೂಜಕಃ ॥೨೩॥

ನೃತ್ಯ ಮತ್ತು ಗಾನದಲ್ಲಿ ನಿಷ್ಣಾತನಾದ, ದೇವತೆಗಳನ್ನು ಮತ್ತು ಬ್ರಾಹ್ಮಣರನ್ನು ಪೂಜಿಸುವ ನಾರದನು ಮನಸ್ಸಿಗೆ ಮುದವನ್ನೀಡುವ ವೀಣೆಯನ್ನು ಹಿಡಿದುಕೊಂಡು ಕಿವಿಗೆ ಅಮೃತದ ಹಾಗೆ ಆಪ್ಯಾಯಮಾನವಾದ ನಾದವನ್ನು ಹೊರಹೊಮ್ಮಿಸುತ್ತಿದ್ದನು.

ಪ್ರೇರಕಃ ಕಲಹಾನಾಂ ಚ ನಿತ್ಯಂ ಚ ಕಲಹಪ್ರಿಯಃ ।
ತಂ ದೇಶಮಗಮಚ್ಛ್ರೀಮಾನ್ ಯತ್ರ ರಾಮೋ ಹಲಾಯುಧಃ ॥೨೪॥

ಮೇಲ್ನೋಟಕ್ಕೆ ಸದಾ ಜಗಳವನ್ನು ಉಂಟುಮಾಡುತ್ತಿದ್ದ ನಾರದನು ಕಲಹಪ್ರಿಯ ಎಂದೆನಿಸಿಕೊಳ್ಳುತ್ತಿದ್ದನು. ಅಂತಹ ನಾರದನು ಬಲರಾಮನು ಇದ್ದ ಪ್ರದೇಶಕ್ಕೆ ಬಂದನು.

ಪ್ರತ್ಯುತ್ಥಾಯ ತು ತಂ ರಾಮಃ ಪೂಜಯಿತ್ವಾ ಯತವ್ರತಮ್ ।
ದೇವರ್ಷಿಂ ಪರ್ಯಪೃಚ್ಛತ್ತಂ ಯಥಾವೃತ್ತಂ ಕುರೂನ್ ಪ್ರತಿ ॥೨೫॥

ಬಲರಾಮನು ಎದ್ದುನಿಂತು ವ್ರತಧಾರಿಯಾದ ನಾರದನನ್ನು ಪೂಜಿಸಿ ದೇವರ್ಷಿಯಾದ ನಾರದಮಹರ್ಷಿಯಲ್ಲಿ ಕುರುಗಳ ಚರಿತ್ರೆಯ ಬಗ್ಗೆ ಪ್ರಶ್ನಿಸಿದನು.

ತದಾऽಸ್ಯಾಕಥಯದ್ ರಾಜನ್ ನಾರದಃ ಸರ್ವವೇದವಿತ್ ।
ಸರ್ವಮೇವ ಯಥಾತತ್ತ್ವಮತೀತಂ ಕುರುಸಂಕ್ಷಯಮ್ ॥೨೬॥

ರಾಜನೇ! ಸಕಲವೇದವನ್ನು ತಿಳಿದಿದ್ದ ನಾರದನು ನಡೆದುಹೋದ ಕೌರವನಾಶವನ್ನು ಯಥಾವತ್ತಾಗಿ ಬಲರಾಮನಿಗೆ ಹೇಳಿದನು.

ತತೋಽಬ್ರವೀದ್ ರೌಹಿಣೇಯೋ ನಾರದಂ ದೀನಯಾ ಗಿರಾ ॥೨೭॥

ಅನಂತರ ಬಲರಾಮನು ದುಃಖಭರಿತವಾದ ಮಾತುಗಳಿಂದ ನಾರದನಿಗೆ ಹೀಗೆ ಹೇಳಿದನು.

ರಾಮಃ

ಕಿಮವಸ್ಥಂ ತು ತತ್ ಕ್ಷತ್ರಂ ಯೇ ಚ ತತ್ರಾಭವನ್ ನೃಪಾಃ ।
ಶ್ರುತಮೇತನ್ಮಯಾ ಪೂರ್ವಂ ಸರ್ವಮೇವ ತಪೋಧನ ॥೨೮॥

ವಿಸ್ತರಶ್ರವಣೇ ಜಾತಂ ಕೌತೂಹಲಮತೀವ ಮೇ ॥೨೯॥

ಬಲರಾಮ– 'ತಪೋಧನನೇ! ಅಲ್ಲಿ ಯಾವ ರಾಜರು ಇದ್ದರೋ ಅಂತಹ ಕ್ಷತ್ರಿಯರ ಪಾಡೇನು? ನಾನು ಇದನ್ನೆಲ್ಲಾ ಹಿಂದೆಯೇ ಕೇಳಿ ತಿಳಿದುಕೊಂಡಿದ್ದೆ. ಇದನ್ನು ಮತ್ತೂ ವಿಸ್ತಾರವಾಗಿ ಕೇಳುವ ಕುತೂಹಲವು ನನಗೆ ಉಂಟಾಗಿದೆ.'

ನಾರದಃ

ಪೂರ್ವಮೇವ ಹತೋ ಭೀಷ್ಮೋ ದ್ರೋಣಃ ಸೇನಾಪತಿಸ್ತಥಾ ।
ಹತೋ ವೈಕರ್ತನಃ ಕರ್ಣಃ ಪುತ್ರಾಶ್ಚಾಸ್ಯ ಮಹಾಬಲಾಃ ॥೩೦॥

ನಾರದ– ಸೇನಾಧಿಪತಿಗಳಾದ ಭೀಷ್ಮ, ದ್ರೋಣ, ಕರ್ಣ ಮೊದಲಾದವರು ಹಿಂದೆಯೇ ಸತ್ತುಹೋಗಿದ್ದಾರೆ. ಮಹಾಬಲಶಾಲಿಗಳಾದ ಅವರ ಮಕ್ಕಳೂ ಸತ್ತಿದ್ದಾರೆ.

ಭೂರಿಶ್ರವಾ ರೌಹಿಣೇಯ ಮದ್ರರಾಜಶ್ಚ ವೀರ್ಯವಾನ್ ।
ಏತೇ ಚಾನ್ಯೇ ಚ ಬಹವೋ ಹತಾಸ್ತತ್ರ ಮಹಾಬಲಾಃ ॥೩೧॥

ರೋಹಿಣೀಪುತ್ರನೇ! ಭೂರಿಶ್ರವಸ್ಸು, ವೀರನಾದ ಮದ್ರರಾಜ ಶಲ್ಯ ಇವರೂ ಕೂಡ ಸತ್ತಿದ್ದಾರೆ.

ಪ್ರಿಯಾನ್ ಪ್ರಾಣಾನ್ ಪರಿತ್ಯಜ್ಯ ಪ್ರಿಯಾರ್ಥಂ ಕೌರವಸ್ಯ ವೈ ।
ರಾಜಾನೋ ರಾಜಪುತ್ರಾಶ್ಚ ಸಮರೇಷ್ವನಿವರ್ತಿನಃ ॥೩೨॥

ಯುದ್ಧದಲ್ಲಿ ಹಿಂತಿರುಗದ ರಾಜರು ಮತ್ತು ರಾಜಪುತ್ರರು ದುರ್ಯೋಧನನ ಸಂತೋಷಕ್ಕಾಗಿ ತಮಗೆ ಅತ್ಯಂತ ಪ್ರಿಯವಾದ ಪ್ರಾಣವನ್ನೇ ಬಿಟ್ಟಿದ್ದಾರೆ.

ಅಹತಾಸ್ತು ಮಹಾಬಾಹೋ ಶೃಣು ಯೇ ತತ್ರ ಮಾಧವ ॥೩೩॥

ಬಲರಾಮನೇ! ಸಾಯದೆ ಉಳಿದಿರುವವರ ಬಗ್ಗೆ ಹೇಳುತ್ತೇನೆ, ಕೇಳು.

ಧಾರ್ತರಾಷ್ಟ್ರೇ ಬಲೇ ಶೇಷಾಃ ಕೃಪೋ ಭೋಜಶ್ಚ ವೀರ್ಯವಾನ್ ।
ಅಶ್ವತ್ಥಾಮಾ ಚ ವಿಕ್ರಾಂತೋ ಭಗ್ನಸೈನ್ಯಾ ದಿಶೋ ಗತಾಃ ॥೩೪॥

ಧೃತರಾಷ್ಟ್ರನ ಸೈನ್ಯದಲ್ಲಿ ಕೃಪ, ವೀರನಾದ ಕೃತವರ್ಮ, ಪರಾಕ್ರಮಿ ಅಶ್ವತ್ಥಾಮ ಇವರು ಉಳಿದುಕೊಂಡಿದ್ದಾರೆ. ಸೈನ್ಯವನ್ನೆಲ್ಲಾ ಕಳೆದುಕೊಂಡ ಇವರು ದಿಕ್ಕಾಪಾಲಾಗಿ ಹೋದರು.

ದುರ್ಯೋಧನೋ ಹತೇ ಸೈನ್ಯೇ ವಿದ್ರುತೇಷು ಪದಾತಿಷು ।
ಹ್ರದಂ ದ್ವೈಪಾಯನಂ ನಾಮ ವಿವೇಶ ಭೃಶದುಃಖಿತಃ ॥೩೫॥

ಸೈನ್ಯವು ನಾಶವಾಗಿ ಪದಾತಿಗಳೆಲ್ಲಾ ಓಡಿಹೋಗಲು, ದುರ್ಯೋಧನನು ಬಹಳ ದುಃಖದಿಂದ ದ್ವೈಪಾಯನ ಸರೋವರವನ್ನು ಪ್ರವೇಶಿಸಿದನು.

ಶಯಾನಂ ಧಾರ್ತರಾಷ್ಟ್ರಂ ತು ಸ್ತಂಭಿತೇ ಸಲಿಲೇ ತದಾ ।
ಪಾಂಡವಾಃ ಸಹ ಕೃಷ್ಣೇನ ವಾಗ್ಭಿರುಗ್ರಾಭಿರಾರ್ದಯನ್ ॥೩೬॥

ಜಲಸ್ತಂಭವನ್ನು ಮಾಡಿಕೊಂಡು ವಿಶ್ರಾಂತಿಗಾಗಿ ನೀರೊಳಗೆ ಮಲಗಿದ್ದ ದುರ್ಯೋಧನನನ್ನು ಪಾಂಡವರು ಕಠಿಣವಾದ ತೀಕ್ಷ್ಣಮಾತುಗಳಿಂದ ಪೀಡಿಸಿದರು.

ಸ ತುದ್ಯಮಾನೋ ಬಲವಾನ್ ವಾಗ್ಭೀ ರಾಮ ಸಮಂತತಃ ।
ಉತ್ಥಿತೋಽಭೂದ್ ಹ್ರದಾದ್ ವೀರಃ ಪ್ರಗೃಹ್ಯ ಮಹತೀಂ ಗದಾಮ್ ॥

ಹೀಗೆ ಬಲಶಾಲಿಯಾದ ದುರ್ಯೋಧನನು ಚುಚ್ಚುಮಾತುಗಳಿಂದ ಘಾಸಿಗೊಂಡು, ಸರೋವರದಿಂದ ಎದ್ದು ಬಂದು, ಬೃಹತ್ತಾದ ಗದೆಯನ್ನು ಹಿಡಿದು ಯುದ್ಧಸನ್ನದ್ಧನಾದನು.

ಸ ಚಾಭ್ಯುಪಾಗತೋ ಯುದ್ಧಂ ಭೀಮಸೇನೇನ ಸಾಂಪ್ರತಮ್ ।
ಭವಿಷ್ಯತಿ ಹಿ ತಯೋರದ್ಯ ಯುದ್ಧಂ ರಾಮ ಸುದಾರುಣಮ್ ॥೩೮॥

ಈಗ ಅವನು ಭೀಮಸೇನನೊಡನೆ ಯುದ್ಧಕ್ಕೆ ತಯಾರಾಗಿ ನಿಂತಿದ್ದಾನೆ. ಬಲರಾಮನೇ! ಇವತ್ತು ಭೀಮ-ದುರ್ಯೋಧನರ ಮಧ್ಯೆ ಘೋರವಾದ ಗದಾಯುದ್ಧವು ನಡೆಯಲಿದೆ.

ಯದಿ ಕೌತೂಹಲಂ ತೇऽಸ್ತಿ ವ್ರಜ ಮಾಧವ ಮಾ ಚಿರಮ್ ।
ಪಶ್ಯ ಯುದ್ಧಂ ಮಹಾಘೋರಂ ಶಿಷ್ಯಯೋರ್ಯದಿ ಮನ್ಯಸೇ ॥೩೯॥

ಬಲರಾಮನೇ! ನಿನಗೆ ಕುತೂಹಲವು ಇರುವುದಾದರೆ ತಡಮಾಡದೆ ಅಲ್ಲಿಗೆ ಹೋಗು. ನೀನು ಇಷ್ಟಪಡುವುದಾದರೆ ನಿನ್ನ ಶಿಷ್ಯರ ಮಧ್ಯೆ ನಡೆಯುವ ಘೋರಯುದ್ಧವನ್ನು ನೋಡು.

ವೈಶಂಪಾಯನಃ

ಸ ನಾರದವಚಃ ಶ್ರುತ್ವಾ ತಾನಭ್ಯರ್ಚ್ಯ ದ್ವಿಜರ್ಷಭಾನ್ ।
ಸರ್ವಾನ್ ವಿಸರ್ಜಯಾಮಾಸ ಯೇ ತೇನಾನುಗತಾಃ ಸಹ ॥೪೦॥

ವೈಶಂಪಾಯನ– ಬಲರಾಮನು ನಾರದನ ಮಾತನ್ನು ಕೇಳಿ ಅಲ್ಲಿದ್ದ ಬ್ರಾಹ್ಮಣೋತ್ತಮರನ್ನು ಪೂಜಿಸಿ, ತನ್ನೊಡನೆ ಬಂದಿದ್ದ ಎಲ್ಲರನ್ನೂ ಕಳುಹಿಸಿಕೊಟ್ಟನು.

ಗಮ್ಯತಾಂ ದ್ವಾರಕಾಂ ಚೇತಿ ಸೋऽನ್ವಶಾದನುಯಾಯಿನಃ ॥೪೧॥

ತನ್ನನ್ನು ಅನುಸರಿಸಿಕೊಂಡು ಬಂದವರನ್ನು 'ನೀವೆಲ್ಲಾ ದ್ವಾರಕೆಗೆ ಹೋಗಿ' ಎಂದು ಆದೇಶಿಸಿದನು.

ಸೋऽವತೀರ್ಯಾಚಲಶ್ರೇಷ್ಠಾತ್ ಪ್ಲಕ್ಷಪ್ರಸ್ರವಣಾತ್ ತತಃ ।
ಸ ತು ಪ್ರೀತಮನಾ ರಾಮಃ ಶ್ರುತ್ವಾ ತೀರ್ಥಫಲಂ ಮಹತ್ ॥೪೨॥

ವಿಪ್ರಾಣಾಮಗ್ರತಃ ಶ್ಲೋಕಮಗಾಯದಮಿತದ್ಯುತಿಃ ॥೪೩॥

ಅನಂತರ ತೀರ್ಥದ ಮಹಿಮೆಯನ್ನು ಕೇಳಿ ಸಂತುಷ್ಟನಾಗಿದ್ದ ಬಲರಾಮನು ಪ್ಲಕ್ಷ ಪ್ರಶ್ರವಣ ಪರ್ವತದಿಂದ ಕೆಳಗಿಳಿದು ಬ್ರಾಹ್ಮಣರ ಮುಂದೆ ಈ ಶ್ಲೋಕವನ್ನು ಹೇಳಿದನು.

ಸರಸ್ವತೀವಾಸಸಮಾ ಕುತೋ ರತಿಃ
ಸರಸ್ವತೀವಾಸಸಮಾಃ ಕುತೋ ಗುಣಾಃ ।
ಸರಸ್ವತೀಹೀನವಿದೇಶವಾಸಿನಃ
ಸದಾ ಸ್ಮರಿಷ್ಯಂತಿ ನದೀಂ ಸರಸ್ವತೀಮ್ ॥೪೪॥

'ಸರಸ್ವತಿಯ ತೀರ್ಥಕ್ಷೇತ್ರಗಳಲ್ಲಿ ವಾಸ ಮಾಡುವಾಗ ಸಿಗುವ ಸುಖವು ಬೇರೆ ಯಾವುದರಿಂದಲೂ ಉಂಟಾಗಲಾರದು. ಸರಸ್ವತಿವಾಸಕ್ಕೆ ಸಮವಾದ ಗುಣಗಳು ಎಲ್ಲಿ ಇವೆ? ಸರಸ್ವತಿಯ ಸನ್ನಿಧಾನವಿಲ್ಲದ ಬೇರೆ ಪ್ರದೇಶಗಳಲ್ಲಿ ವಾಸಮಾಡುವ ಜನರು ಸದಾ ಸರಸ್ವತೀನದಿಯನ್ನು ಸ್ಮರಿಸಿಕೊಳ್ಳುತ್ತಾರೆ.

ಸರಸ್ವತೀ ಸರ್ವನದೀಷು ಪುಣ್ಯಾ
ಸರಸ್ವತೀ ಲೋಕಸುಖಾವಹಾ ಚ ।
ಸರಸ್ವತೀಂ ಪ್ರಾಪ್ಯ ನರಾಃ ಸುದುಷ್ಕೃತಾಃ
ಸದಾ ನ ಶೋಚಂತಿ ಪರತ್ರ ಚೇಹ (ಚ) ॥೪೫॥

ಸರಸ್ವತಿಯು ಎಲ್ಲಾ ನದಿಗಳಲ್ಲೂ ಬಹಳ ಪುಣ್ಯದಾಯಕವಾಗಿದೆ. ಸರಸ್ವತಿಯು ಲೋಕಕ್ಕೆ ಸುಖವನ್ನುಂಟುಮಾಡುವಂತಹದ್ದು. ಕೆಟ್ಟ ಕೆಲಸವನ್ನು ಮಾಡಿದ ಮನುಷ್ಯರು ಸರಸ್ವತಿಯನ್ನು ಹೊಂದಿ ಇಹದಲ್ಲಿಯೂ ಪರದಲ್ಲಿಯೂ ದುಃಖವನ್ನು ಅನುಭವಿಸುವುದಿಲ್ಲ.

ವೈಶಂಪಾಯನಃ

ತತೋ ಮುಹುರ್ಮುಹುರ್ಭಕ್ತ್ಯಾ ಪ್ರೇಕ್ಷಮಾಣಃ ಸರಸ್ವತೀಮ್ ।
ಹಯೈರ್ಯುಕ್ತಂ ರಥಂ ಶೀಘ್ರಮಾರುರೋಹ ಪರಂತಪಃ ॥೪೬॥

ವೈಶಂಪಾಯನ– ಅನಂತರ ಭಕ್ತಿಯಿಂದ ಮತ್ತೆ ಮತ್ತೆ ಸರಸ್ವತಿಯನ್ನು ನೋಡುತ್ತಾ ಶತ್ರುತಾಪಕನಾದ ಬಲರಾಮನು ಕುದುರೆಗಳನ್ನು ಕಟ್ಟಿತಯಾರಾದ ರಥವನ್ನು ಏರಿದನು.

ಸ ಶೀಘ್ರಗಾಮಿನಾ ತೇನ ರಥೇನ ಯದುಪುಂಗವಃ ।
ದಿದೃಕ್ಷುರಭಿಸಂಪ್ರಾಪ್ತಃ ಶಿಷ್ಯಯುದ್ಧಮುಪಸ್ಥಿತಮ್ ॥೪೭॥

ಯದುಶ್ರೇಷ್ಠನಾದ ಬಲರಾಮನು ವೇಗವಾಗಿ ಸಾಗುವ ರಥದಿಂದ ಯುದ್ಧಸನ್ನದ್ಧನಾದ ತನ್ನ ಶಿಷ್ಯ ದುರ್ಯೋಧನನನ್ನು ನೋಡುವ ಇಚ್ಛೆಯಿಂದ ಅಲ್ಲಿಗೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಸರಸ್ವತೀಮಾಹಾತ್ಮ್ಯಂ ನಾಮ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಗದಾಯುದ್ಧಕ್ಕೆ ಸನ್ನದ್ಧರಾದ ಭೀಮ ಮತ್ತು ದುರ್ಯೋಧನರ ವರ್ಣನೆ. ಭೀಮ ಮತ್ತು ದುರ್ಯೋಧನರ ಪೌರುಷದ ಮಾತುಗಳು.

ವೈಶಂಪಾಯನಃ

ಏವಂ ತದ್ಯುದ್ಧಮಭವತ್ ತುಮುಲಂ ಜನಮೇಜಯ ।
ಯತ್ರ ದುಃಖಾನ್ವಿತೋ ರಾಜಾ ಧೃತರಾಷ್ಟ್ರೋऽಬ್ರವೀದಿದಮ್ ॥೧॥

ವೈಶಂಪಾಯನ– ಜನಮೇಜಯನೇ! ಈ ರೀತಿಯಾಗಿ ಕೋಲಾಹಲಕ್ಕೊಳಗಾದ ಘೋರ ಯುದ್ಧವು ನಡೆಯಿತು. ಚಿಂತಾಕ್ರಾಂತನಾದ ಧೃತರಾಷ್ಟ್ರನು ಈ ಮಾತನ್ನು ಹೇಳುತ್ತಾನೆ.

ಧೃತರಾಷ್ಟ್ರಃ

ರಾಮಂ ಸನ್ನಿಹಿತಂ ಶ್ರುತ್ವಾ ಗದಾಯುದ್ಧ ಉಪಸ್ಥಿತೇ ।
ಮಮ ಪುತ್ರಃ ಕಥಂ ಭೀಮಂ ಪ್ರತ್ಯಯುಧ್ಯತ ಸಂಜಯ ॥೨॥

ಧೃತರಾಷ್ಟ್ರ– ಸಂಜಯನೇ! ಗದಾಯುದ್ಧವು ನಡೆಯಲು ಕಾಲ ಸಮೀಪಿಸುತ್ತಿದ್ದಾಗ ಬಲರಾಮನು ಬಂದಿದ್ದನ್ನು ತಿಳಿದು ನನ್ನ ಮಗ ದುರ್ಯೋಧನನು ಭೀಮನ ವಿರುದ್ಧವಾಗಿ ಮಾಡಿದ ಯುದ್ಧವು ಹೇಗಿತ್ತು?

ಸಂಜಯಃ

ರಾಮಸಾನ್ನಿಧ್ಯಮಾಗಮ್ಯ ಪುತ್ರೋ ದುರ್ಯೋಧನಸ್ತವ ।
ಯೋದ್ಧುಕಾಮೋ ಮಹಾಬಾಹುಃ ಸಮಹೃಷ್ಯತ ವೀರ್ಯವಾನ್ ॥೩॥

ಸಂಜಯ– ಬಲರಾಮನು ಮುಂದೆ ಬಂದಾಗ ನಿನ್ನ ಮಗನಾದ ಮಹಾಬಾಹು ವೀರ ದುರ್ಯೋಧನನು ಯುದ್ಧದ ಇಚ್ಛೆಯಿಂದ ಸಂತೋಷಪಟ್ಟನು.

ದೃಷ್ಟ್ವಾ ಲಾಂಗಲಿನಂ ರಾಜಾ ಪ್ರತ್ಯುತ್ಥಾಯ ಚ ಭಾರತ ।
ಪ್ರೀತ್ಯಾ ಪರಮಯಾ ಯುಕ್ತೋ ಯುಧಿಷ್ಠಿರಮಥಾಬ್ರವೀತ್ ॥೪॥

ಧೃತರಾಷ್ಟ್ರನೇ! ಬಲರಾಮನು ಬಂದಿರುವುದನ್ನು ನೋಡಿದ ರಾಜ ದುರ್ಯೋಧನನು ಬಹಳ ಸಂತೋಷದಿಂದ ಕೂಡಿದವನಾಗಿ ಧರ್ಮರಾಜನಿಗೆ ಹೀಗೆ ಹೇಳಿದನು.

ದುರ್ಯೋಧನಃ

ಸಮಂತಪಂಚಕಂ ಪುಣ್ಯಮಿತೋ ಯಾಮ ವಿಶಾಂಪತೇ ।
ಪ್ರಥಿತೋತ್ತರವೇದಿಃ ಸಾ ಬ್ರಹ್ಮಲೋಕೇ ಪ್ರಜಾಪತೇಃ ॥೫॥

ದುರ್ಯೋಧನ– ರಾಜನೇ! ನಾವು ಇಲ್ಲಿಂದ ಸಮಂತಪಂಚಕ ಕ್ಷೇತ್ರಕ್ಕೆ ಹೋಗೋಣ. ಅದು ಪ್ರಜಾಪತಿಯ ಉತ್ತರಯಜ್ಞವೇದಿಕೆ ಎಂಬುದಾಗಿ ಬ್ರಹ್ಮಲೋಕದಲ್ಲಿ ಪ್ರಸಿದ್ಧವಾಗಿದೆ.

ತಸ್ಮಿನ್ ಧ್ರುವೇ ಪುಣ್ಯತಮೇ ತ್ರೈಲೋಕ್ಯಸ್ಯ ಸನಾತನೇ ।
ಸಂಗ್ರಾಮೇ ನಿಧನಂ ಪ್ರಾಪ್ಯ ಧ್ರುವಂ ಸ್ವರ್ಗಂ ಗಮಿಷ್ಯತಿ ॥೬॥

ಮೂರು ಲೋಕಗಳಲ್ಲಿಯೂ ಸನಾತನ ಕ್ಷೇತ್ರವೆಂದು ಪ್ರಸಿದ್ಧವಾದ, ನಿಶ್ಚಯವಾಗಿಯೂ ಪುಣ್ಯಪ್ರದವಾದ ಆ ಕ್ಷೇತ್ರದಲ್ಲಿ ಯುದ್ಧಮಾಡಿ ಸತ್ತರೆ ನಿಶ್ಚಯವಾಗಿಯೂ ಸ್ವರ್ಗಕ್ಕೆ ಹೋಗುತ್ತಾನೆ.

ಸಂಜಯಃ

ತಥೇತ್ಯುಕ್ತ್ವಾ ಮಹಾರಾಜ ಕುಂತೀಪುತ್ರೋ ಯುಧಿಷ್ಠಿರಃ ।
ಸಮಂತಪಂಚಕಂ ವೀರಃ ಪ್ರಾಯಾದಭಿಮುಖಃ ಪ್ರಭುಃ ॥೭॥

ಸಂಜಯ– ಮಹಾರಾಜನೇ! ವೀರನಾದ ಪ್ರಭುಯುಧಿಷ್ಠಿರನು 'ಹಾಗೆಯೇ ಆಗಲಿ' ಎಂದು ಹೇಳಿ ಸಮಂತಪಂಚಕಕ್ಕೆ ಅಭಿಮುಖವಾಗಿ ಹೋದನು.

ತತೋ ದುರ್ಯೋಧನೋ ರಾಜನ್ ಪ್ರಗೃಹ್ಯ ಮಹತೀಂ ಗದಾಮ್ ।
ಪದ್ಭ್ಯಾಮಮರ್ಷೀ ದ್ಯುತಿಮಾನ್ ಅಗಚ್ಛತ್ ಪಾಂಡವೈಃ ಸಹ ॥೮॥

ರಾಜನೇ! ಅನಂತರ ಕಾಂತಿಮಂತನಾದ ದುರ್ಯೋಧನನು ದೊಡ್ಡದಾದ ಗದೆಯನ್ನು ಹಿಡಿದುಕೊಂಡು ಪಾದಚಾರಿಯಾಗಿ ನಡೆದುಕೊಂಡು ಪಾಂಡವರ ಜೊತೆಗೆ ಅಸಹನೆಯಿಂದ ಕೂಡಿದವನಾಗಿ ಹೋದನು.

ತಥಾ ಯಾಂತಂ ಗದಾಹಸ್ತಂ ವರ್ಮಿಣಂ ಚಾಪಿ ದಂಸಿತಮ್ ।
ಅಂತರಿಕ್ಷಚರಾ ದೇವಾಃ ಸಾಧು ಸಾಧ್ವಿತ್ಯಪೂಜಯನ್ ॥೯॥

ಹೀಗೆ ಗದೆಯನ್ನು ಹಿಡಿದುಕೊಂಡು, ಕವಚವನ್ನು ಧರಿಸಿಕೊಂಡು ಹೋಗುತ್ತಿದ್ದ ದುರ್ಯೋಧನನನ್ನು ಆಕಾಶದಲ್ಲಿ ಸಂಚರಿಸುತ್ತಿದ್ದ ದೇವತೆಗಳು ನೋಡಿ 'ಸಾಧು! ಚೆನ್ನಾಗಿದೆ' ಎಂದು ಕೊಂಡಾಡಿದರು.

ವಾರ್ತಿಕಾಶ್ಚ ನರವ್ಯಾಘ್ರಂ ದೃಷ್ಟ್ವಾ ತೇ ಹರ್ಷಮಾಗತಾಃ ॥೧೦॥

ಲೋಕದ ಸಮಾಚಾರವನ್ನು ಮಾತನಾಡಿಕೊಳ್ಳುವವರೂ ಕೂಡ ನರಪತಿಯಾದ ದುರ್ಯೋಧನನನ್ನು ನೋಡಿ ಸಂತೋಷಪಟ್ಟರು.

ಸ ಪಾಂಡವೈಃ ಪರಿವೃತಃ ಕುರುರಾಜಸ್ತವಾತ್ಮಜಃ ।
ಮತ್ತಸ್ಯೇವ ಗಜೇಂದ್ರಸ್ಯ ಗತಿಮಾಸ್ಥಾಯ ಸೋಽವ್ರಜತ್ ॥೧೧॥

ಪಾಂಡವರಿಂದ ಸುತ್ತುವರಿಯಲ್ಪಟ್ಟ ನಿನ್ನ ಮಗ ಕುರುರಾಜ ದುರ್ಯೋಧನನು ಮದವೇರಿದ ಆನೆಯ ಗತಿಯನ್ನು ಅನುಸರಿಸಿಕೊಂಡು ನಡೆದನು.

ತತಃ ಶಂಖನಿನಾದೈಶ್ಚ ಭೇರೀಣಾಂ ಚ ಮಹಾಸ್ವನೈಃ ।
ಸಿಂಹನಾದೈಶ್ಚ ಶೂರಾಣಾಂ ದಿಶಃ ಸರ್ವಾಃ ಪ್ರಪೂರಿತಾಃ ॥೧೨॥

ಅನಂತರ ಶಂಖನಾದದಿಂದ, ಭೇರಿಯ ಜೋರಾದ ಶಬ್ದದಿಂದ ಹಾಗೂ ಶೂರಸಿಂಹನಾದದಿಂದ ಎಲ್ಲಾ ದಿಕ್ಕುಗಳೂ ತುಂಬಿದವು.

ಪ್ರತೀಚ್ಯಭಿಮುಖಂ ದೇಶಂ ಯಥೋದ್ದಿಷ್ಟಂ ಸುತೇನ ತೇ ।
ಗತ್ವಾ ಚ ತೈಃ ಪರಿಕ್ಷಿಪ್ತಂ ಸಮಂತಾತ್ ಸರ್ವತೋದಿಶಮ್ ॥೧೩॥

ನಿನ್ನ ಮಗನು ಇಚ್ಛಿಸಿ ಸೂಚಿಸಿದ ಪಶ್ಚಿಮಾಭಿಮುಖವಾದ ಆ ಸಮಂತಪಂಚಕ ದೇಶಕ್ಕೆ ಅವರೆಲ್ಲರೂ ಹೋದರು. ಆ ಕ್ಷೇತ್ರವು ಎಲ್ಲೆಡೆಯೂ ವ್ಯಾಪಿಸಿತ್ತು.

ದಕ್ಷಿಣೇನ ಸರಸ್ವತ್ಯಾಃ ಸ್ನಪನಂ ತೀರ್ಥಮುತ್ತಮಮ್ ।
ತಸ್ಮಿನ್ ದೇಶೇ ತ್ವನಿರಣೇ ತೇ ತು ಯುದ್ಧಮರೋಚಯನ್ ॥೧೪॥

ಯಾವ ಪ್ರದೇಶದಲ್ಲಿ ಸರಸ್ವತೀ ನದಿಯು ದಕ್ಷಿಣಾಭಿಮುಖವಾಗಿ ಹರಿದಾಗ ಸ್ನಾನಯೋಗ್ಯವಾದ ತೀರ್ಥವು ಇತ್ತೋ ಅದಕ್ಕಿಂತ ಪೂರ್ವಭಾಗದಲ್ಲಿ ಜೌಗುಪ್ರದೇಶವಲ್ಲದ ಗಟ್ಟಿಯಾದ ಪ್ರದೇಶದಲ್ಲಿ ಯುದ್ಧಮಾಡಲು ನಿಶ್ಚಯಿಸಿದರು.

ತತೋ ಭೀಮೋ ಮಹಾಕೋಟಿಂ ಗದಾಂ ಗೃಹ್ಯ ಚ ಧರ್ಮಭೃತ್ ।
ಬಿಭ್ರದ್ರೂಪಂ ಮಹಾರಾಜ ಸದೃಶಂ ಹಿ ಗರುತ್ಮತಃ ॥೧೫॥

ಮಹಾರಾಜನೇ! ಅನಂತರ ಧರ್ಮಾತ್ಮನಾದ ಭೀಮನು ಬೃಹತ್ತಾದ ತುದಿಭಾಗವುಳ್ಳ ಗದೆಯನ್ನು ಹಿಡಿದುಕೊಂಡು ಗರುಡನಿಗೆ ಸದೃಶವಾದ ರೂಪವನ್ನು ತಾಳಿದನು.

ಅವಬದ್ಧಶಿರಸ್ತ್ರಾಣಃ ಶುದ್ಧಕಾಂಚನವರ್ಮಧೃಕ್ ।
ರರಾಜ ರಾಜನ್ ಪುತ್ರಸ್ತೇ ಕಾಂಚನಃ ಶೈರಾಡಿವ ॥೧೬॥

ರಾಜನೇ! ತಲೆಗೆ ರಕ್ಷಣಾಕವಚವನ್ನು ಧರಿಸಿಕೊಂಡು, ಶುದ್ಧವಾದ ಬಂಗಾರದ ಕವಚವನ್ನು ಹಾಕಿಕೊಂಡು ನಿನ್ನ ಮಗ ದುರ್ಯೋಧನನು ಬಂಗಾರದ ಪರ್ವತದಂತೆ ಶೋಭಿಸಿದನು.

ತದ್ಯಥಾ ಸಂಗತೌ ವೀರೌ ಭೀಮದುರ್ಯೋಧನಾವುಭೌ ।
ಸಂಯುಗೇ ಸಂಪ್ರಕಾಶೇತೇ ಸಂರಬ್ಧಾವಿವ ಕುಂಜರೌ ॥೧೭॥

ಭೀಮ-ದುರ್ಯೋಧನರು ಯುದ್ಧಕ್ಕೆ ಸನ್ನದ್ಧರಾಗಿ ನಿಂತಾಗ ಕೋಪಗೊಂಡ ಎರಡು ಆನೆಗಳು ಎದುರುಬದಿರಾಗಿ ನಿಂತಂತೆ ಶೋಭಿಸುತ್ತಿದ್ದರು.

ರಥಮಂಡಲಮಧ್ಯಸ್ಥೌ ಭ್ರಾತರೌ ಭರತರ್ಷಭೌ ।
ಅಶೋಭೇತಾಂ ಮಹಾರಾಜ ಚಂದ್ರಸೂರ್ಯಾವಿವೋದಿತೌ ॥೧೮॥

ಮಹಾರಾಜನೇ! ಭರತಕುಲಶ್ರೇಷ್ಠರಾದ ಸಹೋದರರು ರಥಸಮೂಹದ ಮಧ್ಯದಲ್ಲಿ ಇದ್ದುಕೊಂಡು ಒಟ್ಟಿಗೆ ಉದಿಸಿದ ಚಂದ್ರ-ಸೂರ್ಯರಂತೆ ಶೋಭಿಸಿದರು.

ತಾವನ್ಯೋನ್ಯಂ ನಿರೀಕ್ಷಂತೌ ಕ್ರುದ್ಧಾವಿವ ಮಹೋರಗೌ ।
ದಹಂತೌ ಲೋಚನೈರ್ವೀರೌ ಪರಸ್ಪರವಧೈಷಿಣೌ ॥೧೯॥

ಪರಸ್ಪರವಾಗಿ ಒಬ್ಬರನ್ನೊಬ್ಬರು ಸಾಯಿಸುವ ಇಚ್ಛೆಯುಳ್ಳ, ಆ ವೀರರಿಬ್ಬರೂ ಕುಪಿತವಾದ ಮಹಾಸರ್ಪಗಳಂತೆ ಕಣ್ಣುಗಳಿಂದಲೇ ಸುಡುವಂತೆ ದಿಟ್ಟಿಸಿ ನೋಡುತ್ತಿದ್ದರು.

ಸಂಪ್ರಹೃಷ್ಟಮನಾ ರಾಜನ್ ಗದಾಮಾದಾಯ ಪಾಂಡವಃ ।
ಸೃಕ್ವಿಣೀ ಸಲ್ಲಿಹನ್ ರಾಜನ್ ಕ್ರೋಧತಾಮ್ರೇಕ್ಷಣಃ ಶ್ವಸನ್ ॥೨೦॥

ರಾಜನೇ! ಸಂತುಷ್ಟನಾದ ಭೀಮನು ಗದೆಯನ್ನು ಹಿಡಿದುಕೊಂಡು ಮುಂದುಟಿಗಳನ್ನು ನೆಕ್ಕುತ್ತಾ ಕೋಪದಿಂದ ಕಂಗಳನ್ನು ಕೆಂಪಾಗಿಸಿಕೊಂಡು ಜೋರಾಗಿ ಉಸಿರಾಡುತ್ತಿದ್ದನು.

ತತೋ ದುರ್ಯೋಧನೋ ರಾಜನ್ ಗದಾಮಾದಾಯ ಭಾರತ ।
ಭೀಮೋ ಭೀಮಮಭಿಪ್ರೇಕ್ಷ್ಯ ಗಜೋ ಗಜಮಿವಾಹ್ವಯತ್ ॥೨೧॥

ರಾಜನೇ! ಭರತಕುಲೋದ್ಭವನೇ! ಅನಂತರ ದುರ್ಯೋಧನನು ಗದೆಯನ್ನು ಹಿಡಿದುಕೊಂಡು ಭಯಂಕರನಾಗಿ ಕಾಣಿಸಿಕೊಂಡು, ಭೀಮನನ್ನು ದಿಟ್ಟಿಸಿನೋಡುತ್ತಾ ಒಂದು ಆನೆಯು ಇನ್ನೊಂದು ಆನೆಯನ್ನು ಕರೆಯುವಂತೆ ಯುದ್ಧಕ್ಕೆ ಆಹ್ವಾನಿಸಿದನು.

ಅದ್ರಿಸಾರಮಯೀಂ ವೀರಸ್ತಥೈವಾದಾಯ ವೇಗವಾನ್ ।
ಆಹ್ವಯಾಮಾಸ ನೃಪತಿಂ ಸಿಂಹಂ ಸಿಂಹೋ ಯಥಾ ವನೇ ॥೨೨॥

ವೀರನಾದ ಭೀಮನು ವೇಗವುಳ್ಳವನಾಗಿ, ಗಟ್ಟಿಯಾದ ಲೋಹದಿಂದ ಮಾಡಿದ ಗದೆಯನ್ನು ಹಿಡಿದುಕೊಂಡು ಸಿಂಹವು ಇನ್ನೊಂದು ಸಿಂಹವನ್ನು ಆಹ್ವಾನಿಸುವಂತೆ ರಾಜ ದುರ್ಯೋಧನನನ್ನು ಯುದ್ಧಕ್ಕೆ ಕರೆದನು.

ತಾವುದ್ಯತಗದಾಪಾಣೀ ದುರ್ಯೋಧನವೃಕೋದರೌ ।
ಸಂಯುಗೇ ಸಂಪ್ರಕಾಶೇತೇ ಗಿರೀ ಸಶಿಖರಾವಿವ ॥೨೩॥

ಆ ದುರ್ಯೋಧನ ಮತ್ತು ಭೀಮಸೇನರು ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಯುದ್ಧದಲ್ಲಿ ನಿಂತುಕೊಂಡಾಗ ಶಿಖರದಿಂದ ಸಹಿತವಾದ ಎರಡು ಪರ್ವತಗಳಂತೆ ಕಾಣಿಸಿಕೊಂಡರು.

ತಾವುಭಾವಪಿ ಸಂಕ್ರುದ್ಧಾವುಭೌ ಭೀಮಪರಾಕ್ರಮೌ ।
ಉಭೌ ಶಿಷ್ಯೌ ಗದಾಯುದ್ಧೇ ರೌಹಿಣೇಯಸ್ಯ ಧೀಮತಃ ॥೨೪॥

ಭಯಂಕರವಾದ ಪರಾಕ್ರಮವುಳ್ಳ ಅವರಿಬ್ಬರೂ ಕೋಪಗೊಂಡರು. ಅವರಿಬ್ಬರೂ ಗದಾವಿದ್ಯೆಯಲ್ಲಿ ಬುದ್ಧಿವಂತನಾದ ಬಲರಾಮನ ಶಿಷ್ಯರಾಗಿದ್ದರು.

ಉಭೌ ಸದೃಶಕರ್ಮಾಣೌ ವರುಣಸ್ಯ ಮಹಾಬಲೌ ।
ವಾಸುದೇವಸ್ಯ ರಾಮಸ್ಯ ತಥಾ ವೈಶ್ರವಣಸ್ಯ ಚ ॥೨೫॥

ಅವರಿಬ್ಬರೂ ಯಮ ಮತ್ತು ಇಂದ್ರನಿಗೆ ಸಮಾನವಾದ ಕಾರ್ಯವುಳ್ಳವರಾಗಿದ್ದರು. ಶ್ರೀಕೃಷ್ಣನಿಗೆ, ಬಲರಾಮನಿಗೆ, ಯಮನಿಗೆ ಸದೃಶರಾಗಿದ್ದರು.

ಸದೃಶೌ ತೌ ಮಹಾರಾಜ ಮಧುಕೈಟಭಯೋರಪಿ ।
ಉಭೌ ಸದೃಶಕರ್ಮಾಣೌ ರಣೇ ಸುಂದೋಪಸುಂದಯೋಃ ॥೨೬॥

ಮಹಾರಾಜನೇ! ಮಧು ಮತ್ತು ಕೈಟಭರಿಗೆ ಸಮಾನರಾಗಿದ್ದರು. ಯುದ್ಧದಲ್ಲಿ ಸುಂದೋಪಸುಂದರಿಗೆ ಸಮಾನವಾದ ಕರ್ಮವುಳ್ಳವರಾಗಿದ್ದರು.

ರಾಮರಾವಣಯೋಶ್ಚೈವ ವಾಲಿಸುಗ್ರೀವಯೋಸ್ತಥಾ ।
ತಥೈವ ಕಾಲಸ್ಯ ಸದೃಶೌ ಮೃತ್ಯೋಶ್ಚೈವ ಪರಂತಪೌ ।
ಅನ್ಯೋನ್ಯಮಭಿಗರ್ಜಂತೌ ಮತ್ತಾವಿವ ಮಹಾಗಜೌ ॥೨೭॥

ಶ್ರೀರಾಮ-ರಾವಣರಂತೆ, ವಾಲಿ-ಸುಗ್ರೀವರಂತೆ ಇದ್ದರು. ಹಾಗೆಯೇ ಶತ್ರುಗಳಿಗೆ ತಾಪವನ್ನುಂಟುಮಾಡುವ ಅವರಿಬ್ಬರೂ ಕಾಲನಿಗೆ, ಮೃತ್ಯುವಿಗೆ ಸಮಾನರಾಗಿದ್ದರು. ಪರಸ್ಪರ ಗರ್ಜನೆ ಮಾಡುತ್ತಿರುವ ಮದೋನ್ಮತ್ತ ಆನೆಗಳಂತೆ ಇದ್ದರು.

ವಾಶಿತಾಸಂಗಮೇ ದೃಪ್ತೌ ಶರದೀವ ಮದೋತ್ಕಟೌ ।
ಮತ್ತಾವಿವ ಜಿಗೀಷಂತೌ ಮಾತಂಗೌ ಭರತರ್ಷಭ ॥೨೮॥

ಭರತಕುಲಶ್ರೇಷ್ಠನೇ! ಶರತ್ಕಾಲದಲ್ಲಿ ಮೈಥುನಸಂಗಮದ ಇಚ್ಛೆಯುಳ್ಳ ಮದವೇರಿದ ದರ್ಪಯುಕ್ತವಾದ ಆನೆಗಳು ಪರಸ್ಪರ ಜಯಾಪೇಕ್ಷೆಯಿಂದ ಇರುವಂತೆ ಇವರಿಬ್ಬರೂ ಇದ್ದರು.

ಉಭೌ ಕ್ರೋಧವಿಷಂ ತೀವ್ರಂ ವಮಂತಾವುರಗಾವಿವ ।
ಅನ್ಯೋನ್ಯಮಭಿಸಂರಬ್ಧೌ ಪ್ರೇಕ್ಷಮಾಣಾವರಿಂದಮೌ ॥೨೯॥

ಇಬ್ಬರೂ ಕೂಡ ಹಾವುಗಳು ವಿಷವನ್ನು ಕಾರುವಂತೆ ಕೋಪದ ವಿಷವನ್ನು ಕಕ್ಕುತ್ತಿದ್ದರು. ಶತ್ರುಗಳನ್ನು ದಮನಗೊಳಿಸುವ ಇಬ್ಬರೂ ಪರಸ್ಪರವಾಗಿ ಕ್ರುದ್ಧರಾಗಿ ಒಬ್ಬರನ್ನೊಬ್ಬರು ದಿಟ್ಟಿಸಿ ನೋಡುತ್ತಿದ್ದರು.

ಉಭೌ ಭರತಶಾರ್ದೂಲೌ ವಿಕ್ರಮೇಣ ಸಮನ್ವಿತೌ ।
ಸಿಂಹಾವಿವ ದುರಾಧರ್ಷೌ ಗದಾಯುದ್ಧೇ ಪರಂತಪೌ ॥೩೦॥

ಗದಾಯುದ್ಧದಲ್ಲಿ ಶತ್ರುವನ್ನು ಪೀಡಿಸುವ ಸಾಮರ್ಥ್ಯವುಳ್ಳ ಇಬ್ಬರು ಭರತಕುಲಶ್ರೇಷ್ಠರೂ ಕೂಡ ಪರಾಕ್ರಮವುಳ್ಳವರಾಗಿ ಸಿಂಹಗಳಂತೆ ಎದುರಿಸಲು ಅಶಕ್ಯರಾಗಿದ್ದರು.

ನಖದಂಷ್ಟ್ರಾಯುಧೌ ವೀರೌ ಸಿಂಹಾವಿವ ದುರುತ್ಸಹೌ ।
ಪ್ರಜಾಸಂಹರಣೇ ಕ್ಷುಬ್ಧೌ ಸಮುದ್ರಾವಿವ ದುಸ್ತರೌ ॥೩೧॥

ದೊಡ್ಡದಾದ ಉಗುರುಗಳು ಮತ್ತು ಹಲ್ಲುಗಳೇ ಆಯುಧವಾಗಿ ಉಳ್ಳ ಎದುರಿಸಲು ಅಶಕ್ಯವಾದ ಸಿಂಹಗಳಂತೆ ಈ ವೀರರು ಇದ್ದರು. ಪ್ರಳಯಕಾಲದಲ್ಲಿ ಮನುಷ್ಯಕುಲವನ್ನು ನಾಶಮಾಡುವ, ದಾಟಿಹೋಗಲು ಅಶಕ್ಯವಾದ ಸಮುದ್ರಗಳಂತೆ ಕ್ಷೋಭೆಗೆ ಒಳಗಾಗಿದ್ದರು.

ಲೋಹಿತಾರ್ಕಾವಿವ ಕ್ರುದ್ಧೌ ಪ್ರತಪಂತೌ ಮಹಾರಥೌ ॥೩೨॥

ಮಹಾರಥರಾದ ಇಬ್ಬರೂ ಕೆಂಪಾದ ಸೂರ್ಯನಂತೆ ಕೋಪದಿಂದ ಸುಡುತ್ತಿದ್ದರು.

ಪೂರ್ವಪಶ್ಚಿಮಜಾ ಮೇಘಾ ಪ್ರೇಕ್ಷಮಾಣಾವರಿಂದಮ್ ॥೩೩॥

ಗರ್ಜಮಾನೌ ಸುವಿಷಮಂ ಕ್ಷರಂತೌ ಪ್ರಾವೃಷೀವ ಹಿ ।
ರಶ್ಮಿಯುಕ್ತೌ ಮಹಾತ್ಮಾನೌ ದೀಪ್ತಿಮಂತೌ ಮಹಾಬಲೌ ॥೩೪॥

ಮಳೆಗಾಲದಲ್ಲಿ ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿದ ಪರಸ್ಪರವಾಗಿ ದಿಟ್ಟಿಸುತ್ತಾ ನೀರನ್ನು ಸುರಿಸುವ ಮೇಘಗಳು ವಿಷಮವಾಗಿ ಗರ್ಜಿಸುವಂತೆ ಬೇರೆ ಬೇರೆ ರೀತಿಯಲ್ಲಿ ಗರ್ಜಿಸುತ್ತಿದ್ದರು.

ದದೃಶಾತೇ ಕುರುಶ್ರೇಷ್ಠೌ ಕಾಲಸೂರ್ಯಾವಿವೋದಿತೌ ।
ವ್ಯಾಘ್ರಾವಿವ ಸುಸಂರಬ್ಧೌ ಗರ್ಜಂತಾವಿವ ತೋಯದೌ ॥೩೫॥

ಕುರುಕುಲಶ್ರೇಷ್ಠರಾದ ಅವರಿಬ್ಬರೂ ಪ್ರಳಯಕಾಲದ ಸೂರ್ಯರಂತೆ ಕಾಣಿಸುತ್ತಿದ್ದರು. ಎರಡು ಹುಲಿಗಳಂತೆ ಬಹಳ ಕೋಪಗೊಂಡಿದ್ದರು. ಮಳೆಸುರಿಸುವ ಮೋಡಗಳಂತೆ ಗರ್ಜಿಸುತ್ತಿದ್ದರು.

ಜಹೃಷಾತೇ ಮಹಾಬಾಹೂ ಸಿಂಹಕೇಸರಿಣಾವಿವ ।
ಗಜಾವಿವ ಸುಸಂರಬ್ಧೌ ಜ್ವಲಿತಾವಿವ ಪಾವಕೌ ॥೩೬॥

ಎರಡು ಸಿಂಹಗಳಂತೆ ಮಹಾಬಾಹುಶಾಲಿಗಳಾದ ಅವರಿಬ್ಬರೂ ಸಂತೋಷವನ್ನು ಹೊಂದಿದರು. ಎರಡು ಆನೆಗಳಂತೆ ಪರಸ್ಪರವಾಗಿ ಬಹಳವಾಗಿ ಕೋಪಕ್ಕೊಳಗಾಗಿದ್ದರು. ಎರಡು ಅಗ್ನಿಗಳಂತೆ ಪ್ರಜ್ವಲಿಸುತ್ತಿದ್ದರು.

ದದೃಶಾತೇ ಮಹಾತ್ಮಾನೌ ಸಶೃಂಗಾವಿವ ಪರ್ವತೌ ।
ರೋಷಾತ್ಪಸ್ಫುರಣಮಾಣೋಷ್ಠೌ ನಿರೀಕ್ಷಂತೌ ಪರಸ್ಪರಮ್ ॥೩೭॥

ಮಹಾತ್ಮರಾದ ಅವರಿಬ್ಬರು ಶಿಖರಸಹಿತವಾದ ಪರ್ವತಗಳಂತೆ ಕಾಣಿಸುತ್ತಿದ್ದರು. ಕೋಪದಿಂದ ಪರಸ್ಪರವಾಗಿ ದಿಟ್ಟಿಸಿ ನೋಡುತ್ತಿದ್ದರು. ತುಟಿಗಳು ಅದುರುತ್ತಿದ್ದವು.

ತೌ ಸಮೇತೌ ಮಹಾತ್ಮಾನೌ ಗದಾಹಸ್ತೌ ನರೋತ್ತಮೌ ।
ಉಭೌ ಪರಮಸಂಹೃಷ್ಟಾವುಭೌ ಪರಮಸಮ್ಮತೌ ॥೩೮॥

ಮಹಾತ್ಮರಾದ ಆ ಇಬ್ಬರೂ ಮನುಷ್ಯೋತ್ತಮರೂ ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಬಹಳವಾದ ಆನಂದವನ್ನು ಅನುಭವಿಸುತ್ತಿದ್ದರು. ಎಲ್ಲರಿಂದಲೂ ಸಮ್ಮಾನಿತರಾಗಿದ್ದರು.

ಸದಶ್ವಾವಿವ ಹೇಷಂತೌ ಬೃಹಂತಾವಿವ ಕುಂಜರೌ ।
ವೃಷಭಾವಿವ ಗರ್ಜಂತೌ ದುರ್ಯೋಧನವೃಕೋದರೌ ।
ದೈತ್ಯಾವಿವ ಬಲೋನ್ಮತ್ತೌ ರೇಜತುಸ್ತೌ ನರೋತ್ತಮೌ ॥೩೯॥

ಆ ದುರ್ಯೋಧನ ಮತ್ತು ಭೀಮಸೇನರು ಒಳ್ಳೆಯ ಕುದುರೆಗಳಂತೆ ಹೇಷಾರವವನ್ನು ಮಾಡುತ್ತಿದ್ದರು. ಆನೆಗಳಂತೆ ಬೃಹದಾಕಾರವನ್ನು ಹೊಂದಿದ್ದರು. ಎರಡು ಗೂಳಿಗಳಂತೆ ಗರ್ಜಿಸುತ್ತಿದ್ದರು. ಇಬ್ಬರು ದೈತ್ಯರಂತೆ ಬಲದ ಮದದಿಂದ ಉನ್ಮತ್ತರಾಗಿ ಶೋಭಿಸುತ್ತಿದ್ದರು.

ತತೋ ದುರ್ಯೋಧನೋ ರಾಜನ್ನಿದಮಾಹ ಯುಧಿಷ್ಠಿರಮ್ ।
ಸೃಂಜಯೈಃ ಸಹ ತಿಷ್ಠಂತಂ ತಪಂತಮಿವ ಭಾಸ್ಕರಮ್ ॥೪೦॥

ರಾಜನೇ! ಅನಂತರ ದುರ್ಯೋಧನನು ಸೃಂಜಯಮೊದಲಾದವರೊಡನೆ, ಸುಡುತ್ತಿರುವ ಸೂರ್ಯನಂತೆ ನಿಂತಿದ್ದ ಯುಧಿಷ್ಠಿರನಿಗೆ ಈ ಮಾತನ್ನು ಹೇಳುತ್ತಾನೆ.

ಇದಂ ವ್ಯವಸಿತಂ ಯುದ್ಧಂ ಮಮ ಭೀಮಸ್ಯ ಚೋಭಯೋಃ ।
ಉಪೋಪವಿಷ್ಟಾಃ ಪಶ್ಯಧ್ವಂ ವಿಮರ್ದಂ ನೃಪಸತ್ತಮಾಃ ॥೪೧॥

'ನನ್ನ ಮತ್ತು ಭೀಮನ ಮಧ್ಯದಲ್ಲಿ ಈ ಯುದ್ಧವು ನಿಶ್ಚಿತವಾಗಿದೆ. ರಾಜರೇ! ನೀವೆಲ್ಲಾ ಹತ್ತಿರದಲ್ಲಿಯೇ ಕುಳಿತುಕೊಂಡು ಯುದ್ಧವನ್ನು ನೋಡಿ'.

ತತಃ ಸಮುಪವಿಷ್ಟಂ ತತ್ಸುಮಹದ್ ರಾಜಮಂಡಲಮ್ ।
ವಿರಾಜಮಾನಂ ದದೃಶೇ ದಿವೀವಾದಿತ್ಯಮಂಡಲಮ್ ॥೪೨॥

ಅವನ ಮಾತಿನಂತೆ ಆ ರಾಜಸಮೂಹವು ಅಲ್ಲಿ ಹತ್ತಿರದಲ್ಲಿಯೇ ಕುಳಿತುಕೊಂಡಿತು. ಆಕಾಶದಲ್ಲಿ ಅನೇಕ ಸೂರ್ಯರ ಸಮೂಹವು ಶೋಭಿಸುವಂತೆ ಈ ರಾಜರು ಕಾಣಿಸುತ್ತಿದ್ದರು.

ತೇಷಾಂ ಮಧ್ಯೇ ಮಹಾಬಾಹುಃ ಶ್ರೀಮಾನ್ ಕೇಶವಪೂರ್ವಜಃ ।
ಉಪವಿಷ್ಟೋ ಮಹಾರಾಜ ಪೂಜ್ಯಮಾನಃ ಸಮಂತತಃ ॥೪೩॥

ಮಹಾರಾಜನೇ! ಆ ರಾಜರ ಮಧ್ಯದಲ್ಲಿ ಶ್ರೀಕೃಷ್ಣನ ಅಣ್ಣ ಮಹಾಬಾಹುವಾದ ಶ್ರೀಮಾನ್ ಬಲರಾಮನು ಕುಳಿತಿದ್ದನು. ಅವನನ್ನು ಸುತ್ತಲೂ ಎಲ್ಲರೂ ಆರಾಧಿಸುತ್ತಿದ್ದರು.

ಶುಶುಭೇ ರಾಜಮಧ್ಯಸ್ಥೋ ನೀಲವಾಸಾಃ ಸಿತಪ್ರಭಃ ।
ನಕ್ಷತ್ರೈರಿವ ಸಂಪೂರ್ಣೋ ವೃತೋ ನಿಶಿ ನಿಶಾಕರಃ ॥೪೪॥

ನೀಲವರ್ಣದ ಬಟ್ಟೆಯನ್ನು ಧರಿಸಿದ್ದ ಬೆಳ್ಳಗಿನ ಬಲರಾಮನು ರಾಜರ ಮಧ್ಯದಲ್ಲಿದ್ದುಕೊಂಡು ರಾತ್ರಿಹೊತ್ತಿನಲ್ಲಿ ಆಗಸದಲ್ಲಿ ಚಂದ್ರನು ನಕ್ಷತ್ರಗಳಿಂದ ಸುತ್ತುವರಿಯಲ್ಪಟ್ಟಂತೆ ಕಾಣಿಸುತ್ತಿದ್ದನು.

ತೌ ತಥಾ ತು ಮಹಾರಾಜ ಗದಾಹಸ್ತೌ ಸುದುಃಸಹೌ ।
ಅನ್ಯೋನ್ಯಂ ವಾಗ್ಭಿರುಗ್ರಾಭಿಸ್ತಕ್ಷಮಾಣೌ ವ್ಯವಸ್ಥಿತೌ ॥೪೫॥

ಮಹಾರಾಜನೇ! ಪರಾಕ್ರಮದಲ್ಲಿ ಸಹಿಸಲು ಅಸಾಧ್ಯರಾದ ಭೀಮ-ದುರ್ಯೋಧನರು ಗದೆಯನ್ನು ಹಿಡಿದುಕೊಂಡು ಪರಸ್ಪರವಾಗಿ ಕ್ರೂರವಾದ ಮಾತುಗಳಿಂದ ನಿಂದಿಸಿಕೊಳ್ಳುತ್ತಾ ಇದ್ದರು.

ಅಪ್ರಿಯಾಣಿ ತತೋऽನ್ಯೋನ್ಯಮುಕ್ತ್ವಾ ತೌ ಕುರುಸತ್ತಮೌ ।
ಉದೀಕ್ಷಂತೌ ಸ್ಥಿತೌ ತತ್ರ ವೃತ್ರಶಕ್ರೌ ಯಥಾऽऽಹವೇ ॥೪೬॥

ಕೇಳಲು ಇಷ್ಟವಾಗದ ಮಾತುಗಳನ್ನು ಆ ಕುರುವೀರರಿಬ್ಬರೂ ಪರಸ್ಪರವಾಗಿ ಹೇಳಿಕೊಳ್ಳುತ್ತಿದ್ದರು. ಹಿಂದೆ ಯುದ್ಧದಲ್ಲಿ ವೃತ್ರಾಸುರ ಮತ್ತು ದೇವೇಂದ್ರರು ಇದ್ದ ಹಾಗೆ ಇವರಿಬ್ಬರೂ ಇದ್ದರು.

ವೈಶಂಪಾಯನಃ

ತತೋ ವಾಗ್ಯುದ್ಧಮಭವತ್ ತುಮುಲಂ ಜನಮೇಜಯ ।
ಯತ್ರ ದುಃಖಾನ್ವಿತೋ ರಾಜಾ ಧೃತರಾಷ್ಟ್ರೋऽಬ್ರವೀದಿದಮ್ ॥೪೭॥

ವೈಶಂಪಾಯನ– ಜನಮೇಜಯನೇ! ಅನಂತರ ಬಹಳ ಘೋರವಾದ ವಾಗ್ಯುದ್ಧವು ನಡೆಯಿತು. ಇದನ್ನು ಕೇಳಿದಾಗ ರಾಜ ಧೃತರಾಷ್ಟ್ರನು ಅಳುತ್ತಾ ಹೀಗೆ ಹೇಳಿದನು.

ಧೃತರಾಷ್ಟ್ರಃ

ಧಿಗಸ್ತು ಖಲು ಮಾನುಷ್ಯಂ ಯಸ್ಯ ನಿಷ್ಠೇಯಮೀದೃಶೀ ।
ಏಕಾದಶಚಮೂಭರ್ತಾ ಯತ್ರ ಪುತ್ರೋ ಮಮಾಭಿಭೂಃ ॥೪೮॥

ಆಜ್ಞಾಪ್ಯ ಸರ್ವಾನ್ ನೃಪತೀನ್ ಭುಕ್ತ್ವಾ ಚ ಪೃಥಿವೀಮಿಮಾಮ್ ।
ಗದಾಮಾದಾಯ ಚೈಕಾಕೀ ಪದಾತಿಃ ಪ್ರಸ್ಥಿತೋ ರಣಮ್ ॥೪೯॥

ಧೃತರಾಷ್ಟ್ರ– ಮನುಷ್ಯನ ಇಂತಹ ದುರವಸ್ಥೆಗೆ ಧಿಕ್ಕಾರವಿರಲಿ. ಏಕೆಂದರೆ ಹಿಂದೆ ಹನ್ನೊಂದು ಅಕ್ಷೌಹಿಣೀ ಸೈನ್ಯಕ್ಕೆ ಒಡೆಯನಾದ ನನ್ನ ಮಗನು ಯಾರಿಂದಲೂ ಜಯಿಸಲು ಅಸಾಧ್ಯನಾಗಿದ್ದನು. ಎಲ್ಲಾ ಸಾಮಂತರಾಜರಿಗೂ ಆಜ್ಞೆಯನ್ನು ಮಾಡುತ್ತಾ ಈ ಪೃಥಿವಿಯನ್ನು ಅನುಭವಿಸಿದ್ದನು. ಅಂತಹ ದುರ್ಯೋಧನನು ಇಂದು ಒಬ್ಬಂಟಿಗನಾಗಿ ಗದೆಯನ್ನು ಧರಿಸಿಕೊಂಡು ನೆಲದಮೇಲೆ ನಡೆದಾಡುತ್ತಾ ಯುದ್ಧಕ್ಕೆ ಸನ್ನದ್ಧನಾಗಿದ್ದಾನೆ.

ಭೂತ್ವಾ ಹಿ ಜಗತೋ ನಾಥಃ ಸೋಽನಾಥ ಇವ ಮೇ ಸುತಃ ।
ಗದಾಮಾದಾಯ ಯೋ ಯಾತಿ ಕಿಮನ್ಯದ್ ಭಾಗಧೇಯತಃ ॥೫೦॥

ನನ್ನ ಮಗನು ಹಿಂದೆ ಇಡೀ ಜಗತ್ತಿಗೆನೇ ಸ್ವಾಮಿಯಾಗಿದ್ದನು. ಇಂದು ಗದೆಯನ್ನು ಹಿಡಿದುಕೊಂಡು ಯುದ್ಧಕ್ಕೆ ತೆರಳುತ್ತಿದ್ದಾನೆ. ಇದು ವಿಧಿಯಾಟವಲ್ಲದೆ ಬೇರೇನೂ ಅಲ್ಲ.

ಅಹೋ ದುಃಖಂ ಮಹತ್ ಪ್ರಾಪ್ತಂ ಪುತ್ರೇಣ ಮಮ ಸಂಜಯ ॥೫೧॥

ಸಂಜಯನೆ! ಮಗನಿಂದಾಗಿ ನನಗೆ ಬಹಳ ದುಃಖವು ಉಂಟಾಗಿದೆ.

ವೈಶಂಪಾಯನಃ

ಏವಮುಕ್ತ್ವಾ ಸ ದುಃಖಾರ್ತೋ ವಿರರಾಮ ಜನಾಧಿಪಃ ॥೫೨॥

ವೈಶಂಪಾಯನ– ರಾಜನಾದ ಧೃತರಾಷ್ಟ್ರನು ಹೀಗೆ ಬಹಳ ದುಃಖಿತನಾಗಿದ್ದು ಸುಮ್ಮನಾದನು.

ಸಂಜಯಃ

ಸ ಮೇಘನಿಸ್ವನೋ ಹರ್ಷಾದ್ ವಿನದನ್ನಿವ ಗೋವೃಷಃ ।
ಆಜುಹಾವ ತತಃ ಪಾರ್ಥ ಯುದ್ಧಾಯ ಯುಧಿ ವೀರ್ಯವಾನ್ ॥೫೩॥

ಸಂಜಯ– ಮೋಡದ ಗರ್ಜನೆಯಂತೆ ಧ್ವನಿಯುಳ್ಳ ಪರಾಕ್ರಮಿಯಾದ ದುರ್ಯೋಧನನು ಗೂಳಿಯು ಗರ್ಜಿಸುವಂತೆ ಸಂತೋಷದಿಂದ ಗರ್ಜಿಸುತ್ತಾ ಯುದ್ಧದಲ್ಲಿ ಭೀಮನನ್ನು ಆಹ್ವಾನಿಸಿದನು.

ಭೀಮಮಾಹ್ವಯಮಾನೇ ತು ಕುರುರಾಜೇ ಮಹಾತ್ಮನಿ ।
ಪ್ರಾದುರಾಸನ್ ಸುಘೋರಾಣಿ ರೂಪಾಣಿ ವಿವಿಧಾನ್ಯುತ ॥೫೪॥

ಮಹಾತ್ಮನಾದ ದುರ್ಯೋಧನನು ಭೀಮನನ್ನು ಆಹ್ವಾನಿಸುತ್ತಿರಲು ಅಲ್ಲಿ ವಿವಿಧರೂಪದ ಘೋರವಾದ ಶಕುನಗಳು ಕಾಣಿಸಿಕೊಂಡವು.

ವವುರ್ವಾತಾಃ ಸನಿರ್ಘಾತಾಃ ಪಾಂಸುವರ್ಷಂ ಪಪಾತ ಹ ।
ಬಭೂವುಶ್ಚ ದಿಶಃ ಸರ್ವಾಸ್ತಿಮಿರೇಣ ಸಮಾವೃತಾಃ ॥೫೫॥

ಜೋರಾಗಿ ಶಬ್ದವನ್ನುಂಟುಮಾಡುತ್ತಾ ಗಾಳಿಯು ಬೀಸತೊಡಗಿತು. ಎಲ್ಲೆಡೆ ಧೂಳಿನ ಮಳೆಯು ಸುರಿಯಿತು. ಎಲ್ಲಾ ದಿಕ್ಕುಗಳಲ್ಲಿಯೂ ಕತ್ತಲು ಆವರಿಸಿಕೊಂಡಿತು.

ಮಹಾಸ್ವನಾಃ ಸುನಿರ್ಘಾತಾಃ ತುಮುಲ ರೋಮಹರ್ಷಣಾಃ ।
ಪೇತುಃ ಪೃಥಿವ್ಯಾಂ ಶತಶಃ ಸ್ಫೋಟಯಂತೋ ನಭಸ್ತಲಾತ್ ॥೫೬॥

ಭಯದ ರೋಮಾಂಚನವನ್ನು ಉಂಟುಮಾಡುವ ಗುಡುಗುಗಳು ದೊಡ್ಡಶಬ್ದವನ್ನು ಉಂಟುಮಾಡುತ್ತಾ ಪೃಥಿವಿಯನ್ನು ನೂರು ಭಾಗಗಳಾಗಿ ಸೀಳುವ ರೀತಿಯಲ್ಲಿ ಆಕಾಶದಿಂದ ಕೆಳಬಿದ್ದವು.

ರಾಹುರಗ್ರಸದಾದಿತ್ಯಮ್ ಅಪರ್ವಣಿ ವಿಶಾಂಪತೇ ।
ಚಕಂಪೇ ಚ ಮಹಾಕಂಪಂ ಪೃಥಿವೀ ಸವನದ್ರುಮಾ ॥೫೭॥

ರಾಜನೇ! ಅಮಾವಾಸ್ಯೆಯಂತಹ ಪರ್ವಕಾಲವಿರದಿದ್ದರೂ ರಾಹುವು ಸೂರ್ಯನನ್ನು ನುಂಗಿದನು. ಕಾಡು-ಮರಗಳಿಂದ ಕೂಡಿದ ಭೂಮಿಯು ಕಂಪಿಸತೊಡಗಿತು.

ರೂಕ್ಷಾಶ್ಚ ವಾತಾಃ ಪ್ರವವುರ್ನಿರ್ಘಾತೈಃ ಶರ್ಕರವರ್ಷಿಣಃ ।
ಗಿರೀಣಾಂ ಶಿಖರಾಣ್ಯಾಶು ನ್ಯಪತಂತ ಮಹೀತಳೇ ॥೫೮॥

ವೇಗದ ಬಿರುಗಾಳಿಗಳು ಬೀಸತೊಡಗಿದವು. ಮರಳಿನ ಮಳೆಯನ್ನು ಕೆಳಬೀಳಿಸುತ್ತಿದ್ದವು. ಪರ್ವತಗಳ ಶಿಖರಗಳು ಭೂಮಿಯಲ್ಲಿ ಬೀಳತೊಡಗಿದವು.

ಮೃಗಾ ಬಹುವಿಧಾಕಾರಾಃ ಸಂಪತಂತಿ ದಿಶೋ ದಶ ।
ದೀಪ್ತಾಃ ಶಿವಾಶ್ಚ ಪ್ರಣದನ್ ದಾರುಣಂ ಭಯವೇದಿನಃ ॥೫೯॥

ಬೇರೆ ಬೇರೆ ಆಕಾರದ ಪ್ರಾಣಿಗಳು ಎಲ್ಲಾ ದಿಕ್ಕುಗಳಲ್ಲಿಯೂ ಸಂಚರಿಸತೊಡಗಿದವು. ಪ್ರಕಾಶಿಸುವ ನರಿಗಳು ಕೆಟ್ಟರೀತಿಯಲ್ಲಿ ಕೂಗುತ್ತಾ ಭಯವನ್ನು ವ್ಯಕ್ತಪಡಿಸುತ್ತಿದ್ದವು.

ನಿರ್ಘಾತಾಶ್ಚ ಮಹಾಘೋರಾ ಬಭೂವೂ ರೋಮಹರ್ಷಣಾಃ ।
ದೀಪ್ತಾಯಾಂ ದಿಶಿ ರಾಜೇಂದ್ರ ಮೃಗಾಶ್ಚಾಶುಭವಾದಿನಃ ॥೬೦॥

ರೋಮಗಳು ಸೆಟೆದುನಿಲ್ಲುವ ರೀತಿಯಲ್ಲಿ ಗುಡುಗುಗಳು ಗರ್ಜಿಸುತ್ತಿದ್ದವು. ಮಿಂಚಿನಿಂದಾಗಿ ದಿಕ್ಕುಗಳಲ್ಲಿ ಬೆಳಕು ಹರಿಯುತ್ತಿತ್ತು. ರಾಜೇಂದ್ರನೇ! ಪ್ರಾಣಿಗಳು ಅಶುಭವನ್ನು ಸೂಚಿಸುತ್ತಿದ್ದವು.

ಉದಪಾನಗತಾಶ್ಚಾಪೋ ವ್ಯವರ್ಧಂತ ಸಮಂತತಃ ।
ಅಶರೀರಾ ಮಹಾನಾದಾಃ ಶ್ರೂಯಂತೇ ಸ್ಮ ಭಯಾನಕಾಃ ॥೬೧॥

ನೀರಿನ ಪಾತ್ರೆಯಲ್ಲಿ ಇದ್ದ ನೀರು ಎಲ್ಲಾಕಡೆಯೂ ವೃದ್ಧಿಸತೊಡಗಿತು. ಯಾವುದೇ ಪ್ರಾಣಿಗಳ ಶರೀರವಿಲ್ಲದೆಯೇ ಭಯವನ್ನು ಹುಟ್ಟಿಸುವ ದೊಡ್ಡ ಶಬ್ದಗಳು ಕೇಳಿಸುತ್ತಿದ್ದವು.

ಏವಮಾದೀನಿ ದೃಷ್ಟ್ವಾ ಸ ನಿಮಿತ್ತಾನಿ ವೃಕೋದರಃ ।
ಉವಾಚ ಭ್ರಾತರಂ ಜ್ಯೇಷ್ಠಂ ಧರ್ಮರಾಜಂ ಯುಧಿಷ್ಠಿರಮ್ ॥೬೨॥

ಇವೇ ಮೊದಲಾದ ಶಕುನಗಳನ್ನು ನೋಡಿದ ಭೀಮನು ತನ್ನ ದೊಡ್ಡ ಅಣ್ಣನಾದ ಯುಧಿಷ್ಠಿರನಿಗೆ ಹೇಳಿದನು.

ಭೀಮಃ

ಏಕ ಶಕ್ಯೋ ರಣೇ ಜೇತುಂ ಮಂದಾತ್ಮಾ ಚ ಸುಯೋಧನಃ ॥೬೩॥

ಭೀಮ– ಮಂದಬುದ್ಧಿಯ ದುರ್ಯೋಧನನು ಒಬ್ಬನೇ ಇದ್ದಾನೆ. ಅವನನ್ನು ಗೆಲ್ಲಬಹುದು.

ಅದ್ಯ ಕ್ರೋಧಂ ವಿಮೋಕ್ಷ್ಯಾಮಿ ನಿಗೂಢಂ ಹೃದಯೇ ಸ್ಥಿತಮ್ ।
ಸುಯೋಧನೇ ಕೌರವೇಂದ್ರೇ ಖಾಂಡವೇऽಗ್ನಿಮಿವಾರ್ಜುನಃ ॥೬೪॥

ಖಾಂಡವವನ ದಾಹ ಸಂದರ್ಭದಲ್ಲಿ ಅರ್ಜುನನು ಕೋಪವನ್ನು ಬಿಟ್ಟ ಹಾಗೆ ನಾನಿಂದು ದುರ್ಯೋಧನನ ವಿಷಯದಲ್ಲಿ ಮನಸ್ಸಿನಲ್ಲಿ ಹೆಪ್ಪುಗಟ್ಟಿದ್ದ ಕೋಪವನ್ನು ಬಿಟ್ಟುಬಿಡುತ್ತೇನೆ.

ಶಲ್ಯಮದ್ಯೋದ್ಧರಿಷ್ಯಾಮಿ ತವ ಪಾಂಡವ ಹೃದ್ಗತಮ್ ।
ನಿಹತ್ಯ ಗದಯಾ ಪಾಪಮಿದಂ ಕುರುಕುಲಾಂತಕಮ್ ॥೬೫॥

ಧರ್ಮರಾಜನೇ! ಇವತ್ತು ಪಾಪಿಯಾದ, ಈ ಕುರುಕುಲನಾಶಕನಾದ ದುರ್ಯೋಧನನನ್ನು ಕೊಂದು ನಿನ್ನ ಹೃದಯಕ್ಕೆ ನಾಟಿದ ಮುಳ್ಳನ್ನು ತೆಗೆದುಹಾಕುತ್ತೇನೆ.

ಅದ್ಯ ಕೀರ್ತಿಮಯೀಂ ಮಾಲಾಂ ಪ್ರತಿಮೋಕ್ಷ್ಯಾಮ್ಯಹಂ ತ್ವಯಿ ।
ಹತ್ವೇಮಂ ಪಾಪಕರ್ಮಾಣಂ ಗದಯಾ ರಣಮೂರ್ಧನಿ ॥೬೬॥

ಇವತ್ತಿನ ಯುದ್ಧದಲ್ಲಿ ಪಾಪಕಾರ್ಯಗಳನ್ನು ಮಾಡಿದ ಈ ದುರ್ಯೋಧನನನ್ನು ಗೆದ್ದು ಸಾಯಿಸಿ ನಿನ್ನ ಮೇಲೆ ಕೀರ್ತಿಯ ಮಾಲೆಯನ್ನು ಅರ್ಪಿಸುವೆನು.

ಅಸ್ಯೋರೂ ಗದಯಾ ರಾಜನ್ ಭೇತ್ತಾಸ್ಮಿ ಸಮರೇऽನಯಾ ।
ನಾಯಂ ಪ್ರವೇಷ್ಟಾ ನಗರಂ ಪುನರ್ವಾರಣಸಾಹ್ವಯಮ್ ॥೬೭॥

ಯುದ್ಧದಲ್ಲಿ ಈ ಗದೆಯಿಂದ ಇವನ ತೊಡೆಯನ್ನು ಮುರಿದುಹಾಕುತ್ತೇನೆ. ಇವನು ಇನ್ನು ಮುಂದೆ ವಾರಣಾವತ (ಹಸ್ತಿನಾವತಿ) ನಗರವನ್ನು ಪ್ರವೇಶಿಸಲಾರನು.

ಸಪ್ತೋತ್ಸರ್ಗಸ್ಯ ಶಯನೇ ವಿಷದಾನಸ್ಯ ಭೋಜನೇ ।
ಪ್ರಮಾಣಕೋಟ್ಯಾಂ ಪಾತಸ್ಯ ದಾಹಸ್ಯ ಜತುವೇಶ್ಮನಿ ॥೬೮॥

ಸಭಾಯಾಮಪಹಾಸಸ್ಯ ಸರ್ವಸ್ವಹರಣಸ್ಯ ಚ ।
ವರ್ಷಮಜ್ಞಾತವಾಸಸ್ಯ ವನವಾಸಸ್ಯ ಚಾನಘ ॥೬೯॥

ಅದ್ಯಾಂತಮೇಷಾಂ ದುಃಖಾನಾಂ ಗಂತಾ ಭರತಸತ್ತಮ ॥೭೦॥

ಭರತಕುಲಶ್ರೇಷ್ಠನೇ! ನೀನು ಹಿಂದೆ ಅನುಭವಿಸಿದ ಎಲ್ಲಾ ದುಃಖಗಳಿಗೆ ಇವತ್ತು ಕೊನೆಯು ಸಿಗಲಿದೆ. ಹಾವಿನ ಮಧ್ಯದಲ್ಲಿ ಮಲಗಿಸಿದ್ದು, ಊಟದಲ್ಲಿ ವಿಷವನ್ನು ಹಾಕಿದ್ದು, ಪ್ರಮಾಣಕೋಟಿ ಮಡುವಿನಲ್ಲಿ ಬೀಳಿಸಿದ್ದು, ಅರಗಿನ ಮನೆಯಲ್ಲಿ ಸುಟ್ಟಿದ್ದು, ದ್ಯೂತದ ಸಭೆಯಲ್ಲಿ ಎಲ್ಲಾ ಸಂಪತ್ತನ್ನೂ ಅಪಹರಿಸಿ ನಮ್ಮನ್ನು ಅಪಹಾಸಮಾಡಿದ್ದು, ಹನ್ನೆರಡುವರ್ಷಗಳ ಕಾಲ ಕಾಡಿನಲ್ಲಿ ವಾಸ, ಒಂದು ವರ್ಷ ಕಾಲ ಅಜ್ಞಾತವಾಸ - ಈ ಎಲ್ಲಾ ದುಃಖಗಳನ್ನೂ ಇಂದು ನೀನು ಕಳೆದುಕೊಳ್ಳು.

ಏಕಾಹ್ನಾ ವಿನಿಹತ್ಯೇಮಂ ಭವಿಷ್ಯಾಮ್ಯಾತ್ಮನೋಽನೃಣಃ ॥೭೧॥

ಒಂದೇ ಹಗಲಲ್ಲಿ ಇವನನ್ನು ಕೊಂದು ನಾನು ಋಣಮುಕ್ತನಾಗುತ್ತೇನೆ.

ಅದ್ಯಾಸ್ಯ ಧಾರ್ತರಾಷ್ಟ್ರಸ್ಯ ದುರ್ಮತೇರಕೃತಾತ್ಮನಃ ।
ಸಮಾಪ್ತಂ ಭರತಶ್ರೇಷ್ಠ ಮಾತಾಪಿತ್ರೋಶ್ಚ ದರ್ಶನಮ್ ॥೭೨॥

ಭರತಶ್ರೇಷ್ಠನೇ! ದುರ್ಬುದ್ಧಿಯ, ದುರಾಚಾರಿಯಾದ ದುರ್ಯೋಧನನು ಇನ್ನು ಮುಂದೆ ಅವನ ತಂದೆ-ತಾಯಿಯರನ್ನು ನೋಡಲಾರನು.

ಅದ್ಯಾಯಂ ಕುರುರಾಜಸ್ಯ ಶಂತನೋಃ ಕುಲಪಾಂಸನಃ ।
ಪ್ರಾಣಾನ್ ಶ್ರಿಯಂ ಚ ರಾಜ್ಯಂ ಚ ತ್ಯಕ್ತ್ವಾ ಶೇಷ್ಯತಿ ಭೂತಳೇ ॥೭೩॥

ಶಂತನುವಿನ ಕುಲಕ್ಕೆ ಕಳಂಕನಾದ ಈ ದುರ್ಯೋಧನನು ಇಂದು ತನ್ನ ಪ್ರಾಣ, ಸಂಪತ್ತು ಮತ್ತು ರಾಜ್ಯಗಳನ್ನು ಕಳೆದುಕೊಂಡು ನೆಲದ ಮೇಲೆ ಸತ್ತು ಮಲಗುತ್ತಾನೆ.

ಸ ರಾಜಾ ಧೃತರಾಷ್ಟ್ರೋಽದ್ಯ ಶ್ರುತ್ವಾ ಪುತ್ರಂ ಮಯಾ ಹತಮ್ ।
ಸ್ಮರಿಷ್ಯತ್ಯಶುಭಂ ಕರ್ಮ ಯತ್ತಚ್ಛಕುನಿಬುದ್ಧಿಜಮ್ ॥೭೪॥

ಇವನ ತಂದೆ ಧೃತರಾಷ್ಟ್ರನು ತನ್ನ ಮಗನನ್ನು ಭೀಮನು ಕೊಂದ ವಿಷಯವನ್ನು ಕೇಳಿ ಹಿಂದೆ ಶಕುನಿಯ ಬುದ್ಧಿಯಿಂದ ನಡೆಸಿದ ದ್ಯೂತ ಮೊದಲಾದ ಕೆಟ್ಟಕೆಲಸಗಳನ್ನು ಸ್ಮರಿಸಿಕೊಳ್ಳುವನು.

ಸಂಜಯಃ

ಇತ್ಯುಕ್ತ್ವಾ ರಾಜಶಾರ್ದೂಲ ಗದಾಮುದ್ಯಮ್ಯ ವೀರ್ಯವಾನ್ ।
ಅವಾತಿಷ್ಠತ ಯುದ್ಧಾಯ ಶಕ್ರೋ ವೃತ್ರಮಿವಾಹ್ವಯನ್ ॥೭೫॥

ಸಂಜಯ– ರಾಜೋತ್ತಮನೇ! ವೀರನಾದ ಭೀಮನು ಹೀಗೆ ಹೇಳಿ ಗದೆಯನ್ನು ಹಿಡಿದುಕೊಂಡು ಇಂದ್ರನು ವೃತ್ರಾಸುರನನ್ನು ಯುದ್ಧಕ್ಕೆ ಕರೆದಂತೆ ದುರ್ಯೋಧನನನ್ನು ಆಹ್ವಾನಿಸುತ್ತ ನಿಂತನು.

ತಮುದ್ಯತಗದಂ ದೃಷ್ಟ್ವಾ ಕೈಲಾಸಮಿವ ಶೃಂಗಿಣಮ್ ।
ಭೀಮಸೇನಃ ಪುನಃ ಕ್ರೋಧಾದ್ ದುರ್ಯೋಧನಮುವಾಚ ಹ ॥೭೬॥

ಎದುರುಗಡೆಯಿಂದ ಶಿಖರದಿಂದ ಕೂಡಿದ ಕೈಲಾಸಪರ್ವತದಂತೆ ಗದೆಯನ್ನು ಹಿಡಿದ ದುರ್ಯೋಧನನಿಗೆ ಭೀಮಸೇನನು ಮತ್ತೆ ಹೇಳಿದನು.

ಭೀಮಃ

ರಾಜ್ಞಸ್ತು ಧೃತರಾಷ್ಟ್ರಸ್ಯ ತಥಾ ತ್ವಮಪಿ ಚಾತ್ಮನಃ ।
ಸ್ಮರ ತದ್ದುಷ್ಕೃತಂ ಕರ್ಮ ಯದ್ವೃತ್ತಂ ವಾರಣಾವತೇ ॥೭೭॥

ಭೀಮ– ಹಸ್ತಿನಾವತಿಯಲ್ಲಿ ನೀನು ಮತ್ತು ನಿನ್ನ ತಂದೆ ಧೃತರಾಷ್ಟ್ರನು ನಮಗೆ ಮಾಡಿದ ದುಷ್ಕಾರ್ಯಗಳನ್ನು ನೆನಪಿಸಿಕೊಳ್ಳು.

ದ್ರೌಪದೀ ಚ ಪರಿಕ್ಲಿಷ್ಟಾ ಸಭಾಯಾಂ ಯದ್ರಜಸ್ವಲಾ ।
ದ್ಯೂತೇನ ವಂಚಿತೋ ರಾಜಾ ಯತ್ತ್ವಯಾ ಸೌಬಲೇನ ಚ ॥೭೮॥

ಸಭೆಯಲ್ಲಿ ರಜಸ್ವಲೆಯಾದ ದ್ರೌಪದಿಗೆ ಬಹಳ ದುಃಖವನ್ನು ಕೊಟ್ಟಿದ್ದಿ. ಶಕುನಿಯೊಡನೆ ಸೇರಿಕೊಂಡು ನಮ್ಮ ರಾಜ ಯುಧಿಷ್ಠಿರನಿಗೆ ದ್ಯೂತದಿಂದ ಮೋಸವನ್ನು ಮಾಡಿದ್ದಿ.

ವನೇ ದುಃಖಂ ಚ ಸಂಪ್ರಾಪ್ತಮಸ್ಮಾಭಿಸ್ತ್ವತ್ಕೃತಂ ಮಹತ್ ।
ವಿರಾಟನಗರೇ ಚೈವ ಯೋನ್ಯಂತರಗತೈರಿವ ॥೭೯॥

ನಿನ್ನಿಂದಾಗಿ ವನವಾಸಕಾಲದಲ್ಲಿ ಬಹಳವಾದ ದುಃಖವನ್ನು ಅನುಭವಿಸಿದೆವು. ಅಜ್ಞಾತವಾಸಕಾಲದಲ್ಲಿ ವಿರಾಟನಗರದಲ್ಲಿ ಬೇರೆಯವರ ಮಧ್ಯೆ ಇದ್ದು ದುಃಖವನ್ನು ಅನುಭವಿಸಿದೆವು.

ತತ್ಸರ್ವಂ ಯಾತಯಾಮ್ಯದ್ಯ ದಿಷ್ಟ್ಯಾ ದೃಷ್ಟೋಽಸಿ ದುರ್ಮತೇ ॥೮೦॥

ದುರ್ಮತಿಯೇ! ಅದೃಷ್ಟವಶಾತ್ ನೀನು ನನಗೆ ಕಾಣಿಸಿಕೊಂಡಿರುವಿ. ಅಂದಿನ ಎಲ್ಲಾ ದುಃಖಗಳನ್ನೂ ಕಳೆದುಕೊಳ್ಳುವೆನು.

ತ್ವತ್ಕೃತೇಽಸೌ ಹತಃ ಶೇತೇ ಶರತಲ್ಪೇ ಪಿತಾಮಹಃ ।
ಗಾಂಗೇಯೋ ರಥಿನಾಂ ಶ್ರೇಷ್ಠೋ ರಥಿನಾ ಯಾಜ್ಞಸೇನಿನಾ ॥೮೧॥

ನಿನಗೋಸ್ಕರ ನಮ್ಮ ಪಿತಾಮಹನಾದ, ರಥಿಗಳಲ್ಲಿಯೇ ಶ್ರೇಷ್ಠನಾದ, ಗಂಗಾಪುತ್ರ ಭೀಷ್ಮನು ಯಜ್ಞದಲ್ಲಿ ಹುಟ್ಟಿದ ಧೃಷ್ಟದ್ಯುಮ್ನನಿಂದ ಪೆಟ್ಟುತಿಂದು ಬಾಣಗಳ ಮಂಚದಲ್ಲಿ ಮಲಗಿದ್ದಾನೆ.

ಹತೋ ದ್ರೋಣಶ್ಚ ಕರ್ಣಶ್ಚ ತಥಾ ಶಲ್ಯಃ ಪ್ರತಾಪವಾನ್ ।
ವೈರಾಗ್ನೇರಾದಿಕರ್ತಾ ಚ ಶಕುನಿಃ ಸೌಬಲೋ ಹತಃ ॥೮೨॥

ಹಾಗೆಯೇ ನಿನಗಾಗಿ ದ್ರೋಣ, ಕರ್ಣ, ಪ್ರತಾಪಿಯಾದ ಶಲ್ಯ, ದ್ವೇಷದ ಬೆಂಕಿಯನ್ನು ಹಚ್ಚಿದ ಶಕುನಿ ಇವರೆಲ್ಲರೂ ಸತ್ತಿದ್ದಾರೆ.

ಪ್ರಾತಿಕಾಮೀ ತಥಾ ಪಾಪೋ ದ್ರೌಪದ್ಯಾಃ ಕ್ಲೇಶಕೃದ್ದತಃ ।
ಭ್ರಾತರಸ್ತೇ ಹತಾಃ ಶೂರಾಃ ಸರ್ವೇ ವಿಕ್ರಾಂತಯೋಧಿನಃ ॥೮೩॥

ದ್ರೌಪದಿಗೆ ದುಃಖವನ್ನುಂಟುಮಾಡಿದ ಪ್ರಾತಿಕಾಮಿಯೂ ಸತ್ತಿದ್ದಾನೆ. ಪರಾಕ್ರಮದಿಂದ ಯುದ್ಧಮಾಡಿದ್ದ ನಿನ್ನ ಎಲ್ಲಾ ಶೂರರಾದ ಸಹೋದರರು ನಿನಗೋಸ್ಕರ ಸತ್ತಿದ್ದಾರೆ.

ಏತೇ ಚಾನ್ಯೇ ಚ ನಿಹತಾಃ ಬಹವಸ್ತ್ವತ್ಕೃತೇ ನೃಪಾಃ ।
ತ್ವಾಮಪ್ಯದ್ಯ ಹನಿಷ್ಯಾಮಿ ಗದಯಾ ನಾತ್ರ ಸಂಶಯಃ ॥೮೪॥

ನಿನಗೋಸ್ಕರ ಇವರು ಮತ್ತು ಇನ್ನೂ ಅನೇಕ ರಾಜರುಗಳು ನಮ್ಮ ಕೈಯಿಂದ ಸತ್ತಿದ್ದಾರೆ. ಇವತ್ತು ನಿನ್ನನ್ನೂ ಕೂಡ ಗದೆಯಿಂದ ಕೊಲ್ಲುತ್ತೇನೆ. ಇದರಲ್ಲಿ ಸಂಶಯವು ಇಲ್ಲ.

ಸಂಜಯಃ

ಇತ್ಯೇವಮುಚ್ಚೈ ರಾಜಾನಂ ಭಾಷಮಾಣಂ ವೃಕೋದರಮ್ ।
ಉವಾಚ ವೀತಭೀ ರಾಜನ್ ಪುತ್ರಸ್ತೇ ಸತ್ಯವಿಕ್ರಮಃ ॥೮೫॥

ಸಂಜಯ– ರಾಜನೇ! ಹೀಗೆ ಜೋರಾಗಿ ಮಾತನಾಡುತ್ತಿದ್ದ ಭೀಮನಿಗೆ ಭಯವನ್ನು ಕಳೆದುಕೊಂಡ ಪರಾಕ್ರಮಿಯಾದ ನಿನ್ನ ಮಗನು ಹೀಗೆ ಹೇಳುತ್ತಾನೆ.

ದುರ್ಯೋಧನಃ

ಕಿಂ ಕತ್ಥನೇನ ಬಹುನಾ ಯುಧ್ಯಸ್ವೇಹ ವೃಕೋದರ ।
ಅದ್ಯ ತೇऽಹಂ ವಿನೇಷ್ಯಾಮಿ ಯುದ್ಧಶ್ರದ್ಧಾಂ ವೃಕೋದರ ॥೮೬॥

ದುರ್ಯೋಧನ– ಭೀಮನೇ! ವ್ಯರ್ಥವಾದ ಪ್ರಲಾಪದಿಂದ ಏನು ಪ್ರಯೋಜನ? ಇಲ್ಲಿ ಯುದ್ಧವನ್ನು ಮಾಡು. ವೃಕೋದರ! ಇವತ್ತು ನಿನ್ನ ಯುದ್ಧದ ಉತ್ಸಾಹವನ್ನೇ ನಾಶ ಮಾಡುತ್ತೇನೆ.

ಇತಿ ದುರ್ಯೋಧನೋऽಕ್ಷುದ್ರಃ ತ್ವಯಾ ಕ್ಷುದ್ರಬಲೇನ ವೈ ।
ಶಕ್ಯಸ್ತ್ರಾಸಯಿತುಂ ವಾಚಾ ನ ಚಾನ್ಯಃ ಪ್ರಾಕೃತೋ ಯಥಾ ॥೮೭॥

ಸಾಮಾನ್ಯ ಮನುಷ್ಯರನ್ನು ಮಾತಿನಿಂದ ಪೀಡಿಸುವಂತೆ ಈ ಅಲ್ಪನಲ್ಲದ ದುರ್ಯೋಧನನನ್ನು ಅಲ್ಪಬಲವುಳ್ಳ ನೀನು ಪೀಡಿಸಲು ಸಾಧ್ಯವಿಲ್ಲ.

ಚಿರಕಾಲೇಪ್ಸಿತಂ ದಿಷ್ಟ್ಯಾ ಹೃದಯಸ್ಥಮಿದಂ ಮಮ ।
ತ್ವಯಾ ಸಹ ಗದಾಯುದ್ಧಂ ತ್ರಿದಶೈರುಪಪಾದಿತಮ್ ॥೮೮॥

ನಿನ್ನ ಜೊತೆಗೆ ಗದಾಯುದ್ಧವನ್ನು ಮಾಡಬೇಕೆಂದು ನಾನು ಬಹಳಕಾಲದಿಂದ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೆ. ಅದೃಷ್ಟವಶಾತ್ ದೇವತೆಗಳು ಗೌರವಿಸುವ ಅಂತಹ ಗದಾಯುದ್ಧವು ಪ್ರಾಪ್ತವಾಗಿದೆ

ಕಿಂ ವಾಚಾ ಬಹುನೋಕ್ತೇನ ಕತ್ಥಿತೇನ ಚ ದುರ್ಮತೇ ।
ವಾಣೇ ಸಂಕೋಚ್ಯತಾಮೇಷಾ ಕರ್ಮಣಾ ಮಾ ಚಿರಂ ಕೃಥಾಃ ॥೮೯॥

ದುರ್ಬುದ್ಧಿಯವನೇ! ಬಹಳವಾದ ಮಾತುಗಳಿಂದಾಗಲೀ, ಬಹಳವಾಗಿ ಪ್ರಲಾಪ ಮಾಡುವುದರಿಂದಲಾಗಲೀ ಏನು ಪ್ರಯೋಜನ? ನಿನ್ನ ಮಾತನ್ನು ಕಡಿಮೆ ಮಾಡು. ತಡಮಾಡದೆ ಕೆಲಸವನ್ನು ಮಾಡು.

ಸಂಜಯಃ

ತಸ್ಯ ತದ್ವಚನಂ ಶ್ರುತ್ವಾ ಸರ್ವ ಏವಾಭ್ಯಪೂಜಯನ್ ।
ರಾಜಾನಃ ಸೋಮಕಾಶ್ಚೈವ ಯೇ ತತ್ರಾಸನ್ ಸಮಾಗತಾಃ ॥೯೦॥

ಸಂಜಯ– ದುರ್ಯೋಧನನ ಆ ಮಾತನ್ನು ಕೇಳಿ ಅಲ್ಲಿ ಬಂದಿದ್ದ ಸೋಮಕರು ಮೊದಲಾದ ಎಲ್ಲಾ ರಾಜರು ಅವನನ್ನು ಕೊಂಡಾಡಿದರು.

ಸ ತೈಃ ಸಂಪೂಜಿತಃ ಸರ್ವೈಃ ಸಂಪ್ರಹೃಷ್ಟತನೂರುಹಃ ॥೯೧॥

ಅವರು ದುರ್ಯೋಧನನನ್ನು ಪೂಜಿಸಿದಾಗ ಅವನು ಸಂತೋಷದಿಂದ ರೋಮಾಂಚನವನ್ನು ಹೊಂದಿದನು.

ತಂ ಮತ್ತಮಿವ ಮಾತಂಗಂ ತಳತಾಳೈರ್ನರಾಧಿಪಾಃ ।
ಭೂಯಃ ಸಂಹರ್ಷಯಾಮಾಸುರ್ದುರ್ಯೋಧನಮಮರ್ಷಣಮ್ ॥

ಅಸಹನೆಗೊಳಗಾದ, ಮದವೇರಿದ ಆನೆಯಂತಿದ್ದ ದುರ್ಯೋಧನನನ್ನು ರಾಜರುಗಳು ತಮ್ಮ ಚಪ್ಪಾಳೆಗಳಿಂದ ಮತ್ತೂ ಸಂತೋಷಪಡಿಸಿದರು.

ಭೂಯೋ ಧೀರಂ ಮನಶ್ಚಕ್ರೇ ಯುದ್ಧಾಯ ಕೃತನಿಶ್ಚಯಃ ॥೯೩॥

ಯುದ್ಧಕ್ಕೆ ದೃಢನಿಶ್ಚಯವನ್ನು ಮಾಡಿಕೊಂಡಿದ್ದ ದುರ್ಯೋಧನನು ಪುನಃ ಮನಸ್ಸನ್ನು ದೃಢಗೊಳಿಸಿದನು.

ತಂ ಮಹಾತ್ಮಾ ಮಹಾತ್ಮಾನಂ ಗದಾಮುದ್ಯಮ್ಯ ಪಾಂಡವಃ ।
ಅಭಿದುದ್ರಾವ ವೇಗೇನ ತವ ಪುತ್ರಂ ವೃಕೋದರಃ ॥೯೪॥

ಅಂತಹ ಮಹಾತ್ಮನಾದ ನಿನ್ನ ಮಗ ದುರ್ಯೋಧನನನ್ನು ಮಹಾತ್ಮನಾದ ಭೀಮನು ಗದೆಯನ್ನು ಹಿಡಿದುಕೊಂಡು ವೇಗದಿಂದ ಎದುರಿಸಿದನು.

ಬೃಹಂತಿ ಕುಂಜರಾಸ್ತತ್ರ ಹಯಾ ಹ್ರೇಷಂತಿ ಚಾಸಕೃತ್ ।
ಶಸ್ತ್ರಾಣಿ ಚಾಪ್ಯದೀಪ್ಯಂತ ಪಾಂಡವಾನಾಂ ಜಯೈಷಿಣಾಮ್ ॥೯೫॥

ಆಗ ಒಂದೇ ಕಾಲದಲ್ಲಿ ದೊಡ್ಡದಾದ ಅನೇಕ ಆನೆಗಳು ಗರ್ಜಿಸಿದವು. ಕುದುರೆಗಳು ಹೇಷಾರವವನ್ನು ಮಾಡಿದವು. ಯುದ್ಧದ ಜಯವನ್ನು ಅಪೇಕ್ಷಿಸಿದ್ದ ಪಾಂಡವರ ಶಸ್ತ್ರಗಳು ಪ್ರಕಾಶಿಸತೊಡಗಿದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ಭೀಮದುರ್ಯೋಧನಯೋಃ
ಪರಸ್ಪರಭರ್ತ್ಸನಂ ನಾಮ ಸಪ್ತವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಭೀಮ ಮತ್ತು ದುರ್ಯೋಧನರ ಗದಾಯುದ್ಧದ ವರ್ಣನೆ

ಸಂಜಯಃ

ತದಾ ದುರ್ಯೋಧನೋ ರಾಜಾ ದೃಷ್ಟ್ವಾ ಭೀಮಂ ತಥಾऽऽಗತಮ್ ।
ಪ್ರತ್ಯುದ್ಯಯಾವದೀನಾತ್ಮಾ ವೇಗೇನ ಮಹತಾ ನದನ್ ॥೧॥

ಸಂಜಯ– ಆಗ ಆ ರೀತಿಯಲ್ಲಿ ಬರುತ್ತಿದ್ದ ಭೀಮನನ್ನು ದುರ್ಯೋಧನನೂ ಕೂಡ ಯಾವುದೇ ಕಳವಳಕ್ಕೆ ಒಳಗಾಗದೆ, ವೇಗದಿಂದ ಜೋರಾಗಿ ಕೂಗುತ್ತಾ ಎದುರಿಸಿ ಬಂದನು.

ಸಮಾಸೇದತುರಾಯತ್ತೌ ಶೃಂಗಿಣೌ ವೃಷಭಾವಿವ ।
ಮಹಾನಿರ್ಘಾತಘೋಷಶ್ಚ ಸನ್ನಿಪಾತೇ ತಯೋರಭೂತ್ ॥೨॥

ದೊಡ್ಡ ಕೊಂಬುಗಳನ್ನು ಹೊಂದಿರುವ ಗೂಳಿಗಳಂತೆ ಅವರಿಬ್ಬರೂ ಎದುರುಗೊಂಡರು. ಯುದ್ಧದಲ್ಲಿ ಅವರಿಬ್ಬರಲ್ಲಿ ಜೋರಾಗಿ ಗುಡುಗಿನ ಶಬ್ದವು ಉಂಟಾಯಿತು.

ಅಭವಚ್ಚ ತಯೋರ್ಯುದ್ಧಂ ತುಮುಲಂ ರೋಮಹರ್ಷಣಮ್ ।
ಜಿಘೃಕ್ಷತೋರ್ಯSಥಾನ್ಯೋನ್ಯಮಿಂದ್ರಪ್ರಹ್ಲಾದಯೋರಿವ ॥೩॥

ಪರಸ್ಪರವಾಗಿ ಸೋಲಿಸಿ ಸಾಯಿಸುವ ಇಚ್ಛೆಯಿಂದ ಕಾದಾಡುತ್ತಿದ್ದ ಭೀಮ-ದುರ್ಯೋಧನರ ಗದಾಯುದ್ಧವು ದೇವೇಂದ್ರ ಮತ್ತು ಪ್ರಹ್ಲಾದರ ನಡುವೆ ನಡೆದ ಯುದ್ಧದ ಹಾಗೆ ಭಯಂಕರವಾಗಿತ್ತು ಮತ್ತು ರೋಮಾಂಚನವನ್ನುಂಟುಮಾಡುತ್ತಿತ್ತು.

ರುಧಿರೋಕ್ಷಿತಸರ್ವಾಂಗೌ ಗದಾಹಸ್ತೌ ಮನಸ್ವಿನೌ ।
ದದೃಶಾತೇ ಮಹಾತ್ಮಾನೌ ಸುಪುಷ್ಪಾವಿವ ಕಿಂಶುಕೌ ॥೪॥

ದೃಢಶ್ವಾಸದಿಂದ ಗದಾಧಾರಿಗಳಾಗಿ ಕಾದಾಡುತ್ತಿದ್ದಾಗ ಇಬ್ಬರಿಗೂ ಮೈಯೆಲ್ಲಾ ರಕ್ತದಿಂದ ತೊಯ್ದು ಹೋಗಿತ್ತು. ಮಹಾತ್ಮರಾದ ಅವರಿಬ್ಬರೂ ಹೂಬಿಟ್ಟ ಪಲಾಶವೃಕ್ಷದ (ಮುತ್ತುಗದ) ಹಾಗೆ ಕಾಣಿಸುತ್ತಿದ್ದರು.

ತದಾ ತಸ್ಮಿನ್ ವರ್ತಮಾನೇ ಗದಾಯುದ್ಧೇ ಸುದಾರುಣೇ ।
ಖದ್ಯೋತಸಂಘೈರಿವ ಖಂ ದರ್ಶನೀಯಂ ವ್ಯರೋಚತ ॥೫॥

ಘೋರವಾದ ಗದಾಯುದ್ಧವು ನಡೆಯುತ್ತಿದ್ದಾಗ ಆಕಾಶವು ಮಿಂಚುಹುಳಗಳಿಂದ ಕೂಡಿದ ಹಾಗೆ ಸುಂದರವಾಗಿ ಕಾಣಿಸುತ್ತಿತ್ತು.

ತಸ್ಮಿಂಸ್ತದಾ ವರ್ತಮಾನೇ ಸಂಕುಲೇ ದಾರುಣೇ ಭೃಶಮ್ ।
ಉಭಾವಪಿ ಪರಿಶ್ರಾಂತೌ ಯುಧ್ಯಮಾನಾವರಿಂದಮೌ ॥೬॥

ಭಯಂಕರವಾದ ದ್ವಂದ್ವಯುದ್ಧವು ನಡೆಯುತ್ತಿದ್ದಾಗ ಶತ್ರುಸಂಹಾರಕರಾದ ಅವರಿಬ್ಬರೂ ಯುದ್ಧವನ್ನು ಮಾಡುತ್ತಾ ತುಂಬಾ ಆಯಾಸಪಟ್ಟರು.

ತೌ ಮುಹೂರ್ತಂ ಸಮಾಶ್ವಾಸ್ಯ ಪುನರೇವ ಪರಂತಪೌ ।
ಸಂಪ್ರಹಾರಯತಾಂ ಚಿತ್ರೇ ಸಂಪ್ರಗೃಹ್ಯ ಗದೇ ಶುಭೇ ॥೭॥

ಶತ್ರುಪೀಡಕರಾದ ಅವರಿಬ್ಬರೂ ಒಂದು ಮುಹೂರ್ತದ ಕಾಲ ವಿಶ್ರಾಂತಿಯನ್ನು ಪಡೆದು ಮತ್ತೆ ತಮ್ಮ ತಮ್ಮ ವಿಚಿತ್ರವಾದ ಮಂಗಳಮಯ ಗದೆಯನ್ನು ಹಿಡಿದುಕೊಂಡು ಹೊಡೆಯಲಾರಂಭಿಸಿದರು.

ತೌ ತು ದೃಷ್ಟ್ವಾ ಮಹಾಸತ್ತ್ವೌ ಸಮಾಶ್ವಸ್ತೌ ನರಾಧಿಪ ।
ಬಲಿನೌ ವಾರಣೌ ಯದ್ವದ್ ವಾಶಿತಾರ್ಥೇ ಮದೋತ್ಕಟೌ ॥೮॥

ರಾಜನೇ! ಅವರಿಬ್ಬರೂ ಚೆನ್ನಾಗಿ ವಿಶ್ರಾಂತಿಯನ್ನು ಪಡೆದು, ಮಹಾಶಕ್ತಿಯನ್ನು ಪಡೆದುಕೊಂಡು ಮೈಥುನಕ್ಕಾಗಿ ಹಾತೊರೆಯುವ ಮದವೇರಿದ ಆನೆಗಳಂತೆ ಕಂಡರು.

ಅಪಾರವೀರ್ಯೌ ಸಂಪ್ರೇಕ್ಷ್ಯ ಪ್ರಗೃಹೀತಗದೌ ದೃಢೌ ।
ಪ್ರಹರ್ಷಂ ಪರಮಂ ಜಗ್ಮುರ್ದೇವಗಂಧರ್ವದಾನವಾಃ ॥೯॥

ಅಪರಿಮಿತವಾದ ಸಾಮರ್ಥ್ಯವುಳ್ಳ ಅವರಿಬ್ಬರೂ ಗದೆಯನ್ನು ಹಿಡಿದುಕೊಂಡು ಯುದ್ಧದಲ್ಲಿ ದೃಢವಾಗಿ ಇರುವುದನ್ನು ನೋಡಿ ದೇವತೆಗಳು, ಗಂಧರ್ವರು ಮತ್ತು ದಾನವರು ಸಂತೋಷಪಟ್ಟರು.

ಪ್ರಗೃಹೀತಗದೌ ದೃಷ್ಟ್ವಾ ದುರ್ಯೋಧನವೃಕೋದರೌ ।
ಸಂಶಯಃ ಸರ್ವಭೂತಾನಾಂ ವಿಜಯೇ ಸಮಪದ್ಯತ ॥೧೦॥

ಗದಾಧಾರಿಗಳಾದ ದುರ್ಯೋಧನ ಮತ್ತು ಭೀಮಸೇನರನ್ನು ನೋಡಿ ಎಲ್ಲರಿಗೂ ಜಯದ ವಿಷಯದಲ್ಲಿ ಸಂಶಯವು ಉಂಟಾಯಿತು.

ಸಮಾಗಮ್ಯ ತತೋ ಭೂಯೋ ಭ್ರಾತರೌ ಬಲಿನಾಂ ವರೌ ।
ಅನ್ಯೋನ್ಯಸ್ಯಾಂತರಪ್ರೇಪ್ಸೂ ಪ್ರಚಕ್ರಾತೇऽಂತರಂ ಪ್ರತಿ ॥೧೧॥

ಬಲಶಾಲಿಗಳಲ್ಲಿಯೇ ಶ್ರೇಷ್ಠರಾದ ಸಹೋದರರಿಬ್ಬರೂ ಮತ್ತೆ ಕಾದಾಟದಲ್ಲಿ ಒಟ್ಟಾಗಿ ಪರಸ್ಪರವಾಗಿ ಹೊಡೆಯಲು ಅವಕಾಶವನ್ನು ಅಪೇಕ್ಷಿಸಿಕೊಂಡು ಆ ಅವಕಾಶಕ್ಕಾಗಿ ವರಸೆಗಳನ್ನು ತೋರಿಸಿದರು.

ಯಮದಂಡೋಪಮಾಂ ಗುರ್ವೀಮಿಂದ್ರಾಶನಿಸಮಸ್ವನಾಮ್ ।
ದದೃಶುಃ ಪ್ರೇಕ್ಷಕಾ ರಾಜನ್ ರೌದ್ರೀಂ ವಿಶಸನೀಂ ಗದಾಮ್ ॥೧೨॥

ಅವಿದ್ಧ್ಯತೋ ಗದಾಂ ತಸ್ಯ ಭೀಮಸೇನಸ್ಯ ಶುಷ್ಮಿಣಃ ।
ಶಬ್ದಃ ಸುತುಮುಲೋ ಘೋರೋ ಮುಹೂರ್ತಂ ಸಮಪದ್ಯತ ॥೧೩॥

ರಾಜನೇ! ಪರಾಕ್ರಮಿಯಾದ ಭೀಮನು ಗದೆಯನ್ನು ತಿರುಗಿಸುತ್ತಿರುವುದನ್ನು ಪ್ರೇಕ್ಷಕರೆಲ್ಲರೂ ನೋಡಿದರು. ಅವನ ಗದೆಯು ಯಮನ ದಂಡದಂತೆ ಬಹಳ ಭಾರವಾಗಿತ್ತು. ವಜ್ರಾಯುಧಕ್ಕೆ ಸದೃಶವಾಗಿ ಶಬ್ದವನ್ನು ಮಾಡುತ್ತಿತ್ತು. ಶತ್ರುಗಳನ್ನು ನಿಶ್ಶೇಷಗೊಳಿಸುವ ಘೋರವಾದ ಗದೆಯನ್ನು ಪ್ರೇಕ್ಷಕರು ನೋಡಿದರು. ಗದಾಪ್ರಹಾರ ಮಾಡುತ್ತಿದ್ದಾಗ ಒಂದು ಮುಹೂರ್ತದಷ್ಟು ಕಾಲ ಭಯಂಕರವಾದ ಶಬ್ದವು ಉಂಟಾಯಿತು.

ಆವಿದ್ಧ್ಯಂತಮಭಿಪ್ರೇಕ್ಷ್ಯ ಧಾರ್ತರಾಷ್ಟ್ರೋऽಥ ಪಾಂಡವಮ್ ।
ಗದಾಮಲಘುವೇಗಾಂ ತಾಂ ವಿಸ್ಮಿತಃ ಸ ಬಭೂವ ಹ ॥೧೪॥

ಅನಂತರ ಗದಾಪ್ರಹಾರವನ್ನು ಮಾಡುತ್ತಿದ್ದ ಭೀಮನನ್ನು ನೋಡಿ ದುರ್ಯೋಧನನು ಆಶ್ಚರ್ಯಗೊಂಡನು.

ಚರಂಶ್ಚ ವಿವಿಧಾನ್ ಮಾರ್ಗಾನ್ ಮಂಡಲಾನಿ ಚ ಭಾಗಶಃ ।
ಅಶೋಭತ ತದಾ ವೀರೋ ಭೂಯ ಏವ ವೃಕೋದರಃ ॥೧೫॥

ವೀರನಾದ ಭೀಮನು ಪುನಃ ಬೇರೆ ಬೇರೆ ಗದಾವರಸೆಗಳನ್ನು ಪ್ರಯೋಗಿಸುತ್ತಾ, ವಿವಿಧಭಾಗಗಳಿಂದ ಮಂಡಲಾಕಾರವಾಗಿ ಸುತ್ತುತ್ತಾ ಶೋಭಿಸಿದನು.

ತೌ ಪರಸ್ಪರಮಾಸಾದ್ಯ ಯತ್ತಾವನ್ಯೋನ್ಯರಕ್ಷಣೇ ।
ಮಾರ್ಜಾರಾವಿವ ಭಕ್ಷಾರ್ಥೇ ವಿತಸ್ಥಾತೇ ಮುಹುರ್ಮುಹುಃ ॥೧೬॥

ಅವರಿಬ್ಬರೂ ಪರಸ್ಪರ ಒಟ್ಟಾಗಿ ಕಾದಾಡುತ್ತಾ ತಮ್ಮನ್ನು ರಕ್ಷಿಸಿಕೊಳ್ಳಲಿಕ್ಕಾಗಿ, ಜೊತೆಗೆ ಎರುರಾಳಿಯನ್ನು ಹೊಡೆಯಲಿಕ್ಕಾಗಿ ಬೆಕ್ಕುಗಳಂತೆ ಮತ್ತೆ ಮತ್ತೆ ಪರಸ್ಪರ ಘಾಸಿ ಮಾಡಿಕೊಂಡರು.

ಅಚರದ್ ಭೀಮಸೇನಸ್ತು ಮಾರ್ಗಾನ್ ಬಹುವಿಧಾನ್ ರಣೇ ।
ಮಂಡಲಾನಿ ವಿಚಿತ್ರಾಣಿ ಸ್ಥಾನಾನಿ ವಿವಿಧಾನಿ ಚ ॥೧೭॥

ಯುದ್ಧದಲ್ಲಿ ಭೀಮಸೇನನು ಅನೇಕ ವರಸೆಗಳನ್ನು, ಮಂಡಲಾಕಾರಗಳನ್ನು, ವಿವಿಧ ಭಂಗಿಗಳನ್ನು ಪ್ರಯೋಗಿಸಿದನು.

ಗೋಮೂತ್ರಿಕಾಣಿ ಚಿತ್ರಾಣಿ ಗತಪ್ರತ್ಯಾಗತಾನಿ ಚ ।
ಪರಿಮೋಕ್ಷಂ ಪ್ರಹಾರಾಣಾಂ ವರ್ಜನಂ ಪರಿಧಾವನಮ್ ॥೧೮॥

ಅಭಿದ್ರವಣಮಾಕ್ಷೇಪಮವಸ್ಥಾನಮವಗ್ರಹಮ್ ।
ಪರಾವೃತ್ತಂ ಸುಸಂವೃತ್ತಮುಪಪ್ಲುತಮುಪದ್ರುತಮ್ ॥೧೯॥

ಉಪನ್ಯಸ್ತಮಪನ್ಯಸ್ತಂ ಗದಾಯುದ್ಧವಿಶಾರದೌ ।
ಏವಂ ತೌ ವಿಚರಂತೌ ತು ಪರಸ್ಪರಮವಿಧ್ಯತಾಮ್ ॥೨೦॥

ವಿಚಿತ್ರವಾದ ಗೋಮೂತ್ರಿಭಂಗಿ, ಯುದ್ಧದಲ್ಲಿ ಮುಂದೆ ಹೋಗಿ ಹಿಂದೆ ಬರುವುದು, ತನಗೆ ಬೀಳುತ್ತಿರುವ ಪೆಟ್ಟುಗಳನ್ನು ತಪ್ಪಿಸಿಕೊಂಡು ಓಡುವುದು, ಎದುರಾಳಿಗೆ ಮುಮ್ಮುಖವಾಗಿ ನುಗ್ಗುವುದು, ಎದುರಾಳಿಯನ್ನು ತಡೆದು ನಿಲ್ಲಿಸುವುದು, ಗಟ್ಟಿಯಾಗಿ ನಿಲ್ಲುವುದು, ಕೆಳಮುಖವಾಗಿ ಹಿಡಿದುಕೊಳ್ಳುವುದು, ಪ್ರದಕ್ಷಿಣಾಕಾರದಲ್ಲಿ ಮತ್ತು ಅಪ್ರದಕ್ಷಿಣಾಕಾರದಲ್ಲಿ ಸುತ್ತುವುದು, ಹತ್ತಿರಕ್ಕೆ ಹಾರಿ ನಿಲ್ಲುವುದು, ಹತ್ತಿರಕ್ಕೆ ಓಡುವುದು, ಹತ್ತಿರದಲ್ಲಿ ಇರುವುದು, ದೂರಕ್ಕೆ ಬಂದು ನಿಲ್ಲುವುದು ಇವೇ ಮೊದಲಾದ ಗದಾಯುದ್ಧದ ಪ್ರಕಾರಗಳನ್ನು ಪ್ರಯೋಗಿಸಿದನು. ಗದಾಯುದ್ಧದಲ್ಲಿ ನಿಷ್ಣಾತರಾದ ಇಬ್ಬರೂ ಕೂಡ ಪರಸ್ಪರವಾಗಿ ಪ್ರಹಾರ ಮಾಡಿಕೊಳ್ಳುತ್ತಾ ಸಂಚರಿಸತೊಡಗಿದರು.

ವಂಚಯಂತೌ ಪುನಶ್ಚೈವ ಚೇರತುಃ ಕುರುಪಾಂಡವೌ ॥೨೧॥

ಕುರುವಂಶದ ದುರ್ಯೋಧನ ಹಾಗೂ ಪಾಂಡುಪುತ್ರನಾದ ಭೀಮ ಇವರಿಬ್ಬರೂ ಪರಸ್ಪರ ವಂಚಿಸಿ (ತಪ್ಪಿಸಿ)ಕೊಳ್ಳುತ್ತಾ ಯುದ್ಧದಲ್ಲಿ ಅತ್ತಿಂದಿತ್ತ ಸಂಚರಿಸಿದರು.

ವಿಕ್ರೀಡಂತೌ ಸುಬಲಿನೌ ಮಂಡಲಾನಿ ವಿಚೇರತುಃ ॥೨೨॥

ಮಹಾಬಲಶಾಲಿಗಳಾದ ಅವರಿಬ್ಬರೂ ಕಾದಾಟವನ್ನು ಮಾಡುತ್ತಾ ಮಂಡಲಾಕಾರದಲ್ಲಿ ಸಂಚರಿಸಿದರು.

ಗದಾಹಸ್ತೌ ತತಸ್ತೌ ತು ಮಂಡಲಾವಸ್ಥಿತೌ ಯುಧಿ ।
ದಕ್ಷಿಣಂ ಮಂಡಲಂ ರಾಜನ್ ಧಾರ್ತರಾಷ್ಟ್ರೋऽಭ್ಯವರ್ತತ ॥೨೩॥

ರಾಜನೇ! ಯುದ್ಧದಲ್ಲಿ ಗದಾಧಾರಿಗಳಾಗಿ ಮಂಡಲಾಕಾರದಲ್ಲಿ ಇದ್ದುಕೊಂಡು, ದುರ್ಯೋಧನನು ಮಂಡಲದ ದಕ್ಷಿಣದಿಗ್ಭಾಗ(ಬಲಭಾಗ)ಕ್ಕೆ ಬಂದನು.

ವಾಮಂ ತು ಮಂಡಲಂ ತತ್ರ ಭೀಮಸೇನೋಽಭ್ಯವರ್ತತ ॥೨೪॥

ಭೀಮಸೇನನು ಮಂಡಲದ ಎಡಭಾಗಕ್ಕೆ ಬಂದನು.

ತಥಾ ವಿಚರತಸ್ತಸ್ಯ ಭೀಮಸ್ಯ ರಣಮೂರ್ಧನಿ ।
ದುರ್ಯೋಧನೋ ಮಹಾರಾಜ ಪಾರ್ಶ್ವದೇಶೇಽಭ್ಯತಾಡಯತ್ ॥೨೫॥

ಮಹಾರಾಜನೇ! ಹೀಗೆ ಯುದ್ಧದಲ್ಲಿ ಸಂಚರಿಸುತ್ತಿದ್ದ ಭೀಮನ ಶರೀರದ ಬದಿಯ ಭಾಗಕ್ಕೆ ದುರ್ಯೋಧನನು ಚೆನ್ನಾಗಿ ಹೊಡೆದನು.

ಆಹತಸ್ತು ತತೋ ಭೀಮಃ ತವ ಪುತ್ರೇಣ ಭಾರತ ।
ಆವಿಧ್ಯತ ಗದಾಂ ಗುರ್ವೀಂ ಪ್ರಹಾರಂ ತಮಚಿಂತಯನ್ ॥೨೬॥

ಭರತಕುಲೋದ್ಭವನೇ! ನಿನ್ನ ಮಗನಿಂದ ಹೊಡೆತಕ್ಕೊಳಗಾದ ಭೀಮನು ಆ ಪೆಟ್ಟನ್ನು ಪರಿಗಣಿಸದೆ ಭಾರವಾದ ತನ್ನ ಗದೆಯನ್ನು ಚೆನ್ನಾಗಿ ಬೀಸಿ ಪ್ರಯೋಗಿಸಿದನು.

ಇಂದ್ರಾಶನಿಸಮಾಂ ಘೋರಾಂ ಯಮದಂಡಮಿವೋದ್ಯತಾಮ್ ।
ದದೃಶುಸ್ತೇ ಮಹಾರಾಜ ಭೀಮಸೇನಸ್ಯ ತಾಂ ಗದಾಮ್ ॥೨೭॥

ಮಹಾರಾಜನೇ! ಇಂದ್ರನ ವಜ್ರಾಯುಧದಂತೆ ಘೋರವಾದ ಹಾಗೂ ಯಮನ ದಂಡಕ್ಕೆ ಸದೃಶವಾದ ಭೀಮಸೇನನ ಆ ಗದೆಯನ್ನು ಅವರು ನೋಡಿದರು.

ಆವಿಧ್ಯಂತಂ ಗದಾಂ ದೃಷ್ಟ್ವಾ ಭೀಮಸೇನಂ ತವಾತ್ಮಜಃ ।
ಸ್ವಾಮುದ್ಯಮ್ಯ ಗದಾಂ ಘೋರಾಂ ಪ್ರತ್ಯಯುಧ್ಯತ ಕೌರವಃ ॥೨೮॥

ಭೀಮಸೇನನು ಗದೆಯನ್ನು ಪ್ರಯೋಗಿಸುವುದನ್ನು ನೋಡಿದ ನಿನ್ನ ಮಗ ದುರ್ಯೋಧನನು ತನ್ನ ಘೋರವಾದ ಗದೆಯನ್ನು ಪ್ರತಿಯಾಗಿ ಪ್ರಯೋಗಿಸಿದನು.

ಗದಾಮಾರುತವೇಗೇನ ತವ ಪುತ್ರಸ್ಯ ಭಾರತ ।
ಶಬ್ದ ಆಸೀತ್ ಸುತುಮುಲಸ್ತೇಜಶ್ಚ ಸಮಜಾಯತ ॥೨೯॥

ಭರತಕುಲೋದ್ಭವನೇ! ನಿನ್ನ ಮಗನ ಗದೆಯ ಗಾಳಿಯ ವೇಗದಿಂದ ಭಯಂಕರವಾದ ಶಬ್ದವು ಮತ್ತು ಕಾಂತಿಯೂ ಉಂಟಾಯಿತು.

ಸ ಚರನ್ ವಿವಿಧಾನ್ ಮಾರ್ಗಾನ್ ಮಂಡಲಾನಿ ಚ ಭಾರತ ।
ಸಮಶೋಭತ ತೇಜಸ್ವೀ ಭೂಯೋ ಭೀಮಾತ್ ಸುಯೋಧನಃ ॥೩೦॥

ಭಾರತ! ದುರ್ಯೋಧನನು ವಿವಿಧ ರೀತಿಯ ಗದಾಪ್ರಯೋಗಗಳನ್ನೂ ಮಂಡಲಾಕಾರದಲ್ಲಿ ಸುತ್ತುವುದನ್ನೂ ಮಾಡುತ್ತಾ ಮತ್ತೆ ಭೀಮನಿಗಿಂತ ಹೆಚ್ಚಿನ ತೇಜೋವಂತನಾಗಿ ತೋರಿದನು.

ಆವಿದ್ಧಾ ಭೀಮಸೇನೇನ ಸುಭೀಮಾ ಮಹತೀ ಗದಾ ।
ಸಧೂಮಂ ಸಾರ್ಚಿಷಂ ಚಾಗ್ನಿಂ ಮುಮೋಚೋಗ್ರಂ ಮಹಾಸ್ವನಮ್ ॥

ಆಗ ಭೀಮಸೇನನು ಪ್ರಯೋಗಿಸಿದ ಬಹಳ ಭಯಂಕರವಾದ ದೊಡ್ಡದಾದ ಗದೆಯು ಹೊಗೆ-ಕಿಡಿಗಳನ್ನು ಕಾರುತ್ತಾ ದೊಡ್ಡದಾದ ಶಬ್ದವನ್ನುಂಟುಮಾಡಿತು.

ಆಧೂತಾಂ ಭೀಮಸೇನೇನ ಗದಾಂ ದೃಷ್ಟ್ವಾ ಸುಯೋಧನಃ ।
ಅದ್ರಿಸಾರಮಯೀಂ ಗುರ್ವೀಮಾವಿಧ್ಯನ್ ಬಹ್ವಶೋಭತ ॥೩೨॥

ಭೀಮಸೇನನು ಗದೆಯನ್ನು ಪ್ರಯೋಗಿಸಿದ್ದನ್ನು ನೋಡಿದ ದುರ್ಯೋಧನನು ಲೋಹದಿಂದ ನಿರ್ಮಿತವಾದ ಭಾರವಾದ ಗದೆಯನ್ನು ಪ್ರಯೋಗಿಸಿ ಬಹಳವಾಗಿ ಶೋಭಿಸಿದನು.

ಗದಾಂ ಮಾರುತವೇಗಾಂ ತಾಂ ದೃಷ್ಟ್ವಾ ತಸ್ಯ ಮಹಾತ್ಮನಃ ।
ಭಯಂ ಪಾಂಡೂನಾವಿವೇಶ ಸರ್ವಾನೇವ ಸಸಾತ್ಯಕಾನ್ ॥೩೩॥

ಮಹಾತ್ಮನಾದ ದುರ್ಯೋಧನನ ಗದೆಯ ವೇಗವನ್ನು ನೋಡಿ ಸಾತ್ಯಕನನ್ನೂ ಸೇರಿಸಿ ಎಲ್ಲಾ ಪಾಂಡವರಿಗೆ ಭಯವು ಆವರಿಸಿತು.

ತೌ ದರ್ಶಯಂತೌ ಸಮರೇ ಯುದ್ಧಕ್ರೀಡಾಂ ಸಮಂತತಃ ।
ಗದಾಭ್ಯಾಂ ಸಹಸಾऽನ್ಯೋನ್ಯಮಾಜಘ್ನತುರರಿಂದಮೌ ॥೩೪॥

ಶತ್ರುಸಂಹಾರಕರಾದ ಭೀಮ-ದುರ್ಯೋಧನರು ಎಲ್ಲಾ ಕಡೆಗಳಲ್ಲಿಯೂ ಯುದ್ಧದ ಆಟವನ್ನು ತೋರಿಸುತ್ತಾ ಕೂಡಲೇ ಒಬ್ಬರಿಗೊಬ್ಬರು ಗದೆಯಿಂದ ಹೊಡೆದುಕೊಂಡರು.

ತೌ ಪರಸ್ಪರಮಾಸಾದ್ಯ ದಂತಾಭ್ಯಾಂ ದ್ವಿರದೌ ಯಥಾ ।
ಅಶೋಭೇತಾಂ ಮಹಾರಾಜ ಶೋಣಿತೇನ ಪರಿಪ್ಲುತೌ ॥೩೫॥

ಮಹಾರಾಜನೇ! ರಕ್ತಸಿಕ್ತರಾದ ಅವರಿಬ್ಬರೂ ದಂತಗಳಿಂದ ಹೋರಾಡುತ್ತಿದ್ದ ಆನೆಗಳಂತೆ ಪರಸ್ಪರ ಎದುರಾಗಿ ಹೋರಾಡುತ್ತಾ ಶೋಭಿಸಿದರು.

ಏವಂ ತದಭವದ್ ಯುದ್ಧಂ ಘೋರರೂಪಮಸಂವೃತಮ್ ।
ಪರಾವೃತ್ತೇಽಹನಿ ಕ್ರೂರಂ ವೃತ್ರವಾಸವಯೋರಿವ ॥೩೬॥

ಹೀಗೆ ಹಗಲಿನ ಹೊತ್ತು ಮುಗಿದುಹೋದರೂ ಇಂದ್ರ-ವೃತ್ರರ ಮಧ್ಯೆ ನಡೆದ ಘೋರವಾದ ಯುದ್ಧದಂತೆ ಇದ್ದ ಆ ಘೋರರೂಪವಾದ ಗದಾಯುದ್ಧವು ಮುಗಿಯಲಿಲ್ಲ.

ದೃಷ್ಟ್ವಾ ವ್ಯವಸ್ಥಿತಂ ಭೀಮಂ ತವ ಪುತ್ರೋ ಮಹಾರಥಃ ।
ಚರಂಶ್ಚಿತ್ರತರಾನ್ ಮಾರ್ಗಾನ್ ಕೌಂತೇಯಂ ಸಮಭಿದ್ರವತ್ ॥೩೭॥

ಭೀಮಸೇನನ ಉತ್ತಮಸ್ಥಿತಿಯನ್ನು ಗಮನಿಸಿ ಮಹಾರಥನಾದ ನಿನ್ನ ಮಗನು ಚಿತ್ರ-ವಿಚಿತ್ರವಾದ ಗದಾವರಸೆಗಳನ್ನು ಪ್ರಯೋಗಿಸುತ್ತಾ ಭೀಮನನ್ನು ಎದುರಿಸಿದನು.

ತಸ್ಯ ಭೀಮೋ ಮಹಾವೇಗಾಂ ಜಾಂಬೂನದವಿಭೂಷಿತಾಮ್ ।
ಅಭಿಕ್ರುದ್ಧಸ್ಯ ಕ್ರುದ್ಧಸ್ತು ತಾಡಯಾಮಾಸ ತಾಂ ಗದಾಮ್ ॥೩೮॥

ಕೋಪಗೊಂಡಿದ್ದ ಭೀಮನು ಬಂಗಾರದಿಂದ ಶೋಭಿಸುತ್ತಿದ್ದ ತನ್ನ ಗದೆಯಿಂದ ಬಹಳವಾಗಿ ಕೋಪಗೊಂಡಿದ್ದ ದುರ್ಯೋಧನನನ್ನು ಹೊಡೆದನು.

ಸವಿಷ್ಫುಲಿಂಗೋ ನಿರ್ಹ್ರಾದಸ್ತಯೋಸ್ತತ್ರಾಭಿಘಾತಜಃ ।
ಪ್ರಾದುರಾಸೀನ್ಮಹಾರಾಜ ಘೃಷ್ಟಯೋರ್ವಜ್ರಯೋರಿವ ॥೩೯॥

ಮಹಾರಾಜನೇ! ಪರಸ್ಪರ ಢಿಕ್ಕಿಹೊಡೆದ ವಜ್ರಾಯುಧಗಳಿಂದ ಹೊರಬರುವಂತೆ ಇವರಿಬ್ಬರ ಗದೆಗಳ ಹೊಡೆತದಿಂದ ಉಂಟಾದ ಬೆಂಕಿಯ ಕಿಡಿಗಳು ಮತ್ತು ದೊಡ್ಡ ಶಬ್ದವು ಅಲ್ಲಿ ಉಂಟಾಯಿತು.

ವೇಗವತ್ಯಾ ತಯಾ ತತ್ರ ಭೀಮಸೇನಪ್ರಮುಕ್ತಯಾ ।
ನಿಪತಂತ್ಯಾ ಮಹಾರಾಜ ಪೃಥಿವೀ ಸಮಕಂಪತ ॥೪೦॥

ಮಹಾರಾಜನೇ! ಭೀಮನು ಪ್ರಯೋಗಿಸಿದ ಬಹಳ ವೇಗದಿಂದ ನೆಲಕ್ಕೆ ಬೀಳುತ್ತಿದ್ದ ಗದೆಯಿಂದಾಗಿ ಭೂಮಿಯು ಕಂಪಿಸಿತು.

ತಾಂ ನಾಮೃಷ್ಯತ ಕೌರವ್ಯೋ ಗದಾಂ ಪ್ರತಿಹತಾಂ ರಣೇ ।
ಮತ್ತೋ ದ್ವಿಪ ಇವ ಕ್ರುದ್ಧಃ ಪ್ರತಿಕುಂಜರದರ್ಶನಾತ್ ॥೪೧॥

ಕೋಪಗೊಂಡ ಮದವೇರಿದ ಆನೆಯು ತನ್ನ ಸ್ಪರ್ಧಿಯಾದ ಇನ್ನೊಂದು ಆನೆಯನ್ನು ಸಹಿಸಿಕೊಳ್ಳದ ರೀತಿಯಲ್ಲಿ, ಯುದ್ಧದಲ್ಲಿ ತನ್ನ ಮೇಲೆ ಪ್ರಯೋಗಿಸಲ್ಪಟ್ಟ ಗದೆಯನ್ನು ದುರ್ಯೋಧನನು ಸಹಿಸಲಿಲ್ಲ.

ಸ ಸವ್ಯಂ ಮಂಡಲಂ ರಾಜನ್ನುದ್ಭ್ರಾಮ್ಯ ವಿಗತಕ್ಲಮಃ ।
ಆಜಘ್ನೇ ಮೂರ್ಧ್ನಿ ಕೌಂತೇಯಂ ಗದಯಾ ಭೀಮವೇಗಯಾ ॥೪೨॥

ರಾಜನೇ! ಕ್ಲೇಶದೂರನಾದ ದುರ್ಯೋಧನನು ಗದೆಯನ್ನು ಅಪ್ರದಕ್ಷಿಣಾಕಾರದಲ್ಲಿ ಮೇಲೆ ತಿರುಗಿಸಿ ಭಯಂಕರವೇಗವುಳ್ಳ ಆ ಗದೆಯಿಂದ ಭೀಮನ ತಲೆಗೆ ಹೊಡೆದನು.

ತಯಾ ತ್ವಭಿಹತೋ ಭೀಮಸ್ತವ ಪುತ್ರೇಣ ಪಾಂಡವಃ ।
ನಾಕಂಪತ ಮಹಾರಾಜ ತದದ್ಭುತಮಿವಾಭವತ್ ॥೪೩॥

ರಾಜನೇ! ನಿನ್ನ ಮಗನಿಂದ ಚೆನ್ನಾಗಿ ಗದಾಪ್ರಹಾರಕ್ಕೆ ಒಳಗಾದರೂ ಭೀಮನು ಸ್ವಲ್ಪವೂ ಅಲುಗಾಡಲಿಲ್ಲ. ಇದು ಬಹಳ ಅದ್ಭುತವಾಗಿತ್ತು.

ಆಶ್ಚರ್ಯಂ ಚಾಪಿ ತದ್ರಾಜನ್ ಸರ್ವಸೈನ್ಯಾನ್ಯಪೂಜಯನ್ ।
ಯದ್ಗದಾಭಿಹತೋ ಭೀಮೋ ನಾಕಂಪತ ಪದಾತ್ ಪದಮ್ ॥೪೪॥

ಗದೆಯ ಪ್ರಹಾರಕ್ಕೊಳಗಾದರೂ ಭೀಮನು ಒಂದು ಹೆಜ್ಜೆಯಷ್ಟೂ ಕೂಡ ಅಲುಗಾಡದೆ ಇದ್ದುದು ಬಹಳ ಆಶ್ಚರ್ಯಕರವಾಗಿತ್ತು. ರಾಜನೇ! ಎಲ್ಲಾ ಸೈನ್ಯಗಳೂ ಅದನ್ನು ಕೊಂಡಾಡಿದವು.

ತತೋ ಗುರುತರಾಂ ದೀಪ್ತಾಂ ಗದಾಂ ಹೇಮಪರಿಷ್ಕೃತಾಮ್ ।
ದುರ್ಯೋಧನಾಯ ವ್ಯಸೃಜತ್ ತದದ್ಭುತಮಿವಾಭವತ್ ॥೪೫॥

ಅನಂತರ ಭೀಮನು ಬಂಗಾರದ ಅಲಂಕಾರದಿಂದ ಶೋಭಿಸುತ್ತಿದ್ದ ಭಾರವಾದ ಗದೆಯನ್ನು ದುರ್ಯೋಧನನ ಮೇಲೆ ಪ್ರಯೋಗಿಸಿದನು. ಅದು ಅದ್ಭುತವಾಗಿತ್ತು.

ತಂ ಪ್ರಹಾರಮಸಂಭ್ರಾಂತೋ ಲಾಘವೇನ ಮಹಾಬಲಃ ।
ಮೋಘಂ ದುರ್ಯೋಧನಶ್ಚಕ್ರೇ ತತ್ರಾಭೂದ್ ವಿಸ್ಮಯೋ ಮಹಾನ್ ॥

ಮಹಾಬಲಶಾಲಿಯಾದ ದುರ್ಯೋಧನನು ಸ್ವಲ್ಪವೂ ಹೆದರದೆ ಆ ಗದಾಪ್ರಹಾರವನ್ನು ನಿರರ್ಥಕವನ್ನಾಗಿ ಮಾಡಿದನು. ಆಗ ಅಲ್ಲಿ ಬಹಳ ಆಶ್ಚರ್ಯವು ಉಂಟಾಯಿತು.

ಸಾ ತು ಮೋಘಾ ಗದಾ ರಾಜನ್ ಪತಂತೀ ಭೀಮಚೋದಿತಾ ।
ಚಾಲಯಾಮಾಸ ಪೃಥಿವೀಂ ಮಹಾನಿರ್ಘಾತನಿಃಸ್ವನಾ ॥೪೭॥

ರಾಜನೇ! ವ್ಯರ್ಥವಾಗಿ ನೆಲಕ್ಕೆ ಬಿದ್ದ ಭೀಮನ ಗದೆಯು ದೊಡ್ಡ ಗುಡುಗಿನ ಶಬ್ದವನ್ನುಂಟುಮಾಡುತ್ತಾ ಭೂಮಿಯನ್ನು ಅಲುಗಾಡಿಸಿತು.

ಆಸ್ಥಾಯ ಕೈಶಿಕಾನ್ ಮಾರ್ಗಾನ್ ಉತ್ಪಪಾತ ಪುನಃ ಪುನಃ ।
ಗದಾನಿಪಾತಂ ವಿಜ್ಞಾಯ ಭೀಮಸೇನಮವಂಚಯತ್ ॥೪೮॥

ಗದೆಯು ಕೆಳಗೆ ಬಿದ್ದಿದ್ದನ್ನು ತಿಳಿದುಕೊಂಡ ದುರ್ಯೋಧನನು ಕೈಶಿಕಮಾರ್ಗದಿಂದ ಪುನಃ ಪುನಃ ಗದೆಯನ್ನು ಪ್ರಯೋಗಿಸುತ್ತಾ ಭೀಮಸೇನನನ್ನು ವಂಚನೆಗೊಳಪಡಿಸಿದನು.

ವಂಚಯಿತ್ವಾ ತತೋ ಭೀಮಂ ಗದಯಾ ಕುರುಸತ್ತಮಃ ।
ಅತಾಡಯದಸಂಭ್ರಾಂತೋ ವಕ್ಷೋದೇಶೇ ಮಹಾಬಲಃ ॥೪೯॥

ಕುರುಶ್ರೇಷ್ಠನಾದ ಬಲಶಾಲಿ ದುರ್ಯೋಧನನು ಉದ್ವೇಗಕ್ಕೊಳಗಾಗದೆ ಭೀಮನನ್ನು ಮೋಸಗೊಳಿಸಿ ಗದೆಯಿಂದ ಅವನ ಎದೆಗೆ ಹೊಡೆದನು.

ಗದಯಾऽಭಿಹತೋ ಭೀಮೋ ಮುಹ್ಯಮಾನೋ ಮಹಾರಣೇ ।
ನಾಭಿಜಾನಾತಿ ಕರ್ತವ್ಯಂ ಪುತ್ರೇಣಾಭ್ಯಹತಸ್ತವ ॥೫೦॥

ವೇಗವತ್ಯಾ ತಯಾ ತತ್ರ ಭೀಮಸೇನಪ್ರಮುಕ್ತಯಾ ।
ನಿಪತಂತ್ಯಾ ಮಹಾರಾಜ ಪೃಥಿವೀ ಸಮಕಂಪತ ॥೪೦॥

ಮಹಾರಾಜನೇ! ಭೀಮನು ಪ್ರಯೋಗಿಸಿದ ಬಹಳ ವೇಗದಿಂದ ನೆಲಕ್ಕೆ ಬೀಳುತ್ತಿದ್ದ ಗದೆಯಿಂದಾಗಿ ಭೂಮಿಯು ಕಂಪಿಸಿತು.

ತಾಂ ನಾಮೃಷ್ಯತ ಕೌರವ್ಯೋ ಗದಾಂ ಪ್ರತಿಹತಾಂ ರಣೇ ।
ಮತ್ತೋ ದ್ವಿಪ ಇವ ಕ್ರುದ್ಧಃ ಪ್ರತಿಕುಂಜರದರ್ಶನಾತ್ ॥೪೧॥

ಕೋಪಗೊಂಡ ಮದವೇರಿದ ಆನೆಯು ತನ್ನ ಸ್ಪರ್ಧಿಯಾದ ಇನ್ನೊಂದು ಆನೆಯನ್ನು ಸಹಿಸಿಕೊಳ್ಳದ ರೀತಿಯಲ್ಲಿ, ಯುದ್ಧದಲ್ಲಿ ತನ್ನ ಮೇಲೆ ಪ್ರಯೋಗಿಸಲ್ಪಟ್ಟ ಗದೆಯನ್ನು ದುರ್ಯೋಧನನು ಸಹಿಸಲಿಲ್ಲ.

ಸ ಸವ್ಯಂ ಮಂಡಲಂ ರಾಜನ್ನುದ್ಭ್ರಾಮ್ಯ ವಿಗತಕ್ಲಮಃ ।
ಆಜಘ್ನೇ ಮೂರ್ಧ್ನಿ ಕೌಂತೇಯಂ ಗದಯಾ ಭೀಮವೇಗಯಾ ॥೪೨॥

ರಾಜನೇ! ಕ್ಲೇಶದೂರನಾದ ದುರ್ಯೋಧನನು ಗದೆಯನ್ನು ಅಪ್ರದಕ್ಷಿಣಾಕಾರದಲ್ಲಿ ಮೇಲೆ ತಿರುಗಿಸಿ ಭಯಂಕರವೇಗವುಳ್ಳ ಆ ಗದೆಯಿಂದ ಭೀಮನ ತಲೆಗೆ ಹೊಡೆದನು.

ತಯಾ ತ್ವಭಿಹತೋ ಭೀಮಸ್ತವ ಪುತ್ರೇಣ ಪಾಂಡವಃ ।
ನಾಕಂಪತ ಮಹಾರಾಜ ತದದ್ಭುತಮಿವಾಭವತ್ ॥೪೩॥

ರಾಜನೇ! ನಿನ್ನ ಮಗನಿಂದ ಚೆನ್ನಾಗಿ ಗದಾಪ್ರಹಾರಕ್ಕೆ ಒಳಗಾದರೂ ಭೀಮನು ಸ್ವಲ್ಪವೂ ಅಲುಗಾಡಲಿಲ್ಲ. ಇದು ಬಹಳ ಅದ್ಭುತವಾಗಿತ್ತು.

ಆಶ್ಚರ್ಯಂ ಚಾಪಿ ತದ್ರಾಜನ್ ಸರ್ವಸೈನ್ಯಾನ್ಯಪೂಜಯನ್ ।
ಯದ್ಗದಾಭಿಹತೋ ಭೀಮೋ ನಾಕಂಪತ ಪದಾತ್ ಪದಮ್ ॥೪೪॥

ಗದೆಯ ಪ್ರಹಾರಕ್ಕೊಳಗಾದರೂ ಭೀಮನು ಒಂದು ಹೆಜ್ಜೆಯಷ್ಟೂ ಕೂಡ ಅಲುಗಾಡದೆ ಇದ್ದುದು ಬಹಳ ಆಶ್ಚರ್ಯಕರವಾಗಿತ್ತು. ರಾಜನೇ! ಎಲ್ಲಾ ಸೈನ್ಯಗಳೂ ಅದನ್ನು ಕೊಂಡಾಡಿದವು.

ತತೋ ಗುರುತರಾಂ ದೀಪ್ತಾಂ ಗದಾಂ ಹೇಮಪರಿಷ್ಕೃತಾಮ್ ।
ದುರ್ಯೋಧನಾಯ ವ್ಯಸೃಜತ್ ತದದ್ಭುತಮಿವಾಭವತ್ ॥೪೫॥

ಅನಂತರ ಭೀಮನು ಬಂಗಾರದ ಅಲಂಕಾರದಿಂದ ಶೋಭಿಸುತ್ತಿದ್ದ ಭಾರವಾದ ಗದೆಯನ್ನು ದುರ್ಯೋಧನನ ಮೇಲೆ ಪ್ರಯೋಗಿಸಿದನು. ಅದು ಅದ್ಭುತವಾಗಿತ್ತು.

ತಂ ಪ್ರಹಾರಮಸಂಭ್ರಾಂತೋ ಲಾಘವೇನ ಮಹಾಬಲಃ ।
ಮೋಘಂ ದುರ್ಯೋಧನಶ್ಚಕ್ರೇ ತತ್ರಾಭೂದ್ ವಿಸ್ಮಯೋ ಮಹಾನ್ ॥

ಮಹಾಬಲಶಾಲಿಯಾದ ದುರ್ಯೋಧನನು ಸ್ವಲ್ಪವೂ ಹೆದರದೆ ಆ ಗದಾಪ್ರಹಾರವನ್ನು ನಿರರ್ಥಕವನ್ನಾಗಿ ಮಾಡಿದನು. ಆಗ ಅಲ್ಲಿ ಬಹಳ ಆಶ್ಚರ್ಯವು ಉಂಟಾಯಿತು.

ಸಾ ತು ಮೋಘಾ ಗದಾ ರಾಜನ್ ಪತಂತೀ ಭೀಮಚೋದಿತಾ ।
ಚಾಲಯಾಮಾಸ ಪೃಥಿವೀಂ ಮಹಾನಿರ್ಘಾತನಿಃಸ್ವನಾ ॥೪೭॥

ರಾಜನೇ! ವ್ಯರ್ಥವಾಗಿ ನೆಲಕ್ಕೆ ಬಿದ್ದ ಭೀಮನ ಗದೆಯು ದೊಡ್ಡ ಗುಡುಗಿನ ಶಬ್ದವನ್ನುಂಟುಮಾಡುತ್ತಾ ಭೂಮಿಯನ್ನು ಅಲುಗಾಡಿಸಿತು.

ಆಸ್ಥಾಯ ಕೈಶಿಕಾನ್ ಮಾರ್ಗಾನ್ ಉತ್ಪಪಾತ ಪುನಃ ಪುನಃ ।
ಗದಾನಿಪಾತಂ ವಿಜ್ಞಾಯ ಭೀಮಸೇನಮವಂಚಯತ್ ॥೪೮॥

ಗದೆಯು ಕೆಳಗೆ ಬಿದ್ದಿದ್ದನ್ನು ತಿಳಿದುಕೊಂಡ ದುರ್ಯೋಧನನು ಕೈಶಿಕಮಾರ್ಗದಿಂದ ಪುನಃ ಪುನಃ ಗದೆಯನ್ನು ಪ್ರಯೋಗಿಸುತ್ತಾ ಭೀಮಸೇನನನ್ನು ವಂಚನೆಗೊಳಪಡಿಸಿದನು.

ವಂಚಯಿತ್ವಾ ತತೋ ಭೀಮಂ ಗದಯಾ ಕುರುಸತ್ತಮಃ ।
ಅತಾಡಯದಸಂಭ್ರಾಂತೋ ವಕ್ಷೋದೇಶೇ ಮಹಾಬಲಃ ॥೪೯॥

ಕುರುಶ್ರೇಷ್ಠನಾದ ಬಲಶಾಲಿ ದುರ್ಯೋಧನನು ಉದ್ವೇಗಕ್ಕೊಳಗಾಗದೆ ಭೀಮನನ್ನು ಮೋಸಗೊಳಿಸಿ ಗದೆಯಿಂದ ಅವನ ಎದೆಗೆ ಹೊಡೆದನು.

ಗದಯಾಽಭಿಹತೋ ಭೀಮೋ ಮುಹ್ಯಮಾನೋ ಮಹಾರಣೇ ।
ನಾಭಿಜಾನಾತಿ ಕರ್ತವ್ಯಂ ಪುತ್ರೇಣಾಭ್ಯಹತಸ್ತವ ॥೫೦॥

ಆ ಮಹಾಯುದ್ಧದಲ್ಲಿ ಗದೆಯಿಂದ ನಿನ್ನ ಮಗ ದುರ್ಯೋಧನನಿಂದ ಚೆನ್ನಾಗಿ ಹೊಡೆತಕ್ಕೊಳಗಾದ ಭೀಮನು ಮೂರ್ಛೆಹೋಗುತ್ತಾ ಏನು ಮಾಡಬೇಕೆಂಬುದನ್ನೇ ತಿಳಿಯದಾದನು.

ತಸ್ಮಿಂಸ್ತಥಾ ಗತೇ ಭೀಮೇ ರಾಜನ್ ಸೋಮಕಪಾಂಡವಾಃ ।
ಭೃಶೋಪಹತಸಂಕಲ್ಪಾ ನಾತಿಪ್ರಮನಸೋಽಭವನ್ ॥೫೧॥

ರಾಜನೇ! ಭೀಮನು ಈ ಅವಸ್ಥೆಯನ್ನು ಹೊಂದಿದಾಗ ಸೋಮಕರು ಮತ್ತು ಪಾಂಡವರು ತಮ್ಮ ಸಂಕಲ್ಪವು ಭಗ್ನವಾದುದನ್ನು ಕಂಡು ಮನಸ್ಸಿನಲ್ಲಿಯೇ ಬಹಳ ಅಸಮಾಧಾನವನ್ನು ಹೊಂದಿದರು.

ಸ ತು ತೇನ ಪ್ರಹಾರೇಣ ಮಾತಂಗ ಇವ ರೋಷಿತಃ ।
ಹಸ್ತೀವ ಹಸ್ತಿಸಂಕಾಶಮಭಿದುದ್ರಾವ ತೇ ಸುತಮ್ ॥೫೨॥

ಭೀಮನಾದರೂ ಆ ಹೊಡೆತದಿಂದ ಆನೆಯು ಕೋಪಗೊಳ್ಳುವಂತೆ ಕೋಪಗೊಂಡು, ಆನೆಯು ಎದುರಾಳಿ ಆನೆಯ ಹತ್ತಿರ ಬರುವಂತೆ ನಿನ್ನ ಮಗನ ವಿರುದ್ಧವಾಗಿ ಓಡಿಬಂದನು.

ತತಃ ಸರಭಸೋ ಭೀಮೋ ಗದಯಾ ತನಯಂ ತವ ।
ಅಭಿದುದ್ರಾವ ವೇಗೇನ ಸಿಂಹೋ ವನಗಜಂ ಯಥಾ ॥೫೩॥

ಅನಂತರ ಭೀಮನು ಸಿಂಹವು ಕಾಡಿನ ಆನೆಯನ್ನು ಆಕ್ರಮಿಸುವಂತೆ ವೇಗವುಳ್ಳ ತನ್ನ ಗದೆಯಿಂದ ನಿನ್ನ ಮಗನನ್ನು ರಭಸದಿಂದ ಎದುರಿಸಿದನು.

ಉಪಸೃತ್ಯ ತು ರಾಜಾನಂ ಗದಾಮೋಕ್ಷವಿಶಾರದಃ ।
ಆವಿಧ್ಯತ ಗದಾಂ ಘೋರಾಂ ಸಮುದ್ದಿಶ್ಯ ಸುತಂ ತವ ॥೫೪॥

ದುರ್ಯೋಧನನನ್ನು ಸಮೀಪಿಸಿದ ಗದಾಪ್ರಯೋಗದಲ್ಲಿ ನಿಷ್ಣಾತನಾದ ಭೀಮನು ನಿನ್ನ ಮಗನ ಮೇಲೆ ಘೋರವಾದ ಗದೆಯನ್ನು ಬೀಸಿ ಒಗೆದನು.

ಅತಾಡಯದ್ ಭೀಮಸೇನಃ ಪಾರ್ಶ್ವೇ ದುರ್ಯೋಧನಂ ತದಾ ।
ಸ ವಿಹ್ವಲಃ ಪ್ರಹಾರೇಣ ಜಾನುಭ್ಯಾಮವನಿಂ ಗತಃ ॥೫೫॥

ಭೀಮಸೇನನು ದುರ್ಯೋಧನನ ಶರೀರದ ಬದಿಯ ಭಾಗಕ್ಕೆ ಹೊಡೆದನು. ನೋವಿನಿಂದ ದುಃಖಿತನಾದ ದುರ್ಯೋಧನನು ಮಂಡಿಯೂರಿ ನೆಲದ ಮೇಲೆ ಕುಸಿದನು.

ತಸ್ಮಿಂಸ್ತು ಭರತಶ್ರೇಷ್ಠೇ ಜಾನುಭ್ಯಾಮವನೀಂ ಗತೇ ।
ಉದತಿಷ್ಠನ್ಮಹಾನಾದಃ ಸೃಂಜಯಾನಾಂ ಜಗತ್ಪತೇ ॥೫೬॥

ಜಗತ್ಪತಿಯೇ! ಭರತೋತ್ತಮನಾದ ದುರ್ಯೋಧನನು ನೆಲಕ್ಕೆ ಬಿದ್ದಾಗ ಸೃಂಜಯರು ದೊಡ್ಡದಾದ ಸಂತೋಷದ ಧ್ವನಿಯನ್ನು ಮಾಡಿದರು.

ತೇಷಾಂ ತು ನಿನದಂ ಶ್ರುತ್ವಾ ಸೃಂಜಯಾನಾಂ ಜನಾಧಿಪಃ ।
ಅಮರ್ಷಾದ್ ಭರತಶ್ರೇಷ್ಠಃ ಪುತ್ರಸ್ತೇ ಸಮಕುಪ್ಯತ ॥೫೭॥

ಸೃಂಜಯರ ಧ್ವನಿಯನ್ನು ಕೇಳಿದ ನಿನ್ನ ಮಗ, ಭರತಶ್ರೇಷ್ಠ ದುರ್ಯೋಧನನು ಅಸಹನೆಯಿಂದ ಬಹಳವಾಗಿ ಕೋಪಗೊಂಡನು.

ಉತ್ಥಾಯ ತು ಮಹಾಬಾಹುಃ ಕ್ರುದ್ಧೋ ನಾಗ ಇವ ಶ್ವಸನ್ ।
ದಿಧಕ್ಷನ್ನಿವ ನೇತ್ರಾಭ್ಯಾಂ ಭೀಮಸೇನಮವೈಕ್ಷತ ॥೫೮॥

ಎದ್ದು ನಿಂತ ದುರ್ಯೋಧನನು ಕೋಪಗೊಂಡ ಹಾವಿನಂತೆ ಭುಸುಗುಡುತ್ತಾ ಕಣ್ಣುಗಳಿಂದ ಸುಡುತ್ತಿರುವ ಹಾಗೆ ಭೀಮನನ್ನು ದಿಟ್ಟಿಸಿ ನೋಡಿದನು.

ತತಃ ಸ ಭರತಶ್ರೇಷ್ಠೋ ಭೀಮಸೇನಮಭಿದ್ರವತ್ ।
ಪ್ರಮಥಿಷ್ಯನ್ನಿವ ಶಿರೋ ಭೀಮಸೇನಸ್ಯ ಸಂಯುಗೇ ॥೫೯॥

ಅನಂತರ ಭರತಶ್ರೇಷ್ಠನಾದ ದುರ್ಯೋಧನನು ಯುದ್ಧದಲ್ಲಿ ಭೀಮನ ತಲೆಯನ್ನು ಪುಡಿಮಾಡುವ ರೀತಿಯಲ್ಲಿ ಭೀಮನ ಮೇಲೆ ಆಕ್ರಮಣವನ್ನು ಮಾಡಿದನು.

ಸ ಮಹಾತ್ಮಾ ಮಹಾತ್ಮಾನಂ ಭೀಮಸೇನಮರಿಂದಮಮ್ ।
ಅತಾಡಯತ್ ಶಂಖದೇಶೇ ಚಚಾಲಾಚಲೋಪಮಃ ॥೬೦॥

ಮಹಾತ್ಮನಾದ ದುರ್ಯೋಧನನು ಮಹಾತ್ಮನಾದ, ಶತ್ರುಸಂಹಾರಕನಾದ ಭೀಮನ ಶಂಖಸದೃಶವಾದ ಕುತ್ತಿಗೆಗೆ ಹೊಡೆದನು. ಯುದ್ಧದಲ್ಲಿ ಪರ್ವತದ ರೀತಿಯಲ್ಲಿ ಸಂಚರಿಸಿದನು.

ಭೂಯಃ ಸ ಶುಶುಭೇ ಪಾರ್ಥಸ್ತಾಡಿತೋ ಗದಯಾ ಭೃಶಮ್ ।
ಉದ್ಧಿನ್ನರುಧಿರೋ ರಾಜನ್ ಪ್ರಭಿನ್ನ ಇವ ಕುಂಜರಃ ॥೬೧॥

ರಾಜನೇ! ದುರ್ಯೋಧನನ ಗದೆಯಿಂದ ಪೆಟ್ಟುತಿಂದ ಭೀಮನು ಮೈಯಿಂದ ರಕ್ತವನ್ನು ಹೊರಸೂಸುತ್ತಾ ಪೆಟ್ಟುತಿಂದ ಆನೆಯಂತೆ ಪುನಃ ಶೋಭಿಸಿದನು.

ತತೋ ಗದಾಂ ವೀರಹಣೇಮಯಸ್ಮಯೀಂ
ಪ್ರಗೃಹ್ಯ ವಜ್ರಾಶನಿತುಲ್ಯನಿಃಸ್ವನಾಮ್ ।
ಅತಾಡಯಚ್ಛತ್ರುಮಮಿತ್ರಕರ್ಶನೋ
ಬಲೇನ ವಿಕ್ರಮ್ಯ ಧನಂಜಯಾಗ್ರಜಃ ॥೬೨॥

ಅನಂತರ ಅರ್ಜುನನ ಅಣ್ಣನಾದ ಶತ್ರುಸಂಹಾರಕ ಭೀಮನು ವೀರರನ್ನು ಸದೆಬಡಿಯುವ, ವಜ್ರಾಯುಧ ಮತ್ತು ಗುಡುಗಿನಂತೆ ಶಬ್ದಮಾಡುವ ಲೋಹದ ಗದೆಯನ್ನು ಹಿಡಿದುಕೊಂಡು, ಬಲದಿಂದ ಪರಾಕ್ರಮವನ್ನು ತೋರಿಸುತ್ತಾ ಶತ್ರುವಾದ ದುರ್ಯೋಧನನನ್ನು ಹೊಡೆದನು.

ಸ ಭೀಮಸೇನಾಭಿಹತಸ್ತವಾತ್ಮಜಃ
ಪಪಾತ ಸಂಕಂಪಿತದೇಹಬಂಧನಃ ।
ಸುಪುಷ್ಪಿತೋ ಮಾರುತವೇಗತಾಡಿತೋ
ವನೇ ಮಹಾಸಾಲ ಇವಾವಚೂರ್ಣಿತಃ ॥೬೩॥

ಆಗ ಕಾಡಿನಲ್ಲಿ ಗಾಳಿಯ ವೇಗಕ್ಕೆ ಸಿಲುಕಿದ ಹೂಬಿಟ್ಟ ಮಹಾಸಾಲವೃಕ್ಷವು ಕೆಳಗೆ ಬೀಳುವಂತೆ ಭೀಮನಿಂದ ಪೆಟ್ಟುತಿಂದ ನಿನ್ನ ಮಗನು ಶರೀರದ ಸಂಧಿಗಳಲ್ಲಿ ನಡುಕವುಳ್ಳವನಾಗಿ ಕೆಳಗೆ ಬಿದ್ದನು.

ತತಃ ಪ್ರಣೇದುರ್ಜಹೃಷುಶ್ಚ ಪಾಂಡವಾಃ
ಸಮೀಕ್ಷ್ಯ ಪುತ್ರಂ ಪತಿತಂ ಕ್ಷಿತೌ ತವ ।
ತತಃ ಸುತಸ್ತೇ ಪ್ರತಿಲಭ್ಯ ಚೇತನಾಂ
ಸಮುತ್ಪಪಾತ ದ್ವಿರದೋ ಹ್ರದಾವಿವ ॥೬೪॥

ನಿನ್ನ ಮಗನು ನೆಲದಲ್ಲಿ ಬಿದ್ದಿದ್ದನ್ನು ನೋಡಿದ ಪಾಂಡವರು ಜೋರಾಗಿ ಕೇಕೆ ಹಾಕಿದರು ಮತ್ತು ಸಂತೋಷಪಟ್ಟರು. ಆನಂತರ ನಿನ್ನ ಮಗನು ಎಚ್ಚರಗೊಂಡು ಆನೆಯು ಸರೋವರದಿಂದ ಎದ್ದು ಬರುವಂತೆ ಮೇಲಕ್ಕೆ ನೆಗೆದನು.

ಸ ಪಾರ್ಥಿವೋ ನಿತ್ಯಮಮರ್ಷಿತಸ್ತದಾ
ಮಹಾರಥಃ ಶಿಕ್ಷಿತವತ್ ಪರಿಭ್ರಮನ್ ।
ಅತಾಡಯತ್ ಪಾಂಡವಮಗ್ರತಃ ಸ್ಥಿತಂ
ಸ ವಿಹ್ವಲಾಂಗೋ ಜಗತೀಮುಪಾಸ್ಪೃಶತ್ ॥೬೫॥

ಮಹಾರಥನಾದ ದುರ್ಯೋಧನನು ಸದಾ ಅಸಹನೆಯುಳ್ಳವನಾಗಿ, ಚೆನ್ನಾಗಿ ಅಭ್ಯಾಸಮಾಡಿದವರಂತೆ ಯುದ್ಧದಲ್ಲಿ ಸುತ್ತುತ್ತ ಎದುರಿಗೆ ನಿಂತಿದ್ದ ಭೀಮನಿಗೆ ಹೊಡೆದನು. ಭೀಮನು ಅಂಗಗಳಲ್ಲಿ ನೋವನ್ನು ಅನುಭವಿಸುತ್ತಾ ಭೂಮಿಗೆ ಬಿದ್ದನು.

ಸ ಸಿಂಹನಾದಾನ್ ವಿನನಾದ ಪಾರ್ಥಿವೋ
ನಿಪಾತ್ಯ ಭೂಮೌ ಯುಧಿ ಭೀಮಮೋಜಸಾ ।
ಬಿಭೇದ ಚೇಂದ್ರಾಶನಿತುಲ್ಯತೇಜಸಾ
ಗದಾನಿಪಾತೇನ ಶರೀರರಕ್ಷಣಮ್ ॥೬೬॥

ರಾಜ ದುರ್ಯೋಧನನು ಯುದ್ಧದಲ್ಲಿ ಭೀಮನನ್ನು ನೆಲಕ್ಕೆ ಬೀಳಿಸಿ, ಸಿಂಹನಾದವನ್ನು ಮಾಡಿದನು ಮತ್ತು ಇಂದ್ರನ ವಜ್ರಾಯುಧಸದೃಶತೇಜಸ್ಸುಳ್ಳ ಗದೆಯಿಂದ ಹೊಡೆದು ಭೀಮನ ಶರೀರದ ರಕ್ಷಾಕವಚವನ್ನು ಪುಡಿ ಮಾಡಿದನು.

ತತೋऽಂತರಿಕ್ಷೇ ನಿನದೋ ಮಹಾನಭೂದ್
ದಿವೌಕಸಾಮಪ್ಸರಸಾಂ ನಿಷೇದುಷಾಮ್ ।
ಪಪಾತ ಚೋಚ್ಚೈರಮರಪ್ರಚೋದಿತಂ
ವಿಚಿತ್ರಪುಷ್ಪೋತ್ಕರವರ್ಷಮುತ್ತಮಮ್ ॥೬೭॥

ಆಗ ಆಕಾಶದಲ್ಲಿ ನೋಡುತ್ತಿದ್ದ ದೇವತೆಗಳು, ಅಪ್ಸರಸ್ತ್ರೀಯರು ಜೋರಾಗಿ ಶಬ್ದವನ್ನು ಮಾಡಿದರು. ದೇವತೆಗಳು ವಿಚಿತ್ರವಾದ ಹೂವಿನ ಮಳೆಯನ್ನು ಮೇಲಿಂದ ಸುರಿಸಿದರು.

ತತಃ ಪರಾನಾವಿಶದುತ್ತಮಂ ಭಯಂ
ಸಮೀಕ್ಷ್ಯ ಭೀಮಂ ಪತಿತಂ ನರರ್ಷಭಮ್ ।
ಅಹೀಯಮಾನಂ ಚ ಬಲೇನ ಕೌರವಂ
ನಿಶಾಮ್ಯ ಭೇದಂ ಚ ದೃಢಸ್ಯ ವರ್ಮಣಃ ॥೬೮॥

ಸ್ವಲ್ಪವೂ ಶಕ್ತಿಯನ್ನು ಕಳೆದುಕೊಳ್ಳದ ಕೌರವನನ್ನು ಮತ್ತು ಭೀಮನ ದೃಢವಾದ ಕವಚವು ತುಂಡಾಗಿದ್ದನ್ನು ಮನುಷ್ಯೋತ್ತಮನಾದ ಭೀಮನು ಭೂಮಿಗೆ ಬಿದ್ದದ್ದನ್ನು ಗಮನಿಸಿ ಬಹಳವಾಗಿ ಭಯವನ್ನು ಹೊಂದಿದರು.

ತತೋ ಮುಹೂರ್ತಾತ್ ಪ್ರತಿಲಭ್ಯ ಚೇತನಾಂ
ಪ್ರಮೃಜ್ಯ ವಕ್ತ್ರಂ ರುಧಿರಾರ್ದ್ರಮಾತ್ಮನಃ ।
ಧೃತಿಂ ಸಮಾಲಂಬ್ಯ ವಿವೃತ್ತಲೋಚನೋ
ಬಲೇನ ಸಂಸ್ತಭ್ಯ ವೃಕೋದರಃ ಸ್ಥಿತಃ ॥೬೯॥

ಅನಂತರ ಕ್ಷಣಮಾತ್ರದಲ್ಲಿ ಎಚ್ಚರಗೊಂಡ ಭೀಮನು ರಕ್ತಸಿಕ್ತವಾದ ತನ್ನ ಮುಖವನ್ನು ಒರೆಸಿಕೊಂಡು, ಧೈರ್ಯವನ್ನು ಹೊಂದಿ, ಕಣ್ಣುಗಳನ್ನು ತಿರುಗಿಸುತ್ತಾ ಬಲದಿಂದ ದೃಢವಾಗಿ ನಿಂತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ಭೀಮಸೇನನಿಪಾತೋ ನಾಮ ಸಪ್ತವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಭೀಮಸೇನನು ದುರ್ಯೋಧನನ ತೊಡೆಯನ್ನು ಮುರಿದನು.

ಸಂಜಯಃ

ಸಮುದೀರ್ಣಂ ತತೋ ದೃಷ್ಟ್ವಾ ಸಂಗ್ರಾಮಂ ಕುರುಮುಖ್ಯಯೋಃ ।
ಅಬ್ರವೀದರ್ಜುನಸ್ತತ್ರ ವಾಸುದೇವಂ ಯಶಸ್ವಿನಮ್ ॥೧॥

ಸಂಜಯ– ಕುರುವಂಶದ ಮುಖ್ಯಸ್ಥರಾದ ಭೀಮ ಮತ್ತು ದುರ್ಯೋಧನರ ನಡುವೆ ಕಾದಾಟವು ಹೆಚ್ಚಾದುದನ್ನು ನೋಡಿ ಅರ್ಜುನನು ಕೀರ್ತಿವಂತನಾದ ಶ್ರೀಕೃಷ್ಣನಿಗೆ ಹೇಳಿದನು.

ಅನಯೋರ್ವೀರಯೋರ್ಯುದ್ಧೇ ಕೋ ಜ್ಯಾಯಾನ್ ಭವತೋ ಮತಃ ।
ಕಸ್ಯ ಕೋ ವಾ ಗುಣೋ ಜ್ಯಾಯಾನ್ ಏತದ್ ವದ ಜನಾರ್ದನ ॥೨॥

'ಇವರಿಬ್ಬರ ಯುದ್ಧದಲ್ಲಿ ಯಾರನ್ನು ಶ್ರೇಷ್ಠರು ಎಂಬುದಾಗಿ ನೀನು ಅಭಿಪ್ರಾಯಪಡುತ್ತಿ? ಯಾರ ಯಾವ ಗುಣವು ಉತ್ಕೃಷ್ಟವಾಗಿದೆ? ಜನಾರ್ದನನೇ! ಇದನ್ನು ಹೇಳು'.

ವಾಸುದೇವಃ

ಉಪದೇಶೋऽನಯೋಸ್ತುಲ್ಯೋ ಭೀಮಸ್ತು ಬಲವಾಂಸ್ತತಃ ।
ಕೃತೀ ಯತ್ನಪರಸ್ತ್ವೇಷ ಧಾರ್ತರಾಷ್ಟ್ರೋ ವೃಕೋದರಾತ್ ॥೩॥

ವಾಸುದೇವ– ವಿದ್ಯೆಯ ಪಾಠದ ಉಪದೇಶವು ಇಬ್ಬರಿಗೂ ಸಮಾನವಾಗಿಯೆ ಆಗಿದೆ. ಭೀಮನಾದರೂ ಬಲದಲ್ಲಿ ಶ್ರೇಷ್ಠನಾಗಿದ್ದಾನೆ. ಆದರೆ ಈ ಅಭ್ಯಾಸನಿರತನಾದ ದುರ್ಯೋಧನನು ಪ್ರಯತ್ನ ವಿಷಯದಲ್ಲಿ ಭೀಮನಿಗಿಂತ ಜ್ಯೇಷ್ಠನಾಗಿದ್ದಾನೆ.

ಭೀಮಸೇನಸ್ತು ಧರ್ಮೇಣ ಯುಧ್ಯಮಾನೋ ನ ಜೇಷ್ಯತಿ ।
ಅನ್ಯಾಯೇನ ತು ಯುಧ್ಯನ್ ವೈ ಹನ್ಯಾದೇಷ ಸುಯೋಧನಮ್ ॥೪॥

ಭೀಮಸೇನನಾದರೂ ಧರ್ಮಕ್ಕೆ ಅನುಸಾರವಾಗಿ ಯುದ್ಧಮಾಡಿದರೆ ಯುದ್ಧದಲ್ಲಿ ಗೆಲ್ಲುವುದಿಲ್ಲ; ಅನ್ಯಾಯದಿಂದ ಯುದ್ಧ ಮಾಡಿದರೆ ದುರ್ಯೋಧನನನ್ನು ಈ ಭೀಮನು ಕೊಲ್ಲುವನು.

ಮಾಯಯಾ ವಿಜಿತಾ ದೇವೈರಸುರಾ ಇತಿ ನಃ ಶ್ರುತಮ್ ।
ವೈರೋಚನಿಸ್ತು ಶಕ್ರೇಣ ಮಾಯಯಾ ವಿಜಿತಸ್ತು ವೈ ॥೫॥

ಮಾಯೆಯಿಂದಲೇ ದೇವತೆಗಳು ಅಸುರರನ್ನು ಗೆದ್ದರು ಎಂಬುದಾಗಿ ಪುರಾಣಗಳಲ್ಲಿ ಹೇಳಿದ್ದನ್ನು ನಾವು ಕೇಳಿದ್ದೇವೆ. ಇಂದ್ರನು ಬಲಿಯನ್ನು ಗೆದ್ದಿದ್ದು ಮಾಯೆಯಿಂದಲೇ.

ಮಾಯಯಾ ಚಾಕ್ಷಿಪತ್ ತೇಜೋ ವೃತ್ರಸ್ಯ ಬಲಸೂದನಃ ।
ತಸ್ಮಾನ್ಮಾಯಾಮಯಂ ವೀರ ಆತಿಷ್ಠತು ವೃಕೋದರಃ ॥೬॥

ಬಲಸಂಹಾರಕನಾದ ಇಂದ್ರನು ವೃತ್ರಾಸುರನ ಸಾಮರ್ಥ್ಯವನ್ನು ನಾಶಮಾಡಿದ್ದು ಮಾಯೆಯಿಂದಲೇ. ಆದ್ದರಿಂದ ವೀರನಾದ ವೃಕೋದರನು ಮಾಯಾಯುಕ್ತವಾದ ಯುದ್ಧದಲ್ಲಿ ತೊಡಗಲಿ.

ಪ್ರತಿಜ್ಞಾತಂ ಹಿ ಭೀಮೇನ ದ್ಯೂತಕಾಲೇ ಧನಂಜಯ ।
ಊರೂ ಭೇತ್ಸ್ಯಾಮಿ ತೇ ಯುದ್ಧೇ ಗದಯೇತಿ ಸುಯೋಧನಮ್ ॥೭॥

ಅರ್ಜುನನೇ! ದ್ಯೂತಸಮಯದಲ್ಲಿ ಭೀಮನು ಸುಯೋಧನನನ್ನು ಕುರಿತು ಹೀಗೆ ಪ್ರತಿಜ್ಞೆ ಮಾಡಿದ್ದನು - 'ಯುದ್ಧದಲ್ಲಿ ಗದೆಯಿಂದ ನಿನ್ನ ತೊಡೆಯನ್ನು ಮುರಿಯುವೆನು'. ಎಂದು.

ಸೋಽಯಂ ಪ್ರತಿಜ್ಞಾಂ ತಾಂ ಚಾಪಿ ಪಾರಯಿತ್ವಾಽರಿಕರ್ಶನಃ ।
ಮಾಯಾವಿನಂ ಚ ರಾಜಾನಂ ಮಾಯಯೈವ ನಿಕೃಂತತು ॥೮॥

ಶತ್ರುಸಂಹಾರಕನಾದ ಭೀಮನು ತನ್ನ ಪ್ರತಿಜ್ಞೆಯನ್ನು ತೀರಿಸಿಕೊಳ್ಳಲಿ. ಮೋಸಗಾರನಾದ ದುರ್ಯೋಧನನನ್ನು ಮೋಸದಿಂದಲೇ ಕೊಲ್ಲಲಿ.

ಯದ್ಯೇಷ ಬಲಮಾಸ್ಥಾಯ ನ್ಯಾಯೇನ ಪ್ರಹರಿಷ್ಯತಿ ।
ವಿಷಮಸ್ಥಸ್ತತೋ ರಾಜಾ ಭವಿಷ್ಯತಿ ಯುಧಿಷ್ಠಿರಃ ॥೯॥

ಒಂದು ವೇಳೆ ಭೀಮನು ಬಲವನ್ನೇ ನಂಬಿ, ನ್ಯಾಯಮಾರ್ಗದಲ್ಲಿಯೇ ಯುದ್ಧಮಾಡಿದರೆ ರಾಜ ಯುಧಿಷ್ಠಿರನು ದುಃಖಿತನಾಗುವನು.

ಪುನರುಕ್ತಂ ಚ ವಕ್ಷ್ಯಾಮಿ ಪಾಂಡವೈತನ್ನಿಬೋಧ ಮೇ ।
ಧರ್ಮರಾಜಾಪರಾಧೇನ ಭಯಂ ನಃ ಸಮುಪಸ್ಥಿತಮ್ ॥೧೦॥

ಅರ್ಜುನನೇ! ನಾನು ಮತ್ತೆ ಹೇಳುತ್ತೇನೆ! ಅದನ್ನು ತಿಳಿದುಕೊಳ್ಳು. ಹಿಂದೆ ಧರ್ಮರಾಜನ ತಪ್ಪಿನಿಂದ ನಮಗೆಲ್ಲ ಭಯವು ಉಂಟಾಯಿತು.

ಕೃತ್ವಾ ಹಿ ಸುಮಹತ್ ಕರ್ಮ ಹತ್ವಾ ಭೀಷ್ಮಮುಖಾನ್ ರಿಪೂನ್ ।
ಜಯಃ ಪ್ರಾಪ್ತೋ ಯಶಶ್ಚಾಗ್ರ್ಯಂ ವೈರಂ ಚ ಪ್ರತಿಯಾತಿತಮ್ ॥೧೧॥

ಇಲ್ಲಿಯ ತನಕ ಅನೇಕ ದೊಡ್ಡದಾದ ಕೆಲಸಗಳನ್ನು ಮಾಡಿ, ಭೀಷ್ಮಮೊದಲಾದ ಶತ್ರುಪಕ್ಷೀಯರನ್ನು ಸಾಯಿಸಿ ಉತ್ತಮವಾದ ಜಯ ಮತ್ತು ಕೀರ್ತಿಯು ನಮಗೆ ಪ್ರಾಪ್ತವಾಯಿತು. ದ್ವೇಷವೂ ಕೂಡ ನಾಶಮಾಡಲ್ಪಟ್ಟಿದೆ.

ತದೇವಂ ವಿಜಯಃ ಪ್ರಾಪ್ತಃ ಪುನಃಸಂಶಯಿತಃ ಕೃತಃ ॥೧೨॥

ಈ ರೀತಿಯಲ್ಲಿ ಪಡೆದ ಜಯವು ಈಗ ಮತ್ತೆ ಸಂಶಯಕ್ಕೆ ಎಡೆಮಾಡುತ್ತಿದೆ.

ಅಬುದ್ಧಿರೇಷಾ ಮಹತೀ ಧರ್ಮರಾಜಸ್ಯ ಪಾಂಡವ ।
ಯದೇಕವಿಜಯೇ ವೀರ ಪಣಿತಂ ಕೃತಮೀದೃಶಮ್ ॥೧೩॥

ಅರ್ಜುನನೇ! 'ಒಬ್ಬನನ್ನು ಗೆದ್ದರೂ ದುರ್ಯೋಧನನು ವೀರ' ಎಂಬುದಾಗಿ ಇಂತಹ ಪಣವನ್ನು ಇಟ್ಟಿದ್ದು ಧರ್ಮರಾಜನ ಅಲ್ಪಬುದ್ಧಿಯನ್ನು ತೋರಿಸುತ್ತದೆ.

ಸುಯೋಧನಃ ಕೃತೀ ವೀರ ಏಕಾಯನಗತಸ್ತಥಾ ।
ಅಪಿ ಚೋಶನಸಾ ಗೀತಃ ಶ್ರೂಯತೇ ಯಃ ಪುರಾತನಃ ॥೧೪॥

ಶ್ಲೋಕಸ್ತತ್ತ್ವಾರ್ಥಸಹಿತಃ ತನ್ಮೇ ನಿಗದತಃ ಶೃಣು ॥೧೫॥

ಸುಯೋಧನನು ಪ್ರಯತ್ನಶೀಲನಾದ ವೀರ. ಒಂದು ನಿಶ್ಚಯಕ್ಕೆ ಸದಾ ದೃಢವಾಗಿ ಬದ್ಧನಾಗಿರುತ್ತಾನೆ. ಶುಕ್ರಾಚಾರ್ಯನು ಹಿಂದೆ ಹೇಳಿದ್ದು ಪುರಾಣಗಳಲ್ಲಿ ಶ್ರುತವಾಗಿದೆ. ಆ ನೀತಿತತ್ತ್ವವನ್ನು ಹೇಳುವ ಶ್ಲೋಕವನ್ನು ನಾನು ನಿನಗೆ ಹೇಳುತ್ತೇನೆ, ಕೇಳು.

ಪುನರಾವರ್ತಮಾನಾನಾಂ ಭಗ್ನಾನಾಂ ವಿಜಯೈಷಿಣಾಮ್ ।
ಭೇತವ್ಯಮರಿಶೇಷಾಣಾಮೇಕಾಯನಗತಾ ಹಿ ತೇ ॥೧೬॥

'ಅಳಿದುಳಿದ ಶತ್ರುಪಕ್ಷೀಯರು ಬದುಕುವ ಆಸೆಯನ್ನಿಟ್ಟುಕೊಂಡು ರಣರಂಗದಿಂದ ಓಡಿ ಹೋದವರು ಮತ್ತೆ ಯುದ್ಧಕ್ಕೆ ಬಂದರೆ ಅವರ ಬಗ್ಗೆ ತುಂಬಾ ಹೆದರಬೇಕು. ಏಕೆಂದರೆ ಅವರು ಗೆಲ್ಲುವ ದೃಢನಿಶ್ಚಯವನ್ನು ಮಾಡಿಯೇ ಬಂದಿರುತ್ತಾರೆ'.

ಸುಯೋಧನಮಿಮಂ ಭಗ್ನಂ ಹತಸೈನ್ಯಂ ಹ್ರದಂ ಗತಮ್ ।
ಪರಾಜಿತಂ ವನಪ್ರೇಪ್ಸುಂ ನಿರಾಶಂ ರಾಜ್ಯಧಾರಣೇ ॥೧೭॥

ಕೋऽನ್ವಿಷ್ಯ ಸಂಯುಗೇ ಪ್ರಾಜ್ಞಃ ಪುನರ್ದ್ವಂದ್ವೇ ಸಮಾಹ್ವಯೇತ್ ॥೧೮॥

ಯುದ್ಧದಲ್ಲಿ ಪೆಟ್ಟುತಿಂದ ಈ ದುರ್ಯೋಧನನು ತನ್ನ ಸೈನ್ಯವನ್ನೆಲ್ಲ ಕಳೆದುಕೊಂಡು ಪರಾಜಿತನಾಗಿ ರಾಜ್ಯಪ್ರಾಪ್ತಿಯ ವಿಷಯದಲ್ಲಿ ನಿರಾಶೆಯನ್ನು ಹೊಂದಿ, ಕಾಡಿಗೆ ಹೋಗುವವನಾಗಿ ವಿಶ್ರಾಂತಿಗಾಗಿ ಸರೋವರವನ್ನು ಪ್ರವೇಶಿಸಿದ್ದ. ಅಂತಹ ದುರ್ಯೋಧನನನ್ನು ಯಾವ ಪ್ರಾಜ್ಞನು ತಾನೇ ಹುಡುಕಿ ದ್ವಂದ್ವಯುದ್ಧಕ್ಕೆ ಆಹ್ವಾನಿಸುತ್ತಾನೆ? (ಯುಧಿಷ್ಠಿರನು ಆಹ್ವಾನಿಸುವ ಮೂಲಕ ತಾನು ಮೂರ್ಖನಂತೆ ತೋರಿಸಿಕೊಂಡಿದ್ದಾನೆ ಎಂದು ಶ್ರೀಕೃಷ್ಣನ ಮಾತಿನ ಮೇಲ್ನೋಟದ ಅರ್ಥ.)

ಅಪಿ ವೋ ನಿರ್ಜಿತಂ ರಾಜ್ಯಂ ನ ಹರೇತ ಸುಯೋಧನಃ ॥೧೯॥

ನಮ್ಮನ್ನು ಸೋಲಿಸಿ ದುರ್ಯೋಧನನು ರಾಜ್ಯವನ್ನು ಮತ್ತೆ ಅಪಹರಿಸುವುದಿಲ್ಲವೇನು?

ಯಸ್ತ್ರಯೋದಶವರ್ಷಾಣಿ ಗದಯಾ ಕೃತನಿಶ್ರಮಃ ।
ಚರತ್ಯೂರ್ಧ್ವಂ ಚ ತಿರ್ಯಕ್ ಚ ಭೀಮಸೇನಜಿಘಾಂಸಯಾ ॥೨೦॥

ಯಾವನು ಹದಿಮೂರುವರ್ಷಗಳ ಕಾಲ ಗದಾಯುದ್ಧದಲ್ಲಿ ಪರಿಶ್ರಮವನ್ನು ಪಟ್ಟಿದ್ದನೋ ಅಂತಹ ದುರ್ಯೋಧನನು ಭೀಮಸೇನನನ್ನು ಕೊಲ್ಲುವುದಕ್ಕಾಗಿ ಮೇಲ್ಮುಖವಾಗಿಯೂ, ಅಡ್ಡವಾಗಿಯೂ ಸಂಚರಿಸುತ್ತಿದ್ದಾನೆ.

ಏನಂ ಚೇನ್ನ ಮಹಾಬಾಹುರನ್ಯಾಯೇನ ಹನಿಷ್ಯತಿ ।
ಏಷ ವಃ ಕೌರವೋ ರಾಜಾ ಧಾರ್ತರಾಷ್ಟ್ರೋ ಭವಿಷ್ಯತಿ ॥೨೧॥

ಮಹಾಬಾಹುವಾದ ಭೀಮನು ಇವನನ್ನು ಅನ್ಯಾಯಮಾರ್ಗದಿಂದ ಕೊಲ್ಲದಿದ್ದರೆ ಧೃತರಾಷ್ಟ್ರಪುತ್ರನಾದ ಈ ದುರ್ಯೋಧನನೇ ನಮಗೆ ರಾಜನಾಗುವನು.

ಸಂಜಯಃ

ಧನಂಜಯಸ್ತು ಶ್ರುತ್ವೈವಂ ಕೇಶವಸ್ಯ ಮಹಾತ್ಮನಃ ।
ಪ್ರೇಕ್ಷತೋ ಭೀಮಸೇನಸ್ಯ ಹಸ್ತೇನೋರುಮತಾಡಯತ್ ॥೨೨॥

ಸಂಜಯ– ಮಹಾತ್ಮನಾದ ಶ್ರೀಕೃಷ್ಣನ ಮಾತುಗಳನ್ನು ಕೇಳಿ ಅರ್ಜುನನು ಭೀಮಸೇನನು ನೋಡುತ್ತಿದ್ದ ಸಂದರ್ಭದಲ್ಲಿ ತನ್ನ ಕೈಯಿಂದ ತೊಡೆಯನ್ನು ತಟ್ಟಿದನು.

ಗೃಹ್ಯ ಸಂಜ್ಞಾಂ ತತೋ ಭೀಮೋ ಗದಯಾ ವ್ಯಚರದ್ ರಣೇ ।
ಮಂಡಲಾನಿ ವಿಚಿತ್ರಾಣಿ ಯಮಕಾನೀತರಾಣಿ ಚ ॥೨೩॥

ಅನಂತರ ಭೀಮನು ಅರ್ಜುನನು ಮಾಡಿದ ಸಂಜ್ಞೆಯನ್ನು ತಿಳಿದುಕೊಂಡು ಯುದ್ಧದಲ್ಲಿ ಗದೆಯಿಂದ ದ್ವಂದ್ವಕ್ರಮದ ಮತ್ತು ಪ್ರತ್ಯೇಕ ಕ್ರಮದ ವಿಚಿತ್ರವಾದ ಮಂಡಲಾಕಾರ ಪ್ರಯೋಗಗಳನ್ನು ಪ್ರಯೋಗಿಸಿದನು.

ದಕ್ಷಿಣಂ ಮಂಡಲಂ ಸವ್ಯಂ ಗೋಮೂತ್ರಿಕಮಥಾಪಿ ಚ ।
ವ್ಯಚರತ್ ಪಾಂಡವೋ ರಾಜನ್ನರಿಂ ಸಮ್ಮೋಹಯನ್ನಿವ ॥೨೪॥

ರಾಜನೇ! ಮಂಡಲಾಕಾರದ ಬಲಭಾಗದಲ್ಲಿ, ಮಂಡಲಾಕಾರದ ಎಡಭಾಗದಲ್ಲಿ, ಗೋಮೂತ್ರಿಕಾಕ್ರಮದಲ್ಲಿ ಸಂಚರಿಸುತ್ತಾ ಭೀಮನು ಶತ್ರುವನ್ನು ತಬ್ಬಿಬ್ಬುಗೊಳಿಸಿದನು.

ತಥೈವ ತವ ಪುತ್ರೋಽಪಿ ಗದಾಮಾರ್ಗವಿಶಾರದಃ ।
ವ್ಯಚರಲ್ಲಘು ಚಿತ್ರಂ ಚ ಭೀಮಸೇನಜಿಘಾಂಸಯಾ ॥೨೫॥

ಗದಾಪ್ರಯೋಗದಲ್ಲಿ ನಿಷ್ಣಾತನಾದ ನಿನ್ನ ಮಗನೂ ಕೂಡ ಭೀಮಸೇನನನ್ನು ಕೊಲ್ಲುವುದಕ್ಕಾಗಿ ಮಂದವಾಗಿ ಹಾಗೂ ವಿಚಿತ್ರವಾಗಿ ಸಂಚರಿಸಿದನು.

ಆಧುನ್ವಂತೌ ಗದೇ ಘೋರೇ ಚಂದನಾಗರುರೂಷಿತೇ ।
ವೈರಸ್ಯಾಂತಂ ಪರೀಪ್ಸಂತೌ ರಣೇ ಕ್ರುದ್ಧಾವಿವಾಂತಕೌ ॥೨೬॥

ಇಬ್ಬರೂ ಚಂದನ ಮತ್ತು ಅಗರುಗಳಿಂದ ಲೇಪಿತವಾದ ಭಯಂಕರವಾದ ಗದೆಗಳನ್ನು ಬೀಸುತ್ತಿದ್ದರು. ರಣರಂಗದಲ್ಲಿ ಹಗೆಯನ್ನು ಕೊನೆಗೊಳಿಸುವುದಕ್ಕಾಗಿ ಕೋಪಗೊಂಡ ಯಮರ ಹಾಗೆ ಯುದ್ಧ ಮಾಡಿದರು.

ಅನ್ಯೋನ್ಯಂ ತೌ ಜಿಘಾಂಸಂತೌ ಪ್ರವೀರೌ ಪುರುಷರ್ಷಭೌ ।
ಯುಯುಧಾತೇ ಗರುತ್ಮಂತೌ ಯಥಾ ನಾಗಾಮಿಷೈಷಿಣೌ ॥೨೭॥

ಮಹಾವೀರರಾದ ಪುರುಷಶ್ರೇಷ್ಠ ಭೀಮ ಮತ್ತು ದುರ್ಯೋಧನರು ಪರಸ್ಪರವಾಗಿ ಕೊಲ್ಲುವ ಇಚ್ಛೆಯಿಂದ ಹಾವಿನಮಾಂಸದ ಆಸೆಯಿಂದ ಹೋರಾಡುವ ಹದ್ದುಗಳಂತೆ ಹೋರಾಡಿದರು.

ಮಂಡಲಾನಿ ವಿಚಿತ್ರಾಣಿ ಚರತೋರ್ನರ್ದಭೀಮಯೋಃ ।
ಗದಾಸಂಪಾತಜಾಸ್ತತ್ರ ಜಜ್ಞಿರೇ ಪಾವಕಾರ್ಚಿಷಃ ॥೨೮॥

ಚಿತ್ರಮಂಡಲಗಳಲ್ಲಿ ಸಂಚರಿಸುತ್ತಿದ್ದ ಭೀಮ ಮತ್ತು ದುರ್ಯೋಧನರ ಗದೆಗಳ ಹೊಡೆತದಿಂದ ಬೆಂಕಿಯ ಜ್ವಾಲೆಗಳು ಉದ್ಭವಿಸಿದವು.

ಸಮಂ ಪ್ರಹರತೋಸ್ತತ್ರ ಶೂರಯೋರ್ಬಲಿನೋರ್ಮೃಧೇ ।
ಕ್ಷುಬ್ಧಯೋರ್ವಾಯುನಾ ರಾಜನ್ ದ್ವಯೋರಿವ ಸಮುದ್ರಯೋಃ ॥೨೯॥

ರಾಜನೇ! ಯುದ್ಧದಲ್ಲಿ ಬಲಶಾಲಿಗಳಾದ ಹಾಗೂ ಶೂರರಾದ ಭೀಮ-ದುರ್ಯೋಧನರು ಸಮವಾಗಿ ಹೊಡೆದುಕೊಳ್ಳುತ್ತಿದ್ದರು. ಗಾಳಿಯಿಂದ ಕ್ಷೋಭೆಗೊಳಗಾದ ಎರಡು ಸಮುದ್ರಗಳಂತೆ ಮೇಲೇರಿ ಬರುತ್ತಿದ್ದರು.

ತಯೋಃ ಪ್ರಹರತೋಸ್ತುಲ್ಯಂ ಮತ್ತಕುಂಜರಯೋರಿವ ।
ಮಹಾನಿರ್ಘಾತಸಂಹ್ರಾದಃ ಪ್ರಹಾರಾಣಾಮಜಾಯತ ॥೩೦॥

ಮದವೇರಿದ ಆನೆಗಳಂತೆ ಸಮಾನವಾಗಿ ಅವರಿಬ್ಬರೂ ಹೋರಾಡುತ್ತಿದ್ದಾಗ ಗದಾಪ್ರಹಾರಗಳಿಂದಾಗಿ ದೊಡ್ಡದಾದ ಗುಡುಗಿನ ಶಬ್ದವು ಉಂಟಾಗುತ್ತಿತ್ತು.

ತಸ್ಮಿಂಸ್ತಥಾ ವರ್ತಮಾನೇ ದಾರುಣೇ ಸಂಕುಲೇ ಭೃಶಮ್ ।
ಉಭಾವಪಿ ಪರಿಶ್ರಾಂತೌ ಯುಧ್ಯಮಾನಾವರಿಂದಮೌ ॥೩೧॥

ಹೀಗೆ ದುಃಖದಾಯಕವಾದ ದ್ವಂದ್ವಯುದ್ಧವು ಚೆನ್ನಾಗಿ ನಡೆಯುತ್ತಿದ್ದಾಗ, ಶತ್ರುಸಂಹಾರಕರಾದ ಅವರಿಬ್ಬರೂ ಯುದ್ಧಮಾಡುತ್ತಾ ಆಯಾಸಗೊಂಡರು.

ತೌ ಮುಹೂರ್ತಂ ಸಮಾಶ್ವಸ್ಯ ಪುನರೇವ ಪರಂತಪೌ ।
ಅಭ್ಯಹಾರಯತಾಂ ಕ್ರುದ್ಧೌ ಪ್ರಗೃಹ್ಯ ಮಹತೀಂ ಗದಾಮ್ ॥೩೨॥

ಶತ್ರುತಾಪಕರಾದ ಅವರಿಬ್ಬರೂ ಮುಹೂರ್ತಕಾಲ ಸುಧಾರಿಸಿಕೊಂಡು, ಪುನಃ ದೊಡ್ಡದಾದ ಗದೆಯನ್ನು ಹಿಡಿದುಕೊಂಡು ಕೋಪದಿಂದ ಹೊಡೆಯಲಾರಂಭಿಸಿದರು.

ತಯೋಃ ಸಮಭವದ್ ಯುದ್ಧಂ ಘೋರರೂಪಮಸಂವೃತಮ್ ।
ಗದಾನಿಪಾತೈ ರಾಜೇಂದ್ರ ತಕ್ಷತೋರ್ವೈ ಪರಸ್ಪರಮ್ ॥೩೩॥

ರಾಜೇಂದ್ರನೇ! ಪರಸ್ಪರವಾಗಿ ಗದೆಯ ಪೆಟ್ಟುಗಳಿಂದ ಘಾಸಿಗೊಳಿಸುತ್ತಿದ್ದ ಅವರಿಬ್ಬರ ಯುದ್ಧವು ಘೋರರೂಪವನ್ನು ತಾಳಿತ್ತು ಮತ್ತು ಹಾಗೆಯೇ ಮುಂದುವರಿದಿತ್ತು.

ವ್ಯಾಯಾಮಪ್ರದ್ರುತೌ ತೌ ತು ವೃಷಭಾಕ್ಷೌ ತರಸ್ವಿನೌ ।
ಅನ್ಯೋನ್ಯಂ ಜಘ್ನತುರ್ವೀರೌ ಪಂಕಸ್ಥೌ ಮಹಿಷಾವಿವ ॥೩೪॥

ಶಿಷ್ಟವಾದ ವ್ಯಾಯಾಮಗಳಿಂದ ಓಡುತ್ತಾ ವೃಷಭದ ಕಣ್ಣುಗಳುಳ್ಳ ಹಾಗೂ ಬಹಳ ವೇಗವುಳ್ಳ ಆ ವೀರರಿಬ್ಬರೂ ಕೆಸರಲ್ಲಿ ಕಾದಾಡುವ ಎರಡು ಕೋಣಗಂತೆ ಪರಸ್ಪರವಾಗಿ ಹೊಡೆದುಕೊಂಡರು.

ಜರ್ಝರೀಕೃತಸರ್ವಾಂಗೌ ರುಧಿರೇಣ ಸಮುಕ್ಷಿತೌ ।
ದದೃಶಾತೇ ಹಿಮವತಃ ಪುಷ್ಪಿತಾವಿವ ಕಿಂಶುಕೌ ॥೩೫॥

ಅಂಗಗಳನ್ನೆಲ್ಲಾ ಜರ್ಝರಿತಗೊಳಿಸಿ ಮೈಯೆಲ್ಲಾ ರಕ್ತದ ಲೇಪನವನ್ನು ಹೊಂದಿದರು. ಅವರಿಬ್ಬರು ಹಿಮಾಲಯದ ಪರ್ವತದಲ್ಲಿ ಹೂಬಿಟ್ಟ ಪಲಾಶವೃಕ್ಷಗಳಂತೆ ಕಾಣಿಸಿಕೊಂಡರು.

ದುರ್ಯೋಧನಸ್ತು ಪಾರ್ಥೇನ ವಿವರೇ ಸಂಪ್ರದರ್ಶಿತೇ ।
ಈಷದುತ್ಸ್ಮಯಮಾನಸ್ತು ಸಹಸೈವಾಭಿವಾರಿತಃ ॥೩೬॥

ಭೀಮನು ಸ್ವಲ್ಪ ಅವಕಾಶವನ್ನು ಕೊಟ್ಟಾಗ ದುರ್ಯೋಧನನು ಸ್ವಲ್ಪ ಮುಗುಳ್ನಗುತ್ತಾ ಕೂಡಲೇ ಭೀಮನನ್ನು ಎದುರಿಸಿದನು.

ತಮಭ್ಯಾಶಗತಂ ಪ್ರಾಜ್ಞಃ ಕ್ಷಣೇ ಪ್ರೇಕ್ಷ್ಯ ವೃಕೋದರಃ ।
ಅವಾಕ್ಷಿಪದ್ ಗದಾಂ ತಸ್ಮೈ ವೇಗೇನ ಮಹತಾ ಬಲೀ ॥೩೭॥

ಪ್ರಾಜ್ಞನಾದ ಭೀಮನು ಕ್ಷಣಮಾತ್ರದಲ್ಲಿ ತನಗೆದುರಾಗಿ ಬಂದ ದುರ್ಯೋಧನನನ್ನು ನೋಡಿ ತನ್ನ ದೊಡ್ಡದಾದ ಗದೆಯನ್ನು ಅವನೆಡೆಗೆ ವೇಗವಾಗಿ ಬಿಸಾಡಿದನು.

ಅವಕ್ಷೇಪಂ ತು ತಂ ದೃಷ್ಟ್ವಾ ಪುತ್ರಸ್ತವ ವಿಶಾಂಪತೇ ।
ಅಪಾಸರ್ಪತ್ ತತಃ ಸ್ಥಾನಾತ್ ಸಾ ಮೋಘಾ ನ್ಯಪತದ್ ಭುವಿ ॥೩೮॥

ರಾಜನೇ! ಗದೆಯು ಬೀಳುವುದನ್ನು ನೋಡಿದ ನಿನ್ನ ಮಗ ದುರ್ಯೋಧನನು ಆ ಸ್ಥಾನದಿಂದ ಸರಿದುಬಿಟ್ಟನು. ಗದೆಯು ವ್ಯರ್ಥವಾಗಿ ಭೂಮಿಗೆ ಬಿದ್ದಿತು.

ಮೋಕ್ಷಯಿತ್ವಾ ಪ್ರಹಾರಂ ತಂ ಪುತ್ರಸ್ತವ ಸಸಂಭ್ರಮಮ್ ।
ಭೀಮಸೇನಂ ತು ಗದಯಾ ಪ್ರಾಹರತ್ ಕುರುನಂದನಃ ॥೩೯॥

ಭೀಮನ ಹೊಡೆತವನ್ನು ತಪ್ಪಿಸಿಕೊಂಡು ನಿನ್ನ ಮಗ ದುರ್ಯೋಧನನು ಕ್ರುದ್ಧನಾಗಿ ತನ್ನ ಗದೆಯಿಂದ ಭೀಮಸೇನನನ್ನು ಹೊಡೆದನು.

ತಸ್ಯ ವಿಸ್ಕಂದಮಾನೇನ ರುಧಿರೇಣಾಮಿತೌಜಸಃ ।
ಪ್ರಹಾರಗುರುಘಾತಾಚ್ಚ ಮೂರ್ಚ್ಛೇವ ಸಮಜಾಯತ ॥೪೦॥

ಗದಾಪ್ರಹಾರದಿಂದ ಅಮಿತಪರಾಕ್ರಮಿಯಾದ ಭೀಮನ ಮೈಯಿಂದ ರಕ್ತದ ಧಾರೆಯು ಹರಿಯಿತು. ಗದೆಯ ಪೆಟ್ಟಿನಿಂದಾಗಿ ಅವನು ಮೂರ್ಛೆತಪ್ಪಿದವನಂತೆ ಆದನು.

ತನ್ನಾಬುಧ್ಯತ ಪುತ್ರಸ್ತೇ ಪೀಡಿತಂ ಪಾಂಡವಂ ರಣೇ ।
ಧಾರಯಾಮಾಸ ಭೀಮೋಽಪಿ ಶರೀರಮತಿಪೀಡಿತಮ್ ॥೪೧॥

ಯುದ್ಧದಲ್ಲಿ ಭೀಮನು ಹೀಗೆ ಪೀಡಿತನಾದರೂ ದುರ್ಯೋಧನನು ಇದನ್ನು ಗುರುತಿಸಲಿಲ್ಲ. ಏಕೆಂದರೆ ಭೀಮನು ಬಹಳವಾಗಿ ಪೆಟ್ಟು ತಿಂದಿದ್ದರೂ ಹೇಗೋ ಸಂಭಾಳಿಸಿಕೊಂಡಿದ್ದನು.

ಅಮನ್ಯತ ಸ್ಥಿತಂ ವೀರಂ ಪ್ರಹರಿಷ್ಯಂತಮಾಹವೇ ।
ಅತೋ ನ ಪ್ರಾಹರತ್ ತಸ್ಮೈ ಪುನರೇವ ತವಾತ್ಮಜಃ ॥೪೨॥

ಭೀಮನು ಯುದ್ಧದಲ್ಲಿ ತನಗೆ ಹೊಡೆಯುವುದಕ್ಕಾಗಿ ನಿಂತಿದ್ದಾನೆ ಎಂಬುದಾಗಿ ದುರ್ಯೋಧನನು ತಿಳಿದುಕೊಂಡನು. ಆದ್ದರಿಂದ ನಿನ್ನ ಮಗನು ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಮತ್ತೆ ಭೀಮನಿಗೆ ಹೊಡೆಯಲಿಲ್ಲ.

ತತೋ ಭೀಮೋ ನ ಜೀವೇದ್ಧಿ ರಾಜಾ ತವ ಸುತೋ ಭವೇತ್ ।
ತದವಸ್ಥಂ ಯದನ್ಯಪೋ ಭೀಮಂ ತು ಪ್ರಹರೇದಪಿ ॥೪೩॥

ಹಾಗಿದ್ದ ಭೀಮನನ್ನು ನಿನ್ನ ಮಗನು ಹೊಡೆದಿದ್ದರೆ ಭೀಮನು ಬದುಕಿ ಉಳಿಯುತ್ತಿರಲಿಲ್ಲ ಮತ್ತು ನಿನ್ನ ಮಗನೇ ರಾಜನಾಗುತ್ತಿದ್ದನು.

ತತೋ ಮುಹೂರ್ತಮಾಶ್ವಾಸ್ಯ ದುರ್ಯೋಧನಮವಸ್ಥಿತಮ್ ।
ವೇಗೇನಾಭ್ಯದ್ರವದ್ ರಾಜನ್ ಗದಾಮಾದಾಯ ಪಾಂಡವಃ ॥೪೪॥

ರಾಜನೇ! ಅನಂತರ ಭೀಮಸೇನನು ಮುಹೂರ್ತಕಾಲ ಸಂಭಾಳಿಸಿಕೊಂಡು, ಗದೆಯನ್ನು ಹಿಡಿದುಕೊಂಡು ಎದುರಿಗೆ ನಿಂತಿದ್ದ ದುರ್ಯೋಧನನ ಮೇಲೆ ಆಕ್ರಮಣ ಮಾಡಿದನು.

ತಮಾಪತಂತಂ ಸಂಪ್ರೇಕ್ಷ್ಯ ಸಂರಬ್ಧಮಮಿತೌಜಸಮ್ ।
ಮೋಘಮಸ್ಯ ಪ್ರಹಾರಂ ತಂ ಚಿಕೀರ್ಷುರ್ಭರತರ್ಷಭ ॥೪೫॥

ಅವಸ್ಥಾನೇ ಮತಿಂ ಕೃತ್ವಾ ಪುತ್ರಸ್ತವ ವಿಶಾಂಪತೇ ।
ಇಯೇಷೋತ್ಪತಿತುಂ ರಾಜನ್ ವಂಚಯಿಷ್ಯನ್ ವೃಕೋದರಮ್ ॥೪೬॥

ಭರತಕುಲಶ್ರೇಷ್ಠನೇ! ಅಮಿತಪರಾಕ್ರಮವುಳ್ಳ ಭೀಮನು ಕ್ರುದ್ಧನಾಗಿ ತನ್ನ ಮೇಲೆ ಏರಿ ಬರುತ್ತಿದ್ದುದನ್ನು ನೋಡಿ ದುರ್ಯೋಧನನು ಭೀಮನ ಹೊಡೆತವನ್ನು ವ್ಯರ್ಥಗೊಳಿಸುವುದಕ್ಕಾಗಿ ದೃಢವಾಗಿ ನಿಲ್ಲುವುದಕ್ಕಾಗಿ ಭೀಮನನ್ನು ಮೋಸಗೊಳಿಸುತ್ತಾ ಮೇಲ್ಗಡೆ ಹಾರಲು ಇಚ್ಛಿಸಿದನು.

ಅಬುಧ್ಯದ್ ಭೀಮಸೇನಸ್ತು ರಾಜ್ಞಸ್ತಸ್ಯ ಚಿಕೀರ್ಷಿತಮ್ ।
ಅಥಾಸ್ಯ ಸಮಭಿದ್ರುತ್ಯ ಸಮುತ್ಪತ್ಯ ಚ ಸಿಂಹವತ್ ॥೪೭॥

ಧೃತ್ಯಾ ವಂಚಯತೋ ರಾಜನ್ ಪುನರೇವೋತ್ಪತಿಷ್ಯತಃ ।
ಊರೂಭ್ಯಾಂ ಪ್ರಾಹಿಣೋದ್ ವೀರ್ಯಾದ್ ಗದಾಂ ವೇಗೇನ ಪಾಂಡವಃ ॥

ಭೀಮಸೇನನಾದರೂ ದುರ್ಯೋಧನನ ಮನೋ ಇಚ್ಛೆಯನ್ನು ತಿಳಿದುಕೊಂಡನು. ಅನಂತರ ಪುನಃ ದುರ್ಯೋಧನನು ಎದುರಿಗೆ ಬಂದು ಸಿಂಹದ ಹಾಗೆ ಮೇಲಕ್ಕೆ ಹಾರುತ್ತಾ ಧೈರ್ಯದಿಂದ ಭೀಮನನ್ನು ವಂಚಿಸುತ್ತಿದ್ದನು. ಇನ್ನೊಂದು ಬಾರಿ ಮೇಲಕ್ಕೆ ಹಾರಿದಾಗ ಭೀಮನು ದುರ್ಯೋಧನನ ತೊಡೆಯನ್ನು ಮುರಿಯುವ ಉದ್ದೇಶದಿಂದ ಗದೆಯನ್ನು ವೇಗವಾಗಿ ಬಿಸಾಡಿದನು.

ಸಾ ವಜ್ರನಿಷ್ಪೇಷಸಮಾ ಪ್ರಹಿತಾ ಭೀಮಕರ್ಮಣಾ ।
ಊರೂ ದುರ್ಯೋಧನಸ್ಯಾಥ ಬಭಂಜ ಪ್ರಿಯದರ್ಶನೌ ॥೪೯॥

ಭೀಮನು ಪ್ರಯೋಗಿಸಿದ ಆ ಗದೆಯು ವಜ್ರಾಘಾತಸದೃಶವಾಗಿತ್ತು. ಗದೆಯು ದುರ್ಯೋಧನನ ಬೆನ್ನಿನ ಬುಡಭಾಗಕ್ಕೆ ತಗುಲಿತು. ಆ ಹೊಡೆತದ ರಭಸಕ್ಕೆ ಅವನ ಸುಂದರವಾದ ಎರಡು ತೊಡೆಗಳೂ ಮುರಿದು ಬಿದ್ದವು.

ವ್ಯಾಖ್ಯಾನ ವಿಶೇಷ– ಗದಾಯುದ್ಧದಲ್ಲಿ ನಾಭಿಯ ಕೆಳಗೆ ಹೊಡೆಯಬಾರದೆಂಬ ನಿಯಮವಿದ್ದುದರಿಂದ ಭೀಮನು ನೇರವಾಗಿ ಅವನ ತೊಡೆಗೆ ಹೊಡೆಯಲಿಲ್ಲ. ಆದರೆ ಅವನ ತೊಡೆಗಳನ್ನು ಮುರಿಯುತ್ತೇನೆಂಬ ತನ್ನ ಪ್ರತಿಜ್ಞೆಯನ್ನು ಪಾಲಿಸುವುದಕ್ಕಾಗಿ ಬಗ್ಗಿನಿಂತ ಅವನ ಬೆನ್ನಿನ ಮೂಲಕ್ಕೆ ಹೊಡೆದ. ಅದರ ಪರಿಣಾಮವಾಗಿ ದುರ್ಯೋಧನನ ತೊಡೆಗಳು ಮುರಿದುಬಿದ್ದವು – ಮ.ಭಾ.ತಾ.ನಿ.

ಸ ಪಪಾತ ನರವ್ಯಾಘ್ರೋ ವಸುಧಾಮನುನಾದಯನ್ ।
ಭಗ್ನೋರುರ್ಭೀಮಸೇನೇನ ಪುತ್ರಸ್ತವ ವಿಶಾಂಪತೇ ॥೫೦॥

ರಾಜನೇ! ಭೀಮನಿಂದಾಗಿ ತೊಡೆಮುರಿದುಕೊಂಡ ನಿನ್ನ ಮಗನಾದ ಮನುಷ್ಯಶ್ರೇಷ್ಠ ದುರ್ಯೋಧನನು ಜೋರಾಗಿ ಶಬ್ದವನ್ನುಂಟುಮಾಡುತ್ತಾ ನೆಲಕ್ಕೆ ಬಿದ್ದನು.

ವವುರ್ವಾತಾಃ ಸನಿರ್ಘಾತಾಃ ಪಾಂಸುವರ್ಷಂ ಪಪಾತ ಚ ।
ಚಚಾಲ ಪೃಥಿವೀ ಚಾಪಿ ಸವೃಕ್ಷವನಪರ್ವತಾ ॥೫೧॥

ತಸ್ಮಿನ್ ನಿಪತಿತೇ ವೀರೇ ಪತ್ಯೌ ಸರ್ವಮಹೀಕ್ಷಿತಾಮ್ ।
ಮಹಾಸ್ವನಾ ಪುನರ್ದೀಪ್ತಾ ಸನಿರ್ಘಾತಾ ಭಯಂಕರೀ ॥೫೨॥

ಎಲ್ಲಾ ರಾಜರುಗಳಿಗೆ ಸ್ವಾಮಿಯಾದ ವೀರನಾದ ದುರ್ಯೋಧನನು ಭೂಮಿಗೆ ಬಿದ್ದಾಗ ಗುಡುಗುಸಹಿತವಾದ ಬಿರುಗಾಳಿಯು ಬೀಸಿತು. ಧೂಳಿನ ಮಳೆಯೇ ಸುರಿಯಿತು. ಮರ-ಕಾಡು-ಪರ್ವತಗಳಿಂದ ಕೂಡಿದ ನೆಲವು ನಡುಗಿತು. ಮಿಂಚುಗಳು ಬೆಳಗಿ ಗುಡುಗುಗಳು ಪುನಃ ಜೋರಾಗಿ ಶಬ್ದವನ್ನು ಉಂಟುಮಾಡಿದವು.

ಪಪಾತ ಚೋಲ್ಕಾ ಮಹತೀ ಪತಿತೇ ಪೃಥಿವೀಪತೌ ॥೫೩॥

ರಾಜನು ಬಿದ್ದಾಗ ದೊಡ್ಡದಾದ ಉಲ್ಕೆಯು ಕೆಳಗೆ ಬಿತ್ತು.

ಅಥ ಶೋಣಿತವರ್ಷಂ ಚ ಪಾಂಸುವರ್ಷಂ ಚ ಭಾರತ ।
ವವರ್ಷ ಮಘವಾಂಸ್ತತ್ರ ತವ ಪುತ್ರೇ ನಿಪಾತಿತೇ ॥೫೪॥

ಭರತಕುಲೋದ್ಭವನೇ! ನಿನ್ನ ಮಗ ಕೆಳಕ್ಕೆ ಬಿದ್ದಾಗ ಇಂದ್ರನು ರಕ್ತದ ಮಳೆಯನ್ನೂ, ಧೂಳಿನ ಮಳೆಯನ್ನೂ ಸುರಿಸಿದನು.

ಯಕ್ಷಾಣಾಂ ರಾಕ್ಷಸಾನಾಂ ಚ ಪಿಶಾಚಾನಾಂ ಪರಂತಪ ।
ಅಂತರಿಕ್ಷೇ ಮಹಾನ್ ನಾದಸ್ತತ್ರ ಭಾರತ ಶುಶ್ರುವೇ ॥೫೫॥

ಶತ್ರುಸಂಹಾರಕನೇ! ಭಾರತನೇ, ಆಕಾಶದಲ್ಲಿ ಯಕ್ಷರ, ರಾಕ್ಷಸರ, ಪಿಶಾಚಗಳ ಜೋರಾದ ನಾದವು ಉಂಟಾಗಿದ್ದು ಕೇಳಿಸಿತು.

ತೇನ ಶಬ್ದೇನ ಘೋರೇಣ ಮೃಗಾಣಾಮಥ ಪಕ್ಷಿಣಾಮ್ ।
ಜಜ್ಞೇ ಘೋರತರಃ ಶಬ್ದೋ ಬಹೂನಾಂ ಸರ್ವತೋದಿಶಮ್ ॥೫೬॥

ಆ ಭಯಂಕರವಾದ ಶಬ್ದದಿಂದಾಗಿ ಎಲ್ಲಾ ಪ್ರಾಣಿ-ಪಕ್ಷಿಗಳೂ ಎಲ್ಲಾ ಕಡೆಯಿಂದಲೂ ಶಬ್ದವನ್ನುಂಟುಮಾಡಿದವು.

ಯೇ ತತ್ರ ವಾಜಿನಃ ಶೇಷಾ ಗಜಾಶ್ಚ ಮನುಜೈಃ ಸಹ ।
ಮುಮುಚುಸ್ತೇ ಮಹಾನಾದಂ ತವ ಪುತ್ರೇ ನಿಪಾತಿತೇ ॥೫೭॥

ನಿನ್ನ ಮಗನು ಕೆಳಗೆ ಬಿದ್ದಾಗ ಅಲ್ಲಿ ಉಳಿದಿದ್ದ ಕುದುರೆಗಳು, ಆನೆಗಳು, ಮನುಷ್ಯರು ಇವರೆಲ್ಲರೂ ಜೋರಾಗಿ ಶಬ್ದವನ್ನು ಮಾಡಿದರು.

ಭೇರೀಶಂಖನಿನಾದಾನಾಮಭವಚ್ಚ ಸ್ವನೋ ಮಹಾನ್ ।
ಅಂತರ್ಭೂಮಿಗತೋ ರಾಜನ್ ತವ ಪುತ್ರೇ ನಿಪಾತಿತೇ ॥೫೮॥

ನಿನ್ನ ಮಗನು ಭೂಮಿಗೆ ಬಿದ್ದಾಗ ಭೇರಿಗಳು, ಶಂಖಗಳು ಜೋರಾಗಿ ಶಬ್ದವನ್ನು ಮಾಡಿದವು. ಆ ಶಬ್ದವು ಪಾತಾಳಕ್ಕೂ ಕೇಳಿಸಿತು.

ಹ್ರದಾಃ ಕೂಪಾಶ್ಚ ರುಧಿರಮುದ್ವಮನ್ನೃಪಸತ್ತಮ ।
ನದ್ಯಶ್ಚ ಸುಮಹಾವೇಗಾಃ ಪ್ರತಿಸ್ರೋತೋವಹಾ ಭವನ್ ॥೫೯॥

ಸರೋವರಗಳಲ್ಲಿ, ಬಾವಿಗಳಲ್ಲಿ ರಕ್ತವು ಉಕ್ಕಿಬಂದಿತು. ನದಿಗಳು ವಿರುದ್ಧ ದಿಕ್ಕುಗಳಲ್ಲಿ ವೇಗವಾಗಿ ಪ್ರವಹಿಸತೊಡಗಿದವು.

ಪುಲ್ಲಿಂಗಾ ಇವ ನಾರ್ಯಶ್ಚ ಸ್ತ್ರೀಲಿಂಗಾಃ ಪುರುಷಾ ಭವನ್ ।
ದುರ್ಯೋಧನೇ ಮಹಾರಾಜ ಪತಿತೇ ತನಯೇ ತವ ॥೬೦॥

ಮಹಾರಾಜನೇ! ನಿನ್ನ ಮಗ ದುರ್ಯೋಧನನು ಬಿದ್ದಾಗ ಸ್ತ್ರೀಯರು ಪುರುಷರಂತೆಯೂ, ಪುರುಷರು ಸ್ತ್ರೀಯರಂತೆಯೂ ಆದರು.

ದೃಷ್ಟ್ವಾ ತಾನದ್ಭುತೋತ್ಪಾತಾನ್ ಪಾಂಚಾಲಾಃ ಪಾಂಡವೈಃ ಸಹ ।
ಆವಿಗ್ನಮನಸಃ ಸರ್ವೇ ಬಭೂವುರ್ನೃಪಸತ್ತಮ ॥೬೧॥

ನೃಪೋತ್ತಮನೇ! ಪಾಂಚಾಲರು ಮತ್ತು ಪಾಂಡವರು ಈ ಎಲ್ಲಾ ಅದ್ಭುತಶಕುನಗಳನ್ನು ಕಂಡು ಮನೋದ್ವೇಗಕ್ಕೆ ಒಳಗಾದರು.

ಯಯುರ್ದೇವಾ ಯಥಾಕಾಮಂ ಗಂಧರ್ವಾಪ್ಸರಸಸ್ತಥಾ ।
ಕಥಯಂತೋऽದ್ಭುತಂ ಯುದ್ಧಮುಭಯೋಸ್ತತ್ರ ಭಾರತ ॥೬೨॥

ಭರತಕುಲೋದ್ಭವನೇ! ದೇವತೆಗಳು, ಗಂಧರ್ವರು, ಹಾಗೆಯೇ ಅಪ್ಸರಸ್ತ್ರೀಯರು ಭೀಮ-ದುರ್ಯೋಧನರ ಅದ್ಭುತವಾದ ಯುದ್ಧದ ಬಗ್ಗೆ ಮಾತನಾಡುತ್ತಾ ತಮ್ಮಿಷ್ಟದಂತೆ ಹೊರಟುಹೋದರು.

ತಥೈವ ಸಿದ್ಧಾ ರಾಜೇಂದ್ರ ತಥಾ ಯಕ್ಷಾಶ್ಚ ಚಾರಣಾಃ ।
ನರಸಿಂಹೌ ಪ್ರಶಂಸಂತೌ ವಿಪ್ರಜಗ್ಮುರ್ಯಥಾಗತಮ್ ॥೬೩॥

ಅದೇ ರೀತಿಯಲ್ಲಿ ಸಿದ್ಧರು, ಯಕ್ಷರು, ಚಾರಣರು ಕೂಡ ನರೋತ್ತಮರಾದ ಭೀಮ-ದುರ್ಯೋಧನರನ್ನು ಕೊಂಡಾಡುತ್ತಾ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ದುರ್ಯೋಧನಪಾತೋ ನಾಮ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ದುರ್ಯೋಧನನ ಅನ್ಯಾಯವನ್ನು ಸ್ಮರಿಸುತ್ತಾ ಭೀಮನು
ಎಡಗಾಲಿನಿಂದ ಅವನ ತಲೆಯನ್ನು ತುಳಿದದ್ದು. ಧರ್ಮರಾಜನು
ದುರ್ಯೋಧನನನ್ನು ಸಮಾಧಾನಪಡಿಸಿದ್ದು.

ಸಂಜಯಃ

ಪಾತಿತಂ ತಂ ತದಾ ದೃಷ್ಟ್ವಾ ಮಹಾಸಾಲಮಿವ ಚ್ಯುತಮ್ ।
ಪ್ರಹೃಷ್ಟಮನಸಃ ಸರ್ವೇ ಬಭೂವುಸ್ತತ್ರ ಪಾಂಡವಾಃ ॥೧॥

ಸಂಜಯ– ಮಹಾಸಾಲವೃಕ್ಷದಂತೆ ಕೆಳಕ್ಕೆ ಬಿದ್ದ ದುರ್ಯೋಧನನನ್ನು ಕಂಡು ಅಲ್ಲಿದ್ದ ಎಲ್ಲಾ ಪಾಂಡವರೂ ಸಂತುಷ್ಟವಾದ ಮನಸ್ಸುಳ್ಳವರಾದರು.

ತಂ ಮತ್ತಮಿವ ಮಾತಂಗಂ ಸಿಂಹೇನ ವಿನಿಪಾತಿತಮ್ ।
ದದೃಶುರ್ಹೃಷ್ಟರೋಮಾಣಃ ಪಾಂಡವಾಃ ಸೃಂಜಯೈಃ ಸಹ ॥೨॥

ಮದವೇರಿದ ಗಜದಂತಿದ್ದ ದುರ್ಯೋಧನನನ್ನು ಸಿಂಹದಂತಿದ್ದ ಭೀಮನು ಕೆಳಗೆ ಬೀಳಿಸಿದ್ದನ್ನು ರೊಮಾಂಚನಗೊಂಡ ಪಾಂಡವರು ಮತ್ತು ಸೃಂಜಯರು ನೋಡಿದರು.

ತತೋ ದುರ್ಯೋಧನಂ ಹತ್ವಾ ಭೀಮಸೇನಃ ಪ್ರತಾಪವಾನ್ ।
ಪತಿತಂ ಕೌರವೇಂದ್ರಂ ತಮುಪಗಮ್ಯೇದಮಬ್ರವೀತ್ ॥೩॥

ಪ್ರತಾಪಿಯಾದ ಭೀಮಸೇನನು ದುರ್ಯೋಧನನನ್ನು ಹೊಡೆದು ಕೆಳಬಿದ್ದ ಕೌರವೇಂದ್ರನ ಬಳಿಗೆ ಬಂದು ಹೀಗೆ ಹೇಳಿದನು.

ಭೀಮಃ

ಗೌರ್ಗೌರಿತಿ ಪುರಾ ಮೂಢ ದ್ರೌಪದೀಮೇಕವಾಸಸಾಮ್ ।
ಯತ್ ಸಭಾಯಾಂ ಹಸನ್ನಸ್ಮಾನ್ ತದಾ ವದಸಿ ದುರ್ಮತೇ ॥೪॥

ತಸ್ಯಾಪಹಾಸಸ್ಯ ಫಲಮದ್ಯ ತ್ವಂ ಸಮವಾಪ್ನುಹಿ ॥೫॥

ಭೀಮ– 'ಕೆಟ್ಟಬುದ್ಧಿಯವನೇ! ಮೂರ್ಖನೇ! ಹಿಂದೆ ಏಕವಸ್ತ್ರಳಾದ ದ್ರೌಪದಿಯನ್ನು ಸಭೆಯಲ್ಲಿ 'ಪಶು! ಪಶು!' ಎಂಬುದಾಗಿ ಹಾಸ್ಯಮಾಡುತ್ತಾ ಹೇಳುತ್ತಿದ್ದಿ. ಆ ಅಪಹಾಸದ ಫಲವನ್ನು ಇವತ್ತು ನೀನು ಅನುಭವಿಸು.'

ಸಂಜಯಃ

ಏವಮುಕ್ತ್ವಾ ಸ ವಾಮೇನ ಪದಾ ಮೌಲಿಮವಾಕ್ಷಿಪತ್ ।
ಶಿರಶ್ಚ ರಾಜಸಿಂಹಸ್ಯ ಪಾದೇನ ಸಮತಾಡಯತ್ ॥೬॥

ಸಂಜಯ– ಹೀಗೆ ಭೀಮನು ಹೇಳಿ, ಎಡಗಾಲಿನಿಂದ ರಾಜಸಿಂಹ ದುರ್ಯೋಧನನ ಹಣೆಯನ್ನೂ ತಲೆಯನ್ನೂ ಚೆನ್ನಾಗಿ ಒದ್ದನು.

ತಥೈವ ಕ್ರೋಧಸಂಯುಕ್ತೋ ಭೀಮಃ ಪರಬಲಾರ್ದನಃ ।
ಪುನರೇವಾಬ್ರವೀದ್ ವಾಕ್ಯಂ ಯತ್ ತಚ್ಛೃಣು ನರಾಧಿಪ ॥೭॥

ಅದೇ ರೀತಿಯಲ್ಲಿ ಶತ್ರುಗಳ ಬಲವನ್ನು ನಾಶಮಾಡುವ ಭೀಮನು ಬಹಳ ಕೋಪಗೊಂಡು ಮತ್ತೆ ಏನು ಹೇಳಿದನೋ ಅದನ್ನು ಹೇಳುತ್ತೇನೆ, ಕೇಳು.

ಭೀಮಃ

ಯೇಽಸ್ಮಾನ್ ಪುರಾ ಪ್ರನೃತ್ಯಂತಿ ಪುನರ್ಗೌರಿತಿ ಗೌರಿತಿ ।
ತಾನ್ ವಯಂ ಪ್ರತಿನೃತ್ಯಾಮಃ ಪುನರ್ಗೌರಿತಿ ಗೌರಿತಿ ॥೮॥

ಭೀಮ– ಹಿಂದೆ ನಮ್ಮನ್ನುದ್ದೇಶಿಸಿ 'ಪಶು! ಪಶು!' ಎಂಬುದಾಗಿ ಕುಣಿದಾಡಿದರೋ ಅವರನ್ನು ನಾವಿಂದು 'ಪಶು! ಪಶು!' ಎಂದು ಕರೆಯುತ್ತಾ ಕುಣಿಯುತ್ತೇವೆ.

ನಾಸ್ಮಾಕಂ ನಿಕೃತಿದ್ಯೂತಂ ನಾಕ್ಷದ್ಯೂತಂ ನ ವಂಚನಾ ।
ಸ್ವಬಾಹುಬಲಮಾಶ್ರಿತ್ಯ ಪ್ರಬಾಧಾಮ ವಯಂ ರಿಪೂನ್ ॥೯॥

ಅದಕ್ಕಾಗಿ ನಾವು ಮೋಸದ ದ್ಯೂತವನ್ನಾಗಲೀ, ಪಗಡೆಯಾಟವನ್ನಾಗಲೀ, ವಂಚನೆಯನ್ನಾಗಲೀ ನಡೆಸುವುದಿಲ್ಲ. ನಮ್ಮ ಬಾಹುಬಲವನ್ನೇ ಆಶ್ರಯಿಸಿಕೊಂಡು ಶತ್ರುಗಳನ್ನು ಚೆನ್ನಾಗಿ ಪೀಡಿಸುತ್ತೇವೆ.

ಸಂಜಯಃ

ಸಮಾಪ್ಯ ವೈರಸ್ಯ ಪರಸ್ಯ ಪಾರಂ
ವೃಕೋದರಃ ಪ್ರಾಹ ತತಃ ಪ್ರಹಸ್ಯ ।
ಯುಧಿಷ್ಠಿರಂ ಕೇಶವಸೃಂಜಯಾಂಶ್ಚ
ಧನಂಜಯಂ ಮಾದ್ರವತೀಸುತೌ ಚ ॥೧೦॥

ಸಂಜಯ– ಬಹಳವಾದ ದ್ವೇಷದ ಅಂತ್ಯವನ್ನು ಹೊಂದಿ ಭೀಮನು ಜೋರಾಗಿ ನಗುತ್ತಾ, ಮತ್ತೆ ಧರ್ಮರಾಜ, ಕೇಶವ, ಸೃಂಜಯರು, ಅರ್ಜುನ ಮತ್ತು ನಕುಲ-ಸಹದೇವರನ್ನು ಕುರಿತು ಹೀಗೆ ಹೇಳುತ್ತಾನೆ.

ಭೀಮಃ

ರಜಸ್ವಲಾಂ ದ್ರೌಪದೀಮಾನಯನ್ ಯೇ
ಯೇ ಚಾಪ್ಯಕುರ್ವಂತ ಸದಸ್ಯವಸ್ತ್ರಾಮ್ ।
ತಾನ್ ಪಶ್ಯಧ್ವಂ ಪಾಂಡವೈರ್ಧಾರ್ತರಾಷ್ಟ್ರಾನ್
ರಣೇ ಹತಾಂಸ್ತಪಸಾ ಯಾಜ್ಞಸೇನ್ಯಾಃ ॥೧೧॥

ಭೀಮ– ಯಾರು ರಜಸ್ವಲೆಯಾದ ದ್ರೌಪದಿಯನ್ನು ಸಭೆಗೆ ಎಳೆತಂದು ಸಭಾಮಧ್ಯದಲ್ಲಿ ವಿವಸ್ತ್ರಳನ್ನಾಗಿ ಮಾಡಿದರೋ, ದ್ರೌಪದಿಯ ತಪಸ್ಸಿನಿಂದಾಗಿ ಯುದ್ಧದಲ್ಲಿ ಪಾಂಡವರ ಕೈಯಿಂದ ಸತ್ತ ಅಂತಹ ಧೃತರಾಷ್ಟ್ರಪುತ್ರರನ್ನು ನೋಡಿರಿ.

ಯೇ ನಃ ಪುರಾ ಷಂಡತಿಲಾನವೋಚನ್
ಕ್ರೂರಾತ್ಮಾನೋ ಧೃತರಾಷ್ಟ್ರಸ್ಯ ಪುತ್ರಾಃ ।
ತೇ ನೋ ಹತಾಃ ಸಗಣಾಃ ಸಾನುಬಂಧಾಃ
ಕಾಮಂ ಸ್ವರ್ಗಂ ನರಕಂ ವಾ ವ್ರಜಾಮಃ ॥೧೨॥

ಯಾವ ಕ್ರೂರಿಗಳಾದ ಧೃತರಾಷ್ಟ್ರಪುತ್ರರು ಹಿಂದೆ ನಮ್ಮನ್ನು 'ಷಂಡತಿಲರು' ಎಂದು ಕರೆದಿದ್ದರೋ ಅಂಥವರು ಸಪರಿವಾರರಾಗಿ ನಮ್ಮಿಂದ ಹತರಾಗಿದ್ದಾರೆ. ನಾವು ಸ್ವರ್ಗಕ್ಕೆ ಅಥವಾ ನರಕಕ್ಕೆ ಹೋಗೋಣ. ಎಲ್ಲಿ ಹೋದರೂ ಚಿಂತೆಯಿಲ್ಲ.

ಸಂಜಯಃ

ಪುನಶ್ಚ ರಾಜ್ಞಃ ಪತಿತಸ್ಯ ಭೂಮೌ
ಭೀಮೋ ಗದಾಂ ಸ್ಕಂಧಗತಾಂ ಪ್ರಗೃಹ್ಯ ।
ವಾಮೇನ ಪಾದೇನ ಶಿರಃ ಪ್ರಮಥ್ಯ
ದುರ್ಯೋಧನಂ ನೈಕೃತಿಕೇತ್ಯವೋಚತ್ ॥೧೩॥

ಸಂಜಯ– ಪುನಃ ಭೀಮನು ಭುಜದ ಮೇಲೆ ಹೊತ್ತುಕೊಂಡಿದ್ದ ಗದೆಯನ್ನು ಹಿಡಿದುಕೊಂಡು ಕೆಳಬಿದ್ದಿದ್ದ ದುರ್ಯೋಧನನ ತಲೆಯನ್ನು ಎಡಗಾಲಿನಿಂದ ಚೆನ್ನಾಗಿ ಒದ್ದು ಮರ್ದಿಸಿ 'ಮೋಸಗಾರ!' ಎಂದು ಹೇಳಿದನು.

ಹೃಷ್ಟೇನ ರಾಜನ್ ಕುರುಪಾರ್ಥಿವಸ್ಯ
ಕ್ಷುದ್ರಾತ್ಮನಾ ಭೀಮಸೇನೇನ ಪಾದಮ್ ।
ದೃಷ್ಟ್ವಾ ಕೃತಂ ಮೂರ್ಧ್ನ್ಯಥ ನಾಭ್ಯನಂದನ್
ಧರ್ಮಾತ್ಮಾನಃ ಸೋಮಕಾನಾಂ ಪ್ರಬರ್ಹಾಃ ॥೧೪॥

ರಾಜನೇ! ದುರ್ಯೋಧನನ ವಿಷಯದಲ್ಲಿ ಕ್ಷುದ್ರಬುದ್ಧಿಯ ಭೀಮನು ಸಂತೋಷದ ಭರದಲ್ಲಿ ತನ್ನ ಎಡಗಾಲನ್ನು ದುರ್ಯೋಧನನ ತಲೆಯ ಮೇಲಿರಿಸಿದ್ದನ್ನು ನೋಡಿ ಧರ್ಮಬುದ್ಧಿಯ ಸೋಮಕರ ಮುಖ್ಯಸ್ಥರು ಆ ಕಾರ್ಯವನ್ನು ಇಷ್ಟಪಡಲಿಲ್ಲ ಮತ್ತು ಅಭಿನಂದಿಸಲಿಲ್ಲ.

ತವ ಪುತ್ರಂ ತಥಾ ಹತ್ವಾ ಕತ್ಥಮಾನಂ ವೃಕೋದರಮ್ ।
ನೃತ್ಯಮಾನಂ ಚ ಬಹುಶೋ ಧರ್ಮರಾಜೋಽಬ್ರವೀದಿದಮ್ ॥೧೫॥

ನಿನ್ನ ಮಗನನ್ನು ಕೆಳಗೆ ಕೆಡವಿ, ಬೈಯುತ್ತ ಬಹಳವಾಗಿ ಕುಣಿದಾಡುತ್ತಿದ್ದ ಭೀಮನನ್ನು ಕುರಿತು ಧರ್ಮರಾಜನು ಹೀಗೆ ಹೇಳಿದನು.

ಗತೋಽಸಿ ವೈರಸ್ಯಾನೃಣ್ಯಂ ಪ್ರತಿಜ್ಞಾ ಪೂರಿತಾ ತ್ವಯಾ ।
ಶುಭೇನಾಥಾಶುಭೇನೈವ ಕರ್ಮಣಾ ವಿರಮಾಧುನಾ ॥೧೬॥

'ವೈರದ ಪ್ರತೀಕಾರವನ್ನು ಮಾಡಿ ಋಣಮುಕ್ತನಾಗಿರುವಿ, ನಿನ್ನ ಪ್ರತಿಜ್ಞೆಯನ್ನು ಪೂರೈಸಿಕೊಂಡಿರುವಿ, ಈಗ ಶುಭ ಹಾಗೂ ಅಶುಭಕಾರ್ಯಗಳನ್ನು ನಿಲ್ಲಿಸು.

ಮಾ ಶಿರೋಽಸ್ಯ ಪದಾಽಮರ್ದೀರ್ಮಾ ಧರ್ಮಸ್ತೇಽತಿಗೋ ಭವೇತ್ ।
ರಾಜಾ ಜ್ಞಾತಿರ್ಹತಶ್ಚಾಯಂ ನೈತನ್ನ್ಯಾಯ್ಯಂ ತವಾನಘ ॥೧೭॥

ಇವನ ತಲೆಯನ್ನು ತುಳಿದು ಮರ್ದಿಸಬೇಡ. ಆ ಮೂಲಕ ಧರ್ಮವನ್ನು ಮೀರಬೇಡ. ದೋಷದೂರನೇ! ರಾಜನೂ, ಸಂಬಂಧಿಯೂ ಆಗಿರುವ ದುರ್ಯೋಧನನನ್ನು ಹೊಡೆದು ಬೀಳಿಸಿರುವಿ. ಇದು ನ್ಯಾಯಸಮ್ಮತವಾದ ಕಾರ್ಯವಲ್ಲ.

ಏಕಾದಶಚಮೂನಾಥಂ ಕುರೂಣಾಮಧಿಪಂ ತಥಾ ।
ಮಾಸ್ಪಾಕ್ಷೀರ್ಭೀಮ ಪಾದೇನ ರಾಜಾನಂ ಜ್ಞಾತಿಮೇವ ಚ ॥೧೮॥

ಭೀಮನೇ! ಹನ್ನೊಂದು ಅಕ್ಷೌಹಿಣಿಸೈನ್ಯಕ್ಕೆ ಅಧಿಪತಿಯಾಗಿದ್ದ ಹಾಗೂ ಕುರುಗಳಿಗೆ ಒಡೆಯನಾಗಿದ್ದ, ನಮ್ಮ ಸಂಬಂಧಿಯೂ ರಾಜನೂ ಆಗಿರುವ ದುರ್ಯೋಧನನನ್ನು ಕಾಲಿನಿಂದ ಮುಟ್ಟಬೇಡ.

ಹತಬಂಧುರ್ಹತಾಮಾತ್ಯೋ ಭ್ರಷ್ಟಸೈನ್ಯೋ ಹತೋ ಮೃಧೇ ।
ಸರ್ವಾಕಾರೇಣ ಶೋಚ್ಯೋಽಯಂ ನಾವಹಾಸ್ಯೋಽಯಮೀಶ್ವರಃ॥೧೯॥

ಇವನ ಬಂಧುಗಳೆಲ್ಲರೂ ಸತ್ತಿದ್ದಾರೆ. ಮಂತ್ರಿಗಳನ್ನು ಕಳೆದುಕೊಂಡಿದ್ದಾನೆ. ಸೈನ್ಯವು ಕಳೆದುಹೋಗಿದೆ. ಇವನೂ ಯುದ್ಧದಲ್ಲಿ ಪೆಟ್ಟು ತಿಂದು ಬಿದ್ದಿದ್ದಾನೆ. ಇಂತಹವನ ಬಗ್ಗೆ ಎಲ್ಲಾ ರೀತಿಯಲ್ಲಿಯೂ ದುಃಖಿಸಬೇಕು. ರಾಜನಾದ ಇವನನ್ನು ಅವಮಾನ ಪಡಿಸಬಾರದು.

ವಿಧ್ವಸ್ತೋಽಯಂ ಹತಾಮಾತ್ಯೋ ಹತಬಂಧುರ್ಹತಾತ್ಮಜಃ ।
ಉತ್ಸನ್ನಪಿಂಡೋ ಭ್ರಾತಾ ಚ ನೈತನ್ನ್ಯಾಯ್ಯಂ ಕೃತಂ ತ್ವಯಾ ॥೨೦॥

ಸರ್ವ ರೀತಿಯಲ್ಲಿ ದುರ್ಯೋಧನನನು ನಾಶಹೊಂದಿದ್ದಾನೆ. ಇವನ ಮಂತ್ರಿಗಳು ಸತ್ತಿದ್ದಾರೆ. ಬಂಧುಗಳು ಮತ್ತು ಮಕ್ಕಳು ಹತರಾಗಿದ್ದಾರೆ. ಇವನಿಗೆ ಸತ್ತ ಮೇಲೆ ಪಿಂಡ ಹಾಕುವವರೂ ಇಲ್ಲವಾಗಿದ್ದಾರೆ. ನಮಗೆ ಅಣ್ಣನಾಗಿದ್ದಾನೆ. ಅವನ ಬಗ್ಗೆ ನೀನು ಮಾಡಿದ್ದು ನ್ಯಾಯೋಚಿತವಾದುದಲ್ಲ.

ಧಾರ್ಮಿಕೋ ಭೀಮಸೇನೋऽಸಾವಿತ್ಯಾಹುಸ್ತ್ವಾಂ ಪುರಾ ಜನಾಃ ।
ಸ ಕಸ್ಮಾದ್ ಭೀಮಸೇನ ತ್ವಂ ರಾಜಾನಮಧಿತಿಷ್ಠಸಿ ॥೨೧॥

ಹಿಂದೆ ಜನರು 'ಭೀಮನು ಧರ್ಮನಿಷ್ಠನಾದವನು!' ಎಂದು ನಿನ್ನ ಬಗ್ಗೆ ಹೇಳುತ್ತಿದ್ದರು. ಆದ್ದರಿಂದ ಹೇಗೆ ನೀನು ರಾಜನಾದ ದುರ್ಯೋಧನನನ್ನು ಕಾಲಿನಿಂದ ತುಳಿಯುತ್ತಾ ಮೀರಿ ನಿಂತಿರುವಿ?'

ಇತ್ಯುಕ್ತ್ವಾ ಭೀಮಸೇನಂ ತು ಸಾಶ್ರುಕಂಠೋ ಯುಧಿಷ್ಠಿರಃ ।
ಉಪಸೃತ್ಯಾಬ್ರವೀದ್ ದೀನೋ ದುರ್ಯೋಧನಮರಿಂದಮಮ್ ॥೨೨॥

ಹೀಗೆ ಭೀಮಸೇನನಿಗೆ ಹೇಳಿ, ಕಣ್ಣೀರಿನಿಂದ ಗಂಟಲುಕಟ್ಟಿದ ಧರ್ಮರಾಜನು ಶತ್ರುಸಂಹಾರಕನಾದ ದುರ್ಯೋಧನನ ಸಮೀಪಕ್ಕೆ ಬಂದು ದುಃಖದಿಂದ ಹೀಗೆ ಹೇಳಿದನು.

ಯುಧಿಷ್ಠಿರಃ

ನೂನಮೇತದ್ ಬಲವತಾ ಧಾತ್ರಾऽऽದಿಷ್ಟಂ ಮಹಾತ್ಮನಾ ।
ಯದ್ವಯಂ ತ್ವಾಂ ಜಿಘಾಂಸಾಮಃ ತ್ವಂ ಚಾಸ್ಮಾನ್ ಕುರುನಂದನ ॥೨೩॥

ಯುಧಿಷ್ಠರ– ಕುರುನಂದನ! ನಾವೇನು ನಿನ್ನನ್ನು ಹೊಡೆದಿದ್ದೇವೆಯೋ, ಹಾಗೆಯೇ ನೀನು ನಮ್ಮನ್ನು ಹೊಡೆದಿರುವಿಯೋ ಇದೆಲ್ಲವೂ ಬಲಶಾಲಿಯಾದ ಮಹಾತ್ಮ ಬ್ರಹ್ಮನಿಂದ ಮೊದಲೇ ನಿರ್ದೇಶಿಸಲ್ಪಟ್ಟಿತ್ತು.

ಆತ್ಮನೋ ಹ್ಯಪರಾಧೇನ ಮಹದ್ ವ್ಯಸನಮೀದೃಶಮ್ ।
ಪ್ರಾಪ್ತವಾನಸಿ ಲೋಭಾಚ್ಚ ಮದಾದ್ ಬಾಲ್ಯಾಚ್ಚ ಭಾರತ ॥೨೪॥

ಭರತಕುಲೋದ್ಭವನೆ! ನಿನ್ನ ಅಪರಾಧ, ಲೋಭ, ಮದ, ಬಾಲಿಶಬುದ್ಧಿ ಇವುಗಳಿಂದಾಗಿ ಇಷ್ಟೊಂದು ದೊಡ್ಡದಾದ ದುಃಖವನ್ನು ಹೊಂದಿರುವಿ.

ಘಾತಯಿತ್ವಾ ವಯಸ್ಯಾಂಶ್ಚ ಭ್ರಾತೄನಪಿ ಪಿತೄಂಸ್ತಥಾ ।
ಪುತ್ರಾನ್ ಪೌತ್ರಾಂಸ್ತಥಾऽऽಚಾರ್ಯಾನ್ ತತೋऽಸಿ ನಿಧನಂ ಗತಃ ॥

ಸ್ನೇಹಿತರನ್ನು, ಸಹೋದರರನ್ನು, ಪಿತೃಗಳನ್ನು, ಮಕ್ಕಳನ್ನು, ಮೊಮ್ಮಕ್ಕಳನ್ನು ಹಾಗೂ ಗುರುಗಳನ್ನು ಕೊಂದು ಅದರಿಂದಾಗಿ ನೀನು ಸಾಯುತ್ತಿರುವಿ.

ತವಾಪರಾಧಾದಸ್ಮಾಭಿರ್ಭ್ರಾತರಸ್ತೇ ಮಹಾರಥಾಃ ।
ನಿಹತಾ ಜ್ಞಾತಯಶ್ಚಾನ್ಯೇ ದಿಷ್ಟಂ ಮನ್ಯೇ ದುರತ್ಯಯಮ್ ॥೨೬॥

ನಿನ್ನ ತಪ್ಪಿನಿಂದಾಗಿ ಮಹಾರಥರಾದ ನಿನ್ನ ಸಹೋದರರನ್ನೂ ಮತ್ತು ಬೇರೆ ನಿನ್ನ ಬಂಧುಗಳನ್ನೂ, ನಾವು ಕೊಂದಿದ್ದೇವೆ. ಅದೃಷ್ಟವನ್ನು ಮೀರಲಾಗದು ಎಂದು ಭಾವಿಸುತ್ತೇನೆ.

ಸ್ನುಷಾಶ್ಚ ಪ್ರಸ್ನುಷಾಶ್ಚೈವ ಧೃತರಾಷ್ಟ್ರಸ್ಯ ವಿಹ್ವಲಾಃ ।
ಗರ್ಹಯಿಷ್ಯಂತಿ ನೋ ನೂನಂ ವಿಧವಾಃ ಶೋಕಕರ್ಶಿತಾಃ ॥೨೭॥

ಧೃತರಾಷ್ಟ್ರನ ಸೊಸೆಯಂದಿರು ಮತ್ತು ಅವರ ಸೊಸೆಯಂದಿರು ವಿಧವೆಯರಾಗಿ ದುಃಖದಿಂದ ನಿಶ್ಚಯವಾಗಿಯೂ ನಮ್ಮನ್ನು ನಿಂದಿಸುವರು.

ಸಂಜಯಃ

ಏವಮುಕ್ತ್ವಾ ಸುದುಃಖಾರ್ತೋ ನಿಶಶ್ವಾಸ ಸ ಪಾರ್ಥಿವಃ ।
ವಿಲಲಾಪ ಚಿರಂ ಚಾಪಿ ಧರ್ಮಸೂನುರ್ಯುಧಿಷ್ಠಿರಃ ॥೨೮॥

ಸಂಜಯ– ಹೀಗೆ ಹೇಳಿ ರಾಜ ಧರ್ಮರಾಜನು ಬಹಳವಾಗಿ ದುಃಖಿಸುತ್ತಾ ನಿಟ್ಟುಸಿರನ್ನು ಬಿಟ್ಟನು. ಧರ್ಮಪುತ್ರನಾದ ಯುಧಿಷ್ಠಿರನು ಬಹಳ ಸಮಯದವರೆಗೆ ಅತ್ತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ದುರ್ಯೋಧನಪ್ರಹರಣೇ ಯುಧಿಷ್ಠಿರಪ್ರಲಾಪೋ ನಾಮ
ಏಕೋನತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತನೆಯ ಅಧ್ಯಾಯ

ಭೀಮನು ಅನ್ಯಾಯ ಮಾಡಿದ್ದಾನೆ ಎಂದು ಅಂದುಕೊಂಡು ಬಲರಾಮನು ನೇಗಿಲನ್ನು ಹಿಡಿದುಕೊಂಡು ಭೀಮನ ಕಡೆಗೆ ಬರುವುದು. ಕೃಷ್ಣನು ಅವನನ್ನು ಸಮಾಧಾನಪಡಿಸಿದ್ದು ಮತ್ತು ಬಲರಾಮನು ದ್ವಾರಕೆಗೆ ಹೋದದ್ದು. ಧರ್ಮರಾಜನು ಕೃಷ್ಣ ಮತ್ತು ಭೀಮರ ಜೊತೆಗೆ ಮಾತನಾಡಿದ್ದು.

ಧೃತರಾಷ್ಟ್ರಃ

ಅಧರ್ಮೇಣ ಹತಂ ದೃಷ್ಟ್ವಾ ರಾಜಾನಂ ಮಾಧವೋತ್ತಮಃ ।
ಕಿಮಬ್ರವೀತ್ ತದಾ ಸೂತ ಬಲದೇವೋ ಮಹಾಬಲಃ ॥೧॥

ಧೃತರಾಷ್ಟ್ರ– ಸೂತನೇ! ರಾಜನಾದ ದುರ್ಯೋಧನನು ಅಧರ್ಮಮಾರ್ಗದಲ್ಲಿ ಹತನಾದುದನ್ನು ನೋಡಿ ಮಾಧವೋತ್ತಮನಾದ ಶ್ರೀಕೃಷ್ಣನು ಏನು ಹೇಳಿದನು? ಮಹಾಬಲಶಾಲಿಯಾದ ಬಲರಾಮನು ಏನು ಹೇಳಿದನು?

ಗದಾಯುದ್ಧವಿಶೇಷಜ್ಞೋ ಗದಾಯುದ್ಧಸ್ಯ ಪಾರಗಃ ।
ಕೃತವಾನ್ ರೌಹಿಣೇಯೋ ಯತ್ ತನ್ಮಮಾಚಕ್ಷ್ವ ಸಂಜಯ ॥೨॥

ಗದಾಯುದ್ಧದ ವಿಶೇಷವನ್ನು ತಿಳಿದಿರುವ ಹಾಗೂ ಗದಾಯುದ್ಧದಲ್ಲಿ ಪಾರಂಗತನಾದ ಬಲರಾಮನು ಏನು ಮಾಡಿದನು? ಅದನ್ನು ನನಗೆ ಹೇಳು.

ಸಂಜಯಃ

ಶಿರಸ್ಯಭಿಹತಂ ದೃಷ್ಟ್ವಾ ಭೀಮಸೇನೇನ ತೇ ಸುತಮ್ ।
ರಾಮಃ ಪ್ರಹರತಾಂ ಶ್ರೇಷ್ಠಶ್ಚುಕ್ಷೋಪ ಬಲವದ್ ಬಲೀ ॥೩॥

ಸಂಜಯ– ಭೀಮನು ನಿನ್ನ ಮಗನ ತಲೆಯನ್ನು ಮರ್ದಿಸಿದ್ದನ್ನು ನೋಡಿ ಯುದ್ಧ ಮಾಡುವವರಲ್ಲಿಯೇ ಶ್ರೇಷ್ಠನಾದ ಬಲಶಾಲಿಯಾದ ಬಲರಾಮನು ಕೋಪಗೊಂಡನು.

ತತೋ ಮಧ್ಯೇ ನರೇಂದ್ರಾಣಾಮೂರ್ಧ್ವಬಾಹುರ್ಹಲಾಯುಧಃ ।
ಕುರ್ವನ್ನಾರ್ತಸ್ವರಂ ಘೋರಂ ಧಿಗ್ಧಿಗಿತಿ ಚಾಬ್ರವೀತ್ ॥೪॥

ಊರ್ಧ್ವಬಾಹುವಾದ ಬಲರಾಮನು ಎಲ್ಲಾ ರಾಜರ ಮಧ್ಯದಲ್ಲಿ ಆರ್ತಸ್ವರವನ್ನು ಮಾಡುತ್ತಾ 'ಧಿಕ್ಕಾರ! ಧಿಕ್ಕಾರ!' ಎಂದು ಹೇಳಿದನು.

ಬಲದೇವಃ

ಅಹೋ ಧಿಗ್ಧಿಗಧೋ ನಾಭೇಃ ಪ್ರಹೃತಂ ಸತ್ಯವಿಕ್ರಮೇ ।
ನೈತದ್ ದೃಷ್ಟಂ ಗದಾಯುದ್ಧೇ ಕೃತವಾನ್ ಯದ್ ವೃಕೋದರಃ ॥೫॥

ಬಲದೇವ– 'ಅಹೋ! ಧಿಕ್ಕಾರ! ಧಿಕ್ಕಾರ! ಸತ್ಯವಾದ ಪರಾಕ್ರಮ ತೋರಿಸುತ್ತಾ ಧರ್ಮದ ಚೌಕಟ್ಟಿನಲ್ಲಿ ನಡೆಯುವ ಯುದ್ಧದಲ್ಲಿ ನಾಭಿಯ ಕೆಳಭಾಗಕ್ಕೆ ಹೊಡೆದಿದ್ದಾನೆ. ಭೀಮನು ಮಾಡಿದ ಕಾರ್ಯವು ಯಾವ ಗದಾಯುದ್ಧದಲ್ಲಿಯೂ ನಡೆದದ್ದು ಕಾಣಿಸುವುದಿಲ್ಲ.

ಅಧೋ ನಾಭ್ಯಾ ನ ಹಂತವ್ಯಮಿತಿ ಶಾಸ್ತ್ರಸ್ಯ ನಿಶ್ಚಯಃ ।
ಅಯಂ ತು ಶಾಸ್ತ್ರಮೂಢಸ್ತು ಸ್ವಚ್ಛಂದಾತ್ ಪರಿವರ್ತತೇ ॥೬॥

'ಗದಾಯುದ್ಧದಲ್ಲಿ ನಾಭಿಗಿಂತ ಕೆಳಭಾಗಕ್ಕೆ ಹೊಡೆಯಬಾರದು' ಎಂಬುದು ಶಾಸ್ತ್ರವು ಮಾಡಿದ ನಿರ್ಣಯ. ಶಾಸ್ತ್ರದ ವಿಷಯದಲ್ಲಿ ಮೂರ್ಖನಾದ ಈ ಭೀಮನು ಸ್ವೇಚ್ಛೆಯಿಂದ ವರ್ತಿಸಿದ್ದಾನೆ.

ಸಂಜಯಃ

ತಸ್ಯ ತತ್ತದ್ ಬ್ರುವಾಣಸ್ಯ ರೋಷಃ ಸಮಭವನ್ಮಹಾನ್ ।
ತತೋ ಲಾಂಗಲಮುದ್ಯಮ್ಯ ಭೀಮಮಭ್ಯದ್ರವದ್ ಬಲೀ ॥೭॥

ಸಂಜಯ– ಹೀಗೆ ಹೇಳುತ್ತಿದ್ದಾಗ ಬಲರಾಮನಿಗೆ ಬಹಳವಾದ ಕೋಪವು ಉಂಟಾಗಿತ್ತು. ಬಲರಾಮನು ತನ್ನ ಆಯುಧವಾದ ನೇಗಿಲನ್ನು ಹಿಡಿದುಕೊಂಡು ಭೀಮನ ಮೇಲೆ ಆಕ್ರಮಣ ಮಾಡಲು ಮುಂದಾದನು.

ತಸ್ಯೋರ್ಧ್ವಬಾಹೋಃ ಸದೃಶಂ ರೂಪಮಾಸೀನ್ಮಹಾತ್ಮನಃ ।
ಬಹುಧಾತುವಿಚಿತ್ರಸ್ಯ ಶ್ವೇತಸ್ಯೇವ ಮಹಾಗಿರೇಃ ॥೮॥

ಉದ್ದನೆಯ ಬಾಹುವುಳ್ಳ ಮಹಾತ್ಮನಾದ ಬಲರಾಮನ ಶರೀರವು ಅನೇಕ ಗೈರಿಕಾದಿ ಚಿತ್ರಧಾತುಗಳುಳ್ಳ ಬೆಳ್ಳಗಿನ ಮಹಾಪರ್ವತಕ್ಕೆ ಸದೃಶವಾದ ರೂಪವುಳ್ಳದ್ದಾಗಿತ್ತು.

ಭ್ರಾತೃಭಿಃ ಸಹಿತೋ ಭೀಮಃ ಸಾರ್ಜುನೈರಸ್ತ್ರಕೋವಿದೈಃ ।
ನ ವಿವ್ಯಥೇ ಮಹಾರಾಜ ದೃಷ್ಟ್ವಾ ಹಲಧರಂ ಬಲೀ ॥೯॥

ಮಹಾರಾಜನೇ! ಹಲಾಯುಧವನ್ನು ಹಿಡಿದುಕೊಂಡಿದ್ದ ಬಲರಾಮನನ್ನು ನೋಡಿ ಭೀಮನಾಗಲೀ, ಅಸ್ತ್ರಜ್ಞರಾದ ಅರ್ಜುನ ಮೊದಲಾದ ಅವನ ಸಹೋದರರಾಗಲೀ ದುಃಖಿತರಾಗಲಿಲ್ಲ.

ಅಥ ರಾಮಂ ನಿಜಗ್ರಾಹ ಕೇಶವೋ ವಿನಯಾನ್ವಿತಃ ।
ಬಾಹುಭ್ಯಾಂ ಪೀನವೃತ್ತಾಭ್ಯಾಂ ಪ್ರಯತ್ನಾದ್ ಬಲಿನಂ ಬಲೀ ॥೧೦॥

ಅನಂತರ ಮಹಾಬಲವುಳ್ಳ ಶ್ರೀಕೃಷ್ಣನು ನಯದಿಂದ ಬಲಶಾಲಿಯಾದ ಬಲರಾಮನನ್ನು ದಷ್ಟಪುಷ್ಟವಾದ ತನ್ನ ಬಾಹುಗಳಿಂದ ಪ್ರಯತ್ನಪೂರ್ವಕವಾಗಿ ಹಿಡಿದನು.

ಸಿತಾಸಿತೌ ಯದುವರೌ ಶುಶುಭಾತೇऽಧಿಕಂ ತತಃ ।
ಸಂಗತಾವಿವ ರಾಜೇಂದ್ರ ಕೈಲಾಸಾಂಜನಪರ್ವತೌ ॥೧೧॥

ರಾಜೇಂದ್ರನೇ! ಬೆಳ್ಳಗಿನ ಬಲರಾಮ ಮತ್ತು ಕೃಷ್ಣವರ್ಣದ ಶ್ರೀಕೃಷ್ಣ - ಈ ಯದುಶ್ರೇಷ್ಠರೀರ್ವರೂ ಕೈಲಾಸ ಮತ್ತು ಅಂಜನಪರ್ವತಗಳು ಒಟ್ಟು ಸೇರಿದಂತೆ ಬಹಳವಾಗಿ ಶೋಭಿಸಿದರು.

ನಭೋಗತೌ ಯಥಾ ರಾಜನ್ ಚಂದ್ರಸೂರ್ಯೌ ದಿನಕ್ಷಯೇ ॥೧೨॥

ರಾಜನೇ! ಸಾಯಂಕಾಲದ ಹೊತ್ತಿಗೆ ಆಕಾಶದಲ್ಲಿ ಇರುವ ಚಂದ್ರ ಮತ್ತು ಸೂರ್ಯರಂತೆ ಕಾಣಿಸಿದರು.

ಉವಾಚ ಚೈನಂ ಸಂರಬ್ಧಂ ಶಮಯನ್ನಿವ ಕೇಶವಃ ॥೧೩॥

ಬಹಳ ಕೋಪಕ್ಕೊಳಗಾದ ಬಲರಾಮನನ್ನು ಸಮಾಧಾನಪಡಿಸುವ ರೀತಿಯಲ್ಲಿ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ.

ಶ್ರೀಭಗವಾನ್

ಆತ್ಮವೃದ್ಧಿರ್ಮಿತ್ರವೃದ್ಧಿರ್ಮಿತ್ರಮಿತ್ರೋದಯಸ್ತಥಾ ।
ವಿಪರೀತಂ ದ್ವಿಷತ್ಸ್ವೇತತ್ ಷಡ್ವಿಧಾ ವೃದ್ಧಿರಾತ್ಮನಃ ॥೧೪॥

ಶ್ರೀಭಗವಾನ್– ಒಬ್ಬನಿಗೆ ಆರು ವಿಧದ ಏಳಿಗೆಯು ಉಂಟಾಗುವವು. ಅದರಲ್ಲಿ ತನ್ನ ವೃದ್ಧಿ, ತನ್ನ ಮಿತ್ರರ ಶ್ರೇಯಸ್ಸು, ತನ್ನ ಮಿತ್ರರಿಗೆ ಮಿತ್ರರಾದವರ ಏಳಿಗೆ ಇವು ತನ್ನ ಪಕ್ಷಕ್ಕೆ ಸಂಬಂಧಿಸಿದ ವೃದ್ಧಿಗಳು. ಇನ್ನು ಶತ್ರುಪಕ್ಷದ ನಾಶವೂ ತನ್ನ ವೃದ್ಧಿ ಎಂದು ಪರಿಗಣಿಸಲ್ಪಡುತ್ತದೆ. ಅದರಲ್ಲಿ ತನ್ನ ನೇರಶತ್ರುವಿನ ನಾಶ, ಶತ್ರುವಿನ ಮಿತ್ರನ ನಾಶ, ತನ್ನ ಶತ್ರುವಿನ ಮಿತ್ರರ ಮಿತ್ರರ ನಾಶ ಎಂಬುದಾಗಿ ಮೂರು ವಿಧದ ಶತ್ರುನಾಶಗಳು ತನ್ನ ವೃದ್ಧಿ ಎಂದೆನಿಸುತ್ತವೆ. ಹೀಗೆ ಒಬ್ಬನಿಗೆ ಆರು ವಿಧದ ವೃದ್ಧಿಗಳು ಉಂಟಾಗುತ್ತವೆ.

ಆತ್ಮನ್ಯಪಿ ಚ ಮಿತ್ರೇ ಚ ವಿಪರೀತಂ ಯದಾ ಭವೇತ್ ।
ತದಾ ವಿದ್ವಾನ್ ಮನೋಜ್ಞಾಭಿಸ್ತದಾ ಶಾಂತಿಕರೋ ಭವೇತ್ ॥೧೫॥

ತನ್ನ ನಾಶ ಮತ್ತು ತನ್ನವರ ನಾಶವು ಯಾವಾಗ ಉಂಟಾಗುವುದೋ ಆಗ ಜ್ಞಾನಿಯಾದವನು ಮನೋಹಾರಿಗಳಾದ ಮಾತುಗಳಿಂದ ಮತ್ತು ಕೃತಿಗಳಿಂದ ನಾಶದಿಂದುಂಟಾದ ದುಃಖವನ್ನು ಶಮನ ಮಾಡಿಕೊಳ್ಳಬೇಕು.

ಅಸ್ಮಾಕಂ ಸಹಜಂ ಮಿತ್ರಂ ಪಾಂಡವಾಃ ಶುದ್ಧಪೌರುಷಾಃ ।
ಸ್ವಕಾಃ ಪಿತೃಷ್ವಸುಃ ಪುತ್ರಾಃ ಪರೈಶ್ಚ ನಿಕೃತಾ ಭೃಶಮ್ ॥೧೬॥

ವಂಚನೆಯಿಲ್ಲದ ಶುದ್ಧಪೌರುಷವುಳ್ಳ ಪಾಂಡವರು ನಮಗೆ ಸ್ವಾಭಾವಿಕವಾದ ಮಿತ್ರರು. ಇವರು ನಮ್ಮವರು, ನಮ್ಮ ಸೋದರತ್ತೆಯ ಮಕ್ಕಳು, ಹಾಗೆಯೇ ಕೌರವರ ಮೋಸಕ್ಕೆ ಬಹಳವಾಗಿ ಬಲಿಯಾದವರು.

ಪ್ರತಿಜ್ಞಾಪಾಲನಂ ಧರ್ಮಃ ಕ್ಷತ್ರಿಯಸ್ಯೇತಿ ವೇತ್ಥ ತತ್ ॥೧೭॥

ಕ್ಷತ್ರಿಯನಾದವನು ತನ್ನ ಪ್ರತಿಜ್ಞಾಪಾಲನೆಯನ್ನು ಮಾಡಲೇಬೇಕೆಂಬುದನ್ನು ತಿಳಿದುಕೊಳ್ಳು.

ಸುಯೋಧನಸ್ಯ ಗದಯಾ ಭಕ್ತಾ ಸ್ಯ್ಯಾರೂ ಮಹಾಹವೇ ।
ಇತಿ ಪೂರ್ವಂ ಪ್ರತಿಜ್ಞಾತಂ ಭೀಮೇನ ಹಿ ಸಭಾತಳೇ ॥೧೮॥

ಹಿಂದೆ ಸಭಾಮಧ್ಯದಲ್ಲಿ ಭೀಮನು ಹೀಗೆ ಪ್ರತಿಜ್ಞೆಯನ್ನು ಮಾಡಿದ್ದನು: 'ಮಹಾಯುದ್ಧದಲ್ಲಿ ಗದೆಯಿಂದ ದುರ್ಯೋಧನನ ತೊಡೆಯನ್ನು ಮುರಿಯುತ್ತೇನೆ' ಎಂಬುದು ಭೀಮನ ಪ್ರತಿಜ್ಞೆಯಾಗಿತ್ತು.

ಮೈತ್ರೇಯೇಣಾಭಿಶಪ್ತಶ್ಚ ಪೂರ್ವಮೇವ ಮಹರ್ಷಿಣಾ ।
ಊರೂ ಭಂಕ್ಷ್ಯತಿ ತೇ ವೀರೋ ಗದಯೇತಿ ಪರಂತಪ ॥೧೯॥

ಶತ್ರುತಾಪಕನೇ! ಹಿಂದೆಯೇ ಮೈತ್ರೇಯನು ದುರ್ಯೋಧನನಿಗೆ 'ವೀರನು ನಿನ್ನ ತೊಡೆಗಳನ್ನು ಗದೆಯಿಂದ ಮುರಿಯುವನು' ಎಂದು ಶಾಪವನ್ನು ಕೊಟ್ಟಿದ್ದನು.

ಅತೋ ದೋಷಂ ನ ಪಶ್ಯಾಮಿ ಮಾ ಕ್ರುಧಸ್ತ್ವಂ ಪ್ರಲಂಬಹನ್ ॥೨೦॥

ಪ್ರಲಂಬಾಸುರನನ್ನು ಕೊಂದ ಬಲರಾಮನೇ! ಆದ್ದರಿಂದ ಇದರಲ್ಲಿ ದೋಷವೇನೂ ಕಾಣಿಸುತ್ತಿಲ್ಲ. ನೀನು ಕೋಪಗೊಳ್ಳಬೇಡ.

ಯೋನ್ಯೈರ್ಹಾರ್ದ್ದೈಶ್ಚ ಸಂಬಂಧೈಃ ಸಂಬದ್ಧಾಃ ಸ್ಮೇಹ ಪಾಂಡವೈಃ ।
ತೇಷಾಂ ವೃದ್ಧ್ಯಾ ಹಿ ವೃದ್ಧಿರ್ನೋ ಮಾ ಕ್ರುಧಸ್ತ್ವಂ ನರರ್ಷಭ ॥೨೧॥

ಕುಂತಿ ಮತ್ತು ಸುಭದ್ರೆಯರ ವಿವಾಹಕನ್ಯಾದಾನದಿಂದಾಗಿ ಹುಟ್ಟಿನಿಂದಲೂ, ಮನಸ್ಸಿನಿಂದಲೂ ನಮಗೆ ಸಂಬಂಧವುಳ್ಳವರು ಈ ಪಾಂಡವರು. ಅವರ ಏಳಿಗೆಯೇ ನಮ್ಮ ಏಳಿಗೆ. ಆದ್ದರಿಂದ ಕೋಪಗೊಳ್ಳಬೇಡ.

ಸಂಜಯಃ

ವಾಸುದೇವವಚಃ ಶ್ರುತ್ವಾ ಸೀರಭೃತ್ ಪ್ರಾಹ ಧರ್ಮವಿತ್ ॥೨೨॥

ಸಂಜಯ– ಶ್ರೀಕೃಷ್ಣನ ಮಾತನ್ನು ಕೇಳಿ ಧರ್ಮಜ್ಞನಾದ ಬಲರಾಮನು ಹೇಳುತ್ತಾನೆ.

ಶ್ರೀರಾಮಃ (ಬಲರಾಮಃ)

ಧರ್ಮಶ್ಚ ಧಾರಿತಃ ಸದ್ಭಿಃ ಸಹ ದ್ವಾಭ್ಯಾಂ ನಿಯಚ್ಛತಿ ।
ಅರ್ಥಶ್ಚಾಪ್ಯತಿಲುಬ್ಧಸ್ಯ ಕಾಮಶ್ಚಾತ್ತಿಪ್ರಸಂಗಿನಃ ॥೨೩॥

ಬಲರಾಮ– ಸಜ್ಜನರು ಧರ್ಮವನ್ನು ಪಾಲಿಸುತ್ತಾರೆ. ಆದರೆ ಆ ಧರ್ಮವು ಅರ್ಥ ಮತ್ತು ಕಾಮದಿಂದ ನಿಯಂತ್ರಿಸಲ್ಪಡುತ್ತದೆ. ಜಿಪುಣನ ಅರ್ಥವು ಧರ್ಮವನ್ನು ಸಂಕೋಚಕ್ಕೆ ಒಳಪಡಿಸುತ್ತದೆ. ಅತಿಕಾಮಾಸಕ್ತನ ಕಾಮವು ಧರ್ಮವನ್ನು ಸಂಕೋಚಗೊಳಿಸುತ್ತದೆ.

ಧರ್ಮಾರ್ಥೌ ಧರ್ಮಕಾಮೌ ಚ ಕಾಮಾರ್ಥೌ ಚಾಪ್ಯಪೀಡಯನ್ ।
ಧರ್ಮಾರ್ಥಕಾಮಾನ್ ಯೋಽಭ್ಯೇತಿ ಸೋಽತ್ಯಂತಂ ಸುಖಮೇಧತೇ ॥

ಯಾರು ಧರ್ಮದಿಂದ ಅರ್ಥವನ್ನು, ಕಾಮವನ್ನೂ ಹಾನಿಪಡಿಸುವುದಿಲ್ಲವೋ, ಅರ್ಥದಿಂದ ಧರ್ಮ ಮತು ಕಾಮವನ್ನು ಹಾನಿಗೊಳಿಸುವುದಿಲ್ಲವೋ, ಕಾಮದಿಂದ ಧರ್ಮ ಮತು ಅರ್ಥವನ್ನು ಸಂಕೋಚಪಡಿಸುವುದಿಲ್ಲವೋ, ಇದಕ್ಕೆ ಹೊರತಾಗಿ ಯಥೋಚಿತವಾಗಿ ಧರ್ಮ, ಅರ್ಥ ಮತ್ತು ಕಾಮಗಳನ್ನು ಉಪಯೋಗಿಸಿಕೊಳ್ಳುತ್ತಾನೆಯೋ ಅವನು ಬಹಳವಾಗಿ ಸುಖವನ್ನು ಅನುಭವಿಸುತ್ತಾನೆ.

ತದಿದಂ ವ್ಯಾಕುಲಂ ಸರ್ವಂ ಕೃತಂ ಧರ್ಮಸ್ಯ ಪೀಡನಾತ್ ।
ಭೀಮಸೇನೇನ ಗೋವಿಂದ ಕಾಮಂ ತ್ವಂ ತು ಯಥಾऽऽತ್ಥ ಮಾಮ್ ॥

ಭೀಮನು (ಅರ್ಥಕ್ಕಾಗಿ) ಧರ್ಮವನ್ನು ಉಲ್ಲಂಘಿಸಿ ಎಲ್ಲವನ್ನೂ ಹಾಳುಮಾಡಿದ್ದಾನೆ. ಗೋವಿಂದನೇ! ನೀನು ಹೇಳಿದ್ದೂ ಕೂಡ ಕಾಮವನ್ನಾಶ್ರಯಿಸಿಯೇ ಹೊರತು ಧರ್ಮಸಮ್ಮತವಾದುದಲ್ಲ.

ವಾಸುದೇವಃ

ಅರೋಷಣೋऽಥ ಧರ್ಮಾತ್ಮಾ ಸತತಂ ಧರ್ಮವತ್ಸಲಃ ।
ಭವಾನ್ ಪ್ರಖ್ಯಾಯತೇ ಲೋಕೇ ತಸ್ಮಾತ್ ಸಂಶಾಮ್ಯ ಮಾ ಕ್ರುಧಃ ॥

ವಾಸುದೇವ– ನೀನು ಲೋಕದಲ್ಲಿ 'ಕೋಪವಿಲ್ಲದವನು', 'ಧರ್ಮಿಷ್ಠ' 'ಧರ್ಮವತ್ಸಲ' ಎಂಬುದಾಗಿ ಪ್ರಸಿದ್ಧನಾಗಿರುವಿ. ಆದ್ದರಿಂದ ಸಮಾಧಾನವನ್ನು ಹೊಂದು. ಕೋಪಿಸಿಕೊಳ್ಳಬೇಡ.

ಪ್ರಾಪ್ತಂ ಕಲಿಯುಗಂ ವಿದ್ಧಿ ಪ್ರತಿಜ್ಞಾಂ ಪಾಂಡವಸ್ಯ ಚ ।
ಆನೃಣ್ಯಂ ಯಾತು ವೈರಸ್ಯ ಪ್ರತಿಜ್ಞಾಯಾಶ್ಚ ಪಾಂಡವಃ ॥೨೭॥

ಕಲಿಯುಗವು ಪ್ರಾಪ್ತವಾಗಿರುವುದನ್ನು ತಿಳಿದುಕೊ. ಭೀಮನ ಪ್ರತಿಜ್ಞೆಯನ್ನೂ ತಿಳಿ. ಭೀಮನು ತನ್ನಲ್ಲಿದ್ದ ದ್ವೇಷವನ್ನು ಉಪಶಮನಗೊಳಿಸಲಿ. ತನ್ನ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳಲಿ.

ಗತಃ ಪುರುಷಶಾರ್ದೂಲೋ ಹತ್ವಾ ನೈಕೃತಿಕಂ ರಣೇ ॥೨೮॥

ನರಶ್ರೇಷ್ಠನಾದ ಭೀಮನು ಕಪಟಿಯಾದ ದುರ್ಯೋಧನನನ್ನು ಕೊಂದುಹಾಕಿದ್ದಾನೆ.

ನಿಕೃತ್ಯಾ ನಿಕೃತಿಪ್ರಜ್ಞಂ ಯೋ ಹನ್ಯಾದ್ ವೈರಿಣಂ ರಣೇ ।
ಅಧರ್ಮೋ ವಿದ್ಯತೇ ನಾತ್ರ ಯದ್ ಭೀಮೋ ಹತವಾನ್ ರಿಪುಮ್ ॥

ಕಪಟಿಯಾದ ಶತ್ರುವನ್ನು ರಣರಂಗದಲ್ಲಿ ಯಾವನು ಕಪಟದಿಂದಲೇ ಸಾಯಿಸುತ್ತಾನೆಯೋ ಅವನಲ್ಲಿ ಅಧರ್ಮವು ಇರುವುದಿಲ್ಲ. ಭೀಮನು ಆ ರೀತಿಯಲ್ಲಿಯೇ ದುರ್ಯೋಧನನನ್ನು ಕೊಂದಿರುತ್ತಾನೆ.

ಯುಧ್ಯಂತಂ ಸಮರೇ ವೀರಂ ಕುರುವೃಷ್ಣಿಯಶಸ್ಕರಮ್ ।
ಅನೇನ ಕರ್ಣಃ ಸಂದಿಷ್ಟಃ ಪೃಷ್ಠತೋ ಧನುರಚ್ಛಿನತ್ ॥೩೦॥

ತತಃ ಸಂಛಿನ್ನಧನ್ವಾನಂ ವಿರಥಂ ಪೌರುಷೇ ಸ್ಥಿತಮ್ ।
ವ್ಯಾಯುಧೀಕೃತ್ಯ ಹತವಾನ್ ಸೌಭದ್ರಮಪಲಾಯಿನಮ್ ॥೩೧॥

ಜನ್ಮಪ್ರಭೃತಿ ಲುಬ್ಧಶ್ಚ ಪಾಪಶ್ಚೈಷ ದುರಾತ್ಮವಾನ್ ।
ನಿಹತೋ ಭೀಮಸೇನೇನ ದುರ್ಬುದ್ಧಿಃ ಕುಲಪಾಂಸನಃ ॥೩೨॥

ಕುರುವಂಶಕ್ಕೂ ವೃಷ್ಣಿವಂಶಕ್ಕೂ ಕೀರ್ತಿಯನ್ನು ತಂದುಕೊಟ್ಟಿರುವ ಅಭಿಮನ್ಯುವು ಯುದ್ಧಮಾಡುತ್ತಿದ್ದಾಗ ಈ ದುರ್ಯೋಧನನು ಕರ್ಣನಿಗೆ ಆದೇಶಿಸಿ ಹಿಂಬದಿಯಿಂದ ಬಿಲ್ಲನ್ನು ತುಂಡರಿಸಿದನು. ಬಿಲ್ಲು ಮುರಿದರೂ ಪೌರುಷವನ್ನು ತೋರಿಸುತ್ತಾ ಯುದ್ಧದಲ್ಲಿ ಓಡಿಹೋಗದೆ ಕಾದಾಟವನ್ನು ಮಾಡುತ್ತಿದ್ದ ಅಭಿಮನ್ಯುವನ್ನು ಆಯುಧಶೂನ್ಯನನ್ನಾಗಿ ಮಾಡಿ ಕೊಂದಿದ್ದಾನೆ.

ಪ್ರತಿಜ್ಞಾಂ ಭೀಮಸೇನಸ್ಯ ತ್ರಯೋದಶಸಮಾರ್ಜಿತಾಮ್ ।
ಕಿಮರ್ಥಂ ನಾಭಿಜಾನಾತಿ ಯುಧ್ಯಮಾನೋ ಹಿ ವಿಶ್ರುತಾಮ್ ॥೩೩॥

ಭೀಮನು ಪ್ರತಿಜ್ಞೆಯನ್ನು ಮಾಡಿ ಹದಿಮೂರುವರ್ಷಗಳೇ ಕಳೆದರೂ, ಯುದ್ಧಕ್ಕೆ ಹೊರಟ ದುರ್ಯೋಧನನು ಪ್ರಸಿದ್ಧವಾದ ಈ ಪ್ರತಿಜ್ಞೆಯನ್ನು ಯಾಕೆ ತಿಳಿದುಕೊಳ್ಳಲಿಲ್ಲ?

ಊರ್ಧ್ವಮುತ್ಕಮ್ಯ ವೇಗೇನ ಜಿಘಾಂಸಂತಂ ವೃಕೋದರಃ ।
ಬಭಂಜ ಗದಯಾ ಚೋರೂ ನ ಸ್ಥಾನೇ ನ ಚ ಮಂಡಲೇ ॥೩೪॥

ಭೀಮನು ತನ್ನನ್ನು ಹೊಡೆಯುವ ಉದ್ದೇಶದಿಂದ ದುರ್ಯೋಧನನು ವೇಗವಾಗಿ ಮೇಲಕ್ಕೆ ಹಾರುತ್ತಿದ್ದಾಗ ಅವನ ತೊಡೆಗಳನ್ನು ಮುರಿದನು. ತೊಡೆಯನ್ನು ಮುರಿಯುವುದಕ್ಕಾಗಿಯೇ ಯಾವ ವ್ಯೂಹವನ್ನಾಗಲೀ ಮಂಡಲವನ್ನಾಗಲೀ ಭೀಮನು ರಚಿಸಿಕೊಂಡಿರಲಿಲ್ಲ.

ಸಂಜಯಃ

ಧರ್ಮಚ್ಛಲಮಿಮಂ ಶ್ರುತ್ವಾ ಕೇಶವಾತ್ ಸ ವಿಶಾಂಪತೇ ।
ನೈವ ಪ್ರೀತಮನಾ ರಾಮೋ ವಚನಂ ಪ್ರಾಹ ಸಂಸದಿ ॥೩೫॥

ಸಂಜಯ– ರಾಜನೇ! ಶ್ರೀಕೃಷ್ಣನು ಮಾಡಿದ ಧರ್ಮದ ಸಮರ್ಥನೆಯನ್ನು ಕೇಳಿ ಬಲರಾಮನು ಮನಸ್ಸಮಾಧಾನವನ್ನು ಹೊಂದಲಿಲ್ಲ. ಅವನು ಎಲ್ಲರು ಸೇರಿದ್ದ ಸಭೆಯಲ್ಲಿ ಹೀಗೆ ಹೇಳಿದನು.

ರಾಮಃ(ಬಲಭದ್ರಃ)

ಹತ್ವಾऽಧರ್ಮೇಣ ರಾಜಾನಂ ಧರ್ಮಾತ್ಮಾನಂ ಸುಯೋಧನಮ್ ।
ಜಿಹ್ಮಯೋಧೀತಿ ಲೋಕೇऽಸ್ಮಿನ್ ಖ್ಯಾತಿಂ ಯಾಸ್ಯತಿ ಪಾಂಡವಃ ॥೩೬॥

ಬಲರಾಮ– ಧರ್ಮಿಷ್ಠನಾದ ಸುಯೋಧನನನ್ನು ಅಧರ್ಮದಿಂದ ಕೊಂದು ಭೀಮನು ಕಪಟವಾಗಿ ಯುದ್ಧ ಮಾಡುವವನು ಎಂಬುದಾಗಿ ಲೋಕದಲ್ಲಿ ಕುಖ್ಯಾತಿಯನ್ನು ಹೊಂದುವನು.

ದುರ್ಯೋಧನೋऽಪಿ ಧರ್ಮಜ್ಞೋ ಲೋಕಾನ್ ಯಾಸ್ಯತಿ ಶಾಶ್ವತಾನ್ ।
ಋಜುಯೋಧೀ ಹತೋ ರಾಜಾ ಧಾರ್ತರಾಷ್ಟ್ರಃ ಸುದುರ್ಮದಃ ॥೩೭॥

ಧರ್ಮಜ್ಞನಾದ ಕಾಪಟ್ಯವಿಲ್ಲದೆ ನೇರವಾಗಿ ಯುದ್ಧ ಮಾಡಿ ಸತ್ತ ರಾಜ ದುರ್ಯೋಧನನಾದರೂ ಶಾಶ್ವತವಾದ ಲೋಕಕ್ಕೆ ಹೋಗುವನು.

ಯುದ್ಧದೀಕ್ಷಾಂ ಪ್ರವಿಶ್ಯಾಜೌ ರಣಯಜ್ಞಂ ವಿತತ್ಯ ಚ ।
ಹುತ್ವಾऽऽತ್ಮಾನಮಮಿತ್ರಾಗ್ನೌ ಪ್ರಾಪ್ತಶ್ಚಾವಭೃಥಂ ಯಶಃ ॥೩೮॥

ಯುದ್ಧದ ದೀಕ್ಷೆಯನ್ನು ಮಾಡಿಕೊಂಡು, ಯುದ್ಧವೆಂಬ ಯಜ್ಞವನ್ನು ನಡೆಸಿ, ತನ್ನನ್ನೇ ಯುದ್ಧಾಗ್ನಿಯಲ್ಲಿ ಹೋಮಿಸಿಕೊಂಡು ಯಾಗದ ಅವಭೃಥಸ್ನಾನವನ್ನು ಮಾಡಿ ಯಶಸ್ಸನ್ನು ಹೊಂದಿರುವನು.

ಸ್ವರ್ಗಂ ಗಂತಾ ಮಹಾರಾಜಃ ಸಸುಹೃಜ್ಜ್ಞಾತಿಬಾಂಧವಃ ॥೩೯॥

ಮಹಾರಾಜ ದುರ್ಯೋಧನನು ತನ್ನ ಮಿತ್ರರು ಬಂಧು-ಬಾಂಧವರೊಡನೆ ಸ್ವರ್ಗಕ್ಕೆ ಹೋಗುವನು.

ಸಂಜಯಃ

ಇತ್ಯುಕ್ತ್ವಾ ರಥಮಾಸ್ಥಾಯ ರೌಹಿಣೇಯಃ ಪ್ರತಾಪವಾನ್ ।
ಶ್ವೇತಾಭ್ರಶಿಖರಪ್ರಖ್ಯಃ ಪ್ರಯಯೌ ದ್ವಾರಕಾಂ ಪ್ರತಿ ॥೪೦॥

ಸಂಜಯ– ಪ್ರತಾಪಿಯಾದ ಬಿಳಿಮೋಡಕ್ಕೆ ಸದೃಶನಾದ ಬಲರಾಮನು ಹೀಗೆ ಹೇಳಿ ದ್ವಾರಕೆಗೆ ತೆರಳಿದನು.

ಪಾಂಚಾಲಾಶ್ಚ ಸವಾರ್ಷ್ಣೇಯಾಃ ಪಾಂಡವಾಶ್ಚ ವಿಶಾಂಪತೇ ।
ರಾಮೇ ದ್ವಾರವತೀಂ ಯಾತೇ ನಾತಿಪ್ರಮನಸೋಽಭವನ್ ॥೪೧॥

ಬಲರಾಮನು ಅಲ್ಲಿಂದ ದ್ವಾರಕೆಗೆ ಹೋದಾಗ ಪಾಂಚಾಲರು, ಯಾದವರು ಮತ್ತು ಪಾಂಡವರು ಮನಸ್ಸಿನಲ್ಲಿ ಅಸಮಾಧಾನಪಟ್ಟರು.

ತತೋ ಯುಧಿಷ್ಠಿರಂ ದೀನಂ ಚಿಂತಾಪರಮಧೋಮುಖಮ್ ।
ಶೋಕೋಪಹತಸಂತಪ್ತಂ ವಾಸುದೇವೋಽಬ್ರವೀದಿದಮ್ ॥೪೨॥

ಅನಂತರ ಚಿಂತಾಮಗ್ನನಾಗಿ ದುಃಖದಿಂದ ಬೆಂದು ಮುಖವನ್ನು ಕೆಳಗೆ ಹಾಕಿಕೊಂಡಿದ್ದ ಯುಧಿಷ್ಠಿರನಿಗೆ ವಾಸುದೇವನು ಹೀಗೆ ಹೇಳಿದನು.

ವಾಸುದೇವಃ

ಧರ್ಮರಾಜ ಕಿಮರ್ಥಂ ತ್ವಮಧರ್ಮಮನುಪಶ್ಯಸಿ ।
ಹತಬಂಧೋರ್ಯದೇತಸ್ಯ ಪತಿತಸ್ಯ ವಿಚೇತಸಃ ॥೪೩॥

ವಾಸುದೇವ– ನಿಶ್ಚೇಷ್ಟನಾಗಿ ಕೆಳಗೆ ಬಿದ್ದಿರುವ ಈ ದುರ್ಯೋಧನನ ಬಗ್ಗೆ ನೀನು ಏಕೆ ಅಧರ್ಮವನ್ನು ನೋಡುತ್ತಿರುವಿ?

ಸುಯೋಧನಸ್ಯ ಭೀಮೇನ ಮೃದ್ಯಮಾನಂ ಪದಾ ಶಿರಃ ॥೪೪॥

ಉಪಪ್ರೇಕ್ಷಸಿ ಕಸ್ಮಾತ್ ತ್ವಂ ಧರ್ಮಜ್ಞಸ್ತ್ವಂ ನರಾಧಿಪ ॥೪೫॥

ರಾಜನೇ! ಧರ್ಮವನ್ನು ತಿಳಿದಿರುವ ನೀನು ಭೀಮನು ದುರ್ಯೋಧನನ ತಲೆಯನ್ನು ತುಳಿಯುತ್ತಿರುವುದನ್ನು ಅಧರ್ಮವನ್ನಾಗಿ ಯಾಕೆ ನೋಡುತ್ತಿರುವಿ?

ಯುಧಿಷ್ಠಿರಃ

ನ ಮಮೈತತ್ ಪ್ರಿಯಂ ಕೃಷ್ಣ ಯದ್ ರಾಜಾನಂ ವೃಕೋದರಃ ।
ಪದಾ ಮೂರ್ಧ್ನ್ಯಸ್ಪೃಶತ್ ಕ್ರೋಧಾನ್ನ ಚ ಹೃಷ್ಯೇ ಕುಲಕ್ಷಯೇ ॥೪೬॥

ಯುಧಿಷ್ಠಿರ– ಕೃಷ್ಣನೇ! ಭೀಮನು ದುರ್ಯೋಧನನ ತಲೆಯನ್ನು ತನ್ನ ಕಾಲುಗಳಿಂದ ಕೋಪದಿಂದ ತುಳಿಯುತ್ತಿರುವುದು ನನಗೆ ಇಷ್ಟವಾಗಲಿಲ್ಲ. ಕುರುಕುಲವೇ ನಾಶವಾಗುತ್ತಿರುವಾಗ ನಾನು ಸಂತೋಷಪಡಲಾರೆ.

ನಿಕೃತ್ಯಾ ನಿಕೃತಾ ನಿತ್ಯಂ ಧೃತರಾಷ್ಟ್ರಸುತೈರ್ವಯಮ್ ।
ಬಹೂನಿ ಪರುಷಾಣ್ಯುಕ್ತ್ವಾ ವನಂ ಪ್ರಸ್ಥಾಪಿತಾ ವಯಮ್ ॥೪೭॥

ಇಲ್ಲಿಯವರೆಗೆ ಧೃತರಾಷ್ಟ್ರನ ಮಕ್ಕಳೂ ಮೋಸದಿಂದ ನಮ್ಮನ್ನು ವಂಚನೆಗೊಳಪಡಿಸಿದ್ದರು. ಕ್ರೂರವಾದ ಕಠೋರಮಾತುಗಳನ್ನು ಆಡಿ ನಮ್ಮನ್ನು ಕಾಡಿಗೆ ಕಳುಹಿಸಿದ್ದರು.

ಭೀಮಸೇನಸ್ಯ ತದ್ ದುಃಖಮತೀವ ಹೃದಿ ವರ್ತತೇ ।
ಇತಿ ಸಂಚಿಂತ್ಯ ವಾರ್ಷ್ಣೇಯ ಮಯ್ಯೇತತ್ ಸಮುಪೇಕ್ಷಿತಮ್ ॥೪೮॥

ಆ ದುಃಖವು ಭೀಮಸೇನನ ಹೃದಯದಲ್ಲಿ ಬಹಳವಾಗಿ ಇತ್ತು. ಶ್ರೀಕೃಷ್ಣನೇ! ಹೀಗೆ ಆಲೋಚಿಸಿ ನಾನು ಅವನ ಈ ಕಾರ್ಯವನ್ನು ಉಪೇಕ್ಷಿಸಿರುವೆನು.

ತಸ್ಮಾದ್ದತ್ತ್ವಾऽಕೃತಪ್ರಜ್ಞಂ ಲುಬ್ಧಂ ಕಾಮವಶಾನುಗಮ್ ।
ಲಭತಾಂ ಪಾಂಡವಃ ಕಾಮಂ ಧರ್ಮೋऽಧರ್ಮೋऽಪಿ ವಾ ಕೃತಃ ॥

ಯುದ್ಧದ ದೀಕ್ಷೆಯನ್ನು ಮಾಡಿಕೊಂಡು, ಯುದ್ಧವೆಂಬ ಯಜ್ಞವನ್ನು ನಡೆಸಿ, ತನ್ನನ್ನೇ ಯುದ್ಧಾಗ್ನಿಯಲ್ಲಿ ಹೋಮಿಸಿಕೊಂಡು ಯಾಗದ ಅವಭೃಥಸ್ನಾನವನ್ನು ಮಾಡಿ ಯಶಸ್ಸನ್ನು ಹೊಂದಿರುವನು.

ಸ್ವರ್ಗಂ ಗಂತಾ ಮಹಾರಾಜಃ ಸಸುಹೃಜ್ಜ್ಞಾತಿಬಾಂಧವಃ ॥೩೯॥

ಮಹಾರಾಜ ದುರ್ಯೋಧನನು ತನ್ನ ಮಿತ್ರರು ಬಂಧು-ಬಾಂಧವರೊಡನೆ ಸ್ವರ್ಗಕ್ಕೆ ಹೋಗುವನು.

ಸಂಜಯಃ

ಇತ್ಯುಕ್ತ್ವಾ ರಥಮಾಸ್ಥಾಯ ರೌಹಿಣೇಯಃ ಪ್ರತಾಪವಾನ್ ।
ಶ್ವೇತಾಭ್ರಶಿಖರಪ್ರಖ್ಯಃ ಪ್ರಯಯೌ ದ್ವಾರಕಾಂ ಪ್ರತಿ ॥೪೦॥

ಸಂಜಯ– ಪ್ರತಾಪಿಯಾದ ಬಿಳಿಮೋಡಕ್ಕೆ ಸದೃಶನಾದ ಬಲರಾಮನು ಹೀಗೆ ಹೇಳಿ ದ್ವಾರಕೆಗೆ ತೆರಳಿದನು.

ಪಾಂಚಾಲಾಶ್ಚ ಸವಾರ್ಷ್ಣೇಯಾಃ ಪಾಂಡವಾಶ್ಚ ವಿಶಾಂಪತೇ ।
ರಾಮೇ ದ್ವಾರವತೀಂ ಯಾತೇ ನಾತಿಪ್ರಮನಸೋಽಭವನ್ ॥೪೧॥

ಬಲರಾಮನು ಅಲ್ಲಿಂದ ದ್ವಾರಕೆಗೆ ಹೋದಾಗ ಪಾಂಚಾಲರು, ಯಾದವರು ಮತ್ತು ಪಾಂಡವರು ಮನಸ್ಸಿನಲ್ಲಿ ಅಸಮಾಧಾನಪಟ್ಟರು.

ತತೋ ಯುಧಿಷ್ಠಿರಂ ದೀನಂ ಚಿಂತಾಪರಮಧೋಮುಖಮ್ ।
ಶೋಕೋಪಹತಸಂತಪ್ತಂ ವಾಸುದೇವೋಽಬ್ರವೀದಿದಮ್ ॥೪೨॥

ಅನಂತರ ಚಿಂತಾಮಗ್ನನಾಗಿ ದುಃಖದಿಂದ ಬೆಂದು ಮುಖವನ್ನು ಕೆಳಗೆ ಹಾಕಿಕೊಂಡಿದ್ದ ಯುಧಿಷ್ಠಿರನಿಗೆ ವಾಸುದೇವನು ಹೀಗೆ ಹೇಳಿದನು.

ವಾಸುದೇವಃ

ಧರ್ಮರಾಜ ಕಿಮರ್ಥಂ ತ್ವಮಧರ್ಮಮನುಪಶ್ಯಸಿ ।
ಹತಬಂಧೋರ್ಯದೇತಸ್ಯ ಪತಿತಸ್ಯ ವಿಚೇತಸಃ ॥೪೩॥

ವಾಸುದೇವ– ನಿಶ್ಚೇಷ್ಟನಾಗಿ ಕೆಳಗೆ ಬಿದ್ದಿರುವ ಈ ದುರ್ಯೋಧನನ ಬಗ್ಗೆ ನೀನು ಏಕೆ ಅಧರ್ಮವನ್ನು ನೋಡುತ್ತಿರುವಿ?

ಸುಯೋಧನಸ್ಯ ಭೀಮೇನ ಮೃದ್ಯಮಾನಂ ಪದಾ ಶಿರಃ ॥೪೪॥

ಉಪಪ್ರೇಕ್ಷಸಿ ಕಸ್ಮಾತ್ ತ್ವಂ ಧರ್ಮಜ್ಞಸ್ತ್ವಂ ನರಾಧಿಪ ॥೪೫॥

ರಾಜನೇ! ಧರ್ಮವನ್ನು ತಿಳಿದಿರುವ ನೀನು ಭೀಮನು ದುರ್ಯೋಧನನ ತಲೆಯನ್ನು ತುಳಿಯುತ್ತಿರುವುದನ್ನು ಅಧರ್ಮವನ್ನಾಗಿ ಯಾಕೆ ನೋಡುತ್ತಿರುವಿ?

ಯುಧಿಷ್ಠಿರಃ

ನ ಮಮೈತತ್ ಪ್ರಿಯಂ ಕೃಷ್ಣ ಯದ್ ರಾಜಾನಂ ವೃಕೋದರಃ ।
ಪದಾ ಮೂರ್ಧ್ನ್ಯಸ್ಪೃಶತ್ ಕ್ರೋಧಾನ್ನ ಚ ಹೃಷ್ಯೇ ಕುಲಕ್ಷಯೇ ॥೪೬॥

ಯುಧಿಷ್ಠಿರ– ಕೃಷ್ಣನೇ! ಭೀಮನು ದುರ್ಯೋಧನನ ತಲೆಯನ್ನು ತನ್ನ ಕಾಲುಗಳಿಂದ ಕೋಪದಿಂದ ತುಳಿಯುತ್ತಿರುವುದು ನನಗೆ ಇಷ್ಟವಾಗಲಿಲ್ಲ. ಕುರುಕುಲವೇ ನಾಶವಾಗುತ್ತಿರುವಾಗ ನಾನು ಸಂತೋಷಪಡಲಾರೆ.

ನಿಕೃತ್ಯಾ ನಿಕೃತಾ ನಿತ್ಯಂ ಧೃತರಾಷ್ಟ್ರಸುತೈರ್ವಯಮ್ ।
ಬಹೂನಿ ಪರುಷಾಣ್ಯುಕ್ತ್ವಾ ವನಂ ಪ್ರಸ್ಥಾಪಿತಾ ವಯಮ್ ॥೪೭॥

ಇಲ್ಲಿಯವರೆಗೆ ಧೃತರಾಷ್ಟ್ರನ ಮಕ್ಕಳೂ ಮೋಸದಿಂದ ನಮ್ಮನ್ನು ವಂಚನೆಗೊಳಪಡಿಸಿದ್ದರು. ಕ್ರೂರವಾದ ಕಠೋರಮಾತುಗಳನ್ನು ಆಡಿ ನಮ್ಮನ್ನು ಕಾಡಿಗೆ ಕಳುಹಿಸಿದ್ದರು.

ಭೀಮಸೇನಸ್ಯ ತದ್ ದುಃಖಮತೀವ ಹೃದಿ ವರ್ತತೇ ।
ಇತಿ ಸಂಚಿಂತ್ಯ ವಾರ್ಷ್ಣೇಯ ಮಯೈತತ್ ಸಮುಪೇಕ್ಷಿತಮ್ ॥೪೮॥

ಆ ದುಃಖವು ಭೀಮಸೇನನ ಹೃದಯದಲ್ಲಿ ಬಹಳವಾಗಿ ಇತ್ತು. ಶ್ರೀಕೃಷ್ಣನೇ! ಹೀಗೆ ಆಲೋಚಿಸಿ ನಾನು ಅವನ ಈ ಕಾರ್ಯವನ್ನು ಉಪೇಕ್ಷಿಸಿರುವೆನು.

ತಸ್ಮಾದ್ಧತ್ವಾऽಕೃತಪ್ರಜ್ಞಂ ಲುಬ್ಧಂ ಕಾಮವಶಾನುಗಮ್ ।
ಲಭತಾಂ ಪಾಂಡವಃ ಕಾಮಂ ಧರ್ಮೋऽಧರ್ಮೋऽಪಿ ವಾ ಕೃತಃ ॥

ಆದ್ದರಿಂದ ಲೋಭಿಯಾದ ಕಾಮಕ್ಕೊಳಗಾಗಿರುವ ಮೂರ್ಖ ದುರ್ಯೋಧನನನ್ನು ಕೊಂದು, ಭೀಮನು ಧರ್ಮವನ್ನಾಗಲೀ ಅಥವಾ ಅಧರ್ಮವನ್ನಾಗಲೀ ಮಾಡಿ ತನ್ನ ಮನೋಕಾಮನೆಯನ್ನು ಹೊಂದಲಿ.

ಸಂಜಯಃ

ಇತ್ಯುಕ್ತವತಿ ಕೌಂತೇಯೇ ವಾಸುದೇವೋಬ್ರವೀದಿದಮ್ ॥೫೦॥

ಕಾಮಮಸ್ತ್ವೇವಮಿತಿ ವೈ ಕೃಚ್ಛ್ರಾತ್ ಕುರುಕುಲೋದ್ವಹಮ್ ॥೫೧॥

ಸಂಜಯ– ಯುಧಿಷ್ಠಿರನು ಹೀಗೆ ಹೇಳಿದಾಗ ವಾಸುದೇವನು ಧರ್ಮರಾಜನಿಗೆ ಬಹಳ ಕಷ್ಟದಿಂದ 'ಸರಿ! ಹಾಗೆಯೇ ಆಗಲಿ' ಎಂದು ಹೇಳಿದನು.

ಇತ್ಯುಕ್ತ್ವಾ ವಾಸುದೇವೋಽಪಿ ಭೀಮಸೇನಪ್ರಿಯೇಪ್ಸಯಾ ।
ಅನ್ವಮೋದತ ತತ್ಸರ್ವಂ ಯದ್ಭೀಮೇನ ಕೃತಂ ರಣೇ ॥೫೨॥

ಹೀಗೆ ಹೇಳಿ ಶ್ರೀಕೃಷ್ಣನು ಭೀಮಸೇನನ ಮೇಲಿನ ಪ್ರೀತಿಯಿಂದ ಭೀಮನು ಮಾಡಿದ ಕಾರ್ಯಗಳನ್ನೆಲ್ಲವನ್ನೂ ಒಪ್ಪಿ ಅನುಮೋದಿಸಿದನು.

ಅರ್ಜುನೋಽಪಿ ಮಹಾಬಾಹುರಪ್ರೀತೇನಾಂತರಾತ್ಮನಾ ।
ನೋವಾಚ ವಚನಂ ಕಿಂಚಿತ್ ಭ್ರಾತರಂ ಸಾಧ್ವಸಾಧು ವಾ ॥೫೩॥

ಮಹಾಬಾಹುವಾದ ಅರ್ಜುನನಾದರೂ ಮನಸ್ಸಿನಲ್ಲಿ ಅಸಮಾಧಾನವನ್ನು ಹೊಂದಿದ್ದಕಾರಣದಿಂದ ಭೀಮನನ್ನುಕುರಿತು 'ಸರಿ' ಅಥವಾ 'ಸರಿಯಲ್ಲ' ಎಂಬುದಾಗಿ ಏನನ್ನೂ ಹೇಳಲಿಲ್ಲ.

ಭೀಮಸೇನೋಽಪಿ ಹತ್ವಾಽಽಜೌ ತವ ಪುತ್ರಮಮರ್ಷಣಃ ।
ಅಭಿವಾದ್ಯ ತತೋ ರಾಜನ್ ಸಂಪ್ರಹೃಷ್ಟಃ ಕೃತಾಂಜಲಿಃ ॥೫೪॥

ಪ್ರೋವಾಚ ಸುಮಹಾತೇಜಾ ಧರ್ಮಪುತ್ರಂ ಯುಧಿಷ್ಠಿರಮ್ ।
ಹರ್ಷಾದುತ್ಫುಲ್ಲನಯನೋ ಜಿತಕಾಶೀ ವಿಶಾಂಪತೇ ॥೫೫॥

ರಾಜನೇ! ಭೀಮಸೇನನಾದರೂ ಯುದ್ಧದಲ್ಲಿ ಅಸಹನೆಯಿಂದ ನಿನ್ನ ಮಗನನ್ನು ಕೊಂದು ಸಂತುಷ್ಟನಾಗಿ ನಮಸ್ಕರಿಸಿ, ಕೈಮುಗಿದುಕೊಂಡು ಬಹಳವಾದ ತೇಜಸ್ಸಿನಿಂದ

ಕೂಡಿದವನಾಗಿ, ಆನಂದದಿಂದ ಕಣ್ಣುಗಳನ್ನು ಅರಳಿಸುತ್ತಾ, ಜಯಕಾಂತಿಯಿಂದ ಶೋಭಿಸುತ್ತಾ, ಧರ್ಮಪುತ್ರ ಯುಧಿಷ್ಠಿರನಿಗೆ ಹೀಗೆ ಹೇಳಿದನು.

ಭೀಮಃ

ತವಾದ್ಯ ಪೃಥಿವೀ ರಾಜನ್ ಕ್ಷೇಮಾ ನಿಹತಕಂಟಕಾ ।
ತಾಂ ಪ್ರಶಾಧಿ ನರವ್ಯಾಘ್ರ ಸ್ವಧರ್ಮಮನುಪಾಲಯನ್ ॥೫೬॥

ಭೀಮ– ರಾಜನೇ! ಎಲ್ಲಾ ಪ್ರತಿಬಂಧಕಗಳನ್ನೂ ಕಳೆದುಕೊಂಡಿರುವ ಈ ಭೂಮಿಯು ನಿನ್ನದಾಗಿದೆ. ನರಶ್ರೇಷ್ಠನೇ! ನಿನ್ನ ಧರ್ಮವನ್ನು ಪಾಲಿಸುತ್ತಾ ಈ ಭೂಮಿಯನ್ನು ಆಳುವವನಾಗು.

ಯಸ್ತು ಕರ್ತಾऽಸ್ಯ ವೈರಸ್ಯ ನಿಕೃತ್ಯಾ ನಿಕೃತಿಪ್ರಿಯಃ ।
ಸೋऽಯಂ ವಿನಿಹತಃ ಶೇತೇ ಪೃಥಿವ್ಯಾಂ ಪೃಥಿವೀಪತೇ ॥೫೭॥

ರಾಜನೇ! ಮೋಸಮಾಡುವುದರಲ್ಲಿಯೇ ಪ್ರೀತಿಯನ್ನು ತೋರಿಸುತ್ತಿದ್ದ, ಮೋಸದಿಂದ ನಮ್ಮೊಡನೆ ಈ ದ್ವೇಷವನ್ನು ಮಾಡುತ್ತಿದ್ದ ದುರ್ಯೋಧನನು ಸತ್ತು ಭೂಮಿಯಲ್ಲಿ ಮಲಗಿದ್ದಾನೆ.

ದುಃಶಾಸನಪ್ರಭೃತಯಃ ಸರ್ವೇ ತೇ ಚೋಗ್ರವಾದಿನಃ ।
ರಾಧೇಯಃ ಶಕುನಿಶ್ಚೈವ ನಿಹತಾಸ್ತವ ಶತ್ರವಃ ॥೫೮॥

ದುಶ್ಶಾಸನಮೊದಲಾದ ಕ್ರೂರವಾಗಿ ಮಾತನಾಡುವವರು, ಕರ್ಣ ಮತ್ತು ಶಕುನಿ - ಈ ಎಲ್ಲಾ ನಿನ್ನ ಶತ್ರುಗಳು ಸತ್ತಿದ್ದಾರೆ.

ಸೇಯಂ ರತ್ನಸಮಾಕೀರ್ಣಾ ಮಹೀ ಸವನಪರ್ವತಾ ।
ಉಪಾವೃತ್ತಾ ಮಹಾರಾಜ ತ್ವಾಮದ್ಯ ನಿಹತದ್ವಿಷಮ್ ॥೫೯॥

ಮಹಾರಾಜನೇ! ರತ್ನದಿಂದ ತುಂಬಿರುವ ವನ-ಪರ್ವತಗಳಿಂದ ಸಹಿತವಾದ ಈ ಪೃಥಿಯು ಇವತ್ತು ನಿನ್ನ ಬಳಿಗೆ ಬಂದಿದೆ.

ಯುಧಿಷ್ಠಿರಃ

ಗತೋ ವೈರಸ್ಯ ನಿಲಯಂ ಹತೋ ದುರ್ಯೋಧನಸ್ತ್ವಯಾ ।
ಕೃಷ್ಣಸ್ಯ ಮತಮಾಜ್ಞಾಯ ವಿಜಿತೇಯಂ ವಸುಂಧರಾ ॥೬೦॥

ಯುಧಿಷ್ಠಿರ– 'ನಿನ್ನಿಂದ ಈ ದುರ್ಯೋಧನನು ಸತ್ತುಹೋದ. ಆ ಮೂಲಕ ಅವನೊಂದಿಗಿದ್ದ ವೈರವು ನಾಶವಾಯಿತು. ಶ್ರೀಕೃಷ್ಣನ ಅಭಿಪ್ರಾಯವನ್ನು ತಿಳಿದುಕೊಂಡು ಈ ಪೃಥಿವಿಯು ಈಗ ನಮ್ಮ ವಶಕ್ಕೆ ಬಂದಿದೆ.

ದಿಷ್ಟ್ಯಾ ಗತಸ್ತ್ವಮಾನೃಣ್ಯಂ ಮಾತುಃ ಕೋಪಸ್ಯ ಚೋಭಯೋಃ ।
ದಿಷ್ಟ್ಯಾ ಜಯಸಿ ದುರ್ಧರ್ಷ ದಿಷ್ಟ್ಯಾ ಶತ್ರುರ್ನಿಪಾತಿತಃ ॥೬೧॥

ಸೌಭಾಗ್ಯದಿಂದಾಗಿ ನೀನು ತಾಯಿಯ ಋಣವನ್ನು ತೀರಿಸಿರುವಿ. ನಿನ್ನ ಕೋಪದ ಋಣವನ್ನೂ ಕಳೆದುಕೊಂಡಿರುವಿ. ಪರರಿಗೆ ಎದುರಿಸಲು ಅಶಕ್ಯನಾದ ಭೀಮನೇ! ನೀನು ನಮ್ಮ ಭಾಗ್ಯದಿಂದಾಗಿ ಗೆದ್ದಿರುವಿ. ನಮ್ಮ ಭಾಗ್ಯದಿಂದಾಗಿ ಶತ್ರುವಾದ ದುರ್ಯೋಧನನು ಸತ್ತಿದ್ದಾನೆ.'

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ದುರ್ಯೋಧನಪ್ರಹರಣೋ ನಾಮ ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂದನೆಯ ಅಧ್ಯಾಯ

ಪಾಂಚಾಲರೇ ಮೊದಲಾದವರು ಭೀಮನನ್ನು ಸ್ತುತಿಸಿದ್ದು. ಕೃಷ್ಣ ಮತ್ತು ದುರ್ಯೋಧನರು ಪರಸ್ಪರವಾಗಿ ಬೈದುಕೊಂಡಿದ್ದು. ದುರ್ಯೋಧನನು ತನ್ನ ತಾನೇ ಕೊಂಡಾಡುತ್ತಿದ್ದಾಗ ಅವನ ತಲೆಯ ಮೇಲೆ ದೇವತೆಗಳಿಂದ ಪುಷ್ಪವೃಷ್ಟಿ, ಭೀಷ್ಮಾದಿಗಳ ಮರಣದಿಂದಾಗಿ ದುಃಖಿತರಾದ ಪಾಂಡವರನ್ನು ಕೃಷ್ಣನು ಸಮಾಧಾನಪಡಿಸುವುದು.

ಧೃತರಾಷ್ಟ್ರಃ

ಹತಂ ದುರ್ಯೋಧನಂ ದೃಷ್ಟ್ವಾ ಭೀಮಸೇನೇನ ಸಂಯುಗೇ ।
ಪಾಂಡವಾಃ ಸೃಂಜಯಾಶ್ಚೈವ ಕಿಮಕುರ್ವತ ಸಂಜಯ ॥೧॥

ಧೃತರಾಷ್ಟ್ರ– ಸಂಜಯನೇ! ಯುದ್ಧದಲ್ಲಿ ದುರ್ಯೋಧನನು ಭೀಮನಿಂದ ಪೆಟ್ಟುತಿಂದು ಕೆಳಗೆಬಿದ್ದಾಗ ಪಾಂಡವರು ಮತ್ತು ಸೃಂಜಯರು ಏನು ಮಾಡಿದರು?

ಸಂಜಯಃ

ಹತಂ ದುರ್ಯೋಧನಂ ದೃಷ್ಟ್ವಾ ಭೀಮಸೇನೇನ ಸಂಯುಗೇ ।
ಸಿಂಹೇನೇವ ಮಹಾರಾಜ ಮತ್ತಂ ವನಗಜಂ ವನೇ ॥೨॥

ಪ್ರಹೃಷ್ಟಮನಸಃ ಸರ್ವೇ ಕೃಷ್ಣೇನ ಸಹ ಪಾಂಡವಾಃ ।
ಪಾಂಚಾಲಾಃ ಸೃಂಜಯಾಶ್ಚೈವ ನಿಹತೇ ಕುರುನಂದನೇ ॥೩॥

ಆವಿಧ್ಯನ್ನುತ್ತರೀಯಾಣಿ ಸಿಂಹನಾದಾಂಶ್ಚ ಚಕ್ರಿರೇ ॥೪॥

ನೈತಾನ್ ಹರ್ಷಸಮಾವಿಷ್ಟಾನಿಯಂ ಸೇಹೇ ವಸುಂಧರಾ ॥೫॥

ಸಂಜಯ– ಕಾಡಿನಲ್ಲಿ ಮದವೇರಿದ ಆನೆಯನ್ನು ಸಿಂಹವು ಕೆಳಗುರುಳಿಸಿದಂತೆ ಯುದ್ಧದಲ್ಲಿ ಭೀಮನು ದುರ್ಯೋಧನನನ್ನು ಕೆಳಗೆ ಬೀಳಿಸಿದ್ದನ್ನು ನೋಡಿ ಶ್ರೀಕೃಷ್ಣನೂ ಹಾಗೂ ಎಲ್ಲಾ ಪಾಂಡವರೂ ಸಂತೋಷಪಟ್ಟರು. ಕುರುನಂದನ ಬಿದ್ದಾಗ ಪಾಂಚಾಲರೂ ಮತ್ತು ಸೃಂಜಯರೂ ಸಂತೋಷಪಟ್ಟರು. ತಮ್ಮ ಉತ್ತರೀಯವಸ್ತ್ರವನ್ನು ಹಾರಿಸುತ್ತಾ ಸಿಂಹನಾದವನ್ನು ಮಾಡಿದರು. ಅವರ ಆನಂದದ ಸಂಭ್ರಮವನ್ನು ತಾಳಲಾರದೆ ಭೂಮಿಯು ನಡುಗಿತು.

ಧನೂಂಷ್ಯೇಕೇ ವ್ಯಾಕ್ಷಿಪಂತಿ ಜ್ಯಾಶ್ಚಾಪ್ಯನ್ಯೇ ತಥಾऽಕ್ಷಿಪನ್ ।
ದಧ್ಮುಶ್ಚಾನ್ಯೇ ಮಹಾಶಂಖಾನ್ ಅನ್ಯೇ ಜಘ್ನುಶ್ಚ ದುಂದುಭೀನ್ ॥೬॥

ಕೆಲವರು ಬಿಲ್ಲುಗಳಿಂದ ಶಬ್ದ ಮಾಡುತ್ತಿದ್ದರು. ಕೆಲವರು ಬಿಲ್ಲಿನ ಹಗ್ಗವನ್ನು ಎಳೆದು ಠೇಂಕರಿಸುತ್ತಿದ್ದರು. ಇನ್ನು ಕೆಲವರು ದೊಡ್ಡಶಂಖಗಳನ್ನು ಊದಿದರು. ಬೇರೆ ಕೆಲವರು ದುಂದುಭಿಗಳನ್ನು ಬಾರಿಸಿದರು.

ಚಿಕ್ರೀಡುಶ್ಚ ತಥೈವಾನ್ಯೇ ಜಹಸುಶ್ಚ ತವಾಹಿತಾಃ ।
ಅಬ್ರುವಂಶ್ಚಾಸಕೃದ್ ವೀರಂ ಭೀಮಸೇನಮಿದಂ ವಚಃ ॥೭॥

ಹಾಗೆಯೇ ಕೆಲವರು ಕುಣಿದು ಆಡಿದರು. ನಿನ್ನ ಶತ್ರುಗಳು ಕೆಲವರು ಜೋರಾಗಿ ಕೇಕೆ ಹಾಕುತ್ತಾ ನಗುತ್ತಿದ್ದರು. 'ಭೀಮಸೇನನು ದೊಡ್ಡ ವೀರ' ಎಂಬುದಾಗಿ ಮತ್ತೆ ಮತ್ತೆ ಹೇಳುತ್ತಿದ್ದರು.

ಪಾಂಚಾಲಸೃಂಜಯಾಃ

ದುಷ್ಕರಂ ಭವತಾ ಕರ್ಮ ರಣೇऽದ್ಯ ಸುಮಹತ್ ಕೃತಮ್ ।
ಕೌರವೇಯಂ ರಣೇ ಹತ್ವಾ ಗದಯಾ ಕೃತನಿಶ್ರಮಮ್ ॥೮॥

ಪಾಂಚಾಲ-ಸೃಂಜಯರು– ಭೀಮಸೇನನೇ! ಇಂದು ಕಾದಾಟದಲ್ಲಿ ದೃಢನಿಶ್ಚಯಮಾಡಿಕೊಂಡಿದ್ದ ದುರ್ಯೋಧನನನ್ನು ಹೊಡೆದುರುಳಿಸುವ ಮೂಲಕ ಯುದ್ಧದಲ್ಲಿ ಬೇರೆಯವರಿಗೆ ಮಾಡಲಸಾಧ್ಯವಾದ ದೊಡ್ಡ ಕೆಲಸವನ್ನು ನೀನು ಮಾಡಿರುವಿ.

ಇಂದ್ರೇಣೇವ ಹಿ ವೃತ್ರಸ್ಯ ವಧಂ ಪರಮಸಂಯುಗೇ ।
ತ್ವಯಾ ಕೃತಮಮನ್ಯಂತ ಶತ್ರೋರ್ವಧಮಿಮಂ ಜನಾಃ ॥೯॥

ಮಹಾಯುದ್ಧದಲ್ಲಿ ಇಂದ್ರನು ವೃತ್ರಾಸುರನನ್ನು ಕೊಂದ ಹಾಗೆ ನೀನು ಮಾಡಿದ ಈ ಶತ್ರುಸಂಹಾರವನ್ನು ಜನರು ಬಹಳವಾಗಿ ತಿಳಿದುಕೊಂಡಿದ್ದಾರೆ.

ಚರಂತಂ ವಿವಿಧಾನ್ ಮಾರ್ಗಾನ್ ಮಂಡಲಾನಿ ಚ ಸರ್ವಶಃ ।
ದುರ್ಯೋಧನಮಿಮಂ ಹನ್ಯಾತ್ ಕೋऽನ್ಯಃ ಶೂರಂ ವೃಕೋದರಾತ್ ॥

'ಬೇರೆ ಬೇರೆ ರೀತಿಯಲ್ಲಿ ಮಂಡಲಾಕಾರಗಳಲ್ಲಿ ಸಂಚರಿಸುತ್ತಿದ್ದ ಈ ದುರ್ಯೋಧನನನ್ನು ಭೀಮನಲ್ಲದೆ ಬೇರೆ ಯಾರು ಹೊಡೆದುರುಳಿಸಿಯಾರು' ಎಂಬುದಾಗಿ ಜನರು ಮಾತಾಡುತ್ತಿದ್ದಾರೆ.

ವೈರಸ್ಯ ಚ ಗತಃ ಪಾರಂ ತ್ವಮಿಹಾನ್ಯೈಃ ಸುದುರ್ಗಮಮ್ ।
ಅಶಕ್ಯಮೇತದನ್ಯೇನ ಸಂಪಾದಯಿತುಮೀದೃಶಮ್ ॥೧೧॥

ಬೇರೆಯವರಿಗೆ ಮಾಡಲು ಸಾಧ್ಯವಿಲ್ಲದ ಬಹಳ ದುರ್ಗಮವಾದ ದ್ವೇಷದ ಅಂತ್ಯವನ್ನು ಸಂಪಾದಿಸಿಕೊಂಡಿರುವಿ.

ಕುಂಜರೇಣೇವ ಮತ್ತೇನ ವೀರಸಂಗ್ರಾಮಮೂರ್ಧನಿ ।
ದುರ್ಯೋಧನಶಿರೋ ದಿಷ್ಟ್ಯಾ ಪಾದೇನ ಮೃದಿತಂ ತ್ವಯಾ ॥೧೨॥

ವೀರನೊಡನೆ ನಡೆದ ಕಾದಾಟದ ಕೊನೆಯಲ್ಲಿ ಮದವೇರಿದ ಆನೆಯಂತೆ ಅದೃಷ್ಟವಶಾತ್ ದುರ್ಯೋಧನನ ತಲೆಯನ್ನು ಕಾಲಿನಿಂದ ಮರ್ದಿಸಿರುವಿ.

ಸಿಂಹೇನ ಮಹಿಷಸ್ಯೇವ ಕೃತ್ವಾ ಸಂಗರಮದ್ಭುತಮ್ ।
ದುಃಶಾಸನಸ್ಯ ರುಧಿರಂ ಪೀತಂ ದಿಷ್ಟ್ಯಾ ತ್ವಯಾऽನಘ ॥೧೩॥

ಅದ್ಭುತವಾದ ಯುದ್ಧವನ್ನು ಮಾಡಿ ಸಿಂಹವು ಮಹಿಷದ ರಕ್ತವನ್ನು ಪಾನಮಾಡುವಂತೆ ಹಿಂದೆ ನೀನು ದುಃಶಾಸನನ ರಕ್ತವನ್ನು ಪಾನಮಾಡಿದ್ದಿ. (ದುಃಶಾಸನನ ರಕ್ತವು ಭೀಮನ ಹಲ್ಲಿನ ಆಚೆಗೆ ಹೋಗಿರಲಿಲ್ಲ. - ಮ.ಭಾ.ತಾ.ನಿ.)

ಯೇ ವಿಪ್ರಕುರ್ವನ್ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಮೂರ್ಧ್ನಿ ತೇಷಾಂ ಕೃತಃ ಪಾದೋ ದಿಷ್ಟ್ಯಾ ತೇ ಸ್ವೇನ ಕರ್ಮಣಾ ॥

ಯಾವನು ರಾಜನಾದ ಧರ್ಮಿಷ್ಠ ಯುಧಿಷ್ಠಿರನಿಗೆ ಮೋಸಮಾಡಿದ್ದನೋ ಅವರ ತಲೆಯನ್ನು ಕಾಲಿನಿಂದ ಒದ್ದು ಅದ್ಭುತ ಕಾರ್ಯವನ್ನು ಮಾಡಿರುವಿ.

ಅಮಿತ್ರಾಣಾಮಧಿಷ್ಠಾನಾದ್ ವಧಾದ್ ದುರ್ಯೋಧನಸ್ಯ ಚ ।
ಭೀಮ ದಿಷ್ಟ್ಯಾ ಪೃಥಿವ್ಯಾಂ ತೇ ಪ್ರಥಿತಂ ಸುಮಹದ್ಯಶಃ ॥೧೫॥

ಭೀಮಸೇನನೇ! ಶತ್ರುಗಳನ್ನು ಮೆಟ್ಟಿನಿಂತಿದ್ದರಿಂದ ಹಾಗೂ ದುರ್ಯೋಧನನನ್ನು ಕೆಳಗೆ ಬೀಳಿಸಿದ್ದರಿಂದ ನಿನ್ನ ಮಹತ್ಕೀರ್ತಿಯು ಭೂಮಿಯಲ್ಲೆಲ್ಲಾ ಹರಡಿದೆ.

ಏವಂ ನೂನಂ ಹತೇ ವೃತ್ರೇ ಶಕ್ರಂ ನಂದಂತಿ ವಂದಿನಃ ।
ಯಥಾ ತ್ವಾಂ ನಿಹತಾಮಿತ್ರಂ ಸ್ವಯಂ ನಂದಾಮ ಭಾರತ ॥೧೬॥

ಭರತಕುಲೋದ್ಭವನೇ! ಹಿಂದೆ ಇಂದ್ರನು ವೃತ್ರಾಸುರನನ್ನು ಕೊಂದಾಗ ವಂದಿ-ಮಾಗಧರು ಇಂದ್ರನನ್ನು ಹೇಗೆ ಹೊಗಳಿದ್ದರೋ ಹಾಗೆಯೇ ನಾವು ಶತ್ರುಸಂಹಾರಕನಾದ ನಿನ್ನನ್ನು ಕೊಂಡಾಡುತ್ತೇವೆ.

ದುರ್ಯೋಧನವಧೇ ಯಾನಿ ರೋಮಾಣಿ ಹೃಷಿತಾನಿ ನಃ ।
ಅದ್ಯಾಪಿ ನ ವಿದೃಶ್ಯಂತೇ ತಾನಿ ತದ್ವಿದ್ಧಿ ಭಾರತ ॥೧೭॥

ಪಾಂಚಾಲಸೃಂಜಯಾಃ

ದುಷ್ಕರಂ ಭವತಾ ಕರ್ಮ ರಣೇಽದ್ಯ ಸುಮಹತ್ ಕೃತಮ್ ।
ಕೌರವೇಯಂ ರಣೇ ಹತ್ವಾ ಗದಯಾ ಕೃತನಿಶ್ರಮಮ್ ॥೮॥

ಪಾಂಚಾಲ-ಸೃಂಜಯರು– ಭೀಮಸೇನನೇ! ಇಂದು ಕಾದಾಟದಲ್ಲಿ ದೃಢನಿಶ್ಚಯಮಾಡಿಕೊಂಡಿದ್ದ ದುರ್ಯೋಧನನನ್ನು ಹೊಡೆದುರುಳಿಸುವ ಮೂಲಕ ಯುದ್ಧದಲ್ಲಿ ಬೇರೆಯವರಿಗೆ ಮಾಡಲಸಾಧ್ಯವಾದ ದೊಡ್ಡ ಕೆಲಸವನ್ನು ನೀನು ಮಾಡಿರುವಿ.

ಇಂದ್ರೇಣೇವ ಹಿ ವೃತ್ರಸ್ಯ ವಧಂ ಪರಮಸಂಯುಗೇ ।
ತ್ವಯಾ ಕೃತಮಮನ್ಯಂತ ಶತ್ರೋರ್ವಧಮಿಮಂ ಜನಾಃ ॥೯॥

ಮಹಾಯುದ್ಧದಲ್ಲಿ ಇಂದ್ರನು ವೃತ್ರಾಸುರನನ್ನು ಕೊಂದ ಹಾಗೆ ನೀನು ಮಾಡಿದ ಈ ಶತ್ರುಸಂಹಾರವನ್ನು ಜನರು ಬಹಳವಾಗಿ ತಿಳಿದುಕೊಂಡಿದ್ದಾರೆ.

ಚರಂತಂ ವಿವಿಧಾನ್ ಮಾರ್ಗಾನ್ ಮಂಡಲಾನಿ ಚ ಸರ್ವಶಃ ।
ದುರ್ಯೋಧನಮಿಮಂ ಹನ್ಯಾತ್ ಕೋಽನ್ಯಃ ಶೂರಂ ವೃಕೋದರಾತ್ ॥

'ಬೇರೆ ಬೇರೆ ರೀತಿಯಲ್ಲಿ ಮಂಡಲಾಕಾರಗಳಲ್ಲಿ ಸಂಚರಿಸುತ್ತಿದ್ದ ಈ ದುರ್ಯೋಧನನನ್ನು ಭೀಮನಲ್ಲದೆ ಬೇರೆ ಯಾರು ಹೊಡೆದುರುಳಿಸಿಯಾರು' ಎಂಬುದಾಗಿ ಜನರು ಮಾತಾಡುತ್ತಿದ್ದಾರೆ.

ವೈರಸ್ಯ ಚ ಗತಃ ಪಾರಂ ತ್ವಮಿಹಾನ್ಯೈಃ ಸುದುರ್ಗಮಮ್ ।
ಅಶಕ್ಯಮೇತದನ್ಯೇನ ಸಂಪಾದಯಿತುಮೀದೃಶಮ್ ॥೧೧॥

ಬೇರೆಯವರಿಗೆ ಮಾಡಲು ಸಾಧ್ಯವಿಲ್ಲದ ಬಹಳ ದುರ್ಗಮವಾದ ದ್ವೇಷದ ಅಂತ್ಯವನ್ನು ಸಂಪಾದಿಸಿಕೊಂಡಿರುವಿ.

ಕುಂಜರೇಣೇವ ಮತ್ತೇನ ವೀರಸಂಗ್ರಾಮಮೂರ್ಧನಿ ।
ದುರ್ಯೋಧನಶಿರೋ ದಿಷ್ಟ್ಯಾ ಪಾದೇನ ಮೃದಿತಂ ತ್ವಯಾ ॥೧೨॥

ವೀರನೊಡನೆ ನಡೆದ ಕಾದಾಟದ ಕೊನೆಯಲ್ಲಿ ಮದವೇರಿದ ಆನೆಯಂತೆ ಅದೃಷ್ಟವಶಾತ್ ದುರ್ಯೋಧನನ ತಲೆಯನ್ನು ಕಾಲಿನಿಂದ ಮರ್ದಿಸಿರುವಿ.

ಸಿಂಹೇನ ಮಹಿಷಸ್ಯೇವ ಕೃತ್ವಾ ಸಂಗರಮದ್ಭುತಮ್ ।
ದುಃಶಾಸನಸ್ಯ ರುಧಿರಂ ಪೀತಂ ದಿಷ್ಟ್ಯಾ ತ್ವಯಾಽನಘ ॥೧೩॥

ಅದ್ಭುತವಾದ ಯುದ್ಧವನ್ನು ಮಾಡಿ ಸಿಂಹವು ಮಹಿಷದ ರಕ್ತವನ್ನು ಪಾನಮಾಡುವಂತೆ ಹಿಂದೆ ನೀನು ದುಃಶಾಸನನ ರಕ್ತವನ್ನು ಪಾನಮಾಡಿದ್ದಿ. (ದುಃಶಾಸನನ ರಕ್ತವು ಭೀಮನ ಹಲ್ಲಿನ ಆಚೆಗೆ ಹೋಗಿರಲಿಲ್ಲ. - ಮ.ಭಾ.ತಾ.ನಿ.)

ಯೇ ವಿಪ್ರಕುರ್ವನ್ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಮೂರ್ಧ್ನಿ ತೇಷಾಂ ಕೃತಃ ಪಾದೋ ದಿಷ್ಟ್ಯಾ ತೇ ಸ್ವೇನ ಕರ್ಮಣಾ ॥

ಯಾವನು ರಾಜನಾದ ಧರ್ಮಿಷ್ಠ ಯುಧಿಷ್ಠಿರನಿಗೆ ಮೋಸಮಾಡಿದ್ದನೋ ಅವರ ತಲೆಯನ್ನು ಕಾಲಿನಿಂದ ಒದ್ದು ಅದ್ಭುತ ಕಾರ್ಯವನ್ನು ಮಾಡಿರುವಿ.

ಅಮಿತ್ರಾಣಾಮಧಿಷ್ಠಾನಾದ್ ವಧಾದ್ ದುರ್ಯೋಧನಸ್ಯ ಚ ।
ಭೀಮ ದಿಷ್ಟ್ಯಾ ಪೃಥಿವ್ಯಾಂ ತೇ ಪ್ರಥಿತಂ ಸುಮಹದ್ಯಶಃ ॥೧೫॥

ಭೀಮಸೇನನೇ! ಶತ್ರುಗಳನ್ನು ಮೆಟ್ಟಿನಿಂತಿದ್ದರಿಂದ ಹಾಗೂ ದುರ್ಯೋಧನನನ್ನು ಕೆಳಗೆ ಬೀಳಿಸಿದ್ದರಿಂದ ನಿನ್ನ ಮಹತ್ಕೀರ್ತಿಯು ಭೂಮಿಯಲ್ಲೆಲ್ಲಾ ಹರಡಿದೆ.

ಏವಂ ನೂನಂ ಹತೇ ವೃತ್ರೇ ಶಕ್ರಂ ನಂದಂತಿ ವಂದಿನಃ ।
ಯಥಾ ತ್ವಾಂ ನಿಹತಾಮಿತ್ರಂ ಸ್ವಯಂ ನಂದಾಮ ಭಾರತ ॥೧೬॥

ಭರತಕುಲೋದ್ಭವನೇ! ಹಿಂದೆ ಇಂದ್ರನು ವೃತ್ರಾಸುರನನ್ನು ಕೊಂದಾಗ ವಂದಿ-ಮಾಗಧರು ಇಂದ್ರನನ್ನು ಹೇಗೆ ಹೊಗಳಿದ್ದರೋ ಹಾಗೆಯೇ ನಾವು ಶತ್ರುಸಂಹಾರಕನಾದ ನಿನ್ನನ್ನು ಕೊಂಡಾಡುತ್ತೇವೆ.

ದುರ್ಯೋಧನವಧೇ ಯಾನಿ ರೋಮಾಣಿ ಹೃಷಿತಾನಿ ನಃ ।
ಅದ್ಯಾಪಿ ನ ವಿದೃಶ್ಯಂತೇ ತಾನಿ ತದ್ವಿದ್ಧಿ ಭಾರತ ॥೧೭॥

ಭಾರತನೇ! ದುರ್ಯೋಧನನನ್ನು ಹೊಡೆದು ಕೆಳಗೆ ಬೀಳಿಸಿದಾಗ ಸೆಟೆದು ನಿಂತ ನಮ್ಮ ರೋಮಗಳು ಇನ್ನೂ ಹಾಗೆಯೇ ಇವೆ. ನೀನೂ ನೋಡು.

ಸಂಜಯಃ

ಇತ್ಯಬ್ರುವನ್ ಭೀಮಸೇನಂ ವಾದಿಕಾಸ್ತತ್ರ ಸಂಗತಾಃ ।
ತಾನ್ ಹೃಷ್ಟಾನ್ ಪುರುಷವ್ಯಾಘ್ರಾನ್ ಪಾಂಚಾಲಾನ್ ಪಾಂಡವೈಃ ಸಹ।
ಬ್ರುವತಃ ಸದೃಶಂ ತತ್ತತ್ ಪ್ರೋವಾಚ ಮಧುಸೂದನಃ ॥೧೮॥

ಸಂಜಯ– ಹೀಗೆ ವಂದಿ-ಮಾಗಧರು ಸೇರಿ ಭೀಮಸೇನನನ್ನು ಹೊಗಳಿ ಹೇಳಿದರು. ಸಂತುಷ್ಟರಾದ ಪಾಂಚಾಲ ಮತ್ತು ಪಾಂಡವರ ಕಡೆಯ ನರಶ್ರೇಷ್ಠರು ಭೀಮನನ್ನು ಕುರಿತು ಯೋಗ್ಯವಾದ ಮಾತುಗಳನ್ನು ಹೇಳುತ್ತಿದ್ದಾಗ ಅವರಿಗೆ ಮಧುಸೂದನನು ಹೀಗೆ ಹೇಳುತ್ತಾನೆ.

ಶ್ರೀಭಗವಾನ್

ನಾನ್ಯಾಯಾನ್ನಿಹತಃ ಶತ್ರುರಿತಿ ವಕ್ತುಂ ಜನಾಧಿಪಾನ್ ।
ಅಸಕೃದ್ ವಾಗ್ಭಿರುಗ್ರಾಭಿರ್ನಿಹತೋ ಹ್ಯೇಷ ಮಂದಧೀಃ ॥೧೯॥

ತದೇವೈಷ ಹತಃ ಕ್ಷುದ್ರೋ ಯದೈವ ನಿರಪತ್ರಪಃ ।
ಲುಬ್ಧಃ ಪಾಪಸಹಾಯಶ್ಚ ಸುಹೃದಾಂ ಶಾಸನಾತಿಗಃ ॥೨೦॥

ಶತ್ರುವಾದ ದುರ್ಯೋಧನನನ್ನು ಭೀಮನು ಅನ್ಯಾಯದಿಂದ ಕೊಲ್ಲಲಿಲ್ಲ ಎಂದು ಅಲ್ಲಿಸೇರಿದ ರಾಜರುಗಳೆಲ್ಲರಿಗೆ ತಿಳಿಸುವುದಕ್ಕಾಗಿ ಮಧುಸೂದನನು ಅವರಿಗೆ ಹೀಗೆ ಹೇಳಿದನು: 'ಈ ಮಂದಬುದ್ಧಿಯ ದುರ್ಯೋಧನನು ಅನೇಕಬಾರಿ ಸಭಾಮಧ್ಯದಲ್ಲಿ ಕ್ರೂರವಾದ ಮಾತುಗಳನ್ನು ಆಡಿದ್ದರಿಂದ ಇವತ್ತು ಹತನಾಗಿದ್ದಾನೆ. ದುಷ್ಟನಾದ ಪಾಪಿಗಳ ಸಹಾಯವನ್ನು ಪಡೆಯುತ್ತಿದ್ದ ಲಜ್ಜೆಗೆಟ್ಟ ಲೋಭಿ ದುರ್ಯೋಧನನು ಯಾವಾಗ ಸಜ್ಜನರ ಶಾಸನವನ್ನು ಮೀರಿದನೋ ಆಗಲೇ ಸತ್ತುಹೋಗಿದ್ದನು.

ಬಹುಶೋ ವಿದುರದ್ರೋಣಕೃಪಗಾಂಗೇಯಸಂಜಯೈಃ ।
ಪಾಂಡುಭ್ಯಃ ಪ್ರೋಚ್ಯಮಾನೋಽಪಿ ಪಿತ್ರ್ಯಮಂಶಂ ನ ದತ್ತವಾನ್ ॥೨೧॥

ವಿದುರ, ದ್ರೋಣ, ಕೃಪ, ಭೀಷ್ಮ, ಸಂಜಯ ಇವರು ಇವನಿಗೆ ಅನೇಕ ಬಾರಿ ಹೇಳಿದರೂ ಪಾಂಡವರಿಗೆ ಸೇರಬೇಕಾದ ಭೂಭಾಗವನ್ನು ಕೊಡಲಿಲ್ಲ.

ನಾನೇನ ಕಾರ್ಯೇ ದುಷ್ಟೇನ ಶ್ರುತೇನೈವ ಕಥಾಸ್ವಪಿ ।
ಈದೃಶೋ ಮಿತ್ರಮರ್ಯಾದೋ ಗತಿಂ ಯಾತಾ ಹಿ ತಾದೃಶೀಮ್ ॥

ಇವನನ್ನು ನೋಡುವುದರಿಂದಾಗಲೀ, ಕಥೆಗಳಲ್ಲಿ ಇವನ ಬಗ್ಗೆ ಶ್ರವಣ ಮಾಡುವುದರಿಂದಾಗಲೀ ಯಾವ ಕಾರ್ಯವೂ (ಪ್ರಯೋಜನವೂ) ಇಲ್ಲ. ಹೀಗೆ ಧರ್ಮದ ನಿಯಮ ಮೀರಿ ನಡೆಯುವವರು ಅದಕ್ಕೆ ಸರಿಯಾದ ಗತಿಯನ್ನೇ ಹೊಂದುತ್ತಾರೆ.

ಸಂಜಯಃ

ಶ್ರುತ್ವೈವಂ ವದತಸ್ತಸ್ಯ ಸಾऽಸೂಯಂ ವಚನಂ ತದಾ ।
ಶಪನ್ನಿವ ಚ ರೋಷೇಣ ಸ್ಫುರನ್ನಿವ ಚ ಭೂಪತಿಃ ॥೨೩॥

ಸಂಜಯ– ಈ ರೀತಿಯಲ್ಲಿ ಶ್ರೀಕೃಷ್ಣನು ಹೇಳಿದ್ದ ಅಸೂಯಾಸಹಿತವಾದ ಮಾತನ್ನು ಕೇಳಿ ರಾಜ ದುರ್ಯೋಧನನು ಕೋಪದಿಂದ ನಡುಗುತ್ತಾ ಶಪಿಸುವ ರೀತಿಯಲ್ಲಿ ವರ್ತಿಸಿದನು.

ಶ್ರೀಭಗವಾನ್

ನೈಷ ಯೋಗ್ಯೋऽತ್ರ ಮಿತ್ರಂ ವಾ ಶತ್ರುರ್ವಾ ಪುರುಷಾಧಮಃ ।
ಕಿಮನೇನಾತಿನುನ್ನೇನ ವಾಗ್ಭಿಃ ಕಾಷ್ಮಸಧರ್ಮಣಾ ॥೨೪॥

ಶ್ರೀಭಗವಾನ್– ಈ ಪುರುಷಾಧಮನು ಮಿತ್ರ ಎಂಬುದಾಗಿ ಪರಿಗಣಿಸಲೂ ಯೋಗ್ಯನಲ್ಲ, ಶತ್ರು ಎಂಬುದಾಗಿ ಪರಿಗಣಿಸಲೂ ಯೋಗ್ಯನಲ್ಲ. ಮಾತುಗಳಿಂದ ಬಹಳವಾಗಿ ಪೀಡಿತನಾಗಿ ಕಟ್ಟಿಗೆತುಂಡಿಗೆ ಸಮಾನನಾದ ಇವನಿಂದ ಏನೂ ಆಗದು.

ರಥೇಷ್ವಾರೋಹತ ಕ್ಷಿಪ್ರಂ ಗಚ್ಛಾಮ ವಸುಧಾಧಿಪಾಃ ।
ದಿಷ್ಟ್ಯಾ ಹತೋಯಂ ಪಾಪಾತ್ಮಾ ಸಾಮಾತ್ಯಜ್ಞಾತಿಬಾಂಧವಃ ॥೨೫॥

ರಾಜರೇ! ನಾವೆಲ್ಲರೂ ಬೇಗನೇ ರಥಗಳನ್ನು ಏರಿ ಹೊರಟುಹೋಗೋಣ. ದೈವವಶಾತ್ ಪಾಪಿಸ್ವರೂಪಿಯಾದ ದುರ್ಯೋಧನನು ಮಂತ್ರಿ ಮತ್ತು ಬಾಂಧವರೊಡನೆ ನಾಶವಾಗಿದ್ದಾನೆ.

ಸಂಜಯಃ

ಇತಿ ಶ್ರುತ್ವಾऽऽತ್ಮನಿ ಕ್ಷೇಪಂ ಕೃಷ್ಣಾದ್ ದುರ್ಯೋಧನೋ ನೃಪಃ ।
ಅಮರ್ಷವಶಮಾಪನ್ನ ಉದತಿಷ್ಠದ್ವಿಶಾಂಪತೇ ॥೨೬॥

ಸಂಜಯ– ರಾಜನೇ! ತನ್ನ ವಿಷಯದಲ್ಲಿ ತಿರಸ್ಕಾರದ ಮಾತುಗಳನ್ನು ಕೇಳಿಸಿಕೊಂಡ ರಾಜ ದುರ್ಯೋಧನನು ಅಸಹನೆಗೊಂಡು ಎದ್ದನು.

ಸ್ಫಿಗ್ದೇಶೇನೋಪವಿಷ್ಟಃ ಸನ್ ದೋರ್ಭ್ಯಾಂ ವಿಷ್ಟಭ್ಯ ಮೇದಿನೀಮ್ ।
ದೃಷ್ಟಿಂ ಭ್ರೂಸಂಕಟಾಂ ಕೃತ್ವಾ ವಾಸುದೇವೇ ನ್ಯಪಾತಯತ್ ॥೨೭॥

ಎರಡು ಕೈಗಳನ್ನು ನೆಲಕ್ಕೂರಿಕೊಂಡು ಸೊಂಟದ ಸಹಾಯದಿಂದ ಕುಳಿತುಕೊಂಡು ಹುಬ್ಬುಗಂಟಿಕ್ಕುತ್ತಾ ಶ್ರೀಕೃಷ್ಣನನ್ನು ದಿಟ್ಟಿಸಿ ನೋಡತೊಡಗಿದನು.

ಅರ್ಧೋನ್ನತಶರೀರಸ್ಯ ರೂಪಮಾಸೀನ್ನೃಪಸ್ಯ ತತ್ ।
ಕ್ರುದ್ಧಸ್ಯಾಶೀವಿಷಸ್ಯೇವ ಚ್ಛಿನ್ನಪಕ್ಷಸ್ಯ ಭೋಗಿನಃ ॥೨೮॥

ಮೇಲ್ಭಾಗವು ಮೇಲಿದ್ದುದರಿಂದ ರಾಜನ ಆಕಾರವು ಅರ್ಧಭಾಗ ಮುರಿದ ಕುಪಿತವಾದ ಸರ್ಪದ ಆಕಾರದ ಹಾಗೆ ಇತ್ತು.

ಪ್ರಾಣಾಂತಕರಿಣೀಂ ಘೋರಾಂ ವೇದನಾಮವಿಚಿಂತಯನ್ ।
ದುರ್ಯೋಧನೋ ವಾಸುದೇವಂ ವಾಗ್ಭಿರುಗ್ರಾಭಿರಾರ್ದಯತ್ ॥೨೯॥

ಪ್ರಾಣಹೋಗುವ ರೀತಿಯಲ್ಲಿ ನೋವು ಉಂಟಾಗುತ್ತಿದ್ದರೂ ಅದನ್ನು ಪರಿಗಣಿಸದೆ ದುರ್ಯೋಧನನು ಶ್ರೀಕೃಷ್ಣನನ್ನು ಕ್ರೂರವಾದ ಮಾತುಗಳಿಂದ ತಿವಿಯತೊಡಗಿದನು.

ದುರ್ಯೋಧನಃ

ಕಂಸದಾಸಸ್ಯ ದಾಯಾದ ನ ತೇ ಲಜ್ಜಾಸ್ತ್ಯನೇನ ವೈ ।
ಅಧರ್ಮೇಣ ಗದಾಯುದ್ಧೇ ಯದಹಂ ವಿನಿಪಾತಿತಃ ॥೩೦॥

ದುರ್ಯೋಧನ– ಕಂಸಸೇವಕರ ದ್ರವ್ಯವನ್ನು ತಿನ್ನುವವನೇ! ನಿನಗೆ ನಾಚಿಕೆಯೇ ಇಲ್ಲ, ಗದಾಯುದ್ಧದಲ್ಲಿ ಅಧರ್ಮರೀತಿಯಲ್ಲಿ ನಾನು ಕೆಳಬಿದ್ದಿದ್ದೇನೆ.

ಊರೂ ಭಿಂಧೀತಿ ಭೀಮಸ್ಯ ಸ್ಮೃತಿಂ ಮಿಥ್ಯಾ ಪ್ರಯಚ್ಛಸಿ ।
ಕಿಂ ನ ವಿಜ್ಞಾತಮೇತನ್ಮೇ ಯದರ್ಜುನಮವೋಚಥಾಃ ॥೩೧॥

'ದುರ್ಯೋಧನನ ತೊಡೆಗಳನ್ನು ಮುರಿ' ಎಂಬುದಾಗಿ ನೀನು ಭೀಮನಿಗೆ ಅನ್ಯಾಯದ ಮಾತನ್ನು ಹೇಳಿದೆ. ನೀನು ಅರ್ಜುನನಿಗೆ ಹೇಳಿದ ಮಾತುಗಳನ್ನು ನಾನು ತಿಳಿದುಕೊಂಡಿಲ್ಲವೇನು?

ಪಾತಯಿತ್ವಾ ಮಹೀಪಾಲಾನ್ ಋಜುಯುದ್ಧಾನ್ ಸಹಸ್ರಶಃ ।
ಜಿಹ್ಮೈರುಪಾಯೈರ್ನಿಪುಣೈರ್ನ ತೇ ಲಜ್ಜಾ ನ ತೇ ಘೃಣಾ ॥೩೨॥

ಋಜುಮಾರ್ಗದಲ್ಲಿ ಯುದ್ಧಮಾಡುತ್ತಿದ್ದ ಸಾವಿರಾರು ರಾಜರನ್ನು ಕಪಟ ಉಪಾಯಗಳಿಂದ ಸಾಯಿಸಿರುವಿ. ನಿನಗೆ ನಾಚಿಕೆಯಾಗಲೀ, ಕರುಣೆಯಾಗಲೀ ಇಲ್ಲ.

ಅಹನ್ಯಹನಿ ಶೂರಾಣಾಂ ಕುರ್ವಾಣಃ ಕದನಂ ಮಹತ್ ।
ಶಿಖಂಡಿನಂ ಪುರಸ್ಕೃತ್ಯ ಘಾತಿತಃ ಸ ಪಿತಾಮಹಃ ॥೩೩॥

ಪ್ರತಿದಿನವೂ ಯೋಧರೊಡನೆ ಚೆನ್ನಾಗಿ ಯುದ್ಧ ಮಾಡುತ್ತಿದ್ದ ನಮ್ಮ ತಾತ ಭೀಷ್ಮನನ್ನು ಶಿಖಂಡಿಯ ದರ್ಶನದ ಮೂಲಕ ಕೆಳಹಾಕಿರುವಿ.

ಅಶ್ವತ್ಥಾಮ್ನಃ ಸನಾಮಾನಂ ಹತ್ವಾ ನಾಗಂ ಸುದುರ್ಮತೇ ।
ಆಚಾರ್ಯಸ್ಯಾಜಿತಃ ಶಸ್ತ್ರಂ ಕಿಂ ತನ್ನ ವಿದಿತಂ ಮಮ ॥೩೪॥

ದುಷ್ಟಬುದ್ಧಿಯವನೇ! ಅಶ್ವತ್ಥಾಮ ಎಂಬ ಹೆಸರುಳ್ಳ ಆನೆಯನ್ನು ಕೊಂದು ದ್ರೋಣಾಚಾರ್ಯನು ಶಸ್ತ್ರತ್ಯಾಗ ಮಾಡುವಂತೆ ಮಾಡಿರುವಿ. ಇದು ನನಗೆ ತಿಳಿದಿಲ್ಲವೇನು?

ಸ ಚಾನೇನ ನೃಶಂಸೇನ ಧೃಷ್ಟದ್ಯುಮ್ನೇನ ವೀರ್ಯವಾನ್ ।
ಹನ್ಯಮಾನಸ್ತ್ವಯಾ ದೃಷ್ಟೋ ನ ಚೈನಂ ಸಮವಾರಯಃ ॥೩೫॥

ಕ್ರೂರಿಯಾದ ಧೃಷ್ಟದ್ಯುಮ್ನನು ವೀರನಾದ ದ್ರೋಣನನ್ನು ಕೊಲ್ಲುತ್ತಿರುವುದನ್ನು ನೋಡುತ್ತಿದ್ದರೂ ನೀನು ಅವನನ್ನು ತಡೆಯಲಿಲ್ಲ.

ವಧಾರ್ಥಂ ಪಾಂಡುಪುತ್ರಸ್ಯ ಯಾಚಿತಾಂ ಶಕ್ತಿಮೇವ ಚ ।
ಘಟೋತ್ಕಚೇ ವ್ಯಂಸಯೇಥಾಃ ಕಸ್ತ ತ್ತಃ ಪಾಪಕೃತ್ತಮಃ ॥೩೬॥

ಪಾಂಡುವಿನ ಮಕ್ಕಳಲ್ಲಿ ಒಬ್ಬನನ್ನು ಕೊಲ್ಲಲು ಬೇಡಿ ಪಡೆದಿದ್ದ ಶಕ್ತ್ಯಾಯುಧವನ್ನು ಘಟೋತ್ಕಚನ ಮೇಲೆ ಪ್ರಯೋಗಿಸುವಂತೆ ಮಾಡಿದ್ದಿ. ನಿನಗಿಂತ ದೊಡ್ಡ ಪಾಪಿ ಯಾರಿದ್ದಾರೆ?

ಛಿನ್ನಬಾಹುಃ ಪ್ರಾಯಗತಸ್ತಥಾ ಭೂರಿಶ್ರವಾ ರಣೇ ।
ತ್ವಯಾ ನಿಸೃಷ್ಟೇನ ಹತಃ ಶೈನೇಯೇನ ದುರಾತ್ಮನಾ ॥೩೭॥

ಕೈಗಳನ್ನು ಕಳೆದುಕೊಂಡು ಪ್ರಾಯೋಪವೇಶವ್ರತವನ್ನು ಮಾಡುತ್ತಿದ್ದ ಭೂರಿಶ್ರವನನ್ನು ಯುದ್ಧದಲ್ಲಿ ದುಷ್ಟನಾದ ಸಾತ್ಯಕಿಯನ್ನು ಕಳುಹಿಸಿಕೊಟ್ಟು ಕೊಲ್ಲಿಸಿರುವಿ.

ಕುರ್ವಾಣಶ್ಚೋತ್ತಮಂ ಕರ್ಮ ಕರ್ಣಃ ಪಾರ್ಥಜಿಘಾಂಸಯಾ ।
ವ್ಯಸನೇನಾಶ್ವಸೇನಸ್ಯ ಪನ್ನಗೇಂದ್ರಸುತಸ್ಯ ವೈ ॥೩೮॥

ಅರ್ಜುನನನ್ನು ಕೊಲ್ಲಬೇಕೆಂದು ಕರ್ಣನು ಉತ್ತಮವಾದ ಕಾರ್ಯಮಾಡುತ್ತಾ ಕಾದಾಡುತ್ತಿದ್ದನು. ನಾಗರಾಜನಾದ ಅಶ್ವಸೇನನು ಕರ್ಣನ ಬಾಣದಲ್ಲಿ ಸೇರಿಕೊಂಡು ಅರ್ಜುನನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದಾಗ ಪ್ರಯತ್ನಪೂರ್ವಕವಾಗಿ ಅದನ್ನು ತಪ್ಪಿಸಿದಿ.

ಪುನಶ್ಚ ಪತಿತೇ ಚಕ್ರೇ ವ್ಯಸನಾರ್ತಃ ಪರಾಜಿತಃ ॥೩೯॥

ಪಾತಿತಶ್ಚ ರಣೇ ಕರ್ಣಶ್ಚಕ್ರವ್ಯಗ್ರೋಽಗ್ರಣೀರ್ನರ್ಣಾಮ್ ॥೪೦॥

ಕರ್ಣನ ರಥದ ಚಕ್ರವು ಕೆಸರಿನಲ್ಲಿ ಹೂತುಹೋದಾಗ ಕರ್ಣನು ಚಕ್ರವನ್ನು ಎತ್ತುವ ಕಾರ್ಯದಲ್ಲಿ ಮಗ್ನನಾಗಿದ್ದಾಗ ಕ್ರೂರಿಯಾದ ನೀನು ಅವಕಾಶವನ್ನು ಕೊಡದೆ ಅವನನ್ನು ಅರ್ಜುನನ ಮೂಲಕ ಯುದ್ಧದಲ್ಲಿ ಬೀಳಿಸಿ ಸಾಯುವಂತೆ ಮಾಡಿದ್ದಿ.

ಯದಿ ಮಾಂ ಚೈವ ಕರ್ಣಂ ಚ ಭೀಷ್ಮದ್ರೋಣೌ ಚ ಸಂಯುಗೇ ।
ನ್ಯಾಯೇನ ಪ್ರತಿಯುಧ್ಯೇಥಾ ನ ವಃ ಸ್ಯಾದ್ ವಿಜಯೋ ಧ್ರುವಃ ॥೪೧॥

ಒಂದು ಪಕ್ಷದಲ್ಲಿ ನನ್ನನ್ನು, ಕರ್ಣನನ್ನು, ಭೀಷ್ಮ-ದ್ರೋಣರನ್ನು ನ್ಯಾಯ ಮಾರ್ಗದಿಂದ ಯುದ್ಧದಲ್ಲಿ ಎದುರಿಸಿದ್ದರೆ ನಿಮಗೆ ಜಯವು ನಿಶ್ಚಯವಾಗಿಯೂ ಸಿಗುತ್ತಿರಲಿಲ್ಲ.

ತ್ವಯಾ ಪುನರನಾರ್ಯೇಣ ಜಿಹ್ಮಮಾರ್ಗೇಣ ಪಾರ್ಥಿವಾಃ ।
ಯೇ ಧರ್ಮಮನುತಿಷ್ಠಂತೋ ವಯಂ ಚಾನ್ಯೇ ನಿಪಾತಿತಾಃ ॥೪೨॥

ನೀನಾದರೂ ಆರ್ಯಸಮ್ಮತವಲ್ಲದ ಕಪಟಮಾರ್ಗದಿಂದ ಧರ್ಮಾಚರಣೆಯನ್ನು ಮಾಡುತ್ತಾ ಇದ್ದ ನಮ್ಮನ್ನು ಮತ್ತು ಇತರ ರಾಜರುಗಳನ್ನು ಕೊಂದಿದ್ದಿ.

ತ್ವಯಾ ಮಾಯಾವಿನಾ ಕೃಷ್ಣ ಮಾಯಾಮರ್ಕಪ್ರಮೋಷಿಣೇಮ್ ।
ಕೃತ್ವಾ ಹತಃ ಸಿಂಧುಪತಿಃ ಕಿಂ ತನ್ನ ವಿದಿತಂ ಮಮ ॥೪೩॥

ಕೃಷ್ಣನೇ! ಮೋಸಗಾರನಾದ ನೀನು ಸುಳ್ಳಾಗಿ ಸೂರ್ಯಾಸ್ತವನ್ನು ನಿರ್ಮಾಣಮಾಡಿ ಸಿಂಧುಪತಿಯಾದ ಜಯದ್ರಥನನ್ನು ಕೊಂದಿದ್ದಿ. ಇದೂ ನನಗೆ ತಿಳಿದಿಲ್ಲವೇನು?

ಶ್ರೀಭಗವಾನ್

ಹತಸ್ತ್ವಮಸಿ ಗಾಂಧಾರೇ ಸಭ್ರಾತೃಸುತಬಾಂಧವಃ ।
ಸಗಣಃ ಸಸುಹೃಚ್ಚೈವ ಪಾಪಮಾರ್ಗಮನುಷ್ಠಿತಃ ॥೪೪॥

ಶ್ರೀಭಗವಾನ್– ಗಾಂಧಾರಿಯ ಮಗನೇ! ಪಾಪಮಾರ್ಗದಲ್ಲಿ ಇದ್ದುಕೊಂಡೆ ನೀನು ಸಹೋದರ-ಸುತ-ಬಾಂಧವರೊಡನೆ ಪರಿವಾರ ಸ್ನೇಹಿತರನ್ನು ಸೇರಿಸಿಕೊಂಡು ನಾಶವಾಗಿರುವಿ.

ತವೈವ ದುಷ್ಕೃತೈರ್ವೀರೌ ಭೀಷ್ಮದ್ರೋಣೌ ನಿಪಾತಿತೌ ।
ಕರ್ಣಶ್ಚ ನಿಹತಃ ಸಂಖ್ಯೇ ತವ ಶೀಲಾನುವರ್ತಕಃ ॥೪೫॥

ನಿನ್ನ ಕೆಟ್ಟ ಕೆಲಸಗಳಿಂದಲೇ ವೀರರಾದ ಭೀಷ್ಮ ಮತು ದ್ರೋಣರು ಸತ್ತರು. ನಿನ್ನ ಗುಣಸ್ವಭಾವಾನುಸಾರಿಯಾದ್ದರಿಂದಲೇ ಕರ್ಣನೂ ಯುದ್ಧದಲ್ಲಿ ಸತ್ತನು.

ಯಾಚ್ಯಮಾನೋ ಮಯಾ ಮೂಢಃ ಪಿತ್ರ್ಯಮಂಶಂ ನ ದಿತ್ಸಸಿ ।
ಪಾಂಡವೇಭ್ಯಃ ಸ್ವರಾಜ್ಯಾರ್ಥಂ ಲೋಭಾಚ್ಛಕುನಿನಿಶ್ಚಯಾತ್ ॥೪೬॥

ಶಕುನಿಯ ಪ್ರೇರಣೆಯಿಂದಾಗಿ ಲೋಭಿಯಾದ ನಿನ್ನಲ್ಲಿ ನಾನು ಬಂದು ಬೇಡಿದರೂ ಮೂರ್ಖನಾದ ನೀನು ಪಾಂಡವರಿಗೆ ಸಲ್ಲಬೇಕಾದ ಪಿತ್ರಾರ್ಜಿತ ಭಾಗವನ್ನು ಕೊಡಲಿಲ್ಲ.

ವಿಷಂ ತೇ ಭೀಮಸೇನಾಯ ದತ್ತಂ ಸರ್ವೇ ಚ ಪಾಂಡವಾಃ ।
ಪ್ರದೀಪಿತಾ ಜತುಗೃಹೇ ಮಾತ್ರಾ ಸಹ ಸುದುರ್ಮತೇ ॥೪೭॥

ದುಷ್ಟಬುದ್ಧಿಯವನೇ! ಭೀಮನಿಗೆ ನೀನು ವಿಷವನ್ನುಣಿಸಿದ್ದಿ. ಎಲ್ಲಾ ಪಾಂಡವರಿಗೂ ಅವರ ತಾಯಿಯಾದ ಕುಂತಿಗೂ ಅರಗಿನ ಮನೆಯಲ್ಲಿ ಬೆಂಕಿ ಹಚ್ಚಿದ್ದಿ.

ಸಭಾಯಾಂ ಯಾಜ್ಞಸೇನೀ ಚ ದ್ಯೂತೇ ಕ್ಲಿಷ್ಟಾ ರಜಸ್ವಲಾ ।
ತದೈವ ತಾವದ್ ದುಷ್ಟಾತ್ಮಾ ವಧ್ಯಸ್ತ್ವಂ ನಿರಪತ್ರಪಃ ॥೪೮॥

ದ್ಯೂತದ ಸಭೆಯಲ್ಲಿ ರಜಸ್ವಲೆಯಾದ ಯಾಜ್ಞಸೇನಿ ದ್ರೌಪದಿಗೆ ಕಷ್ಟವನ್ನು ಕೊಟ್ಟ ಆಗಲೇ ಲಜ್ಜೆಗೆಟ್ಟ ದುಷ್ಟನಾದ ನಿನ್ನನ್ನು ಕೊಲ್ಲಬೇಕಿತ್ತು.

ಅನಕ್ಷಜ್ಞಂ ಚ ಧರ್ಮಜ್ಞಂ ಸೌಬಲೇನಾಕ್ಷದೇವಿನಾ ।
ನಿಕೃತ್ಯಾ ವೈ ಪರಾಜೈಷೀಸ್ತಸ್ಮಾದಸಿ ರಣೇ ಹತಃ ॥೪೯॥

ದ್ಯೂತವಿದ್ಯೆಯನ್ನು ಅರಿಯದ ಧರ್ಮರಾಜನನ್ನು ದ್ಯೂತಬಲ್ಲ ಶಕುನಿಯ ಮೂಲಕ ಮೋಸದಿಂದ ಪರಾಜಯಗೊಳಿಸಿದ್ದಿ. ಆ ಕಾರಣದಿಂದಲೇ ನೀನು ಯುದ್ಧದಲ್ಲಿ ನಾಶಹೊಂದಿರುವಿ.

ಜಯದ್ರಥೇನ ಪಾಪೇನ ಯತ್ ಕೃಷ್ಣಾ ಕ್ಲೇಶಿತಾ ವನೇ ।
ಯಾತೇಷು ಮೃಗಯಾಮೇಷು ತೃಣಬಿನ್ದೋಸ್ತಥಾऽऽಶ್ರಮೇ ॥೫೦॥

ತೃಣಬಿಂದುವಿನ ಆಶ್ರಮದಲ್ಲಿ ಬೇಟೆಗೆ ಹೋದ ಸಂದರ್ಭದಲ್ಲಿ ಕಾಡಿನಲ್ಲಿ ಪಾಪಿಯಾದ ಜಯದ್ರಥನು ದ್ರೌಪದಿಯನ್ನು ಪೀಡಿಸಿದ.

ಅಭಿಮನ್ಯುಶ್ಚ ಯದ್ಬಾಲ ಏಕೋ ಬಹುಭಿರಾಹವೇ ।
ತದ್ವದ್ರೋಷ್ಟೈರ್ನಿಹತಃ ಪಾಪ ತಸ್ಮಾದಸಿ ರಣೇ ಹತಃ ॥೫೧॥

ಪಾಪಿಯೇ! ಬಾಲಕನಾದ ಅಭಿಮನ್ಯುವು ಏಕಾಕಿಯಾಗಿ ಯುದ್ಧಮಾಡುತ್ತಿದ್ದಾಗ ನೀನು ಕಪಟತನದಿಂದ ಅವನನ್ನು ಕೊಂದಿದ್ದಿ. ಆದ್ದರಿಂದಲೇ ನೀನು ಯುದ್ಧದಲ್ಲಿ ಹತನಾಗಿರುವಿ.

ಕುರ್ವಾಣಂ ಕರ್ಮ ಸಮರೇ ಪಾಂಡವಾನರ್ಥಕಾಂಕ್ಷಿಣಮ್ ।
ಯಚ್ಛಿಖಂಡ್ಯವಧೀದ್ ಭೀಷ್ಮಂ ಮಿತ್ರಾರ್ಥೇ ನ ವ್ಯತಿಕ್ರಮಃ ॥೫೨॥

ಪಾಂಡವರಿಗೆ ಕೆಡುಕನ್ನು ಮಾಡಬೇಕೆಂಬ ಉದ್ದೇಶದಿಂದ ಭೀಷ್ಮನು ಯುದ್ಧದಲ್ಲಿ ಕರ್ಮವನ್ನು ನಿರ್ವಹಿಸುತ್ತಿದ್ದನು. ಅಂತಹ ಭೀಷ್ಮನನ್ನು ತನ್ನ ಮಿತ್ರರಿಗಾಗಿ ಶಿಖಂಡಿಯು ಕೊಂದನು. ಇದರಲ್ಲಿ ಧರ್ಮಬಾಹಿರವಾದುದು ಯಾವುದೂ ಇಲ್ಲ.

ಸ್ವಧರ್ಮಂ ಪೃಷ್ಠತಃ ಕೃತ್ವಾ ಆಚಾರ್ಯಸ್ತ್ವತ್ಪ್ರಿಯೇಪ್ಸಯಾ ।
ಪಾರ್ಷತೇನ ಹತಃ ಸಂಖೇ ವರ್ತಮಾನೋಽಸತಾಂ ಪಥಿ ॥೫೩॥

ಆಚಾರ್ಯ ದ್ರೋಣನು ತನ್ನ ಬ್ರಾಹ್ಮಣಧರ್ಮವನ್ನು ಮೀರಿ ನಿನ್ನ ಮೇಲಿನ ಪ್ರೀತಿಯಿಂದ ಅಧರ್ಮಮಾರ್ಗದಲ್ಲಿದ್ದದ್ದರಿಂದಾಗಿ ಧೃಷ್ಟದ್ಯುಮ್ನನು ಅವನನ್ನು ಕೊಂದನು.

ಪ್ರತಿಜ್ಞಾಮಾತ್ಮನಃ ಸತ್ಯಾಂ ಚಿಕೀರ್ಷನ್ ಸಮರೇ ರಿಪುಮ್ ।
ಹತವಾನ್ ಸಾತ್ವತೋ ವಿದ್ವಾನ್ ಸೌಮದತ್ತಿಂ ಮಹಾರಥಮ್ ॥೫೪॥

ತನ್ನ ಪ್ರತಿಜ್ಞೆಯನ್ನು ಪೂರೈಸಲಿಕ್ಕಾಗಿ ಜ್ಞಾನಿಯಾದ ಸಾತ್ಯಕಿಯು ಶತ್ರುವಾದ ಮಹಾರಥಿ ಭೂರಿಶ್ರವಸ್ಸನ್ನು ಯುದ್ಧದಲ್ಲಿ ಕೊಂದನು.

ಅರ್ಜುನಃ ಸಮರೇ ರಾಜನ್ ಯುಧ್ಯಮಾನಃ ಕದಾಚನ ।
ನಿಂದಿತಂ ಪುರುಷವ್ಯಾಘ್ರಃ ಕರೋತಿ ನ ಕಥಂಚನ ॥೫೫॥

ರಾಜನೇ! ಪುರುಷಶ್ರೇಷ್ಠನಾದ ಅರ್ಜುನನು ಯುದ್ಧದಲ್ಲಿ ಕಾದಾಡುತ್ತಾ ಯಾವತ್ತೂ ಕೂಡ ಧರ್ಮನಿಂದಿತವಾದ ಕೆಲಸವನ್ನು ಮಾಡುವುದಿಲ್ಲ.

ಲಬ್ಧ್ವಾಽಪಿ ಬಹುಶಃ ಛಿದ್ರಂ ವೀರವೃತ್ತಮನುಸ್ಮರನ್ ।
ನ ಜಘಾನ ರಣೇ ಕರ್ಣಂ ಮೈವಂ ವೋಚಃ ಸುದುರ್ಮತೇ ॥೫೬॥

ಯುದ್ಧದಲ್ಲಿ ಅನೇಕ ಬಾರಿ ಅವಕಾಶವು ಸಿಕ್ಕಿದರೂ ಅರ್ಜುನನು ಕರ್ಣನನ್ನು ಹೊಡೆಯಲಿಲ್ಲ. ಆದ್ದರಿಂದ ದುಷ್ಟಬುದ್ಧಿಯೇ! ಹೀಗೆ ಹೇಳಬೇಡ.

ದೇವಾನಾಂ ಮತಮಾಜ್ಞಾಯ ತೇಷಾಂ ಪ್ರಿಯಹಿತೇಪ್ಸಯಾ ।
ಅರ್ಜುನಸ್ಯ ನತೇ ನಾಗಂ ಮಯಾ ವ್ಯಂಸಿತಮಸ್ರಜಮ್ ॥೫೭॥

ದೇವತೆಗಳ ಅಭಿಪ್ರಾಯಕ್ಕನುಸಾರವಾಗಿ ಅವರಿಗೆ ಒಳ್ಳೆಯದನ್ನು ಮಾಡುವ ಉದ್ದೇಶದಿಂದ ನಾನು ಅರ್ಜುನನ ತಲೆಗೆ ನಾಗಾಸ್ತ್ರವು ತಗಲದಂತೆ ಮಾಡಿದ್ದೆನು.

ತ್ವಂ ಚ ಭೀಷ್ಮಶ್ಚ ಕರ್ಣಶ್ಚ ದ್ರೋಣಃ ದ್ರೌಣಿಸ್ತಥಾ ಕೃಪಃ ।
ವಿರಾಟನಗರೇ ತಸ್ಯ ಆನೃಶಂಸ್ಯಾಚ್ಚ ಜೀವಿತಾಃ ॥೫೮॥

ನೀನು, ಭೀಷ್ಮ, ಕರ್ಣ, ದ್ರೋಣ, ಅಶ್ವತ್ಥಾಮ ಮತ್ತು ಕೃಪ ಇವರೆಲ್ಲರೂ ವಿರಾಟನಗರದಲ್ಲಿ ಈ ಅರ್ಜುನನ ದಯೆಯಿಂದಾಗಿಯೇ ಬದುಕಿದವರು.

ಸ್ಮರ ಪಾರ್ಥಸ್ಯ ವಿಕ್ರಾಂತಂ ಗಂಧರ್ವೇಷು ಕೃತಂ ತದಾ ।
ಅಧರ್ಮಃ ಕೋಽತ್ರ ಗಾಂಧಾರೇ ಪಾಂಡವೈರ್ಯತ್ ಕೃತಂ ತ್ವಯಿ ॥

ಗಾಂಧಾರಿಪುತ್ರನೇ! ಗಂಧರ್ವರು ನಿನ್ನನ್ನು ಬಂಧಿಸಿದಾಗ ಅರ್ಜುನನು ಮಾಡಿದ್ದನ್ನು ಸ್ಮರಿಸಿಕೊ. ನಿನ್ನ ವಿಷಯದಲ್ಲಿ ಪಾಂಡವರು ಮಾಡಿದ ವಿಷಯದಲ್ಲಿ ಯಾವುದು ಅಧರ್ಮ?

ಸ್ವಬಾಹುಬಲಮಾಸ್ಥಾಯ ಸ್ವಧರ್ಮೇಣ ಪರಂತಪಾಃ ।
ಜಿತವಂತೋ ರಣೇ ವೀರಾಃ ಪಾಪೋಽಸಿ ನಿಧನಂ ಗತಃ ॥೬೦॥

ಶತ್ರುಸಂತಾಪಕರ ವೀರರು ಯುದ್ಧದಲ್ಲಿ ತಮ್ಮ ತಮ್ಮ ಧರ್ಮವನ್ನು ಆಚರಿಸುತ್ತಾ ತಮ್ಮ ಬಾಹುಬಲವನ್ನು ಆಶ್ರಯಿಸಿಕೊಂಡು ಜಯವನ್ನು ಪಡೆದಿದ್ದಾರೆ. ನೀನು ಪಾಪಿಯಾದ್ದರಿಂದಲೇ ನಾಶವನ್ನು ಹೊಂದಿರುವಿ.

ದುರ್ಯೋಧನಃ

ಅಧೀತಂ ಸುಹುತಂ ದತ್ತಂ ಭೂಃ ಪ್ರಭುಕ್ತಾ ಸಸಾಗರಾ ।
ಮೂರ್ಧ್ನಿ ಸ್ಥಿತಮಮಿತ್ರಾಣಾಂ ಕೋ ನು ಸ್ವಂತತರೋ ಮಯಾ ॥೬೧॥

ದುರ್ಯೋಧನ– ನಾನು ಎಲ್ಲವನ್ನೂ ಅಧ್ಯಯನ ಮಾಡಿರುವೆನು. ಯಾಗ-ಯಜ್ಞಗಳನ್ನು ಚೆನ್ನಾಗಿ ನೆರವೇರಿಸಿರುವೆನು. ಸಾಗರಪರ್ಯಂತ ಭೂಭಾಗವನ್ನು ಆಳಿರುವೆನು. ಶತ್ರುಗಳ ತಲೆಯನ್ನು ಮೆಟ್ಟಿ ನಿಂತಿದ್ದೆ. ನನ್ನ ಹಾಗೆ ಉತ್ತಮವಾದ ನಾಶವನ್ನು ಹೊಂದಿದವನು ಬೇರೆ ಯಾವನು ಇದ್ದಾನೆ?

ಸರ್ವೇಷಾಂ ಕ್ಷತ್ರಬಂಧೂನಾಂ ಸ್ವಧರ್ಮಮನುಪಶ್ಯತಾಮ್ ।
ತದಿದಂ ನಿಧನಂ ಪ್ರಾಪ್ತಂ ಕೋ ನು ಸ್ವಂತತರೋ ಮಯಾ ॥೬೨॥

ಸ್ವಧರ್ಮಾಚರಣೆಯನ್ನು ಮಾಡುವ ಕ್ಷತ್ರಿಯಬಂಧುಗಳು ಯಾವ ಸಾವನ್ನು ಅಪೇಕ್ಷಿಸುತ್ತಾರೆಯೋ ಅಂತಹ ಸಾವು ನನಗೆ ಬಂದಿದೆ. ನನ್ನ ಹಾಗೆ ಉತ್ತಮವಾದ ನಾಶವನ್ನು ಹೊಂದಿದವನು ಬೇರೆ ಯಾವನು ಇದ್ದಾನೆ?

ರಾಜಾರ್ಹಾ ಮಾನುಷಾ ಭೋಗಾಃ ಪ್ರಾಪ್ತಾಶ್ಚಾಸುಲಭಾ ನೃಪೈಃ ।
ಐಶ್ವರ್ಯಂ ಚೋತ್ತಮಂ ಪ್ರಾಪ್ತಂ ಕೋ ನು ಸ್ವಂತತರೋ ಮಯಾ ॥

ಮನುಷ್ಯರಿಗೆ ಸಿಗದ ರಾಜಯೋಗ್ಯವಾದ ಮಾನುಷಭೋಗಗಳನ್ನೆಲ್ಲಾ ಅನುಭವಿಸಿರುವೆನು. ಉತ್ತಮವಾದ ಸಂಪತ್ತನ್ನು ಪಡೆದಿರುವೆನು. ನನ್ನ ಹಾಗೆ ಉತ್ತಮವಾದ ನಾಶವನ್ನು ಹೊಂದಿದವನು ಬೇರೆ ಯಾವನು ಇದ್ದಾನೆ?

ಸಸುಹೃತ್ ಸಾನುಬಂಧಶ್ಚ ಸ್ವರ್ಗಂ ಯಾತೋಽಹಮಚ್ಯುತ ।
ಯೂಯಂ ಗರ್ಹಿತಸಂಕಲ್ಪಾಃ ಶೋಚಂತೋ ವರ್ತಯಿಷ್ಯಥ ॥೬೪॥

ಅಚ್ಯುತನೇ! ನಾನು ಮಿತ್ರ-ಬಾಂಧವರೊಡನೆ ಸ್ವರ್ಗಕ್ಕೆ ಹೋಗುವೆನು. ನಿಂದಿತವಾದ ಸಂಕಲ್ಪವುಳ್ಳ ನೀವು ಭೂಮಿಯಲ್ಲಿಯೇ ದುಃಖಿತರಾಗಿ ಇರಿ.

ನ ಮೇ ವಿಷಾದೋ ಭೀಮೇನ ಪಾದೇನ ಶಿರ ಆಹತಮ್ ।
ಕಾಕಾ ವಾ ಕಂಕಗೃಧ್ರಾ ವಾ ನಿಧಾಸ್ಯಂತಿ ಪದಂ ಕ್ಷಣಾತ್ ॥೬೫॥

ಭೀಮನು ನನ್ನ ತಲೆಯ ಮೇಲೆ ಕಾಲಿಟ್ಟಿದ್ದಕ್ಕೆ ನನಗೆ ದುಃಖವಾಗುತ್ತಿಲ್ಲ. ಏಕೆಂದರೆ ನನ್ನ ಪ್ರಾಣಹೋದ ಕ್ಷಣಮಾತ್ರದಲ್ಲಿ ಕಾಗೆಗಳು, ಗಿಡುಗಗಳು ತಮ್ಮ ಪಾದಗಳನ್ನು ಇಡುತ್ತವೆ.

ಸಂಜಯಃ

ಅಸ್ಯ ವಾಕ್ಯಸ್ಯ ನಿಧನೇ ಕುರುರಾಜಸ್ಯ ಭಾರತ ।
ಅಪತತ್ ಸುಮಹದ್ ವರ್ಷಂ ಪುಷ್ಪಾಣಾಂ ದಿವ್ಯಗಂಧಿನಾಮ್ ॥೬೬॥

ಸಂಜಯ– ಹೀಗೆ ದುರ್ಯೋಧನನ ಮಾತುಗಳು ಮುಗಿಯುತ್ತಿರಲು ಅಲೌಕಿಕ ಪರಿಮಳವುಳ್ಳ ಪುಷ್ಪಗಳ ಮಳೆಯು ಅವನ ತಲೆಯ ಮೇಲೆ ಸುರಿಯಿತು. (ದುರ್ಯೋಧನನು ಶ್ರೀಕೃಷ್ಣನನ್ನು ಅನೇಕ ರೀತಿಯಲ್ಲಿ ನಿಂದನೆ ಮಾಡುತ್ತಿದ್ದಾಗ ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದ್ದು ಅವನ ದುಷ್ಪಬುದ್ಧಿಯು ಸ್ಥಿರವಾಗಲಿ ಎಂಬ ಉದ್ದೇಶದಿಂದ.)

ಅವಾದ್ಯಂತ ಚ ತೂರ್ಯಾಣಿ ಜಗುಶ್ಚಾಪ್ಸರಸಾಂ ಗಣಾಃ ॥೬೭॥

ತೂರ್ಯವಾದ್ಯಗಳು ನುಡಿಸಲ್ಪಟ್ಟವು. ಅಪ್ಸರಸ್ತ್ರೀಯರು ಗಾನ ಮಾಡಿದರು.

ಜಗುಶ್ಚಾಪ್ಸರಸೋ ರಾಜ್ಞೋ ಯಶಃ ಸಂಬದ್ಧಮೇವ ಚ ।
ಸಿದ್ಧಾಶ್ಚ ಮುಮುಚುರ್ನಾದಂ ಸಾಧು ಸಾಧ್ವಿತಿ ಭಾರತ ॥೬೮॥

ಭರತಕುಲೋದ್ಭವನೇ! ರಾಜ ದುರ್ಯೋಧನನ ಯಶಸ್ಸಿಗೆ ಸಂಬಂಧಿಸಿದಂತೆ ಅಪ್ಸರಸ್ತ್ರೀಯರು ಹಾಡಿದರು. ಸಿದ್ಧಪುರುಷರು 'ಚೆನ್ನಾಗಿದೆ, ಚೆನ್ನಾಗಿದೆ' ಎಂದು ಹೇಳುತ್ತಾ ಶಬ್ದವನ್ನು ಮಾಡಿದರು.

ವವೌ ಚ ಸುರಭಿರ್ವಾತಃ ಪುಣ್ಯಗಂಧಃ ಶುಚಿರ್ಮುದಃ ।
ವ್ಯರಾಜತಾಮಲಂ ಚೈವ ನಭೋ ವೈಡೂರ್ಯಸನ್ನಿಭಮ್ ॥೬೯॥

ಸುಗಂಧವನ್ನು ಬೀರುತ್ತಾ ಪರಿಮಳಯುಕ್ತವಾದ ಪರಿಶುದ್ಧ ಗಾಳಿಯು ನಿಧಾನವಾಗಿ ಬೀಸಿತು. ವೈಡೂರ್ಯದ ಹಾಗೆ ಶುಭ್ರವಾದ ಆಕಾಶವು ಶೋಭಿಸಿತು.

ಇತ್ಯದ್ಭುತಾನಿ ತೇ ದೃಷ್ಟ್ವಾ ವಾಸುದೇವಪುರೋಗಮಾಃ ।
ದುರ್ಯೋಧನಸ್ಯ ಪೂಜಾಂ ಚ ಕೃತಾಂ ವ್ರೀಡಾಮುಪಾಗಮನ್ ॥೭೦॥

ಈ ರೀತಿಯಲ್ಲಿ ಅನೇಕ ಅದ್ಭುತಗಳನ್ನು ಹಾಗೂ ದುರ್ಯೋಧನನಿಗೆ ನಡೆದ ಪೂಜೆಯನ್ನು ನೋಡಿದ ಶ್ರೀಕೃಷ್ಣಮೊದಲಾದವರು ನಾಚಿಕೆ ಪಟ್ಟರು.

ಹತಾಂಶ್ಚಾಧರ್ಮತಃ ಶ್ರುತ್ವಾ ಶೋಕಾರ್ತಾಃ ಶುಶುಚುರ್ಹಿ ತೇ ।
ಭೀಷ್ಮಂ ದ್ರೋಣಂ ತಥಾ ಕರ್ಣಂ ಭೂರಿಶ್ರವಸಮೇವ ಚ ॥೭೧॥

ಭೀಷ್ಮ, ದ್ರೋಣ, ಕರ್ಣ, ಭೂರಿಶ್ರವಸ್ಸು ಮೊದಲಾದ ವೀರರು ಅಧರ್ಮ ಮಾರ್ಗದಿಂದ ಹತರಾದರು ಎಂಬುದನ್ನು ಕೇಳಿ ದುಃಖಕ್ಕೊಳಗಾದರು.

ತಾಂಸ್ತು ಚಿಂತಾಪರಾನ್ ದೃಷ್ಟ್ವಾ ಪಾಂಡವಾನ್ ದೀನಚೇತಸಃ ।
ಪ್ರೋವಾಚೇದಂ ವಚಃ ಕೃಷ್ಣೋ ಮೇಘದುಂದುಭಿನಿಸ್ವನಃ ॥೭೨॥

ಚಿಂತೆಗೊಳಗಾಗಿ ದುಃಖಿತವಾದ ಮನಸ್ಸುಳ್ಳವರಾದ ಪಾಂಡವರನ್ನು ನೋಡಿ ಮೇಘದುಂದುಭಿಯ ಹಾಗೆ ಧ್ವನಿಯುಳ್ಳ ಶ್ರೀಕೃಷ್ಣನು ಈ ಮಾತನ್ನು ಹೇಳಿದನು.

ಶ್ರೀಭಗವಾನ್

ನೈಷ ಶಕ್ಯೋಽತಿಶೀಘ್ರಾಸ್ತ್ರಃ ತೇ ಚ ಸರ್ವೇ ಮಹಾರಥಾಃ ।
ಋಜುಯುದ್ಧೇನ ವಿಕ್ರಾಂತಾ ಹಂತುಂ ಯುಷ್ಮಾಭಿರಾಹವೇ ॥೭೩॥

ಶ್ರೀಭಗವಾನ್– ಯುದ್ಧದಲ್ಲಿ ಶೀಘ್ರವಾಗಿ ಅಸ್ತ್ರಪ್ರಯೋಗವನ್ನು ಮಾಡುವ ಈ ದುರ್ಯೋಧನನನ್ನಾಗಲೀ, ಮಹಾರಥರಾದ ಭೀಷ್ಮಾದಿಗಳನ್ನಾಗಲೀ ಋಜು ಮಾರ್ಗದಿಂದ ಕೊಲ್ಲಲು ನೀವು ಸಮರ್ಥರಾಗುತ್ತಿರಲಿಲ್ಲ.

ಉಪಾಯಾನ್ನಿಹತಾ ಹ್ಯೇತೇ ಮಯಾ ತಸ್ಮಾನ್ನರಾಧಿಪಾಃ ।
ಅನ್ಯಥಾ ಪಾಂಡವೇಯಾನಾಂ ನಾಭವಿಷ್ಯಜ್ಜಯಃ ಕ್ವಚಿತ್ ॥೭೪॥

ಆ ಕಾರಣದಿಂದಲೇ ಈ ನರಪತಿಗಳನ್ನು ನಾನು ಉಪಾಯದಿಂದ ಕೊಲ್ಲಿಸಿದೆ. ಇಲ್ಲದೆ ಹೋಗಿದ್ದರೆ ಪಾಂಡವರಿಗೆ ಜಯವು ಉಂಟಾಗುತ್ತಿರಲಿಲ್ಲ.

ತೇ ಹಿ ಸರ್ವೇ ಮಹೇಷ್ವಾಸಾಃ ಚತ್ವಾರೋಽತಿರಥಾ ಭುವಿ ।
ನ ಶಕ್ಯಾ ಧರ್ಮತೋ ಹಂತುಂ ಲೋಕಪಾಲೈರಪಿ ಸ್ವಯಮ್ ॥೭೫॥

ಬಿಲ್ಲಾರರಾದ ಆ ನಾಲ್ಕು ಮಹಾರಥರನ್ನು ಧರ್ಮಮಾರ್ಗದಲ್ಲಿ ಕೊಲ್ಲಲು ಲೋಕಪಾಲದೇವತೆಗಳಿಗೂ ಸಾಧ್ಯವಿರಲಿಲ್ಲ.

ತಥೈವಾಯಂ ಗದಾಪಾಣಿರ್ಧಾರ್ತರಾಷ್ಟ್ರೋ ಗತಕ್ಲಮಃ ।
ನ ಶಕ್ಯೋ ಧರ್ಮತೋ ಹಂತುಂ ಕಾಲೇನಾಪಿ ಹಿ ದಂಡಿನಾ ॥೭೬॥

ಹಾಗೆಯೇ ಗದಾಧಾರಿಯಾದ ಈ ದುರ್ಯೋಧನನೂ ಯುದ್ಧದಲ್ಲಿ ಯಾವುದೇ ಕ್ಲೇಶವನ್ನು ಪಡೆದಿರಲಿಲ್ಲ. ಇವನನ್ನು ಧರ್ಮರೀತಿಯಲ್ಲಿ ಕೊಲ್ಲಲು ದಂಡಧಾರಿಯಾದ ಯಮನಿಗೂ ಸಾಧ್ಯವಾಗುತ್ತಿರಲಿಲ್ಲ.

ನ ಚ ವೋ ಹೃದಿ ಕರ್ತವ್ಯಂ ಯದಯಂ ನಿಹತೋ ನೃಪಃ ।
ಮಿಥ್ಯಾವಧ್ಯಾಚ್ಚಲೋಪಾಯೈರ್ಬಹವಃ ಶತ್ರವೋ ಹತಾಃ ॥೭೭॥

ಈ ದುರ್ಯೋಧನನು ಸತ್ತಿದ್ದನ್ನು ನೀವು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಏಕೆಂದರೆ ಮಿಥ್ಯಾವಧೆಗೆ ಸಂಬಂಧಿಸಿದ ಕೂಟನೀತಿಗಳಿಂದ ಅನೇಕ ಶತ್ರುಗಳು ಸತ್ತಿದ್ದಾರೆ.

ಪೂರ್ವಂ ಹ್ಯನುಗತೋ ಮಾರ್ಗೋ ದೇವೈರಸುರಘಾತಿಭಿಃ ।
ಸದ್ಭಿಶ್ಚಾನುಗತಃ ಪನ್ಥಾ ಸರ್ವೈರನುಗಮಿಷ್ಯತೇ ॥೭೮॥

ಹಿಂದೆ ಅಸುರರನ್ನು ಸೋಲಿಸಲು ದೇವತೆಗಳೂ ಈ ಮಾರ್ಗವನ್ನೇ ಅನುಸರಿದ್ದರು. ಸಜ್ಜನರು ನಡೆದ ದಾರಿಯನ್ನು ಎಲ್ಲರೂ ಅನುಸರಿಸುತ್ತಾರೆ.

ಏವಂ ವಿಧಾತ್ರಾ ವಿಹಿತೋ ವಧ ಹ್ಯೇಷ ಮಹಾತ್ಮನಾ ।
ದೈವಂ ಪುರುಷಕಾರೇಣ ನ ಶಕ್ಯಮತಿವರ್ತಿತುಮ್ ॥೭೯॥

ಮಹಾತ್ಮನಾದ ಬ್ರಹ್ಮನು ಇವರ ಸಾವನ್ನು ಈ ರೀತಿಯಲ್ಲಿಯೇ ನಿರ್ಧರಿಸಿದ್ದನು. ದೇವನಿಶ್ಚಿತವಾದುದ್ದನ್ನು ಮನುಷ್ಯನ ಪ್ರಯತ್ನದಿಂದ ಮೀರಲು ಸಾಧ್ಯವಿಲ್ಲ.

ಭೂತಂ ಭವ್ಯಂ ಭವಿಷ್ಯಚ್ಚ ನಿಮೇಷಾದ್ ಯೋ ಹನಿಷ್ಯತಿ ।
ಕೃತಾಂತಮನ್ಯಥಾ ಕರ್ತುಂ ನೇಚ್ಛೇತ್ ಸೋಽಯಂ ಧನಂಜಯ ॥೮೦॥

ಅರ್ಜುನನೇ! ಯಾವ ಪರಮಾತ್ಮನು ಹಿಂದೆ ಇದ್ದದ್ದನ್ನು, ಈಗ ಇರುವುದನ್ನು, ಮುಂದೆ ಬರುವುದನ್ನು ಕ್ಷಣಮಾತ್ರದಲ್ಲಿ ನಾಶಮಾಡುವನೋ ಅವನೂ ಕೂಡ ಮಾಡಬೇಕಾದ್ದನ್ನು ವಿಪರೀತವಾಗಿ ಮಾಡಲು ಇಚ್ಛಿಸುವುದಿಲ್ಲ.

ಕೃತಕೃತ್ಯಾಃ ಸ್ಮ ಸಾಯಾಹ್ನೇ ನಿವಾಸಂ ರೋಚಯಾಮಹೇ ।
ಸಾಶ್ವನಾಗರಥಾಃ ಸರ್ವೇ ವಿಶ್ರಾಮ್ಯಂತು ನರಾಧಿಪಾಃ ॥೮೧॥

ಮಾಡಬೇಕಾದ ಕಾರ್ಯವನ್ನು ಮಾಡಿ ಕೃತಕೃತ್ಯರಾದ ನಾವು ಸಾಯಂಕಾಲದಲ್ಲಿ ನಮ್ಮ ವಾಸಸ್ಥಾನಕ್ಕೆ ಹೋಗಲು ಬಯಸುತ್ತೇವೆ. ಕುದುರೆ-ಆನೆ-ರಥಗಳಿಂದ ಸಹಿತವಾಗಿ ಎಲ್ಲ ರಾಜರೂ ವಿಶ್ರಾಂತಿಯನ್ನು ಪಡೆಯಲಿ.

ಸಂಜಯಃ

ವಾಸುದೇವವಚಃ ಶ್ರುತ್ವಾ ತದಾನೀಂ ಪಾಂಡವೈಃ ಸಹ ।
ಪಾಂಚಾಲಾ ಭೃಶಸಂಹೃಷ್ಟಾ ವಿನೇದುಃ ಸಿಂಹಸಂಘವತ್ ॥೮೨॥

ಸಂಜಯ– ಆಗ ಶ್ರೀಕೃಷ್ಣನ ಮಾತನ್ನು ಕೇಳಿ ಪಾಂಡವರು ಮತ್ತು ಪಾಂಚಾಲರು ಬಹಳವಾಗಿ ಸಂತೋಷಗೊಂಡು ಸಿಂಹಗಳಂತೆ ಶಬ್ದ ಮಾಡಿದರು.

ತತಃ ಪ್ರಾಧ್ಮಾಪಯಚ್ಛಂಖಿಂ ಪಾಂಚಜನ್ಯಂ ಜನಾರ್ದನಃ ।
ದೇವದತ್ತಂ ಪ್ರಹೃಷ್ಟಾತ್ಮಾ ಶಂಖಿಪ್ರವರಮರ್ಜುನಃ ॥೮೩॥

ಅನಂತರ ಶ್ರೀಕೃಷ್ಣನು ಪಾಂಚಜನ್ಯಶಂಖವನ್ನು ಚೆನ್ನಾಗಿ ಊದಿದನು. ಅರ್ಜುನನು ತನ್ನ ಉತ್ತಮವಾದ ದೇವದತ್ತ ಶಂಖವನ್ನು ಊದಿದನು.

ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ ॥೮೪॥

ಕುಂತೀಪುತ್ರ ಧರ್ಮರಾಜನು ಅನಂತವಿಜಯ ಎಂಬ ಹೆಸರಿನ ತನ್ನ ಶಂಖವನ್ನು ಊದಿದನು. ಭಯಂಕರಕಾರ್ಯಗಳನ್ನು ಮಾಡುವ ಭೀಮನು ಪೌಂಡ್ರ ಎಂಬ ದೊಡ್ಡಶಂಖವನ್ನು ಊದಿದನು.

ನಕುಲಃ ಸಹದೇವಶ್ಚ ಸುಘೋಷಮಣಿಪುಷ್ಪಕೌ ।
ಧೃಷ್ಟದ್ಯುಮ್ನಸ್ತಥಾ ಜೈತ್ರಂ ಸಾತ್ಯಕಿರ್ನಂದಿವರ್ಧನಮ್ ॥೮೫॥

ನಕುಲ ಮತ್ತು ಸಹದೇವರು ಸುಘೋಷ ಮತ್ತು ಮಣಿಪುಷ್ಪಕ ಎಂಬ ಶಂಖಗಳನ್ನು ಊದಿದರು. ಧೃಷ್ಟದ್ಯುಮನು ಜೈತ್ರ ಎಂಬ ಶಂಖವನ್ನೂ, ಸಾತ್ಯಕಿಯು ನಂದಿವರ್ಧನ ಎಂಬ ಶಂಖವನ್ನೂ ಊದಿದರು.

ತೇಷಾಂ ನಾದೇನ ಮಹತಾ ಶಂಖಾನಾಂ ಭರತರ್ಷಭ ।
ಆಪುಪೂರೇ ನಭಃ ಸರ್ವಂ ಪೃಥಿವೀ ಚ ಚಚಾಲ ಹ ॥೮೬॥

ಭರತಕುಲಶ್ರೇಷ್ಠನೇ! ಅವರ ಶಂಖಗಳ ನಾದದಿಂದ ಆಕಾಶವು ಪೂರ್ಣ ಆಯಿತು. ನೆಲವು ನಡುಗಿತು.

ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ ।
ಪಾಂಡುಸೈನ್ಯೇಷ್ವವಾದ್ಯಂತ ಸ ಶಬ್ದಸ್ತುಮುಲೋಽಭವತ್ ॥೮೭॥

ಅನಂತರ ಶಂಖಗಳು, ಭೇರಿಗಳು, ಪಣವಗಳು, ಆನಕಗಳು, ಗೋಮುಖಗಳು ಇವೆಲ್ಲವೂ ಪಾಂಡವರ ಸೈನ್ಯದಲ್ಲಿ ಧ್ವನಿಯನ್ನುಂಟುಮಾಡಿದವು. ಆ ಶಬ್ದವು ಬಹಳ ಭಯಂಕರವಾಗಿತ್ತು.

ಅಸ್ತುವನ್ ಪಾಂಡವಾನನ್ಯೇ ಗೀರ್ಭಿಶ್ಚ ಸ್ತುತಿಮಂಗಲೈಃ ।
ಹೃಷ್ಟಾ ದುರ್ಯೋಧನಂ ದೃಷ್ಟ್ವಾ ನಿಹತಂ ಪುರುಷರ್ಷಭಾಃ ॥೮೮॥

ದುರ್ಯೋಧನನು ಸತ್ತುಬಿದ್ದಿದ್ದನ್ನು ನೋಡಿ ಬೇರೆ ಎಲ್ಲ ನರಶ್ರೇಷ್ಠರು ಪಾಂಡವರನ್ನು ಮಂಗಳಸ್ತುತಿಗಳಿಂದ ಹಾಗೂ ಮಾತುಗಳಿಂದ ಸ್ತುತಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ಸಾಧುವಚನಂ ನಾಮ ಏಕತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆರಡನೆಯ ಅಧ್ಯಾಯ

ಪಾಂಚಾಲ ಮೊದಲಾದವರು ತಮ್ಮ ತಮ್ಮ ಶಿಬಿರಗಳಿಗೆ ಹೋದ ಮೇಲೆ ಪಾಂಡವರು ದುರ್ಯೋಧನನ ಶಿಬಿರಕ್ಕೆ ಹೋಗಿ, ತಮ್ಮ ರಥಗಳಿಂದ ಕೆಳಗಿಳಿದದ್ದು. ಶ್ರೀಕೃಷ್ಣನು ರಥದಿಂದ ಮೊದಲು ಅರ್ಜುನನನ್ನು ಇಳಿಸಿ ತಾನು ಇಳಿದ ಬಳಿಕ ಅಗ್ನಿಯು ಆ ರಥವನ್ನು ಸುಟ್ಟು ಭಸ್ಮ ಮಾಡಿದ್ದು. ರಥವು ಸುಟ್ಟುಹೋಗಿದ್ದಕ್ಕೆ ಕಾರಣವನ್ನು ಅರ್ಜುನನಿಗೆ ಶ್ರೀಕೃಷ್ಣನು ತಿಳಿಸಿದ್ದು. ಶ್ರೀಕೃಷ್ಣನ ಮಾತಿನಂತೆ ಪಾಂಡವರು ಓಘವತೀತೀರದಲ್ಲಿ ರಾತ್ರಿಯಲ್ಲಿ ವಾಸಮಾಡಿದ್ದು. ಯುಧಿಷ್ಠಿರನು ಕೇಳಿಕೊಂಡ ಪ್ರಕಾರ ಶ್ರೀಕೃಷ್ಣನು ಗಾಂಧಾರಿಯನ್ನು ಸಮಾಧಾನಪಡಿಸಿದ್ದು.

ಸಂಜಯಃ

ತತಸ್ತೇ ಪ್ರಯಯುಃ ಸರ್ವೇ ನಿವೇಶಾಯ ಮಹೀಕ್ಷಿತಃ ।
ಶಂಖಾನ್ ಪ್ರಧ್ಮಾಪಯಂತೋ ವೈ ಹೃಷ್ಟಾಃ ಪರಿಘಬಾಹವಃ ॥೧॥

ಸಂಜಯ– ಅನಂತರ ಎಲ್ಲಾ ರಾಜರುಗಳು ಶಂಖವನ್ನು ಊದುತ್ತಾ ಪರಿಘಾಯುಧವನ್ನು ಕೈಯಲ್ಲಿ ಎತ್ತಿಕೊಂಡು, ಸಂತೋಷದಿಂದ ತಮ್ಮ ಮನೆಗಳಿಗೆ ಹೋದರು.

ಪಾಂಡವಾನ್ ಗಚ್ಛತಶ್ಚಾಪಿ ಶಿಬಿರಂ ನೋ ವಿಶಾಂಪತೇ ।
ಮಹೇಶ್ವಾಸೋಽನ್ವಗಾತ್ ಪಶ್ಚಾತ್ ಸಾತ್ಯಕಿಃ ಸತ್ಯವಿಕ್ರಮಃ ॥೨॥

ರಾಜನೇ! ಪಾಂಡವರು ನಮ್ಮ (ಕೌರವರ) ಶಿಬಿರದೆಡೆಗೆ ಹೋಗುತ್ತಿದ್ದಾಗ ಮಹಾಬಿಲ್ಲಾರನಾದ ಪರಾಕ್ರಮಿ ಸಾತ್ಯಕಿಯು ಅವರನ್ನು ಹಿಂಬಾಲಿಸಿಕೊಂಡು ಹೋದನು.

ಧೃಷ್ಟದ್ಯುಮ್ನಃ ಶಿಖಂಡೀ ಚ ಸೃಂಜಯಶ್ಚಾಪಿ ಸರ್ವಶಃ ।
ಸರ್ವೇ ಚಾನ್ಯೇ ಮಹೇಷ್ವಾಸಾ ಜಗ್ಮುಃ ಸ್ವಶಿಬಿರಾಣ್ಯುತ ॥೩॥

ಧೃಷ್ಟದ್ಯುಮ್ನ, ಶಿಖಂಡಿ, ಸೃಂಜಯರೂ ಮತ್ತು ಬೇರೆ ಬಿಲ್ಲಾರ ಶೂರರೂ ಕೂಡ ತಮ್ಮ ಶಿಬಿರಗಳಿಗೆ ಹೋದರು.

ತತಸ್ತೇ ಪ್ರಾವಿಶನ್ ಪಾರ್ಥಾ ಹತತ್ವಿಷಂ ಹತೇಶ್ವರಮ್ ।
ದುರ್ಯೋಧನಸ್ಯ ಶಿಬಿರಂ ರಂಗವನ್ನಿಃಸೃತೇ ಜನೇ ॥೪॥

ಅನಂತರ ಪಾಂಡವರು ಕಾಂತಿಹೀನವಾದ, ಸ್ವಾಮಿಯನ್ನು ಕಳೆದುಕೊಂಡ ದುರ್ಯೋಧನನ ಶಿಬಿರಕ್ಕೆ ಹೋದರು. ರಂಗಸ್ಥಳದಿಂದ ಜನರು ಹೊರಟು ಹೋದಮೇಲೆ ಕಳಾಹೀನವಾದಂತೆ ದುರ್ಯೋಧನನ ಶಿಬಿರವು ಕಳಾಹೀನವಾಗಿತ್ತು.

ಗತೋತ್ಸವಂ ಪುರಮಿವ ಹತನಾಗಮಿವ ಹ್ರದಮ್ ।
ಸ್ತ್ರೀವರ್ಷಧರಭೂಯಿಷ್ಠಂ ವೃದ್ಧಾಮಾತ್ಯೈರಧಿಷ್ಠಿತಮ್ ॥೫॥

ಉತ್ಸವವು ಮುಗಿದ ನಂತರ ಪಟ್ಟಣವು ಕಳಾಹೀನವಾದಂತೆ, ಜಲಕ್ರೀಡೆ ಮಾಡುತಿದ್ದ ಆನೆಯು ಹೊರಟುಹೋದಮೇಲೆ ಇರುವ ಸರೋವರದಂತೆ, ಸ್ತ್ರೀಜನರು ಮತ್ತು ಷಂಡಪುರುಷರು ತುಂಬಿದ್ದ, ವಯಸ್ಸಾದ ಮಂತ್ರಿಗಳಿದ್ದ ದುರ್ಯೋಧನನ ಶಿಬಿರಕ್ಕೆ ಹೋದರು.

ತತ್ಸೈತಾನ್ ಪರ್ಯುಪಾತಿಷ್ಠನ್ ದುರ್ಯೋಧನಪುರಸ್ಸರಾಃ ।
ಕೃತಾಂಜಲಿಪುಟಾ ರಾಜನ್ ಕಾಷಾಯಮಲಿನಾಂಬರಾಃ ॥೬॥

ರಾಜನೇ! ಅಲ್ಲಿದ್ದ ದುರ್ಯೋಧನನ ಮುಂದೆ ಸಂಚಾರಮಾಡುತ್ತಿದ್ದ ವೃದ್ಧಾಮಾತ್ಯರು ಕೈಮುಗಿದುಕೊಂಡು, ಕೊಳೆಯಾದ ಬಟ್ಟೆಗಳನ್ನು ಧರಿಸಿಕೊಂಡು ಪಾಂಡವರನ್ನು ಗೌರವಿಸಿದರು.

ಶಿಬಿರಂ ಸಮನುಪ್ರಾಪ್ಯ ಕುರುರಾಜಸ್ಯ ಪಾಂಡವಾಃ ।
ಅವತೇರುರ್ಮಹಾರಾಜ ರಥೇಭ್ಯೋ ರಥಸತ್ತಮಾಃ ॥೭॥

ಕುರುರಾಜನ ಶಿಬಿರಕ್ಕೆ ಬಂದ ಪಾಂಡವರು ತಮ್ಮ ತಮ್ಮ ರಥದಿಂದ ಕೆಳಗಿಳಿದರು.

ತತೋ ಗಾಂಡೀವಧನ್ವಾನಮಭ್ಯಭಾಷತ ಕೇಶವಃ ।
ಸ್ಥಿತಃ ಪ್ರಿಯಹಿತೇ ನಿತ್ಯಮತೀವ ಪುರುಷರ್ಷಭಃ ॥೮॥

ಅನಂತರ ಅರ್ಜುನನ ಹಿತವನ್ನೇ ನಿತ್ಯವೂ ಬಯಸುತ್ತಿದ್ದ ಪುರುಷೋತ್ತಮನಾದ ಶ್ರೀಕೃಷ್ಣನು ಗಾಂಡೀವಧಾರಿಯಾದ ಅರ್ಜುನನಿಗೆ ಹೀಗೆ ಹೇಳಿದನು.

ಶ್ರೀಭಗವಾನ್

ಅವರೋಪಯ ಗಾಂಡೀವಮಕ್ಷಯೌ ಚ ಮಹೇಷುಧೀ ।
ತತೋಽಹಮವರೋಕ್ಷ್ಯಾಮಿ ಪಶ್ಚಾದ್ ಭರತಸತ್ತಮ ॥೯॥

ಸ್ವಯಂ ಚೈವಾವರೋಹ ತ್ವಮೇತಚ್ಛ್ರೇಯಸ್ತವಾನಘ ॥೧೦॥

ಶ್ರೀಭಗವಾನ್– ಭರತೋತ್ತಮನಾದ ಅರ್ಜುನನೇ! ಗಾಂಡೀವದ ಹಗ್ಗವನ್ನು ಬಿಚ್ಚು. ಅಕ್ಷಯವಾದ ಬತ್ತಳಿಕೆಯನ್ನು ಕೆಳಗಿಳಿಸು. ಸ್ವಯಂ ನೀನೂ ಕೆಳಗಿಳಿ. ದೋಷರಹಿತನೇ! ಇದು ನಿನಗೆ ಶ್ರೇಯಸ್ಕರವಾದುದು. ಅದು ಆದ ಮೇಲೆ ನಾನು ಕೆಳಗಿಳಿಯುತ್ತೇನೆ.

ಸಂಜಯಃ

ಅವಾರೋಹತ್ ತದಾ ವೀರಃ ಪಾಂಡುಪುತ್ರೋ ಧನಂಜಯಃ ॥೧೧॥

ಸಂಜಯ– ಆಗ ವೀರನಾದ ಅರ್ಜುನನು ಗಾಂಡೀವ, ಬತ್ತಳಿಕೆಗಳನ್ನು ವಿಸರ್ಜಿಸಿ ತಾನು ಕೆಳಗಿಳಿದನು.

ಅಥ ಪಶ್ಚಾತ್ತತಃ ಕೃಷ್ಣೋ ರಶ್ಮೀನುತ್ಸೃಜ್ಯ ವಾಜಿನಾಮ್ ।
ಅವಾರೋಹತ ಮೇಧಾವೀ ರಥಾದ್ ಗಾಂಡೀವಧನ್ವನಃ ॥೧೨॥

ತದನಂತರ ಮಹಾಜ್ಞಾನಿಯಾದ ಶ್ರೀಕೃಷ್ಣನು ಕುದುರೆಗಳ ಹಗ್ಗಗಳನ್ನು ಬಿಚ್ಚಿ ಅರ್ಜುನನ ರಥದಿಂದ ಕೆಳಗಿಳಿದನು.

ಅಥಾವತೀರ್ಣೇ ಭೂತಾನಾಮೀಶ್ವರೋ ಪುರುಷೋತ್ತಮೇ ।
ಕಪಿರಪ್ಯಾಶ್ವಪಾಕ್ರಾಮತ್ ಸಹ ದೇವೈರ್ಧ್ವಜಾಲಯೈಃ ॥೧೩॥

ಸಕಲಲೋಕಕ್ಕೆ ಸ್ವಾಮಿಯಾದ ಪುರುಷೋತ್ತಮನು ಕೆಳಗಿಳಿದಾಗ ಧ್ವಜದಲ್ಲಿದ್ದ ಕಪಿಯೂ ಧ್ವಜದಲ್ಲಿದ್ದ ಇತರ ದೇವತೆಗಳೊಡನೆ ಬೇಗನೇ ಹೊರಟುಹೋದನು.

ಸ ದಗ್ಧೋ ದ್ರೋಣಕರ್ಣಾಭ್ಯಾಂ ದಿವ್ಯೈರಸ್ತ್ರೈರ್ಮಹಾರಥಃ ।
ಅಥ ದೀಪ್ತೋಽಗ್ನಿನಾಪ್ಯಾಶು ಪ್ರಜಜ್ವಾಲ ಮಹಾದ್ಯುತಿಃ ॥೧೪॥

ದ್ರೋಣನ ಮತ್ತು ಕರ್ಣನ ಅಸ್ತ್ರಗಳಿಂದಾಗಿ ಆ ಮಹಾರಥವು ಸುಟ್ಟುಹೋಗಿತ್ತು. ಬೆಂಕಿಯಿಂದ ಆ ಮಹಾಕಾಂತಿಯುಳ್ಳ ರಥವು ಚೆನ್ನಾಗಿ ಶೋಭಿಸುತ್ತಾ ಪ್ರಕಾಶಿಸಿತು.

ಸೋಪಾಸಂಗಃ ಸತೂಣೀರಃ ಸಾಶ್ವಃ ಸಯುಗಬಂಧನಃ ।
ಭಸ್ಮೀಭೂತೋಽಭವದ್ ಭೂಮೌ ರಥೋ ಗಾಂಡೀವಧನ್ವನಃ ॥೧೫॥

ರಥದ ಉಪಾಂಗಗಳು, ಬತ್ತಳಿಕೆ, ಕುದುರೆಗಳು, ನೊಗದ ಕಟ್ಟು ಇವುಗಳಿಂದ ಸತತವಾದ ಗಾಂಡೀವಧಾರಿಯಾದ ಅರ್ಜುನನ ಆ ರಥವು ಭಸ್ಮವಾಯಿತು.

ತಂ ದೃಷ್ಟ್ವಾ ಭಸ್ಮಸಾದ್ಭೂತಂ ತದಾ ಪಾಂಡುಸುತಾಃ ಪ್ರಭೋ ।
ಅಭವನ್ ವಿಸ್ಮಿತಾ ರಾಜನ್ನರ್ಜುನಶ್ಚೇದಮಬ್ರವೀತ್ ॥೧೬॥

ಕೃತಾಂಜಲಿಃ ಸಪ್ರಣಯಂ ಪ್ರಣಿಪತ್ಯಾಭಿವಾದ್ಯ ಚ ॥೧೭॥

ಪ್ರಭುವೇ! ರಾಜನೇ! ಭಸ್ಮವಾದ ಆ ರಥವನ್ನು ನೋಡಿದ ಪಾಂಡವರು ಬಹಳ ಆಶ್ಚರ್ಯಚಕಿತರಾದರು. ಅರ್ಜುನನಾದರೂ ಕೈಮುಗಿದುಕೊಂಡು ವಿನಯದಿಂದ ಸಾಷ್ಟಾಂಗವಾಗಿ ನಮಸ್ಕರಿಸಿ ಇದನ್ನು ಹೇಳಿದನು.

ಅರ್ಜುನಃ

ಗೋವಿಂದ ಕಸ್ಮಾದ್ ಭಗವನ್ ರಥೋ ದಗ್ಧೋಽಯಮಗ್ನಿನಾ ॥೧೮॥

ಕಿಮೇತನ್ಮಹದಾಶ್ಚರ್ಯಂ ಭಗವನ್ ಯದುನಂದನ ।
ತನ್ಮೇ ಬ್ರೂಹಿ ಮಹಾಬಾಹೋ ಶ್ರೋತವ್ಯಂ ಯದಿ ಚೇನ್ಮಯಾ ॥೧೯॥

ಅರ್ಜುನ– 'ಭಗವನ್! ಗೋವಿಂದ! ಈ ರಥವು ಬೆಂಕಿ ಬಿದ್ದು ಹೇಗೆ ಸುಟ್ಟು ಹೋಯಿತು? ಯದುನಂದನನೇ! ಇದೇನು ಬಹಳ ಆಶ್ಚರ್ಯಕರವಾಗಿದೆ? ನನಗೆ ತಿಳಿಯಲು ಯೋಗ್ಯವಾಗಿದ್ದರೆ, ಮಹಾಬಾಹೋ! ನನಗೆ ಅದನ್ನು ಹೇಳು.'

ಶ್ರೀಭಗವಾನ್

ದ್ರೋಣಕರ್ಣಾಸ್ತ್ರನಿರ್ದಗ್ಧಃ ಪೂರ್ವಮೇವಾಯಮರ್ಜುನ ।
ಮದಾಸ್ಥಿತತ್ವಾತ್ ಸಮರೇ ನ ವಿಶೀರ್ಣಃ ಪರಂತಪ ॥೨೦॥

ಶ್ರೀಭಗವಾನ್– ಶತ್ರುಸಂಹಾರಕ ಅರ್ಜುನನೇ! ಯುದ್ಧದಲ್ಲಿ ದ್ರೋಣ ಮತ್ತು ಕರ್ಣರ ಅಸ್ತ್ರಗಳಿಂದ ಮೊದಲೇ ಸುಟ್ಟುಹೋಗಿದ್ದ ರಥವು ನನ್ನ ಮತ್ತು ಹನುಮಂತನ ಉಪಸ್ಥಿತಿಯಿಂದಾಗಿ ಪುಡಿಯಾಗಲಿಲ್ಲ.

ಇದಾನೀಂ ತು ವಿಶೀರ್ಣೋಽಯಂ ದಗ್ಧೋ ಬ್ರಹ್ಮಾಸ್ತ್ರತೇಜಸಾ ।
ಮಯಾ ವಿಮುಕ್ತಃ ಕೌಂತೇಯ ತ್ವಯ್ಯದ್ಯ ಕೃತಕರ್ಮಣಿ ॥೨೧॥

ಕುಂತೀಪುತ್ರನೇ! ನೀನು ಈಗ ಸಕಲಕಾರ್ಯಗಳನ್ನೂ ಪೂರೈಸಿದವನಾಗಿರುವಿ. ಆದ್ದರಿಂದ ನಾನು ರಥದಿಂದ ಕೆಳಗಿಳಿದೆ. ಬ್ರಹ್ಮಾಸ್ತ್ರದ ತೇಜಸ್ಸಿಗೊಳಗಾದ ರಥವು ಈಗ ಪುಡಿಯಾಗಿ ಭಸ್ಮವಾಯಿತು.

ಸಂಜಯಃ

ಈಷದುತ್ಸ್ಮಯಮಾನಸ್ತು ಭಗವಾನ್ ಕೇಶವೋಽರಿಹಾ ।
ಪರಿಷ್ವಜ್ಯ ತು ರಾಜಾನಂ ಯುಧಿಷ್ಠಿರಮಭಾಷತ ॥೨೨॥

ಸಂಜಯ– ಶತ್ರುಸಂಹಾರಕನಾದ ಭಗವಾನ್ ಕೇಶವನು ಮಂದಸ್ಮಿತನಾಗಿ ರಾಜ ಯುಧಿಷ್ಠಿರನನ್ನು ಆಲಿಂಗಿಸಿ ಅವನಿಗೆ ಹೇಳುತ್ತಾನೆ.

ಶ್ರೀಭಗವಾನ್

ದಿಷ್ಟ್ಯಾ ಜಯಸಿ ಕೌಂತೇಯ ದಿಷ್ಟ್ಯಾ ತೇ ಶತ್ರವೋ ಹತಾಃ ॥೨೩॥

ಶ್ರೀಭಗವಾನ್– ಕುಂತೀಪುತ್ರನೇ! ಅದೃಷ್ಟದಿಂದ ನೀನು ಯುದ್ಧದಲ್ಲಿ ಜಯವನ್ನು ಸಂಪಾದಿಸಿರುವಿ. ಅದೃಷ್ಟದಿಂದಾಗಿ ನಿನ್ನ ಶತ್ರುಗಳೂ ಹತರಾಗಿದ್ದಾರೆ.

ದಿಷ್ಟ್ಯಾ ಗಾಂಡೀವಧನ್ವಾ ಚ ಭೀಮಸೇನಶ್ಚ ಪಾಂಡವಃ ।
ತ್ವಂ ಚಾಪಿ ಕುಶಲೀ ರಾಜನ್ ಮಾದ್ರೀಪುತ್ರೌ ಚ ಪಾಂಡವೌ ॥೨೪॥

ರಾಜನೇ! ಅದೃಷ್ಟವಶಾತ್ ಗಾಂಡೀವಧಾರಿಯಾದ ಅರ್ಜುನ, ಭೀಮಸೇನ, ನಕುಲ-ಸಹದೇವರು ಮತ್ತು ನೀನು ಎಲ್ಲರೂ ಕ್ಷೇಮವಾಗಿರುವಿರಿ.

ಮುಕ್ತ ವೀರಕ್ಷಯಾದಸ್ಮಾತ್ ಸಂಗ್ರಾಮಾನ್ನಿಹತದ್ವಿಷಃ ॥೨೫॥

ಶತ್ರುಗಳ ನಾಶಕ್ಕೆ ಕಾರಣವಾದ ಈ ಮಹಾಯುದ್ಧವನ್ನು ಪೂರೈಸಿರುವಿ.

ಕ್ಷಿಪ್ರಮುತ್ತರಕಾಲಾನಿ ಕುರು ಕರ್ಮಾಣಿ ಭಾರತ ॥೨೬॥

ಭರತಕುಲೋದ್ಭವನೇ! ಮುಂದೆ ಮಾಡಬೇಕಾದ ಕಾರ್ಯಗಳನ್ನು ಮಾಡು.

ಉಪಯಾತಮುಪಪ್ಲಾವ್ಯಂ ಸಹ ಗಾಂಡೀವಧನ್ವನಾ ।
ಆನೀಯ ಮಧುಪರ್ಕಂ ಮಾಂ ಯತ್ಪುರಾ ತ್ವಮವೋಚಥಾಃ ॥೨೭॥

ಹಿಂದೆ ನಾನು ಉಪಪ್ಲಾವ್ಯನಗರಕ್ಕೆ ಬಂದಾಗ ಅರ್ಜುನನನ್ನು ಕೂಡಿಕೊಂಡು ಮಧುಪರ್ಕಾದಿಗಳಿಂದ ಸತ್ಕರಿಸಿ ನನಗೆ ಏನನ್ನು ಹೇಳಿರುವಿಯೋ ಅದನ್ನು ಕೇಳು.

ಏಷ ಭ್ರಾತಾ ಸಖಾ ಚೈವ ತವ ಕೃಷ್ಣ ಧನಂಜಯಃ ।
ರಕ್ಷಿತವ್ಯೋ ಮಹಾಬಾಹೋ ಸರ್ವಾಸ್ವಾಪತ್ಸ್ವಿತಿ ಪ್ರಭೋ ॥೨೮॥

ತವ ಚೈವ ಬ್ರುವಾಣಸ್ಯ ತಥೇತ್ಯೇವಾಹಮಬ್ರುವಮ್ ॥೨೯॥

'ಹೇ ಕೃಷ್ಣ! ನನ್ನ ಈ ಸಹೋದರ ಅರ್ಜುನನು ನಿನ್ನ ಸ್ನೇಹಿತ. ಮಹಾಬಾಹುವೇ! ಪ್ರಭುವೇ! ಎಲ್ಲಾ ಅವಸ್ಥೆಗಳಲ್ಲಿಯೂ ಇವನನ್ನು ರಕ್ಷಿಸು!' ಎಂದು ನೀನು ಹೇಳಿದಾಗ ನಾನು 'ತಥಾಸ್ತು' ಎಂದು ಹೇಳಿದ್ದೆನು.

ಸ ಸವ್ಯಸಾಚೀ ಗುಪ್ತಸ್ತೇ ವಿಜಯೀ ಚ ನರೇಶ್ವರ ।
ಭ್ರಾತೃಭಿಃ ಸಹ ರಾಜೇಂದ್ರ ಶೂರಃ ಸತ್ಯಪರಾಕ್ರಮಃ ॥೩೦॥

ರಾಜನೇ! ಅಂತಹ ಸವ್ಯಸಾಚಿಯಾದ ಅರ್ಜುನನನ್ನು ರಕ್ಷಿಸಿರುವೆನು. ಶೂರನಾದ ಹಾಗೂ ಸತ್ಯಪರಾಕ್ರಮಿಯಾದ ಅವನಿಂದು ಸಹೋದರರ ಜೊತೆ ಸೇರಿ ಜಯಶಾಲಿಯಾಗಿದ್ದಾನೆ.

ಮುಕ್ತೋ ವೀರಕ್ಷಯಾದಸ್ಮಾತ್ ಸಂಗ್ರಾಮಾದ್ ರೋಮಹರ್ಷಣಾತ್ ॥

ರೋಮಾಂಚನಕಾರಿಯಾದ ವೀರರ ನಾಶವನ್ನು ಕಂಡ ಈ ಯುದ್ಧದಿಂದ ಮುಕ್ತನಾಗಿದ್ದಾನೆ.

ಸಂಜಯಃ

ಏವಮುಕ್ತಸ್ತು ಕೃಷ್ಣೇನ ಧರ್ಮಪುತ್ರೋ ಯುಧಿಷ್ಠಿರಃ ।
ಹೃಷ್ಟರೋಮಾ ಮಹಾಬಾಹುಃ ಪ್ರತ್ಯುವಾಚ ಜನಾರ್ದನಮ್ ॥೩೨॥

ಸಂಜಯ– ಶ್ರೀಕೃಷ್ಣನು ಹೀಗೆ ಹೇಳಿದಾಗ ಮೈರೋಮಾಂಚನಗೊಂಡ ಮಹಾಬಾಹು ಯುಧಿಷ್ಠಿರನು ಜನಾರ್ದನನಿಗೆ ಉತ್ತರಿಸುತ್ತಾನೆ.

ಯುಧಿಷ್ಠಿರಃ

ಪ್ರಯುಕ್ತಂ ದ್ರೋಣಕರ್ಣಾಭ್ಯಾಂ ಬ್ರಹ್ಮಾಸ್ತ್ರಮರಿಸೂದನ ।
ಕಸ್ತ್ವದನ್ಯಃ ಸಹೇತ್ ಸಾಕ್ಷಾದಪಿ ವಜ್ರೀ ಪುರಂದರಃ ॥೩೩॥

ಯುಧಿಷ್ಠಿರ– ಶತ್ರುನಾಶಕನೇ! ದ್ರೋಣ ಮತ್ತು ಕರ್ಣರು ಪ್ರಯೋಗಿಸಿದ ಬ್ರಹ್ಮಾಸ್ತ್ರವನ್ನು ನೀನಲ್ಲದೆ ಸಾಕ್ಷಾತ್ ದೇವೇಂದ್ರನಿಗೂ ಕೂಡ ಸಹಿಸಲು ಅಸಾಧ್ಯವಾಗಿತ್ತು.

ಭವತಸ್ತು ಪ್ರಸಾದಾಚ್ಚ ಸಂಗ್ರಾಮೇ ಬಹವೋ ಜಿತಾಃ ।
ಮಹಾರಣಗತಃ ಪಾರ್ಥೋ ಯಚ್ಚ ನಾಸೀತ್ ಪರಾಙ್ಮುಖಃ ॥೩೪॥

ನಿನ್ನ ಅನುಗ್ರಹದಿಂದಲೇ ಯುದ್ಧದಲ್ಲಿ ಅರ್ಜುನನು ಹಿಮ್ಮುಖನಾಗದೇ ಅನೇಕ ವೀರರನ್ನು ಗೆದ್ದಿರುತ್ತಾನೆ.

ತಥಾ ತವ ಮಹಾಬಾಹೋ ಪರ್ಯಾಯೈರ್ಬಹುಭಿರ್ಮಯಾ ।
ಕರ್ಮಣಾಮನುಸಂಧಾನಾತ್ ತೇಜಸಶ್ಚ ಗತಿಃ ಶ್ರುತಾ ॥೩೫॥

ಮಹಾಬಾಹುವೇ! ಅದೇ ರೀತಿಯಲ್ಲಿ ಅನೇಕ ಬಾರಿ ನಿನ್ನ ಮಾರ್ಗದರ್ಶನ-ದಿಂದಲೇ ನಮಗೆ ಕಾರ್ಯದಲ್ಲಿ ಸಿದ್ಧಿಯು ಪ್ರಾಪ್ತವಾಯಿತು ಹಾಗೂ ತೇಜಸ್ಸಿನ ಪ್ರಾಪ್ತಿಯೂ ಆಯಿತು.

ಉಪಪ್ಲಾವ್ಯೇ ಮಹರ್ಷಿರ್ಮಾಂ ಕೃಷ್ಣದ್ವೈಪಾಯನೋಽಬ್ರವೀತ್ ।
ಯತೋ ಧರ್ಮಸ್ತತಃ ಕೃಷ್ಣೋ ಯತಃ ಕೃಷ್ಣಸ್ತತೋ ಜಯಃ ॥೩೬॥

ಉಪಪ್ಲಾವ್ಯದಲ್ಲಿ ಮಹರ್ಷಿ ವೇದವ್ಯಾಸರು ಹೇಳಿದ್ದರು : 'ಎಲ್ಲಿ ಧರ್ಮವಿರುತ್ತದೆಯೋ ಅಲ್ಲಿ ಶ್ರೀಕೃಷ್ಣನಿರುತ್ತಾನೆ. ಎಲ್ಲಿ ಶ್ರೀಕೃಷ್ಣನಿರುತ್ತಾನೆಯೋ ಅಲ್ಲಿ ಜಯವಿರುತ್ತದೆ' ಎಂದು.

ಸಂಜಯಃ

ಏವಮುಕ್ತಸ್ತತಃ ಕೃಷ್ಣಃ ಪ್ರತ್ಯುವಾಚ ಯುಧಿಷ್ಠಿರಮ್ ॥೩೭॥

ಸಂಜಯ– ಧರ್ಮರಾಜನು ಹೀಗೆ ಹೇಳಿದಾಗ ಶ್ರೀಕೃಷ್ಣನು ಯುಧಿಷ್ಠಿರನಿಗೆ ಹೀಗೆ ಹೇಳುತ್ತಾನೆ.

ಶ್ರೀಭಗವಾನ್

ಅಕ್ಷೌಹಿಣ್ಯೋ ದಶಾಷ್ಟೌ ಚ ತವ ತೇಷಾಂ ಚ ಭಾರತ ।
ನ ತುಲ್ಯಾಶ್ಚಾರ್ಜುನಸ್ಯೇಹ ಬಲೇನ ಕುರುನಂದನ ॥೩೮॥

ಶ್ರೀಭಗವಾನ್– ಕುರುನಂದನನೇ! ಭರತಕುಲೋದ್ಭವನೇ! ನಿನ್ನ ಮತ್ತು ಕೌರವರ ಹದಿನೆಂಟು ಅಕ್ಷೌಹಿಣಿ ಸೇನೆಯೂ ಬಲದ ವಿಷಯದಲ್ಲಿ ಅರ್ಜುನನಿಗೆ ಸಮವಾಗಿಲ್ಲ.

ಸ ಏಷ ಸರ್ವಾಣ್ಯಸ್ತ್ರಾಣಿ ದಿವ್ಯಾನಿ ಪ್ರಾಪ್ಯ ಶಂಕರಾತ್ ।
ಮತ್ಸಮೋ ವಾ ವಿಶಿಷ್ಟೋ ವಾ ರಣೇ ತ್ವಮಿತಿ ಪಾಂಡವ ॥೩೯॥

ಪಾಂಡುಪುತ್ರನೇ! ಅವನು ರುದ್ರನಿಂದ ದಿವ್ಯಾಸ್ತ್ರಗಳನ್ನು ಪಡೆದುಕೊಂಡು ನರಾವೇಶದ ಪ್ರಯುಕ್ತವಾಗಿ ನನಗೆ ಸಮಾನನಾಗಿದ್ದಾನೆ. ಹರಿಯ ಆವೇಶವಿರುವುದರಿಂದ ಮದ್ವಿಶಿಷ್ಟನಾಗಿದ್ದಾನೆ.

ಅನುಜ್ಞಾತಃ ಪಾಂಡುಸುತಃ ಪುನಃ ಪ್ರತ್ಯಾಗಮನ್ಮಹೀಮ್ ॥೪೦॥

ಕೈಲಾಸಕ್ಕೆ ಹೋಗಿದ್ದ ಅರ್ಜುನನು ರುದ್ರನ ಒಪ್ಪಿಗೆಯನ್ನು ಪಡೆದು ಪುನಃ ಭೂಮಿಗೆ ಬಂದಿದ್ದ.

ಭೂತಂ ಭವ್ಯಂ ಭವಿಷ್ಯಚ್ಚ ಅನುಜಾನಾಸಿ ಚೇತ್ ಪ್ರಭೋ ।
ನಿಮೇಷಾರ್ಧಾನ್ನರವ್ಯಾಘ್ರೋ ನಯೇದಿತಿ ಮತಿರ್ಮಮ ॥೪೧॥

ಪ್ರಭುವೇ! ನೀನು ಒಪ್ಪಿಗೆಯನ್ನು ಕೊಟ್ಟರೆ ಹಿಂದೆ ಇದ್ದದ್ದನ್ನು, ಈಗ ಇರುವುದನ್ನು, ಮುಂದೆ ಬರುವುದನ್ನು, ಎಲ್ಲವನ್ನೂ ಮನುಷ್ಯಸಿಂಹನಾದ ಅರ್ಜುನನು ಕ್ಷಣಾರ್ಧದಲ್ಲಿ ನಾಶಮಾಡಬಲ್ಲ ಎಂಬುದು ನನ್ನ ಅಭಿಪ್ರಾಯ.

ದ್ರೋಣಂ ಭೀಷ್ಮಂ ಕೃಪಂ ಕರ್ಣಂ ದ್ರೋಣಪುತ್ರಂ ಜಯದ್ರಥಮ್ ।
ನಿಹಂತುಂ ಶಕ್ನುಯಾತ್ ಕ್ರುದ್ಧೋ ನಿಮೇಷಾರ್ಧಾದ್ಧನಂಜಯಃ ॥೪೨॥

ಕ್ರುದ್ಧನಾದ ಧನಂಜಯನು ದ್ರೋಣನನ್ನು, ಭೀಷ್ಮನನ್ನು, ಕೃಪನನ್ನು, ಕರ್ಣನನ್ನು, ಅಶ್ವತ್ಥಾಮನನ್ನು, ಜಯದ್ರಥನನ್ನು ನಿಮಿಷಾರ್ಧದಲ್ಲಿ ಕೊಲ್ಲಲು ಸಮರ್ಥನಾಗಿದ್ದಾನೆ.

ಸದೇವಾಸುರಗಂಧರ್ವಾನ್ ಸಯಕ್ಷೋರಗರಾಕ್ಷಸಾನ್ ।
ಜಿತ್ವಾ ಲೋಕಾನ್ ವಿಜೇತುಂ ಹಿ ಶಕ್ತಃ ಕಿಮಿಹ ಮಾನುಷಾನ್ ॥೪೩॥

ಜಯಶೀಲನಾದ ಅರ್ಜುನನು ದೇವತೆಗಳು, ಗಂಧರ್ವರು, ಯಕ್ಷರು, ಸರ್ಪಗಳು, ರಾಕ್ಷಸರು ಇವರೆಲ್ಲರನ್ನೂ ಮತ್ತು ಮೂರು ಲೋಕಗಳನ್ನೂ ಗೆಲ್ಲುವ

ಸಾಮರ್ಥ್ಯವುಳ್ಳವನಾಗಿದ್ದಾನೆ. ಹೀಗಿರುವಾಗ ಮನುಷ್ಯರ ವಿಷಯದಲ್ಲಿ ಏನು ಹೇಳಬೇಕು?

ವಿಧಿನಾ ಮಹಿತಶ್ಚಾಸೌ ಮಯಾ ಸಂಚೋದಿತೋಽಪಿ ಸನ್ ।
ನ ಚಕಾರ ಮತಿಂ ಹಂತುಂ ಕೃತಾಂತೋ ಬಲವತ್ತರಃ ॥೪೪॥

'ಗುರುವನ್ನು ವಧಿಸಬಾರದು' ಎಂಬ ಬುದ್ಧಿಗೆ ಬದ್ಧನಾಗಿ ಮಹತ್ವವನ್ನು ಹೊಂದಿದ ಬಲಶಾಲಿ ಅರ್ಜುನನು ನಾನು ಹೇಳಿದರೂ ಕೂಡ 'ಗುರುಗಳನ್ನು ಕೊಲ್ಲಲಾರೆ' ಎಂಬ ನಿಶ್ಚಯವುಳ್ಳವನಾಗಿ ಅವರನ್ನು ಕೊಲ್ಲಲು ಮನಸ್ಸನ್ನು ಮಾಡಲಿಲ್ಲ.

ಅತ್ರ ಗೀತಾ ಮಯಾ ಸುಷ್ಠು ಗಿರಃ ಸತ್ಯಾ ಮಹೀಪತೇ ।
ದರ್ಶಿತಂ ಮಯಿ ಸರ್ವಂ ಚ ತೇನಾಸೌ ಜಿತವಾನ್ ರಿಪೂನ್ ॥೪೫॥

ಈ ವಿಷಯದಲ್ಲಿ ನಾನು ಭಗವದ್ಗೀತೆಯನ್ನು ಹೇಳಿರುತ್ತೇನೆ. ನನ್ನ ಸ್ವರೂಪವನ್ನು ತೋರಿಸುವ ಮೂಲಕ ನಾನು ಸರ್ವವ್ಯಾಪಿಯಾಗಿದ್ದೇನೆಂದು ಅವನಿಗೆ ತಿಳಿಸಿಕೊಟ್ಟಿದ್ದೆ. ಆದ್ದರಿಂದಲೇ ಅವನು ಎಲ್ಲರನ್ನೂ ಗೆದ್ದಿರುವನು.

ಅರ್ಜುನೋಽಪಿ ಮಹಾಬಾಹುರ್ಮಯಾ ತುಲ್ಯೋ ಮಹೀಪತೇ ।
ಸ ಮಹೇಶ್ವರಲಬ್ಧಾಸ್ತ್ರಃ ಕಿಂ ನ ಕುರ್ಯಾದ್ ವಿಭುಃ ಪ್ರಭೋ ॥೪೬॥

ರಾಜನೇ! ಮಹಾಬಾಹುವಾದ ಅರ್ಜುನನೂ ಕೂಡ ನನಗೆ ಸಮಾನನಾಗಿದ್ದಾನೆ. ರುದ್ರನಿಂದ ಅಸ್ತ್ರಗಳನ್ನು ಪಡೆದುಕೊಂಡಿರುವ ಈ ಅರ್ಜುನನು ಏನನ್ನು ಮಾಡಲು ಸಾಧ್ಯವಿಲ್ಲ? ಎಲ್ಲವನ್ನೂ ಮಾಡುವನು.

ಸಂಜಯಃ

ಇತ್ಯೇವಮುಕ್ತೇ ತೇ ವೀರಾಃ ಶಿಬಿರಂ ತವ ಭಾರತ ।
ಪ್ರವಿಶ್ಯ ಪ್ರತ್ಯಪದ್ಯಂತ ಕೋಶರತ್ನರ್ಧಿಸಂಚಯಾನ್ ॥೪೭॥

ಸಂಜಯ– ಭರತಕುಲೋದ್ಭವನೆ! ಶ್ರೀಕೃಷ್ಣನು ಹೀಗೆ ಹೇಳಿದಾಗ ನಿನ್ನ ಕಡೆಯ ವೀರರು ಶಿಬಿರವನ್ನು ಪ್ರವೇಶಿಸಿ ಅಲ್ಲಿದ್ದ ಕೋಶ, ರತ್ನ, ಸಂಪತ್ತಿನ ರಾಶಿಗಳನ್ನು ನೋಡಿದರು.

ರಜತಂ ಜಾತರೂಪಂ ಚ ಮಣೀನಥ ಚ ಮೌಕ್ತಿಕಾನ್ ।
ಭೂಷಣಾನ್ಯಥ ಮುಖ್ಯಾನಿ ಕಂಬಲಾನ್ಯಜಿನಾನಿ ಚ ॥೪೮॥

ದಾಸೀದಾಸಮಸಂಖ್ಯೇಯಂ ರಾಜ್ಯೋಪಕರಣಾನಿ ಚ ॥೪೯॥

ತೇ ಪ್ರಾಪ್ಯ ಧನಮಕ್ಷಯ್ಯಂ ತ್ವದೀಯಂ ಭರತರ್ಷಭ ।
ಉದಕ್ರೋಶನ್ ಮಹೇಷ್ವಾಸಾ ನರೇಂದ್ರ ವಿಜಿತಾರಯಃ ॥೫೦॥

ಬೆಳ್ಳಿ, ಬಂಗಾರ, ನಾನಾ ವಿಧದ ಮಣಿಗಳು, ಮುತ್ತುಗಳು, ಪ್ರಮುಖವಾದ ಆಭರಣಗಳು, ಕಂಬಳಿ, ವಸ್ತ್ರ ಅಜಿನಗಳು, ಅಸಂಖ್ಯರಾದ ದಾಸರು, ದಾಸಿಯರು, ರಾಜ್ಯದ ವಿವಿಧ ಉಪಕರಣಗಳು - ಇವೆಲ್ಲವನ್ನೂ ಹೊಂದಿದರು. ಭರತಶ್ರೇಷ್ಠನೇ! ಇದೆಲ್ಲವೂ ನಿನಗೆ ವಶವಾದವುಗಳೂ ಎಂದು ತಿಳಿದು, ಶತ್ರುಗಳನ್ನು ಗೆದ್ದಿರುವ ಮಹಾಬಿಲ್ಲಾರರು ಜೋರಾಗಿ ಕೇಕೆ ಹಾಕಿ ಶಬ್ದ ಮಾಡಿದರು.

ತೇ ತು ವೀರಾಃ ಸಮಾಶ್ವಸ್ಯ ವಾಹನಾನ್ಯವಮುಚ್ಯ ಚ ।
ಅತಿಷ್ಠಂತ ಮುಹುಃ ಸರ್ವೇ ಪಾಂಡವಾ ವಿಗತಜ್ವರಾಃ ॥೫೧॥

ಆ ಪಾಂಡವ ವೀರರು ವಿಶ್ರಾಂತಿಯನ್ನು ಪಡೆದು ವಾಹನಗಳಿಂದ ಕುದುರೆಗಳನ್ನು ಬಿಡಿಸಿ ಸಕಲವ್ಯಥೆಗಳನ್ನು ಕಳೆದುಕೊಂಡು ಪುನಃ ಸನ್ನದ್ಧರಾದರು.

ಅಥಾಬ್ರವೀನ್ಮಹಾರಾಜ ವಾಸುದೇವೋ ಮಹಾಯಶಾಃ ॥೫೨॥

ಮಹಾರಾಜನೇ! ಅನಂತರ ಮಹಾಕೀರ್ತಿಶಾಲಿಯಾದ ಶ್ರೀಕೃಷ್ಣನು ಹೇಳಿದನು.

ಶ್ರೀಭಗವಾನ್

ಅಸ್ಮಾಭಿರ್ಮಂಗಲಾರ್ಥಾಯ ವಸ್ತವ್ಯಂ ನಗರಾದ್ ಬಹಿಃ ॥೫೩॥

ಜಯಂತೀ ಯತ್ರ ದೇವೀ ತು ತತ್ರ ವ್ರಜತ ಮಾಚಿರಮ್ ।
ಉಪಪಾದಿತಮೇತನ್ಮೇ ಯುದ್ಧಾರಂಭೋಪಕಲ್ಪಿತಮ್ ॥೫೪॥

ಶ್ರೀಭಗವಾನ್– ಮಂಗಳಸ್ನಾನವನ್ನು ಮಾಡಲಿಕ್ಕಾಗಿ ನಾವೆಲ್ಲರೂ ನಗರದಿಂದ ಹೊರಗಡೆ ಹೋಗಬೇಕು. ದೇವಿ ಜಯಂತಿಯು ಎಲ್ಲಿ ಇರುವಳೋ ಅಲ್ಲಿ ಬೇಗನೇ ಹೋಗಿರಿ. ಯಾವ ಸಂಕಲ್ಪದೊಡನೆ ಯುದ್ಧವು ಆರಂಭವಾಗಿತ್ತೋ ಅದು ಈಗ ಪ್ರಾಪ್ತವಾಗಿದೆ.

ಸಂಜಯಃ

ತಥೇತ್ಯುಕ್ತ್ವಾ ತು ತೇ ಸರ್ವೇ ಪಾಂಡವಾಃ ಸಾತ್ಯಕಿಸ್ತಥಾ ।
ವಾಸುದೇವೇನ ಸಹಿತಾ ಮಂಗಲಾರ್ಥಂ ಯಯುರ್ಬಹಿಃ ॥೫೫॥

ಸಂಜಯ– 'ಹಾಗೆಯೇ ಆಗಲಿ' ಎಂದು ಹೇಳುತ್ತಾ ಎಲ್ಲಾ ಪಾಂಡವರು ಮತ್ತು ಸಾತ್ಯಕಿಯು ಶ್ರೀಕೃಷ್ಣನನ್ನು ಕೂಡಿಕೊಂಡು ಮಂಗಳಸ್ನಾನಕ್ಕಾಗಿ ನಗರದಿಂದ ಹೊರಗೆ ಹೋದರು.

ತೇ ಸಮಾಸಾದ್ಯ ಸರಿತಂ ಪುಣ್ಯಾಮೋಘವತೀಂ ತದಾ ।
ನ್ಯವಸನ್ನಥ ತಾಂ ರಾತ್ರಿಂ ಪಾಂಡವಾ ಜಿತಶತ್ರವಃ ॥೫೬॥

ಶತ್ರುಗಳನ್ನು ಜಯಿಸಿದ್ದ ಪಾಂಡವರೆಲ್ಲರೂ ಪುಣ್ಯಪ್ರದವಾದ ಓಘವತೀನದಿಗೆ ಬಂದು ಆ ರಾತ್ರಿ ಅಲ್ಲಿಯೇ ವಾಸಮಾಡಿದರು.

ಯುಧಿಷ್ಠಿರಸ್ತತೋ ರಾಜಾ ಪ್ರಾಪ್ತಕಾಲಮಚಿಂತಯತ್ ॥೫೭॥

ಅನಂತರ ರಾಜ ಯುಧಿಷ್ಠಿರನು ಸಮಯಕ್ಕೆ ಸರಿಯಾದ ಕಾರ್ಯವನ್ನು ವಿಚಾರ ಮಾಡಿದನು.

ತತ್ರ ತೇ(ಮೇ) ಗಮನಂ ಪ್ರಾಪ್ತಂ(ಯಃ) ರೋಚತೇ ತವ ಮಾಧವ ।
ಗಾಂಧಾರ್ಯಾಃ ಕ್ರೋಧದೀಪ್ತಾಯಾಃ ಪ್ರಶಮಾರ್ಥಮರಿಂದಮ ॥೫೮॥

'ಮಾಧವನೇ! ಶತ್ರುಸಂಹಾರಕನೇ! (ಮಕ್ಕಳನ್ನು ಕಳೆದುಕೊಂಡು ಅದಕ್ಕೆ ಕಾರಣರಾದ ಪಾಂಡವರ ಮೇಲಿನ) ಕೋಪದಿಂದ ಜ್ವಲಿಸುತ್ತಿರುವ ಗಾಂಧಾರಿಯನ್ನು ಸಮಾಧಾನಪಡಿಸಲಿಕ್ಕಾಗಿ ನಾನು ಹಸ್ತಿನಾಪುರಕ್ಕೆ ಹೋಗಲು ಬಯಸುತ್ತೇನೆ.

ಹೇತುಕಾರಣಯುಕ್ತೈಶ್ಚ(ಸ್ತೈ) ವಾಕ್ಯೈಃ ಕಾಲಸಮೀರಿತೈಃ ।
ಕ್ಷಿಪ್ರಮೇವ ಮಹಾಭಾಗ ಗಾಂಧಾರೀಂ ಪ್ರಶಮಿಷ್ಯಸಿ ॥೫೯॥

ಮಹಾಭಾಗ್ಯವಂತನೇ! ಎಲ್ಲದಕ್ಕೂ ಕಾರಣನಾದ ಶ್ರೀಹರಿಯ ಬಗ್ಗೆ, ಆಯಾ ಜೀವರಿಗೆ ಸಂಬಂಧಿಸಿದ ಪ್ರಾರಬ್ಧಕರ್ಮ, ಯೋಗ್ಯತೆ ಇವುಗಳ ಬಗ್ಗೆ ಇರುವ ಕಾಲೋಚಿತವಾದ ಮಾತುಗಳಿಂದ ಗಾಂಧಾರಿಯನ್ನು ಕೂಡಲೇ ಸಮಾಧಾನ ಪಡಿಸಬೇಕು.

ಪಿತಾಮಹಶ್ಚ ಭಗವಾನ್ ವ್ಯಾಸಸ್ತತ್ರ ಭವಿಷ್ಯತಿ ॥೬೦॥

ಅಲ್ಲಿ ಪಿತಾಮಹನಾದ ವೇದವ್ಯಾಸರೂ ಇರುತ್ತಾರೆ.

ವೈಶಂಪಾಯನಃ

ತತಃ ಸಂಪ್ರೇಷಯಾಮಾಸುರ್ಯಾದವಂ ಗಜಸಾಹ್ವಯಮ್ ।
ತತಃ ಪ್ರಾಯಾಜ್ಜವೇನಾಶು ವಾಸುದೇವಃ ಪ್ರತಾಪವಾನ್ ॥೬೧॥

ದಾರುಕಂ ರಥಮಾಸ್ಥಾಯ ಯತ್ರ ರಾಜಾಂಬಿಕಾಸುತಃ ।
ತಮೂಚುಃ ಸಂಪ್ರಯಾಸ್ಯಂತಂ ಶೈಬ್ಯಸುಗ್ರೀವವಾಹನಮ್ ॥೬೨॥

ವೈಶಂಪಾಯನ– ಅನಂತರ ವಾಸುದೇವನನ್ನು ಹಸ್ತಿನಾಪುರಕ್ಕೆ ಕಳುಹಿಸಿಕೊಡುತ್ತಾರೆ. ಪ್ರತಾಪಿಯಾದ ಶ್ರೀಕೃಷ್ಣನು ವೇಗವಾಗಿ ಧೃತರಾಷ್ಟ್ರನು ಇದ್ದ ಹಸ್ತಿನಾವತಿಗೆ ಹೊರಟನು. ಶೈಬ್ಯ, ಸುಗ್ರೀವಮೊದಲಾದ ಕುದುರೆಗಳುಳ್ಳ ದಾರುಕನ ರಥವನ್ನು ಹತ್ತಿ ಹೊರಡುತ್ತಿದ್ದ ಶ್ರೀಕೃಷ್ಣನಿಗೆ ಪಾಂಡವರು ಹೀಗೆ ಹೇಳುತ್ತಾರೆ.

ಪಾಂಡವಾಃ

ಪ್ರತ್ಯಾಶ್ವಾಸಯ ಗಾಂಧಾರೀಂ ಹತಪುತ್ರಾಂ ಯಶಸ್ವಿನೀಮ್ ॥೬೩॥

ಪಾಂಡವರು– ಮಕ್ಕಳನ್ನು ಕಳೆದುಕೊಂಡಿರುವ ಯಶೋವತಿಯಾದ ಗಾಂಧಾರಿಯನ್ನು ಸಮಾಧಾನಪಡಿಸು.

ವೈಶಂಪಾಯನಃ

ಸ ಪ್ರಾಯಾತ್ ಪಾಂಡವೈರುಕ್ತಸ್ತತ್ಪುರಂ ಸಾತ್ವತಾಂ ವರಃ ।
ಆಸಿಸಾದಯಿಷುಃ ಕ್ಷಿಪ್ರಂ ಗಾಂಧಾರೀಂ ನಿಹತಾತ್ಮಜಾಮ್ ॥೬೪॥

ವೈಶಂಪಾಯನ– ಸಾತ್ವತರಲ್ಲಿ ಶ್ರೇಷ್ಠನಾದ ಶ್ರೀಕೃಷ್ಣನು ಪಾಂಡವರ ಈ ಮಾತನ್ನು ಕೇಳಿ ಮಕ್ಕಳನ್ನು ಕಳೆದುಕೊಂಡಿರುವ ಗಾಂಧಾರಿಯನ್ನು ಚೆನ್ನಾಗಿ ಸಮಾಧಾನಪಡಿಸುವ ಇಚ್ಛೆಯಿಂದ ಬೇಗನೇ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ವಾಸುದೇವಪ್ರಯಾಣಂ ನಾಮ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ಮೂರನೆಯ ಅಧ್ಯಾಯ

ಗಾಂಧಾರಿಯನ್ನು ಸಮಾಧಾನಪಡಿಸಿದ ರೀತಿಯ ಬಗ್ಗೆ ಜನಮೇಜಯ ಪ್ರಶ್ನಿಸಿದಾಗ ವೈಶಂಪಾಯನರು ಅದನ್ನು ಹೇಳಿದ್ದು. ಶ್ರೀಕೃಷ್ಣನು ಗಾಂಧಾರಿ ಮತ್ತು ಧೃತರಾಷ್ಟ್ರರನ್ನು ಸಮಾಧಾನಪಡಿಸಿ ಪುನಃ ಪಾಂಡವರ ಸಮೀಪಕ್ಕೆ ಬಂದುದು.

ಜನಮೇಜಯಃ

ಕಿಮರ್ಥಂ ರಾಜಶಾರ್ದೂಲೋ ಧರ್ಮಪುತ್ರೋ ಯುಧಿಷ್ಠಿರಃ ।
ಗಾಂಧಾರ್ಯೈ ಪ್ರೇಷಯಾಮಾಸ ವಾಸುದೇವಂ ಪರಂತಪಮ್ ॥೧॥

ಜನಮೇಜಯ– ರಾಜಶಾರ್ದೂಲನಾದ ಧರ್ಮಪುತ್ರ ಯುಧಿಷ್ಠಿರನು ಶತ್ರುಸಂಹಾರಕನಾದ ಶ್ರೀಕೃಷ್ಣನನ್ನು ಗಾಂಧಾರಿಯ ಬಳಿಗೆ ಏಕೆ ಕಳುಹಿಸಿದನು?

ಯದಾ ಪೂರ್ವಂ ಗತಃ ಕೃಷ್ಣಃ ಶಮಾರ್ಥಂ ಕೌರವಾನ್ ಪ್ರತಿ ।
ನ ಚ ತಲ್ಲಬ್ಧವಾನ್ ಕಾಮಂ ತತೋ ಯುದ್ಧಮಭೂದಿದಮ್ ॥೨॥

ಹಿಂದೆ ಶ್ರೀಕೃಷ್ಣನು ಯಾವಾಗ ಸಂಧಿಗಾಗಿ ಕೌರವರ ಬಳಿಗೆ ಹೋದನೋ ಆಗ ಅವನ ಇಷ್ಟಾರ್ಥವನ್ನು ಹೊಂದಲಿಲ್ಲ. ಆದ್ದರಿಂದ ಈ ಯುದ್ಧವು ನಡೆಯಿತು.

ನಿಹತೇಷು ತು ಯೋಧೇಷು ಹತೇ ದುರ್ಯೋಧನೇ ತದಾ ।
ಪೃಥಿವ್ಯಾಂ ಪಾಂಡವೇಯಸ್ಯ ನಿಃಸಪತ್ನೇ ಕೃತೇ ಯುಧಿ ॥೩॥

ವಿಶ್ರುತೇ ಶಿಬಿರೇ ಶೂನ್ಯೇ ಪ್ರಾಪ್ತೇ ಯಶಸಿ ಚೋತ್ತಮೇ ।
ಕಿಂ ನು ತತ್ಕಾರಣಂ ಬ್ರಹ್ಮನ್ ಯೇನ ಕೃಷ್ಣೋ ಗತಃ ಪುರಮ್ ॥೪॥

ಯುದ್ಧದಲ್ಲಿ ಯೋಧರೆಲ್ಲರೂ ನಾಶಹೊಂದಿದ್ದಾರೆ. ದುರ್ಯೋಧನನು ಸತ್ತಿದ್ದಾನೆ. ಪೃಥಿವಿಯಲ್ಲಿ ಧರ್ಮರಾಜನಿಗೆ ಪ್ರತಿಸ್ಪರ್ಧಿಗಳು ಯಾರೂ ಇಲ್ಲ. ದುರ್ಯೋಧನನ ಸಂಪದ್ಭರಿತವಾದ ಶಿಬಿರವೂ ಯುಧಿಷ್ಠಿರನ ಕೈವಶವಾಗಿದೆ. ಹೀಗಿರುವಾಗ ಶ್ರೀಕೃಷ್ಣನು ಹಸ್ತಿನಾವತಿಗೆ ಹೋಗಲು ಏನು ಕಾರಣ?

ನ ಚ ತತ್ಕಾರಣಂ ಬ್ರಹ್ಮನ್ನಲ್ಪಂ ವೈ ಪ್ರತಿಭಾತಿ ಮೇ ।
ಯತ್ಸಾಗಮದಮೇಯಾತ್ಮಾ ಸ್ವಯಮೇವ ಜನಾರ್ದನಃ ॥೫॥

ಬ್ರಹ್ಮಜ್ಞಾನಿಯೇ! ಆ ಕಾರಣವು ಬಹಳ ದೊಡ್ಡದಿರಬೇಕೆಂದು ನಾನು ಭಾವಿಸುತ್ತೇನೆ. ಏಕೆಂದರೆ ತಿಳಿಯಲಸಾಧ್ಯವಾದ ಸ್ವರೂಪವುಳ್ಳ ಶ್ರೀಕೃಷ್ಣನೇ ಸ್ವಯಂ ಹೋಗಿದ್ದಾನೆ.

ತ್ವಮೇವೈತನ್ಮಮಾಚಕ್ಷ್ವ ಸರ್ವಮೇತದ್ ದ್ವಿಜೋತ್ತಮ ।
ಯಚ್ಚಾನ್ಯತ್ ಕಾರಣಂ ಬ್ರಹ್ಮನ್ ಕಾರ್ಯಸ್ಯಾಸ್ಯ ವಿನಿರ್ಣಯೇ ॥೬॥

ಬ್ರಾಹ್ಮಣೋತ್ತಮನೇ! ಇದೆಲ್ಲವನ್ನೂ ನೀನೇ ನನಗೆ ಹೇಳು. ಈ ಕೆಲಸದ ನಿರ್ಣಯಕ್ಕೆ ಸಂಬಂಧಿಸಿದಂತೆ ಬೇರೆ ಏನಾದರೂ ಇದ್ದರೆ ಅದನ್ನೂ ಹೇಳು.

ವೈಶಂಪಾಯನಃ

ತ್ವದ್ಮುಕ್ತೋಽಯಮನುಪ್ರಶ್ನೋ ಯನ್ಮಾಂ ತ್ವಂ ಪರಿಪೃಚ್ಛಸಿ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ಯಥಾವದ್ ಭರತರ್ಷಭ ॥೭॥

ವೈಶಂಪಾಯನ– ನೀನು ಯಾವ ಪ್ರಶ್ನೆಯನ್ನು ಕೇಳಿರುವಿಯೋ ಅದು ಬಹಳ ಯುಕ್ತವಾದ ಪ್ರಶ್ನೆಯಾಗಿದೆ. ಭರತೋತ್ತಮನೇ! ಆದ್ದರಿಂದ ಅದನ್ನು ಯಥಾವತ್ತಾಗಿ ನಿನಗೆ ಹೇಳುವೆನು.

ಹತಂ ದುರ್ಯೋಧನಂ ದೃಷ್ಟ್ವಾ ಭೀಮಸೇನೇನ ಸಂಯುಗೇ ।
ವ್ಯತ್ಯಮ್ಯ ಸಮಯಂ ರಾಜನ್ ಧಾರ್ತರಾಷ್ಟ್ರಂ ಮಹಾಬಲಮ್ ॥೮॥

ಅನ್ಯಾಯೇನ ಹತಂ ದೃಷ್ಟ್ವಾ ಗದಾಯುದ್ಧೇನ ಭಾರತ ।
ಯುಧಿಷ್ಠಿರಂ ಮಹಾರಾಜ ಮಹದ್ ಭಯಮಥಾವಿಶತ್ ॥೯॥

ರಾಜನೇ! ಯುದ್ಧದ ನಿಯಮಗಳನ್ನು ಮೀರಿ ರಣರಂಗದಲ್ಲಿ ಭೀಮಸೇನನ ಕೈಯಲ್ಲಿ ಅನ್ಯಾಯಮಾರ್ಗದಲ್ಲಿ ಸತ್ತ ಮಹಾಬಲಶಾಲಿಯಾದ ಧೃತರಾಷ್ಟ್ರನನ್ನು ನೋಡಿ ಯುಧಿಷ್ಠಿರನನ್ನು ಬಹಳವಾದ ಭಯವು ಆವರಿಸಿತು.

ಸೋಽಚಿಂತಯನ್ಮಹಾಭಾಗಾಂ ಗಾಂಧಾರೀಂ ತಪಸಾಽನ್ವಿತಾಮ್ ।
ಘೋರೇಣ ಚಕ್ಷುಷಾ ಶಕ್ತಾಂ ತ್ರೈಲೋಕ್ಯಸ್ಯ ವಿನಾಶನೇ ॥೧೦॥

ಧರ್ಮರಾಜನು ಮಹಾತಪಸ್ವಿಯಾದ, ಮಹಾಭಾಗ್ಯಶಾಲಿಯಾದ ಗಾಂಧಾರಿಯನ್ನು ನೆನೆಸಿಕೊಂಡನು. ಅವಳು ತನ್ನ ಭಯಂಕರವಾದ ದೃಷ್ಟಿಪಾತದಿಂದ ಮೂರುಲೋಕಗಳನ್ನು ಸುಡಲು ಸಮರ್ಥಳಾಗಿದ್ದಳು.

ತಸ್ಯ ಚಿಂತಯಮಾನಸ್ಯ ಬುದ್ಧಿಃ ಸಮಭವತ್ ತದಾ ।
ಗಾಂಧಾರ್ಯಾಃ ಕ್ರೋಧದೀಪ್ತಾಯಾಃ ಪೂರ್ವಂ ಪ್ರಶಮನಂ ಭವೇತ್ ॥

ಸಾ ಹಿ ಪುತ್ರವಧಂ ಶ್ರುತ್ವಾ ಕೃತಮಸ್ಮಾಭಿರೀದೃಶಮ್ ।
ಮಾನಸೇನಾಗ್ನಿನಾ ಕ್ರುದ್ಧಾ ಭಸ್ಮಸಾನ್ನಃ ಕರಿಷ್ಯತಿ ॥೧೨॥

ಕಥಂ ದುಃಖಮಿದಂ ತೀವ್ರಂ ಗಾಂಧಾರೀ ಸಾ ಸಹಿಷ್ಯತಿ ।
ಶ್ರುತ್ವಾ ವಿನಿಹತಂ ಪುತ್ರಂ ಫಲೇನಾಜಿಹ್ಮಯೋಧಿನಮ್ ॥೧೩॥

ಹೀಗೆ ಚಿಂತಿಸಿದ ಧರ್ಮರಾಜನು ಹೀಗೆ ನಿಶ್ಚಯವನ್ನು ಮಾಡಿಕೊಂಡನು: 'ಮೊದಲಿಗೆ ಕೋಪಾವಿಷ್ಟಳಾದ ಗಾಂಧಾರಿಯನ್ನು ಸಮಾಧಾನಪಡಿಸಬೇಕು. ನಾವು ಅವಳ ಮಗನನ್ನು ಈ ರೀತಿಯಲ್ಲಿ ಕೊಂದಿರುವುದನ್ನು ಕೇಳಿ ಕ್ರುದ್ಧಳಾಗಿ ಮನಸ್ಸಿನ ತಾಪದಿಂದ ನಮ್ಮನ್ನು ಸುಟ್ಟು ಭಸ್ಮಗೊಳಿಸುವಳು. ಋಜುಮಾರ್ಗದಲ್ಲಿಯೇ ಯುದ್ಧ ಮಾಡುತ್ತಿದ್ದ ತನ್ನ ಮಗನನ್ನು ಅನ್ಯಾಯದಿಂದ ಸಾಯಿಸಿದ್ದನ್ನು ಕೇಳಿ ಇದರಿಂದುಂಟಾದ ಬಹಳವಾದ ದುಃಖವನ್ನು ಅವಳು ಹೇಗೆ ಸಹಿಸಿಯಾಳು?' ಎಂದು

ವಧಂ ವಿಚಿಂತ್ಯ ಬಹುಧಾ ಭಯಶೋಕಸಮನ್ವಿತಃ ।
ವಾಸುದೇವಮಿದಂ ವಾಕ್ಯಂ ಧರ್ಮರಾಜೋऽಭ್ಯಭಾಷತ ॥೧೪॥

ಹೀಗೆ ದುರ್ಯೋಧನನ ವಧೆಯನ್ನು ಚಿಂತಿಸುತ್ತಾ ಅನೇಕ ರೀತಿಯ ಭಯ ಮತ್ತು ದುಃಖಕ್ಕೊಳಗಾದ ಯುಧಿಷ್ಠಿರನು ಶ್ರೀಕೃಷ್ಣನಿಗೆ ಈ ಮಾತನ್ನು ಹೇಳುತ್ತಾನೆ.

ಯುಧಿಷ್ಠಿರಃ

ತವ ಪ್ರಸಾದಾದ್ ಗೋವಿಂದ ರಾಜ್ಯಂ ನಿಹತಕಂಟಕಮ್ ।
ಅಪ್ರಾಪ್ಯಂ ಮನಸಾऽಪೀಹ ಪ್ರಾಪ್ತಮಸ್ಮಾಭಿರಚ್ಯುತ ॥೧೫॥

ಯುಧಿಷ್ಠಿರ– ಗೋವಿಂದನೇ! ನಾವು ಮನಸ್ಸಿನಲ್ಲಿಯೂ ಪಡೆಯಲು ಅಶಕ್ಯವಾದ ಶತ್ರುಗಳಿಂದ ರಹಿತವಾದ ರಾಜ್ಯ ನಿನ್ನ ಅನುಗ್ರಹದಿಂದ ನಮಗಿಂದು ಪ್ರಾಪ್ತವಾಗಿದೆ.

ಪ್ರತ್ಯಕ್ಷಂ ತೇ ಮಹಾಬಾಹೋ ಸಂಗ್ರಾಮೇ ರೋಮಹರ್ಷಣೇ ।
ವಿಮರ್ದಃ ಸುಮಹಾನ್ ಪ್ರಾಪ್ತಃ ತ್ವಯಾ ಯಾದವನಂದನ ॥೧೬॥

ಮಹಾಬಾಹುವೇ! ಯಾದವನಂದನನೇ! ರೋಮಾಂಚನಕಾರಿಯಾದ ಯುದ್ಧದಲ್ಲಿ ನಡೆದ ಕಾದಾಟವನ್ನು ನೀನೂ ಪ್ರತ್ಯಕ್ಷವಾಗಿ ನೋಡಿರುವಿ.

ತ್ವಯಾ ದೇವಾಸುರೇ ಯುದ್ಧೇ ವಧಾರ್ಥಮಮರದ್ವಿಷಾಮ್ ।
ಯಥಾ ಸಾಹ್ಯಂ ಪುರಾ ದತ್ತಂ ಹತಾಶ್ಚ ಸುರಶತ್ರವಃ ॥೧೭॥

ಸಾಹ್ಯಂ ತಥಾ ಮಹಾಬಾಹೋ ದತ್ತಮಸ್ಮಾಕಮಚ್ಯುತ ।
ಸಾರಥ್ಯೇನ ಚ ವಾರ್ಷ್ಣೇಯ ಭವತಾ ಯದ್ಧೃತಾ ವಯಮ್ ॥೧೮॥

ಹಿಂದೆ ದೇವಾಸುರರ ಯುದ್ಧದಲ್ಲಿ ದೈತ್ಯರ ನಾಶಕ್ಕಾಗಿ ನೀನು ಯಾವ ರೀತಿಯಲ್ಲಿ ಸಹಾಯವನ್ನು ಮಾಡಿ ಅಮರಶತ್ರುಗಳು ನಾಶವಾದರೋ, ಮಹಾಬಾಹುವೇ, ಅದೇ ರೀತಿಯಲ್ಲಿ ನಾವು ಕೇಳಿಕೊಂಡಾಗ ನೀನು ನಮ್ಮ ಸಾರಥ್ಯವನ್ನು ವಹಿಸಿಕೊಂಡು ನಮಗೆ ಸಹಾಯವನ್ನು ಮಾಡಿರುವಿ.

ಯದಿ ನ ತ್ವಂ ಭವೇನ್ನಾಥಃ ಫಲ್ಗುನಸ್ಯ ಮಹಾರಣೇ ।
ಕಥಂ ಶಕ್ಯಂ ರಣೇ ಜೇತುಂ ಭವೇದೇತದ್ ಬಲಾರ್ಣವಮ್ ॥೧೯॥

ಮಹಾಯುದ್ಧದಲ್ಲಿ ಒಂದು ಪಕ್ಷ ನೀನು ಅರ್ಜುನನಿಗೆ ರಕ್ಷಕನಾಗಿ ಇರದಿದ್ದರೆ ಬಲವುಳ್ಳ ಯೋಧರು ಸಮುದ್ರದ ಹಾಗೆ ಭಾಗವಹಿಸಿದ್ದ ಈ ಯುದ್ಧದಲ್ಲಿ ಅರ್ಜುನನು ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ.

ಗದಾಪ್ರಹಾರಾ ವಿಪುಲಾಃ ಪರಿಘೈಶ್ಚಾಪಿ ತಾಡನಮ್ ।
ಶಕ್ತಿಭಿರ್ಭಿಂಡಿಪಾಲೈಶ್ಚ ತೋಮರೈಃ ಸಪರಶ್ವಧೈಃ ॥೨೦॥

ವಾಚಶ್ಚ ಪರುಷಾಃ ಪ್ರಾಪ್ತಾಃ ತ್ವಯಾ ಹ್ಯಸ್ಮಜ್ಜಯೈಷಿಣಾ ॥೨೧॥

ತಾಶ್ಚ ತೇ ಸಫಲಾಃ ಸರ್ವಾ ಹತೇ ದುರ್ಯೋಧನೇऽಚ್ಯುತ ।
ಗಾಂಧಾರ್ಯಾ ಹಿ ಮಹಾಬಾಹೋ ಕ್ರೋಧಂ ಶಮಯ ಮಾಧವ ॥

ನಮಗೆ ಗೆಲುವನ್ನು ತಂದುಕೊಡಬೇಕೆಂಬ ಇಚ್ಛೆಯಿಂದ ನೀನು ಬೇಕಾದಷ್ಟು ಬಾರಿ ಗದೆಯ ಪೆಟ್ಟುಗಳನ್ನು, ಪರಿಘಾಯುಧದ ಹೊಡೆತಗಳನ್ನು, ಶಕ್ತ್ಯಾಯುಧ, ಭಿಂಡಿಪಾಲ, ತೋಮರ, ಕೊಡಲಿ ಇವುಗಳ ಪೆಟ್ಟುಗಳನ್ನು ಸ್ವೀಕರಿಸಿರುವಿ. ಕ್ರೂರವಾದ ಮಾತುಗಳನ್ನು ನಮಗಾಗಿ ಕೇಳಿಸಿಕೊಂಡಿರುವಿ. ಅಚ್ಯುತನೇ! ದುರ್ಯೋಧನನು ಸತ್ತಾಗ ಇವೆಲ್ಲವೂ ಸಾರ್ಥಕವಾದವು. ಮಾಧವನೇ! ಗಾಂಧಾರಿಯ ಕೋಪವನ್ನು ಉಪಶಮನಗೊಳಿಸು.

ಸಾ ಹಿ ನಿತ್ಯಂ ಮಹಾಭಾಗ ತಪಸೋಗ್ರೇಣ ಕರ್ಶಿತಾ ।
ಪುತ್ರಪೌತ್ರವಧಂ ಪ್ರಾಪ್ತಾ ಧ್ರುವಂ ನಃ ಪ್ರದಹಿಷ್ಯತಿ ॥೨೩॥

ಉಗ್ರ ತಪಸ್ಸಿನಲ್ಲಿ ನಿರತಳಾದ ಆ ಮಹಾಭಾಗ್ಯವಂತೆಯಾದ ಗಾಂಧಾರಿಯು ಮಕ್ಕಳು ಮತ್ತು ಮೊಮ್ಮಕ್ಕಳ ಸಾವಿನ ಸುದ್ದಿಯನ್ನು ತಿಳಿದು ಖಂಡಿತವಾಗಿಯೂ ನಮ್ಮನ್ನು ಸುಟ್ಟುಹಾಕುವಳು.

ತಸ್ಯಾಃ ಪ್ರಸಾದನಂ ವೀರ ಪ್ರಾಪ್ತಕಾಲಮಿದಂ ಮಮ ॥೨೪॥

ಅವಳನ್ನು ಸಮಾಧಾನಪಡಿಸುವುದು ನನಗೆ ಅತ್ಯಂತ ಅವಶ್ಯವಾದ ಸಮಯೋಚಿತ ಕಾರ್ಯವಾಗಿದೆ.

ಕಶ್ಚ ತಾಂ ಕ್ರೋಧಸಂದೀಪ್ತಾಂ ಪುತ್ರವ್ಯಸನಕರ್ಶಿತಾಮ್ ।
ವೀಕ್ಷಿತುಂ ಪುರುಷಃ ಶಕ್ತಸ್ತ್ವಾಮೃತೇ ಪುರುಷೋತ್ತಮ ॥೨೫॥

ಪುರುಷೋತ್ತಮನೇ! ಪುತ್ರಶೋಕದಿಂದ ಕೃಶಳಾದ, ಕೋಪದಿಂದ ಜ್ವಲಿಸುತ್ತಿರುವ ಆಕೆಯನ್ನು ಕಣ್ಣೆತ್ತಿ ನೋಡಲು ನೀನಲ್ಲದೆ ಬೇರೆ ಯಾರೂ ಸಮರ್ಥರಲ್ಲ.

ತತಸ್ತೇ ಗಮನಂ ಪ್ರಾಪ್ತಂ ತನ್ಮೇ ಮಾಧವ ರೋಚತೇ ।
ಗಾಂಧಾರ್ಯಾಃ ಕ್ರೋಧದೀಪ್ತಾಯಾಃ ಪ್ರಶಮಾರ್ಥಮರಿಂದಮ ॥೨೬॥

ಶತ್ರುಸಂಹಾರಕನೇ! ಮಾಧವನೇ! ಆದ ಕಾರಣ ಕೋಪಗೊಂಡಿರುವ ಗಾಂಧಾರಿಯನ್ನು ಸಮಧಾನಪಡಿಸಲು ನೀನೇ ಅಲ್ಲಿಗೆ ಹೋಗುವುದನ್ನು ನಾನು ಇಷ್ಟಪಡುತ್ತೇನೆ.

ತ್ವಂ ಹಿ ಕರ್ತಾ ವಿಕರ್ತಾ ಚ ಲೋಕಾನಾಂ ಪ್ರಭವಾಪ್ಯಯಃ ॥೨೭॥

ನೀನೇ ಎಲ್ಲದಕ್ಕೂ ಕರ್ತನಾಗಿರುವೆ. ಕಾರ್ಯಗಳನ್ನು ಅನ್ಯಥಾ ಮಾಡುವ ಕರ್ತನೂ ನೀನೇ. ಲೋಕಗಳ ಉತ್ಪತ್ತಿ ಮತ್ತು ಲಯಕ್ಕೂ ನೀನೇ ಕಾರಣ.

ಹೇತುಕಾರಣಸಂಯುಕ್ತೈರ್ವಚನೈಃ ಕಾಲಚೋದಿತೈಃ ।
ಕ್ಷಿಪ್ರಮೇವ ಮಹಾಭಾಗಾಂ ಗಾಂಧಾರೀಂ ಶಮಯಿಷ್ಯಸಿ ॥೨೮॥

ಎಲ್ಲದಕ್ಕೂ ಕಾರಣನಾದ ಪರಮಾತ್ಮ ಮತ್ತು ಆಯಾಯ ಜೀವರ ಪ್ರಾರಬ್ಧಕರ್ಮಗಳ ವಿಷಯದಲ್ಲಿ ಕಾಲೋಚಿತವಾದ ಮಾತುಗಳನ್ನು ಆಡಿ ಮಹಾತ್ಮಳಾದ ಗಾಂಧಾರಿಯನ್ನು ಕೂಡಲೆ ಸಮಾಧಾನಪಡಿಸು.

ಪಿತಾಮಹಶ್ಚ ಭಗವಾನ್ ತತ್ರ ಕೃಷ್ಣೋ ಭವಿಷ್ಯತಿ ॥೨೯॥

ನಮ್ಮ ಪಿತಾಮಹನಾದ, ಪೂಜ್ಯನಾದ ವಾಸಿಷ್ಠಕೃಷ್ಣ ವೇದವ್ಯಾಸರೂ ಅಲ್ಲಿ ಇರುತ್ತಾರೆ.

ಸರ್ವಥಾ ತೇ ಮಹಾಬಾಹೋ ಗಾಂಧಾರ್ಯಾ ರೋಷನಾಶನಮ್ ।
ಕರ್ತವ್ಯಂ ಸಾತ್ವತಶ್ರೇಷ್ಠ ಪಾಂಡವಾನಾಂ ಹಿತೈಷಿಣಾ ॥೩೦॥

ಸಾತ್ವತಕುಲಶ್ರೇಷ್ಠನೇ! ಪಾಂಡವರ ಹಿತವನ್ನು ಬಯಸುವ ನೀನು ಗಾಂಧಾರಿಯ ಕೋಪವನ್ನು ಸರ್ವಥಾ ಉಪಶಮನಗೊಳಿಸು.

ವೈಶಂಪಾಯನಃ

ಧರ್ಮರಾಜಸ್ಯ ವಚನಂ ಶ್ರುತ್ವಾ ಯದುಕುಲೋದ್ವಹಃ ।
ಆಮಂತ್ರ್ಯ ದಾರುಕಂ ಪ್ರಾಹ ರಥಃ ಸಜ್ಜೋ ವಿಧೀಯತಾಮ್ ॥೩೧॥

ವೈಶಂಪಾಯನ– ಧರ್ಮರಾಜನ ಮಾತನ್ನು ಕೇಳಿ ಯದುಕುಲಶ್ರೇಷ್ಠನಾದ ಶ್ರೀಕೃಷ್ಣನು ದಾರುಕನನ್ನು ಕರೆದು 'ರಥವು ಸಿದ್ಧವಾಗಲಿ' ಎಂದು ಹೇಳಿದನು.

ಕೇಶವಸ್ಯ ವಚಃ ಶ್ರುತ್ವಾ ತ್ವರಮಾಣೋऽಥ ದಾರುಕಃ ।
ನ್ಯವೇದಯದ್ ರಥಂ ಸಜ್ಜಂ ಕೇಶವಾಯ ಮಹಾತ್ಮನೇ ॥೩೨॥

ಕೇಶವನ ಮಾತನ್ನು ಕೇಳಿದ ದಾರುಕನು ಕೂಡಲೇ 'ರಥವು ಸಿದ್ಧವಾಗಿದೆ' ಎಂದು ಮಹಾತ್ಮನಾದ ಶ್ರೀಕೃಷ್ಣನಿಗೆ ಹೇಳಿದನು.

ತಂ ರಥಂ ಯಾದವಶ್ರೇಷ್ಠಃ ಸಮಾರುಹ್ಯ ಯದೂತ್ತಮಃ ।
ಜಗಾಮ ಹಸ್ತಿನಪುರಂ ತ್ವರಿತಃ ಕೇಶವೋ ವಿಭುಃ ॥೩೩॥

ಯದೂತ್ತಮನಾದ ಕೇಶವನು ಆ ರಥವನ್ನು ಏರಿ ಕೂಡಲೇ ಹಸ್ತಿನಾಪುರಕ್ಕೆ ಹೊರಟನು.

ತತಃ ಪ್ರಾಯಾನ್ಮಹಾಭಾಗಃ ಕೇಶವೋ ವೇಗವದ್ ದ್ರುತಮ್ ।
ನಾಗಸಾಹ್ವಯಮಾಸಾದ್ಯ ಪ್ರವಿವೇಶ ಚ ವೀರ್ಯವಾನ್ ॥೩೪॥

ಅನಂತರ ಮಹಾತ್ಮನಾದ ವೀರ ಕೇಶವನು ವೇಗವಾಗಿ ಸಾಗಿ ಹಸ್ತಿನಪುರವನ್ನು ಪ್ರವೇಶಿಸಿದನು.

ಪ್ರವಿಶ್ಯ ನಗರಂ ವೀರೋ ರಥಘೋಷೇಣ ನಾದಯನ್ ।
ವಿದಿತೋ ಧೃತರಾಷ್ಟ್ರಸ್ಯ ಸೋಽವತೀರ್ಯ ರಥೋತ್ತಮಾತ್ ॥೩೫॥

ಅಭ್ಯಗಚ್ಛದಮೇಯಾತ್ಮಾ ಧೃತರಾಷ್ಟ್ರನಿವೇಶನಮ್ ॥೩೬॥

ವೀರಕೇಶವನು ರಥದ ಘೋಷದಿಂದ ಎಲ್ಲಾ ಕಡೆ ಶಬ್ದವನ್ನುಂಟುಮಾಡುತ್ತಾ ತನ್ನ ಬರುವಿಕೆಯನ್ನು ಧೃತರಾಷ್ಟ್ರನಿಗೆ ತಿಳಿಯುವಂತೆ ಮಾಡಿದನು. ತಾನು ರಥದಿಂದ ಇಳಿದು ಗಣನೆಗೆ ನಿಲುಕದ ಸ್ವರೂಪವುಳ್ಳ ಶ್ರೀಕೃಷ್ಣನು ಧೃತರಾಷ್ಟ್ರನ ಅರಮನೆಗೆ ಹೋದನು.

ಪೂರ್ವಂ ಚಾಭಿಗತಂ ತತ್ರ ಸೋಽಪಶ್ಯದೃಷಿಸತ್ತಮಮ್ ॥೩೭॥

ತನಗಿಂತಲೂ ಮೊದಲೇ ಬಂದಿದ್ದ ವೇದವ್ಯಾಸಮುನಿಶ್ರೇಷ್ಠನನ್ನು ನೋಡಿದನು.

ಪಾದೌ ಪ್ರಪೀಡ್ಯ ಕೃಷ್ಣಸ್ಯ ರಾಜ್ಞಶ್ಚಾಪಿ ಜನಾರ್ದನಃ ।
ಅಭ್ಯವಾದಯದವ್ಯಗ್ರೋ ಗಾಂಧಾರೀಂ ಚಾಪಿ ಕೇಶವಃ ॥೩೮॥

ಯಾದವಕೃಷ್ಣನು ಯಾವುದೇ ಗಾಬರಿಗೊಳಗಾಗದೆ ವಾಸಿಷ್ಠಕೃಷ್ಣನ ಮತ್ತು ಧೃತರಾಷ್ಟ್ರನ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು. ಹಾಗೆಯೇ ಗಾಂಧಾರಿಯನ್ನೂ ನಮಸ್ಕರಿಸಿದನು.

ತತಸ್ತು ಯಾದವಶ್ರೇಷ್ಠೋ ಧೃತರಾಷ್ಟ್ರಮಧೋಕ್ಷಜಃ ।
ಪಾಣಿಮಾಲಂಬ್ಯ ರಾಜ್ಞಃ ಸ ಸಸ್ವನಂ ಪ್ರರುರೋದ ಹ ॥೩೯॥

ಅನಂತರ ಯಾದವೋತ್ತಮನಾದ ಶ್ರೀಕೃಷ್ಣನು ಧೃತರಾಷ್ಟ್ರನ ಕೈಗಳನ್ನು ಹಿಡಿದುಕೊಂಡು ಸಶಬ್ದವಾಗಿ ಚೆನ್ನಾಗಿ ಅತ್ತನು.

ಸ ಮುಹೂರ್ತಮಿವೋತ್ಸೃಜ್ಯ ಬಾಷ್ಪಂ ಶೋಕಸಮುದ್ಭವಮ್ ।
ಪ್ರಕ್ಷಾಲ್ಯ ವಾರಿಣಾ ನೇತ್ರೇ ಆಚಮ್ಯ ಚ ಯಥಾವಿಧಿ ॥೪೦॥

ತಕ್ಷಣದಲ್ಲಿಯೇ ದುಃಖದಿಂದುಂಟಾದ ಕಣ್ಣೀರನ್ನು ಒರೆಸಿಕೊಂಡು ಕಣ್ಣುಗಳಿಗೆ ನೀರನ್ನು ಹಾಕಿ ತೊಳೆದುಕೊಂಡು ವಿಧ್ಯುಕ್ತ ರೀತಿಯಲ್ಲಿ ಆಚಮನವನ್ನು ಮಾಡಿದನು.

ಉವಾಚ ಪ್ರಶ್ರಿತಂ ವಾಕ್ಯಂ ಧೃತರಾಷ್ಟ್ರಮರಿಂದಮ ॥೪೧॥

ಶತ್ರುಸಂಹಾರಕನಾದ ಶ್ರೀಕೃಷ್ಣನು ವಿನಯದಿಂದ ಧೃತರಾಷ್ಟ್ರನಿಗೆ ಈ ಮಾತನ್ನು ಹೇಳಿದನು.

ಶ್ರೀಭಗವಾನ್

ನ ತೇಽಸ್ತ್ಯವಿದಿತಂ ಕಿಂಚಿದ್ ಭೂತಂ ಭವ್ಯಂ ಚ ಭಾರತ ।
ಕಾಲಸ್ಯ ಚ ಯಥಾವೃತ್ತಂ ತತ್ತೇ ಸುವಿದಿತಂ ಪ್ರಭೋ ॥೪೨॥

ಶ್ರೀಭಗವಾನ್– ಭರತಕುಲೋದ್ಭವನೇ! ಹಿಂದೆ ನಡೆದಿದ್ದು, ಮುಂದೆ ನಡೆಯಲಿರುವುದು ಯಾವುದೂ ನಿನಗೆ ಗೊತ್ತಿಲ್ಲದೆ ಇಲ್ಲ. ಪ್ರಭುವೇ! ಕಾಲದ ಗತಿಯನ್ನು ಯಥಾವತ್ತಾಗಿ ತಿಳಿದಿರುವಿ.

ಯತಿ(ದಿ)ದಂ ಪಾಂಡವೈಃ ಸರ್ವೈಃ ತವ ಚಿತ್ತಾನುವರ್ತಿಭಿಃ ।
ಕಥಂ ಕುಲಕ್ಷಯೋ ನ ಸ್ಯಾತ್ ತಥಾ ಕ್ಷತ್ರಸ್ಯ ಭಾರತ ॥೪೩॥

ನೀನು ಹಿಂದೆ ನಿನ್ನ ಮನಸ್ಸಿಗೆ ಒಪ್ಪಿಗೆಯಾದ ನಡತೆಯುಳ್ಳ ಪಾಂಡವರಿಂದ ಕುಲನಾಶವಾಗಲೀ, ಕ್ಷತ್ರಿಯಕುಲದ ನಾಶವಾಗಲೀ ಆಗದಿರುವ ರೀತಿಯಲ್ಲಿ ಪ್ರಯತ್ನವನ್ನು ಮಾಡಿದ್ದಿ.

ಭ್ರಾತೃಭಿಃ ಸಮಯಂ ಕೃತ್ವಾ ಕ್ಷಾಂತವಾನ್ ಧರ್ಮವತ್ಸಲಃ ।
ದ್ಯೂತೇಽಧರ್ಮಜಿತೈಃ ಶಕ್ಯೈರ್ವನವಾಸೋಽಭ್ಯುಪಾಗತಃ ॥೪೪॥

ಧರ್ಮವತ್ಸಲನಾದ ಯುಧಿಷ್ಠಿರನು ಸಹೋದರರೊಡನೆ ಒಪ್ಪಂದವನ್ನು ಮಾಡಿಕೊಂಡು ದ್ಯೂತದಲ್ಲಿ ಕೌರವರ ಅಧರ್ಮದಿಂದ ಸೋತು, ಸಮರ್ಥರಾಗಿದ್ದರೂ ವನವಾಸವನ್ನು ಸ್ವೀಕರಿಸಿದನು.

ಅಜ್ಞಾತವೇಷಚರ್ಯಾ ಚ ನಾನಾವೇಶಸಮಾಶ್ರಿತೈಃ ।
ಅನ್ಯೇ ಚ ಬಹವಃ ಕ್ಲೇಶಾ ಅಶಕ್ಯೈರಿವ ನಿತ್ಯದಾ ॥೪೫॥

ಅಜ್ಞಾತವಾಸದಲ್ಲಿ ಬೇರೆ ಬೇರೆ ವೇಷಗಳನ್ನು ಧರಿಸಿಕೊಂಡು ಇನ್ನೂ ಬೇರೆ ಅನೇಕ ಕಷ್ಟಗಳನ್ನು ಅಶಕ್ತರಂತೆ ಅನುಭವಿಸಿದರು.

ಮಯಾ ಚ ಸ್ವಯಮಾಗಮ್ಯ ಯುದ್ಧಕಾ ಉಪಸ್ಥಿತೇ ।
ಸರ್ವಲೋಕಸ್ಯ ಸಾನ್ನಿಧ್ಯೇ ಗ್ರಾಮಾಂಸ್ತ್ವಂ ಪಂಚ ಯಾಚಿತಃ ॥೪೬॥

ಯುದ್ಧಕಾಲವು ಸಮೀಪಿಸಿದಾಗ ನಾನೇ ಸ್ವತಃ ಬಂದು ಎಲ್ಲರ ಎದುರಿಗೆ ಐದು ಗ್ರಾಮಗಳನ್ನು ಬೇಡಿದೆನು.

ತ್ವಯಾ ಕಾಲೋಪಸೃಷ್ಟೇನ ಲೋಭತೋ ನಾಪವರ್ಜಿತಾಃ ।
ತವಾಪರಾಧಾನ್ನೃಪತೇ ಕ್ಷತ್ರಂ ಸರ್ವಂ ಕ್ಷಯಂ ಗತಮ್ ॥೪೭॥

ಕಾಲದ ವಶಕ್ಕೆ ಒಳಗಾದ ನೀನು ಲೋಭದಿಂದ ಐದುಗ್ರಾಮಗಳನ್ನು ಕೊಡಲಿಲ್ಲ. ರಾಜನೇ! ನಿನ್ನ ಅಪರಾಧದಿಂದಾಗಿ ಎಲ್ಲ ಕ್ಷತ್ರಿಯವಂಶವೇ ನಾಶವಾಗಿದೆ.

ಭೀಷ್ಮೇಣ ಸೋಮದತ್ತೇನ ಬಾಹ್ಲೀಕೇನ ಕೃಪೇಣ ಚ ।
ದ್ರೋಣೇನ ಸಹಪುತ್ರೇಣ ವಿದುರೇಣ ಚ ಧೀಮತಾ ॥೪೮॥

ಯಾಚಿತಸ್ತ್ವಂ ಶಮಂ ನಿತ್ಯಂ ನ ಚ ತತ್ಕೃತವಾನಸಿ ॥೪೯॥

ಭೀಷ್ಮ, ಸೋಮದತ್ತ, ಬಾಹ್ಲೀಕ, ಕೃಪ, ದ್ರೋಣ, ಅಶ್ವತ್ಥಾಮ, ಬುದ್ಧಿವಂತನಾದ ವಿದುರ ಇವರೆಲ್ಲರೂ ಸಂಧಿಗಾಗಿ ನಿತ್ಯವೂ ನಿನ್ನಲ್ಲಿ ಬೇಡಿಕೊಳ್ಳುತ್ತಿದ್ದರೂ ನೀನು ಸಂಧಿಯನ್ನು ಮಾಡಲಿಲ್ಲ.

ಕಾಲೋಪಹತಚಿತ್ತೋ ಹಿ ಸರ್ವೋ ಮುಹ್ಯತಿ ಭಾರತ ।
ತಥಾ ಮೂಢೋ ಭವಾನ್ ಪೂರ್ವಮಸ್ಮಿನ್ನರ್ಥೇ ಸಮುದ್ಯತೇ ॥೫೦॥

ಭರತಕುಲೋದ್ಭವನೇ! ಕಾಲದಿಂದ ಮನಸ್ಸು ಕೆಟ್ಟಾಗ ಎಲ್ಲರೂ ಮೋಹಕ್ಕೆ ಒಳಗಾಗುತ್ತಾರೆ. ಹಾಗೆಯೇ ನೀನೂ ಕೂಡ ಈ ಹಿಂದೆ ಸಂಧಿಯ ವಿಷಯದಲ್ಲಿ ಮೋಹಕ್ಕೆ ಒಳಗಾಗಿದ್ದಿ.

ಕಿಮನ್ಯತ್ ಕಾಲಯೋಗಾದ್ಧಿ ದ್ವಿಷ್ಟಮೇತತ್ ಪುರಾತನಮ್ ।
ಮಾ ಚ ದ್ವೇಷಂ ಮಹಾರಾಜ ಪಾಂಡವೇಷು ನಿವೇಶಯ ॥೫೧॥

ಕಾಲಕ್ಕನುಸಾರವಾಗಿ ಮೊದಲೇ ನಿಶ್ಚಿತವಾಗಿದ್ದು ಈಗ ನಡೆದಿದೆ. ಬೇರೇನಿದೆ? ಮಹಾರಾಜನೇ! ಪಾಂಡವರಲ್ಲಿ ದ್ವೇಷವನ್ನು ಇಟ್ಟುಕೊಳ್ಳಬೇಡ.

ಸ್ವಲ್ಪೋऽಪ್ಯತಿಕ್ರಮೋ ನಾಸ್ತಿ ಪಾಂಡವಾನಾಂ ಮಹಾತ್ಮನಾಮ್ ।
ಧರ್ಮತೋ ನ್ಯಾಯತಶ್ಚೈವ ಸ್ನೇಹತಶ್ಚ ಪರಂತಪ ॥೫೨॥

ಶತ್ರುತಾಪಕನೇ! ಮಹಾತ್ಮರಾದ ಪಾಂಡವರು ಧರ್ಮದ ವಿಷಯದಲ್ಲಾಗಲೀ, ನ್ಯಾಯದ ವಿಷಯದಲ್ಲಾಗಲೀ, ಸ್ನೇಹದ ವಿಷಯದಲ್ಲಾಗಲೀ ಸ್ವಲ್ಪವೂ ಮೀರಿನಡೆದಿಲ್ಲ.

ಏತತ್ ಸರ್ವಂ ತು ವಿಜ್ಞಾಯ ಹ್ಯಾತ್ಮದೋಷಕೃತಂ ಫಲಮ್ ।
ತನ್ಮನ್ಯುಂ ಪಾಂಡುಪುತ್ರೇಷು ನ ಭವಾನ್ ಕರ್ತುಮರ್ಹತಿ ॥೫೩॥

ಇದೆಲ್ಲವನ್ನೂ ಅವರವರ ದೋಷದ ಫಲವೆಂಬುದಾಗಿ ತಿಳಿದುಕೊಂಡು ನೀನು ಪಾಂಡುಪುತ್ರರಲ್ಲಿ ಕೋಪವನ್ನು ಮಾಡಬೇಡ.

ಕುಲಂ ವಂಶಶ್ಚ ಪಿಂಡಶ್ಚ ಯಚ್ಚ ಪುತ್ರಕೃತಂ ಫಲಮ್ ।
ಗಾಂಧಾರ್ಯಾಸ್ತವ ಚೈವಾದ್ಯ ಪಾಂಡವೇಷು ಪ್ರತಿಷ್ಠಿತಮ್ ॥೫೪॥

ನಿನ್ನ ಕುಲವಾಗಲೀ ವಂಶವಾಗಲೀ ಪಾಂಡವರಿಂದಲೇ ಮುಂದುವರಿಯಬೇಕು. ನಿನಗೆ ಮತ್ತು ಗಾಂಧಾರಿಗೆ ಮಕ್ಕಳು ಕೊಡಬೇಕಾದ ಪಿಂಡ, ತರ್ಪಣ ಎಲ್ಲವೂ ಇಂದು ಪಾಂಡವರಿಂದಲೇ ನಡೆಯಲಿದೆ.

ಏತತ್ ಸರ್ವಮನುಧ್ಯಾಯ ಆತ್ಮನಶ್ಚ ವ್ಯತಿಕ್ರಮಮ್ ।
ಶಿವೇನ ಪಾಂಡವಾನ್ ಧ್ಯಾಹಿ ನಮಸ್ತೇ ಪುರುಷರ್ಷಭ ॥೫೫॥

ಇದೆಲ್ಲವನ್ನೂ ಧ್ಯಾನದಲ್ಲಿಟ್ಟುಕೊಂಡು, ನೀನು ಮತ್ತು ನಿನ್ನವರು ಮಾಡಿದ ಧರ್ಮಾತಿಕ್ರಮವನ್ನು ಸ್ಮರಿಸಿಕೊಂಡು ಪಾಂಡವರನ್ನು ಮಂಗಳಮನಸ್ಸಿನಿಂದ ಚಿಂತಿಸು. ಪುರುಷಶ್ರೇಷ್ಠನೇ! ನಿನಗೆ ನಮಸ್ಕಾರ.

ಜಾನಾಸಿ ತ್ವಂ ಮಹಾಬಾಹೋ ಧರ್ಮರಾಜಸ್ಯ ಯಾ ತ್ವಯಿ ।
ಭಕ್ತಿರ್ಭರತಶಾರ್ದೂಲ ಸ್ನೇಹಶ್ಚಾಪಿ ಸ್ವಭಾವತಃ ॥೫೬॥

ಮಹಾಬಾಹುವೇ! ಧರ್ಮರಾಜನಿಗೆ ನಿನ್ನ ಮೇಲೆ ಇರುವ ಭಕ್ತಿಯನ್ನು ಮತ್ತು ಸ್ವಾಭಾವಿಕವಾದ ಪ್ರೀತಿಯನ್ನು ನೀನು ತಿಳಿದಿರುವಿ.

ಏತಚ್ಚ ಕದನಂ ಕೃತ್ವಾ ಶತ್ರೂಣಾಮಪಕಾರಿಣಾಮ್ ।
ದಹ್ಯತೇ ಸ್ಮ ದಿವಾರಾತ್ರಂ ನ ಚ ಶರ್ಮಾಧಿಗಚ್ಛತಿ ॥೫೭॥

ಈ ಅಪಕಾರಿಗಳಾದ ಶತ್ರುಗಳೊಡನೆ ಈ ಕಾದಾಟವನ್ನು ಮಾಡಿ ಹಗಲೂ ರಾತ್ರಿ ಮನಸ್ಸು ಸುಡುತ್ತಿದೆ. ನೆಮ್ಮದಿಯು ಇಲ್ಲವಾಗಿದೆ.

ತ್ವಾಂ ಚೈವ ನರಶಾರ್ದೂಲ ಗಾಂಧಾರೀಂ ಚ ಯಶಸ್ವಿನೀಮ್ ।
ಸ ಶೋಚನ್ ಭರತಶ್ರೇಷ್ಠ ನ ಶಾಂತಿಮಧಿಗಚ್ಛತಿ ॥೫೮॥

ನರೋತ್ತಮನೇ! ನಿನ್ನ ಬಗ್ಗೆ ಮತ್ತು ಯಶೋವತಿಯಾದ ಗಾಂಧಾರಿಯ ಬಗ್ಗೆ ಚಿಂತಿಸುತ್ತಾ ಧರ್ಮರಾಜನು ಮನಃಶಾಂತಿಯನ್ನು ಹೊಂದುತ್ತಿಲ್ಲ.

ಹ್ರಿಯಾ ಪರಮಯಾ ಯುಕ್ತೋ ಭವಂತಂ ನೋಪಸರ್ಪತಿ ।
ಪುತ್ರಶೋಕಾಭಿಸಂತಪ್ತಂ ಬುದ್ಧ್ಯಾ ವ್ಯಾಕುಲಿತೇಂದ್ರಿಯಮ್ ॥೫೯॥

ತುಂಬಾ ನಾಚಿಕೆಪಡುತ್ತಿರುವುದರಿಂದ, ಅವನು ಮಗನನ್ನು ಕಳೆದುಕೊಂಡು ದುಃಖಿಸುತ್ತಿರುವ ಹಾಗೂ ಎಲ್ಲಾ ಇಂದ್ರಿಯಗಳಲ್ಲಿಯೂ ದುಃಖಿಸುತ್ತಿರುವ ನಿನ್ನ ಹತ್ತಿರ ಬರುತ್ತಿಲ್ಲ.

ವೈಶಂಪಾಯನಃ

ಏವಮುಕ್ತ್ವಾ ಮಹಾಬಾಹುರ್ಧೃತರಾಷ್ಟ್ರಂ ಯದೂತ್ತಮಃ ।
ಉವಾಚ ಪರಮಂ ವಾಕ್ಯಂ ಗಾಂಧಾರೀಂ ಶೋಕಕರ್ಶಿತಾಮ್ ॥೬೦॥

ವೈಶಂಪಾಯನ– ಯದುಶ್ರೇಷ್ಠನಾದ ಮಹಾಬಾಹು ಶ್ರೀಕೃಷ್ಣನು ಧೃತರಾಷ್ಟ್ರನಿಗೆ ಹೀಗೆ ಹೇಳಿ, ದುಃಖದಿಂದ ಕ್ಷೀಣಿಸಿದ್ದ ಗಾಂಧಾರಿಗೆ ಈ ಮಾತುಗಳನ್ನು ಹೇಳುತ್ತಾನೆ.

ಶ್ರೀಭಗವಾನ್

ಸೌಬಲೇಯಿ ನಿಬೋಧಸ್ವ ಯತ್ ತ್ವಾಂ ವಕ್ಷ್ಯಾಮಿ ಸುವ್ರತೇ ।
ತ್ವತ್ಸಮಾ ನಾಸ್ತಿ ಲೋಕೇಽಸ್ಮಿನ್ ಕಾಚಿತ್ ಸೀಮಂತಿನೀ ಶುಭೇ ॥೬೧॥

ಶ್ರೀಭಗವಾನ್– ಒಳ್ಳೆಯ ಚರಿತ್ರೆಯುಳ್ಳವಳೇ! ಸುಬಲದೇಶದ ಗಾಂಧಾರಿಯೇ! ನಾನು ಹೇಳಲಿರುವುದನ್ನು ಕೇಳು. ನಿನ್ನಂತಹ ಸುಮಂಗಲಿಯು ಈ ಲೋಕದಲ್ಲಿ ಬೇರೆ ಯಾರೂ ಇಲ್ಲ.

ಜಾನಾಸಿ ಚ ಯಥಾ ರಾಜ್ಞಿ ಸಭಾಯಾಂ ಮಮ ಸನ್ನಿಧೌ ।
ಧರ್ಮಾರ್ಥಸಹಿತಂ ವಾಕ್ಯಮುಭಯೋಃ ಪಕ್ಷಯೋರ್ಹಿತಮ್ ॥೬೨॥

ಉಕ್ತವತ್ಯಸಿ ಕಲ್ಯಾಣಿ ನ ಚ ತೇ ತನಯೈಃ ಶ್ರುತಮ್ ॥೬೩॥

ರಾಣಿಯೇ! ಸಭೆಯಲ್ಲಿ ನನ್ನ ಮುಂದೆ ನೀನು ಎರಡೂ ಪಕ್ಷದವರಿಗೆ ಹಿತಕಾರಿಯಾದ ಮಾತನ್ನು ಹಿಂದೆ ಹೇಳಿದ್ದಿ. ಇದು ನಿನಗೂ ಗೊತ್ತು. ಆದರೆ ನಿನ್ನ ಮಕ್ಕಳು ಅದನ್ನು ನಡೆಸಿಕೊಡಲಿಲ್ಲ.

ದುರ್ಯೋಧನಸ್ತ್ವಯಾ ಚೋಕ್ತೋ ಜಯಾರ್ಥೀ ಪರುಷಂ ವಚಃ ।
ಶೃಣು ಮೂಢ ವಚೋ ಮೇ ತ್ವಂ ಯತೋ ಧರ್ಮಸ್ತತೋ ಜಯಃ ॥

ಜಯದ ಆಸೆ ಇಟ್ಟುಕೊಂಡಿದ್ದ ನಿನ್ನ ಮಗ ದುರ್ಯೋಧನನಿಗೆ ನೀನು 'ಮೂರ್ಖನೇ, ನಾನಾಡುವ ಮಾತನ್ನು ಕೇಳು. ಎಲ್ಲಿ ಧರ್ಮವಿರುತ್ತದೆಯೋ ಅಲ್ಲಿ ಜಯವಿರುತ್ತದೆ' ಎಂಬ ಕಠಿಣವಾದ ಮಾತನ್ನು ಹೇಳಿದ್ದಿ.

ತದಿದಂ ಸಮನುಪ್ರಾಪ್ತಂ ತವ ವಾಕ್ಯಂ ನೃಪಾತ್ಮಜೇ ॥೬೫॥

ರಾಜಕುಮಾರಿಯೇ! ನೀನು ಹೇಳಿದ ಆ ಮಾತು ಇವತ್ತು ಸತ್ಯವಾಗಿದೆ.

ಏವಂ ವಿದಿತ್ವಾ ಗಾಂಧಾರಿ ಮಾ ಸ್ಮ ಶೋಕೇ ಮನಃ ಕೃಥಾಃ ।
ಪಾಂಡವಾನಾಂ ವಿನಾಶೇ ಚ ಮಾ ತೇ ಬುದ್ಧಿಃ ಕದಾಚನ ॥೬೬॥

ಗಾಂಧಾರಿಯೇ! ನಡೆದ ವಿಷಯವನ್ನು ತಿಳಿದು ನೀನು ಮನಸ್ಸಿನಲ್ಲಿ ದುಃಖವನ್ನು ಅನುಭವಿಸಬೇಡ. ಪಾಂಡವರು ನಾಶವಾಗುವ ರೀತಿಯಲ್ಲಿ ಮನಸ್ಸಿನಲ್ಲಿ ಯಾವತ್ತೂ ಚಿಂತಿಸಬೇಡ.

ಶಕ್ತಾ ಚಾಸಿ ಮಹಾಭಾಗೇ ಪೃಥಿವೀಂ ಸಚರಾಚರಾಮ್ ।
ಚಕ್ಷುಷಾ ಕ್ರೋಧದೀಪ್ತೇನ ನಿರ್ದಗ್ಧುಂ ತಪಸೋ ಬಲಾತ್ ॥೬೭॥

ಮಹಾತ್ಮಳೇ! ನೀನು ನಿನ್ನ ತಪಸ್ಸಿನ ಪ್ರಭಾವದಿಂದಾಗಿ, ಕೋಪದಿಂದ ಪ್ರಜ್ವಲಿಸುವ ಕಣ್ಣುಗಳಿಂದ ಚರಾಚರಪದಾರ್ಥಗಳುಳ್ಳ ಭೂಮಿಯನ್ನು ಸುಟ್ಟುಹಾಕಲು ಸಮರ್ಥಳಾಗಿರುವಿ.

ವೈಶಂಪಾಯನಃ

ವಾಸುದೇವವಚಃ ಶ್ರುತ್ವಾ ಗಾಂಧಾರೀ ವಾಕ್ಯಮಬ್ರವೀತ್ ॥೬೮॥

ವೈಶಂಪಾಯನ– ವಾಸುದೇವನಾಡಿದ ಮಾತನ್ನು ಕೇಳಿ ಗಾಂಧಾರಿಯು ಈ ವಾಕ್ಯವನ್ನು ಹೇಳುತ್ತಾಳೆ.

ಗಾಂಧಾರೀ

ಏವಮೇತನ್ಮಹಾಭಾಗ ಯಥಾ ವದಸಿ ಕೇಶವ ।
ಆಧಿಭರ್ದಹ್ಯಮಾನಾಯಾ ಮತಿಃ ಸಂಚಲಿತಾ ಮಮ ॥೬೯॥

ಗಾಂಧಾರಿ– ಮಹಾತ್ಮನಾದ ಕೇಶವನೇ! ನೀನು ಹೇಗೆ ಹೇಳುತ್ತಿಯೋ ಅದು ಹಾಗೆಯೇ ಇದೆ. ಮನಸ್ಸಿನ ದುಗುಡದಿಂದ ಬೇಯುತ್ತಿರುವ ನನ್ನ ಬುದ್ಧಿಯು ಚಂಚಲಿತವಾಗಿದೆ.

ಸಾ ಮೇ ವ್ಯವಸ್ಥಿತಾ ಶ್ರುತ್ವಾ ತವ ವಾಕ್ಯಂ ಜನಾರ್ದನ ॥೭೦॥

ಜನಾರ್ದನನೇ!. ನಿನ್ನ ಮಾತನ್ನು ಕೇಳಿ ನಾನಿಂದು ವ್ಯವಸ್ಥಿತಚಿತ್ತವುಳ್ಳವಳಾಗಿದ್ದೇನೆ.

ರಾಜ್ಞಸ್ತ್ವಂಧಸ್ಯ ವೃದ್ಧಸ್ಯ ಹತಪುತ್ರಸ್ಯ ಮಾಧವ ।
ತ್ವಂ ಗತಿಃ ಸಹ ತೈಃ ಸರ್ವೈಃ ಪಾಂಡವೈರ್ವದತಾಂ ವರ ॥೭೧॥

ಮಾತುಗಾರರಲ್ಲಿಯೇ ಉತ್ತಮನಾದವನೇ! ಮಾಧವನೇ! ವೃದ್ಧನಾದ, ಕುರುಡನಾದ ಹಾಗೂ ಮಕ್ಕಳನ್ನು ಕಳೆದುಕೊಂಡಿರುವ ಧೃತರಾಷ್ಟ್ರನಿಗೆ ನೀನು ಮತ್ತು ಸಕಲ ಪಾಂಡವರೇ ಗತಿ.

ವೈಶಂಪಾಯನಃ

ಏವಮುಕ್ತ್ವಾ ತು ವಚನಂ ಮುಖಂ ಪ್ರಚ್ಛಾದ್ಯ ವಾಸಸಾ ।
ಪುತ್ರಶೋಕಾಭಿಸಂತಪ್ತಾ ಗಾಂಧಾರೀ ಪ್ರರುರೋದ ಹ ॥೭೨॥

ವೈಶಂಪಾಯನ– ಹೀಗೆ ಹೇಳಿ ಪುತ್ರಶೋಕದಿಂದ ಬೆಂದುಹೋಗಿದ್ದ ಗಾಂಧಾರಿಯು ಮುಖವನ್ನು ವಸ್ತ್ರದಿಂದ ಮುಚ್ಚಿಕೊಂಡು ಬಹಳವಾಗಿ ಅಳತೊಡಗಿದಳು.

ತತ ಏನಾಂ ಮಹಾಬಾಹುಃ ಕೇಶವಃ ಶೋಕಕರ್ಶಿತಾಮ್ ।
ಹೇತುಕಾರಣಸಂಯುಕ್ತೈರ್ವಾಕ್ಯೈ ರಾಶ್ವಾಸಯತ್ ಪ್ರಭುಃ ॥೭೩॥

ಅನಂತರ ಮಹಾಬಾಹುವಾದ ಪ್ರಭು ಕೇಶವನು, ದುಃಖದಿಂದ ಕ್ಷೀಣಿಸಿದ್ದ ಗಾಂಧಾರಿಯನ್ನು ಸರ್ವಕಾರಣನಾದ ಭಗವಂತ ಮತ್ತು ಅವಾಂತರ ಕಾರಣಗಳಾದ ಆಯಾಯ ವ್ಯಕ್ತಿಗಳ ಪ್ರಾರಬ್ಧಕರ್ಮಗಳ ಬಗ್ಗೆ ತಿಳಿಸುವ ವಾಕ್ಯಗಳಿಂದ ಸಮಾಧಾನಪಡಿಸಿದನು.

ಸಮಾಶ್ವಾಸ್ಯ ಸ ಗಾಂಧಾರೀಂ ಧೃತರಾಷ್ಟ್ರಂ ಚ ಮಾಧವಃ ।
ದ್ರೌಣೇಃ ಸಂಕಲ್ಪಿತಂ ಭಾವಮನ್ವಬುದ್ಧ್ಯತ ಭಾರತ ॥೭೪॥

ಭರತಕುಲೋದ್ಭವನೇ! ಗಾಂಧಾರಿಯನ್ನು ಮತ್ತು ಧೃತರಾಷ್ಟ್ರನನ್ನು ಸಮಾಧಾನ ಪಡಿಸಿ ಶ್ರೀಕೃಷ್ಣನು ಅಶ್ವತ್ಥಾಮನು ಸಂಕಲ್ಪಿಸಿಕೊಂಡಿದ್ದ ಅಭಿಪ್ರಾಯವನ್ನು ತಿಳಿದುಕೊಂಡನು.

ತತಸ್ತ್ವರಿತ ಉತ್ಥಾಯ ಪಾದೌ ಮೂರ್ಧ್ನಾ ಪ್ರಣಮ್ಯ ಚ ।
ದ್ವೈಪಾಯನಸ್ಯ ರಾಜೇಂದ್ರ ತತಃ ಕೌರವಮಬ್ರವೀತ್ ॥೭೫॥

ರಾಜೇಂದ್ರನೇ! ಅನಂತರ ಶ್ರೀಕೃಷ್ಣನು ತಕ್ಷಣ ಎದ್ದು ವೇದವ್ಯಾಸರ ಪಾದಗಳನ್ನು ತಲೆಯಿಂದ ನಮಿಸಿ ಧೃತರಾಷ್ಟ್ರನಿಗೆ ಹೇಳುತ್ತಾನೆ.

ಶ್ರೀಭಗವಾನ್

ಆಪೃಚ್ಛೇ ತ್ವಾಂ ಕುರುಶ್ರೇಷ್ಠ ಮಾ ಚ ಶೋಕೇ ಮನಃ ಕೃಥಾಃ ।
ದ್ರೌಣೇಃ ಪಾಪೋಽಸ್ಯಭಿಪ್ರಾಯಸ್ತತೋಽಸ್ಮಿ ಸಹಸೋತ್ಥಿತಃ ॥೭೬॥

ಪಾಂಡವಾನಾಂ ವಧೇ ರಾತ್ರೌ ಬುದ್ಧಿಸ್ತೇನ ನಿದರ್ಶಿತಾ ॥೭೭॥

ಶ್ರೀಭಗವಾನ್– ಕುರುಶ್ರೇಷ್ಠನೇ! ನಿನ್ನನ್ನು ನಾನು ಕೇಳಿಕೊಳ್ಳುತ್ತೇನೆ. ಮನಸ್ಸಿನಲ್ಲಿ ದುಃಖವನ್ನು ಪಡಬೇಡ. ಪಾಪಿಯಾದ ಅಶ್ವತ್ಥಾಮನ ಅಭಿಪ್ರಾಯವನ್ನು ತಿಳಿದು ಕೂಡಲೇ ಹೊರಡಲಿಕ್ಕಾಗಿ ಎದ್ದು ನಿಂತಿರುವೆನು. ರಾತ್ರಿಸಮಯದಲ್ಲಿ ಪಾಂಡವರನ್ನು ಕೊಲ್ಲುವ ನಿಶ್ಚಯವನ್ನು ಅವನು ಮಾಡಿಕೊಂಡಿದ್ದಾನೆ.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ಗಾಂಧಾರ್ಯಾ ಸಹಿತೋಽಬ್ರವೀತ್ ।
ಧೃತರಾಷ್ಟ್ರೋ ಮಹಾರಾಜ ಕೇಶವಂ ಕೇಶಿಸೂದನಮ್ ॥೭೮॥

ವೈಶಂಪಾಯನ– ಮಹಾರಾಜನೇ! ಶ್ರೀಕೃಷ್ಣನ ಈ ಮಾತನ್ನು ಕೇಳಿ ಧೃತರಾಷ್ಟ್ರನು ಗಾಂಧಾರಿಯೊಂದಿಗೆ ಸೇರಿಕೊಂಡು ಕೇಶಿಸಂಹಾರಕನಾದ ಕೇಶವನಿಗೆ ಈ ಮಾತನ್ನು ಹೇಳುತ್ತಾನೆ.

ಧೃತರಾಷ್ಟ್ರ

ಶೀಘ್ರಂ ಗಚ್ಛ ಮಹಾಬಾಹೋ ಪಾಂಡವಾನ್ ಪರಿಪಾಲಯ ।
ಭೂಯಸ್ತ್ವಯಾ ಸಮೇಷ್ಯಾಮಿ ಕ್ಷಿಪ್ರಮೇವ ಜನಾರ್ದನ ॥೭೯॥

ಧೃತರಾಷ್ಟ್ರ– ಮಹಾಬಾಹುವೇ! ಶ್ರೀಕೃಷ್ಣ! ಪಾಂಡವರ ಸಮೀಪಕ್ಕೆ ಬೇಗನೇ ಹೋಗು. ನಿನ್ನ ಜೊತೆಗೆ ಶೀಘ್ರದಲ್ಲಿ ಮತ್ತೆ ಸೇರುವೆನು.

ವೈಶಂಪಾಯನಃ

ಪ್ರಾಯಾತ್ ತತಸ್ತು ತ್ವರಿತೋ ದಾರುಕೇಣ ಸಹಾಚ್ಯುತಃ ॥೮೦॥

ವೈಶಂಪಾಯನ– ಅನಂತರ ಶ್ರೀಕೃಷ್ಣನು ಬೇಗನೇ ದಾರುಕನ ಜೊತೆಗೆ ಹೊರಟುಹೋದನು.

ವಾಸುದೇವೇ ಗತೇ ರಾಜನ್ ಧೃತರಾಷ್ಟ್ರಂ ಜನೇಶ್ವರಮ್ ।
ಆಶ್ವಾಸಯದಮೇಯಾತ್ಮಾ ವ್ಯಾಸೋ ಲೋಕನಮಸ್ಕೃತಃ ॥೮೧॥

ರಾಜನೇ! ವಾಸುದೇವನು ಹೊರಟುಹೋದ ನಂತರ, ಲೋಕದ ಸಕಲರಿಂದಲೂ ನಮಸ್ಕರಿಸಲ್ಪಡುವ, ಅಪ್ರಮೇಯಸ್ವರೂಪರಾದ ಶ್ರೀವೇದವ್ಯಾಸರು ರಾಜನಾದ ಧೃತರಾಷ್ಟ್ರನನ್ನು ಕುರಿತು ಹೀಗೆ ಹೇಳುತ್ತಾರೆ.

ವಾಸುದೇವೋಽಪಿ ಧರ್ಮಾತ್ಮಾ ಕೃತಕೃತ್ಯೋ ಜಗಾಮ ಹ ।
ಶಿಬಿರಂ ಹಸ್ತಿನಪುರಾದ್ ದಿದೃಕ್ಷುಃ ಪಾಂಡವಾನ್ ನೃಪ ॥೮೨॥

ರಾಜನೇ! ಧರ್ಮಾತ್ಮನಾದ ಶ್ರೀಕೃಷ್ಣನು ಕೃತಕೃತ್ಯನಾಗಿ ಹಸ್ತಿನಪುರದಿಂದ ಹೊರಟು ಪಾಂಡವರನ್ನು ನೋಡುವ ಇಚ್ಛೆಯಿಂದ ಅವರ ಶಿಬಿರಕ್ಕೆ ಹೋದನು.

ಆಗಮ್ಯ ಶಿಬಿರಂ ರಾತ್ರೌ ಸೋಽಭ್ಯಗಚ್ಛತ ಪಾಂಡವಾನ್ ।
ತಚ್ಚ ತೇಭ್ಯಃ ಸಮಾಖ್ಯಾಯ ಸಹಿತೈಸ್ತೈಃ ಸಮಾವಿಶತ್ ॥೮೩॥

ಶ್ರೀಕೃಷ್ಣನು ರಾತ್ರಿಯ ಹೊತ್ತಿನಲ್ಲಿ ಪಾಂಡವರ ಶಿಬಿರಕ್ಕೆ ಬಂದನು. ಹಸ್ತಿನಾಪುರದಲ್ಲಿ ನಡೆದ ವಿಷವನ್ನೆಲ್ಲವನ್ನೂ ಪಾಂಡವರಿಗೆ ಹೇಳಿ ಅವರೊಡನೆ ಅಲ್ಲಿಯೇ ಕುಳಿತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ವಾಸುದೇವಪ್ರತ್ಯಾಗಮನಂ ನಾಮ ತ್ರಯಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ನಾಲ್ಕನೆಯ ಅಧ್ಯಾಯ

ದುರ್ಯೋಧನನು ಪ್ರಲಾಪ ಮಾಡಿದ ರೀತಿಯನ್ನು ಸಂಜಯನು ಧೃತರಾಷ್ಟ್ರನಿಗೆ ಹೇಳುವುದು. ವಾದಿಕರು ಅಶ್ವತ್ಥಾಮನಿಗೆ ದುರ್ಯೋಧನನು ಕೆಳಬಿದ್ದ ವಿಷಯವನ್ನು ತಿಳಿಸುವುದು.

ಧೃತರಾಷ್ಟ್ರಃ

ಅಧಿಷ್ಠಿತಃ ಪದಾ ಮೂರ್ಧ್ನಿ ಭಗ್ನಸಕ್ಥಿರ್ಮಹೀಂ ಗತಃ ।
ಶೌಂಡಿರ್ಯಮಾನೀ ಪುತ್ರೋ ಮೇ ಕಾನ್ಯಭಾಷತ ಸಂಜಯ ॥೧॥

ಧೃತರಾಷ್ಟ್ರ– ಸಂಜಯನೇ! ಮದದಿಂದ ಉನ್ಮತ್ತನಾಗಿದ್ದ ನನ್ನ ಮಗನು ತೊಡೆಮುರಿಸಿಕೊಂಡು ಕೆಳಗೆ ಬಿದ್ದಾಗ ಭೀಮನು ಅವನ ತಲೆಯನ್ನು ಒದ್ದನು. ಆಗ ನನ್ನ ಮಗನು ಏನನ್ನು ಹೇಳಿದನು?

ಅತ್ಯರ್ಥೇ ಕೋಪನೋ ರಾಜಾ ಕೃತವೈರಶ್ಚ ಪಾಂಡುಷು ।
ವ್ಯಸನಂ ಪರಮಂ ಪ್ರಾಪ್ತಃ ಕಿಮಾಹ ಪರಮಾಹವೇ ॥೨॥

ಮಹಾಕೋಪಿಷ್ಟನಾದ ಪಾಂಡವರನ್ನು ಸದಾ ದ್ವೇಷಿಸುತ್ತಿದ್ದ ರಾಜಾ ದುರ್ಯೋಧನನು ಮಹಾಯುದ್ಧದಲ್ಲಿ ಬಹಳ ದುಃಖವನ್ನು ಅನುಭವಿಸಿ ಏನನ್ನು ಹೇಳಿದನು?

ಸಂಜಯಃ

ಶೃಣು ರಾಜನ್ ಯಥಾವೃತ್ತಂ ಪ್ರವಕ್ಷ್ಯಾಮಿ ಪರಂತಪ ।
ರಾಜ್ಞಾ ಯದುಕ್ತಂ ಮಗ್ನೇನ ತಸ್ಮಿನ್ ವ್ಯಸನಸಾಗರೇ ॥೩॥

ಸಂಜಯ– ಶತ್ರುತಾಪಕನೇ! ರಾಜನೇ! ದುಃಖಸಾಗರದಲ್ಲಿ ಮುಳುಗಿದ ರಾಜನು ಏನು ಹೇಳಿದನೋ ಅದನ್ನು ಅಲ್ಲಿ ನಡೆದ ರೀತಿಯಲ್ಲಿಯೇ ಹೇಳುವೆನು. ಕೇಳು.

ಭಿನ್ನಸಕ್ಥೋ ನೃಪೋ ರಾಜನ್ ಪಾಂಸುನಾ ಪರಿಕುಂಠಿತಃ ।
ಸಂಯಮ್ಯ ಮೂರ್ಧಜಾಂಸ್ತತ್ರ ವೀಕ್ಷ್ಯ ಚೈವ ದಿಶೋ ದಶ ॥೪॥

ಕ್ರೋಧಂ ನಿಯಮ್ಯ ಯತ್ನೇನ ನಿಃಶ್ವಸನ್ನುರಗೋ ಯಥಾ ।
ಸಂರಂಭಾಶ್ರುಪರೀತಾಭ್ಯಾಂ ನೇತ್ರಾಭ್ಯಾಮಭಿವೀಕ್ಷ್ಯ ಮಾಮ್ ॥೫॥

ಬಾಹೂ ಧರಣ್ಯಾಂ ನಿಷ್ಪೀಡ್ಯ ಮುಹುರ್ಮತ್ತ ಇವ ದ್ವಿಪಃ ।
ಪ್ರಕೀರ್ಣಾನ್ ಮೂರ್ಧಜಾನ್ ಧೂನ್ವನ್ ದಂತೈರ್ದಂತಾನುಪಸ್ಪೃಶನ್ ॥
ಗರ್ಹಯನ್ ಪಾಂಡವಶ್ರೇಷ್ಠಂ ವಿನಿಃಶ್ವಸ್ಯೇದಮಬ್ರವೀತ್ ॥೭॥

ತೊಡೆಮುರಿದು ನೆಲಕ್ಕೆ ಬಿದ್ದ ದುರ್ಯೋಧನನು ಧೂಳಲ್ಲಿ ಮುಳುಗಿಹೋಗಿದ್ದನು. ಚದುರಿಹೋಗಿದ್ದ ತನ್ನ ತಲೆಗೂದಲನ್ನು ಒಟ್ಟುಸೇರಿಸಿ ಕಟ್ಟಿಕೊಂಡು, ಎಲ್ಲಾ ಹತ್ತು ದಿಕ್ಕುಗಳಲ್ಲಿಯೂ ನೋಡುತ್ತಿದ್ದನು. ಕೋಪವನ್ನು ಪ್ರಯತ್ನಪೂರ್ವಕವಾಗಿ ತಡೆ ಹಿಡಿದುಕೊಂಡು ಸರ್ಪದ ಹಾಗೆ ಭುಸುಗುಡುತ್ತಿದ್ದನು. ಕೋಪ ಮತ್ತು ಕಣ್ಣೀರಿನಿಂದ ತುಂಬಿದ ಕಣ್ಣುಗಳಿಂದ ನನ್ನನ್ನು ದಿಟ್ಟಿಸಿ ನೋಡುತ್ತಿದ್ದನು. ಮದವೇರಿದ ಆನೆಯಂತೆ ತನ್ನ ಕೈಗಳನ್ನು ನೆಲಕ್ಕೂರಿಕೊಂಡು, ಚದುರಿದ ತಲೆಗೂದಲನ್ನು ಕೊಡವಿಕೊಳ್ಳುತ್ತಾ ಹಲ್ಲುಗಳಿಂದ ಹಲ್ಲುಗಳನ್ನು ಮಸೆಯುತ್ತಿದ್ದನು. ಪಾಂಡವಶ್ರೇಷ್ಠನಾದ ಧರ್ಮರಾಜನನ್ನು ನಿಂದಿಸುತ್ತಾ, ನಿಟ್ಟುಸಿರನ್ನು ಬಿಡುತ್ತಾ ಹೀಗೆ ಹೇಳಿದನು.

ದುರ್ಯೋಧನಃ

ಭೀಷ್ಮೇ ಶಾಂತನವೇ ನಾಥೇ ದ್ರೋಣೇ ಚಾಚಾರ್ಯಸತ್ತಮೇ ।
ಗೌತಮೇ ಶಕುನೌ ಚಾಪಿ ಕರ್ಣೇ ಶಸ್ತ್ರಭೃತಾಂ ವರೇ ॥೮॥

ಅಶ್ವತ್ಥಾಮ್ನಿ ತಥಾ ಶೂರೇ ಶಲ್ಯೇ ಚ ಕೃತವರ್ಮಣಿ ।
ಅನ್ಯೇಷ್ವಪಿ ಚ ಶೂರೇಷು ನ್ಯಸ್ತಭಾರೋ ಮಹಾತ್ಮಸು ॥೯॥

ಇಮಾಮವಸ್ಥಾಂ ಪ್ರಾಪ್ತೋಽಸ್ಮಿ ಕಾಲೋ ಹಿ ದುರತಿಕ್ರಮಃ ॥೧೦॥

ದುರ್ಯೋಧನ– ಶಂತನುವಿನ ಮಗನಾದ ನಮ್ಮ ಸ್ವಾಮೀ ಭೀಷ್ಮ, ಉತ್ತಮ ಗುರುವಾದ ದ್ರೋಣ, ಕೃಪಾಚಾರ್ಯ, ಶಕುನಿ, ಶಸ್ತ್ರಧಾರಿಗಳಲ್ಲಿಯೇ ಉತ್ತಮನಾದ ಕರ್ಣ, ಅಶ್ವತ್ಥಾಮ, ಶೂರನಾದ ಶಲ್ಯ, ಕೃತವರ್ಮ, ಇನ್ನೂ ಅನೇಕ ಮಹಾತ್ಮರಾದ ಶೂರರಲ್ಲಿ ಯುದ್ಧದ ಜವಾಬ್ದಾರಿಯನ್ನು ಹೊರಿಸಿಯೂ ಕೂಡ ನಾನಿಂದು ಇಂತಹ ದುರವಸ್ಥೆಯನ್ನು ಹೊಂದಿದ್ದೇನೆ. ಕಾಲವನ್ನು ಯಾರೂ ಮೀರಲೂ ಸಾಧ್ಯವಿಲ್ಲ.

ಏಕಾದಶಚಮೂಭರ್ತಾ ಸೋಽಹಮೇತಾಂ ದಶಾಂ ಗತಃ ।
ಕಾಲಂ ಪ್ರಾಪ್ಯ ಮಹಾಬಾಹೋ ನ ಕಶ್ಚಿದತಿವರ್ತತೇ ॥೧೧॥

ಹನ್ನೊಂದು ಅಕ್ಷೌಹಿಣಿ ಸೈನ್ಯಕ್ಕೆ ಒಡೆಯನಾದ ನಾನಿಂದು ಇಂತಹ ದೆಶೆಗೆ ಬಂದಿದ್ದೇನೆ. ಕಾಲದ ವಶಕ್ಕೊಳಗಾದ ಯಾವ ವ್ಯಕ್ತಿಯೂ ಕೂಡ ಅದನ್ನು ಮೀರಲಾರನು.

ಆಖ್ಯಾತವ್ಯಂ ಮದೀಯಾನಾಂ ಯೇ ತು ಜೀವಂತಿ ಸಂಗರೇ ।
ಯಥಾಹಂ ಭೀಮಸೇನೇನ ವ್ಯತ್ಕಮ್ಯ ಸಮಯಂ ಹತಃ ॥೧೨॥

ಯುದ್ಧದಲ್ಲಿ ಯಾರು ನನ್ನ ಕಡೆಯವರು ಬದುಕಿದ್ದಾರೆಯೋ ಅವರಿಗೆ 'ಭೀಮನು ನಿಯಮವನ್ನು ಮೀರಿ ನನ್ನನ್ನು ಕೊಂದಿದ್ದಾನೆ' ಎಂದು ಹೇಳಬೇಕು.

ಬಹೂನಿ ಸುನೃಶಂಸಾನಿ ಕೃತಾನಿ ಖಲು ಪಾಂಡವೈಃ ।
ಭೂರಿಶ್ರವಸಿ ಕರ್ಣೇ ಚ ದ್ರೋಣೇ ಭೀಷ್ಮೇ ಚ ಶ್ರೀಮತಿ ॥೧೩॥

ಭೂರಿಶ್ರವಸ್ಸು, ಕರ್ಣ, ದ್ರೋಣ, ಶ್ರೀಮಂತನಾದ ಭೀಷ್ಮ ಇವರೆಲ್ಲರ ವಿಷಯದಲ್ಲಿ ಪಾಂಡವರು ಅನೇಕ ಬಹಳ ಕ್ರೂರವಾದ ಕೆಲಸಗಳನ್ನು ಮಾಡಿದ್ದಾರೆ.

ಇದಂ ಚಾಕೀರ್ತಿದಂ ಕರ್ಮ ನೃಶಂಸಂ ಪಾಂಡವೈಃ ಕೃತಮ್ ।
ವಾಚ್ಯತಾಂ ಯೇನ ತೇ ಸತ್ಸು ಗಮಿಷ್ಯಂತೀತಿ ಮೇ ಮತಿಃ ॥೧೪॥

ಪಾಂಡವರು ಮಾಡಿರುವ ಈ ಅಪಕೀರ್ತಿಯನ್ನು ತಂದುಕೊಡುವ ಕೆಲಸಗಳನ್ನು ಹೇಳಬೇಕು. ಇದರಿಂದಾಗಿ ಈ ಸಂಗತಿಗಳು ಸಜ್ಜನರ ಹತ್ತಿರ ಹೋಗುವವು ಎಂದು ನಾನು ಅಂದುಕೊಂಡಿದ್ದೇನೆ.

ಕಾ ಪ್ರೀತಿಃ ಸತ್ತ್ವಯುಕ್ತಸ್ಯ ಕೃತ್ವೋಪಾಧಿಕೃತಂ ಜಯಮ್ ।
ಕೋ ವಾ ಸಮಯಭೇತ್ತಾರಂ ಬುಧಃ ಸಮ್ಮಂತುಮರ್ಹತಿ ॥೧೫॥

ಸಾಮರ್ಥ್ಯಯುಕ್ತನಾದ ನನ್ನನ್ನು ಯಾವುದೋ ನಿಮಿತ್ತದಿಂದ ಜಯಿಸಿ ಏನು ಆನಂದವನ್ನು ಪಡೆಯಬಹುದು? ಯುದ್ಧದ ನಿಯಮಗಳನ್ನು ಮೀರುವವನನ್ನು ಯಾವ ಜ್ಞಾನಿಯು ಸಮ್ಮಾನಿಸುವನು?

ಅಧರ್ಮೇಣ ಜಯಂ ಲಬ್ಧ್ವಾ ಕೋ ನು ಹೃಷ್ಯೇತ ಪಂಡಿತಃ ।
ಯಥಾ ಸಂಹೃಷ್ಯತೇ ಪಾಪಃ ಪಾಂಡುಪುತ್ರೋ ವೃಕೋದರಃ ॥೧೬॥

ಪಾಪಿಯಾದ ಭೀಮನು ಅಧರ್ಮದಿಂದ ಜಯವನ್ನು ಪಡೆದು ಯಾವ ರೀತಿ ಸಂತುಷ್ಟನಾಗಿದ್ದಾನೆಯೋ ಆ ರೀತಿಯಲ್ಲಿ ಯಾವ ಜ್ಞಾನಿಯೂ ಕೂಡ ಅಧರ್ಮಮಾರ್ಗದಿಂದ ಜಯವನ್ನು ಪಡೆದು ಸಂತೋಷವನ್ನು ಪಡೆಯುವುದಿಲ್ಲ.

ಕಿಂ ನು ಚಿತ್ರಮತಸ್ತ್ವನ್ಯತ್ ಭಗ್ನಸಕ್ಥಸ್ಯ ವೈ ಮಮ ।
ಕ್ರುದ್ಧೇನ ಭೀಮಸೇನೇನ ಪದಾ ಯನ್ಮಥಿತಂ ಶಿರಃ ॥೧೭॥

ಸಂಜಯನೇ! ತೊಡೆಮುರಿದು ಕೆಳಗೆ ಬಿದ್ದಿರುವ ನನ್ನ ತಲೆಯನ್ನು ಕ್ರುದ್ಧನಾದ ಭೀಮಸೇನನು ಒದೆಯುತ್ತಿದ್ದಾನೆ. ಇದಕ್ಕಿಂತ ಬೇರೆ ಆಶ್ಚರ್ಯಜನಕವಾದುದು ಯಾವುದಿದೆ?

ಪ್ರತಪಂತಂ ಶ್ರಿಯಾ ಜುಷ್ಟಂ ವರ್ತಮಾನಂ ಚ ಬಂಧುಷು ।
ನಿಗೃಹ್ಣೀಯಾದ್ ರಿಪುಂ ಯೋ ಹಿ ಸ ವೈ ಸಂಜಯ ಪೂರುಷಃ ॥೧೮॥

ಸಂಜಯನೇ! ಬಂಧುಗಳ ಮಧ್ಯೆ ಇದ್ದುಕೊಂಡು ಸಂಪತ್ತಿನಿಂದ ಪ್ರಕಾಶಿಸುತ್ತಿರುವ ಶತ್ರುವನ್ನು ಯಾವನು ನಿಗ್ರಹಿಸುತ್ತಾನೆಯೊ ಅವನೇ ನಿಜವಾದ ಪುರುಷ. (ನನ್ನನ್ನೊಬ್ಬನನ್ನು ಕೊಲ್ಲುವುದು ಪೌರುಷವಲ್ಲ.)

ಅಭಿಜ್ಞೌ ಕ್ಷತ್ರಧರ್ಮಸ್ಯ ಮಮ ಮಾತಾ ಪಿತಾ ಚ ಯೌ ।
ತೌ ಹಿ ಸಂಜಯ ದುಃಖಾರ್ತೌ ವಿಜ್ಞಾಪ್ಯೌ ವಚನಾನ್ಮಮ ॥೧೯॥

ನನ್ನ ತಂದೆ ಮತ್ತು ತಾಯಿ ಇಬ್ಬರೂ ಕ್ಷತ್ರಿಯಧರ್ಮವನ್ನು ಚೆನ್ನಾಗಿ ತಿಳಿದಿರುತ್ತಾರೆ. ಸಂಜಯನೇ! ದುಃಖಪಡುತ್ತಿರುವ ಅವರಿಗೆ ನನ್ನ ನಡೆದ ವಿಷಯಗಳೆಲ್ಲವನ್ನು ಮಾತಿನ ಮೂಲಕ ತಿಳಿಸಬೇಕು.

ಇಷ್ಟಂ ಭೃತ್ಯಾ ಭೃತಾಃ ಸಮ್ಯಗ್ ಭೂಃ ಪ್ರಶಸ್ತಾ ಸಸಾಗರಾ ।
ಮೂರ್ಧ್ನಿ ಸ್ಥಿತಮಮಿತ್ರಾಣಾಂ ಜೀವತಾಮೇವ ಸಂಜಯ ॥೨೦॥

ದತ್ತಾ ದೇಯಾ ಯಥಾಶಕ್ತಿ ಮಿತ್ರಾಣಾಂ ಚ ಪ್ರಿಯಂ ಕೃತಮ್ ।
ಅಮಿತ್ರಾ ಬಾಧಿತಾಃ ಸರ್ವೇ ಕೋ ನು ಸ್ವಂತತರೋ ಮಯಾ ॥೨೧॥

ಸಂಜಯನೇ! ನಾನು ನನಗಿಷ್ಟರಾದ ಅನೇಕ ಸೇವಕರನ್ನು ಪಡೆದು ಸಲಹಿದ್ದೆ. ಸಾಗರಪರ್ಯಂತ ಭೂಮಿಯನ್ನು ಚೆನ್ನಾಗಿ ರಾಜ್ಯಭಾರ ಮಾಡಿದ್ದೆನು. ಶತ್ರುಗಳು

ಬದುಕಿರುವಾಗಲೇ ಅವರ ತಲೆಗಳನ್ನು ಮಣಿಸಿದ್ದೆನು. ಸ್ನೇಹಿತರಿಗೆ ನನ್ನ ಕೈಲಾದಷ್ಟು ಒಳ್ಳೆಯದನ್ನು ಮಾಡಿರುವೆನು. ಎಲ್ಲಾ ಶತ್ರುಗಳನ್ನೂ ಗೆದ್ದಿರುವೆನು. ನನ್ನ ರೀತಿಯಲ್ಲಿ ಒಳ್ಳೆಯ ಅಂತ್ಯವನ್ನು ಕಂಡವನ್ನು ಇನ್ನೊಬ್ಬ ಯಾರಿದ್ದಾನೆ?

ನೃಪಮುಖ್ಯೇಷು ಮಾನಶ್ಚ ಮಯಾ ಪ್ರಾಪ್ತಃ ಸುದುರ್ಲಭಃ ।
ಆಜಾನೇಯೈಸ್ತಥಾ ನೇಯಂ(ಯಾತಃ) ಕೋ ನು ಸ್ವಂತತರೋ ಮಯಾ ॥

ಮಹಾ ಮಹಾರಾಜರ ಮಧ್ಯದಲ್ಲಿ ನಾನು ಒಳ್ಳೆಯ ಗೌರವವನ್ನು ಪಡೆದಿದ್ದೇನೆ. ನನ್ನನ್ನು ಕುಲೀನವಾದ ಕುದುರೆಗಳು ಕರೆದೊಯ್ಯುತ್ತಿದ್ದವು. ನನ್ನ ರೀತಿಯಲ್ಲಿ ಒಳ್ಳೆಯ ಅಂತ್ಯವನ್ನು ಕಂಡವನು ಇನ್ನೊಬ್ಬ ಯಾರಿದ್ದಾನೆ?

ಯಾತಾನಿ ಪರರಾಷ್ಟ್ರಾಣಿ ನೃಪಾ ಭುಕ್ತಾಶ್ಚ ದಾಸವತ್ ।
ಪ್ರಿಯೇಭ್ಯಶ್ಚ ಕೃತಂ ಸಾಧು ಕೋ ನು ಸ್ವಂತತರೋ ಮಯಾ ॥೨೩॥

ಶತ್ರುಗಳ ರಾಷ್ಟ್ರಗಳನ್ನು ಆಕ್ರಮಿಸಿ ಅಲ್ಲಿದ್ದ ರಾಜರನ್ನು ಸೇವಕರನ್ನಾಗಿ ಮಾಡಿಕೊಂಡಿದ್ದೆ. ನನಗೆ ಪ್ರಿಯರಾದವರಿಗೆ ಒಳ್ಳೆಯದನ್ನು ಮಾಡಿದ್ದೆ. ನನ್ನ ರೀತಿಯಲ್ಲಿ ಒಳ್ಳೆಯ ಅಂತ್ಯವನ್ನು ಕಂಡವನು ಇನ್ನೊಬ್ಬ ಯಾವನಿದ್ದಾನೆ?

ಮಾನಿತಾ ಬಾಂಧವಾಃ ಸರ್ವೇ ಮಾನ್ಯಃ ಸಂಪೂಜಿತೋ ಜನಃ ।
ತ್ರಿತಯಂ ಸೇವಿತಂ ಸರ್ವಂ ಕೋ ನು ಸ್ವಂತತರೋ ಮಯಾ ॥೨೪॥

ಬಂಧುಗಳನ್ನು ಚೆನ್ನಾಗಿ ಗೌರವಿಸಿದ್ದೆ. ಮಾನ್ಯರಾದ ಜನರನ್ನು ಪೂಜಿಸಿದ್ದೆ. ಎಲ್ಲಾ ಧರ್ಮ-ಅರ್ಥ-ಕಾಮಗಳನ್ನು ನಾನು ಅನುಭವಿಸಿದ್ದೇನೆ. ನನ್ನ ರೀತಿಯಲ್ಲಿ ಒಳ್ಳೆಯ ಅಂತ್ಯವನ್ನು ಕಂಡವನು ಇನ್ನೊಬ್ಬ ಯಾವನಿದ್ದಾನೆ?

ಅಧೀತಂ ವಿಹೃತಂ ದತ್ತಂ ಪ್ರಾಪ್ತಮಾಯುರ್ನಿರಾಮಯಮ್ ।
ಸ್ವಧರ್ಮೇಣ ಜಿತಾ ಲೋಕಾಃ ಕೋ ನು ಸ್ವಂತತರೋ ಮಯಾ ॥೨೫॥

ಅಧ್ಯಯನವನ್ನು ಮಾಡಿದ್ದೆ. ವಿಹರಿಸಿದ್ದೆ. ದಾನವನ್ನು ಮಾಡಿದ್ದೆ. ಆರೋಗ್ಯಪೂರ್ಣವಾದ ಆಯುಷ್ಯವನ್ನು ಹೊಂದಿದ್ದೆ. ನನಗೆ ಹಿತವಾದ ಧರ್ಮಮಾರ್ಗದಲ್ಲಿಯೇ ಲೋಕವನ್ನೆಲ್ಲಾ ಗೆದ್ದಿದ್ದೆ. ನನ್ನ ರೀತಿಯಲ್ಲಿ ಒಳ್ಳೆಯ ಅಂತ್ಯವನ್ನು ಕಂಡವನು ಇನ್ನೊಬ್ಬ ಯಾವನಿದ್ದಾನೆ?

ದಿಷ್ಟ್ಯಾ ನಾಹಂ ಜಿತಃ ಸಂಖೇ ಪರಾನ್ ಪ್ರೇಷ್ಯವದಾಶ್ರಿತಃ ।
ದಿಷ್ಟ್ಯಾ ಮೇ ವಿಪುಲಾ ಲಕ್ಷ್ಮೀರ್ಮತೇ ತ್ವನ್ಯಂ ಗತಾ ಮಯಿ ॥೨೬॥

ನನ್ನ ಸೌಭಾಗ್ಯದಿಂದಾಗಿ ನಾನು ಶತ್ರುಗಳಾದ ಪಾಂಡವರನ್ನು ದಾಸನಂತೆ ಆಶ್ರಯಿಸಿ ಜೀವಭಯದಿಂದ ಓಡಿಹೋಗಲಿಲ್ಲ. ನನ್ನ ಸೌಭಾಗ್ಯದಿಂದಾಗಿ ನನ್ನಲ್ಲಿ ಬೇಕಾದಷ್ಟು ಸಂಪತ್ತಿದೆ. ಅದೆಲ್ಲವೂ ನಾನು ಸತ್ತ ಮೇಲೆಯೇ ಬೇರೆಯವರ ಪಾಲಾಗುತ್ತದೆ.

ಯದಿಷ್ಟಂ ಕ್ಷತ್ರಬಂಧೂನಾಂ ಸ್ವಧರ್ಮಮನುತಿಷ್ಠತಾಮ್ ।
ನಿಧನಂ ತನ್ಮಯಾ ಪ್ರಾಪ್ತಂ ಕೋ ನು ಸ್ವಂತತರೋ ಮಯಾ ॥೨೭॥

ತಮ್ಮ ಧರ್ಮವನ್ನು ಆಚರಿಸುವ ಕ್ಷತ್ರಿಯಬಂಧುಗಳು ಯಾವ ಮರಣವನ್ನು ಅಪೇಕ್ಷಿಸುತ್ತಾರೆಯೋ ಅಂತಹ ಮರಣವು ನನಗಿಂದು ಲಭಿಸಿದೆ. ನನ್ನ ರೀತಿಯಲ್ಲಿ ಒಳ್ಳೆಯ ಅಂತ್ಯವನ್ನು ಕಂಡವನು ಇನ್ನೊಬ್ಬ ಯಾವನಿದ್ದಾನೆ?

ದಿಷ್ಟ್ಯಾ ನಾಹಂ ಪರಾವೃತ್ತೋ ವೈರಾತ್ ಪ್ರಾಕೃತವಜ್ಜಿತಃ ।
ದಿಷ್ಟ್ಯಾ ನ ವಿಮತಿಂ ಕಂಚಿದ್ ಭಜಿತ್ವಾಽಹಂ ಪರಾಜಿತಃ ॥೨೮॥

ನನ್ನ ಸೌಭಾಗ್ಯದಿಂದಲೇ ದ್ವೇಷದಿಂದ ಸಾಮಾನ್ಯನಂತೆ ಸೋತು ಹೋದರೂ ನಾನು ಯುದ್ಧದಿಂದ ಪಲಾಯನ ಮಾಡಲಿಲ್ಲ. ಶತ್ರುಗಳಿಗೆ ಶರಣಾಗುವಂತಹ ವಿರುದ್ಧ ಬುದ್ಧಿನ್ನಾಶ್ರಯಿಸಿ ನಾನು ಸೋತು ಹೋಗಲೂ ಇಲ್ಲ.

ಸುಪ್ತಂ ವಾಽಪಿ ಪ್ರಮತ್ತಂ ವಾ ಯಥಾ ಹನ್ಯಾದ್ ವಿಷೇಣ ವಾ ।
ಏವಂ ವೃತ್ತಾಂತಧರ್ಮೇಣ ವ್ಯತ್ಕ್ರಮ್ಯ ಸಮಯಂ ಹತಃ ॥೨೯॥

ಯಾವ ರೀತಿಯಲ್ಲಿ ಮಲಗಿದವನನ್ನು, ಹುಚ್ಚನಾದವನನ್ನು, ವಿಷಾದಿ ಪ್ರಯೋಗದಿಂದ ಕೊಲ್ಲುವುದು ಅಧರ್ಮವೋ ಅದೇ ರೀತಿಯಲ್ಲಿ ಧರ್ಮವನ್ನು ಮೀರಿ ನಡೆದ ಭೀಮಸೇನನು ಯುದ್ಧನಿಯಮವನ್ನು ಮೀರಿ ನನ್ನನ್ನು ಕೊಂದಿದ್ದಾನೆ.

ಅಶ್ವತ್ಥಾಮಾ ಮಹಾಬಾಹುಃ ಕೃತವರ್ಮಾ ಚ ಸಾತ್ವತಃ ।
ಕೃಪಃ ಶಾರದ್ವತಶ್ಚಾಪಿ ವಕ್ತವ್ಯಾ ವಚನಾನ್ಮಮ ॥೩೦॥

ಮಹಾಬಾಹುವಾದ ಅಶ್ವತ್ಥಾಮ, ಸಾತ್ವತಕುಲದ ಕೃತವರ್ಮ ಮತ್ತು ಶಾರದ್ವತಕುಲದ ಕೃಪ - ಇವರಿಗೆ ಈ ಎಲ್ಲಾ ವಿಷಯಗಳನ್ನು ನನ್ನ ಮಾತಿನಂತೆ ತಿಳಿಸು.

ಅಧರ್ಮೇಣ ಪ್ರವೃತ್ತಾನಾಂ ಪಾಂಡವಾನಾಮನೇಕಶಃ ।
ವಿಶ್ವಾಸಂ ಸಮಯಘ್ನಾನಾಂ ನ ಯೂಯಂ ಗಂತುಮರ್ಹಥ ॥೩೧॥

ಅನೇಕ ಬಾರಿ ಅಧರ್ಮದಲ್ಲಿ ನಡೆದ ಹಾಗೂ ಎಲ್ಲಾ ನಿಯಮಗಳನ್ನೂ ಮೀರಿ ನಡೆಯುವ ನಮ್ಮ ಶತ್ರುಗಳಾದ ಪಾಂಡವರಲ್ಲಿ ನೀವು ಯಾವ ವಿಶ್ವಾಸವನ್ನೂ ಇಡಬೇಡಿ.

ಸಂಜಯಃ

ವಾರ್ತಿಕಾನ್ ಚಾಬ್ರವೀತ್ ಸರ್ವಾನ್ ಪುತ್ರಸ್ತೇ ಸತ್ಯವಿಕ್ರಮಃ ॥೩೨॥

ಸಂಜಯ– ಸತ್ಯಪರಾಕ್ರಮಿಯಾದ ನಿನ್ನ ಮಗನು ವಾರ್ತಾವಾಹಕರಾದ ದೂತರಿಗೆ ಎಲ್ಲವನ್ನೂ ಹೇಳಿದನು. (ಸಿದ್ಧ-ಗಂಧರ್ವಾದಿಗಳ ವಾರ್ತೆಯಿಂದ ಅರ್ಥಸಿದ್ಧಿಪಡೆದಿದ್ದ ದೂತರಿಗೆ ಹೇಳಿದನು.)

ದುರ್ಯೋಧನಃ

ಅಧರ್ಮಾದ್ ಭೀಮಸೇನೇನ ನಿಹತೋಽಹಂ ಯಥಾ ರಣೇ ।
ಸೋಽಹಂ ದ್ರೋಣಂ ಸ್ವರ್ಗಗತಂ ಶಲ್ಯಕರ್ಣಾವುಭೌ ತಥಾ ॥೩೩॥

ವೃಷಸೇನಂ ಮಹಾವೀರ್ಯಂ ಶಕುನಿಂ ಚಾಪಿ ಸೌಬಲಮ್ ॥೩೪॥

ಜಲಸಂಧಂ ಮಹಾತ್ಮಾನಂ ಭಗದತ್ತಂ ಚ ಪಾರ್ಥಿವಮ್ ।
ಸೋಮದತ್ತಂ ಮಹೇಷ್ವಾಸಂ ಸೈಂಧವಂ ಚ ಜಯದ್ರಥಮ್ ॥೩೫॥

ದುಃಶಾಸನಪುರೋಗಾಂಶ್ಚ ಭ್ರಾತೃನಾತ್ಮಸಮಾನ್ ಮಮ ।
ದೌಃಶಾಸನಿಂ ಚ ವಿಕ್ರಾಂತಂ ಲಕ್ಷ್ಮಣಂ ಚಾತ್ಮಜಾವುಭೌ ॥೩೬॥

ಏತಾಂಶ್ಚಾನ್ಯಾಂಶ್ಚ ಸುಬಹೂನ್ ಅಸ್ಮದೀಯಾನ್ ಸಹಸ್ರಶಃ ।
ಪೃಷ್ಠತೋಽನುಗಮಿಷ್ಯಾಮಿ ಸಾರ್ಥಹೀನ ಇವಾಽಧ್ವಗಃ ॥೩೭॥

ದುರ್ಯೋಧನ– ನನ್ನನ್ನು ಭೀಮಸೇನನು ಅಧರ್ಮಮಾರ್ಗದಿಂದ ಕೊಂದಿದ್ದಾನೆ. ಅಂತಹ ನಾನು ಈಗಾಗಲೇ ಸ್ವರ್ಗಕ್ಕೆ ಹೋಗಿರುವ ದ್ರೋಣನನ್ನು, ಶಲ್ಯನನ್ನು, ಕರ್ಣನನ್ನು, ಮಹಾವೀರನಾದ ವೃಷಸೇನನನ್ನು, ಶಕುನಿಯನ್ನು, ಮಹಾತ್ಮ ಜಲಸಂಧನನ್ನು, ರಾಜ ಭಗದತ್ತನನ್ನು, ಮಹಾಬಿಲ್ಲಾರನಾಗಿದ್ದ ಸೋಮದತ್ತನನ್ನು, ಸಿಂಧುದೇಶದ ಸೈಂಧವನನ್ನು, ದುಃಶಾಸನ ಮೊದಲಾದ ನನಗೆ ಸಮಾನರಾದ ಸಹೋದರರನ್ನು, ವಿಕ್ರಮಿಯಾದ ದುಃಶಾಸನಪುತ್ರ ಮತ್ತು ನನ್ನ ಮಗ ಲಕ್ಷ್ಮಣನನ್ನು, ಇವರನ್ನು ಮತ್ತು ಇನ್ನೂ ಅನೇಕ ಸಾವಿರಾರು ಸಂಖ್ಯೆಯ ನಮ್ಮವರನ್ನು ಅನುಸರಿಸಿಕೊಂಡು ಹೋಗುವೆನು. ದಾರಿಯಲ್ಲಿ ಸಹಾಯಕರನ್ನು ಕಳೆದುಕೊಂಡವನು ಹೋಗುವಂತೆ ನಾನು ಇವರು ಹೋದ ದಾರಿಯಲ್ಲಿಯೇ ಸ್ವರ್ಗಕ್ಕೆ ಹೋಗುವೆನು.

ನೂನಂ ಭ್ರಾತೄನ್ ಹತಾನ್ ಶ್ರುತ್ವಾ ಭರ್ತಾರಂ ಚ ಸ್ವಸಾ ಮಮ ।
ರೋರೂಯಮಾಣಾ ದುಃಖಾರ್ತಾ ದುಃಶಲಾ ಸಾ ಭವಿಷ್ಯತಿ ॥೩೮॥

ಸಹೋದರರನ್ನೂ, ಗಂಡನನ್ನೂ ಕಳೆದುಕೊಂಡ ನನ್ನ ತಂಗಿ ದುಃಶಲೆಯು ನಿಶ್ಚಯವಾಗಿಯೂ ದುಃಖದಿಂದ ಜೋರಾಗಿ ಅಳುವಳು.

ಸ್ನುಷಾಭಿಃ ಪ್ರಸ್ನುಷಾಭಿಶ್ಚ ವೃದ್ಧೋ ರಾಜಾ ಪಿತಾ ಮಮ ।
ಗಾಂಧಾರೀಸಹಿತಃ ಕ್ರೋಶನ್ ಕಾಂ ಗತಿಂ ಪ್ರತಿಪತ್ಸ್ಯತೇ ॥೩೯॥

ವೃದ್ಧನಾದ ನನ್ನ ತಂದೆ ಧೃತರಾಷ್ಟ್ರನು ಸೊಸೆಯಂದಿರು ಮತ್ತು ಅವರ ಸೊಸೆಯಂದಿರು- ಇವರೊಡನೆ ಸೇರಿಕೊಂಡು, ಗಾಂಧಾರಿಯನ್ನು ಕೂಡಿಕೊಂಡು ಬೊಬ್ಬಿಡುತ್ತಾ ಎಂತಹ ಅವಸ್ಥೆಯನ್ನು ಹೊಂದುವನೋ?

ನೂನಂ ಲಕ್ಷ್ಮಣಮಾತಾऽಪಿ ಹತಪುತ್ರಾ ಹತೇಶ್ವರಾ ।
ವಿನಾಶಂ ಯಾಸ್ಯತಿ ಕ್ಷಿಪ್ರಂ ಕಲ್ಯಾಣೀ ಪೃಥುಲೋಚನಾ ॥೪೦॥

ಕಲ್ಯಾಣಿಯಾದ ವಿಶಾಲನೇತ್ರವುಳ್ಳ ನನ್ನ ಮಡದಿ, ಲಕ್ಷ್ಮಣನ ತಾಯಿ ಮಗನನ್ನೂ, ಗಂಡನನ್ನೂ ಕಳೆದುಕೊಂಡು ತಾನೂ ಕೂಡ ಕೂಡಲೇ ನಾಶವನ್ನು ಹೊಂದುವಳು.

ಯದಿ ಜೀವತಿ ಚಾರ್ವಾಕಃ ಪರಿವ್ರಾಟ್ ವಾಗ್ವಿಶಾರದಃ ।
ಕರಿಷ್ಯತಿ ಮಹಾಭಾಗೋ ಧ್ರುವಂ ಸೋऽಪಚಿತಿಂ ಮಮ ॥೪೧॥

ಒಂದು ವೇಳೆ ನನಗೆ ಸಹಾಯಕನಾದ, ಚೆನ್ನಾಗಿ ಮಾತನಾಡುವ ಬುದ್ಧಿವಂತನಾದ ತ್ರಿದಂಡಿ ಸಂನ್ಯಾಸಿಯು ಬದುಕಿದ್ದಿದ್ದರೆ ಖಂಡಿತವಾಗಿಯೂ ಪ್ರತ್ಯುಪಕಾರ ಭಾವನೆಯಿಂದ ನನ್ನನ್ನು ಪೂಜಿಸುತ್ತಿದ್ದನು.

ಸಮಂತಪಂಚಕೇ ಪುಣ್ಯೇ ತ್ರಿಷು ಲೋಕೇಷು ವಿಶ್ರುತೇ ।
ಅಹಂ ನಿಧನಮಾಪದ್ಯ ಲೋಕಾನ್ ಪ್ರಾಪ್ಸ್ಯಾಮಿ ಶಾಶ್ವತಾನ್ ॥೪೨॥

ಮೂರು ಲೋಕಗಳಲ್ಲಿಯೂ ಚೆನ್ನಾಗಿ ಪ್ರಸಿದ್ಧವಾದ, ಪುಣ್ಯಪ್ರದವಾದ ಸಮಂತಪಂಚಕದಲ್ಲಿ ಪ್ರಾಣತ್ಯಾಗವನ್ನು ಮಾಡಿ, ಶಾಶ್ವತವಾದ ಲೋಕಗಳನ್ನು ಹೊಂದುವೆನು.

ಸಂಜಯಃ

ತತೋ ಜನಸಹಸ್ರಾಣಿ ಬಾಷ್ಪಪೂರ್ಣಾನಿ ಮಾರಿಷ ।
ಪ್ರಲಾಪಂ ನೃಪತೇಃ ಶ್ರುತ್ವಾ ವಿದ್ರವಂತಿ ದಿಶೋ ದಶ ॥೪೩॥

ಸಂಜಯ– ಪೂಜ್ಯನೇ! ಅನಂತರ ಸಾವಿರಾರು ಜನರು ಕಣ್ಣುಗಳಲ್ಲಿ ಕಣ್ಣೀರನ್ನು ತುಂಬಿಕೊಂಡು ರಾಜನಾದ ದುರ್ಯೋಧನನು ಅಳುತ್ತಿರುವುದನ್ನು ಕೇಳಿ ಹತ್ತುದಿಕ್ಕುಗಳಿಗೂ ಓಡಿಹೋದರು.

ಸಸಾಗರವನಾ ಘೋರಾ ಪೃಥಿವೀ ಸಚರಾಚರಾ ।
ಚಚಾಲಾಥ ಸನಿಹ್ರಾದಾ ದಿಶಶ್ಚೈವಾಖಿಲಾಭವನ್ ॥೪೪॥

ಸಾಗರ-ವನಗಳನ್ನು ಹೊಂದಿರುವ ಘೋರವಾದ ಪೃಥಿಯು, ಚರಾಚರ ಪದಾರ್ಥಗಳೊಂದಿಗೆ ಶಬ್ದಸಹಿತವಾಗಿ ಕಂಪಿಸಿತು. ಎಲ್ಲ ದಿಕ್ಕುಗಳೂ ಕಂಪಿಸಿದವು.

ತೇ ದ್ರೋಣಪುತ್ರಮಾಸಾದ್ಯ ಯಥಾವೃತ್ತಂ ನ್ಯವೇದಯನ್ ।
ವ್ಯವಹಾರಂ ಗದಾಯುದ್ಧೇ ಪಾರ್ಥಿವಸ್ಯ ಚ ಪಾತನಮ್ ॥೪೫॥

ಆ ವಾರ್ತಾಹರ ದೂತರು ಅಶ್ವತ್ಥಾಮನ ಹತ್ತಿರ ಬಂದು ನಡೆದ ಘಟನೆಗಳನ್ನು ಯಥಾವತ್ತಾಗಿ ತಿಳಿಸಿದರು. ನಡೆದ ಗದಾಯುದ್ಧವನ್ನು ಮತ್ತು ಅದರಲ್ಲಿ ದುರ್ಯೋಧನನು ಕೆಳಗೆ ಬಿದ್ದಿದ್ದನ್ನೂ ತಿಳಿಸಿದರು.

ತದಾಖ್ಯಾಯ ತತಃ ಸರ್ವೇ ದ್ರೋಣಪುತ್ರಸ್ಯ ಮಾರಿಷ ।
ವಾದಿಕಾ ದುಃಖಸಂತಪ್ತಾಃ ಶೋಕೋಪಹತಚೇತಸಃ ॥೪೬॥

ಧ್ಯಾತ್ವಾ ಚ ಸುಚಿರಂ ಕಾಲಂ ಜಗ್ಮುಶ್ಚಾರ್ತಾ ಯಥಾಗತಮ್ ॥೪೭॥

ಅನಂತರ ಪೂಜ್ಯನೇ! ದುಃಖದಿಂದ ಬೆಂದುಹೋದ ಹಾಗೂ ಶೋಕದಿಂದ ಜರ್ಝರಿತವಾದ ಮನಸ್ಸುಳ್ಳ ಆ ವಾದಿಕರು ದ್ರೋಣಪುತ್ರ ಅಶ್ವತ್ಥಾಮನಿಗೆ ಎಲ್ಲವನ್ನೂ ಹೇಳಿದರು. ತುಂಬ ಸಮಯದವರೆಗೆ ಮನಸ್ಸಿನಲ್ಲಿಯೇ ವಿಚಾರಮಾಡಿ ದುಃಖಿತರಾಗಿದ್ದ ಅವರು ಬಂದ ಹಾಗೆಯೇ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಗದಾಪರ್ವಣಿ ದುರ್ಯೋಧನಪ್ರಲಾಪೋ ನಾಮ ಚತುಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೈದನೆಯ ಅಧ್ಯಾಯ

ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ದುರ್ಯೋಧನನು ನೆಲಕ್ಕೆ ಬಿದ್ದುದನ್ನು ನೋಡಿ ದುಃಖಿಸಿದ್ದು. ಅಶ್ವತ್ಥಾಮ ಮತ್ತು ದುರ್ಯೋಧನರ ಮಾತುಕತೆ. ಅಶ್ವತ್ಥಾಮನು ರಾತ್ರಿಯಲ್ಲಿ ಪಾಂಡವರನ್ನು ಕೊಲ್ಲುವ ಪ್ರತಿಜ್ಞೆಯನ್ನು ಮಾಡಿದ್ದು. ದುರ್ಯೋಧನನ ಮಾತಿನಂತೆ ಕೃಪನು ಅಶ್ವತ್ಥಾಮನಿಗೆ ಸೇನಾದಿಪತಿಯನ್ನಾಗಿ ಅಭಿಷೇಕ ಮಾಡಿದ್ದು.

ಸಂಜಯಃ

ವಾದಿಕಾನಾಂ ಸಮೀಪಾತ್ ತು ಶ್ರುತ್ವಾ ದುರ್ಯೋಧನಂ ಹತಮ್ ।
ಹತಶಿಷ್ಟಾಸ್ತತೋ ರಾಜನ್ ಕೌರವಾಣಾಂ ಮಹಾರಥಾಃ ॥೧॥

ವಿನಿರ್ಭಿನ್ನಾಃ ಶಿತೈರ್ಬಾಣೈಃ ಶಕ್ತಿತೋಮರಕರ್ಷಣೈಃ ।
ಅಶ್ವತ್ಥಾಮಾ ಕೃಪಶ್ಚೈವ ಕೃತವರ್ಮಾ ಚ ಭಾರತ ॥೨॥

ತ್ವರಿತಾ ಜವನೈರಶ್ವೈರಾಯೋಧನಮುಪಾದ್ರವನ್ ॥೩॥

ಸಂಜಯ– ರಾಜನೇ! ವಾರ್ತಾಹರವಾದಿಕರು ಹೇಳಿದ್ದ ದುರ್ಯೋಧನನ ವಧೆಯ ವಿಷಯವನ್ನು ಕೇಳಿ ವಿನಾಶವಾದ ಕೌರವರ ಕಡೆಯಲ್ಲಿ ಉಳಿದುಕೊಂಡಿದ್ದ

ಮಹಾರಥರಾದ ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ಹರಿತವಾದ ಬಾಣಗಳು, ಶಕ್ತ್ಯಾಯುಧ, ತೋಮರಗಳು- ಇವುಗಳ ಹೊಡೆತದಿಂದ ತುಂಬಾ ಗಾಯಗೊಂಡಿದ್ದರು. ಅವರು ಶೀಘ್ರವಾಗಿ ವೇಗವಾಗಿ ಓಡುವ ಕುದುರೆಗಳನ್ನೇರಿ ರಣರಂಗಕ್ಕೆ ಬಂದರು.

ತತ್ರಾಪಶ್ಯನ್ ಮಹಾತ್ಮಾನಂ ಧಾರ್ತರಾಷ್ಟ್ರಂ ನಿಪಾತಿತಮ್ ।
ಪ್ರಭಗ್ನಂ ವಾಯುವೇಗೇನ ಮಹಾಸಾಲಂ ಯಥಾ ವನೇ ॥೪॥

ಅಲ್ಲಿ ಬಿರುಗಾಳಿಯ ವೇಗಕ್ಕೆ ಮಹಾಸಾಲವೃಕ್ಷವು ತುಂಡಾಗಿ ಬಿದ್ದ ಹಾಗೆ ಬಿದ್ದಿರುವ ಮಹಾತ್ಮನಾದ ದುರ್ಯೋಧನನನ್ನು ನೋಡಿದರು.

ಭೂಮೌ ವಿವೇಷ್ಟಮಾನಂ ತಂ ರುಧಿರೇಣ ಸಮುಕ್ಷಿತಮ್ ।
ಮಹಾಗಜಮಿವಾರಣ್ಯೇ ವ್ಯಾಧೇನ ನಿಧನಂ ಗತಮ್ ॥೫॥

ಕಾಡಿನಲ್ಲಿ ಬೇಟೆಗಾರನಿಂದ ಪೆಟ್ಟು ತಿಂದ ಪ್ರಾಣಿಯು ಹೊರಳಾಡುವಂತೆ ರಕ್ತಸಿಕ್ತವಾಗಿ ನೆಲದಲ್ಲಿ ಹೊರಳಾಡುತ್ತಿದ್ದ ದುರ್ಯೋಧನನನ್ನು ನೋಡಿದರು.

ವಿವರ್ತಮಾನಂ ಬಹುಶೋ ರುಧಿರೌಘಪರಿಪ್ಲುತಮ್ ।
ಯದೃಚ್ಛಯಾ ನಿಪತಿತಂ ಚಂದ್ರಮಾದಿತ್ಯಗೋಚರಾತ್ ॥೬॥

ಮುಂದುಮುಂದಾಗಿ ಹೊರಳಾಡುತ್ತಿದ್ದ ರಕ್ತದ ಮಡುವಿನಲ್ಲಿ ಮುಳುಗಿದ್ದ ದುರ್ಯೋಧನನು ಆಕಾಶದಿಂದ ಅಕಸ್ಮಾತ್ (ದೈವೇಚ್ಛೆಯಿಂದ) ಕೆಳಬಿದ್ದ ಚಂದ್ರನ ಹಾಗೆ ಕಾಣಿಸುತ್ತಿದ್ದನು.

ಮಹಾವಾತಸಮುತ್ಥೇನ ಸಂಕ್ಷುಬ್ಧಮಿವ ಸಾಗರಮ್ ।
ಪೂರ್ಣಚಂದ್ರನಿಭಂ ವೀರಂ ತುಷಾರಾವೃತಮಂಡಲಮ್ ॥೭॥

ದುರ್ಯೋಧನನು ಬಿರುಗಾಳಿಗೆ ಕ್ಷೋಭೆಗೊಂಡ ಸಮುದ್ರದ ಹಾಗಿದ್ದನು. ಮಂಜಿನಿಂದ ಕವಿದುಕೊಂಡ ಪೂರ್ಣಚಂದ್ರನಂತೆ ಕಾಣಿಸಿಕೊಂಡನು.

ರೇಣುಧ್ವಸ್ತಂ ದೀರ್ಘಭುಜಂ ಮಾತಂಗಸಮವಿಕ್ರಮಮ್ ।
ವೃತಂ ಭೂತಗಣೈರ್ಘೋರೈಃ ಕ್ರವ್ಯಾದೈಶ್ಚ ಸಮಂತತಃ ॥೮॥

ಯಥಾ ಧನಂ ಲಿಪ್ಸಮಾನೈರ್ಭೃತ್ಯೈ ರ್ನೃಪತಿಸತ್ತಮಮ್ ।
ಭ್ರುಕುಟೀಕೃತವಕ್ತ್ರಾಂತಂ ಕ್ರೋಧಾದುದ್ವೃತ್ತಲೋಚನಮ್ ॥೯॥

ಆನೆಗೆ ಸಮನಾದ ವಿಕ್ರಮವುಳ್ಳ ದೀರ್ಘಭುಜದ ದುರ್ಯೋಧನನು ಧೂಳಿನಿಂದ ಆವೃತನಾಗಿದ್ದನು. ಅವನ ಸುತ್ತಲೂ ಹಣದ ಆಸೆಯಿಂದ ಸೇವಕರು ರಾಜನನ್ನು ಸುತ್ತುವರಿಯುವಂತೆ, ಮಾಂಸಾಕಾಂಕ್ಷಿಗಳಾದ ಭಯಂಕರವಾದ ಪ್ರಾಣಿಗಳು ಸುತ್ತುವರಿದಿದ್ದವು. ದುರ್ಯೋಧನನು ಕೋಪದಿಂದ ಹುಬ್ಬುಗಂಟಿಕ್ಕುತ್ತಾ ಕಣ್ಣುಗುಡ್ಡೆಗಳನ್ನು ತಿರುಗಿಸುತ್ತಿದ್ದನು.

ಸಾಮರ್ಷಂ ತಂ ನರವ್ಯಾಘ್ರಂ ಭೌಮಂ ನಿಪತಿತಂ ತಥಾ ।
ತಂ ದೃಷ್ಟ್ವಾ ತ್ವಥ ಮಹೇಷ್ವಾಸಂ ಭೂತಲೇ ಪತಿತಂ ನೃಪಮ್ ॥೧೦॥

ಮೋಹಮಭ್ಯಾಗಮನ್ ಸರ್ವೇ ಕೃಪಪ್ರಭೃತಯೋ ನೃಪ ॥೧೧॥

ರಾಜನೇ! ನರಶ್ರೇಷ್ಠನಾದ, ಮಹಾಬಿಲ್ಲಾರನಾದ ದುರ್ಯೋಧನನು ಭೂಮಿಯಲ್ಲಿ ಅಸಹನೆಯಿಂದ ಬಿದ್ದಿದ್ದನ್ನು ನೋಡಿ ಕೃಪಮೊದಲಾದವರು ಮೂರ್ಛೆಹೋದರು.

ಅವತೀರ್ಯ ರಥೇಭ್ಯಸ್ತು ಪ್ರಾದ್ರವನ್ ರಾಜಸನ್ನಿಧೌ ।
ದುರ್ಯೋಧನಂ ಚ ಸಂಪ್ರಾಪ್ಯ ಸರ್ವೇ ಭೂಮಾವುಪಾವಿಶನ್ ॥೧೨॥

ರಥಗಳಿಂದ ಇಳಿದ ಅವರು ರಾಜನ ಸನ್ನಿಧಾನಕ್ಕೆ ಓಡಿದರು. ದುರ್ಯೋಧನನ ಸಮೀಪಕ್ಕೆ ಬಂದು ಅವನ ಮುಂದೆ ಕುಳಿತುಕೊಂಡರು.

ತತೋ ದ್ರೌಣಿರ್ಮಹಾರಾಜ ಬಾಷ್ಪಪೂರ್ಣೇಕ್ಷಣಃ ಶ್ವಸನ್ ।
ಉವಾಚ ಭರತಶ್ರೇಷ್ಠಂ ಸರ್ವಲೋಕೇಶ್ವರೇಶ್ವರಮ್ ॥೧೩॥

ಮಹಾರಾಜನೇ! ಅನಂತರ ಕಣ್ಣೀರಿನಿಂದ ತುಂಬಿದ ಕಣ್ಣುಗಳುಳ್ಳ ಅಶ್ವತ್ಥಾಮನು ಜೋರಾಗಿ ಉಸಿರುಬಿಡುತ್ತಾ ಭರತೋತ್ತಮನಾದ ಸಕಲ ಲೋಕಕ್ಕೆ ಸ್ವಾಮಿಯಾದ ದುರ್ಯೋಧನನಿಗೆ ಹೀಗೆ ಹೇಳಿದನು.

ಅಶ್ವತ್ಥಾಮಾ

ನೂನಂ ನ ವಿದ್ಯತೇ ಪುಣ್ಯಂ ಮನುಷ್ಯೇ ಕಿಂಚಿದೇವ ತು ।
ಯತ್ರ ತ್ವಂ ಪುರುಷವ್ಯಾಘ್ರ ಶೇತೇ ಪಾಂಸುಷು ರೂಷಿತಃ ॥೧೪॥

ಅಶ್ವತ್ಥಾಮ– ಎಲ್ಲಿ ಪುರುಷಶ್ರೇಷ್ಠನಾದ ನೀನು ಧೂಳಿನಲ್ಲಿ ಹೊರಳಾಡುತ್ತಾ ಮಲಗಿದ್ದೀಯೋ ಖಂಡಿತವಾಗಿಯೂ ಅಲ್ಲಿ ಧರ್ಮವು ಸ್ವಲ್ಪವೂ ಉಳಿದಿಲ್ಲ.

ಭೂತ್ವಾ ಚ ನೃಪತಿಃ ಪೂರ್ವಂ ಸಮಾಜ್ಞಾಪ್ಯ ಚ ಮೇದಿನೀಮ್ ।
ಕಥಮೇಕೋಽದ್ಯ ರಾಜೇಂದ್ರ ವನೇ ತಿಷ್ಠಸಿ ನಿರ್ಜನೇ ॥೧೫॥

ರಾಜೇಂದ್ರನೇ! ಮೊದಲಿಗೆ ರಾಜನಾಗಿದ್ದು ಭೂಮಿಯನ್ನು ಆಳಿದ ನೀನು ನಿರ್ಜನ ಕಾಡಿನಲ್ಲಿ ಏಕಾಕಿಯಾಗಿ ಹೇಗೆ ಇರುವಿ?

ದುಃಶಾಸನಂ ನ ಪಶ್ಯಾಮಿ ನಾಪಿ ಕರ್ಣಂ ಮಹಾರಥಮ್ ।
ನಾಪಿ ತಾನ್ ಸುಹೃದಃ ಸರ್ವಾನ್ ಕಿಮಿದಂ ಭರತರ್ಷಭ ॥೧೬॥

ಭರತಕುಲಶ್ರೇಷ್ಠನೇ! ದುಃಶಾಸನನೂ ಕಾಣಿಸುತ್ತಿಲ್ಲ. ಮಹಾರಥನಾದ ಕರ್ಣನೂ ಕಾಣಿಸುತ್ತಿಲ್ಲ. ನಿನ್ನ ಎಲ್ಲಾ ಸ್ನೇಹಿತರೂ ಕಾಣಿಸುತ್ತಿಲ್ಲ. ಏನಿದು?

ದುಃಖಂ ನೂನಂ(ಶಕ್ಯಾ) ಕೃತಾಂತಸ್ಯ ಗತಿಂ ಜ್ಞಾತುಂ ಕಥಂಚನ ।
ಲೋಕನಾಥೋ ಭವಾನದ್ಯ ಶೇತೇ ಪಾಂಸುಷು ರೂಷಿತಃ ॥೧೭॥

ಮಾರಕನಾದ ಯಮನ (ಕಾಲದ) ಗತಿಯನ್ನು ತಿಳಿಯಲು ತುಂಬಾ ದುಃಖವಾಗುತ್ತಿದೆ. ಲೋಕನಾಥನಾಗಿದ್ದ ನೀನು ಇಂದು ಧೂಳು ಮೆತ್ತಿಕೊಂಡು ನೆಲದಲ್ಲಿ ಮಲಗಿರುವಿ.

ಅಯಂ ಮೂರ್ಧಾಭಿಷಿಕ್ತಾನಾಮಗ್ರೇ ಯಾತಿ ಪರಂತಪಃ ।
ಸತೃಣಂ ಗ್ರಸತೇ ಪಾಂಸು ಪಶ್ಯ ಕಾಲಸ್ಯ ಪರ್ಯಯಮ್ ॥೧೮॥

ಶತ್ರುತಾಪಕನಾದ ಇವನು ಶಿರದಲ್ಲಿ ಅಭಿಷಿಕ್ತರಾದ ರಾಜರಿಗೆ ಮುಂಚೂಣಿಯಲ್ಲಿರುತ್ತಿದ್ದ. ಈಗ ಧೂಳು ಮತ್ತು ಹುಲ್ಲನ್ನು ತಿನ್ನುತ್ತಿದ್ದಾನೆ. ಕಾಲದ ಗತಿಯು ವಿಪರೀತವಾಗಿದೆ.

ಕ್ವ ತೇ ತದಮಲಂ ಛತ್ರಂ ವ್ಯಜನಂ ಕ್ವ ಚ ಪಾರ್ಥಿವ ।
ಸಾ ಚ ತೇ ಮಹತೀ ಸೇನಾ ಕ್ವ ಗತಾ ಪಾರ್ಥಿವೋತ್ತಮ ॥೧೯॥

ರಾಜನೇ! ಪರಿಶುದ್ಧವಾದ ನಿನ್ನ ಛತ್ರ, ಚಾಮರಗಳು ಎಲ್ಲಿ ಹೋದವು? ರಾಜೋತ್ತಮನೇ! ನಿನ್ನ ದೊಡ್ಡದಾದ ಸೇನೆಯು ಎಲ್ಲಿ ಹೋಯಿತು?

ದುರ್ವಿಜ್ಞೇಯಾ ಗತಿರ್ನೂನಂ ಕಾರ್ಯಾಣಾಂ ಕಾರಣಾಂತರೇ ।
ಯೋ ವೈ ಲೋಕಗುರುರ್ನಾಥೋ ಭವಾನೇತಾಂ ದಶಾಂ ಗತಃ ॥೨೦॥

ವಿಪರೀತವಾದ ಕಾರ್ಯಕಾರಣಗಳ ಮಧ್ಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಕಷ್ಟ. ಏಕೆಂದರೆ ಲೋಕಕ್ಕೆ ಆದೇಶಕನಾದ, ಒಡೆಯನಾದ ನೀನು ಈ ಅವಸ್ಥೆಯನ್ನು ತಲುಪಿರುವಿ.

ಅಧ್ರುವಾ ಸರ್ವಮರ್ತ್ಯೇಷು ಧ್ರುವೈವ ಶ್ರೀರ್ವಿಚಿಂತ್ಯತೇ ।
ಭವತೋ ವ್ಯಸನಂ ದೃಷ್ಟ್ವಾ ಶಕ್ರವಿಸ್ಪರ್ಧಿನೋ ಭೃಶಮ್ ॥೨೧॥

ಇಂದ್ರನೊಡನೆ ಸ್ಪರ್ಧಿಸುತ್ತಿದ್ದ ನಿನಗೆ ಬಂದಿರುವ ಈ ದುಃಖವನ್ನು ನೋಡಿದರೆ ಯಾವುದೇ ಮನುಷ್ಯರ ಕೀರ್ತಿಯೂ ಅಶಾಶ್ವತವೆಂದು ನಿಶ್ಚಯವಾಗುತ್ತದೆ.

ಸಂಜಯಃ

ತಸ್ಯ ತದ್ವಚನಂ ಶ್ರುತ್ವಾ ದುಃಖಿತಸ್ಯ ವಿಶೇಷತಃ ।
ಉವಾಚ ರಾಜನ್ ಪುತ್ರಸ್ತೇ ಪ್ರಾಪ್ತಕಾಲಮಿದಂ ವಚಃ ॥೨೨॥

ವಿಮೃಜ್ಯ ನೇತ್ರೇ ಪಾಣಿಭ್ಯಾಂ ಶೋಕಜಂ ವಾರಿ ಚೋತ್ಸೃಜತ್ ।
ಸ ಕೃಪಪ್ರಭೃತೀನ್ ವೀರಾನ್ ಅಬ್ರವೀನ್ಮನುಜಾಧಿಪಃ ॥೨೩॥

ಸಂಜಯ– ರಾಜನೇ! ಅವನ ಆ ಮಾತನ್ನು ಕೇಳಿ ಮತ್ತೂ ದುಃಖಕ್ಕೊಳಗಾದ ನಿನ್ನ ಮಗ ದುರ್ಯೋಧನನು ಶೋಕದಿಂದ ಬಂದ ಕಣ್ಣೀರನ್ನು ಕೈಗಳಿಂದ ಒರೆಸಿಕೊಂಡು ಕೃಪಮೊದಲಾದ ವೀರರಿಗೆ ಕಾಲೋಚಿತವಾದ ಮಾತನ್ನು ಹೇಳುತ್ತಾನೆ.

ದುರ್ಯೋಧನಃ

ಈದೃಶೋ ಮರ್ತ್ಯಧರ್ಮೋಽಯಂ ಧಾತ್ರಾ ನಿರ್ದಿಷ್ಟ ಉಚ್ಯತೇ ।
ವಿನಾಶಃ ಸರ್ವಭೂತಾನಾಂ ಕಾಲಪರ್ಯಾಯಕಾರಿತಃ ॥೨೪॥

ಸೋಽಯಂ ಮಾಮನುಸಂಪ್ರಾಪ್ತಃ ಪ್ರತ್ಯಕ್ಷೋ ಭವತಾಂ ಹಿ ಸಃ ।
ಪೃಥಿವೀಂ ಪಾಲಯಿತ್ವಾಹಮ್ ಏತಾಂ ನಿಷ್ಠಾಮುಪಾಗತಃ ॥೨೫॥

ದುರ್ಯೋಧನ– ಇಂತಹ ಮನುಷ್ಯನ ಧರ್ಮವು ವಿಧಿಯಿಂದ ಮೊದಲೇ ನಿಶ್ಚಿತವಾಗಿರುತ್ತದೆ ಎಂದು ಹೇಳುತ್ತಾರೆ. ಕಾಲಚಕ್ರವು ತಿರುಗಿದಾಗ ಎಲ್ಲ ಪ್ರಾಣಿಗಳೂ ನಾಶವಾಗುತ್ತವೆ. ಅಂತಹ ನಾಶವು ನಿಮ್ಮ ಮುಂದೆ ನನಗೆ ಬಂದಿದೆ. ಇಡೀ ಭೂಮಿಯನ್ನೇ ಆಳಿದ ನಾನು ಈ ರೀತಿಯ ನಾಶವನ್ನು ಹೊಂದಿರುವೆನು.

ದಿಷ್ಟ್ಯಾऽಹಂ ತ್ವಪರಾವೃತ್ತೋ ಯುದ್ಧೇ ಕಸ್ಯಾಂಚಿದಾಪದಿ ।
ದಿಷ್ಟ್ಯಾऽಹಂ ನಿಹತಃ ಪಾಪೈಶ್ಚಲೇನೈವ ವಿಶೇಷತಃ ॥೨೬॥

ಸೌಭಾಗ್ಯವಶಾತ್ ನಾನು ಎಂತಹ ಆಪತ್ತಿನಲ್ಲಿಯೂ ಯುದ್ಧದಿಂದ ಹಿಂತಿರುಗಲಿಲ್ಲ. ಸೌಭಾಗ್ಯವಶಾತ್ ಪಾಪಿಗಳಾದ ಪಾಂಡವರು ವಿಶೇಷ ಮೋಸದಿಂದ ನನ್ನನ್ನು ಕೊಂದಿರುತ್ತಾರೆ. (ಋಜುಮಾರ್ಗದಲ್ಲಿ ನನ್ನನ್ನು ಸಾಯಿಸಲಾಗಲಿಲ್ಲ.)

ಉತ್ಸಾಹಶ್ಚ ಕೃತೋ ನಿತ್ಯಂ ಮಯಾ ದಿಷ್ಟ್ಯಾ ಯುಯುತ್ಸಯಾ ।
ದಿಷ್ಟ್ಯಾ ಚಾಸ್ಮಿ ಹತೋ ಯುದ್ಧೇ ಕ್ಷೀಣಸ್ವಜನಬಾಂಧವಃ ॥೨೭॥

ಸೌಭಾಗ್ಯವಶಾತ್ ನಾನು ಯುದ್ಧಮಾಡಲಿಕ್ಕೆ ನಿತ್ಯವೂ ಉತ್ಸುಕನಾಗಿದ್ದೇನೆ. ಬಂಧು-ಬಾಂಧವರನ್ನೆಲ್ಲಾ ಕಳೆದುಕೊಂಡ ನಾನು ಯುದ್ಧದಲ್ಲಿ ಸಾಯುತ್ತಿದ್ದೇನೆ. ಇದು ನನ್ನ ಸೌಭಾಗ್ಯ.

ದಿಷ್ಟ್ಯಾ ಚ ವೋऽಹಂ ಪಶ್ಯಾಮಿ ಮುಕ್ತಾನಸ್ಮಾಜ್ಜನಕ್ಷಯಾತ್ ।
ಸ್ವಸ್ತಿಮಂತಶ್ಚ ಕಲ್ಯಾಶ್ಚ ತನ್ಮೇ ಪ್ರಿಯಮನುತ್ತಮಮ್ ॥೨೮॥

ನಾನು ನನ್ನ ಸೌಭಾಗ್ಯದಿಂದಾಗಿ ಎಲ್ಲರೂ ಸಾಯುತ್ತಿರುವ ಈ ಯುದ್ಧದಲ್ಲಿ ಸಾವಿನಿಂದ ತಪ್ಪಿಸಿಕೊಂಡಿರುವ ನಿಮ್ಮನ್ನು ನೋಡುತ್ತಿದ್ದೇನೆ. ಆರಾಮವಾಗಿರುವ ನೀವು ಸಮರ್ಥರಾಗಿರುವಿರಿ. ಇದು ನನಗೆ ಅತ್ಯಂತ ಪ್ರಿಯವಾದ ಸಂಗತಿಯಾಗಿದೆ.

ಮಾ ಭವಂತೋऽನುತಪ್ಯಂತಾಂ ಸೌಹೃದಾನ್ನಿಧನೇನ ಮೇ ।
ಯದಿ ವೇದಾಃ ಪ್ರಮಾಣಂ ವೋ ಜಿತಾ ಲೋಕಾ ಮಯಾऽಕ್ಷಯಾಃ ॥

ನನ್ನ ಮೇಲಿನ ಸ್ನೇಹದ ದೆಸೆಯಿಂದಾಗಿ ನನ್ನ ಸಾವಿನಿಂದ ನೀವು ದುಃಖಿಸಬೇಡಿ. ಒಂದು ವೇಳೆ ನಿಮಗೆ ದೇವತೆಗಳು (ವೇದಗಳು) ಪ್ರಾಮಾಣಿಕರಾಗಿ ಇರುವುದಾದರೆ ನನಗೆ ಅಕ್ಷಯಲೋಕಗಳು ಸಿಗುತ್ತವೆ.

ಜಾನಮಾನಃ ಪ್ರಭಾವಂ ಚ ಕೃಷ್ಣಸ್ಯಾಮಿತತೇಜಸಃ ।
ತೇನ ನ ಚ್ಯಾವಿತಶ್ಚಾಹಂ ಕ್ಷತ್ರಧರ್ಮಾತ್ ಸ್ವನುಷ್ಠಿತಾತ್ ॥೩೦॥

ಅಪರಿಮಿತ ತೇಜಸ್ಸುಳ್ಳ ಶ್ರೀಕೃಷ್ಣನ ಸಾಮರ್ಥ್ಯವನ್ನು ತಿಳಿದುಕೊಂಡಿದ್ದರೂ ನಾನು ಅವನ ದುಷ್ಪ್ರೇರಣೆಗೆ ಒಳಗಾಗಿ ನನ್ನ ಆಚರಣೆಯಲ್ಲಿದ್ದ ಕ್ಷತ್ರಿಯಧರ್ಮದಿಂದ ವಿಚಲಿತನಾಗಲಿಲ್ಲ.

ಸಮಯೋಽಯಮನುಪ್ರಾಪ್ತೋ ನಾಸ್ಮಿ ಶೋಚ್ಯಃ ಕಥಂಚನ ।
ಕೃತಂ ಭವದ್ಭಿಃ ಸದೃಶಮನುಕೂಲಮಿಹಾತ್ಮನಃ ॥೩೧॥

ಈ ಸಮಯದಲ್ಲಿ ನನ್ನ ಬಗ್ಗೆ ದುಃಖಿಸಬಾರದು. ನೀವೆಲ್ಲರೂ ನನಗೆ ಅನುಕೂಲವಾಗಿರುವುದನ್ನೇ ಮಾಡಿರುವಿರಿ.

ಯದಿ ತಂ ವಿಜಯೇ ಶಕ್ತ್ಯಾ ದೈವಂ ತು ಬಲವತ್ತರಮ್ ॥೩೨॥

ಯದ್ಯಪಿ ನಾನು ನನ್ನ ಶಕ್ತಿಯಿಂದ ಭೀಮನನ್ನು ಜಯಿಸುತ್ತಿದ್ದೆ. ಆದರೂ ವಿಧಿಯೇ ಪ್ರಬಲವಾಗಿದೆ.

ಸಂಜಯಃ

ಏತಾವದುಕ್ತ್ವಾ ವಚನಂ ಬಾಷ್ಪವ್ಯಾಕುಲಲೋಚನಃ ।
ತೂಷ್ಣೀಂ ಬಭೂವ ರಾಜೇಂದ್ರೋ ರುಜಯಾ ಭೃಶವಿಹ್ವಲಃ ॥೩೩॥

ಸಂಜಯ– ಇಷ್ಟು ಮಾತುಗಳನ್ನು ಹೇಳಿ ಕಣ್ಣೀರಿನಿಂದ ತುಂಬಿದ ಕಣ್ಣುಗಳುಳ್ಳ ರಾಜೋತ್ತಮ ದುರ್ಯೋಧನನು ನೋವಿನಿಂದ ನರಳುತ್ತಾ ಸುಮ್ಮನಾದನು.

ತಥಾ ದೃಷ್ಟ್ವಾ ತು ರಾಜಾನಂ ಬಾಷ್ಪಶೋಕಸಮನ್ವಿತಮ್ ।
ದ್ರೌಣಿಃ ಕ್ರೋಧೇನ ಜಜ್ವಾಲ ಯಥಾಽಗ್ನಿರ್ಜಗತಃ ಕ್ಷಯೇ ॥೩೪॥

ಕಣ್ಣೀರು ಮತ್ತು ಶೋಕದಿಂದ ಯುಕ್ತನಾದ ರಾಜನನ್ನು ಆ ರೀತಿಯಲ್ಲಿ ನೋಡಿದ ಅಶ್ವತ್ಥಾಮನು ಕೋಪದಿಂದ ಪ್ರಳಯಕಾಲದ ಬೆಂಕಿಯಂತೆ ಉರಿದುಹೋದನು.

ಸ ತು ಕ್ರೋಧಸಮಾವಿಷ್ಟಃ ಪಾಣಿಂ ಪಾದೌ ನಿಪೀಡ್ಯ ಚ ।
ಬಾಷ್ಪವಿಹ್ವಲಯಾ ವಾಚಾ ರಾಜಾನಮಿದಮಬ್ರವೀತ್ ॥೩೫॥

ಕ್ರೋಧಯುಕ್ತನಾದ ಅಶ್ವತ್ಥಾಮನು ದುರ್ಯೋಧನನ ಕೈಯನ್ನೂ ಕಾಲನ್ನೂ ಒತ್ತುತ್ತಾ ಕಣ್ಣೀರಿನಿಂದಾಗಿ ಗದ್ಗದಿತವಾದ ಮಾತಿನಿಂದ ರಾಜ ದುರ್ಯೋಧನನಿಗೆ ಹೀಗೆ ಹೇಳುತ್ತಾನೆ.

ಅಶ್ವತ್ಥಾಮಾ

ಪಿತಾ ಮೇ ನಿಹತಃ ಕ್ಷುದ್ರೈಃ ಸುನೃಶಂಸೇನ ಕರ್ಮಣಾ ।
ನ ತಥಾ ತೇನ ತಪ್ಯಾಮಿ ಯಥಾ ರಾಜಂಸ್ತ್ವಯಾऽದ್ಯ ವೈ ॥೩೬॥

ಅಶ್ವತ್ಥಾಮ– ಅಲ್ಪರಾದ ಪಾಂಡವರು ನನ್ನ ತಂದೆಯನ್ನು ಕ್ರೂರವಾದ ರೀತಿಯಲ್ಲಿ ಸಾಯಿಸಿದರು. ನಿನ್ನ ಈ ಸ್ಥಿತಿಯನ್ನು ನೋಡಿ ನನಗೆ ಆದಷ್ಟು ದುಃಖವನ್ನು ಆಗಲೂ ನಾನು ಅನುಭವಿಸಿರಲಿಲ್ಲ.

ಶೃಣು ರಾಜನ್ ವಚೋ ಮೇऽದ್ಯ ಸತ್ಯೇನ ವದತಃ ಪ್ರಭೋ ।
ಇಷ್ಟಾಪೂರ್ತೇನ ದಾನೇನ ಧರ್ಮೇಣ ಸುಕೃತೇನ ಚ ॥೩೭॥

ರಾಜನೇ! ನಾನು ಮಾಡಿರುವ ಯಾಗ,ಯಜ್ಞ , ಲೋಕೋಪಕಾರ, ದಾನ, ಧರ್ಮ ಮತ್ತು ಪುಣ್ಯ ಇವುಗಳಿಂದಾಗಿ ಸತ್ಯವನ್ನೇ ಹೇಳುವ ನನ್ನ ಮಾತನ್ನು ಕೇಳಿಸಿಕೊಳ್ಳು.

ಅದ್ಯಾಹಂ ಸರ್ವಪಾಂಚಾಲಾನ್ ವಾಸುದೇವಸ್ಯ ಪಶ್ಯತಃ ।
ಅದ್ಯ ರಾತ್ರೌ ಮಹಾರಾಜ ನಿಹನಿಷ್ಯಾಮಿ ಪಾಂಡವಾನ್ ॥೩೮॥

ಮಹಾರಾಜನೇ! ಶ್ರೀಕೃಷ್ಣನು ನೋಡುತ್ತಿರುವಂತೆಯೇ ಎಲ್ಲ ಪಾಂಚಾಲರನ್ನು ಹಾಗೂ ಪಾಂಡವರನ್ನು ಇಂದು ರಾತ್ರಿ ಕೊಲ್ಲುವೆನು.

ಅನುಜ್ಞಾಂ ತು ಮಹಾರಾಜ ಭವಾನ್ ಮೇ ದಾತುಮರ್ಹಸಿ ॥೩೯॥

ಮಹಾರಾಜನೇ! ಅದಕ್ಕಾಗಿ ನನಗೆ ನೀನು ಅಪ್ಪಣೆಯನ್ನು ಕೊಡು.

ಸಂಜಯಃ

ತಚ್ಛ್ರುತ್ವಾ ವಚನಂ ದ್ರೌಣೇರ್ಧೃತರಾಷ್ಟ್ರ ತವಾತ್ಮಜಃ ।
ಮನಸಃ ಪ್ರೀತಿಜನನಂ ಕೃಪಂ ವಚನಮಬ್ರವೀತ್ ॥೪೦॥

ಜಾನಮಾನಃ ಪ್ರಭಾವಂ ಚ ಕೃಷ್ಣಸ್ಯಾಮಿತತೇಜಸಃ ।
ತೇನ ನ ಚ್ಯಾವಿತಶ್ಚಾಹಂ ಕ್ಷತ್ರಧರ್ಮಾತ್ ಸ್ವನುಷ್ಠಿತಾತ್ ॥೩೦॥

ಅಪರಿಮಿತ ತೇಜಸ್ಸುಳ್ಳ ಶ್ರೀಕೃಷ್ಣನ ಸಾಮರ್ಥ್ಯವನ್ನು ತಿಳಿದುಕೊಂಡಿದ್ದರೂ ನಾನು ಅವನ ದುಷ್ಪೇರಣೆಗೆ ಒಳಗಾಗಿ ನನ್ನ ಆಚರಣೆಯಲ್ಲಿದ್ದ ಕ್ಷತ್ರಿಯಧರ್ಮದಿಂದ ವಿಚಲಿತನಾಗಲಿಲ್ಲ.

ಸಮಯೋಽಯಮನುಪ್ರಾಪ್ತೋ ನಾಸ್ಮಿ ಶೋಚ್ಯಃ ಕಥಂಚನ ।
ಕೃತಂ ಭವದ್ಭಿಃ ಸದೃಶಮನುಕೂಲಮಿಹಾತ್ಮನಃ ॥೩೧॥

ಈ ಸಮಯದಲ್ಲಿ ನನ್ನ ಬಗ್ಗೆ ದುಃಖಿಸಬಾರದು. ನೀವೆಲ್ಲರೂ ನನಗೆ ಅನುಕೂಲವಾಗಿರುವುದನ್ನೇ ಮಾಡಿರುವಿರಿ.

ಯದಿ ತಂ ವಿಜಯೇ ಶಕ್ತ್ಯಾ ದೈವಂ ತು ಬಲವತ್ತರಮ್ ॥೩೨॥

ಯದ್ಯಪಿ ನಾನು ನನ್ನ ಶಕ್ತಿಯಿಂದ ಭೀಮನನ್ನು ಜಯಿಸುತ್ತಿದ್ದೆ. ಆದರೂ ವಿಧಿಯೇ ಪ್ರಬಲವಾಗಿದೆ.

ಸಂಜಯಃ

ಏತಾವದುಕ್ತ್ವಾ ವಚನಂ ಬಾಷ್ಪವ್ಯಾಕುಲಲೋಚನಃ ।
ತೂಷ್ಣೀಂ ಬಭೂವ ರಾಜೇಂದ್ರೋ ರುಜಯಾ ಭೃಶವಿಹ್ವಲಃ ॥೩೩॥

ಸಂಜಯ– ಇಷ್ಟು ಮಾತುಗಳನ್ನು ಹೇಳಿ ಕಣ್ಣೀರಿನಿಂದ ತುಂಬಿದ ಕಣ್ಣುಗಳುಳ್ಳ ರಾಜೋತ್ತಮ ದುರ್ಯೋಧನನು ನೋವಿನಿಂದ ನರಳುತ್ತಾ ಸುಮ್ಮನಾದನು.

ತಥಾ ದೃಷ್ಟ್ವಾ ತು ರಾಜಾನಂ ಬಾಷ್ಪಶೋಕಸಮನ್ವಿತಮ್ ।
ದ್ರೌಣಿಃ ಕ್ರೋಧೇನ ಜಜ್ವಾಲ ಯಥಾಽಗ್ನಿರ್ಜಗತಃ ಕ್ಷಯೇ ॥೩೪॥

ಕಣ್ಣೀರು ಮತ್ತು ಶೋಕದಿಂದ ಯುಕ್ತನಾದ ರಾಜನನ್ನು ಆ ರೀತಿಯಲ್ಲಿ ನೋಡಿದ ಅಶ್ವತ್ಥಾಮನು ಕೋಪದಿಂದ ಪ್ರಳಯಕಾಲದ ಬೆಂಕಿಯಂತೆ ಉರಿದುಹೋದನು.

ಸ ತು ಕ್ರೋಧಸಮಾವಿಷ್ಟಃ ಪಾಣಿಂ ಪಾದೌ ನಿಪೀಡ್ಯ ಚ ।
ಬಾಷ್ಪವಿಹ್ವಲಯಾ ವಾಚಾ ರಾಜಾನಮಿದಮಬ್ರವೀತ್ ॥೩೫॥

ಕ್ರೋಧಯುಕ್ತನಾದ ಅಶ್ವತ್ಥಾಮನು ದುರ್ಯೋಧನನ ಕೈಯನ್ನೂ ಕಾಲನ್ನೂ ಒತ್ತುತ್ತಾ ಕಣ್ಣೀರಿನಿಂದಾಗಿ ಗದ್ಗದಿತವಾದ ಮಾತಿನಿಂದ ರಾಜ ದುರ್ಯೋಧನನಿಗೆ ಹೀಗೆ ಹೇಳುತ್ತಾನೆ.

ಅಶ್ವತ್ಥಾಮಾ

ಪಿತಾ ಮೇ ನಿಹತಃ ಕ್ಷುದ್ರೈಃ ಸುನೃಶಂಸೇನ ಕರ್ಮಣಾ ।
ನ ತಥಾ ತೇನ ತಪ್ಯಾಮಿ ಯಥಾ ರಾಜಂಸ್ತ್ವಯಾऽದ್ಯ ವೈ ॥೩೬॥

ಅಶ್ವತ್ಥಾಮ– ಅಲ್ಪರಾದ ಪಾಂಡವರು ನನ್ನ ತಂದೆಯನ್ನು ಕ್ರೂರವಾದ ರೀತಿಯಲ್ಲಿ ಸಾಯಿಸಿದರು. ನಿನ್ನ ಈ ಸ್ಥಿತಿಯನ್ನು ನೋಡಿ ನನಗೆ ಆದಷ್ಟು ದುಃಖವನ್ನು ಆಗಲೂ ನಾನು ಅನುಭವಿಸಿರಲಿಲ್ಲ.

ಶೃಣು ರಾಜನ್ ವಚೋ ಮೇऽದ್ಯ ಸತ್ಯೇನ ವದತಃ ಪ್ರಭೋ ।
ಇಷ್ಟಾಪೂರ್ತೇನ ದಾನೇನ ಧರ್ಮೇಣ ಸುಕೃತೇನ ಚ ॥೩೭॥

ರಾಜನೇ! ನಾನು ಮಾಡಿರುವ ಯಾಗ,ಯಜ್ಞ , ಲೋಕೋಪಕಾರ, ದಾನ, ಧರ್ಮ ಮತ್ತು ಪುಣ್ಯ ಇವುಗಳಿಂದಾಗಿ ಸತ್ಯವನ್ನೇ ಹೇಳುವ ನನ್ನ ಮಾತನ್ನು ಕೇಳಿಸಿಕೊಳ್ಳು.

ಅದ್ಯಾಹಂ ಸರ್ವಪಾಂಚಾಲಾನ್ ವಾಸುದೇವಸ್ಯ ಪಶ್ಯತಃ ।
ಅದ್ಯ ರಾತ್ರೌ ಮಹಾರಾಜ ನಿಹನಿಷ್ಯಾಮಿ ಪಾಂಡವಾನ್ ॥೩೮॥

ಮಹಾರಾಜನೇ! ಶ್ರೀಕೃಷ್ಣನು ನೋಡುತ್ತಿರುವಂತೆಯೇ ಎಲ್ಲ ಪಾಂಚಾಲರನ್ನು ಹಾಗೂ ಪಾಂಡವರನ್ನು ಇಂದು ರಾತ್ರಿ ಕೊಲ್ಲುವೆನು.

ಅನುಜ್ಞಾಂ ತು ಮಹಾರಾಜ ಭವಾನ್ ಮೇ ದಾತುಮರ್ಹಸಿ ॥೩೯॥

ಮಹಾರಾಜನೇ! ಅದಕ್ಕಾಗಿ ನನಗೆ ನೀನು ಅಪ್ಪಣೆಯನ್ನು ಕೊಡು.

ಸಂಜಯಃ

ತಚ್ಛ್ರುತ್ವಾ ವಚನಂ ದ್ರೌಣೇರ್ಧೃತರಾಷ್ಟ್ರ ತವಾತ್ಮಜಃ ।
ಮನಸಃ ಪ್ರೀತಿಜನನಂ ಕೃಪಂ ವಚನಮಬ್ರವೀತ್ ॥೪೦॥

ಸಂಜಯ– ಧೃತರಾಷ್ಟ್ರನೇ! ಮನಸ್ಸಿಗೆ ಮುದವನ್ನು ಕೊಡುವ ಅವನ ಆ ಮಾತನ್ನು ಕೇಳಿದ ನಿನ್ನ ಮಗನು ಕೃಪನಿಗೆ ಈ ಮಾತನ್ನು ಹೇಳುತ್ತಾನೆ.

ದುರ್ಯೋಧನಃ

ಆಚಾರ್ಯ ಶೀಘ್ರಂ ಕಲಶಂ ಜಲಪೂರ್ಣಮಿಹಾನಯ ॥೪೧॥

ದುರ್ಯೋಧನ– ಆಚಾರ್ಯನೇ! ಬೇಗನೇ ನೀರು ತುಂಬಿದ ಕಲಶವನ್ನು ತೆಗೆದುಕೊಂಡು ಇಲ್ಲಿಗೆ ಬಾ.

ಸಂಜಯಃ

ಸ ತದ್ವವಚನಮಾಜ್ಞಾಯ ರಾಜ್ಞೋ ಬ್ರಾಹ್ಮಣಸತ್ತಮಃ ।
ಕಲಶಂ ಪೂರ್ಣಮಾದಾಯ ರಾಜಾಂತಿಕಮುಪಾಗಮತ್ ॥೪೨॥

ಸಂಜಯ– ಬ್ರಾಹ್ಮಣೋತ್ತಮನಾದ ಕೃಪನು ರಾಜನ ಮಾತಿನ ಅಭಿಪ್ರಾಯವನ್ನು ತಿಳಿದುಕೊಂಡು ಪೂರ್ಣಕಲಶವನ್ನು ಹಿಡಿದುಕೊಂಡು ರಾಜನ ಸಮೀಪಕ್ಕೆ ಬಂದನು.

ತಮಬ್ರವೀನ್ಮಹಾರಾಜ ಪುತ್ರಸ್ತವ ವಿಶಾಂಪತೇ ॥೪೩॥

ರಾಜನೇ! ಆ ಕೃಪನಿಗೆ ನಿನ್ನ ಮಗನು ಹೀಗೆ ಹೇಳುತ್ತಾನೆ.

ದುರ್ಯೋಧನಃ

ಮಮಾಜ್ಞಯಾ ದ್ವಿಜಶ್ರೇಷ್ಠ ದ್ರೋಣಪುತ್ರೋಽಭಿಷಿಚ್ಯತಾಮ್ ।
ಸೈನಾಪತ್ಯೇನ ಭದ್ರಂ ತೇ ಮಮ ಚೇದಿಚ್ಛಸಿ ಪ್ರಿಯಮ್ ॥೪೪॥

ದುರ್ಯೋಧನ– ಬ್ರಾಹ್ಮಣೋತ್ತಮನೇ! ನನಗೆ ಪ್ರಿಯವಾದುದನ್ನು ಮಾಡಲು ಬಯಸುವುದಾದರೆ, ನನ್ನ ಆಪ್ತಣೆಯಂತೆ ಅಶ್ವತ್ಥಾಮನನ್ನು ಸೇನಾಧಿಪತಿಯಾಗಿ ಪಟ್ಟಾಭಿಷೇಕ ಮಾಡು.

ರಾಜ್ಞೋ ನಿಯೋಗಾದ್ ಯೋದ್ಧವ್ಯಂ ಬ್ರಾಹ್ಮಣೇನ ವಿಶೇಷತಃ ।
ವರ್ತತಾ ಕ್ಷತ್ರಧರ್ಮೇಣ ಏವಂ ಧರ್ಮವಿದೋ ವಿದುಃ ॥೪೫॥

ರಾಜನ ಆಜ್ಞೆಯಂತೆ ಬ್ರಾಹ್ಮಣನೂ ಕೂಡ ವಿಶೇಷವಾಗಿ ಕ್ಷತ್ರಿಯಧರ್ಮವನ್ನು ಪಾಲಿಸುತ್ತಾ ಯುದ್ಧಮಾಡಬೇಕೆಂದು ಧರ್ಮವನ್ನು ತಿಳಿದ ಜ್ಞಾನಿಗಳು ತಿಳಿದುಕೊಂಡಿದ್ದಾರೆ.

ಸಂಜಯಃ

ರಾಜ್ಞಸ್ತು ವಚನಂ ಶ್ರುತ್ವಾ ಕೃಪಃ ಶಾರದ್ವತಸ್ತತಃ ।
ದ್ರೌಣಿಂ ರಾಜನಿಯೋಗೇನ ಸೈನಾಪತ್ಯೇऽಭ್ಯಷೇಚಯತ್ ॥೪೬॥

ಸಂಜಯ– ಶಾರದ್ವತಕುಲದಲ್ಲಿ ಬಂದ ಕೃಪನು ರಾಜನ ಮಾತನ್ನು ಕೇಳಿ ರಾಜನ ಆಪ್ಪಣೆಯಿಂದ ಅಶ್ವತ್ಥಾಮನನ್ನು ಸೇನಾಧಿಪತಿಯನ್ನಾಗಿ ಪಟ್ಟಾಭಿಷೇಕ ಮಾಡಿದನು.

ಸೋऽಭಿಷಿಕ್ತೋ ಮಹಾರಾಜ ಪರಿಷ್ವಜ್ಯ ನೃಪೋತ್ತಮಮ್ ।
ಪ್ರಯಯೌ ಸಿಂಹನಾದೇನ ದಿಶಃ ಸರ್ವಾ ವಿನಾದಯನ್ ॥೪೭॥

ಮಹಾರಾಜನೇ! ಪಟ್ಟಾಭಿಷಿಕ್ತನಾದ ಅಶ್ವತ್ಥಾಮನು ದುರ್ಯೋಧನನನ್ನು ಆಲಿಂಗಿಸಿಕೊಂಡು ತನ್ನ ಸಿಂಹನಾದದಿಂದ ಎಲ್ಲಾ ದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿ ಹೊರಟನು.

ದುರ್ಯೋಧನೋऽಪಿ ರಾಜೇಂದ್ರ ಶೋಣಿತೌಘಪರಿಪ್ಲುತಃ ।
ತಾಂ ನಿಶಾಂ ಪ್ರತಿಸಂಪೇದೇ ಸರ್ವಭೂತಭಯಾವಹಾಮ್ ॥೪೮॥

ರಾಜೇಂದ್ರನೇ! ದುರ್ಯೋಧನನಾದರೂ ರಕ್ತದಲ್ಲಿ ತೊಯ್ದುಕೊಂಡು ಎಲ್ಲಾ ಪ್ರಾಣಿಗಳಿಗೂ ಭಯವನ್ನು ಉಂಟುಮಾಡುವ ರೀತಿಯಲ್ಲಿ ಆ ರಾತ್ರಿಯನ್ನು ಕಳೆದನು.

ಅಪಕ್ರಮ್ಯ ತು ತೇ ತೂರ್ಣಂ ತಸ್ಮಾದಾಯೋಧನಾನ್ನೃಪ ।
ಶೋಕಸಂತಪ್ತಮನಸಃ ಚಿಂತಾಮಾಪೇದಿರೇ ಭೃಶಮ್ ॥೪೯॥

ಅವರೆಲ್ಲರೂ ದುಃಖದಿಂದ ತಾಪಗೊಂಡ ಮನಸ್ಸುಳ್ಳವರಾಗಿ ಆ ರಣರಂಗದಿಂದ ಹೊರಬಂದು ತುಂಬಾ ಚಿಂತೆಗೊಳಗಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಗದಾಪರ್ವಣಿ ದುರ್ಯೋಧನವಧೋ ನಾಮ ಪಂಚಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಗದಾಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

॥ ಇಲ್ಲಿಗೆ ಗದಾಪರ್ವವು ಮುಗಿಯಿತು ॥

★ ★ ★ ★ ★

॥ ಶ್ರೀಮದ್ವನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಸೌಪ್ತಿಕಪರ್ವ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ - ೨೮ನೇ ಅಧ್ಯಾಯ

ಉಚ್ಛಿದ್ಯ ಸಂತತಿಂ ಪಾಂಡೋಃ ಕೃತ್ವಾ ಸ್ವಕ್ಷೇತ್ರಸಂತತಿಮ್ ।
ತಯಾ ಭೂರಕ್ಷಣಹೃದಾ ಸೋಽಭಿಷಿಕ್ತಸ್ತಥೇತ್ಯಗಾತ್ ॥

ಪಾಂಡುವಿನ ಸಂತತಿಯನ್ನು ಅಳಿಸಿ, ತನ್ನ ಹೆಂಡತಿಯಲ್ಲಿ ಸಂತತಿಯನ್ನು ಹುಟ್ಟಿಸಿ ಆ ಸಂತತಿಯಿಂದ ರಾಜ್ಯಭಾರ ಮಾಡಿಸಬೇಕೆನ್ನುವ ಅಭಿಪ್ರಾಯದಿಂದ ದುರ್ಯೋಧನನು ಅಶ್ವತ್ಥಾಮನಿಗೆ ಧೂಳಿನಿಂದ ಅಭಿಷೇಕ ಮಾಡಿದ. ಅಶ್ವತ್ಥಾಮ 'ಹಾಗೇ ಆಗಲಿ' ಎಂದು ಹೇಳಿ ಹೊರಟು ಹೋದನು.

ಸ ಕೃಷ್ಣಭೀಮಪಾರ್ಥಾನಾಂ ಭಯಾದೇವ ಪುನರ್ವನಮ್ ।
ಕೃಪಸಾತ್ವತಸಂಯುಕ್ತೋ ವಿವೇಶ ಗಹನಂ ರಥೀ ॥

ಅಶ್ವತ್ಥಾಮನು ಶ್ರೀಕೃಷ್ಣ-ಭೀಮಾರ್ಜುನರ ಭಯದಿಂದಲೆ ಕೃಪ-ಕೃತವರ್ಮರಿಂದ ಒಡಗೂಡಿ ರಥವೇರಿ ಪುನಃ ದಟ್ಟವಾದ ಅರಣ್ಯವನ್ನು ಪ್ರವೇಶಿಸಿದನು.

ತಸ್ಯ ಚಿಂತಯತೋ ದ್ರೋಣವಧಂ ದುರ್ಯೋಧನಸ್ಯ ಚ ।
ನಾऽಗಾನ್ನಿದ್ರಾ ನಿಶೀಥೇ ಚ ಧಾಕ್ಷಾನ್ ನ್ಯಗ್ರೋಧವಾಸಿನಃ ॥

ಹತಾನ್ ಸುಬಹುಸಾಹಸ್ರಾನೇಕೇನಾತಿಬಲೇನ ತು ।
ಕೌಶಿಕೇನ ನಿರೀಕ್ಷ್ಯೈವ ಪ್ರಾಹ ತೌ ಕೃಪಸಾತ್ವತೌ ॥

ನಿದರ್ಶನೇನ ಹ್ಯೇನೇನ ಪ್ರೇರಿತಃ ಪರಮಾತ್ಮನಾ ।
ಯಾಮಿ ಪಾಂಡುಸುತಾನ್ ಹಂತುಮಿತ್ಯುಕ್ತ್ವಾऽऽರುರುಹೇ ರಥಮ್ ।
ನಿವಾರಿತೋऽಪಿ ತಾಸ್ಯಾಂ ಸ ಪ್ರಾದ್ರವಚ್ಛಿಬಿರಂ ಪ್ರತಿ ॥

ಅಶ್ವತ್ಥಾಮ ದ್ರೋಣರ ವಧವನ್ನೂ ದುರ್ಯೋಧನನ ವಧವನ್ನೂ ಆಲೋಚಿಸುತ್ತಿದ್ದುದರಿಂದ ರಾತ್ರಿಯಲ್ಲಿ ನಿದ್ದೆ ಬರಲಿಲ್ಲ. ಅತಿ ಬಲಿಷ್ಠವಾದ ಒಂದು ಗೂಬೆ ಅರ್ಧರಾತ್ರಿಯಲ್ಲಿ ಆಲದಮರದ ಮೇಲೆ ವಾಸಮಾಡುತ್ತಿದ್ದ ಅನೇಕ ಸಾವಿರ ಕಾಗೆಗಳನ್ನು ಕೊಂದುದನ್ನು ಕಂಡು ಅಶ್ವತ್ಥಾಮನು ಕೃಪ, ಕೃತವರ್ಮರಿಗೆ ಹೇಳಿದನು. 'ಈ ನಿದರ್ಶನದ ಮೂಲಕ ಪರಮಾತ್ಮನಿಂದ ಪ್ರೇರಿತನಾದ ನಾನು ಪಾಂಡವರನ್ನು ಕೊಲ್ಲಲು ಹೋಗುತ್ತೇನೆ'. ಹೀಗೆ ಹೇಳಿ ಅಶ್ವತ್ಥಾಮನು ರಥವನ್ನೇರಿದನು. ಅವರು ತಡೆದರೂ ನಿಲ್ಲದೆ ಪಾಂಡವರ ಶಿಬಿರದ ಕಡೆಗೆ ತೆರಳಿದನು.

★ ★ ★ ★ ★

ಒಂದನೆಯ ಅಧ್ಯಾಯ

ಸಂಜಯ ಧೃತರಾಷ್ಟ್ರರ ಸಂವಾದ, ದ್ರೋಣಪುತ್ರ, ಕೃತವರ್ಮ, ಕೃಪಾಚಾರ್ಯರು ವನವನ್ನು ಸೇರಿ ಒಂದೆಡೆ ಕುಳಿತುಕೊಳ್ಳುವುದು, ಅಲ್ಲಿ ರಾತ್ರಿಯಲ್ಲಿ ಗೂಬೆಯೊಂದು ಅನೇಕ ಕಾಗೆಗಳನ್ನು ಸಂಹರಿಸಿದ್ದನ್ನು ಕಂಡ ಅಶ್ವತ್ಥಾಮನು ಪಾಂಡವರನ್ನು ಸಂಹರಿಸಲು ನಿರ್ಧರಿಸಿ, ಆ ವಿಷಯವನ್ನು ಕೃಪ, ಕೃತವರ್ಮರಿಗೆ ತಿಳಿಸಿದನು.

ಸಂಜಯಃ

ತತಸ್ತೇ ಸಹಿತಾಃ ಸರ್ವೇ ಪ್ರಯಾತಾ ದಕ್ಷಿಣಾಮುಖಾಃ ।
ಉಪಾಸ್ತಮಯವೇಲಾಯಾಂ ಶಿಬಿರಾಭ್ಯಾಶಮಾಗತಾಃ ॥೧॥

ಸಂಜಯ– ಅನಂತರದಲ್ಲಿ ಅವರೆಲ್ಲರೂ ಕೂಡಿಕೊಂಡು ದಕ್ಷಿಣದಿಕ್ಕಿಗೆ ಎದುರಾಗಿ ಸೂರ್ಯಾಸ್ತಮಯಸಂದರ್ಭದಲ್ಲಿ ಶಿಬಿರದ ಸಮೀಪಕ್ಕೆ ಆಗಮಿಸಿದರು.

ವಿಮುಚ್ಯ ವಾಹಾಂಸ್ತ್ವರಿತಾ ಭೀತಾಃ ಸಮನುಬೋಧನಾತ್ ।
ಗಹನಂ ದೇಶಮಾಗಮ್ಯ ಪ್ರಚ್ಛನ್ನಾ ನ್ಯವಿಶಂತ ತೇ ॥೨॥

ವೇಗದಿಂದ ವಾಹನವನ್ನು ಬಿಟ್ಟು, ತಮ್ಮ ಇರುವಿಕೆಯು (ಶತ್ರುಗಳ) ಅರಿವಿಗೆ ಬಂದಲ್ಲಿ ಎಂಬ ಭಯದಿಂದ ಗುಟ್ಟಾದ ಸ್ಥಳಕ್ಕೆ ಆಗಮಿಸಿ ಅಡಗಿ ಕುಳಿತರು.

ಸೇನಾನಿವೇಶಮಭಿತೋ ನಾತಿದೂರಮವಸ್ಥಿತಾಃ ।
ನಿಕೃತ್ತಾ ನಿಶಿತೈಃ ಶಸ್ತ್ರೈಃ ಸಮಂತಾತ್ ಕ್ಷತವಿಕ್ಷತಾಃ ॥೩॥

ದೀರ್ಘಮುಷ್ಣಂ ಚ ನಿಃಶ್ವಸ್ಯ ಪಾಂಡವಾನನ್ವಚಿಂತಯನ್ ॥೪॥

ಸೇನೆಯ ಬೀಡಿನ ಸಮೀಪದಲ್ಲಿದ್ದ ಅವರು ಹರಿತವಾದ ಅಸ್ತ್ರಗಳ ಏಟಿನಿಂದ ಸಮಗ್ರದೇಹದಲ್ಲಿ ಗಾಯಗೊಂಡವರಾಗಿ, ದೀರ್ಘವಾದ ಬಿಸಿ ಉಸಿರನ್ನು ಬಿಡುವವರಾಗಿ ಪಾಂಡುಪುತ್ರರ ಬಗ್ಗೆ ಆಲೋಚಿಸಿದರು.

ಶ್ರುತ್ವಾ ಚ ನಿನದಂ ಘೋರಂ ಪಾಂಡವಾನಾಂ ಜಯೈಷಿಣಾಮ್ ।
ಅನುಸಾರಭಯಾದ್ ಭೀತಾಃ ಪ್ರಾಙ್ಮುಖಾಃ ಪ್ರಾದ್ರವನ್ ಭಯಾತ್ ॥೫॥

ಜಯಾಕಾಂಕ್ಷಿಗಳಾದ ಪಾಂಡವರ ಸದ್ದನ್ನು ಕೇಳಿದ, ಭೀತರಾದ ಅವರು (ಪಾಂಡವರು ನಮ್ಮನ್ನು) ಅನುಸರಿಸಬಹುದು ಎಂಬ ಭಯದಿಂದ ಪೂರ್ವಕ್ಕೆ ಮುಖ ಮಾಡಿ ಓಡಿದರು.

ತೇ ಮುಹೂರ್ತಂ ತತೋ ಗತ್ವಾ ಶ್ರಾಂತಗಾತ್ರಾಃ ಪಿಪಾಸಿತಾಃ ।
ನಾದೃಶ್ಯಂತ ಮಹೇಷ್ವಾಸಾಃ ಕ್ರೋಧಾಮರ್ಷವಶಂಗತಾಃ ॥೬॥

ಅನಂತರದಲ್ಲಿ ಕೋಪಾವೇಶಗಳಿಗೆ ಅಧೀನರಾದ, ಮಹಾಶೂರರಾದ ಅವರು ಸ್ವಲ್ಪಕಾಲ ಪರ್ಯಂತ ಹೋಗಿ (ಓಡಿ), ಆಯಾಸಗೊಂಡವರಾಗಿ, ಬಾಯಾರಿದವರಾಗಿ ಕಣ್ಣಿಗೆ ಕಾಣದಂತಾದರು.

ರಾಜ್ಞೋ ವಧೇನ ಸಂತಪ್ತಾ ಮುಹೂರ್ತಂ ಸಮವಸ್ಥಿತಾಃ ॥೭॥

ರಾಜನ (ದುರ್ಯೋಧನನ) ಸಂಹಾರದಿಂದ ಅತಿಯಾಗಿ ಕೋಪಗೊಂಡಿದ್ದ ಅವರು ಸ್ವಲ್ಪಕಾಲ ಪರ್ಯಂತ ಮೌನವಾಗಿದ್ದರು.

ಧೃತರಾಷ್ಟ್ರಃ

ಅಶ್ರದ್ದೇಯಮಿದಂ ಕರ್ಮ ಕೃತಂ ಭೀಮೇನ ಸಂಜಯ ।
ಯತ್ರ ನಾಗಾಯುತಪ್ರಾಣಃ ಪುತ್ರೋ ಮಮ ನಿಪಾತಿತಃ ॥೮॥

ಧೃತರಾಷ್ಟ್ರ– 'ಸಂಜಯ! ಹತ್ತು ಸಾವಿರ ಆನೆಯ ಬಲವನ್ನು ಹೊಂದಿದ ನನ್ನ ಪುತ್ರನು ಪತಿತನಾದನು, ಭೀಮನಿಂದ ಈ ಕರ್ಮವು ಮಾಡಲಾಯಿತು' ಎನ್ನುವುದು ನಂಬಿಕೆಗೆ ಬಾರದು.

ಅವಧ್ಯಃ ಸರ್ವಭೂತಾನಾಂ ವಜ್ರಸಂಹನನೋ ಯುವಾ ।
ಪಾಂಡವೈಃ ಸಮರೇ ಪುತ್ರೋ ನಿಹತೋ ಮಮ ಸಂಜಯ ॥೯॥

ಸಂಜಯ! ಯಾರಿಂದಲೂ ವಧಾರ್ಹನಲ್ಲದ, ವಜ್ರಕಾಯನಾದ, ಯುವಕನಾದ ನನ್ನ ಪುತ್ರನು ಪಾಂಡವರಿಂದ ಯುದ್ಧದಲ್ಲಿ ಹತನಾದ.

ನ ದಿಷ್ಟಮತ್ಯಕ್ರಾಂತುಂ ಶಕ್ಯಂ ಗಾವಲ್ಗಣೇ ನರೈಃ ।
ಯತ್ ಸಮೇತ್ಯ ರಣೇ ಪಾರ್ಥೈಃ ಪುತ್ರೋ ಮಮ ನಿಪಾತಿತಃ ॥೧೦॥

ಗವಲ್ಗನ ಪುತ್ರನೆ! ಮನುಷ್ಯರಿಂದ ಅದೃಷ್ಟವನ್ನು ಅತಿಕ್ರಮಿಸಲು ಶಕ್ಯವಿಲ್ಲ, ಅದೃಷ್ಟಶಾಲಿಯಾದ ಪೃಥೆಯ ಪುತ್ರರು ಯುದ್ಧದಲ್ಲಿ, ನನ್ನ ಪುತ್ರನನ್ನು ಕೆಡಹಿದರು.

ಅದ್ರಿಸಾರಮಯಂ ನೂನಂ ಹೃದಯಂ ಮಮ ಸಂಜಯ ।
ಹತಂ ಪುತ್ರಶತಂ ಶ್ರುತ್ವಾ ಯನ್ನ ದೀರ್ಣಂ ಸಹಸ್ರಧಾ ॥೧೧॥

ಸಂಜಯ! ನನ್ನ ಹೃದಯವು ನಿಶ್ಚಯವಾಗಿಯೂ ಉಕ್ಕಿನಿಂದಾದದ್ದು, 'ನೂರು ಮಕ್ಕಳು ಹತರಾದರು' ಎನ್ನುವುದನ್ನು ಕೇಳಿಯೂ (ನನ್ನ ಹೃದಯವು) ಸಾವಿರ ಹೋಳಾಗಲಿಲ್ಲ.

ಕಥಂ ನು ವೃದ್ಧಮಿಥುನಂ ಹತಪುತ್ರಂ ಭವಿಷ್ಯತಿ ।
ನ ಹ್ಯಹಂ ಪಾಂಡವೇಯಸ್ಯ ವಿಷಯೇ ವಸ್ತುಮುತ್ಸಹೇ ॥೧೨॥

ಮಕ್ಕಳನ್ನು ಕಳೆದುಕೊಂಡ ಈ ಮುದಿಜೋಡಿಯ ಮುಂದಿನ ದಿನಗಳು ಹೇಗಿರುವನು? ನನಗೆ ಪಾಂಡವರ ಅಧೀನನಾಗಿ ಬಾಳಲು ಉತ್ಸಾಹವಿಲ್ಲ.

ಕಥಂ ರಾಜ್ಞಃ ಪಿತಾ ಭೂತ್ವಾ ಸ್ವಯಂ ರಾಜಾ ಚ ಸಂಜಯ ।
ಪ್ರೇಷ್ಯಭೂತಃ ಪ್ರವರ್ತೇಯಂ ಪಾಂಡವೇಯಸ್ಯ ಶಾಸನಾತ್ ॥೧೩॥

ಸಂಜಯ! ರಾಜನ ತಂದೆಯಾಗಿದ್ದ ಸ್ವತಃ ರಾಜನೇ ಆಗಿದ್ದವನು, ಪಾಂಡುಪುತ್ರನ ಶಾಸನಕ್ಕೆ ಒಳಪಟ್ಟು ದಾಸನಾಗಿ ಹೇಗೆ ಬಾಳಲಿ?

ಪ್ರಭುಜ್ಯ ಪೃಥಿವೀಂ ಸರ್ವಾಂ ಸ್ಥಿತ್ವಾ ಮೂರ್ಧ್ನಿ ಸಂಜಯ ।
ಕಥಮದ್ಯ ಭವಿಷ್ಯಾಮಿ ಪ್ರೇಷ್ಯಭೂತಾಂ ದುರಂತಕೃತ್ ॥೧೪॥

ಸಂಜಯ! ಸಮಗ್ರ ಭೂಮಿಯನ್ನು ಭೋಗಿಸಿ, (ಎಲ್ಲರ) ತಲೆಯ ಮೇಲೆ ಮೆರೆದು, ಈ ಅನರ್ಥಕ್ಕೆ ಕಾರಣನಾದ ನಾನು ದಾಸ್ಯಭಾವವನ್ನು ಹೊಂದಿ ಮುಂದೆ ಹೇಗೆ ಬಾಳಲಿ?

ಕಥಂ ಭೀಮಸ್ಯ ವಾಕ್ಯಾನಿ ಶ್ರೋತುಂ ಶಕ್ಷ್ಯಾಮಿ ಸಂಜಯ ।
ಯೇನ ಪುತ್ರಶತಂ ಮಹ್ಯಮೇಕೇನ ನಿಹತಂ ಯುಧಿ ॥೧೫॥

ಸಂಜಯ! ಯಾವ ಒಬ್ಬನೇ ಭೀಮನು ನನ್ನ ನೂರೂ ಮಕ್ಕಳನ್ನು ಯುದ್ಧದಲ್ಲಿ ಸಂಹರಿಸಿದನೋ ಆತನ ಮಾತುಗಳನ್ನು (ಮುಂದೆ) ಹೇಗೆ ಕೇಳಲಿ?

ಕೃತಂ ಸತ್ಯಂ ವಚಸ್ತಸ್ಯ ವಿದುರಸ್ಯ ಮಹಾತ್ಮನಃ ।
ಅಕುರ್ವತಾ ವಚಸ್ತಸ್ಯ ಮಮ ಪುತ್ರೇಣ ಸಂಜಯ ॥೧೬॥

ಸಂಜಯ! ಮಹಾತ್ಮನಾದ ಆ ವಿದುರನ ಮಾತನ್ನು ಅನುಸರಿಸದ ನನ್ನ ಪುತ್ರನು ಆತನ ಮಾತನ್ನು ಸತ್ಯಗೊಳಿಸಿದನು.

ಅಧರ್ಮೇಣ ಹತೇ ತಾತ ಪುತ್ರೇ ದುರ್ಯೋಧನೇ ಮಮ ।
ಕೃತವರ್ಮಾ ಕೃಪೋ ದ್ರೌಣಿಃ ಕಿಮಕುರ್ವತ ಸಂಜಯ ॥೧೭॥

ಅಪ್ಪ ಸಂಜಯ! ನನ್ನ ಪುತ್ರ ದುರ್ಯೋಧನನು ಅಧರ್ಮದಿಂದ ಸಂಹೃತನಾಗಲು, ಕೃತವರ್ಮ, ಕೃಪ, ದ್ರೋಣಪುತ್ರರು ಏನು ಮಾಡಿದರು?

ಸಂಜಯಃ

ಗತ್ವಾ ತು ತಾವಕಾ ರಾಜನ್ ನಾತಿದೂರಂ ಮನಸ್ವಿನಃ ।
ಅಪಶ್ಯಂತ ವನಂ ಘೋರಂ ನಾನಾದ್ರುಮಲತಾಯುತಮ್ ॥೧೮॥

ಸಂಜಯ– ರಾಜನೆ! ಅಭಿಮಾನಿಗಳಾದ ನಿನ್ನವರು ಸ್ವಲ್ಪದೂರ ಸಾಗಿ, ನಾನಾ ಮರ, ಬಳ್ಳಿಗಳಿಂದ ಕೂಡಿದ ದಟ್ಟಾಡವಿಯನ್ನು ಕಂಡರು.

ತೇ ಮುಹೂರ್ತಂ ತು ವಿಶ್ರಮ್ಯ ಲಬ್ಧತೋಯೈರ್ಹಯೋತ್ತಮೈಃ ।
ಸೂರ್ಯಾಸ್ತಮಯವೇಲಾಯಾಂ ಕೌರವೇಯಸ್ಯ ಶಾಸನಾತ್ ॥೧೯॥

ನಾನಾಮೃಗಗಣಾಕೀರ್ಣಂ ನಾನಾಪಕ್ಷಿಸಮಾಕುಲಮ್ ।
ನಾನಾದ್ರುಮಲತಾಚ್ಛನ್ನಂ ನಾನಾವ್ಯಾಲನಿಷೇವಿತಮ್ ॥೨೦॥

ನಾನಾತೋಯಸಮಾಕೀರ್ಣೈಸ್ತಟಾಕೈರುಪಶೋಭಿತಮ್ ।
ಪದ್ಮಿನೀಶತಸಂಛನ್ನಂ ನೀಲೋತ್ಪಲಸಮಾಕುಲಮ್ ॥೨೧॥

ಪ್ರವಿಶ್ಯ ತದ್ವನಂ ಘೋರಂ ವೀಕ್ಷಮಾಣಾಃ ಸಮಂತತಃ ।
ಶಾಖಾಸಹಸ್ರಸಂಛನ್ನಂ ನ್ಯಗ್ರೋಧಂ ದದೃಶುಸ್ತತಃ ॥೨೨॥

ಉಪೇತ್ಯ ಚ ಮಹಾರಾಜ ನ್ಯಗ್ರೋಧಂ ತೇ ಮಹಾರಥಾಃ ।
ದದೃಶುರ್ದ್ವಿಪದಾಂ ಶ್ರೇಷ್ಠಾಃ ಶ್ರೇಷ್ಠಂ ತಂ ವೈ ವನಸ್ಪತಿಮ್ ॥೨೩॥

ಅವರು ಸ್ವಲ್ಪಹೊತ್ತು ವಿಶ್ರಾಂತಿಯನ್ನು ಹೊಂದಿ, ಶ್ರೇಷ್ಠಕುದುರೆಗಳೊಡನೆ ನೀರನ್ನು ಕುಡಿದು, ಕೌರವನ ಆಜ್ಞೆಯಂತೆ, ಸೂರ್ಯನು ಕಂತುವ ವೇಳೆಯಲ್ಲಿ, ನಾನಾವಿಧ ಪ್ರಾಣಿಸಮೂಹದಿಂದ ಕೂಡಿದ, ನಾನಾವಿಧಪಕ್ಷಿಸಮೂಹದಿಂದ ಕೂಡಿದ, ನಾನಾವಿಧ ಮರ, ಬಳ್ಳಿಗಳಿಂದ ಆವೃತವಾದ, ನಾನಾವಿಧ ವಿಷಜಂತುಗಳಿಂದ ಯುಕ್ತವಾದ, ನಾನಾವಿಧವಾದ ಜಲಾಶಯಗಳಿಂದ ನೂರಾರು ಪದ್ಮಗಳಿಂದ ಆವೃತವಾದ, ಕೆನ್ನೈದಲೆಗಳಿಂದ ಕೂಡಿರುವ ಕೆರೆಕಟ್ಟೆಗಳಿಂದ ಯುಕ್ತವಾದ ದಟ್ಟಾರಣ್ಯವನ್ನು ಪ್ರವೇಶಿಸಿ,

ಸುತ್ತಲೂ ಗಮನಿಸುವವರಾದರು, ಅನಂತರದಲ್ಲಿ ಸಾವಿರಾರು ಕವಲು ಕೊಂಬೆಗಳಿಂದ ಕೂಡಿದ ಆಲದ ಮರವನ್ನು ಕಂಡರು.

ತೇऽವತೀರ್ಯ ರಥೋಪಸ್ಥಾದ್ ವಿಪ್ರಮುಚ್ಯ ತು ವಾಜಿನಃ ।
ಉಪಸ್ಪೃಶ್ಯ ಯಥಾನ್ಯಾಯಂ ಸಂಧ್ಯಾಮನ್ವಾಸತ ಪ್ರಭೋ ॥೨೪॥

ಪ್ರಭುವೆ! ಅವರು ರಥದಿಂದ ಕೆಳಗಿಳಿದು, ಹೂಡಿದ ಕುದುರೆಗಳನ್ನು ಬಿಚ್ಚಿ ನೀರನ್ನು ಸ್ಪರ್ಶಿಸಿ, ಯಥಾಕಾಲದಲ್ಲಿ ಸಂಧ್ಯೆಯನ್ನು ಆಚರಿಸಿದರು.

ತತೋऽಸ್ತಂ ಪರ್ವತಶ್ರೇಷ್ಠಮನುಪ್ರಾಪ್ತೇ ದಿವಾಕರೇ ।
ಸರ್ವಸ್ಯ ಜಗತೋ ಧಾತ್ರೀ ಶರ್ವರೀ ಪ್ರತ್ಯಪದ್ಯತ ॥೨೫॥

ಅನಂತರದಲ್ಲಿ ಸೂರ್ಯನು ಶ್ರೇಷ್ಠವಾದ ಅಸ್ತಾಚಲವನ್ನು ಹೊಂದಲು, ಸಮಸ್ತ ಜಗಕೆ ಆಶ್ರಯಳಾದ ರಾತ್ರಿದೇವಿಯು ಆವರಿಸಿದಳು.

ಗ್ರಹನಕ್ಷತ್ರತಾರಾಭಿಃ ಪ್ರಕೀರ್ಣಾಭಿರಲಂಕೃತಮ್ ।
ನಭೋಂಶುಕಮಿವಾಭಾತಿ ಪ್ರೇಕ್ಷಣೀಯಂ ಸಮಂತತಃ ॥೨೬॥

ಸುತ್ತಲೂ ಹರಡಿರುವ ಗ್ರಹ-ನಕ್ಷತ್ರ-ತಾರೆಗಳಿಂದ ಸುತ್ತಲೂ ಅಲಂಕೃತವಾದ ಆಕಾಶಮಂಡಲವು ಸುಂದರವಾಗಿ ಚಿತ್ರಿತವಾದ ವಸ್ತ್ರದಂತೆ ಶೋಭಿಸಿತು.

ಇಚ್ಛಯಾ ತೇ ಪ್ರವಲ್ಗಂತಿ ಸತ್ವಾ ಯೇ ರಾತ್ರಿಚಾರಿಣಃ ।
ದಿವಾಚರಾಶ್ಚ ಯೇ ಸತ್ವಾ ಸ್ತೇ ನಿದ್ರಾವಶಮಾಗತಾಃ ॥೨೭॥

ರಾತ್ರಿಕಾಲದಲ್ಲಿ ಸಂಚರಿಸುವ ಯಾವ ಪ್ರಾಣಿಗಳಿವೆಯೋ, ಅವು ಸ್ವೇಚ್ಛೆಯಿಂದ ಸಂಚರಿಸಲು ಆರಂಭಿಸಿದವು, ಹಗಲು ಸಂಚರಿಸುವ ಯಾವ ಪ್ರಾಣಿಗಳಿವೆಯೋ, ಅವು ನಿದ್ರಾವಶವಾದವು.

ರಾತ್ರಿಂಚರಾಣಾಂ ಸತ್ವಾನಾಂ ನಿನಾದೋऽಭೂತ್ ಸುದಾರುಣಃ ।
ಕ್ರವ್ಯಾದಾಶ್ಚ ಪ್ರಮುದಿತಾ ಪ್ರಾಪ್ತಾ ಘೋರಾ ಚ ಶರ್ವರೀ ॥೨೮॥

ಕತ್ತಲೆಯು ಕವಿಯಲು ರಾತ್ರಿ ಸಂಚರಿಸುವ ಪ್ರಾಣಿಗಳ ದಾರುಣಶಬ್ದವು ಆರಂಭವಾಯಿತು. ಮಾಂಸಭಕ್ಷಕಗಳು ಸಂತಸಗೊಂಡವು, ಕವಿಯಿತು ಘೋರ ಕತ್ತಲೆ.

ತಸ್ಮಿನ್ ರಾತ್ರಿಮುಖೇ ಘೋರೇ ದುಃಖಶೋಕಸಮನ್ವಿತಾಃ ।
ಕೃತವರ್ಮಾ ಕೃಪೋ ದ್ರೌಣಿರುಪೋಪವಿವಿಶುಃ ಸಮಮ್ ॥೨೯॥

ಆ ಘೋರ ರಾತ್ರಿಯಲ್ಲಿ ದುಃಖ-ಶೋಕಗಳಿಂದ ಕೂಡಿದ ಕೃತವರ್ಮ, ಕೃಪ ಮತ್ತು ಅಶ್ವತ್ಥಾಮರು ಒಂದೇ ಸಾಲಿನಲ್ಲಿ ಕೂತರು.

ಉಪೋಪವಿಷ್ಟಾಃ ಶೋಚಂತೋ ನ್ಯಗ್ರೋಧಸ್ಯ ಸಮೀಪತಃ ।
ತಮೇವಾರ್ಥಮತಿಕ್ರಾಂತಂ ಕುರುಪಾಂಡವಯೋಃ ಕ್ಷಯಮ್ ॥೩೦॥

ನಿದ್ರಯಾ ಚ ಪರೀತಾಂಗಾ ನಿಷೇದುರ್ಧರಣೀತಳೇ ॥೩೧॥

ಶ್ರಮೇಣ ಸುದೃಢಂ ಯುಕ್ತಾ ವಿಕ್ಷತಾ ವಿವಿಧೈಃ ಶರೈಃ ॥೩೨॥

ಸಂದುಹೋದ ಕುರು-ಪಾಂಡವರ ನಾಶದ ವಿಷಯದಲ್ಲಿ ದುಃಖಿಸುತ್ತಾ, ಆಲದಮರದ ಸಮೀಪದಲ್ಲಿ ಕುಳಿತಿದ್ದ, ಅನೇಕ ವಿಧವಾದ ಬಾಣಗಳಿಂದ ಘಾಸಿಗೊಂಡ, ತುಂಬ ಶ್ರಮದಿಂದ ಬಳಲಿದ, ಅವರು ನಿದ್ರೆಯಿಂದ ಆವೃತವಾದ ಅವಯವಗಳುಳ್ಳವರಾಗಿ ನೆಲದಲ್ಲಿ ಕುಳಿತರು.

ತತೋ ನಿದ್ರಾವಶಂ ಪ್ರಾಪ್ತೌ ಕೃಪಭೋಜೌ ಮಹಾಬಲೌ ।
ಸುಖೋಚಿತಾವದುಃಖಾರ್ಹೌ ನಿಷಣ್ಣೌ ಧರಣೀತಳೇ ॥೩೩॥

ಅನಂತರದಲ್ಲಿ ಸುಖವನ್ನು ಭೋಗಿಸಲು ಯೋಗ್ಯರಾದ, ಮಹಾಬಲಶಾಲಿಗಳಾದ, ಕೃಪ ಮತ್ತು ಕೃತವರ್ಮರು ಭೂಮಿಯಲ್ಲಿ ಕುಳಿತುಕೊಂಡೆ ನಿದ್ರಾವಶರಾದರು.

ತೌ ತು ಸುಪ್ತೌ ಮಹಾರಾಜ ತಸ್ಮಿನ್ ದೇಶೇ ಮಹಾರಥೌ ।
ಮಹಾರ್ಹಶಯನೋಪೇತೌ ಭೂಮಾವೇವ ಹ್ಯನಾಥವತ್ ॥೩೪॥

ಮಹಾರಾಜ! ಮಹಾರಥಿಕರಾದ, ಬಹುಬೆಲೆಬಾಳುವ ಶಯನದಲ್ಲಿ ಮಲಗಲು ಯೋಗ್ಯರಾದ ಅವರಿಬ್ಬರು ಆ ದೇಶದಲ್ಲಿ ಭೂಮಿಯಲ್ಲೇ ಅನಾಥರಂತೆ ಮಲಗಿದರು.

ಕ್ರೋಧಾಮರ್ಷವಶಂ ಪ್ರಾಪ್ತೋ ದ್ರೌಣಪುತ್ರಸ್ತು ಭಾರತ ।
ನೈವ ಸ್ಮ ಸ ಜಗಾಮಾಥ ನಿದ್ರಾಂ ಸರ್ಪ ಇವ ಶ್ವಸನ್ ॥೩೫॥

ಭರತಕುಲೋತ್ಪನ್ನನೆ! ಕೋಪ ಮತ್ತು ಅಮರ್ಷಗಳ ಅಧೀನನಾದ ದ್ರೋಣಪುತ್ರನಾದರೋ ನಿಟ್ಟುಸಿರನ್ನು ಬಿಡುವ ಸರ್ಪದಂತೆ ನಿದ್ರೆಯನ್ನು ಹೊಂದಲಿಲ್ಲ.

ನಾಲಭತ್ ಸ ತು ನಿದ್ರಾಂ ವೈ ದಹ್ಯಮಾನೋಽತಿಮನ್ಯುನಾ ।
ವೀಕ್ಷಾಂಚಕ್ರೇ ಮಹಾಬಾಹುಸ್ತದ್ವನಂ ಘೋರದರ್ಶನಮ್ ॥೩೬॥

ನೀಳಬಾಹುವಾದ ಆತನು (ಅಶ್ವತ್ಥಾಮನು) ಅತಿ ಕ್ರೋಧದಿಂದ ಪರಿತಪಿಸುವವನಾಗಿ ನಿದ್ರೆಯನ್ನು ಹೊಂದಲೇ ಇಲ್ಲ, ಘೋರ ದೃಶ್ಯದಿಂದ ಕೂಡಿದ ವನವನ್ನು ಪರಿಶೀಲಿಸಿದನು.

ವೀಕ್ಷಮಾಣೋ ವನೋದ್ದೇಶಂ ನಾನಾಸತ್ತ್ವೈರ್ನಿಷೇವಿತಮ್ ।
ಅಪಶ್ಯತ ಮಹಾಬಾಹುರ್ನ್ಯಗ್ರೋಧಂ ವಾಯಸಾನ್ವಿತಮ್ ॥೩೭॥

ನಾನಾಪ್ರಾಣಿಗಳಿಂದ ಕೂಡಿದ ಕಾಡನ್ನು ಪರಿಶೀಲಿಸುತ್ತಿದ್ದ ನೀಳಬಾಹುವಾದ ಅಶ್ವತ್ಥಾಮನು ಕಾಗೆಗಳಿಂದ ಕೂಡಿದ ಆಲದ ಮರವನ್ನು ಗಮನಿಸಿದನು.

ತತ್ರ ಕಾಕಸಹಸ್ರಾಣಿ ತಾಂ ನಿಶಾಂ ಪರ್ಯುಪಾಸತೇ ।
ಸುಖಂ ಸ್ವಪಂತಃ ಕೌರವ್ಯ ಪೃಥಕ್‌ಪೃಥಗಪಾಶ್ರಯಾಃ ॥೩೮॥

ಕುರುಕುಲೋತ್ಪನ್ನನೆ! ಅಲ್ಲಿ ಸಾವಿರಾರು ಕಾಗೆಗಳು ಆ ರಾತ್ರಿಯನ್ನು ಕಳೆಯುತ್ತಾ, ಪ್ರತ್ಯೇಕ ಪ್ರತ್ಯೇಕವಾಗಿ ಸುಖವಾಗಿ ಮಲಗಿದ್ದವು.

ಸುಪ್ತೇಷು ತೇಷು ಕಾಕೇಷು ವಿಸ್ರಬ್ಧೇಷು ಸಮಂತತಃ ।
ಅಪಶ್ಯತ್ ಸಹಸಾ ಯಾಂತಮುಲೂಕಂ ಘೋರದರ್ಶನಮ್ ॥೩೯॥

ಮಹಾಸ್ವನಂ ಮಹಾಕಾಯಂ ಹರ್ಯಕ್ಷಂ ಬಭ್ರುಪಿಂಗಲಮ್ ।
ಸದೀರ್ಘಘೋಣನಖರಂ ಸುಪರ್ಣಮಿವ ವೇಗಿನಮ್ ॥೪೦॥

ಸುತ್ತಲೂ ನಿರ್ಭಯದಿಂದ ಆ ಕಾಗೆಗಳು ಮಲಗಿರಲು, ನೋಡಲು ಭಯಂಕರವಾದ ಗರುಡನಂತೆ ವೇಗವನ್ನು ಹೊಂದಿದ ಭಾರೀ ಶಬ್ದವನ್ನು ಮಾಡುವ, ದೊಡ್ಡದೇಹವನ್ನು ಹೊಂದಿದ, ಹಳದಿ ಬಣ್ಣದ ಕಣ್ಣುಗಳನ್ನು ಹೊಂದಿದ, ಬೂದು ಮತ್ತು ಹಳದೀ ಮೈಬಣ್ಣವನ್ನು ಹೊಂದಿದ, ಉದ್ದನೆಯ ಕೊಕ್ಕು, ಉಗುರುಗಳನ್ನು ಹೊಂದಿರುವ ರಭಸದಿಂದ ಬಂದ ಗೂಬೆಯನ್ನು ಕಂಡನು.

ಸೋಽಥ ಶಬ್ದಂ ಮೃದುಂ ಕೃತ್ವಾ ಲೀಯಮಾನ ಇವಾಂಡಜಃ ।
ನ್ಯಗ್ರೋಧಸ್ಯ ತತಃ ಶಾಖಾಂ ಪಾತಯಾಮಾಸ ಭಾರತ ॥೪೧॥

ಭರತಕುಲೋತ್ಪನ್ನನೆ! ಅನಂತರದಲ್ಲಿ ಆ ಪಕ್ಷಿಯು ಮೆಲ್ಲನೆ ಶಬ್ದವನ್ನು ಮಾಡುತ್ತಾ, ಅಡಗಿದಂತೆ ಕುಳಿತು, ಅನಂತರದಲ್ಲಿ ಆಲದ ಮರದ ಕೊಂಬೆಯನ್ನು ಕೆಡವಿತು.

ಸನ್ನಿಪತ್ಯ ತು ಶಾಖಾಯಾಂ ನ್ಯಗ್ರೋಧಸ್ಯ ವಿಹಂಗಮಃ ।
ಸುಪ್ತಾನ್ ಜಘಾನ ಸುಬಹೂನ್ ವಾಯಸಾನ್ ವಾಯಸಾಂತಕಃ ॥೪೨॥

ಕಾಗೆಗಳ ನಾಶಕವಾದ ಆ ಹಕ್ಕಿಯು ಆಲದ ಮರದ ಕೊಂಬೆಯನ್ನು ಆಶ್ರಯಿಸಿ, ಮಲಗಿದ ಅನೇಕ ಕಾಗೆಗಳನ್ನು ಸಂಹರಿಸಿತು.

ಕೇಷಾಂಚಿದಚ್ಛಿನತ್ ಪಕ್ಷಾನ್ ಶಿರಾಂಸಿ ನಿಚಕರ್ತ ಹ ।
ಚರಣಾಂಶ್ಚೈವ ಕೇಷಾಂಚಿದ್ ಬಭಂಜ ಚರಣಾಯುಧಃ ॥೪೩॥

ಕಾಲೇ ಆಯುಧವಾದ ಆ ಗೂಬೆಯು, ಕೆಲವು ಕಾಗೆಗಳ ರೆಕ್ಕೆಯನ್ನು ತುಂಡರಿಸಿತು, ಮತ್ತೆ ಕೆಲವು ಕಾಗೆಗಳ ತಲೆಯನ್ನು ಕತ್ತರಿಸಿತು, ಮತ್ತೆ ಕೆಲವು ಕಾಗೆಗಳ ಕಾಲನ್ನು ತುಂಡರಿಸಿತು.

ಕ್ಷಣೇನಾಘ್ನತ್ ಸ ಬಲವಾನ್ ಯೇಽಸ್ಯ ದೃಷ್ಟಿಪಥೇ ಸ್ಥಿತಾಃ ॥೪೪॥

ಆ ಬಲಿಷ್ಟವಾದ ಗೂಬೆಯು ಕ್ಷಣದಲ್ಲಿ ತನ್ನ ಕಾಣಿಗೆ ಎಷ್ಟು (ಕಾಗೆಗಳು) ಕಂಡವೋ ಅಷ್ಟನ್ನೂ ಸಂಹರಿಸಿತು.

ತೇಷಾಂ ಶರೀರಾವಯವೈಃ ಶರೀರೈಶ್ಚ ವಿಶಾಂಪತೇ ।
ನ್ಯಗ್ರೋಧಮಂಡಲಂ ಸರ್ವಂ ಸಂಛನ್ನಂ ಸರ್ವತೋಽಭವತ್ ॥೪೫॥

ರಾಜರ ಸ್ವಾಮಿಯೆ! ಆಲದ ಮರದ ಪೂರ್ಣ ಪರಿಸರವು ಆ ಕಾಗೆಗಳ ಅವಯವಗಳಿಂದ, ದೇಹಗಳಿಂದ ಆವೃತವಾಯಿತು.

ತಾಂಸ್ತು ಹತ್ವಾ ತತಃ ಕಾಕಾನ್ ಕೌಶಿಕೋ ಮುದಿತೋಽಭವತ್ ।
ಪ್ರತಿಕೃತ್ಯ ಯಥಾಕಾಮಂ ಶತ್ರೂಣಾಂ ಶತ್ರುಸೂದನಃ ॥೪೬॥

ಶತ್ರುನಾಶಕವಾದ ಆ ಕೌಶಿಕವು (ಗೂಬೆಯು) ಆ ಕಾಗೆಗಳನ್ನು ಸಂಹರಿಸಿ, ತನ್ನ ಇಚ್ಛಾನುಸಾರವಾಗಿ (ತನ್ನ) ಶತ್ರುಗಳಿಗೆ ಪ್ರತೀಕಾರವನ್ನು ಮಾಡಿ, ಅನಂತರದಲ್ಲಿ ಸಂತೋಷಗೊಂಡಿತು.

ತದ್ ದೃಷ್ಟ್ವಾ ತಾದೃಶಂ ಕರ್ಮ ಕೌಶಿಕೇನ ಕೃತಂ ನಿಶಿ ।
ತದ್ಭಾವಕೃತಸಂಕಲ್ಪೋ ದ್ರೌಣೇರೇಕೋ ವ್ಯಚಿಂತಯತ್ ॥೪೭॥

ರಾತ್ರಿಯಲ್ಲಿ ಕೌಶಿಕ ಹಕ್ಕಿಯಿಂದ ಮಾಡಿದ ಅಂತಹ ಕರ್ಮವನ್ನು ಕಂಡ ದ್ರೋಣಪುತ್ರನು ಅದರಂತೆ ಮಾಡಬೇಕು ಎಂದು ಸಂಕಲ್ಪಿಸಿ, ಒಬ್ಬನೇ ಚಿಂತಿಸಿದನು.

ದ್ರೌಣಿಃ

ಉಪದೇಶಃ ಕೃತೋಽನೇನ ಪಕ್ಷಿಣಾ ಮಮ ಸಂಯುಗೇ ।
ಶತ್ರೂಣಾಂ ಕ್ಷಪಣೇ ಯುಕ್ತಃ ಪ್ರಾಪ್ತಕಾಲಶ್ಚ ಮೇ ಮತಃ ॥೪೮॥

ಅಶ್ವತ್ಥಾಮ– ನನಗೆ ಯುದ್ಧದ ವಿಷಯದಲ್ಲಿ ಈ ಪಕ್ಷಿಯು ಉಪದೇಶಿಸಿತು. ಶತ್ರುಗಳನ್ನು ನಾಶಪಡಿಸಲು ನನಗೆ ಇದೇ ಸೂಕ್ತ ಸಮಯ ಎಂದು ನನ್ನ ಅಭಿಪ್ರಾಯ.

ನಾದ್ಯ ಶಕ್ಯಾ ಮಯಾ ಹಂತುಂ ಪಾಂಡವಾ ಜಿತಕಾಶಿನಃ ।
ಬಲವಂತಃ ಕೃತೋತ್ಸಾಹಾ ಲಬ್ಧಲಕ್ಷಾಃ ಪ್ರಹಾರಿಣಃ ॥೪೯॥

ವಿಜಯದಿಂದ ಪ್ರಕಾಶಿಸುತ್ತಿರುವ ಬಲಿಷ್ಠರಾದ ಉತ್ಸಾಹಶಾಲಿಗಳಾದ ಸಿದ್ಧಗುರಿಗಾರರಾದ ಪ್ರಹಾರಕುಶಲರಾದ ಪಾಂಡವರನ್ನು ಸಂಹರಿಸಲು ಈಗ ನನ್ನಿಂದ ಸಾಧ್ಯವಿಲ್ಲ.

ರಾಜ್ಞಃ ಸಕಾಶೇ ತೇಷಾಂ ಚ ಪ್ರತಿಜ್ಞಾತೋ ವಧೋ ಮಯಾ ॥೫೦॥

ರಾಜನ ಬಳಿ ಅವರನ್ನು ಸಂಹರಿಸುವುದಾಗಿ ನಾನು ಪ್ರತಿಜ್ಞೆಯನ್ನು ಮಾಡಿರುವೆ.

ಪತಂಗಾಗ್ನಿಸಮಾಂ ವೃತ್ತಿಮಾಸ್ಥಾಯಾತ್ಮವಿನಾಶಿನೀಮ್ ।
ನ್ಯಾಯತೋ ಯುಧ್ಯಮಾನಸ್ಯ ಪ್ರಾಣತ್ಯಾಗೋ ನ ಸಂಶಯಃ ॥೫೧॥

ಪಾಂಡವರೊಡನೆ ನ್ಯಾಯದಿಂದ ಯುದ್ಧವನ್ನಾಚರಿಸಿದಲ್ಲಿ, ಆತ್ಮನಾಶಕವಾದ ಪತಂಗಾಗ್ನಿ ಚರ್ಯೆಯನ್ನು ಅನುಸರಿಸಿದಂತಾಗುವುದು (ದೀಪದ ಚಿಟ್ಟೆಯು

ಬೆಂಕಿಯನ್ನು ಹಣ್ಣು ಎಂದು ತಿಳಿದು ಬೆಂಕಿಯಲ್ಲಿ ಸ್ವತಃ ಬಿದ್ದು ಪ್ರಾಣವನ್ನು ಕಳೆದುಕೊಳ್ಳುವುದು), ನನಗೆ ಸಾವು ನಿಶ್ಚಯ.

ಛದ್ಮನಾ ತು ಭವೇತ್ ಸಿದ್ಧಿಃ ಶತ್ರೂಣಾಂ ಚ ಕ್ಷಯೋ ಮಹಾನ್ ॥೫೨॥

ಶತ್ರುಗಳ ನಾಶವೆಂಬ ದೊಡ್ಡಸಿದ್ಧಿಯು ಕಪಟದಿಂದ ಸಿದ್ಧಿಸೀತು.

ತತ್ರ ಸಂಶಯಿತಾದರ್ಥಾದ್ ಯಸ್ತು ನಿಃಸಂಶಯೋ ಭವೇತ್ ।
ತಂ ಜನಾ ಬಹುಮನ್ಯಂತೇ ಯೇಽರ್ಥಶಾಸ್ತ್ರವಿಶಾರದಾಃ ॥೫೩॥

ಯಾರು ವ್ಯವಹರಣೀಯ ಶಾಸ್ತ್ರದಲ್ಲಿ ಪರಿಣಿತರೋ ಆ ಜನರು, ಫಲಸಿದ್ಧಿಯ ಸಂದೇಹದ ಮಾರ್ಗಕ್ಕಿಂತ ನಿಶ್ಚಿತಮಾರ್ಗವನ್ನೇ ಆದರಿಸುವರು.

ಯಚ್ಚಾಪ್ಯತಿ ಭವೇತ್ ವಾಚ್ಯಂ ಗರ್ಹಿತಂ ಲೋಕನಿಂದಿತಮ್ ।
ಕರ್ತವ್ಯಂ ತನ್ಮನುಷ್ಯೇಣ ಕ್ಷತ್ರಧರ್ಮೇಣ ವರ್ತತಾ ॥೫೪॥

ಯಾವುದು ಲೋಕನಿಂದಿತವಾಗಿದೆ ಎಂದು ಹೇಳುವರೋ ಹೇಯವಾಗಿದೆಯೋ ಅದನ್ನು ಕ್ಷತ್ರಧರ್ಮದಲ್ಲಿ ಇರುವ ಮನುಜನು ಆಚರಿಸಬೇಕಾಗುವುದು.

ನಿಂದಿತಾನಿ ಚ ಕರ್ಮಾಣಿ ಕುತ್ಸಿತಾನಿ ಪದೇ ಪದೇ ।
ಸೋಪಧಾನಿ ಕೃತಾನ್ಯೇವ ಪಾಂಡವೈರಕೃತಾತ್ಮಭಿಃ ॥೫೫॥

ನ್ಯಾಯಬಾಹಿರರಾದ ಪಾಂಡುಪುತ್ರರು, ಮತ್ತೆ ಮತ್ತೆ ನಿಂದಿತವಾದ ಹೇಯವಾದ ಕೃತ್ಯಗಳನ್ನು ಕಪಟದಿಂದ ಮಾಡಿರುವರಷ್ಟೆ?

ಅಸ್ಮಿನ್ನರ್ಥೇ ಪುರಾ ಗೀತಾಃ ಶ್ರೂಯಂತೇ ಧರ್ಮವಿತ್ತಮೈಃ ।
ಶ್ಲೋಕಾ ನ್ಯಾಯಮವೇಕ್ಷದ್ಭಿಃ ತತ್ತ್ವಾರ್ಥಸ್ತತ್ತ್ವದರ್ಶಿಭಿಃ ॥೫೬॥

ಧರ್ಮಜ್ಞರು ತತ್ವಗಳನ್ನು ಕಂಡವರು ನ್ಯಾಯದೃಷ್ಟಿಯುಳ್ಳವರು ಈ ವಿಷಯದಲ್ಲಿ ಹೇಳಿದ ತತ್ವಾರ್ಥವನ್ನು ತಿಳಿಸುವ ಶ್ಲೋಕಗಳು ಶ್ರುತವಾಗಿವೆ.

ಪರಿಶ್ರಾಂತೇ ವಿಕೀರ್ಣೇ ಚ ಭುಂಜನೇ ವಾಽಪಿ ಶತ್ರುಭಿಃ ।
ಪ್ರಸ್ಥಾನೇ ಚ ಪ್ರವೇಶೇ ಚ ಪ್ರಹರ್ತವ್ಯಂ ರಿಪೋರ್ಬಲಮ್ ॥೫೭॥

ನಿದ್ರಾರ್ಥಮರ್ಧರಾತ್ರೇ ಚ ತಥಾ ನಷ್ಟಪ್ರಣಾಯಕಮ್ ।
ಭಿನ್ನಯೋಧಬಲಂ ಯಚ್ಚ ದ್ವೈಧೀಭೂತಂ ತು ಯದ್ಭವೇತ್ ॥೫೮॥

ಶತ್ರು ಬಲವು ಆಯಾಸಗೊಂಡಾಗ, ಚದುರಿದಾಗ, ಊಟಮಾಡುತ್ತಿರುವಾಗ, ಹೊರಡಲು ಉದ್ಯುಕ್ತವಾದಾಗ, ಪ್ರವೇಶಿಸಲು ಹವಣಿಸುತ್ತಿರುವಾಗ, ಮಧ್ಯರಾತ್ರಿಯಲ್ಲಿ ನಿದ್ರಾವಶವಾದಾಗ, ಹಾಗೆಯೇ ನಾಯಕನನ್ನು ಕಳೆದುಕೊಂಡಾಗ, ಯಾವಾಗ ಮುಖ್ಯಯೋಧನು ಸಾವನ್ನು ಅಪ್ಪಿರುವಾಗ, ಯೋಧರಲ್ಲಿ ಭಿನ್ನಾಭಿಪ್ರಾಯವು ಮೂಡಿದಾಗ (ಶತ್ರುಗಳನ್ನು) ಸದೆಬಡಿಯಬೇಕು.

ಸಂಜಯಃ

ಇತ್ಯೇವಂ ನಿಶ್ಚಯಂ ಕೃತ್ವಾ ಸುಪ್ತಾನಾಂ ನಿಶಿ ಮಾರಣೇ ।
ಪಾಂಡೂನಾಂ ಸಹ ಪಾಂಚಾಲೈರ್ದ್ರೋಣಪುತ್ರಃ ಪ್ರತಾಪವಾನ್ ॥೫೯॥

ಸ ಕ್ರೂರಾಂ ಮತಿಮಾಸ್ಥಾಯ ವಿನಿಶ್ಚಿತ್ಯ ಪುನಃ ಪುನಃ ।
ಸುಪ್ತೌ ಪ್ರಾಬೋಧಯತ್ತೌ ತು ಮಾತುಲಂ ಭೋಜಮೇವ ಚ ॥೬೦॥

ಸಂಜಯ– ಪ್ರತಾಪಶಾಲಿಯಾದ ದ್ರೋಣಪುತ್ರನು ಪಾಂಚಾಲರಿಂದ ಒಡಗೂಡಿ ಮಲಗಿರುವ ಪಾಂಡುಪುತ್ರರನ್ನು ರಾತ್ರಿಯಲ್ಲೇ ಸಂಹರಿಸಲು ನಿಶ್ಚಯಿಸಿ, ಆತನು ಕ್ರೂರ ಬುದ್ಧಿಯನ್ನಾಶ್ರಯಿಸಿ, ಪುನಃ ಪುನಃ ನಿಶ್ಚಯಮಾಡಿಕೊಂಡು, ಮಲಗಿದ ಆ ಈರ್ವರನ್ನು ಸೋದರಮಾವ ಮತ್ತು ಭೋಜಕುಲೋತ್ಪನ್ನನನ್ನು ಎಚ್ಚರಿಸಿದನು.

ತೌ ಪ್ರಬುದ್ಧೌ ಮಹಾತ್ಮಾನೌ ಕೃಪಭೋಜೌ ಮಹಾಬಲೌ ।
ನೋತ್ತರಂ ಪ್ರತಿಪದ್ಯೇತಾಂ ತತ್ರ ಯುಕ್ತಂ ಹ್ರಿಯಾ ವೃತೌ ॥೬೧॥

ಮಹಾಬಲಿಷ್ಠರಾದ ಮಹಾತ್ಮರಾದ ಎಚ್ಚರಗೊಂಡ ಆ ಈರ್ವರು ಕೃಪ ಭೋಜರು, ಮುಂದೆ ಏನು ಮಾಡಬೇಕು ಎಂಬುವುದನ್ನು ತಿಳಿಯದೆ ನಾಚಿಕೆಗೆ ಒಳಗಾದರು.

ಮುಹೂರ್ತಮಿವ ಸ ಧ್ಯಾತ್ವಾ ತಾವುಭೌ ವಾಕ್ಯಮಬ್ರವೀತ್ ॥೬೨॥

ಸ್ವಲ್ಪಹೊತ್ತಿನ ಪರ್ಯಂತ ಚಿಂತಿಸಿದ ಆತನು (ಅಶ್ವತ್ಥಾಮನು) ಅವರೀರ್ವರನ್ನು ಉದ್ದೇಶಿಸಿ ಈ ಮಾತನ್ನು ನುಡಿದನು.

ಅಶ್ವತ್ಥಾಮಾ

ಹತೋ ದುರ್ಯೋಧನೋ ರಾಜಾ ಏಕವೀರೋ ಮಹಾಬಲಃ ।
ಯಸ್ಯಾರ್ಥೇ ವೈರಮಾಸಕ್ತಮಸ್ಮಾಭಿಃ ಪಾಂಡವೈಃ ಸಹ ॥೬೩॥

ಅಶ್ವತ್ಥಾಮ– ಯಾರಿಗಾಗಿ ನಾವು ಪಾಂಡವರೊಡನೆ ದ್ವೇಷವನ್ನು ಹೊಂದಿದೆವೋ, ಆ ಮಹಾಬಲಿ, ಶೂರರಲ್ಲಿ ಮುಖ್ಯನು ರಾಜ ದುರ್ಯೋಧನನು ಮತನಾದನು.

ಏಕಾಕೀ ಬಹುಭಿಃ ಕ್ಷುದ್ರೈರಾಹವೇ ಶುದ್ಧವಿಕ್ರಮಃ ।
ಪಾತಿತೋ ಭೀಮಸೇನೇನ ಏಕಾದಶಚಮೂಪತಿಃ ॥೬೪॥

ಯುದ್ಧದಲ್ಲಿ ಅನೇಕ ಕ್ಷುದ್ರರಿಂದ ಸುತ್ತುವರೆಯಲ್ಪಟ್ಟ ಶುದ್ಧವಿಕ್ರಮಶಾಲಿಯಾದ ಒಬ್ಬಂಟಿಗನಾದ ಹನ್ನೊಂದು ಅಕ್ಷೋಹಿಣೀ ಸೇನಾನಾಯಕನಾದ ದುರ್ಯೋಧನನು ಭೀಮನಿಂದ ಪತಿತನಾದನು.

ವೃಕೋದರೇಣ ಕ್ಷುದ್ರೇಣ ಸುನೃಶಂಸಮಿದಂ ಕೃತಮ್ ।
ಮೂರ್ಧಾಭಿಷಿಕ್ತಸ್ಯ ಶಿರಃ ಪಾದೇನ ಪರಿಮರ್ದಿತಮ್ ॥೬೫॥

ಮೂರ್ಧಾಭಿಷಿಕ್ತನಾದ ದುರ್ಯೋಧನನ ತಲೆಯನ್ನು ಕ್ಷುದ್ರನಾದ ಭೀಮಸೇನನು ಕಾಲಿನಿಂದ ತುಳಿದನು, ಇದು ಅತ್ಯಂತ ಹೇಯವಾದ ಕೃತ್ಯ.

ನರ್ದಂತಿ ಸ್ಮ ಚ ಪಾಂಚಾಲಾಃ ಕ್ಷ್ವೇಲಂತಿ ಚ ಹಸಂತಿ ಚ ।
ದಧ್ಮುಃ ಶಂಖಾಂಶ್ಚ ಶತಶೋ ಹೃಷ್ಟಾ ಘ್ನಂತಿ ಚ ದುಂದುಭೀನ್ ॥೬೬॥

(ಆಗ) ಪಾಂಚಾಲರು ಕುಣಿಯುತ್ತಿದ್ದರು, ಅಟ್ಟಹಾಸಗೈದರು, ಗಹಗಹಿಸಿ ನಕ್ಕರು, ಶಂಖಗಳನ್ನು ಊದಿದರು ಮತ್ತು ಸಂತಸಗೊಂಡು ನೂರಾರು ಭೇರಿಗಳನ್ನು ಬಾರಿಸಿದರು.

ವಾದಿತ್ರಘೋಷಸ್ತುಮುಲೋ ವಿಮಿಶ್ರಃ ಶಂಖನಿಃಸ್ವನೈಃ ।
ಅನಿಲೇನೇರಿತೋ ಘೋರೋ ದಿಶಃ ಪೂರಯತೀವ ಹಿ ॥೬೭॥

ಗಾಳಿಯಿಂದ ಒಯ್ಯಲ್ಪಟ್ಟ ಭಯಂಕರವಾದ ವಾದ್ಯಗಳ ಘೋರ ಶಬ್ದವು ಶಂಖಧ್ವನಿಯಿಂದ ಕೂಡಿದ್ದಾಗಿ ದಿಗಂತವನ್ನು ಮುಟ್ಟಿತು.

ಅಶ್ವಾನಾಂ ಹೇಷಮಾಣಾನಾಂ ಗಜಾನಾಂ ಚೈವ ಬೃಂಹತಾಮ್ ।
ಸಿಂಹನಾದಶ್ಚ ಶೂರಾಣಾಂ ಶ್ರೂಯತೇ ಸುಮಹಾನಯಮ್ ॥೬೮॥

ಕುದುರೆಗಳ ಕೆನೆಯುವಿಕೆ, ಆನೆಗಳ ಘೀಳಿಡುವಿಕೆ, ಶೂರರ ಸಿಂಹನಾದ ಈ ಭಾರೀ ಶಬ್ದಗಳು ಕೇಳಿಸಿದವು.

ದಿಶಂ ಪ್ರತೀಚೀಮಾಶ್ರಿತ್ಯ ಹೃಷ್ಟಾನಾಂ ಗರ್ಜಿತಂ ಬಹು ॥೬೯॥

ಪಶಿಮದಿಕ್ಕನ್ನು ಉದ್ದೇಶಿಸಿ ಸಂತಸಗೊಂಡ ಅವರು ಬಹುವಾಗಿ ಗರ್ಜಿಸಿದರು.

ರಥನೇಮಿಸ್ವನಾಶ್ಚೈವ ಶ್ರೂಯಂತೇ ರೋಮಹರ್ಷಣಾಃ ॥೭೦॥

ರೋಮಾಂಚಕಗಳಾದ ರಥಚಕ್ರದ ಗುಂಭದ ಸದ್ದುಗಳು ಕೇಳುತ್ತಿವೆ.

ಪಾಂಡವೈರ್ಧಾರ್ತರಾಷ್ಟ್ರಾಣಾಂ ಯದಿದಂ ದುಷ್ಕೃತಂ ಕೃತಮ್ ।
ವಯಮೇವ ತ್ರಯಃ ಶಿಷ್ಟಾ ಯಸ್ಮಿನ್ ಮಹತಿ ವೈಶಸೇ ॥೭೧॥

ಪಾಂಡುಪುತ್ರರು ಕೌರವರನ್ನು ಉದ್ದೇಶಿಸಿ ಯಾವ ಈ ದುಷ್ಟತನವನ್ನು ಎಸಗಿದರೋ ಈ ಭಾರೀ ಯುದ್ಧದಲ್ಲಿ ನಾವು ಮೂವರು ಮಾತ್ರ ಉಳಿದೆವು.

ಕೇಚಿನ್ನಾಗಶತಪ್ರಾಣಾಃ ಕೇಚಿತ್ ಸರ್ವಾಸ್ತ್ರಕೋವಿದಾಃ ।
ನಿಹತಾಃ ಪಾಂಡವೈರಸ್ಮಾನ್ ಮನ್ಯೇ ಕಾಲಸ್ಯ ಪರ್ಯಯಮ್ ॥೭೨॥

ನಮ್ಮಲ್ಲಿ ಕೆಲವರು ಹತ್ತು ಸಾವಿರ ಆನೆಯ ಬಲದವರು, ಮತ್ತೆ ಕೆಲವರು ಸಕಲ ಅಸ್ತ್ರಗಳನ್ನು ಬಲ್ಲವರಾಗಿದ್ದರು, ಆದರೂ ಎಲ್ಲರೂ ಪಾಂಡವರಿಂದ ಮೃತರಾದರು, ಕಾಲವು (ಎಲ್ಲವನ್ನು) ಬುಡಮೇಲು ಮಾಡಿತು ಎಂದು ಭಾವಿಸುವೆನು.

ಏವಮೇತೇನ ಭಾವ್ಯಂ ಹಿ ನೂನಂ ಕಾರ್ಯೇಣ ತತ್ತ್ವತಃ ।
ಯಥಾ ಯಸ್ಯೇದೃಶೀ ನಿಷ್ಠಾ ಕೃತೇ ಯತ್ನೇऽಪಿ ದುಷ್ಕರೇ ॥೭೩॥

(ನಾವು) ದುಷ್ಕರವಾದ ಕಾರ್ಯಗಳನ್ನು ಯತ್ನಪೂರ್ವಕವಾಗಿ ಮಾಡಿದರೂ ಫಲವು ಎಂತಹ ಘೋರವಾಗಿ ಪರಿಣಮಿಸಿತು, ವಿಧಿಯು ಹೀಗೆಯೇ ಆಗಬೇಕೆಂದು ನಿಶ್ಚಯಿಸಿತ್ತು ಎಂದು ತೋರುವುದು.

ಭವತೋಸ್ತು ಯದಿ ಪ್ರಜ್ಞಾ ನ ಮೋಹಾದಪಚೀಯತೇ ।
ವ್ಯಸನೇಽಸ್ಮಿನ್ ಮಹತ್ಯರ್ಥೇ ಶ್ರೇಯೋ ಯನ್ನಸ್ತದುಚ್ಯತಾಮ್ ॥೭೪॥

ನಿಮ್ಮ ತಿಳುವಳಿಕೆಯು ಮೋಹದಿಂದ ಒಂದು ವೇಳೆ ಹಾನಿಗೊಂಡಿಲ್ಲವೆಂದಾದಲ್ಲಿ, ಭಾರೀ ಅನರ್ಥದ ಈ ಸಂದರ್ಭದಲ್ಲಿ ಶ್ರೇಯಸ್ಸು ಯಾವುದರಿಂದ ಎನ್ನುವುದನ್ನು ತಿಳಿಹೇಳಿರಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸೌಪ್ತಿಕಪರ್ವಣಿ ಅಶ್ವತ್ಥಾಮ್ನಃ ಕೌಶಿಕದರ್ಶನಚಿಂತಾ ನಾಮ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ಒಂದನೆಯ ಅಧ್ಯಾಯವು ಸಮಾಪ್ತವಾಯಿತು.

★ ★ ★ ★ ★

ಎರಡನೆಯ ಅಧ್ಯಾಯ

ಕೃಪರಿಂದ ಅಶ್ವತ್ಥಾಮನಿಗೆ ಕರ್ತವ್ಯಕರ್ಮದ ಉಪದೇಶ.

ಕೃಪಃ

ಶ್ರುತಂ ತೇ ವಚನಂ ಸರ್ವಂ ಹೇತುಯುಕ್ತಂ ಮಯಾ ವಿಭೋ ।
ಮಮಾಪಿ ತು ವಚಃ ಕಿಂಚಿತ್ ಶೃಣುಷ್ವ ಚ ಮಹಾಭುಜ ॥೧॥

ಕೃಪಾಚಾರ್ಯರು– ನೀಳಬಾಹುವೆ, ಪ್ರಭು! ಯುಕ್ತಿಯುಕ್ತವಾದ ನಿನ್ನ ಎಲ್ಲ ಮಾತನ್ನು ನಾನು ಕೇಳಿರುವೆ. ಸ್ವಲ್ಪನನ್ನ ಮಾತನ್ನೂ ಆಲಿಸು.

ಆರಂಭಾ ಮಾನುಷಾಃ ಸರ್ವೇ ನಿಬದ್ಧಾಃ ಕರ್ಮಣೋರ್ದ್ವಯೋಃ ।
ದೈವೇ ಪುರುಷಕಾರೇ ಚ ಪರಂ ತಾಭ್ಯಾಂ ನ ವಿದ್ಯತೇ ॥೨॥

ಎಲ್ಲ ಮನುಷ್ಯರೂ ಅದೃಷ್ಟ ಮತ್ತು ಮನುಷ್ಯಪ್ರಯತ್ನ ಎಂಬ ಎರಡು ಕರ್ಮಗಳಿಂದ ನಿಬದ್ಧರಾಗಿರುವರು. ಇವೆರಡಿಲ್ಲದೆ ಬೇರೆ ಯಾವುದೂ (ಕಾರ್ಯಸಾಧಕವಾದದ್ದು) ಇಲ್ಲ.

ನ ಹಿ ದೈವೇನ ಸಿದ್ಧ್ಯಂತಿ ಕಾರ್ಯಾಣ್ಯೇಕೇನ ಸತ್ತಮ ।
ನ ಚಾಪಿ ಕರ್ಮಣೈಕೇನ ದ್ವಾಭ್ಯಾಂ ಸಿದ್ಧ್ಯಂತಿ ಯೋಗತಃ ॥೩॥

ಸಜ್ಜನನೆ! ಕೇವಲ ಅದೃಷ್ಟ ಒಂದರಿಂದಲೇ ಕಾರ್ಯಗಳು ಸಿದ್ಧವಾಗವು, ಹಾಗೆಯೇ ಕೇವಲ ಮನುಷ್ಯ ಪ್ರಯತ್ನ ಒಂದರಿಂದಲೇ ಸಿದ್ಧಿಯು ಆಗದು. ಈ ಎರಡರ ಯೋಗದಿಂದಲೇ ಸಿದ್ಧಿಸುವವು.

ಆಭ್ಯಾಮುಭಾಭ್ಯಾಂ ಸರ್ವಾರ್ಥಾ ನಿಬದ್ಧಾ ಹ್ಯಧಮೋತ್ತಮಾಃ ।
ಪ್ರವೃತ್ತಾಶ್ಚೈವ ದೃಶ್ಯಂತೇ ನಿವೃತ್ತಾಶ್ಚೈವ ಸರ್ವಶಃ ॥೪॥

ನಿಶ್ಚಯವಾಗಿಯೂ ಈ ಎರಡರಿಂದಲೇ ಎಲ್ಲ ಸಣ್ಣ ಪುಟ್ಟಕಾರ್ಯಗಳು ನಿಬದ್ಧವಾಗಿವೆ. ಎಲ್ಲ ಪ್ರವೃತ್ತ ಕರ್ಮಗಳು, ನಿವೃತ್ತಕರ್ಮಗಳು (ಇವೆರಡರಿಂದಲೇ ನಿಯಂತ್ರಿತವಾದದ್ದು) ಕಂಡಿವೆ.

ಪರ್ಜನ್ಯಃ ಪರ್ವತೇ ವರ್ಷನ್ ಕಿಂ ನು ಸಾಧಯತೇ ಫಲಮ್ ।
ಕೃಷ್ಟೇ ಕ್ಷೇತ್ರೇ ಚಾಪ್ಯವರ್ಷನ್ ಕಿಂ ನು ಸಾಧಯತೇ ಫಲಮ್ ॥೫॥

ಮಳೆಯು ಬೆಟ್ಟದಲ್ಲಿ ಬೀಳಲು ಏನು ಸಾಧನೆಯಾಗುವುದು? ವ್ಯವಸಾಯವನ್ನು ಮಾಡಿಯೂ ಸಹ ಮಳೆ ಬೀಳದ ಪಕ್ಷದಲ್ಲಿ ಯಾವ ಫಲವನ್ನು ಸಾಧಿಸಲಾದೀತು?

ಉತ್ಥಾನಂ ಚಾಪಿ ಸರ್ವಸ್ಯ ಅನುತ್ಥಾನಂ ಚ ದೈವತಮ್ ।
ವ್ಯರ್ಥಂ ಭವತಿ ಸರ್ವತ್ರ ಪೂರ್ವಸ್ತತ್ರ ವಿನಿಶ್ಚಯಃ ॥೬॥

ಎಲ್ಲ ಕರ್ಮಗಳ ಸಿದ್ಧಿ ಮತ್ತು ಅಸಿದ್ಧಿಗಳನ್ನು ದೇವತೆಗಳೇ ನಿಶ್ಚಯಿಸಿರುತ್ತಾರೆ. ಎಲ್ಲೆಡೆಯೂ ಮೊದಲೆಯದು (ಮನುಷ್ಯಪ್ರಯತ್ನವಿದ್ದೂ ದೈವದ ಬಲವಿಲ್ಲದ ಪಕ್ಷದಲ್ಲಿ) ಸಿದ್ಧಿಸದು ಎನ್ನುವ ಪಕ್ಷವು ನಿಶ್ಚಿತವಾಗಿದೆ.

ಸುಕೃಷ್ಟೇ ಚ ಯಥಾ ಕ್ಷೇತ್ರೇ ಸಮ್ಯಗ್ದೈವೇ ಚ ವರ್ಷತಿ ।
ಬೀಜಂ ಮಹಾಗುಣಂ ಭೂಯಾತ್ ತಥಾ ಸಿದ್ಧಿಶ್ಚ ಮಾನುಷೀ ॥೭॥

ಹೇಗೆ ಅದೃಷ್ಟವು ಚೆನ್ನಾಗಿದ್ದಲ್ಲಿ ಕೃಷಿಮಾಡಿದ ಭೂಮಿಯಲ್ಲಿ ಮಳೆ ಬೀಳುವುದೋ, (ಬಿತ್ತಿದ) ಬೀಜವು ಮಹಾಗುಣವನ್ನು ಹೊಂದುವುದೋ, ಹಾಗೆಯೇ ಮನುಷ್ಯನ ಸಿದ್ಧಿಗಳೂ ಸಹ.

ತಯೋರ್ದೈವಂ ಹಿ ನಿಶ್ಚಿತ್ಯ ಸ್ವವಶೇನೈವ ವರ್ತತೇ ।
ಪ್ರಾಜ್ಞಾಃ ಪುರುಷಕಾರೇಣ ವರ್ತಂತೇ ದೈವಮಾಸ್ಥಿತಾಃ ॥೮॥

ದೈವವು ತಾನು ಸ್ವತಂತ್ರವಾಗಿ ಅನುಗ್ರಹಿಸದೆ, ಮನುಷ್ಯಪ್ರಯತ್ನ ಮತ್ತು ಅದೃಷ್ಟಗಳ ಅನುಗುಣವಾಗಿ ಅನುಗ್ರಹಿಸುವುದು. ಜ್ಞಾನಿಗಳು ದೈವವನ್ನು ನಂಬಿ ಮನುಷ್ಯಪ್ರಯತ್ನದಲ್ಲಿರುವರು.

ತಾಭ್ಯಾಂ ಸರ್ವೇಽಪಿ ಕಾರ್ಯಾರ್ಥಾ ಮನುಷ್ಯಾಣಾಂ ನರರ್ಷಭ ।
ವಿಚೇಷ್ಟಂತಃ ಪ್ರದೃಶ್ಯಂತೇ ನಿವೃತ್ತಾಶ್ಚ ತಥೈವ ತು ॥೯॥

ಪುರುಷಶ್ರೇಷ್ಠನೆ! ಮನುಜರ ಎಲ್ಲ ಕಾರ್ಯಗಳು ಇವೆರಡರಿಂದ (ಅದೃಷ್ಟ ಮತ್ತು ಮನುಷ್ಯಪ್ರಯತ್ನಗಳಿಂದ) ಸಿದ್ಧಿಸಿದ್ದೂ ಹಾಗೆಯೇ ಆಸಿದ್ಧವಾದದ್ದೂ ಕಂಡಿವೆ.

ಕೃತಃ ಪುರುಷಕಾರೋ ಹಿ ಸೋ ಹಿ ದೈವೇನ ಸಿದ್ಧ್ಯತಿ ।
ತಥಾಽಸ್ಯ ಕರ್ಮಣಃ ಕರ್ತುರಭಿನಿರ್ವರ್ತತೇ ಫಲಮ್ ॥೧೦॥

ಪ್ರಯತ್ನಶೀಲನಾದ ಮನುಷ್ಯನು ಅದೃಷ್ಟದಿಂದ ಸಿದ್ಧಿಯನ್ನು ಹೊಂದುವನು. ಹಾಗೆಯೇ ದೈವೇಚ್ಛಾನುಸಾರವಾಗಿ ಪ್ರಯತ್ನಿಸಿದಲ್ಲಿ ಫಲವು ಸಿದ್ಧಿಸುವುದು.

ಉತ್ಥಾನಂ ಹಿ ಮನುಷ್ಯಾಣಾಂ ದಕ್ಷಾಣಾಂ ದೈವವರ್ಜಿತಮ್ ।
ಅಫಲಂ ದೃಶ್ಯತೇ ಲೋಕೇ ಸಮ್ಯಗಭ್ಯುಪಪಾದಿತಮ್ ॥೧೧॥

ದಕ್ಷರಾದ ಮನುಷ್ಯರು ಅದೃಷ್ಟಹೀನರಾಗಿದ್ದಲ್ಲಿ, ಪ್ರಯತ್ನಶೀಲರಾಗಿದ್ದರೂ ವಿಫಲರಾಗಿರುವುದು ಈ ಲೋಕದಲ್ಲಿ ಕಂಡಿದೆ. (ಈ ವಿಚಾರವನ್ನು ನಾನು) ಚೆನ್ನಾಗಿ ಉಪಪಾದಿಸಿರುವೆ.

ತತ್ರಾಲಸಾ ಮನುಷ್ಯಾಣಾಂ ಯೇ ಭವಂತ್ಯಮನಸ್ವಿನಃ ।
ಉತ್ಥಾನಂ ತೇ ಹಿ ಗರ್ಹಂತೇ ಪ್ರಾಜ್ಞಾನಾಂ ತನ್ನ ರೋಚತೇ ॥೧೨॥

ಮನುಷ್ಯರಲ್ಲಿ ಯಾರು (ಕಾರ್ಯದಲ್ಲಿ) ಅಭಿಮಾನಹೀನರೋ, ಸೋಮಾರಿಗಳೋ ಅವರು ಪ್ರಯತ್ನವನ್ನೇ ನಿಂದಿಸುವುರು (ಕಾರ್ಯೋನ್ಮುಖರಾಗುವುದಿಲ್ಲ), ಪ್ರಾಜ್ಞರು ಹಾಗೆ ಮಾಡರು.

ಪ್ರಾಯಶೋ ಹಿ ಕೃತಂ ಕರ್ಮ ನಾಫಲಂ ದೃಶ್ಯತೇ ಭುವಿ ।
ಅಕೃತ್ವಾ ಚ ಪುನರ್ದುಃಖಂ ಕರ್ಮ ದೃಶ್ಯೇತ್ ಮಹತ್ಫಲಮ್ ॥೧೩॥

ಪ್ರಾಯಶಃ ಪ್ರಯತ್ನ ಪೂರ್ವಕವಾಗಿ ಕರ್ಮವನ್ನು ಆಚರಿಸಿದಲ್ಲಿ ಭೂಮಿಯಲ್ಲಿ ಫಲಪ್ರಾಪ್ತಿಯು ಆಗದಿರುವುದು ಕಂಡಿಲ್ಲ. (ಸ್ವಲ್ಪ ವಿಳಂಬವಾಗಬಹುದು). ಪ್ರಯತ್ನವನ್ನೇ ಮಾಡದಿದ್ದಲ್ಲಿ ದುಃಖವು ಮರುಕಳಿಸುವುದು, ಪ್ರಯತ್ನಶೀಲನು ಮಹಾಫಲವನ್ನು ಹೊಂದಿರುವುದು ಕಂಡಿದೆ.

ಚೇಷ್ಟಾಮಕುರ್ವನ್ ಲಭತೇ ಯದಿ ಕಶ್ಚಿದ್ಯದೃಚ್ಛಯಾ ।
ಯೋ ವಾ ನ ಲಭತೇ ಕೃತ್ವಾ ದುರ್ದರ್ಶೌ ತಾವುಭಾವಪಿ ॥೧೪॥

ಒಂದು ವೇಳೆ ಪ್ರಯತ್ನಿಸದೇ ಅದೃಷ್ಟದಿಂದಲೇ ಫಲವನ್ನು ಹೊಂದಿದವನು, ಯಾರು ಪ್ರಯತ್ನಿಸಿಯೂ ಫಲವನ್ನು ಹೊಂದದವನು, ಈ ಎರಡಕ್ಕೂ ಕಾರಣವನ್ನು ತಿಳಿಯಲಾಗದು.

ವ್ಯಾಖ್ಯಾನ ವಿಶೇಷ– ಮೇಲಿನ ಸಂದರ್ಭಗಳಲ್ಲಿ ಅವಿವೇಕಿಯಾದ ಮನುಜನು ಕಾರಣವನ್ನು ತಿಳಿಯದೇ ವ್ಯಥೆಗೆ ಒಳಗಾಗುವನು. ವಿವೇಕಿಯಾದ ಮನುಷ್ಯನು 'ಪ್ರಯತ್ನಿಸದೇ ಪ್ರಾಪ್ತವಾದದ್ದು ಪ್ರಾಚೀನ ಕರ್ಮಾನುಸಾರಿಯಾದದ್ದು, ಪ್ರಯತ್ನಿಸಿಯೂ ಫಲಪ್ರಾಪ್ತವಾಗದಿರುವುದು, ಮುಂದಿನ ಜನ್ಮದಲ್ಲಿ ಫಲವು ಪ್ರಾಪ್ತವಾಗಲಿದೆ' ಎಂದು ತಿಳಿಯುವನು ಎಂದು ಭಾವ **(ಲಕ್ಷಾಲಂಕಾರ)**.

ಶಕ್ನೋತಿ ಜೀವಿತುಂ ದಕ್ಷೋ ನಾಲಸಃ ಸುಖಮೇಧತೇ ।
ದೃಶ್ಯಂತೇ ಜೀವಲೋಕೇಽಸ್ಮಿನ್ ದಕ್ಷಾಃ ಪ್ರಾಯೋ ಹಿತೈಷಿಣಃ ॥೧೫॥

ಪ್ರಯತ್ನಶೀಲನಾದವನು (ಸುಖದಿಂದ) ಬಾಳುವುದು ಶಕ್ಯವಾಗಿದೆ, ಸೋಮಾರಿಯು ಸುಖವನ್ನು ಹೊಂದಲಾರ. ಈ ಮನುಷ್ಯಪ್ರಪಂಚದಲ್ಲಿ ಪ್ರಾಯಶಃ ಪ್ರಯತ್ನಶೀಲರಾದ ಮನುಜರು ಹಿತವನ್ನು ಹೊಂದುವರು.

ಯದಿ ದಕ್ಷಃ ಸಮಾರಭ್ಯ ಕರ್ಮಾಣೋ ನಾಶ್ನುತೇ ಫಲಮ್ ।
ನಾಸ್ಯ ವಾಚ್ಯಂ ಭವೇತ್ ಕಿಂಚಿತ್ ಸ್ಪರ್ಶಂ ಚಾಸ್ಯಾಧಿಗಚ್ಛತಿ ॥೧೬॥

ಒಂದು ವೇಳೆ ಪ್ರಯತ್ನಶೀಲನು (ಸ್ವವಿಹಿತ) ಕರ್ಮವನ್ನು ಆರಂಭಿಸಿ, ಅದರ ಫಲವನ್ನು ಹೊಂದುವುದಿಲ್ಲವೋ ಆತನು (ಲೋಕದಲ್ಲಿ) ನಿಂದೆಗೆ ಒಳಗಾಗುವದಿಲ್ಲ,

ಆದರೆ ಆತನಿಗೆ ಸ್ವಲ್ಪವೂ ಪಾಪದ ಲೇಪವಿಲ್ಲ. (ಸ್ವವಿಹಿತಕರ್ಮವನ್ನು ಫಲಾಪೇಕ್ಷೆಯಿಲ್ಲದೇ ಆಚರಿಸಿರುವನು, ಎಂದು ಭಾವ)

ಅಕೃತ್ವಾ ಕರ್ಮ ಯೋ ಲೋಕೇ ಫಲಂ ವಿಂದತಿ ಕರ್ಹಿಚಿತ್ ।
ಸ ವೈ ವಕ್ತವ್ಯತಾಂ ಯಾತಿ ದ್ವೇಷ್ಯೋ ಭವತಿ ಪ್ರಾಯಶಃ ॥೧೭॥

ಈ ಲೋಕದಲ್ಲಿ ಯಾವನು ಸ್ವವಿಹಿತವಾದ ನಿತ್ಯಾನಿತ್ಯಕರ್ಮವನ್ನು ಆಚರಿಸದೇ ತನ್ನ ವೃತ್ತಿಯಿಂದ ಲಾಭವನ್ನು ಪಡೆಯುವನೋ, ಆತನು ಲೋಕದಲ್ಲಿ ನಿಂದೆಗೆ ಒಳಗಾಗುವನು, ಪ್ರಾಯಶಃ ಎಲ್ಲರ ದ್ವೇಷಕ್ಕೆ ಪಾತ್ರನಾಗುವನು.

ಏವಮೇತದನಾದೃತ್ಯ ವರ್ತತೇ ಯಸ್ತ್ವತೋಽನ್ಯಥಾ ।
ಸ ಕುರ್ಯಾದಾತ್ಮನೋಽನರ್ಥಾನ್ ಏಷ ಬುದ್ಧಿಮತಾಂ ನಯಃ ॥೧೮॥

ಯಾವನು ಈ ರೀತಿಯಾದ ನಿಯಮವನ್ನು ಅನಾದರಿಸಿ, ಬೇರೆಯೇ ಹಾದಿಯಲ್ಲಿ ಸಾಗುವನೋ, ಆತನು ತನಗೆ ಅನಿಷ್ಟವನ್ನು ಮಾಡಿಕೊಂಡಂತೆ, ಇದು ಜ್ಞಾನಿಗಳ ನೀತಿ.

ಹೀನಃ ಪುರುಷಕಾರೇಣ ತಥಾ ದೈವೇನ ವಾ ಪುನಃ ।
ಕಾರಣಾಭ್ಯಾಮಥೋಭಾಭ್ಯಾಮ್ ಉತ್ಥಾನಮಫಲಂ ಭವೇತ್ ॥೧೯॥

ಸರಿಯಾದ ಪ್ರಯತ್ನವಿಲ್ಲದೆ, ಮತ್ತೆ ಅದೃಷ್ಟಹೀನನಾಗುವುದರಿಂದ, ಈ ಎರಡು ಕಾರಣಗಳಿಂದ ಮನುಷ್ಯನ ಕರ್ಮಗಳು ನಿಷ್ಫಲವಾಗುವವು.

ಹೀನಂ ಪುರುಷಕಾರೇಣ ಕರ್ಮ ತ್ವಿಹ ನ ಸಿದ್ಧ್ಯತಿ ॥೨೦॥

ಪುರುಷಪ್ರಯತ್ನದಿಂದ ಹೀನನಾದವನು ಕರ್ಮದ ಫಲವನ್ನು ಹೊಂದಲಾರ.

ದೈವತೇಭ್ಯೋ ನಮಸ್ಕೃತ್ಯ ಯಸ್ತ್ವರ್ಥಾನ್ ಸಮ್ಯಗೀಹತೇ ।
ದಕ್ಷೋ ದಾಕ್ಷಿಣ್ಯಸಂಪನ್ನೋ ನ ಸ ಮೋಘೈರ್ವಿಹನ್ಯತೇ ॥೨೧॥

ದೇವತೆಗಳಿಗೆ ನಮಸ್ಕರಿಸಿ, ದಕ್ಷನಾದವನು, ದಾಕ್ಷಿಣ್ಯದಿಂದ ಕೂಡಿದ ಯಾವನು (ಕೆಟ್ಟ ಕೆಲಸವನ್ನು ಮಾಡಲು ಹೇಸುವವನು) ಸಿದ್ಧಿಗಾಗಿ ಸರಿಯಾಗಿ ಪ್ರಯತ್ನಿಸುವನೋ, ಆತನ ಯತ್ನವು ಎಂದೂ ವ್ಯರ್ಥವಾಗದು.

ಸಮ್ಯಗೀಹಾ ಪುನರಿಯಂ ಯೋ ವೃದ್ಧಾನುಪಸೇವತೇ ।
ಆಪೃಚ್ಛತಿ ಚ ಯಚ್ಛ್ರೇಯಃ ಕರೋತಿ ಚ ಹಿತಂ ವಚಃ ॥೨೨॥

ಮತ್ತೆ ಯಾವನು ಹಿರಿಯರನ್ನು ಸೇವಿಸಿರುವನೋ, ಶ್ರೇಯೋಮಾರ್ಗವನ್ನು ಹಿರಿಯರಲ್ಲಿ ಪ್ರಶ್ನಿಸಿ ತಿಳಿದುಕೊಳ್ಳುವನೊ, ಅವರ ಮಾತನ್ನು ಅನುಸರಿಸುವನೋ ಆತನು ಸರಿಯಾಗಿ ಪ್ರಯತ್ನಶೀಲನಾಗುವನು.

ಉತ್ಥಾಯೋತ್ಥಾಯ ಹಿ ಸದಾ ಪ್ರಷ್ಟವ್ಯಾ ವೃದ್ಧಸಮ್ಮತಾಃ ।
ಯಸ್ಯ ಯೋಗೇ ಪರಂ ಮೂಲಂ ತನ್ಮೂಲಂ ಸಿದ್ಧಿರಿಷ್ಯತೇ ॥೨೩॥

ಮತ್ತೆ ಮತ್ತೆ ನಿರಂತರ 'ವೃದ್ಧರಿಗೆ ಸಂಮತವಾದದ್ದು ಯಾವುದು?' ಎಂದು ಪ್ರಶ್ನಿಸಬೇಕು. ವೃದ್ಧರ ಉಪದೇಶವೇ ಸಿದ್ಧಿಗೆ ಮೂಲ, ಅವರ ಉಪಾಯಗಳೇ ಸಿದ್ಧಿಗೆ ಮುಖ್ಯಕಾರಣ.

ವೃದ್ಧಾನಾಂ ವಚನಂ ಶ್ರುತ್ವಾ ಯೋ ಹ್ಯುತ್ಥಾನಂ ಪ್ರಯೋಜಯೇತ್ ।
ಉತ್ಥಾನಸ್ಯ ಫಲಂ ಸಮ್ಯಕ್ ತದಾ ಸ ಲಭತೇऽಚಿರಾತ್ ॥೨೪॥

ಯಾವನು ಹಿರಿಯರ ಮಾತನ್ನು ಕೇಳಿ, ಕರ್ಮಗಳನ್ನು ಅದರ ಅನುಸಾರವಾಗಿ ಆಚರಿಸುವನೋ, ಆತನು ಆಗ ಕರ್ಮದ ಸರಿಯಾದ ಫಲವನ್ನು ಶೀಘ್ರವಾಗಿ ಹೊಂದುವನು.

ರಾಗಾತ್ ಕ್ರೋಧಾದ್ ಭಯಾಲ್ಲೋಭಾದ್ ಯೋऽರ್ಥಾನೀಹೇತ ಮಾನವಃ।
ಅನೀಶಶ್ಚಾವಮಾನೀ ಚ ಸ ಶೀಘ್ರಂ ಭ್ರಶ್ಯತೇ ಶ್ರಿಯಃ ॥೨೫॥

ಯಾವ ಮನುಷ್ಯನು ರಾಗದಿಂದಲೋ, ಕೋಪದಿಂದಲೋ, ಭಯದಿಂದಲೋ, ಲೋಭದಿಂದಲೋ ಅಭೀಷ್ಟವನ್ನು ಹೊಂದಲು ಬಯಸುವನೊ, ಆತನು (ಅದನ್ನು) ಹೊಂದದೇ ಅವಮಾನಕ್ಕೆ ಈಡಾಗುವನು ಮತ್ತು ಐಶ್ವರ್ಯದಿಂದ ಭ್ರಷ್ಟನಾಗುವನು.

ಸೋऽಯಂ ದುರ್ಯೋಧನೇನಾರ್ಥೋ ಲುಬ್ಧೇನಾದೀರ್ಘದರ್ಶಿನಾ ।
ಅಸಮರ್ಥಃ ಸಮಾರಬ್ಧೋ ಮೂಢತ್ವಾದವಿಚಿಂತಿತಃ ॥೨೬॥

ಲೋಭಿಯಾದ ದುರ್ಯೋಧನನು ಮುಂದಾಲೋಚನೆಯಿಲ್ಲದವನು. ಆ ಈ ಅಸಮರ್ಥನಾದ ದುರ್ಯೋಧನನು ಮೂರ್ಖನಾದ್ದರಿಂದ (ಯುಕ್ತಾಯುಕ್ತತೆಗಳನ್ನು) ವಿಚಾರಿಸದೆ ಕಾರ್ಯವನ್ನು (ಯುದ್ಧಕಾರ್ಯವನ್ನು) ಆರಂಭಿಸಿದನು.

ಹೀನಬುದ್ಧಿರನಾದೃತ್ಯ ಸಮ್ಮಂತ್ರ್ಯ ಸಾಧುಭಿಃ ಸಹ ।
ವಾರ್ಯಮಾಣೋಽಕರೋದ್ ವೈರಂ ಪಾಂಡವೈರ್ಗುಣವತ್ತರೈಃ ॥೨೭॥

ಬುದ್ಧಿಹೀನನಾದ ಆತನು ಮೂರ್ಖರ ಮಾತಿನಿಂದ (ತಿಳಿದವರ ಮಾತನ್ನು ಅನಾದರಿಸಿ), ತಿಳಿದವರು ತಡೆದರೂ ಗುಣವಂತರಾದ ಪಾಂಡುಪುತ್ರರೊಡನೆ ದ್ವೇಷವನ್ನು ಮಾಡಿದನು.

ಪೂರ್ವಮಪ್ಯತಿದುಃಶೀಲೋ ನ ದೈನ್ಯಂ ಕರ್ತುಮರ್ಹತಿ ।
ತಾವತ್ಯರ್ಥೇ ವಿಪನ್ನೇ ಹಿ ಮಿತ್ರಾಣಾಂ ನ ಕೃತಂ ವಚಃ ॥೨೮॥

ಹಿಂದೆಯೂ ಸಹ ದುಷ್ಟವರ್ತನೆಯವನು, (ಎಂದೂ) ಕಾರುಣ್ಯಕ್ಕೆ ಪಾತ್ರನಲ್ಲ, ಭಾರೀ ಅನರ್ಥವು ಒದಗಿದಾಗಲೂ ಸಹ ಹಿತೈಷಿಗಳ ಮಾತನ್ನೂ ಕೇಳುತ್ತಿರಲಿಲ್ಲ, (ಅದರಿಂದಲೇ ಇಂತಹ ಅನರ್ಥಕ್ಕೆ ಪಾತ್ರನಾದನು).

ಅನುವರ್ತಾಮಹೇ ಯತ್ ತು ಭಜಂತಃ ಪಾಪಪೂರುಷಮ್ ।
ಅಸ್ಮಾನಪ್ಯನಯಸ್ತಸ್ಮಾತ್ ಪ್ರಾಪ್ತೋಯಂ ದಾರುಣೋ ಮಹಾನ್ ॥೨೯॥

(ಇಂತಹ) ಪಾಪಿಯನ್ನು ಆಶ್ರಯಿಸಿ, (ಆತನ ಹಾದಿಯನ್ನೇ) ಅನುಸರಿಸಿದೆವು. ನಮ್ಮನ್ನೂ (ಆತನು ಅನೀತಿಯ ಹಾದಿಗೆ) ಸೆಳದು ತಂದನು. ಆದ್ದರಿಂದಲೇ ಈ ಭಾರೀ ಭೀಕರ ಅವಸ್ಥೆಯನ್ನು ಹೊಂದಿದೆವು.

ಅನೇನ ತು ಮಮಾದ್ಯಾಪಿ ವ್ಯಸನೇನೋಪಪಾದಿತಾ ।
ಬುದ್ಧಿಶ್ಚಿಂತಯತಃ ಕಿಂಚಿತ್ ಸ್ವಂ ಶ್ರೇಯೋ ನಾವಬುಧ್ಯತೇ ॥೩೦॥

ಈಗಲೂ ಸಹ ಈ ವ್ಯಸನದಿಂದ ಪೀಡಿತನಾಗಿ, ಬುದ್ಧಿಯಿಂದ ಆಲೋಚಿಸಿದರೂ ಸಹ ನಮಗೆ ಶ್ರೇಯಃಕರವಾದದ್ದು ಯಾವುದು ಎಂದು ತಿಳಿಯದಾಗಿದೆ.

ಮುಹ್ಯತಾ ತು ಮನುಷ್ಯೇಣ ಪ್ರಷ್ಟವ್ಯಾಃ ಸುಹೃದೋ ಬುಧಾಃ ।
ತತ್ರಾಸ್ಯ ಬುದ್ಧಿರ್ವಿನಯಸ್ತತ್ರ ಶ್ರೇಯಶ್ಚ ಪಶ್ಯತಿ ॥೩೧॥

ಮೋಹಗೊಂಡ ಮನುಜನು ಸ್ನೇಹಿತರಲ್ಲಿ, ಜ್ಞಾನಿಗಳಲ್ಲಿ (ಸಮಸ್ಯೆಯ ಪರಿಹಾರೋಪಾಯಕ್ಕಾಗಿ) ಪ್ರಶ್ನಿಸಬೇಕು. ಆಗ ಬುದ್ಧಿಯು ಶುದ್ಧವಾಗುವುದು, ನೀತಿಯು ಪ್ರಾಪ್ತವಾಗುವುದು. ಆಗ ಶ್ರೇಯಸ್ಸನ್ನು ಹೊಂದುವನು.

ತತೋಽಸ್ಯ ಮೂಲಂ ಕಾರ್ಯಾಣಾಂ ಬುದ್ಧ್ಯಾ ನಿಶ್ಚಿತ್ಯ ವೈ ಬುಧಾಃ ।
ತೇ ಸಂಸೃಷ್ಟಾ ಯಥಾ ಬ್ರೂಯುಸ್ತತ್ ಕರ್ತವ್ಯಂ ತಥಾ ಭವೇತ್ ॥೩೨॥

ಹೀಗೆ ಕೇಳಿದಾಗ ಅವರು ಕಾರ್ಯದ ಮೂಲವನ್ನು ಬುದ್ಧಿಯಿಂದ ವಿಮರ್ಶಿಸಿ, (ಹೀಗೆ ಮಾಡು ಎಂದು) ಹೇಳುವರು, (ಅವರು ಹೇಳಿದಂತೆ) ನಡೆದುಕೊಂಡಲ್ಲಿ ಕಾರ್ಯದ ಸಿದ್ಧಿಯು ಪ್ರಾಪ್ತವಾಗುವುದು.

ತೇ ವಯಂ ಧೃತರಾಷ್ಟ್ರಂ ಚ ಗಾಂಧಾರೀಂ ಚ ಯಶಸ್ವಿನೀಮ್ ।
ಉಪಪೃಚ್ಛಾಮಹೇ ಗತ್ವಾ ವಿದುರಂ ಚ ಮಹಾಮತಿಮ್ ॥೩೩॥

ಇಂತಹ ನಾವು ಕೀರ್ತಿವತಿಯಾದ ಗಾಂಧಾರಿ, ಧೃತರಾಷ್ಟ್ರ ಮಹಾಜ್ಞಾನಿಯಾದ ವಿದುರ ಇವರಲ್ಲಿ ಸಾಗಿ, ಚರ್ಚಿಸೋಣ.

ತೇ ಪೃಷ್ಟಾಸ್ತು ವದೇಯುರ್ಯತ್ ಶ್ರೇಯಸ್ಕರಮನಂತರಮ್ ।
ತದಸ್ಮಾಭಿಃ ಪುನಃ ಕಾರ್ಯಮಿತಿ ಮೇ ನೈಷ್ಠಿಕೀ ಮತಿಃ ॥೩೪॥

(ನಾವು) ಪ್ರಶ್ನಿಸಿದಲ್ಲಿ ಅವರು ಶ್ರೇಯಸ್ಕರವಾದದ್ದನ್ನು ತಿಳಿಸಿಯಾರು, ಅನಂತರದಲ್ಲಿ ನಾವು ಅದನ್ನು ಮಾಡುವುದು ಯುಕ್ತ ಎಂದು ನನ್ನ ನಿಶ್ಚಿತವಾದ ಬುದ್ಧಿ.

ಅನಾರಂಭಾತ್ತು ಕಾರ್ಯಾಣಾಂ ನಾರ್ಥಃ ಸಂಪದ್ಯತೇ ಕ್ವಚಿತ್ ॥೩೫॥

ಕೃತಃ ಪುರುಷಕಾರಸ್ತು ಯೇಷು ಕಾರ್ಯಂ ನ ಸಿದ್ಧ್ಯತಿ ।
ದೈವೇನೋಪಹತಾಸ್ತೇ ತು ನಾತ್ರ ಕಾರ್ಯಾ ವಿಚಾರಣಾ ॥೩೬॥

ಕಾರ್ಯವನ್ನು ಆರಂಭಿಸದೇ ಎಲ್ಲೂ ಅರ್ಥದ ಸಿದ್ಧಿಯು ಇಲ್ಲ, ಪುರುಷಪ್ರಯತ್ನ ಮಾಡಿಯೂ ಯಾರು ಸಿದ್ಧಿಯನ್ನು ಹೊಂದುವುದಿಲ್ಲವೋ, ಅವರು ಅದೃಷ್ಟಹೀನರು, ಆಗ ಚರ್ಚೆಗೆ ಅವಕಾಶವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸೌಪ್ತಿಕಪರ್ವಣಿ ಕೃಪವಾಕ್ಯಂ ನಾಮ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಕೃಪರ ಮಾತನ್ನು ಕೇಳಿದ ಅಶ್ವತ್ಥಾಮನು ಕೃಪ-ಕೃತವರ್ಮರಿಗೆ ತನ್ನ ಅಭಿಪ್ರಾಯವನ್ನು ತಿಳಿಸಿದನು.

ಸಂಜಯಃ

ಕೃಪಸ್ಯ ವಚನಂ ಶ್ರುತ್ವಾ ಧರ್ಮಾರ್ಥಸಹಿತಂ ಹಿತಮ್ ।
ಅಶ್ವತ್ಥಾಮಾ ಮಹಾರಾಜ ದುಃಖಶೋಕಸಮನ್ವಿತಃ ॥೧॥

ಸಂಜಯ– ಮಹಾರಾಜ! ಅಶ್ವತ್ಥಾಮನು ಹಿತಕರವಾದ, ಧರ್ಮಾರ್ಥಸಹಿತವಾದ ಕೃಪರ ಮಾತನ್ನು ಕೇಳಿ, ದುಃಖ-ಶೋಕಗಳಿಂದ ಕೂಡಿದವನಾದನು.

ದಹ್ಯಮಾನಶ್ಚ ಶೋಕೇನ ಪ್ರದೀಪ್ತೇನಾಗ್ನಿನಾ ಯಥಾ ।
ಕ್ರೂರಂ ಮನಸ್ತಥಾ ಕೃತ್ವಾ ತಾವುಭೌ ಪ್ರತ್ಯಭಾಷತ ॥೨॥

ಉರಿಯುವ ಬೆಂಕಿಯಿಂದ ದಹಿಸುವಂತೆ, ಶೋಕದಿಂದ ಪರಿತಪ್ತನಾದ ಅಶ್ವತ್ಥಾಮನು ಕ್ರೂರವಾದ ಮನವನ್ನು ಮಾಡಿ, ಆ ಈರ್ವರಿಗೆ (ಕೃಪ-ಕೃತವರ್ಮರಿಗೆ) ಉದ್ದೇಶಿಸಿ ಹೇಳಿದನು.

ದ್ರೌಣಿಃ

ಪುರುಷೇ ಪುರುಷೇ ಬುದ್ಧಿಃ ಸಾ ಸಾ ಭವತಿ ಶೋಭನಾ ।
ತುಷ್ಯಂತಿ ಚ ಪೃಥಕ್ ಸರ್ವೇ ಪ್ರಜ್ಞಯಾ ತು ಸ್ವಯಾ ಸ್ವಯಾ ॥೩॥

ಅಶ್ವತ್ಥಾಮ– ಪ್ರತಿ ಮನುಷ್ಯರು ತಮ್ಮಲ್ಲಿಯ ಆ ಆ ಬುದ್ಧಿಯು ಮಂಗಳವೆಂದೇ ತಿಳಿಯುವರು. ತಮ್ಮ ತಮ್ಮ ಬುದ್ಧಿಯಿಂದ ಎಲ್ಲರೂ ಸಂತಸಗೊಳ್ಳುವರು.

ಸರ್ವೋ ಹಿ ಮನ್ಯತೇ ಲೋಕ ಆತ್ಮಾನಂ ಬುದ್ಧಿಮತ್ತರಮ್ ।
ಸರ್ವಸ್ಯಾತ್ಮಾ ಬಹುಮತಃ ಸರ್ವೋ ತ್ಮಾನಂ ಪ್ರಶಂಸತಿ ॥೪॥

ಎಲ್ಲರೂ ತಮ್ಮನ್ನು 'ಅತಿಬುದ್ಧಿವಂತ' ಎಂದು ಭಾವಿಸುವರು. ಎಲ್ಲರೂ 'ತಾನು ದೊಡ್ಡವ' ಎಂದೇ ಭಾವಿಸುವರು, (ಅಂತೆಯೇ) ಎಲ್ಲರೂ ತಮ್ಮನ್ನು ಪ್ರಶಂಸಿಸಿಕೊಳ್ಳುವರು.

ಸರ್ವಸ್ಯ ತು ಸ್ವಕಾ ಪ್ರಜ್ಞಾ ಸಾಧುವಾದೇ ಪ್ರತಿಷ್ಠಿತಾ ।
ಪರಬುದ್ಧಿಂ ಚ ನಿಂದಂತಿ ಸ್ವಾಂ ಪ್ರಶಂಸಂತಿ ಚಾಸಕೃತ್ ॥೫॥

ಎಲ್ಲರೂ ತಮ್ಮ ವಿಚಾರವು ಸರಿ ಮಾರ್ಗದಲ್ಲಿದೆ ಎಂದು ಭಾವಿಸುವರು, ಅನ್ಯರ ಬುದ್ಧಿಯನ್ನು ನಿಂದಿಸುವರು, ತಮ್ಮನ್ನು ಮತ್ತೆ ಮತ್ತೆ ಹೊಗಳಿಕೊಳ್ಳುವರು.

ಕಾರಣಾಂತರಯೋಗೇನ ಯೇಷಾಂ ಸಂವದತೇ ಮತಿಃ ।
ತೇऽನ್ಯೋನ್ಯೇನ ಚ ತುಷ್ಯಂತಿ ಬಹುಮನ್ಯಂತಿ ಚಾಸಕೃತ್ ॥೬॥

ಕಾರಣಾಂತರದಿಂದ ಯಾರ ವಿಚಾರವು (ಇನ್ನೊಬ್ಬರ ವಿಚಾರದಿಂದ) ತಾಳೆ ಹೊಂದುವುದೊ, ಅವರು ಪರಸ್ಪರವಾಗಿ ಪ್ರಶಂಸಿಸಿಕೊಳ್ಳುವರು, ಮತ್ತೆ ಮತ್ತೆ ಹೆಮ್ಮೆಪಟ್ಟುಕೊಳ್ಳುವರು.

ತಸ್ಯೈವ ತು ಮನುಷ್ಯಸ್ಯ ಸಾ ಸಾ ಬುದ್ಧಿಸ್ತಥಾ ತಥಾ ।
ಕಾಲಯೋಗವಿಪರ್ಯಾಸಂ ಪ್ರಾಪ್ಯಾನ್ಯೋನ್ಯಂ ವಿಪದ್ಯತೇ ॥೭॥

ಆ ಎಲ್ಲ ಮನುಜರ ಬುದ್ಧಿಯೂ ಹಾಗೆ ಹಾಗೆ ಇರುವುದು, ಕಾಲದ ಮಹಿಮೆಯಿಂದ ವಿರುದ್ಧವಾದಾಗ ಪರಸ್ಪರ ನಾಶವನ್ನು ಹೊಂದುವರು.

ವಿಚಿತ್ರತ್ವಾತ್ತು ಚಿತ್ತಾನಾಂ ಮನುಷ್ಯಾಣಾಂ ವಿಶೇಷತಃ ।
ಚಿತ್ತವೈಕಲ್ಯಮಾಸಾದ್ಯ ಸಾ ಸಾ ಮತಿರಜಾಯತ ॥೮॥

ವಿಶೇಷವಾಗಿ ಮನುಜರ ಚಿತ್ತವು ವಿಚಿತ್ರ, ಬುದ್ಧಿಕಲುಷಿತಗೊಂಡಾಗ ಆ ಆ ಬುದ್ಧಿಯು ಉಂಟಾಗುವುದು.

ಯಥಾ ಹಿ ವೈದ್ಯಃ ಕುಶಲೋ ವ್ಯಾಧಿಂ ಜ್ಞಾತ್ವಾ ಯಥಾವಿಧಿ ।
ಭೇಷಜಂ ಕುರುತೇ ಯೋಗಾತ್ ಪ್ರಶಮಾರ್ಥಮಿಹಾಭಿಭೋ ॥೯॥

ಮಾನ್ಯರೆ! ಹೇಗೆ ವೈದ್ಯನು ಬುದ್ಧಿವಂತನಾದಲ್ಲಿ ರೋಗವನ್ನು ತಿಳಿದು ಯೋಗ್ಯವಾದ ಔಷಧವನ್ನು ಮಾಡುವನೋ, ಆಗ ಅದೃಷ್ಟದಿಂದ ಅದು ಶಮನಕ್ಕೆ ಕಾರಣವಾಗುವುದು.

ಏವಂ ಕಾರ್ಯಸ್ಯ ಯೋಗಾರ್ಥಂ ಬುದ್ಧಿಂ ಕುರ್ವಂತಿ ಮಾನವಾಃ ।
ಪ್ರಜ್ಞಯಾ ಚ ಸ್ವಯಾ ಯುಕ್ತ್ಯಾ ತಾಂ ಚ ಗೃಹ್ಣಂತಿ ವೈ ಬುಧಾಃ ॥೧೦॥

ಇದೇ ರೀತಿಯಲ್ಲಿ ಕಾರ್ಯದ ಸಿದ್ಧಿಗಾಗಿ ಮನುಷ್ಯರು ವಿಚಾರವನ್ನು ಮಾಡುವರು, ಜ್ಞಾನಿಗಳು ತಮ್ಮ ಸ್ವಂತ ಬುದ್ಧಿಯಿಂದ, ಯುಕ್ತಿಯಿಂದ ಆ ಸಿದ್ಧಿಯನ್ನು ಹೊಂದುವರು.

ಅನ್ಯಥಾ ಯೌವನೇ ಬಾಲ್ಯೇ ಬುದ್ಧ್ಯಾ ಭವತಿ ಮೋಹಿತಃ ।
ಮಧ್ಯೇऽನ್ಯಥಾ ಜರಾಯಾಂ ತು ಸೋऽನ್ಯಾಂ ರೋಚಯತೇ ಮತಿಮ್ ॥

ಮೋಹಿತನಾದ ಆತನಿಗೆ ಯೌವನಾವಸ್ಥೆಯಲ್ಲಿ (ಹೆಣ್ಣು ಹಣ ಮುಂತಾದವು) ಬೇರೆಯದೇ ರುಚಿಸುವುದು, ಬಾಲ್ಯದಲ್ಲಿ (ತಿಳಿವಳಿಕೆಯಿಲ್ಲದೇ ಶ್ರೆಯೋ ಮಾರ್ಗದಿಂದ) ಬೇರೆಯದೇ ರುಚಿಸುವುದು, ಮಧ್ಯಾವಸ್ಥೆಯಲ್ಲಿ ಬೇರೆ, ಮುಪ್ಪಿನಲ್ಲಿ ಬೇರೇ ವಿಚಾರವೇ ರುಚಿಸುವುದು.

ವ್ಯಸನಂ ವಾ ಮಹಾಘೋರಂ ಸಮೃದ್ಧಿಂ ವಾऽಪಿ ತಾದೃಶೀಮ್ ।
ಅವಾಪ್ಯ ಪುರುಷೋ ಭೋಜ ಕುರುತೇ ಬುದ್ಧಿವೈಕೃತಮ್ ॥೧೨॥

ಭೋಜಕುಲಜನೆ! ಘೋರವಾದ ಅನರ್ಥವನ್ನಾಗಲಿ, ಸಂಪತ್ತನ್ನಾಗಲಿ ಹೊಂದಿ, ಮನುಜನು ವಿಚಾರದಲ್ಲಿ ವೈಚಿತ್ರ್ಯವನ್ನು ಕಾಣುವನು.

ಏಕಸ್ಮಿನ್ನೇವ ಪುರುಷೇ ಸಾ ಸಾ ಬುದ್ಧಿಸ್ತಥಾ ತಥಾ ।
ಭವತ್ಯನಿತ್ಯಾ ಪ್ರಜ್ಞಾ ಹಿ ಸಾ ತಸ್ಯೈವ ನ ರೋಚತೇ ॥೧೩॥

ಒಬ್ಬನೇ ಮನುಜನಲ್ಲಿ ಆ ಆ ಬುದ್ಧಿಯು ಹಾಗೆ ಹಾಗೇ ಉಂಟಾಗುವುದು, ಅನಿತ್ಯವಾದ ಆತನ ವಿಚಾರವು (ಮತ್ತೊಂದು ಸಂದರ್ಭದಲ್ಲಿ) ಆತನಿಗೇ ರುಚಿಸುವುದಿಲ್ಲ.

ನಿಶ್ಚಿತ್ಯ ತು ತಥಾ ಪ್ರಾಜ್ಞಃ ಸ್ವಾಂ ಮತಿಂ ಸಾಧು ಪಶ್ಯತಿ ।
ತಸ್ಯಾಂ ಪ್ರಕುರುತೇ ಭಾವಂ ಸಾ ಚಾಸ್ಯೋದ್ಯೋಗಕಾರಿಕಾ ॥೧೪॥

ಪ್ರಾಜ್ಞನಾದರೋ ತನ್ನ ವಿಚಾರವನ್ನು (ಮಥಿಸಿ) ನಿಶ್ಚಯಿಸಿ, ಸರಿಯಾದ ಮಾರ್ಗವನ್ನು ಕಾಣುವನು. ಅಂತಹ ಮಾರ್ಗದಲ್ಲಿ ಭಾವವನ್ನು ಮಾಡುವನು, ಆ ಮತಿಯು ಆತನಿಗೆ ಸಿದ್ಧಿಕಾರಕವಾಗುವುದು.

ಸರ್ವೋ ಹಿ ಪುರುಷೋ ಭೋಜ ಸಾಧುರಿತ್ಯೇವ ನಿಶ್ಚಿತಃ ।
ಕರ್ತುಮಾರಭತೇ ಪ್ರೀತಿಂ ಮರಣಾದಿಷು ಕರ್ಮಸು ॥೧೫॥

ಭೋಜಕುಲಜನೆ! ಎಲ್ಲ ಮನುಜರು 'ಇದು ಸರಿಯಾದದ್ದು' ಎಂದು ನಿಶ್ಚಯಿಸಿಯೇ ಕೆಲಸವನ್ನು ಆರಂಭಿಸುವರು, (ಆದ್ದರಿಂದಲೇ) ಆತ್ಮಹತ್ಯೆ ಮುಂತಾದವುಗಳನ್ನು ಪ್ರೀತಿಸುವರು.

ಸರ್ವೋ ಹಿ ಯುಕ್ತಿಂ ವಿಜ್ಞಾಯ ಪ್ರಜ್ಞಾಂ ವಾऽಪಿ ಸ್ವಕಾಂ ನರಃ ।
ಚೇಷ್ಟತೇ ವಿವಿಧಾಂ ಚೇಷ್ಟಾಂ ಹಿತಮಿತ್ಯೇವ ಚಿಂತಯನ್ ॥೧೬॥

ಎಲ್ಲ ಮನುಜನೂ ತನ್ನ ಬುದ್ಧಿಯಿಂದ, ಯುಕ್ತಿಯಿಂದ ವಿಚಾರಿಸಿ, ಇದು ಹಿತ ಎಂದು ನಿಶ್ಚಯಿಸಿಯೇ ವಿವಿಧ ವ್ಯಾಪಾರಗಳನ್ನು ಮಾಡುವರು.

ಉಪಜಾತಾ ವ್ಯಸನಜಾ ಯೇಯಮದ್ಯ ಮತಿರ್ಮಮ ।
ಯುವಯೋಸ್ತಾಂ ಪ್ರವಕ್ಷ್ಯಾಮಿ ಸರ್ವೇಷಾಂ ಶೋಕನಾಶಿನೀಮ್ ॥೧೭॥

ನನ್ನ ದುಃಖವನ್ನು ನಾಶಗೊಳಿಸುವ ಯಾವ ಉಪಾಯವು ನನಗೆ ಈ ವ್ಯಸನಸಂದರ್ಭದಲ್ಲಿ ಪ್ರತಿಭಾತವಾಗಿದೆಯೋ ಎಲ್ಲರ ದುಃಖವನ್ನು ಶಮನಗೊಳಿಸುವ ಅದನ್ನು ನಿಮ್ಮೀರ್ವರಿಗೆ ತಿಳಿಸುವೆನು.

ಪ್ರಜಾಪತಿಃ ಪ್ರಜಾಃ ಸೃಷ್ಟ್ವಾ ಕರ್ಮ ತಾಸಾಂ ವಿಧಾಯ ಚ ।
ವರ್ಣೇ ವರ್ಣೇ ಸಮಾಧತ್ತ ಏಕೈಕಂ ಗುಣವತ್ತರಮ್ ॥೧೮॥

ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿ ಅವರಿಗೆ ಕರ್ಮಗಳನ್ನು ವಿಧಿಸಿರುವನು, ಪ್ರತಿವರ್ಣದವರಿಗೂ ಒಂದೊಂದು ಶ್ರೇಷ್ಠಗುಣವನ್ನು ನೀಡಿರುವನು.

ಬ್ರಾಹ್ಮಣೇ ದಮಮವ್ಯಗ್ರಂ ಕ್ಷತ್ರಿಯೇ ತೇಜ ಉತ್ತಮಮ್ ।
ದಾಕ್ಷ್ಯಂ ವೈಶ್ಯೇ ಚ ಶೂದ್ರೇ ಚ ಸರ್ವವರ್ಣಾನುಕೂಲತಾಮ್ ॥೧೯॥

ವಿಪ್ರರಿಗೆ ಏಕಾಗ್ರತೆಯನ್ನು, ಕ್ಷತ್ರಿಯರಿಗೆ ಶ್ರೇಷ್ಠವಾದ ತೇಜಸ್ಸನ್ನು, ವೈಶ್ಯರಿಗೆ ದಕ್ಷತೆಯನ್ನು, ಶೂದ್ರರಿಗೆ ಎಲ್ಲರಿಗೂ ಅನುವರ್ತಿಗಳಾಗಿರುವಿಕೆಯನ್ನು ನೀಡಿರುವನು.

ಅದಾಂತೋ ಬ್ರಾಹ್ಮಣೋಽಸಾಧುರ್ನಿಸ್ತೇಜಾಃ ಕ್ಷತ್ರಿಯೋ ಮೃತಃ ।
ಅದಕ್ಷೋ ನಿಂದ್ಯತೇ ವೈಶ್ಯಃ ಶೂದ್ರಶ್ಚ ಪ್ರತಿಕೂಲವಾನ್ ॥೨೦॥

ಇಂದ್ರಿಯ ನಿಗ್ರಹವಿಲ್ಲದ ಬ್ರಾಹ್ಮಣನು ದುಷ್ಟ, ಬಲಹೀನನಾದ ಕ್ಷತ್ರಿಯನು ಮೃತನಾದಂತೆ, ದಕ್ಷತೆಯು ಇಲ್ಲದ ವೈಶ್ಯನು ನಿಂದ್ಯ, ಹಾಗೆ ಪ್ರತಿಕೂಲನಾದ ಶೂದ್ರನೂ ನಿಂದ್ಯ.

ಸೋಽಸ್ಮಿ ಜಾತಃ ಕುಲೇ ಶ್ರೇಷ್ಠೇ ಬ್ರಾಹ್ಮಣೈರಭಿಪೂಜಿತೇ ।
ಮಂದಭಾಗ್ಯತಯಾಽಸ್ಮೀಮಂ ಕ್ಷತ್ರಧರ್ಮಮನುಷ್ಠಿತಃ ॥೨೧॥

ಬ್ರಾಹ್ಮಣರಿಂದ ಪೂಜಿತವಾದ ಶ್ರೇಷ್ಠ ಕುಲದಲ್ಲಿ ಜನ್ಮತಳೆದಿರುವೆನು. ಮಂದಭಾಗ್ಯನಾದುದರಿಂದ ಈ ಕ್ಷತ್ರಿಯ ಧರ್ಮವನ್ನು ಅನುಸರಿಸುತ್ತಿರುವೆ.

ಕ್ಷತ್ರಧರ್ಮಂ ವಿದಿತ್ವಾಽಹಂ ಯದಿ ಬ್ರಾಹ್ಮಣಸಂಶ್ರಿತಮ್ ।
ಪ್ರಕರಿಷ್ಯೇ ಮಹತ್ ಕರ್ಮ ನ ಮೇ ತತ್ ಸಾಧುಸಮ್ಮತಮ್ ॥೨೨॥

ಕ್ಷತ್ರಧರ್ಮವನ್ನು ತಿಳಿದ ನಾನು, ಒಂದು ವೇಳೆ ಬ್ರಾಹ್ಮಣ್ಯವನ್ನು ಆಶ್ರಯಿಸಿ, ಉತ್ತಮವಾದ ಕರ್ಮಗಳನ್ನು ಆಚರಿಸಿದರೂ ಆ ನನ್ನ ಕರ್ಮವು ಸಜ್ಜನರ ಮಾನ್ಯತೆಗೆ ಅರ್ಹವಾಗದು.

ಧಾರಯಿತ್ವಾ ಧನುರ್ದಿವ್ಯಂ ದಿವ್ಯಾನ್ಯಸ್ತ್ರಾಣಿ ಚಾಹವೇ ।
ಪಿತರಂ ನಿಹತಂ ದೃಷ್ಟ್ವಾ ಕಿಂ ನು ವಕ್ಷ್ಯಾಮಿ ಸಂಸದಿ ॥೨೩॥

ದಿವ್ಯವಾದ ಧನುಸ್ಸನ್ನು ಹೊಂದಿ, ದಿವ್ಯಾಸ್ತ್ರಗಳನ್ನು ಹೊಂದಿಯೂ ಯುದ್ಧದಲ್ಲಿ (ನನ್ನ) ತಂದೆಯು ಸಂಹೃತನಾದದ್ದನ್ನು ಕಂಡು (ಶತ್ರುಗಳಿಗೆ ಪ್ರತೀಕಾರವನ್ನು ಮಾಡದಿರುವ ನಾನು) ಜನಗಳ ಮುಂದೆ ಏನೆಂದು ಹೇಳಲಿ?

ಸೋಽಹಮದ್ಯ ಯಥಾಕಾಮಂ ಕ್ಷತ್ರಧರ್ಮಮವಾಪ್ಯ ಚ ।
ಯಾಸ್ಯಾಮಿ ಪದವೀಂ ರಾಜ್ಞಃ ಪಿತುಶ್ಚೈವ ಮಹಾದ್ಯುತೇಃ ॥೨೪॥

ಅಂತಹ ನಾನು ಈಗ ನನಗೆ ಸರಿತೋರಿದಂತೆ ಕ್ಷತ್ರಧರ್ಮವನ್ನೇ ಆಶ್ರಯಿಸಿ, ರಾಜನ (ದುರ್ಯೋಧನನ) ಮಹಾಕಾಂತಿಮಂತನಾದ ತಂದೆಯ ಸ್ಥಾನವನ್ನು (ಸ್ವರ್ಗವನ್ನು) ಸೇರುವೆನು.

ಅದ್ಯ ಸ್ವಪ್ಸ್ಯಂತಿ ಪಾಂಚಾಲಾ ವಿಶ್ವಸ್ತಾ ಜಿತಕಾಶಿನಃ ।
ವಿಮುಕ್ತಯುಗ್ಯಕವಚಾ ಹರ್ಷೇಣ ಚ ಸಮನ್ವಿತಾಃ ॥೨೫॥

ಈಗ ಗೆದ್ದಿರುವೆವು ಎಂಬ ವಿಶ್ವಾಸದಿಂದ, ಹರ್ಷದಿಂದ ಕೂಡಿದವರಾಗಿ, ಕುದುರೆಗಳನ್ನು ಕವಚಗಳನ್ನು ಕಳಚಿದವರಾಗಿ ಪಾಂಚಾಲರು ಮಲಗಿರುವರು.

ವಯಂ ಜಿತಾ ಮತಾಶ್ಚೈತೇ ಶ್ರಾಂತಾ ವ್ಯಾಯಾಮನೇನ ಚ ॥೨೬॥

ವ್ಯಾಯಾಮದಿಂದ ಬಳಲಿದ ಅವರು 'ನಾವು ಗೆದ್ದಿರುವೆವು' ಎಂದು ಭಾವಿಸಿರುವರು (ವ್ಯಾಯಾಮಾನಂ- ವ್ಯಾಯಾಮ).

ತೇಷಾಂ ನಿಶಿ ಪ್ರಸುಪ್ತಾನಾಂ ಸ್ವಸ್ಥಾನೇ ಶಿಬಿರೇ ಸ್ವಕೇ ।
ಅವಸ್ಕಂದಂ ಕರಿಷ್ಯಾಮಿ ಶಿಬಿರಸ್ಯಾತಿದುಷ್ಕರಮ್ ॥೨೭॥

ತಮ್ಮ ಶಿಬಿರದಲ್ಲಿ ತಮ್ಮ ತಮ್ಮ ಸ್ಥಾನಗಳಲ್ಲಿ ಮಲಗಿರುವ ಅವರ (ಪಾಂಚಾಲರ) ಶಿಬಿರದ ಮೇಲೆ ಅತಿ ಭಯಂಕರವಾದ ಆಕ್ರಮಣವನ್ನು ಮಾಡುವೆನು.

ತಾನವಸ್ಕಂದ್ಯ ಶಿಬಿರೇ ಪ್ರೇತಭೂತಾನಚೇತಸಃ ॥೨೮॥

ಎಚ್ಚರವಿರದ ಹೆಣದಂತಾಗಿರುವ (ಗಾಢನಿದ್ರೆಯಲ್ಲಿರುವ) ಅವರನ್ನು ಶಿಬಿರದಲ್ಲಿ ಆಕ್ರಮಿಸುವೆನು.

ಪಾಂಚಾಲೇಷು ಚರಿಷ್ಯಾಮಿ ಸೂದಯನ್ನದ್ಯ ಸಂಯುಗೇ ।
ಪಿನಾಕಪಾಣಿಃ ಸಂಕ್ರುದ್ಧಃ ಸ್ವಯಂ ರುದ್ರಃ ಪಶೂನಿವ ॥೨೯॥

ಶೂಲಪಾಣಿಯಾದ ಕ್ರುದ್ಧನಾದ ಸ್ವಯಂ ರುದ್ರದೇವನು ಪಶುಗಳನ್ನು ನಾಶಗೊಳಿಸಿದಂತೆ, ಪಾಂಚಾಲರ ಮಧ್ಯದಲ್ಲಿ , ಯುದ್ಧದಲ್ಲಿ ಸಂಹರಿಸುತ್ತಾ ತಿರುಗುವೆನು.

ಅದ್ಯಾಹಂ ಸರ್ವಪಾಂಚಾಲಾನ್ ನಿಕೃತ್ಯಾ ಚ ನಿಹತ್ಯ ಚ ।
ಅರ್ದಯಿಷ್ಯಾಮಿ ಸಂಕ್ರುದ್ಧೋ ರಣೇ ಪಾಂಡುಸುತಾಂಸ್ತಥಾ ॥೩೦॥

ಇಂದು ಕೋಪಗೊಂಡ ನಾನು ಕವಚದಿಂದ ರಣದಲ್ಲಿ ಎಲ್ಲ ಪಾಂಚಾಲರನ್ನು ಸಂಹರಿಸಿ, ಹಾಗೆಯೇ ಪಾಂಡವರ ಪುತ್ರರನ್ನು ನಾಶಗೊಳಿಸುವೆನು.

ಅದ್ಯಾಹಂ ಸರ್ವಪಾಂಚಾಲ್ಯೈಃ ಕೃತ್ವಾ ಭೂಮಿಂ ಶರೀರಿಣೀಮ್ ।
ಪ್ರಹೃತ್ಯೈಕೇನ ಶಸ್ತ್ರೇಣ ಭವಿಷ್ಯಾಮ್ಯನೃಣಃ ಪಿತುಃ ॥೩೧॥

ಒಂದೇ ಶಸ್ತ್ರದಿಂದ ಇಂದು ಎಲ್ಲ ಪಾಂಚಾಲರನ್ನು ಸಂಹರಿಸಿ, ಭೂಮಿಯನ್ನು ಶರೀರಧಾರಣೆಯನ್ನಾಗಿಸಿ, ತಂದೆಯ ಸಾಲದಿಂದ ಮುಕ್ತನಾಗುವೆನು.

ದುರ್ಯೋಧನಸ್ಯ ಕರ್ಣಸ್ಯ ಭೀಷ್ಮಸ್ಯೈಂಧವಯೋರಪಿ ।
ಗಮಯಿಷ್ಯಾಮಿ ಪಾಂಚಾಲಾನ್ ಪದವೀಮದ್ಯ ದುರ್ಗಮಾಮ್ ॥೩೨॥

ದುರ್ಯೋಧನನ, ಕರ್ಣನ, ಭೀಷ್ಮ, ಸೈಂಧವರ ದುರ್ಗಮವಾದ ಸ್ಥಾನಕ್ಕೆ ಪಾಂಚಾಲರನ್ನು ಇಂದು ಕಳುಹಿಸುವೆನು.

ಅದ್ಯ ಪಾಂಚಾಲರಾಜಸ್ಯ ಧೃಷ್ಟದ್ಯುಮ್ನಸ್ಯ ವೈ ನಿಶಿ ।
ವಿರಾತ್ರೇ ಪ್ರಮಥಿಷ್ಯಾಮಿ ಪಶೋರಿವ ಶಿರೋ ಬಲಾತ್ ॥೩೩॥

ಈಗ ಕತ್ತಲೆಯ ಮಧ್ಯರಾತ್ರಿಯಲ್ಲಿ ಪಾಂಚಾಲರಾಜನಾದ ಧೃಷ್ಟದ್ಯುಮ್ನನ ತಲೆಯನ್ನು (ಯಜ್ಞದ) ಪಶುವಿನ ತಲೆಯಂತೆ ಬಲವಾಗಿ ನಾಶಗೊಳಿಸುವೆನು.

ಅದ್ಯ ಪಾಂಚಾಲಪಾಂಡೂನಾಂ ಶಯಿತಾನಾಂ ಸುಖಂ ನಿಶಿ ।
ಖಡ್ಗೇನ ನಿಶಿತಾಗ್ರೇಣ ಪ್ರಮಥಿಷ್ಯಾಮಿ ಗೌತಮ ॥೩೪॥

ಗೌತಮಗೋತ್ರೋತ್ಪನ್ನನೆ! ರಾತ್ರಿಯಲ್ಲಿ ಸುಖವಾಗಿ ಮಲಗಿದ ಪಾಂಚಾಲರನ್ನು, ಪಾಂಡವರ ಪುತ್ರರನ್ನು ಇಂದು ಹರಿತವಾದ ಖಡ್ಗದಿಂದ ನಾಶಗೊಳಿಸುವೆನು.

ಅದ್ಯ ಪಾಂಚಾಲಸೇನಾಂ ತಾಂ ನಿಹತ್ಯ ನಿಶಿ ಸೌಪ್ತಿಕೇ ।
ಕೃತ್ಯಕೃತ್ಯಃ ಸುಖೀ ಚೈವ ಭವಿಷ್ಯಾಮಿ ಮಹಾಮತೇ ॥೩೫॥

ಮಹಾಜ್ಞಾನಿಯೆ! ರಾತ್ರಿಯಲ್ಲಿ ನಿದ್ರಿಸುತ್ತಿರುವ ಆ ಪಾಂಚಾಲರ ಸೇನೆಯನ್ನು ಇಂದು ನಾಶಗೊಳಿಸಿ ಕೃತಕೃತ್ಯನಾಗಿ ಸುಖಿಸುವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸೌಪ್ತಿಕಪರ್ವಣಿ ದ್ರೌಣಿನಾ ಪಾಂಚಾಲಹನನಂ ನಾಮ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಅಶ್ವತ್ಥಾಮ-ಕೃಪರ ಸಂವಾದ

ಕೃಪಃ

ದಿಷ್ಟ್ಯಾ ತೇ ಪ್ರತಿಕರ್ತವ್ಯೇ ಬುದ್ಧಿರ್ಜಾತೇಯಮಚ್ಯುತ ।
ನ ತ್ವಾಂ ವಾರಯಿತುಂ ಶಕ್ತೋ ವಜ್ರಪಾಣಿರಪಿ ಸ್ವಯಮ್ ॥೧॥

ಕೃಪ– ನಾಶರಹಿತನೆ! ನೋಡಿದೆಯಾ? ಪ್ರತೀಕಾರವನ್ನು ಮಾಡಬೇಕೆಂಬ ಈ ಬುದ್ಧಿಯು ಉಂಟಾಯಿತು. ಸ್ವತಃ ವಜ್ರಪಾಣಿಯೂ ನಿನ್ನನ್ನು ತಡೆಯಲು ಸಮರ್ಥನಲ್ಲ.

ಅನುಯಾಸ್ಯಾವಹೇ ತ್ವಾಂ ಹಿ ಪ್ರಭಾತೇ ಸಹಿತಾವುಭೌ ।
ಅದ್ಯ ರಾತ್ರೌ ವಿಶ್ರಮಸ್ವ ವಿಮುಕ್ತಕವಚಧ್ವಜಃ ॥೨॥

ಬೆಳಗಾದ ಮೇಲೆ ನಾವೀರ್ವರು ನಿನ್ನನ್ನು ಅನುಸರಿಸುವೆವು , ಈ ರಾತ್ರಿಯಲ್ಲಿ ಕವಚ ಚಿಹ್ನೆಗಳನ್ನು ಕಳಚಿ ವಿಶ್ರಮಿಸು.

ಅಹಂ ತ್ವಾಮನುಯಾಸ್ಯಾಮಿ ಕೃತವರ್ಮಾ ಚ ಸಾತ್ವತಃ ।
ಪರಾನಭಿಮುಖಂ ಯಾಂತಂ ರಥಮಾಸ್ಥಾಯ ದಂಸಿತೌ ॥೩॥

ಶತ್ರುಗಳನ್ನು ನಾಶಗೊಳಿಸಲು ರಥವನ್ನೇರಿ ಹೊರಟ ನಿನ್ನನ್ನು ಮುಂದೆ ಮಾಡಿಕೊಂಡು, ನಾನು ಮತ್ತು ಸಾತ್ವತಕುಲದಲ್ಲಿ ಉತ್ಪನ್ನನಾದ ಕೃತವರ್ಮನೂ ಅನುಸರಿಸುವೆವು.

ಆವಾಭ್ಯಾಂ ಸಹಿತಃ ಶತ್ರೂನ್ ಶ್ವೋ ನಿಹಂತಾ ಸಮಾಗಮೇ ।
ವಿಕ್ರಮ್ಯ ರಥಿನಾಂ ಶ್ರೇಷ್ಠ ಪಾಂಚಾಲಾನ್ ಸಪದಾನುಗಾನ್ ॥೪॥

ರಥಿಕರಲ್ಲಿ ಹಿರಿಯನೆ! ನಮ್ಮೀರ್ವರಿಂದ ಸಹಿತನಾದ ನೀನು ಶತ್ರುಗಳಾದ ಪರಿವಾರ ಸಹಿತರಾದ ಪಾಂಚಾಲರನ್ನು ಯುದ್ಧದಲ್ಲಿ ಗೆದ್ದು ನಾಳೆ ಸಂಹರಿಸುವವನಾಗು.

ಶಕ್ತಸ್ತ್ವಮಸಿ ವಿಕ್ರಮ್ಯ ವಿಶ್ರಮಸ್ವ ನಿಶಾಮಿಮಾಮ್ ।
ಚರಂಚರೇ ಜಾಗರಿತಂ ಸ್ವಪ ತಾತ ನಿಶಾಮಿಮಾಮ್ ॥೫॥

ಪುತ್ರನೆ! ಶತ್ರುಗಳನ್ನು ಜಯಿಸಲು ಸಮರ್ಥನಿರುವಿ, ಅತ್ತಇತ್ತ ತಿರುಗುತ್ತಾ ಈ ರಾತ್ರಿಯಿಲ್ಲ ಎಚ್ಚರದಿಂದಿರುವಿ, ಈ ರಾತ್ರಿಯಲ್ಲಿ ಮಲಗು.

ವಿಶ್ರಾಂತಶ್ಚ ಸನಿದ್ರಶ್ಚ ಸ್ವಸ್ಥಚಿತ್ತಶ್ಚ ಮಾನದ ।
ಸಮೇತ್ಯ ಸಮರೇ ಶತ್ರೂನ್ ವಧಿಷ್ಯಸಿ ನ ಸಂಶಯಃ ॥೬॥

ಸ್ವಾಭಿಮಾನಿಯೆ! ನಿದ್ರಿಸಿ ದಣಿವಾರಿಸಿಕೊ, ಮನಸಿಗೆ ಸ್ವಾಸ್ಥ್ಯವನ್ನು ಪಡಿ, ಯುದ್ಧದಲ್ಲಿ ಶತ್ರುಗಳನ್ನು ಸಂಧಿಸಿ ಸಂಹರಿಸುವಿ, ಇದಕ್ಕೆ ಸಂಶಯವಿಲ್ಲ.

ನ ಹಿ ತ್ವಾಂ ರಥಿನಾಂ ಶ್ರೇಷ್ಠಂ ಪ್ರಗೃಹೀತವರಾಯುಧಮ್ ।
ಜೇತುಮುತ್ಸಹತೇ ಕಶ್ಚಿದ್ ದಿವಿ ದೇವೇಷು ಪಾವಕಿಃ ॥೭॥

ಶ್ರೇಷ್ಠವಾದ ಆಯುಧವನ್ನು ಧರಿಸಿದ, ರಥಿಕರಲ್ಲಿ ಹಿರಿಯನಾದ ನಿನ್ನನ್ನು, ಸ್ವರ್ಗದಲ್ಲಿರುವ ದೇವತೆಗಳಲ್ಲಿ ಯಾವ ಅಗ್ನಿಯೂ ಗೆಲ್ಲಲು ಉತ್ಸಾಹವನ್ನು ತೋರಲಾರನು.

ಕೃಪೇಣ ಸಹಿತಂ ಯಾಂತಂ ಯುಕ್ತಂ ವೈ ಕೃತವರ್ಮಣಾ ।
ಕೋ ದ್ರೌಣಿಂ ಯುಧಿ ಸಂರಬ್ಧಂ ಯೋಧಯೇದಪಿ ದೇವರಾಟ್ ॥೮॥

ಕೃಪನಿಂದ ಸಹಿತನಾದ, ಕೃತವರ್ಮನಿಂದ ಯುಕ್ತನಾದ ದ್ರೋಣಪುತ್ರನಿಂದ ಪ್ರಾರಂಭವಾದ ಯುದ್ಧದಲ್ಲಿ ಯಾವ ದೇವತೆಗಳ ರಾಜನು ಜೊತೆಗೆ ಕಾದಾಡಲು ಸಮರ್ಥನಾಗುವನು?

ತೇ ವಯಂ ಪರಿವಿಶ್ರಾಂತಾಃ ಸನಿದ್ರಾ ವಿಗತಜ್ವರಾಃ ।
ಪ್ರಭಾತಾಯಾಂ ರಜನ್ಯಾಂ ತು ನಿಹನಿಷ್ಯಾಮ ಶಾತ್ರವಾನ್ ॥೯॥

ಈಗ ನಾವು ಬಳಲಿರುವೆವು, ರಾತ್ರಿಯಲ್ಲಿ ನಿದ್ರೆಯಿಂದ ಆಯಾಸದಿಂದ ದೂರವಾಗೋಣ, ಬೆಳಗಿನಲ್ಲಿ ಶತ್ರುಗಳನ್ನು ಸಂಹರಿಸೋಣ.

ತವ ಹ್ಯಸ್ತ್ರಾಣಿ ದಿವ್ಯಾನಿ ಮಮ ಚೈವ ನ ಸಂಶಯಃ ।
ಸಾತ್ವತೋऽಪಿ ಮಹೇಷ್ವಾಸೋ ನಿತ್ಯಂ ಯುದ್ಧೇಷು ಕೋವಿದಃ ॥೧೦॥

ನಿನ್ನಲ್ಲಿ ದಿವ್ಯವಾದ ಅಸ್ತ್ರಗಳಿವೆ, ನನ್ನಲ್ಲಿಯೂ ಇವೆ, ಸಂದೇಹವಿಲ್ಲ. ಯುದ್ಧದಲ್ಲಿ ಎಂದೂ ನಿಪುಣನಾದ ಸಾತ್ವತಕುಲೋತ್ಪನ್ನನೂ ಸಹ (ಕೃತವರ್ಮನೂ) ಒಳ್ಳೆಯ ಬಿಲ್ಲಾಳು.

ತೇ ವಯಂ ಸಹಿತಾಸ್ತಾತ ಸರ್ವಾನ್ ಶತ್ರೂನ್ ಸಮಾಗತಾನ್ ।
ಪ್ರಸಹ್ಯ ಸಮರೇ ಹತ್ವಾ ಪ್ರೀತಿಂ ಯಾಸ್ಯಾಮ ಪುಷ್ಕಲಾಮ್ ॥೧೧॥

ಪುತ್ರನೆ! ಒಟ್ಟಾದ ಆ ನಾವು ಎದುರಾದ ಎಲ್ಲ ಶತ್ರುಗಳನ್ನು ಯುದ್ಧದಲ್ಲಿ ಹಿಡಿದು ಸಂಹರಿಸಿ, ಪೂರ್ಣ ಸಂತಸವನ್ನು ಹೊಂದೋಣ.

ವಿಶ್ರಮಸ್ವ ತ್ವಮಪ್ಯದ್ಯ ಸ್ವಪ ಚೇಮಾಂ ನಿಶಾಂ ಸುಖಮ್ ॥೧೨॥

ನೀನೂ ಸಹ ಈಗ ಈ ರಾತ್ರಿಯಲ್ಲಿ ಸುಖವಾಗಿ ಮಲಗಿ ವಿಶ್ರಾಂತಿಯನ್ನು ಪಡೆ.

ಅಹಂ ಚ ಕೃತವರ್ಮಾ ಚ ಪ್ರಭಾತೇ ತ್ವಾಂ ನರೋತ್ತಮ ।
ಅನುಯಾಸ್ಯಾವ ಸಹಿತೌ ಧನ್ವಿನೌ ಪರತಾಪನೌ ॥೧೩॥

ರಥಿನಂ ತರಸಾ ಯಾಂತಂ ರಥಾವಾಸ್ಥಾಯ ದಂಸಿತೌ ॥೧೪॥

ನರಶ್ರೇಷ್ಠನೆ! ಬೆಳಗಿನಲ್ಲಿ ರಥದಲ್ಲಿ ಕುಳಿತುಕೊಂಡು ವೇಗವಾಗಿ ಸಾಗುತ್ತಿರುವ ರಥಿಕನಾದ ನಿನ್ನನ್ನು, ಶತ್ರುತಾಪಕರಾದ ಧನುರ್ಧಾರಿಗಳಾದ, ತುಟಿಯನ್ನು ಕಚ್ಚಿರುವ ನಾನು ಮತ್ತು ಕೃತವರ್ಮನು ಸೇರಿಕೊಂಡು ನಿನ್ನನ್ನು ಅನುಸರಿಸುತ್ತೇವೆ.

ಸ ಗತ್ವಾ ಶಿಬಿರಂ ತೇಷಾಂ ನಾಮ ವಿಶ್ರಾವ್ಯ ಚಾಹವೇ ।
ತತಃ ಕರ್ತಾಸಿ ಶತ್ರೂಣಾಂ ಯುಧ್ಯತಾಂ ಕದನಂ ಮಹತ್ ॥೧೫॥

ಅಂತಹ ನೀನು ಅವರ (ಪಾಂಡವರ) ಶಿಬಿರಕ್ಕೆ ಹೋಗಿ, ಯುದ್ಧದಲ್ಲಿ (ನಿನ್ನ) ಹೆಸರನ್ನು ಉದ್ಘೋಷಿಸಿ, ಆನಂತರದಲ್ಲಿ ಹೋರಾಡುವ ಶತ್ರುಗಳೊಡನೆ ಭಾರೀ ಯುದ್ಧವನ್ನು ಮಾಡುವವನಾಗು.

ಕೃತ್ವಾ ಚ ಕದನಂ ತೇಷಾಂ ಪ್ರಭಾತೇ ವಿಮಲೇऽಹನಿ ।
ವಿಹರಸ್ವ ಯಥಾ ಶಕ್ರಃ ಸೂದಯಿತ್ವಾ ಮಹಾರಥಾನ್ ॥೧೬॥

ಪ್ರಾತಃಕಾಲದಲ್ಲಿ ನಿರ್ಮಲವಾದ ಬೆಳಕಿನಲ್ಲಿ ಅವರೊಡನೆ ಯುದ್ಧವನ್ನು ಮಾಡಿ, ಮಹಾರಥಿಕರನ್ನು ಸಂಹರಿಸಿ, ಇಂದ್ರನಂತೆ (ಯುದ್ಧದಲ್ಲಿ) ವಿಹರಿಸು.

ತ್ವಂ ಹಿ ಶಕ್ತೋ ರಣೇ ಜೇತುಂ ಪಾಂಚಾಲಾನಾಂ ವರೂಥಿನೀಮ್ ।
ದೈತ್ಯಸೇನಾಮಿವ ಕ್ರುದ್ಧಃ ಸರ್ವದಾನವಸೂದನಃ ॥೧೭॥

ಕೋಪಗೊಂಡ, ಎಲ್ಲ ದೈತ್ಯರ ನಾಶಕನಾದ ಇಂದ್ರನು ದೈತ್ಯರ ಸೇನೆಯನ್ನು ಜಯಿಸಲು ಹೇಗೆ ಸಮರ್ಥನೊ, ಹಾಗೆ ನೀನೂ ಸಹ ಪಾಂಚಾಲರ ಭಾರೀ ಸೇನೆಯನ್ನು ಜಯಿಸಲು ಸಮರ್ಥನಿರುವಿ.

ಮಯಾ ತ್ವಾಂ ಸಹಿತಂ ಸಂಖ್ಯೇ ಗುಪ್ತಂ ಚ ಕೃತವರ್ಮಣಾ ।
ನ ಸಹೇತ ವಿಭುಃ ಸಾಕ್ಷಾದ್ ವಜ್ರಪಾಣಿರಪಿ ಸ್ವಯಮ್ ॥೧೮॥

ನನ್ನಿಂದ ಒಡಗೂಡಿದ, ಕೃತವರ್ಮನಿಂದ ರಕ್ಷಿತನಾದ ನಿನ್ನನ್ನು ಯುದ್ಧದಲ್ಲಿ ಸ್ವತಃ ವಜ್ರಪಾಣಿಯಾದ ಪ್ರಭುವಾದ ಸಾಕ್ಷಾತ್ ಇಂದ್ರನೂ ಎದುರಿಸಲಾರನು.

ನ ಚಾಹಂ ಸಮರೇ ತಾತ ಕೃತವರ್ಮಾ ತಥೈವ ಚ ।
ಅನಿರ್ಜಿತ್ಯ ರಣೇ ಪಾಂಡೂನ್ ಅಪಯಾಸ್ಯಾಮ ಕರ್ಹಿಚಿತ್ ॥೧೯॥

ಪುತ್ರನೆ! ನಾನಾಗಲಿ, ಕೃತವರ್ಮನಾಗಲಿ ಯುದ್ಧದಲ್ಲಿ ಎಂದೂ ಪಾಂಡವರನ್ನು ಸೋಲಿಸದೆ ಹಿಂದಿರುಗಿರುವುದಿಲ್ಲ.

ಹತ್ವಾ ಚ ಸಮರೇ ಕ್ಷುದ್ರಾನ್ ಪಾಂಚಾಲಾನ್ ಸಹ ಪಾಂಡವೈಃ ।
ನಿವರ್ತಯಿಷ್ಯಾಮಹೇ ಸರ್ವೇ ಹತಾ ವಾ ಸ್ವರ್ಗಗಾ ವಯಮ್ ॥೨೦॥

ಪಾಂಡವರಿಂದ ಕೂಡಿರುವ ಕ್ಷುದ್ರರಾದ ಪಾಂಚಾಲರನ್ನು ಯುದ್ಧದಲ್ಲಿ ಸಂಹರಿಸಿಯೇ ಹಿಂದಿರುಗೋಣ ಅಥವಾ ಎಲ್ಲರೂ (ನಾವು) ಮೃತರಾದಲ್ಲಿ ಸ್ವರ್ಗವನ್ನಾದರೂ ಸೇರೋಣ.

ಸರ್ವೋಪಾಯಸಹಾಯಾಸ್ತೇ ಪ್ರಭಾತೇ ವಯಮಾಹವೇ ।
ಸತ್ಯಮೇತನ್ಮಹಾಬಾಹೋ ಪ್ರಬ್ರವೀಮಿ ತವಾನಘ ॥೨೧॥

ಪಾಪರಹಿತನೆ! ನಾವು ನಿನಗೆ ಬೆಳಗಿನಲ್ಲಿ ಯುದ್ಧದಲ್ಲಿ ಎಲ್ಲ ವಿಧದಿಂದಲೂ ಸಹಕರಿಸುವೆವು. ನೀಳ ಬಾಹುವೆ! ನಿನಗೆ ಸತ್ಯವನ್ನೇ ಹೇಳುತ್ತಿರುವೆನು.

ಸಂಜಯಃ

ಏವಮುಕ್ತಸ್ತತೋ ದ್ರೌಣಿರ್ಮಾತುಲೇನ ಹಿತಂ ವಚಃ ।
ಅಬ್ರವೀನ್ಮಾತುಲಂ ರಾಜನ್ ಕ್ರೋಧಾದುದ್ವೃತ್ಯ ಲೋಚನೇ ॥೨೨॥

ಸಂಜಯ– ರಾಜನೆ! ಅನಂತರದಲ್ಲಿ ಈರೀತಿಯಾಗಿ ಸೋದರಮಾವನಿಂದ ಹಿತಕಾರಕ ಮಾತುಗಳ ಉಪದೇಶವನ್ನು ಕೇಳಿದ ದ್ರೋಣಪುತ್ರನು ಕ್ರೋಧದಿಂದ ಕಣ್ಣುಗಳನ್ನು ಸುತ್ತಿಸುತ್ತಾ (ತನ್ನ) ಸೋದರಮಾವನನ್ನು ಉದ್ದೇಶಿಸಿ ಹೇಳಿದನು.

ದ್ರೌಣಿಃ

ಆತುರಸ್ಯ ಕುತೋ ನಿದ್ರಾ ನರಸ್ಯಾಮರ್ಷಿತಸ್ಯ ವಾ ।
ಅರ್ಥಾಂಶ್ಚಿಂತಯತಶ್ಚಾಪಿ ಕಾಮಯಾನಸ್ಯ ವಾ ಪುನಃ ॥೨೩॥

ಅಶ್ವತ್ಥಾಮ– ಮರಣ ಸನ್ನಿಹಿತನಾದ ಮನುಷ್ಯನಿಗೆ ಅಥವಾ ಕ್ರೋಧಾವಿಷ್ಟನಾದವಗೆ, ಸಂಪತ್ತನ್ನು ಕಳೆದುಕೊಂಡು ಚಿಂತಿತನಾದವಗೂ ಸಹ, ಮತ್ತೆ (ಪ್ರೇಯಸಿಯನ್ನು) ಬಯಸುವವಗೆ ಎಲ್ಲಿಂದ ನಿದ್ರೆ?

ತದಿದಂ ಸಮನುಪ್ರಾಪ್ತಂ ಪಶ್ಯ ಮೇಽದ್ಯ ಚತುಷ್ಟಯಮ್ ।
ಯಸ್ಯ ಭಾಗಶ್ಚತುರ್ಥೋ ವೈ ಸ್ವಪ್ನಮಹ್ನಾಯ ನಾಶಯೇತ್ ॥೨೪॥

ನೋಡು, ಈ ನಾಲ್ಕರಲ್ಲಿ ಯಾವ ಒಂದೂ ಸಹ ಕೂಡಲೇ ನಿದ್ರೆಯನ್ನು ನಾಶಗೊಳಿಸುವುದೋ, ಆ ಈ ನಾಲ್ಕೂ ಸಹ ಈಗ ನನಗೆ ಬಂದೊದಗಿದೆ.

ಕಿಂ ನಾಮ ದುಃಖಂ ಲೋಕೇಽಸ್ಮಿನ್ ಪಿತುರ್ವಧಮನುಸ್ಮರನ್ ।
ಹೃದಯಂ ನಿಹತಂ ಯನ್ಮೇ ರಾತ್ರ್ಯಹಾನಿ ನ ಶಾಮ್ಯತಿ ॥೨೫॥

ಈ ಲೋಕದಲ್ಲಿ ತಂದೆಯ ಸಂಹಾರವನ್ನು ಸ್ಮರಿಸುತ್ತಿರುವ ವ್ಯಕ್ತಿಯ ದುಃಖ ಎಂತಹದು? ಯಾವ ದುಃಖವು ನನ್ನ ಹೃದಯದಲ್ಲಿ ಇದ್ದು ಹಗಲೂ ರಾತ್ರಿಯಲ್ಲಿ (ದಹಿಸುತ್ತಿದೆ, ಇನ್ನೂ) ಶಮನವಾಗಿಲ್ಲ.

ಯಥಾ ಚ ನಿಹತಃ ಪಾಪೈಃ ಪಿತಾ ಮಮ ವಿಶೇಷತಃ ।
ಪ್ರತ್ಯಕ್ಷಮಪಿ ತೇ ಸರ್ವಂ ತನ್ಮೇ ಮರ್ಮಾಣಿ ಕೃಂತತಿ ॥೨೬॥

ನನ್ನ ತಂದೆಯು ಪಾಪಿಗಳಿಂದ ಹೇಗೆ ನಿಹತನಾದನು, ಅದೂ ವಿಶೇಷವಾಗಿ ನಿನ್ನ ಸಮಕ್ಷಮದಲ್ಲಿಯೇ, ಈ ಎಲ್ಲವೂ ನನ್ನ ಮರ್ಮವನ್ನು ಕತ್ತರಿಸುತ್ತಿವೆ.

ಕಥಂ ಹಿ ಮಾದೃಶೋ ಲೋಕೇ ಮುಹೂರ್ತಮಪಿ ಜೀವತಿ ।
ದ್ರೋಣಹಂತೇತಿ ಯದ್ವಾಚಃ ಪಾಂಚಾಲಾನಾಂ ಶೃಣೋಮ್ಯಹಮ್ ॥

'(ಈತನು) ದ್ರೋಣಹಂತಕ' ಎಂಬ ಪಾಂಚಾಲರ ಮಾತನ್ನು ಕೇಳಿದವನಾಗಿ, ನನ್ನಂಥವನು (ಪರಾಕ್ರಮಶಾಲಿಯು) ಈ ಲೊಕದಲ್ಲಿ ಒಂದು ಮೂಹೂರ್ತವಾದರೂ ಹೇಗೆ ತಾನೆ ಬದುಕಲಾದೀತು?

ಧೃಷ್ಟದ್ಯುಮ್ನಮಹತ್ವಾऽऽಜೌ ನಾಹಂ ಜೀವಿತುಮುತ್ಸಹೇ ।
ಸ ಮೇ ಪಿತುರ್ವಧಾದ್ವಧ್ಯಃ ಪಾಂಚಾಲಾ ಯೇ ಚ ಸಂಗತಾಃ ॥೨೮॥

ಧೃಷ್ಟದ್ಯುಮ್ನನನ್ನು ಯುದ್ಧದಲ್ಲಿ ಸಂಹರಿಸದೆ ನಾನು ಬದುಕಲು ಇಚ್ಛಿಸುವದಿಲ್ಲ. ಆತನು (ಧೃಷ್ಟದ್ಯುಮ್ನನು) ನನ್ನ ತಂದೆಯನ್ನು ಸಂಹರಿಸಿದ್ದರಿಂದ, ಆತನು ನನ್ನಿಂದ ವಧ್ಯನಾಗಿರುವನು, ಹಾಗೆಯೇ ಆತನೊಡನೆ ಸಹಕರಿಸಿದ ಎಲ್ಲ ಪಾಂಚಾಲರೂ ಸಹ.

ವಿಲಾಪೋ ಭಗ್ನಸಕ್ಥಸ್ಯ ಯಸ್ತು ರಾಜ್ಞೋ ಮಯಾ ಶ್ರುತಃ ।
ಸ ಪುನರ್ಹೃದಯಂ ಕಸ್ಯ ಕ್ರೂರಸ್ಯಾಪಿ ನ ನಿರ್ದಹೇತ್ ॥೨೯॥

ತೊಡೆಮುರಿದುಕೊಂಡ ರಾಜನ (ದುರ್ಯೋಧನನ) ರೋದನವನ್ನು ನಾನು ಕೇಳಿರುವೆನು. ಯಾವ ಕಠೋರಿಯ ಹೃದಯವು (ಆ ರೋದನದಿಂದ) ದಹಿಸದೇ ಇದ್ದೀತು?

ಕಸ್ಯ ನಾಕರುಣಸ್ಯಾಪಿ ನೇತ್ರಾಭ್ಯಾಮಾಸ್ರಮಾಸ್ರವೇತ್ ।
ನೃಪತೇರ್ಭಿನ್ನಸಕ್ಥಸ್ಯ ಶ್ರುತ್ವಾ ತಾದೃಗ್ವಚಃ ಪುನಃ ॥೩೦॥

ತೊಡೆಮುರಿದುಕೊಂಡ ರಾಜನ ಅಂತಹ ಮಾತುಗಳನ್ನು ಕೇಳಿ, ಯಾವ ನಿಷ್ಠುರಿಯ ಕಣ್ಣಲ್ಲಿ ನೀರೂರದೆ ಇದ್ದೀತು?

ಅಯಂ ಚ ಮಿತ್ರಪಕ್ಷೋ ಮೇ ಮಯಿ ಜೀವತಿ ನಿರ್ಜಿತಃ ।
ಶೋಕಂ ಮೇ ವರ್ಧಯತ್ಯೇಷ ವಾರಿವೇಗ ಇವಾರ್ಣವಮ್ ॥೩೧॥

'ನನ್ನ ಮಿತ್ರನ ಪಕ್ಷವು ನಾನು ಬದುಕಿರುವಾಗಲೇ ಸೋತಿತು' ಇದೂ ಸಹ, ನೀರಿನ ಪ್ರವಾಹವು ಸಮುದ್ರವನ್ನು ಹೆಚ್ಚಿಸುವಂತೆ ನನ್ನ ಶೋಕವನ್ನು ಹೆಚ್ಚಿಸುತ್ತಿದೆ.

ಅನೇಕಾಗ್ರಸ್ಯ ಮೇ ತಸ್ಯ ಕುತೋ ನಿದ್ರಾ ಕುತಃಸುಖಮ್ ॥೩೨॥

ಒಂದೆಡೆ ಮನನಿಲ್ಲದ ಆ ನನಗೆ ಎಲ್ಲಿಯ ನಿದ್ರೆ, ಎಲ್ಲಿಯ ಸುಖ?

ವಾಸುದೇವಾರ್ಜುನಾಭ್ಯಾಂ ಹಿ ತಾನಹಂ ಪರಿರಕ್ಷಿತಾನ್ ।
ಅವಿಷಹ್ಯತಮಾನ್ ಮನ್ಯೇ ಮಹೇಂದ್ರೇಣಾಪಿ ಮಾತುಲ ॥೩೩॥

ಸೋದರಮಾವ! 'ಕೃಷ್ಣ,ಅರ್ಜುನರಿಂದ ಸಂರಕ್ಷಿತರಾದ ಅವರು (ಪಾಂಚಾಲರು) ಮಹೇಂದ್ರನಿಂದಲೂ ಸೋಲನ್ನು ಕಾಣಲಾರರು' ಎಂದು ನಾನು ತಿಳಿದಿರುವೆ.

ನ ಚಾಸ್ಮಿ ಶಕ್ಯಃ ಸಂಯಂತುಮಸ್ಮಾತ್ ಕಾರ್ಯಾತ್ ಕಥಂಚನ ।
ತಂ ನಪಶ್ಯಾಮಿ ಲೋಕೇ ಮಾಂ ಯೋಽಸ್ಮಾತ್ಕಾರ್ಯಾದ್ ವಿಚಾಲಯೇತ್ ॥೩೪॥

(ಆದರೆ ನಾನು) ಈ ಕಾರ್ಯದಿಂದ ಯಾವುದೇ ಕಾರಣದಿಂದಲೂ ವಿಮುಖನಾಗಲೂ ಶಕ್ಯವಿಲ್ಲ. ನನ್ನನ್ನು ಈ ಕಾರ್ಯದಿಂದ ವಿಮುಖನನ್ನಾಗಿಸುವ ಅಂತಹ ಯಾವ ವ್ಯಕ್ತಿಯನ್ನೂ ನಾನು ಈ ಲೋಕದಲ್ಲಿ ಕಾಣುತ್ತಿಲ್ಲ.

ಇತಿ ಮೇ ನಿಶ್ಚಿತಾ ಬುದ್ಧಿರೇಷಾ ಸಾಧುತಮಾ ಚ ಮೇ ॥೩೫॥

ಈ ರೀತಿಯಾಗಿ ನನ್ನ ವಿಚಾರವು ನಿಶ್ಚಿತವಾಗಿದೆ, ನನಗೆ ಇದೇ ಸರಿಯಾದದ್ದು ಎಂದು ತೋರುತ್ತಿದೆ.

ವಾದಿಕೈಃ ಕಥ್ಯಮಾನಸ್ತು ಮಿತ್ರಾಣಾಂ ಮೇ ಪರಾಭವಃ ।
ಪಾಂಡವಾನಾಂ ಚ ವಿಜಯೋ ಹೃದಯಂ ದಹತೀವ ಮೇ ॥೩೬॥

ನನ್ನ ಮಿತ್ರರು ಸೋತರು, ಪಾಂಡವರು ಗೆದ್ದರು ಎಂದು ಸುದ್ದಿಗಾರರು ಹೇಳುತ್ತಿರಲಾಗಿ ನನ್ನ ಹೃದಯವನ್ನು ಸುಟ್ಟಂತಾಯಿತು.

ಅಹಂ ತು ಕದನಂ ಕೃತ್ವಾ ಶತ್ರೂಣಾಮದ್ಯ ಸೌಪ್ತಿಕೇ ।
ತತೋ ವಿಶ್ರಮಿತಾ ಚೈವ ಸ್ವಪ್ತಾ ಚ ವಿಗತಜ್ವರಃ ॥೩೭॥

ನಾನಂತು ಈಗಲೆ ಯುದ್ಧವನ್ನು ಮಾಡಿ, ಸುಪ್ತಿಯಲ್ಲಿರುವಾಗಲೇ ಶತ್ರುಗಳನ್ನು ಸಂಹರಿಸಿ, ತದನಂತರದಲ್ಲಿ ಉದ್ವೇಗವನ್ನು ಪರಿಹರಿಸಿಕೊಂಡು ಮಲಗುವೆನು, ವಿಶ್ರಾಂತಿಯನ್ನು ಹೊಂದುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸೌಪ್ತಿಕಪರ್ವಣಿ ಅಶ್ವತ್ಥಾಮಕೃಪಸಂವಾದೋ ನಾಮ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯಃ

ಅನುಜಗ್ಮತುಸ್ತಾವಪಿ ತಂ ಶಿಬಿರದ್ವಾರಿ ಚೈಕ್ಷತ ।
ಉಗ್ರರೂಪಧರಂ ರುದ್ರ ಸ್ವಕೀಯಾಂ ತನುಮೇವ ಸಃ ॥

ಕೃಪ ಕೃತವರ್ಮರೂ ಅಶ್ವತ್ಥಾಮನನ್ನು ಹಿಂಬಾಲಿಸಿದರು. ಅಶ್ವತ್ಥಾಮನು ಶಿಬಿರದ ದ್ವಾರದಲ್ಲಿ ತನ್ನ ಸ್ವರೂಪನೇ ಆದ ರುದ್ರನನ್ನು ಕಂಡನು.

★ ★ ★ ★ ★

ಐದನೆಯ ಅಧ್ಯಾಯ

ಮಲಗಿದವರನ್ನು ಸಂಹರಿಸುವುದು ಅಧರ್ಮ ಎಂದು ಕೃಪರು ತಿಳಿಹೇಳಿದರೂ, ತಂದೆಯ ಮರಣದಿಂದ ಕುಪಿತನಾದ ಅಶ್ವತ್ಥಾಮನು ಶತ್ರುಗಳನ್ನು ಸಂಹರಿಸಬೇಕೆಂಬ ಬಯಕೆಯಿಂದ ಶತ್ರುಗಳ ಶಿಬಿರದೆಡೆಗೆ ಸಾಗಿದನು ಸ್ನೇಹದಿಂದ ಕೃಪ-ಕೃತವರ್ಮರೂ ಆತನನ್ನು ಹಿಂಬಾಲಿಸಿದರು.

ಕೃಪಃ

ಅಶಿಶ್ರೂಷುಃ ಸುದುರ್ಮೇಧಾಃ ಪುರುಷೋऽನಿಯತೇಂದ್ರಿಯಃ ।
ನಾಲಂ ವೇದಯಿತುಂ ಕೃತ್ಸ್ನಂ ಧರ್ಮಾರ್ಥಾವಿತಿ ಮೇ ಮತಿಃ ॥೧॥

ಅಯಂ ಚ ಮಿತ್ರಪಕ್ಷೋ ಮೇ ಮಯಿ ಜೀವತಿ ನಿರ್ಜಿತಃ ।
ಶೋಕಂ ಮೇ ವರ್ಧಯತ್ಯೇಷ ವಾರಿವೇಗ ಇವಾರ್ಣವಮ್ ॥೩೧॥

'ನನ್ನ ಮಿತ್ರನ ಪಕ್ಷವು ನಾನು ಬದುಕಿರುವಾಗಲೇ ಸೋತಿತು' ಇದೂ ಸಹ, ನೀರಿನ ಪ್ರವಾಹವು ಸಮುದ್ರವನ್ನು ಹೆಚ್ಚಿಸುವಂತೆ ನನ್ನ ಶೋಕವನ್ನು ಹೆಚ್ಚಿಸುತ್ತಿದೆ.

ಅನೇಕಾಗ್ರಸ್ಯ ಮೇ ತಸ್ಯ ಕುತೋ ನಿದ್ರಾ ಕುತಃಸುಖಮ್ ॥೩೨॥

ಒಂದೆಡೆ ಮನನಿಲ್ಲದ ಆ ನನಗೆ ಎಲ್ಲಿಯ ನಿದ್ರೆ, ಎಲ್ಲಿಯ ಸುಖ?

ವಾಸುದೇವಾರ್ಜುನಾಭ್ಯಾಂ ಹಿ ತಾನಹಂ ಪರಿರಕ್ಷಿತಾನ್ ।
ಅವಿಷಹ್ಯತಮಾನ್ ಮನ್ಯೇ ಮಹೇಂದ್ರೇಣಾಪಿ ಮಾತುಲ ॥೩೩॥

ಸೋದರಮಾವ! 'ಕೃಷ್ಣ,ಅರ್ಜುನರಿಂದ ಸಂರಕ್ಷಿತರಾದ ಅವರು (ಪಾಂಚಾಲರು) ಮಹೇಂದ್ರನಿಂದಲೂ ಸೋಲನ್ನು ಕಾಣಲಾರರು' ಎಂದು ನಾನು ತಿಳಿದಿರುವೆ.

ನ ಚಾಸ್ಮಿ ಶಕ್ಯಃ ಸಂಯಂತುಮಸ್ಮಾತ್ ಕಾರ್ಯಾತ್ ಕಥಂಚನ ।
ತಂ ನಪಶ್ಯಾಮಿ ಲೋಕೇ ಮಾಂ ಯೋಽಸ್ಮಾತ್ಕಾರ್ಯಾದ್ ವಿಚಾಲಯೇತ್ ॥೩೪॥

(ಆದರೆ ನಾನು) ಈ ಕಾರ್ಯದಿಂದ ಯಾವುದೇ ಕಾರಣದಿಂದಲೂ ವಿಮುಖನಾಗಲೂ ಶಕ್ಯವಿಲ್ಲ. ನನ್ನನ್ನು ಈ ಕಾರ್ಯದಿಂದ ವಿಮುಖನನ್ನಾಗಿಸುವ ಅಂತಹ ಯಾವ ವ್ಯಕ್ತಿಯನ್ನೂ ನಾನು ಈ ಲೋಕದಲ್ಲಿ ಕಾಣುತ್ತಿಲ್ಲ.

ಇತಿ ಮೇ ನಿಶ್ಚಿತಾ ಬುದ್ಧಿರೇಷಾ ಸಾಧುತಮಾ ಚ ಮೇ ॥೩೫॥

ಈ ರೀತಿಯಾಗಿ ನನ್ನ ವಿಚಾರವು ನಿಶ್ಚಿತವಾಗಿದೆ, ನನಗೆ ಇದೇ ಸರಿಯಾದದ್ದು ಎಂದು ತೋರುತ್ತಿದೆ.

ವಾದಿಕೈಃ ಕಥ್ಯಮಾನಸ್ತು ಮಿತ್ರಾಣಾಂ ಮೇ ಪರಾಭವಃ ।
ಪಾಂಡವಾನಾಂ ಚ ವಿಜಯೋ ಹೃದಯಂ ದಹತೀವ ಮೇ ॥೩೬॥

ನನ್ನ ಮಿತ್ರರು ಸೋತರು, ಪಾಂಡವರು ಗೆದ್ದರು ಎಂದು ಸುದ್ದಿಗಾರರು ಹೇಳುತ್ತಿರಲಾಗಿ ನನ್ನ ಹೃದಯವನ್ನು ಸುಟ್ಟಂತಾಯಿತು.

ಅಹಂ ತು ಕದನಂ ಕೃತ್ವಾ ಶತ್ರೂಣಾಮದ್ಯ ಸೌಪ್ತಿಕೇ ।
ತತೋ ವಿಶ್ರಮಿತಾ ಚೈವ ಸ್ವಪ್ತಾ ಚ ವಿಗತಜ್ವರಃ ॥೩೭॥

ನಾನಂತು ಈಗಲೆ ಯುದ್ಧವನ್ನು ಮಾಡಿ, ಸುಪ್ತಿಯಲ್ಲಿರುವಾಗಲೇ ಶತ್ರುಗಳನ್ನು ಸಂಹರಿಸಿ, ತದನಂತರದಲ್ಲಿ ಉದ್ವೇಗವನ್ನು ಪರಿಹರಿಸಿಕೊಂಡು ಮಲಗುವೆನು, ವಿಶ್ರಾಂತಿಯನ್ನು ಹೊಂದುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸೌಪ್ತಿಕಪರ್ವಣಿ ಅಶ್ವತ್ಥಾಮಕೃಪಸಂವಾದೋ ನಾಮ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯಃ

ಅನುಜಗ್ಮತುಸ್ತಾವಪಿ ತಂ ಶಿಬಿರದ್ವಾರಿ ಚೈಕ್ಷತ ।
ಉಗ್ರರೂಪಧರಂ ರುದ್ರ ಸ್ವಕೀಯಾಂ ತನುಮೇವ ಸಃ ॥

ಕೃಪ ಕೃತವರ್ಮರೂ ಅಶ್ವತ್ಥಾಮನನ್ನು ಹಿಂಬಾಲಿಸಿದರು. ಅಶ್ವತ್ಥಾಮನು ಶಿಬಿರದ ದ್ವಾರದಲ್ಲಿ ತನ್ನ ಸ್ವರೂಪನೇ ಆದ ರುದ್ರನನ್ನು ಕಂಡನು.

★ ★ ★ ★ ★

ಐದನೆಯ ಅಧ್ಯಾಯ

ಮಲಗಿದವರನ್ನು ಸಂಹರಿಸುವುದು ಅಧರ್ಮ ಎಂದು ಕೃಪರು ತಿಳಿಹೇಳಿದರೂ, ತಂದೆಯ ಮರಣದಿಂದ ಕುಪಿತನಾದ ಅಶ್ವತ್ಥಾಮನು ಶತ್ರುಗಳನ್ನು ಸಂಹರಿಸಬೇಕೆಂಬ ಬಯಕೆಯಿಂದ ಶತ್ರುಗಳ ಶಿಬಿರದೆಡೆಗೆ ಸಾಗಿದನು ಸ್ನೇಹದಿಂದ ಕೃಪ-ಕೃತವರ್ಮರೂ ಆತನನ್ನು ಹಿಂಬಾಲಿಸಿದರು.

ಕೃಪಃ

ಅಶಿಶ್ರೂಷುಃ ಸುದುರ್ಮೇಧಾಃ ಪುರುಷೋऽನಿಯತೇಂದ್ರಿಯಃ ।
ನಾಲಂ ವೇದಯಿತುಂ ಕೃತ್ಸ್ನಂ ಧರ್ಮಾರ್ಥಾವಿತಿ ಮೇ ಮತಿಃ ॥೧॥

ಕೃಪ– ಇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳದವನು, ಕೆಟ್ಟವಿಚಾರವನ್ನು ಹೊಂದಿದವನು, ಉಪದೇಶವನ್ನು ಕೇಳಲು ಮನವಿಲ್ಲದವನು ಸರಿಯಾದ ಧರ್ಮಾರ್ಥಗಳನ್ನು ತಿಳಿಯಲು ಸಮರ್ಥನಾಗುವದಿಲ್ಲ ಎಂದು ನನ್ನ ಭಾವನೆ.

ತಥೈವ ತಾವನ್ಮೇಧಾವೀ ವಿನಯಂ ಯೋ ನ ಶಿಕ್ಷತಿ ।
ನ ಕಥಂಚನ ಜಾನಾತಿ ಸೋಽಪಿ ಧರ್ಮಾರ್ಥನಿಶ್ಚಯಮ್ ॥೨॥

ಅದೇರೀತಿಯಲ್ಲಿ ಮೇಧಾವಿಯಾಗಿದ್ದರೂ ಯಾವಾತನು ವಿನಯವನ್ನು ಅರಿತಿಲ್ಲವೋ ಅಂತಹವನೂ ಸಹ ಯಾವ ರೀತಿಯಲ್ಲೂ ಧರ್ಮಾರ್ಥಗಳನ್ನು ತಿಳಿಯಲಾರ.

ಮುಹೂರ್ತಮಪಿ ತಂ ಪ್ರಾಜ್ಞಃ ಪಂಡಿತಂ ಪರ್ಯುಪಾಸ್ಯ ಹಿ ।
ಕ್ಷಿಪ್ರಂ ಧರ್ಮಂ ವಿಜಾನಾತಿ ಜಿಹ್ವಾ ಸೂಪರಸಾನಿವ ॥೩॥

ತಿಳಿದವನು (ತನ್ನ ಜೀವಮಾನದಲ್ಲಿ) ಒಂದು ಮುಹೂರ್ತವಾದರೂ ಆ ಪಂಡಿತರನ್ನು ಸೇವಿಸಿದಲ್ಲಿ, ಅಂತಹ ವ್ಯಕ್ತಿಯು ನಾಲಿಗೆಯು ತೊವ್ವೆಯ ರಸವನ್ನು ಗ್ರಹಿಸಿದಂತೆ, ಕೂಡಲೇ ಧರ್ಮವನ್ನು ಅರಿಯುವನು.

ವ್ಯಾಖ್ಯಾನ ವಿಶೇಷ–

ಚಿರಂಚಾಪಿ ಜಡಃ ಶೂರಃ ಪಂಡಿತಂ ಪರ್ಯುಪಾಸ್ಯಹಿ ।
ನ ಸ ಧರ್ಮಾನ್ವಿಜಾತಾನಿ ದರ್ವೀ ಸೂಪರಸಾನಿವ ॥ (ನೀಲಕಂಠೀಯ ಪಾಠ)

ಸೌಟು ತೊವ್ವೆಯ ರಸವನ್ನು ಹೇಗೆ ತಿಳುಯಲಾರದೋ ಹಾಗೆ, ಶೂರನಾಗಿದ್ದರೂ, ಯಾವಾತನು ಜಡನೋ ಆತನು ಪಂಡಿತರನ್ನು ಹೆಚ್ಚಾಗಿ ಸೇವಿಸಿದರೂ ಧರ್ಮವನ್ನು ತಿಳಿಯಲಾರ.

ಶುಶ್ರೂಷುಸ್ತ್ವೇವ ಮೇಧಾವೀ ಪುರುಷೋ ನಿಯತೇಂದ್ರಿಯಃ ।
ಜಾನೀಯಾದಾಗಮಾನ್ ಸರ್ವಾನ್ ಗ್ರಾಹ್ಯಂ ಚ ನ ವಿರೋಧಯೇತ್ ॥

ಜಿತೇಂದ್ರಿಯನಾದ, ಉಪದೇಶವನ್ನು ಕೇಳಲು ಬಯಸುವ ಮೇಧಾವಿಯೇ ಎಲ್ಲ ಉಪದೇಶಗಳನ್ನು ತಿಳಿಯುವನು, ಮತ್ತು ತಿಳಿದಿದ್ದನ್ನು ವಿರೋಧಿಸಲಾರನು.

ಅನೇಯಸ್ತ್ವತಿಮಾನೀ ಚ ದುರಾತ್ಮಾ ಪಾಪಪೂರುಷಃ ।
ಧೃಷ್ಟಮುತ್ಸೃಜ್ಯ ಕಲ್ಯಾಣಂ ಕರೋತಿ ಬಹುಪಾತಕಮ್ ॥೫॥

ನೀತಿಮಾರ್ಗದಲ್ಲಿರದ ದುರಭಿಮಾನಿಯಾದ ದುಷ್ಪ್ರಭಾವದ ಪಾಪಿ ಮನುಜನು ಸದುಪದೇಶವನ್ನು, ಸನ್ಮಾರ್ಗವನ್ನು ಬಿಟ್ಟು, ಭಾರೀ ಪಾಪವನ್ನು ಆಚರಿಸುವನು.

ನಾಥವಂತಂ ತು ಸುಹೃದಂ ಪ್ರತಿಷೇಧತಿ ಪಾತಕಾನ್ ।
ನಿವರ್ತತೇ ಚ ಲಕ್ಷ್ಮೀವಾನ್ ನಾಲಕ್ಷ್ಮೀವಾನ್ ನಿವರ್ತತೇ ॥೬॥

ನಿಯಮನಕ್ಕೆ ಒಳಗಾಗುವ (ತಿಳಿಹೇಳಿದ ಮಾತನ್ನು ಕೇಳುವ) ಮಿತ್ರನನ್ನು (ಹಿತೈಷಿಯು) ಪಾತಕದಿಂದ ತಡೆಯುತ್ತಾನೆ, ಅದೃಷ್ಟಶಾಲಿಯು ನಿವೃತ್ತನಾಗುವನು, ಅದೃಷ್ಟಹೀನನು ಹಿಂತಿರುಗುವುದಿಲ್ಲ.

ಯಥಾ ಹ್ಯುಚ್ಚಾವಚೈರ್ವಾಕ್ಯೈಃ ಕ್ಷಿಪ್ತಚಿತ್ತೋ ನಿಯಮ್ಯತೇ ।
ತಥೈವ ಸುಹೃದಾ ಶಕ್ಯಸ್ತ್ವಶಕ್ಯಸ್ತ್ವವಸೀದತಿ ॥೭॥

ಗೊಂದಲಕ್ಕೆ ಒಳಗಾದವನನ್ನು (ಆತನ ಸ್ನೇಹಿತರು) ಮೃದುಮಾತಿನಿಂದ ಕಠಿನಮಾತುಗಳಿಂದ ನಿಯಮಿಸುವರು, (ಅದೃಷ್ಟಶಾಲಿಯಾದವನು) ಸ್ನೇಹಿತರಿಂದ ನಿಯಂತ್ರಣಕ್ಕೆ ಒಳಗಾಗುವನು, (ಅದೃಷ್ಟಹೀನನು) ನಿಯಂತ್ರಣಕ್ಕೆ ಒಳಗಾಗದೆ ನಾಶವಾಗುವನು.

ತಥೈವ ಸುಹೃದೋಽಪ್ರಾಜ್ಞಾನ್ ಕುರ್ವಾಣಾನ್ ಕರ್ಮ ಪಾಪಕಮ್ ।
ಪ್ರಾಜ್ಞಾಃ ಸಂಪ್ರತಿಷೇಧಂತೇ ಯಥಾಶಕ್ತಿ ಪುನಃ ಪುನಃ ॥೮॥

ಇದೇ ರೀತಿಯಲ್ಲಿ ಮೂರ್ಖತನದಿಂದ ಪಾಪಕರ್ಮವನ್ನು ಮಾಡುವ ಸ್ನೇಹಿತರನ್ನು ಪ್ರಾಜ್ಞರಾದವರು ಶಕ್ತಿಮೀರಿ ಪುನಃ ಪುನಃ ತಡೆಯುವರು.

ಸ ಕಲ್ಯಾಣಂ ಮನಃ ಕೃತ್ವಾ ನಿಯಮ್ಯಾತ್ಮಾನಮಾತ್ಮನಾ ।
ಕುರು ಮೇ ವಚನಂ ತಾತ ಯೇನ ಪಶ್ಚಾನ್ನ ತಪ್ಸ್ಯಸೇ ॥೯॥

ಪುತ್ರನೆ! ಬುದ್ಧಿಯಿಂದ ಮನವನ್ನು ನಿಯಂತ್ರಿಸು, ಮನವನ್ನು ಮಂಗಳದೆಡೆಗೆ ಮಾಡು, ನನ್ನ ಮಾತನ್ನು ಅನುಸರಿಸು, ಇದರಿಂದ ಮುಂದೆ ಪರಿತಪಿಸಲಾರಿ.

ನ ವಧಃ ಪೂಜ್ಯತೇ ಲೋಕೇ ಸುಪ್ತಾನಾಮಿಹ ಧರ್ಮತಃ ।
ತಥೈವ ನ್ಯಸ್ತಶಸ್ತ್ರಾಣಾಂ ವಿಮುಕ್ತರಥವಾಜಿನಾಮ್ ॥೧೦॥

ಕೃಪ– ಇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳದವನು, ಕೆಟ್ಟವಿಚಾರವನ್ನು ಹೊಂದಿದವನು, ಉಪದೇಶವನ್ನು ಕೇಳಲು ಮನವಿಲ್ಲದವನು ಸರಿಯಾದ ಧರ್ಮಾರ್ಥಗಳನ್ನು ತಿಳಿಯಲು ಸಮರ್ಥನಾಗುವದಿಲ್ಲ ಎಂದು ನನ್ನ ಭಾವನೆ.

ತಥೈವ ತಾವನ್ಮೇಧಾವೀ ವಿನಯಂ ಯೋ ನ ಶಿಕ್ಷತಿ ।
ನ ಕಥಂಚನ ಜಾನಾತಿ ಸೋಽಪಿ ಧರ್ಮಾರ್ಥನಿಶ್ಚಯಮ್ ॥೨॥

ಅದೇರೀತಿಯಲ್ಲಿ ಮೇಧಾವಿಯಾಗಿದ್ದರೂ ಯಾವಾತನು ವಿನಯವನ್ನು ಅರಿತಿಲ್ಲವೋ ಅಂತಹವನೂ ಸಹ ಯಾವ ರೀತಿಯಲ್ಲೂ ಧರ್ಮಾರ್ಥಗಳನ್ನು ತಿಳಿಯಲಾರ.

ಮುಹೂರ್ತಮಪಿ ತಂ ಪ್ರಾಜ್ಞಃ ಪಂಡಿತಂ ಪರ್ಯುಪಾಸ್ಯ ಹಿ ।
ಕ್ಷಿಪ್ರಂ ಧರ್ಮಂ ವಿಜಾನಾತಿ ಜಿಹ್ವಾ ಸೂಪರಸಾನಿವ ॥೩॥

ತಿಳಿದವನು (ತನ್ನ ಜೀವಮಾನದಲ್ಲಿ) ಒಂದು ಮುಹೂರ್ತವಾದರೂ ಆ ಪಂಡಿತರನ್ನು ಸೇವಿಸಿದಲ್ಲಿ, ಅಂತಹ ವ್ಯಕ್ತಿಯು ನಾಲಿಗೆಯು ತೊವ್ವೆಯ ರಸವನ್ನು ಗ್ರಹಿಸಿದಂತೆ, ಕೂಡಲೇ ಧರ್ಮವನ್ನು ಅರಿಯುವನು.

ವ್ಯಾಖ್ಯಾನ ವಿಶೇಷ–

ಚಿರಂಚಾಪಿ ಜಡಃ ಶೂರಃ ಪಂಡಿತಂ ಪರ್ಯುಪಾಸ್ಯಹಿ ।
ನ ಸ ಧರ್ಮಾನ್ವಿಜಾತಾನಿ ದರ್ವೀ ಸೂಪರಸಾನಿವ ॥ (ನೀಲಕಂಠೀಯ ಪಾಠ)

ಸೌಟು ತೊವ್ವೆಯ ರಸವನ್ನು ಹೇಗೆ ತಿಳುಯಲಾರದೋ ಹಾಗೆ, ಶೂರನಾಗಿದ್ದರೂ, ಯಾವಾತನು ಜಡನೋ ಆತನು ಪಂಡಿತರನ್ನು ಹೆಚ್ಚಾಗಿ ಸೇವಿಸಿದರೂ ಧರ್ಮವನ್ನು ತಿಳಿಯಲಾರ.

ಶುಶ್ರೂಷುಸ್ತ್ವೇವ ಮೇಧಾವೀ ಪುರುಷೋ ನಿಯತೇಂದ್ರಿಯಃ ।
ಜಾನೀಯಾದಾಗಮಾನ್ ಸರ್ವಾನ್ ಗ್ರಾಹ್ಯಂ ಚ ನ ವಿರೋಧಯೇತ್ ॥

ಜಿತೇಂದ್ರಿಯನಾದ, ಉಪದೇಶವನ್ನು ಕೇಳಲು ಬಯಸುವ ಮೇಧಾವಿಯೇ ಎಲ್ಲ ಉಪದೇಶಗಳನ್ನು ತಿಳಿಯುವನು, ಮತ್ತು ತಿಳಿದಿದ್ದನ್ನು ವಿರೋಧಿಸಲಾರನು.

ಅನೇಯಸ್ತ್ವತಿಮಾನೀ ಚ ದುರಾತ್ಮಾ ಪಾಪಪೂರುಷಃ ।
ಧೃಷ್ಟಮುತ್ಸೃಜ್ಯ ಕಲ್ಯಾಣಂ ಕರೋತಿ ಬಹುಪಾತಕಮ್ ॥೫॥

ನೀತಿಮಾರ್ಗದಲ್ಲಿರದ ದುರಭಿಮಾನಿಯಾದ ದುಷ್ಪ್ರಭಾವದ ಪಾಪಿ ಮನುಜನು ಸದುಪದೇಶವನ್ನು, ಸನ್ಮಾರ್ಗವನ್ನು ಬಿಟ್ಟು, ಭಾರೀ ಪಾಪವನ್ನು ಆಚರಿಸುವನು.

ನಾಥವಂತಂ ತು ಸುಹೃದಂ ಪ್ರತಿಷೇಧತಿ ಪಾತಕಾನ್ ।
ನಿವರ್ತತೇ ಚ ಲಕ್ಷ್ಮೀವಾನ್ ನಾಲಕ್ಷ್ಮೀವಾನ್ ನಿವರ್ತತೇ ॥೬॥

ನಿಯಮನಕ್ಕೆ ಒಳಗಾಗುವ (ತಿಳಿಹೇಳಿದ ಮಾತನ್ನು ಕೇಳುವ) ಮಿತ್ರನನ್ನು (ಹಿತೈಷಿಯು) ಪಾತಕದಿಂದ ತಡೆಯುತ್ತಾನೆ, ಅದೃಷ್ಟಶಾಲಿಯು ನಿವೃತ್ತನಾಗುವನು, ಅದೃಷ್ಟಹೀನನು ಹಿಂತಿರುಗುವುದಿಲ್ಲ.

ಯಥಾ ಹ್ಯುಚ್ಚಾವಚೈರ್ವಾಕ್ಯೈಃ ಕ್ಷಿಪ್ತಚಿತ್ತೋ ನಿಯಮ್ಯತೇ ।
ತಥೈವ ಸುಹೃದಾ ಶಕ್ಯಸ್ತ್ವಶಕ್ಯಸ್ತ್ವವಸೀದತಿ ॥೭॥

ಗೊಂದಲಕ್ಕೆ ಒಳಗಾದವನನ್ನು (ಆತನ ಸ್ನೇಹಿತರು) ಮೃದುಮಾತಿನಿಂದ ಕಠಿನಮಾತುಗಳಿಂದ ನಿಯಮಿಸುವರು, (ಅದೃಷ್ಟಶಾಲಿಯಾದವನು) ಸ್ನೇಹಿತರಿಂದ ನಿಯಂತ್ರಣಕ್ಕೆ ಒಳಗಾಗುವನು, (ಅದೃಷ್ಟಹೀನನು) ನಿಯಂತ್ರಣಕ್ಕೆ ಒಳಗಾಗದೆ ನಾಶವಾಗುವನು.

ತಥೈವ ಸುಹೃದೋಽಪ್ರಾಜ್ಞಾನ್ ಕುರ್ವಾಣಾನ್ ಕರ್ಮ ಪಾಪಕಮ್ ।
ಪ್ರಾಜ್ಞಾಃ ಸಂಪ್ರತಿಷೇಧಂತೇ ಯಥಾಶಕ್ತಿ ಪುನಃ ಪುನಃ ॥೮॥

ಇದೇ ರೀತಿಯಲ್ಲಿ ಮೂರ್ಖತನದಿಂದ ಪಾಪಕರ್ಮವನ್ನು ಮಾಡುವ ಸ್ನೇಹಿತರನ್ನು ಪ್ರಾಜ್ಞರಾದವರು ಶಕ್ತಿಮೀರಿ ಪುನಃ ಪುನಃ ತಡೆಯುವರು.

ಸ ಕಲ್ಯಾಣಂ ಮನಃ ಕೃತ್ವಾ ನಿಯಮ್ಯಾತ್ಮಾನಮಾತ್ಮನಾ ।
ಕುರು ಮೇ ವಚನಂ ತಾತ ಯೇನ ಪಶ್ಚಾನ್ನ ತಪ್ಸ್ಯಸೇ ॥೯॥

ಪುತ್ರನೆ! ಬುದ್ಧಿಯಿಂದ ಮನವನ್ನು ನಿಯಂತ್ರಿಸು, ಮನವನ್ನು ಮಂಗಳದೆಡೆಗೆ ಮಾಡು, ನನ್ನ ಮಾತನ್ನು ಅನುಸರಿಸು, ಇದರಿಂದ ಮುಂದೆ ಪರಿತಪಿಸಲಾರಿ.

ನ ವಧಃ ಪೂಜ್ಯತೇ ಲೋಕೇ ಸುಪ್ತಾನಾಮಿಹ ಧರ್ಮತಃ ।
ತಥೈವ ನ್ಯಸ್ತಶಸ್ತ್ರಾಣಾಂ ವಿಮುಕ್ತರಥವಾಜಿನಾಮ್ ॥೧೦॥

ಯೇ ಚ ಬ್ರೂಯುಸ್ತವಾಸ್ಮೀತಿ ಯೇ ಚ ಸ್ಯುಃ ಶರಣಾಗತಾಃ ।
ವಿಮುಕ್ತಮೂರ್ಧಜಾ ಯೇ ಚ ಯೇ ಚಾಪಿ ಹತವಾಹನಾಃ ॥೧೧॥

ಮಲಗಿದವರನ್ನು, ಹಾಗೆ ಅಸ್ತ್ರವನ್ನು ಕೆಳಗಿಟ್ಟವರನ್ನು, ರಥದಿಂದ ಕುದುರೆಯನ್ನು ಬಿಚ್ಚಿದವರನ್ನು, 'ನಾನು ನಿನ್ನವ' ಎಂದು ಹೇಳುವವರನ್ನು, ಶರಣಾದವರನ್ನು ತಲೆಯ ಕೂದಲನ್ನು ಹರಡಿಕೊಂಡವರನ್ನು, ವಾಹನವನ್ನು ಕಳೆದುಕೊಂಡವರನ್ನು ಸಂಹರಿಸುವುದು ಧರ್ಮದ ದೃಷ್ಟಿಯಲ್ಲಿ ಈ ಲೋಕದಲ್ಲಿ ಯೋಗ್ಯವಾಗಲಾರದು.

ಅದ್ಯ ಸ್ವಪ್ಸ್ಯಂತಿ ಪಾಂಚಾಲಾ ವಿಮುಕ್ತಕವಚಾಃ ಪ್ರಭೋ ।
ವಿಶ್ವಸ್ತಾ ರಜನೀಂ ಸರ್ವೇ ಪ್ರೇತಾ ಇವ ವಿಚೇತಸಃ ॥೧೨॥

ನಾಯಕನೆ! ಈಗ, ರಾತ್ರಿಯಾದುದರಿಂದ ನಿಶ್ಚಿಂತೆಯಿಂದ ಕವಚವನ್ನು ಕಳಚಿ ಪಾಂಚಾಲರು, ಜೀವರಹಿತವಾದ ಶವಗಳಂತೆ (ಮೈಮರೆತು) ನಿದ್ರಿಸಿರುತ್ತಾರೆ.

ಯಸ್ತೇಷಾಂ ತದವಸ್ಥಾನಾಂ ದ್ರುಹ್ಯತೇ ಪುರುಷೋಽನೃಜುಃ ।
ವ್ಯಕ್ತಂ ಸ ನರಕೇ ಮಜ್ಜೇದ್ ಅಗಾಧೇ ವಿಪುಲೇಽಲ್ಪವೇ ॥೧೩॥

ನೇರ ವರ್ತನೆಯಿಲ್ಲದ ಯಾವ ವ್ಯಕ್ತಿಯು, ಆ ಅವಸ್ಥೆಯಲ್ಲಿರುವ ಅವರಿಗೆ (ಪಾಂಚಾಲರಿಗೆ) ದ್ರೋಹವನ್ನು ಬಗೆಯುವನೋ, ಆತನು ನಿಶ್ಚಯವಾಗಿಯೂ ಮೇಲೇಳಲು ಶಕ್ಯವಿಲ್ಲದ ವಿಶಾಲವಾದ ಭೀಕರವಾದ ನರಕದಲ್ಲಿ ಬೀಳುವನು.

ಸರ್ವಾಸ್ತ್ರವಿದುಷಾಂ ಲೋಕೇ ಶ್ರೇಷ್ಠಸ್ತ್ವಮಸಿ ವಿಶ್ರುತಃ ।
ನ ಚ ತೇ ಜಾತು ಲೋಕೇಽಸ್ಮಿನ್ ಸುಸೂಕ್ಷ್ಮಮಪಿ ಕಿಲ್ಬಿಷಮ್ ॥೧೪॥

ಲೋಕದಲ್ಲಿ 'ಎಲ್ಲ ಅಸ್ತ್ರಗಳನ್ನು ಬಲ್ಲವರಲ್ಲಿ ಹಿರಿಯ' ಎಂದು ನೀನು ಖ್ಯಾತನಾಗಿರುವಿ. ನೀನೂ ಎಂದೂ ಸಣ್ಣದಾದ ಪಾಪವನ್ನೂ ಸಹ ಈ ಜನ್ಮದಲ್ಲಿ ಮಾಡಿಲ್ಲ.

ತ್ವಂ ಪುನಃ ಸೂರ್ಯಸಂಕಾಶಃ ಶ್ವೋಭೂತ ಉದಿತೇ ರವೌ ।
ಪ್ರಕಾಶೇ ಸರ್ವಭೂತಾನಾಂ ವಿಜೇತಾ ಯುಧಿ ಶಾತ್ರವಾನ್ ॥೧೫॥

ಸೂರ್ಯನಂತಿರುವ ನೀನು ಬೆಳಗಾಗುತ್ತಿರಲು ಸೂರ್ಯನು ಉದಯಿಸಲು ಬೆಳಕಿನಲ್ಲಿ ಯುದ್ಧದಲ್ಲಿ ಶತ್ರುಗಳನ್ನು ಎದುರಿಸಿ ಎಲ್ಲ ಶತ್ರುಗಳನ್ನು ಗೆಲ್ಲುವವನಾಗು.

ಅಸಂಭಾವಿತರೂಪಂ ಹಿ ತ್ವಯಿ ಕರ್ಮ ವಿಗರ್ಹಿತಮ್ ।
ಶುಕ್ಲೇ ರಕ್ತಮಿವ ನ್ಯಸ್ತಂ ಭವೇದಿತಿ ಮತಿರ್ಮಮ ॥೧೬॥

ಅದರಂತೆ ನಿಂದ್ಯವಾದ ಕರ್ಮವು ನಿನ್ನಲ್ಲಿ ಸಂಭಾವಿತವಲ್ಲ ಎಂದೇ ನನ್ನ ಅಭಿಮತ. (ಒಂದು ವೇಳೆ ನೀನು ಈ ಕುಕರ್ಮವನ್ನು ಮಾಡಿದಲ್ಲಿ) ಬಿಳಿಯ ವಸ್ತ್ರದಲ್ಲಿ ಕೆಂಪು ಚುಕ್ಕೆ ಇಟ್ಟಂತಾದೀತು!

ಅಶ್ವತ್ಥಾಮಾ

ಏವಮೇತದ್ ಯಥಾSSತ್ಥ ತ್ವಮನುಶಾಸಸಿ ಮಾತುಲ ।
ತೈಸ್ತು ಧರ್ಮೋ ಹ್ಯಯಂ ಸೇತುಃ ಶತಧಾ ವಿದಳೀಕೃತಃ ॥೧೭॥

ಅಶ್ವತ್ಥಾಮ– ಸೋದರಮಾವ! ನೀನು ನಿಯಂತ್ರಿಸುತ್ತಿರುವಿ, ನೀನು ಏನು ಹೇಳುತ್ತಿರುವಿಯೋ ಅದೆಲ್ಲವು ಸತ್ಯ. ಆದರೆ ಅವರು (ಪಾಂಡವರು) ಈ ಧರ್ಮದ ಮರ್ಯಾದೆಯನ್ನು ನೂರಾರು ಚೂರನ್ನಾಗಿಸಿರುವರು (ಎಲ್ಲ ಯುದ್ಧನಿಯಮಗಳನ್ನು ಮೀರಿದಿರುವರು).

ಪ್ರತ್ಯಕ್ಷಂ ಭೂಮಿಪಾಲಾನಾಂ ಭವತಾಂ ಚಾಪಿ ಸನ್ನಿಧೌ ।
ನ್ಯಸ್ತಶಸ್ತ್ರೋ ಮಮ ಪಿತಾ ಧೃಷ್ಟದ್ಯುಮ್ನೇನ ಪಾತಿತಃ ॥೧೮॥

ರಾಜರ ಮತ್ತು ನಿಮ್ಮ ಸಮಕ್ಷಮದಲ್ಲಿಯೇ ಅಸ್ತ್ರವನ್ನು ತ್ಯಜಿಸಿದ ನನ್ನ ತಂದೆಯನ್ನು ಧೃಷ್ಟದ್ಯುಮ್ನನು ಕೆಡಹಿದನು.

ಕರ್ಣಶ್ಚ ಪತಿತೇ ಚಕ್ರೇ ಉತ್ಥಾಸ್ಯನ್ ರಥಿನಾಂ ವರಃ ।
ಉತ್ತಮೇ ವ್ಯಸನೇ ಮಗ್ನೋ ಹತೋ ಗಾಂಡೀವಧನ್ವನಾ ॥೧೯॥

ರಥಿಕರಲ್ಲಿ ಶ್ರೇಷ್ಠನಾದ ಕರ್ಣನಾದರೋ ಚಕ್ರಗಳನ್ನು ಮೇಲೆತ್ತುತ್ತಿರಲಾಗಿ, ದೊಡ್ಡ ಆಪತ್ತಿನಲ್ಲಿರುವಾಗ ಗಾಂಡೀವ ಧನುರ್ಧಾರಿಯಾದ ಅರ್ಜುನನು ಸಂಹರಿಸಿದನು.

ತಥಾ ಶಾಂತನವೋ ಭೀಷ್ಮೋ ನ್ಯಸ್ತಶಸ್ತ್ರೋ ನಿರಾಯುಧಃ ।
ಶಿಖಂಡಿನಂ ಪುರಸ್ಕೃತ್ಯ ಹತೋ ಗಾಂಡೀವಧನ್ವನಾ ॥೨೦॥

ಹಾಗೆಯೇ ಶಸ್ತ್ರವನ್ನು ಕೆಳಗೆ ಇಟ್ಟ ಆಯುಧರಹಿತನಾದ ಭೀಷ್ಮನನ್ನು ಶಿಖಂಡಿಯನ್ನು ಮುಂದೆಮಾಡಿಕೊಂಡು ಗಾಂಡೀವ ಧನುರ್ಧಾರಿಯು ಸಂಹರಿಸಿದನು.

ಭೂರಿಶ್ರವಾ ಮಹೇಷ್ವಾಸಃ ತಥಾ ಪ್ರಾಯಗತೋ ರಣೇ ।
ಕ್ರೋಶತಾಂ ಭೂಮಿಪಾಲಾನಾಂ ಯುಯುಧಾನೇನ ಪಾತಿತಃ ॥೨೧॥

ಹಾಗೆಯೇ (ಕೂಡದು ಕೂಡದು ಎಂದು) ಭೂಮಿಪಾಲರು ಅರಚುತ್ತಿದ್ದರೂ ಸಹ ಒಳ್ಳೆ ಬಿಲ್ಲಾಳಾದ, ಪ್ರಾಯೋಪವೇಶಕ್ಕೆ ಕುಳಿತ ಭೂರಿಶ್ರವನನ್ನು, ಸಾತ್ಯಕಿಯು ಸಂಹರಿಸಿದನು.

ಏಕಾಕೀ ಬಹುಭಿಸ್ತತ್ರ ಪರಿವಾರ್ಯ ಮಹಾರಥೈಃ ।
ಅಧರ್ಮೇಣ ನರವ್ಯಾಘ್ರೋ ಭೀಮಸೇನೇನ ಪಾತಿತಃ ॥೨೨॥

ಅನೇಕ ಮಹಾರಥಿಕರಿಂದ ಸುತ್ತುವರೆದ ಒಬ್ಬಂಟಿಗನಾದ ಪುರುಷಶ್ರೇಷ್ಠನನ್ನು (ದುರ್ಯೋಧನನನ್ನು) ಭೀಮಸೇನನಿಂದ ಅಧರ್ಮದಿಂದ ಕೆಡಹಲಾಯಿತು.

ವಿಲಾಪೋ ಭಗ್ನಸಕ್ಥಸ್ಯ ಯೋ ಮೇ ರಾಜ್ಞಃ ಪರಿಶ್ರುತಃ ।
ವಾದಿಕಾನಾಂ ಕಥಯತಾಂ ಸ ಮೇ ಮರ್ಮಾಣಿ ಕೃಂತತಿ ॥೨೩॥

'ತೊಡೆಮುರಿದುಕೊಂಡಿರುವ ರಾಜನ (ದುರ್ಯೋಧನನ) ರೋದನವನ್ನು ನಾನು ಕೇಳಿದೆನು' ಎಂದು ವಾರ್ತಾಹಾರಕರು ಹೇಳುತ್ತಿರಲಾಗಿ ಅದು ನನ್ನ ಮರ್ಮವನ್ನು ಕತ್ತರಿಸುವುದು.

ಏವಂ ಚಾಧಾರ್ಮಿಕಾಃ ಪಾಪಾಃ ಪಾಂಚಾಲಾ ಭಿನ್ನಸೇತವಃ ।
ತಾನೇವಂ ಭಿನ್ನಮರ್ಯಾದಾನ್ ಕಂ ಭವಾನ್ ನ ವಿಗರ್ಹತಿ ॥೨೪॥

ಈ ರೀತಿಯಾಗಿ ಅಧಾರ್ಮಿಕರಾದ, ಧರ್ಮದ ಎಲ್ಲೆಯನ್ನು ಮೀರಿದ ಪಾಪಿಗಳಾದವರು ಪಾಂಚಾಲರು, ಈ ರೀತಿಯಾಗಿ ಧರ್ಮದ ಎಲ್ಲೆಯನ್ನು ಮೀರಿದ ಅವರನ್ನು ನೀನು ಏಕೆ ನಿಂದಿಸುವುದಿಲ್ಲ?

ಪಿತೃಹಂತ್ಸ್ಯನಹಂ ಹತ್ವಾ ಪಾಂಚಾಲಾನ್ ನಿಶಿ ಸೌಪ್ತಿಕೇ ।
ಕಾಮಂ ಕೀಟಃ ಪತಂಗೋ ವಾ ಜನ್ಮ ಪ್ರಾಪ್ಯ ಭವಾಮಿ ವೈ ॥೨೫॥

(ಎಲ್ಲರೂ) ಮಲಗಿರುವ ಈ ರಾತ್ರಿಯಲ್ಲಿ ತಂದೆಯನ್ನು ಸಂಹರಿಸಿದ ಪಾಂಚಾಲರನ್ನು ಸಂಹರಿಸಿ, ಬೇಕಾದಲ್ಲಿ (ಅದರ ಫಲವಾಗಿ) ಹುಳವೋ ದುಂಬಿಯೋ ಆಗಿ ಜನ್ಮವನ್ನು ತಾಳುವೆ.

ತ್ವರೇ ಚಾಹಮನೇನಾದ್ಯ ಯದಿದಂ ಮೇ ಚಿಕೀರ್ಷಿತಮ್ ।
ತಸ್ಯ ಮೇ ತ್ವರಮಾಣಸ್ಯ ಕುತೋ ನಿದ್ರಾ ಕುತಃ ಸುಖಮ್ ॥೨೬॥

ಈಗ ಯಾವುದನ್ನೋ ಮಾಡಬೇಕೆಂದು ನಾನು ಅವಸರಿಸುತ್ತಿರುವೆ. ಹೀಗೆ ಅವಸರಿಸುತ್ತಿರುವ ನನಗೆ ನಿದ್ರೆ ಎಲ್ಲಿ ? ಸುಖ ಎಲ್ಲಿ?

ನ ಸ ಜಾತಃ ಪುಮಾನ್ ಲೋಕೇ ಕಶ್ಚಿನ್ನ ಚ ಭವಿಷ್ಯತಿ ।
ಯೋ ಮೇ ವ್ಯಾವರ್ತಯೇದೇತಾಂ ವಧೇ ತೇಷಾಂ ಕೃತಾಂ ಮತಿಮ್ ॥

ಅವರ (ಪಾಂಚಾಲರ) ಸಂಹಾರವನ್ನು ಮಾಡಲು ನಿಶ್ಚಯಿಸಿರುವ, ನನ್ನ ನಿರ್ಧಾರವನ್ನು ಬದಲಿಸುವ ಯಾವ ಮನುಜನು ಈ ಲೋಕದಲ್ಲಿ ಈ ಹಿಂದೆ ಹುಟ್ಟಿಲ್ಲ, ಇನ್ನು ಮುಂದೆ ಹುಟ್ಟಲಾರನು.

ಸಂಜಯಃ

ಏವಮುಕ್ತ್ವಾ ಮಹಾರಾಜ ದ್ರೋಣಪುತ್ರಃ ಪ್ರತಾಪವಾನ್ ।
ಏಕಾಂತೇ ಯೋಜಯಿತ್ವಾಽಶ್ವಾನ್ ಪ್ರಾಯಾದಭಿಮುಖಃ ಪರಾನ್ ॥

ಸಂಜಯ– ಮಹಾರಾಜ! ಪ್ರತಾಪಶಾಲಿಯಾದ ದ್ರೋಣಪುತ್ರನು ಹೀಗೆ ಹೇಳಿ ರಹಸ್ಯವಾಗಿ ಕುದುರೆಗಳನ್ನು (ರಥಕ್ಕೆ) ಹೂಡಿ, ಶತ್ರುಗಳೆಡೆಗೆ ಸಾಗಿದನು.

ತಮಬ್ರೂತಾಂ ಮಹಾಭಾಗೌ ಭೋಜಶಾರದ್ವತಾವುಭೌ ॥೨೯॥

ಮಹಾತ್ಮರಾದ ಭೋಜವಂಶಜನು (ಕೃತವರ್ಮನು) ಶಾರದ್ವತನು (ಕೃಪನು) ಆತನನ್ನು ಉದ್ದೇಶಿಸಿ ಹೇಳಿದರು.

ಕೃಪಕೃತವರ್ಮಾಣೌ

ಕಿಮಯಂ ಸ್ಯಂದನೋ ಯುಕ್ತಃ ಕಿಂ ಚ ಕಾರ್ಯಂ ಚಿಕೀರ್ಷಿತಮ್ ॥

ಕೃಪ ಕೃತವರ್ಮರು– ಈ ರಥವನ್ನು ಏರಿ ಯಾವ ಕಾರ್ಯವನ್ನು ಮಾಡಬೇಕೆಂದು ಬಯಸಿರುವಿ?

ಏಕಸಾರ್ಥಂ ಪ್ರಯಾತಾಃ ಸ್ಮ ತ್ವಯಾ ಸಹ ನರರ್ಷಭ ।
ಸಮದುಃಖಸುಖಾಶ್ಚೈವ ತಸ್ಮಾಚ್ಛಾಸಿತುಮರ್ಹಸಿ ॥೩೧॥

ಪುರುಷಶ್ರೇಷ್ಠನೇ! ನಿನ್ನಿಂದ ಒಡಗೂಡಿಕೊಂಡು ಒಂದೇ ವಾಹನದಲ್ಲಿ ಪ್ರಯಾಣಿಸುತ್ತಿರುವೆವು. ಸುಖದುಃಖದಲ್ಲಿ ನಿನಗೆ ನಾವೂ ಸಮಾನರು, ಆದ್ದರಿಂದ ನಮ್ಮ ಮಾತನ್ನು ಆಲಿಸುವವನಾಗು.

ಸಂಜಯಃ

ಅಶ್ವತ್ಥಾಮಾ ತು ಸಂಕ್ರುದ್ಧಃ ಪಿತುರ್ವಧಮನುಸ್ಮರನ್ ।
ತಾಭ್ಯಾಂ ತಥ್ಯಂ ತಥಾऽऽಚಖ್ಯೌ ಯದಸ್ಯಾತ್ಮಚಿಕೀರ್ಷಿತಮ್ ॥೩೨॥

ಸಂಜಯ– ಅಶ್ವತ್ಥಾಮನಾದರೋ ತಂದೆಯ ಮರಣವನ್ನು ಸ್ಮರಿಸುತ್ತಾ ಕೋಪಗೊಂಡವನಾಗಿ ಅವರೀರ್ವರಿಗೆ ತಾನು ಮಾಡಲು ಬಯಸಿದ ಸತ್ಯವನ್ನು ಹಾಗೆಯೇ ಹೇಳಿದನು.

ದ್ರೌಣಿಃ

ಹತ್ವಾ ಶತಸಹಸ್ರಾಣಿ ಯೋಧಾನಾಂ ನಿಶಿತೈಃ ಶರೈಃ ।
ನ್ಯಸ್ತಶಸ್ತ್ರೋ ಮಮ ಪಿತಾ ಧೃಷ್ಟದ್ಯುಮ್ನೇನ ಪಾತಿತಃ ॥೩೩॥

ಅಶ್ವತ್ಥಾಮ– ಲಕ್ಷಾಂತರ ಯೋಧರನ್ನು ನಿಶಿತವಾದ ಬಾಣಗಳಿಂದ ಸಂಹರಿಸಿ, ಶಸ್ತ್ರವನ್ನು ತ್ಯಜಿಸಿದ್ದನು, ಅಂತಹ ನನ್ನ ತಂದೆಯನ್ನು ಧೃಷ್ಟದ್ಯುಮ್ನನು ಸಂಹರಿಸಿದನು.

ತಂ ತಥೈವ ಹನಿಷ್ಯಾಮಿ ನ್ಯಸ್ತವರ್ಮಾಣಮಾಹವೇ ।
ಪುತ್ರಂ ಪಾಂಚಾಲರಾಜಸ್ಯ ಪಾಪಂ ಪಾಪೇನ ಕರ್ಮಣಾ ॥೩೪॥

ಪಾಂಚಾಲರಾಜನ ಪುತ್ರನಾದ ಆ ಪಾಪಿಯನ್ನು ಪಾಪಕರ್ಮದಿಂದಲೇ ಕವಚವನ್ನು ಪರಿತ್ಯಜಿಸಿದ ಸಂದರ್ಭದಲ್ಲಿಯೇ ಹಾಗೆಯೇ (ನನ್ನ ತಂದೆಯನ್ನು ಸಂಹರಿಸಿದಂತೆ) ಸಂಹರಿಸುವೆನು.

ಕಥಂ ವಿನಿಹತಃ ಪಾಪಃ ಪಾಂಚಾಲ್ಯಃ ಪಶುವನ್ಮಯಾ ।
ಶಸ್ತ್ರಾಗ್ನಿವಿಜಿತಾನ್ ಲೋಕಾನ್ ಪ್ರಾಪ್ನುಯಾದಿತಿ ಮೇ ಮತಿಃ ॥೩೫॥

ಪಾಪಿಯಾದ ಪಾಂಚಾಲಪುತ್ರನು ಪಶುವಿನಂತೆ ನನ್ನಿಂದ ಮೃತನಾಗಿ, ಹೇಗೆತಾನೆ ಶಸ್ತ್ರವೆಂಬ ಅಗ್ನಿಯಿಂದ ಪ್ರಾಪ್ತವಾಗುವ ಲೋಕಗಳನ್ನು ಹೊಂದುವನು? ಎಂದು ನನ್ನ ಭಾವನೆ. (ಆತನಿಗೆ ಅಪಮೃತ್ಯುವಿನಿಂದ ನರಕವಾಗಲಿ ಎಂದು ಭಾವ).

ಕ್ಷಿಪ್ರಂ ಸನ್ನದ್ಧಕವಚೌ ಸಖೌ ಸಹಕಾರ್ಮುಕೌ ।
ಮಾಮಾಸ್ಥಾಯ ಪ್ರತೀಕ್ಷೇತಾಂ ರಥಸ್ಥೌ ಚ ಪರಂತಪೌ ॥೩೬॥

ಶತ್ರುತಾಪಕರಾದ ರಥಿಕರಾದ ನೀವೀರ್ವರು ಕೂಡಲೆ ಕವಚವನ್ನು ಧರಿಸಿ, ಖಡ್ಗಸಹಿತರಾಗಿ ಬಿಲ್ಲನ್ನು ಹಿಡಿದವರಾಗಿ ನನ್ನೊಡನೆ ಇದ್ದು, ನನ್ನನ್ನು ನಿರೀಕ್ಷಿಸಿರಿ

ಸಂಜಯಃ

ಇತ್ಯುಕ್ತ್ವಾ ರಥಮಾಸ್ಥಾಯ ಪ್ರಾಯಾದಭಿಮುಖಃ ಪರಾನ್ ।
ತಮನ್ವಗಾತ್ ಕೃಪೋ ರಾಜನ್ ಕೃತವರ್ಮಾ ಚ ಸಾತ್ವತಃ ॥೩೭॥

ಸಂಜಯ– ರಾಜನೆ! (ಅಶ್ವತ್ಥಾಮನು) ಈ ರೀತಿಯಾಗಿ ಹೇಳಿ ರಥವನ್ನೇರಿ ಶತ್ರುಗಳಿಗೆ ಅಭಿಮುಖವಾಗಿ ಹೊರಟನು. ಸಾತ್ವತಕುಲೋತ್ಪನ್ನನಾದ ಕೃತವರ್ಮನು ಮತ್ತು ಕೃಪನು ಆತನನ್ನು ಅನುಸರಿಸಿದರು.

ತೇ ಪ್ರಯಾತಾ ವ್ಯರೋಚಂತ ಪರಾನಭಿಮುಖಾಸ್ತ್ರಯಃ ।
ಹೂಯಮಾನಾ ಯಥಾ ಯಜ್ಞೇ ಸಮಿದ್ಧಾ ಹವ್ಯವಾಹನಾಃ ॥೩೮॥

ಶತ್ರುಗಳಿಗೆ ಅಭಿಮುಖವಾಗಿ ಹೊರಟ ಆ ಮೂವರು, ಯಜ್ಞದಲ್ಲಿ ಸಮಿಧೆಗಳಿಂದ ಹೋಮಿಸಿರುವ ಅಗ್ನಿಯಂತೆ ಪ್ರಕಾಶಿಸಿದರು.

ಯಯುಶ್ಚ ಶಿಬಿರಂ ತೇಷಾಂ ಸಂಪ್ರಸುಪ್ತಜನಂ ವಿಭೋ ।
ದ್ವಾರದೇಶಂ ಸಮಾಸಾದ್ಯ ದ್ರೌಣಿಸ್ತಸ್ಥೌ ರಥೋತ್ತಮೇ ॥೩೯॥

ಪ್ರಭುವೆ! ಅವರು ಗಾಢನಿದ್ರೆಯಲ್ಲಿ ಮಲಗಿದ ಜನರ ಆ ಶಿಬಿರಕ್ಕೆ ಹೋದರು. ದ್ವಾರದ ಭಾಗಕ್ಕೆ ಬಂದ ದ್ರೋಣಪುತ್ರನು ಶ್ರೇಷ್ಠರಥದಲ್ಲಿ ನಿಂತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸೌಪ್ತಿಕಪರ್ವಣಿ ಅಶ್ವತ್ಥಾಮ್ನಃ ಶಿಬಿರಪ್ರವೇಶಂ ನಾಮ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಪರೀತಂ ವಾಸುದೇವೇನ ಬಹುಕೋಟಿಸ್ವರೂಪಿಣಾ ।
ದೃಷ್ಟ್ವೈವ ವಾಸುದೇವಂ ತಮತ್ರಸದ್ ಗೌತಮೀಸುತಃ ॥

ರುದ್ರ ಆಗ ಉಗ್ರರೂಪ ಧರಿಸಿದ್ದನು. ಬಹುಕೋಟಿ ರೂಪನಾದ ಕೃಷ್ಣನಿಂದ ಸುತ್ತುವರಿಯಲ್ಪಟ್ಟಿದ್ದನು. ಅಶ್ವತ್ಥಾಮ ಕೃಷ್ಣನನ್ನು ಕಂಡೇ ಭಯಗ್ರಸ್ಥನಾದನು.

ವಾಸುದೇವಾಜ್ಞಯೈವಾತ್ರ ಸ್ವಾತ್ಮನಾಽಪಿ ಸದಾಶಿವಃ ।
ಅಯುದ್ಧ್ಯದಗ್ರಸಚ್ಚಾಽಶು ದ್ರೌಣೇಃ ಸರ್ವಾಯುಧಾನ್ಯಪಿ ।
ಅಚಿಂತ್ಯಾ ಹರಿಶಕ್ತಿರ್ಯದ್ ದೃಶ್ಯಂತೇಽತ್ಮಹನೋಽಪಿ ಹಿ ॥

ಶ್ರೀಕೃಷ್ಣನ ಸಂಕಲ್ಪದಿಂದಲೆ ಸದಾಶಿವ ತನ್ನ ಸ್ವರೂಪನೆ ಆದ ಅಶ್ವತ್ಥಾಮನೊಡನೆ ಕಾದಿದ. ಅಶ್ವತ್ಥಾಮನ ಎಲ್ಲ ಆಯುಧಗಳನ್ನೂ ಬೇಗನೆ ನುಂಗಿದನು. ಹರಿಯ ಶಕ್ತಿ ಅಚಿಂತ್ಯ . ಏಕೆಂದರೆ ಅದರಿಂದ ಪ್ರೇರಿತರಾಗಿ ಆತ್ಮಹತ್ಯೆಯನ್ನೂ ಮಾಡಿಕೊಳ್ಳುವವರು ಕಂಡುಬರುತ್ತಾರೆ.

★ ★ ★ ★ ★

ಆರನೆಯ ಅಧ್ಯಾಯ

ಶಿಬಿರದ ದ್ವಾರದಲ್ಲಿ ಮಹಾಭೂತವನ್ನು ಅಶ್ವತ್ಥಾಮನು ಕಂಡನು, ಅದನ್ನು ಗೆಲ್ಲಲು ಅಶ್ವತ್ಥಾಮನಿಂದ ಪ್ರಯುಕ್ತವಾದ ಎಲ್ಲ ಅಸ್ತ್ರಗಳನ್ನು ಆ ಭೂತವು ನುಂಗಿತು. ಚಿಂತೆಗೆ ಒಳಗಾದ ಅಶ್ವತ್ಥಾಮನು ಮಹಾದೇವನನ್ನು ಉಪಾಸಿಸಿದನು.

ಧೃತರಾಷ್ಟ್ರಃ

ದ್ವಾರದೇಶೇ ತತೋ ದ್ರೌಣಿಮವಸ್ಥಿತಮವೇಕ್ಷ್ಯ ತೌ ।
ಅಕುರ್ವತಾಂ ಭೋಜಕೃಪೌ ಕಿಂ ಸಂಜಯ ವದಸ್ವ ಮೇ ॥೧॥

ಧೃತರಾಷ್ಟ್ರ– ಸಂಜಯ! ಅನಂತರದಲ್ಲಿ (ಶಿಬಿರದ) ಬಾಗಿಲ ಬಳಿ ನಿಂತ ದ್ರೋಣ ಪುತ್ರನನ್ನು ಕಂಡ ಆ ಕೃಪ-ಕೃತವರ್ಮರು ಏನು ಮಾಡಿದರು? ಹೇಳು.

ಸಂಜಯಃ

ಕೃತವರ್ಮಾಣಮಾಮಂತ್ರ್ಯ ಕೃಪಂ ಚ ಸ ಮಹಾರಥಃ ।
ದ್ರೌಣಿರ್ಮನ್ಯುಪರೀತಾತ್ಮಾ ಶಿಬಿರದ್ವಾರಮಾಸದತ್ ॥೨॥

ಸಂಜಯ– ಆ ಮಹಾರಥಿಕನಾದ, ಮೈಯೆಲ್ಲ ಕೋಪಗೊಂಡಿರುವ ದ್ರೋಣಪುತ್ರನು ಕೃಪ-ಕೃತವರ್ಮನನ್ನು ಕರೆದುಕೊಂಡು ಶಿಬಿರದ್ವಾರವನ್ನು ಸೇರಿದನು.

ತತ್ರ ಭೂತಂ ಮಹಾಕಾಯಂ ಚಂದ್ರಾಗ್ನಿಸಮವರ್ಚಸಮ್ ।
ಸೋಽಪಶ್ಯದ್ ದ್ವಾರಮಾವೃತ್ಯ ತಿಷ್ಠಂತಂ ರೋಮಹರ್ಷಣಮ್ ॥೩॥

ವಸಾನಂ ಚರ್ಮ ವೈಯಾಘ್ರಂ ವಸಾರುಧಿರವಿಸ್ರವಮ್ ।
ಕೃಷ್ಣಾಜಿನೋತ್ತರಾಸಂಗಂ ನಾಗಯಜ್ಞೋಪವೀತಿನಮ್ ॥೪॥

ಬಾಹುಭಿಃ ಸ್ವಾಯತೈರ್ಘೋರೈಃ ನಾನಾಪ್ರಹರಣೋದ್ಯತೈಃ ।
ಬದ್ಧಾಂಗದಮಹಾಸರ್ಪಂ ಜ್ವಾಲಾಮಾಲಾಕುಲಾನನಮ್ ॥೫॥

ದಂಷ್ಟಾಕರಾಲವದನಂ ವ್ಯಾದಿತಾಸ್ಯಂ ಭಯಾವಹಮ್ ।
ನಯನಾನಾಂ ಸಹಸ್ರೈಶ್ಚ ವಿವಿಧೈರಭಿಭೂಷಿತಮ್ ॥೬॥

ಭರತಕುಲೋತ್ಪನ್ನನೆ! ಅಲ್ಲಿ ಚಂದ್ರ-ಅಗ್ನಿಗಳಂತೆ ಕಾಂತಿಯುಕ್ತನಾದ, ಭಾರೀ ಶರೀರದ ರೋಮಾಂಚಕಾರಿಯಾದ, ವಸೆಯನ್ನು ರಕ್ತವನ್ನು ಸುರಿಸುತ್ತಿರುವ, ವ್ಯಾಘ್ರದ

ಚರ್ಮವನ್ನು ಉಟ್ಟಿರುವ, ಜಿಂಕೆಯ ಚರ್ಮವನ್ನು ಉತ್ತರೀಯವಾಗಿ ಧರಿಸಿರುವ, ನಾಗವನ್ನೇ ಯಜ್ಞೋಪವೀತವನ್ನಾಗಿ ಮಾಡಿಕೊಂಡಿರುವ ವಿಶಾಲವಾದ ಬಾಹುಗಳಿಂದ ಕೂಡಿರುವ, ಮೇಲೆತ್ತಿರುವ ಭಯಂಕರವಾದ ನಾನಾ ಬಗೆಯ ಆಯುಧಗಳನ್ನು ಹೊಂದಿರುವ, ಆಭರಣದ ಸ್ಥಾನದಲ್ಲಿ ಸರ್ಪವನ್ನೇ ಧರಿಸಿರುವ, ಜ್ವಾಲೆಗಳ ಸಾಲನ್ನು ಮುಖದಲ್ಲಿ ಹೊಂದಿರುವ, ಭಯಂಕರವಾದ ಕೋರೇ ಹಲ್ಲಿನಿಂದ ಕೂಡಿರುವ ಮುಖವುಳ್ಳ, ಬಾಯಿತೆರೆದು ನಿಂತಿರುವ, ಭಯಂಕರನಾದ, ನಾನಾಬಗೆಯ ಸಾವಿರಾರು ನಯನಗಳಿಂದ ಅಲಂಕೃತನಾದ, ದ್ವಾರವನ್ನು ಆವರಿಸಿ ನಿಂತ ಭೂತನಾಥನಾದ ರುದ್ರದೇವನನ್ನು ಆತನು (ಅಶ್ವತ್ಥಾಮನು) ಕಂಡನು.

ನೈವ ತಸ್ಯ ವಪುಃ ಶಕ್ಯಂ ಪ್ರವಕ್ತುಂ ವೇಷ ಏವ ವಾ ।
ಸರ್ವಥಾ ತು ತದಾಲೋಕ್ಯ ಸ್ಫುಟೇಯುರಪಿ ಪರ್ವತಾಃ ॥೭॥

ಆ ವ್ಯಕ್ತಿಯ ದೇಹವನ್ನು, ವೇಷವನ್ನು ವರ್ಣಿಸಲು ಶಕ್ಯವಿಲ್ಲ, ನಿಶ್ಚಿತವಾಗಿಯೂ ಆ ವ್ಯಕ್ತಿಯನ್ನು ಕಂಡಲ್ಲಿ ಪರ್ವತಗಳೇ ಸಿಡಿದುಹೋಗುವವು.

ತಸ್ಯಾಸ್ಯ ನಾಸಿಕಾಯಾಶ್ಚ ಶ್ರವಣಾಭ್ಯಾಂ ಚ ಭಾರತ ।
ತೇಭ್ಯಶ್ಚಾಕ್ಷಿಸಹಸ್ರೇಭ್ಯಃ ಪ್ರಾದುರಾಸನ್ ಮಹಾರ್ಚಿಷಃ ॥೮॥

ಆತನ ಮುಖ ಮೂಗು ಕಿವಿಗಳಿಂದ ಆ ಸಾವಿರಾರು ಕಣ್ಣುಗಳಿಂದ ಭಾರೀ ಬೆಂಕಿಯ ಜ್ವಾಲೆಯು ಪ್ರಾದುರ್ಭವಿಸಿತು.

ತಥಾ ತೇಜೋಮರೀಚಿಭ್ಯಃ ಶಂಖಚಕ್ರಗದಾಯುಧಾಃ ।
ಪ್ರಾದುರಾಸನ್ ಹೃಷೀಕೇಶಾಃ ಶತಶೋಽಥ ಸಹಸ್ರಶಃ ॥೯॥

ಹಾಗೆಯೇ ತೇಜೋಕಿರಣಗಳಿಂದ ಲಕ್ಷಾವಧಿ ವಿಷ್ಣುಗಣಗಳು ಶಂಖ ಚಕ್ರ ಗದಾ ಮುಂತಾದ ಆಯುಧಗಳು ಪ್ರಕಟಗೊಂಡವು.

ತದತ್ಯದ್ಭುತಮಾಲೋಕ್ಯ ಸರ್ವಭೂತಭಯಂಕರಮ್ ।
ದ್ರೌಣಿರವ್ಯಥಿತೋ ದಿವ್ಯೈರಸ್ತ್ರೈಸ್ತ್ರೀರವಾಕಿರತ್ ॥೧೦॥

ಪ್ರಾಣಿಸಾಮಾನ್ಯಕ್ಕೆ ಭೀತಿಗೆ ಕಾರಣವಾದ ಆ ಅದ್ಭುತವನ್ನು ಕಂಡು ವ್ಯಥೆಗೊಳ್ಳದ ದ್ರೋಣಪುತ್ರನು, ದಿವ್ಯ ಅಸ್ತ್ರಗಳನ್ನು (ಆತನ ಮೇಲೆ) ಎಸೆದನು.

ದ್ರೌಣಿಮುಕ್ತಾನ್ ಶಿತಾನ್ ಬಾಣಾನ್ ತದ್ಭೂತಂ ಮಹದಗ್ರಸತ್ ।
ಉದಧೇರಿವ ವಾರ್ಯೋಘಾನ್ ಪಾವಕೋ ಬಡವಾಮುಖಃ ॥೧೧॥

ಸಮುದ್ರದ ಜಲಸಮೂಹವನ್ನು ವಡವಾಗ್ನಿಯು ನುಂಗುವಂತೆ, ಆ ಮಹಾಭೂತವು ದ್ರೋಣಪುತ್ರನು ಎಸೆದ ನಿಶಿತವಾದ ಬಾಣಗಳನ್ನು ನುಂಗಿತು.

ಅಗ್ರಸತ್ ತಾಂಸ್ತಥಾಭೂತಾನ್ ದ್ರೌಣಿನಾ ಪ್ರಹಿತಾನ್ ಶರಾನ್ ॥೧೨॥

ಮತ್ತೂ ದ್ರೋಣಪುತ್ರನು ಎಸೆದ ಅಂತಹವೇ ಬಾಣಗಳನ್ನು ನುಂಗಿತು.

ಅಶ್ವತ್ಥಾಮಾ ಚ ಸಂಪ್ರೇಕ್ಷ್ಯ ತಾನ್ ಶರೌಘಾನ್ ನಿರರ್ಥಕಾನ್ ।
ರಥಶಕ್ತಿಂ ಮುಮೋಚಾಸ್ಮೈ ದೀಪ್ತಾಮಗ್ನಿಶಿಖೋಪಮಾಮ್ ॥೧೩॥

ಅಶ್ವತ್ಥಾಮನಾದರೋ ವ್ಯರ್ಥವಾದ ಆ ಬಾಣಸಮೂಹವನ್ನು ಕಂಡು, ಬೆಂಕಿಯ ಜ್ವಾಲೆಯಂತೆ ಬೆಳಗುವ ರಥಶಕ್ತಿಯನ್ನು ಆತನ ಮೇಲೆ ಎಸೆದನು.

ಸಾ ತದಾಹತ್ಯ ದೀಪ್ತಾಗ್ರ್ಯಾ ರಥಶಕ್ತಿರದೀರ್ಯತ ।
ಯುಗಾಂತೇ ಸೂರ್ಯಮಾಹತ್ಯ ಮಹೋಲ್ಕೇವ ದಿವಶ್ಚ್ಯುತಾ ॥೧೪॥

ಯುಗಾಂತದಲ್ಲಿ ಸೂರ್ಯನಿಗೆ ಬಡಿದು ಆಕಾಶದಿಂದ ಕೆಳಗೆ ಬೀಳುವ ಮಹೋಲ್ಕೆಯಂತೆ, ಆ ರಥಶಕ್ತಿಯು ಬೆಳಗುತ್ತಾ ಆ ಭೂತವನ್ನು ಸಮೀಪಿಸಿ ಪುಡಿಯಾಯಿತು.

ಅಥ ಹೇಮಪ್ರಭಂ ದಿವ್ಯಂ ಖಡ್ಗಮಾಕಾಶವರ್ಚಸಮ್ ।
ಕೋಶಾತ್ ಸಮುದ್ಬಬರ್ಹಾಶು ಬಿಲಾದ್ದೀಪ್ತಮಿವೋರಗಮ್ ॥೧೫॥

ಅನಂತರದಲ್ಲಿ, ಪ್ರಕಾಶಮಾನವಾದ ಸರ್ಪವು ಬಿಲದಿಂದ ಹೊರಬರುವಂತೆ, ಚಿನ್ನದ ಕಾಂತಿಯನ್ನು ಹೊಂದಿರುವ ಆಕಾಶದಂತೆ ನಿರ್ಮಲವಾದ ದಿವ್ಯವಾದ ಖಡ್ಗವನ್ನು ಅಶ್ವತ್ಥಾಮನು ಒರೆಯಿಂದ ಹೊರತೆಗೆದನು.

ಸ ತಂ ಖಡ್ಗವರಂ ಧೀಮಾನ್ ಭೂತಾಯ ಪ್ರಾಹಿಣೋತ್ ತದಾ ।
ಸ ತದಾಸಾದ್ಯ ವೈ ಭೂತಂ ಬಿಲಂ ನಕುಲವದ್ ಯಯೌ ॥೧೬॥

ಆ ಧೈರ್ಯಶಾಲಿಯು ಆ ಖಡ್ಗಶ್ರೇಷ್ಠವನ್ನು ಆ ಭೂತವನ್ನು ಉದ್ದೇಶಿಸಿ ಎಸೆದನು, ಆಗ ಆ ಖಡ್ಗವು ಆತನನ್ನು ಸಮೀಪಿಸಿ ಮುಂಗಸಿಯು ಬಿಲವನ್ನು ಪ್ರವೇಶಿಸಿದಂತೆ ಆತನನ್ನು ಪ್ರವೇಶಿಸಿತು.

ತತಃ ಸ ಕುಪಿತೋ ದ್ರೌಣಿರಿಂದ್ರಕೇತುನಿಭಾಂ ಗದಾಮ್ ।
ಜ್ವಲಂತೀಂ ಪ್ರಾಹಿಣೋತ್ ತಸ್ಮೈ ಭೂತಂ ತಾಮಪಿ ಚಾಗ್ರಸತ್ ॥೧೭॥

ಅನಂತರದಲ್ಲಿ ಕುಪಿತನಾದ ಆ ದ್ರೋಣಪುತ್ರನು ಇಂದ್ರನ ಧ್ವಜದಂತೆ ಪ್ರಜ್ವಲಿಸುವ ಗದೆಯನ್ನು ಆತನನ್ನು ಉದ್ದೇಶಿಸಿ ಎಸೆದನು, ಆದನ್ನೂ ಸಹ ಆ ಭೂತವು ನುಂಗಿತು.

ತತಃ ಸರ್ವಾಯುಧಾಭಾವೇ ವೀಕ್ಷಮಾಣಸ್ತತಸ್ತತಃ ।
ಅಪಶ್ಯತ್ ಕೃತಮಾಕಾಶಮ್ ಅನಾಕಾಶಂ ಜನಾರ್ದನೈಃ ॥೧೮॥

ಅನಂತರದಲ್ಲಿ ಎಲ್ಲ ಆಯುಧಗಳು ಇಲ್ಲವಾಗಲು, ಅತ್ತ ಇತ್ತ ನೋಡುತ್ತಾ, ಜನಾರ್ದನನ ರೂಪಗಳಿಂದ ತೆರವಿಲ್ಲದ ಆಕಾಶವನ್ನು ನೋಡಿದನು.

ತದದ್ಭುತಮಿದಂ ದೃಷ್ಟ್ವಾ ದ್ರೋಣಪುತ್ರೋ ನಿರಾಯುಧಃ ।
ಅಚಿಂತಯತ್ ಸುಸಂತ್ರಸ್ತಃ ಕೃಪಭೋಜವಚಃ ಸ್ಮರನ್ ॥೧೯॥

ನಿರಾಯುಧನಾದ ದ್ರೋಣಪುತ್ರನು ಆಶ್ಚರ್ಯಕರವಾದದ್ದನ್ನು ಕಂಡು, ಕೃಪ, ಭೋಜಕುಲೋತ್ಪನ್ನರ ಮಾತನ್ನು ಸ್ಮರಿಸಿಕೊಳ್ಳುತ್ತಾ, ತುಂಬ ಭೀತನಾದವನಾಗಿ ಆಲೋಚಿಸಿದನು.

ದ್ರೌಣಿಃ

ಬ್ರುವತಾಮಪ್ರಿಯಂ ಪಥ್ಯಂ ಸುಹೃದಾಂ ನ ಶೃಣೋತಿ ಯಃ ।
ಸ ಶೋಚತ್ಯಾಪದಂ ಪ್ರಾಪ್ಯ ಯಥಾऽಹಮವಮತ್ಯ ತೌ ॥೨೦॥

ಅಶ್ವತ್ಥಾಮ– ಯಾರು, ಶ್ರೇಯಸ್ಕರವಾದ ಅದರೆ ಮನಸ್ಸಿಗೆ ರುಚಿಸದ ಸ್ನೇಹಿತನ ಮಾತನ್ನು ಕೇಳುವದಿಲ್ಲವೊ ಆತನು, ಅವರೀರ್ವರನ್ನು (ಕೃಪ, ಕೃತವರ್ಮರನ್ನು) ಅವಮಾನಿಸಿದ ನನ್ನಂತೆ, ಅನರ್ಥವನ್ನು ಹೊಂದಿ ದುಃಖಿಸುವನು.

ಶಾಸ್ತ್ರದೃಷ್ಟಮವಜ್ಞಾಯ ಸಮತೀತ್ಯ ಜಿಘಾಂಸತಿ ।
ಸ ಪಥಃ ಪ್ರಚ್ಯುತೋ ಧರ್ಮ್ಯಾದ್ ವಿಪಥೇ ಪ್ರತಿಹನ್ಯತೇ ॥೨೧॥

ಶಾಸ್ತ್ರಸಂಮತವಾದದ್ದನ್ನು ಅವಗಣಿಸಿ, (ಎಲ್ಲೆಯನ್ನು) ಮೀರಿ ಕೊಲ್ಲಲು ಬಯಸುವನೋ ಆತನು ಧರ್ಮಪಥದಿಂದ ಚ್ಯುತನಾಗುವನು, ಅಪಮಾರ್ಗದಲ್ಲಿ ಸಾಗಿ ನಾಶವನ್ನು ಹೊಂದುವನು.

ಗೋಬ್ರಾಹ್ಮಣನೃಪಸ್ತ್ರೀಷು ಸಖ್ಯುರ್ಭ್ರಾತುರ್ಗುರೋಸ್ತಥಾ ।
ವೃದ್ಧಬಾಲಜಡಾನ್ಧೇಷು ಸುಪ್ತಭೀತೋತ್ಥಿತೇಷು ಚ ॥೨೨॥
ಮತ್ತೋನ್ಮತ್ತಪ್ರಮತ್ತೇಷು ನ ಚ ಶಸ್ತ್ರಂ ಪ್ರಯೋಜಯೇತ್ ॥೨೩॥

ಹಸು, ಬ್ರಾಹ್ಮಣ, ರಾಜ, ಹೆಣ್ಣು, ಸ್ನೇಹಿತ, ಸಹೋದರ, ಗುರು, ವದ್ಧ, ಬಾಲಕ, ಹುಚ್ಚ, ಕುರುಡ, ಮಲಗಿದವ, ಹೆದರಿದವ ಮತ್ತು ಆಗಿನ್ನೂ ಎಚ್ಚರಗೊಂಡವ ಇಂತಹವರನ್ನು ಉದ್ದೇಶಿಸಿ ಶಸ್ತ್ರವನ್ನು ಪ್ರಯೋಗಿಸಬಾರದು.

ಇತ್ಯೇವಂ ಗುರುಭಿಃ ಪೂರ್ವಮುಪದಿಷ್ಟಂ ನೃಣಾಂ ಸದಾ ॥೨೪॥

ಈರೀತಿಯಾಗಿ ಗುರುಗಳು ಮನುಜರಿಗೆ ಈ ಹಿಂದೆಯೇ ಉಪದೇಶಿಸಿರುವರು.

ಸೋಽಹಮುತ್ಸೃಜ್ಯ ಪಂಥಾನಂ ಶಾಸ್ತ್ರದೃಷ್ಟಂ ಸನಾತನಮ್ ।
ಅಮಾರ್ಗೇಣೈವಮಾರಬ್ಧೋ ಘೋರಾಂ ತರಿತುಮಾಪದಮ್ ॥೨೫॥

ಅಂತಹ ನಾನು ಶಾಸ್ತ್ರಸಂಮತವಾದ ಪ್ರಾಚೀನವಾದ ಮಾರ್ಗವನ್ನು ಅತಿಕ್ರಮಿಸಿ, ಭಯಂಕರವಾದ ಆಪತ್ತನ್ನು ದಾಟಲು ಅಡ್ಡಹಾದಿಯನ್ನು ತುಳಿದೆನು.

ತಾಂ ಚಾಪದಂ ಘೋರತರಾಂ ಪ್ರವದಂತಿ ಮನೀಷಿಣಃ ।
ಯದುದ್ಯಮ್ಯ ಮಹತ್ಕೃತ್ಯಂ ಭಯಾದಿಹ ನಿವರ್ತತೇ ॥೨೬॥

ದೊಡ್ಡಕಾರ್ಯವನ್ನು ಆರಂಭಿಸಿ ಭಯದಿಂದ ಹಿಂತಿರುಗಿದಲ್ಲಿ, ಅದನ್ನು ಘೋರತರವಾದ ಆಪತ್ತು ಎಂದು ಜ್ಞಾನಿಗಳು ಹೇಳುತ್ತಾರೆ.

ಅಶಕ್ಯಂ ಚೈವ ಕಃ ಕರ್ತುಂ ಶಕ್ತಃ ಶಕ್ತಿಬಲಾದಿಹ ।
ನ ಹಿ ದೈವಾದ್ ಗರೀಯೋ ವೈ ಮಾನುಷ್ಯಂ ಕಿಂಚಿದಿಷ್ಯತೇ ॥೨೭॥

ಈ ಲೋಕದಲ್ಲಿ ಶಕ್ತಿಯ ಬಲದಿಂದಲೇ ಅಶಕ್ಯವಾದದ್ದನ್ನು ಮಾಡಲು ಯಾರು ಸಮರ್ಥರಾಗುವರು? ಮನುಜನಿಗೆ ಅದೃಷ್ಟಕ್ಕಿಂತಲೂ ಹಿರಿದಾದದ್ದು ಯಾವುದೂ ಇಲ್ಲ.

ಮಾನುಷ್ಯಂ ಕುರ್ವತಃ ಕರ್ಮ ಯದಿ ದೈವಾನ್ನ ಸಿದ್ಧ್ಯತಿ ।
ಸ ಪಥಃ ಪ್ರಚ್ಯುತೋ ಧರ್ಮ್ಯಾದ್ ವಿಪಥೇ ಪ್ರತಿಹನ್ಯತೇ ॥೨೮॥

ಮನುಷ್ಯನು ಕರ್ಮವೊಂದನ್ನು ಆರಂಭಿಸಿ, ಅದೃಷ್ಟದಿಂದ ಸಿದ್ಧಿಯನ್ನು ಹೊಂದದ ಪಕ್ಷದಲ್ಲಿ ಆತನು ಧರ್ಮಮಾರ್ಗದಿಂದ ಚ್ಯುತನಾಗುವನು, ಅನ್ಯಾಯದ ಮಾರ್ಗದಲ್ಲಿ (ಸಾಗಿ) ನಾಶವನ್ನು ಹೊಂದುವನು.

ಪ್ರತಿಜ್ಞಾತಂ ಹ್ಯವಿಜ್ಞಾನಂ ಪ್ರವದಂತಿ ಮನೀಷಿಣಃ ॥೨೯॥

ಯದಾರಭ್ಯ ಕ್ರಿಯಾಂ ಕಾಂಚಿದ್ ಭಯಾದಿಹ ನಿವರ್ತತೇ ।
ತದಿದಂ ದುಷ್ಪ್ರಣೀತೇನ ಭಯಂ ಮಾಂ ಸಮುಪಸ್ಥಿತಮ್ ॥೩೦॥

ಕಾರ್ಯವೊಂದನ್ನು ಆರಂಭಿಸಿ ಯಾವುದೋ ಭಯದಿಂದ (ಆ ಕಾರ್ಯದಿಂದ) ನಿವೃತ್ತನಾದಲ್ಲಿ ಆಗ ಪ್ರಾಜ್ಞರು 'ತಿಳುವಳಿಕೆಯಿಲ್ಲದೇ ಪ್ರತಿಜ್ಞೆಯನ್ನು ಮಾಡಿರುವನು' ಎಂದು ಹೇಳುವರು . ಆ ಯಾವ ಭಯವು ಅವಿನೀತನಾದ ನನಗೆ ಈಗ ಪ್ರಾಪ್ತವಾಗಿದೆ,

ನ ಹಿ ದ್ರೋಣಸುತಃ ಸಂಖ್ಯೇ ನಿವರ್ತೇತ ಕಥಂಚನ ।
ಇದಂ ಚ ಸುಮಹದ್ಭೂತಂ ದೈವದಂಡಮಿವೋದ್ಯತಮ್ ॥೩೧॥

ದ್ರೋಣಪುತ್ರನು ಎಂದೂ ಯುದ್ಧದಿಂದ ಹಿಂದಿರುಗಿದವನಲ್ಲ, ಆದರೆ ದೈವದಂಡದಂತೆ ಈ ಭಾರೀ ಭೂತವು ಎದ್ದು ನಿಂತಿದೆ.

ನ ಚೈತದಭಿಜಾನಾಮಿ ಚಿಂತಯನ್ನಪಿ ಸರ್ವಥಾ ॥೩೨॥

ಆಲೋಚಿಸಿದರೂ ಸರ್ವಥಾ ನಾನು ಇದನ್ನು ತಿಳಿಯಲಾರೆ.

ಧ್ರುವಂ ಯೇಯಮಧರ್ಮೇಣ ಪ್ರಹಿತಾ ಕಲುಷಾ ಮತಿಃ ।
ತಸ್ಯಾಃ ಫಲಮಿದಂ ಘೋರಂ ಪ್ರತಿಘಾತಾಯ ದೃಶ್ಯತೇ ॥೩೩॥

ನಿಶ್ಚಯವಾಗಿಯೂ, ಅಧರ್ಮದಿಂದ ಆಘಾತವಾಗಿ ಈ ಬುದ್ಧಿಯು ಕಲುಷಿತವಾಯಿತು, ಅದರ ಫಲವೆಂಬಂತೆ ಇದು ಘೋರ ಪ್ರತಿಘಾತಕ್ಕಾಗಿ ಬಂದಿದೆ.

ತದಿದಂ ದೈವವಿಹಿತಂ ಮಮ ಸಂಖ್ಯೇ ನಿವರ್ತನಮ್ ।
ನಾನ್ಯತ್ರ ದೈವಾದುದ್ಯಂತುಮ್ ಇಹ ಶಕ್ಯಂ ಕಥಂಚನ ॥೩೪॥

ನಾನು ಯುದ್ಧದಿಂದ ನಿವೃತ್ತನಾಗುವ ಈ ಪ್ರಸಂಗವು ದೈವದಿಂದ ವಿಹಿತವಾದದ್ದು. ದೈವದ ಹೊರತಾಗಿ ಬೇರೆ ಯಾರಿಗೂ ಉದ್ಯುಕ್ತನಾದ ನನ್ನನ್ನು ತಡೆಯಲು ಶಕ್ಯವಿಲ್ಲ.

ಸೋಽಹಮದ್ಯ ಮಹಾದೇವಂ ಪ್ರಪದ್ಯೇ ಶರಣಂ ಪ್ರಭುಮ್ ।
ದೈವದಂಡಮಿದಂ ಘೋರಂ ಸ ಹಿ ಮೇ ನಾಶಯಿಷ್ಯತಿ ॥೩೫॥

ಅಂತಹ ನಾನು ಪ್ರಭುವಾದ ಮಹಾದೇವನನ್ನು ಶರಣು ಹೊಂದುವೆನು. ಆತನು ನನ್ನ ಪಾಲಿನ ಈ ಘೋರವಾದ ದೈವದಂಡವನ್ನು ನಾಶಗೊಳಿಸುವನು.

ಕಪರ್ದಿನಂ ಪ್ರಪದ್ಯೇಽಹಂ ದೇವದೇವಮ್ ಉಮಾಪತಿಮ್ ।
ಕಪಾಲಮಾಲಿನಂ ರುದ್ರಂ ಭಗನೇತ್ರಹರಂ ಹರಮ್ ॥೩೬॥

ನಾನು ಜಟಾಧಾರಿಯನ್ನು, ದೇವದೇವನನ್ನು, ಉಮಾಪತಿಯನ್ನು, ಕಪಾಲಮಾಲಿಯನ್ನು, ರುದ್ರನನ್ನು, ಭಗನಾಮಕ ಸೂರ್ಯನ ನೇತ್ರವನ್ನು ನಾಶಗೊಳಿಸಿದವನನ್ನು, ಹರನನ್ನು ಶರಣು ಹೊಂದುವೆನು.

ಸ ಹಿ ದೇವೋಽತ್ಯಗಾದ್ ದೇವಾಂಸ್ತಪಸಾ ನಿಯಮೇನ ತು ।
ತಸ್ಮಾಚ್ಛರಣಮಭ್ಯೇಷ್ಯೇ ಗಿರೀಶಂ ಶೂಲಪಾಣಿನಮ್ ॥೩೭॥

ಆ ದೇವನು ಎಲ್ಲ ದೇವತೆಗಳನ್ನು ತಪದಿಂದ ನಿಯಮಗಳಿಂದ ಮೀರಿದವ, ಆದ್ದರಿಂದ ಶೂಲಪಾಣಿಯಾದ ಗಿರೀಶನನ್ನು ಶರಣು ಹೊಂದುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸೌಪ್ತಿಕಪರ್ವಣಿ ದ್ರೋಣೇರ್ಮಹದ್ಭೂತದರ್ಶನಂ ನಾಮ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಅತಸ್ತಯಾ ಪ್ರೇರಿತೇನ ಸ್ವಾತ್ಮನೈವಾಖಿಲೇಷ್ವಪಿ ।
ಆಯುಧೇಷು ನಿಗೀರ್ಣೇಷು ದ್ರೌಣಿರ್ಯಜ್ಞಂ ತು ಮಾನಸಮ್ ।
ಚಕ್ರೇಽತ್ಮಾನಂ ಪಶುಂ ಕೃತ್ವಾ ಸ್ವಾತ್ಮಸ್ಥಾಯೈವ ವಿಷ್ಣವೇ ॥

ಅದರಿಂದ ಹರಿಶಕ್ತಿಯಿಂದ ಪ್ರೇರಿತನಾದ, ತನ್ನ ಸ್ವರೂಪನೇ ಆದ ರುದ್ರ ತನ್ನೆಲ್ಲ ಆಯುಧಗಳನ್ನೂ ನುಂಗಿದಾಗ ಅಶ್ವತ್ಥಾಮನು ತನ್ನೊಳಗಿರುವ ವಿಷ್ಣುವಿಗೆ ತನ್ನನ್ನು ಪಶುವೆಂದು ಚಿಂತಿಸಿ ಮಾನಸಯಜ್ಞ ನಡೆಸಿದನು.

ಯಜ್ಞತುಷ್ಟೇನ ಹರಿಣಾ ಪ್ರೇರಿತಃ ಶಂಕರಃ ಸ್ವಯಮ್ ।
ಆತ್ಮನೇ ದ್ರೋಣಪುತ್ರಾಯ ದದೌ ಸರ್ವಾಯುಧಾನಿ ಚ ॥

ಉವಾಚ ಚಾಹಮಾದಿಷ್ಟೋ ವಿಷ್ಣುನಾ ಪ್ರಭವಿಷ್ಣುನಾ ।
ಅರಕ್ಷಂ ಪಾರ್ಥಶಿಬಿರಮಿಯಂತಂ ಕಾಲಮೇವ ತು ॥

ತದಿಚ್ಛಯೈವ ನಿರ್ದಿಷ್ಟೋ ದಾಸ್ಯೇ ಮಾರ್ಗಂ ತವಾದ್ಯ ಚ ।
ಆಯುಧಾನಿ ಚ ಸರ್ವಾಣಿ ಹಂತುಂ ಸರ್ವಾನಿಮಾನ್ ಜನಾನ್ ॥

ಯಜ್ಞದಿಂದ ಸಂತುಷ್ಟನಾದ ಹರಿಯ ಪ್ರೇರಣೆಯಿಂದ ರುದ್ರ ತನ್ನ ಸ್ವರೂಪ ಭೂತನಾದ ಅಶ್ವತ್ಥಾಮನಿಗೆ ಎಲ್ಲ ಆಯುಧಗಳನ್ನೂ ಹಿಂತಿರುಗಿಸಿದನು ಮತ್ತು ಹೇಳಿದನು 'ನಾನು ಇಷ್ಟು ಕಾಲದವರೆಗೆ ಸರ್ವರಕ್ಷಕನಾದ ಹರಿಯ ಆಜ್ಞೆಯಿಂದ ಪಾಂಡವರ ಶಿಬಿರವನ್ನು ರಕ್ಷಿಸಿದ್ದೇನೆ. ಈಗ ಅವನ ಆಜ್ಞೆಯಿಂದಲೆ ಪ್ರೇರಿತನಾಗಿ ನಾನು ನಿನಗೆ ಮಾರ್ಗ ಕೊಡುತ್ತೇನೆ. ಈ ಎಲ್ಲ ಜನರನ್ನು ಕೊಲ್ಲಲು ಎಲ್ಲ ಆಯುಧಗಳನ್ನೂ ಕೊಡುತ್ತೇನೆ'.

ಇತ್ಯುದೀರ್ಯ ಪ್ರದಾಯಾಽಶು ಸರ್ವಾ ಹೇತೀರ್ವೃಷಧ್ವಜಃ ।
ತತ್ರೈವಾಂತರ್ದಧೇ ಸೋಽಪಿ ಪ್ರೋವಾಚ ಕೃಪಸಾತ್ವತೌ ॥

ರುದ್ರನು ಹೀಗೆ ಹೇಳಿ ಬೇಗನೆ ಎಲ್ಲ ಆಯುಧಗಳನ್ನೂ ಅಶ್ವತ್ಥಾಮನಿಗೆ ಕೊಟ್ಟು ಅಲ್ಲಿಯೇ ಅದೃಶ್ಯನಾದನು. ಬಳಿಕ ಅಶ್ವತ್ಥಾಮನು ಕೃಪ-ಕೃತವರ್ಮರಿಗೆ ಹೇಳಿದನು.

ಯೇ ನಿರ್ಯಾಸ್ಯಂತಿ ಶಿಬಿರಾಜ್ಜಹಿತಂ ತಾಂಸ್ತು ಸರ್ವಶಃ ।
ಇತ್ಯುಕ್ತ್ವಾ ಪ್ರವಿವೇಶಾಂತರ್ಧನ್ವೀ ಖಡ್ಗೀ ಕೃತಾಂತವತ್ ॥

'ಯಾರು ಶಿಬಿರದಿಂದ ಹೊರಗೆ ಹೋಗುವರೋ ಅವರೆಲ್ಲರನ್ನೂ ಕೊಲ್ಲಿರಿ'. ಅಶ್ವತ್ಥಾಮನು ಹೀಗೆ ಹೇಳಿ ಬಿಲ್ಲು, ಖಡ್ಗಗಳನ್ನು ಹಿಡಿದು ಯಮನಂತೆ ಶಿಬಿರದೊಳಗೆ ಪ್ರವೇಶಿಸಿದನು.

★ ★ ★ ★ ★

ಏಳನೆಯ ಅಧ್ಯಾಯ

ಅಶ್ವತ್ಥಾಮನಿಂದ ಶಿವನ ಸ್ತುತಿ, ಆತನ ಮುಂಭಾಗದಲ್ಲಿ ಅಗ್ನಿಯ ಪ್ರಾದುರ್ಭಾವ, ಆತನ ಸಮೀಪಕ್ಕೆ ನಾನಾವಿಧಗಳಾದ ಭಯಂಕರಗಳಾದ ಭೂತಗಳ ಆಗಮನ, ರುದ್ರಾಂತರ್ಯಾಮಿಗೆ ತನ್ನನ್ನೇ ಹವಿಸ್ಸನ್ನಾಗಿಸಿಕೊಂಡು ಕುಂಡವನ್ನು ಪ್ರವೇಶಿಸಿದನು. ಅಶ್ವತ್ಥಾಮನಿಗೆ ರುದ್ರದೇವನು ಖಡ್ಗವನ್ನು ನೀಡಿ ಅಶ್ವತ್ಥಾಮನಲ್ಲಿ ಲೀನನಾಗುವನು, ಅನಂತರದಲ್ಲಿ ಅಶ್ವತ್ಥಾಮನು ಪಾಂಡವರ ಶಿಬಿರವನ್ನು ಪ್ರವೇಶಿಸುವುದು.

ಸಂಜಯಃ

ಏವಂ ಸಂಚಿಂತಯಿತ್ವಾ ತು ದ್ರೋಣಪುತ್ರೋ ವಿಶಾಂಪತೇ ।
ಅವತೀರ್ಯ ರಥೋಪಸ್ಥಾದ್ ದಧ್ಯೌ ಸಂಪ್ರಯತಃ ಸ್ಥಿತಃ ॥೧॥

ಸಂಜಯ– ಮಹಾರಾಜನೆ! ದ್ರೋಣಪುತ್ರನು ಈ ರೀತಿಯಾಗಿ ಆಲೋಚಿಸಿ, ರಥದಿಂದ ಕೆಳಗಿಳಿದು ಮನದಲ್ಲಿ ಧ್ಯಾನಿಸುತ್ತಾ, ಕೈಜೋಡಿಸಿ ನಿಂತನು

ದ್ರೌಣಿಃ

ಉಗ್ರಂ ಸ್ಥಾಣುಂ ಶಿವಂ ರುದ್ರಂ ಶರ್ವಮೀಶಾನಮೀಶ್ವರಮ್ ।
ಗಿರೀಶಂ ವರದಂ ದೇವಂ ಭವಂ ಭಾವನಮವ್ಯಯಮ್ ॥೨॥

ಶಿತಿಕಂಠಮಜಂ ರುದ್ರಂ ದಕ್ಷಕ್ರತುಹರಂ ಹರಮ್ ।
ವಿಶ್ವರೂಪಂ ವಿರೂಪಾಕ್ಷಂ ಬಹುರೂಪಮುಮಾಪತಿಮ್ ॥೩॥

ಶ್ಮಶಾನನಿಲಯಂ ದೃಪ್ತಂ ಮಹಾಗಣಪತಿಂ ವಿಭುಮ್ ।
ಖಟ್ವಾಂಗಧಾರಿಣಂ ಮುಂಡಂ ಜಟಿಲಂ ಬ್ರಹ್ಮಚಾರಿಣಮ್ ॥೪॥

ಮನಸಾ ಹ್ಯನುಚಿಂತ್ಯೈನಂ ದುಷ್ಕರೇಣಾಲ್ಪತೇಜಸಾ ।
ಸೋಽಹಮಾತ್ಮೋಪಹಾರೇಣ ಯಕ್ಷೇ ತ್ರಿಪುರಘಾತಿನಮ್ ॥೫॥

ಅಶ್ವತ್ಥಾಮ- (ದುಷ್ಪರಿಗೆ) ಕ್ರೂರನಾದ, ಅಚಲನಾಗಿರುವ, (ದುಷ್ಪರಿಗೆ) ಭೀಕರನಾಗಿರುವ, ಮಂಗಳಕರನಾದ, ಈಶಾನ್ಯದಿಕ್ಪಾಲನಾದ, ಸರ್ವಸ್ವಾಮಿಯಾದ, ಗಿರಿಗೊಡೆಯನಾದ, ವರವನ್ನು ನೀಡುವ, ಕ್ರೀಡಾದಿ ಗುಣಗಳಿಂದ ಕೂಡಿದ, (ಜಗದ) ಉತ್ಪತ್ತಿಗೆ ಕಾರಣನಾದ, (ಈ ಜಗದ) ಅಸ್ತಿತ್ವಕ್ಕೆ ಕಾರಣನಾದ, ನೀಲಕಂಠನಾದ, ಹುಟ್ಟಿಲ್ಲದ, (ಪಾಪಿಗಳನ್ನು) ರೋದಿಸುವಂತೆ ಮಾಡುವ, ದಕ್ಷಪ್ರಜಾಪತಿಯ ಯಜ್ಞವನ್ನು ನಾಶಗೊಳಿಸಿದ, ಪಾಪಗಳನ್ನು ಪರಿಹರಿಸುವ, ಎಲ್ಲ ವಿಧದ ರೂಪಗಳನ್ನು ಹೊಂದಿದ, ಮೂರುಕಣ್ಣುಗಳನ್ನು ಹೊಂದಿದ, ನಾನಾರೂಪಗಳನ್ನು ಧರಿಸಿದ, ಉಮಾದೇವಿಯ ಸ್ವಾಮಿಯಾದ, ಶ್ಮಶಾನದಲ್ಲಿ ವಾಸಿಸುವ, ಭಯರಹಿತನಾದ, ಮಹಾಗಣಕ್ಕೆ ಅಧಿಪತಿಯಾದ, ಸ್ವಾಮಿಯಾದ, ಖಟ್ವಾಂಗವನ್ನು (ಆಯುಧ ವಿಶೇಷವನ್ನು) ಧರಿಸಿದ, (ತಲೆಯಲ್ಲಿ) ಕೂದಲನ್ನು ಹೊಂದಿದ, ಜಟಾಧಾರಿಯಾದ, ಬ್ರಹ್ಮಚರ್ಯವ್ರತವನ್ನು ಆಚರಿಸುವವ, ತ್ರಿಪುರಾಂತಕನಾದ ಈತನನ್ನು ಮನಸ್ಸಿನಿಂದ ಸ್ಮರಿಸುತ್ತಾ, ಅಲ್ಪರಿಂದ ಆಚರಿಸಲು ಆಗದ ಆತ್ಮಾರ್ಪಣದಿಂದ ಈಗ ನಾನು ಹೋಮಿಸುವೆನು.

ಸ್ತುತಂ ಸ್ತುತ್ಯಂ ಸ್ತೂಯಮಾನಮ್ ಅಮೋಘಂ ಚರ್ಮವಾಸಸಮ್ ।
ವಿಲೋಹಿತಂ ನೀಲಕಂಠಂ ಸುಸೂಕ್ಷ್ಮಂ ದುರ್ನಿವಾರಣಮ್ ॥೬॥

ಶುಕ್ರಂ ವಿಶ್ವಸೃಜಂ ಬ್ರಹ್ಮ ಬ್ರಹ್ಮಚಾರಿಣಮೇವ ಚ ।
ಪ್ರತಪಂತಂ ತಪೋ ನಿತ್ಯಮನಂತಂ ತಪಸಾಂ ಪತಿಮ್ ॥೭॥

ಬಹುರೂಪಂ ಗಣಾಧ್ಯಕ್ಷಂ ತ್ರ್ಯಕ್ಷಂ ಪಾರಿಷದಪ್ರಿಯಮ್ ।
ಧನಾಧ್ಯಕ್ಷಪ್ರಿಯಸಖಿಂ ಗೌರೀಹೃದಯನಂದನಮ್ ॥೮॥

ಕುಮಾರಪಿತರಂ ಪಿಂಗಂ ಗೋವೃಷೋತ್ತಮವಾಹನಮ್ ।
ಕೃತ್ತಿವಾಸಸಮತ್ಯುಗ್ರಮ್ ಉಮಾಭೂಷಣತತ್ಪರಮ್ ॥೯॥

ಪರಂ ಪರೇಭ್ಯಃ ಪರಮಂ ಪರಂ ಯಸ್ಮಾನ್ನ ವಿದ್ಯತೇ ।
ಇಷ್ವಸ್ತ್ರೋತ್ತಮಭರ್ತಾರಂ ದಿಗಂತಂ ದೇಶರಕ್ಷಣಮ್ ॥೧೦॥

ಹಿರಣ್ಯಕವಚಂ ದೇವಂ ಚಾರುಮೌಲಿವಿಭೂಷಣಮ್ ।
ಪ್ರಪದ್ಯೇ ಶರಣಂ ದೇವಂ ಪರಮೇಣ ಸಮಾಧಿನಾ ॥೧೧॥

ಭೂತ-ವರ್ತಮಾನ-ಭವಿಷ್ಯಕಾಲಗಳಲ್ಲಿ ಸ್ತುತ್ಯನಾದ, ಹುಸಿಯಿಲ್ಲದವ, ಚರ್ಮವನ್ನು ವಸ್ತ್ರವನ್ನಾಗಿಸಿಕೊಂಡ, ಹಳದಿಯಲ್ಲದ ಬಣ್ಣವನ್ನು (ತಿಳಿಹಳದಿ ಬಣ್ಣವನ್ನು) ಹೊಂದಿದ, ಕಪ್ಪಾದ ಕಂಠದವನಾದ, ಅತಿಸೂಕ್ಷ್ಮನಾದ, ತಡೆಯಿಲ್ಲದ, ಶುಭ್ರನಾದ, ಜಗದ ಸೃಷ್ಟಿಕರ್ತನಾದ, ವೇದಪ್ರತಿಪಾದ್ಯನಾದ, ಬ್ರಹ್ಮಚಾರಿಯಾದ, ತಪವನ್ನು ಆಚರಿಸುತ್ತಿರುವ, ಶಾಶ್ವತನಾದ, ನಾಶರಹಿತನಾದ, ತಪಸ್ವಿಗಳ ಸ್ವಾಮಿಯಾದ, ನಾನಾ ರೂಪಗಳನ್ನು ಹೊಂದಿರುವ, (ಭೂತ)ಗಣದ ಸ್ವಾಮಿಯಾದ, ಮುಕ್ಕಣ್ಣನಾದ, ಸೇವಕಜನಪ್ರಿಯನಾದ, ಕುಬೇರನ ಪ್ರಿಯಮಿತ್ರನಾದ, ಗೌರೀಮನಕ್ಕೆ ಮುದ ನೀಡುವ, ಷಣ್ಮುಖನ ತಂದೆಯಾದ, ಹಳದಿ ಮೈಬಣ್ಣವನ್ನು ಹೊಂದಿದ, ಶ್ರೇಷ್ಠ ವೃಷಭವನ್ನು ವಾಹನವನ್ನಾಗಿಸಿಕೊಂಡ, ಆನೆಯ ಚರ್ಮವನ್ನು ವಸ್ತ್ರವನ್ನಾಗಿಸಿಕೊಂಡ, (ಪಾಪಿಗಳಿಗೆ) ಅತಿ ಉಗ್ರನಾದ, ಉಮಾದೇವಿಗೆ ಇಷ್ಟವನ್ನು ಉಂಟುಮಾಡುವುದರಲ್ಲಿ ಆಸಕ್ತನಾದ, ಉತ್ತಮರಿಗೆ ಉತ್ತಮನಾದ, ಶ್ರೇಷ್ಠನಾದ, ಆತನಿಂದ ಉತ್ತಮರು ಮತ್ತೊಬ್ಬರು ಇಲ್ಲದ, ಶ್ರೇಷ್ಠವಾದ ಬಾಣ ಎಂಬ ಅಸ್ತ್ರವನ್ನು ಧರಿಸಿದ, ತುದಿವರೆಗೂ ಭೂಮಿಯನ್ನು ಕಾಯುವ, ಹೊನ್ನಿನ ಕವಚವನ್ನು ತೊಟ್ಟ ದೇವನಾದ, ಸುಂದರವಾದ ಶಿರಾಭರಣ (ಕಿರೀಟ)ವನ್ನು ತೊಟ್ಟ, ಮಹಾರುದ್ರದೇವನಲ್ಲಿ ಅತಿ ಭಕ್ತಿಯಿಂದ ಶರಣಾಗುವೆನು.

ಇಮಾಂ ಚೇದಾಪದಂ ಘೋರಾಂ ತರಾಮ್ಯದ್ಯ ಸುದುಸ್ತರಾಮ್ ।
ಸರ್ವಭೂತೋಪಹಾರೇಣ ಯಕ್ಷ್ಯೇಽಹಂ ಶುಚಿನಾ ಶುಚಿಮ್ ॥೧೨॥

ಶುಭ್ರನಾದ ದೇವನನ್ನು ಎಲ್ಲ ಸಮರ್ಪಣೀಯ ದ್ರವ್ಯಗಳಿಂದ ಶುಭ್ರನಾಗಿ ಪೂಜಿಸುವೆನು, ದಾಟಲು ಅಸದಳವಾದ ಈ ಘೋರವಾದ ಆಪತ್ತನ್ನು ದಾಟುವೆನು.

ಸಂಜಯಃ

ಇತಿ ತಸ್ಯ ವ್ಯವಸಿತಂ ಜ್ಞಾತ್ವಾ ಯೋಗಾತ್ ಸುಕರ್ಮಣಃ ।
ಪುರಸ್ತಾತ್ ಕಾಂಚನೀ ವೇದೀ ಪ್ರಾದುರಾಸೀನ್ಮಹಾತ್ಮನಃ ॥೧೩॥

ಸಂಜಯ– ಈ ರೀತಿಯಾದ ಆತನ (ಅಶ್ವತ್ಥಾಮನ) ವಿಚಾರವನ್ನು ತಿಳಿದು, ಮಹಾತ್ಮನ (ಅಶ್ವತ್ಥಾಮನ) ಮುಂಭಾಗದಲ್ಲಿ (ಆತನ) ಸತ್ಕರ್ಮದ ಯೋಗದಿಂದ ಸುವರ್ಣಮಯವಾದ ವೇದಿಯು (ಯಜ್ಞಕುಂಡ) ಪ್ರಕಟವಾಯಿತು.

ತಸ್ಯಾಂ ವೇದ್ಯಾಂ ತದಾ ರಾಜನ್ ಚಿತ್ರಭಾನುರಜಾಯತ ।
ಗಾಂ ದಿಶೋ ವಿದಿಶಃ ಖಂ ಚ ಜ್ವಾಲಾಭಿರಭಿಪೂರಯನ್ ॥೧೪॥

ಆಗ ಆದಿ ವೇದಿಯಲ್ಲಿ ದಿಕ್ಕುವಿದಿಕ್ಕುಗಳನ್ನು, ಭೂಮಿ-ಆಕಾಶಗಳನ್ನು ಬೆಳಗುವ ಜ್ವಾಲೆಗಳ ಸಮೂಹವನ್ನು ಹೊಂದಿರುವ ಅಗ್ನಿಯು ಪ್ರಾದುರ್ಭೂತವಾಯಿತು.

ದೀಪ್ತಾಸ್ಯನಯನಾಶ್ಚಾಸನ್ ನೈಕಪಾದಶಿರೋಭುಜಾಃ ।
ದ್ವಿಪಶೈಲಪ್ರತೀಕಾಶಾಃ ಪ್ರಾದುರಾಸನ್ ಮಹಾರಥಾಃ ॥೧೫॥

(ಆ ಅಗ್ನಿಯಿಂದ) ಹೊಳೆಯುವ ಮುಖ, ಕಣ್ಣುಗಳನ್ನು ಹೊಂದಿರುವ ಅನೇಕ ಕಾಲು ತಲೆ ಕೈಗಳನ್ನು ಹೊಂದಿರುವ , ಬೆಟ್ಟದ ಆನೆಗಳಂತೆ ತೋರುವ ಮಹಾರಥಿಕರು ಪ್ರಾದುರ್ಭೂತರಾದರು.

ಶ್ವವರಾಹೋಷ್ಟ್ರರೂಪಾಶ್ಚ ಹಯಗೋಮಾಯುಗೋಮುಖಾಃ ।
ಋಕ್ಷಮಾರ್ಜಾರವದನಾ ದ್ವಿಪವ್ಯಾಘ್ರಮುಖಾಸ್ತಥಾ ॥೧೬॥

ಕಾಕವಕ್ತ್ರಾಃ ಪ್ಲವಮುಖಾಃ ಶುಕವಕ್ತ್ರಾಸ್ತಥೈವ ಚ ।
ಮಹಾಜಗರವಕ್ತ್ರಾಶ್ಚ ಹಂಸವಕ್ತ್ರಾಃ ಸಿತಪ್ರಭಾಃ ॥೧೭॥

ದಾರ್ವಾಘಾಟಮುಖಾಶ್ಚಾಪಿ ಚಾಪವಕ್ತ್ರಾಸ್ತಥೈವ ಚ ।
ಕೂರ್ಮನಕ್ರಮುಖಾಶ್ಚೈವ ಶಿಂಶುಮಾರಮುಖಾಸ್ತಥಾ ॥೧೮॥

ಮಹಾಮಕರವಕ್ತ್ರಾಶ್ಚ ತಿಮಿವಕ್ತ್ರಾಶ್ಚ ಭಾರತ ।
ಹರಿವಕ್ತ್ರಾಃ ಕ್ರೌಂಚಮುಖಾಃ ಕಪೋತಾಹಿಮುಖಾಸ್ತಥಾ ॥೧೯॥

ಪಾರಾವತಮುಖಾಶ್ಚೈವ ಕಂಕವಕ್ತ್ರಾಸ್ತಥೈವ ಚ ।
ಫಣಿವಕ್ತ್ರಾಃ ಸಹಸ್ರಾಕ್ಷಾಸ್ತಥೈವ ಚ ಶತೋದರಾಃ ॥೨೦॥

ಭರತಕುಲೋತ್ಪನ್ನನೆ, ರಾಜನೆ! (ಪ್ರಾದುರ್ಭೂತರಾದವರಲ್ಲಿ ಕೆಲವರು) ನಾಯಿ ಹಂದಿ ಒಂಟೆ ರೂಪಗಳನ್ನು, ಕುದುರೆ ನರಿ ಹಸುಗಳ ಮುಖವನ್ನು, ಕರಡಿ ಬೆಕ್ಕುಗಳ ಮುಖವನ್ನು, ಆನೆ ಹುಲಿಗಳಂತೆ ಮುಖಗಳನ್ನು, ಕಾಗೆಯ ಮುಖವನ್ನು, ಕೋತಿಯ ಮುಖವನ್ನು, ಗಿಳಿಯ ಮುಖವನ್ನು, ಹಾಗೆಯೇ ಭಾರೀ ಹೆಬ್ಬಾವಿನಂತೆ ಮುಖವನ್ನು,

ಬಿಳಿಯ ಹಂಸದ ಮುಖವನ್ನು, ಮರಕುಕ್ಕುಟಹಕ್ಕಿಯ ಮುಖವನ್ನು, ಹಾಗೆಯೆ ನವಿಲಿನ ಮುಖವನ್ನು, ಆಮೆಯ ಮುಖವನ್ನು, ಚೇಳಿನ ಮುಖವನ್ನು, ದೊಡ್ಡಮೊಸಳೆಯ ಮುಖವನ್ನು, ತಿಮಿಂಗಿಲದ ಮುಖವನ್ನು, ಮುಷ್ಯದ ಮುಖವನ್ನು, ಕ್ರೌಂಚಪಕ್ಷಿಯ ಮುಖವನ್ನು, ಪಾರಿವಾಳದ ಮುಖವನ್ನು, ಕೋಗಿಲೆಯ ಮುಖವನ್ನು, ಕುರವಂಕಪಕ್ಷಿಯ ಮುಖವನ್ನು, ಸರ್ಪಗಳ ಮುಖವನ್ನು, ಸಾವಿರಾರು ಕಣ್ಣುಗಳನ್ನು, ನೂರಾರು ಹೊಟ್ಟೆಗಳನ್ನು ಹೊಂದಿದ್ದರು.

ನಿರ್ಮಾಂಸಾಃ ಕಾಕವಕ್ತ್ರಾಶ್ಚ ಶ್ಯೇನವಕ್ತ್ರಾಶ್ಚ ಭಾರತ ।
ತಥೈವಾಶಿರಸೋ ರಾಜನ್ ಋಕ್ಷವಕ್ತ್ರಾಶ್ಚ ಭೀಷಣಾಃ ॥೨೧॥

ಪ್ರದೀಪ್ತಜಿಹ್ವಾನೇತ್ರಾಸ್ಯಾ ಜ್ವಾಲಾವಕ್ತ್ರಸ್ತಥೈವ ಚ ॥೨೨॥

ಶಂಖಮಾಲಾಪರಿಕರಾಃ ಶಂಖಧ್ವನಿಸಮಸ್ವನಾಃ ।
ಜಟಾಧರಾಃ ಪಂಚಶಿಖಾಸ್ತಥಾ ಮುಂಡಾಃ ಕೃಶೋದರಾಃ ॥೨೩॥

ಚತುರ್ದಂಷ್ಟ್ರಾಶ್ಚತುರ್ಜಿಹ್ವಾಃ ಶಂಕುಕರ್ಣಾಃ ಕಿರೀಟಿನಃ ।
ಮೌಂಜೀಧರಾಶ್ಚ ರಾಜೇಂದ್ರ ತಥಾ ಕುಂಚಿತಮೂರ್ಧಜಾಃ ॥೨೪॥

ಮಾಂಸವಿಲ್ಲದ ಶರೀರವನ್ನು, ಕರಿಹಕ್ಕಿಗಳ ಮುಖವನ್ನು, ಗಿಡಗದ ಮುಖವನ್ನು ಹೊಂದಿದ್ದರು. ಹಾಗೆಯೆ ತಲೆಯೇ ಇಲ್ಲದವರು, ಭಯಂಕರವಾದ ರಾಕ್ಷಸರ ಮುಖವನ್ನು ಹೊಂದಿದವರು, ಅತ್ಯಂತ ಪ್ರಕಾಶಮಾನವಾದ ನಾಲಿಗೆ ಕಣ್ಣು ಮುಖಗಳನ್ನು ಹೊಂದಿದವರು, ಹಾಗೆಯೇ ಬೆಂಕಿಯಂತಹ ಮುಖವನ್ನು ಹೊಂದಿದವರು, ಶಂಖಗಳನ್ನು ಮಾಲೆಯನ್ನಾಗಿ ಮಾಡಿಕೊಂಡವರು, ಶಂಖವನ್ನೇ ಪರಿಕರವನ್ನಾಗಿಸಿಕೊಂಡವರು, ಶಂಖದ ಧ್ವನಿಗೆ ಸದೃಶವಾದ ಧ್ವನಿಯನ್ನು ಹೊಂದಿದವರು, ಜಟಾಧಾರಿಗಳು, ಪಂಚಶಿಖಿಗಳು, ತಲೆಯನ್ನು ಬೋಳಿಸಿಕೊಂಡವರು, ತೆಳುವಾದ ಹೊಟ್ಟೆಯನ್ನು ಹೊಂದಿದವರು, ನಾಲ್ಕುಕೋರೆ ಹಲ್ಲುಗಳನ್ನು ಹೊಂದಿದವರು, ನಾಲ್ಕು ನಾಲಿಗೆಗಳನ್ನು ಹೊಂದಿದವರು, ನಿಮಿರಿನಿಂತ ಕಿವಿಗಳನ್ನು ಹೊಂದಿದವರು, ಕಿರೀಟಗಳನ್ನು ಧರಿಸಿದವರು, ಮುಂಜಾಹುಲ್ಲಿನ ಕಟಿಬಂಧವನ್ನು ಹೊಂದಿದವರು, ವಕ್ರವಾದ ಕೂದಲು ಹೊಂದಿದವರು ಆಗಿದ್ದರು.

ಉಷ್ಣೀಷಿಣೋ ಮಕುಟಿನಃ ಚಾರುವಕ್ತ್ರಾಃ ಸ್ವಲಂಕೃತಾಃ ।
ಪದ್ಮೋತ್ಪಲಪೀಡಧರಾಃ ತಥಾ ಕುಮುದಧಾರಿಣಃ ॥೨೫॥

ಮಾಹಾತ್ಮ್ಯೇನ ಚ ಸಂಯುಕ್ತಾಃ ಶತಶೋಽಥ ಸಹಸ್ರಶಃ ।
ಶತಘ್ನೀಚಕ್ರಹಸ್ತಾಶ್ಚ ತಥಾ ಮುಸಲಪಾಣಯಃ ॥೨೬॥

ಭುಷಂಡೀಪಾಶಹಸ್ತಾಶ್ಚ ಗದಾಹಸ್ತಾಶ್ಚ ಭಾರತ ।
ಪೃಷ್ಠೇಷು ಬದ್ಧೇಷುಧಯೋ ಚಿತ್ರಚಾಪಾ ರಣೋತ್ಕಟಾಃ ॥೨೭॥

ಸಧ್ವಜಾಃ ಸಪಾತಾಕಾಶ್ಚ ಸಘಂಟಾಃ ಸಪರಶ್ವಧಾಃ ।
ಮಹಾಪಾಶೋದ್ಯತಕರಾಃ ತಥಾ ಲಗುಡಪಾಣಯಃ ॥೨೮॥

ಶೂಲಹಸ್ತಾಃ ಖಡ್ಗಹಸ್ತಾಃ ಸರ್ಪೋಚ್ಛ್ರಿತಕಿರೀಟಿನಃ ।
ಮಹಾಸರ್ಪಾಂಗದಧರಾಃ ಚಿತ್ರಾಭರಣಧಾರಿಣಃ ॥೨೯॥

ರಾಜರಲ್ಲಿ ಹಿರಿಯನೆ! ಹಾಗೆಯೇ ಕೆಲವರ ತಲೆಕೂದಲು ನಿಮಿರಿನಿಂತಿವೆ, ತಲೆಗೆ ರುಮಾಲನ್ನು ಕೆಲವರು ಸುತ್ತಿದ್ದಾರೆ, ಕಿರೀಟವನ್ನು ಧರಿಸಿದ್ದಾರೆ, ಸುಂದರ ಮುಖಗಳನ್ನು ಹೊಂದಿದವರು, ಆಲಂಕಾರವನ್ನು ಮಾಡಿಕೊಂಡವರು, ಕಮಲ-ನೈದಿಲೆಗಳನ್ನು ಧರಿಸಿದವರು, ಕುಮುದಪುಷ್ಪಗಳನ್ನು ಧರಿಸಿದವರು, ಮಹಿಮೋಪೇತರು, ನೂರಾರು ಚಕ್ರಗಳನ್ನು, ಸಾವಿರಾರು ಶತಘ್ನಿಗಳನ್ನು ಕೈಯಲ್ಲಿ ಹಿಡಿದವರು, ಒನಕೆಗಳನ್ನು ಹಿಡಿದವರು, ಭುಷಂಡಿಗಳನ್ನು (ಆಯುಧವಿಶೇಷ) ಪಾಶಗಳನ್ನು ಕೈಯಲ್ಲಿ ಹೊಂದಿದವರು, ಭರತಕುಲೋತ್ತನನೆ! ಮತ್ತೆ ಕೆಲವರು ಗದೆಗಳನ್ನು ಹಸ್ತಗಳಲ್ಲಿ ಧರಿಸಿದ್ದರು, ಹಿಂಭಾಗದಲ್ಲಿ ಬಾಣಗಳನ್ನು ಬಿಗಿದುಕೊಂಡಿದ್ದರು, ರಣರಂಗದಲ್ಲಿ ಉತ್ಸಾಹಿಶಾಲಿಗಳಾದ ಅವರು ವಿಚಿತ್ರವಾದ ಬಿಲ್ಲುಗಳನ್ನು ಹೊಂದಿದ್ದರು, ಧ್ವಜಗಳನ್ನು ಪತಾಕೆಗಳನ್ನು ಘಂಟೆಗಳನ್ನು ಕೊಡಲಿಗಳನ್ನು ಹೊಂದಿದ್ದರು, ಮೇಲೆತ್ತಿದ ಕೈಗಳಲ್ಲಿ ಮಹಾಪಾಶಗಳನ್ನು ಹೊಂದಿದ್ದರು, ಹಾಗೆಯೆ ಬಡಿಗೆಗಳನ್ನು ಹೊಂದಿದ್ದರು, ಕೈಗಳಲ್ಲಿ ಶೂಲಗಳನ್ನು ಖಡ್ಗಗಳನ್ನು ಹೊಂದಿದ್ದರು, ಕಿರೀಟಗಳು ಸರ್ಪಗಳಿಂದ ಅಲಂಕೃತವಾಗಿದ್ದವು, ಬಾಹುಗಳಲ್ಲಿ ಅಂಗದಾಭರಣಗಳ ಸ್ಥಾನದಲ್ಲಿ ಸರ್ಪಗಳನ್ನು ಧರಿಸಿದ್ದರು, ಚಿತ್ರವಿಚಿತ್ರ ಆಭರಣಗಳನ್ನು ಧರಿಸಿದ್ದರು,

ರಜೋಧ್ವಸ್ತಾಃ ಪಂಕದಿಗ್ಧಾಃ ಸರ್ವೇ ಚಿತ್ರಾಂಬರಸ್ರಜಃ ।
ನೀಲಾಂಗಾಃ ಕಮಲಾಂಗಾಶ್ಚ ಮುಂಡವಕ್ತ್ರಸ್ತಥೈವ ಚ ॥೩೦॥

ಭೇರೀಶಂಖಮೃದಂಗಾಸ್ತೇ ಝುರ್ಝುರಾನಕಗೋಮುಖಾನ್ ।
ಅವಾದಯನ್ ಪಾರಿಷದಾಃ ಸಂಹೃಷ್ಟಾಃ ಕನಕಪ್ರಭಾಃ ॥೩೧॥

ಗಾಯಮಾನಾಸ್ತಥೈವಾನ್ಯೇ ಸಂಹೃಷ್ಟಾಃ ಪುರುಷರ್ಷಭಾಃ ।
ಲಂಘಯಂತಃ ಪ್ಲವಂತಶ್ಚ ವಲ್ಗಂತಶ್ಚ ಮಹಾರಥಾಃ ॥೩೨॥

ಧಾವಂತೋ ಜವನಾಶ್ಚಂಡಾಃ ಪವನೋದ್ಧೂತಮೂರ್ಧಜಾಃ ।
ಮತ್ತಾ ಇವ ಮಹಾನಾಗಾ ವಿನದಂತೋ ಮುಹುರ್ಮುಹುಃ ॥೩೩॥

ಸುಭೀಮಾ ಘೋರರೂಪಾಶ್ಚ ಶೂಲಪಟ್ಟಿಶಪಾಣಯಃ ।
ವಿರಾಗಚಿತ್ರವಸನಾಃ ಚಿತ್ರಮಾಲ್ಯಾನುಲೇಪನಾಃ ॥೩೪॥

ರತ್ನಚಿತ್ರಾಂಗದಧರಾಃ ಸಮುದ್ಯತಕರಾಸ್ತಥಾ ।
ಹಂತಾರೋ ದ್ವಿಷತಾಂ ಶೂರಾಃ ಪ್ರಸಹ್ಯಾಸಹ್ಯವಿಕ್ರಮಾಃ ॥೩೫॥

ಧೂಳುಮೆತ್ತಿಕೊಂಡಿರುವ, ಕೆಸರನ್ನು ಮೆತ್ತಿಕೊಂಡಿರುವ, ಚಿತ್ರವಿಚಿತ್ರ ಬಟ್ಟೆ, ಮಾಲೆಗಳನ್ನು ಧರಿಸಿರುವ, ಕರಿಯ ಮೈಬಣ್ಣವನ್ನು ಹೊಂದಿರುವ, ಕಮಲದಂತೆ ಕೆಂಪಾದ ಬಣ್ಣವನ್ನು ಹೊಂದಿರುವ, ಹಾಗೆಯೇ ಮೀಸೆಗಳನ್ನು ಬೋಳಿಸಿಕೊಂಡಿರುವ, ನಗಾರಿ ಶಂಖ ಮೃದಂಗಗಳನ್ನು ಹೊಂದಿರುವ, ಝುರ್ಝುರ ಆನಕ ಗೋಮುಖಗಳನ್ನು ನುಡಿಸುತ್ತಿರುವ ಆ ಪರಿವಾರದವರು ಹೊಂಬಣ್ಣದವರಾಗಿದ್ದರು, ಅತ್ಯಂತ ಸಂತಸದಿಂದ ಕೂಡಿದವರಾಗಿದ್ದರು. ಹಾಗೆಯೇ ಕೆಲವು ಪುರುಷಶ್ರೇಷ್ಠರು ಸಂತಸದಿಂದ ಹಾಡುತ್ತಿದ್ದರು, ಮಹಾರಥಿಕರಾದ ಕೆಲವರು ಓಡುತ್ತಿದ್ದರು, ಹಾರುತ್ತಿದ್ದರು, ಏನನ್ನೋ ಕೂಗಿ ಹೇಳುತ್ತಿದ್ದರು, ಮದಿಸಿದ ಆನೆಗಳಂತೆ ಮತ್ತೆ ಮತ್ತೆ ಮಹಾನಾದವನ್ನು ಮಾಡುತ್ತಿದ್ದರು. ಭಯಂಕರರಾದ ಅವರು ಘೋರರೂಪಗಳನ್ನು ಹೊಂದಿದ್ದರು, ಶೂಲವನ್ನು ಪಟ್ಟಿಶವನ್ನು ಕೈಯಲ್ಲಿ ಹಿಡಿದಿದ್ದರು, ಬಣ್ಣಕುಂದಿದ ವಿಚಿತ್ರವಾದ ಬಟ್ಟೆಗಳನ್ನು ಧರಿಸಿದ್ದರು, ಚಿತ್ರವಾದ ಮಾಲೆ ಗಂಧವನ್ನು ಲೇಪಿಸಿಕೊಂಡಿದ್ದರು. ರತ್ನಖಚಿತವಾದ ಭುಜಕೀರ್ತಿಯನ್ನು ಧರಿಸಿದ್ದರು, ಕೈಗಳನ್ನು ಮೇಲೆ ಎತ್ತಿದ್ದರು, ಬೇರೆಯವರು ಸಹಿಸಲಾಗದ ಪರಾಕ್ರಮಿಗಳಾದ ಶೂರರಾದ ದ್ವೇಷಿಗಳನ್ನು ಸಂಹರಿಸುವರಾಗಿದ್ದರು.

ಪಾತಾರೋಽಸೃಗ್ವಸೌಘಾನಾಂ ಮಾಂಸಾಂತ್ರಕೃತಭೋಜನಾಃ ।
ಚೂಡಾಲಾಃ ಕರ್ಣಿಕಾರಾಶ್ಚ ಪ್ರಹೃಷ್ಟಾ ಮಂಥರೋದರಾಃ ।
ಅತಿಹ್ರಸ್ವಾತಿದೀರ್ಘಾಶ್ಚ ಪ್ರಲಂಭಾಶ್ಚಾತಿಭೈರವಾಃ ॥೩೬॥

ವಿಕಟಾಃ ಕಾಲಲಂಬೋಷ್ಠಾ ಬೃಹಚ್ಛೇಫಾಂಡಪಿಂಡಕಾಃ ॥೩೭॥

ಮಹಾರ್ಹನಾನಾಮುಕುಟಾ ಮುಂಡಾಶ್ಚ ಜಟಿಲಾಃ ಪರೇ ।
ಸಾರ್ಕೇಂದುಗ್ರಹನಕ್ಷತ್ರಾಂ ದ್ಯಾಂ ಕುರ್ವಂಸ್ತೇ ಮಹೀತಳೇ ॥೩೮॥

ಉತ್ಸಹೇರಂಶ್ಚ ಯೇ ಹಂತುಂ ಭೂತಗ್ರಾಮಂ ಚತುರ್ವಿಧಮ್ ।
ಯೇ ಚ ವೀತಭಯಾ ನಿತ್ಯಂ ಹರಸ್ಯ ಭ್ರುಕುಟೀತಟಾಃ ॥೩೯॥

ರಕ್ತ ವಸಾ ಮುಂತಾದವುಗಳನ್ನು ಪಾನಮಾಡುತ್ತಾ ಮಾಂಸ ಕರಳುಗಳನ್ನು ತಿನ್ನುತ್ತಿದ್ದರು. ಜುಟ್ಟನ್ನು ಹೊಂದಿದವರು, ಕಣಗಿಲೆ ಪುಷ್ಪವನ್ನು ಮುಡಿದವರು, ಅತಿಹರ್ಷಗೊಂಡವರು, ಅತಿದಪ್ಪನೆಯ ಹೊಟ್ಟೆಯನ್ನು ಹೊಂದಿದವರು, ಅತಿಕುಳ್ಳಾಗಿರುವವರು, ಅತಿಎತ್ತರವಾಗಿದ್ದು ಜೋತಾಡುವ ಅವಯವಗಳನ್ನು ಹೊಂದಿದವರು, ಅತಿಭೀಕರವಾದ ರೂಪಗಳನ್ನು ಹೊಂದಿದವರು, ಅತಿಕುರೂಪಿಗಳಾದವರು, ಕರಿಯದಾದ ಉದ್ದನೆಯ ತುಟಿಗಳನ್ನು ಹೊಂದಿದವರು, ದೊಡ್ಡದಾದ ಲಿಂಗವನ್ನು ವೃಷಣವನ್ನು ಹೊಂದಿದ್ದರು, ಬೆಲೆಬಾಳುವ ನಾನಾ ಕಿರೀಟಗಳನ್ನು ಹೊಂದಿದವರು, ಮತ್ತೆ ಕೆಲವರು ತಲೆಬೋಳಿಸಿಕೊಂಡವರು, ಜುಟ್ಟನ್ನು ಬೆಳೆಸಿಕೊಂಡವರು, ಭೂಮಿಗೆ ಸೂರ್ಯ ಚಂದ್ರ ಗ್ರಹ ನಕ್ಷತ್ರಗಳನ್ನು ತರುವ ಸಾಮರ್ಥ್ಯವನ್ನು ಹೊಂದಿದವರು ಕೆಲವರು, ಭೂಮಿಯ ನಾಲ್ಕುವಿಧವಾದ ಪ್ರಾಣಿಗಳನ್ನು ಸಂಹರಿಸಲು ಉತ್ಸುಕರಾದವರು, ಯಾರು ರುದ್ರದೇವರ ಹುಬ್ಬಿನ ಸಮೀಪದಿಂದ ಬಂದವರೋ ಅವರು ನಿತ್ಯ ಭಯರಹಿತರು (ಕೋಪಾಭಿಮಾನಿ ರುದ್ರದೇವ, ಹುಬ್ಬುಕೋಪದ ಕೇಂದ್ರ, ಅಲ್ಲಿಂದಲೇ ಉತ್ಪನ್ನರಾದ ಈ ಭೂತನಾಥರು ಭಯರಹಿತರು ಎಂಬ ಭಾವ.).

ಕಾಮಕಾರಕರಾಃ ಸಿದ್ಧಾಃ ತ್ರೈಲೋಕ್ಯಸ್ಯೇಶ್ವರೇಶ್ವರಾಃ ।
ನಿತ್ಯಾನಂದಾಃ ಪ್ರಮುದಿತಾ ವಾಗೀಶಾ ವೀತಮತ್ಸರಾಃ ॥೪೦॥

ಪ್ರಾಪ್ಯಾಷ್ಟಗುಣಮೈಶ್ವರ್ಯಂ ಯೇ ನ ಯಾಂತಿ ಚ ವಿಸ್ಮಯಮ್ ।
ಯೇಷಾಂ ವಿಸ್ಮಯತೇ ನಿತ್ಯಂ ಕರ್ಮಭಿರ್ಭಗವಾನ್ ಭವಃ ॥೪೧॥

ಸ್ವೇಚ್ಛಾನುಸಾರಿಯಾಗಿ ಕರ್ಮಗಳನ್ನು ಮಾಡುವವರು, ಸಿದ್ಧರು, ಮೂರು ಲೋಕಗಳ ಒಡೆಯರ ಒಡೆಯರು, ನಿತ್ಯ ಆನಂದ ನಿರ್ಭರರು, ಒಳ್ಳೆಯ ವಾಗ್ಮಿಗಳು, ಮಾತ್ಸರ್ಯರಹಿತರು, ಯಾರು ಅಷ್ಟೈಶ್ವರ್ಯವು ಎಂಟು ಮಡಿಯಾಗಿ ಪ್ರಾಪ್ತವಾದರೂ ಸಂಭ್ರಮಕ್ಕೆ ಒಳಗಾಗರೋ, ಅಂತಹ ಇವರ ನಿತ್ಯ ಕರ್ಮಗಳಿಂದ ಪೂಜ್ಯನಾದ ಭವನೇ ಆಶ್ಚರ್ಯವಂತನಾಗುವನು.

ಮನೋವಾಕ್ಕರ್ಮಭಿರ್ಯುಕ್ತೈರ್ನಿತ್ಯಮಾರಾಧಿತಶ್ಚ ಯೈಃ ।
ಮನೋವಾಕ್ಕರ್ಮಭಿರ್ಭಕ್ತಾನ್ ಪಾತಿ ಪುತ್ರಾನಿವೌರಸಾನ್ ॥೪೨॥

ಮಾನಸಿಕ ವಾಚನಿಕ ಕಾಯಿಕ ಕರ್ಮಗಳಿಂದ ನಿತ್ಯ ಆರಾಧಿತನಾದ ಶಿವನು ಮನೋವಾಕ್ಕರ್ಮಗಳಿಂದ ಸ್ವಂತ ಪುತ್ರರಂತೆ ತನ್ನ ಭಕ್ತರನ್ನು ಸಲಹುವನು.

ಪಿಬಂತೋಽಸೃಗ್ವಸಾಶ್ಚಾನ್ಯೇ ಕ್ರುದ್ಧಾ ಬ್ರಹ್ಮದ್ವಿಷಾಂ ಸದಾ ।
ಚತುರ್ವಿಧಾತ್ಮಕಂ ಸೋಮಂ ಯೇ ಪಿಬಂತಿ ಚ ನಿತ್ಯದಾ ॥೪೩॥

ಶ್ರುತೇನ ಬ್ರಹ್ಮಚರ್ಯೇಣ ತಪಸಾ ಚ ದಮೇನ ಚ ।
ಯೇ ಸಮಾರಾಧ್ಯ ಶೂಲಾಂಕಂ ಭವಸಾಯುಜ್ಯಮಾಗತಾಃ ॥೪೪॥

ಯೈರಾತ್ಮಭೂತೈರ್ಭಗವಾನ್ ಪಾರ್ವತ್ಯಾ ಚ ಮಹೇಶ್ವರಃ ।
ಸಹ ಭೂತಗಣೈರ್ಭುಂಕ್ತೇ ಭೂತಭವ್ಯಭವತ್ಪ್ರಭುಃ ॥೪೫॥

ನಾನಾವಿಚಿತ್ರಹಸಿತೈಃ ಕ್ಷ್ವೇಲಿತೋತ್ಕೃಷ್ಟಗರ್ಜಿತೈಃ ।
ಸಂನಾದಯಂತಸ್ತೇ ವಿಶ್ವಮ್ ಅಶ್ವತ್ಥಾಮಾನಮಭ್ಯಯುಃ ॥೪೬॥

ರಕ್ತವಸಾದಿಗಳನ್ನು ಮತ್ತೆ ಮತ್ತೆ ಪಾನ ಮಾಡುವವರು ಕೆಲವರು, ಬ್ರಹ್ಮದ್ವೇಷಿಗಳಲ್ಲಿ ಕುಪಿತರಾದವರು, ನಿರಂತರ ನಾಲ್ಕುವಿಧವಾದ ಸೋಮರಸವನ್ನು ಪಾನಮಾಡುವವರು (ಅನ್ನಜನ್ಯ, ಲತಾಜನ್ಯ, ಚಂದ್ರಮಂಡಲಜನ್ಯ ಮತ್ತು ಅಮೃತರೂಪವಾದ ನಾಲ್ಕು ಸೋಮರಸಗಳು), ಯಾರು (ಶಾಸ್ತ್ರ)ಶ್ರವಣದಿಂದ, ಬ್ರಹ್ಮಚರ್ಯದಿಂದ, ತಪದಿಂದ,

ಇಂದ್ರಿಯನಿಗ್ರಹದಿಂದ, ಶೂಲಧಾರಿಯನ್ನು ಆರಾಧಿಸಿ ಭವಸಾಯುಜ್ಯವನ್ನು ಹೊಂದಿರುವರೊ, ತನ್ನಂತೆ ಇರುವ ಭೂತಗಣಗಳಿಂದ ಮತ್ತು ಪಾರ್ವತೀ ದೇವಿಯಿಂದ ಸಹಿತನಾದ ಭಗವಂತನಾದ, ಹಿಂದಿನ ಇಂದಿನ ಮುಂದೆ ಬರಲಿರುವ ಜಗದ ಒಡೆಯನಾದ ಶಿವನು (ಹವಿಸ್ಸನ್ನು) ಉಣ್ಣುವನೋ, ಅವರು ವಿವಿಧವಾಗಿ ನಗುತ್ತಾ, ವಿವಿಧ ಕ್ರೀಡೆಯ ಮುಖಾಂತರ ಗರ್ಜಿಸುತ್ತಾ, ವಿಶ್ವವನ್ನೇ ಶಬ್ದಮಯಗೊಳಿಸುತ್ತಾ ಅಶ್ವತ್ಥಾಮನ ಬಳಿ ಆಗಮಿಸಿದರು.

ಸಂಸ್ತುವಂತೋ ಮಹಾದೇವಂ ಹಾಕುರ್ವಾಣಾಃ ಸುವರ್ಚಸಃ ।
ವಿವರ್ಧಯಿಷವೋ ದ್ರೌಣೇರ್ಮಹಿಮಾನಂ ಮಹಾತ್ಮನಃ ॥೪೭॥

ಜಿಜ್ಞಾಸಮಾನಾಸ್ತತ್ ತೇಜಃ ಸೌಪ್ತಿಕಂ ಚ ದಿದೃಕ್ಷವಃ ।
ಭೀಮೋಗ್ರಪರಿಘಾಲಾತಶೂಲಪಟ್ಟಿಶಪಾಣಯಃ ॥೪೮॥

ಘೋರರೂಪಾಃ ಸಮಾಜಗ್ಮುಃ ಭೂತಸಂಘಾಃ ಸಹಸ್ರಶಃ ॥೪೯॥

ಮಹದೇವನನ್ನು ಸ್ತುತಿಸುತ್ತಾ, ಹುಂಕಾರವನ್ನು ಮಾಡುತ್ತಾ, ಒಳ್ಳೆಯ ಕಾಂತಿಯನ್ನು ಹೊಂದಿರುವ, ಮಹಾತ್ಮನಾದ ದ್ರೋಣಪುತ್ರನ ಮಹಿಮೆಯನ್ನು ವೃದ್ಧಿಗೊಳಿಸಲು ಬಯಸುವವರಾಗಿ, ಆತನ ಬಲವನ್ನು ತಿಳಿಯಲು ಬಯಸಿದವರಾಗಿ, ಮಲಗಿದವರನ್ನು (ಸಂಹಾರಕ್ರಿಯೆಯನ್ನು) ನೋಡುವ ಇಚ್ಛೆಯುಳ್ಳವರಾಗಿ, ಭಯಂಕರವಾದ ಭೀಕರವಾದ ಪರಿಘ ಅಲಾತ ಶೂಲ ಪಟ್ಟಿಶಗಳನ್ನು ಕರದಲ್ಲಿ ಧರಿಸಿರುವ, ಘೋರವಾದ ರೂಪಗಳನ್ನು ಧರಿಸಿರುವ, ಸಾವಿರಾರು ಭೂತಗಳ ಗುಂಪುಗಳು ಬಂದವು.

ಜನಯೇಯುರ್ಭಯಂ ಯೇ ಹಿ ತ್ರೈಲೋಕ್ಯಸ್ಯಾಪಿ ದರ್ಶನಾತ್ ।
ನ ತು ತಾನ್ ಪ್ರೇಕ್ಷಮಾಣೋಽಪಿ ವ್ಯಥಾಮುಪಜಗಾಮ ಹ ॥೫೦॥

ಯಾರ ದರ್ಶನದಿಂದಲೇ ಮೂರ್ಲೋಕಕ್ಕೆ ಭೀತಿಯು ಉಂಟಾಗುವುದೊ ಅವರನ್ನು ಕಂಡರೂ ಸಹ (ಅಶ್ವತ್ಥಾಮನು) ವ್ಯಥಿತನಾಗಲಿಲ್ಲ.

ಅಥ ದ್ರೌಣಿರ್ಧನುಷ್ಪಾಣಿರ್ಬದ್ಧಗೋಧಾಂಗುಲಿತ್ರವಾನ್ ।
ಸ್ವಯಮೇವಾತ್ಮನಾऽऽತ್ಮಾನಮುಪಾಹಾರಮುಪಾಹರತ್ ॥೫೧॥

ಅನಂತರದಲ್ಲಿ ದ್ರೋಣಪುತ್ರನು ಬಿಲ್ಲನ್ನು ಕರದಲ್ಲಿ ಪಿಡಿದವನಾಗಿ, ಚರ್ಮದ ಬೆರಳುರಕ್ಷಕಗಳನ್ನು ಧರಿಸಿದವನಾಗಿ, ಸ್ವೇಚ್ಛೆಯಿಂದಲೇ ತನ್ನನ್ನೇ ಹವಿಸ್ಸನ್ನಾಗಿ ಕಲ್ಪಿಸಿದನು.

ಧನೂಂಷಿ ಸಮಿಧಸ್ತತ್ರ ಪವಿತ್ರಾಣಿ ಸಿತಾಃ ಶರಾಃ ।
ಹವಿರಾತ್ಮವತಶ್ಚಾತ್ಮಾ ತಸ್ಮಿನ್ ಭಾರತ ಕರ್ಮಣಿ ॥೫೨॥

ಭರತಕುಲೋತ್ಪನ್ನನೆ! (ಅಶ್ವತ್ಥಾಮನು) ಆ ಯಜ್ಞದಲ್ಲಿ ಬಿಲ್ಲನ್ನೇ ಸಮಿಧೆಯನ್ನಾಗಿ, ಬಾಣಗಳನ್ನೇ ಬಿಳಿಯ ದರ್ಭೆಯನ್ನಾಗಿ, ತನ್ನನ್ನೇ ಬಲಿಯನ್ನಾಗಿ ಕಲ್ಪಿಸಿದನು.

ತತಃ ಸೋಮೇನ ಮಂತ್ರೇಣ ದ್ರೋಣಪುತ್ರಃ ಪ್ರತಾಪವಾನ್ ।
ಉಪಹಾರಂ ಮಹಾಮನ್ಯುರಥಾತ್ಮಾನಮುಪಾಹರತ್ ॥೫೩॥

ಅನಂತರದಲ್ಲಿ ಮಹಾಕೋಪಿಷ್ಟನಾದ ಪ್ರತಾಪಶಾಲಿಯಾದ ದ್ರೋಣಪುತ್ರನು, ಸೋಮಮಂತ್ರದಿಂದ ತನ್ನನ್ನೇ ಉಪಹಾರವನ್ನಾಗಿ ಕಲ್ಪಿಸಿದನು.

ತಂ ರುದ್ರಂ ರೌದ್ರಕರ್ಮಾಣಂ ರೌದ್ರೈಃ ಕರ್ಮಭಿರಚ್ಯುತಮ್ ।
ಅಭಿಷ್ಟೂಯ ಮಹಾತ್ಮಾನಮಿತ್ಯುವಾಚ ಕೃತಾಂಜಲಿಃ ॥೫೪॥

ಭೀಕರ ಕರ್ಮಗಳಿಂದ ಭೀಕರಕರ್ಮಿಯಾದ ಮಹಾತ್ಮನಾದ ನಾಶರಹಿತನಾದ ಆ ರುದ್ರದೇವನನ್ನು ಸ್ತುತಿಸುತ್ತಾ ಕೈಮುಗಿದವನಾಗಿ ಹೀಗೆ ನುಡಿದನು.

ದ್ರೌಣಿಃ

ಇಮಮಾತ್ಮಾನಮದ್ಯಾಹಂ ಜಾತಮಾಂಗಿರಸೇ ಕುಲೇ ।
ಅಗ್ನೌ ಜುಹೋಮಿ ಭಗವನ್ ಪ್ರತಿಗೃಹ್ಣೀಷ್ವ ಮೇ ಬಲಿಮ್ ॥೫೫॥

ಅಶ್ವತ್ಥಾಮ– ಅಂಗಿರಸಕುಲದಲ್ಲಿ ಹುಟ್ಟಿದ ಈ ದೇಹವನ್ನು ನಾನು ಅಗ್ನಿಯಲ್ಲಿ ಹೊಮಿಸುವೆನು, ಪೂಜ್ಯನೇ! ನನ್ನ ಬಲಿಯನ್ನು ಪರಿಗ್ರಹಿಸು.

ತವ ಭಕ್ತ್ಯಾ ಮಹಾದೇವ ಪರಮೇಣ ಸಮಾಧಿನಾ ।
ಅಸ್ಯಾಮಾಪದಿ ವಿಶ್ವಾತ್ಮನ್ನುಪಾಕುರ್ಮಿ ಮಹಾವ್ರತಃ ॥೫೬॥

ಸರ್ವಸ್ವಾಮಿಯೆ, ಮಹಾದೇವನೇ! ಏಕಾಗ್ರತೆಯಿಂದ ಭಕ್ತಿಯಿಂದ ಮಹಾವ್ರತಿಯಾಗಿ ಈ ಆಪತ್‌ಸಂದರ್ಭದಲ್ಲಿ (ಈ ಬಲಿಯನ್ನು) ಸಮರ್ಪಿಸುತ್ತಿರುವೆ.

ತ್ವಯಿ ಸರ್ವಾಣಿ ಭೂತಾನಿ ಸರ್ವಭೂತೇಷು ಚಾಸಿ ವೈ ।
ಗುಣಾನಾಂ ತು ಪ್ರಧಾನಾನಾಮೇಕತ್ವಂ ತ್ವಯಿ ತಿಷ್ಠತಿ ॥೫೭॥

ನಿನ್ನಲ್ಲಿ ಎಲ್ಲ ಭೂತಗಳು ಆಶ್ರಯವನ್ನು ಹೊಂದಿವೆ, ನೀನು ಎಲ್ಲ ಭೂತಗಳಲ್ಲೂ ಸನ್ನಿಹಿತನಾಗಿರುವಿ, ಪ್ರಧಾನವಾದ ಎಲ್ಲ ಗುಣಗಳು ಒಂದಾಗಿ ನಿನ್ನಲ್ಲಿ ಮೇಳೈಸಿವೆ.

ಸರ್ವಭೂತಾಶ್ರಯ ವಿಭೋ ಹವಿರ್ಭೂತಮವಸ್ಥಿತಮ್ ।
ಪ್ರತಿಗೃಹಾಣ ಮಾಂ ದೇವ ಯದ್ಯಶಕ್ಯಾಃ ಪರೇ ಮಯಾ ॥೫೮॥

ಎಲ್ಲ ಪ್ರಾಣಿಗಳಿಗೆ ಆಶ್ರಯದಾತನೆ, ಸ್ವಾಮಿಯೆ! ಶತ್ರುಗಳು ನನ್ನಿಂದ ಪರಾಭೂತರಾಗದ ಪಕ್ಷದಲ್ಲಿ ಹವಿಸ್ಸಾಗಿ ನಿನ್ನ ಬಳಿ ನಿಂತ ನನ್ನನ್ನೇ ಪರಿಗ್ರಹಿಸು.

ಸಂಜಯಃ

ಇತ್ಯುಕ್ತ್ವಾ ದ್ರೌಣಿರಾಸ್ಥಾಯ ತಾಂ ವೇದೀಂ ದೀಪ್ತಪಾವಕಾಮ್ ।
ಸಂತ್ಯಜ್ಯಾತ್ಮಾನಮಾರುಹ್ಯ ಕೃಷ್ಣವರ್ತ್ಮನ್ಯುಪಾವಿಶತ್ ॥೫೯॥

ದ್ರೋಣಪುತ್ರನು ಈ ರೀತಿಯಾಗಿ ಹೇಳಿ, ಬೆಂಕಿಯಿಂದ ಪ್ರಜ್ವಲಿಸುತ್ತಿರುವ ಆ ವೇದಿಕೆಯನ್ನು ಸಮೀಪಿಸಿ, ಏರಿ, ತನ್ನಲ್ಲಿಯ ಅಭಿಮಾನವನ್ನು ತೊರೆದು, ಬೆಂಕಿಯ ಮಧ್ಯೆ ಕುಳಿತನು.

ತಮೂರ್ಧ್ವಬಾಹುಂ ನಿಶ್ಚೇಷ್ಟಂ ದೃಷ್ಟ್ವಾ ಹವಿರುಪಸ್ಥಿತಮ್ ।
ಅಬ್ರವೀದ್ ಭಗವಾನ್ ಸಾಕ್ಷಾನ್ಮಹಾದೇವೋ ಹಸನ್ನಿವ ॥೬೦॥

ಕೈಗಳನ್ನು ಮೇಲೆತ್ತಿರುವ ನಿಶ್ಚೇಷ್ಟನಾಗಿ ಹವಿಸ್ಸನ್ನಾಗಿ ಸಮರ್ಪಿಸಿಕೊಂಡ ಆ ಅಶ್ವತ್ಥಾಮನನ್ನು ಉದ್ದೇಶಿಸಿ ಪೂಜ್ಯನಾದ ಮಹಾದೇವನು ಮುಗುಳುನಗುತ್ತಾ ಸಾಕ್ಷಾತ್ತಾಗಿ ನುಡಿದನು.

ಮಹೇಶ್ವರಃ

ಸತ್ಯಶೌಚಾರ್ಜವತ್ಯಾಗೈಃ ತಪಸಾ ನಿಯಮೇನ ಚ ।
ಕ್ಷಾಂತ್ಯಾ ಭಕ್ತ್ಯಾ ಚ ಧೃತ್ಯಾ ಚ ಕರ್ಮಣಾ ಮನಸಾ ಗಿರಾ ॥೬೧॥

ಯಥಾವದಹಮಾರಾಧ್ಯಃ ಕೃಷ್ಣೇನಾಕ್ಲಿಷ್ಟಕರ್ಮಣಾ ।
ತಸ್ಮಾದಿಷ್ಟತಮಃ ಕೃಷ್ಣಾದ್ ಅನ್ಯೋ ಮಮ ನ ವಿದ್ಯತೇ ॥೬೨॥

ಮಹಾದೇವ– ಸತ್ಯ ಶೌಚ ನೇರನಡೆ ತ್ಯಾಗ ತಪಸು ನಿಯಮಸಹಿಷ್ಣುತೆ ಭಕ್ತಿ ಧೃತಿ ಈ ಗುಣಗಳಿಂದ ಯುಕ್ತನಾಗಿ, ಕಾಯಿಕವಾಗಿ ವಾಚನಿಕವಾಗಿ ಮಾನಸಿಕವಾಗಿ ಕಷ್ಟಸಾಧ್ಯವಾದ ಕರ್ಮಗಳನ್ನು ಮಾಡುವ ಅರ್ಜುನನಿಂದ ಯಥಾವತ್ತಾಗಿ ನಾನು ಪೂಜಿತನಾದೆನು, ಆದ್ದರಿಂದ ಅರ್ಜುನನಿಂದ ಬೇರೆ ಅತ್ಯಂತ ಇಷ್ಟರು ನನಗೆ ಇಲ್ಲ.

ಕುರ್ವತಾ ತಸ್ಯ ಸಮ್ಮಾನಂ ತ್ವಾಂ ಚ ಜಿಜ್ಞಾಸತಾ ಮಯಾ ।
ಪಾಂಚಾಲಃ ಸರ್ವದಾ ಗುಪ್ತಾ ಮಾಯಾಶ್ಚ ಬಹುಶಃ ಕೃತಾಃ ॥೬೩॥

ಅರ್ಜುನನ ಮೇಲಿನ ಪ್ರೀತಿಯಿಂದಲೂ ನಿನ್ನನ್ನು ಪರೀಕ್ಷಿಸುವ ಸಲುವಾಗಿಯೂ ನಾನು ಪಾಂಚಾಲರನ್ನು ಹೆಚ್ಚು ಸಂರಕ್ಷಿಸಿದೆನು, ಅನೇಕ ಪವಾಡಗಳನ್ನು ನಡೆಸಿದನು.

ತತಸ್ತಸ್ಯೈವ ಮಾನಾರ್ಥಂ ಪಾಂಚಾಲಾ ರಕ್ಷಿತಾ ಮಯಾ ।
ಅಭಿಭೂತಾಸ್ತು ಕಾಲೇನ ನೈಷಾಮದ್ಯಾಸ್ತಿ ಜೀವಿತಮ್ ॥೬೪॥

ಪಾಂಚಾಲರನ್ನು ರಕ್ಷಿಸುವ ಮುಖಾಂತರ ಆತನ (ಅರ್ಜುನನ) ಸಂಮಾನವನ್ನು ಮಾಡಿದಂತಾಯಿತು. ಕಾಲನಿಂದ ಮೃತರಾದ ಅವರ ಜೀವಿತವು ಈಗ ಮುಗಿಯಿತು.

ಸಂಜಯಃ

ಏವಮುಕ್ತ್ವಾ ಮಹೇಷ್ವಾಸಂ ಭಗವಾನಾತ್ಮನಸ್ತನುಮ್ ।
ಆವಿವೇಶ ದದೌ ಚಾಸ್ಮೈ ವಿಮಲಂ ಖಡ್ಗಮುತ್ತಮಮ್ ॥೬೫॥

ಸಂಜಯ– ಒಳ್ಳೆಯ ಬಿಲ್ಲಾಳಾದ ತನ್ನದೇ ಒಂದಂಶನಾದ ಅಶ್ವತ್ಥಾಮನನ್ನು ಉದ್ದೇಶಿಸಿ ಈರೀತಿಯಾಗಿ ಹೇಳಿ, ಪೂಜ್ಯನಾದ ಮಹಾದೇವನು ಶ್ರೇಷ್ಠವಾದ ಶುಭ್ರವಾದ ಖಡ್ಗವನ್ನು ಆತನಿಗೆ ಕೊಟ್ಟನು ಮತ್ತು ಆತನಲ್ಲಿ ಪ್ರವೇಶಿಸಿದನು.

ವ್ಯಾಖ್ಯಾನ ವಿಶೇಷ– 'ಆತ್ಮನಸ್ತನುಮ್' ಎಂದಿದೆ, ಇದರಿಂದ ಅಶ್ವತ್ಥಾಮ ಮತ್ತು ಮಹಾದೇವನು ಅಭಿನ್ನರು ಎಂದು ತಿಳಿಯುವುದು. ಹಾಗಾಗಿ ಅವರಲ್ಲಿ ಪರಸ್ಪರ ಪೂಜ್ಯ-ಪೂಜಕಭಾವವು ಇಲ್ಲ. ಹಾಗಾದಲ್ಲಿ ಅಶ್ವತ್ಥಾಮನು ಮಾಡಿದ ಪೂಜಾದಿಗಳೆಲ್ಲವು ರುದ್ರಾಂತರ್ಗತ ಮಹಾವಿಷ್ಣುವಿಗೆ ಎಂದು ತಿಳಿಯುವುದು. ಆದ್ದರಿಂದಲೇ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಆತ್ಮಸ್ಥಾಯೈವ ವಿಷ್ಣವೇ' (೨೮.೧೩೩) ಎಂದು ಉಪದೇಶಿಸಲಾಗಿದೆ. ಸ್ವತಃ ರುದ್ರದೇವನೇ ಶ್ರೀಮದ್ಭಾಗವತದಲ್ಲಿ 'ಗುಹಾಶಯಾಯೈವ ನ ದೇಹಮಾನಿನೇ' (೪.೪.೨೨). ಎಂದು ಉಪದೇಶಿಸಿರುವನು.

ಅಥಾವಿಷ್ಟೋ ಭಗವತಾ ಭೂಯೋ ಜಜ್ವಾಲ ತೇಜಸಾ ।
ವೇಗವಾಂಶ್ಚಾಭವದ್ ಯುದ್ಧೇ ದೈವಸೃಷ್ಟೇನ ತೇಜಸಾ ॥೬೬॥

ಭಗವಂತನಿಂದ ಆವಿಷ್ಟನಾದ ಅಶ್ವತ್ಥಾಮನು ತೇಜಸ್ಸಿನಿಂದ ಪ್ರಜ್ವಲಿಸಿದನು, ದೈವ ನೀಡಿದ ತೇಜಸ್ಸಿನಿಂದ ಅತಿವೇಗವನ್ನು ಹೊಂದಿದನು.

ತಂ ದೃಷ್ಟ್ವಾ ಸರ್ವಭೂತಾನಿ ರಕ್ಷಾಂಸಿ ಚ ಸಮಾದ್ರವನ್ ॥೬೭॥

ಅಭಿತಃ ಶಿಬಿರಂ ಯಾಂತಂ ದ್ರೋಣಪುತ್ರಂ ಮಹಾರಥಮ್ ।
ದೇವದೇವಂ ಹರಂ ಸ್ಥಾಣುಂ ಯಾಂತಂ ಸಾಕ್ಷಾದಿವೇಶ್ವರಮ್ ॥೬೮॥

ಸಾಕ್ಷಾತ್ ದೇವದೇವನಾದ ಅಚಲನಾದ ಈಶ್ವರನಂತಿರುವ, ಶಿಬಿರದೆಡೆಗೆ ಸಾಗುತ್ತಿರುವ ಮಹಾರಥಿಕನಾದ ಆ ದ್ರೋಣಪುತ್ರನನ್ನು ಕಂಡು ಎಲ್ಲ ಭೂತಗಳು, ರಾಕ್ಷಸರು ಸುತ್ತುವರೆದು ಅನುಸರಿಸಿ ಸಾಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸೌಪ್ತಿಕಪರ್ವಣಿ ಅಶ್ವತ್ಥಾಮ್ನಃ ಖಡ್ಗಲಾಭ-ಶಿಬಿರಪ್ರವೇಶೋ ನಾಮ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಪಾರಾವತಾಶ್ವಂ ಸ ತದಾ ಶಯಾನ-
ಮುಪೇತ್ಯ ಪದ್ಭ್ಯಾಂ ಸಮತಾಡಯಚ್ಚ ।
ವಕ್ಷಸ್ಯಸಾವವದದ್ ಏತನಿದ್ರೋ
ಜಾನೇ ಭವಂತಂ ಹಿ ಗುರೋಸ್ತನೂಜಮ್ ॥

ಸಮುತ್ತಿಷ್ಠಂ ಮಾಂ ಜಹಿ ಶಸ್ತ್ರಪಾಣಿಂ
ಶಸ್ತ್ರೇಣ ವೀರೋऽಸಿ ಸ ವೀರಧರ್ಮಃ ।
ಲೋಕಾಶ್ಚ ಮೇ ಸಂತ್ವಥ ಶಸ್ತ್ರಪೂತಾ
ಇತಿ ಬ್ರುವಾಣಂ ಸ ರುಷಾ ಜಗಾದ ॥

ಅಶ್ವತ್ಥಾಮನು ಆಗ ಮಲಗಿದ ಧೃಷ್ಟದ್ಯುಮ್ನನ ಬಳಿಗೆ ಹೋಗಿ ಅವನೆದೆಗೆ ಕಾಲುಗಳಿಂದ ಒದ್ದ. ಧೃಷ್ಟದ್ಯುಮ್ನನು ಎಚ್ಚೆತ್ತು ನುಡಿದನು- 'ನನಗೆ ಗೊತ್ತು ನೀನು ಗುರುಪುತ್ರನೆಂದು. ನಾನು ಎದ್ದು ಶಸ್ತ್ರವನ್ನು ಕೈಗೆತ್ತಿಕೊಂಡ ಬಳಿಕ, ಶಸ್ತ್ರದಿಂದ ನನ್ನನ್ನು ಕೊಲ್ಲು, ನೀನು ವೀರನಾಗಿರುವಿ. ವೀರನ ಧರ್ಮವಿದು. ಶಸ್ತ್ರದಿಂದ ಪವಿತ್ರರಾಗಿ ಹತರಾಗುವವರ ಪುಣ್ಯಲೋಕಗಳು ನನಗಾಗಲಿ'. ಹೀಗೆ ಧೃಷ್ಟದ್ಯುಮ್ನನು ಹೇಳಿದಾಗ ಅಶ್ವತ್ಥಾಮನು ಕೋಪದಿಂದ ನುಡಿದನು.

ನ ಸಂತಿ ಹಿ ಬ್ರಹ್ಮಹಣಾಂ ಸುಲೋಕಾಃ
ವಿಶೇಷತಶ್ಚೈವ ಗುರುದ್ರುಹಾಂ ಪುನಃ ।
ನ ಧರ್ಮಯುದ್ಧೇನ ವಧಾರ್ಹಕಾಶ್ಚ
ಯೇ ತ್ವದ್ವಿಧಾಃ ಪಾಪತಮಾಃ ಸುಪಾಪ ॥

'ಮಹಾಪಾಪಿಯೆ, ಬ್ರಹ್ಮಹತ್ಯೆ ಮಾಡಿದವವರಿಗೆ ಪುಣ್ಯಲೋಕಗಳಿಲ್ಲ. ವಿಶೇಷವಾಗಿ ಗುರುದ್ರೋಹಿಗಳಿಗೆ ಸರ್ವಥಾ ಇಲ್ಲ. ಅದರಿಂದ ನಿನ್ನಂಥ ಮಹಾಪಾಪಿಗಳು ಧರ್ಮಯುದ್ಧದಿಂದ ವಧಾರ್ಹರಲ್ಲ.

ಅವಶ್ಯಭಾವಿನಂ ಮೃತ್ಯುಂ ಧೃಷ್ಟದ್ಯುಮ್ನೋ ವಿಚಿಂತ್ಯ ತಮ್ ।
ತೂಷ್ಣೀಂ ಬಭೂವ ಸ್ವಪ್ನೇಽಪಿ ನಿತ್ಯಂ ಪಶ್ಯತಿ ತಾಂ ಮೃತಿಮ್ ॥

ಇದು ಅವಶ್ಯ ಉಂಟಾಗಲಿರುವ ಮರಣವೆಂದು ಧೃಷ್ಟದ್ಯುಮ್ನ ಆಲೋಚಿಸಿ ಸುಮ್ಮನಾದನು. ಏಕೆಂದರೆ ಆ ಮರಣವನ್ನು ಆತ ನಿತ್ಯವೂ ಸ್ವಪ್ನದಲ್ಲಿ ಕಾಣುತ್ತಿದ್ದನು.

ದ್ರೌಣಿಂ ಚ ಕಾಳರಾತ್ರಿಂ ಚ ದ್ರೋಣಪಾತಾದನಂತರಮ್ ।
ವಿಶಸಂತಂ ಕೃಷಂತೀಂ ಚ ಸ್ವಪ್ನೇಽಪಶ್ಯದ್ಧಿ ಪಾರ್ಷತಃ ॥

ದ್ರೋಣನ ಪತನವಾದ ಬಳಿಕ ಧೃಷ್ಟದ್ಯುಮ್ನನು ತನ್ನನ್ನು ಅಶ್ವತ್ಥಾಮನು ಕೊಲ್ಲುವಂತೆ, ಕಾಲ ರಾತ್ರಿ ದುರ್ಗೆ ಸೆಳೆಯುವಂತೆ ಸ್ವಪ್ನದಲ್ಲಿ ಕಾಣುತ್ತಿದ್ದನು.

ಸಮಾಕ್ಷಿಪದ್ ದ್ರೋಣಸುತೋಽಸ್ಯ ಕಂಠೇ
ನಿಬಧ್ಯ ಮೌರ್ವೀ ಧನುಷೋಽಪ್ಯರಸ್ಥಃ ।
ಮಮಂಥ ಕೃಚ್ಛ್ರೇಣ ವಿಹಾಯ ದೇಹಂ
ಯಯೌ ನಿಜಸ್ಥಾನಮಸೌ ಚ ವಹ್ನಿಃ ॥

ಅಶ್ವತ್ಥಾಮನು ಧೃಷ್ಟದ್ಯುಮ್ನನ ಎದೆಯಲ್ಲಿ ಕುಳಿತು ಕೊರಳಿಗೆ ಬಿಲ್ಲಿನ ಹಗ್ಗವನ್ನು ಕಟ್ಟಿ ಸೆಳೆದು ಮಥನ ಮಾಡಿಧನು. ಅಗ್ನಿಯ ಅವತಾರನಾದ ಆ ಧೃಷ್ಟದ್ಯುಮ್ನನು ಕಷ್ಟದಿಂದ ಶರೀರವನ್ನು ತೊರೆದು ತನ್ನ ಲೋಕಕ್ಕೆ ತೆರಳಿದನು.

ತತಃ ಶಿಖಂಡಿನಂ ಹತ್ವಾ ಯುಧಾಮನ್ಯೂತ್ತಮೌಜಸೌ ।
ಜನಮೇಜಯಂ ಚ ಪಾಂಚಾಲೀಸುತಾನಭಿಯಯೌ ಜ್ವಲನ್ ॥

ಬಳಿಕ ಅಶ್ವತ್ಥಾಮನು ಶಿಖಂಡಿಯನ್ನೂ ಯುಧಾಮನ್ಯು ಉತ್ತಮೌಜರನ್ನೂ ಜನಮೇಜಯನನ್ನೂ ಕೊಂದು ದ್ರೌಪದಿಯ ಮಕ್ಕಳ ಬಳಿಗೂ ಜ್ವಲಿಸುತ್ತ ನಡೆದನು.

ತೈರುತ್ತಿತ್ತೈರಸ್ಯಮಾನಃ ಶರೈಃ ಖಡ್ಗೇನ ಜಘ್ನಿವಾನ್ ।
ಸರ್ವಾನ್ ಸವ್ಯಾಪಸವ್ಯೇನ ತಥಾಽನ್ಯಾನ್ ಪಾಂಡವಾತ್ಮಜಾನ್ ॥

ಋತ ಏಕಂ ಭೈಮಸೇನಿಂ ಕಾಶಿರಾಜಾತ್ಮಜಾತ್ಮಜಮ್ ।
ತಂ ತದಾಽಂತರ್ಹಿತಃ ಶರ್ವಃ ಕೈಲಾಸಮನಯತ್ ಕ್ಷಣಾತ್ ॥

ಸ ಶರ್ವತ್ರಾತನಾಮಾಽಽಸೀದತಸ್ತತ್ರೈವ ಸೋಽವಸತ್ ।
ಪುರಾಽರ್ಥಿತಃ ಸ್ವದೌಹಿತ್ರಸ್ಯಾಮರತ್ವಾಯ ಶಂಕರಃ ।
ಕಾಶಿರಾಜೇನ ತೇನಾಸೌ ಜುಗೋಪೈನಂ ಕೃಪಾಯುತಃ ॥

ದ್ರೌಪದೀ ಪುತ್ರರು ಎದ್ದು ಬಾಣಗಳಿಂದ ಅಶ್ವತ್ಥಾಮನನ್ನು ತಡೆದರೂ ಅವನು ಎಲ್ಲರನ್ನೂ ಖಡ್ಗದಿಂದ ಸಂಹರಿಸಿದನು. ಭೀಮಸೇನನಿಂದ ಕಾಶಿರಾಜನ ಮಗಳಾದ ಕಾಳಿದೇವಿಯಲ್ಲಿ ಹುಟ್ಟಿದ ಒಬ್ಬ ಮಗನನ್ನು ಹೊರತುಪಡಿಸಿ ಇನ್ನೆಲ್ಲ ಪಾಂಡವಪುತ್ರರನ್ನೂ ಎಡಕ್ಕೂ ಬಲಕ್ಕೂ ಹೊಡೆದು ಕೊಂದನು. ಆಗ ಅದೃಶ್ಯನಾಗಿ ನಿಂತಿದ್ದ ರುದ್ರದೇವ ಕ್ಷಣದಲ್ಲಿ ಕೈಲಾಸಕ್ಕೆ ಆತನನ್ನು ಒಯ್ದನು. ಅದರಿಂದ ಆತನಿಗೆ ಶರ್ವತ್ರಾತ ಎಂಬ ಹೆಸರು ಅನ್ವರ್ಥಕವಾಯಿತು. ಬಳಿಕ ಅವನು ಕೈಲಾಸದಲ್ಲಿಯೆ ವಾಸ ಮಾಡಿದನು. ಹಿಂದೆ ಕಾಶಿರಾಜ ತನ್ನ ಮಗಳ ಮಗ ಅಮರನಾಗಬೇಕೆಂದು ರುದ್ರನನ್ನು ಬೇಡಿದ್ದನು. ಅದರಿಂದ ರುದ್ರನು ಈಗ ಕೃಪಾಯುಕ್ತನಾಗಿ ಶರ್ವತ್ರಾತನನ್ನು ರಕ್ಷಿಸಿದನು.

ವಾಸುದೇವಮತಂ ಜ್ಞಾತ್ವಾ ಸಾಮ್ರಾಜ್ಯಾಯ ಪರೀಕ್ಷಿತಃ ।
ವಾರಯಾಮಾಸ ಭೂಲೋಕಂ ನೈವ ಯಾಹೀತ್ಯಮುಂ ಶಿವಃ ॥

ಪರೀಕ್ಷಿತನಿಗೇ ಸಾಮ್ರಾಜ್ಯ ನೀಡಬೇಕೆನ್ನುವ ಶ್ರೀಕೃಷ್ಣನ ಅಭಿಪ್ರಾಯವನ್ನು ತಿಳಿದು ರುದ್ರದೇವನು 'ನೀನು ಭೂಲೋಕಕ್ಕೆ ಹೋಗಲೇಬೇಡವೆಂದು' ಶರ್ವತ್ರಾತನನ್ನು ತಡೆದನು.

ಸಾಮಾನ್ಯತೋಽಪಾಂಡವಾಯ ದ್ರೌಣಿನಾಽಪ್ಯಭಿಸಂಹಿತಮ್ ।
ತದ್ರೂಪೇಣೈವ ರುದ್ರೇಣ ವಿನೈನಮಿತಿ ಚಿಂತಿತಮ್ ॥

ಬ್ರಹ್ಮಾಸ್ತ್ರಪ್ರಯೋಗಕಾಲದಲ್ಲಿ ಸಾಮಾನ್ಯವಾಗಿ 'ಪಾಂಡವರ ಸಂತತಿ ನಾಶವಾಗಲಿ' ಎಂದು ಅಶ್ವತ್ಥಾಮ ಬಯಸಿದ್ದನು. ಆದರೂ ಅಶ್ವತ್ಥಾಮನ ಸ್ವರೂಪಭೂತನಾದ ರುದ್ರನು 'ಶರ್ವತ್ರಾತನನ್ನು ಹೊರತುಪಡಿಸಿ' ಎಂದು ಸಂಕಲ್ಪಿಸಿದ್ದನು.

ಅಸ್ತ್ರಂ ಬ್ರಹ್ಮಶಿರಶ್ಚೈನಂ ನ ಜಘಾನೈಕ್ಯತಸ್ತಯೋಃ ।
ಚೇಕಿತಾನಾದಿಕಾಂಶ್ಚೈವ ಜಘಾನಾನ್ಯಾನ್ ಸ ಸರ್ವಶಃ ॥

ಅಶ್ವತ್ಥಾಮ-ರುದ್ರರು ಒಬ್ಬರೆ ಆದ್ದರಿಂದ ಬ್ರಹ್ಮಾಸ್ತ್ರವೂ ಶರ್ವತ್ರಾತನನ್ನು ಕೊಲ್ಲಲಿಲ್ಲ. ಅಶ್ವತ್ಥಾಮ ಈಗ ಶಿಬಿರದಲ್ಲಿ ಚೇಕಿತಾನ ಮುಂತಾದ ಎಲ್ಲರನ್ನೂ ಕೊಂದನು.

ಸ ಚೇದಿಪಾಂಚಾಲಕರೂಶಕಾಶೀನ-
ನ್ಯಾಂಶ್ಚ ಸರ್ವಾನ್ ವಿನಿಹತ್ಯ ವೀರಃ ।
ಶಿಶೂನ್ ಸ್ತ್ರಿಯಶ್ಚೈವ ನಿಹಂತುಮುಗ್ರಃ
ಪ್ರಾಜ್ವಾಲಯತ್ ತಚ್ಛಿಬಿರಂ ಸಮಂತಾತ್ ॥

ಚೇದಿ, ಪಾಂಚಾಲ, ಕರೂಶ, ಕಾಶಿ ರಾಜರುಗಳ ಸಂಬಂಧಿಗಳನ್ನೂ ಇತರ ಎಲ್ಲರನ್ನೂ ಸಂಹಾರ ಮಾಡಿ ಕ್ರೂರನಾದ ವೀರ ಅಶ್ವತ್ಥಾಮ ಮಕ್ಕಳನ್ನೂ, ಹೆಂಗಸರನ್ನೂ ಕೊಲ್ಲಲು ಶಿಬಿರವನ್ನು ಎಲ್ಲ ಕಡೆ ಸುಟ್ಟುಬಿಟ್ಟನು.

ಜಿಜೀವಿಷೂಂಸ್ತತ್ರ ಪಲಾಯಮಾನಾನ್
ದ್ವಾರಿ ಸ್ಥಿತೌ ಗೌತಮಃ ಸಾತ್ವತಶ್ಚ ।
ನಿಜಘ್ನತುಃ ಸರ್ವಶಃ ಪಾರ್ಷತಸ್ಯ
ಸೂತಸ್ತ್ವೇಕಃ ಶೇಷಿತೋ ದೈವಯೋಗಾತ್ ॥

ಬದುಕುವಾಸೆಯಿಂದ ಪಲಾಯನ ಮಾಡತೊಡಗಿದವರನ್ನು ಎಲ್ಲರನ್ನೂ ಶಿಬಿರದ್ವಾರದಲ್ಲಿ ನಿಂತಿದ್ದ ಕೃಪ-ಕೃತವರ್ಮರು ಕೊಂದರು. ಧೃಷ್ಟದ್ಯುಮ್ನನ ಸಾರಥಿಯೊಬ್ಬನೆ ದೈವಯೋಗದಿಂದ ಉಳಿದುಕೊಂಡನು.

ಖಡ್ಗೇನ ಪ್ರಹೃತಂ ದೃಷ್ಟ್ವಾ ಹಾರ್ದಿಕ್ಯೇನ ಪಪಾತ ಹ ।
ಭೂಮೌ ಪ್ರಾಗೇವ ಸಂಸ್ಪರ್ಶಾನ್ನ ಜ್ಞಾತಸ್ತಮಸಾऽಮುನಾ ॥

ಕೃತವರ್ಮ ಖಡ್ಗವನ್ನು ಬೀಸಿದಾಗ ಅದನ್ನು ಕಂಡು ಖಡ್ಗ ಮೈಗೆ ತಗಲುವ ಮುನ್ನವೆ ಧೃಷ್ಟದ್ಯುಮ್ನನ ಸಾರಥಿ ನೆಲಕ್ಕೆ ಬಿದ್ದನು. ಕತ್ತಲು ಇದ್ದುದರಿಂದ ಕೃತವರ್ಮನಿಗೆ ಇದು ತಿಳಿಯಲಿಲ್ಲ.

ಅನ್ಯಾಸಕ್ತೇ ಸಮುತ್ಥಾಯ ಪ್ರಾದ್ರವದ್ಯತ್ರ ಪಾರ್ಷತೀ ।
ತಸ್ಯಾ ಅಕಥಯತ್ ಸರ್ವಂ ಸಾ ಭೀಮಾಯಾಹ ದುಃಖಿತಾ ।
ಪ್ರಾದ್ರವದ್ ರಥಮಾರುಹ್ಯ ಸ ಧನ್ವೀ ಗೌತಮೀಸುತಮ್ ॥

ಕೃತವರ್ಮ ಅನ್ಯರನ್ನು ಕೊಲ್ಲುವುದರಲ್ಲಿ ಉದ್ಯುಕ್ತನಾಗಿದ್ದಾಗ ಧೃಷ್ಟದ್ಯುಮ್ನನ ಸಾರಥಿ ಎದ್ದು ಉಪಪ್ಲಾವ್ಯನಗರದಲ್ಲಿ ದ್ರೌಪದಿ ಇದ್ದಲ್ಲಿಗೆ ಧಾವಿಸಿದನು. ಅವಳಿಗೆ ಎಲ್ಲವನ್ನೂ ಹೇಳಿದನು. ಅವಳು ದುಃಖಿತಳಾಗಿ ಕೌರವ ಶಿಬಿರಕ್ಕೆ ಬಂದು ಭೀಮನಿಗೆ ಹೇಳಿದಳು. ಭೀಮ ಬಿಲ್ಲು ಹಿಡಿದು ರಥವೇರಿ ಅಶ್ವತ್ಥಾಮನ ಕಡೆಗೆ ಧಾವಿಸಿದನು.

★ ★ ★ ★ ★

ಎಂಟನೆಯ ಅಧ್ಯಾಯ

ಶಿಬಿರದ ದ್ವಾರದಲ್ಲಿ ಕೃಪ-ಕೃತವರ್ಮರನ್ನು ನಿಲ್ಲಿಸಿ ಶಿಬಿರವನ್ನು ಪ್ರವೇಶಿಸಿದ ಅಶ್ವತ್ಥಾಮನಿಂದ ಧೃಷ್ಟದ್ಯುಮ್ನ ಮುಂತಾದ ಪಾಂಚಾಲರ ಮತ್ತು ದ್ರೌಪದಿಯ ಪುತ್ರರ ಸಂಹಾರ, ಹೆದರಿ ಹೊರಬರುವವರನ್ನು ಕೃಪ-ಕೃತವರ್ಮರು ಸಂಹರಿಸಿದರು.

ಧೃತರಾಷ್ಟ್ರಃ

ತಥಾ ಪ್ರಯಾತೇ ಶಿಬಿರಂ ದ್ರೋಣಪುತ್ರೇ ಮಹಾರಥೇ ।
ಕಚ್ಚಿತ್ ಕೃಪಶ್ಚ ಭೋಜಶ್ಚ ಭಯಾರ್ತೌ ನ ವ್ಯವರ್ತತಾಮ್ ॥೧॥

ಧೃತರಾಷ್ಟ್ರ- ಮಹಾರಥಿಕನಾದ ದ್ರೋಣಪುತ್ರನು ಆ ರೀತಿಯಾಗಿ ಶಿಬಿರವನ್ನು ಉದ್ದೇಶಿಸಿ ಹೊರಡಲು ಭಯಗ್ರಸ್ಥರಾದ ಕೃಪನಾಗಲಿ, ಕೃತವರ್ಮನಾಗಲಿ ತಡೆಯಲಿಲ್ಲವೆ?

ಕಚ್ಚಿನ್ನ ವಾರಿತೌ ಕ್ಷುದ್ರೈ ರಕ್ಷಿಭಿರ್ನೋಪಲಕ್ಷಿತೌ ।
ಅಸಹ್ಯಮಿತಿ ಮನ್ವಾನೌ ನ ನಿವೃತ್ತೌ ಮಹಾರಥೌ ॥೨॥

ಕ್ಷುದ್ರರಾದ ರಕ್ಷಕರು ಯಾರೂ ನೋಡಲಿಲ್ಲವೆ? ತಡೆಯಲಿಲ್ಲವೆ? ಈ ಕೃತ್ಯವು (ಮಲಗಿದವರನ್ನು ಸಂಹರಿಸುವುದು) ಅಸಹ್ಯ ಎಂದು ಮಹಾರಥಿಕರೀರ್ವರು (ಕೃಪ ಕೃತವರ್ಮರು) ಹಿಂತಿರುಗಲಿಲ್ಲವೇ?

ಪ್ರಮಥ್ಯ ಶಿಬಿರಂ ಕಚ್ಚಿದ್ಧತ್ವಾ ಸೋಮಕಪಾಂಡವಾನ್ ।
ಕೃತಾ ಪ್ರತಿಜ್ಞಾ ಸಫಲಾ ಕಚ್ಚಿತ್ ಸಂಜಯ ಸಾ ನಿಶಿ ॥೩॥

ಸಂಜಯನೇ, ಆ ರಾತ್ರಿಯಲ್ಲಿ ಶಿಬಿರವನ್ನು ನಾಶಗೊಳಿಸಿ, ಪಾಂಚಾಲರನ್ನು ಪಾಂಡವರ ಪುತ್ರರನ್ನು ಸಂಹರಿಸಿ, ಮಾಡಿದ ಪ್ರತಿಜ್ಞೆಯನ್ನು ಪೂರ್ಣಗೊಳಿಸಿದನೆ?

ದುರ್ಯೋಧನಸ್ಯ ಪದವೀಂ ಕಚ್ಚಿತ್ ಪರಮಕಾಂ ರಣೇ ।
ಗತ್ವಾ ತಿಷ್ಠತ್ಯಸೌ ದ್ರೌಣಿಃ ಕೃತ್ವಾ ಕರ್ಮ ಸುದುಷ್ಕರಮ್ ॥೪॥

ಧೃಷ್ಟದ್ಯುಮ್ನಶಿಖಂಡಿಭ್ಯಾಂ ದ್ರೌಪದ್ಯಾಶ್ಚ ಸುತೈಃ ಕಿಲ ।
ಸಂಘನ್ನಾ ಮೇದಿನೀ ಸುಪ್ತೈರ್ನಿಹತೈಃ ಪಾಂಡುಸೈನಿಕೈಃ ॥೫॥

(ಪಾಂಚಾಲರು ಸಂಹೃತರಾಗಿ) ಶ್ರೇಷ್ಠವಾದ, ದುರ್ಯೋಧನನ ಗತಿಯನ್ನೇ ಹೊಂದಿದರೆ? ಅಥವಾ ದ್ರೋಣಪುತ್ರನು ಅಲ್ಲಿಗೆ ಹೋಗಿ ಅತ್ಯಸಾಧ್ಯವಾದ ಕರ್ಮಮಾಡಿ ನಿಲ್ಲಲು, ಮಲಗಿರುವ ಪಾಂಡವರ ಸೇನೆ, ಧೃಷ್ಟದ್ಯುಮ್ನ ಶಿಖಂಡಿ ದ್ರೌಪದಿಯ ಮಕ್ಕಳು ಮೃತರಾಗಿ ಇವರಿಂದ (ಇವರ ಶರೀರಗಳಿಂದ) ಭೂಮಿಯು ಆವೃತವಾಯಿತೊ?

ಪಾಂಚಾಲೈರ್ವಾ ವಿನಿಹತೈರ್ಶಯಾನೈ ರುಧಿರೋಕ್ಷಿತೈಃ ।
ಕಚ್ಚಿನ್ಮಹೀತಳಂ ಛನ್ನಂ ತನ್ಮಮಾಚಕ್ಷ್ವ ಸಂಜಯ ॥೬॥

ಸಂಜಯನೇ! ಅಥವಾ ಮಲಗಿದಾಗ ಸಂಹೃತರಾದ ಪಾಂಚಾಲರ ರಕ್ತದಿಂದ ಭೂಮಿಯು ಆವೃತವಾಯಿತೇ? ಆ ವಿಷಯವನ್ನು ನನಗೆ ತಿಳಿಸು.

ಸಂಜಯ

ತಸ್ಮಿನ್ ಪ್ರಯಾತೇ ಶಿಬಿರಂ ದ್ರೋಣಪುತ್ರೇ ಮಹಾತ್ಮನಿ ।
ಕೃಪಶ್ಚ ಕೃತವರ್ಮಾ ಚ ದ್ರೌಣಿಮೇವಾಭ್ಯವರ್ತತಾಮ್ ॥೭॥

ಸಂಜಯ– ಮಹಾತ್ಮನಾದ ಆ ದ್ರೋಣಪುತ್ರನು ಹೊರಡಲು ಕೃಪ ಕೃತವರ್ಮರೂ ಸಹ ದ್ರೋಣಪುತ್ರನನ್ನೇ ಅನುಸರಿಸಿದರು.

ಅಶ್ವತ್ಥಾಮಾ ತು ತೌ ದೃಷ್ಟ್ವಾ ಯತ್ನವಂತೌ ಮಹಾರಥೌ ।
ಪ್ರಹೃಷ್ಟಃ ಶನಕೈಃ ರಾಜನ್ನಿದಂ ವಚನಮಬ್ರವೀತ್ ॥೮॥

ರಾಜನೆ! ಅಶ್ವತ್ಥಾಮನಾದರೋ ಜೊತೆಗೂಡಿ ಬಂದ ಆ ಮಹಾರಥರೀರ್ವರನ್ನು ನೋಡಿ ಸಂತೋಷಗೊಂಡು ಮೆಲ್ಲಗೆ ಈ ಮಾತನ್ನು ನುಡಿದನು.

ಅಶ್ವತ್ಥಾಮಾ

ಯತ್ತೌ ಭವಂತೌ ಪರ್ಯಾಪ್ತೌ ಸರ್ವಕ್ಷತ್ರಸ್ಯ ನಾಶನೇ ।
ಕಿಂಪುನರ್ಯೋಧಶೇಷಸ್ಯ ಪ್ರಸುಪ್ತಸ್ಯ ವಿಶೇಷತಃ ॥೯॥

ಅಶ್ವತ್ಥಾಮ– ಎಲ್ಲ ಕ್ಷತ್ರಿಯರನ್ನು ನಾಶಮಾಡಲು ನೀವೀರ್ವರೇ ಸಾಕು, ಹೀಗಿರುವಾಗ ವಿಶೇಷವಾಗಿ ಮಲಗಿರುವ (ಅಳಿದು) ಉಳಿದ ಯೋಧರ ನಾಶವು ಸುಲಭ' ಎಂದು ಮತ್ತೇನು ಹೇಳುವುದು?

ಅಹಂ ಪ್ರವಿಶ್ಯ ಶಿಬಿರಂ ಪ್ರಚರಿಷ್ಯಾಮಿ ಕಾಲವತ್ ।
ಯಥಾ ನ ಕಶ್ಚಿದೇತೇಷಾಂ ಜೀವನ್ ಮುಚ್ಯೇತ ಮಾನವಃ ॥೧೦॥

ತಥಾ ಭವದ್ಭ್ಯಾಂ ಕಾರ್ಯಂ ಸ್ಯಾದ್ ಇತಿ ಮೇ ನಿಶ್ಚಿತಾ ಮತಿಃ ॥೧೧॥

ನಾನು ಶಿಬಿರವನ್ನು ಹೊಕ್ಕು ಮೃತ್ಯುವಿನಂತೆ ಸಂಚರಿಸುವೆನು, ಅವರಲ್ಲಿ ಯಾವೊಬ್ಬ ಮನುಜನು ಜೀವಂತವಾಗಿ ಹೊರಬರಬಾರದ ಹಾಗೆ ನೀವು ಮಾಡಬೇಕು, ಎನ್ನುವುದೇ ನನ್ನ ನಿಶ್ಚಿತವಾದ ತೀರ್ಮಾನ.

ಸಂಜಯಃ

ಇತ್ಯುಕ್ತ್ವಾ ಪ್ರಾವಿಶದ್ ದ್ರೌಣಿಃ ಪಾರ್ಥಾನಾಂ ಶಿಬಿರಂ ಮಹತ್ ।
ಅದ್ವಾರೇಣಾಭ್ಯವಸ್ಕಂದ್ಯ ವಿನೀಯ ಭಯಮಾತ್ಮನಃ ॥೧೨॥

ಸಂಜಯ– ಈರೀತಿಯಾಗಿ ಹೇಳಿ, ಭಯವನ್ನು ತೊರೆದು ದ್ರೋಣಪುತ್ರನು ಪಾಂಡವರ ದೊಡ್ಡ ಶಿಬಿರವನ್ನು ಹಿಂಬದಿಯಿಂದ ಪ್ರವೇಶಿಸಿದನು.

ಸ ಪ್ರವಿಶ್ಯ ಮಹಾಬಾಹುಃ ಉದ್ದೇಶಜ್ಞಶ್ಚ ತಸ್ಯ ಹಿ ।
ದ್ರೌಣಿಃ ಪರಮಸಂಕ್ರುದ್ಧಃ ತೇಜಸಾ ಪ್ರಜ್ವಲನ್ನಿವ ॥೧೩॥

ತತಃ ಪರ್ಯಚರತ್ ಸರ್ವಂ ಸಂಪ್ರಸುಪ್ತಜನಂ ನಿಶಿ ॥೧೪॥

ಧೃಷ್ಟದ್ಯುಮ್ನಸ್ಯ ನಿಲಯಂ ಶನಕೈರಭ್ಯುಪಾಗಮತ್ ॥೧೫॥

ತೇಜಸ್ಸಿನಿಂದ ಬೆಂಕಿಯಂತೆ ಇರುವ, ತುಂಬ ಕೋಪಗೊಂಡ, ಅಲ್ಲಿ(ಶಿಬಿರದಲ್ಲಿ) ಗುರಿಯ ಅರಿವಿರುವ (ಯಾರು ಯಾರು ಎಲ್ಲಿ ಎಲ್ಲಿ ಮಲಗಿರುವರು ಎಂದು ತಿಳಿದಿರುವ) ನೀಳಬಾಹುವಾದ, ಆ ದ್ರೋಣಪುತ್ರನು (ಶಿಬಿರವನ್ನು) ಪ್ರವೇಶಿಸಿ, ರಾತ್ರಿಯಲ್ಲಿ ಎಲ್ಲ ಮಲಗಿದ ಜನರನ್ನು ಸುತ್ತಿದನು, ಧೃಷ್ಟದ್ಯುಮ್ನನ ಶಿಬಿರವನ್ನು ನಿಧಾನವಾಗಿ ಸಮೀಪಿಸಿದನು.

ತೇ ತು ಕೃತ್ವಾ ಮಹತ್ಕರ್ಮ ಶ್ರಾಂತಾಶ್ಚ ಬಲವದ್ ರಣೇ ।
ಪ್ರಸುಪ್ತಾ ವೈ ಸುವಿಶ್ವಸ್ತಾಃ ಸ್ವಸೈನ್ಯಪರಿವಾರಿತಾಃ ॥೧೬॥

ಅವರಾದರೋ (ಪಾಂಚಾಲರು ಪಾಂಡವರ ಸೈನ್ಯಕರಾದರೊ) ದೊಡ್ಡ ರಣರಂಗದಲ್ಲಿ ಮಹತ್ತರವಾದ ಕರ್ಮವನ್ನು ಮಾಡಿ ಬಳಲಿದ್ದರು. ತಮ್ಮ ಸೈನ್ಯ ಪರಿವಾರಗಳಿಂದ ಕೂಡಿಕೊಂಡು (ಅಪಾಯವಿಲ್ಲ ಎಂಬ) ಪೂರ್ಣವಿಶ್ವಾಸದಿಂದ ಮಲಗಿದ್ದರು.

ಅನುಪ್ರವಿಶ್ಯ ತದ್ವೇಶ್ಮ ಧೃಷ್ಟದ್ಯುಮ್ನಸ್ಯ ಭಾರತ ।
ಪಾಂಚಾಲ್ಯಂ ಶಯನೇ ದ್ರೌಣಿರಪಶ್ಯತ್ ಸುಪ್ತಮಂತಿಕಾತ್ ॥೧೭॥

ಕ್ಷೌಮಾವದಾತೇ ಮಹತಿ ಸ್ಪರ್ಧ್ಯಾಸ್ತರಣಸಂವೃತೇ ।
ಮಾಲ್ಯಪ್ರವರಸಂಯುಕ್ತೈಃ ಧೂಪೈರ್ಗಂಧೈಶ್ಚ ವಾಸಿತೇ ॥೧೮॥

ಭರತಕುಲೋತ್ಪನ್ನನೆ! ಧೃಷ್ಟದ್ಯುಮ್ನನ ವಸತಿಯನ್ನು ಪ್ರವೇಶಿಸಿದ ದ್ರೋಣಪುತ್ರನು, ರೇಷ್ಮೆಯ ಹೊದಿಕೆಯಿಂದ ಆಚ್ಛಾದಿತವಾದ ವಿಸ್ತಾರವಾದ ಅಮೂಲ್ಯವಾದ ಮೇಲಿನ ಹಚ್ಚಡದಿಂದ ಆವೃತವಾದ ಶ್ರೇಷ್ಠವಾದ ಮಾಲೆಗಳಿಂದ ಅಲಂಕೃತವಾದ ಧೂಪದ ಸುಗಂಧದಿಂದ ಸುವಾಸಿತವಾದ (ಶಿಬಿರದಲ್ಲಿನ) ಹಾಸಿಗೆಯಲ್ಲಿ ಮಲಗಿದ ಪಾಂಚಾಲನನ್ನು ಸಮೀಪದಿಂದ ನೋಡಿದನು.

ತಂ ಶಯಾನಂ ಮಹಾತ್ಮಾನಂ ವಿಶ್ವಸ್ತಮಕುತೋಭಯಮ್ ।
ಅಪೋಥಯತ ಪಾದೇನ ಶಯನಸ್ಥಂ ಮಹೀಪತೇ ॥೧೯॥

ಮಹಾರಾಜನೆ! ವಿಶ್ವಾಸದಿಂದ ಭಯರಹಿತನಾಗಿ ಮಲಗಿರುವ, ಹಾಸಿಗೆಯಲ್ಲಿರುವ ಆ ಮಹಾತ್ಮನನ್ನು ಕಾಲಿನಿಂದ ತಿವಿದನು.

ಸ ಬುದ್ಧಾ ಚರಣಸ್ಪರ್ಶಾದ್ ಉತ್ಥಾಯ ರಣದುರ್ಮದಃ ।
ಅಭ್ಯಜಾನಾದದೀನಾತ್ಮಾ ದ್ರೋಣಪುತ್ರಂ ಮಹಾರಥಮ್ ॥೨೦॥

ರಣದಲ್ಲಿ ಅತಿಬಲಿಷ್ಟನಾದ ಆತನು (ಧೃಷ್ಟದ್ಯುಮ್ನನು) ಕಾಲುಸೋಕಿದ್ದರಿಂದ ಎಚ್ಚರಗೊಂಡನು, ಎಚ್ಚರಗೊಂಡ ಧೈರ್ಯಶಾಲಿಯಾದ ಆತನು ಮಹಾರಥಿಕನಾದ ದ್ರೋಣಪುತ್ರನನ್ನು ತಿಳಿದನು (ದ್ರೋಣಪುತ್ರನು ತನ್ನನ್ನು ಆಕ್ರಮಿಸಲು ಬಂದಿರುವನು ಎಂದು ತಿಳಿದುಕೊಂಡನು)

ತಮುತ್ಪತಂತಂ ಶಯನಾದ್ ಅಶ್ವತ್ಥಾಮಾ ಮಹಾಬಲಃ ।
ಕೇಶೇಷ್ವಾಲಭ್ಯ ಪಾಣಿಭ್ಯಾಂ ನಿಷ್ಪಿಪೇಷ ಮಹೀತಳೇ ॥೨೧॥

ಹಾಸಿಗೆಯಿಂದ ಮೇಲೇಳಲು ಯತ್ನಿಸುತ್ತಿದ್ದ ಆತನನ್ನು ಮಹಾಬಲಿಷ್ಟನಾದ ಅಶ್ವತ್ಥಾಮನು ಕೈಗಳಿಂದ ಕೇಶವನ್ನು ಪಿಡಿದು ಭೂಮಿಯಲ್ಲಿ ಕೆಡವಿ ತಿಕ್ಕಿದನು.

ಸ ಬಲಾತ್ ತೇನ ನಿಷ್ಪಿಷ್ಟಃ ಸಾಧ್ವಸೇನ ಚ ಭಾರತ ।
ಅಭ್ಯಾಕ್ರಾಂತಶ್ಚ ನಿದ್ರಾಂಧೋ ನ ಶಶಾಕ ವಿಚೇಷ್ಟಿತುಮ್ ॥೨೨॥

ಭರತಕುಲೋತ್ಪನ್ನನೆ! ಆತನನ್ನು (ಧೃಷ್ಟದ್ಯುಮ್ನನನ್ನು) ಆತನು (ಅಶ್ವತ್ಥಾಮನು) ಲಗುಬಗೆಯಿಂದ ಬಲಾತ್ಕಾರವಾಗಿ ಒರೆಯಲಾಗಿ, ಅರೆನಿದ್ರೆಯಲ್ಲಿರುವುದರಿಂದಲೂ,

(ಅಶ್ವತ್ಥಾಮನಿಂದ) ಆಕ್ರಾಂತನಾಗಿದ್ದರಿಂದಲೂ (ಧೃಷ್ಟದ್ಯುಮ್ನನು) ಮಿಸುಕಾಡಲೂ ಸಮರ್ಥನಾಗಲಿಲ್ಲ.

ನಿಷ್ಪಿಷ್ಯ ತು ತತೋ ಭೂಮೌ ಪಾಂಚಾಲ್ಯಂ ದ್ರೌಣಿರಂಜಸಾ ।
ಧನುಷೋ ಜ್ಯಾಂ ವಿಮುಚ್ಯಾಶು ಕ್ರೂರಬುದ್ಧಿರಮರ್ಷಣಃ ॥೨೩॥

ತಸ್ಯ ಕಂಠೇऽಥ ಬದ್ಧ್ವಾ ತಾಂ ತ್ವರಿತಃ ಕ್ರೋಧಮೂರ್ಚ್ಛಿತಃ ।
ದ್ರೌಣಿಃ ಕ್ರೂರಂ ಮನಃ ಕೃತ್ವಾ ಪಾಂಚಾಲ್ಯಮವಧೀತ್ ತದಾ ॥೨೪॥

ಅನಂತರದಲ್ಲಿ ದ್ರೋಣಪುತ್ರನು ಪಾಂಚಾಲರಾಜಪುತ್ರನನ್ನು ಭೂಮಿಯಲ್ಲಿ ಕೆಡವಿ ಚೆನ್ನಾಗಿ ತಿಕ್ಕಿದನು. ಅನಂತರದಲ್ಲಿ ಕೋಪದಿಂದ ಕೂಡಿರುವ ಕಠೋರ ಬುದ್ಧಿಯವನಾದ ಕ್ರೋಧಾವಿಷ್ಟನಾದ ದ್ರೋಣಪುತ್ರನು ಆಗ ಆ ಕೂಡಲೇ ಬಿಲ್ಲಿನ ಹಗ್ಗವನ್ನು ಬಿಚ್ಚಿ, ಆ ಹಗ್ಗವನ್ನು ಅತನ (ಧೃಷ್ಟದ್ಯುಮ್ನನ) ಕಂಠದಲ್ಲಿ ಬೇಗದಲ್ಲಿ ಬಿಗಿದು, ಕೆಟ್ಟಸಂಕಲ್ಪವನ್ನು ಮಾಡಿ ಪಾಂಚಾಲರಾಜಕುಮಾರನನ್ನು ಹಿಂಸಿಸಿದನು.

ತಮಾಕ್ರಮ್ಯ ಪದಾ ರಾಜನ್ ಕಂಠೇ ಚೋರಸಿ ಚೋಭಯೋಃ ।
ನದಂತಂ ವಿಸ್ಫುರಂತಂ ಚ ಪಶುಮಾರಮಮಾರಯತ್ ॥೨೫॥

ರಾಜನೆ! ಆತನ ಕುತ್ತಿಗೆ ಮತ್ತು ಎದೆ ಎರಡೂ ಭಾಗಗಳಲ್ಲಿ ಕಾಲಿನಿಂದ ಮೆಟ್ಟಿ ಭುಸುಗುಟ್ಟುತ್ತಿರುವ ಹೊರಳಾಡುತ್ತಿರುವ (ರಣರಂಗದಲ್ಲಿ ಕೌರವರಸೇನೆಯನ್ನು ರುದ್ರನು ಪಶುಗಳನ್ನು ಸಂಹರಿಸುವಂತೆ ಸಂಹರಿಸುತ್ತಿದ್ದ. ಆದ್ದರಿಂದ ಪಶುಮಾರಕ ಎಂಬ ಬಿರುದಾಂಕಿತನಾದ ಧೃಷ್ಟದ್ಯುಮ್ನನನ್ನು) ಪಶುಮಾರಕನನ್ನು ಪ್ರಹರಿಸಿದನು.

ಸ ವಾರ್ಯಮಾಣಸ್ತರಸಾ ಬಲಾದ್ ಬಲವತಾಂ ಬಲೀ ।
ತುದನ್ ನಖೈಸ್ತಥಾ ದ್ರೌಣಿಂ ನಾತಿವ್ಯಕ್ತಮುದಾಹರನ್ ॥೨೬॥

ಬಲಿಷ್ಠರಿಗೂ ಬಲಶಾಲಿಯಾದ ಆ ಧೃಷ್ಟದ್ಯುಮ್ನನು ಪ್ರಬಲವಾಗಿ ವಿರೋಧಿಸಿದನು, ಉಗುರುಗಳಿಂದ ತಿವಿದನು, ಹಾಗೆಯೇ ದ್ರೋಣಪುತ್ರನನ್ನು ಉದ್ದೇಶಿಸಿ ಅಸ್ಪಷ್ಟವಾಗಿ ನುಡಿದನು.

ಧೃಷ್ಟದ್ಯುಮ್ನಃ

ಆಚಾರ್ಯಪುತ್ರ ಶಸ್ತ್ರೇಣ ಜಹಿ ಮಾಂ ಮಾಚಿರಂ ಕೃಥಾಃ ।
ತ್ವತ್ಕೃತೇ ಸುಕೃತಾನ್ ಲೋಕಾನ್ ಗಚ್ಛೇಯಂ ದ್ವಿಪದಾಂ ವರ ॥೨೭॥

ಧೃಷ್ಟದ್ಯುಮ್ನ– ಮಾನವಶ್ರೇಷ್ಠನೆ ಆಚಾರ್ಯರ ಪುತ್ರನೇ! ಶಸ್ತ್ರದಿಂದ ನನ್ನನ್ನು ಗೆಲ್ಲು, ವಿಲಂಬ ಮಾಡಬೇಡ, ನಿನ್ನಿಂದ ಶ್ರೇಷ್ಠಲೋಕಗಳನ್ನು ಹೊಂದುವೆನು.

ಸಂಜಯಃ

ತಸ್ಯಾವ್ಯಕ್ತಾಂ ತು ತಾಂ ವಾಚಂ ಸಂಶ್ರುತ್ಯ ದ್ರೌಣಿರಬ್ರವೀತ್ ॥೨೮॥

ಆತನ ಅಸ್ಪಷ್ಟವಾದ ಆ ಮಾತನ್ನು ಕೇಳಿ ದ್ರೋಣಪುತ್ರನು ನುಡಿದನು

ದ್ರೌಣಿಃ

ಆಚಾರ್ಯಘಾತಿನಾಂ ಲೋಕಾ ನ ಸಂತಿ ಕುಲಪಾಂಸನ ।
ತಸ್ಮಾಚ್ಛಸ್ತ್ರೇಣ ನಿಧನಂ ನ ತ್ವಮರ್ಹತಿ ದುರ್ಮತೇ ॥೨೯॥

ಅಶ್ವತ್ಥಾಮ– ಕುಲಗೆಡಕ, ದುರ್ಬುದ್ಧಿಯವನೆ! ಆಚಾರ್ಯರನ್ನು ಕೊಲೆಮಾಡಿದವರಿಗೆ (ಉತ್ತಮ) ಲೋಕಗಳು ಇಲ್ಲ, ಆದ್ದರಿಂದ ನೀನು ಶಸ್ತ್ರದಿಂದ ಸಾವನ್ನು ಹೊಂದಲು ಅನರ್ಹನಾಗಿರುವಿ.

ನೃಶಂಸೇನಾತಿವೃತ್ತೇನ ತ್ವಯಾ ಮೇ ನಿಹತಃ ಪಿತಾ ।
ತಸ್ಮಾತ್ ತ್ವಮಪಿ ವಧ್ಯಸ್ತು ನೃಶಂಸೇನ ನೃಶಂಸವತ್ ॥೩೦॥

ರಾಕ್ಷಸನಂತೆ ಮರ್ಯಾದೆಯನ್ನು ಮೀರಿ ನೀನು ನನ್ನ ತಂದೆಯನ್ನು ಸಂಹರಿಸಿದಿ, ಆದ್ದರಿಂದ ನೀನೂ ಸಹ ರಕ್ಕಸನಿಂದ ರಕ್ಕಸನಂತೆ ಮೃತನಾಗಲು ಯೋಗ್ಯನಾಗಿದ್ದೀಯ.

ಸಂಜಯಃ

ಏವಮುಕ್ತ್ವಾ ತು ತಂ ವೀರಂ ಸಿಂಹೋ ಮತ್ತಮಿವ ದ್ವಿಪಮ್ ।
ಮರ್ಮಸ್ವಭ್ಯಹನದ್ ಕ್ರುದ್ಧಃ ಪಾದಘಾತೈಃ ಸುದಾರುಣೈಃ ॥೩೧॥

ಸಂಜಯ– ಈ ರೀತಿಯಾಗಿ ಹೇಳಿ, ಸಿಂಹವು ಮದಿಸಿದ ಆನೆಯನ್ನು ಹಿಂಸಿಸುವಂತೆ, ಆ ವೀರನನ್ನು ಭೀಕರವಾಗಿ ಕಾಲಿನಿಂದ ಮರ್ಮಸ್ಥಲದಲ್ಲಿ ಮೆಟ್ಟುವುದರಿಂದ ಕ್ರುದ್ಧನಾದ ಅಶ್ವತ್ಥಾಮನು ಹಿಂಸಿಸಿದನು.

ತಸ್ಯ ವೀರಸ್ಯ ಶಬ್ದೇನ ಮಾರ್ಯಮಾಣಸ್ಯ ವೇಶ್ಮನಿ ।
ಅಬುಧ್ಯನ್ನಥ ರಾಜೇಂದ್ರ ದ್ವಾರೇ ಯೇ ಚಾಸ್ಯ ರಕ್ಷಿಣಃ ॥೩೨॥

ರಾಜಶ್ರೇಷ್ಠನೆ! ಅನಂತರದಲ್ಲಿ ಆ ವೀರನ ಕೂಗುವಿಕೆಯಿಂದ ಆ ಸಂಹಾರವಾಗುತ್ತಿರುವ ಮನೆಯ ದ್ವಾರದಲ್ಲಿ ಯಾರು ರಕ್ಷಕರೋ ಅವರು ಎಚ್ಚರಗೊಂಡರು.

ತೇ ದೃಷ್ಟ್ವಾ ಧರ್ಷಯಂತಂ ತು ಅತಿಮಾನುಷವಿಗ್ರಹಮ್ ।
ಭೂತಮಿತ್ಯಧ್ಯವಸ್ಯಂತಃ ತಸ್ಮಾನ್ನ ವ್ಯಾಹರನ್ ಭಯಾತ್ ॥೩೩॥

ಧರ್ಷಣಮಾಡುತ್ತಿರುವ ಮನುಷ್ಯದೇಹದಂತಿರದ ಆ ಪ್ರಾಣಿಯನ್ನು ಕಂಡು ಭೂತ ಎಂದು ಭಾವಿಸಿ, ಆದ್ದರಿಂದ ಭಯದಿಂದ ಏನೂ ವ್ಯವಹರಿಸಲಿಲ್ಲ (ಏನು ಮಾಡಬೇಕೆಂದು ತಿಳಿಯದವರಾದರು).

ತಂ ತು ತೇನಾಭ್ಯುಪಾಯೇನ ಗಮಯಿತ್ವಾ ಯಮಕ್ಷಯಮ್ ।
ಸೋಽಧ್ಯತಿಷ್ಠತ ತೇಜಸ್ವೀ ರಥಂ ಪ್ರಾಪ್ಯ ಸುದರ್ಶನಮ್ ॥೩೪॥

ಆತನು (ಅಶ್ವತ್ಥಾಮನು) ಉಪಾಯದಿಂದ ಆತನನ್ನು (ಧೃಷ್ಟದ್ಯುಮ್ನನನ್ನು) ಯಮನ ಬಳಿಗೆ ಕಳುಹಿಸಿ, ಆ ತೇಜಸ್ವಿಯು (ಅಶ್ವತ್ಥಾಮನು) ಮೇಲೆದ್ದು ಅಂದವಾದ ರಥವನ್ನು ಸಮೀಪಿಸಿ ಏರಿದನು.

ಸ ತಸ್ಯ ಭವನಾದ್ ರಾಜನ್ ನಿಷ್ಕ್ರಮ್ಯಾನಾದಯನ್ ದಿಶಃ ।
ರಥೇನ ಶಿಬಿರಂ ಪ್ರಾಯಾದ್ ಜಿಘಾಂಸುರ್ದ್ವಿಷತೋ ಬಲೀ ॥೩೫॥

ರಾಜನೆ! ಆತನು ಆತನ (ಧೃಷ್ಟದ್ಯುಮ್ನನ) ಮನೆಯಿಂದ ಹೊರಬಂದು ದಿಕ್ಕು-ದಿಕ್ಕುಗಳಲ್ಲಿ ಶಬ್ದವನ್ನು ಮಾಡುತ್ತಾ, ದ್ವೇಷಿಗಳನ್ನು ಸಂಹರಿಸುವ ಇಚ್ಛೆಯಿರುವ ಬಲಿಷ್ಠನಾದ ಅಶ್ವತ್ಥಾಮನು ರಥವನ್ನೇರಿ (ಮತ್ತೊಂದು) ಶಿಬಿರಕ್ಕೆ ಹೊರಟನು.

ಅಪಕ್ರಾಂತೇ ತತಸ್ತಸ್ಮಿನ್ ದ್ರೋಣಪುತ್ರೇ ಮಹಾರಥೇ ।
ಸಹಿತಾ ರಕ್ಷಿಭಿಸ್ತೈಸ್ತು ಪ್ರಣೇದುರ್ಯೋಷಿತಸ್ತದಾ ॥೩೬॥

ಅನಂತರದಲ್ಲಿ ಮಹಾರಥಿಕನಾದ ಆ ದ್ರೋಣಪುತ್ರನು ಹೋಗುತ್ತಿರಲಾಗಿ, ಆ ರಕ್ಷಕರಿಂದ ಕೂಡಿಕೊಂಡು ಸ್ತ್ರೀಯರು ರೋದಿಸಿದರು.

ರಾಜಾನಂ ನಿಹತಂ ದೃಷ್ಟ್ವಾ ಭೃಶಂ ಶೋಕಪರಾಯಣಾಃ ।
ವ್ಯಾಕ್ರೋಶನ್ ಕ್ಷತ್ರಿಯಾಃ ಸರ್ವೇ ಧೃಷ್ಟದ್ಯುಮ್ನಸ್ಯ ಭಾರತ ॥೩೭॥

ಭರತಕುಲೋತ್ಪನ್ನನೆ! ರಾಜನು ಮೃತನಾದದ್ದನ್ನು ಕಂಡು ಧೃಷ್ಟದ್ಯುಮ್ನನ ಅನುಬಂಧಿಗಳಾದ ಎಲ್ಲ ಕ್ಷತ್ರಿಯರು ಅತ್ಯಂತ ಶೋಕಪರಾಯಣರಾಗಿ ರೋದಿಸಿದರು.

ತಾಸಾಂ ತೇನ ತು ಶಬ್ದೇನ ಸಮೀಪೇ ಕ್ಷತ್ರಿಯರ್ಷಭಾಃ ।
ಸಮನಹ್ಯಂತ ಸಂಭ್ರಾಂತಾ ಕಿಮೇತದಿತಿ ಚಾಬ್ರುವನ್ ॥೩೮॥

ಆ ಹೆಣ್ಣುಮಕ್ಕಳ ಆ ಶಬ್ದದಿಂದ ಸಮೀಪದಲ್ಲಿದ್ದ ಕ್ಷತ್ರಿಯಶ್ರೇಷ್ಠರು ಎಚ್ಚರಗೊಂಡು ಭೀತರಾಗಿ ಏನಿದು? ಎಂದು ಪ್ರಶ್ನಿಸಿದರು.

ಸ್ತ್ರಿಯಸ್ತು ರಾಜನ್ ವಿತ್ರಸ್ತಾ ಭಾರದ್ವಾಜಂ ನಿರೀಕ್ಷ್ಯ ತಾಃ ।
ಅಬ್ರುವನ್ ದೀನಕಂಠೇನ ಕ್ಷಿಪ್ರಮಾಗಮ್ಯತಾಮಿತಿ ॥೩೯॥

ರಾಜನೆ! ಭರದ್ವಾಜಗೋತ್ರೋತ್ಪನ್ನನಾದ ಅಶ್ವತ್ಥಾಮನನ್ನು ಕಂಡು ಹೆದರಿದ ಆ ಸ್ತ್ರೀಯರು ದೈನ್ಯಸ್ವರದಿಂದ 'ಬೇಗ ಬನ್ನಿ' ಎಂದು ಹೇಳಿದರು.

ಸ್ತ್ರಿಯಃ

ರಾಕ್ಷಸೋ ವಾ ಮನುಷ್ಯೋ ವಾ ನೈನಂ ಜಾನೀಮ ಕೋ ನ್ವಯಮ್ ।
ಹತ್ವಾ ಪಾಂಚಾಲದಾಯಾದಂ ರಥಮಾರುಹ್ಯ ತಿಷ್ಠತಿ ॥೪೦॥

ಸ್ತ್ರೀಯರು– ರಾಕ್ಷಸನೋ ಮನುಷ್ಯನೋ ಯಾವ ಜಾತಿಯವ ಎಂದು ನಾವು ತಿಳಿಯೆವು, ಪಾಂಚಾಲರಾಜನ ಪುತ್ರನನ್ನು ಸಂಹರಿಸಿ ರಥವನ್ನೇರಿ ನಿಂತಿರುವನು.

ಸಂಜಯಃ

ತತಸ್ತೇ ಯೋಧಮುಖ್ಯಾಸ್ತಂ ಸಹಸಾ ಪರ್ಯವಾರಯನ್ ।
ಸ ತಾನಾಪತತಃ ಸರ್ವಾನ್ ರುದ್ರಾಸ್ತ್ರೇಣಾವಪೋಥಯತ್ ॥೪೧॥

ಸಂಜಯ- ಅನಂತರದಲ್ಲಿ ಆ ಯೋಧಮುಖ್ಯಸ್ಥರು ಆತನನ್ನು (ಅಶ್ವತ್ಥಾಮನನ್ನು) ಸುತ್ತುವರೆದರು, ಆತನು (ಅಶ್ವತ್ಥಾಮನು) ರೌದ್ರಾಸ್ತ್ರದಿಂದ ಮೇಲೆಬಿದ್ದ ಆ ಎಲ್ಲರನ್ನೂ ನಾಶಗೊಳಿಸಿದನು.

ಧೃಷ್ಟದ್ಯುಮ್ನಂ ಚ ಹತ್ವಾ ಸ ತಾಂಶ್ಚೈವಾಸ್ಯ ಪದಾನುಗಾನ್ ।
ಅಪಶ್ಯಚ್ಛಯನೇ ಸುಪ್ತಮ್ ಉತ್ತಮೌಜಸಮಂತಿಕೇ ॥೪೨॥

ಆತನು ಧೃಷ್ಟದ್ಯುಮ್ನನನ್ನು ಆತನ ಅನುಚರರನ್ನು ಸಂಹರಿಸಿ, ಸಮೀಪದಲ್ಲಿಯೇ ಮಲಗಿದ್ದ ಉತ್ತಮೌಜಸನನ್ನು (ದ್ರುಪದನ ಮತ್ತೊಬ್ಬ ಮಗನನ್ನು) ಕಂಡನು.

ತಮಪ್ಯಾಕ್ರಮ್ಯ ಪಾದೇನ ಕಂಠೇ ಚೋರಸಿ ತೇಜಸಾ ।
ತಥೈವ ಮಾರಯಾಮಾಸ ವಿಚೇಷ್ಟಂತಮರಿಂದಮಮ್ ॥೪೩॥

ಶತ್ರುಸಂಹಾರಕನಾದ ಹೊರಳಾಡುತ್ತಿರುವ ಆತನನ್ನೂ (ಉತ್ತಮೌಜಸನನ್ನು) ಸಹ ಆಕ್ರಮಿಸಿ, ಕಾಲಿನಿಂದ (ಆತನ) ಎದೆ ಮತ್ತು ಕತ್ತನ್ನು ಬಲವಾಗಿ ತುಳಿದು, ಅದೇ ರೀತಿಯಲ್ಲಿ ಸಂಹರಿಸಿದನು.

ಯುಧಾಮನ್ಯುಸ್ತು ವಿಕ್ರಾಂತೋ ಮತ್ವಾ ತಂ ರಾಕ್ಷಸಂ ಸ್ಮ ಸಃ ।
ಗದಾಮುದ್ಯಮ್ಯ ವೇಗೇನ ವಕ್ಷಸ್ಯೇನಮತಾಡಯತ್ ॥೪೪॥

ಪರಾಕ್ರಮಶಾಲಿಯಾದ ಆ ಯುಧಾಮನ್ಯುವು (ಮತ್ತೊಬ್ಬ ಪಾಂಚಾಲಕುವರ) ಈತನನ್ನು (ಅಶ್ವತ್ಥಾಮನನ್ನು) ರಾಕ್ಷಸ ಎಂದು ಭಾವಿಸಿ ವೇಗವಾಗಿ ಗದೆಯಿಂದ ಪ್ರಹರಿಸಿದನು.

ಗದಾಪ್ರಹಾರಾಭಿಹತೋ ನಾಚಲದ್ ದ್ರೌಣಿರಾಹವೇ ।
ತಮಭಿದ್ರುತ್ಯ ವೇಗೇನ ಕ್ಷಿತೌ ಚೇನಮಪಾತಯತ್ ॥೪೫॥

ಗದೆಯಿಂದ ಪೆಟ್ಟುಬಿದ್ದರೂ ದ್ರೋಣಪುತ್ರನು ಯುದ್ಧದಲ್ಲಿ ಮಿಸಕಾಡಲಿಲ್ಲ, ವೇಗದಿಂದ ಧಾವಿಸುತ್ತಿದ್ದ ಆತನನ್ನು ನೆಲದಲ್ಲಿ ಕೆಡವಿದನು.

ವಿಸ್ಫುರಂತಂ ಚ ಪಶುವತ್ ತಥೈವೈನಮಮಾರಯತ್ ।
ತಥಾ ಸ ವೀರೋ ಹತ್ವಾ ತಂ ತತೋಽನ್ಯಾನ್ ಸಮುಪಾದ್ರವತ್ ॥೪೬॥

ಮೇಲುಸಿರು ಬಿಡುತ್ತಿದ್ದ ಆತನನ್ನು ಪಶುವಿನಂತೆ ಸಂಹರಿಸಿದನು, ಆತನನ್ನು ಸಂಹರಿಸಿ ಆ ವೀರನು ಹಾಗೆಯೇ ಆನಂತರದಲ್ಲಿ ಬೇರೆಯವರನ್ನು ಸಮೀಪಿಸಿದನು.

ಸಂಸುಪ್ತಾನೇವ ರಾಜೇಂದ್ರ ತತ್ರ ತತ್ರ ಮಹಾರಥಾನ್ ।
ಪಾಂಚಾಲವೀರಾನಾಕ್ರಮ್ಯ ಕ್ರುದ್ಧೋ ನ್ಯಹನದಂತಿಕೇ ॥೪೭॥

ಪುರತಃ ಸ್ಫುರಮಾಣಾಂಶ್ಚ ಶಮಿತೇವ ಪಶೂನ್ ಮಖೇ ॥೪೮॥

ರಾಜಶ್ರೇಷ್ಠನೇ! ಅಲ್ಲಿ ಅಲ್ಲಿ ಮಲಗಿದ್ದ ಮುಂಭಾಗದಲ್ಲಿ ಕಾಣುತ್ತಿರುವ ಪಾಂಚಾಲರ ವೀರರನ್ನು ಆಕ್ರಮಿಸಿ ಕೋಪಗೊಂಡ ಅಶ್ವತ್ಥಾಮನು, ಯಜ್ಞದಲ್ಲಿ ಪಶುಗಳನ್ನು ಸಂಹರಿಸುವ ಪಶುಮಾರಕನಂತೆ ಸಂಹರಿಸಿದನು.

ತತೋ ನಿಸ್ತ್ರಿಂಶಮಾದಾಯ ಜಘಾನಾನ್ಯಾನ್ ಪೃಥಗ್ಜನಾನ್ ।
ಭಾಗಶೋ ವಿಚರನ್ ಮಾರ್ಗಾನ್ ಅಸಿಯುದ್ಧವಿಶಾರದಃ ॥೪೯॥

ಅನಂತರದಲ್ಲಿ ಖಡ್ಗಯುದ್ಧದಲ್ಲಿ ನಿಪುಣನಾದ ಅಶ್ವತ್ಥಾಮನು ಖಡ್ಗವನ್ನು ಪರಿಗ್ರಹಿಸಿ, ಆ ಮಾರ್ಗಗಳಲ್ಲಿ ಸ್ವಲ್ಪಸ್ವಲ್ಪ ಸಾಗುತ್ತಾ ಬೇರೇ ಬೇರೇ ಸೈನ್ಯಕರನ್ನು ಸಂಹರಿಸಿದನು.

ತಥೈವ ಗುಲ್ಮಾನ್ ಸಂಪ್ರೇಕ್ಷ್ಯ ಶಯಾನಾನ್ ಮಧ್ಯಗೌಲ್ಮಿಕಾನ್ ।
ಶ್ರಾಂತಾನ್ ವ್ಯಸ್ತಾಯುಧಾನ್ ಸರ್ವಾನ್ ಅಸಿನೈವ ವ್ಯಪೋಥಯತ್ ॥

ಹಾಗೆಯೇ ವಸತಿ ಸ್ಥಾನಗಳನ್ನು ಕಂಡನು, ವಸತಿಸ್ಥಾನಗಳ ಮಧ್ಯದಲ್ಲಿ ಮಲಗಿದ, ಆಯುಧಗಳನ್ನು ದೂರದಲ್ಲಿಟ್ಟಿರುವ, ಆಯಾಸಗೊಂಡ ಆ ಎಲ್ಲರನ್ನು ಖಡ್ಗದಿಂದಲೇ ಸಂಹರಿಸಿದನು.

ಯೋಧಾನಶ್ವಾನ್ ದ್ವಿಪಾಂಶ್ಚೈವ ಪ್ರಾಚ್ಛಿನತ್ ಸ ವರಾಸಿನಾ ।
ರುಧಿರೋಕ್ಷಿತಸರ್ವಾಂಗಃ ಕಾಲಸೃಷ್ಟ ಇವಾಂತಕಃ ॥೫೦॥

ರಕ್ತದಿಂದ ಒದ್ದೆಯಾದ ಅವಯವಿಯಾದ ಕಾಲವು ಸೃಷ್ಟಿಸಿದ ಅಂತಕನಂತೆ ಆತನು ಯೋಧರನ್ನು ಕುದುರೆಗಳನ್ನು ಆನೆಗಳನ್ನು ಸಹ ಶ್ರೇಷ್ಠ ಕತ್ತಿಯಿಂದಲೇ ಕತ್ತರಿಸಿದನು.

ವಿಸ್ಫುರದ್ಭಿಶ್ಚ ತೈರ್ದ್ರೌಣಿಃ ನಿಸ್ತ್ರಿಂಶಸ್ಯೋದ್ಯಮೇನ ಚ ।
ಅವಕ್ಷೇಪೇಣ ಚೈವಾಂಸೇ ತ್ವಥ ರಕ್ತೋಕ್ಷಿತೋಽಭವತ್ ॥೫೨॥

ಅವರು (ಅಶ್ವತ್ಥಾಮನ ಪ್ರಹಾರದಿಂದ ಸೈನಿಕರ ಕೈ-ಕಾಲು ತುಂಡಾದ್ದರಿಂದ) ಹೊರಳಾಡುತ್ತಿದ್ದರಿಂದ, ಖಡ್ಗವನ್ನು ಮೇಲೆ ಎತ್ತಿ ಹಿಡಿದಿದ್ದರಿಂದ, ಹೆಗಲಮೇಲೆ ಎತ್ತಿ ಹಿಡಿದಿಟ್ಟುಕೊಂಡಿದ್ದರಿಂದ (ಈ ಮೂರೂಕಾರಣಗಳಿಂದ) ರಕ್ತದಿಂದ ಅಭಿಷಿಕ್ತನಾಗಿದ್ದನು.

ತಸ್ಯ ಲೋಹಿತಹಸ್ತಸ್ಯ ದೀಪ್ತಖಡ್ಗಸ್ಯ ಯುಧ್ಯತಃ ।
ಅಮಾನುಷ ಇವಾಕಾರೋ ಬಭೌ ಪರಮಭೀಷಣಃ ॥೫೩॥

ಆ ಕೆಂಪಾದ ಕರದ, ಪ್ರಜ್ವಲಿಸುವ ಖಡ್ಗವನ್ನು ಧರಿಸಿದ, ಯುದ್ಧಮಾಡುವ (ಆ ಅಶ್ವತ್ಥಾಮನ) ಆಕಾರವು ಮನುಷ್ಯೋತ್ತರನಂತೆ (ದೈತ್ಯಾಕಾರದಂತೆ) ತುಂಬ ಭಯಂಕರವಾಗಿ ತೋರುತ್ತಿತ್ತು.

ಯೇ ತ್ವಜಾನಂತ ಕೌರವ್ಯ ತೇನ ಶಬ್ದೇನ ಮೋಹಿತಾಃ ।
ವೀಕ್ಷಮಾಣಾಸ್ತು ತೇ ತತ್ರ ದ್ರೌಣಿಂ ದೃಷ್ಟ್ವಾ ಪ್ರವಿವ್ಯಥುಃ ॥೫೪॥

ಕುರುವಂಶೋತ್ಪನ್ನನೆ! ಯಾರು ಆ ಶಬ್ದದಿಂದ ಮೋಹಿತರಾಗಿದ್ದರೋ ಅವರು ಮುಂದೇನು ಮಾಡಬೇಕೆಂದು ತಿಳಿಯದವರಾದರು, ಅಲ್ಲಿ ದ್ರೋಣಪುತ್ರನನ್ನು ನೋಡುತ್ತಾ ಭಯಭೀತರಾದರು.

ತದ್ರೂಪಂ ತಸ್ಯ ತೇ ದೃಷ್ಟ್ವಾ ಕ್ಷತ್ರಿಯಾಃ ಶತ್ರುಕರ್ಶನಾಃ ।
ರಾಕ್ಷಸಂ ಶಂಕಮಾನಾಸ್ತು ನಯನಾನಿ ನ್ಯಮೀಲಯನ್ ॥೫೫॥

ಶತ್ರುಗಳಿಗೆ ದುಃಖಕಾರಕರಾದ ಆ ಕ್ಷತ್ರಿಯರು ಆತನ (ಅಶ್ವತ್ಥಾಮನ) ಆ ರೂಪವನ್ನು ಕಂಡು, ರಾಕ್ಷಸ ಎಂದು ಸಂದೇಹಿಸಿ ಕಣ್ಣುಗಳನ್ನು ಮುಚ್ಚಿಕೊಂಡರು.

ಅಘೋರರೂಪೋ ವ್ಯಚರತ್ ಕಾಲವಚ್ಚಿಬಿರೇ ತದಾ ।
ಅಪಶ್ಯದ್ ದ್ರೌಪದೀಪುತ್ರಾನ್ ಅವಶಿಷ್ಟಾನ್ ಸಸೋಮಕಾನ್ ॥೫೬॥

ಆಗ ಅಘೋರ ಎಂಬ ರುದ್ರನ ಅಂಶಸಂಜಾತನಾದ ಅಶ್ವತ್ಥಾಮನು ಕಾಲನಂತೆ ಶಿಬಿರದಲ್ಲಿ ಸಂಚರಿಸಿದನು, ಉಳಿದ ಪಾಂಚಾಲರನ್ನು ದ್ರೌಪದಿಯ ಪುತ್ರರನ್ನು ಕಂಡನು.

ತೇನ ಶಬ್ದೇನ ವಿತ್ರಸ್ತಾ ಧನುರ್ಹಸ್ತಾ ಮಹಾರಥಾಃ ।
ಧೃಷ್ಟದ್ಯುಮ್ನಂ ಹತಂ ಶ್ರುತ್ವಾ ದ್ರೌಪದೇಯಾ ವಿಶಾಂಪತೇ ॥೫೭॥

ಅವಾಕಿರತ್ ಶರವ್ರಾತೈರ್ಭಾರದ್ವಾಜಂ ಸಮಂತತಃ ॥೫೮॥

ರಾಜರ ಒಡೆಯನೆ! ಧೃಷ್ಟದ್ಯುಮ್ನನು ಮೃತನಾದ ಸುದ್ದಿಯನ್ನು ಕೇಳಿದ, ಆ ಶಬ್ದದಿಂದ ಹೆದರಿದ, ಮಹಾರಥಿಕರಾದ, ದ್ರೌಪದಿಯ ಪುತ್ರರು ಬಿಲ್ಲನ್ನು ಪಿಡಿದವರಾಗಿ, ಭರದ್ವಾಜಕುಲೋತ್ಪನ್ನನಾದ ಅಶ್ವತ್ಥಾಮನನ್ನು ಗುರಿಯಾಗಿಸಿ ಬಾಣಗಳ ಸಮೂಹವನ್ನು ಎಸೆದರು.

ತತಸ್ತೇನ ನಿನಾದೇನ ಸಂಪ್ರಬುದ್ಧಾಃ ಪ್ರಭದ್ರಕಾಃ ।
ಶಿಲೀಮುಖೈಃ ಶಿಖಂಡೀ ಚ ದ್ರೋಣಪುತ್ರಮದಾರಯನ್ ॥೫೯॥

ಅನಂತರದಲ್ಲಿ ಆ ಶಬ್ದದಿಂದ ಎಚ್ಚರಗೊಂಡ ಕಾವಲುಗಾರರು, ಶಿಖಂಡಿಯೂ ಸಹ ದ್ರೋಣಪುತ್ರನನ್ನು ಬಾಣಗಳಿಂದ ಘಾಸಿಗೊಳಿಸಿದರು.

ಭಾರದ್ವಾಜಸ್ತು ತಾನ್ ದೃಷ್ಟ್ವಾ ಶರವರ್ಷಾಣಿ ವರ್ಷತಃ ।
ನನಾದ ಬಲವನ್ನಾದಂ ಜಿಘಾಂಸುಸ್ತಾನ್ ಸುದುರ್ಜಯಾನ್ ॥೬೦॥

ಬಾಣಗಳ ಸರತಿಯನ್ನೇ ಸುರಿಸುತ್ತಿರುವ ಅವರನ್ನು ಕಂಡ ಭರದ್ವಾಜ ಕುಲೋತ್ಪನ್ನನಾದ ಅಶ್ವತ್ಥಾಮನು , ಅತಿ ಕಷ್ಟದಿಂದ ಗೆಲ್ಲಲು ಯೋಗ್ಯರಾದ ಅವರನ್ನು ಕೊಲ್ಲಬೇಕೆಂಬ ಇಚ್ಛೆಯಿಂದ ಜೋರಾಗಿ ಅರಚಿದನು.

ತತಃ ಪರಮಸಂಕ್ರುದ್ಧಃ ಪಿತುರ್ವಧಮನುಸ್ಮರನ್ ।
ಅವತೀರ್ಯ ರಥೋಪಸ್ಥಾತ್ ತ್ವರಮಾಣೋಽಭಿದುದ್ರುವೇ ॥೬೧॥

ಅನಂತರದಲ್ಲಿ ತಂದೆಯ ಸಂಹಾರವನ್ನು ಸ್ಮರಿಸಿಕೊಂಡ ಅತಿ ಕೋಪಗೊಂಡ ಅಶ್ವತ್ಥಾಮನು ರಥದಿಂದ ಕೆಳಗಿಳಿದು ವೇಗದಿಂದ ಅವರೆಡೆಗೆ ನುಗ್ಗಿಬಂದನು.

ಸಹಸ್ರಚಂದ್ರವಿಮಲಂ ಗೃಹೀತ್ವಾ ಚರ್ಮ ಸಂಯುಗೇ ।
ಖಡ್ಗಂ ಚ ವಿಮಲಂ ದಿವ್ಯಂ ಜಾತರೂಪಪರಿಷ್ಕೃತಮ್ ॥೬೨॥

ದ್ರೌಪದೇಯಾನಭಿದ್ರುತ್ಯ ಖಡ್ಗೇನ ವ್ಯಧಮದ್ ಬಲೀ ॥೬೩॥

ಸಾವಿರಚಂದ್ರದಂತೆ ಶುಭ್ರವಾದ ಗುರಾಣಿಯನ್ನು, ಚಿನ್ನದಿಂದ ಅಲಂಕೃತವಾದ ಶುದ್ಧವಾದ ದಿವ್ಯವಾದ ಖಡ್ಗವನ್ನು ಹಿಡಿದು, ಬಲಿಷ್ಟನಾದ ಅಶ್ವತ್ಥಾಮನು ದ್ರೌಪದಿಯ ಪುತ್ರರನ್ನು ಸಮೀಪಿಸಿ ಖಡ್ಗದಿಂದ ಯುದ್ಧದಲ್ಲಿ ಪ್ರಹರಿಸಿದನು.

ತತಃ ಸ ನರಶಾರ್ದೂಲಂ ಪ್ರತಿವಿಂಧ್ಯಂ ತಮಾಹವೇ ।
ಕುಕ್ಷಿದೇಶೇऽಹನದ್ ರಾಜನ್ ಸ ಹತೋ ನ್ಯಪತದ್ ಭುವಿ ॥೬೪॥

ರಾಜನೆ! ಅನಂತರದಲ್ಲಿ ಯುದ್ಧದಲ್ಲಿ ಆತನು (ಅಶ್ವತ್ಥಾಮನು) ಆ ನರಶ್ರೇಷ್ಠನಾದ ಪ್ರತಿವಿಂಧ್ಯನಿಗೆ (ದ್ರೌಪದಿಯ ಪುತ್ರರಲ್ಲಿ ಓರ್ವನನ್ನು) ಹೊಟ್ಟೆಗೆ ತಿವಿದನು, ಮೃತನಾದ ಆತನು ನೆಲದಲ್ಲಿ ಬಿದ್ದನು.

ಪ್ರಾಸೇನ ತು ತತೋ ದ್ರೌಣಿಂ ಸುತಸೋಮೋ ಹ್ಯತಾಡಯತ್ ॥೬೫॥

ಅನಂತರದಲ್ಲಿ ಸುತಸೋಮನು (ದ್ರೌಪದಿಯ ಪುತ್ರರಲ್ಲಿ ಓರ್ವ) ದ್ರೋಣಪುತ್ರನನ್ನು ಪ್ರಾಸದಿಂದ ಬಡಿದನು.

ಪ್ರಾಸಪ್ರಹಾರಂ ತು ತದಾ ವಿಗೃಹ್ಯ ದ್ರೌಣಿರಾಹವೇ ।
ಸುತಸೋಮಸ್ಯ ಸಾಸಿಂ ತು ಬಾಹುಂ ಚಿಚ್ಛೇದ ಮಾರಿಷ ॥೬೬॥

ಮಾರಿಷನೆ! ದ್ರೋಣಪುತ್ರನಾದರೊ ಆಗ ಪ್ರಾಸದ ಪ್ರಹಾರವನ್ನು ಸಹಿಸಿಕೊಂಡು, ಸುತಸೋಮನ ಬಾಹುವನ್ನು ಕತ್ತಿಯನ್ನು ಕತ್ತರಿಸಿದನು.

ಪುನಶ್ಚಾಪ್ಯಹನತ್ ಪಾರ್ಶ್ವೇ ಸ ಭಿನ್ನಹೃದಯೋऽಪತತ್ ॥೬೭॥

ಮತ್ತೆ ಆತನ ಪಕ್ಕೆಲುಬಿಗೆ ಪ್ರಹರಿಸಿದನು, ಆತನು ಎದೆಸೀಳಿ ನೆಲಕ್ಕೆ ಉರುಳಿದನು.

ನಾಕುಲಿಸ್ತು ಶತಾನೀಕೋ ರಥಚಕ್ರೇಣ ವೀರ್ಯವಾನ್ ।
ದೋರ್ಭ್ಯಾಮುತ್ಕ್ಷಿಪ್ಯ ವೇಗೇನ ವಕ್ಷಸ್ಯೇನಮತಾಡಯತ್ ॥೬೮॥

ನಕುಲನ ಪುತ್ರನಾದ ಬಲಿಷ್ಟನಾದ ಶತಾನೀಕನು ರಥದ ಚಕ್ರವನ್ನು ಎರಡು ಕೈಗಳಿಂದ ಮೇಲೆತ್ತಿ ವೇಗವಾಗಿ ಆತನ ಎದೆಗೆ ಪ್ರಹರಿಸಿದನು.

ಅತಾಡಯಚ್ಛತಾನೀಕಂ ಮುಕ್ತಚಕ್ರಂ ದ್ವಿಜಸ್ತು ಸಃ ।
ಸ ವಿಹ್ವಲೋ ಯಯೌ ಭೂಮಿಂ ತತೋऽಸ್ಯಾಪಹರಚ್ಛಿರಃ ॥೬೯॥

ಚಕ್ರದಿಂದ ತಪ್ಪಿಸಿಕೊಂಡ ಆ ಬ್ರಾಹ್ಮಣನಾದರೋ (ಅಶ್ವತ್ಥಾಮನು) ಚಕ್ರವನ್ನು ಪ್ರಯೋಗಿಸಿದ ಶತಾನೀಕನನ್ನು ಪ್ರಹರಿಸಿದನು, ಅನಂತರದಲ್ಲಿ ಆತನು ಬಳಲಿ ನೆಲಕ್ಕೆ ಉರುಳಿದನು, ಆತನ ತಲೆಯನ್ನು ಕತ್ತರಿಸಿದನು.

ಶ್ರುತವರ್ಮಾ ತು ಪರಿಘಂ ಘೋರಂ ಗೃಹ್ಯ ದುರಾಸದಮ್ ।
ಅತಾಡಯತ್ ಸಮುದ್ಯಮ್ಯ ವೇಗೇನ ದ್ರೌಣಿಮುತ್ಸ್ಮಯನ್ ॥೭೦॥

ಶ್ರುತವರ್ಮನಾದರೋ (ದ್ರೌಪದಿಯ ಪುತ್ರರಲ್ಲಿ ಓರ್ವನು) ಘೋರವಾದ ವಿಫಲವಾಗದ ಪರಿಘವನ್ನು ತೆಗೆದುಕೊಂಡು, ವೇಗದಿಂದ ಮೇಲೆತ್ತಿ ಉತ್ಸಾಹವನ್ನು ತುಂಬಿಕೊಂಡು ದ್ರೋಣಪುತ್ರನನ್ನು ಪ್ರಹರಿಸಿದನು.

ಸ ತು ತಂ ಶ್ರುತವರ್ಮಾಣಮ್ ಆಸ್ಯೇಽಭ್ಯಹ್ನದ್ ವರಾಸಿನಾ ।
ಸ ಹತೋ ನ್ಯಪತದ್ ಭೂಮೌ ವಿಮೂರ್ಧಾ ವಿಕೃತಾನನಃ ॥೭೧॥

ಆತನಾದರೋ (ಅಶ್ವತ್ಥಾಮನಾದರೋ) ಶ್ರುತವರ್ಮನ ಮುಖವನ್ನು ಶ್ರೇಷ್ಠ ಖಡ್ಗದಿಂದ ಪ್ರಹರಿಸಿದನು. ಮೃತನಾದ ಆತನು ತಲೆ ಇಲ್ಲದವನಾಗಿ ವಿಕೃತ ಮುಖದವನಾಗಿ ನೆಲಕ್ಕೆ ಉರುಳಿದನು.

ತೇನ ಶಬ್ದೇನ ವೀರಸ್ತು ಶ್ರುತಕೀರ್ತಿರ್ಮಹದ್ಧನುಃ ।
ಅಶ್ವತ್ಥಾಮಾನಮಾಸಾದ್ಯ ಶರವರ್ಷೈರವಾಕಿರತ್ ॥೭೨॥

ಆ ಶಬ್ದದಿಂದ (ಎಚ್ಚೆತ್ತ) ವೀರನಾದ ದೊಡ್ಡಬಿಲ್ಲಾಳಾದ ಶ್ರುತಕೀರ್ತಿಯು (ದ್ರೌಪದಿಯ ಮಕ್ಕಳಲ್ಲಿ ಓರ್ವ) ಅಶ್ವತ್ಥಾಮನ ಬಳಿ ಸಾಗಿ ಬಾಣದ ಮಳೆಗರೆದನು.

ತಸ್ಯಾಪಿ ಶರವರ್ಷಾಣಿ ಚರ್ಮಣಾ ಪ್ರತಿವಾರ್ಯ ಸಃ ।
ಸಕುಂಡಲಂ ಶಿರಃ ಕಾಯಾದ್ ಭ್ರಾಜಮಾನಮಪಾಹರತ್ ॥೭೩॥

ಆತನ ಬಾಣದ ಮಳೆಯನ್ನು ಆತನಾದರೂ (ಅಶ್ವತ್ಥಾಮನಾದರೋ) ಗುರಾಣಿಯಿಂದ ತಡೆದು ಕುಂಡಲದಿಂದ ಪ್ರಕಾಶಮಾನವಾದ ತಲೆಯನ್ನು ದೇಹದಿಂದ ತೆಗೆದನು.

ತತೋ ಭೀಷ್ಮನಿಹಂತಾರಂ ಸಹ ಸರ್ವೈಃ ಪ್ರಭದ್ರಕೈಃ ।
ಅಭ್ಯಘ್ನತ್ ಸರ್ವತೋ ವೀರಂ ನಾನಾಪ್ರಹರಣೈರ್ಬಲಾತ್ ॥೭೪॥

ಅನಂತರದಲ್ಲಿ ಭೀಷ್ಮಸಂಹಾರಕನು (ಶಿಖಂಡಿಯು) ಎಲ್ಲ ಸಹಯೋಧರಿಂದ ಕೂಡಿಕೊಂಡು ಎಲ್ಲ ದಿಕ್ಕುಗಳಿಂದಲೂ ನಾನಾವಿಧವಾದ ಆಯುಧಗಳಿಂದ ವೀರನನ್ನು (ಅಶ್ವತ್ಥಾಮನನ್ನು) ಪ್ರಹರಿಸಿದನು.

ಶಿಲೀಮುಖೇನ ಚಾಪ್ಯೇನಂ ಭ್ರುವೋರ್ಮಧ್ಯೇ ಸಮಾರ್ಪಯತ್ ॥೭೫॥

ಬಾಣದಿಂದ ಈತನ (ಅಶ್ವತ್ಥಾಮನ) ಹುಬ್ಬುಗಳ ಮಧ್ಯೆ ಪ್ರಹರಿಸಿದನು.

ಸ ತು ಕ್ರೋಧಸಮಾವಿಷ್ಟೋ ದ್ರೋಣಪುತ್ರೋ ಮಹಾರಥಃ ।
ಶಿಖಂಡಿನಂ ಸಮಾಸಾದ್ಯ ದ್ವಿಧಾ ಚಿಚ್ಛೇದ ಸೋಽಸಿನಾ ॥೭೬॥

ಮಹಾರಥಿಕನಾದ ಕೋಪಯುಕ್ತನಾದ ಆ ದ್ರೋಣಪುತ್ರನಾದರೋ (ಶಿಖಂಡಿಯ) ಬಳಿಗೆ ಸಾರಿಬಂದು ಕತ್ತಿಯಿಂದ ಶಿಖಂಡಿಯನ್ನು ಎರಡು ಹೋಳಾಗಿ ಸೀಳಿದನು.

ಶಿಖಂಡಿನಂ ತತೋ ಹತ್ವಾ ಕ್ರೋಧಾವಿಷ್ಟಃ ಪರಂತಪಃ ।
ಪ್ರಭದ್ರಕಗಣಾನ್ ಸರ್ವಾನ್ ಅಭಿದುದ್ರಾವ ವೇಗವಾನ್ ॥೭೭॥

ಶಿಖಂಡಿಯನ್ನು ಸಂಹರಿಸಿ ಅನಂತರದಲ್ಲಿ ಶತ್ರುತಾಪಕನಾದ ಕುಪಿತನಾದ ಅಶ್ವತ್ಥಾಮನು ವೇಗದಿಂದ ಸಹಾಯಕ ಯೋಧರನ್ನು ಸಮೀಪಿಸಿದನು.

ಯಚ್ಚ ಶಿಷ್ಟಂ ವಿರಾಟಸ್ಯ ಬಲಂ ತಚ್ಚ ಸಮಾದ್ರವತ್ ।
ದ್ರುಪದಸ್ಯ ಚ ಪುತ್ರಾಣಾಂ ಪೌತ್ರಾಣಾಂ ಸುಹೃದಾಂ ತಥಾ ॥೭೮॥

ಯಾರು ಉಳಿದಿದ್ದರೋ ವಿರಾಟರಾಜನ ಸೇನೆಯವರು, ದ್ರುಪದನ ಪುತ್ರರು, ಮೊಮ್ಮಕ್ಕಳು ಹಾಗೂ ಸ್ನೇಹಿತರ ಮಕ್ಕಳು ಮೊಮ್ಮಕ್ಕಳು, ಅವರ ಬಳಿ (ಅಶ್ವತ್ಥಾಮನು) ಧಾವಿಸಿದನು.

ಚಕಾರ ಕದನಂ ಘೋರಂ ದೃಷ್ಟ್ವಾ ತತ್ರ ಮಹಾಬಲಃ ॥೭೯॥

ಮಹಾಬಲಶಾಲಿಯಾದ (ಅಶ್ವತ್ಥಾಮನು) ಅಲ್ಲಿ (ಅವರನ್ನು) ಕಂಡು ಘೋರವಾದ ಯುದ್ಧವನ್ನು ಸ್ಮಾರಿದನು.

ಅನ್ಯಾನನ್ಯಾಂಶ್ಚ ಪುರುಷಾನ್ ಅಭಿಸೃತ್ಯಾಭಿಸೃತ್ಯ ಚ ।
ನ್ಯಕೃಂತದಸಿನಾ ದ್ರೌಣಿರಸಿಮಾರ್ಗವಿಶಾರದಃ ॥೮೦॥

ಕತ್ತಿಯುದ್ಧದಲ್ಲಿ ನಿಪುಣನಾದ ದ್ರೋಣಪುತ್ರನು ಬೇರೆ ಬೇರೆಯವರ ಬಳಿ ಸಾಗಿ ಸಾಗಿ (ಆ ಆ) ಪುರುಷರನ್ನು ಕತ್ತಿಯಿಂದ ಸೀಳಿದನು.

ಕಾಲೀಂ ರಕ್ತಾಸ್ಯನಯನಾಂ ರಕ್ತಮಾಲ್ಯಾನುಲೇಪನಾಮ್ ।
ರಕ್ತಾಂಬರಧರಾಂ ಘೋರಾಂ ಪಾಶಹಸ್ತಾಂ ಶಿಖಂಡಿನೀಮ್ ॥೮೧॥

ದದ್ರುಶುಃ ಕಾಲರಾತ್ರಿಂ ತೇ ಸ್ಮಯಮಾನಾಮಿವ ಸ್ಥಿತಾಮ್ ॥೮೨॥

ಕಪ್ಪುಬಣ್ಣದ, ಕೆಂಪಾದ ಮುಖ ಮತ್ತು ಕಣ್ಣನ್ನು ಹೊಂದಿರುವ, ಕೆಂಪಾದ ಮಾಲೆಯನ್ನು ಕೆಂಪುಲೇಪನವನ್ನು ಹೊಂದಿರುವ, ಕೆಂಪಾದ ವಸ್ತ್ರವನ್ನು ತೊಟ್ಟಿರುವ, ಘೋರವಾದ ಪಾಶವನ್ನು ಕೈಯಲ್ಲಿ ಧರಿಸಿರುವ, ನೀಳವಾದ ಕೂದಲನ್ನು ಹೊಂದಿರುವ ನಸುನಗುತ್ತಾ ನಿಂತಿರುವಂತಿರುವ ಕಾಲಿಯನ್ನು ಅವರು (ಪಾಂಡವರ ಪಕ್ಷದವರು) ನೋಡಿದರು.

ನರಾಶ್ವಕುಂಜರಾನ್ ಪಾಶೈರ್ಬದ್ಧ್ವಾ ಘೋರೈಶ್ಚ ತಿಷ್ಠತೀಮ್ ॥೮೩॥

ಹರಂತೀಂ ವಿವಿಧಾನ್ ಪ್ರೇತಾನ್ ಪಾಶಹಸ್ತಾನ್ ವಿಮೂರ್ಧಜಾನ್ ।
ತಥೈವ ಚ ಮಹಾರಾಜ ನ್ಯಸ್ತಶಸ್ತ್ರಾನ್ ಮಹಾರಥಾನ್ ॥೮೪॥

ಸ್ವಪ್ನೇ ಸುಪ್ತಾನ್ ನಯಂತೀಂ ತಾಂ ರಾತ್ರಿಷ್ವನ್ಯಾಸು ಮಾರಿಷ ।
ದದೃಶುರ್ಯೋಧಮುಖ್ಯಾಸ್ತೇ ಘ್ನಂತಂ ದ್ರೌಣಿಂ ತು ನಿತ್ಯದಾ ॥೮೫॥

ಮಹಾರಾಜ, ಮಾರಿಷ! ಆಕೆಯು (ಕಾಲರಾತ್ರಿಯು) ಮನುಷ್ಯರನ್ನು ಕುದುರೆಗಳನ್ನು ಆನೆಗಳನ್ನು ಘೋರವಾದ ಪಾಶಗಳಿಂದ ಬಿಗಿಯುತ್ತಾ ನಿಂತಿರುವಹಾಗೆ, ಪಾಶಗಳನ್ನು ಕೈಯಲ್ಲಿ ಧರಿಸಿರುವ ತಲೆಯಿಲ್ಲದ ವಿವಿಧಪ್ರೇತಗಳನ್ನು ಹಾಗೆಯೆ ಶಸ್ತ್ರವನ್ನು ಪರಿತ್ಯಜಿಸಿದ ಮಹಾರಥಿಕರನ್ನು ಅಪಹರಿಸುತ್ತಿರುವ ಹಾಗೆ, ಮತ್ತು ದ್ರೋಣಪುತ್ರನು

(ತಮ್ಮನ್ನು) ಸಂಹರಿಸುತ್ತಿರುವ ಹಾಗೆಯೇ ನಿತ್ಯದಲ್ಲಿ ಬೇರೆ ಬೇರೆ ರಾತ್ರಿಗಳಲ್ಲಿ ಸ್ವಪ್ನದಲ್ಲಿ ಆ ಕಾಲರಾತ್ರಿಯನ್ನು ಪಾಂಡವರ ಸೈನಿಕರ ಮುಖ್ಯಸ್ಥರು ಕಾಣುತ್ತಿದ್ದರು.

ಯತಃ ಪ್ರವೃತ್ತಃ ಸಂಗ್ರಾಮಃ ಕುರುಪಾಂಡವಸೇನಯೋಃ ।
ತತಃಪ್ರಭೃತಿ ತಾಂ ಕನ್ಯಾಮಪಶ್ಯನ್ ದ್ರೌಣಿಮೇವ ಚ ॥೮೬॥

ಎಂದಿನಿಂದ ಕುರು-ಪಾಂಡವರ ಸೇನೆಯೊಡನೆ ಯುದ್ಧವು ಆರಂಭವಾಯಿತೋ ಅಂದಿನಿಂದ ಆರಂಭಿಸಿ ದ್ರೋಣಪುತ್ರನನ್ನೂ ಆ ಕನ್ಯೆಯನ್ನೂ ನೋಡುತ್ತಿದ್ದರು.

ತತೋ ದೈವಹತಾನ್ ಪೂರ್ವಂ ಪಶ್ಚಾದ್ ದ್ರೌಣಿರ್ವ್ಯಪಾತಯತ್ ।
ತ್ರಾಸಯನ್ ಸರ್ವಭೂತಾನಿ ವ್ಯನದದ್ ಭೈರವಂ ರವಮ್ ॥೮೭॥

ಈ ಮುಂಚೆಯೇ ದೈವದಿಂದ ಸಂಹೃತರಾದವರನ್ನು ಅನಂತರದಲ್ಲಿ ದ್ರೋಣಪುತ್ರನು ಕೆಡವಿದನು, ಪ್ರಾಣಿಗಳಿಗೆ ಭಯವನ್ನು ಉಂಟುಮಾಡುವ ಭೀಕರವಾದ ಶಬ್ದವನ್ನು ಮಾಡಿದನು.

ತದನುಸ್ಮೃತ್ಯ ತೇ ವೀರಾ ದರ್ಶನಂ ಪೌರ್ವಕಾಲಿಕಮ್ ।
ಇದಂ ತದಿತ್ಯಮನ್ಯಂತ ದೈವೇನೋಪನಿಪೀಡಿತಾಃ ॥೮೮॥

ದೈವದಿಂದ ಪೀಡಿತರಾದ ಆ ವೀರರು ಹಿಂದಿನ ದಿನಗಳಲ್ಲಿ (ಸ್ವಪ್ನದಲ್ಲಿ) ಕಂಡಿರುವುದನ್ನು ಸ್ಮರಿಸಿಕೊಳ್ಳುತ್ತಾ, ಅದೇ ಇದು ಎಂದು ಭಾವಿಸಿದರು.

ತತಸ್ತೇನ ನಿನಾದೇನ ಪ್ರತ್ಯಬುಧ್ಯಂತ ಧನ್ವಿನಃ ।
ಶಿಬಿರೇ ಪಾಂಡವೇಯಾನಾಂ ಶತಶೋಽಥ ಸಹಸ್ರಶಃ ॥೮೯॥

ಅನಂತರ ಆ ಶಿಬಿರದಲ್ಲಿ, ಶಬ್ದದಿಂದ ಪಾಂಡವರಿಗೆ ಸಂಬಂಧಿಸಿದ ಸಾವಿರಾರು ಧನುರ್ಧಾರಿಗಳು ಎಚ್ಚರಗೊಂಡರು.

ಸೋಽಚ್ಛಿನತ್ ಕಸ್ಯಚಿತ್ ಪಾದೌ ಜಘನಂ ಚಾಪಿ ಕಸ್ಯಚಿತ್ ।
ಕಾಂಶ್ಚಿದ್ ಬಿಭೇದ ಪಾರ್ಶ್ವೇಷು ಕಾಲಸೃಷ್ಟ ಇವಾಂತಕಃ ॥೯೦॥

ಆತನು (ದ್ರೋಣಪುತ್ರನು) ಕಾಲವು ನಿರ್ಮಿಸಿದ ಅಂತಕನಂತೆ ಕೆಲವರ ಕಾಲನ್ನು, ಮತ್ತೆ ಕೆಲವರ ತೊಡೆಯನ್ನು, ಕೆಲವರ ಪಕ್ಕೆಲುಬನ್ನು ಕತ್ತರಿಸಿದನು.

ಅತ್ಯುಗ್ರಪ್ರತಿಪಿಷ್ಪ್ರೇಶ್ಚ ವಿನದದ್ಭಿರ್ಭೃಶಾತುರೈಃ ।
ಗಜಾಶ್ವಮನುಜೈಶ್ಚಾರ್ತೈರ್ಮಹೀ ಕೀರ್ಣಾऽಭವತ್ ಪ್ರಭೋ ॥೯೦॥

ಪ್ರಭುವೆ! ಅತಿ ಭೀಕರವಾಗಿ ಉಂಡೆ ಮಾಡಿ ಎಸೆದ, ಅತ್ಯಂತಭೀತರಾಗಿ ಬೊಬ್ಬೆ ಹಾಕುತ್ತಿರುವ ಆನೆ-ಕುದುರೆ-ಮನುಷ್ಯರಿಂದ ಆ ಭೂಭಾಗವು ತುಂಬಿ ಹೋಗಿದ್ದಿತು.

ಕ್ವೇಶತಾಂ ಕಿಮಿದಂ ಕೋऽಯಂ ಕಿಂ ಶಬ್ದಃ ಕಿಂ ನು ಕಿಂ ಕೃತಮ್ ।
ಪಾಂಚಾಲಾನಾಂ ತಥಾ ದ್ರೌಣಿರಂತಕಃ ಸಮಪದ್ಯತ ॥೯೨॥

ಅರಚುತ್ತಿರುವ ಪಾಂಚಾಲರಿಗೆ ಏನಿದು, ಯಾರಿವ, ಏನು ಮಾಡುತ್ತಿರುವನು ಎಂಬ ವ್ಯಾಕುಲತೆಯನ್ನು ಕೊಲೆಗಡಕನಾದ ದ್ರೋಣಪುತ್ರನು ಉಂಟುಮಾಡಿದನು.

ಅಪೇತಶಸ್ತ್ರಸನ್ನಾಹಾನ್ ಸಂರಬ್ಧಾನ್ ಪಾಂಡುಸೈನಿಕಾನ್ ।
ಪ್ರಾಹಿಣೋನ್ಮೃತ್ಯುಲೋಕಾಯ ದ್ರೌಣಿಃ ಪ್ರಹರತಾಂ ವರಃ ॥೯೩॥

ಸಂಹರಿಸುವವರಲ್ಲಿ ಹಿರಿಯನಾದ ದ್ರೋಣಪುತ್ರನು ಶಸ್ತ್ರರಹಿತರಾಗಿ ಒಟ್ಟಾಗಿ ಬಂದೊದಗಿದ ಪಾಂಡವರ ಸೈನ್ನಿಕರನ್ನು ಮೃತ್ಯುಲೋಕಕ್ಕೆ ಅಟ್ಟಿದನು.

ತತಸ್ತಚ್ಛಸ್ತ್ರವಿತ್ರಸ್ತಾ ಭಯಾದಭ್ಯಪತನ್ ನರಾಃ ।
ನಿದ್ರಾಂಧಾ ನಷ್ಟಸಂಜ್ಞಾಶ್ಚ ತತ್ರ ತತ್ರ ನಿಪೇತಿರೇ ॥೯೪॥

ಅನಂತರದಲ್ಲಿ ಶಸ್ತ್ರದಿಂದ ಗಾಯಗೊಂಡ ಆ ಮನುಜರು ಹೆದರಿ ಚದುರಿದರು, ನಿದ್ರೆಯ ಮಂಪರಿಂದ ಸಂಪೂರ್ಣ ಎಚ್ಚರವಿಲ್ಲದ ಅವರು ಅಲ್ಲಲ್ಲಿ ಬಿದ್ದರು.

ಊರುಸ್ತಂಭಗೃಹೀತಾಶ್ಚ ಕಶ್ಮಲಾಭಿಹತೌಜಸಃ ।
ವಿನದಂತೋ ಭೃಶಂ ತ್ರಸ್ತಾ ನಿರೈಕ್ಷಂತ ಪರಸ್ಪರಮ್ ॥೯೫॥

ಜಂಘಾಬಲವೇ ಉಡುಗಿ, ಭಯದಿಂದ ದೇಹದಲ್ಲಿ ಬಲವೇ ಇಲ್ಲದಂತಾದ, ತುಂಬಾ ಹೆದರಿ ಅರಚುತ್ತಾ ಪರಸ್ಪರ ಒಬ್ಬರನ್ನು ಮತ್ತೊಬ್ಬರು ನೋಡುತ್ತಿದ್ದರು.

ತತೋ ರಥಂ ಪುನರ್ದ್ರೌಣಿರಾಸ್ಥಿತೋ ಭೀಮದರ್ಶನಃ ।
ಧನುಷ್ಪಾಣಿಃ ಶರೈರನ್ಯಾನ್ ಪ್ರೈಷಯದ್ ಯಮಸಾದನಮ್ ॥೯೬॥

ಅನಂತರದಲ್ಲಿ ಧನುರ್ಧಾರಿಯಾದ ನೋಡಲು ಭಯಂಕರನಾದ ದ್ರೋಣಪುತ್ರನು ಪುನಃ ರಥವನ್ನು ಏರಿ ಉಳಿದವರನ್ನು ಬಾಣಗಳಿಂದ (ಪ್ರಹರಿಸಿ) ಯಮಸದನಕ್ಕೆ ಕಳುಹಿಸಿದನು.

ಪುನರುತ್ಪತಿತಃ ಕಾಂಶ್ಚಿದ್ ದೂರಾದಾಪತತೋ ನರಾನ್ ।
ಶೂರಾನುತ್ಪತತಶ್ಚಾನ್ಯಾನ್ ಕಾಲರಾತ್ರ್ಯೈ ನ್ಯವೇದಯತ್ ॥೯೭॥

ಮತ್ತೆ ಆಕ್ರಮಿಸಲು ಸಿದ್ಧರಾದ ಶೂರರಾದ ದೂರದಲ್ಲಿರುವವರನ್ನು, ಮತ್ತೆ ಮೇಲೆ ಬೀಳುತ್ತಿರುವ ಬೇರೇ ಮನುಜರನ್ನು ಕಾಲರಾತ್ರಿಗೆ ಒಪ್ಪಿಸಿದನು.

ತಥೈವ ಸ್ಯಂದನಾಗ್ರೇಣ ಪ್ರಮಥನ್ ಸ ವ್ಯರೋಚತ ।
ಶರವರ್ಷೈಶ್ಚ ವಿವಿಧೈರಭ್ಯವರ್ಷಚ್ಛಾತ್ರವಾಂಸ್ತತಃ ॥೯೮॥

ಹಾಗೆಯೇ ರಥದ ಮುಂಭಾಗದಲ್ಲಿರುವವರನ್ನು ಸಂಹರಿಸುತ್ತಾ, ಶತ್ರುಗಳ ಮೇಲೆ ವಿವಿಧ ಬಾಣಗಳ ಮಳೆಗರೆದನು.

ಪುನಶ್ಚ ಸುವಿಚಿತ್ರೇಣ ಶತಚಂದ್ರೇಣ ಚರ್ಮಣಾ ।
ತೇನ ಚಾಕಾಶವರ್ಣೇನ ತದಾಚರತ ಸೋಽಸಿನಾ ॥೯೯॥

ಮತ್ತೆ ನೂರಾರು ಚಂದಿರಗಳಿಂದ ವಿಶಿಷ್ಟವಾಗಿ ಚಿತ್ರಿತವಾದ ಗುರಾಣಿಯಿಂದ, ಆಕಾಶದಂತೆ ಥಳಥಳಿಸುವ ಆ ಖಡ್ಗದಿಂದ ಆತನು (ಅಶ್ವತ್ಥಾಮನು) ಅದನ್ನು (ಶತ್ರುಸಂಹಾರವನ್ನು) ಮಾಡಿದನು.

ಸ ತಥಾ ಶಿಬಿರಂ ತೇಷಾಂ ದ್ರೌಣಿರಾಹವದುರ್ಮದಃ ।
ವ್ಯಕ್ಷೋಭಯತ ರಾಜೇಂದ್ರ ಮಹಾಹ್ರದಮಿವ ದ್ವಿಪಃ ॥೧೦೦॥

ರಾಜರಾಜನೆ! ಯುದ್ಧದುರ್ಮದನಾದ ಆ ದ್ರೋಣಪುತ್ರನು ಅವರ (ಪಾಂಡವರ) ಶಿಬಿರವನ್ನು, ದೊಡ್ಡ ನೀರಿನ ಮಡುವನ್ನು ಆನೆಯಂತೆ ಕ್ಷೋಭೆಗೊಳಿಸಿದನು.

ಉತ್ಪೇತುಸ್ತೇನ ಶಬ್ದೇನ ಯೋಧಾ ರಾಜನ್ ಸಹಸ್ರಶಃ ।
ನಿದ್ರಾಂಧಾಶ್ಚ ಭಯಾರ್ತಾಶ್ಚ ವ್ಯಧಾವಂತ ತತಸ್ತತಃ ॥೧೦೧॥

ರಾಜನೆ! ನಿದ್ರೆಯಿಂದ ಕಣ್ಣು ಕಾಣದಂತಾದ, ಭಯದಿಂದ ದುಃಖಿತರಾದ, ಅತ್ತಿಂದಿತ್ತ ಓಡುತ್ತಿರುವ ಸಾವಿರಾರು ಯೋಧರು ಆ ಶಬ್ದದಿಂದ ಜಾರಿಬಿದ್ದರು.

ವಿಸ್ವರಂ ಚುಕ್ರುಶುಶ್ಚಾನ್ಯೇ ಬಹ್ವಬದ್ಧಮಥಾಬ್ರುವನ್ ।
ನ ಚ ಸ್ಮ ಪ್ರತ್ಯಪದ್ಯಂತ ಶಸ್ತ್ರಾಣಿ ವಸನಾನಿ ಚ ॥೧೦೨॥

ವಿಚಿತ್ರವಾಗಿ ಕೆಲವರು ಕೂಗಿಕೊಂಡರು, ಕೆಲವರು ಬಾಯಿಗೆ ಬಂದಂತೆ ಅರಚಿದರು. ಯಾರೂ ಸಹ ಯುದ್ಧದ ಉಡುಗೆಯನ್ನಾಗಲಿ, ಶಸ್ತ್ರವನ್ನಾಗಲಿ ಪಡೆಯಲಾಗಲಿಲ್ಲ.

ವಿಮುಕ್ತಕೇಶಾಶ್ಚಾಪ್ಯನ್ಯೇ ನಾಭ್ಯಜಾನನ್ ಪರಸ್ಪರಮ್ ।
ಉತ್ಪತಂತಃ ಪರೇ ಭೀತಾಃ ಕೇಚಿತ್ ತತ್ರ ಪರಿಭ್ರಮನ್ ॥೧೦೩॥

ಕೆಲವರು ಹರಡಿಕೊಂಡ ಕೂದಲಿನಿಂದ ಒಬ್ಬರಿಗೊಬ್ಬರು ಯಾರು ಎಂದು ತಿಳಿಯದವರಾದರು, ಮತ್ತೆ ಕೆಲವರು ಹೆದರಿ ಮತೊಬ್ಬರ ಮೇಲೆ ಬೀಳುತ್ತಾ ಅಲ್ಲಿಯೇ ಸುತ್ತಾಡಿದರು.

ಪುರೀಷಾಣ್ಯುತ್ಸೃಜನ್ ಕೇಚಿತ್ ಕೇಚಿನ್ಮೂತ್ರಂ ಪ್ರಸುಸ್ರುವುಃ ।
ಬಂಧನಾನಿ ತು ರಾಜೇಂದ್ರ ಸಂಛಿದ್ಯ ತುರಗದ್ವಿಪಾಃ ॥೧೦೪॥

ರಾಜರ ರಾಜನೆ! ಕುದುರೆ ಆನೆಗಳು ತಮ್ಮ ಕಟ್ಟನ್ನು ಕಿತ್ತುಕೊಂಡು ಮೂತ್ರವನ್ನು ಸುರಿಸಿದವು, ಮತ್ತೆ ಕೆಲವು ಮಲವನ್ನು ವಿಸರ್ಜಿಸಿದವು.

ಸರ್ವೇ ಪರ್ಯಪತಂಶ್ಚಾನ್ಯೇ ಕುರ್ವಂತೋ ಮಹದಾಕುಲಮ್ ॥೧೦೫॥

ಎಲ್ಲರೂ ಸುತ್ತಲೂ ಬೀಳುತ್ತಾ ಕೋಲಾಹಲವನ್ನು ಮಾಡುತ್ತಾ ದುಃಖಿಸಿದರು.

ತತ್ರ ಕೇಚಿನ್ನರಾ ಭೀತಾ ನ್ಯಪತಂತ ಮಹೀತಳೇ ।
ತಥೈವ ಪತಿತಾ ಭೂಮೌ ನ್ಯಷೀದನ್ ಗಜವಾಜಿನಃ ॥೧೦೬॥

ಅಲ್ಲಿ ಕೆಲವರು ಹೆದರಿ ನೆಲಕ್ಕೆ ಉರುಳಿದರು, ಹಾಗೆಯೆ ಭೂಮಿಯಲ್ಲಿ ಬಿದ್ದ ಆನೆ ಕುದುರೆಗಳು ಮರಣವನ್ನು ಹೊಂದಿದವು.

ತಸ್ಮಿಂಸ್ತಥಾ ವರ್ತಮಾನೇ ರಕ್ಷಾಂಸಿ ಭರತರ್ಷಭ ।
ದೃಪ್ತಾನಿ ವ್ಯನದನ್ಹೃಷ್ಟೈರ್ಮುದಾ ಯುಕ್ತಾನಿ ಸತ್ತಮ ॥೧೦೭॥

ಸದ್ಗುಣಿಯೆ, ಭರತಕುಲೋತ್ಪನ್ನರಲ್ಲಿ ಶ್ರೇಷ್ಠನೆ! ಆಲ್ಲಿ ಹಾಗೆ ಸಂಭವಿಸುತ್ತಿರಲು, ಕೊಬ್ಬಿದ ರಕ್ಕಸರು ಅತಿ ಸಂತಸದಿಂದ ಕೂಡಿದವರಾಗಿ ಗಟ್ಟಿಯಾಗಿ ಕೂಗಿದರು.

ಸ ಶಬ್ದಃ ಪ್ರೇರಿತೋ ರಾಜನ್ ಭೂತಸಂಘೈರ್ಮುದಾ ಯುತೈಃ ।
ಅಪೂರಯದ್ ದಿಶಃ ಸರ್ವಾ ದಿವಂ ಚಾತಿಮಹಾಸ್ವನಃ ॥೧೦೮॥

ಆ ಶಬ್ದದಿಂದ ಪ್ರೇರಿತವಾದ ಭೂತಸಮುದಾಯವು ಸಂತಸದಿಂದ ಒಟ್ಟುಗೂಡಿತು (ಗರ್ಜಿಸಿದ) ಆ ಶಬ್ದವು ದೇವಲೋಕಕ್ಕೂ ಎಲ್ಲ ದಿಕ್ಕುವಿದಿಕ್ಕುಗಳಿಗೂ ಪಸರಿಸಿತು.

ತೇಷಾಮಾರ್ತಸ್ವರಂ ಶ್ರುತ್ವಾ ವಿತ್ರಸ್ತಾ ಗಜವಾಜಿನಃ ।
ಮುಕ್ತಾಃ ಪರ್ಯಪತನ್ ರಾಜನ್ ಮೃದಂತಃ ಶಿಬಿರೇ ಜನಮ್ ॥

ರಾಜನೆ! ಅವರ ದುಃಖದ ಧ್ವನಿಯನ್ನು ಕೇಳಿದ ಆನೆ, ಕುದುರೆಗಳು ಹೆದರಿದವುಗಳಾಗಿ ಕಟ್ಟನ್ನು ಬಿಚ್ಚಿಕೊಂಡು , ಶಿಬಿರದಲ್ಲಿ ಜನರನ್ನು ತುಳಿಯುತ್ತಾ ಸುತ್ತಾಡಿದವು.

ತೈಸ್ತಥಾ ಪರಿಧಾವದ್ಭಿಶ್ಚರಣೋದೀರಿತಂ ರಜಃ ।
ಅಕರೋಚ್ಛಿಬಿರಂ ತೇಷಾಂ ರಜನ್ಯಾಂ ದ್ವಿಗುಣಂ ತಮಃ ॥೧೧೦॥

ಅವುಗಳು ಆ ರೀತಿಯಲ್ಲಿ ಸುತ್ತುತ್ತಿರಲು ಆ ಕತ್ತಲೆಯಲ್ಲಿ (ಅವುಗಳ) ಕಾಲಿನಿಂದ ಮೇಲೆದ್ದ ಧೂಳು ಅವರ ಶಿಬಿರವನ್ನು ಇಮ್ಮಡಿಯಾಗಿ ಕತ್ತಲೆಗೊಳಿಸಿತು.

ತಸ್ಮಿಂಸ್ತಮಸಿ ಸಂಜಾತೇ ಪ್ರಮೂಢಾಃ ಸರ್ವತೋ ಜನಾಃ ।
ನಾಜಾನನ್ ಪಿತರಃ ಪುತ್ರಾನ್ ಭ್ರಾತೄನ್ ಭ್ರಾತರ ಏವ ಚ ॥೧೧೧॥

ಆ ಕಗ್ಗತ್ತಲೆಯು ಉಂಟಾಗಲು ಎಲ್ಲರೂ ಬುದ್ಧಿಹೀನರಾಗಿ, ತಂದೆಯಂದಿರು ಮಕ್ಕಳನ್ನು, ಅಣ್ಣಂದಿರು ಸಹೋದರರನ್ನು ತಿಳಿಯದವರಾದರು.

ಗಜೋ ಗಜಮತಿಕ್ರಮ್ಯ ನಿರ್ಮನುಷ್ಯಾ ಹಯೋ ಹಯಮ್ ।
ಅತಾಡಯಂಸ್ತಥಾऽಮೃದ್ನನ್ ತಥಾऽಭಂಜಂಶ್ಚ ಭಾರತ ॥೧೧೨॥

ರಾಜನೆ! ನಿದ್ರೆಯಿಂದ ಕಣ್ಣು ಕಾಣದಂತಾದ, ಭಯದಿಂದ ದುಃಖಿತರಾದ, ಅತ್ತಿಂದಿತ್ತ ಓಡುತ್ತಿರುವ ಸಾವಿರಾರು ಯೋಧರು ಆ ಶಬ್ದದಿಂದ ಜಾರಿಬಿದ್ದರು.

ವಿಸ್ವರಂ ಚುಕ್ರುಶುಶ್ಚಾನ್ಯೇ ಬಹ್ವಬದ್ಧಮಥಾಬ್ರುವನ್ ।
ನ ಚ ಸ್ಮ ಪ್ರತ್ಯಪದ್ಯಂತ ಶಸ್ತ್ರಾಣಿ ವಸನಾನಿ ಚ ॥೧೦೨॥

ವಿಚಿತ್ರವಾಗಿ ಕೆಲವರು ಕೂಗಿಕೊಂಡರು, ಕೆಲವರು ಬಾಯಿಗೆ ಬಂದಂತೆ ಅರಚಿದರು. ಯಾರೂ ಸಹ ಯುದ್ಧದ ಉಡುಗೆಯನ್ನಾಗಲಿ, ಶಸ್ತ್ರವನ್ನಾಗಲಿ ಪಡೆಯಲಾಗಲಿಲ್ಲ.

ವಿಮುಕ್ತಕೇಶಾಶ್ಚಾಪ್ಯನ್ಯೇ ನಾಭ್ಯಜಾನನ್ ಪರಸ್ಪರಮ್ ।
ಉತ್ಪತಂತಃ ಪರೇ ಭೀತಾಃ ಕೇಚಿತ್ ತತ್ರ ಪರಿಭ್ರಮನ್ ॥೧೦೩॥

ಕೆಲವರು ಹರಡಿಕೊಂಡ ಕೂದಲಿನಿಂದ ಒಬ್ಬರಿಗೊಬ್ಬರು ಯಾರು ಎಂದು ತಿಳಿಯದವರಾದರು, ಮತ್ತೆ ಕೆಲವರು ಹೆದರಿ ಮತೊಬ್ಬರ ಮೇಲೆ ಬೀಳುತ್ತಾ ಅಲ್ಲಿಯೇ ಸುತ್ತಾಡಿದರು.

ಪುರೀಷಾಣ್ಯುತ್ಸ್ರ್ಜನ್ ಕೇಚಿತ್ ಕೇಚಿನ್ಮೂತ್ರಂ ಪ್ರಸುಸ್ರುವುಃ ।
ಬಂಧನಾನಿ ತು ರಾಜೇಂದ್ರ ಸಂಛಿದ್ಯ ತುರಗದ್ವಿಪಾಃ ॥೧೦೪॥

ರಾಜರ ರಾಜನೆ! ಕುದುರೆ ಆನೆಗಳು ತಮ್ಮ ಕಟ್ಟನ್ನು ಕಿತ್ತುಕೊಂಡು ಮೂತ್ರವನ್ನು ಸುರಿಸಿದವು, ಮತ್ತೆ ಕೆಲವು ಮಲವನ್ನು ವಿಸರ್ಜಿಸಿದವು.

ಸರ್ವೇ ಪರ್ಯಪತಂಶ್ಚಾನ್ಯೇ ಕುರ್ವಂತೋ ಮಹದಾಕುಲಮ್ ॥೧೦೫॥

ಎಲ್ಲರೂ ಸುತ್ತಲೂ ಬೀಳುತ್ತಾ ಕೋಲಾಹಲವನ್ನು ಮಾಡುತ್ತಾ ದುಃಖಿಸಿದರು.

ತತ್ರ ಕೇಚಿನ್ನರಾ ಭೀತಾ ನ್ಯಪತಂತ ಮಹೀತಳೇ ।
ತಥೈವ ಪತಿತಾ ಭೂಮೌ ನ್ಯಷೀದನ್ ಗಜವಾಜಿನಃ ॥೧೦೬॥

ಅಲ್ಲಿ ಕೆಲವರು ಹೆದರಿ ನೆಲಕ್ಕೆ ಉರುಳಿದರು, ಹಾಗೆಯೆ ಭೂಮಿಯಲ್ಲಿ ಬಿದ್ದ ಆನೆ ಕುದುರೆಗಳು ಮರಣವನ್ನು ಹೊಂದಿದವು.

ತಸ್ಮಿಂಸ್ತಥಾ ವರ್ತಮಾನೇ ರಕ್ಷಾಂಸಿ ಭರತರ್ಷಭ ।
ದೃಪ್ತಾನಿ ವ್ಯನದನ್ಭೈರ್ಮುದಾ ಯುಕ್ತಾನಿ ಸತ್ತಮ ॥೧೦೭॥

ಸದ್ಗುಣಿಯೆ, ಭರತಕುಲೋತ್ಪನ್ನರಲ್ಲಿ ಶ್ರೇಷ್ಠನೆ! ಆಲ್ಲಿ ಹಾಗೆ ಸಂಭವಿಸುತ್ತಿರಲು, ಕೊಬ್ಬಿದ ರಕ್ಕಸರು ಅತಿ ಸಂತಸದಿಂದ ಕೂಡಿದವರಾಗಿ ಗಟ್ಟಿಯಾಗಿ ಕೂಗಿದರು.

ಸ ಶಬ್ದಃ ಪ್ರೇರಿತೋ ರಾಜನ್ ಭೂತಸಂಘೈರ್ಮುದಾ ಯುತೈಃ ।
ಅಪೂರಯದ್ ದಿಶಃ ಸರ್ವಾ ದಿವಂ ಚಾತಿಮಹಾಸ್ವನಃ ॥೧೦೮॥

ಆ ಶಬ್ದದಿಂದ ಪ್ರೇರಿತವಾದ ಭೂತಸಮುದಾಯವು ಸಂತಸದಿಂದ ಒಟ್ಟುಗೂಡಿತು (ಗರ್ಜಿಸಿದ) ಆ ಶಬ್ದವು ದೇವಲೋಕಕ್ಕೂ ಎಲ್ಲ ದಿಕ್ಕುವಿದಿಕ್ಕುಗಳಿಗೂ ಪಸರಿಸಿತು.

ತೇಷಾಮಾರ್ತಸ್ವರಂ ಶ್ರುತ್ವಾ ವಿತ್ರಸ್ತಾ ಗಜವಾಜಿನಃ ।
ಮುಕ್ತಾಃ ಪರ್ಯಪತನ್ ರಾಜನ್ ಮೃದಂತಃ ಶಿಬಿರೇ ಜನಮ್ ॥

ರಾಜನೆ! ಅವರ ದುಃಖದ ಧ್ವನಿಯನ್ನು ಕೇಳಿದ ಆನೆ, ಕುದುರೆಗಳು ಹೆದರಿದವುಗಳಾಗಿ ಕಟ್ಟನ್ನು ಬಿಚ್ಚಿಕೊಂಡು , ಶಿಬಿರದಲ್ಲಿ ಜನರನ್ನು ತುಳಿಯುತ್ತಾ ಸುತ್ತಾಡಿದವು.

ತೈಸ್ತಥಾ ಪರಿಧಾವದ್ಭಿಶ್ಚರಣೋದೀರಿತಂ ರಜಃ ।
ಅಕರೋಚ್ಛಿಬಿರಂ ತೇಷಾಂ ರಜನ್ಯಾಂ ದ್ವಿಗುಣಂ ತಮಃ ॥೧೧೦॥

ಅವುಗಳು ಆ ರೀತಿಯಲ್ಲಿ ಸುತ್ತುತ್ತಿರಲು ಆ ಕತ್ತಲೆಯಲ್ಲಿ (ಅವುಗಳ) ಕಾಲಿನಿಂದ ಮೇಲೆದ್ದ ಧೂಳು ಅವರ ಶಿಬಿರವನ್ನು ಇಮ್ಮಡಿಯಾಗಿ ಕತ್ತಲೆಗೊಳಿಸಿತು.

ತಸ್ಮಿಂಸ್ತಮಸಿ ಸಂಜಾತೇ ಪ್ರಮೂಢಾಃ ಸರ್ವತೋ ಜನಾಃ ।
ನಾಜಾನನ್ ಪಿತರಃ ಪುತ್ರಾನ್ ಭ್ರಾತೄನ್ ಭ್ರಾತರ ಏವ ಚ ॥೧೧೧॥

ಆ ಕಗ್ಗತ್ತಲೆಯು ಉಂಟಾಗಲು ಎಲ್ಲರೂ ಬುದ್ಧಿಹೀನರಾಗಿ, ತಂದೆಯಂದಿರು ಮಕ್ಕಳನ್ನು, ಅಣ್ಣಂದಿರು ಸಹೋದರರನ್ನು ತಿಳಿಯದವರಾದರು.

ಗಜೋ ಗಜಮತಿಕ್ರಮ್ಯ ನಿರ್ಮನುಷ್ಯಾ ಹಯೋ ಹಯಮ್ ।
ಅತಾಡಯಂಸ್ತಥಾऽಮೃದ್ನನ್ ತಥಾऽಭಂಜಂಶ್ಚ ಭಾರತ ॥೧೧೨॥

ಭರತಕುಲೋತ್ತನನೆ! ಮನುಷ್ಯರ ಹತೋಟಿಯಲ್ಲಿರದ (ಆ) ಆನೆಯು ಆನೆಯ ಮೇಲೆ, ಕುದುರೆಯು ಕುದುರೆಯನ್ನು ಆಕ್ರಮಿಸಿ, ನಾಶಗೊಳಿಸಿತು, (ಎದುರಾದ ಪ್ರಾಣಿಯ ಅವಯವಗಳನ್ನು) ಮುರಿದಿಟ್ಟವು.

ತೇ ಭಗ್ನಾಃ ಪ್ರಪತಂತಿ ಸ್ಮ ಮೃದ್ನಂತಶ್ಚ ಪರಸ್ಪರಮ್ ।
ನ್ಯಪಾತಯಂಸ್ತ ರಥಾನ್ ಪಾತಯಿತ್ವಾಽಪ್ಯಪೀಪಿಷನ್ ॥೧೧೩॥

ಅವುಗಳು (ಅವಯವಗಳನ್ನು) ಮುರಿಸಿಕೊಂಡು ಬೀಳುತ್ತಿದ್ದವು, ಅವು ಪರಸ್ಪರ ಮತ್ತೊಂದರ ಅವಯವವನ್ನು ಮುರಿಯುತ್ತಿದ್ದವು. ಅನಂತರದಲ್ಲಿ ರಥಗಳನ್ನು ಕೆಡಹುತ್ತಿದ್ದವು, ಕೆಡವಿದ ರಥಗಳನ್ನು ಪುಡಿಗಟ್ಟುತ್ತಿದ್ದವು.

ವಿಚೇತಸಃ ಸನಿದ್ರಾಶ್ಚ ತಮಸಾ ಚಾವೃತಾ ನರಾಃ ।
ಸ್ವಾನೇವ ಜಘ್ನಿರೇ ಮೂಢಾಃ ಕಾಲೇನಾಭಿಪ್ರಚೋದಿತಾಃ ॥೧೧೪॥

ಪೂರ್ಣ ಎಚ್ಚರವಿಲ್ಲದ, ಅರೆನಿದ್ರಾವಸ್ಥೆಯಲ್ಲಿರುವ, ಕಾಲದಿಂದ ಪ್ರಚೋದಿತರಾದ, ಮೌಢ್ಯ ಆವರಿಸಿದ ಆ ಜನರು ಕಗ್ಗತ್ತಲೆಯಲ್ಲಿ ತಮ್ಮವರನ್ನೇ ಸಂಹರಿಸಿದರು.

ತ್ಯಕ್ತ್ವಾ ದ್ವಾರಾಣಿ ಚ ದ್ವಾಃಸ್ಥಾಸ್ತಥಾ ಗುಲ್ಮಾನಿ ಗೌಲ್ಮಿಕಾಃ ।
ಪ್ರಾದ್ರವಂತ ಯಥಾಶಕ್ತಿ ತೇ ತತ್ರೈವ ವಿಚೇತಸಃ ॥೧೧೫॥

ದ್ವಾರಪಾಲಕರು ದ್ವಾರವನ್ನು ಪರಿತ್ಯಜಿಸಿ, ರಕ್ಷಣಾಸ್ಥಾನಿಗಳು ರಕ್ಷಣೆಯ ಸ್ಥಾನವನ್ನು ಪರಿತ್ಯಜಿಸಿ ಮೈಮೇಲೆ ಎಚ್ಚರವಿಲ್ಲದಂತವರಾಗಿ ಶಕ್ತಿಮೀರಿ ಪಲಾಯನಮಾಡಿದರು.

ವಿಪ್ರನಷ್ಟಾಶ್ಚ ತೇಽನ್ಯೋನ್ಯಮ್ ಅಜಾನಂತ ತಥಾ ವಿಭೋ ।
ಕ್ರೋಶಂತಸ್ತಾತ ಪುತ್ರೇತಿ ದೈವೋಪಹತಚೇತಸಃ ॥೧೧೬॥

ಪ್ರಭುವೆ! ಅದೃಷ್ಟಹೀನರಾದ ಅವರು 'ತಂದೆ, ಮಗನೆ' ಎಂದು ಅರಚುತ್ತಾ ಹಾಗೆಯೇ ಒಬ್ಬರನ್ನು ಮತ್ತೊಬ್ಬರು ತಿಳಿಯದೇ ನಾಶಹೊಂದಿದರು.

ಪಲಾಯಂತ ದಿಶಸ್ತೇ ವೈ ತಾನಪ್ಯುತ್ಸೃಜ್ಯ ಬಾಂಧವಾನ್ ।
ಗೋತ್ರನಾಮಭಿರನ್ಯೋನ್ಯಮ್ ಆಕ್ರಂದಂತಸ್ತತೋ ಜನಾಃ ॥೧೧೭॥

ಅನಂತರದಲ್ಲಿ ಪರಸ್ಪರವಾಗಿ (ತಮ್ಮ ತಮ್ಮ) ಗೋತ್ರ, ಹೆಸರುಗಳನ್ನು ಹೇಳಿಕೊಳ್ಳುತ್ತಾ ಬಂಧುಗಳನ್ನು ತೊರೆದು ದಿಕ್ಕುದಿಕ್ಕಿಗೆ ಆ ಜನರು ಓಡಿದರು. (ಹೆದರಿ ಪಲಾಯನ ಮಾಡುತ್ತಿದ್ದ ಆ ಸೈನಿಕರು ಸಮೀಪದಲ್ಲಿರುವ ವ್ಯಕ್ತಿಯನ್ನು ಪರಿಚಯಿಸಲಾರದೆ ತಮ್ಮ ಹೆಸರು, ಗೋತ್ರ ಮುಂತಾದವುಗಳನ್ನು ತಿಳಿಸಿ ಪರಸ್ಪರ ಹೊಡೆದಾಟದಿಂದ ಪಾರಾಗಲು ಯತ್ನಿಸಿದರು ಎಂದು ಭಾವ).

ಹಾಹಾರವಂಸ್ತು ಕುರ್ವಾಣಾಃ ಪೃಥಿವ್ಯಾಂ ಶೇರತೇ ಪರೇ ।
ತಾನ್ ಬುದ್ಧ್ವಾ ರಣಮಧ್ಯೇಽಸೌ ದ್ರೋಣಪುತ್ರೋ ವ್ಯಪೋಥಯತ್ ॥

ಅಯ್ಯೋ ಅಯ್ಯೋ ಎಂದು ಅರಚುತ್ತಾ ಕೆಲವರು ಭೂಮಿಯಲ್ಲಿ ಅಡಗಿದರು, ರಣಮಧ್ಯದಲ್ಲಿ ಅವರನ್ನು ಪತ್ತೆಹಿಡಿದು ಆ ದ್ರೋಣಪುತ್ರನು ಸಂಹರಿಸಿದನು.

ಅಪರೇ ತತ್ರ ವಧ್ಯಂತೋ ಮುಹುರ್ಮುಹುರಚೇತಸಃ ।
ಶಿಬಿರಾನ್ನಿಷ್ಪತಂತಿ ಸ್ಮ ಕ್ಷತ್ರಿಯಾ ಭಯಪೀಡಿತಾಃ ॥೧೧೯॥

ಅಲ್ಲಿ ಮತ್ತೆ ಮತ್ತೆ ಪೆಟ್ಟಿನಿಂದ ನಿತ್ರಾಣರಾದ ಕೆಲವು ಕ್ಷತ್ರಿಯರು ಭಯಗ್ರಸ್ಥರಾಗಿ ಶಿಬಿರದಿಂದ ಹೊರಹೋಗಲು ಯತ್ನಿಸಿದರು.

ತಾಂಸ್ತು ನಿಷ್ಪತಿತಾಂಸ್ತ್ರಸ್ತಾನ್ ಶಿಬಿರಾಜ್ಜೀವಿತೈಷಿಣಃ ।
ಕೃತವರ್ಮಾ ಕೃಪಶ್ಚೈವ ದ್ವಾರದೇಶೇ ನಿಜಘ್ನತುಃ ॥೧೨೦॥

ಹೆದರಿದ ಜೀವವನ್ನು ಉಳಿಸಿಕೊಳ್ಳಬೇಕೆಂಬ ಬಯಕೆಯಿಂದ ಶಿಬಿರದಿಂದ ಹೊರಬರುತ್ತಿದ್ದ ಅವರನ್ನು ಕೃಪ, ಕೃತವರ್ಮರು ದ್ವಾರದಲ್ಲಿ ಸಂಹರಿಸಿದರು.

ವಿಸ್ರಸ್ತಶಸ್ತ್ರಕವಚಾನ್ ಮುಕ್ತಕೇಶಾನ್ ಕೃತಾಂಜಲೀನ್ ।
ವೇಪಮಾನಾನ್ ಕ್ಷಿತೌ ಭೀತಾನ್ ನೈವ ಕಾಂಶ್ಚಿದ್ ವ್ಯಮುಂಚತಾಮ್ ॥

ಕವಚ-ಅಸ್ತ್ರರಹಿತರಾದ ತಲೆಕೂದಲನ್ನು ಹರಡಿಕೊಂಡಿರುವ ಕೈಜೋಡಿಸಿ ನಮಿಸುತ್ತಿರುವ ಹೆದರಿರುವ ಭೂಮಿಯಲ್ಲಿ ಹೊರಳಾಡುತ್ತಿರುವ ಯಾವ ಒಬ್ಬನನ್ನೂ ಬಿಡಲಿಲ್ಲ (ಎಲ್ಲರನ್ನೂ ಸಂಹರಿಸಿದರು).

ನಾಮುಚ್ಯತ ತದಾ ಕಶ್ಚಿನ್ನಿಷ್ಕ್ರಾಂತಃ ಶಿಬಿರಾದ್ ಬಹಿಃ ।
ಕೃಪಸ್ಯ ಚ ಮಹಾರಾಜ ಹಾರ್ದಿಕ್ಯಶ್ಚೈವ ದುರ್ಮತಿಃ ॥೧೨೧॥

ಭರತಕುಲೋತ್ತನನೆ! ಮನುಷ್ಯರ ಹತೋಟಿಯಲ್ಲಿರದ (ಆ) ಆನೆಯು ಆನೆಯ ಮೇಲೆ, ಕುದುರೆಯು ಕುದುರೆಯನ್ನು ಆಕ್ರಮಿಸಿ, ನಾಶಗೊಳಿಸಿತು, (ಎದುರಾದ ಪ್ರಾಣಿಯ ಅವಯವಗಳನ್ನು) ಮುರಿದಿಟ್ಟವು.

ತೇ ಭಗ್ನಾಃ ಪ್ರಪತಂತಿ ಸ್ಮ ಮೃದ್ನಂತಶ್ಚ ಪರಸ್ಪರಮ್ ।
ನ್ಯಪಾತಯಂಸ್ತ ರಥಾನ್ ಪಾತಯಿತ್ವಾಽಪ್ಯಪೀಪಿಷನ್ ॥೧೧೩॥

ಅವುಗಳು (ಅವಯವಗಳನ್ನು) ಮುರಿಸಿಕೊಂಡು ಬೀಳುತ್ತಿದ್ದವು, ಅವು ಪರಸ್ಪರ ಮತ್ತೊಂದರ ಅವಯವವನ್ನು ಮುರಿಯುತ್ತಿದ್ದವು. ಅನಂತರದಲ್ಲಿ ರಥಗಳನ್ನು ಕೆಡಹುತ್ತಿದ್ದವು, ಕೆಡವಿದ ರಥಗಳನ್ನು ಪುಡಿಗಟ್ಟುತ್ತಿದ್ದವು.

ವಿಚೇತಸಃ ಸನಿದ್ರಾಶ್ಚ ತಮಸಾ ಚಾವೃತಾ ನರಾಃ ।
ಸ್ವಾನೇವ ಜಘ್ನಿರೇ ಮೂಢಾಃ ಕಾಲೇನಾಭಿಪ್ರಚೋದಿತಾಃ ॥೧೧೪॥

ಪೂರ್ಣ ಎಚ್ಚರವಿಲ್ಲದ, ಅರೆನಿದ್ರಾವಸ್ಥೆಯಲ್ಲಿರುವ, ಕಾಲದಿಂದ ಪ್ರಚೋದಿತರಾದ, ಮೌಢ್ಯ ಆವರಿಸಿದ ಆ ಜನರು ಕಗ್ಗತ್ತಲೆಯಲ್ಲಿ ತಮ್ಮವರನ್ನೇ ಸಂಹರಿಸಿದರು.

ತ್ಯಕ್ತ್ವಾ ದ್ವಾರಾಣಿ ಚ ದ್ವಾಃಸ್ಥಾಸ್ತಥಾ ಗುಲ್ಮಾನಿ ಗೌಲ್ಮಿಕಾಃ ।
ಪ್ರಾದ್ರವಂತ ಯಥಾಶಕ್ತಿ ತೇ ತತ್ರೈವ ವಿಚೇತಸಃ ॥೧೧೫॥

ದ್ವಾರಪಾಲಕರು ದ್ವಾರವನ್ನು ಪರಿತ್ಯಜಿಸಿ, ರಕ್ಷಣಾಸ್ಥಾನಿಗಳು ರಕ್ಷಣೆಯ ಸ್ಥಾನವನ್ನು ಪರಿತ್ಯಜಿಸಿ ಮೈಮೇಲೆ ಎಚ್ಚರವಿಲ್ಲದಂತವರಾಗಿ ಶಕ್ತಿಮೀರಿ ಪಲಾಯನಮಾಡಿದರು.

ವಿಪ್ರನಷ್ಟಾಶ್ಚ ತೇಽನ್ಯೋನ್ಯಮ್ ಅಜಾನಂತ ತಥಾ ವಿಭೋ ।
ಕ್ರೋಶಂತಸ್ತಾತ ಪುತ್ರೇತಿ ದೈವೋಪಹತಚೇತಸಃ ॥೧೧೬॥

ಪ್ರಭುವೆ! ಅದೃಷ್ಟಹೀನರಾದ ಅವರು 'ತಂದೆ, ಮಗನೆ' ಎಂದು ಅರಚುತ್ತಾ ಹಾಗೆಯೇ ಒಬ್ಬರನ್ನು ಮತ್ತೊಬ್ಬರು ತಿಳಿಯದೇ ನಾಶಹೊಂದಿದರು.

ಪಲಾಯಂತ ದಿಶಸ್ತೇ ವೈ ತಾನಪ್ಯುತ್ಸೃಜ್ಯ ಬಾಂಧವಾನ್ ।
ಗೋತ್ರನಾಮಭಿರನ್ಯೋನ್ಯಮ್ ಆಕ್ರಂದಂತಸ್ತತೋ ಜನಾಃ ॥೧೧೭॥

ಅನಂತರದಲ್ಲಿ ಪರಸ್ಪರವಾಗಿ (ತಮ್ಮ ತಮ್ಮ) ಗೋತ್ರ, ಹೆಸರುಗಳನ್ನು ಹೇಳಿಕೊಳ್ಳುತ್ತಾ ಬಂಧುಗಳನ್ನು ತೊರೆದು ದಿಕ್ಕುದಿಕ್ಕಿಗೆ ಆ ಜನರು ಓಡಿದರು. (ಹೆದರಿ ಪಲಾಯನ ಮಾಡುತ್ತಿದ್ದ ಆ ಸೈನಿಕರು ಸಮೀಪದಲ್ಲಿರುವ ವ್ಯಕ್ತಿಯನ್ನು ಪರಿಚಯಿಸಲಾರದೆ ತಮ್ಮ ಹೆಸರು, ಗೋತ್ರ ಮುಂತಾದವುಗಳನ್ನು ತಿಳಿಸಿ ಪರಸ್ಪರ ಹೊಡೆದಾಟದಿಂದ ಪಾರಾಗಲು ಯತ್ನಿಸಿದರು ಎಂದು ಭಾವ).

ಹಾಹಾರವಂಸ್ತು ಕುರ್ವಾಣಾಃ ಪೃಥಿವ್ಯಾಂ ಶೇರತೇ ಪರೇ ।
ತಾನ್ ಬುದ್ಧ್ವಾ ರಣಮಧ್ಯೇSಸೌ ದ್ರೋಣಪುತ್ರೋ ವ್ಯಪೋಥಯತ್ ॥

ಅಯ್ಯೋ ಅಯ್ಯೋ ಎಂದು ಅರಚುತ್ತಾ ಕೆಲವರು ಭೂಮಿಯಲ್ಲಿ ಅಡಗಿದರು, ರಣಮಧ್ಯದಲ್ಲಿ ಅವರನ್ನು ಪತ್ತೆಹಿಡಿದು ಆ ದ್ರೋಣಪುತ್ರನು ಸಂಹರಿಸಿದನು.

ಅಪರೇ ತತ್ರ ವಧ್ಯಂತೋ ಮುಹುರ್ಮುಹುರಚೇತಸಃ ।
ಶಿಬಿರಾನ್ನಿಷ್ಪತಂತಿ ಸ್ಮ ಕ್ಷತ್ರಿಯಾ ಭಯಪೀಡಿತಾಃ ॥೧೧೯॥

ಅಲ್ಲಿ ಮತ್ತೆ ಮತ್ತೆ ಪೆಟ್ಟಿನಿಂದ ನಿತ್ರಾಣರಾದ ಕೆಲವು ಕ್ಷತ್ರಿಯರು ಭಯಗ್ರಸ್ಥರಾಗಿ ಶಿಬಿರದಿಂದ ಹೊರಹೋಗಲು ಯತ್ನಿಸಿದರು.

ತಾಂಸ್ತು ನಿಷ್ಪತಿತಾಂಸ್ತ್ರಸ್ತಾನ್ ಶಿಬಿರಾಜ್ಜೀವಿತೈಷಿಣಃ ।
ಕೃತವರ್ಮಾ ಕೃಪಶ್ಚೈವ ದ್ವಾರದೇಶೇ ನಿಜಘ್ನತುಃ ॥೧೨೦॥

ಹೆದರಿದ ಜೀವವನ್ನು ಉಳಿಸಿಕೊಳ್ಳಬೇಕೆಂಬ ಬಯಕೆಯಿಂದ ಶಿಬಿರದಿಂದ ಹೊರಬರುತ್ತಿದ್ದ ಅವರನ್ನು ಕೃಪ, ಕೃತವರ್ಮರು ದ್ವಾರದಲ್ಲಿ ಸಂಹರಿಸಿದರು.

ವಿಸ್ರಸ್ತಶಸ್ತ್ರಕವಚಾನ್ ಮುಕ್ತಕೇಶಾನ್ ಕೃತಾಂಜಲೀನ್ ।
ವೇಪಮಾನಾನ್ ಕ್ಷಿತೌ ಭೀತಾನ್ ನೈವ ಕಾಂಶ್ಚಿದ್ ವ್ಯಮುಂಚತಾಮ್ ॥

ಕವಚ-ಅಸ್ತ್ರರಹಿತರಾದ ತಲೆಕೂದಲನ್ನು ಹರಡಿಕೊಂಡಿರುವ ಕೈಜೋಡಿಸಿ ನಮಿಸುತ್ತಿರುವ ಹೆದರಿರುವ ಭೂಮಿಯಲ್ಲಿ ಹೊರಳಾಡುತ್ತಿರುವ ಯಾವ ಒಬ್ಬನನ್ನೂ ಬಿಡಲಿಲ್ಲ (ಎಲ್ಲರನ್ನೂ ಸಂಹರಿಸಿದರು).

ನಾಮುಚ್ಯತ ತದಾ ಕಶ್ಚಿನ್ನಿಷ್ಕ್ರಾಂತಃ ಶಿಬಿರಾದ್ ಬಹಿಃ ।
ಕೃಪಸ್ಯ ಚ ಮಹಾರಾಜ ಹಾರ್ದಿಕ್ಯಶ್ಚೈವ ದುರ್ಮತಿಃ ॥೧೨೧॥

ಮಹಾರಾಜ! ಆಗ ದುರ್ಬುದ್ಧಿಯಾದ ಹೃದಿಕನ ಪುತ್ರನಾದ ಕೃತವರ್ಮನು ಮತ್ತು ಕೃಪನು ಶಿಬಿರದಿಂದ ಹೊರಬಂದ ಯಾರನ್ನೂ ಶಿಬಿರದಿಂದ ಹೊರಗೆ ಬಿಡಲಿಲ್ಲ.

ಭೂಯಶ್ಚೈವ ಚಿಕೀರ್ಷನ್ತೌ ದ್ರೋಣಪುತ್ರಸ್ಯ ತೌ ಪ್ರಿಯಮ್ ।
ತ್ರಿಷು ದೇಶೇಷು ದದತುಃ ಶಿಬಿರಸ್ಯ ಹುತಾಶನಮ್ ॥೧೨೩॥

ಮತ್ತೂ ಕೂಡ ದ್ರೋಣಪುತ್ರನಿಗೆ ಖುಷಿಯನ್ನು ಉಂಟುಮಾಡಬೇಕೆಂದು ಬಗೆದು ಅವರೀರ್ವರು ಶಿಬಿರದ ಮೂರುಭಾಗಗಳಲ್ಲಿ ಬೆಂಕಿಯನ್ನಿಟ್ಟರು.

ತತಃ ಪ್ರಕಾಶೇ ಶಿಬಿರೇ ಖಡ್ಗೇನ ಪಿತೃನಂದನಃ ।
ಅಶ್ವತ್ಥಾಮಾ ಮಹಾರಾಜ ವ್ಯಚರತ್ ಕೃತಹಸ್ತವತ್ ॥೧೨೪॥

ಮಹಾರಾಜ! ಶಿಬಿರವು ಪ್ರಕಾಶಮಾನವಾಗುತ್ತಿರಲಾಗಿ, ತಂದೆಗೆ ಸಂತಸವನ್ನು ಮಾಡಬೇಕೆಂಬ ಬಯಕೆಯಿರುವ ಅಶ್ವತ್ಥಾಮನು (ಖಡ್ಗಯುದ್ಧದಲ್ಲಿ) ಸಿದ್ಧಹಸ್ತನಂತೆ ಖಡ್ಗವನ್ನು ಧರಿಸಿ ಸಂಚರಿಸಿದನು.

ಕಾಂಶ್ಚಿದ್ ಯೋಧಾನ್ ಸ ಖಡ್ಗೇನ ಮಧ್ಯೇ ಸಂಛಿದ್ಯ ವೀರ್ಯವಾನ್ ।
ಅಪಾತಯದ್ ದ್ರೋಣಸುತೋ ಸಂಛಿಂದಂಸ್ತಿಲಕಾಂಡವತ್ ॥೧೨೫॥

ವೀರನಾದ ದ್ರೋಣಪುತ್ರನು ಆ ಖಡ್ಗದಿಂದ ಕೆಲವರನ್ನು (ದೇಹದ) ಮಧ್ಯದಲ್ಲಿ ಸೀಳಿ, ಸೀಳಿದ ತಿಲಕಾಷ್ಠದಂತೆ ಕೆಡಹಿದನು.

ಕಾಂಶ್ಚಿದಾಪತತೋ ವೀರಾನ್ ಅಪರಾಂಶ್ಚ ಪ್ರಧಾವತಃ ।
ವ್ಯಯೋಜಯತ ಖಡ್ಗೇನ ಪ್ರಾಣೈರ್ದ್ರೋಣಿಃ ಕೃತಾಂತವತ್ ॥೧೨೬॥

ದ್ರೋಣಪುತ್ರನು ಯಮನಂತೆ, ಮೇಲೆರಗಿದ ಕೆಲವರನ್ನು, ಮತ್ತೆ ಪಲಾಯನ ಮಾಡುತ್ತಿದ್ದ ಕೆಲವರನ್ನು ಪ್ರಾಣದಿಂದ ಮುಕ್ತರನ್ನಾಗಿಸಿದನು.

ವಿನದದ್ಭಿರ್ಭಯಶಾಯಸ್ಯೈಃ ನರಾಶ್ವದ್ವಿಪಸತ್ತಮೈಃ ।
ಪತಿತೈರಭವತ್ ಕೀರ್ಣಾ ಮೇದಿನೀ ಭರತರ್ಷಭ ॥೧೨೭॥

ಭರತಕುಲೋತ್ಪನ್ನರಲ್ಲಿ ಹಿರಿಯನೆ! ತುಂಬಾ ಗಾಯಗೊಂಡು ಅರಚುತ್ತಿರುವ ಕೆಳಗೆ ಬಿದ್ದಿರುವ ಹಿರಿಯರಾದ ಮನುಷ್ಯರು ಕುದುರೆಗಳು ಆನೆಗಳು ಭೂಮಿಯಲ್ಲಿ ಹರಡಿಬಿದ್ದಿದ್ದವು.

ಮಾನುಷಾಣಾಂ ಸಹಸ್ರೇಷು ಹತೇಷು ಪತಿತೇಷು ಚ ।
ಉದತಿಷ್ಠನ್ ಕಬಂಧಾನಿ ಬಹೂನ್ಯುತ್ಥಾಯ ಚಾಪತನ್ ॥೧೨೮॥

ಸಾವಿರಾರು ಮನುಷ್ಯರು ಮೃತರಾಗಿ ಬೀಳಲು, ಅನೇಕ ಮುಂಡಗಳು ಮೇಲೆದ್ದು ನಿಂತವು ಮತ್ತೆ ಬಿದ್ದವು.

ಸಾಂಗದಾನ್ ಸಾಯುಧಾನ್ ಬಾಹೂನ್ ವಿಚಕರ್ತ ಶಿರಾಂಸಿ ಚ ।
ಹಸ್ತಿಹಸ್ತೋಪಮಾನೂರೂನ್ ಹಸ್ತಾನ್ ಪಾದಾಂಶ್ಚ ಭಾರತ ॥೧೨೯॥

ಭರತಕುಲೋತ್ಪನ್ನನೇ! ಕವಚ ಸಹಿತವಾದ ಆಯುಧಸಹಿತವಾದ ಬಾಹುಗಳನ್ನು, ತಲೆಗಳನ್ನು, ಆನೆಯ ಸೊಂಡಿಲಿನಂತಿರುವ ತೊಡೆಗಳನ್ನು, ಹಸ್ತಗಳನ್ನು ಕಾಲುಗಳನ್ನು ಅಶ್ವತ್ಥಾಮನು ಕತ್ತರಿಸಿದನು.

ಪೃಷ್ಠಚ್ಛಿನ್ನಾನ್ ಶಿರಃ ಚ್ಛಿನ್ನಾನ್ ಪಾರ್ಶ್ವಛಿನ್ನಾಂಸ್ತಥಾऽಪರಾನ್ ।
ಸಮಾಸಾದ್ಯಾಕರೋದ್ ದ್ರೌಣಿಃ ಕಾಂಶ್ಚಿಚ್ಚಾಪಿ ಪರಾಙ್ಮುಖಾನ್ ॥೧೩೦॥

ದ್ರೋಣಪುತ್ರನು, ಬೆನ್ನಿನಲ್ಲಿ ಘಾಸಿಗೊಂಡ ತಲೆಯಲ್ಲಿ ಘಾಸಿಗೊಂಡ ಹಾಗೆಯೇ ಮತ್ತೆ ಕೆಲವರು ಪಾರ್ಶ್ವಭಾಗದಲ್ಲಿ ಘಾಸಿಗೊಂಡ ಮತ್ತೆ ಕೆಲವರು ಬೆನ್ನುಮಾಡಿ ಓಡುತ್ತಿರುವವರನ್ನು ಸಮೀಪಿಸಿ ಅವರ ದೇಹಗಳನ್ನು ಸೀಳಿದನು.

ಮಧ್ಯಕಾಯೇ ನರಾಂಶ್ಚಿನ್ನಾನ್ ಚಿಚ್ಛೇದಾನ್ಯಾಂಶ್ಚ ಕಂಠತಃ ।
ಅಂಸದೇಶೇ ಚ ತತ್ರಾನ್ಯಾನ್ ಕಾಯೇ ಪ್ರಾವೇಶಯಚ್ಛಿರಃ ॥೧೩೧॥

ಘಾಸಿಗೊಂಡ ಮನುಜರನ್ನು ದೇಹಮಧ್ಯದಲ್ಲಿ ಸೀಳಿದನು, ಮತ್ತೆ ಕೆಲವರನ್ನು ಕಂಠದಲ್ಲಿ ಸೀಳಿದನು, ಮತ್ತೆ ಬೇರೆಯವರನ್ನು ಹೆಗಲಿನಲ್ಲಿ ಸೀಳಿದನು, ಮತ್ತೆ ಕೆಲವರನ್ನು ಅವರ ದೇಹದಲ್ಲಿ ತಲೆಯನ್ನು ತೂರಿಸಿದನು.

ಏವಂ ಹಿ ಬಹುಶಸ್ತತ್ರ ನಿಘ್ನತೋ ಬಲವತ್ತರಾನ್ ।
ತಮಸಾ ರಜನೀ ಘೋರಾ ಬಭೌ ದಾರುಣದರ್ಶನಾ ॥೧೩೨॥

ಈ ರೀತಿಯಾಗಿ ಅಲ್ಲಿ ಪ್ರಾಯಶಃ ಬಲಿಷ್ಠರನ್ನು ಸಂಹರಿಸುತ್ತಿರಲು, ಘೋರವಾದ ರಾತ್ರಿಯು ಕತ್ತಲೆಯಿಂದ ಕವಿದಿದ್ದಾಗಿ ಭೀಕರ ದೃಶ್ಯವಾಗಿ ಕಾಣಿಸಿತು.

ಕಿಂಚಿತ್ ಪ್ರಾಣೈಶ್ಚ ಪುರುಷೈರ್ಹತೈಶ್ಚಾನ್ಯೈಃ ಸಹಸ್ರಶಃ ।
ಬಹುನಾ ಚ ಗಜಾಶ್ವೇನ ಭೂರಭೂದ್ ಭೀಮದರ್ಶನಾ ॥೧೩೩॥

ಅಲ್ಪಪ್ರಾಣವಂತರಾಗಿದ್ದ ಸಾವಿರಾರು ಮಂದಿಗಳಿಂದ, ಮತ್ತೆ ಕೆಲವರು ಗತಪ್ರಾಣರಿಂದ, ಭಾರೀ ಸಂಖ್ಯೆಯಲ್ಲಿ ಆನೆ ಕುದುರೆಗಳಿಂದ ತುಂಬಿದ ಭೂಮಿಯು ನೋಡಲು ಭೀಕರವಾಗಿದ್ದಿತು.

ವರ್ಧಯಂತೋ ಭಯಂ ಘೋರಂ ನರಾಶ್ವದ್ವಿರದಾ ರಣೇ ।
ಕ್ರುದ್ಧೇನ ದ್ರೋಣಪುತ್ರೇಣ ಸಂಛಿನ್ನಾಃ ಪ್ರಾಪತನ್ ಭುವಿ ॥೧೩೪॥

ರಣರಂಗದ ಭೂಮಿಯಲ್ಲಿ ಭಾರೀ ಭೀತಿಯನ್ನು ಹೆಚ್ಚಿಸುವ, ಕೋಪಿಷ್ಟನಾದ ದ್ರೋಣಪುತ್ರನಿಂದ ತುಂಡರಿಸಲಾದ ಮನುಜರು ಕುದುರೆಗಳು ಆನೆಗಳು ಬಿದ್ದವು.

ಮಾತ್ಸ್ಯಾಂಶ್ಚಾನ್ಯೇ ಪಿತ್ಸ್ಯಾಂಶ್ಚಾನ್ಯೇ ಭ್ರಾತ್ಸ್ಯಾಂಶ್ಚಾನ್ಯೇ ಚ ಚುಕ್ರುಶುಃ ।
ಕೇಚಿದೂಚುರ್ನರಾಃ ಕ್ರುದ್ಧೈರ್ಧಾರ್ತರಾಷ್ಟ್ರೈಃ ಕೃತಂ ರಣೇ ॥೧೩೫॥

ಕೆಲವರು ತಾಯಿಯರನ್ನು, ಮತ್ತೆ ಕೆಲವರು ತಂದೆಯರನ್ನು, ಮತ್ತೆ ಕೆಲವರು ಸಹೋದರರನ್ನು (ಆರ್ತಸ್ವರದಿಂದ) ಕೂಗಿದರು. ಮತ್ತೆ ಕೆಲವರು ಹೇಳಿದರು: 'ಕುಪಿತರಾದ ಧೃತರಾಷ್ಟ್ರನ ಪುತ್ರರು ರಣದಲ್ಲಿ ಹೀಗೆ ಮಾಡಿರಬಹುದು' ಎಂದು.

ನರಾಃ

ಯತ್ನಃ ಕೃತಃ ಪ್ರಸುಪ್ತಾನಾಂ ರಕ್ಷೋಭಿರ್ಘೋರಕರ್ಮಭಿಃ ।
ಅಸಾನ್ನಿಧ್ಯಾತ್ತು ಪಾರ್ಥಾನಾಮಿದಂ ನಃ ಕದನಂ ಕೃತಮ್ ॥೧೩೬॥

ಮನುಜರು– ಕುಂತೀಪುತ್ರರು ದೂರದಲ್ಲಿರುವುದರಿಂದ ಗಾಢವಾಗಿ ನಿದ್ರಿಸುತ್ತಿರುವ ನಮ್ಮ ಮೇಲೆ ಹೊಂಚುಹಾಕಿ ಕ್ರೂರಕರ್ಮಿಗಳಾದ ರಕ್ಕಸರು ಯುದ್ಧವನ್ನು ಸಾರಿರಬಹುದು.

ನ ದೇವಾಸುರಗಂಧರ್ವೈಃ ನ ಯಕ್ಷೈರ್ನ ಚ ರಾಕ್ಷಸೈಃ ।
ಶಕ್ಯೋ ಜೇತುಂ ಹಿ ಕೌಂತೇಯೋ ನೇತಾ ಯಸ್ಯ ಜನಾರ್ದನಃ ।
ಬ್ರಹ್ಮಣ್ಯಃ ಸತ್ಯವಾಗ್ ದಾಂತಃ ಸರ್ವಭೂತಾನುಕಂಪನಃ ॥೧೩೭॥

ಯಾರಿಗೆ ಜನಾರ್ದನನು ನೇತಾ ಆಗಿರುವನೋ, ಬ್ರಾಹ್ಮಣರ ರಕ್ಷಕನಾಗಿ, ಸತ್ಯವನ್ನೇ ನುಡಿಯುವನೊ, ಇಂದ್ರಿಯ ನಿಗ್ರಹಿಯಾದವನೊ, ಎಲ್ಲ ಪ್ರಾಣಿಗಳಲ್ಲಿ ದಯಾಪರನಾದವನೊ, ಅಂತಹ ಕುಂತೀಪುತ್ರನನ್ನು ದೇವತೆಗಳು, ಅಸುರರು ಗಂಧರ್ವರು , ಯಕ್ಷರು, ರಾಕ್ಷಸರು ಯಾರೂ ಗೆಲ್ಲಲು ಶಕ್ಯವಿಲ್ಲ.

ನ ಚ ಸುಪ್ತಂ ಪ್ರಮತ್ತಂ ವಾ ನ್ಯಸ್ತಶಸ್ತ್ರಂ ಕೃತಾಂಜಲಿಮ್ ।
ಧಾವಂತಂ ಮುಕ್ತಕೇಶಂ ಚ ಹನ್ಯಾತ್ ಪಾರ್ಥೋ ಧನಂಜಯಃ॥೧೩೯॥

ಕುಂತೀಪುತ್ರನಾದ ಧನಂಜಯನು ಮಲಗಿದವನನ್ನು, ಉನ್ಮಾದಾವಸ್ಥೆಯಲ್ಲಿ ಇರುವವನನ್ನು, ಶಸ್ತ್ರವನ್ನು ಪರಿತ್ಯಜಿಸಿದವನನ್ನು, ಕೈಜೋಡಿಸಿದವನನ್ನು, ಪಲಾಯನ ಮಾಡುತ್ತಿರುವವನನ್ನು, ತಲೆಯನ್ನು ಕೆದರಿಕೊಂಡವನನ್ನೂ ಕೊಲ್ಲಲಾರನು.

ತದಿದಂ ನಃ ಕೃತಂ ಘೋರಂ ರಕ್ಷೋಭಿಃ ಕ್ರೂರಕರ್ಮಭಿಃ ॥೧೪೦॥

ಕ್ರೂರಕರ್ಮಿಗಳಾದ ರಕ್ಕಸರು ನಮ್ಮ ಮೇಲೆ ಇಂತಹ ಭೀಕರಕೃತ್ಯವನ್ನು ಮಾಡಿರುವರು.

ಸಂಜಯಃ

ಇತಿ ಲಾಲಪ್ಯಮಾನಾಸ್ತು ಶೇರತೇ ಬಹವೋ ಜನಾಃ ॥೧೪೧॥

ಸಂಜಯ– ಈ ರೀತಿಯಾಗಿ ಹೇಳುತ್ತಾ ಅನೇಕ ಜನರು ಒಟ್ಟಾದರು.

ಸ್ತನತಾಂ ಚ ಮನುಷ್ಯಾಣಾಮಪರೇಷಾಂ ಚ ಕೂಜತಾಮ್ ।
ತತೋ ಮುಹೂರ್ತಾತ್ ಪ್ರಾಶಾಮ್ಯತ್ ಸ ಶಬ್ದಸ್ತುಮುಲೋ ಮಹಾನ್ ॥

ಹೀಗೆ ವಿಲಪಿಸುತ್ತಿರುವ, ಮತ್ತೆ ಕೆಲವರು ರೋದಿಸುತ್ತಿರುವ ಮನುಜರ ಭಾರೀ ಶಬ್ದವು ಒಂದು ಮುಹೂರ್ತದ ನಂತರದಲ್ಲಿ ನಿಂತುಹೊಯಿತು.

ಶೋಣಿತವ್ಯತಿಷಿಕ್ತಾಯಾಂ ವಸುಧಾಯಾಂ ನರಾಧಿಪ ।
ತದ್ರಜಸ್ತುಮುಲಂ ರಾಜನ್ ಕ್ಷಣೇನಾಂತರಧೀಯತ ॥೧೪೩॥

ಮನುಜರ ಒಡೆಯನೆ, ರಾಜನೆ! ಭೂಮಿಯಲ್ಲಿ ರಕ್ತದ ಕೋಡಿಯು ಹರಿಯಲು, ದಟ್ಟವಾದ ಧೂಳು ಒಂದೇ ಕ್ಷಣದಲ್ಲಿ ಅಡಗಿತು.

ಸಂವೇಷ್ಟಮಾನಾನುದ್ವಿಗ್ನಾನ್ ನಿರುತ್ಸಾಹಾನ್ ಸಹಸ್ರಶಃ ।
ನ್ಯಪಾತಯನ್ನರಾನ್ ಕ್ರುದ್ಧಃ ಪಶೂನ್ ಪಶುಪತಿರ್ಯಥಾ ॥೧೪೪॥

ಒಬ್ಬರನ್ನೊಬ್ಬರು ತೆಕ್ಕೆ ನಿಂತಿರುವ, ಉದ್ವೇಗಕ್ಕೆ ಒಳಗಾಗಿರುವ, ಉತ್ಸಾಹರಹಿತರಾದ, ಸಾವಿರಾರು ಮನುಷ್ಯರನ್ನು, ಪಶುಪತಿಯು ಪಶುಗಳನ್ನು ಸಂಹರಿಸಿದಂತೆ ಅಶ್ವತ್ಥಾಮನು ಸಂಹರಿಸಿದನು.

ಅನ್ಯೋನ್ಯಂ ಸಂಪರಿಷ್ವಜ್ಯ ಶಯಾನಾನ್ ಜೀವತೋಽಪರಾನ್ ।
ಸಂಲೀನಾನ್ ದ್ರವತಶ್ಚಾಪಿ ಸರ್ವಾನ್ ದ್ರೌಣಿರಪೋಥಯತ್ ॥೧೪೫॥

ಬದುಕಿರುವ ಕೆಲವರು ಒಬ್ಬರನ್ನು ಒಬ್ಬರು ತೆಕ್ಕೆಹಾಕಿಕೊಂಡು ಮಲಗಿರುವ, ಅಡಗಿ ಕುಳಿತಿರುವ, ಪಲಾಯನ ಮಾಡುತ್ತಿರುವ ಎಲ್ಲರನ್ನೂ ಸಹ ದ್ರೋಣಪುತ್ರನು ಸಂಹರಿಸಿದನು.

ಹುತಾಶನೇನ ದಹ್ಯಂತೇ ವಧ್ಯಂತೇ ದ್ರೌಣಿನಾ ಪರೇ ।
ಪರಸ್ಪರಂ ತದಾ ಯೋಧಾ ಗಮಯನ್ ಯಮಸಾದನಮ್ ॥೧೪೬॥

ದ್ರೋಣಪುತ್ರನು ಕೆಲವರನ್ನು ಸಂಹರಿಸಿದನು, ಮತ್ತೆ ಕೆಲವರನ್ನು ಅಗ್ನಿಯಿಂದ ದಹಿಸಿದನು, ಯೋಧರೇ ಪರಸ್ಪರವಾಗಿ ಯಮಸದನಕ್ಕೆ ಅಟ್ಟಿದರು (ಶಿಬಿರಕ್ಕೆ ಬೆಂಕಿಯನ್ನು ಹಚ್ಚಿದ್ದರಿಂದ ಗಾಢವಾದ ಧೂಮವು ಆವರಿಸಿ, ಶಿಬಿರವಾಸಿಗಳು ಏನೂ ತಿಳಿಯದವರಾಗಿ ಪರಸ್ಪರ ಖಡ್ಗಾದಿ ಆಯುಧಗಳಿಂದ ಇರಿದುಕೊಂಡು ಮೃತರಾದರು ಎಂದು ಭಾವ.)

ತಸ್ಯಾ ರಜನ್ಯಾಸ್ತ್ವರ್ಧೇನ ಪಾಂಡವಾನಾಂ ಮಹದ್ಬಲಮ್ ।
ಗಮಯಾಮಾಸ ರಾಜೇಂದ್ರ ದ್ರೌಣಿರ್ಯಮನಿವೇಶನಮ್ ॥೧೪೭॥

ರಾಜರ ಒಡೆಯನೆ! ಆ ಅರ್ಧರಾತ್ರಿಯಲ್ಲಿ ಪಾಂಡವರ ಭಾರೀ ಬಲವನ್ನು (ಸೇನಾಬಲವನ್ನು) ಯಮಸದನಕ್ಕೆ ದ್ರೋಣಪುತ್ರನು ಕಳುಹಿಸಿದನು.

ನಿಶಾಚರಾಣಾಂ ಸತ್ತ್ವಾನಾಂ ರಾತ್ರಿಃ ಸಾ ಹರ್ಷವರ್ಧಿನೀ ।
ಆಸೀನ್ನರಗಜಾಶ್ವಾನಾಂ ರೌದ್ರಾ ಕ್ಷಯಕರೀ ಭೃಶಮ್ ॥೧೪೮॥

ಆ ರಾತ್ರಿಯು ರಾತ್ರಿಸಂಚಾರಿಗಳಾದ ಪ್ರಾಣಿಗಳಿಗೆ (ವಿಶೇಷವಾಗಿ ಮಾಂಸಾಹಾರಿ ಪ್ರಾಣಿಗಳಿಗೆ) ಸಂತಸವನ್ನು ಹೆಚ್ಚಿಸುವದಾಗಿಯೂ, ಮನುಷ್ಯರು ಆನೆಗಳು ಕುದುರೆಗಳು ಇವುಗಳಿಗೆ ಅತ್ಯಂತ ಭೀಕರವೂ, ನಾಶಕಾರಿಯೂ ಆಗಿತ್ತು.

ತತ್ರಾದೃಶ್ಯಂತ ರಕ್ಷಾಂಸಿ ಪಿಶಾಚಾಶ್ಚ ಪೃಥಗ್ವಿಧಾಃ ।
ಖಾದಂತೇ ಪರಮಾಂಸಾನಿ ಪಿಬಂತಃ ಶೋಣಿತಾನಿ ಚ ॥೧೪೯॥

ಅಲ್ಲಿ ಅನ್ಯರ ಮಾಂಸವನ್ನು ತಿನ್ನುತ್ತಿರುವ, ರಕ್ತವನ್ನು ಕುಡಿಯುತ್ತಿರುವ. ನಾನಾವಿಧಗಳಾದ ರಾಕ್ಷಸರು ಪಿಶಾಚಿಗಳು ಕಂಡವು.

ಕರಾಲಾಃ ಪಿಂಗಲಾ ರೌದ್ರಾಃ ಶೈಲದಂತಾ ರಜಸ್ವಲಾಃ ।
ಜಟಿಲಾ ಭೀಮವಕ್ತ್ರಾಶ್ಚ ಪಂಚಪಾದಾ ಮಹೋದರಾಃ ॥೧೫೦॥

ಪಶ್ಚಾದಂಗುಲಯೋ ರೂಕ್ಷಾ ವಿರೂಪಾ ಭೈರವಸ್ವನಾಃ ।
ಗಜಾನನಾತಿಹ್ರಸ್ವಾಶ್ಚ ನೀಲವರ್ಣಾ ವಿಭೀಷಣಾಃ ॥೧೫೧॥

ಸ್ವಪುತ್ರದಾರಾಃ ಸುಕ್ರೂರಾಃ ಕಾಂದಿಶೀಕಾಃ ಸುನಿರ್ಘೃಣಾಃ ॥೧೫೨॥

ವಿವಿಧಾನಿ ಚ ರೂಪಾಣಿ ತತ್ರಾದೃಶ್ಯಂತ ರಕ್ಷಸಾಮ್ ॥೧೫೩॥

ವಿಕಾರದೇಹವನ್ನು ಹೊಂದಿರುವ, ತಿಳಿಹಳದಿಬಣ್ಣವನ್ನು ಹೊಂದಿರುವ, ಭೀಕರಗಳಾದ ಕಲ್ಲುಬಂಡೆಯಂತೆ (ದೊಡ್ಡ ದೊಡ್ಡ) ಹಲ್ಲುಗಳನ್ನು ಹೊಂದಿರುವ, ಧೂಳಿನಿಂದ ಮುಚ್ಚಿಹೋಗಿರುವ, ತಲೆಯಲ್ಲಿ ಜಟೆಯನ್ನು ಧರಿಸಿರುವ, ಭೀಕರವಾದ ಮುಖಗಳನ್ನು ಹೊಂದಿರುವ, ಐದು ಕಾಲುಗಳನ್ನು ಹೊಂದಿರುವ, ಭಾರೀಗಾತ್ರದ ಹೊಟ್ಟೆಯನ್ನು ಹೊಂದಿರುವ, ತಿರುವುಮುರುವಾಗಿರುವ ಬೆರಳುಗಳನ್ನು ಹೊಂದಿರುವ, (ಬೆರಳಿನ ತುದಿಯು ದಪ್ಪ ಬುಡವು ತೆಳು ಎಂದು ಭಾವ) ಭೀಕರಗಳಾದ ವಿಕಾರರೂಪಿಗಳಾದ ಭಯಂಕರವಾದ ಧ್ವನಿಯನ್ನು ಹೊರಹೊಮ್ಮಿಸುವ ಅತಿಕುಳ್ಳಾಗಿರುವ, ಮುಖವು ಆನೆಯ ಸದೃಶವಾಗಿರುವ ಮಕ್ಕಳು ಹೆಂಡಂದಿರಿಂದ ಒಡಗೂಡಿರುವ ಯಾವ ದೇಶದವರು ಎಂದು ತಿಳಿಯದ ತುಂಬ ಕ್ರೂರಿಗಳಾದ ದಯಾರಹಿತರಾದ ಅನೇಕ ರೂಪಗಳನ್ನು ಹೊಂದಿರುವ ರಕ್ಕಸರು ಪಿಶಾಚಗಳು ಅಲ್ಲಿ ಕಂಡವು.

ಪೀತ್ವಾ ಚ ಶೋಣಿತಂ ಹೃಷ್ಟಾಃ ಪ್ರಾನೃತ್ಯನ್ ಗಣಶೋಽಪರೇ ।
ಇದಂ ಪರಮಿದಂ ಮೇಧ್ಯಮ್ ಇದಂ ಸ್ವಾದ್ವಿತಿ ಚಾಬ್ರುವನ್ ॥೧೫೪॥

ರಕ್ತವನ್ನು ಕುಡಿದು ಸಂತಸಗೊಂಡ ಒಂದು ಗುಂಪು ಕುಪ್ಪಳಿಸಿ ಕುಣಿಯಿತು, ಇದು ಉತ್ತಮವಾಗಿದೆ, ಈ ಮಾಂಸವು ಅತಿರುಚಿಯಾಗಿದೆ ಎಂದು ಹೇಳಿತೊಡಗಿದವು.

ಮೇದೋಮಜ್ಜಾಸ್ಥಿರಕ್ತಾನಾಂ ಮಾಂಸಾನಾಂ ಭೃಶಮಾಶಿತಾಃ ।
ವರಮಾಂಸಾನಿ ಖಾದಂತಃ ಕ್ರವ್ಯಾದಾ ಮಾಂಸಗರ್ಧಿನಃ ॥೧೫೫॥

ವಸಾಶ್ಚಾಪ್ಯಪರೇ ಪೀತ್ವಾ ಪರ್ಯಧಾವನ್ ವಿಕುಕ್ಷಿಕಾಃ ।
ನಾನಾವಕ್ತ್ರಸ್ತಥಾ ರೌದ್ರಾಃ ಕ್ರವ್ಯಾದಾಃ ಪಿಶಿತಾಶನಾಃ ॥೧೫೬॥

ಅಯುತಾನಿ ಚ ತತ್ರಾಸನ್ ಪ್ರಯುತಾನ್ಯರ್ಬುದಾನಿ ಚ ।
ರಕ್ಷಸಾಂ ಘೋರರೂಪಾಣಾಂ ಮಹತಾಂ ಕ್ರೂರಕರ್ಮಣಾಮ್ ॥೧೫೭॥

ಮುದಿತಾನಾಂ ವಿತೃಪ್ತಾನಾಂ ತಸ್ಮಿನ್ ಮಹತಿ ವೈಶಸೇ ।
ಸಮೇತಾನಿ ಬಹೂನ್ಯಾಸನ್ ಭೂತಾನಿ ಚ ಜನಾಧಿಪ ॥೧೫೮॥

ಜನನಾಯಕನೆ! ಮೇದಸ್ಸು ಮಜ್ಜಾ ಎಲವು ರಕ್ತವನ್ನು ಯಥೇಚ್ಛವಾಗಿ ಉಂಡವು, ಮಾಂಸವನ್ನು ಅತಿಯಾಗಿ ಬಯಸುವ ಮಾಂಸಭಕ್ಷಿಗಳು (ರಾಕ್ಷಸರು) ಶ್ರೇಷ್ಠ ಮಾಂಸವನ್ನು ತಿನ್ನುತ್ತಾ, ಮತ್ತೆ ಕೆಲವರು ವಸೆಯನ್ನು ಕುಡಿದವು, ಡೊಳ್ಳುಹೊಟ್ಟೆಗಳನ್ನು ಹೊತ್ತು ತಿರುಗಾಡಿದವು, ಹಾಗೆಯೇ ಮಾಂಸಭಕ್ಷಿಗಳಾದ ಭಯಂಕರರಾದ ರಾಕ್ಷಸರು ನಾನಾವಿಧವಾದ ಮುಖಚಹರೆಗಳನ್ನು ಹೊಂದಿದ್ದರು. ಅಲ್ಲಿ ನೆರದಿದ್ದ ಗುಂಪುಗಳಲ್ಲಿ ಕೆಲವು ಗುಂಪಿನಲ್ಲಿ ಹತ್ತಾರು ಸಾವಿರ, ಮತ್ತೆ ಕೆಲವು ಗುಂಪಿನಲ್ಲಿ ಹತ್ತಾರು ಲಕ್ಷ, ಮತ್ತೆ ಕೆಲವು ಗುಂಪುಗಳಲ್ಲಿ ಕೋಟಿಗೂ ಹೆಚ್ಚು ಸಂಖ್ಯೆಯಲ್ಲಿ ಮಿಲಿತರಾದ ಭಾರೀಕ್ರೂರಕರ್ಮಿಗಳಾದ ಭಯಂಕರರೂಪಗಳನ್ನು ಹೊಂದಿರುವ ತುಂಬಾತೃಪ್ತರಾದ ಸಂತಸಗೊಂಡ ರಾಕ್ಷಸರ ಗುಂಪು , ಬೇರೆ ತುಂಬಾಪ್ರಾಣಿಗಳೂ ಆ ವಿಸ್ತಾರವಾದ ರಣರಂಗದಲ್ಲಿ ಇದ್ದವು.

ಏವಂವಿಧಾ ಹಿ ಸಾ ರಾತ್ರಿಃ ಸೋಮಕಾನಾಂ ಜನಕ್ಷಯೇ ।
ಪ್ರಸುಪ್ತಾನಾಂ ಪ್ರಮತ್ತಾನಾಮಾಸೀತ್ ಸುಭೃಶದಾರುಣಾ ॥೧೫೯॥

ಈ ರೀತಿಯಾಗಿ ಮನುಜಕ್ಷಯವು ಉಂಟಾಗಿ, ಮೈಮರೆತು ಗಾಢವಾಗಿ ಮಲಗಿದ ಸೋಮಕವಂಶೀಯರಿಗೆ ಅತ್ಯಂತ ದಾರುಣದಿನವಾಯಿತು.

ಅಸಂಶಯಂ ಚ ಕಾಲಸ್ಯ ಪರ್ಯಾಯೋ ದುರತಿಕ್ರಮಃ ।
ತಾದೃಶಾ ನಿಹತಾ ಯತ್ರ ಕೃತ್ವಾಽಸ್ಮಾಕಂ ಜನಕ್ಷಯಮ್ ॥೧೬೦॥

ನಮ್ಮ ಜನರ ಸಂಹಾರವನ್ನು ಮಾಡಿದ ಅವರು, ಆ ರೀತಿಯಾಗಿ ಸಂಹೃತರಾದದ್ದು ನಿಃಸಂದೇಹವಾಗಿಯೂ ಕಾಲದ ವಿಪರ್ಯಯವನ್ನು ಯಾರೂ ಮೀರಲಾರರು.

ಧೃತರಾಷ್ಟ್ರಃ

ಪ್ರಾಗೇವ ಸುಮಹತ್ ಕರ್ಮ ದ್ರೌಣಿರೇವ ಮಹಾಬಲಃ ।
ನಾಕರೋದೀದೃಶಂ ಕಸ್ಮಾನ್ಮತ್ಪುತ್ರವಿಜಯೇ ಧೃತಃ ॥೧೬೧॥

ಧೃತರಾಷ್ಟ್ರ– ನನ್ನ ಮಗನ ವಿಷಯದಲ್ಲಿ ಬದ್ಧಾದರನಾದ ಮಹಾಬಲಿಷ್ಠನಾದ ದ್ರೋಣಪುತ್ರನು ಈ ಮಹತ್ತರವಾದ ಕರ್ಮವನ್ನು ಈ ಮೊದಲೇ ಏಕೆ ಮಾಡಲಿಲ್ಲ?

ಅಥ ಕಸ್ಮಾದ್ಧತೇ ಕ್ಷತ್ರೇ ಕರ್ಮೇದಂ ಕೃತವಾನಸೌ ।
ದ್ರೋಣಪುತ್ರೋ ಮಹೇಷ್ವಾಸಸ್ತನ್ಮೇ ಶಂಸಿತುಮರ್ಹಸಿ ॥೧೬೨॥

ದೊಡ್ಡಬಿಲ್ಲಾಳಾದ ಈ ದ್ರೋಣಪುತ್ರನು ಕ್ಷತ್ರಿಯರ ನಾಶವಾದ ಅನಂತರದಲ್ಲಿ ಹೀಗೇಕೆ ಮಾಡಿದನು? ನನ್ನ ಈ ಸಂದೇಹವನ್ನು ನಿವಾರಿಸು.

ಸಂಜಯಃ

ತೇಷಾಂ ನೂನಂ ಭಯಾನ್ನಾಸೌ ಕೃತವಾನ್ ಕುರುಸತ್ತಮ ।
ಅಸಾನ್ನಿಧ್ಯೇ ತು ಪಾರ್ಥಾನಾಂ ಕೇಶವಸ್ಯ ಚ ಧೀಮತಃ ॥೧೬೩॥

ಸಾತ್ಯಕೇಶ್ಚಾಪಿ ಕರ್ಮೇದಂ ದ್ರೋಣಪುತ್ರೇಣ ಸಾಧಿತಮ್ ॥೧೬೪॥

ಸಂಜಯ– ಕುರುಕುಲದ ಹಿರಿಯ! ನಿಶ್ಚಯವಾಗಿಯೂ ಅವರ (ಪಾಂಡವರ) ಭಯದಿಂದ ಈತನು (ಈ ಕರ್ಮವನ್ನು) ಮಾಡಲಿಲ್ಲ, ಧೀಮಂತನಾದ ಕೇಶವನು ಮತ್ತು ಕುಂತೀಪುತ್ರರು ಹಾಗೂ ಸಾತ್ಯಕಿಯು ಇಲ್ಲದಿರುವ ಸಂದರ್ಭದಲ್ಲಿ ದ್ರೋಣಪುತ್ರನಿಂದ ಈ ಕರ್ಮವು ಸಾಧಿಸಲಾಗಿದೆ.

ಕೋ ಹಿ ತೇಷಾಂ ಸಮಕ್ಷಂ ತಾನ್ ಹನ್ಯಾದಪಿ ಮರುತ್ಪತಿಃ ।
ಏತದೀದೃಶಕಂ ರಾಜನ್ ವೃತ್ತಂ ಸುಪ್ತಜನೇ ನಿಶಿ ॥೧೬೫॥

ರಾಜನೆ! ಯಾವ ವಾಯುದೇವನು ಅವರ (ಪಾಂಡವರ) ಸನ್ನಿಧಿಯಲ್ಲಿ ಅವರನ್ನು (ಅವರ ಪುತ್ರರನ್ನು ಮತ್ತು ಪಾಂಚಾಲದ ರಾಜಕುವರರರನ್ನು) ಸಂಹರಿಸಲು ಶಕ್ತನಾದಾನು? ರಾತ್ರಿಯಲ್ಲಿ ಜನರು ಮಲಗಿರಲು ಇಂತಹ ಘಟನೆಯು ನಡೆಯಿತು.

ತತೋ ಜನಕ್ಷಯಂ ಕೃತ್ವಾ ಪಾಂಡವಾನಾಂ ಮಹಾತ್ಯಯಮ್ ।
ಪ್ರತ್ಯೂಷಕಾಲೇ ಶಿಬಿರಾನ್ ಪ್ರತಿಗಂತುಮಿಯೇಷ ಸಃ ॥೧೬೬॥

ಆತನು ಪಾಂಡವರಿಗೆ ಭಾರೀ ಹಾನಿಕಾರಕವಾದ ಜನನಾಶವನ್ನು ಮಾಡಿ, ಉಷಃಕಾಲಕ್ಕೂ ಮುನ್ನ ಶಿಬಿರದಿಂದ ಹೊರಡಲು ಇಚ್ಛಿಸಿದನು

ನೃಶೋಣಿತಾವಸಿಕ್ತಸ್ಯ ದ್ರೌಣೇರಾಸೀದಸಿತ್ಸರುಃ ।
ಪಾಣಿನಾ ಸಹ ಸಂಶ್ಲಿಷ್ಟ ಏಕೀಭೂತ ಇವ ಪ್ರಭೋ ॥೧೬೭॥

ರಾಜನೆ! ರಕ್ತದಿಂದ ತೊಯ್ದುಹೋಗಿದ್ದ ದ್ರೋಣಪುತ್ರನ ಕರದಿಂದ ಕೂಡಿದ ಖಡ್ಗದ ಅಲಗು (ಕೈ ಮತ್ತು ಕತ್ತಿಯು) ಒಂದೇ ಎನ್ನುವಂತೆ ಆಗಿತ್ತು.

ಸ ನಿಃಶೇಷಾನರೀನ್ ಕೃತ್ವಾ ವಿರರಾಮ ನಿಶಾಕ್ಷಯೇ ।
ಯುಗಾಂತೇ ಸರ್ವಭೂತಾನಿ ಭಸ್ಮ ಕೃತ್ವೇವ ಪಾವಕಃ ॥೧೬೮॥

ಯುಗದ ಪರ್ಯವಸಾನದಲ್ಲಿ ಎಲ್ಲ ಪ್ರಾಣಿಗಳನ್ನು ಬೂದಿ ಎಗರಿಸಿದ ಅಗ್ನಿಯಂತೆ, ಆತನು (ಅಶ್ವತ್ಥಾಮನು) ಕತ್ತಲೆಯ ಪರಿಸಮಾಪನದ ಸಂದರ್ಭದಲ್ಲಿ ಶತ್ರುಗಳನ್ನು ನಿಃಶೇಷಗೊಳಿಸಿ ವಿಶ್ರಮಿಸಿದನು.

ಯಥಾಪ್ರತಿಜ್ಞಂ ತತ್ಕರ್ಮ ಕೃತ್ವಾ ದ್ರೌಣಾಯನಿಃ ಪ್ರಭೋ ।
ದುರ್ಗಮಾಂ ಪದವೀಂ ಕೃತ್ವಾ ಪಿತುರಾಸೀದ್ ಗತವ್ಯಥಃ ॥೧೬೯॥

ಒಡೆಯನೆ! ಪ್ರತಿಜ್ಞೆಯಂತೆ ಕರ್ಮವನ್ನು ಪರ್ಯವಸಾನಗೊಳಿಸಿದ ದ್ರೋಣಪುತ್ರನು ಪ್ರದೇಶವನ್ನು ಓಡಾಡಲು ಅಶಕ್ಯವಾಗುವಂತೆ (ಅಸಂಖ್ಯಾಕ ಶವಗಳು ಹರಡಿದ್ದರಿಂದ) ಮಾಡಿ, ತಂದೆಯ ವಿಷಯಕವಾದ ದುಃಖವನ್ನು ಕಳೆದುಕೊಂಡನು.

ಯಥೈವ ಸಂಸುಪ್ತಜನೇ ಶಿಬಿರೇ ಪ್ರಾವಿಶನ್ನಿಶಿ ।
ತಥೈವ ಹತ್ವಾ ನಿಃಶಬ್ದಂ ನಿಶ್ಚಕ್ರಾಮ ಮಹಾರಥಃ ॥೧೭೦॥

ಹೇಗೆ ಜನರು ಗಾಢನಿದ್ರೆಯಲ್ಲಿದ್ದ (ಶಬ್ದರಹಿತವಾದ) ಶಿಬಿರವನ್ನು ರಾತ್ರಿಯಲ್ಲಿ ಪ್ರವೇಶಿಸಿದ್ದನೋ, ಹಾಗೆಯೇ ಮಹಾರಥಿಕನಾದ ಆತನು (ಶಿಬಿರವನ್ನು) ನಿಃಶಬ್ದಗೊಳಿಸಿ ಹೊರಟನು.

ನಿಷ್ಕ್ರಮ್ಯ ಶಿಬಿರಾತ್ ತಸ್ಮಾತ್ ತಾಭ್ಯಾಂ ಸಮ್ಮಂತ್ರ್ಯ ವೀರ್ಯವಾನ್ ।
ಆಚಖ್ಯೌ ಕರ್ಮ ತತ್ತಾಭ್ಯಾಂ ಹೃಷ್ಟಃ ಸಂಹರ್ಷಯನ್ ವಿಭೋ ॥೧೭೧॥

ಪ್ರಭುವೆ! ಬಲಶಾಲಿಯಾದ ಅಶ್ವತ್ಥಾಮನು ಆ ಶಿಬಿರದಿಂದ ಹೊರಬಂದು ಅವರೀರ್ವರೊಡನೆ ಸಮಾಲೋಚಿಸಿ, ಆ ಕರ್ಮವನ್ನು ತಿಳಿಸಿ, ಅವರೀರ್ವರಿಗೆ ಸಂತೋಷಗೊಳಿಸಿ, ಸ್ವತಃ ತಾನೂ ಸಂತಸಗೊಂಡನು.

ತೌ ಸ್ಮ ವ್ಯಾಚಖ್ಯತುಸ್ತಸ್ಮೈ ಪ್ರಿಯಂ ಪ್ರಿಯಕರೌ ತದಾ ।
ಪಾಂಚಾಲಾನ್ ಸೃಂಜಯಾಂಶ್ಚೈವ ವಿನಿಕೃತ್ತಾನ್ ಸಹಸ್ರಶಃ ॥೧೭೨॥

ಆಗ (ಅಶ್ವತ್ಥಾಮನಿಗೆ) ಪ್ರಿಯಕರರಾದ ಅವರೀರ್ವರು (ಕೃಪ-ಕೃತವರ್ಮರು) 'ಸಹಸ್ರಾರು ಸಂಖ್ಯೆಯಲ್ಲಿ ಪಾಂಚಾಲರನ್ನು ಮತ್ಸ್ಯದೇಶೀಯರನ್ನು ಸೀಳಿಹಾಕಿದ ಕರ್ತವ್ಯವನ್ನು ಸಂತಸದಾಯಕವಾದದ್ದು' ಎಂದು ಹೇಳಿದರು.

ಪ್ರೀತ್ಯಾ ಚೋಚ್ಚೈರುದಕ್ರೋಶನ್ ತಥೈವಾಸ್ಫೋಟಯಂಸ್ತಳಾನ್ ।
ದಿಷ್ಟ್ಯಾ ದಿಷ್ಟ್ಯೇತಿ ಚಾನ್ಯೋನ್ಯಂ ಸಮೇತ್ಯೋಚುರ್ಮಹಾರಥಾಃ ॥

ಮಹಾರಥಿಕರಾದ ಅವರು, ಹರ್ಷದಿಂದ ಗಟ್ಟಿಯಾಗಿ ಅರಚಿದರು, ಹಾಗೆಯೇ ಕೈತಟ್ಟಿ ಶಬ್ದವನ್ನು ಮಾಡಿದರು, ಪರಸ್ಪರ ಒಟ್ಟಾಗಿ 'ಕಂಡೆಯಾ, ಕಂಡೆಯಾ' ಎಂದು ಹೇಳಿಕೊಂಡರು.

ಪರಿಷ್ವಜ್ಯ ತತೋ ದ್ರೌಣಿಸ್ತಾಭ್ಯಾಂ ಚ ಪ್ರತಿನಂದಿತಃ ।
ಇದಂ ಹರ್ಷಾಚ್ಚ ಸುಮಹದ್ ಆದದೇ ವಾಕ್ಯಮುತ್ತಮಮ್ ॥೧೭೪॥

ಅನಂತರದಲ್ಲಿ ದ್ರೌಣಿಯು ಅವರೀರ್ವರನ್ನು ಆಲಿಂಗಿಸಿಕೊಂಡನು, ಅವರೀರ್ವರು ಅತನನ್ನು ಅಭಿನಂದಿಸಿದರು, ತುಂಬು ಸಂತಸದಿಂದ ಈ ಮಹತ್ತರವಾದ ಮಾತನ್ನು ಹೇಳಿದನು.

ದ್ರೌಣಿಃ

ಪಾಂಚಾಲಾ ನಿಹತಾಃ ಸರ್ವೇ ದ್ರೌಪದೇಯಾಶ್ಚ ಸರ್ವಶಃ ।
ಸೋಮಕಾ ಮತ್ಸ್ಯಶೇಷಾಶ್ಚ ಸರ್ವೇ ವಿನಿಹತಾ ಮಯಾ ॥೧೭೫॥

ಇದಾನೀಂ ಕೃತಕೃತ್ಯಾಃ ಸ್ಮ ಯಾಮ ತತ್ರೈವ ಮಾ ಚಿರಮ್ ।
ಯದಿ ಜೀವತಿ ನೋ ರಾಜಾ ತಸ್ಮೈ ಶಂಸಾಮಹೇ ಪ್ರಿಯಮ್ ॥೧೭೬॥

ಅಶ್ವತ್ಥಾಮ– ಎಲ್ಲ ಪಾಂಚಾಲರಾಜಕುವರರು ಸಂಹೃತರಾದರು, ಮತ್ತು ದ್ರೌಪದಿಯ ಎಲ್ಲ ಪುತ್ರರು, ಉಳಿದಿದ್ದ ಎಲ್ಲ ಸೋಮವಂಶೀಯರು, ಮತ್ಸ್ಯ ದೇಶೀಯರೂ ನನ್ನಿಂದ ಮೃತರಾದರು. ಈಗ ನಾವು ಕೃತಕೃತ್ಯರಾದೆವು, ವಿಲಂಬ ಮಾಡದಂತೆ ಅಲ್ಲಿಗೆ ಹೋಗುವ, ನಮ್ಮ ರಾಜನು ಒಂದು ವೇಳೆ ಜೀವದಿಂದ ಇದ್ದಲ್ಲಿ ಆತನಿಗೆ ಪ್ರಿಯವಾದ ಸುದ್ದಿಯನ್ನು ತಿಳಿಸುವ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸೌಪ್ತಿಕಪರ್ವಣಿ ಪಾಂಚಾಲವಧೋ ನಾಮ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ತದಂತರೇ ದ್ರೌಣಿರಪಿ ಪ್ರಯಾತಃ
ಕೃಷ್ಣಾಸುತಾನಾಂ ಮುದಿತಃ ಶಿರಾಂಸಿ ।
ಆದಾಯ ಹಾರ್ದಿಕ್ಯಕೃಪಾನುಯಾತೋ
ದುರ್ಯೋಧನಂ ಸನ್ನಿಕೃಷ್ಟಪ್ರಯಾಣಮ್ ॥

ಅಷ್ಟರಲ್ಲಿ ಅಶ್ವತ್ಥಾಮನು ದ್ರೌಪದೀ ಪುತ್ರರ ತಲೆಗಳನ್ನು ಎತ್ತಿಕೊಂಡು ಆನಂದದಿಂದ ದುರ್ಯೋಧನನ ಬಳಿಗೆ ನಡೆದಿದ್ದನು. ಕೃಪ-ಕೃತವರ್ಮರೂ ಅವನನ್ನು ಹಿಂಬಾಲಿಸಿದ್ದರು. ದುರ್ಯೋಧನನು ಆಗ ಮರಣವನ್ನು ಸಮೀಪಿಸಿದ್ದನು.

ದೃಷ್ಟ್ವಾ ತದುಕ್ತಂ ಚ ನಿಶಮ್ಯ ಪಾಪಃ
ತುಷ್ಟೋಽತ್ಯಜತ್ ಸಾಧ್ವಿತಿ ದೇಹಮಾಶು ।
ಭೀಮಾರ್ಜುನಾಭ್ಯಾಮಥ ಕೇಶವಾಚ್ಚ
ಭೀತಾಃ ಪೃಥಕ್ ದ್ರೌಣಿಮುಖಾಃ ಪ್ರಯಾತಾಃ ॥

ಪಾಪಿ ದುರ್ಯೋಧನನು ದ್ರೌಪದೀ ಪುತ್ರರ ತಲೆಗಳನ್ನು ನೋಡಿ ಅಶ್ವತ್ಥಾಮನ ಮಾತನ್ನೂ ಕೇಳಿ ಸಂತೋಷಪಟ್ಟು ಒಳ್ಳೆಯದನ್ನೇ ಮಾಡಿರುವೆ ಎಂದು ಹೇಳಿ ಬೇಗನೆ ಶರೀರವನ್ನು ತೊರೆದನು. ಒಡನೆ ಭೀಮಾರ್ಜುನರಿಗೂ ಕೃಷ್ಣನಿಗೂ ಹೆದರಿ ಅಶ್ವತ್ಥಾಮ ಮುಂತಾದ ಮೂವರೂ ಬೇರೆ ಬೇರೆಯಾಗಿ ಹೊರಟು ಹೋದರು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಅಶ್ವತ್ಥಾಮಾದಿಗಳು ದುರ್ಯೋಧನನಿಗಾಗಿ ಶೋಕಿಸಿದರು,
ಮಲಗಿದ ಪಾಂಡವಪುತ್ರರು ಮುಂತಾದವರನ್ನು ಸಂಹಾರಮಾಡಿದ್ದನ್ನು
ಅಶ್ವತ್ಥಾಮನು ದುರ್ಯೋಧನನಿಗೆ ತಿಳಿಸಿದನು. ಅಶ್ವತ್ಥಾಮಾದಿಗಳು ನಗರಕ್ಕೆ
ತೆರಳಿದರು. ವ್ಯಾಸಾನುಗ್ರಹದಿಂದ ಪ್ರಾಪ್ತವಾದ ದಿವ್ಯಜ್ಞಾನವು
ಸಂಜಯನಿಗೆ ಪರಿಸಮಾಪ್ತವಾಯಿತು.

ಸಂಜಯಃ

ತೇ ಹತ್ವಾ ಸರ್ವಪಾಂಚಾಲಾನ್ ದ್ರೌಪದೇಯಾಂಶ್ಚ ಸರ್ವಶಃ ।
ಆಗಚ್ಛನ್ ಸಹಿತಾಃ ಸರ್ವೇ ಯತ್ರ ದುರ್ಯೋಧನೋ ಹತಃ ॥೧॥

ಸಂಜಯ– (ಅಶ್ವತ್ಥಾಮಾದಿಗಳು) ಎಲ್ಲ ಪಾಂಚಾಲರನ್ನು ದ್ರೌಪದಿಯ ಪುತ್ರರನ್ನೂ ಸಂಹರಿಸಿ, ಅವರು ಎಲ್ಲರೂ ಒಟ್ಟಾಗಿ ಎಲ್ಲಿ ದುರ್ಯೋಧನನು ಹತನಾಗಿ ಬಿದ್ದಿದ್ದನೋ ಅಲ್ಲಿಗೆ ಬಂದರು.

ಗತ್ವಾ ಚೈನಮಪಶ್ಯಂತ ಕಿಂಚಿತ್ಪ್ರಾಣಂ ನರಾಧಿಪಮ್ ।
ತತೋ ರಥೇಭ್ಯಃ ಪ್ರಸ್ಕಂದ್ಯ ಪರಿವವ್ರುಃ ತವಾತ್ಮಜಮ್ ॥೨॥

ಹೋಗಿ, ತುಂಬಾದುರ್ಬಲನಾಗಿದ್ದ ರಾಜನಾದ ನಿನ್ನ ಪುತ್ರನನ್ನು ಕಂಡರು, ಅನಂತರದಲ್ಲಿ ರಥದಿಂದ ಇಳಿದು ಆತನನ್ನು ಸುತ್ತುವರೆದರು.

ತಂ ಭಗ್ನಸಕ್ಥಂ ರಾಜಾನಂ ಕೃಚ್ಛ್ರಪ್ರಾಣಮಚೇತಸಮ್ ।
ವಮಂತಂ ರುಧಿರಂ ವಕ್ತ್ರಾದ್ ಅಪಶ್ಯನ್ ವಸುಧಾತಲೇ ॥೩॥

ವೃತಂ ಸಮಂತಾದ್ ಬಹುಭಿಃ ಶ್ವಾಪದೈಘೋರರೂಪಿಭಿಃ ।
ಸಾಲಾವೃಕಗಣೈಶ್ಚೈವ ಭಕ್ಷಯಿಷ್ಯದ್ಭಿರಂತಿಕಾತ್ ॥೪॥

ನಿವಾರಯಂತಂ ತಾನ್ ಕೃಚ್ಛ್ರಾತ್ ಶ್ವಾಪದಾನ್ ಸಂಚಿಖಾದಿಷೂನ್ ।
ವಿವೇಷ್ಟಮಾನಮೂರುಭ್ಯಾಂ ಸುಭೃಶಂ ಗಾಢವೇದನಮ್ ॥೫॥

ತಂ ಶಯಾನಂ ತಥಾ ದೃಷ್ಟ್ವಾ ಭೂಮೌ ಸ್ವರುಧಿರೋಕ್ಷಿತಮ್ ।
ಹತಶಿಷ್ಟಾಸ್ತ್ರಯೋ ರಾಜನ್ ಶೋಕಾರ್ತಾಃ ಪರ್ಯವಾರಯನ್ ॥೬॥

ರಾಜನೆ! ತೋಡೆಮುರಿದುಕೊಂಡಿರುವ ಬುದ್ಧಿಸ್ವಾಸ್ಥ್ಯವಿಲ್ಲದಿರುವ ಕಷ್ಟದಿಂದ ಉಸಿರಾಡುತ್ತಿರುವ ಮುಖದಿಂದ ರಕ್ತವನ್ನು ಕಾರುತ್ತಿರುವ ನೆಲದಲ್ಲಿ ಬಿದ್ದಿರುವ, ಭಯಂಕರವಾದ ಅನೇಕ ನಾಯಿಗಳಿಂದ ಮತ್ತು ತೋಳ-ನರಿಗಳಿಂದ ಸಮೀಪದಲ್ಲಿ ಸುತ್ತುವರೆದಿರುವ, ಮಾಂಸವನ್ನು ತಿನ್ನಲು ಬಯಸುತ್ತಿರುವ ಅವುಗಳನ್ನು ಅತಿ ಕಷ್ಟದಿಂದ ಓಡಿಸುತ್ತಿರುವ, ತೊಡೆಗಳಿಂದ ಹೊರಳಾಡುತ್ತಿರುವ ತುಂಬಾ ವೇದನೆಯಿಂದ ನರಳುತ್ತಿರುವ ಭೂಮಿಯಲ್ಲಿ ಬಿದ್ದಿರುವ ತನ್ನ ರಕ್ತದಿಂದ ನೆನೆದುಹೋದ ಆತನನ್ನು (ದುರ್ಯೋಧನನನ್ನು) ದುಃಖಿತರಾದ ಮೃತರಾಗದೆ ಉಳಿದ ಮೂವರು (ಅಶ್ವತ್ಥಾಮ-ಕೃಪ-ಕೃತವರ್ಮರು ರಾಜನನ್ನು) ಸುತ್ತುವರೆದರು.

ತೈಸ್ತ್ರಿಭಿಃ ಶೋಣಿತಾದಿಗ್ಧೈಃ ನಿಃಶ್ವಸದ್ಭಿರ್ಮಹಾರಥೈಃ ।
ಶುಶುಭೇ ಸಂವೃತೋ ರಾಜಾ ವೇದಿಸ್ತ್ರಿಭಿರಿವಾಗ್ನಿಭಿಃ ॥೭॥

ಕೆಂಪುನೆತ್ತರಿಂದ ನೆನೆದಿರುವ ನಿಟ್ಟುಸಿರನ್ನು ಬಿಡುತ್ತಿರುವ ಆ ಮೂವರಿಂದ ಒಡಗೂಡಿರುವ ರಾಜನು ಮೂರು ಅಗ್ನಿಯುಕ್ತನಾದಂತೆ ಭಾಸನಾದನು.

ತೇ ತಂ ಶಯಾನಂ ಸಂಪ್ರೇಕ್ಷ್ಯ ರಾಜಾನಮತಥೋಚಿತಮ್ ।
ಅವಿಷಹ್ಯೇನ ದುಃಖೇನ ಸರ್ವೇ ಪ್ರರುರುದುಸ್ತ್ರಿಯಃ ॥೮॥

ಹಾಗೆ ಇರಲು ಯೋಗ್ಯವಲ್ಲದ ಅವಸ್ಥೆಯಲ್ಲಿ ಬಿದ್ದಿರುವ ಆ ರಾಜನನ್ನು ಅವರು ಕಂಡು, ಆ ಮೂವರೂ ತಡೆಯಲಾರದ ದುಃಖದಿಂದ ಗಟ್ಟಿಯಾಗಿ ರೋದಿಸಿದರು.

ತತಸ್ತೇ ರುಧಿರಂ ಹಸ್ತೈರ್ಮುಖಾನ್ನಿರ್ಮೃಜ್ಯ ತಸ್ಯ ಹ ।
ರಣೇ ರಾಜ್ಞಃ ಶಯಾನಸ್ಯ ಕೃಪಣಂ ಪರ್ಯದೇವಯನ್ ॥೯॥

ಅನಂತರದಲ್ಲಿ ಅವರು ಆತನ ಮುಖದಲ್ಲಿನ ರಕ್ತವನ್ನು ಕರಗಳಿಂದ ಒರೆಸುತ್ತಾ, ರಣರಂಗದಲ್ಲಿ ಮಲಗಿರುವ ರಾಜನ ದುರವಸ್ಥೆಯನ್ನು ಕಂಡು ಪರಿತಪಿಸಿದರು.

ಕೃಪಃ

ನ ದೈವಸ್ಯಾತಿಭಾರೋಽಸ್ತಿ ಯದಯಂ ರುಧಿರೋಕ್ಷಿತಃ ।
ಏಕಾದಶಚಮೂಭರ್ತಾ ಶೇತೇ ದುರ್ಯೋಧನೋ ಹತಃ ॥೧೦॥

ಕೃಪ- ದೈವಕ್ಕೆ ಯಾವುದೂ ಕಷ್ಟವಲ್ಲ, ಹನ್ನೊಂದು ಅಕ್ಷೋಹಿಣೀಸೇನೆಯ ಒಡೆಯನಾದ ಈತನು ರಕ್ತದಿಂದ ತೊಪ್ಪೆಯಾಗಿ (ಶತ್ರುಗಳಿಂದ) ಹತನಾಗಿ ಇಗೋ ಬಿದ್ದಿರುವನು.

ಪಶ್ಯ ಚಾಮೀಕರಾಭಸ್ಯ ಚಾಮೀಕರವಿಭೂಷಿತಾಮ್ ।
ಗದಾಂ ಗದಾಪ್ರಿಯಸ್ಯೈಮಾಂ ಸಮೀಪೇ ಪತಿತಾಂ ಭುವಿ ॥೧೧॥

ಹೊಂಬಣ್ಣವನ್ನು ಹೊಂದಿರುವ, ಹೊನ್ನಿನಿಂದ ಅಲಂಕೃತವಾಗಿರುವ ಗದೆಯನ್ನು ಪ್ರೀತಿಸುವ, ಆತನ (ದುರ್ಯೋಧನನ) ಸಮೀಪದಲ್ಲೇ ಭೂಮಿಯಲ್ಲಿ ಬಿದ್ದಿರುವ ಗದೆಯನ್ನು ನೋಡು.

ಇಯಮೇನಂ ಸದಾ ಶೂರಂ ನ ಜಹಾತಿ ರಣೇ ರಣೇ ।
ಸ್ವರ್ಗಮಾಯಾಪಿ ವ್ರಜಂತಂ ಹಿ ನ ಜಹಾತಿ ಯಶಸ್ವಿನಮ್ ॥೧೨॥

ಈ ಗದೆಯು ಪ್ರತಿ ರಣರಂಗದಲ್ಲೂ ಈ ಶೂರನನ್ನು ಬಿಟ್ಟಿರದು, ಸ್ವರ್ಗಕ್ಕೆ ಸಾಗುತ್ತಿದ್ದರೂ ಸಹ ಕೀರ್ತಿವಂತನಾದ ಆತನನ್ನು ಬಿಡುತ್ತಿಲ್ಲ.

ಪಶ್ಯೈಮಾಂ ಸಹ ವೀರೇಣ ಜಾಂಬೂನದವಿಭೂಷಿತಾಮ್ ।
ಶಯಾನಾಂ ಶಯನೇ ಧರ್ಮ್ಯಾಂ ಭಾರ್ಯಾಂ ಪ್ರೀತಿಮತೀಮಿವ ॥೧೩॥

ಹಾಸಿಗೆಯಲ್ಲಿ ಮಲಗಿರುವ ಅತಿಪ್ರೀತಿಪಾತ್ರಳಾದ ಧರ್ಮಪತ್ನಿಯಂತೆ ಈ ವೀರನ ಜೊತೆಯಲ್ಲಿರುವ, ಚಿನ್ನದಿಂದ ಅಲಂಕೃತವಾದ ಈ ಗದೆಯನ್ನು ನೋಡು.

ಯೋ ವೈ ಮೂರ್ಧಾಭಿಷಿಕ್ತಾನಾಮಗ್ರೇ ಯಾತಿ ಪರಂತಪಃ ।
ಸ ಹತೋ ಗ್ರಸತೇ ಪಾಂಸುಂ ಪಶ್ಯ ಕಾಲಸ್ಯ ಪರ್ಯಯಮ್ ॥೧೪॥

ಶತ್ರುಗಳಿಗೆ ದುಃಖಕಾರಕನಾದ ಯಾವನು ಪಟ್ಟಾಭಿಷಿಕ್ತರ ಮುಂದೆ ಸಾಗುತ್ತಿದ್ದನೋ, ಆತನು ಸಂಹೃತನಾಗಿ ಮಣ್ಣನ್ನು ಮುಕ್ಕುತ್ತಿರುವನು , ಕಾಲದ ವಿಪರ್ಯಯವನ್ನು ನೋಡು.

ಯೇನ ಸ್ಮ ನಿಹತಾ ಭೂಮೌ ಶೇರತೇ ಕ್ಷತ್ರಿಯರ್ಷಭಾಃ ।
ಸ ಭೂಮೌ ನಿಹತಃ ಶೇತೇ ಕುರುರಾಜಃ ಪರೈರಯಮ್ ॥೧೫॥

ಯಾವನಿಂದ ಮೃತರಾಗಿ ಕ್ಷತ್ರಿಯಶ್ರೇಷ್ಠರು ನೆಲಕ್ಕೆ ಉರುಳುತ್ತಿದ್ದರೋ, ಅಂತಹ ಈ ಕುರುರಾಜನು ಶತ್ರುಗಳಿಂದ ಹತನಾಗಿ ನೆಲಕ್ಕೆ ಉರುಳಿರುವನು.

ಭಯಾನ್ನಮಂತೋ ರಾಜಾನೋ ಯಸ್ಯಾಥ ಶತಸಂಘಶಃ ।
ಸ ವೀರಶಯನೇ ಶೇತೇ ಕ್ರವ್ಯಾದ್ಭಿಃ ಪರಿವಾರಿತಃ ॥೧೬॥

ನೂರಾರು ಸಂಖ್ಯೆಯಲ್ಲಿ ರಾಜರು ಯಾರಿಗೆ ಹೆದರಿ ನಮಿಸುತ್ತಿದ್ದರೋ ಆತನು ವೀರಶಯನದಲ್ಲಿ ಮಾಂಸಾಂಕಾಕ್ಷಿಗಳಿಂದ (ನರಿ ಮುಂತಾದ ಪ್ರಾಣಿಗಳಿಂದ) ಸುತ್ತುವರೆದವನಾಗಿ ಬಿದ್ದಿರುವನು.

ಯಮುಪಾಸನ್ನೃಪಾಃ ಪೂರ್ವಮರ್ಥಹೇತೋರ್ಮಹೀಪತಿಮ್ ।
ಉಪಾಸತೇ ಚ ತಂ ಹ್ಯದ್ಯ ಕ್ರವ್ಯಾದಾ ಮಾಂಸಗೃದ್ಧಿನಃ ॥೧೭॥

ಯಾವ ಮಹಾರಾಜನನ್ನು ಹಣಕ್ಕಾಗಿ ಹಿಂದೆ ರಾಜರು ಆಶ್ರಯಿಸುತ್ತಿದ್ದರೊ, ಅಂತಹ ಕುರುರಾಜನನ್ನು ಈಗ ಮಾಂಸಾಂಕಾಕ್ಷಿಗಳಾದ ಮಾಂಸಭಕ್ಷಿಗಳು (ಪ್ರಾಣಿಗಳು) ಸುತ್ತುವರೆದು ನಿಂತಿವೆ.

ಸಂಜಯಃ

ತಂ ಶಯಾನಂ ಕುರುಶ್ರೇಷ್ಠಂ ಭೂಮೌ ಭರತಸತ್ತಮಮ್ ।
ಅಶ್ವತ್ಥಾಮಾ ಸಮಾಲಿಂಗ್ಯ ಕೃಪಣಂ ಪರ್ಯದೇವಯತ್ ॥೧೮॥

ಸಂಜಯ– ಭೂಮಿಯಲ್ಲಿ ಬಿದ್ದಿರುವ ಭರತಕುಲಶ್ರೇಷ್ಠನಾದ, ಕುರುಕುಲ ಶ್ರೇಷ್ಠನಾದ ಆತನನ್ನು ಅಶ್ವತ್ಥಾಮನು ಆಲಿಂಗಿಸಿಕೊಂಡು ಪರಿಪರಿಯಿಂದ ದುಃಖಿಸಿದನು.

ದ್ರೌಣಿಃ

ಆಹುಸ್ತ್ವಾ ನರಶಾರ್ದೂಲ ಮುಖ್ಯಂ ಸರ್ವಧನುಷ್ಮತಾಮ್ ।
ಧನಾಧ್ಯಕ್ಷೋಪಮಂ ಯುದ್ಧೇ ಶಿಷ್ಯಂ ಸಂಕರ್ಷಣಸ್ಯ ಹ ॥೧೯॥

ಕಥಂ ವಿವರಮದ್ರಾಕ್ಷೀದ್ ಭೀಮಸೇನಸ್ತವಾನಘ ।
ಬಲಿನಃ ಕೃತಿನೋ ನಿತ್ಯಂ ಸೂದಃ ಪಾಪಾತ್ಮವಾನ್ ನೃಪ ॥೨೦॥

ಅಶ್ವತ್ಥಾಮ– ಪಾಪರಹಿತನೆ, ರಾಜನೆ, ಮಾನವಶ್ರೇಷ್ಠನೆ! ಎಲ್ಲ ಬಿಲ್ಲಾಳುಗಳಲ್ಲಿ ನಿನ್ನನ್ನು ಹಿರಿಯ ಎಂದು ಹೇಳುವರು, ಯುದ್ಧದಲ್ಲಿ ಕುಬೇರನಿಗೆ ಸಮನು, ಬಲರಾಮನ ಶಿಷ್ಯನು, ಬಲಿಷ್ಠನು, ನಿತ್ಯ ಯತ್ನಶೀಲನೂ ಆದ ನಿನ್ನಲ್ಲಿಯ ನ್ಯೂನತೆಯನ್ನು, ಪಾಪಿಯಾದ ಶೂದ್ರಸದೃಶನಾದ ಭೀಮನು ಹೇಗೆ ಕಂಡನು?

ಕಾಲೋ ನೂನಂ ಮಹಾರಾಜ ಲೋಕೇಽಸ್ಮಿನ್ ಬಲವತ್ತರಃ ।
ತ್ವಾಂ ಚೇತ್ ಪಶ್ಯಾಮ ನಿಹತಂ ಭೀಮಸೇನೇನ ಸಂಯುಗೇ ॥೨೧॥

ಮಹಾರಾಜ! ಭೀಮಸೇನನಿಂದ ಯುದ್ಧದಲ್ಲಿ ನೀನು ನಿಹತನಾದಿಯೆಂದಾದ ಮೇಲೆ, ನಿಶ್ಚಯವಾಗಿಯೂ ಈ ಲೋಕದಲ್ಲಿ ಕಾಲವೇ ಬಲವತ್ತರವಾದದ್ದು.

ಕಥಂ ತ್ವಾಂ ಸರ್ವಧರ್ಮಜ್ಞಂ ಕ್ಷುದ್ರಃ ಪಾಪೋ ವೃಕೋದರಃ ।
ನಿಕೃತ್ಯಾ ಹತವಾನ್ ಮಂದೋ ನೂನಂ ಕಾಲೋ ದುರತ್ಯಯಃ ॥೨೨॥

ಸರ್ವಧರ್ಮಜ್ಞನಾದ ನಿನ್ನನ್ನು ಕ್ಷುದ್ರನಾದ ದುರ್ಬಲನಾದ ಪಾಪಿ ವೃಕೋದರನು ಮೋಸದಿಂದ ಕೊಂದನು ಎಂದ ಮೇಲೆ ನಿಶ್ಚಯವಾಗಿಯೂ ಕಾಲವನ್ನು ಮೀರಲು ಆಗದು.

ಧರ್ಮಯುದ್ಧೇ ಹ್ಯಧರ್ಮೇಣ ಸಮಾಹೂಯೌಜಸಾ ಮೃಧೇ ।
ಗದಯಾ ಭೀಮಸೇನೇನ ಸಕ್ಥಿನೀ ತೇ ವಿನಾಶಿತೇ ॥೨೩॥

ಧರ್ಮಯುದ್ಧವೆಂದು ಆಹ್ವಾನಿಸಿ, ಭೀಮಸೇನನು ಅಧರ್ಮದಿಂದ ಮೋಸದಿಂದ ಗದೆಯಿಂದ ನಿನ್ನ ತೊಡೆಗಳನ್ನು ಮುರಿದನು.

ಅಧರ್ಮೇಣ ಹತಸ್ಯಾಜೌ ಮೃದ್ಯಮಾನಂ ಪದಾ ಶಿರಃ ।
ಯದುಪೇಕ್ಷಿತವಾನ್ ಕ್ಷುದ್ರೋ ಧಿಕ್ ತಮಸ್ತು ಯುಧಿಷ್ಠಿರಮ್ ॥೨೪॥

ಯುದ್ಧದಲ್ಲಿ ಅಧರ್ಮದಿಂದ (ನಿನ್ನ ತೊಡೆಯನ್ನು) ತುಂಡರಿಸಿ, ಕ್ಷುದ್ರನು (ಭೀಮಸೇನನು) ಆ ಯುಧಿಷ್ಠಿರನನ್ನು ಉಪೇಕ್ಷಿಸಿ, ಕಾಲಿನಿಂದ ನಿನ್ನ ತಲೆಯನ್ನು ತುಳಿದನು. ಆತನಿಗೆ ಧಿಕ್ಕಾರವಿರಲಿ.

ಯುದ್ಧೇಷ್ವಪವದಿಷ್ಯಂತಿ ಯೋಧಾ ನೂನಂ ವೃಕೋದರಮ್ ।
ಯಾವತ್ ಸ್ಥಾಸ್ಯಂತಿ ಭೂತಾನಿ ನಿಕೃತ್ಯಾ ಹ್ಯಸಿ ಪಾತಿತಃ ॥೨೫॥

ಎಲ್ಲಿಯವರೆಗೆ ಜೀವರು ಇರುವರೋ (ಅಲ್ಲಿಯವರೆಗೆ) 'ಯುದ್ಧದಲ್ಲಿ ಮೋಸದಿಂದ ನಿನ್ನನ್ನು ಕೆಡವಲಾಯಿತು' ಎಂದು ಯುದ್ಧದಲ್ಲಿ ಯೋಧರು ವೃಕೋದರನನ್ನು ನಿಂದಿಸುವರು.

ನನು ರಾಮೋಽಬ್ರವೀದ್ ರಾಜನ್ ತ್ವಾಂ ಸದಾ ಯದುನಂದನಃ ।
ದುರ್ಯೋಧನಸಮೋ ನಾಸ್ತಿ ಗದಾಯಾಮಿತಿ ವೀರ್ಯವಾನ್ ॥೨೬॥

ರಾಜನೆ! ಯದುನಂದನನಾದ ಬಲರಾಮನು ಯಾವಾಗಲೂ ನಿನ್ನನ್ನು ಉದ್ದೇಶಿಸಿ ಹೇಳುತ್ತಿದ್ದನು- 'ಗದಾಯುದ್ಧದಲ್ಲಿ ದುರ್ಯೋಧನನಿಗೆ ಸಮನಾದ ವೀರನು ಇಲ್ಲ' ಎಂದು.

ಶ್ಲಾಘತೇ ತ್ವಾಂ ಹಿ ವಾರ್ಷ್ಣೇಯೋ ರಾಜನ್ ಸಂಸತ್ಸು ಭಾರತ ।
ಸ ಶಿಷ್ಯೋ ಮಮ ಕೌರವ್ಯೋ ಗದಾಯುದ್ಧ ಇತಿ ಪ್ರಭೋ ॥೨೭॥

ಭರತಕುಲೋತ್ಪನ್ನನೆ, ಪ್ರಭುವೆ, ರಾಜನೆ! ನಿನ್ನನ್ನು, ' ಕುರುಕುಲೋತ್ಪನ್ನನು ಗದಾಯುದ್ಧದಲ್ಲಿ ನನ್ನ ಶಿಷ್ಯನು' ಎಂದು ವೃಷ್ಣಿಕುಲೋತ್ಪನ್ನನಾದ ಬಲಭದ್ರನು ಪ್ರಶಂಸಿಸುತ್ತಿದ್ದನು.

ಯಾಂ ಗತಿಂ ಕ್ಷತ್ರಿಯಸ್ಯಾಹುಃ ಪ್ರಶಸ್ತಾಂ ಪರಮರ್ಷಯಃ ।
ಹತಸ್ಯಾಭಿಮುಖಸ್ಯಾಜೌ ಪ್ರಾಪ್ತಸ್ತ್ವಮಸಿ ತಾಂ ಗತಿಮ್ ॥೨೮॥

ಮಹರ್ಷಿಗಳು ಯುದ್ಧದಲ್ಲಿ ಶತ್ರುವಿನ ಎದುರಿನಲ್ಲಿ ಮೃತನಾದ ಕ್ಷತ್ರಿಯನಿಗೆ ಯಾವ ಗತಿಯನ್ನು ಪ್ರಶಸ್ತ ಎಂದು ಹೇಳಿರುವರೋ, ಅಂತಹ ಗತಿಯನ್ನು ಹೊಂದುವಿ.

ದುರ್ಯೋಧನ ನ ಶೋಚಾಮಿ ತ್ವಾಮಹಂ ಭರತರ್ಷಭ ।
ಹತಪುತ್ರೌ ತು ಶೋಚಾಮಿ ಗಾಂಧಾರೀಂ ಪಿತರಂ ಚ ತೇ ॥೨೯॥

ಭರತಕುಲೋತ್ಪನ್ನನೆ, ದುರ್ಯೋಧನ! ನಿನ್ನ ಬಗ್ಗೆ ನಾನು ಯೋಚಿಸುವುದಿಲ್ಲ, ಮಕ್ಕಳನ್ನು ಕಳೆದುಕೊಂಡ ಗಾಂಧಾರಿ ಮತ್ತು ನಿನ್ನ ತಂದೆಯ ಬಗ್ಗೆ ಯೋಚಿಸುವೆನು.

ದ್ವಾವನಾಥೌ ಕೃತೌ ವೀರ ತ್ವಯಾ ನಾಥೇನ ವರ್ಧಿತೌ ।
ಭಿಕ್ಷಾಂ ತೌ ವಿಚರಿಷ್ಯೇತೇ ಶೋಚಂತೌ ಪೃಥಿವೀಮಿಮಾಮ್ ॥೩೦॥

ವೀರನೆ! ನಿನ್ನಂತಹ ನಾಥನನ್ನು ಬೆಳೆಸಿದ ಅವರೀರ್ವರು ಅನಾಥರಾದರು, ಈ ಭೂಮಿಯನ್ನು (ಸಮೃದ್ಧವಾದ ಮಹದೈಶ್ವರ್ಯವನ್ನು) ಯೋಚಿಸುತ್ತಾ ಭಿಕ್ಷೆಯನ್ನು ಯಾಚಿಸಬೇಕು.

ಧಿಗಸ್ತು ಕೃಷ್ಣಂ ವಾರ್ಷ್ಣೇಯಮರ್ಜುನಂ ಚಾಪಿ ದುರ್ಮತಿಮ್ ।
ಧರ್ಮಜ್ಞಮಾನಿನೌ ಯೌ ತ್ವಾ ವಧ್ಯಮಾನಮುಪೇಕ್ಷತಾಮ್ ॥೩೧॥

ನಿನ್ನನ್ನು ಸಂಹರಿಸುತ್ತಿರುವುದನ್ನು ಯಾರು ಉಪೇಕ್ಷಿಸಿದರೋ, ಧಾರ್ಮಿಕರು ಎಂದು ಭಾವಿಸಿರುವರೊ ಆ ವೃಷ್ಣಿಕುಲೋತ್ಪನ್ನನಾದ ಕೃಷ್ಣನನ್ನು ಮತ್ತು ದುರ್ಮತಿಯಾದ ಅರ್ಜುನನನ್ನು ಧಿಕ್ಕರಿಸುವೆನು.

ಪಾಂಡವಾಶ್ಚಾಪಿ ತೇ ಸರ್ವೇ ಕಿಂ ವಕ್ಷ್ಯಂತಿ ನರಾಧಿಪಾನ್ ।
ಕಥಂ ದುರ್ಯೋಧನೋಽಸ್ಮಾಭಿರ್ಹತ ಇತ್ಯನಪತ್ರಪಾಃ ॥೩೨॥

'ನಮ್ಮಿಂದ ದುರ್ಯೋಧನನು ಹೇಗೆ ಸಂಹೃತನಾದ?' ಎಂಬುವುದನ್ನು ನಾಚಿಕೆಯಿಲ್ಲದ ಪಾಂಡವರು ರಾಜರನ್ನು ಉದ್ದೇಶಿಸಿ ಹೇಗೆ ಹೇಳಿಕೊಳ್ಳುತ್ತಾರೆ?

ಧನ್ಯಸ್ತ್ವಮಸಿ ಗಾಂಧಾರೇ ಯಸ್ತ್ವಾಮಾಯೋಧನೇ ಹತಃ ।
ಪ್ರಯಾತೋಽಭಿಮುಖಃ ಶತ್ರೂನ್ ಧರ್ಮೇಣ ಭರತರ್ಷಭ ॥೩೩॥

ಗಾಂಧಾರೀಪುತ್ರನೆ! ಯುದ್ಧದಲ್ಲಿ ಮೃತನಾಗಿರುವಿ, ಆದ್ದರಿಂದ ನೀನು ಧನ್ಯನಾಗಿರುವಿ, ಭರತಶ್ರೇಷ್ಠನೆ! ಧರ್ಮದಿಂದ ಶತ್ರುಗಳ ಎದುರಿನಲ್ಲಿ (ಉತ್ತಮ ಲೋಕವನ್ನು ಉದ್ದೇಶಿಸಿ) ಹೊರಟಿರುವಿ.

ಹತಪುತ್ರಾ ಹಿ ಗಾಂಧಾರೀ ನಿಹತಜ್ಞಾತಿಬಾಂಧವಾ ।
ಪ್ರಜ್ಞಾಚಕ್ಷುಶ್ಚ ದುರ್ಧರ್ಷಃ ಕಾಂ ದಶಾಂ ಪ್ರತಿಪತ್ಸ್ಯತೇ ॥೩೪॥

ಮಕ್ಕಳನ್ನು ಕಳೆದುಕೊಂಡ ಜ್ಞಾತಿಬಾಂಧವರನ್ನು ಕಳೆದುಕೊಂಡ ಗಾಂಧಾರಿಯು, ಜ್ಞಾನನೇತ್ರನಾದ (ಅಂಧನಾದ) ಶತ್ರುಗಳಿಂದ ಧರ್ಷಣೆಗೆ ಒಳಗಾಗದ ಧೃತರಾಷ್ಟ್ರನು (ಅವರೀರ್ವರು) ಎಂತಹ ಅವಸ್ಥೆಯನ್ನು ಹೊಂದುವರೊ?

ಧಿಗಸ್ತು ಕೃತವರ್ಮಾಣಂ ಮಾಂ ಕೃಪಂ ಚ ಮಹಾರಥಮ್ ।
ಯೇ ವಯಂ ನ ಗತಾಃ ಸ್ವರ್ಗಂ ತ್ವಾಂ ಪುರಸ್ಕೃತ್ಯ ಭಾರತ ॥೩೫॥

ಭರತಕುಲೋತ್ಪನ್ನನೆ! ಯಾವ ನಾವು ನಿನ್ನನ್ನು ಮುಂದೆ ಮಾಡಿಕೊಂಡು ಸ್ವರ್ಗಕ್ಕೆ ಹೋಗಲಿಲ್ಲವೋ ಅಂಥ ಮಹಾರಥನಾದ ಕೃತವರ್ಮನನ್ನು, ಕೃಪನನ್ನು ಮತ್ತು ನನ್ನನ್ನು ಧಿಕ್ಕರಿಸಿಕೊಳ್ಳುವೆವು.

ದಾತಾರಂ ಸರ್ವಕಾಮಾನಾಂ ರಕ್ಷಿತಾರಂ ಪ್ರಜಾಹಿತಮ್ ।
ಯದ್ವಯಂ ನಾಧಿಗಚ್ಛಾಮ ತ್ವಾಂ ಧಿಗಸ್ಮಾನ್ ನರಾಧಮಾನ್ ॥೩೬॥

ಎಲ್ಲ ಕಾಮನೆಗಳನ್ನು ಪೂರ್ಣಗೊಳುಸುತ್ತಿದ್ದ, ಪ್ರಜೆಗಳ ಹಿತವನ್ನು ಕಾಪಾಡುತ್ತಿದ್ದ ನಿನ್ನನ್ನು ಅನುಸರಿಸದ ಕೀಳು ಮನುಜರಾದ ಈ ನಮಗೆ ಧಿಕ್ಕಾರವಿರಲಿ.

ಕೃಪಸ್ಯ ತವ ಏಯರ್ಸ್ಯೇಣ ಮಮ ಚೈವ ಪಿತುಶ್ಚ ಮೇ ।
ಸಭೃತ್ಯಾನಾಂ ನರವ್ಯಾಘ್ರ ರತ್ನವಂತಿ ಗೃಹಾಣಿ ನಃ ॥೩೭॥

ಮನುಜಶ್ರೇಷ್ಠನೆ! ನಿನ್ನ ಅನುಗ್ರಹದಿಂದ ಕೃಪನಿಗೆ, ನನ್ನ ತಂದೆಗೂ ಸಹ ಹಾಗು ನಮ್ಮ ಭೃತ್ಯವರ್ಗಕ್ಕೂ ರತ್ನಯುಕ್ತವಾದ ಮನೆಗಳು ಲಭ್ಯವಾಗಿದ್ದವು.

ತವ ಪ್ರಸಾದಾದಸ್ಮಾಭಿಃ ಸಹಪುತ್ರೈಃ ಸಬಾಂಧವೈಃ ।
ಅವಾಪ್ತಾಃ ಕ್ರತವೋ ಮುಖ್ಯಾ ಬಹವೋ ಭೂರಿದಕ್ಷಿಣಾಃ ॥೩೮॥

ನಿನ್ನ ಅನುಗ್ರಹದಿಂದ ಪುತ್ರಸಹಿತರಾದ, ಬಂಧುಸಹಿತರಾದ ನಾವು ಭಾರೀ ದಕ್ಷಿಣಾಸಹಿತವಾದ ಅತಿಮುಖ್ಯವಾದ ಅನೇಕ ಯಜ್ಞಗಳನ್ನು ನಡೆಸಿದೆವು.

ಕುತಶ್ಚಾಪೀದೃಶಂ ಸೌಖ್ಯಮುಪಲಪ್ಸ್ಯಾಮಹೇ ವಯಮ್ ।
ಯಾದೃಶಂ ತು ಗತಾ ಸೌಖ್ಯಂ ತ್ವಾಂ ಪುರಸ್ಕೃತ್ಯ ಭೂಮಿಪ ॥೩೯॥

ಭೂಮಿಪಾಲನೆ! ನಿನ್ನ ಮುಂದಾಳುತನದಲ್ಲಿ ನಾವು ಯಾವ ರೀತಿಯಾದ ಸೌಖ್ಯವನ್ನು ಹೊಂದಿದ್ದೆವೋ, ಇನ್ನು ಅಂತಹ ಸೌಖ್ಯವನ್ನು ಹೊಂದಲು ಹೇಗೆ ಶಕ್ಯ?

ವಯಮೇವ ತ್ರಯೋ ರಾಜನ್ ಗಚ್ಛಂತಂ ಪರಮಾಂ ಗತಿಮ್ ।
ಯದ್ವೈ ತ್ವಾಂ ನಾನುಗಚ್ಛಾಮ ತೇನ ತಪ್ಸ್ಯಾಮಹೇ ವಯಮ್ ॥೪೦॥

ರಾಜನೆ! ಶ್ರೇಷ್ಠಗತಿಯನ್ನು ಹೊಂದುತ್ತಿರುವ ನಿನ್ನನ್ನು, ನಾವು ಮೂವರು ಮಾತ್ರ ಅನುಸರಿಸಲಾರೆವು, ಆದ್ದರಿಂದ ನಾವು ಪರಿತಪಿಸುತ್ತಿರುವೆವು.

ಯಾದೃಶಾ ನೋ ಗತಾಃ ಸ್ವರ್ಗಂ ತ್ವಾಂ ಪುರಸ್ಕೃತ್ಯ ಭೂಮಿಪ ।
ತತ್ಸ್ವರ್ಗಹೀನಾ ಹೀನಾರ್ಥಾಃ ಸ್ಮರಂತಃ ಸುಕೃತಾನಿ ಚ ॥೪೧॥

ಭೂಮಿಯ ಒಡೆಯನೆ! ನಿನ್ನನ್ನು ಮುಂದೆ ಮಾಡಿಕೊಂಡು ಅಂತಹ ಸ್ವರ್ಗಕ್ಕೆ ನಾವು ಹೊಗಲಿಲ್ಲ, ಹೀಗೆ ಸ್ವರ್ಗದಿಂದ ವಂಚಿತರಾದ ನಾವು (ಇನ್ನು ಮುಂದೆ) ನಿನ್ನ ಸತ್ಕರ್ಮಗಳನ್ನು ನೆನೆಯುತ್ತಾ ಸಂಪತ್ತಿನಿಂದಲೂ ಹೀನರಾಗುವೆವು.

ಕಿಂ ನಾಮ ತದ್ಭವೇತ್ ಕರ್ಮ ಯೇನ ತ್ವಾಽನು ವ್ರಜಾಮಹೇ ॥೪೨॥

ದುಃಖಂ ನೂನಂ ಕುರುಶ್ರೇಷ್ಠ ಚರಿಷ್ಯಾಮ ಮಹೀಮಿಮಾಮ್ ।
ತ್ವದ್ಹೀನಾನಾಂ ಹಿ ನೋ ರಾಜನ್ ಕುತಃ ಶಾಂತಿಃ ಕುತಃ ಸುಖಮ್ ॥

ರಾಜನೆ! ಕುರುಶ್ರೇಷ್ಠನೆ! ಯಾವ ಕರ್ಮವನ್ನು ಆಚರಿಸಿದಲ್ಲಿ ನಾವು ನಿನ್ನನ್ನು ಅನುಸರಿಸುವೆವು? ನಿನ್ನಿಂದ ವಿರಹಿತರಾದ ಈ ಭೂಮಿಯಲ್ಲಿ ಸಂಚರಿಸುವ (ನಮಗೆ) ನಿಶ್ಚಯವಾಗಿಯೂ ಬಹುದುಃಖ, (ಇನ್ನು) ಎಲ್ಲಿಯ ಶಾಂತಿ? ಎಲ್ಲಿಯ ಸುಖ?

ಗತ್ವೈನಾಂಸ್ತು ಮಹಾರಾಜ ಸಮೇತ್ಯ ತ್ವಂ ಮಹಾರಥಾನ್ ।
ಯಥಾಶ್ರೇಷ್ಠಂ ಯಥಾಜ್ಯೇಷ್ಠಂ ಸಂಪೂಜ್ಯ ವಚನಾನ್ಮಮ ॥೪೪॥

ಆಚಾರ್ಯಂ ಪೂಜಯಿತ್ವಾ ಚ ಕೇತುಂ ಸರ್ವಧನುರ್ಭೃತಾಮ್ ।
ಹತಂ ಮಯಾ ತ್ವಂ ಶಂಸೇಥಾ ಧೃಷ್ಟದ್ಯುಮ್ನಂ ಮಹಾರಥಮ್ ॥೪೫॥

ಮಹಾರಾಜನೆ! ಈ ಮಹಾರಾಜರನ್ನು (ಸ್ವರ್ಗದಲ್ಲಿ) ಹೊಂದಿ ನನ್ನ ಮಾತಿನಂತೆ ಹಿರಿತನಕ್ಕೆ ಅನುಸಾರವಾಗಿ (ಅವರುಗಳನ್ನು) ಸನ್ಮಾನಿಸಿ, ನೀನು ಎಲ್ಲ ಬಿಲ್ಲಾಳುಗಳಲ್ಲಿ ಹಿರಿಯನಾದ ಆಚಾರ್ಯನನ್ನು (ದ್ರೋಣರನ್ನು) ಪೂಜಿಸಿ, 'ನಾನು ಮಹಾರಥಿಕನಾದ ಧೃಷ್ಟದ್ಯುಮ್ನನನ್ನು ಸಂಹರಿಸಿರುವೆನು' ಎಂದು ತಿಳಿಸುವವನಾಗು.

ಪರಿಷ್ವಜೇಥಾ ರಾಜಾನಂ ಬಾಹ್ಲಿಕಂ ಚ ಮಹಾರಥಮ್ ।
ಸೈಂಧವಂ ಸೋಮದತ್ತಂ ಚ ಭೂರಿಶ್ರವಸಮೇವ ಚ ॥೪೬॥

ತಥಾ ಪೂರ್ವಗತಾನ್ ಸರ್ವಾನ್ ಸ್ವರ್ಗೇ ಪಾರ್ಥಿವಸತ್ತಮಾನ್ ।
ಅಸ್ಮಾದ್ವಾಕ್ಯಾತ್ ಪರಿಷ್ವಜ್ಯ ಪೃಚ್ಛೇಥಾಸ್ತಾನನಾಮಯಮ್ ॥೪೭॥

ಮಹಾರಥಿಕನಾದ ರಾಜನಾದ ಬಾಹ್ಲೀಕನನ್ನು ಹಾಗೂ ಸೈಂಧವನನ್ನು ಸೋಮದತ್ತನನ್ನು ಮತ್ತು ಭೂರಿಶ್ರವನನ್ನು ಆಲಿಂಗಿಸಿ, ಹಾಗೆ ಈ ಮೊದಲೇ ಸ್ವರ್ಗಕ್ಕೆ ಹೋಗಿರುವ ಎಲ್ಲ ರಾಜಶ್ರೇಷ್ಠರನ್ನು ಆಲಿಂಗಿಸಿಕೊಂಡು ನನ್ನ ಮಾತಿನಿಂದ ಅವರ ಆರೋಗ್ಯವನ್ನು ಪ್ರಶ್ನಿಸುವುದು.

ಸಂಜಯಃ

ಇತ್ಯೇವಮುಕ್ತ್ವಾ ರಾಜಾನಂ ಭಗ್ನಸಕ್ಥಮಚೇತಸಮ್ ।
ಅಶ್ವತ್ಥಾಮಾ ಲಘುಪ್ರಾಣಮ್ ಇದಂ ವಚನಮಬ್ರವೀತ್ ॥೪೮॥

ಸಂಜಯ– ತೊಡೆಮುರಿದುಕೊಂಡಿರುವ, ನಿಶ್ಚೇಷನಾದ ರಾಜನನ್ನು ಉದ್ದೇಶಿಸಿ ಹೀಗೆ ಹೇಳಿ, ಕುಟುಕುಜೀವಿಯನ್ನು ಉದ್ದೇಶಿಸಿ ಈ ಮಾತುಗಳನ್ನು ಹೇಳಿದನು.

ದ್ರೌಣಿಃ

ದುರ್ಯೋಧನ ಜೀವಸಿ ಚೇದ್ ವಾಚಃ ಕರ್ಣಸುಖಾಃ ಶೃಣು ।
ಸಪ್ತ ಪಾಂಡವತಃ ಶಿಷ್ಟಾ ಧಾರ್ತರಾಷ್ಟ್ರಾಸ್ತ್ರಯೋ ವಯಮ್ ॥೪೯॥

ತೇ ಚೈವ ಭ್ರಾತರಃ ಪಂಚ ವಾಸುದೇವೋಽಥ ಸಾತ್ಯಕಿಃ ।
ಅಹಂ ಚ ಕೃತವರ್ಮಾ ಚ ಕೃಪಃ ಶಾರದ್ವತಸ್ತಥಾ ॥೫೦॥

ಅಶ್ವತ್ಥಾಮ– ದುರ್ಯೋಧನ! ಬದುಕಿದ್ದಿಯಾದಲ್ಲಿ ಕಿವಿಗೆ ಸುಖಕರವಾದ ಮಾತುಗಳನ್ನು ಕೇಳು. ಪಾಂಡವರಲ್ಲಿ ಏಳು ಮಂದಿ ಆ ಐವರು ಸಹೋದರರು, ವಾಸುದೇವ ಮತ್ತು ಸಾತ್ಯಕಿ, ಕೌರವರಲ್ಲಿ ನಾವು ಮೂವರು, ನಾನು, ಕೃತವರ್ಮ ಶರದ್ವತರ ಪುತ್ರನಾದ ಕೃಪ ಮಾತ್ರ ಉಳಿದುಕೊಂಡಿರುವುದು.

ದ್ರೌಪದೇಯಾ ಹತಾಃ ಸರ್ವೇ ಧೃಷ್ಟದ್ಯುಮ್ನಶ್ಚ ಚಾತ್ಮಜಾಃ ।
ಪಾಂಚಾಲೈಃ ಸಹಿತಾ ರಾಜನ್ ಮತ್ಸ್ಯಶೇಷಾಶ್ಚ ಭಾರತ ॥೫೧॥

ಭರತಕುಲೋತ್ಪನ್ನನೆ, ರಾಜನೆ! ಎಲ್ಲ ದ್ರೌಪದಿಯ ಪುತ್ರರು, ಧೃಷ್ಟದ್ಯುಮ್ನನು, ಆತನ ಪುತ್ರರು, ಪಾಂಚಾಲರಿಂದ ಸಹಿತರಾದ ಉಳಿದ ಮತ್ಸ್ಯದೇಶೀಯರೂ ಸಹ ಮೃತರಾದರು.

ಕೃತಪ್ರತಿಕೃತಂ ಪಶ್ಯ ಹತಪುತ್ರಾಶ್ಚ ಪಾಂಡವಾಃ ।
ಸೌಪ್ತಿಕೇ ಶಿಬಿರಂ ರಾಜನ್ ಹತಂ ಸನರವಾಹನಮ್ ॥೫೨॥

ನೋಡು, ಕ್ರಿಯೆಗೆ ಪ್ರತಿಕ್ರಿಯೆಯನ್ನು ಮಾಡಿರುವೆ, ಪಾಂಡವರು ಮಕ್ಕಳನ್ನು ಕಳೆದುಕೊಂಡರು, ರಾಜನೆ! ಅವರೆಲ್ಲರು ಮಲಗಿದ ಸಂದರ್ಭದಲ್ಲಿ ಮನುಷ್ಯರು ವಾಹನಗಳು ಇವುಗಳಿಂದ ಸಹಿತವಾದ ಶಿಬಿರವನ್ನು ನಾಶಮಾಡಲಾಯಿತು.

ಮಯಾ ಚ ಪಾಪಕರ್ಮಾಽಸೌ ಧೃಷ್ಟದ್ಯುಮ್ನೋ ಮಹೀಪತೇ ।
ಪ್ರವಿಶ್ಯ ಶಿಬಿರಂ ರಾತ್ರೌ ಪಶುಮಾರೇಣ ಮಾರಿತಃ ॥೫೩॥

ಭೂಮಿಯ ಒಡೆಯನೆ! ಪಾಪಕರ್ಮಿಯಾದ ಆ ಧೃಷ್ಟದ್ಯುಮ್ನನನ್ನು ರಾತ್ರಿಯಲ್ಲಿ ಶಿಬಿರವನ್ನು ಪ್ರವೇಶಿಸಿ, ಪಶುವನ್ನು ಸಂಹರಿಸುವಂತೆ ನಾನು ಸಂಹರಿಸಿರುವೆನು.

ಸಂಜಯಃ

ದುರ್ಯೋಧನಸ್ತು ತಾ ವಾಚೋ ನಿಶಮ್ಯ ಮನಸಃ ಪ್ರಿಯಾಃ ।
ಪ್ರತಿಲಭ್ಯ ತತಶ್ಚೇತ ಇದಂ ವಚನಮಬ್ರವೀತ್ ॥೫೪॥

ಸಂಜಯ– ಮನಸಿಗೆ ಮುದನೀಡುವ ಆ ಮಾತುಗಳನ್ನು ದುರ್ಯೋಧನನು ಕೇಳಿ, ಸ್ವಲ್ಪ ಜೀವವನ್ನು ಹೊಂದಿದವನಾಗಿ ಈ ಮಾತನ್ನು ಹೇಳಿದನು.

ದುರ್ಯೋಧನಃ

ನ ಮೇऽಕರೋತ್ ತದ್ ಗಾಂಗೇಯೋ ನ ಮೇ ಕರ್ಣೋ ನ ತೇ ಪಿತಾ ।
ಯತ್ ತ್ವಯಾ ಕೃಪಭೋಜಾಭ್ಯಾಂ ಸಹಿತೇನ ಕೃತಂ ಮಮ ॥೫೫॥

ದುರ್ಯೋಧನ– ಕೃಪ ಮತ್ತು ಭೋಜವಂಶಜನೊಂದಿಗೆ ಸೇರಿಕೊಂಡು ನನಗಾಗಿ ಯಾವ ಕರ್ಮವನ್ನು ಮಾಡಿದೆಯೋ, ಆ ಕರ್ಮವನ್ನು ಗಂಗಾಪುತ್ರನೂ ಮಾಡಲಿಲ್ಲ, ಕರ್ಣನೂ ಮಾಡಲಿಲ್ಲ, ನಿನ್ನ ತಂದೆಯೂ ಮಾಡಲಿಲ್ಲ.

ಸ ಚೇತ್ ಸೇನಾಪತಿಃ ಕ್ಷುದ್ರೋ ಹತಃ ಸಾರ್ಧಂ ಶಿಖಂಡಿನಾ ।
ತೇನ ಮನ್ಯೇ ಮಘವತಾ ಸಮಮಾತ್ಮಾನಮದ್ಯ ವೈ ॥೫೬॥

'ಶಿಖಂಡಿಯಿಂದ ಸಹಿತನಾದ ಕ್ಷುದ್ರನಾದ ಆ ಸೇನಾಪತಿಯು ಹತನಾದದ್ದೇ ಆದಲ್ಲಿ, ಅದರಿಂದ ನಾನು ಇಂದು ಇಂದ್ರನಿಗೆ ಸಮನು' ಎಂದು ಭಾವಿಸುವೆನು.

ಸ್ವಸ್ತಿ ಪ್ರಾಪ್ನುತ ಭದ್ರಂ ವಃ ಸ್ವರ್ಗೇ ನಃ ಸಂಗಮಃ ಪುನಃ ॥೫೭॥

ನಿಮಗೆ ಮಂಗಲವಾಗಲಿ, ಪುನಃ ನಮ್ಮ ಸಮಾಗಮವು ಸ್ವರ್ಗದಲ್ಲಾಗಲಿ.

ಸಂಜಯಃ

ಇತ್ಯೇವಮುಕ್ತ್ವಾ ಪುತ್ರಸ್ತೇ ಕುರುರಾಜೋ ಮಹಾಮನಾಃ ।
ಪ್ರಾಣಾನವಾಸೃಜದ್ ವೀರಃ ಸುಹೃದಾಂ ದುಃಖಮಾದಧತ್ ॥೫೮॥

ಸಂಜಯ– ನಿನ್ನ ಪುತ್ರನಾದ ವೀರನಾದ ಸ್ವಾಭಿಮಾನಿಯಾದ ಕುರುರಾಜನು ಹೀಗೆ ಹೇಳುತ್ತಾ, ಸ್ನೇಹಿತರಿಗೆ ದುಃಖವನ್ನು ಉಂಟುಮಾಡುತ್ತಾ ಪ್ರಾಣವನ್ನು ಬಿಟ್ಟನು.

ತತಸ್ತೇ ಸಂಪರಿಷ್ವಜ್ಯ ಪರಿಮೃಜ್ಯ ಚ ತಂ ಭೃಶಮ್ ।
ಪುನಃ ಪುನಃ ಪ್ರೇಕ್ಷಮಾಣಾಃ ಸ್ವಕಾನಾರುರುಹೂ ರಥಾನ್ ॥೫೯॥

ಅನಂತರದಲ್ಲಿ ಅವರು ಆತನನ್ನು ಗಾಢವಾಗಿ ಆಲಿಂಗನ ಮಾಡಿಕೊಂಡು, ದುಃಖಿಸುತ್ತಾ, ಮತ್ತೆ ಮತ್ತೆ (ಆತನನ್ನೇ) ನೋಡುತ್ತಾ ತಮ್ಮ ರಥಗಳನ್ನು ಏರಿದರು.

ಇತ್ಯೇವಂ ದ್ರೋಣಪುತ್ರಸ್ಯ ನಿಶಮ್ಯ ಕರುಣಾ ಗಿರಃ ।
ಪ್ರತ್ಯೂಷಕಾಲೇ ಶೋಕಾರ್ತಾಃ ಪ್ರಾದ್ರವನ್ ನಗರಂ ಪ್ರತಿ ॥೬೦॥

ಈ ರೀತಿಯಾಗಿ ದ್ರೋಣಪುತ್ರನ ಕರುಣಾಪೂರ್ಣವಾದ ಮಾತನ್ನು ಕೇಳುತ್ತಾ ದುಃಖದಿಂದ ಶೋಕಿಸುವವರಾಗಿ, ಬೆಳಗಿನಮುಂಚೆ (ಆ ಮೂವರು) ನಗರದ ಕಡೆಗೆ ಧಾವಿಸಿದರು.

ಏವಮೇಷ ಕ್ಷಯೋ ವೃತ್ತಃ ಕುರುಪಾಂಡವಸೇನಯೋಃ ।
ಘೋರೋ ವಿಶಸನೋ ರೌದ್ರೋ ರಾಜನ್ ದುರ್ಮಂತ್ರಿತೇ ತವ ॥೬೧॥

ರಾಜನೆ! ನಿನ್ನ ಕೆಟ್ಟ ವಿಚಾರದಿಂದ ಈ ರೀತಿಯಾಗಿ ಕುರುಪಾಂಡವರ ಸೇನೆಯ ಭಯಂಕರವಾದ ಘೋರವಾದ ನಾಶವು ಸಂಭವಿಸಿತು.

ತವ ಪುತ್ರೇ ಗತೇ ಸ್ವರ್ಗಂ ಭಾರತೇ ಭರತರ್ಷಭ ।
ಋಷಿದತ್ತಂ ಪ್ರನಷ್ಟಂ ತದ್ ದಿವ್ಯದರ್ಶಿತ್ವಮದ್ಯ ವೈ ॥೬೨॥

ಭರತವಂಶದ ಹಿರಿಯನೆ! ಭರತಕುಲೋತ್ಪನ್ನನಾದ ನಿನ್ನ ಪುತ್ರನು ಸ್ವರ್ಗಕ್ಕೆ ಸಾಗಲು, ಋಷಿಗಳು ನನಗೆ ಅನುಗ್ರಹಿಸಿದ ಆ ದಿವ್ಯ ದೃಷ್ಟಿಯು ನಷ್ಟವಾಯಿತು.

ವೈಶಂಪಾಯನಃ

ಇತಿ ಶ್ರುತ್ವಾ ಸ ನೃಪತಿಃ ಜ್ಞಾತಿಪುತ್ರವಧಂ ತದಾ ।
ನಿಃಶ್ವಸ್ಯ ದೀರ್ಘಮುಷ್ಣಂ ಚ ತತಶ್ಚಿಂತಾಪರೋಽಭವತ್ ॥೬೩॥

ವೈಶಂಪಾಯನ– ಆ ರಾಜನು ಈರೀತಿಯಾದ ಜ್ಞಾತಿಗಳ ಮಕ್ಕಳ ನಾಶವನ್ನು ಕೇಳಿ, ಆಗ ದೀರ್ಘವಾಗಿ ಬಿಸಿಯಾದ ನಿಟ್ಟುಸಿರನ್ನು ಬಿಡುತ್ತಾ, ಅನಂತರದಲ್ಲಿ ಚಿಂತಾಕ್ರಾಂತನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸೌಪ್ತಿಕಪರ್ವಣಿ ದುರ್ಯೋಧನಮರಣೋ ನಾಮ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸೌಪ್ತಿಕಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಸೌಪ್ತಿಕಪರ್ವ ॥

★ ★ ★ ★ ★

ಐಷೀಕಪರ್ವ

ಒಂದನೆಯ ಅಧ್ಯಾಯ

ಅದೃಷ್ಟವಶಾತ್ ಬದುಕುಳಿದ ಧೃಷ್ಟದ್ಯುಮ್ನನ ಸಾರಥಿಯು
ಆ ರಾತ್ರಿಯಲ್ಲಿ ಸೇನಾಶಿಬಿರದ ಸುದ್ದಿಯನ್ನು ಧರ್ಮರಾಜನಿಗೆ ಅರುಹಿದನು.
ಕೇಳಿದ ಧರ್ಮರಾಜನು ಶಿಬಿರಕ್ಕೆ ಆಗಮಿಸಿದನು. ಮೃತರಾದವರನ್ನು
ಕಂಡು ದುಃಖಿಸಿದನು. ದ್ರೌಪದಿಯನ್ನು ಅಲ್ಲಿಗೆ ಕರೆದುತರಲು
ನಕುಲನಿಗೆ ಆದೇಶಿಸಿದನು.

ವೈಶಂಪಾಯನಃ

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ಧೃಷ್ಟದ್ಯುಮ್ನಸ್ಯ ಸಾರಥಿಃ ।
ಶಶಂಸ ಧರ್ಮರಾಜಾಯ ಸೌಪ್ತಿಕೇ ಕದನಂ ಕೃತಮ್ ॥೧॥

ವೈಶಂಪಾಯನರು– ಆ ರಾತ್ರಿಯು ಕಳೆಯಲು ಧೃಷ್ಟದ್ಯುಮ್ನನ ಸಾರಥಿಯು ಮಲಗಿದಾಗ ಶಿಬಿರದಲ್ಲಿ ನಡೆದ ಕದನದ ವಾರ್ತೆಯನ್ನು ಧರ್ಮರಾಜನಿಗೆ ತಿಳಿಸಿದನು.

ಸೂತಃ

ದ್ರೌಪದೇಯಾ ಹತಾ ರಾಜನ್ ದ್ರುಪದಸ್ಯಾತ್ಮಜೈಃ ಸಹ ।
ಪ್ರಮತ್ತಾ ನಿಶಿ ವಿಶ್ವಸ್ತಾಃ ಸ್ವಪಂತಃ ಶಿಬಿರೇ ಸ್ವಕೇ ॥೨॥

ಸೂತನು- ನಿಶ್ಚಿಂತರಾಗಿ ಮೈಮರೆತು ತಮ್ಮ ತಮ್ಮ ಶಿಬಿರದಲ್ಲಿ ಮಲಗಿದ್ದ ದ್ರೌಪದಿಯ ಪುತ್ರರು, ದ್ರುಪದರಾಜ, ಆತನ ಪುತ್ರರೂ ಸಂಹೃತರಾದರು.

ಗೌತಮೇನ ನೃಶಂಸೇನ ಭೋಜೇನ ಕೃತವರ್ಮಣಾ ।
ಅಶ್ವತ್ಥಾಮ್ನಾ ಚ ಪಾಪೇನ ಹತಂ ವಃ ಶಿಬಿರಂ ನಿಶಿ ॥೩॥

ಕ್ರೂರನಾದ ಗೌತಮಗೋತ್ರೋತ್ಪನ್ನನಿಂದ (ಕೃಪಾಚಾರ್ಯನಿಂದ), ಭೋಜವಂಶೀಯನಾದ ಕೃತವರ್ಮನಿಂದ ಮತ್ತು ಪಾಪಿಯಾದ ಅಶ್ವತ್ಥಾಮನಿಂದ ರಾತ್ರಿಯಲ್ಲಿನಿನ್ನ ಶಿಬಿರವು ನಾಶವಾಯಿತು.

ಏತೈರ್ನರಗಜಾಶ್ವಾನಾಂ ಪ್ರಾಸಶಕ್ತಿಪರಶ್ವಧೈಃ ।
ಸಹಸ್ರಾಣಿ ನಿಕೃಂತದ್ಭಿರ್ನಿಃಶೇಷಂ ಶಿಬಿರಂ ಕೃತಮ್ ॥೪॥

ಈ ಮೂವರು (ಅಶ್ವತ್ಥಾಮಾದಿಗಳು) ಸಾವಿರಾರು ಆನೆ-ಕುದುರೆಗಳನ್ನು ಪ್ರಾಸ-ಶಕ್ತಿ-ಕುಡಗೋಲುಗಳಿಂದ ಕತ್ತರಿಸುತ್ತಾ, ಶಿಬಿರವನ್ನು ನಿಶ್ಶೇಷಗೊಳಿಸಿದರು.

ಛಿದ್ಯಮಾನಸ್ಯ ಮಹತೋ ವನಸ್ಯೇವ ಪರಶ್ವಧೈಃ ।
ಶುಶ್ರುವೇ ಸುಮಹಾನ್ ಶಬ್ದೋ ಬಲಸ್ಯ ತವ ಭಾರತ ॥೫॥

ಭರತವಂಶದಲ್ಲಿ ಹುಟ್ಟಿದವನೆ! ಕೊಡಲಿಯಿಂದ ವನವನ್ನು ಕತ್ತರಿಸಿದಂತೆ ಶಿಬಿರವು ನಾಶವಾಗುತ್ತಿರಲು, ನಿನ್ನ ಸೇನೆಯಿಂದ ಭಾರೀಶಬ್ದವನ್ನು ಕೇಳಿದೆ.

ಅಹಮೇವಾವಶಿಷ್ಟಸ್ತು ತಸ್ಮಾತ್ ಸೈನ್ಯಾನ್ಮಹೀಪತೇ ।
ಮುಕ್ತಃ ಕಥಂಚಿದ್ ಧರ್ಮಾತ್ಮನ್ ವ್ಯಗ್ರೇಣ ಕೃತವರ್ಮಣಾ ॥೬॥

ಧರ್ಮಾತ್ಮನಾದ ಹೇ ಮಹಾರಾಜನೆ! ಆದರೆ, ಆ ಸೇನೆಯಿಂದ ನಾನು ಮಾತ್ರ ಬೇರೆಡೆಯಲ್ಲಿ ಲಕ್ಷ್ಯವಿರುವ ಕೃತವರ್ಮನಿಂದ ಹೇಗೋ ಮುಕ್ತನಾದೆ.

ವೈಶಂಪಾಯನಃ

ತಚ್ಛ್ರುತ್ವಾ ವಾಕ್ಯಮಶಿವಂ ಕುಂತೀಪುತ್ರೋ ಯುಧಿಷ್ಠಿರಃ ।
ಪಪಾತ ಮುಹ್ಯನ್ ದುರ್ಧರ್ಷಃ ಪುತ್ರಶೋಕಸಮನ್ವಿತಃ ॥೭॥

ವೈಶಂಪಾಯನರು– ಅನ್ಯರಿಂದ ಧರ್ಷಣಕ್ಕೆ ಒಳಗಾಗದ ಕುಂತೀಪುತ್ರನಾದ ಯುಧಿಷ್ಠಿರನು ಅಮಂಗಳಕರವಾದ ಆ ಮಾತನ್ನು ಕೇಳಿ, ಪುತ್ರಶೋಕದಿಂದ ಪರಿತಪ್ತನಾಗಿ ಮೂರ್ಛಿತನಾಗಿ ಬಿದ್ದನು.

ಪತಂತಂ ತಮತಿಕ್ರಮ್ಯ ಪರಿಜಗ್ರಾಹ ಸಾತ್ಯಕಿಃ ।
ಭೀಮಸೇನೋऽರ್ಜುನಶ್ಚೈವ ಮಾದ್ರೀಪುತ್ರೌ ಚ ಪಾಂಡವೌ ॥೮॥

ಬೀಳುತ್ತಿರುವ ಆತನನ್ನು ಪಾಂಡುಪುತ್ರರಾದ ನಕುಲ-ಸಹದೇವರು, ಭೀಮಸೇನ, ಅರ್ಜುನ ಮತ್ತು ಸಾತ್ಯಕಿಯರು ಮುನ್ನುಗ್ಗಿ ಹಿಡಿದುಕೊಂಡರು.

ಲಬ್ಧಚೇತಾಸ್ತು ಕೌಂತೇಯಃ ಶೋಕವಿಹ್ವಲಯಾ ಗಿರಾ ।
ಜಿತ್ವಾ ಶತ್ರೂನ್ ಜಿತಃ ಪಶ್ಚಾತ್ ಪರ್ಯದೇವಯದಾರ್ತವಮ್ ॥೯॥

ಎಚ್ಚರಗೊಂಡ ಕುಂತೀಪುತ್ರನು (ಧರ್ಮರಾಜನು) ಶತ್ರುಗಳನ್ನು ಜಯಿಸಿ, ನಂತರ ಸೋತೆನು ಎಂದು ಆರ್ತನಾಗಿ ದುಃಖದಿಂದ ನಡುಗು ಧ್ವನಿಯಿಂದ ರೋದಿಸಿದನು.

ಯುಧಿಷ್ಠಿರಃ

ಅಗಮ್ಯಾ ಗತಿರರ್ಥಾನಾಂ ಕರ್ಮಣಾಮೀಶ್ವರಸ್ಯ ಚ ।
ದುರ್ವಿಜ್ಞೇಯಾ ಗತಿರ್ಹ್ಯೇಷಾಮಪಿ ಯೇ ದಿವ್ಯಚಕ್ಷುಷಃ ॥೧೦॥

ಯುಧಿಷ್ಠಿರ– ಯಾರು ದಿವ್ಯಜ್ಞಾನಿಗಳೋ ಅವರಿಗೂ ಸಹ ಅರ್ಥದ (ಪ್ರಯೋಜನದ) ಹಾದಿಯು ತಿಳಿಯಲು ಅಸದಳ. ಈಶ್ವರನ ಈ ಕರ್ಮಗಳ ರಹಸ್ಯವನ್ನು ತಿಳಿಯುವುದು ಅಸದಳ.

ಜೀಯಮಾನಾ ಜಯಂತ್ಯನ್ಯೇ ಜಯಮಾನಾ ವಯಂ ಜಿತಾಃ ॥೧೧॥

ಬೇರೆಯವರು (ಶತ್ರುಗಳು) ಸೋತಿದ್ದರೂ ಗೆದ್ದರು, ನಾವು ಗೆದ್ದಿದ್ದರೂ ಸೋತೆವು.

ಹತ್ವಾ ಭ್ರಾತೄನ್ ವಯಸ್ಯಾಂಶ್ಚ ಪಿತೄನ್ ಭೃತ್ಯಾನ್ ಸುಹೃದ್ಗಣಾನ್ ।
ಬಂಧೂನಮಾತ್ಯಾನ್ ಪೌತ್ರಾಂಶ್ಚ ಜಿತ್ವಾ ಸರ್ವಾನ್ ಜಿತಾ ವಯಮ್ ॥

ಅಣ್ಣಂದಿರನ್ನು, ಸ್ನೇಹಿತರನ್ನು, ಪಿತೃಸಮಾನರನ್ನು, ಭೃತ್ಯರನ್ನು, ಮಿತ್ರಸಮೂಹವನ್ನು, ಬಂಧುಗಳನ್ನು, ಮಂತ್ರಿಗಳನ್ನು, ಮೊಮ್ಮಕ್ಕಳನ್ನು ಮತ್ತು ಎಲ್ಲರನ್ನು ಸಂಹರಿಸಿ ಗೆದ್ದ ನಾವು (ಈಗ) ಸೋತೆವು.

ಅನರ್ಥಾ ಹ್ಯರ್ಥಸಂಕಾಶಾಃ ತಥಾऽನರ್ಥೋ೯ऽರ್ಥದರ್ಶನಃ ।
ಜಯೋऽಯಮಜಯಾಕಾರೋ ಜಯಸ್ತಸ್ಮಾತ್ ಪರಾಜಯಃ ॥೧೩॥

ಹಲವು ಸಂದರ್ಭಗಳಲ್ಲಿ ಸಂಪತ್ತು ಅನರ್ಥರೂಪದ್ದಾಗಿರುವುದು, ಹಾಗೆಯೇ ಅನರ್ಥವು ಸಂಪತ್ತಿನಂತಾಗಿರುವುದು, ಜಯವು ಪರಾಜಯದಂತಿರುವುದು, ಆದ್ದರಿಂದ ಈ ನಮ್ಮ ಜಯವು ಪರಾಜಯವೇ ಆಗಿದೆ.

ಯೋ ಜಿತ್ವಾ ತಪ್ಯತೇ ಪಶ್ಚಾದ್ ಆಪನ್ನ ಇವ ದುರ್ಮತಿಃ ।
ಕಥಂ ಮನ್ಯೇತ ವಿಜಯಂ ಯಃ ಸ್ಯಾಜ್ಜಿತತರಃ ಪರೈಃ ॥೧೪॥

ದುರ್ಮತಿಯಾದವನು ಜಯದ ನಂತರವೂ ಅನರ್ಥದಲ್ಲಿ ಸಿಲುಕಿದಂತೆ ದುಃಖಿಸುವದಾದಲ್ಲಿ, ಅಂತಹದನ್ನು ವಿಜಯ ಎಂದು ಹೇಗೆ ಭಾವಿಸಲಾಗುವುದು? ಆದ್ದರಿಂದ ಶತ್ರುಗಳಿಂದ ಭಾರೀ ಸೋಲನ್ನು ಕಂಡೆನು.

ಯೇಷಾಮರ್ಥೇ ಜಯೋऽಯಂ ಸ್ಯಾದ್ ವಿಜಯಃ ಸ್ಯಾತ್ ಸುಹೃದ್ವಧೇ ।
ತೈರ್ಜಿತೈರಪ್ರಮತ್ತೈರ್ಹಿ ನಿರ್ಜಿತಾ ಜಿತಕಾಶಿನಃ ॥೧೫॥

ಯಾರಿಗಾಗಿ ಈ ವಿಜಯವನ್ನು ಹೊಂದಿದ್ದೆವೋ, ಆಪ್ತಸ್ನೇಹಿತರ ಸಂಹಾರದಿಂದ ಜಯವು ಪ್ರಾಪ್ತವಾಗಿತ್ತೋ, ಅಂತಹ ಜಯಶಾಲಿಗಳು, ಎಚ್ಚರದಿಂದಿದ್ದ (ಹೊಂಚುಹಾಕುತ್ತಿದ್ದ) ಅವರಿಂದ (ಶತ್ರುಗಳಿಂದ) ಸೋತರು.

ಕರ್ಣನಾಲೀಕದಂಷ್ಟ್ರಸ್ಯ ಖಡ್ಗಜಿಹ್ವಸ್ಯ ಸಂಯುಗೇ ।
ಚಾಪವ್ಯಾಪ್ತಸ್ಯ ರೌದ್ರಸ್ಯ ಜ್ಯಾತಳತ್ರವಿನಾದಿನಃ ॥೧೬॥

ಕ್ರುದ್ಧಸ್ಯ ನರಸಿಂಹಸ್ಯ ಸಂಗ್ರಾಮೇಷ್ವಪಲಾಯಿನಃ ।
ಯೇ ವ್ಯಮುಚ್ಯಂತ ಕರ್ಣಸ್ಯ ಪ್ರಮಾದಾತ್ ತ ಇಮೇ ಹತಾಃ ॥೧೭॥

ಕರ್ಣ-ನಾಲೀಕಗಳೆಂಬ ಕೋರೆಹಲ್ಲನ್ನು, ಖಡ್ಗವೆಂಬ ನಾಲಿಗೆಯನ್ನು, ಬಾಗಿದ ಬಿಲ್ಲೆಂಬ ಭೀಕರವಾದ ಬಾಯಿಯನ್ನು, ಬಿಲ್ಲಿನ ಹಗ್ಗದ ಝೇಂಕಾರವೆಂಬ ಶಬ್ದವನ್ನು ಹೊಂದಿದ ಕರ್ಣನೆಂಬ ಕುಪಿತನಾದ ಸಿಂಹದಿಂದ ಯುದ್ಧದಲ್ಲಿ ಯಾರು ಮುಕ್ತರಾದರೋ (ಆ) ಯುದ್ಧದಲ್ಲಿ ಹಿಂದಿರುಗದ ಅವರು ಮೈಮರೆವಿನಿಂದ (ಈಗ) ಮೃತರಾದರು.

ರಥಹ್ರದಂ ಶರವರ್ಷೋರ್ಮಿಮಂತಂ
ರತ್ನಾಚಿತಂ ವಾಜಿಸಮಾಜಯುಕ್ತಮ್ ।
ಶಕ್ತ್ಯೃಷ್ಟಿಶೂಲಧ್ವಜನಾಗನಕ್ರ-
ಶರಾಸನಾವರ್ತಮಹೌಘಘೋಷಮ್ ॥೧೮॥

ಸಂಗ್ರಾಮಚಂದ್ರೋದಯವೇಗವೇಲಂ
ದ್ರೋಣಾರ್ಣವಂ ಜ್ಯಾತಳನೇಮಿಘೋಷಮ್ ।
ಯೇ ತೇರುರುಚ್ಚಾವಚಶಸ್ತ್ರನೌಭಿಃ
ತೇ ರಾಜಪುತ್ರಾ ನಿಹತಾಃ ಪ್ರಮಾದಾತ್ ॥೧೯॥

ರಥವೆಂಬ ಮಹಾಮಡುವಿನಿಂದ ಕೂಡಿರುವ, ಬಾಣಧಾರೆಗಳೆಂಬ ತೆರೆಗಳನ್ನು ಹೊಂದಿದ, (ವೇಷಭೂಷಣ-ಆಭರಣಗಳೆಂಬ) ರತ್ನಯುಕ್ತವಾದ ಸಮುದ್ರ ಕುದುರೆಗಳ ಗುಂಪನ್ನು ಹೊಂದಿದ, ಶಕ್ತಿ, ಋಷ್ಟಿ ಶೂಲ, ಧ್ವಜ, ಆನೆ ಮೊಸಳೆಯಿಂದ ಕೂಡಿದ, ಧನುಸೆಂಬ ದೊಡ್ಡಸುಳಿಯಿಂದ ಕೂಡಿರುವ, ಬಾಣಗಳೆಂಬ ನೊರೆಯಿಂದ ಕೂಡಿದ, ಯುದ್ಧವೆಂಬ ಚಂದ್ರೋದಯದಿಂದ ತನ್ನ ವೇಗವನ್ನು ಹೆಚ್ಚಿಸಿಕೊಳ್ಳುವ, ಬಿಲ್ಲಿನ ಹಗ್ಗದ ಝೇಂಕಾರ ಮತ್ತು ರಥದ ತಿದಿಯ ಶಬ್ದಗಳಿಂದ ಕೂಡಿದ ದ್ರೋಣನೆಂಬ ಶರಧಿಯನ್ನು ಹಿರಿದಾದ ಕಿರಿದಾದ ಶಸ್ತ್ರಗಳೆಂಬ ನಾವೆಯಿಂದ ಯಾರು ದಾಟಿದರೋ, ಆ ರಾಜಪುತ್ರರು ಅಜಾಗರೂಕತೆಯಿಂದ (ಈಗ) ಮೃತರಾದರು.

ನ ಹಿ ಪ್ರಮಾದಾತ್ ಪರಮಸ್ತಿ ಕಶ್ಚಿದ್
ವಧೋ ನರಾಣಾಮಿಹ ಜೀವಲೋಕೇ ।
ಪ್ರಮತ್ತಮರ್ಥಾ ಹಿ ನರಂ ಸಮಂತಾತ್
ತ್ಯಜಂತ್ಯನರ್ಥಾಶ್ಚ ಸಮಾವಿಶಂತಿ ॥೨೦॥

ಈ ಮನುಜಲೋಕದಲ್ಲಿ ಅಜಾಗರೂಕತೆಗಿಂತಲೂ ದೊಡ್ಡದಾದ ಮೃತ್ಯುವು ಮತ್ತೊಂದಿಲ್ಲ, ಪ್ರಮತ್ತನಾದ ಮನುಜನ ಸಮಸ್ತ ಅರ್ಥವು ನಾಶವಾಗುವುದು, ಅನರ್ಥಗಳು (ಪ್ರಮತ್ತನನ್ನು) ಮುತ್ತುವವು.

ಧ್ವಜೋತ್ತಮಾಗ್ರೋಚ್ಛ್ರಿತಧೂಮಕೇತುಂ
ಶರಾರ್ಚಿಷಂ ಕೋಪಮಹಾಸಮೀರಮ್ ।

ಮಹಾಧನುರ್ಜ್ಯಾತಳನೇಮಿಘೋಷಂ
ತನುತ್ರನಾನಾವಿಧಶಸ್ತ್ರಹೋಮಮ್ ॥೨೧॥

ಮಹಾಚಮೂಕಕ್ಷದವಾಗ್ನಿಭೂತಂ
ಮಹಾಹವೇ ಭೀಷ್ಮಮಹಾದವಾಗ್ನಿಮ್ ।
ಯೋಽತೀತ್ಯ ಭೀಮಾಯುಧತೀಕ್ಷ್ಣವೇಗಂ
ತೇ ರಾಜಪುತ್ರಾ ನಿಹತಾಃ ಪ್ರಮಾದಾತ್ ॥೨೨॥

ಎತ್ತರದಲ್ಲಿರುವ ಶ್ರೇಷ್ಠವಾದ ಧ್ವಜ ಎಂಬ ಹೊಗೆಯಿಂದ ಕೂಡಿದ, ಬಾಣವೆಂಬ ಜ್ವಾಲೆಯನ್ನು ಹೊಂದಿದ, ಕೋಪವೆಂಬ ಗಾಳಿಯಿಂದ ಕೂಡಿದ, ಭಾರೀಧನುವಿನ ಜ್ಯಾದ ಝೇಂಕಾರ, ಚಪ್ಪಾಳೆಯ ಸದ್ದು, ರಥದ ನೇಮಿಯ (ಚಟಚಟ) ಶಬ್ದದಿಂದ ಯುಕ್ತವಾದ, ಕವಚ, ನಾನಾವಿಧ ಶಸ್ತ್ರಗಳೆಂಬ ಆಹುತಿಯಿಂದ ಕೂಡಿರುವ, ದೊಡ್ಡಸೇನೆಯಂಬ ಪೊದೆಗೆ ಬೆಂಕಿಯಂತಿರುವ, ಭೀಷ್ಮನೆಂಬ ಕಾಡುಕಿಚ್ಚಿನ ಭೀಕರವಾದ ಆಯುಧಗಳ ಭಾರೀವೇಗವನ್ನು ಯಾರು ದಾಟಿದರೋ ಆ ರಾಜಪುತ್ರರು ಅಜಾಗರೂಕತೆಯಿಂದ ಮೃತರಾದರು.

ನ ಹಿ ಪ್ರಮತ್ತೇನ ನರೇಣ ಶಕ್ಯಮ್
ಆಪ್ತುಂ ವಸುಂ ಶ್ರೀರ್ಮಹದಾಪುಲಂ ಯಶೋ ವಾ ॥೨೩॥

ಅಜಾಗರೂಕನಾದ ಮನುಜನಿಂದ ಧನವನ್ನು, ಮಹದೈಶ್ವರ್ಯವನ್ನು ಅಥವಾ ಯಶಸ್ಸನ್ನು ಹೊಂದಲು ಶಕ್ಯವಿಲ್ಲ.

ಪಶ್ಯಾಪ್ರಮಾದೇನ ವಿನಿಹತ್ಯ ಶತ್ರೂನ್
ಸರ್ವಾನ್ ಮಹೇಂದ್ರಂ ಸುಸಮೇಧಮಾನಮ್ ।
ಇಂದ್ರೋಪಮಾನ್ ಪಾರ್ಥಿವಪುತ್ರಪೌತ್ರಾನ್
ಪಶ್ಯಾವಿಶೇಷೇಣ ಹತಾನ್ ಪ್ರಮಾದಾತ್ ॥೨೪॥

ಜಾಗರೂಕತೆಯಿಂದ ಎಲ್ಲ ಶತ್ರುಗಳನ್ನು ಸಂಹರಿಸಿ, ಏಳಿಗೆಯನ್ನು ಹೊಂದಿದ ಇಂದ್ರನನ್ನು ನೋಡು. (ಪ್ರಕೃತ) ಇಂದ್ರಸಮಾನರಾದ ರಾಜಕುಮಾರರು, ಮೊಮ್ಮಕ್ಕಳು ಅಜಾಗರೂಕತೆಯಿಂದ ಮೃತರಾದದ್ದನ್ನು ನೋಡು.

ತೀರ್ತ್ವಾ ಸಮುದ್ರಂ ವಣಿಜಃ ಸಮೃದ್ಧಾ
ಮಗ್ನಾಃ ಕುನದ್ಯಾಮಿವ ಸೀದಮಾನಾಃ ॥೨೫॥

ಪ್ರವರ್ಧಮಾನರಾದ ವ್ಯಾಪಾರಿಗಳು ಸಮುದ್ರವನ್ನು ದಾಟಿ, (ಅಜಾಗರೂಕತೆಯಿಂದ) ಸಣ್ಣನದಿಯಲ್ಲಿ ಮುಳುಗಿ ದುಃಖಿಸುವಂತೆ ನಾವಾದೆವು.

ಅಮರ್ಷಿತೈರ್ಯೇ ನಿಹತಾ ನರೇಂದ್ರಾ
ನಿಃಸಂಶಯಂ ತೇ ತ್ರಿದಿವಂ ಪ್ರಪನ್ನಾಃ ।
ಕೃಷ್ಣಾಂ ತು ಶೋಚಾಮಿ ಕಥಂ ನು ಸಾಧ್ವೀ
ಶೋಕಾರ್ಣವಂ ಸಾದ್ಯ ವಿಶಕ್ಷ್ಯತೀತಿ ॥೨೬॥

ಕೋಪಾವಿಷ್ಟರಾದ ಶತ್ರುಗಳಿಂದ ಮೃತರಾದ ಆ ರಾಜಕುಮಾರರು ನಿಶ್ಚಿತವಾಗಿಯೂ ಸ್ವರ್ಗವನ್ನು ಹೊಂದುವರು, ಆದರೆ ದ್ರೌಪದಿಯ ವಿಷಯದಲ್ಲಿ ದುಃಖಿಸುವೆನು, ಈಗ ಆ ಸಾಧ್ವಿಯು ದುಃಖಸಾಗರದಲ್ಲಿ ಮುಳುಗುವಳು (ಈ ಪುತ್ರಶೋಕವನ್ನು ಹೇಗೆ ಸಹಿಸುವಳು?) ಎಂದು ಯೋಚಿಸುತ್ತಿರುವೆನು.

ಭ್ರಾತೄಂಶ್ಚ ಪುತ್ರಾಂಶ್ಚ ಹತಾನ್ ನಿಶಮ್ಯ
ಪಾಂಚಾಲರಾಜಂ ಪಿತರಂ ಚ ವೃದ್ಧಮ್ ।
ಧ್ರುವಂ ವಿಸಂಜ್ಞಾ ಪತಿತಾ ಪೃಥಿವ್ಯಾಂ
ಸಾ ಶೋಚತೇ ಶೋಕಕೃಶಾಂಗಯಷ್ಟಿಃ ॥೨೭॥

ಮಕ್ಕಳು, ಅಣ್ಣಂದಿರು ಹಿರಿಯನಾದ (ಆಕೆಯ) ತಂದೆ ಪಾಂಚಾಲರಾಜ ಇವರು ಮೃತರಾದದ್ದನ್ನು ಕೇಳಿ, ನಿಶ್ಚಯವಾಗಿಯೂ ಎಚ್ಚರತಪ್ಪಿ ನೆಲದಲ್ಲಿ ಬೀಳುವಳು, (ಹಿಂದಿನ ಅನೇಕವಿಧದ) ಶೋಕಗಳಿಂದ ಒಣಗಿದ ತೆಳುಕಟ್ಟಿಗೆಯಂತಿರುವ ಆಕೆಯು ದುಃಖಿಸುವಳು.

ತಚ್ಛೋಕಜಂ ದುಃಖಮಪಾರಯಂತೀ
ಕಥಂ ಭವಿಷ್ಯತ್ಯುಚಿತಾ ಸುಖಾನಾಮ್ ।
ಪುತ್ರಕ್ಷಯಂ ಭ್ರಾತೃವಧಂ ಪ್ರಪನ್ನಾ
ಪ್ರದಹ್ಯಮಾನೇವ ಹುತಾಶನೇನ ॥೨೮॥

ಸುಖದಿಂದಿರಬೇಕಾದ ಆಕೆ ಈ ಶೋಕದಿಂದಾದ ದುಃಖವನ್ನು ದಾಟಲಾರದೆ ಹೇಗೆ ಬಾಳುವಳೋ? ಮಕ್ಕಳ ಸಾವನ್ನು, ಅಣ್ಣಂದಿರ ಸಾವನ್ನು ತಿಳಿದ ಆಕೆಯು (ದುಃಖವೆಂಬ) ಬೆಂಕಿಯಿಂದ ಬೇಯುವಳು.

ವೈಶಂಪಾಯನಃ

ಇತ್ಯೇವಮಾರ್ತಃ ಪರಿದೇವಯನ್ ಸ
ರಾಜಾ ಕುರೂಣಾಂ ನಕುಲಂ ಬಭಾಷೇ ॥೨೯॥

ವೈಶಂಪಾಯನರು– ಈ ರೀತಿಯಾಗಿ ದುಃಖಭಾಜನನಾದ ಆ ಕುರುಗಳ ರಾಜನು ದುಃಖಿಸುತ್ತಾ ನಕುಲನನ್ನು ಉದ್ದೇಶಿಸಿ ಹೇಳಿದನು.

ಯುಧಿಷ್ಠಿರಃ

ಗಚ್ಛಾನಯೈನಾಮಿಹ ಮಂದಭಾಗ್ಯಾಮ್
ಅಮಾತ್ಯಪಕ್ಷಾಮಿತಿ ರಾಜಪುತ್ರೀಮ್ ॥೩೦॥

ಯುಧಿಷ್ಠಿರ– ಹೋಗು, ಮಂತ್ರಿಗಳ ಕಾವಲಿನಲ್ಲಿರುವ ಅದೃಷ್ಟಹೀನಳಾದ ರಾಜಪುತ್ರಿಯನ್ನು ಇಲ್ಲಿಗೆ ಕರೆದುಕೊಂಡು ಬಾ.

ವೈಶಂಪಾಯನಃ

ಮಾದ್ರೀಸುತಸ್ತತ್ ಪರಿಗೃಹ್ಯ ವಾಕ್ಯಂ
ಧರ್ಮೇಣ ಧರ್ಮಪ್ರತಿಮಸ್ಯ ರಾಜ್ಞಃ ।
ಯಯೌ ರಥೇನಾಲಯಮಾಶು ದೇವ್ಯಾಃ
ಪಾಂಚಾಲರಾಜಸ್ಯ ಚ ಯತ್ರ ದಾರಾಃ ॥೩೧॥

ವೈಶಂಪಾಯನರು– ಧರ್ಮಾಚರಣದಿಂದ ಯಮಧರ್ಮನಿಗೆ ಸಮಾನನಾದ ರಾಜನಾದ ಯುಧಿಷ್ಠಿರನ ಆ ಮಾತನ್ನನುಸರಿಸಿ, ಎಲ್ಲಿ ಪಾಂಚಾಲರಾಜನ ಪತ್ನಿಯರು ಇರುವರೋ, ಆ ದೇವಿಯ ಮನೆಗೆ ಶೀಘ್ರವಾಗಿ ಹೊರಟನು.

ಪ್ರಸ್ಥಾಪ್ಯ ಮಾದ್ರೀಸುತಮಾಜಮೀಢಃ
ಶೋಕಾರ್ದಿತಸ್ತೈಃ ಸಹಿತಃ ಸುಹೃದ್ಭಿಃ ।

ರೋರೂಯಮಾಣಃ ಪ್ರಯಯೌ ಸುತಾನಾಮ್
ಆಯೋಧನಂ ಭೂತಗಣಾನುಕೀರ್ಣಮ್ ॥೩೨॥

ಮಾದ್ರೀಪುತ್ರನನ್ನು ಕಳುಹಿಸಿ, ಶೋಕತಪ್ತನಾದ ಯುದ್ಧಭಯಂಕರನಾದ ಸ್ನೇಹಿತರಿಂದ ಒಡಗೂಡಿದ ಧರ್ಮರಾಜನು ರಥವನ್ನೇರಿ ಭೂತಗಣದಿಂದ ಕೂಡಿದ ತನ್ನ ಮಕ್ಕಳು ಮೃತರಾದ (ರಣರಂಗಕ್ಕೆ) ತೆರಳಿದನು.

ಸ ತತ್ ಪ್ರವಿಶ್ಯಾಶಿವಮುಗ್ರರೂಪಂ
ದದರ್ಶ ಪುತ್ರಾನ್ ಸುಹೃದಃ ಸಖೀಂಶ್ಚ ।
ಭೂಮೌ ಶಯಾನಾನ್ ರುಧಿರಾರ್ದ್ರಗಾತ್ರಾನ್
ವಿಭಿನ್ನಗಾತ್ರೋಪಹೃತೋತ್ತಮಾಂಗಾನ್ ॥೩೩॥

ನೆಲದಲ್ಲಿ ಬಿದ್ದ, ರಕ್ತದಿಂದ ತೊಯ್ದು, ಕತ್ತರಿಸಿದ ದೇಹವನ್ನು ಹೊಂದಿದ್ದ, ತಲೆಗಳನ್ನು ಕಳೆದುಕೊಂಡಿದ್ದ ಮಕ್ಕಳನ್ನು, ಆಪ್ತರನ್ನು, ಮಿತ್ರರನ್ನು ಅಂತಹ ಭೀಕರವಾದ ಅಮಂಗಳವನ್ನು ಆತನು (ಧರ್ಮರಾಜನು) ಶಿಬಿರವನ್ನು ಪ್ರವೇಶಿಸಿ ಕಂಡನು.

ಸ ತಾಂಸ್ತು ದೃಷ್ಟ್ವಾ ಭೃಶಮಾರ್ತರೂಪೋ
ಯುಧಿಷ್ಠಿರೋ ಧರ್ಮಭೃತಾಂ ವರಿಷ್ಠಃ ।
ಉಚ್ಚೈಃ ಪ್ರಚುಕ್ರೋಶ ಚ ಕೌರವಾಗ್ರ್ಯಃ
ಪಪಾತ ಚೋರ್ವ್ಯಾಂ ಸಗಣೋ ವಿಸಂಜ್ಞಃ ॥೩೪॥

ಪ್ರಿಯಜನರಿಂದ ಕೂಡಿದ, ಧರ್ಮಧಾರಿಗಳಲ್ಲಿ ಹಿರಿಯನಾದ, ಕೌರವರಿಗೆ ಹಿರಿಯನಾದ ಅತ್ಯಂತದುಃಖಿತನಾದ ಆ ಯುಧಿಷ್ಠಿರನು ಅವರನ್ನು ಕಂಡು, ಗಟ್ಟಿಯಾಗಿ ರೋದಿಸಿದನು, ಎಚ್ಚರತಪ್ಪಿ ನೆಲದಲ್ಲಿ ಬಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ಯುಧಿಷ್ಠಿರಪ್ರಲಾಪೋ ನಾಮ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ತತ್ಕೈಕಲಂ ದ್ರೋಣಸುತಂ ರಥೇನ
ಯಾಂತಂ ರಥೀ ಮಾರುತಿರನ್ವಧಾವತ್ ।
ತಮಾದ್ರವಂತಂ ಪ್ರಸಮೀಕ್ಷ್ಯ ಭೀತಃ
ಪರಾದ್ರವದ್ ದ್ರೌಣಿರತಿದ್ರುತಾಶ್ವೈಃ ॥

ಅಶ್ವತ್ಥಾಮನು ಏಕಾಕಿಯಾಗಿ ರಥದಿಂದ ಹೋಗುತ್ತಿದ್ದುದನ್ನು ಕಂಡು ಭೀಮಸೇನ ರಥದಿಂದ ಬೆನ್ನಟ್ಟಿದ. ಅವನು ಅಟ್ಟಿಸಿಕೊಂಡು ಬರುವುದನ್ನು ಕಂಡು ಹೆದರಿದ ಅಶ್ವತ್ಥಾಮನು ಬಲು ವೇಗವಾಗಿ ಓಡುವ ಕುದುರೆಗಳಿದ್ದ ಆ ರಥದಿಂದ ಪಲಾಯನ ಮಾಡಿದನು.

★ ★ ★ ★ ★

ಎರಡನೆಯ ಅಧ್ಯಾಯ

ನಕುಲನು ದ್ರೌಪದಿಯನ್ನು ಶಿಬಿರಕ್ಕೆ ಕರೆದುತಂದನು.
ಅಶ್ವತ್ಥಾಮನ ಶಿರೋಮಣಿಯನ್ನು ಕಿತ್ತುತರಲು ದ್ರೌಪದಿಯಿಂದ
ಪ್ರಚೋದಿತನಾದ ಭೀಮಸೇನನು ನಕುಲನನ್ನು ಸಾರಥಿಯನ್ನಾಗಿ
ಮಾಡಿಕೊಂಡು ಅಶ್ವತ್ಥಾಮನಲ್ಲಿಗೆ ಹೊರಟನು.

ವೈಶಂಪಾಯನಃ

ಸ ದೃಷ್ಟ್ವಾ ನಿಹತಾನ್ ಸಂಖೇ ಪುತ್ರಾನ್ ಪೌತ್ರಾನ್ ಸಖೀಂಸ್ತಥಾ ।
ಮಹಾದುಃಖಪರೀತಾತ್ಮಾ ಬಭೂವ ಜನಮೇಜಯ ॥೧॥

ಜನಮೇಜಯನೆ! ಆ ಧರ್ಮನಂದನನು ಯುದ್ಧದಲ್ಲಿ ಮಡಿದ ಮಕ್ಕಳನ್ನು, ಮೊಮ್ಮಕ್ಕಳನ್ನು ಹಾಗೂ ಸ್ನೇಹಿತರನ್ನು ಕಂಡು ಭಾರೀ ದುಃಖದಿಂದ ಪರಿತಪಿಸಿದನು.

ತತಸ್ತಸ್ಯ ಮಹಾನ್ ಶೋಕಃ ಪ್ರಾದುರಾಸೀನ್ಮಹಾತ್ಮನಃ ।
ಸ್ಮರತಃ ಪುತ್ರಪೌತ್ರಾಂಸ್ತಾನ್ ಭ್ರಾತೄನ್ ಸುಹೃದ ಏವ ಚ ॥೨॥

ನಂತರದಲ್ಲಿ ಮಕ್ಕಳು, ಮೊಮ್ಮಕ್ಕಳು, ಸಹೋದರರು ಮತ್ತು ಸ್ನೇಹಿತರನ್ನು ಸ್ಮರಿಸಿಕೊಂಡ ಆ ಮಹಾತ್ಮನಿಗೆ ಭಾರೀಶೋಕವು ಉಂಟಾಯಿತು.

ತಮಶ್ರುಪರಿಪೂರ್ಣಾಕ್ಷಂ ವೇಪಮಾನಮಚೇತಸಮ್ ।
ಸುಹೃದೋ ಭೃಶಸಂವಿಗ್ನಾಃ ಸಾಂತ್ವಯಾಂಚಕ್ರಿರೇ ತದಾ ॥೩॥

ಕಣ್ಣೀರಿನಿಂದ ಕೂಡಿರುವ, ಚೈತನ್ಯವಿಲ್ಲದೇ ನಡುಗುತ್ತಿದ್ದ ಆತನನ್ನು (ಧರ್ಮರಾಜನನ್ನು) ಆಗ ಅತ್ಯಂತ ಉದ್ವಿಗ್ನರಾದ ಸ್ನೇಹಿತರು ಸಮಾಧಾನಪಡಿಸಿದರು.

ಕೃತ್ವಾ ತು ವಿಧಿವತ್ ತೇಷಾಂ ಪುತ್ರಾಣಾಮಮಿತೌಜಸಾಮ್ ।
ಪ್ರೇತಕಾರ್ಯಾಣಿ ಸರ್ವೇಷಾಂ ಬಭೂವ ಭೃಶದುಃಖಿತಃ ॥೪॥

ಮಹಾಪರಾಕ್ರಮಿಗಳಾದ ಆ ಎಲ್ಲ ಮಕ್ಕಳಿಗೆ ವಿಧಿಪೂರ್ವಕವಾಗಿ ಪ್ರೇತಕಾರ್ಯವನ್ನು ನೆರವೇರಿಸಿ, ಅತ್ಯಂತ ದುಃಖಿತನಾದನು.

ತಸ್ಮಿನ್ ಮುಹೂರ್ತೇ ಜವನೈಃ ವಾಜಿಭಿರ್ಹೇಮಮಾಲಿಭಿಃ ॥೫॥

ತತಃ ತಸ್ಮಿನ್ ಕ್ಷಣೇ ಕಾಲೇ ರಥೇನಾದಿತ್ಯವರ್ಚಸಾ ।
ನಕುಲಃ ಕೃಷ್ಣಯಾ ಸಾರ್ಧಮುಪಾಯಾತ್ ಪರಮಾರ್ತವತ್ ॥೬॥

ಆನಂತರದಲ್ಲಿ ಆ ಕಾಲಕ್ಕೆ ಸರಿಯಾಗಿ ಹೊನ್ನಿನ ಮಾಲೆಗಳಿಂದ ಅಲಂಕೃತವಾದ ವೇಗವಾಗಿ ಓಡುವ ಕುದುರೆಗಳಿಂದ ಕೂಡಿದ ಸೂರ್ಯನಂತೆ ಪ್ರಕಾಶಮಾನವಾದ ರಥವನ್ನೇರಿದ ನಕುಲನು ಅತ್ಯಂತ ದುಃಖಿತನಾದವನಾಗಿ ದ್ರೌಪದಿಯಿಂದ ಕೂಡಿದವನಾಗಿ ಸರಿಯಾಗಿ ಆ ಹೊತ್ತಿಗೆ ಅಲ್ಲಿಗೆ ಬಂದನು.

ಉಪಪ್ಲಾವ್ಯಗತಾ ಸಾ ತು ಶ್ರುತ್ವಾ ಸುಮಹದಪ್ರಿಯಮ್ ।
ಮಹಾವಿನಾಶಂ ಪುತ್ರಾಣಾಂ ಸರ್ವೇಷಾಂ ವ್ಯಥಿತೇಂದ್ರಿಯಾ ॥೭॥

ಕಂಪಮಾನೇವ ಕದಲೀ ವಾತೇನಾಭಿಸಮಾಹತಾ ।
ಕೃಷ್ಣಾ ರಾಜಾನಮಾಸಾದ್ಯ ಶೋಕಾರ್ತಾ ನ್ಯಪತದ್ ಭುವಿ ॥೮॥

ಉಪಪ್ಲಾವ್ಯ ನಗರಕ್ಕೆ ಆಗಮಿಸಿದ ಆ ದ್ರೌಪದಿಯು ಎಲ್ಲ ಮಕ್ಕಳ ಸಾವೆಂಬ ಅತ್ಯಂತ ಅಪ್ರಿಯವಾದ ಸುದ್ದಿಯನ್ನು ಕೇಳಿ, ದುಃಖಿತಳಾಗಿ ಇಂದ್ರಿಯಸ್ವಾಸ್ಥ್ಯವನ್ನು ಕಳೆದುಕೊಂಡು ರಾಜನನ್ನು ಸೇರಿದೊಡನೆ, ಬಿರುಗಾಳಿಗೆ ಸಿಲುಕಿದ ಬಾಳೆಕಂಬದಂತೆ ನಡುಗುತ್ತಾ ನೆಲಕ್ಕೆ ಉರುಳಿದಳು.

ವಿಬಭೌ ವದನಂ ತಸ್ಯಾ ರುದಂತ್ಯಾಃ ಶೋಕಕರ್ಶಿತಮ್ ।
ಫುಲ್ಲಪದ್ಮಪಲಾಶಾಕ್ಷಂ ತಮೋಗ್ರಸ್ತ ಇವಾಂಶುಮಾನ್ ॥೯॥

ಅರಳಿದ ಕಮಲದ ದಳದಂತಹ ಕಣ್ಣನ್ನು ಹೊಂದಿರುವ, ದುಃಖದಿಂದ ಬಳಲಿದ ಆಕೆಯ (ದ್ರೌಪದಿಯ) ಮುಖವು ಮೋಡಕವಿದ ಚಂದ್ರನಂತೆ ಕಂಗೊಳಿಸಿತು.

ಹಾ ಪುತ್ರಬಾಂಧವಾಶ್ಚೈವ ಇತ್ಯೇವಂ ವಿಲಲಾಪ ಸಾ ।
ತತೋ ಭೀಮೋ ತಾಮುತ್ಥಾಪ್ಯ ವಚನಂ ಚೇದಮಬ್ರವೀತ್ ॥೧೦॥

ಆ ದ್ರೌಪದಿಯು 'ಅಯ್ಯೋ ಮಕ್ಕಳೆ, ಬಂಧುಗಳೆ' ಎಂದು ರೋದಿಸಿದಳು. ಆನಂತರದಲ್ಲಿ ಆಕೆಯನ್ನು ಮೇಲೆತ್ತಿ ಭೀಮಸೇನನು ಈ ಮಾತನ್ನು ನುಡಿದನು.

ನಿವರ್ತಯ ತ್ವಂ ಕಲ್ಯಾಣಿ ಮಾ ಚ ಶೋಕಮನಃಕೃಥಾಃ ।
ಅಶ್ವತ್ಥಾಮಾನಮದ್ಯೇಹ ಹನಿಷ್ಯಾಮಿ ನ ಸಂಶಯಃ ॥೧೧॥

ಮಂಗಳಕರಳೆ, ನೀನು (ಈ ದುಃಖದಿಂದ) ನಿವೃತ್ತಳಾಗು, ಮನದಲ್ಲಿ ದುಃಖಿಸದಿರು, ಈಗಲೇ ಅಶ್ವತ್ಥಾಮನನ್ನು ಸಂಹರಿಸುವೆನು, ಇದರಲ್ಲಿ ಸಂದೇಹಿಸದಿರು.

ಯದಿ ಮೇ ದೃಷ್ಟಿಪ್ರಾಪ್ತೋಽಸೌ ಜೀವಿತಂ ನ ಭವಿಷ್ಯತಿ ।
ತಸ್ಯ ಶಿರಸ್ತ್ವದಗ್ರೇ ಚ ಪಾತಯಿಷ್ಯಾಮ್ಯಹಂ ಧ್ರುವಮ್ ॥೧೨॥

ನನ್ನ ಕಣ್ಣಿಗೆ ಕಂಡಲ್ಲಿ ಆತನು ಜೀವಿತದಿಂದ ಉಳಿಯಲಾರ. ನಾನು ನಿಶ್ಚಯವಾಗಿಯೂ ಆತನ ತಲೆಯನ್ನು ನಿನ್ನ ಮುಂದೆ ತಂದುರುಳಿಸುವೆ.

ಕೃಪಂ ಚ ಕೃತವರ್ಮಾಣಂ ತಂ ಹನಿಷ್ಯಾಮಿ ಚಾದ್ಯ ವೈ ।
ಯಾ ಮಯಾತ್ರ ತ್ವದಗ್ರೇ ಚ ಉಕ್ತಾ ವಾಚಸ್ತ್ವಯಾ ಕೃತೇ ॥೧೩॥

ತಾಃ ಸರ್ವಾಃ ಸಫಲಾ ಕೃತ್ವಾ ನ ಹಿ ಶೋಕೇ ಮನಃ ಕೃಥಾಃ ।
ಇತ್ಯೇವಮುಕ್ತ್ವಾ ತಾಂ ವಾಕ್ಯಂ ಭೀಮಸೇನೋ ನ್ಯವರ್ತತ ॥೧೪॥

ಈಗಲೇ ಕೃಪನನ್ನು, ಆ ಕೃತವರ್ಮನನ್ನು ಸಂಹರಿಸುತ್ತೇನೆ. ನಿನಗಾಗಿ ನಿನ್ನ ಮುಂದೆ ಈಗ ಹೇಳಿದ ಆ ಎಲ್ಲವನ್ನು ಸತ್ಯಗೊಳಿಸುವೆನು, ಮನದಲ್ಲಿ ಶೋಕಿಸದಿರು. ಆಕೆಗೆ ಈ ರೀತಿಯಲ್ಲಿ ಹೇಳಿ ಭೀಮಸೇನನು ಉಪರಮಿಸಿದನು.

ತತೋ ಯುಧಿಷ್ಠಿರೋ ಬ್ರೂಯಾದ್ ವಾಕ್ಯಂ ತಸ್ಯಾ ಹಿತಂ ಪ್ರಿಯಮ್ ।
ನ ಹಿ ತ್ವಂ ದೇವಿ ಜಾನೀಷೇ ಮಮ ವಾಕ್ಯಂ ನಿಬೋಧ ವೈ ॥೧೫॥

ಆನಂತರದಲ್ಲಿ ಯುಧಿಷ್ಠಿರನು ಆಕೆಗೆ ಹಿತಕರವಾದ ಮಾತನ್ನು ಹೇಳಿದನು. ದೇವಿ! ನೀನು ತಿಳಿದಿಲ್ಲವೆ? ನನ್ನ ಮಾತನ್ನು ಕೇಳು.

ದ್ರೋಣೋ ಹತೋ ಚ ಗಾಂಗೇಯಃ ಕರ್ಣಶ್ಚಾಪಿ ತಥೈವ ಚ ।
ಶಲ್ಯೋ ಜಯದ್ರಥಶ್ಚೈವ ಯೇ ಚಾನ್ಯೇ ಕ್ಷತ್ರಿಯಾ ರಣೇ ॥೧೬॥

ದ್ರೋಣನು ಮತ್ತು ಗಂಗೆಯ ಪುತ್ರನು (ಭೀಷ್ಮನು), ಹಾಗೆಯೇ ಕರ್ಣ, ಶಲ್ಯ, ಜಯದ್ರಥ ಹಾಗೆಯೇ ಬೇರೆ ಕ್ಷತ್ರಿಯರು ರಣರಂಗದಲ್ಲಿ ಸಂಹೃತರಾದರು.

ಹತೋ ದುರ್ಯೋಧನೋ ರಾಜಾ ಭ್ರಾತೃಭಿಃ ಪರಿವಾರಿತಃ ।
ತಸ್ಯ ಪುತ್ರಾಶ್ಚ ಪೌತ್ರಾಶ್ಚ ತೇ ಚ ಸರ್ವೇ ನಿಪಾತಿತಾಃ ॥೧೭॥

ಸಹೋದರರಿಂದ ಪರಿವಾರದಿಂದ ಕೂಡಿದ ರಾಜನಾದ ದುರ್ಯೋಧನನು ಸಂಹೃತನಾದ. ಆತನ ಆ ಎಲ್ಲ ಮಕ್ಕಳು, ಮೊಮ್ಮಕ್ಕಳೂ ಸಹ ಸಂಹೃತರಾದರು.

ಸುಯೋಧನಬಲಂ ಕ್ಷೀಣಂ ಮಮ ಚೈವ ನ ಸಂಶಯಃ ।
ಕಾಲೇನ ಹೀಯತೇ ಸರ್ವಂ ಜಗದ್ವೈ ಸಚರಾಚರಮ್ ॥೧೮॥

ದುರ್ಯೋಧನನ ಬಲವೂ ಕ್ಷೀಣವಾಯಿತು, ಸಂದೇಹವಿಲ್ಲ. ನನ್ನದೂ ಸಹ (ಕ್ಷೀಣವಾಯಿತು). ಕಾಲಕಳೆದಂತೆ ಚೇತನಾಚೇತನಾತ್ಮಕವಾದ ಈ ಎಲ್ಲ ಜಗವೇ ನಾಶವಾಗುವುದು.

ದಶರಥಸುತೋ ರಾಮೋ ರಾವಣಸ್ಯ ಭಯಂಕರಾಮ್ ।
ಹತ್ವಾ ಸೇನಾಂ ಬಭೌ ತಸ್ಯ ಧ್ವಸ್ತಮೇಷ ಇವಾಂಶುಮಾನ್ ॥೧೯॥

ದಶರಥನ ಪುತ್ರನಾದ ರಾಮನು ಆ ರಾವಣನ ಭಯಂಕರವಾದ ಸೇನೆಯನ್ನು ಸಂಹರಿಸಿ, ಮೋಡಸರಿದ ಚಂದ್ರನಂತೆ ಪ್ರಕಾಶಿಸಿದನು.

ತತಸ್ತಾಂ ಪತಿತಾಂ ದೃಷ್ಟ್ವಾ ಸಂರಭೀ ಸತ್ಯವಿಕ್ರಮಃ ।
ಬಾಹುಭ್ಯಾಂ ಪ್ರತಿಜಗ್ರಾಹ ಸಮುಪೇತ್ಯ ವೃಕೋದರಃ ॥೨೦॥

(ಈರೀತಿಯಲ್ಲಿ ಧರ್ಮನಂದನನು ಹೇಳುತ್ತಿರಲು) ಆನಂತರದಲ್ಲಿ ದುಃಖಿತಳಾದ ಆ ದ್ರೌಪದಿಯು ಬೀಳುವುದನ್ನು ಕಂಡ ಸತ್ಯವಿಕ್ರಮನಾದ ವೃಕೋದರನು ಧಾವಿಸಿ ಬಂದು (ದ್ರೌಪದಿಯನ್ನು) ಕೈಗಳಿಂದ ಹಿಡಿದನು.

ತಾಂ ದೃಷ್ಟ್ವಾ ಸಂಪರಿಷ್ವಜ್ಯ ಸಂರಂಭಾತ್ ಸತ್ಯವಿಕ್ರಮಃ ।
ಬಾಹುಭ್ಯಾಂ ಪರಿಜಗ್ರಾಹ ಸಮುಪೇತ್ಯ ವೃಕೋದರಃ ॥೨೧॥

ಆಕೆಯನ್ನು ಕಂಡ ಸತ್ಯವಿಕ್ರಮನಾದ ವೃಕೋದರನು ಲಗುಬಗೆಯಿಂದ ಬಂದು ಕೈಗಳಿಂದ ಹಿಡಿದುಕೊಂಡು ಆಲಿಂಗಿಸಿಕೊಂಡನು.

ಸಾ ಸಮಾಶ್ವಾಸಿತಾ ತೇನ ಭೀಮಸೇನೇನ ಭಾಮಿನೀ ।
ರುದತೀ ಪಾಂಡವಜ್ಯೇಷ್ಠಮಿದಂ ವಚನಮಬ್ರವೀತ್ ॥೨೨॥

ಆ ಭೀಮನಿಂದ ಸಮಾಧಾನವನ್ನು ಹೊಂದಿದ ಆ ಭಾಮಿನಿಯು ಅಳುತ್ತಾ ಪಾಂಡವರ ಹಿರಿಯನಿಗೆ ಈ ಮಾತನ್ನು ತಿಳಿಸಿದಳು.

ದ್ರೌಪದೀ

ದಿಷ್ಟ್ಯಾ ರಾಜನ್ನವಾಪ್ಯೇಮಾಮಖಿಲಾಂ ಭೋಕ್ಷ್ಯಸೇ ಮಹೀಮ್ ।
ಆತ್ಮಜಾನ್ ಕ್ಷತ್ರಧರ್ಮೇಣ ಶ್ರುತ್ವಾ ಸಂಖೇ ನಿಪಾತಿತಾನ್ ॥೨೩॥

ದ್ರೌಪದಿ– 'ಕಂಡೆಯಾ ರಾಜನೆ! ಕ್ಷಾತ್ರಧರ್ಮದಿಂದ ಯುದ್ಧದಲ್ಲಿ ಪುತ್ರರು ಮೃತರಾದದ್ದನ್ನು ಕೇಳಿ, ಈ ಸಮಸ್ತ ಭೂಮಿಯನ್ನು ಹೊಂದಿದರೂ ಭೋಗಿಸಲಾದೀತೆ?

ದಿಷ್ಟ್ಯಾ ಸರ್ವಾಸ್ತ್ರಕುಶಲಂ ಮತ್ತಮಾತಂಗಗಾಮಿನಮ್ ।
ಅವಾಪ್ಯ ಪೃಥಿವೀಂ ಕೃತ್ಸ್ನಾಂ ಸೌಭದ್ರಂ ನ ಸ್ಮರಿಷ್ಯಸಿ ॥೨೪॥

ಕಂಡೆಯಾ, ಈ ಎಲ್ಲ ಪಥ್ವಿಯನ್ನು ಹೊಂದಿ, ಸಕಲ ಅಸ್ತ್ರಗಳಲ್ಲಿ ನಿಪುಣನಾದ, (ರಣರಂಗದಲ್ಲಿ) ಮದಿಸಿದ ಆನೆಯಂತೆ ನುಗ್ಗುವ, ಸುಭದ್ರೆಯ ಪುತ್ರನನ್ನು (ಅಭಿಮನ್ಯುವನ್ನು) ಸ್ಮರಿಸದೇ ಇರಲಾದೀತೆ?

ಆತ್ಮಜಾಂಸ್ತೈರಧರ್ಮೇಣ ಶ್ರುತ್ವಾ ಶೂರಾನ್ ನಿಪಾತಿತಾನ್ ।
ಸ್ಥಿತೋ ರಾಜ್ಯೇ ಮಯಾ ಸಾರ್ಧಂ ವಿಹರನ್ ನ ಸ್ಮರಿಷ್ಯಸಿ ॥೨೫॥

ಅವರು (ಶತ್ರುಗಳು) ಅನ್ಯಾಯದಿಂದ ಶೂರರಾದ (ನನ್ನ) ಪುತ್ರರನ್ನು ಸಂಹರಿಸಿದ್ದನ್ನು ಕೇಳಿ, ರಾಜ್ಯವನ್ನು ಶಾಸಿಸುವಾಗ, ನನ್ನೊಡನೆ ವಿಹರಿಸುವಾಗ (ಅವರುಗಳ) ಸ್ಮರಣೆಯು ಬಾರದೆ?

ಪ್ರಸುಪ್ತಾನಾಂ ವಧಂ ಶ್ರುತ್ವಾ ದ್ರೌಣಿನಾ ಪಾಪಕರ್ಮಣಾ ।
ಶೋಕೋ ಮಾಂ ದಹತೇ ಗಾಢಂ ಹುತಾಶನ ಇವಾಶ್ರಯಮ್ ॥೨೬॥

'ಮಲಗಿದವರ (ನನ್ನ ಮಕ್ಕಳ) ಹತ್ಯೆಯು ಪಾಪಿಯಾದ ಅಶ್ವತ್ಥಾಮನಿಂದಾಯಿತು' ಎಂದು ಕೇಳಿದ ನನ್ನನ್ನು ಶೋಕವು ಬೆಂಕಿಯಂತೆ ಅತಿಯಾಗಿ ಸುಡುತ್ತಿದೆ.

ತಸ್ಯ ಪಾಪಕೃತೋ ದ್ರೌಣೇಃ ನ ಚೇದದ್ಯ ದುರಾತ್ಮನಃ ।
ಹ್ರಿಯತೇ ಸಾನುಬಂಧಸ್ಯ ಯುಧಿ ವಿಕ್ರಮ್ಯ ಜೀವಿತಮ್ ॥೨೭॥

ಇಹೈವ ಪ್ರಾಯಮಾಸಿಷ್ಯೇ ತನ್ನಿಬೋಧತ ಪಾಂಡವಾಃ ।
ನ ಚೇತ್ ಫಲಮವಾಪ್ನೋತಿ ದ್ರೌಣಿಃ ಪಾಪಸ್ಯ ಕರ್ಮಣಃ ॥೨೮॥

'ದುಃಷ್ಟನಾದ ಪಾಪಿಯಾದ ಅನುಬಂಧಿಗಳಿಂದ ಯುಕ್ತನಾದ ಆ ಅಶ್ವತ್ಥಾಮನನ್ನು ಯುದ್ಧದಲ್ಲಿ ಸೋಲಿಸಿ, ಆತನ ಜೀವವನ್ನು ತೆಗೆಯದ ಪಕ್ಷದಲ್ಲಿ, ದ್ರೋಣಪುತ್ರನು ತನ್ನ ಪಾಪಕರ್ಮದ ಫಲವನ್ನು ಅನುಭವಿಸದ ಪಕ್ಷದಲ್ಲಿ, ನಾನು ಇಲ್ಲಿಯೇ ಪ್ರಾಯೋಪವೇಶವನ್ನು ಆಚರಿಸುವೆನು' ಎನ್ನುವುದನ್ನು ಪಾಂಡುಪುತ್ರರು ತಿಳಿಯುವವರಾಗಿರಿ.

ವೈಶಂಪಾಯನಃ

ಏವಮುಕ್ತ್ವಾ ತತಃ ಕೃಷ್ಣಾ ಪಾಂಡವಂ ಸಮುಪಾವಿಶತ್ ।
ಯುಧಿಷ್ಠಿರಂ ಧರ್ಮಪತ್ನೀ ಯಾಜ್ಞಸೇನೀ ಯಶಸ್ವಿನೀ ॥೨೯॥

ವೈಶಂಪಾಯನರು– ಕೀರ್ತಿಶಾಲಿನಿಯಾದ, ಯಜ್ಞಕುಂಡದಿಂದ ಪ್ರಾದುರ್ಭವಿಸಿದ, (ಪಾಂಡವರ) ಧರ್ಮಪತ್ನಿಯಾದ ಕೃಷ್ಣೆಯು ಈ ರೀತಿಯಾಗಿ ಪಾಂಡುಪುತ್ರನಾದ ಯುಧಿಷ್ಠಿರನನ್ನು ಉದ್ದೇಶಿಸಿ ಹೇಳಿ (ಪ್ರಾಯೋಪವೇಶಕ್ಕೆ) ಕುಳಿತಳು.

ದೃಷ್ಟ್ವೋಪವಿಷ್ಟಾಂ ರಾಜಾ ತು ಪಾಂಡವೋ ಮಹಿಷೀಂ ಪ್ರಿಯಾಮ್ ।
ಪ್ರತ್ಯುವಾಚ ಸ ಧರ್ಮಾತ್ಮಾ ದ್ರೌಪದೀಂ ಚಾರುದರ್ಶನಾಮ್ ॥೩೦॥

ಸುಂದರಳಾದ, ಮಹಾರಾಣಿಯಾದ, ಪ್ರಿಯಳಾದ (ಪ್ರಾಯೋಪವೇಶಕ್ಕಾಗಿ) ಕುಳಿತ ದ್ರೌಪದಿಯನ್ನು ಉದ್ದೇಶಿಸಿ ಧರ್ಮಾತ್ಮನಾದ ರಾಜನಾದ ಪಾಂಡುಪುತ್ರನು ಹೇಳಿದನು.

ಯುಧಿಷ್ಠಿರಃ

ಕ್ಷತ್ರಧರ್ಮೇಣ ಧರ್ಮಜ್ಞೇ ಪ್ರಾಪ್ತಾಸ್ತೇ ನಿಧನಂ ಶುಭೇ ।
ಪುತ್ರಾಸ್ತೇ ಭ್ರಾತರಶ್ಚೈವ ತಾನ್ ನ ಶೋಚಿತುಮರ್ಹಸಿ ॥೩೧॥

ಯುಧಿಷ್ಠಿರ– ಮಂಗಳಕರಳೆ, ಧರ್ಮವನ್ನು ಅರಿತವಳೇ! ನಿನ್ನ ಮಕ್ಕಳು ಮತ್ತು ಸಹೋದರರು ಕ್ಷತ್ರಧರ್ಮದಿಂದ ಸಾವನ್ನು ಹೊಂದಿರುವರು, (ಆದ್ದರಿಂದ) ಅವರನ್ನುದ್ದೇಶಿಸಿ ಶೋಕಿಸುವ ಅಗತ್ಯವಿಲ್ಲ.

ದ್ರೋಣಪುತ್ರಸ್ತು ಕಲ್ಯಾಣಿ ವನದುರ್ಗಂ ಗತೋ ಧ್ರುವಮ್ ।
ತಸ್ಯ ತ್ವಂ ಪಾತನಂ ಸಂಖೇ ಕಥಂ ಜ್ಞಾಸ್ಯಸಿ ಶೋಭನೇ ॥೩೨॥

ಮಂಗಳಕರಳೇ! ದ್ರೋಣಪುತ್ರನು ನಿಶ್ಚಯವಾಗಿಯೂ ಹೆಗ್ಗಾಡನ್ನು ಸೇರಿರುವನು, ಮಂಗಳಕರಳೇ! ಯುದ್ಧದಲ್ಲಿ ಆತನು (ನೆಲಕ್ಕೆ) ಉರುಳಿದ್ದನ್ನು ನೀನು ಹೇಗೆ ತಿಳಿಯುವಿ?

ದ್ರೌಪದೀ

ದ್ರೋಣಪುತ್ರಸ್ಯ ಸಹಜೋ ಮಣಿಃ ಶಿರಸಿ ಮೇ ಶ್ರುತಃ ।
ನಿಹತ್ಯ ಸಂಖೇ ತಂ ಪಾಪಂ ಪಶ್ಯೇಯಂ ಮಣಿಮಾಹೃತಮ್ ॥೩೩॥

ದ್ರೌಣೇಃ ಶಿರಸ ಉತ್ಕೃತ್ತಂ ಜೀವೇಯಮಿತಿ ಮೇ ಮತಿಃ ॥೩೪॥

ದ್ರೌಪದಿ– 'ದ್ರೋಣಪುತ್ರನ ತಲೆಯಲ್ಲಿ ಆತನೊಡನೆ ಹುಟ್ಟಿದ ಮಣಿಯು ಇದೆ' ಎಂದು ನಾನು ಕೇಳಿರುವೆ. 'ಆ ಪಾಪಿಯನ್ನು ಯುದ್ಧದಲ್ಲಿ ಸಂಹರಿಸಿ ದ್ರೋಣಪುತ್ರನ ತಲೆಯಿಂದ ಕಿತ್ತಿ ತಂದ ಮಣಿಯನ್ನು ಕಂಡು ಬದುಕುವೆ' ಎಂದು ನಾನು ನಿಶ್ಚಯಿಸಿರುವೆ.

ವೈಶಂಪಾಯನಃ

ಇತ್ಯುಕ್ತ್ವಾ ಪಾಂಡವಂ ಕೃಷ್ಣಾ ರಾಜಾನಂ ಚಾರುದರ್ಶನಾ ।
ಭೀಮಸೇನಂ ಕರೇ ಸ್ಪೃಷ್ಟ್ವಾ ಕುಪಿತಾ ವಾಕ್ಯಮಬ್ರವೀತ್ ॥೩೫॥

ವೈಶಂಪಾಯನ– ನೋಡಲು ಚೆಲುವೆಯಾದ ದ್ರೌಪದಿಯು, ಪಾಂಡುಪುತ್ರನಾದ ರಾಜನನ್ನು ಉದ್ದೇಶಿಸಿ ಈ ರೀತಿಯಾಗಿ ಹೇಳಿ, ಕುಪಿತಳಾದ (ಆಕೆಯು), ಭೀಮಸೇನನನ್ನು ಉದ್ದೇಶಿಸಿ ಕರವನ್ನು ಪಿಡಿದವಳಾಗಿ ನುಡಿದಳು.

ದ್ರೌಪದೀ

ತ್ರಾತುಮರ್ಹಸಿ ಮಾಂ ಭೀಮ ಕ್ಷತ್ರಧರ್ಮಮನುಸ್ಮರನ್ ।
ಜಹಿ ತಂ ಪಾಪಕರ್ಮಾಣಂ ಶಂಬರಂ ಮಘವಾನಿವ ॥೩೬॥

ದ್ರೌಪದಿ– ಭೀಮನೇ! ಕ್ಷತ್ರಧರ್ಮವನ್ನು ಸ್ಮರಿಸುತ್ತಾ, ನನ್ನನ್ನು ಸಂರಕ್ಷಿಸಲು (ನೀನೇ) ಅರ್ಹನಾಗಿರುವಿ, ಶಂಬರನನ್ನು ಇಂದ್ರನು ಗೆದ್ದಂತೆ ಪಾಪಕರ್ಮಿಯನ್ನು ಗೆಲ್ಲುವವನಾಗು.

ನ ಹಿ ತೇ ವಿಕ್ರಮೇ ತುಲ್ಯಃ ಪುಮಾನಸ್ತೀಹ ಕಶ್ಚನ ।
ಶ್ರುತಂ ತತ್ ಸರ್ವಲೋಕೇಷು ಪರಮವ್ಯಸನೇ ತಥಾ ॥೩೭॥

'ವಿಕ್ರಮದಲ್ಲಿ ನಿನ್ನ ಸಮಾನನಾದವ ಯಾವ ಪುರುಷನೂ ಈ ಭೂಮಿಯಲ್ಲಿ ಇಲ್ಲ' ಎನ್ನುವುದು ಎಲ್ಲ ಲೋಕದಲ್ಲೂ ಶ್ರುತವಾಗಿದೆ, ಹಾಗೆಯೇ ದೊಡ್ಡ ಆಪತ್ತಿನಲ್ಲಿ (ರಕ್ಷಿಸುವವರು) ನಿನಗಿಂತ ಮಿಗಿಲಾದವರು ಯಾರೂ ಇಲ್ಲ.

ದ್ವೀಪೋಽಭೂಸ್ತ್ವಂ ಹಿ ಪಾರ್ಥಾನಾಂ ನಗರೇ ವಾರಣಾವತೇ ।
ಹಿಡಿಂಬದರ್ಶನೇ ಚೈವ ತಥಾ ತ್ವಮಭವೋ ಗತಿಃ ॥೩೮॥

ವಾರಣಾವತನಗರದಲ್ಲಿ ಕುಂತಿಯ ಮಕ್ಕಳಿಗೆ ನೀನೇ ದ್ವೀಪದಂತಿದ್ದಿ ತಾನೆ? ಹಿಡಿಂಬನನ್ನು ಕಂಡಾಗಲೂ ನೀನೇ ಗತಿಯಾಗಿದ್ದಿ.

ತಥಾ ವಿರಾಟನಗರೇ ಕೀಚಕೇನ ಭೃಶಾರ್ದಿತಾಮ್ ।
ಮಾಮಪ್ಯುದ್ಧೃತವಾನ್ ಕೃಚ್ಛ್ರಾತ್ ಪೌಲೋಮೀಂ ಮಘವಾನಿವ ॥೩೯॥

ಹಾಗೆಯೇ ಪುಲೋಮನ ಪುತ್ರಿಯನ್ನು (ಶಚೀದೇವಿಯನ್ನು) ಸಂರಕ್ಷಿಸಿದ ಇಂದ್ರನಂತೆ, ವಿರಾಟನಗರದಲ್ಲಿದ್ದಾಗ ಕೀಚಕನಿಂದ ಅತ್ಯಂತವಾಗಿ ಪೀಡಿತಳಾದ ನನ್ನನ್ನು ಆಪತ್ತಿನಿಂದ ಮೇಲೆತ್ತಿದ್ದಿ.

ಯಥೈತಾನ್ಯಕೃಥಾಃ ಪಾರ್ಥ ಮಹಾಕರ್ಮಾಣಿ ವೈ ಪುರಾ ।
ತಥಾ ದ್ರೌಣಿಮಮಿತ್ರಘ್ನಂ ವಿನಿಹತ್ಯ ಸುಖೀ ಭವ ॥೪೦॥

ಪೃಥೆಯ ಪುತ್ರನೆ! ಹಿಂದೆ ಹೇಗೆ ಭಾರೀ ಕರ್ಮಗಳನ್ನು ನೆರವೇರಿಸಿರುವಿಯೋ ಹಾಗೆಯೇ ಶತ್ರುಸಂಹಾರಕನಾದ ದ್ರೋಣಪುತ್ರನನ್ನು ಸಂಹರಿಸಿ, ಸುಖದಿಂದ ಬಾಳು.

ವೈಶಂಪಾಯನಃ

ತಸ್ಯಾ ಬಹುವಿಧಂ ದುಃಖಂ ನಿಶಮ್ಯ ಪರಿದೇವಿತುಮ್ ।
ನಾಮರ್ಷಯತ ಕೌಂತೇಯೋ ಭೀಮಸೇನೋ ಮಹಾಬಲಃ ॥೪೧॥

ವೈಶಂಪಾಯನರು– ಆಕೆಯ ದುಃಖದಿಂದ ಬಹುವಿಧವಾದ ರೋದನವನ್ನು ಕೇಳಿದ ಮಹಾಬಲಶಾಲಿಯಾದ ಕುಂತೀಪುತ್ರನಾದ ಭೀಮಸೇನನು ಸಹಿಸದವನಾದನು.

ಸ ಕಾಂಚನವಿಚಿತ್ರಾಂಗಮಾರುರೋಹ ರಥೋತ್ತಮಮ್ ।
ಆದಾಯ ರುಚಿರಂ ಚಿತ್ರಂ ಸಮಾರ್ಗಣಗುಣಂ ಧನುಃ ॥೪೨॥

ಆತನು ಸುಂದರವಾದ ಆಶ್ಚರ್ಯಕರವಾದ ಬಾಣ ಶಿಂಜಿನಿಗಳಿಂದ (ಬಿಲ್ಲಿನ ಅಲಂಕಾರಸಾಮಗ್ರಿ ವಿಶೇಷ) ಕೂಡಿದ ಬಿಲ್ಲನ್ನು ಎತ್ತಿಕೊಂಡು, ಹೊನ್ನಿನಿಂದ ವಿಶೇಷವಾಗಿ ಅಲಂಕತವಾದ ಶ್ರೇಷ್ಠರಥವನ್ನು ಏರಿದನು.

ನಕುಲಂ ಸಾರಥಿಂ ಕೃತ್ವಾ ದ್ರೋಣಪುತ್ರವಧೇ ಧೃತಃ ।
ವಿಸ್ಫಾರ್ಯ ಸಶರಂ ಚಾಪಂ ತೂರ್ಣಮಶ್ವಾನಚೋದಯತ್ ॥೪೩॥

ದ್ರೋಣಪುತ್ರನನ್ನು ಸಂಹರಿಸಲು ನಿಶ್ಚಯಿಸಿದ ಭೀಮಸೇನನು ನಕುಲನನ್ನು ಸಾರಥಿಯನ್ನಾಗಿಸಿಕೊಂಡು, ಬಾಣದಿಂದ ಯುಕ್ತವಾದ ಬಿಲ್ಲನ್ನು ಝೇಂಕರಿಸುತ್ತಾ, ವೇಗವಾಗಿ ಓಡುವಂತೆ ಕುದುರೆಗಳನ್ನು ಪ್ರಚೋದಿಸಿದನು.

ತೇ ಹಯಾಃ ಪುರುಷವ್ಯಾಘ್ರ ಚೋದಿತಾ ವಾತರಂಹಸಃ ।
ವೇಗೇನ ಸಹಸಾ ಜಗ್ಮುರ್ಹರಯಃ ಶೀಘ್ರಗಾಮಿನಃ ॥೪೪॥

ಪುರುಷಶ್ರೇಷ್ಠನೆ! ಗಾಳಿಯಂತೆ ವೇಗವನ್ನು ಹೊಂದಿದ ಆ ಕುದುರೆಗಳು (ಅವನಿಂದ) ಪ್ರೇರಿತನಾದ. ಶೀಘ್ರವಾಗಿ ಓಡುವ ಆ ಕುದುರೆಗಳು ಕೂಡಲೇ ವೇಗದಿಂದ ಹೊರಟವು.

ಶಿಬಿರಾತ್ ಸ ಗೃಹೀತ್ವಾ ತು ರಥಸ್ಯ ಪದಮಚ್ಯುತಃ ।
ದ್ರೋಣಪುತ್ರಗತೇನಾಶು ಯಯೌ ಮಾರ್ಗೇಣ ಭಾರತ ॥೪೫॥

ಭರತಕುಲೋತ್ಪನ್ನನೇ! (ಮಾತಿನಿಂದ) ಚ್ಯುತನಾಗದ ಆತನು (ಭೀಮಸೇನನು, ಅಶ್ವತ್ಥಾಮನ) ರಥದ ಜಾಡನ್ನು ತಿಳಿದು, ಶಿಬಿರದಿಂದ ದ್ರೋಣಪುತ್ರನು ಹೋದ ಮಾರ್ಗದಲ್ಲಿ ಶೀಘ್ರವಾಗಿ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ದ್ರೌಪದೀಪ್ರಾಯೋಪ್ರವೇಶೋ ನಾಮ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ದ್ರೋಣಪುತ್ರನನ್ನು ಕೊಲ್ಲಲು ಭೀಮಸೇನನು ಹೊರಡಲು,
ಕೃಷ್ಣನು ಅಶ್ವತ್ಥಾಮನ ದುರ್ವರ್ತನೆಗಳನ್ನು ಧರ್ಮನಂದನನಿಗೆ ತಿಳಿಸಿ,
ಭೀಮನನ್ನು ಆತನಿಂದ ಸಂರಕ್ಷಿಸಬೇಕು ಎಂದೂ ತಿಳಿಸಿದನು.

ವೈಶಂಪಾಯನಃ

ತಸ್ಮಿನ್ ಪ್ರಯಾತೇ ದುರ್ಧರ್ಷೇ ಯದೂನಾಮೃಷಭಸ್ತತಃ ।
ಅಬ್ರವೀತ್ ಪುಂಡರೀಕಾಕ್ಷಃ ಕುಂತೀಪುತ್ರಂ ಯುಧಿಷ್ಠಿರಮ್ ॥೧॥

ವೈಶಂಪಾಯನ– ಇನ್ನೊಬ್ಬರಿಂದ ಧರ್ಷಣಕ್ಕೆ ಒಳಗಾಗದ ಆತನು (ಭೀಮಸೇನನು) ಹೊರಡಲು, ಆನಂತರ, ಯಾದವರಲ್ಲಿ ಶ್ರೇಷ್ಠನಾದ, ಕಮಲದಂತೆ ಕಣ್ಣುಗಳನ್ನು ಹೊಂದಿರುವ ಕೃಷ್ಣನು ಕುಂತೀಪುತ್ರನಾದ ಯುಧಿಷ್ಠಿರನನ್ನು ಉದ್ದೇಶಿಸಿ ನುಡಿದನು.

ಶ್ರೀಭಗವಾನ್

ಏಷ ತೇ ಪಾಂಡವೋ ಭ್ರಾತಾ ಪುತ್ರಶೋಕಮಪಾರಯನ್ ।
ಜಿಘಾಂಸುರ್ದ್ರೌಣಿಮಾಕ್ರಂದೇ ಏಕ ಏವಾಭಿಧಾವತಿ ॥೨॥

ಕೃಷ್ಣ– ಈ ನಿನ್ನ ಸಹೋದರನಾದ ಪಾಂಡುಪುತ್ರನು (ಭೀಮಸೇನನು) ಪುತ್ರಶೋಕವನ್ನು ತಾಳಲಾರದೆ ಯುದ್ಧದಲ್ಲಿ ದ್ರೋಣಪುತ್ರನನ್ನು ಸಂಹರಿಸಲು ಒಬ್ಬನೇ ಹೊರಟಿರುವನು.

ಭೀಮಃ ಪ್ರಿಯಸ್ತೇ ಸರ್ವೇಭ್ಯೋ ಭ್ರಾತೃಭ್ಯೋ ಭರತರ್ಷಭ ।
ತಂ ಕೃಚ್ಛ್ರಗತಮದ್ಯ ತ್ವಂ ಕಸ್ಮಾನ್ನಾಭ್ಯವಪದ್ಯಸೇ ॥೩॥

ಭರತಕುಲೋತ್ಪನ್ನನೇ! ಎಲ್ಲ ಸಹೋದರರಿಗಿಂತಲೂ ಭೀಮನು ನಿನಗೆ ಹೆಚ್ಚು ಪ್ರಿಯ. ಈಗ ಆಪತ್ತಿನಲ್ಲಿರುವ ಆತನ ಸಹಾಯಕ್ಕಾಗಿ ಏತಕ್ಕಾಗಿ ಧಾವಿಸುತ್ತಿಲ್ಲ?

ಯತ್ತದಾಚಷ್ಟ ಪುತ್ರಾಯ ದ್ರೋಣಃ ಪ್ರಹರತಾಂ ವರಃ ।
ಅಸ್ತ್ರಂ ಬ್ರಹ್ಮಶಿರೋ ನಾಮ ತದ್ದಹೇತ್ ಪೃಥಿವೀಮಪಿ ॥೪॥

ಯುದ್ಧಾಳುಗಳಲ್ಲಿ ಹಿರಿಯನಾದ ದ್ರೋಣನು ಪುತ್ರನಿಗೆ (ಅಶ್ವತ್ಥಾಮನಿಗೆ) ಯಾವುದನ್ನು ಉಪದೇಶಿಸಿರುವನೋ ಆ ಬ್ರಹ್ಮಶಿರ ಎಂಬ ಅಸ್ತ್ರವು ಭೂಮಿಯನ್ನೇ ದಹಿಸೀತು.

ತನ್ಮಹಾತ್ಮಾ ಮಹಾಭಾಗಃ ಕೇತುಃ ಸರ್ವಧನುಷ್ಮತಾಮ್ ।
ಪ್ರತ್ಯಪಾದಯದಾಚಾರ್ಯಃ ಪ್ರೀಯಮಾಣೋ ಧನಂಜಯಮ್ ॥೫॥

ಮಹಾತ್ಮನಾದ ಎಲ್ಲ ಬಿಲ್ಲಾಳುಗಳಿಗೆ ಧ್ವಜದಂತಿರುವ ಮಹಾಭಾಗನಾದ ಆಚಾರ್ಯನು (ದ್ರೋಣನು) ಅರ್ಜುನನಲ್ಲಿ ಪ್ರೀತಿಯುಳ್ಳವನಾಗಿ ಅದನ್ನು (ಆ ಬ್ರಹ್ಮಾಸ್ತ್ರವನ್ನು ಅರ್ಜುನನಿಗೆ) ಉಪದೇಶಿಸಿರುವನು.

ತಂ ಪುತ್ರೋಽಪ್ಯೇಕ ಏವೈನಮ್ ಅನ್ವಯಾಚದಮರ್ಷಣಃ ।
ತತಃ ಪ್ರೋವಾಚ ಪುತ್ರಾಯ ನಾತಿಹೃಷ್ಟಮನಾ ಇವ ॥೬॥

ಇದನ್ನು (ಅರ್ಜುನನಿಗೆ ಉಪದೇಶಿಸಿ ತನಗೆ ಉಪದೇಶಿಸದೇ ಇರುವದನ್ನು) ಸಹಿಸದ ಒಬ್ಬನೇ ಪುತ್ರನಾದ ಅಶ್ವತ್ಥಾಮನು (ಅಸ್ತ್ರವನ್ನು ದ್ರೋಣರಲ್ಲಿ) ಯಾಚಿಸಿದನು. ಆನಂತರದಲ್ಲಿ ಮನಸ್ಸಿಲ್ಲದಿದ್ದರೂ (ದ್ರೋಣರು) ಮಗನಿಗೆ ಉಪದೇಶಿಸಿದರು.

ವಿದಿತಂ ಚಾಪಲಂ ಹ್ಯಾಸೀದ್ ಆತ್ಮಜಸ್ಯ ಮಹಾತ್ಮನಃ ।
ಸರ್ವಧರ್ಮವಿದಾಚಾರ್ಯಃ ಸೋಽನ್ವಶಾಸತ್ ಸುತಂ ತತಃ ॥೭॥

ಮಹಾತ್ಮನಾದ ಪುತ್ರನಿಗೆ ಚಾಂಚಲ್ಯವು ಇದೆ ಎಂದು ತಿಳಿದಿತ್ತು, ಎಲ್ಲ ಧರ್ಮಗಳನ್ನು ತಿಳಿದಿದ್ದ ಆ ಆಚಾರ್ಯನು ಆನಂತರದಲ್ಲಿ ಮಗನನ್ನು ನಿಯಮಿಸಿದ್ದನು.

ದ್ರೋಣಃ

ಪರಮಾಪದ್ಗತೇನಾಪಿ ನ ಸ್ಮ ತಾತ ತ್ವಯಾ ರಣೇ ।
ಇದಮಸ್ತ್ರಂ ಪ್ರಯೋಕ್ತವ್ಯಂ ಮಾನುಷೇಷು ವಿಶೇಷತಃ ॥೮॥

ದ್ರೋಣ– ಪುತ್ರನೇ! ಭಾರೀ ಆಪತ್ತಿನಲ್ಲಿದ್ದರೂ ನೀನು ಈ ಅಸ್ತ್ರವನ್ನು ರಣದಲ್ಲಿ ಪ್ರಯೋಗಿಸಬಾರದು, ವಿಶೇಷವಾಗಿ ಮನುಷ್ಯರಲ್ಲಿ ಪ್ರಯೋಗಿಸಲೇ ಬಾರದು.

ಶ್ರೀಭಗವಾನ್

ಇತ್ಯುಕ್ತವಾನ್ ಗುರುಃ ಪುತ್ರಂ ದ್ರೋಣಃ ಪಶ್ಚಾದಥೋಕ್ತವಾನ್ ।
ನ ತ್ವಂ ಜಾತು ಸತಾಂ ಮಾರ್ಗೇ ಸ್ಥಾತೇತಿ ಪುರುಷರ್ಷಭ ॥೯॥

ಕೃಷ್ಣ– ಗುರುಗಳಾದ ದ್ರೋಣರು ಆನಂತರದಲ್ಲಿ ಈ ರೀತಿಯಾಗಿ ಹೇಳಿದರು: 'ಪುರುಷ ಶ್ರೇಷ್ಠನೆ! ನೀನು ಎಂದೂ ಸಜ್ಜನರ ಮಾರ್ಗದಲ್ಲಿ ಇದ್ದವನಲ್ಲ' ಎಂದು.

ಸ ತದಾಜ್ಞಾಯ ದುಷ್ಪ್ರಾತ್ಮಾ ಪಿತುರ್ವಚನಮಪ್ರಿಯಮ್ ।
ನಿರಾಶಃ ಸರ್ವಕಲ್ಯಾಣೇ ಶೋಚನ್ ಪರ್ಯಪತನ್ಮಹೀಮ್ ॥೧೦॥

ದುಷ್ಪ್ರಭಾವದವನಾದ ಆತನು ಅಪ್ರಿಯವಾದ ತಂದೆಯ ಮಾತನ್ನು ಕೇಳಿ, ಎಲ್ಲ ವಿಧವಾದ ಮಂಗಳದಿಂದ ನಿರಾಶನಾಗಿ, ದುಃಖಿಸುತ್ತಾ ಭೂಮಿಯನ್ನು ಸುತ್ತುತ್ತಿದ್ದನು.

ಅಶ್ವತ್ಥಾಮಾ ಕುರುಶ್ರೇಷ್ಠ ವನಸ್ಥೇ ತ್ವಯಿ ಭಾರತ ।
ಅವಸದ್ ದ್ವಾರಕಾಮೇತ್ಯ ವೃಷ್ಣಿಭಿಃ ಪರಮಾರ್ಚಿತಃ ॥೧೧॥

ಭರತಕುಲೋತ್ಪನ್ನನೇ! ಆ ನರಶ್ರೇಷ್ಠನು ನೀನು ವನದಲ್ಲಿರುವಾಗ, ಒಮ್ಮೆ ಯಾದವರಿಂದ ಪೂಜಿತನಾಗಿ ದ್ವಾರಕೆಯಲ್ಲಿ ವಾಸಿಸಿದ್ದನು.

ಸ ಕದಾಚಿತ್ ಸಮುದ್ರಾಂತೇ ವಸನ್ ದ್ವಾರವತೀಮನು ।
ಏಕ ಏಕಂ ಸಮಾಗಮ್ಯ ಮಾಮುವಾಚ ಹಸನ್ನಿವ ॥೧೨॥

ಆತನು ಒಮ್ಮೆ ದ್ವಾರಾವತಿಯ ಸಮುದ್ರತೀರದಲ್ಲಿ ಒಬ್ಬನೇ ನಾನಿರುವಾಗ ಆತನೊಬ್ಬನೇ ನನ್ನ ಬಳಿ ಬಂದು ಹುಸಿಯಾಗಿ ನಗುತ್ತಾ ನನ್ನನ್ನು ಉದ್ದೇಶಿಸಿ ಹೇಳಿದನು.

ಯತ್ ತದುಗ್ರಂ ತಪಃ ಕೃಷ್ಣ ಚರನ್ನಮಿತವಿಕ್ರಮಃ ।
ಅಗಸ್ತ್ಯಾದ್ ಭಾರತಾಚಾರ್ಯಃ ಪ್ರತ್ಯಪದ್ಯತ ಮೇ ಪಿತಾ ॥೧೩॥

ಅಸ್ತ್ರಂ ಬ್ರಹ್ಮಶಿರೋ ನಾಮ ದೇವಗಂಧರ್ವಪೂಜಿತಮ್ ।
ತದದ್ಯ ಮಯಿ ದಾಶಾರ್ಹ ಯಥಾ ಪಿತರಿ ಮೇ ತಥಾ ॥೧೪॥

ದಶಾರ್ಹಕುಲೋತ್ಪನ್ನ ಕೃಷ್ಣ! ಅತಿಪರಾಕ್ರಮಿಯಾದ ಭರತಕುಲದ ಆಚಾರ್ಯನಾದ ನನ್ನ ತಂದೆಯು ಉಗ್ರವಾದ ತಪಸ್ಸನ್ನಾಚರಿಸಿ, ದೇವತೆಗಳಿಂದ ಗಂಧರ್ವರಿಂದ ಪೂಜಿತವಾದ ಬ್ರಹ್ಮಶಿರಾಸ್ತ್ರವನ್ನು ಅಗಸ್ತ್ಯಮುನಿಗಳಿಂದ ಪಡೆದನು, ಅದು ನನ್ನ ತಂದೆಯಲ್ಲಿ ಹೇಗಿದ್ದಿತೋ ಹಾಗೆ ಈಗ ನನ್ನಲ್ಲಿದೆ.

ಅಸ್ಮತ್ತಸ್ತದುಪಾದಾಯ ದಿವ್ಯಮಸ್ತ್ರವಿದಾಂ ವರ ।
ಮಮಾಪ್ಯಸ್ತ್ರಂ ಪ್ರಯಚ್ಛ ತ್ವಂ ಚಕ್ರಂ ರಿಪುಹರಂ ರಣೇ ॥೧೫॥

ಅಸ್ತ್ರಜ್ಞರಲ್ಲಿ ಹಿರಿಯನಾದವನೇ! ನನ್ನಿಂದ ದಿವ್ಯವಾದ ಅದನ್ನು (ಬ್ರಹ್ಮಶಿರಾಸ್ತ್ರವನ್ನು) ಪಡೆದು, ನನಗಾದರೂ ರಣದಲ್ಲಿ ಶತ್ರುಗಳನ್ನು ಸಂಹರಿಸುವ ಚಕ್ರಾಯುಧವನ್ನು ನೀನು ಕೊಡು.

ಸ ರಾಜನ್ ಪ್ರೀಯಮಾಣೇನ ಮಯಾऽಪ್ಯುಕ್ತಃ ಕೃತಾಂಜಲಿಃ ।
ಯಾಚಮಾನಃ ಪ್ರಯತ್ನೇನ ಮತ್ತೋऽಸ್ತ್ರಂ ಭರತರ್ಷಭ ॥೧೬॥

ಭರತಕುಲೋತ್ಪನ್ನ ರಾಜನೆ! ನನ್ನಿಂದ ಅಸ್ತ್ರವನ್ನು ಪಡೆಯಲು, ಕೈಮುಗಿದು ಪ್ರಯತ್ನಪೂರ್ವಕವಾಗಿ ಯಾಚಿಸುತ್ತಿದ್ದ ಆತನನ್ನು ಉದ್ದೇಶಿಸಿ ನಾನು ಸಂತಸಗೊಳಿಸಲೆಂದೇ ಹೇಳಿದೆನು.

ದೇವದಾನವಗಂಧರ್ವಮನುಷ್ಯಪತಗೋರಗಾಃ ।
ನ ಸಮಾ ಮಮ ವೀರ್ಯಸ್ಯ ಶತಾಂಶೇನಾಪಿ ಪಿಂಡಿತಾಃ ॥೧೭॥

ದೇವತೆಗಳು, ದಾನವರು, ಗಂಧರ್ವರು, ಮನುಷ್ಯರು, ಪಕ್ಷಿಗಳು, ಸರ್ಪಗಳು ಇವರೆಲ್ಲರೂ ಒಟ್ಟಾದರೂ ನನ್ನ ವೀರ್ಯದ (ಪರಾಕ್ರಮದ) ನೂರನೇ ಒಂದು ಅಂಶಕ್ಕೆ ಸಮರಾಗರು.

ಇದಂ ಧನುರಿಯಂ ಶಕ್ತಿರಿದಂ ಚಕ್ರಮಿಯಂ ಗದಾ ।
ಯದ್ಯದಿಚ್ಛಸಿ ಚೇದಸ್ತ್ರಂ ಮತ್ತಸ್ತತ್ತದ್ ದದಾಮಿ ತೇ ॥೧೮॥

ಈ ಧನು, ಈ ಶಕ್ತಿ, ಈ ಚಕ್ರ, ಯಾವ ಯಾವ ಅಸ್ತ್ರವನ್ನು ನನ್ನಿಂದ ಬಯಸುವಿಯೋ ಅದನ್ನು ನಾನು ನಿನಗೆ ನೀಡುವೆನು.

ಯಚ್ಚಕ್ನೋಷಿ ಸಮುದ್ಯಂತುಂ ಪ್ರಯೋಕ್ತುಮಪಿ ವಾ ರಣೇ ।
ತದ್ ಗೃಹಾಣ ವಿನಾऽಸ್ತ್ರೇಣ ಯನ್ಮೇ ದಾತುಮಿಹೇಚ್ಛಸಿ ॥೧೯॥

ನನಗೆ ಯಾವ ಅಸ್ತ್ರವನ್ನು ಕೊಡಲು ಈಗ ಇಚ್ಛಿಸಿರುವಿಯೋ, ಅದರ ವಿನಿಮಯವಿಲ್ಲದೇ, ಯಾವ ಶಸ್ತ್ರವನ್ನು ಮೇಲೆ ಎತ್ತಲು ಶಕ್ಯವಿದೆಯೋ, ರಣರಂಗದಲ್ಲಿ ಪ್ರಯೋಗಿಸಲು ಶಕ್ಯವಿದೆಯೋ ಅದನ್ನು ಸ್ವೀಕರಿಸು.

ಸ ಸುನಾಭಂ ಸಹಸ್ಸಾರಂ ವಜ್ರನಾಭಮಯಸ್ಮಯಮ್ ।
ವವ್ರೇ ಚಕ್ರಂ ಮಹಾಭಾಗೋ ಮತ್ತಃ ಸ್ಪರ್ಧನ್ ಮಯಾ ಸಹ ॥೨೦॥

ನನ್ನೊಡನೆ ಸ್ಪರ್ಧಿಸುತ್ತಿದ್ದ ಆ ಮಹಾಭಾಗನು, ಸುಂದರಗುಂಬದಲ್ಲಿ ಸಾವಿರ ಆರಗಳಿಂದ ಕೂಡಿದ ವಜ್ರಮಯವಾದ ಗುಂಬದಿಂದ ಆತ್ಯಾಶ್ಚರ್ಯಕರವಾದ ಚಕ್ರವನ್ನು ನನ್ನಿಂದ ಬಯಸಿದನು.

ಗೃಹಾಣ ಚಕ್ರಮಿತ್ಯುಕ್ತೋ ಮಯಾ ತು ತದನಂತರಮ್ ।
ಜಗ್ರಾಹೋಪೇತ್ಯ ಸಹಸಾ ಚಕ್ರಂ ಸವ್ಯೇನ ಪಾಣಿನಾ ॥೨೧॥

'ಚಕ್ರವನ್ನು ಸ್ವೀಕರಿಸು' ಎಂದು ನಾನು ಹೇಳಲು, ಆನಂತರ ವೇಗವಾಗಿ ಬಂದು ಎಡದ ಕೈಯಿಂದ ಚಕ್ರವನ್ನು ಹಿಡಿದನು.

ನ ಚೈನಮಶಕತ್ ಸ್ಥಾನಾತ್ ಪ್ರಚಾಲಯಿತುಮಪ್ಯುತ ॥೨೨॥

ಅಥೈನಂ ದಕ್ಷಿಣೇನಾಪಿ ಗ್ರಹೀತುಮುಪಚಕ್ರಮೇ ।
ಸರ್ವಯತ್ನೇನ ತೇನಾಪಿ ಗೃಹ್ಯ ನೈನಮಕಂಪಯತ್ ॥೨೩॥

ಅದನ್ನು ಆ ಜಾಗದಿಂದ ಕದಲಿಸಲೂ ಸಮರ್ಥನಾಗಲಿಲ್ಲ. ಅನಂತರ ಬಲ ಕೈಯಿಂದ ಹಿಡಿದುಕೊಂಡನು, ಎಲ್ಲ ವಿಧದ ಪ್ರಯತ್ನವನ್ನು ಮಾಡಿದರೂ ಅದನ್ನು ಅಲುಗಾಡಿಸಲೂ ಆಗಲಿಲ್ಲ.

ತತಃ ಸರ್ವಬಲೇನಾಪಿ ಯದೈನಂ ನ ಶಶಾಕ ಹ ।
ಉದ್ಯಂತುಂ ವಾ ಚಾಲಯಿತುಂ ದ್ರೌಣಿಃ ಪರಮದುರ್ಮನಾಃ ॥೨೪॥

ಕೃತ್ವಾ ಯತ್ನಂ ಪರಂ ಶ್ರಾಂತಃ ಸ ನ್ಯವರ್ತತ ಭಾರತ ॥೨೫॥

ಭರತಕುಲೋತ್ಪನ್ನನೇ! ಆನಂತರದಲ್ಲಿ ದ್ರೋಣಪುತ್ರನು ಸಂಪೂರ್ಣ ಬಲದಿಂದಲೂ ಸಹ ಅದನ್ನು ಎತ್ತಲು ಅಥವಾ ಹಂದಾಡಿಸಲೂ ಸಮರ್ಥ-ನಾಗಲಿಲ್ಲವೋ, ಪೂರ್ಣಯತ್ನಿಸಿ ಆಯಾಸಗೊಂಡು ಬೇಸರದಿಂದ ಹಿಂತಿರುಗಿದನು.

ನಿವೃತ್ತಮನಸಂ ತಸ್ಮಾದಭಿಪ್ರಾಯಾದ್ ವಿಚೇತಸಮ್ ।
ಅಹಮಾಮಂತ್ರ್ಯ ಸಂವಿಗ್ನಮಶ್ವತ್ಥಾಮಾನಮಬ್ರುವಮ್ ॥೨೬॥

ಆ ಅಭಿಪ್ರಾಯದಿಂದ (ಚಕ್ರವನ್ನು ಪಡೆಯಬೇಕೆಂಬ ಅಭಿಪ್ರಾಯದಿಂದ) ನಿವೃತ್ತಮನಸ್ಕನಾದ, ವ್ಯಗ್ರನಾದ, ಉದ್ವೇಗಕ್ಕೆ ಒಳಗಾದ ಅಶ್ವತ್ಥಾಮನನ್ನು ನಾನು ಕರೆದು ಹೇಳಿದೆನು.

ಯಃ ಸ ದೈವಮನುಷ್ಯೇಷು ಪ್ರಮಾಣಂ ಪರಮಂ ಗತಃ ।
ಗಾಂಡೀವಧನ್ವಾ ಶ್ವೇತಾಶ್ವಃ ಕಪಿಪ್ರವರಕೇತನಃ ॥೨೭॥

ಯಃ ಸಾಕ್ಷಾದ್ದೇವದೇವೇಶಂ ಶಿತಿಕಂಠಮುಮಾಪತಿಮ್ ।
ದ್ವಂದ್ವಯುದ್ಧೇ ಪುರಾ ಜಿಷ್ಣುಸ್ತೋಷಯಾಮಾಸ ಶಂಕರಮ್ ॥೨೮॥

ಯಸ್ಮಾತ್ ಪ್ರಿಯತರೋ ನಾಸ್ತಿ ಮಮಾನ್ಯಃ ಪುರುಷೋ ಭುವಿ ।
ನಾದೇಯಂ ತಸ್ಯ ಮೇ ಕಿಂಚಿದಪಿ ಪ್ರಾಣಾನ್ಮಹಾತ್ಮನಃ ॥೨೯॥

ಯಾವನು ದೇವ-ಮನುಷ್ಯರಲ್ಲಿ ಪರಮಪ್ರಮಾಣನಾಗಿರುವನೋ, ಗಾಂಡೀವಧನುವನ್ನು ಧರಿಸಿರುವನೋ, ಬಿಳಿಯ ಅಶ್ವಗಳನ್ನು ಹೊಂದಿರುವನೋ, ಕಪಿಶ್ರೇಷ್ಠನನ್ನು ಧ್ವಜದಲ್ಲಿ ಹೊಂದಿರುವನೋ, ಯಾವ ಜಯಶಾಲಿಯಾದ ಅರ್ಜುನನು ಹಿಂದೆ ದೇವದೇವೇಶನಾದ ವಿಷಕಂಠನಾದ ಉಮಾಪತಿಯಾದ ಶಂಕರನನ್ನು ಸಾಕ್ಷಾತ್ತಾಗಿ ದ್ವಂದಯುದ್ಧದಲ್ಲಿ ಸಂತೋಷಪಡಿಸಿದನೋ, ನನಗೆ ಯಾವ ಅರ್ಜುನನಿಂದ ಪ್ರಿಯತರರಾದ ಯಾವ ಪುರುಷರೂ ಈ ಭೂಮಿಯಲ್ಲಿ ಮತ್ತೊಬ್ಬರು ಇಲ್ಲವೋ, ನನ್ನ ಪ್ರಾಣಕ್ಕಿಂತಲೂ ಹೆಚ್ಚಿನವನಾದ ಆತನಿಗೆ ಕೊಡದೇ ಇರುವುದು ಯಾವುದೂ (ಯಾವ ವಸ್ತುವೂ) ನನ್ನಲ್ಲಿ ಇಲ್ಲ.

ತೇನಾಪಿ ಸುಹೃದಾ ಬ್ರಹ್ಮನ್ ಪಾರ್ಥೇನಾಕ್ಲಿಷ್ಟಕರ್ಮಣಾ ।
ನೋಕ್ತಪೂರ್ವಮಿದಂ ವಾಕ್ಯಂ ಯಸ್ತ್ವಂ ಮಾಮಭಿಭಾಷಸೇ ॥೩೦॥

ಬ್ರಾಹ್ಮಣನೇ! ನೀನು ನನಗೆ ಏನನ್ನು ಹೇಳಿದೆಯೋ ಈ ಮಾತನ್ನು, ಕ್ಲಿಷ್ಟಕರ್ಮಗಳನ್ನು ಸುಲಭದಲ್ಲಿ ನೆರವೇರಿಸುವ, ಅತ್ಯಂತ ಸ್ನೇಹಿತನಾದ ಆ ಕುಂತೀಪುತ್ರನೂ ಸಹ, ಈ ಮೊದಲು ಹೇಳಿಲ್ಲ.

ಬ್ರಹ್ಮಚರ್ಯಂ ಮಹದ್ಘೋರಂ ಚರಿತ್ವಾ ದ್ವಾದಶವಾರ್ಷಿಕೀಮ್ ।
ಹಿಮವತ್ಪಾದಮಭ್ಯೇತ್ಯ ಯೋ ಮಯಾ ತಪಸಾऽऽರ್ಜಿತಃ ॥೩೧॥

ಸಮಾನವ್ರತಚಾರಿಣ್ಯಾಂ ರುಗ್ಮಿಣ್ಯಾಂ ಯೋ ವ್ಯಜಾಯತ ।
ಸನತ್ಕುಮಾರಸ್ತೇಜಸ್ವೀ ಪ್ರದ್ಯುಮ್ನೋ ನಾಮ ಮೇ ಸುತಃ ॥೩೨॥

ತೇನಾಪ್ಯೇತನ್ಮಹದ್ದಿವ್ಯಂ ಚಕ್ರಮಪ್ರತಿಮಂ ರಣೇ ।
ನ ಪ್ರಾರ್ಥಿತಮಭೂನ್ ಮೂಢ ತದಿದಂ ಪ್ರಾರ್ಥಿತಂ ತ್ವಯಾ ॥೩೩॥

ಮೂರ್ಖನೇ! ಹಿಮವತ್‌ಪರ್ವತವನ್ನು ಏರಿ, ಭಾರೀಘೋರವಾದ ಬ್ರಹ್ಮಚರ್ಯದಿಂದ ಹನ್ನೆರಡುವರ್ಷ ತಪಸ್ಸನ್ನು ಆಚರಿಸಿ, ನಾನು ಯಾರನ್ನು ಪಡೆದೆನೋ, ನನ್ನಂತೆ ತಪವನ್ನು ಆಚರಿಸಿದ ರುಕ್ಮಿಣಿಯಲ್ಲಿ ಯಾರು ಅವತರಿಸಿದನೋ, ಆತನೇ ಸನತ್‌ಕುಮಾರನ ಅವತಾರನಾದ ತೇಜಸ್ವಿಯಾದ ಪ್ರದ್ಯುಮ್ನ ಎಂಬ ಹೆಸರಿನ ನನ್ನ ಪುತ್ರನು. ಆತನೂ ಸಹ ಮಹತ್ತಾದ ದೇವಸಂಬಂಧಿಯಾದ ಯುದ್ಧಭೂಮಿಯಲ್ಲಿ ಅಸದೃಶವಾದ ಈ ಚಕ್ರವನ್ನು ಯಾಚಿಸಿರುವುದಿಲ್ಲ, ಅಂತಹದನ್ನು ನೀನು ಪ್ರಾರ್ಥಿಸಿರುವಿ.

ರಾಮೇಣಾತಿಬಲೇನೈವ ನೋಕ್ತಪೂರ್ವಂ ಕದಾಚನ ।
ನ ಗದೇನ ನ ಸಾಂಬೇನ ಯದಿದಂ ಪ್ರಾರ್ಥಿತಂ ತ್ವಯಾ ॥೩೪॥

ಅತಿ ಬಲಿಷ್ಠನಾದ ಬಲರಾಮನೂ ಈ ಹಿಂದೆ ಈ ರೀತಿಯಾಗಿ ಯಾಚಿಸಿರುವುದಿಲ್ಲ. ಯಾವುದನ್ನು ನೀನು ಯಾಚಿಸಿರುವಿಯೋ ಅದನ್ನು (ನನ್ನ ಸಹೋದರನಾದ) ಗದನೂ ಕೇಳಿರುವುದಿಲ್ಲ, (ಪುತ್ರನಾದ) ಸಾಂಬನೂ ಕೇಳಿಲ್ಲ.

ದ್ವಾರಕಾವಾಸಿಭಿಶ್ಚೈವ ವೃಷ್ಣ್ಯಂಧಕಮಹಾರಥೈಃ ।
ನೋಕ್ತಪೂರ್ವಮಿದಂ ಕ್ಷುದ್ರಂ ಯದಿದಂ ಪ್ರಾರ್ಥಿತಂ ತ್ವಯಾ ॥೩೫॥

ನೀನು ಯಾವ ಕ್ಷುದ್ರವಾದದ್ದನ್ನು ಯಾಚಿಸಿರುವೆಯೋ ಇಂತಹದನ್ನು ಈ ಮೊದಲು ದ್ವಾರಕಾವಾಸಿಗಳಾದ ವೃಷ್ಣಿಗಳಾಗಲಿ, ಅಂಧಕವಂಶಜರಾಗಲಿ ಯಾಚಿಸಿರುವುದಿಲ್ಲ.

ಭಾರತಾಚಾರ್ಯಪುತ್ರಃ ಸನ್ ಮಾನಿತಸ್ತ್ವಂ ಮಯಾ ದ್ವಿಜಃ ।
ಚಕ್ರೇಣ ರಥಿನಾಂ ಶ್ರೇಷ್ಠ ಯನ್ನಸ್ತಾತ ಯುಯುತ್ಸಸೇ ॥೩೬॥

ಭರತಕುಲೋತ್ಪನ್ನರ ಗುರುಗಳ ಪುತ್ರನಾದ ಬ್ರಾಹ್ಮಣನಾದ ನೀನು ನನ್ನಿಂದ ಪೂಜಿತನಾಗಿರುವಿ, ರಥಿಗಳಲ್ಲಿ ಹಿರಿಯನಾದವನೇ, ಪೂಜ್ಯನೇ! ಚಕ್ರದಿಂದ ಯಾರೊಡನೆ ಕಾದಾಡಲು ಬಯಸಿರುವಿ?

ಏವಮುಕ್ತೋ ಮಯಾ ದ್ರೌಣಿರ್ಮಾಮಿದಂ ಪ್ರತ್ಯುವಾಚ ಹ ॥೩೭॥

ಈ ರೀತಿಯಾಗಿ ಪ್ರಶ್ನಿತನಾದ ದ್ರೋಣಪುತ್ರನು ಈ ರೀತಿಯಾಗಿ ನನಗೆ ಉತ್ತರಿಸಿದನು.

ದ್ರೌಣಿಃ

ಪ್ರಯುಜ್ಯ ಭವತೇ ಪೂಜಾಂ ಯೋತ್ಸ್ಯೇ ಕೃಷ್ಣ ತ್ವಯಾ ಸಹ ॥೩೮॥

ಪ್ರಾರ್ಥಿತಂ ತೇ ಮಯಾ ಚಕ್ರಂ ದೇವದಾನವಪೂಜಿತಮ್ ।
ಅಜೇಯಃ ಸ್ಯಾಮಿತಿ ವಿಭೋ ಸತ್ಯಮೇತದ್ ಬ್ರವೀಮಿ ತೇ ॥೩೯॥

ಅಶ್ವತ್ಥಾಮ– ಸ್ವಾಮಿಯೇ ಕೃಷ್ಣ! ನಿನಗೆ ಸತ್ಯವನ್ನು ಹೇಳುತ್ತಿರುವೆ, ಅಜೇಯನಾಗಬೇಕು ಎಂದು ದೇವ-ದಾನವರಿಂದ ಪೂಜಿತವಾದ ಚಕ್ರವನ್ನು ನಾನು

ನಿನ್ನಲ್ಲಿ ಯಾಚಿಸಿದೆನು, ನಿನಗೆ ಪೂಜೆಯನ್ನು ಸಲ್ಲಿಸಿ, ನಿನ್ನೊಡನೆ ಯುದ್ಧವನ್ನು ಬಯಸಿದ್ದೆನು.

ಸೋಽಹಂ ತದ್ ದುರ್ಲಭಂ ಚಕ್ರಮನವಾಪ್ಯೈವ ಕೇಶವ ।
ಪ್ರತಿಯಾಸ್ಯಾಮಿ ಗೋವಿಂದ ಶಿವೇನಾಭಿವದಸ್ವ ಮಾಮ್ ॥೪೦॥

ಕೇಶವ! ಅಂತಹ ನಾನು ದುರ್ಲಭವಾದ ಚಕ್ರವನ್ನು ಪಡೆಯದೇ ಹಿಂತಿರುಗುತ್ತಿರುವೆ. ಕೇಶವ! ನನಗೆ ಮಂಗಳವಾಗಲಿ ಎಂದು ಹರಸು.

ಏತತ್ಸುನಾಭಂ ಭೋಜಾನಾಮೃಷಭೇಣ ತ್ವಯಾ ಧೃತಮ್ ।
ಚಕ್ರಮಪ್ರತಿಚಕ್ರೇಣ ಭುವಿ ನಾನ್ಯೋಽಭಿಪದ್ಯತೇ ॥೪೧॥

ಭೋಜವಂಶೀಯರಲ್ಲಿ ಶ್ರೇಷ್ಠನೇ! ಸುಂದರ ಗುಂಬವನ್ನು ಹೊಂದಿರುವ ಈ ಚಕ್ರವನ್ನು ಧರಿಸಿರುವಿ. ಭೂಮಿಯಲ್ಲಿ ಬೇರಾರೂ ಪ್ರತಿಚಕ್ರವನ್ನು ಹೊಂದಿರುವುದಿಲ್ಲ.

ಶ್ರೀಭಗವಾನ್

ಏತಾವದುಕ್ತ್ವಾ ದ್ರೌಣಿರ್ಮಾಂ ಯುಗ್ಯಾನಶ್ವಾನ್ ಧನಾನಿ ಚ ।
ಆದಾಯೋಪಯಯೌ ಕಾಲೇ ರತ್ನಾನಿ ವಿವಿಧಾನಿ ಚ ॥೪೨॥

ಕೃಷ್ಣ– ದ್ರೋಣಪುತ್ರನು ಈ ರೀತಿಯಾಗಿ ಹೇಳಿ, ಹೊರಡುವ ಕಾಲದಲ್ಲಿ ಹೂಡಲು ಯೋಗ್ಯವಾದ ಕುದುರೆಗಳನ್ನು, ಧನವನ್ನು ಮತ್ತು ವಿವಿಧರತ್ನಗಳನ್ನು ಸ್ವೀಕರಿಸಿ ಹೊರಟನು.

ಸ ಸಂರಬ್ಧೋ ದುರಾತ್ಮಾ ಚ ಚಪಲಃ ಕ್ರೂರ ಏವ ಚ ।
ವೇದ ಚಾಸ್ತ್ರಂ ಬ್ರಹ್ಮಶಿರಸ್ತಸ್ಮಾದ್ ರಕ್ಷ್ಯೋ ವೃಕೋದರಃ ॥೪೩॥

ಆತನು (ಅಶ್ವತ್ಥಾಮನು) ಕೋಪಿಷ್ಟನು, ದುಷ್ಟನು, ಚಪಲನು, ಕ್ರೂರನೂ ಸಹ, ಬ್ರಹ್ಮಶಿರಾಸ್ತ್ರವನ್ನು ಹೊಂದಿರುವನು. ಆದ್ದರಿಂದ ವೃಕೋದರನು (ಆತನಿಂದ) ರಕ್ಷ್ಯನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ವಾಸುದೇವವಚನಂ ನಾಮ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಆದ್ರವಂತಂ ಪುನರ್ದೃಷ್ಟ್ವಾ ಭೀಮಂ ದ್ರೋಣಾತ್ಮಜೋ ರುಷಾ ।
ಆವೃತ್ಯ ಯುದ್ಧ್ಯನ್ ವಿಜಿತೋಽಸ್ತ್ರಂ ಬ್ರಹ್ಮಶಿರ ಆದದೇ ॥೧೫೬॥

ಭೀಮನು ಪುನಃ ಓಟ್ಟಿಸಿಕೊಂಡು ಬರುವುದನ್ನು ಕಂಡು ಅಶ್ವತ್ಥಾಮನು ಕೋಪದಿಂದ ಹಿಂತಿರುಗಿ ನಿಂತು ಯುದ್ಧಮಾಡಿ ಸೋತು ಬ್ರಹ್ಮಾಸ್ತ್ರವನ್ನು ಎತ್ತಿಕೊಂಡನು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಕೃಷ್ಣ ಮುಂತಾದವರು ವೇದವ್ಯಾಸರ ಸಮೀಪದಲ್ಲಿದ್ದ ದ್ರೋಣಪುತ್ರನನ್ನು ಕಂಡರು. ಕೃಷ್ಣಾದಿಗಳನ್ನು ಕಂಡ ಅಶ್ವತ್ಥಾಮನು ಪಾಂಡವರ ನಾಶಕ್ಕಾಗಿ ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸಿದನು.

ವೈಶಂಪಾಯನಃ

ಏವಮುಕ್ತ್ವಾ ಕುರುಶ್ರೇಷ್ಠಂ ಸರ್ವಯಾದವನಂದನಃ ।
ಸರ್ವಾಯುಧವರೋಪೇತಮಾರುರೋಹ ರಥೋತ್ತಮಮ್ ॥೧॥

ವೈಶಂಪಾಯನ– ಎಲ್ಲ ಯದುಕುಲೋತ್ಪನ್ನರಿಗೆ ಆನಂದದಾಯಕನಾದ ಕೃಷ್ಣನು ಕುರುಶ್ರೇಷ್ಠನನ್ನು ಉದ್ದೇಶಿಸಿ ಈ ರೀತಿಯಾಗಿ ತಿಳಿಸಿ, ಎಲ್ಲ ಆಯುಧಗಳನ್ನು ಹೇರಿದ ಶ್ರೇಷ್ಠರಥವನ್ನು ಏರಿದನು.

ಯುಕ್ತಂ ಪರಮಕಾಂಭೋಜೈಃ ತುರಗೈರ್ಹೇಮಮಾಲಿಭಿಃ ।
ಉದಿತಾದಿತ್ಯಸಂಕಾಶಂ ಸರ್ವರತ್ನವಿಭೂಷಿತಮ್ ॥೨॥

ದಕ್ಷಿಣೇಽಸ್ಯಾವಹತ್ ಶೈಬ್ಯಃ ಸುಗ್ರೀವಃ ಸವ್ಯತೋ ಧುರಮ್ ।
ಪಾರ್ಷ್ಣಿವಾಹೌ ಚ ತಸ್ಯಾಸ್ತಾಂ ಮೇಘಪುಷ್ಪಬಲಾಹಕೌ ॥೩॥

ಎಲ್ಲ ಬಗೆಯ ರತ್ನಗಳಿಂದ ಅಲಂಕೃತವಾದ, ಉದಿಸುವ ಸೂರ್ಯನಂತಿರುವ, ಶ್ರೇಷ್ಠವಾದ ಕಾಂಭೋಜದೇಶದಲ್ಲಿ ಉತ್ಪನ್ನವಾದ, ಚಿನ್ನದ ಸರಗಳಿಂದ ಅಲಂಕೃತವಾದ ಕುದುರೆಗಳಿಂದ ಸನ್ನದ್ಧವಾದ ರಥವನ್ನು, ಆ ರಥದ ಬಲಭಾಗದಲ್ಲಿ ಶೈಬ್ಯ ಎಂಬ

ನಿನ್ನಲ್ಲಿ ಯಾಚಿಸಿದೆನು, ನಿನಗೆ ಪೂಜೆಯನ್ನು ಸಲ್ಲಿಸಿ, ನಿನ್ನೊಡನೆ ಯುದ್ಧವನ್ನು ಬಯಸಿದ್ದೆನು.

ಸೋಽಹಂ ತದ್ ದುರ್ಲಭಂ ಚಕ್ರಮನವಾಪ್ಯೈವ ಕೇಶವ ।
ಪ್ರತಿಯಾಸ್ಯಾಮಿ ಗೋವಿಂದ ಶಿವೇನಾಭಿವದಸ್ವ ಮಾಮ್ ॥೪೦॥

ಕೇಶವ! ಅಂತಹ ನಾನು ದುರ್ಲಭವಾದ ಚಕ್ರವನ್ನು ಪಡೆಯದೇ ಹಿಂತಿರುಗುತ್ತಿರುವೆ. ಕೇಶವ! ನನಗೆ ಮಂಗಳವಾಗಲಿ ಎಂದು ಹರಸು.

ಏತತ್ಸುನಾಭಂ ಭೋಜಾನಾಮೃಷಭೇಣ ತ್ವಯಾ ಧೃತಮ್ ।
ಚಕ್ರಮಪ್ರತಿಚಕ್ರೇಣ ಭುವಿ ನಾನ್ಯೋಽಭಿಪದ್ಯತೇ ॥೪೧॥

ಭೋಜವಂಶೀಯರಲ್ಲಿ ಶ್ರೇಷ್ಠನೇ! ಸುಂದರ ಗುಂಬವನ್ನು ಹೊಂದಿರುವ ಈ ಚಕ್ರವನ್ನು ಧರಿಸಿರುವಿ. ಭೂಮಿಯಲ್ಲಿ ಬೇರಾರೂ ಪ್ರತಿಚಕ್ರವನ್ನು ಹೊಂದಿರುವುದಿಲ್ಲ.

ಶ್ರೀಭಗವಾನ್

ಏತಾವದುಕ್ತ್ವಾ ದ್ರೌಣಿರ್ಮಾಂ ಯುಗ್ಯಾನಶ್ವಾನ್ ಧನಾನಿ ಚ ।
ಆದಾಯೋಪಯಯೌ ಕಾಲೇ ರತ್ನಾನಿ ವಿವಿಧಾನಿ ಚ ॥೪೨॥

ಕೃಷ್ಣ- ದ್ರೋಣಪುತ್ರನು ಈ ರೀತಿಯಾಗಿ ಹೇಳಿ, ಹೊರಡುವ ಕಾಲದಲ್ಲಿ ಹೂಡಲು ಯೋಗ್ಯವಾದ ಕುದುರೆಗಳನ್ನು, ಧನವನ್ನು ಮತ್ತು ವಿವಿಧರತ್ನಗಳನ್ನು ಸ್ವೀಕರಿಸಿ ಹೊರಟನು.

ಸ ಸಂರಬ್ಧೋ ದುರಾತ್ಮಾ ಚ ಚಪಲಃ ಕ್ರೂರ ಏವ ಚ ।
ವೇದ ಚಾಸ್ತ್ರಂ ಬ್ರಹ್ಮಶಿರಸ್ತಸ್ಮಾದ್ ರಕ್ಷ್ಯೋ ವೃಕೋದರಃ ॥೪೩॥

ಆತನು (ಅಶ್ವತ್ಥಾಮನು) ಕೋಪಿಷ್ಟನು, ದುಷ್ಟನು, ಚಪಲನು, ಕ್ರೂರನೂ ಸಹ, ಬ್ರಹ್ಮಶಿರಾಸ್ತ್ರವನ್ನು ಹೊಂದಿರುವನು. ಆದ್ದರಿಂದ ವೃಕೋದರನು (ಆತನಿಂದ) ರಕ್ಷ್ಯನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ವಾಸುದೇವವಚನಂ ನಾಮ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಆದ್ರವಂತಂ ಪುನರ್ದೃಷ್ಟ್ವಾ ಭೀಮಂ ದ್ರೋಣಾತ್ಮಜೋ ರುಷಾ ।
ಆವೃತ್ಯ ಯುದ್ಧ್ಯನ್ ವಿಜಿತೋಽಸ್ತ್ರಂ ಬ್ರಹ್ಮಶಿರ ಆದದೇ ॥೧೫೬॥

ಭೀಮನು ಪುನಃ ಓಟ್ಟಿಸಿಕೊಂಡು ಬರುವುದನ್ನು ಕಂಡು ಅಶ್ವತ್ಥಾಮನು ಕೋಪದಿಂದ ಹಿಂತಿರುಗಿ ನಿಂತು ಯುದ್ಧಮಾಡಿ ಸೋತು ಬ್ರಹ್ಮಾಸ್ತ್ರವನ್ನು ಎತ್ತಿಕೊಂಡನು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಕೃಷ್ಣ ಮುಂತಾದವರು ವೇದವ್ಯಾಸರ ಸಮೀಪದಲ್ಲಿದ್ದ ದ್ರೋಣಪುತ್ರನನ್ನು ಕಂಡರು. ಕೃಷ್ಣಾದಿಗಳನ್ನು ಕಂಡ ಅಶ್ವತ್ಥಾಮನು ಪಾಂಡವರ ನಾಶಕ್ಕಾಗಿ ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸಿದನು.

ವೈಶಂಪಾಯನಃ

ಏವಮುಕ್ತ್ವಾ ಕುರುಶ್ರೇಷ್ಠಂ ಸರ್ವಯಾದವನಂದನಃ ।
ಸರ್ವಾಯುಧವರೋಪೇತಮಾರುರೋಹ ರಥೋತ್ತಮಮ್ ॥೧॥

ವೈಶಂಪಾಯನ– ಎಲ್ಲ ಯದುಕುಲೋತ್ಪನ್ನರಿಗೆ ಆನಂದದಾಯಕನಾದ ಕೃಷ್ಣನು ಕುರುಶ್ರೇಷ್ಠನನ್ನು ಉದ್ದೇಶಿಸಿ ಈ ರೀತಿಯಾಗಿ ತಿಳಿಸಿ, ಎಲ್ಲ ಆಯುಧಗಳನ್ನು ಹೇರಿದ ಶ್ರೇಷ್ಠರಥವನ್ನು ಏರಿದನು.

ಯುಕ್ತಂ ಪರಮಕಾಂಭೋಜೈಃ ತುರಗೈರ್ಹೇಮಮಾಲಿಭಿಃ ।
ಉದಿತಾದಿತ್ಯಸಂಕಾಶಂ ಸರ್ವರತ್ನವಿಭೂಷಿತಮ್ ॥೨॥

ದಕ್ಷಿಣೇಽಸ್ಯಾವಹತ್ ಶೈಬ್ಯಃ ಸುಗ್ರೀವಃ ಸವ್ಯತೋ ಧುರಮ್ ।
ಪಾರ್ಷ್ಣಿವಾಹೌ ಚ ತಸ್ಯಾಸ್ತಾಂ ಮೇಘಪುಷ್ಪಬಲಾಹಕೌ ॥೩॥

ಎಲ್ಲ ಬಗೆಯ ರತ್ನಗಳಿಂದ ಅಲಂಕೃತವಾದ, ಉದಿಸುವ ಸೂರ್ಯನಂತಿರುವ, ಶ್ರೇಷ್ಠವಾದ ಕಾಂಭೋಜದೇಶದಲ್ಲಿ ಉತ್ಪನ್ನವಾದ, ಚಿನ್ನದ ಸರಗಳಿಂದ ಅಲಂಕೃತವಾದ ಕುದುರೆಗಳಿಂದ ಸನ್ನದ್ಧವಾದ ರಥವನ್ನು, ಆ ರಥದ ಬಲಭಾಗದಲ್ಲಿ ಶೈಬ್ಯ ಎಂಬ

ಅಶ್ವವು, ಎಡಭಾಗದಲ್ಲಿ ಸುಗ್ರೀವ ಎಂಬ ಅಶ್ವವು ನೊಗವನ್ನು ಹೊತ್ತಿದ್ದವು. ಮೇಘಪುಷ್ಪ ಬಲಾಹಕ ಎಂಬ ಕುದುರೆಗಳು ಜೊತೆಯಲ್ಲಿ ಹೊತ್ತಿದ್ದವು.

ವಿಶ್ವಕರ್ಮಕೃತಾ ದಿವ್ಯಾ ನಾನಾರತ್ನವಿಭೂಷಿತಾ ।
ಉಚ್ಛ್ರಿತಾ ಚ ರಥೇ ತಸ್ಮಿನ್ ಧ್ವಜಯಷ್ಟಿರದೃಶ್ಯತ ॥೪॥

ವಿಶ್ವಕರ್ಮನಿಂದ ನಿರ್ಮಿತವಾದ ನಾನಾಬಗೆಯ ರತ್ನಗಳಿಂದ ಅಲಂಕೃತವಾದ ಎತ್ತರದ ಧ್ವಜಸ್ತಂಭವು ಅಲ್ಲಿ (ಆ ರಥದಲ್ಲಿ) ಕಾಣುತ್ತಿತ್ತು.

ವೈನತೇಯಃ ಸ್ಥಿತಸ್ತಸ್ಯಾಂ ಪ್ರಭಾಮಂಡಲರಶ್ಮಿವಾನ್ ।
ತಸ್ಯ ಸತ್ಯವತಃ ಕೇತುರ್ಭುಜಂಗಾರಿರದೃಶ್ಯತ ॥೫॥

ಪ್ರಭಾಮಂಡಲದ ಕಿರಣಗಳಿಂದ ಯುಕ್ತನಾದ, ಸತ್ಯವಂತರಿಗೆ ಕೇತುಪ್ರಾಯನಾದ, ಸರ್ಪಗಳಿಗೆ ಶತ್ರುವಾದ ವಿನತಾಪುತ್ರನು ಅಲ್ಲಿ (ಆ ಧ್ವಜಸ್ತಂಭದಲ್ಲಿ) ಕಂಡನು.

ಅನ್ವಾರೋಹದ್ ಹೃಷೀಕೇಶಃ ಕೇತುಃ ಸರ್ವಧನುಷ್ಮತಾಮ್ ।
ಅರ್ಜುನಃ ಸತ್ಯಕರ್ಮಾ ಚ ಕುರುರಾಜೋ ಯುಧಿಷ್ಠಿರಃ ॥೬॥

ಹೃಷೀಕೇಶನು (ಆ ರಥವನ್ನು) ಏರಿದನು, ಎಲ್ಲ ಬಿಲ್ಲಾಳುಗಳಿಗೆ ಧ್ವಜಪ್ರಾಯನಾದ ಅರ್ಜುನನು ಮತ್ತು ಸತ್ಯಕರ್ಮಿಯಾದ ಯುಧಿಷ್ಠಿರನು (ಕೃಷ್ಣನನ್ನು) ಅನುಸರಿಸಿ (ಆ ರಥವನ್ನು) ಏರಿದರು.

ಶುಶುಭಾತೇ ತು ತೌ ವೀರೌ ದಾಶಾರ್ಹಮಭಿತಃ ಸ್ಥಿತೌ ।
ರಥಸ್ಥಂ ಶಾರ್ಙ್ಗಧನ್ವಾನಮ್ ಅಶ್ವಿನಾವಿವ ವಾಸವಮ್ ॥೭॥

ಶಾರ್ಙ್ಗಧನುರ್ಧಾರಿಯಾದ ದಶಾರ್ಹಕುಲೋತ್ಪನ್ನನಾದ ರಥದಲ್ಲಿರುವ ಕೃಷ್ಣನ ಪಕ್ಕದಲ್ಲಿ ಕುಳಿತ ಆ ಈರ್ವರು ವೀರರು (ಯುಧಿಷ್ಠಿರ, ಅರ್ಜುನನು) ಇಂದ್ರನನ್ನು ಅನುಸರಿಸಿರುವ ಅಶ್ವಿನಿ ದೇವತೆಗಳಂತೆ ಶೋಭಿಸಿದರು.

ಉಭಾವಾರೋಪ್ಯ ದಾಶಾರ್ಹಃ ಸ್ಯಂದನಂ ಲೋಕಪೂಜಿತಮ್ ।
ಪ್ರತೋದೇನ ಜವೋಪೇತಾನ್ ಪರಮಾಶ್ವಾನಚೋದಯತ್ ॥೮॥

ಲೋಕಪೂಜಿತವಾದ ರಥದಲ್ಲಿ ಈರ್ವರನ್ನು (ಯುಧಿಷ್ಠಿರ, ಅರ್ಜುನನನ್ನು) ಏರಿಸಿಕೊಂಡು, ಅತಿವೇಗವಾಗಿ ಸಾಗುವ ಕುದುರೆಗಳನ್ನು ಬಾರಕೋಲಿನಿಂದ ದಶಾರ್ಹಕುಲೋತ್ಪನ್ನನು ಪ್ರೇರೇಪಿಸಿದನು.

ತೇ ಹಯಾಃ ಸಹಸೋತ್ಪೇತುಃ ಗೃಹೀತ್ವಾ ಸ್ಯಂದನೋತ್ತಮಮ್ ।
ಆಸ್ಥಿತಂ ಪಾಂಡವೇಯಾಭ್ಯಾಂ ಯದೂನಾಮೃಷಭೇಣ ಚ ॥೯॥

ಯದುಗಳಿಗೆ ಶ್ರೇಷ್ಠನಾದ ಕೃಷ್ಣನು, ಈರ್ವರು ಪಾಂಡುಪುತ್ರರು ಕುಳಿತಿರುವ ರಥೋತ್ತಮವನ್ನು ಎಳೆಯುತ್ತಾ ಆ ಕುದುರೆಗಳು ವೇಗವಾಗಿ ನೆಗೆದವು.

ವಹತಾಂ ಶಾರ್ಙ್ಗಧನ್ವಾನಮ್ ಅಶ್ವಾನಾಂ ಶೀಘ್ರಗಾಮಿನಾಮ್ ।
ಪ್ರಾದುರಾಸೀನ್ಮಹಾನ್ ಶಬ್ದಃ ಪಕ್ಷಿಣಾಂ ಪತತಾಮಿವ ॥೧೦॥

ಶಾರ್ಙ್ಗಧನುರ್ಧಾರಿಯನ್ನು ಹೊತ್ತ ಶೀಘ್ರವಾಗಿ ಸಾಗುವ ಕುದುರೆಗಳಿಂದ, ಹಾರುವ ಪಕ್ಷಿಗಳಿಂದ ಉಂಟಾಗುವ ಭಾರೀ ಶಬ್ದದಂತೆ ಶಬ್ದವು ಉಂಟಾಯಿತು.

ತೇ ಸಮರ್ಥಂ ಮಹಾಬಾಹುಂ ಕ್ಷಣೇನ ಭರತರ್ಷಭ ।
ಭೀಮಸೇನಂ ಮಹಾತ್ಮಾನಮನುಸೃತ್ಯ ಸುವೇಗಿತಾಃ ॥೧೧॥

ಭರತಕುಲೋತ್ಪನ್ನರಲ್ಲಿ ಶ್ರೇಷ್ಠನೇ! ಅತಿವೇಗವನ್ನು ಹೊಂದಿರುವ ಅವರು (ಕೃಷ್ಣಾದಿಗಳು) ಮಹಾತ್ಮನಾದ ನೀಳಬಾಹುವಾದ ಸಮರ್ಥನಾದ ಭೀಮಸೇನನನ್ನು ಅನುಸರಿಸಿದರು.

ಕ್ರೋಧದೀಪ್ತಂ ತು ಕೌಂತೇಯಂ ದ್ವಿಷದರ್ಥೇ ಸಮುದ್ಯತಮ್ ।
ನಾಶಕ್ನುವನ್ ವಾರಯಿತುಂ ಸಮೇತ್ಯಾಪಿ ಮಹಾರಥಾಃ ॥೧೨॥

ಆದರೆ ಕೋಪದಿಂದ ಬೇಂಕಿಯಂತಾಗಿದ್ದ ದ್ವೇಷಿಯ ನಾಶಕ್ಕಾಗಿ ಉದ್ಯುಕ್ತನಾದ ಕುಂತಿಯ ಪುತ್ರನನ್ನು (ಭೀಮಸೇನನನ್ನು) ಸಮೀಪಿಸಿದರೂ ಆ ಮಹಾರಥರು (ಕೃಷ್ಣಾದಿಗಳು) ತಡೆಯಲು ಸಮರ್ಥರಾಗಲಿಲ್ಲ.

ಸ ತೇಷಾಮಗ್ರತಃ ಶೂರಃ ಶ್ರೀಮತಾಂ ದೃಢಧನ್ವಿನಾಮ್ ।
ಯಯೌ ಭಾಗೀರಥೀಕಚ್ಛಂ ಹರಿಭಿರ್ದೇಮಮಾಲಿಭಿಃ ॥೧೩॥

ಯತ್ರ ಸ ಶ್ರೂಯತೇ ದ್ರೌಣಿಃ ಪುತ್ರಹಂತಾ ದುರಾತ್ಮವಾನ್ ॥೧೪॥

ಧನುರ್ಧಾರಿಗಳಲ್ಲಿ ಗಟ್ಟಿಗರಾದ ಕಾಂತಿಯುಕ್ತರಾದ ಅವರ (ಕೃಷ್ಣಾದಿಗಳ) ಸಮಕ್ಷಮದಲ್ಲಿಯೇ ಶೂರನಾದ ಅತನು (ಭೀಮಸೇನನು) ಚಿನ್ನದ ಆಭರಣಗಳಿಂದ ಭೂಷಿತವಾದ ಅಶ್ವಗಳ ಸಹಾಯದಿಂದ, ದುಷ್ಟನಾದ (ತನ್ನ) ಪುತ್ರರನ್ನು ಸಂಹರಿಸಿದ ಆ ದ್ರೋಣಪುತ್ರನು ಎಲ್ಲಿರುವನು ಎಂದು ಕೇಳಿದ್ದನೋ, (ಆ) ಗಂಗಾನದಿಯ ತೀರಕ್ಕೆ ತೆರಳಿದನು.

ಸ ದದರ್ಶ ಮಹಾತ್ಮಾನಮುದಕಾಂತೇ ಯಶಸ್ವಿನಮ್ ।
ಕೃಷ್ಣದ್ವೈಪಾಯನಂ ವ್ಯಾಸಮಾಸೀನಮೃಷಿಭಿಃ ಸಹ ॥೧೫॥

ನದಿಯ ಸಮೀಪದಲ್ಲಿ ಋಷಿಗಳೊಡನೆ ಕುಳಿತಿರುವ, ಮಹಾತ್ಮನಾದ ಕೀರ್ತಿಶಾಲಿಯಾದ ಕೃಷ್ಣದ್ವೈಪಾಯನ ಎಂಬ ಹೆಸರನ್ನು ಹೊಂದಿರುವ ವ್ಯಾಸರನ್ನು ಆತನು ಕಂಡನು.

ತಂ ಚೈವ ಕ್ರೂರಕರ್ಮಾಣಂ ಘೃತಾಕ್ತಂ ಕುಶಚೀರಿಣಮ್ ।
ರಜಸಾ ಧ್ವಸ್ತಮಾಸೀನಂ ದದರ್ಶ ದ್ರೌಣಿಮಂತಿಕೇ ॥೧೬॥

ಅಲ್ಲಿಯೇ ಸಮೀಪದಲ್ಲಿ ತುಪ್ಪದಲ್ಲಿ ಅದ್ದಿದ ದರ್ಭೆಯ ಉಡುಪನ್ನು ತೊಟ್ಟ (ದೇಹದಲ್ಲಿ ಉಂಟಾದ ಘಾಸಿಗೆ ಔಷಧೋಪಚಾರಕ್ಕಾಗಿ ತೊಡಿಗೆಯನ್ನು ತುಪ್ಪದಲ್ಲಿ ನೆನೆಸಲಾಗಿದೆ ಎಂದು ತಿಳಿಯುವುದು) ನೀಚಕರ್ಮಿಯಾದ ಧೂಳಿನಿಂದ ಮಲಿನಗೊಂಡು ಕುಳಿತಿರುವ ಆ ದ್ರೋಣಪುತ್ರನನ್ನೂ ಕಂಡನು.

ತಮಭ್ಯಧಾವತ್ ಕೌಂತೇಯಃ ಪ್ರಗೃಹ್ಯ ಸಶರಂ ಧನುಃ ।
ಭೀಮಸೇನೋ ಮಹಾಬಾಹುಸ್ತಿಷ್ಠ ತಿಷ್ಠೇತಿ ಚಾಬ್ರವೀತ್ ॥೧೭॥

ನೀಳಬಾಹುವಾದ ಬಿಲ್ಲು-ಬಾಣಗಳಿಂದ ಕೂಡಿರುವ ಕುಂತಿಪುತ್ರನಾದ ಭೀಮಸೇನನು 'ನಿಲ್ಲು ನಿಲ್ಲು' ಎಂದು ಹೇಳುತ್ತಾ ಆತನನ್ನು (ಅಶ್ವತ್ಥಾಮನನ್ನು) ಉದ್ದೇಶಿಸಿ ಹೇಳಿದನು.

ತಂ ದೃಷ್ಟ್ವಾ ಭೀಮಕರ್ಮಾಣಂ ಪ್ರಗೃಹೀತಶರಾಸನಮ್ ।
ಭ್ರಾತರೌ ಪೃಷ್ಠತಶ್ಚಾಸ್ಯ ಜನಾರ್ದನರಥಸ್ಥಿತೌ ॥೧೮॥

ವ್ಯಥಿತಾತ್ಮಾऽಭವದ್ ದ್ರೌಣಿಃ ಪ್ರಾಪ್ತಂ ಚೇದಮಮನ್ಯತ ॥೧೯॥

ಭಯಂಕರ ಕರ್ಮಗಳನ್ನು ಆಚರಿಸುವ ಬಿಲ್ಲು ಬಾಣಗಳನ್ನು ಧರಿಸಿರುವ ಆತನನ್ನು (ಭೀಮಸೇನನನ್ನು), ಹಿಂಬದಿಯಲ್ಲಿ ಕೃಷ್ಣನ ರಥದಲ್ಲಿ ಕುಳಿತಿರುವ ಆತನ ಸಹೋದರರನ್ನು (ಧರ್ಮಾರ್ಜುನರನ್ನು) ನೋಡಿ, ದ್ರೋಣಪುತ್ರನು ದುಃಖಿತನಾದನು ಮತ್ತು ಇದು ಪ್ರಾಪ್ತವಾಯಿತು (ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸುವ ಕಾಲವು ಪ್ರಾಪ್ತವಾಯಿತು) ಎಂದು ಆಲೋಚಿಸಿದನು.

ಸ ತದ್ದಿವ್ಯಮದೀನಾತ್ಮಾ ಪರಮಾಸ್ತ್ರಮಚಿಂತಯತ್ ।
ಜಗ್ರಾಹ ಚ ಶರೈಷೀಕಾಂ ದ್ರೌಣಿಃ ಸವ್ಯೇನ ಪಾಣಿನಾ ॥೨೦॥

ದೈನ್ಯದಿಂದ ಬಾಳದ ಆ ದ್ರೋಣಪುತ್ರನು ಆ ದಿವ್ಯವಾದ ಪರಮಾಸ್ತ್ರವನ್ನು ಸ್ಮರಿಸಿದನು, ಎಡದ ಕರದಿಂದ ಜೊಂಡುಹುಲ್ಲಿನಿಂದಾದ ಬಾಣವನ್ನು ಸಹ ಪ್ರತಿಗ್ರಹಿಸಿದನು.

ಸ ತಾಮಾಪದಮಾಸಾದ್ಯ ದಿವ್ಯಮಸ್ತ್ರಮುದೀರಯನ್ ॥೨೧॥

ಅಮೃಷ್ಯಮಾಣಸ್ತಾನ್ ಶೂರಾನ್ ದಿವ್ಯಾಯುಧಧರಾನ್ ಸ್ಥಿತಾನ್ ।
ಅಪಾಂಡವಾಯೇತಿ ರುಷಾ ವಾಚಮುತ್ಸೃಜ್ಯ ದಾರುಣಮ್ ॥೨೨॥

ಇತ್ಯುಕ್ತ್ವಾ ರಾಜಶಾರ್ದೂಲ ದ್ರೋಣಪುತ್ರಃ ಪ್ರತಾಪವಾನ್ ।
ಸರ್ವಲೋಕಪ್ರಮೋಹಾರ್ಥಂ ತದಸ್ತ್ರಂ ಪ್ರಮುಮೋಚ ಹ ॥೨೩॥

ರಾಜಶ್ರೇಷ್ಠನೆ! ದಿವ್ಯಾಸ್ತ್ರಗಳನ್ನು ಧರಿಸಿ (ತನ್ನ ಎದುರಿನಲ್ಲಿ) ನಿಂತಿರುವ ಆ ಶೂರರನ್ನು (ಕೃಷ್ಣಾದಿಗಳನ್ನು) ಸಹಿಸದ ಪರಾಕ್ರಮಶಾಲಿಯಾದ ಆ ದ್ರೋಣಪುತ್ರನು ಅಂತಹ ಆಪತ್ತನ್ನು ಹೊಂದಿದವನಾಗಿ, ಕೋಪದಿಂದ ಕೂಡಿದವನಾಗಿ (ಈ ಭೂಮಿಯಲ್ಲಿ) 'ಪಾಂಡುಪುತ್ರರು ಇಲ್ಲದಂತಾಗಲಿ' ಎಂಬ ಭೀಕರವಾದ ಮಾತನ್ನು ನುಡಿಯುತ್ತಾ, ದಿವ್ಯವಾದ (ಬ್ರಹ್ಮಶಿರ) ಅಸ್ತ್ರಮಂತ್ರವನ್ನು ಉಚ್ಚರಿಸುತ್ತಾ ಸರ್ವಲೋಕನಾಶಕವಾದ ಆ ಅಸ್ತ್ರವನ್ನು ಪ್ರಯೋಗಿಸಿದನು. (೨೨ನೇ ಶ್ಲೋಕದಲ್ಲಿ 'ಅಪಾಂಡವಾಯ' ಎಂದಿದೆ. ಶಬ್ದತಾಡಿತ ಅರ್ಥವು 'ಪಾಂಡುಪುತ್ರನ ನಾಶಕ್ಕಾಗಿ' ಎಂದಾಗುವುದು. ಪ್ರಕೃತಕ್ಕೆ 'ಎಲ್ಲ ಪಾಂಡವರ ನಾಶಕ್ಕಾಗಿ' ಎಂಬ ಅರ್ಥದ

ಯತ್ರ ಸ ಶ್ರೂಯತೇ ದ್ರೌಣಿಃ ಪುತ್ರಹಂತಾ ದುರಾತ್ಮವಾನ್ ॥೧೪॥

ಧನುರ್ಧಾರಿಗಳಲ್ಲಿ ಗಟ್ಟಿಗರಾದ ಕಾಂತಿಯುಕ್ತರಾದ ಅವರ (ಕೃಷ್ಣಾದಿಗಳ) ಸಮಕ್ಷಮದಲ್ಲಿಯೇ ಶೂರನಾದ ಅತನು (ಭೀಮಸೇನನು) ಚಿನ್ನದ ಆಭರಣಗಳಿಂದ ಭೂಷಿತವಾದ ಅಶ್ವಗಳ ಸಹಾಯದಿಂದ, ದುಷ್ಟನಾದ (ತನ್ನ) ಪುತ್ರರನ್ನು ಸಂಹರಿಸಿದ ಆ ದ್ರೋಣಪುತ್ರನು ಎಲ್ಲಿರುವನು ಎಂದು ಕೇಳಿದ್ದನೋ, (ಆ) ಗಂಗಾನದಿಯ ತೀರಕ್ಕೆ ತೆರಳಿದನು.

ಸ ದದರ್ಶ ಮಹಾತ್ಮಾನಮುದಕಾಂತೇ ಯಶಸ್ವಿನಮ್ ।
ಕೃಷ್ಣದ್ವೈಪಾಯನಂ ವ್ಯಾಸಮಾಸೀನಮೃಷಿಭಿಃ ಸಹ ॥೧೫॥

ನದಿಯ ಸಮೀಪದಲ್ಲಿ ಋಷಿಗಳೊಡನೆ ಕುಳಿತಿರುವ, ಮಹಾತ್ಮನಾದ ಕೀರ್ತಿಶಾಲಿಯಾದ ಕೃಷ್ಣದ್ವೈಪಾಯನ ಎಂಬ ಹೆಸರನ್ನು ಹೊಂದಿರುವ ವ್ಯಾಸರನ್ನು ಆತನು ಕಂಡನು.

ತಂ ಚೈವ ಕ್ರೂರಕರ್ಮಾಣಂ ಘೃತಾಕ್ತಂ ಕುಶಚೀರಿಣಮ್ ।
ರಜಸಾ ಧ್ವಸ್ತಮಾಸೀನಂ ದದರ್ಶ ದ್ರೌಣಿಮಂತಿಕೇ ॥೧೬॥

ಅಲ್ಲಿಯೇ ಸಮೀಪದಲ್ಲಿ ತುಪ್ಪದಲ್ಲಿ ಅದ್ದಿದ ದರ್ಭೆಯ ಉಡುಪನ್ನು ತೊಟ್ಟ (ದೇಹದಲ್ಲಿ ಉಂಟಾದ ಘಾಸಿಗೆ ಔಷಧೋಪಚಾರಕ್ಕಾಗಿ ತೊಡಿಗೆಯನ್ನು ತುಪ್ಪದಲ್ಲಿ ನೆನೆಸಲಾಗಿದೆ ಎಂದು ತಿಳಿಯುವುದು) ನೀಚಕರ್ಮಿಯಾದ ಧೂಳಿನಿಂದ ಮಲಿನಗೊಂಡು ಕುಳಿತಿರುವ ಆ ದ್ರೋಣಪುತ್ರನನ್ನೂ ಕಂಡನು.

ತಮಭ್ಯಧಾವತ್ ಕೌಂತೇಯಃ ಪ್ರಗೃಹ್ಯ ಸಶರಂ ಧನುಃ ।
ಭೀಮಸೇನೋ ಮಹಾಬಾಹುಸ್ತಿಷ್ಠ ತಿಷ್ಠೇತಿ ಚಾಬ್ರವೀತ್ ॥೧೭॥

ನೀಳಬಾಹುವಾದ ಬಿಲ್ಲು-ಬಾಣಗಳಿಂದ ಕೂಡಿರುವ ಕುಂತಿಪುತ್ರನಾದ ಭೀಮಸೇನನು 'ನಿಲ್ಲು ನಿಲ್ಲು' ಎಂದು ಹೇಳುತ್ತಾ ಆತನನ್ನು (ಅಶ್ವತ್ಥಾಮನನ್ನು) ಉದ್ದೇಶಿಸಿ ಹೇಳಿದನು.

ತಂ ದೃಷ್ಟ್ವಾ ಭೀಮಕರ್ಮಾಣಂ ಪ್ರಗೃಹೀತಶರಾಸನಮ್ ।
ಭ್ರಾತರೌ ಪೃಷ್ಠತಶ್ಚಾಸ್ಯ ಜನಾರ್ದನರಥಸ್ಥಿತೌ ॥೧೮॥

ವ್ಯಥಿತಾತ್ಮಾऽಭವದ್ ದ್ರೌಣಿಃ ಪ್ರಾಪ್ತಂ ಚೇದಮಮನ್ಯತ ॥೧೯॥

ಭಯಂಕರ ಕರ್ಮಗಳನ್ನು ಆಚರಿಸುವ ಬಿಲ್ಲು ಬಾಣಗಳನ್ನು ಧರಿಸಿರುವ ಆತನನ್ನು (ಭೀಮಸೇನನನ್ನು), ಹಿಂಬದಿಯಲ್ಲಿ ಕೃಷ್ಣನ ರಥದಲ್ಲಿ ಕುಳಿತಿರುವ ಆತನ ಸಹೋದರರನ್ನು (ಧರ್ಮಾರ್ಜುನರನ್ನು) ನೋಡಿ, ದ್ರೋಣಪುತ್ರನು ದುಃಖಿತನಾದನು ಮತ್ತು ಇದು ಪ್ರಾಪ್ತವಾಯಿತು (ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸುವ ಕಾಲವು ಪ್ರಾಪ್ತವಾಯಿತು) ಎಂದು ಆಲೋಚಿಸಿದನು.

ಸ ತದ್ದಿವ್ಯಮದೀನಾತ್ಮಾ ಪರಮಾಸ್ತ್ರಮಚಿಂತಯತ್ ।
ಜಗ್ರಾಹ ಚ ಶರೈಷೀಕಾಂ ದ್ರೌಣಿಃ ಸವ್ಯೇನ ಪಾಣಿನಾ ॥೨೦॥

ದೈನ್ಯದಿಂದ ಬಾಳದ ಆ ದ್ರೋಣಪುತ್ರನು ಆ ದಿವ್ಯವಾದ ಪರಮಾಸ್ತ್ರವನ್ನು ಸ್ಮರಿಸಿದನು, ಎಡದ ಕರದಿಂದ ಜೊಂಡುಹುಲ್ಲಿನಿಂದಾದ ಬಾಣವನ್ನು ಸಹ ಪ್ರತಿಗ್ರಹಿಸಿದನು.

ಸ ತಾಮಾಪದಮಾಸಾದ್ಯ ದಿವ್ಯಮಸ್ತ್ರಮುದೀರಯನ್ ॥೨೧॥

ಅಮೃಷ್ಯಮಾಣಸ್ತಾನ್ ಶೂರಾನ್ ದಿವ್ಯಾಯುಧಧರಾನ್ ಸ್ಥಿತಾನ್ ।
ಅಪಾಂಡವಾಯೇತಿ ರುಷಾ ವಾಚಮುತ್ಸೃಜ್ಯ ದಾರುಣಮ್ ॥೨೨॥

ಇತ್ಯುಕ್ತ್ವಾ ರಾಜಶಾರ್ದೂಲ ದ್ರೋಣಪುತ್ರಃ ಪ್ರತಾಪವಾನ್ ।
ಸರ್ವಲೋಕಪ್ರಮೋಹಾರ್ಥಂ ತದಸ್ತ್ರಂ ಪ್ರಮುಮೋಚ ಹ ॥೨೩॥

ರಾಜಶ್ರೇಷ್ಠನೆ! ದಿವ್ಯಾಸ್ತ್ರಗಳನ್ನು ಧರಿಸಿ (ತನ್ನ ಎದುರಿನಲ್ಲಿ) ನಿಂತಿರುವ ಆ ಶೂರರನ್ನು (ಕೃಷ್ಣಾದಿಗಳನ್ನು) ಸಹಿಸದ ಪರಾಕ್ರಮಶಾಲಿಯಾದ ಆ ದ್ರೋಣಪುತ್ರನು ಅಂತಹ ಆಪತ್ತನ್ನು ಹೊಂದಿದವನಾಗಿ, ಕೋಪದಿಂದ ಕೂಡಿದವನಾಗಿ (ಈ ಭೂಮಿಯಲ್ಲಿ) 'ಪಾಂಡುಪುತ್ರರು ಇಲ್ಲದಂತಾಗಲಿ' ಎಂಬ ಭೀಕರವಾದ ಮಾತನ್ನು ನುಡಿಯುತ್ತಾ, ದಿವ್ಯವಾದ (ಬ್ರಹ್ಮಶಿರ) ಅಸ್ತ್ರಮಂತ್ರವನ್ನು ಉಚ್ಚರಿಸುತ್ತಾ ಸರ್ವಲೋಕನಾಶಕವಾದ ಆ ಅಸ್ತ್ರವನ್ನು ಪ್ರಯೋಗಿಸಿದನು. (೨೨ನೇ ಶ್ಲೋಕದಲ್ಲಿ 'ಅಪಾಂಡವಾಯ' ಎಂದಿದೆ. ಶಬ್ದತಾಡಿತ ಅರ್ಥವು 'ಪಾಂಡುಪುತ್ರನ ನಾಶಕ್ಕಾಗಿ' ಎಂದಾಗುವುದು. ಪ್ರಕೃತಕ್ಕೆ 'ಎಲ್ಲ ಪಾಂಡವರ ನಾಶಕ್ಕಾಗಿ' ಎಂಬ ಅರ್ಥದ

ಅಗತ್ಯವಿರುವುದರಿಂದ ಲಕ್ಷಾಲಂಕಾರದಲ್ಲಿ ಇದು ಭಾವಪ್ರಧಾನ ನಿರ್ದೇಶ ಎಂದು ತಿಳಿಸಿರುವರು. ಆಗ ಅಭಿಪ್ರೇತಾರ್ಥವು ಲಭ್ಯವಾಗುವುದು.)

ತತಸ್ತಸ್ಯಾಮಿಷೀಕಾಯಾಂ ಪಾವಕಃ ಸಮಜಾಯತ ।
ನಾಶಯತ್ಯೇವ ಲೋಕಾಂಸ್ತ್ರೀನ್ ಕಾಲಾಂತಕಯಮೋಪಮಃ ॥೨೪॥

ಆನಂತರದಲ್ಲಿ ಆ ಜೊಂಡುಹುಲ್ಲಿನಲ್ಲಿ ಮೂರು ಲೋಕವನ್ನು ನಾಶಮಾಡಲು ಸಮರ್ಥವಾದ ಕಾಲನಾಮಕನಾದ ಅಂತಕನಾದ ಯಮನಂತಿರುವ ಬೆಂಕಿಯು ಪ್ರಕಟವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಐಷೀಕಪರ್ವಣಿ ಐಷಿಕಾಸ್ತ್ರಮೋಚನಂ ನಾಮ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಏತಸ್ಮಿನ್ನಂತರೇ ಕೃಷ್ಣೋ ಧರ್ಮಜೇನಾರ್ಜುನೇನ ಚ ।
ತತ್ರಾಗಮತ್ ತದಸ್ತ್ರಂ ಚ ಭೀಮಂ ಚಾವ್ಯರ್ಥತಾಂ ನಯನ್ ॥

ಅಷ್ಟರಲ್ಲಿ ಬ್ರಹ್ಮಾಸ್ತ್ರವನ್ನೂ ಭೀಮನ ಬಲವನ್ನೂ ವ್ಯರ್ಥಗೊಳಿಸಬಾರದು ಎಂಬ ಉದ್ದೇಶದಿಂದ ಶ್ರೀಕೃಷ್ಣನು ಧರ್ಮರಾಜ, ಅರ್ಜುನರೊಂದಿಗೆ ಅಲ್ಲಿಗೆ ಬಂದನು.

ಅವಧ್ಯೋ ಭೀಮಸೇನಸ್ತದಸ್ತ್ರಂ ಚಾಮೋಘಮೇವ ಯತ್ ।
ವಿಷ್ಣುನೈವೋಭಯಂ ಯಸ್ಮಾತ್ ಕ್ಲೃಪ್ತಂ ಭೀಮೋಽಸ್ತ್ರಮೇವ ತತ್ ॥

ಗಾಯತ್ರೀ ತತ್ರ ಮಂತ್ರೋ ಯದ್ ಬ್ರಹ್ಮಾ ತದ್ಧ್ಯಾನದೇವತಾ ।
ಧ್ಯೇಯೋ ನಾರಾಯಣೋ ದೇವೋ ಜಗತ್ಸವಿತಾ ಸ್ವಯಮ್ ॥

ಏಕೆಂದರೆ ಭೀಮಸೇನನು ಅವಧ್ಯ. ಬ್ರಹ್ಮಾಸ್ತ್ರವೂ ಅಮೋಘ. ವಿಷ್ಣುವೆ ಹಾಗೆ ಎರಡನ್ನೂ ಸಂಕಲ್ಪಿಸಿದ್ದಾನೆ ಮತ್ತು ಭಾವಿ ಬ್ರಹ್ಮನಾದ ಭೀಮಸೇನನು ಬ್ರಹ್ಮಾಸ್ತ್ರಕ್ಕೆ ಅಭಿಮಾನಿಯೂ ಹೌದು. ಏಕೆಂದರೆ ಅದಕ್ಕೆ ಗಾಯತ್ರಿಯೆ ಮಂತ್ರ. ಬ್ರಹ್ಮ ಅದನ್ನು

ಧ್ಯಾನ ಮಾಡುವ ದೇವತೆ. ದೇವನಾದ ಸ್ವತಃ ಜಗತ್ತಿನ ಸೃಷ್ಟಿಕರ್ತನಾದ ಸವಿತೃನಾಮಕ ನಾರಾಯಣ ಧ್ಯೇಯ, ಸೂರ್ಯನಲ್ಲ.

ಊಚೇ ಚ ಪಾರ್ಥಯೋಃ ಕೃಷ್ಣೋ ಯತ್ ಕೃತಂ ದ್ರೌಣಿನಾ ಪುರಾ ।
ಸ್ವಾಯುಧಾನಾಂ ಯಾಚನಂ ಚಾಪ್ಯಶಕ್ತೇನ ತದುದ್ಧೃತೌ ॥

ಪೃಷ್ಟೇನೋಕ್ತಂ ತ್ವಯಾ ಹೀನಾಂ ಕೃತ್ವಾ ದುರ್ಯೋಧನಾಯ ಗಾಮ್ ।
ದಾತುಂ ತ್ವದಾಯುಧಂ ಮೇऽದ್ಯೇತ್ಯೇವಮುಕ್ತೇ ತ್ವನ್ನೋದಿತಮ್ ।
ಮೈವಂ ಕಾರ್ಷೀಃ ಪುನರಿತಿ ಧ್ಯಾಯತಾऽಬ್ಧೇಸ್ತಟೇ ಸ್ವಮು ॥

ಹಿಂದೊಮ್ಮೆ ಅಶ್ವತ್ಥಾಮ ಏನು ಮಾಡಿದ್ದನೆಂಬುದನ್ನು ಶ್ರೀಕೃಷ್ಣನು ಧರ್ಮರಾಜ, ಅರ್ಜುನರಿಗೆ ಹೇಳಿದನು. ಅಶ್ವತ್ಥಾಮನು ಸಮುದ್ರತೀರದಲ್ಲಿ ತನ್ನನ್ನು ಧ್ಯಾನ ಮಾಡುತ್ತ ನನ್ನ ಆಯುಧಗಳನ್ನು ಎತ್ತಲು ಅಶಕ್ತನಾಗಿದ್ದರೂ ಅವುಗಳನ್ನು ಬೇಡಿದ. ಈ ಆಯುಧಗಳು ನಿನಗೇಕೆ ಎಂದು ಕೇಳಿದಾಗ, ಅವನು ಭೂಮಿಯಲ್ಲಿ ನಿನ್ನನ್ನು ಇಲ್ಲದಂತೆ ಮಾಡಿ ದುರ್ಯೋಧನನಿಗೆ ರಾಜ್ಯವನ್ನು ಕೊಡಲು ನಿನ್ನ ಆಯುಧ ನನಗೆ ಈಗ ಬೇಕು ಎಂದನು. ಆಗ ನಾನು ಹೇಳಿದೆ 'ಇನ್ನು ಮುಂದೆ ಹೀಗೆ ಮಾಡಬೇಡ' ಎಂದು.

ತದಸ್ತ್ರಂ ಪ್ರಜ್ವಲದ್ ದೃಷ್ಟ್ವಾऽಪಾಂಡವತ್ವವಿಧಿತ್ಸಯಾ ।
ಧರಾಯಾಂ ದ್ರೌಣಿನಾ ಮುಕ್ತಂ ಕೃಷ್ಣೇನ ಪ್ರೇರಿತೋऽರ್ಜುನಃ ॥

ಸ್ವಸ್ತ್ಯಸ್ತು ದ್ರೋಣಪುತ್ರಾಯ ಭೂತೇಭ್ಯೋ ಮಹ್ಯಮೇವ ಚ ।
ಇತಿ ಬ್ರುವಂಸ್ತದೇವಾಸ್ತ್ರಮಸ್ತ್ರಶಾಂತ್ಯೈ ವ್ಯಸರ್ಜಯತ್ ॥

ಭೂಮಿಯಲ್ಲಿ ಪಾಂಡುವಿನ ಸಂತತಿಯನ್ನು ಇಲ್ಲದಂತೆ ಮಾಡುವ ಉದ್ದೇಶದಿಂದ ಅಶ್ವತ್ಥಾಮ ಪ್ರಯೋಗಿಸಿದ ಬ್ರಹ್ಮಾಸ್ತ್ರ ಜ್ವಲಿಸುವುದನ್ನು ಕಂಡು ಅರ್ಜುನನು ಅಶ್ವತ್ಥಾಮನಿಗೂ ಎಲ್ಲ ಪ್ರಾಣಿಗಳಿಗೂ, ನನಗೂ ಕ್ಷೇಮವಾಗಲಿ ಎಂದು ಹೇಳುತ್ತಾ ಬ್ರಹ್ಮಾಸ್ತ್ರಶಾಂತಿಗಾಗಿ ಬ್ರಹ್ಮಾಸ್ತ್ರವನ್ನೇ ಶ್ರೀಕೃಷ್ಣನ ಆದೇಶದಂತೆ ಪ್ರಯೋಗಿಸಿದನು.

ಅನಸ್ತ್ರಜ್ಞೇಷು ಮುಕ್ತಂ ತದ್ಧನ್ಯಾದಸ್ತ್ರಮುಚಂ ಯತಃ ।
ಗುರುಭಕ್ತ್ಯಾ ತತೋ ದ್ರೌಣೇಃ ಸ್ವಸ್ತ್ಯಸ್ತ್ವಿತ್ಯಾಹ ವಾಸವಿಃ ।

ಅಸಜ್ಞಾನವಿಲ್ಲದವರ ಮೇಲೆ ಮತ್ತು ಅಸ್ವಾಭಿಮಾನಿಯ ಮೇಲೆ ಪ್ರಯೋಗಿಸಿದ ಬ್ರಹ್ಮಾಸ್ತ್ರ ಪ್ರಯೋಗಿಸಿದವನನ್ನೇ ಕೊಂದೀತು. ಅದರಿಂದಲೂ ಗುರುಭಕ್ತಿಯಿಂದ ಅಶ್ವತ್ಥಾಮನಿಗೆ ಕ್ಷೇಮವಾಗಲಿ ಎಂದ ಅರ್ಜುನ.

ತದಾऽಸ್ತ್ರಯೋಸ್ತು ಸಂಯೋಗೇ ಭೂತಾನಾಂ ಸಂಹೃತಿರ್ಭವೇತ್ ।
ಭೂತಾನಾಂ ಸ್ಥಿರಪತ್ರ ಕಾಂಕ್ಷಿತಾ ಕರುಣಾತ್ಮನಾ ॥

ಆ ಎರಡು ಬ್ರಹ್ಮಾಸ್ತ್ರಗಳು ಜೊತೆಗೆ ಸೇರಿದರೆ ಪ್ರಾಣಿಗಳ ನಾಶವಾದೀತು. ಅದರಿಂದ ಕೃಪಾಳುವಾದ ಅರ್ಜುನ ಪ್ರಾಣಿಗಳಿಗೂ ಕ್ಷೇಮವನ್ನು ಬಯಸಿದನು.

★ ★ ★ ★ ★

ಐದನೆಯ ಅಧ್ಯಾಯ

ಕೃಷ್ಣನ ಆದೇಶದಂತೆ ಅರ್ಜುನನು ದ್ರೋಣರು ಉಪದೇಶಿಸಿದ ಅಸ್ತ್ರವನ್ನು ಪ್ರಯೋಗಿಸಿದನು. ನಾರದ ಮತ್ತು ವ್ಯಾಸರು ಅಲ್ಲಿಗೆ ಆಗಮಿಸಿದರು.

ವೈಶಂಪಾಯನಃ

ಇಂಗಿತೇನೈವ ದಾಶಾರ್ಹಸ್ತಸ್ಯಾಭಿಪ್ರಾಯಮಾದಿತಃ ।
ದ್ರೌಣೇರ್ಬುದ್ಧ್ವಾ ಮಹಾಬಾಹುರಭ್ಯಭಾಷತ ಫಲ್ಗುನಮ್ ॥೧॥

ವೈಶಂಪಾಯನರು– ದಶಾರ್ಹಕುಲೋತ್ಪನ್ನನಾದ ನೀಳಬಾಹುವಾದ, ಕೃಷ್ಣನು, ದ್ರೋಣಪುತ್ರನ ಮುಖಭಾವದಿಂದಲೇ ಆತನ ಅಭಿಪ್ರಾಯವನ್ನು ತಿಳಿದವನಾಗಿ ಅರ್ಜುನನನ್ನು ಉದ್ದೇಶಿಸಿ ಹೇಳಿದನು.

ಶ್ರೀಭಗವಾನ್

ಅರ್ಜುನಾರ್ಜುನ ಯದ್ದಿವ್ಯಮಸ್ತ್ರಂ ತೇ ಹೃದಿ ವರ್ತತೇ ।
ದ್ರೋಣೋಪದಿಷ್ಟಂ ತಸ್ಯಾಯಂ ಕಾಲಃ ಸಂಪರಿವರ್ತತೇ ॥೨॥

ಶ್ರೀಕೃಷ್ಣ– ಅರ್ಜುನ ಅರ್ಜುನ! ದ್ರೋಣರಿಂದ ಉಪದಿಷ್ಟವಾದ ಯಾವ ದಿವ್ಯವಾದ ಅಸ್ತ್ರವು ನಿನ್ನ ಮನದಲ್ಲಿದೆಯೋ, ಅದರ (ಪ್ರಯೋಗದ) ಕಾಲವು ಈಗ ಬಂದಿದೆ.

ಭ್ರಾತೄಣಾಮಾತ್ಮನಶ್ಚೈವ ಪರಿತ್ರಾಣಾಯ ಭಾರತ ।
ವಿಸೃಜೈತತ್ ತ್ವಮಪ್ಯಾಜಾವಸ್ತ್ರಮಸ್ತ್ರನಿವಾರಣಮ್ ॥೩॥

ಭರತಕುಲೋತ್ಪನ್ನನೇ! ನಿನ್ನ ಮತ್ತು ಸಹೋದರರ ರಕ್ಷಣೆಗಾಗಿ ನೀನೂ ಸಹ ಯುದ್ಧದಲ್ಲಿ ಈ ಅಸ್ತ್ರವನ್ನು ತಡೆಯುವ ಅಸ್ತ್ರವನ್ನು ಪ್ರಯೋಗಿಸು.

ವೈಶಂಪಾಯನಃ

ಕೇಶವೇನೈವಮುಕ್ತಸ್ತು ಪಾಂಡವಃ ಪರವೀರಹಾ ।
ರಥಾದವಾತರತ್ ತೂರ್ಣಂ ಪ್ರಗೃಹ್ಯ ಸಶರಂ ಧನುಃ ॥೪॥

ವೈಶಂಪಾಯನರು– ಕೇಶವನಿಂದ ಈ ರೀತಿಯಲ್ಲಿ ಪ್ರೇರೇಪಿತನಾದ ಶತ್ರುಗಳ ಬಲವನ್ನು ಮರ್ದನಗೊಳಿಸುವ ಪಾಂಡುಪುತ್ರನು (ಅರ್ಜುನನು) ಬಾಣಸಹಿತವಾದ ಬಿಲ್ಲನ್ನು ತೆಗೆದುಕೊಂಡು ರಥದಿಂದ ಕೆಳಗಿಳಿದನು.

ಪೂರ್ವಮಾಚಾರ್ಯಪುತ್ರಾಯ ತತೋऽನಂತರಮಾತ್ಮನೇ ।
ಭ್ರಾತೄಣಾಂ ಚೈವ ಸರ್ವೇಷಾಂ ಸ್ವಸ್ತೀತ್ಯುಕ್ತ್ವಾ ಪರಂತಪಃ ॥೫॥

ದೇವತಾಭ್ಯೋ ನಮಸ್ಕೃತ್ಯ ಗುರುಭ್ಯಶ್ಚೈವ ಸರ್ವಶಃ ।
ಉತ್ಸರ್ಜ ಶಿವಂ ಧ್ಯಾಯನ್ನಸ್ತ್ರಮಸ್ತ್ರೇಣ ಶಾಮ್ಯತಾಮ್ ॥೬॥

ಆನಂತರದಲ್ಲಿ ಶತ್ರುಗಳಿಗೆ ತಾಪಕನಾದ ಅರ್ಜುನನು ಮೊದಲು ಆಚಾರ್ಯಪುತ್ರನಿಗೆ (ಅಶ್ವತ್ಥಾಮನಿಗೆ) ಆನಂತರದಲ್ಲಿ ತನಗೂ ಹಾಗೂ ಸಹೋದರರಿಗೂ ಎಲ್ಲರಿಗೂ ಮಂಗಳವಾಗಲಿ ಎಂದು ಹೇಳುತ್ತಾ, ಎಲ್ಲ ದೇವತೆಗಳಿಗೆ ಹಾಗೂ ಗುರುಗಳಿಗೆ ನಮಸ್ಕರಿಸಿ, (ಜಗಕೆ) ಮಂಗಳವನ್ನು ಬಯಸುತ್ತಾ, ಈ ಅಸ್ತ್ರದಿಂದ ಆ ಅಸ್ತ್ರವು ಶಮನಗೊಳ್ಳಲಿ ಎಂದು ಬಯಸುತ್ತಾ ಅಸ್ತ್ರವನ್ನು ಹೂಡಿದನು.

ತತಸ್ತದಸ್ತ್ರಂ ಸಹಸಾ ಸೃಷ್ಟಂ ಗಾಂಡೀವಧನ್ವನಾ ।
ಪ್ರಜಜ್ವಾಲ ಮಹಾಜ್ವಾಲಂ ಯುಗಾಂತಾನಲವರ್ಚಸಮ್ ॥೭॥

ಆನಂತರದಲ್ಲಿ ಗಾಂಡೀವಧನುರ್ಧಾರಿಯು ಆ ಅಸ್ತ್ರವನ್ನು ಹೂಡಲು, ಆ ಅಸ್ತ್ರವು ಯುಗಾಂತಕಾಲದ ಅಗ್ನಿಯ ತೇಜಸ್ಸಿನಂತೆ ಭಾರೀ ಪ್ರಕಾಶವನ್ನು ಹೊಂದಿತು.

ತಥೈವ ದ್ರೋಣಪುತ್ರಸ್ಯ ತದಸ್ತ್ರಂ ತಿಗ್ಮತೇಜಸಃ ।
ಪ್ರಜಜ್ವಾಲ ಮಹಾಜ್ವಾಲಂ ತೇಜೋಮಂಡಲಸಂವೃತಮ್ ॥೮॥

ಹಾಗೆಯೇ ಪ್ರಚಂಡತೇಜಸ್ವಿಯಾದ ದ್ರೋಣಪುತ್ರನ ಆ ಅಸ್ತ್ರವೂ ಸಹ ಭಾರೀಪ್ರಕಾಶದಿಂದ ಬೆಳಗಿತು.

ನಿರ್ಘಾತಾ ಬಹವಶ್ಚಾಸನ್ ಪೇತುರುಲ್ಕಾಃ ಸಹಸ್ರಶಃ ।
ಮಹದ್ಭಯಂ ಚ ಭೂತಾನಾಂ ಸರ್ವೇಷಾಂ ಸಮಜಾಯತ ॥೯॥

ಸಾವಿರಾರು ಉಲ್ಕೆಗಳು ಬಿದ್ದವು, ಭಾರೀ ಅನಿಷ್ಟಸೂಚಕಗಳು ಉಂಟಾದವು, ಎಲ್ಲಪ್ರಾಣಿಗಳಿಗೂ ಭಾರೀ ಭಯವು ಉಂಟಾಯಿತು.

ಸಶಬ್ದಮಭವದ್ವ್ಯೋಮ ಜ್ವಾಲಾಮಾಲಾಕುಲಂ ಭೃಶಮ್ ।
ಚಚಾಲ ಚ ಮಹೀ ಕೃತ್ಸ್ನಾ ಸಪರ್ವತವನದ್ರುಮಾ ॥೧೦॥

ಆಕಾಶವು ಶಬ್ದದಿಂದ ವ್ಯಾಪ್ತವಾಯಿತು, ಅಗ್ನಿಯ ಜ್ವಾಲೆಯ ಸಾಲುಸಾಲುಗಳಿಂದ ಗಾಬರಿಗೊಳಿಸಿತು. ಪರ್ವತ ಕಾಡು ಮರಗಳಿಂದ ಕೂಡಿದ ಸಮಗ್ರ ಭೂಮಿಯೇ ನಡುಗಿತು.

ತಾವಸ್ತ್ರತೇಜಸಾ ಲೋಕಾನ್ ತ್ರಾಸಯಂತೌ ತತಃ ಸ್ಥಿತೌ ॥೧೧॥

ಆನಂತರದಲ್ಲಿ ತೇಜದಿಂದ ಲೋಕವನ್ನು ಭಯಗೊಳಿಸುವ ಆ ಅಸ್ತ್ರಗಳು ಕಂಗೊಳಿಸಿದವು.

ಮಹರ್ಷೀ ಸಹಿತೌ ತತ್ರ ದದರ್ಶಯಾಮಾಸತುಸ್ತದಾ ।
ನಾರದಃ ಸರ್ವಧರ್ಮಾತ್ಮಾ ಭರತಾನಾಂ ಪಿತಾಮಹಃ ॥೧೨॥

ಎಲ್ಲ ಧರ್ಮಗಳ ಮೂರ್ತಿಯಂತಿರುವ ನಾರದರು, ಭರತಕುಲದವರಿಗೆ ಪಿತಾಮಹರಾದ ವ್ಯಾಸರು, ಈ ಮಹರ್ಷಿಗಳೀರ್ವರು ಒಟ್ಟಿಗೆ ಅಲ್ಲಿ ಆಗ ಕಾಣಿಸಿಕೊಂಡರು.

ಉಭೌ ಶಮಯಿತುಂ ವೀರೌ ಭಾರದ್ವಾಜಧನಂಜಯೌ ॥೧೩॥
ತೌ ಮುನೀ ಸರ್ವಧರ್ಮಜ್ಞೌ ಸರ್ವಭೂತಹಿತೈಷಿಣೌ ।
ದೀಪ್ತಯೋರಸ್ತ್ರಯೋರ್ಮಧ್ಯೇ ಸ್ಥಿತೌ ಪರಮತೇಜಸೌ ॥೧೪॥

ಭರದ್ವಾಜಗೋತ್ರೋತ್ಪನ್ನ ಅಶ್ವತ್ಥಾಮ, ಧನಂಜಯ, ಆ ಈರ್ವರು ವೀರರನ್ನು ಸಮಾಧಾನಪಡಿಸಲು, ಎಲ್ಲ ಧರ್ಮಗಳನ್ನು ತಿಳಿದ, ಎಲ್ಲ ಪ್ರಾಣಿಗಳ ಹಿತವನ್ನು ಬಯಸುವವರಾದ, ಆ ಈರ್ವರು ಮುನಿಗಳು (ನಾರದ-ವ್ಯಾಸರು) ಭಾರೀ ಪ್ರತಾಪಶಾಲಿಗಳಾದ ಪ್ರಜ್ವಲಿಸುವ ಅಸ್ತ್ರಗಳ ಮಧ್ಯೆ ನಿಂತರು.

ತದಂತರಮನಾಧೃಷ್ಯಾವುಪಗಮ್ಯ ಯಶಸ್ವಿನೌ ।
ಆಸ್ತಾಮೃಷಿವರೌ ತತ್ರ ಜ್ವಲಿತಾವಿವ ಪಾವಕೌ ॥೧೫॥

ಆನಂತರದಲ್ಲಿ ಅಲ್ಲಿಗೆ ಬಂದ, ಅನ್ಯರಿಂದ ಧರ್ಷಣೆಗೆ ಒಳಗಾಗದ, ಕೀರ್ತಿಶಾಲಿಗಳಾದ ಆ ಋಷಿವರ್ಯರೀರ್ವರು ಪ್ರಜ್ವಲಿಸುವ ಅಗ್ನಿಯಂತೆ ಅಲ್ಲಿ ನಿಂತರು.

ಪ್ರಾಣಭೃದ್ಭಿರನಾಧೃಷ್ಯೌ ದೇವದಾನವಸಮ್ಮತೌ ।
ಅಸ್ತ್ರತೇಜಃ ಶಮಯಿತುಂ ಲೋಕಾನಾಂ ಹಿತಕಾಮ್ಯಯಾ ॥೧೬॥

ದೇವ-ದಾನವರಿಂದ ಮಾನಿತರಾದ ಯಾವ ಪ್ರಾಣಿಗಳಿಂದಲೂ ಧರ್ಷಣೆಗೆ ಒಳಗಾಗದ ಆ ಮುನಿಗಳು, ಲೋಕದ ಹಿತಕ್ಕಾಗಿ ಅಸ್ತ್ರದ ಪ್ರಭಾವವನ್ನು ಶಮನಗೊಳಿಸಲು ಅಲ್ಲಿನಿಂತರು.

ಋಷೀ

ನಾನಾಶಸ್ತ್ರವಿದಃ ಪೂರ್ವೇ ಯೇ ವ್ಯತೀತಾ ಮಹಾರಥಾಃ ।
ನೈತದಸ್ತ್ರಂ ಮನುಷ್ಯೇಷು ತೈಃ ಪ್ರಯುಕ್ತಂ ಕಥಂಚನ ॥೧೭॥

ಕಿಮಿದಂ ಸಾಹಸಂ ವೀರೌ ಕೃತವಂತೌ ಮಹಾತ್ಯಯಮ್ ॥೧೮॥

ಋಷಿಗಳು– ನಾನಾ ಅಸ್ತ್ರಗಳನ್ನು ಬಲ್ಲ ಮನುಷ್ಯರಲ್ಲಿ ಹಿಂದೆ ಗತಿಸಿದ, ಯಾವ ಮಹಾರಥಿಗಳೂ ಸಹ ಯಾವ ಸಂದರ್ಭದಲ್ಲೂ ಸಹ ಈ ಅಸ್ತ್ರವನ್ನು ಬಳಸಿರಲಿಲ್ಲ. ವೀರರಾದ ನೀವು, ಭಾರೀ ಹಾನಿಕಾರಕವಾದ ಈ ದುಃಸಾಹಸವನ್ನು ಏಕೆ ಮಾಡಿದಿರಿ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ತಥಾऽऽಪ್ಯಸ್ತ್ರದ್ವಯಂ ಯುಕ್ತಂ ಭೂತಾನಾಂ ನಾಶಕೃದ್ ಧ್ರುವಮ್ ।
ತಸ್ಮಾನ್ನಿವಾರಯನ್ ಯೋಗಂ ತಯೋರ್ಮಧ್ಯೇऽಭವತ್ ಕ್ಷಣಾತ್ ॥

ಅರ್ಜುನನು ಕ್ಷೇಮ ಪ್ರಾರ್ಥನೆ ಮಾಡಿದರೂ ಎರಡು ಬ್ರಹ್ಮಾಸ್ತ್ರಗಳು ಜೊತೆಗೆ ಸೇರಿದುವೆಂದರೆ ಅದು ಪ್ರಾಣಿಗಳಿಗೆ ನಾಶಕವಾಗುವುದು ನಿಶ್ಚಿತ. ಅದರಿಂದ ಅಸ್ತ್ರಗಳು ಜೊತೆ ಸೇರುವುದನ್ನು ತಡೆಯಲು ಅವುಗಳ ನಡುವೆ ವೇದವ್ಯಾಸರು ಕ್ಷಣದಲ್ಲಿ ಬಂದು ನಿಂತರು.

ನಿಸ್ಸೀಮಶಕ್ತಿಃ ಪರಮಃ ಕೃಷ್ಣಃ ಸತ್ಯವತೀಸುತಃ ।
ಸಂಸ್ಥಾಪ್ಯಾಸ್ತ್ರದ್ವಯಂ ದೂರೇ ತಾವಾಹ ಪುರುಷೋತ್ತಮಃ ॥

ಅನಂತಶಕ್ತಿಯುಳ್ಳ ಸರ್ವೋತ್ತಮರಾದ ಪುರುಷೋತ್ತಮ ಶ್ರೀವೇದವ್ಯಾಸರು ಎರಡು ಅಸ್ತ್ರಗಳನ್ನೂ ದೂರದಲ್ಲಿ ನಿಲ್ಲಿಸಿ ಅಶ್ವತ್ಥಾಮ, ಅರ್ಜುನರಿಗೆ ಹೀಗೆ ಹೇಳಿದರು.

ಸಂತಿ ಹ್ಯಸ್ತ್ರವಿದಃ ಪೂರ್ವಂ ಪ್ರಾಯಶ್ಚೈತನ್ನ ತೈಃ ಕೃತಮ್ ।
ಲೋಕೋಪದ್ರವಕೃತ್ ಕರ್ಮ ಸಂತಃ ಕುರ್ಯುಃ ಕಥಂ ಕ್ವಚಿತ್ ॥

ಬ್ರಹ್ಮಾಸ್ತ್ರ ಬಲ್ಲವರು ಹಿಂದೆಯೂ ಇದ್ದರು. ಈ ಕೆಲಸ ಪ್ರಾಯಃ ಅವರು ಯಾರೂ ಮಾಡಲಿಲ್ಲ. ಲೋಕಕ್ಕೆ ಉಪದ್ರವಕಾರಿಯಾದ ಇಂಥ ಕೆಲಸವನ್ನು ಸಜ್ಜನರು ಎಲ್ಲಿಯಾದರೂ ಹೇಗೆ ಮಾಡಬಲ್ಲರು?

ಇತ್ಯುಕ್ತೇ ಫಲ್ಗುನಃ ಪ್ರಾಹ ಮಯಾ ಮುಕ್ತಂ ಮಹಾಪದಿ ।
ಶಾಂತ್ಯರ್ಥಮೇವ ಚ ವಿಭೋ ಕ್ಷಂತವ್ಯಂ ಭವತಾ ತತಃ ॥

ವೇದವ್ಯಾಸರು ಹೀಗೆ ಹೇಳಿದಾಗ ಅರ್ಜುನನೆಂದ: 'ಪ್ರಭು, ಮಹಾ ಆಪತ್ತಿನಲ್ಲಿ ಕೇವಲ ಶಾಂತಿಗಾಗಿ ನಾನು ಅಸ್ತ್ರವನ್ನು ಪ್ರಯೋಗಿಸಿದೆನು. ಅದರಿಂದ ತಾವು ನನ್ನನ್ನು ಕ್ಷಮಿಸಬೇಕು'.

ದ್ರೌಣಿರಪ್ಯೇವಮೇವಾಹ ತೌ ವೇದಪತಿರಬ್ರವೀತ್ ।
ನಿವರ್ತ್ಯತಾಮಸ್ತ್ರಮಿತಿ ಶಕ್ರಸೂನುಸ್ತಥಾऽಕರೋತ್ ।
ನಿವರ್ತನಾಪ್ರಭುಂ ದ್ರೌಣಿಂ ವಾಸುದೇವೋऽಭ್ಯಭಾಷತ ॥

ಅಶ್ವತ್ಥಾಮನೂ ಹೀಗೆ ಹೇಳಿದನು. ಆಗ ವೇದವ್ಯಾಸರು ಇಬ್ಬರಿಗೂ ಹೇಳಿದರು: 'ನಿಮ್ಮ ನಿಮ್ಮ ಅಸ್ತ್ರಗಳನ್ನು ನೀವು ಹಿಂದೆ ತೆಗೆದುಕೊಳ್ಳಿರಿ'. ಒಡನೆ ಅರ್ಜುನ ಹಾಗೆ ಮಾಡಿದನು. ಆದರೆ ಅಶ್ವತ್ಥಾಮ ಬ್ರಹ್ಮಾಸ್ತ್ರವನ್ನು ಹಿಂದೆ ತಿರುಗಿಸಲು ಅಸಮರ್ಥ-ನಾಗಿದ್ದುದನ್ನು ಕಂಡು ಶ್ರೀಕೃಷ್ಣನು ಹೇಳಿದನು.

ಕ್ಷತ್ರತೇಜಾ ಬ್ರಹ್ಮಚಾರೀ ಕೌಮಾರಾದಪಿ ಪಾಂಡವಃ ।
ನಿವರ್ತನೇ ತತಃ ಶಕ್ತೋ ನಾಯಂ ದ್ರೋಣಾತ್ಮಜೋಽಪಿ ಸನ್ ॥

ಅಬ್ರಹ್ಮಚರ್ಯಾದಿತ್ಯುಕ್ತೇ ವ್ಯಾಸೋ ದ್ರೌಣಿಮಭಾಷತ ।
ನಿವರ್ತನಾಸಮರ್ಥಸ್ತ್ವಂ ದೇಹಿ ನೈಸರ್ಗಿಕಂ ಮಣಿಮ್ ॥

'ಕ್ಷಾತ್ರ ತೇಜಸ್ಸುಳ್ಳ ಅರ್ಜುನ ಬಾಲ್ಯದಿಂದಲೂ ಬ್ರಹ್ಮಚಾರಿ, ಅದರಿಂದ ಬ್ರಹ್ಮಾಸ್ತ್ರವನ್ನು ಉಪಸಂಹರಿಸಲು ಶಕ್ತನಾಗಿದ್ದಾನೆ. ಅಶ್ವತ್ಥಾಮ ದ್ರೋಣಪುತ್ರನಾದರೂ ಬ್ರಹ್ಮಚರ್ಯವಿಲ್ಲದುದರಿಂದ ಅಸ್ತ್ರವನ್ನು ಹಿಂದಿರುಗಿಸಲು ಶಕ್ತನಾಗಲಿಲ್ಲ'. ಶ್ರೀಕೃಷ್ಣ ಹೀಗೆ ಹೇಳಿದಾಗ ವೇದವ್ಯಾಸರು ಅಶ್ವತ್ಥಾಮನಿಗೆ ಹೇಳಿದರು: 'ಬ್ರಹ್ಮಾಸ್ತ್ರವನ್ನು ತಿರುಗಿಸಲು ಅಸಮರ್ಥನಾದ ನೀನು ನಿನ್ನಲ್ಲಿ ಸ್ವಾಭಾವಿಕವಾಗಿರುವ ಮಣಿಯನ್ನು ಕೊಡು'.

ಜಿತಃ ಪ್ರಾಗೇವ ಭೀಮೇನ ಭೀಮಾಯೈವ ಮಹಾಪ್ರಭಮ್ ।
ಅಪಿ ಕೇವಲಯಾ ವಾಚಾ ಪಾರ್ಥೇಭ್ಯೋಽಸ್ತ್ರಂ ನಿವರ್ತಯ॥

ಇತ್ಯುಕ್ತೋ ಮೂರ್ಧಜಂ ರತ್ನಂ ಜರಾಮರಣನಾಶನಮ್ ।
ಕ್ಷುತ್ಪಟ್‌ಶ್ರಮಾಪಹಂ ದಿವ್ಯಗಂಧಂ ಧ್ವಾಂತಹರಂ ಶುಭಮ್ ॥

ಉತ್ಕೃತ್ಯ ಭೀಮಾಯ ದದೌ ಮುಕ್ತಾಃ ಪಂಚೈವ ಪಾಂಡವಾಃ ।
ಅಸ್ತ್ರಾದಿತಿ ತತೋ ವೇದಭರ್ತಾ ವಾಸವಿಮಬ್ರವೀತ್ ॥

'ಮೊದಲೇ ಭೀಮನಿಂದ ಪರಾಭವಗೊಂಡಿರುವಿ. ಅದರಿಂದ ಭೀಮನಿಗೇ ಮಹಾಪ್ರಕಾಶವುಳ್ಳ ಆ ಮಣಿಯನ್ನು ಕೊಡು. ಕೇವಲ ಮಾತಿನಿಂದಲಾದರೂ ಪಾಂಡವರಿಗೆ ಆ ಅಸ್ತ್ರವನ್ನು ಹಿಂದಿರುಗಿಸು' ಎಂದು ವೇದವ್ಯಾಸರು ಹೇಳಿದಾಗ ಅಶ್ವತ್ಥಾಮ ತಲೆಯಲ್ಲಿ ಬೆಳೆದಿದ್ದ ರತ್ನವನ್ನು ಕಿತ್ತು ಭೀಮನಿಗೆ ಕೊಟ್ಟ ಆ ರತ್ನವು

ಜರಾಮರಣ ನಾಶಕ. ಹಸಿವು, ಬಾಯಾರಿಕೆ ಆಯಾಸಗಳನ್ನು ಕಳೆಯುವುದು. ದಿವ್ಯಪರಿಮಳಯುಕ್ತ, ಕತ್ತಲನ್ನು ಓಡಿಸುವಂಥದ್ದು ಮತ್ತು ಮಂಗಳಕರ. 'ಐದು ಮಂದಿ ಪಾಂಡವರನ್ನು ಬಿಟ್ಟು ಬಿಡಲಿ ಅಸ್ತ್ರ' ಎಂದನು. ಆಗ ವೇದವ್ಯಾಸರು ಅರ್ಜುನನಿಗೆ ಹೇಳಿದರು.

ತಾತ ಮುಕ್ತಂ ದ್ರೌಣಿನಾಽಪಿ ತ್ವಮೇವಾಸ್ತ್ರಂ ನಿವರ್ತಯ ।
ಇತ್ಯುಕ್ತಸ್ತಂ ಪ್ರಣಮ್ಯಾಶು ಸಂಜಹಾರಾರ್ಜುನೋಽಪಿ ತತ್ ॥

'ಅರ್ಜುನನೆ, ಅಶ್ವತ್ಥಾಮ ಪ್ರಯೋಗಿಸಿದ ಅಸ್ತ್ರವನ್ನೂ ನೀನೆ ಉಪಸಂಹರಿಸು'. ಹೀಗೆ ವೇದವ್ಯಾಸರು ಹೇಳಿದಾಗ ಅರ್ಜುನನು ಅವರನ್ನು ನಮಿಸಿ ಬೇಗನೆ ಆ ಅಸ್ತ್ರವನ್ನೂ ಉಪಸಂಹರಿಸಿದನು.

★ ★ ★ ★ ★

ಆರನೆಯ ಅಧ್ಯಾಯ

ಅರ್ಜುನನು ವ್ಯಾಸರ, ನಾರದರ ಆಜ್ಞೆಯಂತೆ ತಾನು ಪ್ರಯೋಗಿಸಿದ ಬ್ರಹ್ಮಶಿರಾಸ್ತ್ರವನ್ನು ಉಪಸಂಹಾರಗೊಳಿಸಿದನು. ಈ ದರ್ಭಾಸ್ತ್ರವು ಉತ್ತರೆಯ ಗರ್ಭವನ್ನು ಪ್ರವೇಶಿಸಿ ಗರ್ಭವನ್ನು ಸಂಹರಿಸಿದರೂ ತನ್ನಿಂದ ಆ ಗರ್ಭವನ್ನು ಪುನರುಜ್ಜೀವನಗೊಳಿಸುವುದಾಗಿ ಕೃಷ್ಣನಿಂದ ಪ್ರತಿಜ್ಞೆ, ಬ್ರಹ್ಮಚರ್ಯೆಯ ಸ್ಖಲಿತ್ಯದಿಂದ ಆ ಅಸ್ತ್ರವನ್ನು ಉಪಸಂಹರಿಸಲು ಅಸಮರ್ಥನಾದ ದ್ರೋಣಪುತ್ರನು ವ್ಯಾಸರನ್ನು ಕೃಷ್ಣನನ್ನೂ ತಿರಸ್ಕರಿಸುತ್ತಾ ಉತ್ತರೆಯ ಗರ್ಭದಲ್ಲಿ ದರ್ಭಾಸ್ತ್ರವನ್ನು ಗುರಿಯಾಗಿಸಿದನು.

ವೈಶಂಪಾಯನಃ

ದೃಷ್ಟ್ವೈವ ಮುನಿಶಾರ್ದೂಲೌ ತಾವಗ್ನಿಸಮತೇಜಸೌ ।
ಗಾಂಡೀವಧನ್ವಾ ಸಂಚಿಂತ್ಯ ಪ್ರಾಪ್ತಕಾಲಂ ಮಹಾರಥಃ ॥೧॥

ಸಂಜಹಾರ ಶರಂ ದಿವ್ಯಂ ತ್ವರಮಾಣೋ ಧನಂಜಯಃ ॥೨॥

ಉವಾಚ ಸ ನರಶ್ರೇಷ್ಠಃ ಪ್ರಾಂಜಲಿಸ್ತಾವುಭಾವೃಷೀ ॥೩॥

ವೈಶಂಪಾಯನರು– ಅಗ್ನಿಗೆ ಸಮಾನವಾದ ತೇಜಸ್ವಿಗಳಾದ ಮುನಿವರರನ್ನು ಕಂಡೊಡನೆ ಮಹಾರಥಿಕನಾದ ಗಾಂಡೀವಧಾರಿಯಾದ ಧನಂಜಯನು (ಈ ಅಸ್ತ್ರವನ್ನು

ಉಪಸಂಹರಿಸುವ) ಕಾಲವು ಪ್ರಾಪ್ತವಾಯಿತು ಎಂದು ಆಲೋಚಿಸಿ, ಲಗುಬಗೆಯಿಂದ ಆ ದಿವ್ಯವಾದ ಅಸ್ತ್ರವನ್ನು ಉಪಸಂಹರಿಸಿದನು. ಆ ನರಶ್ರೇಷ್ಠನಾದ ಅರ್ಜುನನು ಕೈಮುಗಿದವನಾಗಿ ಆ ಈರ್ವರು ಋಷಿಗಳನ್ನು ಉದ್ದೇಶಿಸಿ ಹೇಳಿದನು.

ಅರ್ಜುನಃ

ಪ್ರಮುಕ್ತಮಸ್ತ್ರಮಸ್ತ್ರೇಣ ಶಾಮ್ಯತಾಮಿತಿ ವೈ ಮಯಾ ॥೪॥

ಸಂಹೃತೇ ಪರಮಾಸ್ತ್ರೇಽಸ್ಮಿನ್ ಸರ್ವಾನಸ್ಮಾನಶೇಷತಃ ।
ಪಾಪಕರ್ಮಾ ಧ್ರುವಂ ದ್ರೌಣಿಃ ಪ್ರಧಕ್ಷ್ಯತ್ಯಸ್ತ್ರತೇಜಸಾ ॥೫॥

ಅರ್ಜುನ– ನಾನು 'ಈ ಅಸ್ತ್ರದಿಂದ ಆ ಅಸ್ತ್ರವು ಶಮನವನ್ನು ಹೊಂದಲಿ' ಎಂದು ಪ್ರಯೋಗಿಸಿದ್ದೆನು. ಈ ಅಸ್ತ್ರವು ಉಪಸಂಹೃತವಾಗಲು, ಪಾಪಕರ್ಮಿಯಾದ ಈ ದ್ರೋಣಪುತ್ರನು ಸಂಪೂರ್ಣವಾಗಿ ನಮ್ಮೆಲ್ಲರನ್ನು ಅಸ್ತ್ರದ ತೇಜಸ್ಸಿನಿಂದ ನಿಶ್ಚಿತವಾಗಿಯೂ ದಹಿಸುವನು.

ಯದತ್ರ ಹಿತಮಸ್ಮಾಕಂ ಲೋಕಾನಾಂ ಚೈವ ಸರ್ವಥಾ ।
ಭವಂತೌ ದೇವಸಂಕಾಶೌ ತಥಾ ಸಮ್ಮಂತುಮರ್ಹತಃ ॥೬॥

ದೇವಸಮಾನರಾದ ನೀವೀರ್ವರು ಈ ವಿಷಯದಲ್ಲಿ ನಮಗೂ ಲೋಕಕ್ಕೂ ಯಾವುದು ಹಿತವೋ ಹಾಗೆ ಅನುಮೋದಿಸಲು ಯೋಗ್ಯರಾಗಿದ್ದೀರಿ.

ವೈಶಂಪಾಯನಃ

ಇತ್ಯುಕ್ತ್ವಾ ಸಂಜಹಾರಾಸ್ತ್ರಂ ಪುನರೇವ ಧನಂಜಯಃ ॥೭॥

ವೈಶಂಪಾಯನರು– ಮತ್ತೆ ಧನಂಜಯನು ಈ ರೀತಿಯಾಗಿ ಹೇಳಿ ಅಸ್ತ್ರವನ್ನು ಉಪಸಂಹರಿಸಿದನು.

ಸಂಹಾರೋ ದುಷ್ಕರಸ್ತಸ್ಯ ದೇವೈರಪಿ ಚ ಸಂಯುಗೇ ।
ವಿಸೃಷ್ಟಸ್ಯ ರಣೇ ತಸ್ಯ ಪರಮಾಸ್ತ್ರಸ್ಯ ಸಂಗ್ರಹೇ ॥೮॥

ಅಶಕ್ತಃ ಪಾಂಡವಾದನ್ಯಃ ಸಾಕ್ಷಾದಪಿ ಶತಕ್ರತುಃ ॥೯॥

ಯುದ್ಧದಲ್ಲಿ ಪ್ರಯೋಗಿಸಿದ ಆ ಅಸ್ತ್ರದ ಪುನರುಪಸಂಹಾರವು ದೇವತೆಗಳಿಗೂ ದುಷ್ಕರವಾಗಿದೆ. ರಣರಂಗದಲ್ಲಿ ಪ್ರಯೋಗಿಸಿದ್ದ ಆ ಪರಮಾಸ್ತ್ರವನ್ನು ಅರ್ಜುನನು ಉಪಸಂಹರಿಸಿದನು. ಪಾಂಡುಪುತ್ರನಿಂದ ಬೇರೆಯಾದ ಸಾಕ್ಷಾತ್ ಇಂದ್ರನೂ ಸಹ (ಆ ಅಸ್ತ್ರವನ್ನು ಉಪಸಂಹರಿಸಲು) ಸಮರ್ಥನಾಗನು.

ಬ್ರಹ್ಮತೇಜೋದ್ಭವಂ ತದ್ಧಿ ವಿಸೃಷ್ಟಮಕೃತಾತ್ಮನಾ ।
ನ ಶಕ್ಯಮಾವರ್ತಯಿತುಂ ಬ್ರಹ್ಮಚಾರಿವ್ರತಾದೃತೇ ॥೧೦॥

ಬ್ರಹ್ಮತೇಜಸ್ಸಿನಿಂದ ಉತ್ಪನ್ನವಾದ ಅದನ್ನು ಜಿತೇಂದ್ರಿಯನಲ್ಲದವನಿಂದ (ಅಶ್ವತ್ಥಾಮನಿಂದ) ಪ್ರಯೋಗಿಸಲಾಗಿದೆ. ಬ್ರಹ್ಮಚರ್ಯವ್ರತಿಯ ಹೊರತಾಗಿ (ಬೇರೆಯವರಿಂದ ಈ ಅಸ್ತ್ರವು) ಉಪಸಂಹರಿಸಲು ಅಶಕ್ಯವಾಗಿದೆ.

ಅಚೀರ್ಣಬ್ರಹ್ಮಚರ್ಯೋ ಯಃ ಸೃಷ್ಟ್ವಾSSವರ್ತಯತೇ ಪುನಃ ।
ತದಸ್ತ್ರಂ ಸಾನುಬಂಧಸ್ಯ ಮೂರ್ಧಾನಂ ತಸ್ಯ ಕೃಂತತಿ ॥೧೧॥

ಯಾವನು ಬ್ರಹ್ಮಚರ್ಯವನ್ನು ಆಚರಿಸದೇ (ಈ ಅಸ್ತ್ರವನ್ನು) ಪ್ರಯೋಗಿಸಿ ಮತ್ತೆ ಉಪಸಂಹರಿಸಲು ಯತ್ನಿಸುವನೋ, ಆ ಅಸ್ತ್ರವು ಸಂಬಂಧಿಸಹಿತನಾದ ಆತನ ತಲೆಯನ್ನೇ (ಅಸ್ತ್ರವನ್ನು ಪ್ರಯೋಗಿಸಿದವನ ತಲೆಯನ್ನೇ) ತೆಗೆಯುವುದು.

ಬ್ರಹ್ಮಚಾರೀ ವ್ರತೀ ಚಾಪಿ ದುರವಾಪಮವಾಪ್ಯ ತತ್ ।
ಪರಮವ್ಯಸನಾರ್ತೋSಪಿ ನಾರ್ಜುನೋSಸ್ತ್ರಂ ವ್ಯಮುಂಚತ ॥೧೨॥

ಬ್ರಹ್ಮಚರ್ಯವ್ರತವನ್ನು ಆಚರಿಸಿದವನಿಂದಲೂ ಸಹ ಹೊಂದಲು ಅಶಕ್ಯವಾದ ಆ ಅಸ್ತ್ರವನ್ನು ಹೊಂದಿ, ಭಾರೀ ದುಃಖಿತನಾಗಿದ್ದರೂ ಸಹ ಅರ್ಜುನನು ಅಸ್ತ್ರವನ್ನು ಪ್ರಯೋಗಿಸಲಿಲ್ಲ.

ಸತ್ಯವ್ರತಧರಃ ಶೂರೋ ಬ್ರಹ್ಮಚಾರೀ ಚ ಪಾಂಡವಃ ।
ಗುರುವರ್ತೀ ಚ ತೇನಾಸ್ತ್ರಂ ಸಂಜಹಾರಾರ್ಜುನಃ ಪುನಃ ॥೧೩॥

ಸತ್ಯವ್ರತಿಯು, ಶೂರನು, ಬ್ರಹ್ಮಚಾರಿಯು, ಪಾಂಡುಪುತ್ರನು, ಗುರುಗಳನ್ನು ಅನುಸರಿಸಿರುವನಾದ್ದರಿಂದ ಅರ್ಜುನನು ಮತ್ತೆ ಅಸ್ತ್ರವನ್ನು ಉಪಸಂಹರಿಸಿದನು.

ದ್ರೌಣೇರಪ್ಯಥ ಸಂಪ್ರೇಕ್ಷ್ಯ ಸೋಽಂತರಾ ತಾವೃಷೀ ಸ್ಥಿತೌ ।
ನ ಶಶಾಕ ಪುನರ್ಘೋರಮಸ್ತ್ರಂ ಸಂಹರ್ತುಮೋಜಸಾ ॥೧೪॥

ದ್ರೋಣಪುತ್ರನಾದರೋ ಅಸ್ತ್ರದ ಮಧ್ಯದಲ್ಲಿ ನಿಂತ ಆ ಈರ್ವರು ಋಷಿಗಳನ್ನು ಕಂಡರೂ (ಅವರ ವಚನವನ್ನು ಆಲಿಸಿದರೂ) ಪ್ರಯತ್ನಿಸಿದರೂ ಘೋರವಾದ ಆ ಅಸ್ತ್ರವನ್ನು ಮತ್ತೆ ಉಪಸಂಹರಿಸಲು ಸಮರ್ಥನಾಗಲಿಲ್ಲ.

ಅಶಕ್ತಃ ಪ್ರತಿಸಂಹಾರೇ ಪರಮಾಸ್ತ್ರಸ್ಯ ಸಂಯುಗೇ ।
ದ್ರೌಣಿರ್ದೀನಮನಾ ರಾಜನ್ ದ್ವೈಪಾಯನಮಭಾಷತ ॥೧೫॥

ಯುದ್ಧದಲ್ಲಿ ಶ್ರೇಷ್ಠವಾದ ಅಸ್ತ್ರವನ್ನು ಉಪಸಂಹರಿಸಲು ಅಸಮರ್ಥನಾದ ದ್ರೋಣಪುತ್ರನು ದೀನಮನಸ್ಕನಾಗಿ ವೇದವ್ಯಾಸರನ್ನು ಉದ್ದೇಶಿಸಿ ಹೇಳಿದನು.

ದ್ರೌಣಿಃ

ಉತ್ತಮವ್ಯಸನಾರ್ತೇನ ಪ್ರಾಣತ್ರಾಣಮಭೀಪ್ಸುನಾ ।
ಮಯೇದಮಸ್ತ್ರಮುತ್ಸೃಷ್ಟಂ ಭೀಮಸೇನಭಯಾನ್ಮುನೇ ॥೧೬॥

ಅಶ್ವತ್ಥಾಮ– ಮುನಿಗಳೆ! ಭಾರೀ ಭಯದಿಂದ ದುಃಖಿತನಾಗಿ, ಪ್ರಾಣವನ್ನು ಸಂರಕ್ಷಿಸಿಕೊಳ್ಳಬೇಕೆಂಬ ಆಸೆಯಿಂದ ಭೀಮಸೇನನ ಭಯದಿಂದ ನಾನು ಈ ಅಸ್ತ್ರವನ್ನು ಪ್ರಯೋಗಿಸಿರುವೆ.

ಅಧರ್ಮಶ್ಚ ಕೃತೋಽನೇನ ಧಾರ್ತರಾಷ್ಟ್ರಂ ಜಿಘಾಂಸತಾ ।
ಮಿಥ್ಯಾಚಾರೇಣ ಭಗವನ್ ಭೀಮಸೇನೇನ ಸಂಯುಗೇ ॥೧೭॥

ಪೂಜ್ಯರೆ! ಧೃರಾಷ್ಟ್ರಪುತ್ರರನ್ನು ಸಂಹರಿಸಬೇಕೆಂಬ ಇಚ್ಛೆಯಿರುವ, ಮಿಥ್ಯಾಚಾರಿಯಾದ ಈ ಭೀಮಸೇನನಿಂದ ಅಧರ್ಮವನ್ನಾಚರಿಸಲಾಗಿದೆ.

ಅತಃ ಸೃಷ್ಟಮಿದಂ ಬ್ರಹ್ಮನ್ ಮಯಾಽಸ್ತ್ರಮಕೃತಾತ್ಮನಾ ।
ತಸ್ಯ ಭೂಯೋಽಪಿ ಸಂಹಾರಂ ಕರ್ತುಂ ನಾಹಮಿಹೋತ್ಸಹೇ ॥೧೮॥

ಬ್ರಹ್ಮನ್! ಆದ್ದರಿಂದ (ಭೀಮನ ವಿಷಯದಲ್ಲಿ ಕೋಪವನ್ನು ಹೊಂದಿದ್ದರಿಂದ) ಜಿತೇಂದ್ರಿಯನಲ್ಲದ ನಾನು ಅಸ್ತ್ರವನ್ನು ಪ್ರಯೋಗಿಸಿರುವೆನು. ಮತ್ತೆ ಆ ಅಸ್ತ್ರವನ್ನು ಉಪಸಂಹರಿಸಲು ನಾನು ಅಸಮರ್ಥನಾಗಿರುವೆನು.

ನಿಸೃಷ್ಟಂ ಹಿ ಮಯಾ ದಿವ್ಯಮೇತದಸ್ತ್ರಂ ದುರಾಸದಮ್ ।
ಅಪಾಂಡವಾಯೇತಿ ಮುನೇ ವಹ್ನಿತೇಜೋಽನುಮಂತ್ರ್ಯ ವೈ ॥೧೯॥

ಮುನಿಗಳೇ! ಅಪರೂಪದ ಈ ಶ್ರೇಷ್ಠವಾದ ಅಸ್ತ್ರವನ್ನು ಅಗ್ನಿಯ ತೇಜಸ್ಸನ್ನೂ ಅಭಿಮಂತ್ರಿಸಿ, ಪಾಂಡವರ ನಾಶಕ್ಕಾಗಿ ಪ್ರಯೋಗಿಸಿರುವೆನು.

ತದಿದಂ ಪಾಂಡುಪುತ್ರಾಣಾಮಂತಾಯೈವ ಸುಸಂಹಿತಮ್ ।
ಅದ್ಯ ಪಾಂಡುಸುತಾನ್ ಸರ್ವಾನ್ ಜೀವಿತಾದ್ ಭ್ರಂಶಯಿಷ್ಯತಿ ॥೨೦॥

ಆ ಈ ಅಸ್ತ್ರವು ಪಾಂಡವರ ನಾಶಕ್ಕಾಗಿಯೇ ಸನ್ನದ್ಧವಾಗಿದೆ, ಈಗಲೇ ಎಲ್ಲ ಪಾಂಡುಪುತ್ರರು ಜೀವಿತವನ್ನು ಕಳೆದುಕೊಳ್ಳುವರು.

ಕೃತಂ ಪಾಪಮಿದಂ ಬ್ರಹ್ಮನ್ ಕ್ರೋಧೇನಾವಿಷ್ಟಚೇತಸಾ ।
ವಧಮಾಶಾಸ್ಯ ಪಾರ್ಥಾನಾಂ ಮಯಾಽಸ್ತ್ರಂ ಸೃಜತಾ ಪ್ರಭೋ ॥೨೧॥

ಬ್ರಾಹ್ಮಣನೇ! ಕುಪಿತನಾದ ನಾನು ಕುಂತಿಯ ಮಕ್ಕಳ ಸಾವನ್ನು ಬಯಸಿ ಅಸ್ತ್ರವನ್ನು ಪ್ರಯೋಗಿಸಿರುವೆನು, ಪ್ರಭುವೆ! ನಾನು ಪಾಪವನ್ನು ಮಾಡಿದೆನು.

ವ್ಯಾಸಃ

ಅಸ್ತ್ರಂ ಬ್ರಹ್ಮಶಿರಸ್ತಾತ ವಿದ್ವಾನ್ ಪಾರ್ಥೋ ಧನಂಜಯಃ ।
ಉತ್ಸೃಷ್ಟವಾನಹಿಂಸಾರ್ಥಂ ನ ರೋಷೇಣ ತವಾಹವೇ ॥೨೨॥

ವ್ಯಾಸರು– ಪುತ್ರನೇ! ಜ್ಞಾನಿಯಾದ ಕುಂತಿಯ ಪುತ್ರನಾದ ಧನಂಜಯನು ನಿನ್ನನ್ನು ಉದ್ದೇಶಿಸಿ ಯುದ್ಧದಲ್ಲಿ ಬ್ರಹ್ಮಶಿರಾಸ್ತ್ರವನ್ನು ಪ್ರಯೋಗಿಸಿರುವನು. ಆದರೆ ರೋಷದಿಂದಲ್ಲ, ಶಾಂತಿಗಾಗಿ.

ಅಸ್ತ್ರಮಸ್ತ್ರೇಣ ತು ರಣೇ ತವ ಸಂಶಮಯಿಷ್ಯತಾ ।
ವಿಸೃಷ್ಟಮರ್ಜುನೇನೇದಂ ಪುನಶ್ಚ ಪ್ರತಿಸಂಹೃತಮ್ ॥೨೩॥

ಅರ್ಜುನನಾದರೋ ಯುದ್ಧದಲ್ಲಿ ನಿನ್ನ ಅಸ್ತ್ರವನ್ನು (ತನ್ನ) ಅಸ್ತ್ರದಿಂದ ಪ್ರಶಮನಗೊಳಿಸಬೇಕೆಂಬ ಇಚ್ಛೆಯಿಂದ ಪ್ರಯೋಗಿಸಿದನು, ಪುನಃ ಅದನ್ನು ಉಪಸಂಹರಿಸಿದನು.

ಬ್ರಹ್ಮಾಸ್ತ್ರಮಪ್ಯವಾಪ್ಯೈತದ್ ಉಪದೇಶಾತ್ ಪಿತುಸ್ತವ ।
ಕ್ಷತ್ರಧರ್ಮಾನ್ಮಹಾಬುದ್ಧಿರ್ನಾಕಂಪತ ಧನಂಜಯಃ ॥೨೪॥

ಮೇಧಾವಿಯಾದ ಧನಂಜಯನು ನಿನ್ನ ತಂದೆಯ (ದ್ರೋಣಾಚಾರ್ಯರ) ಉಪದೇಶದಿಂದ ಈ ಬ್ರಹ್ಮಾಸ್ತ್ರವನ್ನು ಹೊಂದಿಯೂ ಸಹ ಕ್ಷತ್ರಧರ್ಮದಿಂದ ವಿಚಲಿತನಾಗಲಿಲ್ಲ.

ಏವಂ ಧೃತಿಮತಃ ಸಾಧೋಃ ಸರ್ವಾಸ್ತ್ರವಿದುಷಃ ಸತಃ ।
ಸಭ್ರಾತೃಬಂಧೋಃ ಕಸ್ಮಾತ್ ತ್ವಂ ವಧಮಸ್ಯ ಚಿಕೀರ್ಷಸಿ ॥೨೫॥

ಈ ರೀತಿಯಾಗಿ ಮೇಧಾವಿಯಾದ, ಸಜ್ಜನನಾದ, ಎಲ್ಲ ಅಸ್ತ್ರಗಳನ್ನೂ ಬಲ್ಲ, ಸಂಪನ್ನನಾದ, ಸಹೋದರ, ಬಂಧುಗಳಿಂದ ಯುಕ್ತನಾದ ಅತನ (ಅರ್ಜುನನ) ಸಾವನ್ನು ಏತಕ್ಕಾಗಿ ಬಯಸುತ್ತಿರುವಿ?

ಅಸ್ತ್ರಂ ಬ್ರಹ್ಮಶಿರೋ ಯತ್ರ ಪರಮಾಸ್ತ್ರೇಣ ಬಾಧ್ಯತೇ ।
ಸಮಾ ದ್ವಾದಶ ಪರ್ಜನ್ಯಸ್ತದ್ರಾಷ್ಟ್ರೇ ನಾಭಿವರ್ಷತಿ ॥೨೬॥

ಎಲ್ಲಿ ಬ್ರಹ್ಮಶಿರಾಸ್ತ್ರವು ಪರಮಾಸ್ತ್ರದಿಂದ ಪ್ರತಿಹತವಾಗುವುದೋ, ಆ ರಾಷ್ಟ್ರದಲ್ಲಿ ಹನ್ನೆರಡುವರ್ಷಗಳ ಪರ್ಯಂತ ಮಳೆಯು ಆಗದು.

ಏತದರ್ಥಂ ಮಹಾಬಾಹುಃ ಶಕ್ತಿಮಾನಪಿ ಪಾಂಡವಃ ।
ಉಪಸಂಹೃತವಾನಸ್ತ್ರಂ ಪ್ರಜಾಹಿತಚಿಕೀರ್ಷಯಾ ॥೨೭॥

ಇದಕ್ಕಾಗಿಯೇ ಮಹಾಬಾಹುವಾದ ಪಾಂಡುಪುತ್ರನು ಶಕ್ತಿವಂತನಾಗಿದ್ದರೂ ಸಹ ಪ್ರಜೆಗಳ ಹಿತವನ್ನು ಬಯಸಿ, ಅಸ್ತ್ರವನ್ನು ಉಪಸಂಹರಿಸಿರುವನು.

ಪಾಂಡವಾಸ್ತ್ವಂ ಚ ರಾಷ್ಟ್ರಂ ಚ ಸದಾ ಸಂರಕ್ಷ್ಯಮೇವ ನಃ ।
ತಸ್ಮಾತ್ ಸಂಹರ ದಿವ್ಯಂ ತ್ವಮಸ್ತ್ರಮೇತನ್ಮಹಾಭುಜ ॥೨೮॥

ನಮಗೆ ಪಾಂಡವರು ಹಾಗು ನೀನು ಮತ್ತು ರಾಷ್ಟ್ರವು ರಕ್ಷಣೀಯಗಳಾಗಿವೆ, ಮಹಾಪರಾಕ್ರಮಿಯೆ! ಆದ್ದರಿಂದ ನೀನು ಈ ದಿವ್ಯವಾದ ಅಸ್ತ್ರವನ್ನು ಉಪಸಂಹರಿಸು.

ಅರೋಷಸ್ತವ ಚೈವಾಸ್ತು ಪಾರ್ಥಾಃ ಸಂತು ನಿರಾಮಯಾಃ ।
ನ ಹ್ಯಧರ್ಮೇಣ ರಾಜರ್ಷಿಃ ಪಾಂಡವೋ ಜೇತುಮಿಚ್ಛತಿ ॥೨೯॥

ನಿನ್ನಲ್ಲಿ ಕೋಪವು ಶಾಂತವಾಗಲಿ, ಪಾಂಡವರು ಆಪತ್ತಿನಿಂದ ಪಾರಾಗಲಿ, ರಾಜರ್ಷಿಯಾದ ಪಾಂಡುಪುತ್ರನು (ಭೀಮಸೇನನು) ಅಧರ್ಮದಿಂದ ಜಯಿಸಲು ಅಪೇಕ್ಷಿಸುವುದಿಲ್ಲ.

ಮಣಿಂ ಚೈನಂ ಪ್ರಯಚ್ಛೈಭ್ಯೋ ಯಸ್ತೇ ಶಿರಸಿ ತಿಷ್ಠತಿ ।
ಏತದಾದಾಯ ತೇ ಪ್ರಾಣಾನ್ ಪ್ರತಿದಾಸ್ಯಂತಿ ಪಾಂಡವಾಃ ॥೩೦॥

ಯಾವ ಮಣಿಯು ನಿನ್ನ ತಲೆಯಲ್ಲಿರುವುದೋ ಅದನ್ನು ಪಾಂಡುಪುತ್ರರಿಗೆ ನೀಡು, ಪಾಂಡುಪುತ್ರರು ಇದನ್ನು ಸ್ವೀಕರಿಸಿ ನಿನಗೆ ಪ್ರಾಣವನ್ನು ಪ್ರತಿಯಾಗಿ ನೀಡುವರು.

ದ್ರೌಣಿಃ

ಪಾಂಡವೈರ್ಯಾನಿ ರತ್ನಾನಿ ಯದ್ವಾಽನ್ಯತ್ ಕೌರವೈರ್ಧನಮ್ ।
ಅವಾಪ್ತಾನೀಹ ತೇಭ್ಯೋಽಯಂ ಮಣಿರ್ಮಮ ವಿಶಿಷ್ಯತೇ ॥೩೧॥

ಅಶ್ವತ್ಥಾಮ– ಪಾಂಡವರು ಈವರೆಗೆ ಯಾವ ರತ್ನಗಳನ್ನು ಅಥವಾ ಕೌರವರಿಂದ ಬೇರೆ ಯಾವ ಧನವನ್ನು ಪಡೆದಿರುವರೋ ಆ ಎಲ್ಲವುಗಳಿಂದ ನನ್ನ ಮಣಿಯು ವಿಶಿಷ್ಟವಾಗಿದೆ.

ಯಮಾಬಧ್ಯ ಭಯಂ ನಾಸ್ತಿ ಶಸ್ತ್ರವ್ಯಾಧಿಕ್ಷುಧಾಶ್ರಯಮ್ ।
ದೇವೇಭ್ಯೋ ದಾನವೇಭ್ಯೋ ವಾ ನಾಗೇಭ್ಯೋ ವಾ ಕದಾಚನ ॥೩೨॥

ಶಸ್ತ್ರಗಳ, ವ್ಯಾಧಿಗಳ, ಹಸಿವೆ-ಬಾಯಾರಿಕೆಗಳ, ದೇವತೆಗಳ, ದಾನವರ, ನಾಗಗಳ ನಿಮಿತ್ತವಾದ ಯಾವ ಭಯವು ಈ ಮಣಿಯನ್ನು ಧರಿಸುವುದರಿಂದ ಯಾವಾಗಲೂ ಇರುವದಿಲ್ಲ.

ನ ಚ ರಕ್ಷೋಗಣಭಯಂ ನ ತಸ್ಕರಭಯಂ ತಥಾ ।
ಏವಂ ವೀರ್ಯೋ ಮಣಿರಯಂ ನ ಮೇ ತ್ಯಾಜ್ಯಃ ಕಥಂಚನ ॥೩೩॥

ರಕ್ಕಸರ ಭಯವಿಲ್ಲ ಹಾಗೆಯೇ ಕಳ್ಳರ ಭಯವಿಲ್ಲ. ಇಂತಹ ಪ್ರಭಾವಯುಕ್ತವಾದ ಈ ಮಣಿಯು ಸರ್ವಥಾ ತ್ಯಾಜ್ಯವಲ್ಲ.

ಯತ್ ತು ಮೇ ಭಗವಾನಾಹ ತನ್ಮೇ ಕಾರ್ಯಮನಂತರಮ್ ।
ಅಯಂ ಮಣಿರಯಂ ಚಾಹಮಿಷೀಕಾ ತು ಪತಿಷ್ಯತಿ ॥೩೪॥

ಗರ್ಭೇಷು ಪಾಂಡವೇಯಾನಾಮಮೋಘಂ ಚೈತದುತ್ತಮಮ್ ॥೩೫॥

ನ ಚ ಶಕ್ನೋಮಿ ಭಗವನ್ ಸಂಹರ್ತುಂ ಪುನರುದ್ಯತಮ್ ।
ನ ಚ ವಾಕ್ಯಂ ಭಗವತೋ ನ ಕರಿಷ್ಯೇ ಮಹಾಮುನೇ ॥೩೬॥

ಮಹಾಮುನಿಯೇ! ಯಾವುದನ್ನು ತಾವು ಹೇಳಿರುವಿರೋ ಅದು ಕಾರ್ಯವೇ ಆಗಿದೆ, ನಾನು ಎಂದೂ ನಿಮ್ಮ ಆದೇಶವನ್ನು ಮೀರಿದವನಲ್ಲ. ಆದರೆ ಈ ಮಣಿಯು ಬೇರಲ್ಲ, ನಾನು ಬೇರಲ್ಲ. ಈ ದರ್ಭಮಯವಾದ ಅಸ್ತ್ರವು ಪಾಂಡವರ ಸಂತತಿಯ ಮೇಲೇ ಎರಗುವುದು. ಗುರಿತಪ್ಪದ ಶ್ರೇಷ್ಠವಾದ ಹೂಡಿದ ಈ ಅಸ್ತ್ರವನ್ನು ಉಪಸಂಹರಿಸಲು ಅಸಮರ್ಥನಾಗಿರುವೆ.

ವ್ಯಾಖ್ಯಾನ ವಿಶೇಷ– 'ಅಯಂ ಮಣಿರಯಂ ಚಾಹಮ್' ಎನ್ನುವಲ್ಲಿರುವ 'ಚ' ಶಬ್ದವು ಅವಧಾರಣಾರ್ಥದಲ್ಲಿದೆ. ಹೀಗೆ ಅವಧಾರಣಾರ್ಥವನ್ನು ಪರಿಗ್ರಹಿಸಿದ್ದರಿಂದ ' ನಾನು ಬೇರಲ್ಲ ಈ ಮಣಿಯು ಬೇರಲ್ಲ, ಅದ್ದರಿಂದ ಈ ಮಣಿಯನ್ನು ನೀಡಲಾರೆ' ಎಂಬ ಭಾವವು ಹೊರಹೊಮ್ಮುವುದು – **ಲಕ್ಷಾಲಂಕಾರ.**

ವೈಶಂಪಾಯನಃ

ಪ್ರಾಹ ದ್ರೋಣಸುತಂ ತತ್ರ ವ್ಯಾಸಃ ಪರಮದುರ್ಮನಾಃ ॥೩೭॥

ವೈಶಂಪಾಯನರು– ಆಗ ತುಂಬ ಬೇಸರಿಸಿಕೊಂಡ ವ್ಯಾಸರು ದ್ರೋಣಪುತ್ರನನ್ನು ಉದ್ದೇಶಿಸಿ ಹೇಳಿದರು.

ವ್ಯಾಸಃ

ಏವಂ ಕುರು ನ ಚಾನ್ಯತ್ರ ಬುದ್ಧಿಃ ಕಾರ್ಯಾ ಕಥಂಚನ ।
ಗರ್ಭೇಷು ಪಾಂಡವೇಯಾನಾಂ ವಿಸೃಜ್ಯೈತದುಪಾರಮ ॥೩೮॥

ವ್ಯಾಸರು– ಹಾಗೆಯೇ ಮಾಡು, ಮತ್ತೆ ಬುದ್ಧಿಯನ್ನು ಬದಲಿಸದಿರು, ಪಾಂಡವರ ಸಂತತಿಯ ಮೇಲೆ (ಈ ಅಸ್ತ್ರವನ್ನು) ಹೂಡಿ ಅನಂತದಲ್ಲಿ ಉಪರತನಾಗು.

ವೈಶಂಪಾಯನಃ

ತಮುವಾಚ ಹೃಷೀಕೇಶಃ ಪಾಂಡವಾನಾಂ ಹಿತೇ ರತಃ ॥೩೯॥

ವೈಶಂಪಾಯನ– ಪಾಂಡವರ ಹಿತದಲ್ಲಿ ನಿರತನಾದ ಹೃಷೀಕೇಶನು ಆತನನ್ನು (ಅಶ್ವತ್ಥಾಮನನ್ನು) ಉದ್ದೇಶಿಸಿ ನುಡಿದನು.

ಶ್ರೀಭಗವಾನ್

ಭವಿಷ್ಯಮೇಕಮುತ್ಸೃಜ್ಯ ಗರ್ಭೇಷ್ವಸ್ತ್ರಂ ನಿಪಾತ್ಯತಾಮ್ ।
ಅಹಮೇಕಂ ದದಾಮ್ಯೇಷಾಂ ಪಿಂಡದಂ ಕೀರ್ತಿವರ್ಧನಮ್ ॥೪೦॥

ರಾಜರ್ಷಿಂ ಪುಣ್ಯಕರ್ಮಾಣಮನೇಕಕ್ರತುಯಾಜಿನಮ್ ॥೪೧॥

ಕೃಷ್ಣ– ಮುಂದೆ ಹುಟ್ಟಲಿರುವ ಗರ್ಭವೊಂದನ್ನು ಹೊರತು ಪಡಿಸಿ, (ಪಾಂಡವರ ಉಳಿದ) ಸಂತತಿಯ ಮೇಲೆ ನಿನ್ನ ಅಸ್ತ್ರವು ಎರಗಲಿ, ನಾನು ಇವರಿಗೆ (ಪಾಂಡವರಿಗೆ) ಕೀರ್ತಿಕಾರಕನಾದ, ಉತ್ತರಕ್ರಿಯೆಯನ್ನು ಆಚರಿಸುವ, ರಾಜರ್ಷಿಯಾದ, ಮಂಗಳಕರ್ಮಗಳನ್ನು ಆಚರಿಸುವ, ಅನೇಕ ಯಜ್ಞಗಳನ್ನು ಮಾಡಲಿರುವ ಓರ್ವನನ್ನು ನೀಡುವೆನು.

ಏವಂ ಕುರು ನ ಚಾನ್ಯಾ ತೇ ಬುದ್ಧಿಃ ಕಾರ್ಯಾ ಕಥಂಚನ ।
ಅಗರ್ಭಾತ್ ಪಾಂಡವೇಯಾನಾಂ ಕೃತ್ವಾ ಪಾತಂ ವಿನಂಕ್ಷ್ಯತಿ ॥೪೨॥

ಈ ರೀತಿಯಾಗಿ (ವ್ಯಾಸರು ತಿಳಿಸಿದಂತೆ) ಆಚರಿಸು. ಬೇರೆ ಯಾವ ರೀತಿಯಲ್ಲಿಯೂ ಆಲೋಚಿಸದಿರು. ಪಾಂಡವರ ಎಲ್ಲ ಸಂತತಿಯನ್ನು ನಾಶಗೊಳಿಸಿ, ಆ ಅಸ್ತ್ರವು ಶಮನಗೊಳ್ಳುವುದು.

ವೈಶಂಪಾಯನಃ

ಏವಂ ಬ್ರುವಾಣಂ ಗೋವಿಂದಂ ವೃಷಭಂ ಸರ್ವಸಾತ್ವತಾಮ್ ।
ದ್ರೌಣಿಃ ಪರಮಸಂಕ್ರುದ್ಧಃ ಪ್ರತ್ಯುವಾಚೇದಮುತ್ತರಮ್ ॥೪೩॥

ವೈಶಂಪಾಯನರು– ಈ ರೀತಿಯಾಗಿ ಹೇಳುತ್ತಿರುವ ಎಲ್ಲ ಸಾತ್ವತರಲ್ಲಿ ಮೂರ್ಧನ್ಯನಾದ ಗೋವಿಂದನನ್ನು ಉದ್ದೇಶಿಸಿ, ಅತಿಯಾಗಿ ಕೋಪಗೊಂಡ ದ್ರೋಣಪುತ್ರನು ಪ್ರತಿಯಾಗಿ ಉತ್ತರಿಸಿದನು.

ದ್ರೌಣಿಃ

ನೈತದೇವಂ ಯದಾತ್ಥ ತ್ವಂ ಪಕ್ಷಪಾತೇನ ಕೇಶವ ।
ವಚನಾತ್ ಪುಂಡರೀಕಾಕ್ಷ ತವ ಮದ್ವಾಕ್ಯಮನ್ಯಥಾ ॥೪೪॥

ಅಶ್ವತ್ಥಾಮ– ಕೇಶವ, ಪುಂಡರೀಕಾಕ್ಷ! ಪಕ್ಷಪಾತದಿಂದ ನೀನು ಏನು ಹೇಳಿದೆಯೋ, ನಿನ್ನ ಮಾತಿನಿಂದ ನನ್ನ ಮಾತನ್ನು ಅನ್ಯಥಾ ಮಾಡಲು ಇಚ್ಛಿಸಿರುವೆಯೋ ಅದು ಹಾಗಾಗದು.

ಪತಿಷ್ಯತ್ಯೇತದಸ್ತ್ರಂ ವೈ ಗರ್ಭೇ ತಸ್ಯಾ ಮಯೋದ್ಯತಮ್ ।
ವಿರಾಟದುಹಿತುಃ ಕೃಷ್ಣ ಯಂ ತ್ವಂ ರಕ್ಷಿತುಮಿಚ್ಛಸಿ ॥೪೫॥

ಕೃಷ್ಣ! ಯಾರನ್ನು ನೀನು ರಕ್ಷಿಸಲು ಬಯಸಿರುವೆಯೋ ಆ ವಿರಾಟರಾಜನ ಪುತ್ರಿಯ ಗರ್ಭದಲ್ಲಿಯೂ ನನ್ನಿಂದ ಹೂಡಲಾದ ಅಸ್ತ್ರವು ಬೀಳಲಿದೆ.

ಶ್ರೀಭಗವಾನ್

ಅಮೋಘಃ ಪರಮಾಸ್ತ್ರಸ್ಯ ಪಾತಸ್ತ ದ್ವ ಭವಿಷ್ಯತಿ ।
ಅಭಿಮನ್ಯೋಃ ಸುಜೈಷೀಕಾಂ ಗರ್ಭಸ್ಥಃ ಶಾಮ್ಯತಾಂ ಶಿಶುಃ ॥೪೬॥

ಅಹಮೇನಂ ಮೃತಂ ಜಾತಂ ಜೀವಯಿಷ್ಯಾಮಿ ಬಾಲಕಮ್ ।
ಸ ತು ಗರ್ಭೋ ಮೃತೋ ಜಾತೋ ದೀರ್ಘಮಾಯುರವಾಪ್ಸ್ಯತಿ ॥

ಕೃಷ್ಣ– ಗುರಿತಪ್ಪದ ಶ್ರೇಷ್ಠವಾದ ಅಸ್ತ್ರವು (ನೀನು ಬಯಸಿದಂತೆ ಉತ್ತರೆಯ ಗರ್ಭದ ಮೇಲೆ) ಬೀಳಲಿದೆ, ನಾನು ಮೃತನಾಗಿ ಹುಟ್ಟಿದ ಈ ಬಾಲಕನನ್ನು ಪುನಃ ಬದುಕಿಸುತ್ತೇನೆ. ಮೃತವಾಗಿ ಪುನಃ ಜೀವಿತವಾದ ಗರ್ಭವಾದರೋ ದೀರ್ಘವಾದ ಆಯುಷ್ಯವನ್ನು ಹೊಂದುವುದು.

ವೈಶಂಪಾಯನಃ

ಇತ್ಯುಕ್ತಂ ಪ್ರತ್ಯುವಾಚೈನಂ ದ್ರೌಣಿಪುತ್ರಃ ಸ್ಮಯನ್ನಿವ ॥೪೮॥

ವೈಶಂಪಾಯನರು– ಈ ರೀತಿಯಾಗಿ ಹೇಳಿದ ಈತನನ್ನು (ಕೃಷ್ಣನನ್ನು) ಉದ್ದೇಶಿಸಿ ದ್ರೌಣಪುತ್ರನು ಮುಗುಳು ನಗುತ್ತಾ ಪ್ರತಿಯಾಗಿ ಉತ್ತರಿಸಿದನು.

ದ್ರೌಣಿಃ

ಯದ್ಯಸ್ತ್ರದಗ್ಧಂ ಗೋವಿಂದ ಜೀವಯಸ್ಯೇವಮತ್ಸ್ತ್ವಿತಿ ॥೪೯॥

ಗೋವಿಂದ! ಒಂದು ವೇಳೆ ಅಸ್ತ್ರದಿಂದ ದಹಿಸಿದ ಗರ್ಭವನ್ನು ಪುನಃ ಉಜ್ಜೀವಿಸುವದಾದಲ್ಲಿ ಹಾಗೇ ಆಗಲಿ.

ವೈಶಂಪಾಯನಃ

ತತಃ ಪರಮಮಸ್ತ್ರಂ ತು ದ್ರೌಣಿರುದ್ಯತಮಾಹವೇ ।
ದ್ವೈಪಾಯನಮನಾದೃತ್ಯ ಗರ್ಭೇಷು ಪ್ರಮುಮೋಚ ಹ ॥೫೦॥

ವೈಶಂಪಾಯನರು– ಆನಂತರದಲ್ಲಿ ದ್ರೋಣಪುತ್ರನು ವೇದವ್ಯಾಸರ ಮಾತನ್ನು ಅಲಕ್ಷಿಸಿ, ಯುದ್ಧದಲ್ಲಿ ಮೇಲೆತ್ತಿದ ಪರಮಾಸ್ತ್ರವನ್ನು ಪಾಂಡವರ ಸಂತತಿಯ ಮೇಲೆ ಪ್ರಯೋಗಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ವ್ಯಾಸವಾಕ್ಯಂ ನಾಮ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಯಾದವೇಶೋऽಥ ಗೌತಮ್ಯಾಃ ಸುತಮಾಹೈಕಸಂತತೇಃ ।
ವಾಚಾ ನಿವಾರಯಾಸ್ತ್ರಂ ತೇ ಇತ್ಯುಕ್ತೋ ದ್ರೌಣಿರಬ್ರವೀತ್ ॥

ಶ್ರೀಕೃಷ್ಣನು ಅಶ್ವತ್ಥಾಮನಿಗೆ ಹೇಳಿದ 'ಪಾಂಡವರ ಒಂದು ಸಂತತಿಯಿಂದ ನಿನ್ನ ಅಸ್ತ್ರವನ್ನು ಮಾತಿನಿಂದ ಹಿಂದಿರುಗಿಸು'. ಕೃಷ್ಣನು ಹೀಗೆ ಹೇಳಿದಾಗ ಅಶ್ವತ್ಥಾಮನು ಹೀಗೆ ಹೇಳಿದನು.

ಪಕ್ಷಪಾತಾದಿಚ್ಛಸಿ ತ್ವಂ ಭಾಗಿನೇಯಸ್ಯ ಸಂತತಿಮ್ ।
ತತ್ಕೈವ ಪಾತಯಾಮ್ಯಸ್ತ್ರಮುತ್ತರಾಗರ್ಭಕೃಂತನೇ ॥

'ನೀನು ಪಕ್ಷಪಾತದಿಂದ ನಿನ್ನ ತಂಗಿಯ ಮಗನ ಸಂತತಿಯನ್ನು ಉಳಿಸಲು ಬಯಸುತ್ತಿರುವಿ. ನಾನು ಆ ಸಂತತಿಯ ಮೇಲೆಯೆ ಉತ್ತರೆಯ ಗರ್ಭವನ್ನು ನಾಶಪಡಿಸುವುದಕ್ಕಾಗಿ ಅಸ್ತ್ರವನ್ನು ಬೀಳಿಸುತ್ತೇನೆ'.

ವಾಸುದೇವಃ ಪುನಃ ಪ್ರಾಹ ಯದಿ ಹಂತವ್ಯ ಏವ ತೇ ।
ಗರ್ಭಸ್ತಥಾऽಪಿ ನೈವಾಸ್ತ್ರಂ ಪಾತಯಾಸ್ಮಿನ್ ಕಥಂಚನ ॥

ಅಶ್ವತ್ಥಾಮನು ಹೀಗೆ ಹೇಳಿದಾಗ ಶ್ರೀಕೃಷ್ಣನೆಂದ- 'ನಿನಗೆ ಆ ಗರ್ಭವನ್ನು ಕೊಲ್ಲಬೇಕೆಂದೇ ಸಂಕಲ್ಪವಿರಬಹುದು. ಆದರೂ ಅದರ ಮೇಲೆ ಅಸ್ತ್ರವನ್ನು ಸರ್ವಥಾ ಬೀಳಿಸಬೇಡ'.

ಅಭಿಮನ್ಯೋರ್ಮೃತಸ್ಯೈವ ದೇಹೇ ಪಾತಯ ಮಾನದ ।
ಏವಂ ತ್ವದಸ್ತ್ರನಿಹತಂ ಗರ್ಭಮುಜ್ಜೀವಯಾಮ್ಯಹಮ್ ॥

'ಅಭಿಮಾನಿಯಾದ ಅಶ್ವತ್ಥಾಮನೆ, ನೀನು ಅಭಿಮನ್ಯುವಿನ ಮೃತದೇಹದಲ್ಲಿಯೆ ಅಸ್ತ್ರವನ್ನು ಬೀಳಿಸು. ನಿನ್ನ ಅಸ್ತ್ರದಿಂದ ಹೀಗೆ ಉತ್ತರೆಯ ಗರ್ಭ ಹತವಾದರೂ ನಾನು ಅದನ್ನು ತಿರುಗಿ ಬದುಕಿಸುತ್ತೇನೆ'.

ಪಾತಯೇ ಗರ್ಭ ಏವಾಹಮಿತ್ಯೂಚೇ ಗೌತಮೀಸುತಃ ।
ಅಥಾಹ ವಾಸುದೇವಸ್ತಮೀಷತ್ಕುದ್ಧ ಇವ ಪ್ರಭುಃ ॥

'ಆದರೂ ಗರ್ಭದ ಮೇಲೆಯೇ ಅಸ್ತ್ರವನ್ನು ಬೀಳಿಸುತ್ತೇನೆ' ಎಂದ ಅಶ್ವತ್ಥಾಮ. ಆಗ ಸರ್ವಶಕ್ತನಾದ ಶ್ರೀಕೃಷ್ಣನು ಸ್ವಲ್ಪ ಕೋಪಗೊಂಡವನಂತೆ ತೋರಿಸಿಕೊಂಡು ಅವನಿಗೆ ನುಡಿದನು.

ದುರ್ಮತೇ ಪಶ್ಯ ಮೇ ವೀರ್ಯಂ ಯತ್ ತೇ ಶಕ್ಯಂ ಕುರುಷ್ವ ತತ್ ।
ಉಜ್ಜೀವಯಾಮ್ಯಹಂ ಗರ್ಭಂ ಯತತಃ ಶಕ್ತಿತೋऽಪಿ ತೇ ॥

'ದುರ್ಬುದ್ಧಿಯೆ, ನನ್ನ ಶಕ್ತಿಯನ್ನು ನೋಡು. ನಿನಗೇನು ಶಕ್ಯವೋ ಅದನ್ನು ನೀನು ಮಾಡು. ನೀನು ಶಕ್ತಿ ಇದ್ದಷ್ಟೂ ಗರ್ಭವನ್ನು ಕೊಲ್ಲಲು ಯತ್ನಿಸಿದರೂ ನಾನು ಬದುಕಿಸುತ್ತೇನೆ'.

ಸಂತತಿರ್ವರ್ಷಸಾಹಸ್ರಂ ಪಾಂಡವಾನಾಂ ಭವೇದ್ ಭುವಿ ।
ಮತ್ಪಾಲಿತಾಂ ನ ಕಶ್ಚಿತ್ ತಾಂ ತಾವದ್ಧಂತುಂ ಕ್ಷಮಃ ಕ್ವಚಿತ್ ॥

'ಒಂದು ಸಾವಿರ ವರ್ಷಕಾಲ ಭೂಮಿಯಲ್ಲಿ ಪಾಂಡವರ ಸಂತತಿ ಇರುತ್ತದೆ. ಅಷ್ಟರವರೆಗೆ ನಾನು ರಕ್ಷಿಸುವ ಆ ಸಂತತಿಯನ್ನು ಯಾವನೂ ಯಾವ ಕಾಲಕ್ಕೂ ನಾಶಮಾಡಲು ಶಕ್ತನಾಗುವುದಿಲ್ಲ.

ಜಾನಾಮಿ ತೇ ಮತಿಂ ದುಷ್ಟಾಂ ಜಿಘಾಂಸೋಃ ಪಾರ್ಥಸಂತತಿಮ್ ।
ಚಿಕೀರ್ಷೋರ್ಧಾರ್ತರಾಷ್ಟ್ರಸ್ಯ ತಂತುಂ ಭೂಯಃ ಸುದುಷ್ಕರಮ್ ॥

'ನಿನ್ನ ದುಷ್ಟಸಂಕಲ್ಪವನ್ನು ನಾನು ಬಲ್ಲೆ. ಪಾಂಡವ ಸಂತತಿಯನ್ನು ನಾಶಪಡಿಸಲು ಬಯಸುತ್ತಿರುವಿ ಮತ್ತು ದುರ್ಯೋಧನನ ಸಂತತಿಯನ್ನು ಪುನಃ ಬೆಳೆಸಲು ಬಯಸುತ್ತಿರುವಿ. ಆದರೆ ಅದು ಅತ್ಯಂತ ದುಷ್ಕರ.

ಮದಾಜ್ಞಯಾ ಸಾ ವಿಫಲಾ ಭವಿತ್ರೀ
ವಾಂಛಾ ಮುಮುಕ್ಷಾ ವಿಮುಖಸ್ಯ ವಿಷ್ಣೋಃ ।
ಯಥೈವ ತೇನೈವ ನರಾಧಿರೂಢೋ
ಗಮ್ಯಸ್ತವ ಸ್ಯಾನ್ನ ಚ ಭೂಮಿಭಾಗಃ ॥

'ವಿಷ್ಣುವಿಗೆ ವಿಮುಖನಾದವನ ಮೋಕ್ಷೇಚ್ಛೆಯೂ ವಿಫಲವಾಗುವಂತೆ ನಿನ್ನ ಬಯಕೆಯೂ ನನ್ನ ಸಂಕಲ್ಪದಿಂದ ವಿಫಲವಾಗುವುದು. ಅದರಿಂದಲೆ ನೀನು ನರಾರೂಢನಾಗುವಿ ಹೊರತು ಭೂಭಾಗ ಯಾವುದೂ ನಿನಗೆ ಗಮ್ಯವಾಗುವುದಿಲ್ಲ'.

ದುರ್ಗಂಧಯುಕ್ತೋ ವ್ರಣಸಂಚಿತಾಂಗಃ
ಸದಾ ಚರಃ ಸ್ಯಾ ವಿಪಿನೇಷು ಮಂದ ।
ಯಾವದ್ ಭುವಿ ಸ್ಯಾದಿಹ ಪಾರ್ಥತಂತು-
ರ್ವ್ಯಾಸೋಽಪಿ ತಂ ಪ್ರಾಹ ತಥೇತಿ ದೇವಃ ॥

'ಅಜ್ಞನೆ, ನೀನು ಭೂಮಿಯ ಮೇಲೆ ಪಾಂಡವ ಸಂತತಿ ಇರುವಷ್ಟು ಕಾಲ ಮೈಯಲ್ಲಿ ಹುಣ್ಣಿಂದ ಕೂಡಿ, ದುರ್ಗಂಧಯುಕ್ತನಾಗಿ ಕಾಡುಗಳಲ್ಲಿ ಸದಾ

ಸಂಚರಿಸುವವನಾಗುವಿ'. ಹೀಗೆ ಶ್ರೀಕೃಷ್ಣನು ಹೇಳಿದಾಗ ವೇದವ್ಯಾಸರೂ 'ಹಾಗೇ ಆಗಲಿ' ಎಂದರು.

ರೂಪದ್ವಯೇನಾಪಿ ಹರೇಸ್ತಥೋಕ್ತೋ
ಜಗಾದ ಕಾಳೀತನಯಂ ಸ ಕೃಷ್ಣಮ್ ।
ತ್ವಯಾ ಸಹ ಸ್ಯಾನ್ಮಮ ಸಂಗಮೋ ವಿಭೋ
ಯಥೇಷ್ಟತಃ ಸ್ಯಾನ್ನ ಚ ಮೇಽತ್ರ ವಿಘ್ನಃ ॥

ಶ್ರೀಹರಿಯ ವೇದವ್ಯಾಸ-ಕೃಷ್ಣ ಎಂಬ ಎರಡೂ ರೂಪಗಳು ಹೀಗೆ ಹೇಳಿದಾಗ ಅಶ್ವತ್ಥಾಮ ವೇದವ್ಯಾಸರಿಗೆ ಹೇಳಿದನು- 'ಪ್ರಭು: ನಿನ್ನೊಡನೆ ನನಗೆ ಬಯಸಿದಾಗಲೆಲ್ಲ ಸಮಾಗಮವಾಗುತ್ತಿರಲಿ. ಅದಕ್ಕೆ ವಿಘ್ನ ಬಾರದಿರಲಿ'.

ಇತ್ಯುಕ್ತ ಓಮಿತಿ ಪ್ರಾಹ ಭಗವಾನ್ ಬಾದರಾಯಣಃ ।
ತಂ ಪ್ರಣಮ್ಯ ಯಯೌ ಸೋಽಪಿ ಸ್ವಪ್ನದೃಷ್ಟಮನುಸ್ಮರನ್ ॥

ಸ್ವಪ್ನೇ ಹಿ ದ್ರೌಪದೇಯಾನಾಂ ವಧೋ ದೃಷ್ಟೋಽತ್ಮನಾ ನಿಶಿ ।
ಅರ್ಜುನೇನ ಪ್ರತಿಜ್ಞಾನಂ ದ್ರೌಪದ್ಯೈ ಸ್ವವಧಂ ಪ್ರತಿ ॥

ನಿಬಧ್ಯಾನಯನಂ ಚೈವ ತೇನೈವ ಶಿಬಿರಂ ಪ್ರತಿ ।
ಮುಂಚೇತಿ ದ್ರೌಪದೀವಾಕ್ಯಂ ನೇತಿ ಭೀಮವಚಸ್ತಥಾ ॥

ಕೃಷ್ಣವಾಕ್ಯಾನ್ಮಣಿಂ ಹೃತ್ವಾ ದೇಶಾನ್ನಿರ್ಯಾತನಂ ತಥಾ ।
ಇತ್ಯಾದಿ ಸ್ವಪ್ನದೃಷ್ಟಂ ಯತ್ ಪ್ರಾಯಃ ಸತ್ಯಮಭೂದಿತಿ ।
ಚಿಂತಯನ್ ಪ್ರಯಯೌ ದೇವಂ ದ್ರೌಣಿಃ ಶಸ್ತ್ರಭೃತಾಂ ವರಃ ॥

ಅಶ್ವತ್ಥಾಮನು ಹೀಗೆ ಹೇಳಿದಾಗ ಭಗವಾನ್ ಬಾದರಾಯಣರು 'ಆಗಲಿ' ಎಂದರು. ಅಶ್ವತ್ಥಾಮನು ಅವರನ್ನು ನಮಿಸಿ ಹೊರಟು ಹೋದರು. ಹೋಗುವಾಗ ತಾನು ಸ್ವಪ್ನದಲ್ಲಿ ಕಂಡುದನ್ನು ನೆನೆದುಕೊಂಡನು. ಸ್ವಪ್ನದಲ್ಲಿ ಅಶ್ವತ್ಥಾಮನು ತಾನು ರಾತ್ರಿ ಕಾಲದಲ್ಲಿ ದ್ರೌಪದೀಪುತ್ರರನ್ನು ಕೊಂದಂತೆ, ಅದಕ್ಕೆ ಅರ್ಜುನ ತನ್ನನ್ನು ಕೊಲ್ಲಲು ದ್ರೌಪದಿಯ ಮುಂದೆ ಪ್ರತಿಜ್ಞೆ ಮಾಡಿದಂತೆ, ತನ್ನನ್ನು ಬಂಧಿಸಿ ಶಿಬಿರಕ್ಕೆ ಒಯ್ದಂತೆ, ಅಲ್ಲಿ ದ್ರೌಪದಿ ತನ್ನನ್ನು ಬಿಟ್ಟುಬಿಡಲು ಹೇಳಿದಂತೆ, ಬಿಡಬೇಡವೆಂದು ಭೀಮನು

ಹೇಳಿದಂತೆ, ಕೃಷ್ಣನ ಮಾತನ್ನು ಕೇಳಿ ಮಣಿಯನ್ನು ಅಪಹರಿಸಿ, ತನ್ನನ್ನು ದೇಶದಿಂದ ಗಡಿಪಾರು ಮಾಡಿದಂತೆ ಇತ್ಯಾದಿ ಸ್ವಪ್ನದಲ್ಲಿ ತಾನು ಏನೇನು ನೋಡಿದೆನೋ ಪ್ರಾಯಃ ಅದೆಲ್ಲ ನಿಜವಾಯಿತೆಂದು ಚಿಂತಿಸುತ್ತ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅಶ್ವತ್ಥಾಮನು ಅರಣ್ಯಕ್ಕೆ ನಡೆದನು.

ಸ ಕೃಪೋಕ್ತಮಪಿ ಪ್ರಾಪ್ಯ ಬಾದರಾಯಣಶಿಷ್ಯತಾಮ್ ।
ಪ್ರಾಪ್ಯೋತ್ತರದ್ವಾಪರೇ ಚ ವೇದಾನ್ ಸಂವಿಭಜಿಷ್ಯತಿ ॥

ಒಂದು ಸಾವಿರ ವರ್ಷಕಾಲವಿರುವ ಶ್ರೀಕೃಷ್ಣನ ಶಾಪವನ್ನು ಪಡೆದು, ಬಳಿಕ ಬಾದರಾಯಣರ ಶಿಷ್ಯತ್ವವನ್ನು ಹೊಂದಿ ಮುಂದಿನ ದ್ವಾಪರದಲ್ಲಿ ವೇದಗಳನ್ನು ವಿಭಾಗ ಮಾಡುತ್ತಾನೆ ಅಶ್ವತ್ಥಾಮ.

ತತಃ ಸಪ್ತರ್ಷಿಭೂರ್ತ್ವಾ ಪಾರಾಶರ್ಯಪ್ರಸಾದತಃ ।
ಏಕೀಭಾವಂ ಸ್ವರೂಪೇಣ ಯಾಸ್ಯತ್ಯಚ್ಯುತನಿಷ್ಠಯಾ ॥

ಬಳಿಕ ವೇದವ್ಯಾಸರ ಅನುಗ್ರಹದಿಂದ ಅಶ್ವತ್ಥಾಮನು ಸಪ್ತರ್ಷಿಗಳಲ್ಲಿ ಒಬ್ಬನಾಗಿ ಹರಿಭಕ್ತಿಯ ಬಲದಿಂದ ತನ್ನದೆ ಆದ ರುದ್ರಸ್ವರೂಪದಲ್ಲಿ ಏಕೀಭಾವವನ್ನು ಹೊಂದುತ್ತಾನೆ.

ಕೃಪೋಽಥ ಪಾಂಡವಾನ್ ಪ್ರಾಪ್ಯ ಗೌರವಾತ್ ಪೂಜಿತಶ್ಚ ತೈಃ ।
ಅಭೂದಾಚಾರ್ಯ ಏವಾಸೌ ರಾಜ್ಞಾಂ ತತ್ತಂತುಭಾವಿನಾಮ್ ॥

ಕೃಪ ಪಾಂಡವರ ಬಳಿಗೆ ಬಂದು ಗೌರವದಿಂದ ಸತ್ಕೃತನಾಗಿ ಅವರ ವಂಶದಲ್ಲಿ ಹುಟ್ಟುವ ಕ್ಷೇಮಕ ಪರ್ಯಂತ ರಾಜರಿಗೆ ಆಚಾರ್ಯನೇ ಆದನು.

ಬಾದರಾಯಣಶಿಷ್ಯತ್ವಂ ಪುನಃ ಪ್ರಾಪ್ಯ ಭಜನ್ನಮುಮ್ ।
ಸಾಕಂ ಸ್ವಭಾಗಿನೇಯೇನ ಭಾವ್ಯೇಕೋ ಮುನಿಸಪ್ತಕೇ ।
ಕೃತವರ್ಮಾ ದ್ವಾರವತೀಂ ಯಯೌ ಕೃಷ್ಣಾನುಮೋದಿತಃ ॥

ಪಾಂಡವರ ವಂಶ ಅಳಿದಾಗ ಬಾದರಾಯಣರ ಶಿಷ್ಯತ್ವವನ್ನು ಹೊಂದಿ ಅವರನ್ನು ಸೇವಿಸಿ ಕೃಪ ಮುಂದೆ ತಾನೂ ಅಶ್ವತ್ಥಾಮನೊಂದಿಗೆ ಸಪ್ತರ್ಷಿಗಳಲ್ಲಿ ಒಬ್ಬನೆನಿಸುತ್ತಾನೆ. ಕೃತವರ್ಮನು ಕೃಷ್ಣನ ಅನುಮತಿಯಿಂದ ದ್ವಾರಕೆಗೆ ತೆರಳಿದನು.

ಕೃಷ್ಣಾಯೈ ತಂ ಮಣಿಂ ದತ್ವಾ ಭೀಮಸ್ತಾಂ ಪರ್ಯಸಾಂತ್ವಯತ್ ।
ವಿಕೋಪಾ ಭೀಮವಾಕ್ಯೇನ ರಾಜ್ಞೇ ಸಾ ಚ ಮಣಿಂ ದದೌ ॥

ರಾಜಾರ್ಹೋ ಹಿ ಮಣೌ ದತ್ತೇ ಮಹ್ಯಂ ಭೀಮೇನ ಲೌಕಿಕಾಃ ।
ಸ್ತ್ರೀಪಕ್ಷಪಾತಂ ರಾಜಾ ಚ ಶಂಕೇಯುರ್ಮಾರುತೇರಿತಿ ॥

ಮಣಿಂ ರಾಜ್ಞೇ ದದೌ ಕೃಷ್ಣಾ ಭರ್ತೃಪ್ರಿಯಹಿತೇ ರತಾ ।
ಸೋಽಪ್ಯಾಬಧ್ಯ ಮಣಿಂ ಮೂರ್ಧ್ನಿ ರೇಜೇ ರಾಜಾ ಗವಾಮಿವ ॥

ಭೀಮನು ಅಶ್ವತ್ಥಾಮನ ಶಿರೋರತ್ನವನ್ನು ದ್ರೌಪದಿಗೆ ಕೊಟ್ಟು ಅವಳನ್ನು ಸಂತೈಸಿದನು. ದ್ರೌಪದಿ ಭೀಮನ ಮಾತಿನಿಂದ ಕೋಪವನ್ನು ಬಿಟ್ಟಳು. ಅವಳು ರಾಜನಿಗೆ ಯೋಗ್ಯವಾದ ರತ್ನವನ್ನು ಭೀಮನು ತನಗೆ ಕೊಟ್ಟಾಗ ಲೌಕಿಕರೂ ಧರ್ಮರಾಜನೂ ಭೀಮನಲ್ಲಿ ಸ್ತ್ರೀಪಕ್ಷಪಾತ ಬುದ್ಧಿ ಇದೆ ಎಂದು ತಿಳಿಯಬಹುದೆಂದು ಕೊಂಡು ಆ ರತ್ನವನ್ನು ಧರ್ಮರಾಜನಿಗೆ ನೀಡಿದಳು. ಏಕೆಂದರೆ ಅವಳು ಪತಿಗಳಿಗೆ ಪ್ರಿಯವನ್ನೂ, ಹಿತವನ್ನೂ ಮಾಡುವವಳು. ಧರ್ಮರಾಜ ರತ್ನವನ್ನು ತಲೆಯ ಮೇಲೆ ಧರಿಸಿ ಸೂರ್ಯನಂತೆ ಬೆಳಗಿದನು.

★ ★ ★ ★ ★

ಏಳನೆಯ ಅಧ್ಯಾಯ

ತನ್ನ ಮಾತನ್ನು ಅತಿಕ್ರಮಿಸಿ ಅಸ್ತ್ರವನ್ನು ಪ್ರಯೋಗಿಸಿದ ಅಶ್ವತ್ಥಾಮನಿಗೆ ಕೃಷ್ಣನು ಶಾಪವಿತ್ತನು. ಅದನ್ನು ವ್ಯಾಸರು ಅನುಮೋದಿಸಿದರು. ಭೀಮಸೇನನು ಅಶ್ವತ್ಥಾಮನ ಶಿರೋಮಣಿಯನ್ನು ದ್ರೌಪದಿಗೆ ನೀಡಿ ಸಮಾಧಾನಪಡಿಸಿದನು.

ವೈಶಂಪಾಯನಃ

ತದಾಜ್ಞಾಯ ಹೃಷೀಕೇಶೋ ವಿಕೃಷ್ಟಂ ಪಾಪಕರ್ಮಣಾ ।
ಹೃಷ್ಯಮಾಣ ಇದಂ ವಾಕ್ಯಂ ದ್ರೌಣಿಂ ಪ್ರತ್ಯಾದಿಶತ್ ತದಾ ॥೧॥

ವೈಶಂಪಾಯನರು– ಪಾಪಕರ್ಮಿಯಾದ ಅಶ್ವತ್ಥಾಮನು ಅಸ್ತ್ರವನ್ನು ಹೂಡಿದ್ದನ್ನು ತಿಳಿದ ಹೃಷೀಕೇಶನು ಸಂತಸಗೊಂಡವನಾಗಿ ಆಗ ದ್ರೋಣಪುತ್ರನನ್ನು ಉದ್ದೇಶಿಸಿ ಈ ವಾಕ್ಯವನ್ನು ಹೇಳಿದನು.

ಶ್ರೀಭಗವಾನ್

ವಿರಾಟಸ್ಯ ಸುತಾಂ ಪೂರ್ವಂ ಸ್ನುಷಾಂ ಗಾಂಡೀವಧನ್ವನಃ ।
ಉಪಪ್ಲಾವ್ಯಗತಾಂ ದೃಷ್ಟ್ವಾ ಉತ್ತರಾಂ ಬ್ರಾಹ್ಮಣೋಽಬ್ರವೀತ್ ॥೨॥

ಕೃಷ್ಣ– ವಿರಾಟರಾಜನ ಪುತ್ರಿಯಾದ, ಗಾಂಡೀವಧನುವನ್ನು ಧರಿಸಿದ ಅರ್ಜುನನ ಸೊಸೆಯಾದ, ಉಪಪ್ಲಾವ್ಯದಲ್ಲಿರುವ ಉತ್ತರೆಯನ್ನು ಕಂಡು ಬ್ರಾಹ್ಮಣನು (ಈ ರೀತಿಯಾಗಿ) ಹೇಳಿದ್ದನು.

ಬ್ರಾಹ್ಮಣಃ

ಪರಿಕ್ಷೀಣೇಷು ಕುರುಷು ಪುತ್ರಸ್ತವ ಜನಿಷ್ಯತೇ ।
ಏತದಸ್ಯ ಪರಿಕ್ಷಿತ್ತ್ವಂ ಗರ್ಭಸ್ಥಸ್ಯ ಭವಿಷ್ಯತಿ ॥೩॥

ಬ್ರಾಹ್ಮಣನು– ಕುರುವಂಶವು ಕ್ಷೀಣವಾಗುತ್ತಿರಲು, ನಿನ್ನ ಮಗನು ಹುಟ್ಟುವನು. ಗರ್ಭದಲ್ಲಿರುವ ಈತನಿಗೆ 'ಪರಿಕ್ಷಿತ' ಎಂಬ ನಾಮವು ಪ್ರಾಪ್ತವಾಗುವುದು.

ಶ್ರೀಭಗವಾನ್

ತಸ್ಯ ತದ್ವಚನಂ ಸಾಧೋಃ ಸತ್ಯಮೇವ ಭವಿಷ್ಯತಿ ।
ಪರಿಕ್ಷಿದ್ಭವಿತೈತೇಷಾಂ ಪುನರ್ವಂಶಕರಃ ಸುತಃ ॥೪॥

ಕೃಷ್ಣ– ಆ ಸಜ್ಜನನ ಆ ಮಾತು ಸತ್ಯವೇ ಆಗುವುದು. ಪರಿಕ್ಷಿತನು ಇವರ (ಪಾಂಡವರ) ವಂಶವನ್ನು ಬೆಳಸುವ ಪುತ್ರನಾಗುವನು.

ತ್ವಾಂ ತು ಕಾಪುರುಷಂ ಪಾಪಂ ವಿದುಃ ಸರ್ವೇ ಮನೀಷಿಣಃ ।
ಅಸಕೃತ್ ಪಾಪಕರ್ಮಾಣಂ ಬಾಲಜೀವಿತಘಾತಕಮ್ ॥೫॥

ಆದರೆ ಎಲ್ಲಜ್ಞಾನಿಗಳು ನಿನ್ನನ್ನು ಕೆಟ್ಟಮನುಷ್ಯ , ಪಾಪಿ, ಮತ್ತೆ ಮತ್ತೆ ಪಾಪವನ್ನು ಆಚರಿಸುವವ, ಮಕ್ಕಳನ್ನು ಕೊಲ್ಲುವವ ಎಂದು ಭಾವಿಸುವರು.

ತಸ್ಮಾತ್ ತ್ವಮಸ್ಯ ಪಾಪಸ್ಯ ಕರ್ಮಣಃ ಫಲಮಾಪ್ನುಹಿ ।
ತ್ರೀಣಿ ವರ್ಷಸಹಸ್ರಾಣಿ ಚರಿಷ್ಯಸಿ ಮಹೀಮಿಮಾಮ್ ॥೬॥

ಆದ್ದರಿಂದ ನೀನು ಈ ಪಾಪ ಕರ್ಮದ ಫಲವನ್ನು ಹೊಂದುವಿ. ಈ ಭೂಮಿಯಲ್ಲಿ ಮೂರುಸಾವಿರ ವರ್ಷ ತಿರುಗುವಿ.

ಅಪ್ರಾಪ್ನುವನ್ ಕ್ವಚಿತ್ ಕಾಂಚಿತ್ ಸಂವಿದಂ ಜಾತು ಕೇನಚಿತ್ ।
ನಿರ್ಜನಾನಸಹಾಯಸ್ತ್ವಂ ದೇಶಾನ್ ಪ್ರತಿ ಚರಿಷ್ಯಸಿ ॥೭॥

ಎಲ್ಲೂ ಏನೂ ಸಿಗದೆ, ಯಾರಿಂದಲೂ ಪರಿಚಯಿಸದೆ, ಜನರಹಿತವಾದ ದೇಶಗಳಲ್ಲಿ ನಿಃಸಹಾಯಕನಾಗಿ ತಿರುಗುವಿ.

ಭವಿತ್ರೀ ನ ಹಿ ತೇ ಕ್ಷುದ್ರ ಜನಮಧ್ಯೇಷು ಸಂಸ್ಥಿತಿಃ ।
ಪೂಯಶೋಣಿತಗಂಧೀ ಚ ದುರ್ಗಕಾಂತಾರಸಂಶ್ರಯಃ ॥೮॥

ವಿಚರಿಷ್ಯಸಿ ಪಾಪಾತ್ಮನ್ ಚಿರಮೇಕೋ ವಸುಂಧರಾಮ್ ॥೯॥

ಕ್ಷುದ್ರನೇ, ಪಾಪಿಯೇ! ಜನಮಧ್ಯದಲ್ಲಿ ವಾಸವನ್ನು ಹೊಂದಲಾರಿ, ರಕ್ತ-ಮಾಂಸದ ದುರ್ಗಂಧವನ್ನು ಹೊಂದಿದವನಾಗಿ ಬೆಟ್ಟ-ಕಾಡುಗಳಲ್ಲಿ ವಾಸಿಸುವಿ, ಒಂಟಿಯಾದ ನೀನು ಬಹುದಿನಗಳ ಪರ್ಯಂತವಾಗಿ ಭೂಮಿಯಲ್ಲಿ ಸುತ್ತುವಿ.

ವಯಃ ಪ್ರಾಪ್ಯ ಪರಿಕ್ಷಿತ್ತು ದೇವವ್ರತಮವಾಪ್ಯ ಚ ।
ಕೃಪಾಚ್ಛಾರದ್ವತಾಚ್ಛೂರಃ ಸರ್ವಾಸ್ತ್ರಾಣ್ಯುಪಲಪ್ಸ್ಯತೇ ॥೧೦॥

ವಿದಿತ್ವಾ ಪರಮಾಸ್ತ್ರಾಣಿ ಕ್ಷತ್ರಧರ್ಮವ್ರತೇ ಸ್ಥಿತಃ ।
ಷಷ್ಟಿವರ್ಷಾಣಿ ಧರ್ಮಾತ್ಮಾ ವಸುಧಾಂ ಪಾಲಯಿಷ್ಯತಿ ॥೧೧॥

ಪರಿಕ್ಷಿತನಾದರೋ ಪ್ರಾಪ್ತವಯಸ್ಕನಾಗಿ, ದೇವವ್ರತವನ್ನು ಪೂರ್ಣಗೊಳಿಸಿ, ಶರದ್ವತರ ಪುತ್ರನಾದ ಕೃಪನಿಂದ ಎಲ್ಲ ಅಸ್ತ್ರಗಳನ್ನು ಹೊಂದುವನು. ಶ್ರೇಷ್ಠ ಅಸ್ತ್ರಗಳನ್ನು ತಿಳಿದು, ಕ್ಷತ್ರಧರ್ಮದಲ್ಲಿ ಇರುವ ಧರ್ಮಾತ್ಮನಾದ ಪರಿಕ್ಷಿತನು ಅರವತ್ತು ವರ್ಷ ಪರ್ಯಂತ ಭೂಮಿಯನ್ನು ಶಾಸಿಸುವನು.

ತತಶ್ಚೋರ್ಧ್ವಂ ಮಹಾಬಾಹುಃ ಕುರುರಾಜೋ ಭವಿಷ್ಯತಿ ।
ಪರಿಕ್ಷಿನ್ನಾಮ ನೃಪತಿರ್ಮಿಷತಸ್ತೇ ಸುದುರ್ಮತೇ ॥೧೨॥

ಶ್ರೀಭಗವಾನ್

ವಿರಾಟಸ್ಯ ಸುತಾಂ ಪೂರ್ವಂ ಸ್ನುಷಾಂ ಗಾಂಡೀವಧನ್ವನಃ ।
ಉಪಪ್ಲಾವ್ಯಗತಾಂ ದೃಷ್ಟ್ವಾ ಉತ್ತರಾಂ ಬ್ರಾಹ್ಮಣೋಽಬ್ರವೀತ್ ॥೨॥

ಕೃಷ್ಣ- ವಿರಾಟರಾಜನ ಪುತ್ರಿಯಾದ, ಗಾಂಡೀವಧನುವನ್ನು ಧರಿಸಿದ ಅರ್ಜುನನ ಸೊಸೆಯಾದ, ಉಪಪ್ಲಾವ್ಯದಲ್ಲಿರುವ ಉತ್ತರೆಯನ್ನು ಕಂಡು ಬ್ರಾಹ್ಮಣನು (ಈ ರೀತಿಯಾಗಿ) ಹೇಳಿದ್ದನು.

ಬ್ರಾಹ್ಮಣಃ

ಪರಿಕ್ಷೀಣೇಷು ಕುರುಷು ಪುತ್ರಸ್ತವ ಜನಿಷ್ಯತೇ ।
ಏತದಸ್ಯ ಪರಿಕ್ಷಿತ್ತ್ವಂ ಗರ್ಭಸ್ಥಸ್ಯ ಭವಿಷ್ಯತಿ ॥೩॥

ಬ್ರಾಹ್ಮಣನು- ಕುರುವಂಶವು ಕ್ಷೀಣವಾಗುತ್ತಿರಲು, ನಿನ್ನ ಮಗನು ಹುಟ್ಟುವನು. ಗರ್ಭದಲ್ಲಿರುವ ಈತನಿಗೆ 'ಪರಿಕ್ಷಿತ' ಎಂಬ ನಾಮವು ಪ್ರಾಪ್ತವಾಗುವುದು.

ಶ್ರೀಭಗವಾನ್

ತಸ್ಯ ತದ್ವಚನಂ ಸಾಧೋಃ ಸತ್ಯಮೇವ ಭವಿಷ್ಯತಿ ।
ಪರಿಕ್ಷಿದ್ಭವಿತೈತೇಷಾಂ ಪುನರ್ವಂಶಕರಃ ಸುತಃ ॥೪॥

ಕೃಷ್ಣ- ಆ ಸಜ್ಜನನ ಆ ಮಾತು ಸತ್ಯವೇ ಆಗುವುದು. ಪರಿಕ್ಷಿತನು ಇವರ (ಪಾಂಡವರ) ವಂಶವನ್ನು ಬೆಳಸುವ ಪುತ್ರನಾಗುವನು.

ತ್ವಾಂ ತು ಕಾಪುರುಷಂ ಪಾಪಂ ವಿದುಃ ಸರ್ವೇ ಮನೀಷಿಣಃ ।
ಅಸಕೃತ್ ಪಾಪಕರ್ಮಾಣಂ ಬಾಲಜೀವಿತಘಾತಕಮ್ ॥೫॥

ಆದರೆ ಎಲ್ಲಜ್ಞಾನಿಗಳು ನಿನ್ನನ್ನು ಕೆಟ್ಟಮನುಷ್ಯ , ಪಾಪಿ, ಮತ್ತೆ ಮತ್ತೆ ಪಾಪವನ್ನು ಆಚರಿಸುವವ, ಮಕ್ಕಳನ್ನು ಕೊಲ್ಲುವವ ಎಂದು ಭಾವಿಸುವರು.

ತಸ್ಮಾತ್ ತ್ವಮಸ್ಯ ಪಾಪಸ್ಯ ಕರ್ಮಣಃ ಫಲಮಾಪ್ನುಹಿ ।
ತ್ರೀಣಿ ವರ್ಷಸಹಸ್ರಾಣಿ ಚರಿಷ್ಯಸಿ ಮಹೀಮಿಮಾಮ್ ॥೬॥

ಆದ್ದರಿಂದ ನೀನು ಈ ಪಾಪ ಕರ್ಮದ ಫಲವನ್ನು ಹೊಂದುವಿ. ಈ ಭೂಮಿಯಲ್ಲಿ ಮೂರುಸಾವಿರ ವರ್ಷ ತಿರುಗುವಿ.

ಅಪ್ರಾಪ್ನುವನ್ ಕ್ವಚಿತ್ ಕಾಂಚಿತ್ ಸಂವಿದಂ ಜಾತು ಕೇನಚಿತ್ ।
ನಿರ್ಜನಾನಸಹಾಯಸ್ತ್ವಂ ದೇಶಾನ್ ಪ್ರತಿ ಚರಿಷ್ಯಸಿ ॥೭॥

ಎಲ್ಲೂ ಏನೂ ಸಿಗದೆ, ಯಾರಿಂದಲೂ ಪರಿಚಯಿಸದೆ, ಜನರಹಿತವಾದ ದೇಶಗಳಲ್ಲಿ ನಿಃಸಹಾಯಕನಾಗಿ ತಿರುಗುವಿ.

ಭವಿತ್ರೀ ನ ಹಿ ತೇ ಕ್ಷುದ್ರ ಜನಮಧ್ಯೇಷು ಸಂಸ್ಥಿತಿಃ ।
ಪೂಯಶೋಣಿತಗಂಧೀ ಚ ದುರ್ಗಕಾಂತಾರಸಂಶ್ರಯಃ ॥೮॥

ವಿಚರಿಷ್ಯಸಿ ಪಾಪಾತ್ಮನ್ ಚಿರಮೇಕೋ ವಸುಂಧರಾಮ್ ॥೯॥

ಕ್ಷುದ್ರನೇ, ಪಾಪಿಯೇ! ಜನಮಧ್ಯದಲ್ಲಿ ವಾಸವನ್ನು ಹೊಂದಲಾರಿ, ರಕ್ತ-ಮಾಂಸದ ದುರ್ಗಂಧವನ್ನು ಹೊಂದಿದವನಾಗಿ ಬೆಟ್ಟ-ಕಾಡುಗಳಲ್ಲಿ ವಾಸಿಸುವಿ, ಒಂಟಿಯಾದ ನೀನು ಬಹುದಿನಗಳ ಪರ್ಯಂತವಾಗಿ ಭೂಮಿಯಲ್ಲಿ ಸುತ್ತುವಿ.

ವಯಃ ಪ್ರಾಪ್ಯ ಪರಿಕ್ಷಿತ್ತು ದೇವವ್ರತಮವಾಪ್ಯ ಚ ।
ಕೃಪಾಚ್ಛಾರದ್ವತಾಚ್ಛೂರಃ ಸರ್ವಾಸ್ತ್ರಾಣ್ಯುಪಲಪ್ಸ್ಯತೇ ॥೧೦॥

ವಿದಿತ್ವಾ ಪರಮಾಸ್ತ್ರಾಣಿ ಕ್ಷತ್ರಧರ್ಮವ್ರತೇ ಸ್ಥಿತಃ ।
ಷಷ್ಟಿವರ್ಷಾಣಿ ಧರ್ಮಾತ್ಮಾ ವಸುಧಾಂ ಪಾಲಯಿಷ್ಯತಿ ॥೧೧॥

ಪರಿಕ್ಷಿತನಾದರೋ ಪ್ರಾಪ್ತವಯಸ್ಕನಾಗಿ, ದೇವವ್ರತವನ್ನು ಪೂರ್ಣಗೊಳಿಸಿ, ಶರದ್ವತರ ಪುತ್ರನಾದ ಕೃಪನಿಂದ ಎಲ್ಲ ಅಸ್ತ್ರಗಳನ್ನು ಹೊಂದುವನು. ಶ್ರೇಷ್ಠ ಅಸ್ತ್ರಗಳನ್ನು ತಿಳಿದು, ಕ್ಷತ್ರಧರ್ಮದಲ್ಲಿ ಇರುವ ಧರ್ಮಾತ್ಮನಾದ ಪರಿಕ್ಷಿತನು ಅರವತ್ತು ವರ್ಷ ಪರ್ಯಂತ ಭೂಮಿಯನ್ನು ಶಾಸಿಸುವನು.

ತತಶ್ಚೋರ್ಧ್ವಂ ಮಹಾಬಾಹುಃ ಕುರುರಾಜೋ ಭವಿಷ್ಯತಿ ।
ಪರಿಕ್ಷಿನ್ನಾಮ ನೃಪತಿರ್ಮಿಷತಸ್ತೇ ಸುದುರ್ಮತೇ ॥೧೨॥

ಅಹಂ ತಂ ಜೀವಯಿಷ್ಯಾಮಿ ದಗ್ಧಂ ಶಸ್ತ್ರಾಗ್ನಿತೇಜಸಾ।
ಪಶ್ಯ ಮೇ ತಪಸೋ ವೀರ್ಯಂ ಸತ್ಯಸ್ಯ ಚ ನರಾಧಮ ॥೧೩॥

ದುಷ್ಟಬುದ್ಧಿಯವನೆ! ನೀನು ನೊಡುತ್ತಿರುವಂತೆ, ಇಲ್ಲಿಂದ ಮುಂದೆ ಮಹಾಬಾಹುವಾದ ಪರೀಕ್ಷಿತನೆಂಬ ರಾಜನು ಕುರುರಾಜನಾಗುವನು. ನರಾಧಮನೆ! ಶಸ್ತ್ರಾಗ್ನಿಯಿಂದ ದಗ್ಧನಾದ ಆತನನ್ನು ನಾನು ಬದುಕಿಸುವೆನು, ನನ್ನ ತಪದ ಸತ್ಯದ ಪ್ರಭಾವವನ್ನು ನೋಡು.

ವ್ಯಾಸಃ

ಯಸ್ಮಾದನಾದೃತ್ಯ ಕೃತಂ ತ್ವಯಾऽಸ್ಮಾನ್ ಕರ್ಮ ದಾರುಣಮ್ ।
ಬ್ರಾಹ್ಮಣಸ್ಯ ಸತಶ್ಚೇದಂ ವೃತ್ತಮನ್ಯಾಯವರ್ತಿನಃ ॥೧೪॥

ತಸ್ಮಾದ್ಯದ್ ದೇವಕೀಪುತ್ರ ಉಕ್ತವಾನುತ್ತಮಂ ವಚಃ ।
ಅಸಂಶಯಂ ತೇ ತದ್ಭಾವಿ ಕ್ಷುದ್ರಕರ್ಮನ್ ವ್ರಜೇತಿ ಹ ॥೧೫॥

ವ್ಯಾಸರು– ನೀಚಕರ್ಮಿ! ಯಾವಕಾರಣದಿಂದ ನೀನು ನಮ್ಮನ್ನು ಅತಿಕ್ರಮಿಸಿ ಭೀಕರವಾದ ಕರ್ಮವನ್ನು ಮಾಡಿರುವಿಯೋ, ಆದ್ದರಿಂದ ದೇವಕೀಪುತ್ರನು ಉತ್ತಮವಚನವನ್ನು ಹೇಳಿರುವನೋ ಅದು ನಿಸ್ಸಂಶಯವಾಗಿಯೂ ಸದ್ಬ್ರಾಹ್ಮಣ ವಂಶದಲ್ಲಿ ಉತ್ಪನ್ನನಾಗಿಯೂ ಅನ್ಯಾಯವನ್ನಾಚರಿಸಿರುವ ನಿನಗೆ ಸಂಭವಿಸುವುದು, ಇಲ್ಲಿಂದ ತೆರಳು.

ಅಶ್ವತ್ಥಾಮಾ

ಸಹೈವ ಭವತಾ ಬ್ರಹ್ಮನ್ ಸ್ಥಾಸ್ಯಾಮಿ ಮನುಜೇಷ್ವಿಹ ।
ಸತ್ಯವಾಗಸ್ತು ಭಗವಾನ್ ಅಯಂ ಚ ಪುರುಷೋತ್ತಮಃ ॥೧೬॥

ಅಶ್ವತ್ಥಾಮ– ಬ್ರಹ್ಮಜ್ಞಾನಿಯೆ! ಈ ಪುರುಷೋತ್ತನಾದರೋ ಸತ್ಯವಕ್ತಾರನಾಗಲಿ, ಈ ಭೂಮಿಯಲ್ಲಿ ಇರುವ ಪರ್ಯಂತ ನಾನು ನಿಮ್ಮೊಡನೆ (ನಿಮ್ಮನ್ನು ಸ್ಮರಿಸುತ್ತಾ ಹೆದಯದಲ್ಲಿರುವ ನಿಮ್ಮೊಡನೆ) ಬದುಕುವೆನು.

ವೈಶಂಪಾಯನಃ

ಪ್ರದಾಯಾಥ ಮಣಿಂ ದ್ರೌಣಿಃ ಪಾಂಡವಾನಾಂ ಯಶಸ್ವಿನಾಮ್ ।
ಜಗಾಮ ವಿಮನಾಸ್ತೇಷಾಂ ಸರ್ವೇಷಾಂ ಪಶ್ಯತಾಂ ರಣೇ ॥೧೭॥

ವೈಶಂಪಾಯನರು– ಅನಂತರದಲ್ಲಿ ದ್ರೋಣಪುತ್ರನು ಕೀರ್ತಿಶಾಲಿಗಳಾದ ಪಾಂಡುಪುತ್ರರಿಗೆ ಮಣಿಯನ್ನು ನೀಡಿದನು. ಆ ಎಲ್ಲರೂ ನೋಡುತ್ತಿರುವಾಗಲೇ ರಣರಂಗದಿಂದ ಬೇಸರಗೊಂಡವನಾಗಿ ತೆರಳಿದನು.

ಪಾಂಡವಾಶ್ಚೈವ ಗೋವಿಂದಂ ಪುರಸೃತ್ಯ ಹತದ್ವಿಷಃ ।
ಕೃಷ್ಣದ್ವೈಪಾಯನಂ ಚೈವ ಪರ್ವತಂ ನಾರದಂ ತಥಾ ॥೧೮॥

ದ್ರೋಣಪುತ್ರಸ್ಯ ಸಹಜಂ ಮಣಿಮಾದಾಯ ಸತ್ವರಾಃ ।
ದ್ರೌಪದೀಮಭ್ಯಧಾವಂತ ಪ್ರಾಯೋಪೇತಾಂ ಯಶಸ್ವಿನೀಮ್ ॥೧೯॥

ಶತ್ರುಗಳನ್ನು ವಿಜಯಿಸಿದ ಪಾಂಡುಪುತ್ರರು ದ್ರೋಣಪುತ್ರನೊಡನೆ ಹುಟ್ಟಿದ ಮಣಿಯನ್ನು ತೆಗೆದುಕೊಂಡು, ಕೃಷ್ಣ, ವ್ಯಾಸ, ನಾರದ, ಪರ್ವತ ಇವರೆಲ್ಲರನ್ನು ಮುಂದಿಟ್ಟುಕೊಂಡು, ಲಗುಬಗೆಯಿಂದ ಕೀರ್ತಿಶಾಲಿನಿಯಾದ ಪ್ರಾಯೋಪವೇಶದಲ್ಲಿ ನಿರತಳಾದ ದ್ರೌಪದಿಯನ್ನು ಉದ್ದೇಶಿಸಿ ಧಾವಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಐಷೀಕಪರ್ವಣಿ ಮಣಿಲಾಭೋ ನಾಮ ಸಪ್ತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ದ್ರೌಪದಿಯ ಸೂಚನೆಯಂತೆ ಧರ್ಮರಾಜನು ಮಣಿಯನ್ನು ಶಿರದಲ್ಲಿ ಧರಿಸುವುದು.

ವೈಶಂಪಾಯನಃ

ತತಸ್ತೇ ಪುರುಷವ್ಯಾಘ್ರಾಃ ಸದಶ್ವೈರನಿಲೋಪಮೈಃ ।
ಪ್ರಯಯೂ ರಾಜಶಾರ್ದೂಲ ಶಿಬಿರಂ ಪುನರೇವ ಹ ॥೧॥

ವೈಶಂಪಾಯನರು– ರಾಜಸಿಂಹನೆ! ಅನಂತರದಲ್ಲಿ ಆ ಪುರುಷಸಿಂಹರು ವಾಯುವಿನಂತೆ ವೇಗವನ್ನು ಹೊಂದಿದ ಒಳ್ಳೆಯ ಕುದುರೆಗಳ ನೆರವಿನಿಂದ, ಮತ್ತೆ ಶಿಬಿರದೆಡೆಗೆ ತೆರಳಿದರು.

ಅವತೀರ್ಯ ರಥೇಭ್ಯಸ್ತು ತ್ವರಮಾಣಾ ಮಹಾರಥಾಃ ।
ದದೃಶುರ್ದ್ರೌಪದೀಂ ಕೃಷ್ಣಾಮಾರ್ತಾಮಾರ್ತತರಾಃ ಸ್ವಯಮ್ ॥೨॥

ಮಹಾರಥಿಕರಾದ ಸ್ವತಃ ಅತ್ಯಂತ ದುಃಖಿತರಾದ ಪಾಂಡವರು ಲಗುಬಗೆಯಿಂದ ರಥದಿಂದ ಇಳಿದು, ದುಃಖಿತಳಾದ ದ್ರುಪದಪುತ್ರಿಯಾದ ಕೃಷ್ಣೆಯನ್ನು ಕಂಡರು.

ತಾಮುಪೇತ್ಯ ನಿರಾನಂದಾಂ ದುಃಖಶೋಕಪರಾಯಣಾಮ್ ।
ಪರಿವಾರ್ಯೋಪತಿಷ್ಠಂತ ಪಾಂಡವಾಃ ಸಹಕೇಶವಾಃ ॥೩॥

ಕೇಶವಸಹಿತರಾದ ಪಾಂಡುಪುತ್ರರು ಸುಖರಹಿತಳಾದ, ದುಃಖ ಶೋಕಮಗ್ನಳಾದ ಆ ದ್ರೌಪದಿಯ ಸಮೀಪದಲ್ಲಿ ಸುತ್ತಲೂ ಕುಳಿತರು.

ತತೋ ರಾಜ್ಞಾऽಭ್ಯನುಜ್ಞಾತೋ ಭೀಮಸೇನೋ ಮಹಾಬಲಃ ।
ಪ್ರದದೌ ತಂ ಮಣಿಂ ದಿವ್ಯಂ ವಚನಂ ಚೇದಮಬ್ರವೀತ್ ॥೪॥

ಅನಂತರದಲ್ಲಿ ರಾಜನ ಆದೇಶದಂತೆ ದ್ರೌಪದಿಗೆ ಮಹಾಬಲಶಾಲಿಯಾದ ಭೀಮಸೇನನು ಆ ದಿವ್ಯ ಮಣಿಯನ್ನು ನೀಡಿದನು ಮತ್ತು ಹೀಗೆ ನುಡಿದನು.

ಭೀಮಃ

ಅಯಂ ಭದ್ರೇ ತವ ಮಣಿಃ ಪುತ್ರಹಂತಾ ಜಿತಶ್ಚ ತೇ ।
ಉತ್ತಿಷ್ಠ ಶೋಕಮುತ್ಸೃಜ್ಯ ಕ್ಷತ್ರಧರ್ಮಮನುಸ್ಮರ ॥೫॥

ಭೀಮಸೇನ– ಮಂಗಳಕರಳೆ! ನಿನ್ನ ಪುತ್ರರನ್ನು ಸಂಹರಿಸಿದವನ ಈ ಮಣಿಯು ನಿನ್ನದು. ಕ್ಷತ್ರಿಯಧರ್ಮವನ್ನು ಸ್ಮರಿಸುತ್ತಾ ದುಃಖವನ್ನು ತೊರೆದು ಮೇಲೇಳು.

ಪ್ರಯಾಣೇ ವಾಸುದೇವಸ್ಯ ಶಮಾರ್ಥಮಸಿತೇಕ್ಷಣೇ ।
ಯಾನ್ಯುಕ್ತಾನಿ ತ್ವಯಾ ಭೀರು ವಾಕ್ಯಾನಿ ಮಧುಸೂದನೇ ॥೬॥

ಕಪ್ಪುಕಂಗಳನ್ನು ಹೊಂದಿದವಳೆ, ಭಯಭೀತಳೆ! ಸಂಧಿಗಾಗಿ ವಾಸುದೇವ ಪ್ರಯಾಣಿಸಿದ ಸಂದರ್ಭದಲ್ಲಿ ಮಧುಸೂದನನಿಗೆ ನೀನು ಯಾವ ಮಾತುಗಳನ್ನು ಹೇಳಿದ್ದಿ?

ನೈವ ಮೇ ಪತಯಃ ಸಂತಿ ನ ಪುತ್ರಾ ಭ್ರಾತರೋ ನ ಮೇ ।
ನೈವ ತ್ವಮಸಿ ಗೋವಿಂದ ಶಮಮಿಚ್ಛತಿ ರಾಜನಿ ॥೭॥

ಗೋವಿಂದ! ರಾಜನು ಶಾಂತಿಯನ್ನು ಬಯಸುವದಾದಲ್ಲಿ ನನಗೆ ಗಂಡಂದಿರು ಇಲ್ಲ, ಮಕ್ಕಳಿಲ್ಲ, ಸಹೋದರರು ಇಲ್ಲ, ನೀನೂ ಇಲ್ಲ.

ಉಕ್ತವತ್ಯಸಿ ವಾಕ್ಯಾನಿ ಧೀರಾಣಿ ಪುರುಷೋತ್ತಮೇ ।
ಕ್ಷತ್ರಧರ್ಮಾನುರೂಪಾಣಿ ತಾನಿ ಸಂಸ್ಮರ್ತುಮರ್ಹಸಿ ॥೮॥

ಪುರುಷೋತ್ತಮನಲ್ಲಿ ಕ್ಷತ್ರಧರ್ಮಕ್ಕೆ ಯೋಗ್ಯವಾದ ಧೈರ್ಯಪೂರಕವಾದ ಮಾತುಗಳನ್ನು ಹೇಳಿದ್ದಿ. ಅವುಗಳನ್ನು ಈಗ ಸ್ಮರಿಸಿಕೊ.

ಹತೋ ದುರ್ಯೋಧನಃ ಪಾಪೋ ರಾಜ್ಯಸ್ಯ ಪರಿಪಂಥ್ಯಸೌ ।
ದುಃಶಾಸನಸ್ಯ ರುಧಿರಂ ಪ್ರಾಶಿತಂ ತು ರಣೇ ಮಯಾ ॥೯॥

ರಾಜ್ಯಕ್ಕೆ ಶತ್ರುವಾಗಿದ್ದ ಪಾಪಿ ದುರ್ಯೋಧನನು ಮೃತನಾದನು, ರಣರಂಗದಲ್ಲಿ ನಾನು ದುಶ್ಶಾಸನನ ರಕ್ತವನ್ನು ಪಾನ ಮಾಡಿದೆನು.

ವೈರಸ್ಯ ಗತಮಾನೃಣ್ಯಂ ನ ಸ್ಮ ವಾಚ್ಯಾ ವಿವಕ್ಷತಾ ।
ಜಿತ್ವಾ ದ್ರೋಣಸುತೋ ಮುಕ್ತೋ ಬ್ರಾಹ್ಮಣ್ಯಾದ್ ಗೌರವೇಣ ಚ ॥೧೦॥

ವೈರದ ಋಣವು ತೀರಿತು, ಚುರುಕು ಮಾತನಾಡುವ ನೀನು ನಮ್ಮನ್ನು ನಿಂದಿಸುವಂತಿಲ್ಲ. ದ್ರೋಣಪುತ್ರನನ್ನು ಗೆದ್ದೆವು, ಬ್ರಾಹ್ಮಣ ಎಂಬ ಗೌರವದಿಂದ ಅವನು ಮುಕ್ತನಾದನು (ನಮ್ಮಿಂದ ಸಂಹೃತನಾಗಲಿಲ್ಲ).

ಯಶೋಽಸ್ಯ ಪತಿತಂ ದೇವಿ ಶರೀರಂ ತ್ವವಶೇಷಿತಮ್ ।
ಮಣಿನಾ ವಿಪ್ರಮುಕ್ತಶ್ಚ ನ್ಯಾಸಿತಶ್ಚಾಯುಧಾನಿ ಚ ॥೧೧॥

ದೇವಿಯೆ! ಆತನ (ಅಶ್ವತ್ಥಾಮನ) ಕೀರ್ತಿಯು ಮಣ್ಣುಪಾಲಾಯಿತು, ಶರೀರವು ಮಾತ್ರ ಉಳಿದಿದೆ, ಆಯುಧಗಳನ್ನು ಪರಿತ್ಯಜಿಸಿರುವನು, ಮಣಿಯನ್ನು ನೀಡಿದ್ದರಿಂದ ಮುಕ್ತನಾದನು.

ದ್ರೌಪದೀ

ಕೇವಲಾನೃಣ್ಯಮಾಪ್ತೋಽಸ್ಮಿ ಗುರುಪುತ್ರೋ ಗುರುರ್ಮಮ ।
ಶಿರಸ್ಯೇನಂ ಮಣಿಂ ರಾಜಾ ಗ್ರಹೀತುಮನಘೋಽರ್ಹತಿ ॥೧೨॥

ದ್ರೌಪದಿ– ಕೇವಲ ಈ ಮಣಿಯಿಂದ ನಾನು ಪುತ್ರಋಣದಿಂದ ಮುಕ್ತಳಾಗಿರುವೆನು. ಗುರುಪುತ್ರನು ನನಗೂ ಗುರುವೇ ಆಗಿರುವನು. ಪಾಪರಹಿತನೆ! ರಾಜನು ತಲೆಯಲ್ಲಿ ಈ ಮಣಿಯನ್ನು ಧರಿಸಲು ಯೋಗ್ಯನಾಗಿದ್ದಾನೆ.

ವೈಶಂಪಾಯನಃ

ತಂ ಗೃಹೀತ್ವಾ ತತೋ ರಾಜಾ ಶಿರಸ್ಯೇವಾಕರೋತ್ ತದಾ ।
ಗುರೋರುಚ್ಛಿಷ್ಟಮಿತ್ಯೇವ ದ್ರೌಪದೀವಚನಾದಪಿ ॥೧೩॥

ವೈಶಂಪಾಯನರು– ಅನಂತರದಲ್ಲಿ ಅದನ್ನು (ಮಣಿಯನ್ನು) ಧರ್ಮರಾಜನು ಪರಿಗ್ರಹಿಸಿ, ಗುರುಗಳ ಪ್ರಸಾದ ಎಂದು, ದ್ರೌಪದಿಯ ಮಾತಿನಂತೆಯೂ ಆ ಕೂಡಲೇ ತಲೆಯಲ್ಲಿ ಧರಿಸಿದನು.

ತತೋ ದಿವ್ಯಂ ಮಣಿವರಂ ಶಿರಸಾ ಧಾರಯನ್ ಪ್ರಭುಃ ।
ಶುಶುಭೇ ಚ ಮಹಾರಾಜಃ ಸಚಂದ್ರ ಇವ ಪರ್ವತಃ ॥೧೪॥

ಅನಂತರದಲ್ಲಿ ಪ್ರಭುವಾದ ಮಹಾರಾಜನು ದಿವ್ಯವಾದ ಶ್ರೇಷ್ಠಮಣಿಯನ್ನು ಶಿರಸ್ಸಿನಲ್ಲಿ ಧರಿಸಿದವನಾಗಿ ಚಂದ್ರನಿಂದ ಕೂಡಿದ ಪರ್ವತದಂತೆ ಪ್ರಕಾಶಿಸಿದನು.

ಉತ್ತಸ್ಥೌ ಪುತ್ರಶೋಕಾರ್ತಾ ತತಃ ಕೃಷ್ಣಾ ಮನಸ್ವಿನೀ ।
ಕೃಷ್ಣಂ ಚಾಪಿ ಮಹಾಬಾಹುರನ್ವಪೃಚ್ಛದ್ ಯುಧಿಷ್ಠಿರಃ ॥೧೫॥

ಅನಂತರದಲ್ಲಿ ಸ್ವಾಭಿಮಾನಿನಿಯಾದ ಪುತ್ರಶೋಕದಿಂದ ಆರ್ತಳಾದ ದ್ರೌಪದಿಯು ಮೇಲೆದ್ದಳು. ಮಹಾಬಾಹುವಾದ ಯುಧಿಷ್ಠಿರನು ಕೃಷ್ಣನನ್ನು ಪ್ರಶ್ನಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ದ್ರೌಪದೀಸಾಂತ್ವನಂ ನಾಮ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ವೇದೇಶ್ವರೇಣಾಪಿ ಯದೂತ್ತಮೇನ
ಕೃಷ್ಣೇನ ಯುಕ್ತಾಸ್ತತ ಆಶು ಪಾರ್ಥಾಃ ।
ಯಯುಃ ಸಭಾರ್ಯಾ ನಿಜರಾಜಧಾನೀಂ
ಹತ್ವೈವ ಸಂತೋಽಂತರರೀನ್ ಸ್ವರಾಜ್ಯಮ್ ॥

ಸಜ್ಜನರು ಕಾಮ-ಕ್ರೋಧಾದಿ ಮನದೊಳಗಿನ ಶತ್ರುಗಳನ್ನು ನಾಶಪಡಿಸಿ ಮೋಕ್ಷಮಂದಿರವನ್ನು ಸೇರುವಂತೆ ಪಾಂಡವರು ತಮ್ಮ ಮನೆಯೊಳಗಿನ ಶತ್ರುಗಳನ್ನು ಸಂಹರಿಸಿ ವೇದವ್ಯಾಸರಿಂದಲೂ ಕೃಷ್ಣನಿಂದಲೂ ಕೂಡಿ ಪತ್ನಿಯರೊಂದಿಗೆ ಬೇಗನೆ ತಮ್ಮ ರಾಜಧಾನಿಯಾದ ಹಸ್ತಿನಾವತಿಯನ್ನು ಸೇರಿದರು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಒಬ್ಬನೇ ದ್ರೋಣಪುತ್ರನು ಅನೇಕರನ್ನು ಹೇಗೆ ಸಂಹರಿಸಿದನು ಎಂದು ಕೃಷ್ಣನಲ್ಲಿ ಯುಧಿಷ್ಠಿರನು ಪ್ರಶ್ನಿಸಲು, ರುದ್ರದೇವನ ಅನುಗ್ರಹದಿಂದ ಎಂದು ಉತ್ತರಿಸಿದ ಕೃಷ್ಣನು, ರುದ್ರದೇವನ ಮಹಿಮೆಯನ್ನು ತಿಳಿಸಿದನು.

ವೈಶಂಪಾಯನಃ

ಹತೇಷು ಸರ್ವಸೈನ್ಯೇಷು ಸೌಪ್ತಿಕೇ ತೈ ರಥೈಸ್ತ್ರಿಭಿಃ ।
ಶೋಚಮಾನೋಽಬ್ರವೀದ್ ರಾಜಾ ಪಾಂಡವೋ ಯದುನಂದನಮ್ ॥

ವೈಶಂಪಾಯನರು– ಮಲಗಿದ ಸಮಸ್ತ ಸೇನೆಯು ರಥಿಕರಾದ ಆ ಮೂವರಿಂದ ಸಂಹೃತವಾಗಲು ಶೋಚಿಸುತ್ತಿರುವ ಪಾಂಡುಪುತ್ರನಾದ ರಾಜನು ಯದುನಂದನನಲ್ಲಿ ಪ್ರಶ್ನಿಸಿದನು.

ಯುಧಿಷ್ಠಿರಃ

ಕಥಂ ನು ಕೃಷ್ಣ ಪಾಪೇನ ಕ್ಷುದ್ರೇಣ ಶಠಬುದ್ಧಿನಾ ।
ದ್ರೌಣಿನಾ ನಿಹತಾಃ ಸರ್ವೇ ಮಮ ಪುತ್ರಾ ಮಹಾರಥಾಃ ॥೨॥

ಧರ್ಮರಾಜ– ಕೃಷ್ಣ! ಅವಿನೀತ ಬುದ್ಧಿಯವನಾದ ಕ್ಷುದ್ರನಾದ ಪಾಪಿಯಾದ (ಒಬ್ಬನೇ) ದ್ರೋಣಪುತ್ರನಿಂದ ಮಹಾರಥಿಕರಾದ ಎಲ್ಲ ನನ್ನ ಪುತ್ರರು ಹೇಗೆ ಸಂಹೃತರಾದರು?

ತಥಾ ಕೃತಾಸ್ತ್ರವಿಕ್ರಾಂತಾಃ ಸಂಗ್ರಾಮೇಷ್ವಪಲಾಯಿನಃ ।
ದ್ರುಪದಸ್ಯಾತ್ಮಜಾಃ ಸರ್ವೇ ದ್ರೌಣಿನಾ ನಿಹತಾಃ ಕಥಮ್ ॥೩॥

ಹಾಗೆಯೆ ಅಸ್ತ್ರವಿದ್ಯಾವಿಶಾರದರಾದ ಯುದ್ಧದಲ್ಲಿ ಎಂದೂ ಪಲಾಯನವನ್ನು ಮಾಡದ ದ್ರುಪದನ ಎಲ್ಲ ಪುತ್ರರು (ಒಬ್ಬನೇ) ದ್ರೋಣಪುತ್ರನಿಂದ ಹೇಗೆ ಸಂಹೃತರಾದರು?

ಯಸ್ಯ ದ್ರೋಣೋ ಮಹೇಷ್ವಾಸೋ ನ ಪ್ರಾದಾದಾಹವೇ ಮುಖಮ್ ।
ನಿಜಘ್ನೇ ರಥಿನಾಂ ಶ್ರೇಷ್ಠಂ ಧೃಷ್ಟದ್ಯುಮ್ನಂ ಕಥಂ ನು ಸಃ ॥೪॥

ದೊಡ್ಡಬಿಲ್ಲಾಳಾದ ದ್ರೋಣರೂ ಸಹ ಯುದ್ಧದಲ್ಲಿ ಯಾರೆಡೆಗೆ ಮುಖವನ್ನೂ ಮಾಡುತ್ತಿರಲಿಲ್ಲವೋ, ರಥಿಕರಲ್ಲಿ ಹಿರಿಯನಾದ ಧೃಷ್ಟದ್ಯುಮ್ನನನ್ನು ಆತನು ಹೇಗೆ ಸಂಹರಿಸಿದನು?

ಕಿಂ ನು ತೇನ ಕೃತಂ ಕರ್ಮ ತಥಾಯುಕ್ತಂ ನರರ್ಷಭ ।
ಯದೇಕಃ ಸಮರೇ ಸರ್ವಾನ್ ಅವಧೀದ್ ವೈ ಗುರೋಃ ಸುತಃ ॥೫॥

ಪುರುಷಶ್ರೇಷ್ಠನೆ! ಏಕಾಕಿಯಾದ ಗುರುಪುತ್ರನು ಯುದ್ಧದಲ್ಲಿ ಸರ್ವರನ್ನೂ ಸಂಹರಿಸಿದನು, ಆತನು ಅಂತಹ ಅಸದೃಶವಾದ ಯಾವ ಕರ್ಮವನ್ನು ಆಚರಿಸಿರುವನು?

ಶ್ರೀಭಗವಾನ್

ನೂನಂ ಸ ದೇವದೇವಾನಾಮ್ ಈಶ್ವರೇಶ್ವರಮವ್ಯಯಮ್ ।
ಜಗಾಮ ಶರಣಂ ದ್ರೌಣಿರೇಕಸ್ತೇನಾವಧೀದ್ ಬಹೂನ್ ॥೬॥

ಕೃಷ್ಣ– ಆ ದ್ರೋಣಪುತ್ರನು ನಿಶ್ಚಯವಾಗಿಯೂ ದೇವಾನುದೇವತೆಗಳಿಗೆ ದೇವದೇವನಾದ ಮಹಾದೇವನಲ್ಲಿ ಶರಣಾಗತನಾಗಿರುವನು. ಆದ್ದರಿಂದ ಒರ್ವನೇ ಬಹುಜನರನ್ನು ಸಂಹರಿಸಿದನು.

ಪ್ರಸನ್ನೋ ಹಿ ಮಹಾದೇವೋ ದದ್ಯಾದಮರತಾಮಪಿ ।
ವೀರ್ಯಂ ಹಿ ಗಿರಿಶೋ ದದ್ಯಾದ್ ಯೇನೇಂದ್ರಮಪಿ ಶಾತಯೇತ್ ॥

ಮಹಾದೇವನು ಪ್ರಸನ್ನನಾದಲ್ಲಿ ದೇವತ್ವವನ್ನೂ ನೀಡುವನು. ಗಿರೀಶನು ವೀರ್ಯವನ್ನು ನೀಡಿದಲ್ಲಿ, ಅದರಿಂದ ಇಂದ್ರನನ್ನೂ ನಿಗ್ರಹಿಸಬಹುದು.

ವೇದಾಹಂ ಹಿ ಮಹಾದೇವಂ ತತ್ತ್ವೇನ ಭರತರ್ಷಭ ।
ಯಾನಿ ಚಾಸ್ಯ ಪುರಾಣಾನಿ ಕರ್ಮಾಣಿ ವಿವಿಧಾನಿ ಚ ॥೮॥

ಭರತವಂಶೀಯರಲ್ಲಿ ಶ್ರೇಷ್ಠನೆ! ಮಹದೇವನನ್ನು ಯಥಾರ್ಥವಾಗಿ ತಿಳಿದಿರುವೆನು. ಆತನ ಪುರಾತನವಾದ ಕಾರ್ಯಗಳನ್ನು ಚರಿತ್ರೆಗಳನ್ನೂ ಸಹ ಬಲ್ಲೆ.

ಆದಿರೇಷ ಹಿ ಭೂತಾನಾಂ ಮಧ್ಯಮಂತಶ್ಚ ಭಾರತ ।
ವಿಚೇಷ್ಟತೇ ಜಗಚ್ಚೇದಂ ಸರ್ವಮಸ್ಯೈವ ಕರ್ಮಣಾ ॥೯॥

ಭರತಕುಲೋತ್ಪನ್ನನೆ! ಎಲ್ಲ ಪ್ರಾಣಿಗಳಿಗೆ ಆದಿಯು , ಮಧ್ಯನು, ಅಂತ್ಯನೂ ಆಗಿರುವನು. ಈ ಎಲ್ಲ ಪ್ರಪಂಚವು ಆತನ ಕ್ರಿಯೆಯಿಂದ ಚೇಷ್ಟೆಮಾಡುವುದು.

ಏವಂ ಸಿಸೃಕ್ಷುರ್ಭೂತಾನಿ ದದರ್ಶ ಪ್ರಥಮಂ ವಿಭುಃ ।
ಪಿತಾಮಹೋಽಬ್ರವೀಚ್ಚೈನಂ ಭೂತಾನಿ ಸೃಜ ಮಾಚಿರಮ್ ॥೧೦॥

ಸ್ವಾಮಿಯಾದ ಪಿತಾಮಹನು ಪ್ರಾಣಿಗಳನ್ನು ಸೃಷ್ಟಿಸಬೇಕೆಂಬ ಇಚ್ಛೆಯನ್ನು ಹೊಂದಿದವನಾಗಿ ಮೊದಲು ಈತನನ್ನು ನೋಡಿದನು, ವಿಲಂಬವಿಲ್ಲದಂತೆ ಸೃಷ್ಟಿಸು ಎಂದು ಹೇಳಿದನು.

ಹರಿಕೇಶಸ್ತಥೇತ್ಯುಕ್ತ್ವಾ ದೀರ್ಘದರ್ಶೀ ತದಾ ಪ್ರಭುಃ ।
ದೀರ್ಘಕಾಲಂ ತಪಸ್ತೇಪೇ ಮಗ್ನೋಽಂಭಸಿ ಮಹಾತಪಾಃ ॥೧೧॥

ಮಹಾತಪಸ್ವಿಯಾದ ದೂರದರ್ಶಿಯಾದ ಸ್ವಾಮಿಯಾದ ಹರಿಕೇಶನು (ಮಹಾದೇವನು) ಹಾಗೆಯೇ ಆಗಲಿ ಎಂದು ಹೇಳಿ, ಆಗ ನೀರಿನಲ್ಲಿ ಮುಳುಗಿ ದೀರ್ಘಕಾಲದ ಪರ್ಯಂತ ತಪವನ್ನು ಆಚರಿಸಿದನು.

ವ್ಯಾಖ್ಯಾನ ವಿಶೇಷ– ಈ ಶ್ಲೋಕದ ದ್ವಿತೀಯ ಪಾದದಲ್ಲಿ ಈ ರೀತಿಯಾದ ಪಾಠಾಂತರವೂ ಇದೆ– 'ಭೂತಾನಾಂ ದೋಷದರ್ಶಿವಾನ್' – ತಾನು ಸೃಷ್ಟಿಸಿದ ಪ್ರಾಣಿಗಳಲ್ಲಿ ಕೊರತೆಯನ್ನು ಕಂಡು ಎಂದು.

ಸುಮಹಾಂತಂ ತತಃ ಕಾಲಂ ಪ್ರತೀಕ್ಷ್ಯೈನಂ ಪಿತಾಮಹಃ ।
ಸ್ರಷ್ಟಾರಂ ಸರ್ವಭೂತಾನಾಂ ಸಸರ್ಜ ಮನಸಾऽಪರಮ್ ॥೧೨॥

ಅನಂತರದಲ್ಲಿ ಪಿತಾಮಹನು ಆತನನ್ನು ಬಹಳ ದಿನಗಳ ಪರ್ಯಂತ ನಿರೀಕ್ಷಿಸಿ (ಆತನು ಸೃಷ್ಟಿಸಲು ಉದ್ಯುಕ್ತನಾಗದಿರುವುದನ್ನು ಕಂಡು) ಎಲ್ಲ ಪ್ರಾಣಿಗಳನ್ನು ಸೃಷ್ಟಿಸುವ ಮತ್ತೊಬ್ಬನನ್ನು ಮನಸಾ ಸೃಷ್ಟಿಸಿದನು.

ಸೋऽಬ್ರವೀದ್ ಭ್ರಾತರಂ ದೃಷ್ಟ್ವಾ ಗಿರಿಶಂ ಸುಪ್ತಮಂಭಸಿ ।
ಯದಿ ಮೇ ನಾಗ್ರಜೋऽಸ್ಯನ್ಯಸ್ತತಃ ಸ್ರಕ್ಷ್ಯಾಮ್ಯಹಂ ಪ್ರಜಾಃ ॥೧೩॥

ಆತನು (ಬ್ರಹ್ಮನಿಂದ ಸೃಷ್ಟನಾದ ವಿರಾಟ್ಪುರುಷನು) ನೀರಿನಲ್ಲಿ ಮಲಗಿದ ಅಣ್ಣನಾದ ಗಿರೀಶನನ್ನು ನೋಡಿ ಹೀಗೆ ಹೇಳಿದನು- 'ಒಂದು ವೇಳೆ ನನಗೆ ಬೇರೆ ಅಣ್ಣನು ಇಲ್ಲ ಎಂದಾದಲ್ಲಿ ನಾನು ಪ್ರಜೆಗಳನ್ನು ಸೃಷ್ಟಿಸುವೆನು' ಎಂದು.

ತಮಬ್ರವೀತ್ ಪಿತಾ ನಾಸ್ತಿ ತ್ವದನ್ಯಃ ಪುರುಷೋऽಗ್ರಜಃ ।
ಸ್ಥಾಣುರೇಷ ಜಲೇ ಮಗ್ನೋ ವಿಸ್ರಬ್ಧಃ ಕುರು ವೈ ಪ್ರಜಾಃ ॥೧೪॥

ತಂದೆಯಾದ ಬ್ರಹ್ಮನು ಹೇಳಿದನು- ನಿನ್ನಿಂದ ಮೊದಲು ಹುಟ್ಟಿದ ಬೇರೆ ಪುರುಷನು ಇಲ್ಲ. ಅಣ್ಣನಾದ ಈ ಸ್ಥಾಣುವು ನೀರಿನಲ್ಲಿ ಮುಳುಗಿರುವನು, ನಿಶ್ಚಿಂತನಾಗಿ ಸೃಷ್ಟಿಯ ಕಾರ್ಯವನ್ನು ನಡೆಸು.

ಸ ಸರ್ವಭೂತಾನ್ಯಸೃಜದ್ ದಕ್ಷಾದೀಂಸ್ತು ಪ್ರಜಾಪತೀನ್ ।
ಯೈರಿಮಂ ವ್ಯಕರೋತ್ ಸರ್ವಂ ಭೂತಗ್ರಾಮಂ ಚತುರ್ವಿಧಮ್ ॥

ಆತನು ಎಲ್ಲ ವಿಧವಾದ ಪ್ರಾಣಿಗಳನ್ನು ದಕ್ಷಾದಿ ಪ್ರಜಾಪತಿಗಳನ್ನು ಸೃಷ್ಟಿಸಿದನು. ಈ ಪ್ರಜಾಪತಿಗಳು ಎಲ್ಲ ನಾಲ್ಕುವಿಧವಾದ ಪ್ರಾಣಿಸಮೂಹವನ್ನು ಸೃಷ್ಟಿಸಿದರು.

ತಾಃ ಸೃಷ್ಟಮಾತ್ರಾಃ ಕ್ಷುಧಿತಾಃ ಪ್ರಜಾಃ ಸರ್ವಾಃ ಪ್ರಜಾಪತಿಮ್ ।
ಬಿಭಕ್ಷಯಿಷವೋ ರಾಜನ್ ಸಹಸಾऽಭ್ಯದ್ರವಂಸ್ತದಾ ॥೧೬॥

ರಾಜನೆ! ಸೃಷ್ಟವಾದ ಕೂಡಲೇ ಹಸಿದ ಆ ಎಲ್ಲ ಪ್ರಜೆಗಳು ಪ್ರಜಾಪತಿಯನ್ನೇ ತಿನ್ನಬೇಕೆಂಬ ಇಚ್ಛೆಯಿಂದ ವೇಗದಿಂದ ಮುತ್ತಿದವು.

ಸ ಭಕ್ಷ್ಯಮಾಣಃ ಪ್ರಾಣಾರ್ಥೀ ಪಿತಾಮಹಮುಪಾದ್ರವತ್ ।
ಆಭ್ಯೋ ಮಾಂ ರಕ್ಷತು ಭವಾನ್ ವೃತ್ತಿರಾಸಾಂ ವಿಧೀಯತಾಮ್ ॥೧೭॥

(ಅವುಗಳಿಂದ) ಮುತ್ತಲ್ಪಟ್ಟ ಪ್ರಾಣಾರ್ಥಿಯಾದ ಆತನು (ಪ್ರಜಾಪತಿಯು) ಪಿತಾಮಹನ ಬಳಿ ಸಾಗಿದನು. (ಮತ್ತು ಆತನಲ್ಲಿ ನಿವೇದಿಸಿಕೊಂಡನು) 'ನೀನು ಇವುಗಳಿಂದ ನನ್ನನ್ನು ಸಂರಕ್ಷಿಸು. ಇವುಗಳಿಗೆ ಜೀವಿಕೆಯನ್ನು ಕಲ್ಪಿಸು' ಎಂದು.

ತತಸ್ತಾಭ್ಯೋ ದದಾವನ್ನಮೋಷಧೀಃ ಸ್ಥಾವರಾಣಿ ಚ ।
ಜಂಗಮಾನಿ ಚ ಭೂತಾನಿ ದುರ್ಬಲಾನಿ ಬಲೀಯಸಾಮ್ ॥೧೮॥

ಅನಂತರದಲ್ಲಿ ಅವುಗಳಿಗೆ ಚಲಿಸದ ಔಷಧಗಳನ್ನು (ಗಿಡ-ಬಳ್ಳಿಗಳನ್ನು) ಅನ್ನವನ್ನಾಗಿ ನೀಡಿದನು. ಬಲಿಷ್ಟವಾದ ಪ್ರಾಣಿಗಳಿಗೆ ದುರ್ಬಲವಾದ ತಿರುಗಾಡುವ ಪ್ರಾಣಿಗಳನ್ನು ಆಹಾರವನ್ನಾಗಿ ಕಲ್ಪಿಸಿದನು.

ವಿಹಿತಾನ್ನಾಃ ಪ್ರಜಾಸ್ತಾಸ್ತು ಜಗ್ಮುಸ್ತುಷ್ಟಾ ಯಥಾಗತಮ್ ।
ತತೋ ವವೃಧಿರೇ ರಾಜನ್ ಪ್ರೀತಿಮತ್ಯಃ ಸ್ವಯೋನಿಷು ॥೧೯॥

ಅನ್ನವನ್ನು ಹೊಂದಿದ ಪ್ರಜೆಗಳು ಸಂತುಷ್ಟರಾಗಿ ತಮ್ಮ ಸ್ಥಾನಗಳಿಗೆ ತೆರಳಿದರು. ರಾಜನೆ! ಅನಂತರದಲ್ಲಿ ತಮ್ಮ ತಮ್ಮ ಯೋನಿಗಳಲ್ಲಿ ಪ್ರಸನ್ನಗಳಾದ ಆ ಪ್ರಜೆಗಳು ಸಂತತಿಯನ್ನು ಬೆಳೆಸಿದವು.

ಭೂತಗ್ರಾಮೇ ವಿವೃದ್ಧೇ ತು ಸೃಷ್ಟೇ ದೇವಾಸುರೇ ತದಾ ।
ಉದತಿಷ್ಠಜ್ಜಲಾಜ್ಜ್ಯೇಷ್ಠಃ ಪ್ರಜಾಶ್ಚೇಮಾ ದದರ್ಶ ಸಃ ॥೨೦॥

ಪ್ರಜಾಸಮೂಹವು ಬೆಳೆಯಲು, ದೇವ-ದಾನವರು ಸೃಷ್ಟವಾಗಲು, ಆಗ ಜ್ಯೇಷ್ಠನಾದ ಹರಿಕೇಶನು ನೀರಿನಿಂದ ಮೇಲೆದ್ದನು. ಈ ಎಲ್ಲ ಪ್ರಜೆಗಳನ್ನು ಆತನು ಕಂಡನು.

ಬಹುರೂಪಾಃ ಪ್ರಜಾಃ ಸೃಷ್ಟಾ ಏವೃದ್ಧಾಶ್ಚ ಸ್ವತೇಜಸಾ ।
ಚುಕ್ರೋಧ ಬಲವದ್ ದೃಷ್ಟಾ ಲಿಂಗಂ ಸ್ವಂ ಪ್ರತ್ಯವಿಧ್ಯತ ॥೨೧॥

ತನ್ನ (ಚತುರ್ಮುಖನ) ತೇಜಸ್ಸಿನಿಂದಲೇ ಸೃಷ್ಟವಾಗಿ ಬೆಳೆದ ಬಹುರೂಪದ ಪ್ರಜೆಗಳನ್ನು ನೋಡಿ ಕೋಪಗೊಂಡನು (ಮಹದೇವನು), ತನ್ನ ಕೊರಳಲ್ಲಿದ್ದ ಬಾಣರೂಪದ ಲಿಂಗವನ್ನು ಭೂಮಿಯಲ್ಲಿ ಎಸೆದನು.

ತತ್ ಪ್ರವಿದ್ಧಂ ತಥಾ ಭೂಮೌ ತಥೈವ ಪ್ರತ್ಯತಿಷ್ಠತ ।
ತಮುವಾಚಾವ್ಯಯೋ ಬ್ರಹ್ಮಾ ವಚೋಭಿಃ ಶಮಯನ್ನಿವ ॥೨೨॥

ಭೂಮಿಯಲ್ಲಿ ಹೂತಿದ್ದ ಅದು (ಆ ಲಿಂಗವು) ಹಾಗೆಯೇ ಪ್ರತಿಷ್ಠಿತವಾಯಿತು. ನಾಶರಹಿತನಾದ ಬ್ರಹ್ಮನು ಮಾತಿನಿಂದ ಸಮಾಧಾನ ಪಡಿಸುತ್ತಾ ಆತನನ್ನು ಉದ್ದೇಶಿಸಿ ಹೇಳಿದನು.

ಬ್ರಹ್ಮಾ

ಕಿಂ ಕೃತಂ ಸಲಿಲೇ ಶರ್ವ ಚಿರಕಾಲಸ್ಥಿತೇನ ತೇ ।
ಕಿಮರ್ಥಂ ಚೇದಮುತ್ಪಾದ್ಯ ಲಿಂಗಂ ಭೂಮೌ ಪ್ರವೇಶಿತಮ್ ॥೨೩॥

ಬ್ರಹ್ಮ– ಶಿವನೆ! ಬಹುಕಾಲ ನೀರಿನಲ್ಲಿ ನಿಂತು ಏನನ್ನು ಮಾಡಿದಿ? ಏತಕ್ಕಾಗಿ ಈ ಲಿಂಗವನ್ನು ಮೇಲೆತ್ತಿ ಭೂಮಿಯಲ್ಲಿ ಎಸೆದಿರುವಿ?

ಶ್ರೀಭಗವಾನ್

ಸೋಽಬ್ರವೀಜ್ಜಾತಸಂರಂಭಸ್ತಥಾ ಲೋಕಗುರುರ್ಗುರುಮ್ ॥೨೪॥

ಕೃಷ್ಣ– ಆ ಲೋಕಗುರುವು ಕೋಪಗೊಂಡವನಾಗಿ ಗುರುವನ್ನು (ಬ್ರಹ್ಮನನ್ನು) ಉದ್ದೇಶಿಸಿ ಹೇಳಿದನು.

ರುದ್ರಃ

ಸೃಷ್ಟಾಃ ಪ್ರಜಾಃ ಪರೇಣೇಮಾಃ ಕಿಂ ಕರಿಷ್ಯಾಮ್ಯನೇನ ವೈ ॥೨೫॥

ರುದ್ರ– ಈ ಅನ್ಯನಿಂದ ಪ್ರಜೆಗಳು ಸೃಷ್ಟರಾದರು, ಇದರಿಂದ (ಈ ಲಿಂಗದಿಂದ) ಏನು ಮಾಡಲಿ?

ತಪಸಾಧಿಗತತ್ವಾನ್ನಃ ಪ್ರಜಾರ್ಥಂ ಹಿ ಪಿತಾಮಹ ।
ಓಷಧ್ಯಃ ಪರಿವರ್ಧಂತೇ ಯಥೈವಂ ಸತತಂ ಪ್ರಜಾಃ ॥೨೬॥

ಪಿತಾಮಹನೆ! ತಪಸ್ಸಿನಿಂದ, ನಮ್ಮ ಪ್ರಜೆಗಳಿಗಾಗಿ (ಅನ್ನವನ್ನು ಪಡೆದಿದ್ದರಿಂದ) ಹೇಗೆ ನಿರಂತರವಾಗಿ ಪ್ರಜೆಗಳು ವೃದ್ಧಿಸುವರೋ ಹಾಗೇ ಔಷಧಿಗಳೂ ವೃದ್ಧಿಸುವವು.

ಶ್ರೀಭಗವಾನ್

ಏವಮುಕ್ತ್ವಾ ಸ ಸಕ್ರೋಧೋ ಜಗಾಮ ವಿಮನಾ ಭವಃ ।
ಗಿರೇರ್ಮುಂಜವತಃ ಪಾದಂ ತಪಸ್ತಪ್ತುಂ ಮಹಾತಪಾಃ ॥೨೭॥

ಕೃಷ್ಣ– ಮಹಾತಪಸ್ವಿಯಾದ ಆ ಭವನು ಕ್ರೋಧದಿಂದ ಕೂಡಿದವನಾಗಿ, ಈ ರೀತಿ ಹೇಳಿ, ವಿಮನಸ್ಕನಾಗಿ, ಹಿಮಾಲಯದ ತಪ್ಪಲನ್ನು ಉದ್ದೇಶಿಸಿ ತಪವನ್ನು ಆಚರಿಸಲು ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ಕೃಷ್ಣನು ಧರ್ಮನಂದನನಿಗೆ ರುದ್ರದೇವನ ಕೋಪದಿಂದ ದೇವತೆಗಳ ಯಜ್ಞದ ನಾಶ ಮತ್ತು ಆತನ ಅನುಗ್ರಹದಿಂದ ದೇವತೆಗಳಿಗೆ ಸಮೃದ್ಧಿ ಈ ಮುಂತಾದವುಗಳನ್ನು ತಿಳಿಸಿ, ಈ ಮಹದೇವನ ಬಲದಿಂದಲೇ ಅಶ್ವತ್ಥಾಮನು ನಿನ್ನ ಪುತ್ರರನ್ನು ಸಂಹರಿಸಿದನು ಎಂದು ತಿಳಿಸಿದನು

ಶ್ರೀಭಗವಾನ್

ತತೋ ದೇವಯುಗೇऽತೀತೇ ದೇವಾ ವೈ ಸಮಕಲ್ಪಯನ್ ।
ಯಜ್ಞಂ ವೇದಪ್ರಮಾಣೇನ ವಿಧಿವದ್ ಯಷ್ಟುಮೀಪ್ಸವಃ ॥೧॥

ಕೃಷ್ಣ– ಅನಂತರದಲ್ಲಿ ದೇವಯುಗವು ಗತಿಸಲು, ವೇದೋಕ್ತವಿಧದಲ್ಲಿ ಯಜ್ಞವನ್ನು ಆಚರಿಸಬೇಕೆಂಬ ಇಚ್ಛೆಯಿಂದ ದೇವತೆಗಳು ಯಜ್ಞವನ್ನು ಸಿದ್ಧಗೊಳಿಸಿದರು.

ಕಲ್ಪಯಾಮಾಸುರಥ ತೇ ಸಾಧನಾನಿ ಹವೀಂಷಿ ಚ ।
ಭಾಗಾರ್ಹಾ ದೇವತಾಶ್ಚೈವ ಯಜ್ಞಿಯಂ ದ್ರವ್ಯಮೇವ ಚ ॥೨॥

ಅನಂತರದಲ್ಲಿ ಅವರು ಯಜ್ಞೀಯ ದ್ರವ್ಯಗಳನ್ನು, ಹವಿಃಪದಾರ್ಥಗಳನ್ನು, ಸಾಧನಗಳನ್ನು, ಯಜ್ಞಭಾಗಿಗಳಾದ ದೇವತೆಗಳನ್ನು ಕಲ್ಪಿಸಿದರು.

ತೇ ವೈ ರುದ್ರಮಜಾನಂತೋ ಯಾಥಾತಥ್ಯೇನ ಭಾರತ ।
ನಾಕಲ್ಪಯಂತ ದೇವಸ್ಯ ಸ್ಥಾಣೋರ್ಭಾಗಂ ನರಾಧಿಪ ॥೩॥

ಭರತಕುಲೋತ್ಪನ್ನನಾದ ರಾಜನೆ! ಅವರು ರುದ್ರದೇವನನ್ನು ಸರಿಯಾಗಿ ತಿಳಿಯದೆ, ಸ್ಥಾಣುದೇವನಿಗೆ ಭಾಗವನ್ನು ಕಲ್ಪಿಸಲಿಲ್ಲ.

ಸೋಽಕಲ್ಪ್ಯಮಾನೇ ಭಾಗೇ ತು ಕೃತ್ತಿವಾಸಾ ಮಖೇಽಮರೈಃ ।
ತತಃ ಸಾಧನಮನ್ವಿಚ್ಛನ್ ಧನುರಗ್ರೇ ಸಸರ್ಜ ಹ ॥೪॥

ದೇವತೆಗಳು ಯಜ್ಞದಲ್ಲಿ ಭಾಗವನ್ನು ಕಲ್ಪಿಸದೇ ಇರಲು, ಆ ಕೃತ್ತಿವಾಸನಾದರೋ (ದೇವತೆಗಳನ್ನು ಶಿಕ್ಷಿಸಲು) ಸಾಧನವೊಂದನ್ನು ಇಚ್ಛಿಸಿದವನಾಗಿ ಮೊದಲು ಧನುಸ್ಸೊಂದನ್ನು ಸೃಷ್ಟಿಸಿದನು.

ಲೋಕಯಜ್ಞಃ ಕ್ರಿಯಾಯಜ್ಞೋ ಗೃಹಯಜ್ಞಃ ಸನಾತನಃ ।
ಪಂಚಭೂತನೃಯಜ್ಞಶ್ಚ ಯಜ್ಞೇ ಸರ್ವಮಿದಂ ಜಗತ್ ॥೫॥

ಲೋಕವು ಯಜ್ಞದಿಂದ, ಕ್ರಿಯೆಗಳು ಯಜ್ಞದಿಂದ, ಮನೆ ಮುಂತಾದ ಸಂಪತ್ತು ಯಜ್ಞದಿಂದ, ಪಂಚಭೂತಗಳು ಯಜ್ಞದಿಂದ, ಮನುಜ ಮುಂತಾದ ಪ್ರಾಣಿಗಳು ಯಜ್ಞದಿಂದ, ಈ ಸಮಸ್ತ ಜಗವೇ ಯಜ್ಞದಿಂದ ಪ್ರವೃತ್ತವಾಗಿದೆ.

ಲೋಕಯಜ್ಞನೃಯಜ್ಞೌ ಚ ಕಪರ್ದೀ ವಿದಧೇ ಧನುಃ ।
ಧನುಃ ಸೃಷ್ಟಮಭೂತ್ ತಸ್ಯ ಷಷ್ಟಿಕಿಷ್ಕುಪ್ರಮಾಣತಃ ॥೬॥

ಕಪರ್ದಿಯು ಲೋಕಯಜ್ಞ ಮನುಷ್ಯಯಜ್ಞಗಳಿಂದ ಬಿಲ್ಲನ್ನು ನಿರ್ಮಿಸಿದನು. ಸೃಷ್ಟಿಸಿದ ಅವನ ಧನುಸ್ಸು ಅರವತ್ತು ಮೊಳ ಉದ್ದವಾಯಿತು.

ವಷಟ್‌ಕಾರೋಽಭವಜ್ಜ್ಯಾ ತು ಧನುಷಸ್ತಸ್ಯ ಭಾರತ ।
ಯಜ್ಞಾಂಗಾನಿ ಚ ಚತ್ವಾರಿ ತಸ್ಯ ಸಂನಹನೇಽಭವನ್ ॥೭॥

ಭರತಕುಲೋತ್ಪನ್ನನೆ! ವಷಟ್‌ಕಾರವು ಆ ಬಿಲ್ಲಿನ ಹಗ್ಗವಾಯಿತು, ನಾಲ್ಕು ಯಜ್ಞಾಂಗಗಳು (ಸ್ನಾನ, ದಾನಾದಿಗಳು) ಆತನ ಕವಚವಾದವು. (ಯಜ್ಞಸ್ವರೂಪನು, ಯಜ್ಞಸ್ವಾಮಿಯೂ ರುದ್ರದೇವನು. ಆತನನ್ನು ದೇವತೆಗಳೇ ಸರಿಯಾಗಿ ಅರಿಯಲಿಲ್ಲ ಎಂದು ಭಾವ).

ತತಃ ಕ್ರುದ್ಧೋ ಮಹಾದೇವಸ್ತದುಪಾದಾಯ ಕಾರ್ಮುಕಮ್ ।
ಆಜಗಾಮಾಥ ತತ್ರೈವ ಯತ್ರ ದೇವಾಃ ಸಮೀಜಿರೇ ॥೮॥

ಅನಂತರದಲ್ಲಿ ಕೋಪಗೊಂಡ ಮಹಾದೇವನು ಆ ಬಿಲ್ಲನ್ನು ಪರಿಗ್ರಹಿಸಿ, ಎಲ್ಲಿ ದೇವತೆಗಳು ಯಜ್ಞವನ್ನು ಆಚರಿಸುತ್ತಿದ್ದರೊ ಅಲ್ಲಿಗೆ ಆಗಮಿಸಿದನು.

ತಮಾತ್ತಕಾರ್ಮುಕಂ ದೃಷ್ಟ್ವಾ ಬ್ರಹ್ಮಚಾರಿಣಮವ್ಯಯಮ್ ।
ವಿವ್ಯಥೇ ಪೃಥಿವೀ ದೇವೀ ಪರ್ವತಾಶ್ಚ ಚಕಂಪಿರೇ ॥೯॥

ಬ್ರಹ್ಮಚಾರಿಯಾದ ನಾಶರಹಿತನಾದ, ಧನುಸ್ಸನ್ನು ಧರಿಸಿದ ಆತನನ್ನು ಕಂಡು ಭೂದೇವಿಯು ವ್ಯಥಿತಳಾದಳು, ಪರ್ವತಗಳೂ ನಡುಗಿದವು.

ನ ವವೌ ಪವನಶ್ಚೈವ ನಾಗ್ನಿರ್ಜಜ್ವಾಲ ವೈಧಿತಃ ।
ವ್ಯಭ್ರಮಚ್ಚಾಪಿ ಸಂವಿಗ್ನಂ ದಿವಿ ನಕ್ಷತ್ರಮಂಡಲಮ್ ॥೧೦॥

ಗಾಳಿಯು ಬೀಸಲಿಲ್ಲ, ಘೃತಾದಿ ಹವಿಸ್ಸನ್ನು ನೀಡಿದರೂ ಅಗ್ನಿಯು ಪ್ರಜ್ವಲಿಸಲಿಲ್ಲ, ನಕ್ಷತ್ರಗಳು ವ್ಯತ್ಯಸ್ಥಗೊಂಡವು.

ನ ಬಭೌ ಭಾಸ್ಕರಶ್ಚಾಪಿ ಸೋಮಃ ಶ್ರೀಮುಕ್ತಮಂಡಲಃ ।
ತಿಮಿರೇಣಾವೃತಂ ಸರ್ವಮಾಕಾಶಂ ಚಾಭವತ್ ತದಾ ॥೧೧॥

ಸೂರ್ಯನು ಪ್ರಕಾಶಿಸಲಿಲ್ಲ, ಚಂದ್ರಮಂಡಲವು ಕಾಂತಿಹೀನವಾಯಿತು. ಸಮಸ್ತ ನಭೋ ಮಂಡಲವು ಕಗ್ಗತ್ತಲೆಯಿಂದ ಆವೃತವಾಯಿತು.

ಅಭಿಭೂತಾಸ್ತತೋ ದೇವಾ ವಿಷಯಾನ್ ನ ಪ್ರಜಜ್ಞಿರೇ ।
ನ ಪ್ರತ್ಯಭಾಚ್ಚ ಯಜ್ಞಃ ಸ ದೇವತಾಸ್ತೇಸಿರೇ ತಥಾ ॥೧೨॥

ಅನಂತರದಲ್ಲಿ ಅವಮಾನಿತರಾದ ದೇವತೆಗಳು, ಏನು ಸಂಭವಿಸಿತು ಎನ್ನುವದನ್ನು ತಿಳಿಯಲಿಲ್ಲ, ದೇವತೆಗಳು (ಮುಂದೆ) ಏನು (ಮಾಡಬೇಕೆಂದು) ತಿಳಿಯದಂತಾದರು, ಆ ಯಜ್ಞವು ಮಾರ್ಗದಿಂದ ಜಾರಿತು.

ತತಃ ಸ ಯಜ್ಞಂ ವಿವ್ಯಾಧ ರೌದ್ರೇಣ ಹೃದಿ ಪತ್ರಿಣಾ ।
ಅಪಕ್ರಾಂತಸ್ತತೋ ಯಜ್ಞೋ ಮೃಗೋ ಭೂತ್ವಾ ಸಪಾವಕಃ ॥೧೩॥

ಅನಂತರದಲ್ಲಿ ರುದ್ರದೇವನು ಬಾಣದಿಂದ ಯಜ್ಞಪುರುಷನ ಎದೆಗೆ ಹೊಡೆದನು, ಯಜ್ಞಪುರುಷನು ಜಿಂಕೆರೂಪವನ್ನು ಧರಿಸಿ, ಅಗ್ನಿಸಹಿತನಾಗಿ ಮರೆ ಆದನು.

ಸ ತು ತೇನೈವ ರೂಪೇಣ ದಿವಿಸ್ಥೋ ವೈ ವ್ಯರಾಜತ ।
ಅನ್ವೀಯಮಾನೋ ರುದ್ರೇಣ ಯುಧಿಷ್ಠಿರ ನಭಸ್ಥಲೇ ॥೧೪॥

ಯುಧಿಷ್ಠಿರ! ಅವನಾದರೋ (ಯಜ್ಞದೇವನಾದರೋ) ಅದೇ ರೂಪದಿಂದ (ಮೃಗಶಿರ ಎಂಬ ನಕ್ಷತ್ರದ ರೂಪದಿಂದ) ಆಕಾಶದಲ್ಲಿ ನಿಂತು ವಿರಾಜಿಸಿದನು, ಆಕಾಶದಲ್ಲಿ ಮಹಾದೇವನು (ಆರ್ದ್ರಾ ನಕ್ಷತ್ರ ರೂಪದಿಂದ ಯಜ್ಞಪುರುಷನನ್ನು) ಹಿಂಬಾಲಿಸಿದನು.

ಅಪಕ್ರಾಂತೇ ತತೋ ಯಜ್ಞೇ ಸಂಜ್ಞಾ ನ ಪ್ರತ್ಯಭಾತ್ ಸುರಾನ್ ।
ನಷ್ಟಸಂಜ್ಞೇಷು ದೇವೇಷು ನ ಪ್ರಾಜ್ಞಾಯತ ಕಿಂಚನ ॥೧೫॥

ಯಜ್ಞಪುರುಷನು ಮರೆಯಾದ ಅನಂತರದಲ್ಲಿ ದೇವತೆಗಳು ಜ್ಞಾನಹೀನರಾದರು. ದೇವತೆಗಳು ಪ್ರಜ್ಞಾಹೀನರಾಗಲು ಮುಂದಿನ ಕರ್ಮವನ್ನು ತಿಳಿಯದವರಾದರು.

ತ್ರ್ಯಂಬಕಃ ಸವಿತುರ್ಬಾಹೂ ಭಗಸ್ಯ ನಯನೇ ತಥಾ ।
ಪೂಷ್ಣಶ್ಚ ದಶನಾನ್ ಸರ್ವಾನ್ ಧನುಷ್ಕೋಟ್ಯಾ ವ್ಯಶಾತಯತ್ ॥೧೬॥

ತ್ರಿನಯನನು ಧನುಸ್ಸಿನ ತುದಿಯಿಂದ ಸೂರ್ಯನ ಬಾಹುಗಳನ್ನು, ಭಗನ ಕಣ್ಣನ್ನು, ಪೂಷಾದೇವತೆಯ ಎಲ್ಲ ಹಲ್ಲುಗಳನ್ನು ನಾಶಗೊಳಿಸಿದನು.

ಪ್ರಾದ್ರವಂತ ತತೋ ದೇವಾ ಯಜ್ಞಾಂಗಾನಿ ಚ ಸರ್ವಶಃ ।
ಕೇಚಿತ್ ತತ್ರೈವ ಘೂರ್ಣಂತೋ ಗತಾಸವ ಇವಾಭವನ್ ॥೧೭॥

ಅನಂತರದಲ್ಲಿ ಎಲ್ಲ ದೇವತೆಗಳು ಎಲ್ಲ ಯಜ್ಞಾಂಗಗಳು ಓಡಿಹೋದರು. ಕೆಲವರು ಅಲ್ಲೇ ಮೇಲ್ಲುಸಿರನ್ನು ಬಿಡುತ್ತಾ ಗತಜೀವಿಗಳಂತಾದರು.

ಸ ತು ವಿದ್ರಾವ್ಯ ತತ್ ಸರ್ವಂ ಶಿತಿಕಂಠೋಽಪಹಸ್ಯ ತು ।
ಅವಷ್ಟಭ್ಯ ಧನುಷ್ಕೋಟಿಂ ರುರೋಧ ವಿಬುಧಾಂಸ್ತತಃ ॥೧೮॥

ಆ ನೀಲಕಂಠನು ಆ ಎಲ್ಲರನ್ನೂ ಓಡಿಸಿ, ಅಪಹಾಸ್ಯವನ್ನು ಮಾಡುತ್ತಾ, ಅನಂತರದಲ್ಲಿ ಬಿಲ್ಲಿನ ತುದಿಯಿಂದ ದೇವತೆಗಳನ್ನು ತಡೆದನು.

ತತೋ ವಾಗಮರೈರುಕ್ತಾ ಜ್ಯಾಂ ತಸ್ಯ ಧನುಷೋಽಚ್ಛಿನತ್ ।
ಅಥ ತತ್ ಸಹಸಾ ರಾಜನ್ ಛಿನ್ನಜ್ಯಾಂ ವಿಷ್ಫುರದ್ಧನುಃ ॥೧೯॥

ಅನಂತರದಲ್ಲಿ ವಾಗಭಿಮಾನಿದೇವತೆಯು ದೇವತೆಗಳಿಂದ ಪ್ರೇರೇಪಿತಳಾಗಿ ಆ ಬಿಲ್ಲಿನ ಹಗ್ಗವನ್ನು ಕತ್ತರಿಸಿದಳು. ರಾಜನೆ! ಆ ಕೂಡಲೇ ಹಗ್ಗವು ತುಂಡಾಗಲು ಆ ಬಿಲ್ಲು ಮೇಲೆ ಚಿಮ್ಮಿತು.

ತತೋ ವಿಧನುಷಂ ದೇವಾ ದೇವಶ್ರೇಷ್ಠಮುಪಾಗಮನ್ ।
ಶರಣಂ ಸಹ ಯಜ್ಞೇನ ಪ್ರಸಾದಂ ಚಾಕರೋತ್ ಪ್ರಭುಃ ॥೨೦॥

ಅನಂತರದಲ್ಲಿ ಬಿಲ್ಲಿಲ್ಲದ ದೇವಶ್ರೇಷ್ಠನನ್ನು ದೇವತೆಗಳು ಸಮೀಪಿಸಿದರು. ಯಜ್ಞಪುರುಷನೊಡನೆ ಶರಣಾದ ದೇವತೆಗಳಿಗೆ ಸ್ವಾಮಿಯು ಅನುಗ್ರಹಿಸಿದನು.

ತತಃ ಪ್ರಸನ್ನೋ ಭಗವಾನ್ ಪ್ರಾಸ್ಯತ್ ಕೋಪಂ ಜಲಾಶಯೇ ।
ಸ ಜಲಂ ಪಾವಕೋ ಭೂತ್ವಾ ಶೋಷಯತ್ಯಖಿಲಂ ವಿಭೋ ॥೨೧॥

ಪ್ರಭುವೆ! ಅನಂತರದಲ್ಲಿ ಷಡ್ಗುಣಪೂರ್ಣನಾದ ಪ್ರಸನ್ನನಾದ ಮಹಾದೇವನು ಕೋಪವನ್ನು ಸಮುದ್ರದಲ್ಲಿ ವಿಸರ್ಜಿಸಿದನು. ಅದು (ಕೋಪವು) ಅಗ್ನಿಯಾಗಿ ಎಲ್ಲ ನೀರನ್ನು (ನಿರಂತರ) ಪಾನ ಮಾಡುವುದು.

ಭಗಸ್ಯ ನಯನೇ ಚೈವ ಬಾಹೂ ಚ ಸವಿತುಸ್ತಥಾ ।
ಪ್ರಾದಾತ್ ಪೂಷ್ಣಶ್ಚ ದಶನಾನ್ ಪುನರ್ಯಜ್ಞಂ ಚ ಪಾಂಡವ ॥೨೨॥

ಪಾಂಡುಪುತ್ರನೆ! ಭಗನ ಕಣ್ಣುಗಳನ್ನು, ಸೂರ್ಯನ ಕೈಗಳನ್ನು, ಪೂಷಾದೇವತೆಯ ಹಲ್ಲುಗಳನ್ನು, ಯಜ್ಞಪುರುಷನನ್ನು ನೀಡಿದನು.

ತತಃ ಸ್ವಸ್ಥಮಿದಂ ಸರ್ವಂ ಬಭೂವ ಪುನರೇವ ಹಿ ।
ಸರ್ವಾಣಿ ಚ ಹವೀಂಷ್ಯಸ್ಯ ದೇವಾ ಭಾಗಮಕಲ್ಪಯನ್ ॥೨೩॥

ಅನಂತರದಲ್ಲಿ ಈ ಎಲ್ಲರು ಸ್ವಸ್ಥರಾದರು. ದೇವತೆಗಳು ಎಲ್ಲ ಹವಿಃಪದಾರ್ಥಗಳು ಆತನ ಪಾಲು ಎಂದು ಕಲ್ಪಿಸಿದರು.

ತಸ್ಮಿನ್ ಕ್ರುದ್ಧೇऽಭವತ್ ಸರ್ವಮಸ್ವಸ್ಥಂ ಭುವನಂ ಪ್ರಭೋ ।
ಪ್ರಸನ್ನೇ ಚ ಪುನಃಸ್ವಸ್ಥಂ ಜಗದ್ಭವತಿ ಭಾರತ ॥೨೪॥

ಭರತಕುಲೋತ್ಪನ್ನನೆ! ಆತನು ಕುಪಿತನಾಗಲು ಈ ಎಲ್ಲ ಜಗವು ಅಸ್ವಸ್ಥವಾಗುವುದು, ಆತನು ಸ್ವಸ್ಥನಾಗಲು ಈ ಜಗವೇ ಸ್ವಾಸ್ಥ್ಯವನ್ನು ಹೊಂದುವುದು.

ತತಸ್ತೇ ನಿಹತಾ ತೇನ ತವ ಪುತ್ರಾ ಮಹಾರಥಾಃ ।
ಅನ್ಯೇ ಚ ಬಹವಃ ಶೂರಾಃ ಪಾಂಚಾಲಾಃ ಸಪದಾನುಗಾಃ ॥೨೫॥

ಆದ್ದರಿಂದ (ರುದ್ರದೇವನ ಅನುಗ್ರಹದಿಂದ) ಆತನಿಂದ (ಅಶ್ವತ್ಥಾಮನಿಂದ) ಮಹಾರಥರಾದ ನಿನ್ನ ಪುತ್ರರು, ಬೇರೇ ಅನೇಕ ಶೂರರು ಪದಾತಿಗಳಿಂದ ಯುಕ್ತರಾದ ಪಾಂಚಾಲ ಪುತ್ರರು ಮರಣವನ್ನು ಹೊಂದಿದರು

ನ ತನ್ಮನಸಿ ಕರ್ತವ್ಯಂ ನ ಹಿ ತದ್ ದ್ರೌಣಿನಾ ಕೃತಮ್ ।
ಮಹಾದೇವಪ್ರಸಾದಃ ಸ ಕುರು ಕಾರ್ಯಮನಂತರಮ್ ॥೨೬॥

ಅದನ್ನು ಮನಸಿನಲ್ಲಿ ಸ್ಮರಿಸದಿರು, ಅದನ್ನು ದ್ರೋಣಪುತ್ರನು ಮಾಡಿದ್ದಲ್ಲ, ಅದು ಮಹಾದೇವನ ಪ್ರಸಾದ, ಮುಂದಿನ ಕರ್ತವ್ಯವನ್ನು ಆಚರಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಐಷೀಕಪರ್ವಣಿ ಈಶ್ವರಮಾಹಾತ್ಮ್ಯಂ ನಾಮ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಐಷೀಕಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಮ್ ಐಷೀಕಪರ್ವ ॥

★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಸ್ತ್ರೀಪರ್ವ

೧. ಜಲಪ್ರದಾನಪರ್ವ

ಒಂದನೆಯ ಅಧ್ಯಾಯ

ತನ್ನ ಮಕ್ಕಳು, ಮೊಮ್ಮಕ್ಕಳನ್ನು ಉದ್ದೇಶಿಸಿ ರೋದಿಸುತ್ತಿರುವ ಧೃತರಾಷ್ಟ್ರನಿಗೆ ಸಂಜಯನಿಂದ ಸಾಂತ್ವನದ ನುಡಿಗಳು.

ಜನಮೇಜಯಃ

ಹತೇ ದುರ್ಯೋಧನೇ ಚೈವ ಹತೇ ಸೈನ್ಯೇ ಚ ಸರ್ವಶಃ ।
ಧೃತರಾಷ್ಟ್ರೋ ಮಹಾರಾಜಃ ಶ್ರುತ್ವಾ ಕಿಮಕರೋನ್ಮುನೇ ॥೧॥

ಜನಮೇಜಯ– ಮುನಿಯೆ! ಎಲ್ಲಸೈನ್ಯವು ಮೃತವಾಗಲು, ದುರ್ಯೋಧನನು ಮೃತನಾಗಲು, ಮಹಾರಾಜನಾದ ಧೃತರಾಷ್ಟ್ರನು ಆ ಸುದ್ದಿಯನ್ನು ಕೇಳಿ ಏನು ಮಾಡಿದನು?

ತಥೈವ ಕೌರವೋ ರಾಜಾ ಧರ್ಮಪುತ್ರೋ ಮಹಾಮನಾಃ ।
ಕೃಪಪ್ರಭೃತಯಶ್ಚೈವ ಕಿಮಕುರ್ವತ ತೇ ತ್ರಯಃ ॥೨॥

ಹಾಗೆಯೇ ಕುರುವಂಶಸಂಜಾತನಾದ ರಾಜನಾದ ಉದಾರಮನಸ್ಕನಾದ ಧರ್ಮಪುತ್ರನು, ಕೃಪನೇ ಮುಂತಾದ ಮೂವರು ಏನು ಮಾಡಿದರು?

ಅಶ್ವತ್ಥಾಮ್ನಃ ಶ್ರುತಂ ಕರ್ಮ ಶಾಪಶ್ಚಾನ್ಯೋನ್ಯಕಾರಿತಃ ।
ವೃತ್ತಾಂತಮುತ್ತರಂ ಬ್ರೂಹಿ ಯದಭಾಷತ ಸಂಜಯಃ ॥೩॥

ಅಶ್ವತ್ಥಾಮನ ಕೆಲಸವನ್ನು, ಕೃಷ್ಣ-ವೇದವ್ಯಾಸಾದಿಗಳು ಪರಸ್ಪರ ಚರ್ಚಿಸಿ ಮಾಡಿದ ಕರ್ಮ ಮತ್ತು ಶಾಪ ಇವುಗಳನ್ನು ಕೇಳಿರುವೆನು. (ಅಶ್ವತ್ಥಾಮನು ಉತ್ತರಾದೇವಿಯ ಗರ್ಭದ ಮೇಲೆ ಬ್ರಹ್ಮಾಸ್ತ್ರವನ್ನು ಎಸೆದಿದ್ದು, ಕೃಷ್ಣನು ಉತ್ತರೆಯ ಗರ್ಭವನ್ನು ಸಂರಕ್ಷಿಸಿದ್ದು, ಅಶ್ವತ್ಥಾಮನು ಮೂರುಸಾವಿರ ವರ್ಷಪರ್ಯಂತ ಕುಷ್ಠರೋಗದಿಂದ ಬಳಲಬೇಕೆಂದು ಶಾಪವನ್ನು ಇತ್ತಿದ್ದು ಈ ಮುಂತಾದವುಗಳನ್ನು ಕೇಳಿಯಾಗಿದೆ ಎಂದು ಭಾವ.) ಮುಂದಿನ ವೃತ್ತಾಂತವನ್ನು, ಸಂಜಯನು ಏನು ಹೇಳಿದನು ಎನ್ನುವುದನ್ನು ಹೇಳು.

ವೈಶಂಪಾಯನಃ

ಹತೇ ಪುತ್ರಶತೇ ದೀನಂ ಛಿನ್ನಶಾಖಮಿವ ದ್ರುಮಮ್ ।
ಪುತ್ರಶೋಕಾಭಿಸಂತಪ್ತಂ ಧೃತರಾಷ್ಟ್ರಂ ಮಹೀಪತಿಮ್ ॥೪॥

ಧ್ಯಾನಮೂಕತ್ವಮಾಪನ್ನಂ ಚಿಂತಯಾ ಸಮಭಿಪ್ಲುತಮ್ ।
ಸಂಜಯೋ ಜಯತಾಂ ಶ್ರೇಷ್ಠ ರಾಜಾನಂ ವಾಕ್ಯಮಬ್ರವೀತ್ ॥೫॥

ನೂರು ಪುತ್ರರು ಸಂಹೃತರಾಗಲು, ಕೊಂಬೆಗಳನ್ನು ಕತ್ತರಿಸಿದ ವೃಕ್ಷದಂತಾದ, ಮಕ್ಕಳ ಶೋಕದಿಂದ ತಪ್ತನಾದ ರಾಜನಾದ ಧೃತರಾಷ್ಟ್ರನು ಧ್ಯಾನದಿಂದ ಮೌನವನ್ನು ಆಶ್ರಯಿಸಲು, ಚಿಂತೆಯಿಂದ ಪರಿತಪ್ತನಾದ ರಾಜನನ್ನು ಕುರಿತು ದಿಗ್ವಿಜಯಶಾಲಿಗಳಲ್ಲಿ ಮೂರ್ಧನ್ಯನಾದ ಸಂಜಯನು ಮಾತುಗಳನ್ನಾಡಿದನು.

ಸಂಜಯಃ

ಕಿಂ ಶೋಚಸಿ ಮಹಾಪ್ರಾಜ್ಞ ನಾಸ್ತಿ ಶೋಕೇ ಸಹಾಯತಾ ।
ಅಕ್ಷೌಹಿಣ್ಯೋ ಹತಾ ಹ್ಯಷ್ಟೌ ದಶ ಚೈವ ವಿಶಾಂಪತೇ ॥೬॥

ಸಂಪತ್ತಿನ ಒಡೆಯ, ಮಹಾಧೀಮಂತನೆ! ಹದಿನೆಂಟು ಅಕ್ಷೌಹಿಣೀ ಸೇನೆಯು ನಾಶವಾಯಿತು. ಏಕೆ ದುಃಖಿಸುವಿ? ದುಃಖಿಸುವುದರಿಂದ ಯಾವ ಪ್ರಯೋಜನವೂ ಇಲ್ಲ.

ನಿರ್ಜಿತೇಯಂ ವಸುಮತೀ ಶೂನ್ಯಾ ಸ್ಥಾಸ್ಯತಿ ಕೇವಲಮ್ ।
ನಾನಾದಿಗ್ಭ್ಯಃ ಸಮಾಗಮ್ಯ ನಾನಾಜಾತ್ಯಾ ನರಾಧಿಪಾಃ ॥೭॥

ಸಹಿತಾಸ್ತವ ಪುತ್ರೇಣ ಸರ್ವೇ ವೈ ನಿಧನಂ ಗತಾಃ ॥೮॥

ಈ ಭೂಮಿಯು ಸೋತಿತು, ಕೇವಲ ಶೂನ್ಯವಾಗಿ ನಿಂತಿದೆ, ನಾನಾ ದಿಕ್ಕುಗಳಿಂದ ಆಗಮಿಸಿದ ನಾನಾ ಜಾತಿಯ ಎಲ್ಲ ರಾಜರು ನಿನ್ನ ಪುತ್ರನಿಂದ ಸಹಿತರಾಗಿ ಸಾವನ್ನು ಹೊಂದಿರುವರು.

ಪಿತೄಣಾಂ ಪುತ್ರಪೌತ್ರಾಣಾಂ ಜ್ಞಾತೀನಾಂ ಸುಹೃದಾಂ ತಥಾ ।
ಗುರೂಣಾಂ ಚಾನುಪೂರ್ವ್ಯೇಣ ಯೇ ಚಾನ್ಯೇऽನುಚರಾ ಹತಾಃ ॥೯॥

ಪ್ರೇತಕಾರ್ಯಾಣಿ ಸರ್ವಾಣಿ ಕಾರಯಸ್ವ ನರಾಧಿಪ ॥೧೦॥

ಮನುಜರ ಒಡೆಯನೆ! ಪಿತೃ ಸ್ಥಾನೀಯರಿಗೆ ಮಕ್ಕಳಿಗೆ ಮೊಮ್ಮಕ್ಕಳಿಗೆ ಜ್ಞಾತಿಗಳಿಗೆ ಸ್ನೇಹಿತರಿಗೆ ಹಾಗು ಗುರುಗಳಿಗೆ ಮತ್ತೆ ಹಾಗೆ ಯಾವ ಅನುಚರರು ಮೃತರಾಗಿರುವರೋ ಅವರೆಲ್ಲರಿಗೂ ಪ್ರೇತಕಾರ್ಯವನ್ನು ಮಾಡಿಸು.

ವೈಶಂಪಾಯನಃ

ತಚ್ಛ್ರುತ್ವಾ ಕರುಣಂ ವಾಕ್ಯಂ ಪುತ್ರಪೌತ್ರವಧಾರ್ದಿತಃ ।
ಪಪಾತ ಭುವಿ ದುರ್ಧರ್ಷೋ ವಾತಾಹತ ಇವ ದ್ರುಮಃ ॥೧೧॥

ವೈಶಂಪಾಯನ– ಕರುಣಾಜನಕವಾದ ಆ ವಾಕ್ಯವನ್ನು ಕೇಳಿ, ಮಕ್ಕಳ ಮೊಮ್ಮಕ್ಕಳ ಮರಣದಿಂದ ದುಃಖಿತನಾದ, ಮತ್ತೊಬ್ಬರಿಂದ ಧರ್ಷಣಕ್ಕೆ ಒಳಗಾಗದ ಧೃತರಾಷ್ಟ್ರನು ಬಿರುಗಾಳಿಯಿಂದ ಮುರಿದ ಮರದಂತೆ ನೆಲದಲ್ಲಿ ಬಿದ್ದನು.

ಧೃತರಾಷ್ಟ್ರಃ

ಹತಪುತ್ರೋ ಹತಾಮಾತ್ಯೋ ಹತಸರ್ವಸುಹೃಜ್ಜನಃ ।
ದುಃಖಂ ನೂನಂ ಗಮಿಷ್ಯಾಮಿ ವಿಚರನ್ ಪೃಥಿವೀಮಿಮಾಮ್ ॥೧೨॥

ಧೃತರಾಷ್ಟ್ರ- ಮಕ್ಕಳನ್ನು ಕಳೆದುಕೊಂಡ, ಮಂತ್ರಿಗಳನ್ನು ಕಳೆದುಕೊಂಡ, ಎಲ್ಲ ಸ್ನೇಹಿತರನ್ನು ಕಳೆದುಕೊಂಡ ನಾನು ಈ ಭೂಮಿಯಲ್ಲಿ ತಿರುಗುತ್ತಾ ನಿಶ್ಚಯವಾಗಿಯೂ ತುಂಬ ದುಃಖವನ್ನು ಹೊಂದಲಿರುವೆನು.

ಕಿಂ ನು ಬಂಧುವಿಹೀನಸ್ಯ ಜೀವಿತೇನ ಮಮಾದ್ಯ ವೈ ।
ಲೂನಪಕ್ಷಸ್ಯ ಇವ ಮೇ ವೈನತೇಯಸ್ಯ ಸಂಜಯ ॥೧೩॥

ಸಂಜಯ! ರೆಕ್ಕೆ ಕಳೆದುಕೊಂಡ ಗರುಡಪಕ್ಷಿಯಂತಾದ ಬಂಧುವಿಹೀನನಾದ ನನಗೆ ಬದುಕಿನಿಂದ ಏನು ಪ್ರಯೋಜನ?

ಹೃತರಾಜ್ಯೋ ಹತಸುಹೃದ್ಧತಪುತ್ರಶ್ಚ ವೈ ತಥಾ ।
ನ ಭ್ರಾಜಾಮಿ ಮಹಾಪ್ರಾಜ್ಞ ಕ್ಷೀಣರಶ್ಮಿರಿವಾಂಶುಮಾನ್ ॥೧೪॥

ಮಹಾಪ್ರಾಜ್ಞನೆ! ರಾಜ್ಯವನ್ನು ಕಳೆದುಕೊಂಡಿರುವೆನು, ಹಾಗೆಯೇ ಸ್ನೇಹಿತರನ್ನು ಕಳೆದುಕೊಂಡಿರುವೆನು, ಮಕ್ಕಳನ್ನು ಕಳೆದುಕೊಂಡಿರುವೆನು, ಕಲೆಗಳಿಂದ ಕ್ಷೀಣಿಸಿರುವ ಚಂದ್ರನಂತೆ ಕಾಂತಿಹೀನನಾಗಿರುವೆನು.

ನ ಕೃತಂ ಸುಹೃದಾಂ ವಾಕ್ಯಂ ಜಾಮದಗ್ನ್ಯಸ್ಯ ಜಲ್ಪಿತಮ್ ।
ನಾರದಸ್ಯ ಚ ದೇವರ್ಷೇಃ ಕೃಷ್ಣದ್ವೈಪಾಯನಸ್ಯ ಚ ॥೧೫॥

ತಿಳಿಹೇಳಿದ ಜಮದಗ್ನಿಗಳ, ದೇವರ್ಷಿಗಳಾದ ನಾರದರ ಮತ್ತು ಕೃಷ್ಣದ್ವೈಪಾಯನರ, ಸ್ನೇಹಿತರ ಮಾತನ್ನು ಅನುಸರಿಸಲಿಲ್ಲ.

ಸಭಾಮಧ್ಯೇ ತು ಕೃಷ್ಣೇನ ಯಚ್ಛ್ರೇಯೋಽಭಿಹಿತಂ ಮಮ ।
ಅಲಂ ವೈರೇಣ ತೇ ರಾಜನ್ ಪುತ್ರಃ ಸಂಗೃಹ್ಯತಾಮಿತಿ ॥೧೬॥

ತಚ್ಚ ತೇಷಾಮಕೃತ್ವಾಽದ್ಯ ಭೃಶಂ ತಪ್ಸ್ಯಾಮಿ ದುರ್ಮತಿಃ ।
ನ ಹಿ ಶ್ರೋಷ್ಯಾಮಿ ಭೀಷ್ಮಸ್ಯ ಧರ್ಮಯುಕ್ತಂ ಪ್ರಭಾಷಿತಮ್ ॥೧೭॥

ನನಗೆ ಸಭೆಯ ಮಧ್ಯದಲ್ಲಿ ಕೃಷ್ಣನು ಶ್ರೇಯಸ್ಕರವಾದದನ್ನು ಹೇಳಿದನು: 'ರಾಜನೆ! ದ್ವೇಷವು ಸಾಕು, ನಿನ್ನ ಮಗನನ್ನು ಹತೋಟಿಯಲ್ಲಿ ಇಟ್ಟುಕೊ' ಎಂದು. ಅವನ ಆ ವಚನಗಳನ್ನು ಅನುಸರಿಸದೇ ದುರ್ಮತಿಯಾದ ನಾನು ಈಗ ದುಃಖಿಸುತ್ತಿರುವೆನು, ಭೀಷ್ಮನ ಧರ್ಮಯುಕ್ತವಾದ ವಚನವನ್ನೂ ಕೇಳಲಿಲ್ಲ.

ದುರ್ಯೋಧನಸ್ಯ ಚ ತಥಾ ವೃಷಭಸ್ಯೇವ ನರ್ದತಃ ।
ದುಃಶಾಸನವಧಂ ಶ್ರುತ್ವಾ ಕರ್ಣಸ್ಯ ಚ ವಿಪರ್ಯಯಮ್ ॥೧೮॥

ದ್ರೋಣಸೂರ್ಯೋಪರಾಗಂ ಚ ಹೃದಯಂ ಮೇ ವಿದೀರ್ಯತೇ ॥೧೯॥

ಹೋರಿಯಂತೇ ಕುಣಿಯುತ್ತಿದ್ದ ದುರ್ಯೋಧನನ ಹಾಗೂ ದುಃಶಾಸನನ ಸಾವನ್ನು ಕೇಳಿ, ಹಾಗೂ ಕರ್ಣನ ಸಾವನ್ನು, ದ್ರೋಣನೆಂಬ ಸೂರ್ಯನ ಗ್ರಹಣವನ್ನು ಕೇಳಿ ನನ್ನ ಹೃದಯವು ಸೀಳಿಹೋಗಿದೆ.

ನ ಸ್ಮರಾಮ್ಯಾತ್ಮನಃ ಕಿಂಚಿತ್ ಪುರಾ ಸಂಜಯ ದುಷ್ಕೃತಮ್ ।
ಯಸ್ಯೈವಂ ಫಲಮದ್ಯೇಹ ಮಯಾ ಮೂಢೇನ ಭುಜ್ಯತೇ ॥೨೦॥

ಸಂಜಯ! ಮೂರ್ಖನಾದ ನಾನು ಈಗ ಯಾವುದರ ಫಲವನ್ನು ಉಣ್ಣುತ್ತಿರುವೆನೋ ಅದು ಈಗ ನನಗೆ ಹಿಂದೆ ಮಾಡಿದ ದುಷ್ಕರ್ಮಗಳು ಸ್ಮರಣೆಗೆ ಬಾರದು.

ನೂನಂ ಹ್ಯಪಕೃತಂ ಕಿಂಚಿನ್ಮಯಾ ಪೂರ್ವೇಷು ಜನ್ಮಸು ।
ಯೇನ ಮಾಂ ದುಃಖಭಾಗೇಷು ಧಾತಾ ಕರ್ಮಸು ಯುಕ್ತವಾನ್ ॥೨೧॥

ಹಿಂದಿನ ಜನ್ಮಗಳಲ್ಲಿ ನಾನು ನಿಶ್ಚಯವಾಗಿಯೂ ಸ್ವಲ್ಪವಾದರೂ ಅಪಕಾರವನ್ನು ಮಾಡಿರಬೇಕು, ಆದ್ದರಿಂದಲೇ ಬ್ರಹ್ಮನು ನನ್ನನ್ನು ದುಃಖಕಾರಕಗಳಾದ ಕರ್ಮಗಳಲ್ಲಿ ತೊಡಗಿಸಿರುವನು.

ಪರಿಣಾಮಶ್ಚ ವಯಸಃ ಸರ್ವಬಂಧುಕ್ಷಯಶ್ಚ ಮೇ ।
ಸುಹೃನ್ಮಿತ್ರವಿನಾಶಶ್ಚ ದೈವಯೋಗಾದುಪಾಗತಃ ॥೨೨॥

ಈ ಕೊನೆಯ ವಯಸ್ಸಿನಲ್ಲಿ ಎಲ್ಲ ಬಂಧುಗಳ ನಾಶ, ಆಪ್ತರ, ಮಿತ್ರರ ನಾಶ ದೈವಯೋಗದಿಂದ ಪ್ರಾಪ್ತವಾಗಿದೆ.

ಕೋ ನ್ವಸ್ತಿ ದುಃಖಿತತರೋ ಲೋಕೇ ಮತ್ತಃ ಪುಮಾನಿಹ ॥೨೩॥

ಈ ಲೋಕದಲ್ಲಿ ನನಗಿಂತಲೂ ದುಃಖಿತರಾದವರು ಮತ್ತೆ ಬೇರೆ ಯಾರಿರುವರು?

ತಂ ಮಾಮದ್ಯೈವ ಪಶ್ಯಂತು ಪಾಂಡವಾಃ ಸಂಶಿತವ್ರತಾಃ ।
ವಿಸೃತಂ ಬ್ರಹ್ಮಲೋಕಸ್ಯ ದೀರ್ಘಮಧ್ವಾನಮಾಸ್ಥಿತಮ್ ॥೨೪॥

ಬ್ರಹ್ಮಲೋಕದ ವಿಸೃತವಾದ ದೀರ್ಘವಾದ ಮಾರ್ಗವನ್ನು ಆಶ್ರಯಿಸಿರುವ ನನ್ನನ್ನು ವ್ರತಾನುಷ್ಠಾತೃಗಳಾದ ಪಾಂಡವರು ಇಂದೇ ಕಾಣಲಿ (ಇಂದೇ ಜೀವವನ್ನು ಪರಿತ್ಯಜಿಸುವೆ ಎಂದು ನುಡಿಯುತ್ತಿರುವನು ಎಂಬ ಭಾವ).

ವೈಶಂಪಾಯನಃ

ತಸ್ಯ ಲಾಲಪ್ಯಮಾನಸ್ಯ ಬಹುಶೋಕಂ ವಿಚಿನ್ವತಃ ।
ಶೋಕಾಪಹಂ ನರೇಂದ್ರಸ್ಯ ಸಂಜಯೋ ವಾಕ್ಯಮಬ್ರವೀತ್ ॥೨೫॥

ಭಾರೀ ಶೋಕದಿಂದ ಚಿಂತಿಸುತ್ತಿರುವ, ಮತ್ತೆ ಮತ್ತೆ ರೋದಿಸುತ್ತಿರುವ ಆ ಮನುಜರೋಡೆಯನಿಗೆ ಶೋಕವನ್ನು ಕಳೆಯುವ ಮಾತುಗಳನ್ನು ಸಂಜಯನು ನುಡಿದನು.

ಸಂಜಯಃ

ಶೋಕಂ ರಾಜನ್ ವ್ಯಪನುದ ಶ್ರುತಾಸ್ತೇ ವೇದನಿಶ್ಚಯಾಃ ।
ಶಾಸ್ತ್ರಾಗಮಾಶ್ಚ ವಿವಿಧಾ ವೃದ್ಧೇಭ್ಯೋ ನೃಪಸತ್ತಮ ॥೨೬॥

ಸಂಜಯ– ಮನುಜಶ್ರೇಷ್ಠನೇ! ನೀನು ಹಿರಿಯರಿಂದ ವಿವಿಧ ಶಾಸ್ತ್ರಗಳನ್ನು ಆಗಮಗಳನ್ನು ವೇದಗಳ ನಿರ್ಣಯಗಳನ್ನು ಕೇಳಿರುವಿ, ರಾಜನೆ! ಶೋಕವನ್ನು ತ್ಯಜಿಸು.

ಸೃಂಜಯೇ ಪುತ್ರಶೋಕಾರ್ತೇ ಯದೂಚುರ್ಮುನಯಃ ಪುರಾ ।
ತಥಾ ಯೌವನಕಂದರ್ಪಮಾಸ್ಥಿತೇ ತೇ ಸುತೇ ನೃಪ ॥೨೭॥

ನ ತ್ವಯಾ ಸುಹೃದಾಂ ವಾಕ್ಯಂ ಬ್ರುವತಾಮವಧಾರಿತಮ್ ।
ಸ್ವಾರ್ಥೋ ನ ಚ ಕೃತಃ ಕಶ್ಚಿಲ್ಲುಬ್ಧೇನ ಫಲಗೃಧ್ನುನಾ ॥೨೮॥

ಹಿಂದೆ ಸೃಂಜಯನು ಪುತ್ರಶೋಕದಿಂದ ಪರಿತಪಿಸಿದಾಗ ಮುನಿಗಳು ಯಾವುದನ್ನು ಹೇಳಿದರು ಎನ್ನುವುದನ್ನು ಸ್ಮರಿಸಿಕೊ, ಹಾಗೆಯೇ ರಾಜನೆ! ನಿನ್ನ ಮಗನು ಯೌವನದ ಮದದಿಂದಿರಲು, ಸ್ನೇಹಿತರು ಹೇಳಿದ ಮಾತನ್ನು ನೀನು ಗಮನಿಸಲಿಲ್ಲ, (ಸಂಪೂರ್ಣ ರಾಜ್ಯದ) ಲೋಭಿಯಾದ ಫಲದ ಲೋಭದಿಂದ ನಿನ್ನ ಶ್ರೇಯಸ್ಸನ್ನು ಮಾಡಿಕೊಳ್ಳಲಿಲ್ಲ.

ಅಸಿನೈವೈಕಧಾರೇಣ ಸ್ವಬುದ್ಧ್ಯಾ ಭುವಿ ಚೇಷ್ಟಿತಮ್ ।
ಪ್ರಾಯಶೋ ವೃತ್ತಸಂಪನ್ನಾಃ ಸತತಂ ಪರ್ಯುಪಾಸಿತಾಃ ॥೨೯॥

(ನಿನ್ನ ಪುತ್ರನು) ಒಂದು ಅಲುಗಿನ ಕತ್ತಿಯಂತೆ ಕೇವಲ ತನ್ನ ಬುದ್ಧಿಯಿಂದಲೇ ನಿರ್ಣಯಿಸಿ ವ್ಯವಹರಿಸುತ್ತಿದ್ದನು, ಪ್ರಾಯಶಃ ನಿರಂತರ ದುರಾಚಾರಿಗಳೊಡನೆ ಬೆರೆಯುತ್ತಿದ್ದನು.

ತವ ದುಃಶಾಸನೋ ಮಂತ್ರೀ ರಾಧೇಯಶ್ಚ ದುರಾತ್ಮವಾನ್ ।
ಶಕುನಿಶ್ಚೈವ ದುಷ್ಟಾತ್ಮಾ ಚಿತ್ರಸೇನಶ್ಚ ದುರ್ಮತಿಃ ॥೩೦॥

ಅನಲ್ಪಂ ಯೇನ ವೈ ಸರ್ವಂ ಶಲ್ಯಭೂತಮಿದಂ ಜಗತ್ ॥೩೧॥

ನಿನ್ನ ಮಗ, ದುಶ್ಶಾಸನ, ದುಷ್ಟನಾದ ರಾಧೇಯ, ದುಷ್ಟನಾದ ಶಕುನಿ, ದುರ್ಬುದ್ಧಿಯ ಚಿತ್ರಸೇನ ಇವರೆಲ್ಲರೇ (ನಿನ್ನ ಮಗನಿಗೆ) ಮಂತ್ರಿಗಳು, ಇವರೆಲ್ಲರೂ ಸಾಮಾನ್ಯರಲ್ಲ, ಸಮಸ್ತ ಜಗಕೇ ಕಂಟಕಪ್ರಾಯರಾಗಿದ್ದರು.

ಕುರುವೃದ್ಧಸ್ಯ ಭೀಷ್ಮಸ್ಯ ಗಾಂಧಾರ್ಯಾ ವಿದುರಸ್ಯ ಚ ।
ದ್ರೋಣಸ್ಯ ಚ ಮಹಾರಾಜ ಕೃಪಸ್ಯ ಚ ಶರದ್ವತಃ ॥೩೨॥

ಕೃಷ್ಣಸ್ಯ ಚ ಮಹಾಬಾಹೋ ನಾರದಸ್ಯ ಚ ಧೀಮತಃ ।
ಋಷೀಣಾಂ ಚ ತಥಾಽನ್ಯೇಷಾಂ ವ್ಯಾಸಸ್ಯಾಮಿತತೇಜಸಃ ॥೩೩॥

ನ ಕೃತಂ ತೇನ ವಚನಂ ಪುತ್ರೇಣ ತವ ಭಾರತ ॥೩೪॥

ಭರತಕುಲೋತ್ಪನ್ನನೆ, ಮಹಾರಾಜನೆ! ಕುರುವೃದ್ಧನಾದ ಭೀಷ್ಮನ, ಗಾಂಧಾರಿಯ, ವಿದುರನ, ದ್ರೋಣಾಚಾರ್ಯರ, ಶರದ್ವತನ ಪುತ್ರನಾದ ಕೃಪನ, ನೀಳಬಾಹುವಾದ ಕೃಷ್ಣನ, ಧೀಮಂತರಾದ ನಾರದರ, ಹಾಗೆಯೇ ಬೇರೆ ಋಷಿಗಳ, ಅಮಿತತೇಜಸ್ವಿಯಾದ ವ್ಯಾಸರ ಮಾತುಗಳನ್ನು ನಿನ್ನ ಪುತ್ರನು ಆದರಿಸಲಿಲ್ಲ.

ನ ಧರ್ಮಃ ಸತ್ಕೃತಃ ಕಶ್ಚಿತ್ ನಿತ್ಯಂ ಯುದ್ಧಮಭೀಪ್ಸಯಾ ॥೩೫॥

ಯಾವುದೇ ಧರ್ಮಕಾರ್ಯವನ್ನು ಆತನು ಆದರಿಸಲಿಲ್ಲ, ನಿತ್ಯವೂ ಯುದ್ಧವನ್ನೇ ಬಯಸುತ್ತಿದ್ದ.

ಕ್ಷಪಿತಾಃ ಕ್ಷತ್ರಿಯಾಃ ಸರ್ವೇ ಶತ್ರೂಣಾಂ ವರ್ಧಿತಂ ಯಶಃ ।
ಮಧ್ಯಸ್ಥೋಽಪಿ ತ್ವಮಪ್ಯಾಸೀರ್ನ ಕ್ಷಮಂ ಕಿಂಚಿದುಕ್ತವಾನ್ ॥೩೬॥

ಎಲ್ಲ ಕ್ಷತ್ರಿಯರನ್ನು ನಾಶಗೊಳಿಸಿದನು, ಶತ್ರುಗಳ ಕೀರ್ತಿಯನ್ನು ಬೆಳೆಸಿದನು, ಮಧ್ಯಸ್ಥನಾಗಿದ್ದ ನೀನಾದರೋ ಶಾಂತಿಯ ಬಗ್ಗೆ ಏನೂ ಹೇಳಲಿಲ್ಲ.

ದುರ್ಧರೇಣ ತ್ವಯಾ ಭಾರಃ ತುಲಯಾ ನ ಸಮೋ ಧೃತಃ ।
ಆದಾವೇವ ಮನುಷ್ಯೇಣ ವರ್ತಿತವ್ಯಂ ಯಥಾಕ್ರಮಮ್ ॥೩೭॥

ಯಥಾ ನಾತೀತಮರ್ಥಂ ವೈ ಪಶ್ಚಾತ್ ತಾಪೇನ ಯುಜ್ಯತೇ ।
ಪುತ್ರಗೃದ್ಧ್ಯಾ ತ್ವಯಾ ರಾಜನ್ ಪ್ರಿಯಂ ತಸ್ಯ ಚಿಕೀರ್ಷಿತಮ್ ॥೩೮॥

ರಾಜನೆ! ಮಗನ ಮೇಲಿನ ಮೋಹದಿಂದ, ಮಗನಿಗೆ ಕುಶಿಯನ್ನು ಉಂಟುಮಾಡಬೇಕೆಂದು, ದುರ್ಧರನಾದ ನೀನು ತಕ್ಕಡಿಯನ್ನು ಸರಿಯಾಗಿ ತೂಗಲಿಲ್ಲ. ಮನುಷ್ಯನಾದವನು ಮೊದಲೇ ಸರಿಯಾದ ರೀತಿಯಲ್ಲಿ ವ್ಯವಹರಿಸುವುದು, ಮಾಡಿ ಮುಗಿಸಿದ ನಂತರದಲ್ಲಿ ಪರಿತಪಿಸುವಂತೆ ಇರಬಾರದು.

ಪಶ್ಚಾತ್ ತಾಪಮಿಮಂ ಪ್ರಾಪ್ತಂ ನ ತ್ವಂ ಶೋಚಿತುಮರ್ಹಸಿ ॥೩೯॥

ಗತಿಸಿದ ನಂತರದಲ್ಲಿ ನೀನು ದುಃಖಿಸುವುದು ಯೋಗ್ಯವಾಗದು.

ಮಧು ಯಃ ಕೇವಲಂ ದೃಷ್ಟ್ವಾ ಪ್ರಪಾತಂ ನಾನುಪಶ್ಯತಿ ।
ಸ ಭ್ರಷ್ಟೋ ಮಧುಲೋಭೇನ ಶೋಚತ್ಯೇವ ಯಥಾ ಭವಾನ್ ॥೪೦॥

ಕೇವಲ ಜೇನನ್ನು ಮಾತ್ರ ನೋಡಿ, ಸನಿಹದಲ್ಲಿರುವ ಪ್ರಪಾತವನ್ನು ಕಾಣದಿರುವವನು ಮಧುವಿನ ಲೋಭದಿಂದ ಹೇಗೆ ನಾಶವನ್ನು ಹೊಂದುವನೋ ಹಾಗೆಯೇ ನೀನೂ ಸಹ ದುಃಖಿಸುತ್ತಿರುವಿ.

ಅರ್ಥಂ ನ ಶೋಚನ್ ಪ್ರಾಪ್ನೋತಿ ನ ಶೋಚನ್ ವಿಂದತೇ ಸುಖಮ್ ।
ನ ಶೋಚನ್ ಶ್ರಿಯಮಾಪ್ನೋತಿ ನ ಶೋಚನ್ ವಿಂದತೇ ಜಯಮ್ ॥

ದುಃಖಿಸುತ್ತಿರುವವ ಅರ್ಥವನ್ನು ಹೊಂದಲಾರ, ದುಃಖಿಸುವವ ಸುಖವನ್ನು ಹೊಂದಲಾರ, ದುಃಖಿಸುತ್ತಾ ಇರುವವ ಐಶ್ವರ್ಯವನ್ನು ಹೊಂದಲಾರ, ದುಃಖಿಸುತ್ತಾ ಇರುವವ ಜಯವನ್ನು ಹೊಂದಲಾರ.

ಸ್ವಯಮುತ್ಪಾದಯಿತ್ವಾಽಗ್ನಿಂ ಪರೀತಸ್ತೇನ ಯೋಽಗ್ನಿನಾ ।
ದಹ್ಯಮಾನಃ ಪುನಸ್ತಾಪಂ ಭಜತೇ ನ ಸ ಪಂಡಿತಃ ॥೪೨॥

ತಾನೇ ಬೆಂಕಿಯನ್ನು ಬೆಳಗಿಸಿ, ಆ ಅಗ್ನಿಯು ತನ್ನ ಸುತ್ತಲೂ ಆವರಿಸಿದಾಗ, ದಹ್ಯನಾಗಿ ದುಃಖವನ್ನು ಹೊಂದುವ, ಆತನನ್ನು ತಿಳಿದವ ಎನ್ನಲಾರರು.

ತ್ವಯ್ಯೈವ ಸಸುತೇನಾಯಂ ವಾಕ್ಯವಾಯುಸಮೀರಿತಃ ।
ಲೋಭಾಜ್ಯೇನ ಚ ಸಂಯುಕ್ತೋ ಜ್ವಲಿತಃ ಪಾರ್ಥಪಾವಕಃ ॥೪೩॥

ಪುತ್ರಸಹಿತನಾದ ನೀನೇ ಕುಂತೀಪುತ್ರರೆಂಬ ಬೆಂಕಿಯನ್ನು ಬೆಳಗಿಸಿದಿ, (ನಿನ್ನ) ಲೋಭ ಎಂಬ ತುಪ್ಪದಿಂದ ಕೂಡಿದ ಆ ಬೆಂಕಿಯು (ಉದ್ವೇಗಕಾರಕವಾದ ನಿಮ್ಮ) ಮಾತುಗಳೆಂಬ ಗಾಳಿಯಿಂದ ಪ್ರವರ್ಧನವಾಯಿತು.

ತಸ್ಮಿನ್ ಸಮಿದ್ಧೇ ಪತಿತಾಃ ಶಲಭಾ ಇವ ತೇ ಸುತಾಃ ।
ತಾನ್ ವೈ ಶರಾಗ್ನಿನಿರ್ದಗ್ಧಾನ್ ನ ತ್ವಂ ಶೋಚಿತುಮರ್ಹಸಿ ॥೪೪॥

ಆ ಬೆಂಕಿಯಲ್ಲಿ ದೀಪದ ಹುಳುಗಳಂತೆ ನಿನ್ನ ಪುತ್ರರು ಬಿದ್ದರು. ಬಾಣವೆಂಬ ಬೆಂಕಿಯಿಂದ ದಹಿಸಿದ ಮಕ್ಕಳನ್ನು ಉದ್ದೇಶಿಸಿ ದುಃಖಿಸುವುದು ತರವಲ್ಲ.

ಯಚ್ಚಾಶ್ರುಪಾತಕಲಿಲಂ ವದನಂ ವಹಸೇ ನೃಪ ।
ಅಶಾಸ್ತ್ರದೃಷ್ಟಮೇತದ್ಧಿ ನ ಪ್ರಶಂಸಂತಿ ಪಂಡಿತಾಃ ॥೪೫॥

ರಾಜನೆ! ಕಣ್ಣೀರಿನಿಂದ ಕಲುಷಿತವಾದ ಮುಖವನ್ನು ಧರಿಸಿರುವಿ, ಇದು ಶಾಸ್ತ್ರಸಂಮತವಾದದ್ದಲ್ಲ, (ಈ ವರ್ತನೆಯನ್ನು) ತಿಳಿದವರು ಹೊಗಳಲಾರರು.

ವಿಷ್ವಲ್ಲಿಂಗಾ ಇವಾಗ್ನೇಸ್ತು ದಹಂತಿ ಕಿಲ ಮಾನವಾನ್ ।
ಜಹಿ ಮನ್ಯುಂ ಸ್ವಬುದ್ಧ್ಯಾ ವೈ ಧಾರಯಾತ್ಮಾನಮಾತ್ಮನಾ ॥೪೬॥

ಕೋಪವು ಮನುಷ್ಯನನ್ನು ಬೆಂಕಿಯ ಕಿಡಿಯಂತೆ ಸುಡುವುದು, ಆದ್ದರಿಂದ ಸಿಟ್ಟನ್ನು ಜಯಿಸು, ನಿನ್ನಿಂದಲೇ ನಿನ್ನ ಉದ್ಧಾರ ಮಾಡಿಕೊ.

ಏಷಾ ವೈ ಸರ್ವಸತ್ತ್ವಾನಾಂ ಲೋಕೇಶ್ವರ ಪರಾ ಗತಿಃ ॥೪೭॥

ಲೋಕದೊಡೆಯನೆ! ಎಲ್ಲ ಜೀವಿಗಳಿಗೂ ಇದೇ (ಸಾವೇ) ಮುಖ್ಯ ಗತಿ.

ವೈಶಂಪಾಯನಃ

ತಂ ಸಮಾಶ್ವಾಸಿತಂ ತೇನ ಸಂಜಯೇನ ಮಹಾತ್ಮನಾ ।
ವಿದುರೋ ಭೂಯ ಏವಾಹ ಬುದ್ಧಿಪೂರ್ವಂ ಪರಂತಪ ॥೪೮॥

ವೈಶಂಪಾಯನ– ಆ ಸಂಜಯನೆಂಬ ಮಹಾಮಹಿಮನು ಸಮಾಧಾನ ಮಾಡಿದನು, ಶತ್ರುಗಳಿಗೆ ತಾಪಕನೆ! ವಿವೇಕಪೂರ್ವಕವಾಗಿ ವಿದುರನು ಅನಂತರದಲ್ಲಿ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಧೃತರಾಷ್ಟ್ರವಿಶೋಕೋ ನಾಮ ಪ್ರಥಮೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ವಿದುರನು ಶಾಸ್ತ್ರಾರ್ಥವಿಷಯವನ್ನು ಧೃತರಾಷ್ಟ್ರನಿಗೆ ತಿಳಿಸಲು ದುಃಖವು ಶಮನವಾಗುವುದು.

ವೈಶಂಪಾಯನಃ

ತತೋಽಮೃತರಸೈರ್ವಾಕ್ಯೈರ್ಹ್ಲಾದಯನ್ ಪುರುಷರ್ಷಭಮ್ ।
ವೈಚಿತ್ರವೀರ್ಯಂ ವಿದುರೋ ಯದುವಾಚ ನಿಬೋಧ ತತ್ ॥೧॥

ವೈಶಂಪಾಯನ– ಅನಂತರದಲ್ಲಿ ವಿದುರನು ವಿಚಿತ್ರವೀರ್ಯನ ಪುತ್ರನಾದ ಪುರುಷಶ್ರೇಷ್ಠನನ್ನು ಉದ್ದೇಶಿಸಿ ಅಮೃತಸದೃಶವಾದ ವಾಕ್ಯಗಳಿಂದ ಸಂತಸಗೊಳಿಸುತ್ತಾ ಏನನ್ನು ಹೇಳಿದನೋ ಅದನ್ನು ತಿಳಿಯುವವನಾಗು.

ವಿದುರಃ

ಉತ್ತಿಷ್ಠ ರಾಜನ್ ಕಿಂ ಶೇಷೇ ಧಾರಯಾತ್ಮಾನಮಾತ್ಮನಾ ।
ಏಷಾ ವೈ ಸರ್ವಸತ್ತ್ವಾನಾಂ ಲೋಕೇಶ್ವರ ಪರಾ ಗತಿಃ ॥೨॥

ವಿದುರ– ರಾಜನೆ! ಮೇಲೇಳು, ಏಕೆ ಮಲಗಿರುವಿ? ಬುದ್ಧಿಯಿಂದ ಮನಸ್ಸನ್ನು ನಿಗ್ರಹಿಸು. ಲೋಕದೊಡೆಯ! ಎಲ್ಲ ಪ್ರಾಣಿಗಳಿಗೂ ಇದುವೇ (ಸಾವೇ) ಕೊನೆಯ ಗತಿ.

ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಚ ಜೀವಿತಮ್ ॥೩॥

ಸಂಪಾದಿಸಿದ ಎಲ್ಲ ಸಂಪತ್ತು ನಾಶದಲ್ಲಿಯೇ ಅಂತ್ಯ ಕಾಣುವುದು, ಎಲ್ಲ ಉನ್ನತಿಯೂ ಸಹ ಪತನದಲ್ಲಿಯೇ ಅಂತ್ಯ ಕಾಣುವುದು, ಎಲ್ಲ ಕೂಡುವಿಕೆಯು ವಿಯೋಗದಲ್ಲಿಯೇ ಕೊನೆಗಾಣುವುದು, ಹಾಗೆ ಜೀವಿಕೆಯು ಮರಣದಿಂದ ಕೊನೆಗೊಳ್ಳುವುದು.

ಯಥಾ ಶೂರಂ ಚ ಭೀರುಂ ಚ ಯಮಃ ಕರ್ಷತಿ ಭಾರತ ।
ತತ್ ಕಿಂ ನ ಯೋತ್ಸ್ಯಂತಿ ಹಿ ತೇ ಕ್ಷತ್ರಿಯಾಃ ಕ್ಷತ್ರಿಯರ್ಷಭ ॥೪॥

ಭರತಕುಲೋತ್ಪನ್ನನೆ! ಯಮನು ಶೂರನನ್ನು ಹೇಡಿಯನ್ನೂ ಸೆಳೆದೊಯ್ಯುವನು. ಕ್ಷತ್ರಿಯಶ್ರೇಷ್ಠನೆ! (ಆದರೆ) ಆ ಕ್ಷತ್ರಿಯರು ಯುದ್ಧವನ್ನು ಮಾಡದಿರುವರೆ?

ಅಯುಧ್ಯಮಾನೋ ಮ್ರಿಯತೇ ಯುಧ್ಯಮಾನಶ್ಚ ಜೀವತಿ ।
ಕಾಲಂ ಪ್ರಾಪ್ಯ ಮಹಾರಾಜ ನ ಕಶ್ಚಿದತಿವರ್ತತೇ ॥೫॥

ಮಹಾರಾಜ! ಯುದ್ಧಮಾಡದವನು ಸಾವನ್ನು ಹೊಂದುವನು, ಮತ್ತೆ ಕೆಲವರು ಯುದ್ಧಮಾಡಿದರೂ ಜೀವಿತದಿಂದಿರುವರು, (ಅರ್ಘ್ಯ) ಕಾಲವನ್ನು ಹೊಂದಿದ್ದು, ಯಾರೂ (ಸಾವನ್ನು) ಅತಿಕ್ರಮಿಸಲಾರರು.

ಅಭಾವಾದೀನಿ ಭೂತಾನಿ ಭಾವಮಧ್ಯಾನಿ ಭಾರತ ।
ಅಭಾವನಿಧನಾನ್ಯೇವ ತತ್ರ ಕಾ ಪರಿದೇವನಾ ॥೬॥

ಭರತಕುಲೋತ್ಪನ್ನನೆ! ಎಲ್ಲ ಜೀವರು ಹುಟ್ಟುವ ಮೊದಲು ಕಾಣರು, ಮಧ್ಯದಲ್ಲಿ(ಜನ್ಮವನ್ನು ತಳಿದಾಗ) ಕಾಣುವವರು, ನಿಧನಾನಂತರ ಮತ್ತೆ ಕಾಣರು, ಈ ವಿಷಯದಲ್ಲಿ ದುಃಖಕ್ಕೆ ಎಲ್ಲಿ ಎಡೆ?

ವ್ಯಾಖ್ಯಾನ ವಿಶೇಷ– ಈ ಶ್ಲೋಕದಲ್ಲಿನ ಮೊದಲ ಅಭಾವ ಶಬ್ದಕ್ಕೆ ಪ್ರಾಗಭಾವ ಎಂದು, ನಂತರದ ಅಭಾವ ಶಬ್ದಕ್ಕೆ ಪ್ರಧ್ವಂಸಾಭಾವ ಎಂದು ಅರ್ಥೈಸಲಾಗಿದೆ. ಜೀವಿಯು ಹುಟ್ಟುವಮೊದಲು ಆತನ ಪ್ರಾಗಭಾವ, ಆ ಅವಸ್ಥೆಯಲ್ಲೂ ಆತನು ಕಾಣನು, ಮರಣಾನಂತರ ಪ್ರಧ್ವಂಸಾಭಾವಾವಸ್ಥೆಯಲ್ಲೂ ಜೀವನು ಕಾಣನು ಎಂದು ಭಾವ.

ನ ಶೋಚನ್ ಮೃತಿಮನ್ವೇತಿ ನ ಶೋಚನ್ ಮ್ರಿಯತೇ ನರಃ ।
ಏವಂ ಸಂಸಾಧಿತೇ ಲೋಕೇ ಕಿಮರ್ಥಮನುಶೋಚಸಿ ॥೭॥

ದುಃಖಿಸುವುದರಿಂದ ಮೃತನನ್ನು ಅನುಸರಿಸಿ ಹೋಗಲಾಗುವದಿಲ್ಲ, ಶೋಕಿಸುವುದರಿಂದಲೇ ಮರಣವೂ ಪ್ರಾಪ್ತವಾಗದು, ಈ ನಿಯಮವು ಲೋಕದಲ್ಲಿ ಸಿದ್ಧವಾಗಿದೆ, ಹೀಗಿರುವಾಗ ಏತಕ್ಕಾಗಿ ಶೋಕಿಸುವಿ?

ಕಾಲಃ ಕರ್ಷತಿ ಭೂತಾನಿ ಸರ್ವಾಣಿ ವಿವಿಧಾನ್ಯುತ ॥೮॥

ಯಥಾ ವಾಯುಸ್ತೃಣಾಗ್ರಾಣಿ ಸಂವರ್ತಯತಿ ಸರ್ವಶಃ ।
ತಥಾ ಕಾಲವಶಂ ಯಾಂತಿ ಭೂತಾನಿ ಭರತರ್ಷಭ ॥೯॥

ಭರತಕುಲದ ಹಿರಿಯನೆ! ಎಲ್ಲವಿಧವಾದ ಜೀವರನ್ನು ಕಾಲನು ಸೆಳೆಯುವನು, ಹೇಗೆ ವಾಯುವು ಹುಲ್ಲಿನ ತುದಿಭಾಗವನ್ನು ಎಲ್ಲೆಡೆಗೆ ಸುತ್ತಿಸುವುದೋ, ಹಾಗೆಯೇ ಪ್ರಾಣಿಗಳು ಕಾಲದ ಅಧೀನವಾಗಿವೆ.

ಏಕಸಾರ್ಥಪ್ರಯಾತಾನಾಂ ಸರ್ವೇಷಾಂ ತತ್ರ ಗಾಮಿನಾಮ್ ।
ಯಸ್ಯ ಕಾಲಃ ಪ್ರಯಾತ್ಯಗ್ರೇ ತತ್ರ ಕಾ ಪರಿದೇವನಾ ॥೧೦॥

ಒಂದೇ ಯಾತ್ರೆಯಲ್ಲಿ ಹೊರಟಿರುವ ಎಲ್ಲರೂ ಅಲ್ಲಿಗೇ ಹೋಗುವರು, ಆದರೆ ಯಾರ ಕಾಲವು ಪ್ರಾಪ್ತವಾಗಿದೆಯೋ ಆತನು ಮೊದಲು ಹೋಗುವನು (ಉಳಿದವರು ಅವರವರ ಕಾಲವು ಪ್ರಾಪ್ತವಾದಾಗ ಸಾಗುವರು). ಅಲ್ಲಿ ದುಃಖಿಸಲು ಕಾರಣವೇನು?

ನ ಚಾಪ್ಯೇತಾನ್ ಮೃತಾನ್ ಯುದ್ಧೇ ರಾಜನ್ ಶೋಚಿತುಮರ್ಹಸಿ ।
ಪ್ರಮಾಣಂ ಯದಿ ಶಾಸ್ತ್ರಾಣಿ ಗತಾಸ್ತೇ ಪರಮಾಂ ಗತಿಮ್ ॥೧೧॥

ರಾಜನೆ! ಯುದ್ಧದಲ್ಲಿ ಮೃತರಾದ ಇವರನ್ನು ಉದ್ದೇಶಿಸಿ ದುಃಖಿಸುವುದು ತರವಲ್ಲ, ಶಾಸ್ತ್ರವು ಪ್ರಮಾಣ ಎಂದಾದಲ್ಲಿ ಅವರು ಶ್ರೇಷ್ಠಗತಿಯನ್ನು ಹೊಂದಿರುವರು.

ಸರ್ವೇ ಸ್ವಾಧ್ಯಾಯವಂತೋ ಹಿ ಸರ್ವೇ ಚ ಚರಿತವ್ರತಾಃ ।
ಸರ್ವೇ ಚಾಭಿಮುಖಾಃ ಕ್ಷೀಣಾಃ ತತ್ರ ಕಾ ಪರಿದೇವನಾ ॥೧೨॥

ಎಲ್ಲರೂ ತಮ್ಮ ತಮ್ಮ ಶಾಖೆಗಳನ್ನು ಅಭ್ಯಸಿಸಿದವರು, ಎಲ್ಲರೂ ವ್ರತಗಳನ್ನು ಆಚರಿಸಿದವರು, ಎಲ್ಲರೂ (ಯುದ್ಧದಲ್ಲಿ ಶತ್ರುವಿನ) ಅಭಿಮುಖದಲ್ಲಿಯೇ ಮರಣವನ್ನು ಹೊಂದಿರುವರು, ಇಲ್ಲಿ ದುಃಖಿಸಲು ಕಾರಣವೇನು?

ಅದರ್ಶನಾದಾಪತಿತಾಃ ಪುನಶ್ಚಾದರ್ಶನಂ ಗತಾಃ ।
ನ ತೇ ತವ ನ ತೇಷಾಂ ತ್ವಂ ತತ್ರ ಕಾ ಪರಿದೇವನಾ ॥೧೩॥

ಕಾಣದ ಸ್ಥಳದಿಂದ (ತಾಯಿಯ ಗರ್ಭವನ್ನು) ಸೇರಿದರು, ಪುನಃ ಈಗ ಕಾಣದಂತೆ ಹೋದರೂ ಅವರು ನಿನ್ನವರಲ್ಲ, ನೀನು ಅವರವನಲ್ಲ, ಆದ್ದರಿಂದ ದುಃಖಿಸಲು ಕಾರಣವೇನು?

ಹತೋ ಹಿ ಲಭತೇ ಸ್ವರ್ಗಂ ಜಿತ್ವಾ ವಾ ಲಭತೇ ಯಶಃ ।
ಉಭಯಂ ನೋ ಬಹುಗುಣಂ ನಾಸ್ತಿ ನಿಷ್ಫಲತಾ ರಣೇ ॥೧೪॥

ಮರಣವನ್ನು ಹೊಂದಿದಲ್ಲಿ ಸ್ವರ್ಗವನ್ನು ಸೇರುವನು ಅಥವಾ (ಶತ್ರುವನ್ನು) ಗೆದ್ದಲ್ಲಿ ಕೀರ್ತಿಯನ್ನು ಹೊಂದುವನು, ನಮಗೆ ಎರಡೂ ಲಾಭದಾಯಕವೇ ಆಗಿದೆ, ರಣರಂಗವು ಹೇಗೂ ನಿಷ್ಫಲವಲ್ಲ.

ತೇಷಾಂ ಕಾಮದುಘಾನ್ ಲೋಕಾನ್ ಇಂದ್ರಃ ಸಂಕಲ್ಪಯಿಷ್ಯತಿ ।
ಇಂದ್ರಸ್ಯಾತಿಥಯೋ ಹ್ಯೇತೇ ಭವಂತಿ ಪುರುಷರ್ಷಭ ॥೧೫॥

ಪುರುಷಶ್ರೇಷ್ಠನೆ! ಅವರುಗಳಿಗೆ ಇಂದ್ರನು ಅಪೇಕ್ಷಿತವನ್ನು ನೀಡುವ ಲೋಕಗಳನ್ನು (ನೀಡಲು) ಸಂಕಲ್ಪಿಸುವನು, ಇವರು ಇಂದ್ರನ ಅತಿಥಿಗಳಾಗಿರುವರು.

ನ ಯಜ್ಞೈರ್ದಕ್ಷಿಣಾವದ್ಭಿರ್ನ ತಪೋಭಿರ್ನ ವಿದ್ಯಯಾ ।
ಸ್ವರ್ಗಂ ಯಾತಿ ತಥಾ ಮರ್ತ್ಯೋ ಯಥಾ ಶೂರೋ ರಣೇ ಹತಃ ॥

ಶೂರನು ರಣರಂಗದಲ್ಲಿ ಮೃತನಾದಲ್ಲಿ ಎಂತಹ ಸ್ವರ್ಗವನ್ನು ಹೊಂದುವನೋ ಅಂತಹ ಸ್ಥಾನವನ್ನು ಹೊಂದಲು ಯಜ್ಞಗಳಿಂದ ಶಕ್ಯವಿಲ್ಲ, ದಕ್ಷಿಣೆಯನ್ನು ನೀಡುವುದರಿಂದ ಶಕ್ಯವಿಲ್ಲ, ತಪಸ್ಸಿನಿಂದ ಶಕ್ಯವಿಲ್ಲ, ವಿದ್ಯೆಯಿಂದಲೂ ಶಕ್ಯವಿಲ್ಲ.

ಶರೀರಾಗ್ನಿಷು ತೇ ಶೂರಾ ಜುಹುವುರ್ವೈ ಶರಾಹುತೀಃ ।
ಹೂಯಮಾನಾನ್ ಶರಾಂಶ್ಚೈವ ಸೇಹುಸ್ತೇಜಸ್ವಿನೋ ಮಿಥಃ ॥೧೭॥

ತೇಜಸ್ವಿಗಳಾದ ಆ ಶೂರರು ಅನ್ಯೋನ್ಯವಾಗಿ ಶರೀರ ಎಂಬ ಅಗ್ನಿಯಲ್ಲಿ ಬಾಣಗಳೆಂಬ ಆಹುತಿಗಳನ್ನು ಹೋಮಿಸುವರು, ಹೋಮಿಸುವ (ಪ್ರಹರಿಸುವ) ಬಾಣಗಳನ್ನು ಸಹಿಸಿಕೊಳ್ಳುವರು.

ಏತದ್ರಾಜಂಸ್ತವಾऽಚಕ್ಷೇ ಸ್ವರ್ಗಂ ಪಂಥಾನಮುತ್ತಮಮ್ ।
ನ ಯುದ್ಧಾದಧಿಕಂ ಕಿಂಚಿತ್ ಕ್ಷತ್ರಿಯಸ್ಯೇಹ ವಿದ್ಯತೇ ॥೧೮॥

ರಾಜನೆ! ನಿನಗೆ ಇದನ್ನು ಹೇಳುವೆನು (ಕೇಳು), ಕ್ಷತ್ರಿಯನಿಗೆ ಈ ಲೋಕದಲ್ಲಿ ಯುದ್ಧಕ್ಕಿಂತ ಉತ್ತಮವಾದ ಸ್ವರ್ಗಮಾರ್ಗವು ಮತ್ತೊಂದು ಇಲ್ಲ.

ಕ್ಷತ್ರಿಯಾಸ್ತೇ ಮಹಾತ್ಮಾನಃ ಶೂರಾಃ ಸಮಿತಿಶೋಭನಾಃ ।
ಅಮೃತಂ ಪರಮಂ ಪ್ರಾಪ್ತಾ ನ ಶೋಚ್ಯಾಃ ಸರ್ವ ಏವ ಹಿ ॥೧೯॥

ಮಹಾಮಹಿಮರು ಶೂರರು ಸಭೆಗೆ ಭೂಷಣರು, ಆ ಕ್ಷತ್ರಿಯರು ಉತ್ತಮವಾದ ಅಮೃತವನ್ನು (ಸದ್ಗತಿಯನ್ನು) ಹೊಂದಿದರು, ಅವರು ಯಾರೂ ಶೋಚ್ಯರಲ್ಲ.

ಆತ್ಮಾನಮಾತ್ಮನಾऽऽಶ್ವಾಸ್ಯ ಮಾ ಶುಚಃ ಪುರುಷರ್ಷಭ ।
ನಾದ್ಯ ಶೋಕಾಭಿಭೂತಸ್ತ್ವಂ ಕಾರ್ಯಮುತ್ಸೃಷ್ಟುಮರ್ಹಸಿ ॥೨೦॥

ಪುರುಷಶ್ರೇಷ್ಠನೆ! ನಿನ್ನಿಂದಲೇ ನಿನ್ನನ್ನು ಸಮಾಧಾನಿಸಿಕೊಂಡು, ದುಃಖಿಸದಿರು. ಈಗ ಶೋಕಾಭಿಭೂತನಾಗಿ ನೀನು ಕರ್ತವ್ಯಕರ್ಮವನ್ನು ತ್ಯಜಿಸುವುದು ಯೋಗ್ಯವಲ್ಲ.

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಸಂಸಾರೇಷ್ವನುಭೂತಾನಿ ಕಸ್ಯ ತೇ ಕಸ್ಯ ವಾ ವಯಮ್ ॥೨೧॥

ಸಂಸಾರದಲ್ಲಿ ಸಾವಿರಾರು ತಂದೆ-ತಾಯಿಗಳನ್ನು, ನೂರಾರು ಮಕ್ಕಳನ್ನು ಹೆಂಡಂದಿರನ್ನು ಅನುಭವಿಸಿರುವೆವು, ಅವರು ಯಾರಿಗೆ ಸಂಬಂಧಿಸಿದವರು? ನಾವು ಯಾರಿಗೆ ಸಂಬಂಧಿಸಿರುವೆವು? (ಈ ಸಂಸಾರದ ಪ್ರವಾಹದಲ್ಲಿ ಸಾವಿರಾರು ಜೀವಿಗಳೊಡನೆ ಬೆರೆಯುವೆವು, ತೊರೆಯುವೆವು. ತೊರೆಯುವ ತನಕ ಮಾತ್ರ ಆ

ಸಂಬಂಧಗಳು. ನಂತರದಲ್ಲಿ ಆ ದೇಹದೊಡನೆ ಆ ಸಂಬಂಧವೂ ನಷ್ಟವಾಗುವುದು, ಅದರ ಬಗ್ಗೆ ಚಿಂತಿಸಿ ಫಲವಿಲ್ಲ ಎಂದು ಭಾವ.)

ಶೋಕಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥೨೨॥

ಶೋಕಕ್ಕೆ ಸಾವಿರಾರು ಕಾರಣಗಳು, ಭಯಕ್ಕೆ ನೂರಾರು ಕಾರಣಗಳು ಪ್ರತಿನಿತ್ಯವೂ ಮೂಢನಿಗೆ ಪ್ರಾಪ್ತವಾಗುವವು, ಪಂಡಿತನಿಗೆ ಅಲ್ಲ.

ನ ಕಾಲಸ್ಯ ಪ್ರಿಯಃ ಕಶ್ಚಿನ್ನ ದ್ವೇಷ್ಯಃ ಕುರುಸತ್ತಮ ।
ನ ಮಧ್ಯಸ್ಥಃ ಕ್ವಚಿತ್ ಕಾಲಃ ಸರ್ವಂ ಕಾಲಃ ಪ್ರಕರ್ಷತಿ ॥೨೩॥

ಯಾವನೂ ಕಾಲಕ್ಕೆ ಪ್ರಿಯನಾದವನು ಇಲ್ಲ, ಯಾವನೂ ಕಾಲಕ್ಕೆ ದ್ವೇಷಿಯಾದವನೂ ಇಲ್ಲ, ಯಾರಿಗೂ ಕಾಲವು ಮಧ್ಯಸ್ಥನೂ ಅಲ್ಲ, ಎಲ್ಲರನ್ನೂ ಕಾಲನು (ಯೋಗ್ಯ ಕಾಲದಲ್ಲಿ) ಸೆಳೆಯುವನು.

ಕಾಲಃ ಪಚತಿ ಭೂತಾನಿ ಕಾಲಃ ಸಂಹರತೇ ಪ್ರಜಾಃ ।
ಕಾಲಃ ಸುಪ್ತೇಷು ಜಾಗರ್ತಿ ಕಾಲೋ ಹಿ ದುರತಿಕ್ರಮಃ ॥೨೪॥

ಪ್ರಾಣಿಗಳನ್ನು ಕಾಲನು ಪಕ್ವಗೊಳಿಸುವನು, ಎಲ್ಲ ಪ್ರಜೆಗಳನ್ನು ಕಾಲನೇ ಸಂಹರಿಸುವನು, (ಎಲ್ಲರೂ) ಮಲಗಿದಾಗ ಎಚ್ಚರದಿಂದಿರುವನು, ಕಾಲವನ್ನು ಯಾರೂ ಅತಿಕ್ರಮಿಸಲಾರರು.

ಅನಿತ್ಯಂ ಜೀವಿತಂ ರೂಪಂ ಯೌವನಂ ದ್ರವ್ಯಸಂಚಯಃ ।
ಆರೋಗ್ಯಂ ಪ್ರಿಯಸಂವಾದೋ ಗೃಧ್ಯೇನ್ನ ಹ್ಯೇಷು ಪಂಡಿತಃ ॥೨೫॥

ಜೀವಿತ, ರೂಪ, ಯೌವನ, ಹಣದ ಸಂಗ್ರಹ, ಆರೋಗ್ಯ, ಪ್ರಿಯರ ಸಂಗ (ಇವೆಲ್ಲವೂ) ಅನಿತ್ಯ. (ಆದ್ದರಿಂದ) ಪಂಡಿತನು ಇವುಗಳನ್ನು ಅಪೇಕ್ಷಿಸುವುದಿಲ್ಲ.

ನ ಹಿ ಜಾನಪದಂ ದುಃಖಮೇಕಃ ಶೋಚಿತುಮರ್ಹಸಿ ।
ಅಪ್ಯಭಾವೇನ ಯುಜ್ಯೇತ ತಚ್ಚಾಸ್ಯ ನ ನಿವರ್ತತೇ ॥೨೬॥

ಇಡೀ ದೇಶಕ್ಕೆ ಒದಗಿದ ದುಃಖವನ್ನು ನಿನ್ನೋರ್ವನ ದುಃಖವೆಂದು ದುಃಖಿಸುವುದು ತರವಲ್ಲ, ಸಾಯುವತನಕ ದುಃಖಿಸಿದರೂ ಆ ದುಃಖವು ನಿನ್ನನ್ನು ಬಿಡುವುದಿಲ್ಲ.

ಅಶೋಚನ್ ಪ್ರತಿಕುರ್ವೀತ ಯದಿ ಪಶ್ಯೇತ್ ಪರಾಕ್ರಮಮ್ ।
ಭೈಷಜ್ಯಮೇತದ್ ದುಃಖಸ್ಯ ಯದೇವಂ ನಾನುಚಿಂತಯೇತ್ ॥೨೭॥

ಒಂದು ವೇಳೆ ಪರಾಕ್ರಮವು ನಿನ್ನಲ್ಲಿ ಇರುವುದಾದಲ್ಲಿ, ದುಃಖಿಸದೇ ಪ್ರತೀಕಾರವನ್ನು ಮಾಡುವುದು, ದುಃಖಕ್ಕೆ ಇದುವೇ ಔಷಧ, ಈರೀತಿಯಲ್ಲಿ ಚಿಂತಿಸುವುದಲ್ಲ.

ಚಿಂತ್ಯಮಾನಂ ಹಿ ನಾಪೈತಿ ಭೂಯಶ್ಚಾಪಿ ವಿವರ್ಧತೇ ।
ಅನಿಷ್ಟಸಂಪ್ರಯೋಗಾಚ್ಚ ವಿಪ್ರಯೋಗಾತ್ ಪ್ರಿಯಸ್ಯ ಚ ॥೨೮॥

ಅನಪೇಕ್ಷಿತವಾದದ್ದು ಪ್ರಾಪ್ತಿಯಾಗಿರುವುದರಿಂದ, ಅಪೇಕ್ಷಿತವಾದದ್ದರ ವಿಯೋಗವೂ ಆಗಿರುವುದರಿಂದ ಚಿಂತಿಸುತ್ತಿರುವವನ ದುಃಖವು ಶಮನವಾಗುವುದಿಲ್ಲ, ಮತ್ತೂ ಹೆಚ್ಚುವುದು.

ಅಲಬ್ಧಲಾಭಾಃ ಕ್ಲಿಶ್ಯಂತೇ ಲಬ್ಧಲಾಭಾನುಪಾತಿನಃ ॥೨೯॥

ಸಿಗಬೇಕಾದದ್ದು ಸಿಗದಿದ್ದಲ್ಲಿ ದುಃಖಿಸುವರು, ಅಪೇಕ್ಷಿತವಾದದ್ದನ್ನು ಹೊಂದಿದವರು ಹೆಚ್ಚಿನ ಪ್ರಾಪ್ತಿಯನ್ನು ಬಯಸುವರು.

ಮನುಷ್ಯಾಃ ಮಾನಸೈರ್ದುಃಖೈರ್ಯುಜ್ಯಂತೇ ಯೇಽಲ್ಪಬುದ್ಧಯಃ ।
ನಾರ್ಥೋ ನ ಧರ್ಮೋ ನ ಸುಖಂ ಯದೇತದನುಶೋಚಸಿ ॥೩೦॥

ಯಾವನು ಅಲ್ಪಬುದ್ಧಿಯ ಮನುಜನೊ ಆತನು ಮನದಲ್ಲಿಯೇ ದುಃಖಿಸುವನು, ನೀನು ಯಾವುದನ್ನು ಉದ್ದೇಶಿಸಿ ದುಃಖಿಸುತ್ತಿರುವಿಯೋ ಅದು ಯಾವ ಪ್ರಯೋಜನಕಾರಕವೂ ಅಲ್ಲ, ಧರ್ಮಕಾರಕವೂ ಅಲ್ಲ, ಸುಖಕಾರಕವೂ ಅಲ್ಲ.

ತಚ್ಚ ನಾಪ್ನೋತಿ ಕಾರ್ಯಾರ್ಥಂ ತ್ರಿವರ್ಗಾಚ್ಚೈವ ಭ್ರಶ್ಯತೇ ॥೩೧॥

ಆ ದುಃಖವು ಯಾವ ಪ್ರಯೋಜನವನ್ನೂ ಹೊಂದಿಸುವುದಿಲ್ಲ, ತ್ರಿವರ್ಗದಿಂದಲೂ (ಧರ್ಮ-ಅರ್ಥ-ಕಾಮಗಳಿಂದಲೂ) ದೂರಗೊಳಿಸುವುದು.

ಅನ್ಯೋನ್ಯಬಾಧನಾವಸ್ಥಾಂ ಪ್ರಾಪ್ಯ ವೈಷಯಿಕಾ ನರಾಃ ।
ಅಸಂತುಷ್ಟಾಃ ಪ್ರಮುಹ್ಯಂತಿ ಸಂತೋಷಂ ಯಾಂತಿ ಪಂಡಿತಾಃ ॥೩೨॥

ಪರಸ್ಪರ ಕಿತ್ತಾಡುವ ಸಂದರ್ಭವನ್ನು ಹೊಂದಿ ವಿಷಯಾಸಕ್ತ ಮನುಜರು ಅಸಹನೆಯಿಂದ ಮೋಹಕ್ಕೆ ಒಳಗಾಗುವರು, ಆದರೆ ಜ್ಞಾನಿಗಳು ಸಂತೋಷಗೊಳ್ಳುವರು (ಲಾಭಾಲಾಭಾದಿಗಳನ್ನು ಸಮನಾಗಿ ಕಾಣುವ ಅವರು ಹಿಗ್ಗಲಾರರು, ಕುಗ್ಗಲಾರರು ಎಂದು ಭಾವ).

ಪ್ರಜ್ಞಯಾ ಮಾನಸಂ ದುಃಖಂ ಹನ್ಯಾಚ್ಛಾರೀರಮೌಷಧೈಃ ।
ಏತಜ್ಜ್ಞಾನಸ್ಯ ಸಾಮರ್ಥ್ಯಂ ನ ಬಾಲೈಃ ಸಮತಾಮಿಯಾತ್ ॥೩೩॥

ಬುದ್ಧಿಯಿಂದ ಮನದ ದುಃಖವನ್ನು, ಔಷಧದಿಂದ ಶರೀರದ ದುಃಖವನ್ನು ಪರಿಹರಿಸಿಕೊಳ್ಳಬೇಕು, ಇದು ಜ್ಞಾನದ ಸಾಮರ್ಥ್ಯ. (ಹಾಗೆ ಜೀವನವನ್ನು ನಿಯಂತ್ರಿಸದವನು) ಬಾಲಕರಿಗೆ (ಅಜ್ಞರಿಗೆ) ಸಮನಾಗುವನು, ನೀನು ಹಾಗಾಗದಿರು.

ಶಯಾನಂ ಚಾನುಶಯತಿ ತಿಷ್ಠಂತಂ ಚಾನುತಿಷ್ಠತಿ ।
ಅನುಧಾವತಿ ಧಾವಂತಂ ಕರ್ಮ ಪೂರ್ವಕೃತಂ ನರಮ್ ॥೩೪॥

ಮನುಜನು ಮಾಡಿದ ಪೂರ್ವಕರ್ಮವು ಮಲಗಿದ ಮನುಷ್ಯನನ್ನು ಅನುಸರಿಸಿ ಮಲಗುವುದು, ನಿಂತ ಮನುಷ್ಯನನ್ನು ಅನುಸರಿಸಿ ನಿಲ್ಲುವುದು, ಓಡುವ ಮನುಷ್ಯನನ್ನು ಅನುಸರಿಸಿ ಓಡುವುದು.

ಯಸ್ಯಾಂ ಯಸ್ಯಾಮವಸ್ಥಾಯಾಂ ಯತ್ ಕರೋತಿ ಶುಭಾಶುಭಮ್ ।
ತಸ್ಯಾಂ ತಸ್ಯಾಮವಸ್ಥಾಯಾಂ ತತ್ತತ್ ಫಲಮವಾಪ್ನುಯಾತ್ ॥೩೫॥

ಯಾವ ಯಾವ ಅವಸ್ಥೆಯಲ್ಲಿ ಶುಭಾಶುಭಕರವಾದ ಯಾವ ಕರ್ಮವನ್ನು ಮಾಡಿರುವನೋ, ಆ ಆ ಅವಸ್ಥೆಯಲ್ಲಿ ಆ ಆ ಫಲವನ್ನು ಹೊಂದುವನು.

ಯೇನ ಯೇನ ಶರೀರೇಣ ಯದ್ಯತ್ ಕರ್ಮ ಕರೋತಿ ಯಃ ।
ತೇನ ತೇನ ಶರೀರೇಣ ತತ್ಫಲಂ ಸಮುಪಾಶ್ನುತೇ ॥೩೬॥

ಯಾವ ಯಾವ ಅವಯವದಿಂದ ಯಾವ ಯಾವ ಕರ್ಮವನ್ನು ಮಾಡಿರುತ್ತಾನೊ, ಆ ಆ ಅವಯಗಳಿಂದ ಆ ಫಲವನ್ನು ಉಣ್ಣುವನು.

ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ।
ಆತ್ಮೈವ ಹ್ಯಾತ್ಮನಃ ಸಾಕ್ಷೀ ಕೃತಸ್ಯಾಪ್ಯಕೃತಸ್ಯ ಚ ॥೩೭॥

ತನಗೆ ತಾನೇ ಬಂಧು, ತನಗೆ ತಾನೇ ಶತ್ರು, ತಾನು ಮಾಡಿದ ಮಾಡದಿರದ ಕರ್ಮಗಳಿಗೆ ತನಗೆ ತಾನೇ ಸಾಕ್ಷಿ.

ಶುಭೇನ ಕರ್ಮಣಾ ಸೌಖ್ಯಂ ದುಃಖಂ ಪಾಪೇನ ಕರ್ಮಣಾ ।
ಕೃತಂ ಲಭೇತ ಸರ್ವತ್ರ ನಾಕೃತಂ ಎಂದತೇ ಕ್ವಚಿತ್ ॥೩೮॥

ಪುಣ್ಯಕರ್ಮದಿಂದ ಸುಖವನ್ನು, ಪಾಪಕರ್ಮದಿಂದ ದುಃಖವನ್ನು ಹೊಂದುವರು. ಎಂದೂ ಮಾಡಿದ ಕರ್ಮದ ಫಲವನ್ನು ಹೊಂದುವರು, ಮಾಡದ ಕರ್ಮದ ಫಲವನ್ನು ಹೊಂದಲಾರರು.

ನ ಹಿ ಜ್ಞಾನವಿರುದ್ಧೇಷು ಬಹುಪಾಪೇಷು ಕರ್ಮಸು ।
ಮೂಲಘಾತಿಷು ಸಜ್ಜಂತೆ ಬುದ್ಧಿಮಂತೋ ಭವದ್ವಿಧಾಃ ॥೩೯॥

ಜ್ಞಾನವಿರುದ್ಧವಾದ (ಆತ್ಮಸಾಕ್ಷಿಗೆ ವಿರುದ್ಧವಾದ), ತನಗೇ ಅನರ್ಥಕಾರಕವಾದ ಬಹು ಪಾಪಕರ್ಮಗಳಲ್ಲಿ ನಿನ್ನಂತಹ ಅರಿವು ಇರುವವರು ಪ್ರವೃತ್ತರಾಗರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಧೃತರಾಷ್ಟ್ರಶೋಕೋತ್ಪತ್ತಿರ್ನಾಮ ದ್ವಿತೀಯೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ದ್ವಿತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ವಿದುರನಿಂದ ಧೃತರಾಷ್ಟ್ರನಿಗೆ ಶೋಕಪರಿಹಾರಕ್ಕಾಗಿ ಶಾಸ್ತ್ರಾರ್ಥಕಥನ

ಧೃತರಾಷ್ಟ್ರಃ

ಸುಭಾಷಿತೈರ್ಮಹಾಪ್ರಾಜ್ಞ ಶೋಕೋ ಮೇऽಪಗತಃ ಪ್ರಭೋ ।
ಭೂಯ ಏವ ತು ವಾಕ್ಯಾನಿ ಶ್ರೋತುಮಿಚ್ಛಾಮಿ ತತ್ತ್ವತಃ ॥೧॥

ಧೃತರಾಷ್ಟ್ರ– ಮಹಾ ಮೇಧಾವಿಯೆ, ನಾಯಕನೆ! ಹಿತ ನುಡಿಗಳಿಂದ ನನ್ನ ಶೋಕವು ನಿರಸಿತವಾಯಿತು. ನಿಶ್ಚಿತವಾಗಿಯೂ ಇನ್ನೂ ಕೆಲವು ಹಿತನುಡಿಗಳನ್ನು ಕೇಳಲು ಬಯಸುವೆನು.

ಅನಿಷ್ಟಾನಾಂ ಚ ಸಂಸರ್ಗಾದ್ ಇಷ್ಟಾನಾಂ ಚ ನಿವರ್ತನಾತ್ ।
ಕಥಂ ವೈ ಮಾನಸಂ ದುಃಖಂ ವಿಪ್ರಯುಜ್ಯಂತಿ ಪಂಡಿತಾಃ ॥೨॥

ಅನಪೇಕ್ಷಿತರ ಸಂಪರ್ಕದಿಂದ , ಅಪೇಕ್ಷಿತರ ವಿಯೋಗದಿಂದ ಪಂಡಿತರು ಮಾನಸ ದುಃಖವನ್ನು ಹೇಗೆ ಪರಿಹರಿಸಿಕೊಳ್ಳುವರು?

ವಿದುರಃ

ಯತೋ ಯತೋ ಮನೋ ದುಃಖಾದ್ ಸುಖಾದ್ ವಾ ವಿಪ್ರಮುಚ್ಯತೇ ।
ತತಸ್ತತಃ ಶಮಂ ಲಬ್ಧ್ವಾ ಸುಗತಿಂ ವಿಂದತೇ ಬುಧಃ ॥೩॥

ವಿದುರ– ಯಾವ ಯಾವ ಸಾಧನಗಳಿಂದ ಸುಖ ಅಥವಾ ದುಃಖಗಳಿಂದ ಮನವು ಬಿಡುಗಡೆಯನ್ನು ಹೊಂದುವುದೋ, ಆ ಆ ಸಾಧನಗಳಿಂದ ಶಾಂತಿಯನ್ನು ಹೊಂದಿ, ಜ್ಞಾನಿಗಳು ಸದ್ಗತಿಯನ್ನು ಹೊಂದುವರು.

ಅಶಾಶ್ವತಮಿದಂ ಸರ್ವಂ ಚಿಂತ್ಯಮಾನಂ ನರರ್ಷಭ ।
ಕದಲೀಸನ್ನಿಭೋ ಲೋಕಃ ಸಾರೋ ಹ್ಯಸ್ಯ ನ ವಿದ್ಯತೇ ॥೪॥

ರಾಜಶ್ರೇಷ್ಠನೇ! ಇದೆಲ್ಲವು ಅಶಾಶ್ವತವಾದದ್ದು, ಈ ಲೋಕವು ಬಾಳೆಯ ಕಂಬದಂತೆ ಸಾರರಹಿತವಾದದ್ದು ಎಂದು ಜ್ಞಾನಿಗಳು ಆಲೋಚಿಸುವರು.

ಯದಾ ಪ್ರಾಜ್ಞಾಶ್ಚ ಮೂಢಾಶ್ಚ ಧನವಂತೋಽಥ ನಿರ್ಧನಾಃ ।
ಸರ್ವೇ ಪಿತೃವನಂ ಪ್ರಾಪ್ಯ ಸ್ವಪಂತಿ ವಿಗತಜ್ವರಾಃ ॥೫॥

ಪ್ರಾಜ್ಞರಾಗಲಿ, ಮೂರ್ಖರಾಗಲಿ, ಧನವಂತರಾಗಲಿ, ನಿರ್ಧನರಾಗಲಿ, ಎಲ್ಲರೂ ಯಾವಾಗ ಶ್ಮಶಾನವನ್ನು ಸೇರಿದಾಗ ವೈಷಮ್ಯದಿಂದ ದೂರರಾಗಿ (ನೆಲದಲ್ಲಿ) ಮಲಗುವರು.

ನಿರ್ಮಾಂಸೈರಸ್ಥಿಭೂಯಿಷ್ಠೈರ್ಗಾತ್ರೈಃ ಸ್ನಾಯುನಿಬಂಧಿಭಿಃ ।
ಕಿಂ ವಿಶೇಷಂ ಪ್ರಪಶ್ಯಂತಿ ತತ್ರ ತೇಷಾಂ ಪರೇ ಜನಾಃ ॥೬॥

ಮಾಂಸರಹಿತವಾದ, ಅಸ್ಥಿಗಳೇ ಹೆಚ್ಚಾಗಿರುವ, ಸ್ನಾಯುಗಳಿಂದ ಬಂಧಿತವಾದ ದೇಹಗಳನ್ನು ಕಾಣುವ ಬೇರೆ ಜನರು ಆ ದೇಹಗಳಲ್ಲಿ ಯಾವ ವಿಶೇಷವನ್ನು ಕಾಣುವರು?

ಯೇನ ಪ್ರತ್ಯವಗಚ್ಛೇಯುಃ ಕುಲರೂಪವಿಶೇಷಣಮ್ ।
ಕಸ್ಮಾದನ್ಯೋನ್ಯಮಿಚ್ಛಂತಿ ವಿಪ್ರಲಬ್ಧಧಿಯೋ ನರಾಃ ॥೭॥

ಕುಲ, ರೂಪ ಮುಂತಾದ ಯಾವ ವಿಶೇಷವನ್ನು ಕಾಣುವರು? (ಎಲ್ಲವೂ ಪಾಂಚಭೌತಿಕ ಶರೀರ ಮಾತ್ರ ಎಂದು ಭಾವ.) ಮನುಷ್ಯರು (ಬದುಕಿದಾಗ) ಪರಸ್ಪರವಾಗಿ ಮೋಸಗೊಳಿಸಬೇಕೆಂದು ಏಕೆ ಇಚ್ಛಿಸುವರು? (ಮರಣಾನಂತರದಲ್ಲಿ ಎಲ್ಲವನ್ನೂ ಇಲ್ಲೇ ಬಿಟ್ಟುಹೋಗುವರು, ಬದುಕಿದಾಗ ಅನೇಕ ಕುಟಿಲ ಮಾರ್ಗದಿಂದ ಹಣಸಂಪಾದನೆಗೆ ಯತ್ನಿಸುವುದು ತರವಲ್ಲ ಎಂದು ಭಾವ.)

ಗೃಹಾಣ್ಯೇವ ಹಿ ಮರ್ತ್ಯಾನಾಮಾಹುರ್ದೇಹಾನ್ ಹಿ ಪಂಡಿತಾಃ ।
ಕಾಲೇನ ವಿನಿಯುಜ್ಯಂತೇ ಸತ್ವಮೇಷಾಂ ತು ಶೋಭನಮ್ ॥೮॥

ಪಂಡಿತರು ಮನುಜರ ದೇಹಗಳನ್ನು ಮನೆಗಳಂತೆ ಎನ್ನುವರು, ಕಾಲ ಗತಿಸಿದಂತೆ ನಾಶವನ್ನು ಹೊಂದುವುದು. ಈ ದೇಹಗಳಲ್ಲಿ ಜೀವ ಮಾತ್ರ ಶಾಶ್ವತ ಮತ್ತು ಸುಂದರ.

ಯಥಾ ಜೀರ್ಣಮಜೀರ್ಣಂ ವಾ ವಸ್ತ್ರಂ ತ್ಯಕ್ತ್ವಾ ತಥಾ ಪೂರುಷಃ ।
ಅನ್ಯದ್ ರೋಚಯತೇ ವಸ್ತ್ರಮ್ ಏವಂ ದೇಹಃ ಶರೀರಿಣಾಮ್ ॥೯॥

ಹಳತಾದ್ದಾಗಲಿ ಹೊಸತಾದದ್ದಾಗಲಿ ಹೇಗೆ ವಸ್ತ್ರವನ್ನು ಮನುಜನು ಪರಿತ್ಯಜಿಸಿ ಬೇರೆಯದನ್ನು ಬಯಸುವನೊ, ಇದೇ ರೀತಿಯದು ಜೀವರಿಗೆ ಈ ಶರೀರವು.

ವೈಚಿತ್ರವೀರ್ಯ ಸತ್ಯಂ ಹಿ ದುಃಖಂ ವಾ ಯದಿ ವಾ ಸುಖಮ್ ।
ಪ್ರಾಪ್ನುವಂತಿ ಹಿ ಭೂತಾನಿ ಸ್ವಕೃತೇನೈವ ಕರ್ಮಣಾ ॥೧೦॥

ವಿಚಿತ್ರವೀರ್ಯನ ಪುತ್ರನೆ! ಜೀವರು ಸುಖವನ್ನಾಗಲಿ, ದುಃಖವನ್ನಾಗಲಿ ತಾವು ಮಾಡಿದ ಕರ್ಮಾನುಸಾರವಾಗಿಯೇ ಹೊಂದುವರು ಇದು ಸತ್ಯ.

ಕರ್ಮಣಾ ಪ್ರಾಪ್ಯತೇ ಸ್ವರ್ಗಃ ಸುಖಂ ದುಃಖಂ ಚ ಭಾರತ ।
ತತೋ ವಹತಿ ತಂ ಭಾರಮವಶಃ ಸ್ವವಶೋಽಪಿ ವಾ ॥೧೧॥

ಭರತಕುಲೋತ್ಪನ್ನನೆ! ಸ್ವರ್ಗವನ್ನಾಗಲಿ, ಸುಖವನ್ನಾಗಲಿ, ದುಃಖವನ್ನಾಗಲಿ ತನ್ನ ಕರ್ಮಾನುಸಾರವಾಗಿಯೇ ಹೊಂದುವನು, ಆ ಕರ್ಮದ ಭಾರವನ್ನು ಸ್ವಾಧೀನವಾಗಿಯೋ ಪರಾಧೀನವಾಗಿಯೋ ಹೊರುವನು.

ಯಥಾ ಚ ಮೃಣ್ಮಯಂ ಭಾಂಡಂ ಚಕ್ರಾರೂಢಂ ವಿಪದ್ಯತೇ ।
ಕಿಂಚಿತ್ ಪ್ರಕ್ರಿಯಮಾಣಂ ವಾ ಕೃತಮಾತ್ರಮಥಾಪಿ ವಾ ।
ಭಿನ್ನಂ ವಾऽಪ್ಯವರೋಪ್ಯಂ ವಾವತೀರ್ಣಮಥಾಪಿ ವಾ ॥೧೨॥

ಆರ್ದ್ರಂ ವಾऽಪ್ಯಥವಾ ಶುಷ್ಕಂ ಪಚ್ಯಮಾನಮಥಾಪಿ ವಾ ।
ಅವತಾರ್ಯಂತಮಾಪಾಕಾದ್ ಉದ್ಧೃತಂ ವಾऽಪಿ ಭಾರತ ॥೧೩॥

ಅಥವಾ ಪರಿಭಜ್ಯಂತೇ ಏವಂ ದೇಹಃ ಶರೀರಿಣಾಮ್ ॥೧೪॥

ಭರತಕುಲೋತ್ಪನ್ನನೆ! ಮಣ್ಣಿನ ಗಡಿಗೆಯು ಚಕ್ರದ ಮೇಲೆ ಇರುವಾಗಲೇ (ನಿರ್ಮಾಣ ಹಂತದಲ್ಲಿರುವಾಗಲೇ) ಮುರಿಯ ಬಹುದು, ಸ್ವಲ್ಪ ಆಕಾರವನ್ನು ಹೊಂದುವಾಗಲೋ ಅಥವಾ ಗಡಿಗೆಯ ಆಕಾರವನ್ನು ಪೂರ್ಣ ಹೊಂದಿದ ಮೇಲೋ, (ಚಕ್ರದಿಂದ) ಕೆಳಗೆ ಇಳಿಸುವಾಗಲೋ ಅಥವಾ ಇಳಿಸಿದ ಮೇಲೋ ಅಥವಾ ಇನ್ನೂ ಹಸಿಯಾಗಿರುವಾಲೋ ಅಥವಾ ಒಣಗಿದಮೇಲೋ ಅಥವಾ ಬೇಯಿಸುವಾಗಲೋ, ಬೇಯಿಸದ ಮೇಲೋ ಮೇಲೆ ಎತ್ತುವಾಗಲೋ ಒಡೆದು ಹೋಗಬಹುದು, ಹಾಗೆಯೇ ಈ ಮನುಜನ ದೇಹವೂ ಸಹ (ಯಾವಾಗಲಾದರೂ ನಾಶವನ್ನು ಹೊಂದಬಹುದು).

ಗರ್ಭಸ್ಥೋ ವಾ ಪ್ರಸೂತೋ ವಾಪ್ಯಥವಾ ದಶರಾತ್ರಿಕಃ ।
ಅರ್ಧಮಾಸಗತೋ ವಾऽಪಿ ಮಾಸತ್ರಯಗತೋऽಪಿ ವಾ ॥೧೫॥

ಸಂವತ್ಸರಗತೋ ವಾऽಪಿ ದ್ವಿಸಂವತ್ಸರ ಏವ ವಾ ।
ಯೌವನಸ್ಥೋ ವಿಮಧ್ಯಸ್ಥೋ ವೃದ್ಧೋ ವಾऽಪಿ ವಿಪದ್ಯತೇ ॥೧೬॥

ಗರ್ಭದಲ್ಲಿರುವಾಗಲೋ, ಜನನವನ್ನು ಹೊಂದುವಾಗಲೋ, ಹತ್ತನೇ ದಿನವೋ, ಹದಿನೈದನೇ ದಿನದಂದೊ ಅಥವಾ ಎರಡುತಿಂಗಳಿನಲ್ಲೋ, ಯೌವನಾವಸ್ಥೆಯಲ್ಲೋ, ಮಧ್ಯವಯಸ್ಸಿನಲ್ಲಿಯೋ ಅಥವಾ ಮುದಿತನದಲ್ಲೋ ಸಾವನ್ನು ಹೊಂದುವನು.

ಪ್ರಾಕ್ಕರ್ಮಭಿಸ್ತು ಭೂತಾನಿ ವಿಪದ್ಯಂತೇ ಭವಂತಿ ಚ ।
ಏವಂ ಸಂವರ್ಧಿತೇ ಲೋಕೇ ಕಿಮರ್ಥಮನುತಪ್ಯಸೇ ॥೧೭॥

ಜೀವರು ಪೂರ್ವಕರ್ಮಾನುಸಾರವಾಗಿ ಹುಟ್ಟುವರು, ಸಾವನ್ನು ಹೊಂದುವರು, ಲೋಕವು ಈ ರೀತಿಯಾಗಿ ಬೆಳೆಯುತ್ತಿರಲು ಏತಕ್ಕಾಗಿ ದುಃಖಿಸುವಿ?

ಯಥಾ ತು ಸಲಿಲೇ ರಾಜನ್ ಕ್ರೀಡಾರ್ಥಮನುಸಂಚರನ್ ।
ಉನ್ಮಜ್ಜೇಚ್ಚ ನಿಮಜ್ಜೇಚ್ಚ ಚೇಷ್ಟತೇ ಹಿ ನರಾಧಿಪ ॥೧೮॥

ಏವಂ ಸಂಸಾರಗಹನಾದ್ ಉನ್ಮಜ್ಜನನಿಮಜ್ಜನಾತ್ ।
ಕರ್ಮಯೋಗೇನ ಬಧ್ಯಂತೇ ಕ್ಲಿಶ್ಯಂತೇ ಸ್ವಲ್ಪಬುದ್ಧಯಃ ॥೧೯॥

ರಾಜನೆ, ಮನುಜರೊಡೆಯನೆ! ಹೇಗೆ ನೀರಿನಲ್ಲಿ ಕ್ರೀಡೆಗಾಗಿ ಇಳಿದವನು ಮುಳುಗುತ್ತಾ ತೇಲುತ್ತಾ ಕ್ರೀಡಿಸುವನೊ, ಹಾಗೆಯೇ ಈ ಆಳವಾದ ಸಂಸಾರ ಸಾಗರದಲ್ಲಿ ಮುಳುಗುತ್ತಾ ತೇಲುತ್ತಾ ಅಜ್ಞರು ಕರ್ಮದಿಂದ ಬದ್ಧರಾಗಿ ದುಃಖಕ್ಕೆ ಈಡಾಗುವರು.

ಯೇ ತು ಪ್ರಾಜ್ಞಾಃ ಸ್ಥಿತಾ ಮಧ್ಯೇ ಸಂಸಾರಾಂತರ್ಗತೈಷಿಣಃ ।
ಸಮಾಗಮಜ್ಞಾ ಭೂತಾನಾಂ ತೇ ಯಾಂತಿ ಪರಮಾಂ ಗತಿಮ್ ॥೨೦॥

ಯಾರು ಪ್ರಾಜ್ಞರು ಆಗಿರುವರೋ ಅವರು ಸಂಸಾರದಲ್ಲಿ ವಿರಕ್ತರಾಗಿ, ಜೀವಿಗಳ ಸಮಾಗಮದ ಗುಟ್ಟನ್ನು ತಿಳಿದವರಾಗಿ ಉತ್ತಮಗತಿಯನ್ನು ಹೊಂದುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ತೃತೀಯೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ವಿದುರನಿಂದ ಧೃತರಾಷ್ಟ್ರನಿಗೆ ಶೋಕವು ಪರಿಹಾರವಾಗಲು ಶಾಸ್ತ್ರೋಪದೇಶ.

ಧೃತರಾಷ್ಟ್ರಃ

ಕಥಂ ಸಂಸಾರಗಹನಂ ವಿಜ್ಞೇಯಂ ವದತಾಂ ವರ ।
ಏತದಿಚ್ಛಾಮ್ಯಹಂ ಶ್ರೋತುಂ ತತ್ತ್ವಮಾಖ್ಯಾಹಿ ಪೃಚ್ಛತೇ ॥೧॥

ಧೃತರಾಷ್ಟ್ರ– ಉಪನ್ಯಾಸಕರಲ್ಲಿ ಶ್ರೇಷ್ಠನೆ! ಗಹನವಾದ ಸಂಸಾರವನ್ನು ಹೇಗೆ ತಿಳಿಯುವುದು? ಇದನ್ನು ಕೇಳಲು ಇಚ್ಛಿಸುವೆನು, ಪ್ರಶ್ನಿಸುತ್ತಿರುವ ನನಗೆ ರಹಸ್ಯವನ್ನು ಹೇಳು.

ವಿದುರಃ

ಜನ್ಮಪ್ರಭೃತಿ ಭೂತಾನಾಂ ಕ್ರಿಯಾಃ ಸರ್ವಾಸ್ತು ಲಕ್ಷಯೇತ್ ।
ಪೂರ್ವಮೇವೇಹ ಕಲಿಲೇ ವಸತೇ ಕಿಂಚಿದನಂತರಮ್ ॥೨॥

ವಿದುರ– ಹುಟ್ಟಿನಿಂದ ಮೊದಲುಗೊಂಡು ಜೀವಿಗಳ ಎಲ್ಲ ವಿಧವಾದ ಕ್ರಿಯೆಗಳನ್ನು ಶಾಸ್ತ್ರಗಳಲ್ಲಿ ತಿಳಿಸಿರುವರು. ಮೊದಲು ಕಲಿಲದಲ್ಲಿ (ಪುರುಷಶುಕ್ರ ಸ್ತ್ರೀಶೋಣಿತವು ಬೆರೆತದ್ದನ್ನು ಮೊದಲದಿನದಲ್ಲಿ ಕಲಿಲ ಎಂದು ಕರೆಯುವರು) ವಾಸಿಸುವನು.

ತತಃ ಸ ಪಂಚಮೇऽತೀತೇ ಮಾಂಸೇ ವಾಸಮಕಲ್ಪಯತ್ ।
ತತಃ ಸರ್ವಾಂಗಸಂಪೂರ್ಣೋ ಗರ್ಭೋ ಮಾಸೇ ಚ ಜಾಯತೇ ॥೩॥

ಆನಂತರದಲ್ಲಿ ಮಾಂಸದಲ್ಲಿ ವಾಸವನ್ನು ಹೊಂದುವನು, ಐದುತಿಂಗಳು ಕಳೆಯಲು ಗರ್ಭವು ಸರ್ವಾಂಗಪೂರ್ಣವಾಗುವುದು.

ಅಮೇಧ್ಯಮಧ್ಯೇ ವಸತಿ ಮಾಂಸಶೋಣಿತಲೇಪನೇ ।
ತತಸ್ತು ವಾಯುವೇಗೇನ ಹ್ಯೂರ್ಧ್ವಪಾದೋ ಹ್ಯಧೋಮುಖಃ ॥೪॥

ಮಾಂಸ, ರಕ್ತಗಳಿಂದ ಲಿಪ್ತವಾದ ಹೊಲಸಿನ ಮಧ್ಯದಲ್ಲಿ ವಾಸಿಸುವನು, ಆನಂತರದಲ್ಲಿ ವಾಯುವಿನಿಂದ ಪ್ರೇರಿತನಾದ ಜೀವಿಯು ಕಾಲುಮೇಲಾಗಿಯೂ ತಲೆಕೆಳಗಾಗಿಯೂ ನಿಲ್ಲುವನು.

ಯೋನಿದ್ವಾರಮುಪಾಗಮ್ಯ ಬಹೂನ್ ಕ್ಲೇಶಾನ್ ಸಮೃಚ್ಛತಿ ।
ಯೋನಿಸಂಪೀಡನಾಚ್ಚೈವ ಪೂರ್ವಕರ್ಮಪದಾನುಗಃ ॥೫॥

ಯೋನಿಯ ಮುಖದಲ್ಲಿರುವ ಜೀವಿಯು ಯೋನಿಪೀಡನದಿಂದ ಪೂರ್ವಕರ್ಮಗಳನ್ನು ಅನುಸರಿಸಿಯೂ ಅನೇಕ ದುಃಖಗಳನ್ನು ಅನುಭವಿಸುವನು.

ತಸ್ಮಾನ್ಮುಕ್ತಃ ಸ ಸಂಸಾರಾದನ್ಯಾನ್ ಪಶ್ಯತ್ಯುಪದ್ರವಾನ್ ।
ಗ್ರಹಾಸ್ತಮುಪಸರ್ಪಂತಿ ಸಾರಮೇಯಾ ಇವಾಮಿಷಮ್ ॥೬॥

ಗರ್ಭದಿಂದ ಮುಕ್ತನಾದವನು ಈ ಸಂಸಾರದಲ್ಲಿ ಬೇರೆ ದುಃಖಗಳನ್ನು ಕಾಣುವನು, ಮಾಂಸವನ್ನು ನಾಯಿಗಳು ಸಮೀಪಿಸುವಂತೆ ಬಾಲಗ್ರಹಗಳು ಈತನನ್ನು ಮುತ್ತುವವು.

ತತಃ ಕಾಲಾಂತರೇ ಪ್ರಾಪ್ತೇ ವ್ಯಾಧಯಶ್ಚಾಪಿ ತಂ ತಥಾ ।
ಉಪಸರ್ಪಂತಿ ಜೀವಂತಂ ಬಧ್ಯಮಾನಂ ಸ್ವಕರ್ಮಭಿಃ ॥೭॥

ತನ್ನ ಕರ್ಮಗಳಿಂದ ಪೀಡಿತನಾದ ಜೀವಂತವಾಗಿರುವ ಆತನನ್ನು ಕಾಲಾಂತರವು ಪ್ರಾಪ್ತವಾಗಲು ಹಾಗೆಯೇ (ನಾಯಿಗಳಂತೆ) ವ್ಯಾಧಿಯೇ ಮುಂತಾದವುಗಳು ಮುತ್ತುವವು.

ಬದ್ಧಮಿಂದ್ರಿಯಪಾಶೈಸ್ತಂ ಸಂಗಕಾಮುಕಮಾತುರಮ್ ।
ವ್ಯಸನಾನ್ಯನುವರ್ತಂತೇ ವಿವಿಧಾನಿ ನರಾಧಿಪ ॥೮॥

ರಾಜನೆ! ಇಂದ್ರಿಯಗಳೆಂಬ ಪಾಶದಿಂದ ಬಂಧಿತನಾದ, (ಸ್ತ್ರೀ ಮುಂತಾದ) ಸಂಗವನ್ನು ಬಯಸುವ, ಆತುರನಾದ ಆತನನ್ನು ವಿವಿಧ ವ್ಯಸನಗಳು ಬೆನ್ನಹತ್ತುವವು.

ಮಥ್ಯಮಾನಶ್ಚ ತೈರ್ಭೂಯೋ ನೈವ ತೃಪ್ತಿಮುಪೈತಿ ಸಃ ।
ಅಯಂ ನ ಬುಧ್ಯತೇ ತಾವದ್ ಯಮಲೋಕಾದಿಹಾಗಮಮ್ ॥೯॥

ಮತ್ತು ಆ ವ್ಯಸನಗಳಿಂದ ಹೊಯ್ದಾಡುವ ಆತನು ಅವುಗಳಿಂದ (ವ್ಯಸನಗಳ ಭೋಗದಿಂದ) ತೃಪ್ತಿಯನ್ನು ಹೊಂದುವುದಿಲ್ಲ. ಆದರೆ ಆತನು 'ತಾನು ಯಮಸದನದಿಂದ ಇಲ್ಲಿಗೆ ಬಂದಿರುವೆನು' ಎಂಬುವುದನ್ನು ತಿಳಿದಿರುವುದಿಲ್ಲ.

ಯಮದೂತೈರ್ವಿಕೃಷ್ಟಶ್ಚ ಮೃತ್ಯುಂ ಕಾಲೇನ ಗಚ್ಛತಿ ॥೧೦॥

ಯಮದೂತರಿಂದ ಸೆಳೆಯುವನಾಗಿ ಕಾಲಾನಂತರದಲ್ಲಿ ಸಾವನ್ನು ಹೊಂದುವನು.

ವಾಗ್ಹೀನಸ್ಯ ಚ ಯಾ ಮಾತ್ರಾ ಇಷ್ಟಾನಿಷ್ಟಕೃತಾऽಸ್ಯ ವೈ ।
ಭೂಯ ಏವಾತ್ಮನಾऽऽತ್ಮಾನಂ ಬಧ್ಯಮಾನಮುಪೈತಿ ಸಃ ॥೧೧॥

(ಮರಣಕಾಲದಲ್ಲಿ) ವಾಗಿಂದ್ರಿಯರಹಿತನಾದ ಅವನಿಗೆ (ತಾನು) ಏನೆಲ್ಲ ಇಷ್ಟಾನಿಷ್ಟಗಳನ್ನು ಆಚರಿಸಿದ್ದನೋ ಅದೆಲ್ಲವೂ ಸ್ಮರಣೆಗೆ ಬರುವುದು. ಆದರೂ ಸಹ ತನ್ನ ತಪ್ಪಿನಿಂದಲೇ ತಾನು ಬದ್ಧನಾಗುತ್ತಿರುವೆನು ಎಂಬುವುದನ್ನು ತಿಳಿಯಲಾರನು.

ತತ್ರೈನಂ ಪರಿಪಶ್ಯಂತಿ ಯೇ ಧ್ಯಾನಪರಿನಿಷ್ಠಿತಾಃ ॥೧೨॥

ಅಹೋ ವಿನಿಕೃತೋ ಲೋಕೋ ಲೋಭೇನ ಚ ವಶೀಕೃತಃ ।
ಲೋಭಕ್ರೋಧಮದೋನ್ಮತ್ತೋ ನಾತ್ಮಾನಮವಬುದ್ಧ್ಯತೇ ॥೧೩॥

ಯಾರು ಧ್ಯಾನ ಪರಿಪಾಕವನ್ನು ಹೊಂದಿರುವರೋ ಅವರು ಈ ಜಗವನ್ನು 'ಲೋಭವಶವಾದ ಈ ಜನರು ಮೋಸಹೊಗುತ್ತಿರುವರು, ಲೋಭ-ಕ್ರೋಧ-ಮದಗಳಿಂದ ಉನ್ಮತ್ತವಾದ ಲೋಕವು (ಜನರು) ತನ್ನನ್ನು ತಾನು ಅರಿಯಲಾರದು, ಆಶ್ಚರ್ಯ!' ಎಂದು ನೋಡುವರು.

ಕುಲೀನತ್ವೇ ಚ ರಮತೇ ದುಷ್ಕುಲೀನಾನ್ ವಿಕುತ್ಸಯನ್ ।
ಧನದರ್ಪೇಣ ದೃಪ್ತಶ್ಚ ದಾರಿದ್ರ್ಯಂ ಪರಿಕುತ್ಸಯನ್ ॥೧೪॥

ಶ್ರೇಷ್ಠಕುಲದಲ್ಲಿ ಹುಟ್ಟಿದರೆ ದುಷ್ಕುಲದಲ್ಲಿ ಹುಟ್ಟಿದವರನ್ನು ನಿಂದಿಸುವನು, ಧನದ ಮದದಿಂದ ಉನ್ಮತ್ತನಾದವನು ದರಿದ್ರರನ್ನು ಅವಮಾನಿಸುವನು.

ಮೂರ್ಖಾನಿತಿ ಪರಾನಾಹ ನಾತ್ಮಾನಂ ಸಮವೇಕ್ಷತೇ ।
ದೋಷಾನ್ ಕ್ಷಿಪತಿ ಚಾನ್ಯೇಷಾಂ ನಾತ್ಮಾನಂ ಶಾಸ್ತುಮರ್ಹತಿ ॥೧೫॥

ಪರರನ್ನು ಮೂರ್ಖ ಎಂದು ಜರೆಯುವನು, ಆದರೆ ತನ್ನನ್ನು ಪರಿಶೀಲಿಸಿ-ಕೊಳ್ಳುವುದಿಲ್ಲ. ಅನ್ಯರ ಮೇಲೆ ದೋಷಗಳನ್ನು ಆರೋಪಿಸುವನು, ಆದರೆ ತನ್ನನ್ನು ನಿಯಂತ್ರಿಸಿಕೊಳ್ಳಲಾರ.

ಯಥಾ ಪ್ರಾಜ್ಞಾಶ್ಚ ಮೂಢಾಶ್ಚ ಧನವಂತೋऽಥ ನಿರ್ಧನಾಃ ।
ಕುಲೀನಾಶ್ಚಾಕುಲೀನಾಶ್ಚ ಮಾನಿನೋऽಥಾಪ್ಯಮಾನಿನಃ ॥೧೬॥

ಸರ್ವೇ ಪಿತೃವನಂ ಪ್ರಾಪ್ತಾಃ ಸ್ವಪಂತಿ ವಿಗತತ್ವಚಃ ॥೧೭॥

ನಿರ್ಮಾಂಸೈರಸ್ಥಿಭೂಯಿಷ್ಠೈಃ ಗಾತ್ರೈಶ್ಚ ಸ್ನಾಯುಬಂಧನೈಃ ॥೧೮॥

ಕಿಂ ವಿಶೇಷಂ ಪ್ರಪಶ್ಯಂತಿ ತತ್ರ ತೇಷಾಂ ಪರೇ ಜನಾಃ ।
ಯೇನ ಪ್ರತ್ಯವಗಚ್ಛೇಯುಃ ಕುಲರೂಪವಿಶೇಷಣಮ್ ॥೧೯॥

ಪ್ರಾಜ್ಞರು, ಮೂರ್ಖರು, ಧನವಂತರು, ನಿರ್ಧನಿಗಳು, ಶ್ರೇಷ್ಠಕುಲೋತ್ಪನ್ನರು, ದುಷ್ಕುಲೋತ್ಪನ್ನರು, ಸ್ವಾಭಿಮಾನಿಗಳು ನಿರಭಿಮಾನಿಗಳು ಎಲ್ಲರು ಶ್ಮಶಾನಕ್ಕೆ ತೆರಳಿದಾಗ ಚರ್ಮವೂ ಇಲ್ಲದವರಾದ ಅವರು ಮಾಂಸರಹಿತವಾದ ಅಸ್ಥಿಯೇ ಹೆಚ್ಚಾಗಿರುವ ಸ್ನಾಯುಗಳಿಂದ ಬಂಧಿತವಾದ ದೇಹಗಳಿಂದ ಮಲಗುವರು, ಅನ್ಯರು ಆ ದೇಹಗಳಲ್ಲಿ ಏನು ವಿಶೇಷವನ್ನು ಕಾಣುವರು? ಯಾವುದರಿಂದ ಕುಲ, ರೂಪ, ವಿಶೇಷಗಳನ್ನು ಆಗ ತಿಳಿಯುವರು?

ಯದಾ ಸರ್ವೇ ಸಮಂ ನ್ಯಸ್ತಾಃ ಸ್ವಪಂತಿ ಧರಣೀತಳೇ ।
ತಸ್ಮಾದನ್ಯೋನ್ಯಮಿಚ್ಛಂತಿ ವಿಪ್ರಲಬ್ಧುಮಿಹಾಬುಧಾಃ ॥೨೦॥

ಯಾವಾಗ ಎಲ್ಲರೂ ಸಮಾನವಾಗಿ ಎಲ್ಲವನ್ನು ತೊರೆದು, ಭೂಮಿಯಲ್ಲಿ ಮಲಗಿ ಇರುವರೋ, ಆದ್ದರಿಂದ ಇಲ್ಲಿ ಅಜ್ಞರು ಪರಸ್ಪರವಾಗಿ ಒಬ್ಬರನ್ನು ಮತ್ತೊಬ್ಬರು ಮೋಸಗೊಳಿಸಲು ಬಯಸುವರು. (ಮರಣಾನಂತರದಲ್ಲಿ ಇದಾವುದನ್ನು ನಾವು ಕೊಂಡೊಯ್ಯಲು ಶಕ್ಯವಿಲ್ಲ ಎಂಬ ಅರಿವು ಇಲ್ಲದ ಮನುಜರು ಬದುಕಿದಾಗ ಪರಸ್ಪರ ಕಿತ್ತಾಡುವರು ಎಂಬ ಭಾವ.)

ಪ್ರತ್ಯಕ್ಷಂ ಚ ಪರೋಕ್ಷಂ ಚ ಯೋ ನಿಶಾಮ್ಯ ಶ್ರುತಿಂ ತ್ವಿಮಾಮ್ ।
ಜನ್ಮಪ್ರಭೃತಿ ವರ್ತೇತ ಪ್ರಾಪ್ನುಯಾತ್ ಪರಮಾಂ ಗತಿಮ್ ॥೨೧॥

ನೇರವಾಗಿಯೋ ಅಪರೋಕ್ಷವಾಗಿಯೋ ಈ ಶ್ರುತಿಯನ್ನು ಯಾರು ಕೇಳುವರೊ, ಹುಟ್ಟಿನಿಂದಾರಂಭಿಸಿ ಈ ಮಾರ್ಗದಲ್ಲಿಯೇ ಇರುವರೋ ಅವರು ಪರಮಗತಿಯನ್ನು ಹೊಂದುವರು.

ಏವಂ ಸರ್ವಂ ವಿದಿತ್ವಾ ವೈ ಯಸ್ತತ್ತ್ವಮನುವರ್ತತೇ ।
ಸ ವೈ ಮೋಕ್ಷಯತೇ ಚೈವ ಪಂಥಾನಂ ಮನುಜಾಧಿಪ ॥೨೨॥

ಮನುಜರ ಒಡೆಯನೆ! ಈ ರೀತಿಯಾಗಿ ಎಲ್ಲವನ್ನು ತಿಳಿದು ಯಾವನು ತತ್ವಮಾರ್ಗವನ್ನೇ ಅನುಸರಿಸುವನೋ, ಆ ಹಾದಿಯು ಆತನನ್ನು ಮೋಕ್ಷದಡೆಗೆ ಕೊಂಡೊಯ್ಯುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಧೃತರಾಷ್ಟ್ರವಿಶೋಕೇ ಚತುರ್ಥೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ಧೃತರಾಷ್ಟ್ರನಿಗೆ ವಿದುರನಿಂದ ಸಂಸಾರಾಟವಿಯ ವರ್ಣನೆ.

ಧೃತರಾಷ್ಟ್ರಃ

ಯದಿದಂ ಧರ್ಮಗಹನಂ ಬುದ್ಧ್ಯಾ ಸಮನುಬುಧ್ಯಸೇ ।
ಏತದ್ ವಿಸ್ತರತಃ ಸರ್ವಂ ಬುದ್ಧಿಮಾರ್ಗಂ ಪ್ರಶಂಸ ಮೇ ॥೧॥

ಧೃತರಾಷ್ಟ್ರ– ಯಾವ ಈ ಧರ್ಮವು ಗಹನವಾಗಿದೆಯೊ, ಬುದ್ಧಿಯಿಂದ ತಿಳಿಯಲು ನನಗೆ ಶಕ್ಯವಾದಲ್ಲಿ ವಿಸ್ತಾರವಾಗಿ ಸಮಸ್ತ ಬುದ್ಧಿಮಾರ್ಗವನ್ನು ತಿಳಿಸು.

ವಿದುರಃ

ಅತ್ರ ತೇ ವರ್ತಯಿಷ್ಯಾಮಿ ನಮಸ್ಕೃತ್ವಾ ಸ್ವಯಂಭುವೇ ।
ಯಥಾ ಸಂಸಾರಗಹನಂ ವದಂತಿ ಪರಮರ್ಷಯಃ ॥೨॥

ವಿದುರ– ಬ್ರಹ್ಮದೇವನಿಗೆ ನಮಸ್ಕರಿಸಿ, ಸಂಸಾರವು ಗಹನವೆಂದು ಮಹರ್ಷಿಗಳು ಹೇಗೆ ಉಪದೇಶಿಸಿರುವರೋ ಅದನ್ನು ನಿನಗೆ ತಿಳಿಸುವೆನು.

ಕಶ್ಚಿನ್ಮಹತಿ ಸಂಸಾರೇ ವರ್ತಮಾನೋ ದ್ವಿಜಃ ಕಿಲ ।
ವನಂ ದುರ್ಗಮನುಪ್ರಾಪ್ತೋ ಮಹತ್ ಕ್ರವ್ಯಾದಸಂಕುಲಮ್ ॥೩॥

ಭೀಕರಸಂಸಾರದಲ್ಲಿ ಇರುವ ಓರ್ವ ಬ್ರಾಹ್ಮಣನು ಮಾಂಸಾಹಾರಿಗಳಿಂದ ಕೂಡಿರುವ ದುರ್ಗಮ್ಯವಾದ ವನವೊಂದನ್ನು ಸೇರಿದನು.

ಸಿಂಹವ್ಯಾಘ್ರಗಜಕ್ಷೌಹ್ಯೈರತಿಘೋರೈರ್ಮಹಾಸ್ವನೈಃ ।
ಸಮಂತಾತ್ ಸಂಪರಿಕ್ಷಿಪ್ತಂ ಯಸ್ಮಾದ್ ದ್ರಷ್ಟುರ್ಮಹದ್ಭಯಮ್ ॥೪॥

ಯಾವುದು ನೋಡುವುದಕ್ಕೇ ಭಯಂಕರವೋ ಅಂತಹ ಸಿಂಹ ಹುಲಿ ಆನೆ ಚಿರತೆಗಳು ಭಯಂಕರವಾಗಿ ಅರಚುತ್ತಾ ಸುತ್ತಲು ಸುತ್ತುವರೆದು ನಿಂತಿದ್ದವು.

ತದಸ್ಯ ದೃಷ್ಟ್ವಾ ಹೃದಯಮುದ್ವೇಗಮಗಮತ್ ಪರಮ್ ।
ಅತ್ಯುಚ್ಛ್ರಯಾಶ್ಚ ರೋಮಾಣಾಂ ವಿಕ್ರಿಯಾಶ್ಚ ಭವಂತಿ ವೈ ॥೫॥

ಅದರ ದರ್ಶನದಿಂದ ಹೃದಯದ ಬಡಿತವು ಅತಿ ಹೆಚ್ಚಾಯಿತು. ರೋಮಗಳು ನಿಮಿರಿ ನಿಂತವು (ದೇಹದಲ್ಲಿ ಇಂತಹ) ಅನೇಕ ವಿಕಾರಗಳಾಗುತ್ತವೆ ತಾನೆ?

ಸ ತದ್ ವನಂ ವ್ಯತಿಸರನ್ ನೃಪ ಧಾವನ್ನಿತಸ್ತತಃ ।
ವೀಕ್ಷಮಾಣೋ ದಿಶಃ ಸರ್ವಾಃ ಶರಣಂ ಕ್ವ ಭವೇದಿತಿ ॥೬॥

ರಾಜನೆ! ಧನವಂತನಾದ ಆತನು ಅಂತಹ ವನದಲ್ಲಿ ಅತ್ತಿಂದಿತ್ತಾ ಸಂಚರಿಸುತ್ತಾ ಎಲ್ಲಿ ಆಶ್ರಯವನ್ನು ಹೊಂದಬಹುದು ಎಂದು ಎಲ್ಲೆಡೆಯೂ ಗಮನಿಸಿದನು.

ಸ ತೇಷಾಂ ಛಿದ್ರಮನ್ವಿಚ್ಛನ್ ಪ್ರದ್ರುತೋ ಭಯಪೀಡಿತಃ ।
ನ ಚ ನಿರ್ಯಾತಿ ವೈ ದೂರಂ ನ ಚ ತೈರ್ವಿಪ್ರಯುಜ್ಯತೇ ॥೭॥

ಅವುಗಳಿಂದ (ಮಾಂಸಾಹಾರಿ ಪ್ರಾಣಿಗಳಿಂದ) ಅವಕಾಶವನ್ನು ಗಮನಿಸಿ, ಭಯಗ್ರಸ್ಥನಾಗಿ ಓಡಿದನು, ಆದರೆ ಹೆಚ್ಚು ದೂರ ಹೋಗಲಾಗಲಿಲ್ಲ, ಅವುಗಳಿಂದ ಮುಕ್ತನೂ ಆಗಲಿಲ್ಲ.

ಅಥಾಪಶ್ಯದ್ ವನಂ ಗೂಢಂ ಸಮಂತಾದ್ ವಾಗುರಾವೃತಮ್ ।
ಬಾಹುಭ್ಯಾಂ ಸಂಪರಿಷ್ವಕ್ತಃ ಸ್ತ್ರಿಯಾ ಪರಮಘೋರಯಾ ॥೮॥

ಅನಂತರದಲ್ಲಿ ಅಗಮ್ಯವಾದ ವನವು ಸುತ್ತಲೂ ಬಲೆಯಿಂದ ಆವೃತವಾದದ್ದನ್ನು ಕಂಡನು. ಭಾರೀ ಭಯಂಕರಳಾದ ನಾರಿಯೋರ್ವಳು ತನ್ನ ಕರಗಳಿಂದ ಬಲೆಯಿಂದ ಅರಣ್ಯವನ್ನು ಆವರಿಸುತ್ತಿದ್ದಳು.

ಪಂಚಶೀರ್ಷಧರೈರ್ನಾಗೈಃ ಶೈಲೈರಿವ ಸಮುನ್ನತೈಃ ।
ನಭಸ್ಪೃಶೈರ್ಮಹಾವೃಕ್ಷೈಃ ಪರಿಕ್ಷಿಪ್ತಂ ಮಹಾವನಮ್ ॥೯॥

ಮತ್ತೆ ಐದುಹೆಡೆಯ ನಾಗಗಳಿಂದ, ಬೆಟ್ಟದಂತೆ ಅತಿ ಎತ್ತರವಾಗಿರುವ ಗಗನವನ್ನೇ ಮುಟ್ಟುತ್ತಿರುವ ಮಹಾವೃಕ್ಷಗಳಿಂದ ಆವೃತವಾದ ವನವನ್ನು ಕಂಡನು.

ವನಮಧ್ಯೇ ಚ ತತ್ರಾಭೂದ್ ಉದಪಾನಃ ಸಮಾವೃತಃ ।
ವಲ್ಲೀಭಿಸ್ತೃಣನದ್ಧಾಭಿರ್ಗೂಢಾಭಿರಭಿಸಂವೃತಃ ॥೧೦॥

ಆ ಕಾಡಿನ ಮಧ್ಯದಲ್ಲಿ ಬಳ್ಳಿಗಳಿಂದ ಹುಲ್ಲಿನಿಂದ ಆವೃತವಾಗಿ ಮುಚ್ಚಿಹೋದ ಬಾವಿಯೊಂದು ಇದ್ದಿತ್ತು.

ಪಪಾತ ಸ ದ್ವಿಜಸ್ತತ್ರ ನಿಗೂಢೇ ಸಲಿಲಾಶಯೇ ।
ವಿಲಗ್ನಶ್ಚಾಭವತ್ ತಸ್ಮಿನ್ ಲತಾಸಂತಾನಸಂಕುಲೇ ॥೧೧॥

ಆ ಬ್ರಾಹ್ಮಣನು ಮುಚ್ಚಿದ ನೀರಿನ ಆಶ್ರಯವಾದ ಬಾವಿಯಲ್ಲಿ ಬಿದ್ದನು, ಅಲ್ಲಿ ಬಳ್ಳಿಗಳ ಪೊದೆಗಳ ಸಮೂಹದಲ್ಲಿ ನೇತಾಡಿದನು.

ಪನಸಸ್ಯ ಯಥಾ ಜಾತಂ ವೃಂತಬದ್ಧಂ ಮಹಾಫಲಮ್ ।
ಸ ತಥಾ ಲಂಬತೇ ತತ್ರ ಊರ್ಧ್ವಪಾದೋ ಹ್ಯಧಃಶಿರಾಃ ॥೧೨॥

ಹೇಗೆ ಹಲಸಿನ ದೊಡ್ಡಹಣ್ಣು ತೊಟ್ಟನ್ನಾಶ್ರಯಿಸಿಕೊಂಡು ನೇತಾಡುವುದೊ, ಹಾಗೆಯೇ ಆತನು ತಲೆ ಕೆಳಗಾಗಿ ಕಾಲುಗಳು ಮೇಲಾಗಿ ಅಲ್ಲಿ ನೇತಾಡಿದನು.

ತಥಾ ತತ್ರೈವ ಚಾಯಾತೋ ದಂತೀ ದಲಿತಪರ್ವತಃ ।
ಕೂಪವೀನಾಹವೇಲಾಯಾಮ್ ಅಪಶ್ಯತ ಮಹಾಗಜಮ್ ॥೧೩॥

ಹಾಗೆಯೇ ಅಲ್ಲಿಗೆ ಬಂದ ಪರ್ವತವನ್ನು ಸೀಳುವಂಥದ ದಂತಗಳನ್ನು ಹೊಂದಿರುವ ಮಹಾಗಜವನ್ನು ಬಾವಿಯ ಅತಿ ಸಮೀಪದಲ್ಲಿ ಕಂಡನು.

ಷಡ್ವಕ್ತ್ರಂ ಕೃಷ್ಣಶಬಲಂ ದ್ವಿಷಟ್‌ಪದಚಾರಿಣಮ್ ।
ಕ್ರಮೇಣ ಪರಿಸರ್ಪಂತಂ ವಲ್ಲೀವೃಕ್ಷಸಮಾವೃತಮ್ ।
ಕೂಪಮಧ್ಯೇ ಮಹಾನಾಗಮಪಶ್ಯತ ಮಹಾಬಲಮ್ ॥೧೪॥

ಆನೆಗೆ ಆರು ಮುಖಗಳು, ಶಬಲ ಮತ್ತು ಕಪ್ಪುಬಣ್ಣಗಳಿಂದ ಕೂಡಿದೆ, ಹನ್ನೆರಡು ಕಾಲುಗಳಿಂದ ಚಲಿಸುವುದು, ಕ್ರಮವಾಗಿ ಬಳ್ಳಿಗಳಿಂದ ಆವೃತವಾದ ಬಾವಿಯ ಬಳಿಗೆ ಆಗಮಿಸುತ್ತಿದೆ. ಮತ್ತೆ ಬಾವಿಯ ಮಧ್ಯದಲ್ಲಿ ಬಲಿಷ್ಟವಾದ ಒಂದು ದೊಡ್ಡ ಸರ್ಪವನ್ನು ಕಂಡನು.

ತಸ್ಯ ಶಾಖಾಪ್ರಶಾಖಾಸು ವೃಕ್ಷಶಾಖಾಪ್ರಲಂಬಿನಃ ।
ನಾನಾವರ್ಣಾ ಮಧುಕರಾ ಘೋರರೂಪಾ ಭಯಾವಹಾಃ ॥೧೫॥

ಆಸತೇ ಮಧು ಸಂಹೃತ್ಯ ಪೂರ್ವಮೇವ ನಿಕೇತಜಾಃ ॥೧೬॥

ಭಯಂಕರಗಳಾದ ಘೋರ ಆಕಾರಗಳನ್ನು ಹೊಂದಿರುವ ನಾನಾಬಣ್ಣದ ಜೇನುನೊಣಗಳು, ಆ ಬಾವಿಯ ಬಳಿಯಿರುವ ವೃಕ್ಷದ ಕೊಂಬೆ ಕವಲು ಟಿಸಿಲುಗಳಲ್ಲಿ ಈ ಮೊದಲೇ ಗೂಡುಕಟ್ಟಿಕೊಂಡು ಜೇನನ್ನು ಹೀರುತ್ತಾ ಇದ್ದವು.

ಭೂಯೋ ಭೂಯಃ ಸಮೀಹಂತೇ ಮಧೂನಿ ಭರತರ್ಷಭ ।
ಸ್ವಾದೂನಿ ಯಾನಿ ಭೂತಾನಿ ಯೈಬಾಹ್ರ್ಯೋ ನ ವಿತೃಪ್ಯತೇ ॥೧೭॥

ಭರತ ಶ್ರೇಷ್ಠನೆ! ಪ್ರಾಣಿಗಳಿಗೆ ಯಾವುದು ಅತ್ಯಂತ ರುಚಿಕರವೋ, ಬಾಲಕರು ಯಾವುದರಿಂದ ತೃಪ್ತಿಯನ್ನು ಹೊಂದುವದಿಲ್ಲವೊ, ಅಂತಹ ಜೇನನ್ನು ಆ ದುಂಬಿಗಳು ಮತ್ತೆ ಮತ್ತೆ ಹೀರುತ್ತಿದ್ದವು.

ತೇಷಾಂ ಮಧೂನಾಂ ವಿವಿಧಾ ಧಾರಾ ಪ್ರಸ್ರವತೇ ಸದಾ ।
ತಾಂ ಲಂಬಮಾನಃ ಸ ಪುಮಾನ್ ಧಾರಾಂ ಪಿಬತಿ ಸರ್ವದಾ ॥೧೮॥

ಆ ಜೇನುತುಪ್ಪವು ಅನೇಕ ಧಾರೆಗಳಾಗಿ ನಿರಂತರವಾಗಿ ಸೋರುತ್ತಿತ್ತು, ನೇತಾಡುತ್ತಿದ್ದ ಆ ಪುರುಷನು ಆ ಜೇನಿನ ಧಾರೆಯನ್ನು ಹೀರುತ್ತಿದ್ದನು.

ನ ಚಾಸ್ಯ ತೃಷ್ಣಾ ವಿರತಾ ಪಿಬಮಾನಸ್ಯ ಸಂಕಟೇ ।
ಅಭೀಪ್ಸತಿ ಚ ತಾಂ ನಿತ್ಯಮತೃಪ್ತಶ್ಚ ಪುನಃ ಪುನಃ ॥೧೯॥

ಅಂತಹ ಸಂಕಟದಲ್ಲಿದ್ದರೂ (ಜೇನನ್ನು) ಪಾನ ಮಾಡುತ್ತಿರುವ ಆತನಿಗೆ ಪಾನ ಮಾಡುವದರಲ್ಲಿ ವೈರಾಗ್ಯವು ಬರಲಿಲ್ಲ. ತೃಪ್ತನಾಗದ ಆತನು ನಿರಂತರವಾಗಿ ಮತ್ತೆ ಮತ್ತೆ ಆ ಜೇನನ್ನು ಬಯಸುತ್ತಿದ್ದನು.

ನ ಚಾಸ್ಯ ಜೀವಿತೇ ರಾಜನ್ ನಿರ್ವೇದಃ ಸಮಜಾಯತ ।
ತತ್ರೈವ ಚ ಮನುಷ್ಯಸ್ಯ ಜೀವಿತಾಶಾ ಪ್ರತಿಷ್ಠಿತಾ ॥೨೦॥

ರಾಜನೆ! ಆತನಿಗೆ ಬಾಳಿನಲ್ಲಿ ವೈರಾಗ್ಯವು ಬರಲಿಲ್ಲ. ಅಂತಹ ಅವಸ್ಥೆಯಲ್ಲೂ ಬದುಕಬೇಕೆಂಬ ಆಸೆಯು ಗಾಢವಾಗಿದ್ದಿತು.

ಕೃಷ್ಣಾಃ ಶ್ವೇತಾಶ್ಚ ತಂ ವೃಕ್ಷಂ ನಿಕೃಂತಂತಿ ಸ್ಮ ಮೂಷಿಕಾಃ ।
ವ್ಯಾಲೈಶ್ಚ ತದ್ ವನಂ ದುರ್ಗಂ ಸ್ತ್ರಿಯಾ ಚ ಪರಮೋಗ್ರಯಾ ॥೨೧॥

ಆ ಮರವನ್ನು ಕರೀಬಣ್ಣದ ಮತ್ತು ಬಿಳೀಬಣ್ಣದ ಇಲಿಗಳು ಕತ್ತರಿಸುತ್ತಿದ್ದವು. ಅಗಮ್ಯವಾದ ಆ ವನವು ಭಾರೀ ಉಗ್ರಳಾದ ಆ ಹೆಣ್ಣಿನಿಂದ ಮತ್ತು ಬಲೆಯಿಂದಲೂ ಆವೃತವಾಗಿತ್ತು.

ಕೂಪಾಧಸ್ತಾಚ್ಚ ನಾಗೇನ ಪೀನಾಹೇ ಕುಂಜರೇಣ ಚ ।
ವೃಕ್ಷಪ್ರಪಾತಾಚ್ಚ ಭಯಂ ಮೂಷಿಕೇಭ್ಯಶ್ಚ ಪಂಚಮಮ್ ॥೨೨॥

ಮಧುಲೋಭಾನ್ಮಧುಕರೈಃ ಷಷ್ಠಮಾಹುರ್ಮಹದ್ಭಯಮ್ ।
ಏವಂ ಸಂವಸತೇ ತತ್ರ ಕ್ಷಿಪ್ತಃ ಸಂಸಾರಸಾಗರೇ ॥೨೩॥

ಬಾವಿಯ ಕೆಳಭಾಗದಿಂದ ನಾಗದ ಭಯ, ಬಾವಿಯ ಮೇಲ್ಭಾಗದಿಂದ ಆನೆಯ ಭಯ, ಇಲಿಗಳಿಂದ ಮರವು ಬೀಳುವುದು ಎಂಬ ಐದನೆಯ ಭಯ, ಜೇನಿನ ಆಸೆಯನ್ನು ಹೊಂದಿದ ಜೇನುನೊಣಗಳಿಂದ ಆರನೆಯ ಭಯ, ಈರೀತಿಯಲ್ಲಿ ಸಂಸಾರಸಾಗರದಲ್ಲಿ ಬಿದ್ದ ಜೀವಿಯು ಸಂಸಾರದಲ್ಲಿ ವಾಸಿಸುವನು. (ಹಿಂದಿನ ಶ್ಲೋಕದಲ್ಲಿ ಹೇಳಿದ ಹಾಗೆ ಮತ್ತು ಆಕೆ ಹೆಣೆಯುತ್ತಿರುವ ಬಲೆಯ ಭಯ ಒಟ್ಟು ಆರು ವಿಧದ ಭಯಗಳು).

ನ ಚೈವ ಜೀವಿತಾಶಾಯಾಂ ನಿರ್ವೇದಮುಪಗಚ್ಛತಿ ॥೨೪॥

(ಹೀಗಿದ್ದರೂ ಆತನಿಗೆ) ವೈರಾಗ್ಯವು ಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಧೃತರಾಷ್ಟ್ರವಿಶೋಕೇ ಪಂಚಮೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

ಆರನೆಯ ಅಧ್ಯಾಯ

ಹಿಂದಿನ ಅಧ್ಯಾಯದಲ್ಲಿ ಒಗಟಿನಂತೆ ತಿಳಿಸಿದ ವಿಚಾರಗಳ ಸ್ಪಷ್ಟೀಕರಣ.

ಧೃತರಾಷ್ಟ್ರಃ

ಅಹೋ ಖಲು ಮಹದ್ ದುಃಖಂ ಕೃಚ್ಛ್ರಂ ವಾಸಂ ವಸತ್ಯಸೌ ।
ಕಥಂ ತತ್ರ ರತಿಸ್ತಸ್ಯ ತುಷ್ಟಿರ್ವಾ ವದತಾಂ ವರ ॥೧॥

ಧೃತರಾಷ್ಟ್ರ– ಮಾತುಗಾರರಲ್ಲಿ ಹಿರಿಯನೆ! ಆಶ್ಚರ್ಯಕರವಾಗಿದೆ, ಆತನು ಭಾರೀ ದುಃಖವನ್ನು ಅನುಭವಿಸುತ್ತಿರುವನು, ಅತಿ ಕಷ್ಟಸ್ಥಳದಲ್ಲಿ ವಾಸಿಸುತ್ತಿರುವನು, ಆತನಿಗೆ ಅಲ್ಲಿ ಹೇಗೆ ತಾನೆ ಆಸಕ್ತಿಯು ಉಂಟಾಯಿತು, ಸಂತೃಪ್ತಿಯಾದರೂ ಹೇಗೆ ಶಕ್ಯವಾದೀತು?

ಸ ದೇಶಃ ಕ್ವ ನು ಯತ್ರಾಸೌ ವಸತೇ ಧರ್ಮಸಂಕಟೇ ।
ಕಥಂ ವಾ ಸ ವಿಮುಚ್ಯೇತ ನರಸ್ತಸ್ಮಾನ್ಮಹಾಭಯಾತ್ ॥೨॥

ಆತನು ಧರ್ಮಸಂಕಟದಲ್ಲಿ ಸಿಲುಕಿ ವಾಸಿಸುತ್ತಿರುವ ಆ ದೇಶವು ಯಾವುದು? ಮಹಾ ಭಯದಲ್ಲಿ ಸಿಲುಕಿರುವ ಆ ಮನುಷ್ಯನು ಹೇಗೆ ಪಾರಾಗಬಹುದು?

ಏತದ್ಭೂಯ ಸರ್ವಮಾಚಕ್ಷ್ವ ಸಾಧು ಚೇಷ್ಟಾಮಹೇ ತಥಾ ।
ತಥಾ ಕೃಪಾ ಮೇ ಮಹತೀ ಜಾತಾ ಹ್ಯುದ್ಧರಣೇನ ಚ ॥೩॥

ಈ ಎಲ್ಲವನ್ನೂ ಹೇಳು, ನನಗೆ ಆತನ ವಿಷಯವಾಗಿ ದಯೆಯು ಉಂಟಾಗಿದೆ, ಆತನ ಉದ್ಧಾರಕ್ಕಾಗಿ ನಾನು ಏನಾದರು ಪ್ರಯತ್ನಿಸಬೇಕೆ?

ವಿದುರಃ

ಉಪಾಖ್ಯಾನಮಿದಂ ರಾಜನ್ ಮೋಕ್ಷವಿದ್ಭಿರುದಾಹೃತಮ್ ।
ಸುಗತಿಂ ವಿಂದತೇ ಯೇನ ಪರಲೋಕೇಷು ಮಾನವಃ ॥೪॥

ವಿದುರ– ರಾಜನೇ, ಈ ಉಪಾಖ್ಯಾನವನ್ನು ಮೋಕ್ಷಜ್ಞರು ಉಪದೇಶಿಸಿರುತ್ತಾರೆ. ಯಾವ ಮನುಷ್ಯನು ಯಥಾರ್ಥವಾಗಿ ತಿಳಿಯುವನೋ ಆತನು ಪರಗತಿಯನ್ನು ಹೊಂದುವನು.

ಯತ್ ತದುಚ್ಯೇತ ಕಾಂತಾರಂ ಮಹತ್ ಸಂಸಾರ ಏವ ಸಃ ।
ಯತ್ರ ದುರ್ಗಂ ಹಿ ಯತ್ತೇ ತ್ವತತ್ ಸಂಸಾರಗಹನಂ ಹಿ ತತ್ ॥೫॥

ಕಗ್ಗಾಡು ಎಂದು ಯಾವದನ್ನು ಹೇಳಲಾಯಿತೋ ಅದೇ ಸಂಸಾರ, ಅಗಮ್ಯ ಎಂದು ಯಾವುದನ್ನು ತಿಳಿಸಲಾಗಿದೆಯೋ ಅದೇ ಈ ಬಹು ಗಂಭೀರವಾದ ಸಂಸಾರ ಎಂದು ಹೇಳಲಾಗಿದೆ.

ಯೇ ಚೈವ ಪ್ರಥಿತಾ ವ್ಯಾಲಾ ವ್ಯಾಧಯಸ್ತೇ ಪ್ರಕೀರ್ತಿತಾಃ ॥೬॥

ವಿಷಸರ್ಪ ಎಂದು ಹೇಳಲಾಗಿದೆಯೋ ಅವೇ ರೋಗ ರುಜಿನಗಳು.

ಯಾ ಸಾ ನಾರೀ ಬೃಹತ್ಕಾಯಾ ಅಧಿತಿಷ್ಠತಿ ತತ್ರ ವೈ ।
ತಾಮಾಹುಸ್ತು ಜರಾಂ ಪ್ರಾಜ್ಞಾ ವರ್ಣರೂಪವಿನಾಶಿನೀಮ್ ॥೭॥

ಅಲ್ಲಿ ದೊಡ್ಡಶರೀರದ ಹೆಣ್ಣು ನಿಂತಿರುವಳು ಎಂದು ಹೇಳಲಾಗಿದ್ದು, ಆಕೆಯನ್ನು ಜ್ಞಾನಿಗಳು ಬಣ್ಣ ರೂಪಗಳನ್ನು ವಿರೂಪಗೊಳಿಸುವ ಮುಪ್ಪು ಎಂದು ತಿಳಿಯುವರು.

ಸ ಯಸ್ತು ಕೂಪೋ ನೃಪತೇ ಸ ತು ದೇಹಃ ಶರೀರಿಣಾಮ್ ॥೮॥

ರಾಜನೆ! ಯಾವುದು ಬಾವಿ ಎಂದು ತಿಳಿಸಲಾಗಿದೆಯೋ ಅದು ಜೀವಿಗಳ ಶರೀರ ಎಂದು ತಿಳಿಯುವುದು.

ಯಸ್ತತ್ರ ವಸತೇಽಧಸ್ತಾನ್ಮಹಾಹಿಃ ಕಾಲ ಏವ ಸಃ ।
ಅಂತಕಃ ಸರ್ವಭೂತಾನಾಂ ದೇಹಿನಾಂ ಪ್ರಾಣಹಾರ್ಯಸೌ ॥೯॥

ಆ ಬಾವಿಯಲ್ಲಿ ಕೆಳಭಾಗದಲ್ಲಿ ವಾಸಿಸುವ ಮಹಾಸರ್ಪವು ಎಲ್ಲ ಪ್ರಾಣಿಗಳ ನಾಶಕ ಮತ್ತು ಜೀವಿಗಳ ಪ್ರಾಣಹಾರಕವಾದ ಕಾಲ ಎಂದು ತಿಳಿಯುವುದು.

ಕೂಪಮಧ್ಯೇ ಚ ಯಾ ಜಾತಾ ವಲ್ಲೀ ಯತ್ರ ಸ ಮಾನವಃ ।
ಪ್ರತಾನೇ ಲಂಬತೇ ಲಗ್ನೋ ಜೀವಿತಾಶಾ ಶರೀರಿಣಾಮ್ ॥೧೦॥

ಬಾವಿಯ ಮಧ್ಯದಲ್ಲಿ ಉತ್ಪನ್ನವಾದ ಬಳ್ಳಿ, ಆ ಬಳ್ಳಿಯ ಜೋಕಾಲಿಯಲ್ಲಿ ನೇತಾಡುತ್ತಿರುವ ಆ ಮಾನವ ಎಂದರೆ ಜೀವಿಗಳ ಬದುಕಬೇಕೆಂಬ ಬಲವಾದ ಆಸೆ ಎಂದು ತಿಳಿಯುವುದು.

ಸ ಯಸ್ತು ಕೂಪಪೀನಾಹೇ ವೃಕ್ಷಂ ವಿಪರಿಸರ್ಪತಿ ।
ಷಡ್‌ವಕ್ತ್ರಃ ಕುಂಜರೋ ರಾಜನ್ ಸ ತು ಸಂವತ್ಸರಃ ಸ್ಮೃತಃ ॥೧೧॥

ರಾಜನೆ! ಬಾವಿಯ ಸಮೀಪದಲ್ಲಿರುವ ವೃಕ್ಷವನ್ನು ಸಮೀಪಿಸುತ್ತಿರುವ ಆರು ಮುಖದ ಆನೆಯನ್ನೇ ಸಂವತ್ಸರ ಎಂದು ತಿಳಿಯುವುದು.

ಷಣ್ಮುಖಾ ಋತವೋ ಮಾಸಾಃ ಪಾದಾ ದ್ವಾದಶ ಕೀರ್ತಿತಾಃ ॥೧೨॥

ಆ ಆನೆಯ ಆರು ಮುಖ- ಋತುಗಳು, ಹನ್ನೆರಡು ಕಾಲುಗಳು- ಮಾಸಗಳು ಎಂದು ತಿಳಿಯುವುದು.

ಯೇ ತು ವೃಕ್ಷಂ ನಿಕೃಂತಂತಿ ಮೂಷಿಕಾಃ ಪತಗಾಸ್ತಥಾ ।
ರಾತ್ರ್ಯಹನಿ ಚ ತಾನ್ ಪ್ರಾಹುಃ ಭೂತಾನಾಂ ಪರಿಚಿಂತಕಾಃ ॥೧೩॥

ಯಾವುದು ವೃಕ್ಷವನ್ನು ಕತ್ತರಿಸುತ್ತಿರುವ ಇಲಿಗಳು ಹಾಗೂ ಹಕ್ಕಿಗಳು, ಅವುಗಳನ್ನು ರಾತ್ರಿ-ಹಗಲು ಎಂದು ತತ್ವಚಿಂತಕರು ಹೇಳುವರು.

ಯೇ ತೇ ಮಧುಕರಾಸ್ತತ್ರ ಕಾಮಾಸ್ತೇ ಪರಿಕೀರ್ತಿತಾಃ ॥೧೪॥

ಯಾವುದು ಜೇನುನೊಣಗಳು ಎಂದು ಹೇಳಲಾಯಿತೋ ಅವು ಕಾಮನೆಗಳು ಎಂದು ಹೇಳಲಾಗಿದೆ.

ಯಾಸ್ತು ತಾ ಬಹುಶೋ ಧಾರಾಃ ಸ್ರವಂತಿ ಬಹುವಿಸ್ತರಮ್ ।
ತಾಂಸ್ತು ಕಾಮರಸಾನ್ ವಿದ್ಯಾದ್ ಯತ್ರ ಸಜ್ಜಂತಿ ಮಾನವಾಃ ॥೧೫॥

ಯಾವುದನ್ನು ಜೇನಿನ ಬಹುಧಾರೆಗಳು ಸುರಿಯುತ್ತಿತ್ತು ಎಂದು ಹೇಳಲಾಯಿತೋ ಅದು ಕಾಮರಸಗಳು (ವಿಷಯ ಜನ್ಯಭೋಗ) ಎಂದು ತಿಳಿಯುವುದು, ಅವುಗಳಲ್ಲಿ ಜನರು ಆಸಕ್ತರಾಗಿರುವರು.

ಏವಂ ಸಂಸಾರಚಕ್ರಸ್ಯ ಪರಿವೃತ್ತಿಂ ವಿದುರ್ಬುಧಾಃ ।
ಯೇನ ಸಂಸಾರಚಕ್ರಸ್ಯ ಪಾಶಂ ಛಿಂದಂತಿ ವೈ ಬುಧಾಃ ॥೧೬॥

ಈ ರೀತಿಯಾಗಿ ಸಂಸಾರಚಕ್ರದ ಪರಿವರ್ತನೆಯನ್ನು ಜ್ಞಾನಿಗಳು ತಿಳಿದಿರುವರು. ಯಾವ ಅರಿವಿನಿಂದ ಸಂಸಾರಚಕ್ರದ ಬಂಧವು ಕತ್ತರಿಸಲಾಗುವುದೋ (ಅದನ್ನು) ಜ್ಞಾನಿಗಳು (ತಿಳಿದಿರುವರು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಧೃತರಾಷ್ಟ್ರವಿಶೋಕೇ ಷಷ್ಠೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ವಿದುರನು ಧೃತರಾಷ್ಟ್ರನಿಗೆ ತತ್ವಗಳನ್ನು ಉಪದೇಶಿಸಿದನು.

ಧೃತರಾಷ್ಟ್ರಃ

ಅಹೋಽಭಿಹಿತಮಾಖ್ಯಾನಂ ಭವತಾ ತತ್ತ್ವದರ್ಶಿನಾ ।
ಭೂಯ ಏವ ಮಹಾಪ್ರಾಜ್ಞ ಶ್ರೋಷ್ಯೇ ವಾಗಮೃತಂ ತವ ॥೧॥

ಧೃತರಾಷ್ಟ್ರ– ಮಹಾಮೇಧಾವಿಯೆ! ತತ್ವದರ್ಶಿಯಾದ ನೀನು ಆಖ್ಯಾನವನ್ನು ತಿಳಿಸಿದಿ. ಆಶ್ಚರ್ಯ, ನಿನ್ನ ಮಾತೆಂಬ ಅಮೃತವನ್ನು ಮತ್ತೂ ಕೇಳಲು ಇಚ್ಛೆಯಾಗಿದೆ.

ವಿದುರಃ

ಶೃಣು ಭೂಯಃ ಪ್ರವಕ್ಷ್ಯಾಮಿ ಮಾರ್ಗಸ್ಯೈತಸ್ಯ ವಿಸ್ತರಮ್ ।
ಯಚ್ಛ್ರುತ್ವಾ ವಿಪ್ರಮುಚ್ಯಂತೇ ಸಂಸಾರಾದ್ಧಿ ವಿಚಕ್ಷಣಾಃ ॥೨॥

ವಿದುರ– ಯಾವುದನ್ನು ಕೇಳುವುದರಿಂದ ಜ್ಞಾನಿಗಳು ಮುಕ್ತರಾಗುವರೋ, ಅಂಥ ಸಂಸಾರಮಾರ್ಗವನ್ನು ಇನ್ನೂ ವಿಸ್ತಾರವಾಗಿ ತಿಳಿಸುವೆನು, ಕೇಳು.

ಯಥಾ ತು ಪುರುಷೋ ರಾಜನ್ ದೀರ್ಘಮಧ್ವಾನಮಾಸ್ಥಿತಃ ।
ಕ್ವಚಿತ್ ಕ್ವಚಿಚ್ಚ್ರಮಾಚ್ಛ್ರಾಂತಃ ಕುರುತೇ ವಾಸಮೇವ ವಾ ॥೩॥

ಏವಂ ಸಂಸಾರಪರ್ಯಾಯೇ ಗರ್ಭವಾಸೇಷು ಭಾರತ ।
ಕುರ್ವಂತಿ ದುರ್ಬುಧಾ ವಾಸಂ ಮುಚ್ಯಂತೇ ತತ್ರ ಪಂಡಿತಾಃ ॥೪॥

ರಾಜನೆ! ಹೇಗೆ ಪುರುಷನು ಬಲುದೂರದ ಹಾದಿಯಲ್ಲಿ ಸಾಗುವಾಗ, ಆಯಾಸದಿಂದ ಬಳಲಿದಾಗ ಅಲ್ಲಲ್ಲಿ ತಂಗುವನೋ, ಹಾಗೆ ಭರತಕುಲೋತ್ಪನ್ನನೆ! ಸಂಸಾರದಲ್ಲಿ ಸುತ್ತುವವನು ಗರ್ಭಗಳಲ್ಲಿ ವಾಸಿಸುವನು. ಅಜ್ಞರು ಮಾತ್ರ ಹೀಗೆ ವಾಸಿಸುವರು. ಜ್ಞಾನಿಗಳು (ಈ ಸಂಸಾರ ಚಕ್ರದಿಂದ) ಮುಕ್ತರಾಗುವರು.

ತಸ್ಮಾದಧ್ವಾನಮೇವೈತತ್ ಆಹುಃ ಶಾಸ್ತ್ರವಿದೋ ಜನಾಃ ॥೫॥

ಯತ್ ತತ್ ಸಂಸಾರಗಹನಂ ವನಮಾಹುರ್ಮನೀಷಿಣಃ ।
ಸೋಽಯಂ ಲೋಕೇ ಸಮಾವರ್ತೋ ಮರ್ತ್ಯಾನಾಂ ಭರತರ್ಷಭ ॥೬॥

ಚರಾಣಾಂ ಸ್ಥಾವರಾಣಾಂ ಚ ಗೃಧ್ಯೇತ್ ತತ್ರ ನ ಪಂಡಿತಃ ॥೭॥

ಆದ್ದರಿಂದ ಶಾಸ್ತ್ರವನ್ನು ತಿಳಿದವರು ಇದನ್ನು (ಸಂಸಾರವನ್ನು) ಮಾರ್ಗ ಎಂದು ಹೇಳುವರು. 'ಯಾವ ಇದನ್ನು ಸಂಸಾರವನ್ನು ಆಳವಾದದ್ದು, ಕಗ್ಗಾಡು' ಎಂದು ಜ್ಞಾನಿಗಳು ಹೇಳುವರು. ಭರತಕುಲಶ್ರೇಷ್ಠನೆ! ಲೋಕದಲ್ಲಿ (ಸಾಮಾನ್ಯ) ಜೀವಿಗಳಿಗೆ ಆ ಈ ಯಾವ ಸಂಸಾರವು ಚಕ್ರವಾಗಿದೆ, ಪಂಡಿತನು ಈ ಸ್ಥಿರ-ಜಂಗಮಾತ್ಮಕ ಸಂಸಾರವನ್ನು ಇಚ್ಛಿಸುವದಿಲ್ಲ.

ಶಾರೀರಾ ಮಾನಸಾಶ್ಚೈವ ಮರ್ತ್ಯಾನಾಂ ವ್ಯಾಧಯಸ್ತು ಯೇ ।
ಪ್ರತ್ಯಕ್ಷಾಶ್ಚ ಪರೋಕ್ಷಾಶ್ಚ ತೇ ವ್ಯಾಲಾಃ ಕಥಿತಾ ಬುಧೈಃ ॥೮॥

ಶಾರೀರಿಕವಾದ ಮತ್ತು ಮಾನಸಿಕವಾದ ಕಾಣುವ, ಕಾಣದ ಯಾವ ವ್ಯಾಧಿಗಳು ಮನುಷ್ಯರಿಗಿವೆಯೋ ಅವುಗಳನ್ನೇ ವಿಷಸರ್ಪ ಎಂದು ಜ್ಞಾನಿಗಳು ಹೇಳುವರು.

ಕ್ಲಿಶ್ಯಮಾನಾಶ್ಚ ಯೇ ನಿತ್ಯಂ ವಾರ್ಯಮಾಣಾಶ್ಚ ಭಾರತ ।
ಸ್ವಕರ್ಮಭಿರ್ಮಹಾವ್ಯಾಳೈಃ ನೋದ್ವಿಜಂತ್ಯಲ್ಪಬುದ್ಧಯಃ ॥೯॥

ಭರತಕುಲೋತ್ಪನ್ನನೆ! ತಮ್ಮ ಕರ್ಮ ಎಂಬ ಮಹಾಸರ್ಪಗಳಿಂದ ನಿತ್ಯ ದುಃಖಕ್ಕೆ ಈಡಾಗುವರು ಮತ್ತು (ಅನೇಕ ಬಾರಿ ಅನೇಕ ವಿಧವಾದ) ಅಡೆ-ತಡೆಗಳಿಗೆ ಒಳಗಾಗುವರು, ಹೀಗಾದರೂ ಮೂಢರು (ಈ ಸಂಸಾರಸರ್ಪದಿಂದ) ಉದ್ವೇಗಕ್ಕೆ ಒಳಗಾಗರು. (ಈ ಸಂಸಾರದಲ್ಲಿ ವಿರಕ್ತಿಯನ್ನು ಹೊಂದಲಾರರು ಎಂದು ಭಾವ.)

ಅಥಾಪಿ ತೈರ್ವಿಮುಚ್ಯೇತ ವ್ಯಾಧಿಭಿಃ ಪುರುಷೋ ನೃಪ ।
ಆವೃಣೋತ್ಯೇವ ತಂ ಪಶ್ಚಾಜ್ಜರಾ ರೂಪವಿನಾಶಿನೀ ॥೧೦॥

ರಾಜನೆ! ಆ ವ್ಯಾಧಿಗಳಿಂದ ಮನುಜನು ಹೇಗಾದರೂ ಮುಕ್ತನಾಗನು, ಆದರೆ ಅನಂತರದಲ್ಲಿ ರೂಪವನ್ನು ನಾಶಗೊಳಿಸುವ ಮುಪ್ಪು ಆತನನ್ನು ಆಕ್ರಮಿಸುವುದು ನಿಶ್ಚಯ.

ಶಬ್ದರೂಪರಸಸ್ಪರ್ಶಗಂಧೈಶ್ಚ ವಿವಿಧೈರಪಿ ।
ಮಜ್ಜಮಾನಂ ಮಹಾಪಂಕೇ ನಿರಾಲಂಬೇ ಸಮಂತತಃ ॥೧೧॥

ಸಂವತ್ಸರರ್ತವೋ ಮಾಸಾಃ ಪಕ್ಷಾಹೋರಾತ್ರಿಸಂಧಯಃ ।
ಕ್ರಮೇಣಾಸ್ಯ ಪ್ರಮಾರ್ಜಂತಿ ರೂಪಮಾಯುಸ್ತಥೈವ ಚ ॥೧೨॥

ವಿವಿಧವಾದ ಶಬ್ದ, ರೂಪ, ರಸ, ಸ್ಪರ್ಶ, ಗಂಧಗಳಿಂದ ಕೂಡಿರುವ ಬಹು ಆಳವಾದ (ಸಂಸಾರವೆಂಬ) ದೊಡ್ಡ ಕೆಸರಿನ ಗುಂಡಿಯಲ್ಲಿ ಮುಳುಗುವನು, ಅತನ ರೂಪವನ್ನು ಮತ್ತು ಆಯುವನ್ನು ವರ್ಷಗಳು ತಿಂಗಳುಗಳು ಪಕ್ಷಗಳು ಹಗಲು ರಾತ್ರಿಗಳು ಸಂಧ್ಯೆಗಳು ಕ್ರಮವಾಗಿ ನಾಶಗೊಳಿಸುವವು.

ಏತೇ ಕಾಲಸ್ಯ ವಿಧಯೋ ನೈನಂ ಜಾನಂತಿ ದುರ್ಬುಧಾಃ ॥೧೩॥

ಅಜ್ಞರು ಕಾಲದ ಈ ಪರಿಗಳನ್ನು ತಿಳಿಯಲಾರರು.

ಧಾತ್ರಾಭಿಲಿಖಿತಾನ್ಯಾಹುಃ ಸರ್ವಭೂತಾನಿ ಕರ್ಮಣಾ ॥೧೪॥

ಬ್ರಹ್ಮನು ಎಲ್ಲ ಜೀವರ ಕರ್ಮಾನುಸಾರಿಯಾಗಿ ಬರೆಯುವನು ಎಂದು ಹೇಳುವರು.

ರಥಃ ಶರೀರಂ ಭೂತಾನಾಂ ಸತ್ತ್ವಮಾಹುಸ್ತು ಸಾರಥಿಮ್ ।
ಇಂದ್ರಿಯಾಣಿ ಹಯಾನಾಹುಃ ಕರ್ಮ ಬುದ್ಧಿಶ್ಚ ರಶ್ಮಯಃ ॥೧೫॥

ಜೀವಿಗಳ ಶರೀರವನ್ನೇ ರಥ ಎಂದು, ಜೀವಿಯನ್ನು ರಥಿಕ ಎಂದು, ಇಂದ್ರಿಯಗಳನ್ನು ಕುದುರೆ ಎಂದು, ಬುದ್ಧಿ ಮತ್ತು ಕರ್ಮಗಳನ್ನು ಲಗಾಮು ಎಂದು ಹೇಳುವರು.

ತೇಷಾಂ ಹಯಾನಾಂ ಯೋ ವೇಗಂ ಧಾವತಾಮನುಧಾವತಿ ।
ನ ಸಂಯಮಯತೇ ಬುದ್ಧ್ಯಾ ಸ ಯಂತಾ ನ ನಿವರ್ತತೇ ॥೧೬॥

ಯಾವ ನಿಯಾಮಕನು (ಸಾರಥಿಯು) ಆ ಕುದುರೆಗಳ ವೇಗಕ್ಕೆ ಅನುಸಾರವಾಗಿ ಓಡುವನೋ, (ಆ ಕುದುರೆಗಳನ್ನು) ಬುದ್ಧಿಯಿಂದ ನಿಯಂತ್ರಿಸುವುದಿಲ್ಲವೋ ಆತನು ಹಿಂತಿರುಗಲಾರನು (ಈ ಸಂಸಾರಚಕ್ರದಲ್ಲಿಯೇ ಸುತ್ತುವನು ಎಂದು ಭಾವ).

ಯಸ್ತು ಸಂಸಾರಚಕ್ರೇಽಸ್ಮಿನ್ ಚಕ್ರವತ್ ಪರಿವರ್ತತೇ ।
ಯಾಮ್ಯಮಾಹೂ ರಥಂ ಹ್ಯೇನಂ ಮುಹ್ಯಂತೇ ಯೇನ ದುರ್ಬುಧಾಃ ॥

ಯಾವುದು ಈ ಸಂಸಾರಚಕ್ರದಲ್ಲಿಯೇ ಚಕ್ರದಂತೆ ಸುತ್ತುವುದೊ, ಈ ರಥವನ್ನು ಯಾಮ್ಯರಥ (ಯಮಲೋಕಕ್ಕೆ ಸಾಗುವ ರಥ) ಎಂದು ಕರೆಯುವರು, ಅಜ್ಞರು ಇದರಲ್ಲಿ ಮೋಹಿತರಾಗಿರುವರು.

ಸ ವೈ ತತ್ ಪ್ರಾಪ್ನುಯಾದ್ ರಾಜನ್ ಯತ್ ತ್ವಂ ಪ್ರಾಪ್ತೋ ನರಾಧಿಪ ।
ರಾಜ್ಯನಾಶಃ ಸುಹೃನ್ನಾಶಃ ಸುತನಾಶಶ್ಚ ಭಾರತ ॥೧೮॥

ಭರತಕುಲೋತ್ಪನ್ನನೆ, ಮನುಜಾಧಿಪನೆ! ನೀನು ಏನನ್ನು ಹೊಂದಿದಿಯೋ, ರಾಜ್ಯನಾಶ, ಪುತ್ರನಾಶ ಮತ್ತು ಸ್ನೇಹಿತರ ನಾಶ, ಅದನ್ನು (ರಾಜ್ಯನಾಶಾದಿಗಳನ್ನು) ಆತನು (ಯಾಮ್ಯರಥವನ್ನೇರಿದವನು) ಹೊಂದುವನು.

ಅನುತರ್ಷುಕಮೇವೈತದ್ ದುಃಖಂ ಭವತಿ ಭಾರತ ।
ಸಾಧುಃ ಪರಮದುಃಖಾನಾಂ ದುಃಖಭೈಷಜ್ಯಮಾರಭೇತ್ ॥೧೯॥

ಭರತಕುಲೋತ್ಪನ್ನನೆ! ದುರಾಸೆಯ ಮನುಜನಿಗೆ (ಅನು ತರ್ಷುಕಂ= ಆಸೆಗಳ ಬೆನ್ನಹತ್ತಿ ಸಾಗುವವನು) ಈ ದುಃಖವು ಪ್ರಾಪ್ತವಾಗುವುದು, ಸಜ್ಜನನು ಭಾರೀ ದುಃಖಕ್ಕೆ ದುಃಖ ನಿವಾರಕ ಔಷಧಗಳನ್ನು ಆರಂಭಿಸುವನು.

ಜ್ಞಾನೌಷಧಮವಾಪ್ಯೇಹ ದುರಾವಾಪಂ ಮಹೌಷಧಮ್ ।
ಛಿಂದ್ಯಾದ್ ದುಃಖಮಯಂ ವ್ಯಾಧಿಂ ನರಃ ಸಂಯತಮಾನಸಃ ॥೨೦॥

ಮನವನ್ನು ಹತೋಟಿಯಲ್ಲಿ ಇಟ್ಟುಕೊಂಡ ಮನುಜನು ಇಲ್ಲಿ (ಜೀವನದಲ್ಲಿ) ಕಷ್ಟಪ್ರಾಪ್ಯವಾದ ಮಹಾಔಷಧವಾದ ಜ್ಞಾನವೆಂಬ ಔಷಧವನ್ನು ಹೊಂದಿ, ದುಃಖರೂಪವಾದ ಮಹಾವ್ಯಾಧಿಯನ್ನು ನಾಶಗೊಳಿಸಬೇಕು.

ನ ವಿಕ್ರಮೋ ನ ಚಾಪ್ಯರ್ಥೋ ನ ಮಿತ್ರಂ ನ ಸುಹೃಜ್ಜನಃ ।
ತಥಾ ಮೋಚಯತೇ ದುಃಖಾದ್ ಯಥಾತ್ಮಾ ಸ್ಥಿರನಿಶ್ಚಯಃ ॥೨೧॥

ಸ್ಥಿರಪ್ರಜ್ಞೆಯು ಆತ್ಮನನ್ನು ದುಃಖದಿಂದ ಹೇಗೆ ಸಂರಕ್ಷಿಸುವುದೋ ಹಾಗೆ ಪರಾಕ್ರಮವು ರಕ್ಷಿಸದು, ಹಣವು ರಕ್ಷಿಸದು, ಮಿತ್ರರು ರಕ್ಷಿಸರು, ಆಪ್ತರು ರಕ್ಷಿಸರು.

ತಸ್ಮಾನ್ಮೈತ್ರಂ ಸಮಾಸ್ಥಾಯ ಶೀಲಮಾಪದ್ಯ ಭಾರತ ।
ದಮಸ್ತ್ಯಾಗೋऽಪ್ರಮಾದಶ್ಚ ತೇ ತ್ರಯೋ ಬ್ರಹ್ಮಣೋ ಹಯಾಃ ॥೨೨॥

ಭರತಕುಲೋತ್ಪನ್ನನೆ! ಆದ್ದರಿಂದ (ಎಲ್ಲರಲ್ಲಿಯೂ) ಸ್ನೇಹಭಾವವನ್ನು ಹೊಂದು, ಸಚ್ಚಾರಿತ್ರ್ಯವನ್ನು ಆಶ್ರಯಿಸು, ಇಂದ್ರಿಯನಿಗ್ರಹ, ತ್ಯಾಗ ಅಪ್ರಮಾದ ಈ ಮೂರು ಬ್ರಹ್ಮನ ಕುದುರೆಗಳು.

ಶೀಲರಶ್ಮಿಸಮಾಯುಕ್ತೇ ಸ್ಥಿತೋ ಯೋ ಮಾನಸೇ ರಥೇ ।
ತ್ಯಕ್ತ್ವಾ ಮೃತ್ಯುಭಯಂ ರಾಜನ್ ಬ್ರಹ್ಮಲೋಕಂ ಸ ಗಚ್ಛತಿ ॥೨೩॥

ರಾಜನೆ! ಯಾವನು ಮನಸ್ಸೆಂಬ ರಥದಲ್ಲಿ ಶೀಲ ಎಂಬ ಕುದುರೆಯನ್ನು ಹೂಡಿ ಇರುವನೋ, ಆತನು ಮೃತ್ಯುಭಯವನ್ನು ದಾಟಿ ಬ್ರಹ್ಮಲೋಕಕ್ಕೆ ಸಾಗುವನು.

ಅಭಯಂ ಸರ್ವಭೂತೇಭ್ಯೋ ಯೋ ದದಾತಿ ಮಹೀಪತೇ ।
ಸ ಗಚ್ಛತಿ ಪರಂ ಸ್ಥಾನಂ ವಿಷ್ಣೋಃ ಪದಮನಾಮಯಮ್ ॥೨೪॥

ಭೂಮಿಗೊಡೆಯನೆ! ಎಲ್ಲ ಜೀವಿಗಳಿಗೆ ಅಭಯವನ್ನು (ಆಶ್ರಯವನ್ನು) ಯಾವಾತನು ನೀಡುವನೋ, ಆತನು ದೋಷರಹಿತವಾದ ಶ್ರೇಷ್ಠವಾದ ವಿಷ್ಣುವಿನ ಸ್ಥಾನವನ್ನು ಹೊಂದುವನು.

ನೈತತ್ ಕ್ರತುಸಹಸ್ರೇಣ ನೋಪವಾಸೇನ ನಿತ್ಯಶಃ ।
ಅಭಯಸ್ಯ ಹಿ ದಾನೇನ ಯತ್ಫಲಂ ಪ್ರಾಪ್ನುಯಾನ್ನರಃ ॥೨೫॥

ಮನುಷ್ಯನು ಅಭಯವನ್ನು ನೀಡುವುದರಿಂದ ಯಾವ ಸ್ಥಾನವನ್ನು ಹೊಂದುವನೋ, ಆ ಸ್ಥಾನವನ್ನು ಸಾವಿರ ಯಜ್ಞಗಳನ್ನು ಆಚರಿಸುವುದರಿಂದ ಹೊಂದಲಾರನು, ನಿತ್ಯ ಉಪವಾಸದಿಂದಲೂ ಹೊಂದಲಾರನು.

ನ ಹ್ಯಾತ್ಮನಃ ಪ್ರಿಯತರಂ ಕಿಂಚಿದ್ ಭೂತೇಷು ನಿಶ್ಚಿತಮ್ ।
ಅನಿಷ್ಟಂ ಸರ್ವಭೂತಾನಾಂ ಮರಣಂ ನಾಮ ಭಾರತ ॥೨೬॥

ಭರತಕುಲೋತ್ಪನ್ನನೆ! ಪ್ರಾಣಿಗಳಿಗೆ ಜೀವಕ್ಕಿಂತ ಪ್ರಿಯವಾದದ್ದು ಮತ್ತೊಂದು ಇಲ್ಲ ಎಂದು ನಿಶ್ಚಿತವಾಗಿದೆ, ಎಲ್ಲ ಪ್ರಾಣಿಗಳಿಗೂ ಸಾವು ಎನ್ನುವುದು ಅನಿಷ್ಟ,

ತಸ್ಮಾತ್ ಸರ್ವೇಷು ಭೂತೇಷು ದಯಾ ಕಾರ್ಯಾ ವಿಪಶ್ಚಿತಾ ॥೨೭॥

ಜ್ಞಾನಿಯಾದವನು ಈ ಕಾರಣದಿಂದ ಎಲ್ಲ ಪ್ರಾಣಿಗಳಲ್ಲಿ ದಯೆಯನ್ನು ಮಾಡಬೇಕು.

ನಾನಾಯೋಗಸಮಾಯುಕ್ತಾ ಬುದ್ಧಿಜಾಲೇನ ಸಂವೃತಾಃ ।
ಸುಸೂಕ್ಷ್ಮದೃಷ್ಟಯೋ ಧೀರಾ ವ್ರಜಂತಿ ಬ್ರಹ್ಮಸಾಮ್ಯತಾಮ್ ॥೨೮॥

ವಿವಿಧ ಯೋಗಗಳನ್ನು ಹೊಂದಿದ, ಅನೇಕ ವಿಚಾರಗಳಿಂದ ಕೂಡಿರುವ, ಅತ್ಯಂತ ಸೂಕ್ಷ್ಮ ದೃಷ್ಟಿಯನ್ನು ಹೊಂದಿರುವ ಧೀರರು ಬ್ರಹ್ಮನ ಸಾಮ್ಯವನ್ನು (ತಮ್ಮ ಯೋಗ್ಯತಾನುಸಾರವಾಗಿ ಜ್ಞಾನಾನಂದಗಳನ್ನು) ಹೊಂದುವರು.

ಏವಂ ಜ್ಞಾತ್ವಾ ಮಹಾಪ್ರಾಜ್ಞ ಸ ತೇಷಾಮೌರ್ಧ್ವದೈಹಿಕಮ್ ।
ಕರ್ತುಮರ್ಹತಿ ತೇನೈವ ಫಲಂ ಪ್ರಾಪ್ಸ್ಯತಿ ವೈ ಭವಾನ್ ॥೨೯॥

ಮಹಾಪ್ರಾಜ್ಞನೆ! ಈ ರೀತಿಯಾಗಿ ತಿಳಿದು, ಅವರುಗಳಿಗೆ ಔರ್ಧ್ವದೈಹಿಕ ಕರ್ಮಗಳನ್ನು ಮಾಡುವವನಾಗು, ನೀನು ಅದರಿಂದಲೇ ಫಲವನ್ನು ಹೊಂದುವವನಾಗುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಧೃತರಾಷ್ಟ್ರವಿಶೋಕೇ ಸಪ್ತಮೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ವ್ಯಾಸರಿಂದ ಧೃತರಾಷ್ಟ್ರನಿಗೆ ಶೋಕಪರಿಹಾರಕ ಉಪದೇಶ.

ವೈಶಂಪಾಯನಃ

ವಿದುರಸ್ಯ ತು ತದಾಕ್ಯಂ ನಿಶಮ್ಯ ಕುರುಸತ್ತಮಃ ।
ಪುತ್ರಶೋಕಾಭಿಸಂತಪ್ತಃ ಪಪಾತ ಭುವಿ ಮೂರ್ಚ್ಛಿತಃ ॥೧॥

ವೈಶಂಪಾಯನ– ವಿದುರನ ಆ ಮಾತುಗಳನ್ನು ಕೇಳಿದ ಕುರುಶ್ರೇಷ್ಠನು ಪುತ್ರಶೋಕದಿಂದ ಪರಿತಪ್ತನಾಗಿ ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು.

ತಂ ತಥಾ ಪತಿತಂ ಭೂಮೌ ನಿಃಸಂಜ್ಞಂ ಪ್ರೇಕ್ಷ್ಯ ಬಾಂಧವಾಃ ।
ಕೃಷ್ಣದ್ವೈಪಾಯನಶ್ಚೈವ ಕ್ಷತ್ತಾ ಚ ವಿದುರಸ್ತಥಾ ॥೨॥

ಸಂಜಯಃ ಸುಹೃದಶ್ಚಾನ್ಯೇ ತಥಾ ಯೇ ಚಾಸ್ಯ ಸಮ್ಮತಾಃ ॥೩॥

ಜಲೇನ ಸುಖಶೀತೇನ ತಾಲವೃಂತೈಶ್ಚ ಭಾರತ ।
ಪಸ್ಪೃಶುಃ ಶನಕೈರ್ಗಾತ್ರಂ ವೀಜಮಾನಾಶ್ಚ ಯತ್ನತಃ ॥೪॥

ಅನ್ವಾಸತ ಚಿರಂ ಕಾಲಂ ಧೃತರಾಷ್ಟ್ರಂ ತಥಾವಿಧಮ್ ॥೫॥

ಭರತಕುಲೋತ್ಪನ್ನನೆ! ಆ ರೀತಿಯಲ್ಲಿ ಭೂಮಿಯಲ್ಲಿ ಎಚ್ಚರವಿಲ್ಲದೇ ಬಿದ್ದ ಆತನನ್ನು ನೋಡಿ ಬಂಧುಗಳು, ಕೃಷ್ಣದ್ವೈಪಾಯನರು ಹಾಗೂ ಸೂತಪುತ್ರನಾದ ವಿದುರ, ಸಂಜಯ, ಬೇರೆ ಸ್ನೇಹಿತರು ಹಾಗು ಆತನಿಗೆ ಸಂಮತರಾದವರು ಯಾರಿದ್ದರೋ ಅವರು ಹಿತಕಾರಕವಾದ ತಂಪಾದ ನೀರಿನಿಂದ ಸಂಪ್ರೋಕ್ಷಿಸಿದರು, ತಾಳೇಮರದ ಬೀಸಣಿಕೆಯಿಂದ ಯತ್ನಪೂರ್ವಕವಾಗಿ ಬೀಸಿದರು, ನಿಧಾನವಾಗಿ ಮೈದಡವಿದರು, ಆ ರೀತಿಯಲ್ಲಿದ್ದ ಧೃತರಾಷ್ಟ್ರನಿಗೆ ತುಂಬ ಹೊತ್ತಿನವರೆಗೆ ಶೈತ್ಯೋಪಚಾರವನ್ನು ಮಾಡಿದರು.

ಅಥ ದೀರ್ಘಸ್ಯ ಕಾಲಸ್ಯ ಲಬ್ಧಸಂಜ್ಞೋ ಮಹೀಪತಿಃ ।
ವಿಲಲಾಪ ಚಿರಂ ಕಾಲಂ ಪುತ್ರಾರ್ತಿಭಿರಭಿಪ್ಲುತಃ ॥೬॥

ಅನಂತರದಲ್ಲಿ ತುಂಬ ತಡವಾಗಿ ಎಚ್ಚರಗೊಂಡ ಪುತ್ರಶೋಕದಿಂದ ತುಂಬಿಹೋಗಿರುವ ಭೂಮಿಗೊಡೆಯನು ತುಂಬ ಹೊತ್ತಿನ ಪರ್ಯಂತ ರೋದಿಸಿದನು.

ಮನುಷ್ಯನು ಅಭಯವನ್ನು ನೀಡುವುದರಿಂದ ಯಾವ ಸ್ಥಾನವನ್ನು ಹೊಂದುವನೋ, ಆ ಸ್ಥಾನವನ್ನು ಸಾವಿರ ಯಜ್ಞಗಳನ್ನು ಆಚರಿಸುವುದರಿಂದ ಹೊಂದಲಾರನು, ನಿತ್ಯ ಉಪವಾಸದಿಂದಲೂ ಹೊಂದಲಾರನು.

ನ ಹ್ಯಾತ್ಮನಃ ಪ್ರಿಯತರಂ ಕಿಂಚಿದ್ ಭೂತೇಷು ನಿಶ್ಚಿತಮ್ ।
ಅನಿಷ್ಟಂ ಸರ್ವಭೂತಾನಾಂ ಮರಣಂ ನಾಮ ಭಾರತ ॥೨೬॥

ಭರತಕುಲೋತ್ಪನ್ನನೆ! ಪ್ರಾಣಿಗಳಿಗೆ ಜೀವಕ್ಕಿಂತ ಪ್ರಿಯವಾದದ್ದು ಮತ್ತೊಂದು ಇಲ್ಲ ಎಂದು ನಿಶ್ಚಿತವಾಗಿದೆ, ಎಲ್ಲ ಪ್ರಾಣಿಗಳಿಗೂ ಸಾವು ಎನ್ನುವುದು ಅನಿಷ್ಟ.

ತಸ್ಮಾತ್ ಸರ್ವೇಷು ಭೂತೇಷು ದಯಾ ಕಾರ್ಯಾ ವಿಪಶ್ಚಿತಾ ॥೨೭॥

ಜ್ಞಾನಿಯಾದವನು ಈ ಕಾರಣದಿಂದ ಎಲ್ಲ ಪ್ರಾಣಿಗಳಲ್ಲಿ ದಯೆಯನ್ನು ಮಾಡಬೇಕು.

ನಾನಾಯೋಗಸಮಾಯುಕ್ತಾ ಬುದ್ಧಿಜಾಲೇನ ಸಂವೃತಾಃ ।
ಸುಸೂಕ್ಷ್ಮದೃಷ್ಟಯೋ ಧೀರಾ ವ್ರಜಂತಿ ಬ್ರಹ್ಮಸಾಮ್ಯತಾಮ್ ॥೨೮॥

ವಿವಿಧ ಯೋಗಗಳನ್ನು ಹೊಂದಿದ, ಅನೇಕ ವಿಚಾರಗಳಿಂದ ಕೂಡಿರುವ, ಅತ್ಯಂತ ಸೂಕ್ಷ್ಮ ದೃಷ್ಟಿಯನ್ನು ಹೊಂದಿರುವ ಧೀರರು ಬ್ರಹ್ಮನ ಸಾಮ್ಯವನ್ನು (ತಮ್ಮ ಯೋಗ್ಯತಾನುಸಾರವಾಗಿ ಜ್ಞಾನಾನಂದಗಳನ್ನು) ಹೊಂದುವರು.

ಏವಂ ಜ್ಞಾತ್ವಾ ಮಹಾಪ್ರಾಜ್ಞ ಸ ತೇಷಾಮೌರ್ಧ್ವದೈಹಿಕಮ್ ।
ಕರ್ತುಮರ್ಹತಿ ತೇನೈವ ಫಲಂ ಪ್ರಾಪ್ಸ್ಯತಿ ವೈ ಭವಾನ್ ॥೨೯॥

ಮಹಾಪ್ರಾಜ್ಞನೆ! ಈ ರೀತಿಯಾಗಿ ತಿಳಿದು, ಅವರುಗಳಿಗೆ ಔರ್ಧ್ವದೈಹಿಕ ಕರ್ಮಗಳನ್ನು ಮಾಡುವವನಾಗು, ನೀನು ಅದರಿಂದಲೇ ಫಲವನ್ನು ಹೊಂದುವವನಾಗುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಧೃತರಾಷ್ಟ್ರವಿಶೋಕೇ ಸಪ್ತಮೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ವ್ಯಾಸರಿಂದ ಧೃತರಾಷ್ಟ್ರನಿಗೆ ಶೋಕಪರಿಹಾರಕ ಉಪದೇಶ.

ವೈಶಂಪಾಯನಃ

ವಿದುರಸ್ಯ ತು ತದ್ವಾಕ್ಯಂ ನಿಶಮ್ಯ ಕುರುಸತ್ತಮಃ ।
ಪುತ್ರಶೋಕಾಭಿಸಂತಪ್ತಃ ಪಪಾತ ಭುವಿ ಮೂರ್ಚ್ಛಿತಃ ॥೧॥

ವೈಶಂಪಾಯನ– ವಿದುರನ ಆ ಮಾತುಗಳನ್ನು ಕೇಳಿದ ಕುರುಶ್ರೇಷ್ಠನು ಪುತ್ರಶೋಕದಿಂದ ಪರಿತಪ್ತನಾಗಿ ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು.

ತಂ ತಥಾ ಪತಿತಂ ಭೂಮೌ ನಿಃಸಂಜ್ಞಂ ಪ್ರೇಕ್ಷ್ಯ ಬಾಂಧವಾಃ ।
ಕೃಷ್ಣದ್ವೈಪಾಯನಶ್ಚೈವ ಕ್ಷತ್ತಾ ಚ ವಿದುರಸ್ತಥಾ ॥೨॥

ಸಂಜಯಃ ಸುಹೃದಶ್ಚಾನ್ಯೇ ತಥಾ ಯೇ ಚಾಸ್ಯ ಸಮ್ಮತಾಃ ॥೩॥

ಜಲೇನ ಸುಖಶೀತೇನ ತಾಲವೃಂತೈಶ್ಚ ಭಾರತ ।
ಪಸ್ಪೃಶುಃ ಶನಕೈರ್ಗಾತ್ರಂ ವೀಜಮಾನಾಶ್ಚ ಯತ್ನತಃ ॥೪॥

ಅನ್ವಾಸತ ಚಿರಂ ಕಾಲಂ ಧೃತರಾಷ್ಟ್ರಂ ತಥಾವಿಧಮ್ ॥೫॥

ಭರತಕುಲೋತ್ಪನ್ನನೆ! ಆ ರೀತಿಯಲ್ಲಿ ಭೂಮಿಯಲ್ಲಿ ಎಚ್ಚರವಿಲ್ಲದೇ ಬಿದ್ದ ಆತನನ್ನು ನೋಡಿ ಬಂಧುಗಳು, ಕೃಷ್ಣದ್ವೈಪಾಯನರು ಹಾಗೂ ಸೂತಪುತ್ರನಾದ ವಿದುರ, ಸಂಜಯ, ಬೇರೆ ಸ್ನೇಹಿತರು ಹಾಗು ಆತನಿಗೆ ಸಂಮತರಾದವರು ಯಾರಿದ್ದರೋ ಅವರು ಹಿತಕಾರಕವಾದ ತಂಪಾದ ನೀರಿನಿಂದ ಸಂಪ್ರೋಕ್ಷಿಸಿದರು, ತಾಳೇಮರದ ಬೀಸಣಿಕೆಯಿಂದ ಯತ್ನಪೂರ್ವಕವಾಗಿ ಬೀಸಿದರು, ನಿಧಾನವಾಗಿ ಮೈದಡವಿದರು, ಆ ರೀತಿಯಲ್ಲಿದ್ದ ಧೃತರಾಷ್ಟ್ರನಿಗೆ ತುಂಬ ಹೊತ್ತಿನವರೆಗೆ ಶೈತ್ಯೋಪಚಾರವನ್ನು ಮಾಡಿದರು.

ಅಥ ದೀರ್ಘಸ್ಯ ಕಾಲಸ್ಯ ಲಬ್ಧಸಂಜ್ಞೋ ಮಹೀಪತಿಃ ।
ವಿಲಲಾಪ ಚಿರಂ ಕಾಲಂ ಪುತ್ರಾರ್ತಿಭಿರಭಿಪ್ಲುತಃ ॥೬॥

ಅನಂತರದಲ್ಲಿ ತುಂಬ ತಡವಾಗಿ ಎಚ್ಚರಗೊಂಡ ಪುತ್ರಶೋಕದಿಂದ ತುಂಬಿಹೋಗಿರುವ ಭೂಮಿಗೊಡೆಯನು ತುಂಬ ಹೊತ್ತಿನ ಪರ್ಯಂತ ರೋದಿಸಿದನು.

ಧೃತರಾಷ್ಟ್ರಃ

ಧಿಗಸ್ತು ಖಲು ಮಾನುಷ್ಯಂ ಮಾನುಷ್ಯೇ ಚ ಪರಿಗ್ರಹಮ್ ।
ಯತೋ ಮೂಲಾನಿ ದುಃಖಾನಿ ಸಂಭವಂತಿ ಪುನಃ ಪುನಃ ॥೭॥

ಧೃತರಾಷ್ಟ್ರ- ಮನುಷ್ಯತ್ವಕ್ಕೆ ಧಿಕ್ಕಾರವಿರಲಿ, ಅದರಲ್ಲಿಯೂ ದುಃಖಕ್ಕೆ ಮೂಲವಾದ ವಿವಾಹಾದಿ ಬಂಧನಕ್ಕೆ ಧಿಕ್ಕಾರವಿರಲಿ. ಏಕೆಂದರೆ (ಈ ವಿವಾಹಾದಿಗಳೆಂಬ ಸಂಸಾರಬಂಧನವೆ) ದುಃಖದ ಮೂಲವಾಗಿದೆ, ಆದ್ದರಿಂದಲೇ ಮತ್ತೆ ಮತ್ತೆ ದುಃಖಗಳು ಪ್ರಾಪ್ತವಾಗುವವು.

ಮಿತ್ರನಾಶೇऽರ್ಥನಾಶೇ ಚ ಜ್ಞಾತಿಸಂಬಂಧಿನಾಮಪಿ ।
ಪ್ರಾಪ್ಯತೇ ಸುಮಹದ್ದುಃಖಂ ವಿಷಾಗ್ನಿಪ್ರತಿಮಂ ವಿಭೋ ॥೮॥

ಒಡೆಯನೆ! ಸ್ನೇಹಿತನ ಸಾವುಂಟಾದಲ್ಲಿ, ಹಣದ ನಾಶವಾದಲ್ಲಿ, ಜ್ಞಾತಿ ಸಂಬಂಧಿಗಳ ನಾಶವಾದಲ್ಲಿ, ಮೂರ್ತಿಮತ್ತಾದ ಬೆಂಕಿ ವಿಷಗಳಿಂದ ಪ್ರಾಪ್ತವಾಗುವ ದುಃಖದಂತೆ ಭಾರೀ ದುಃಖವು ಬಂದೊದಗುವುದು.

ಯೇನ ದಹ್ಯಂತಿ ಗಾತ್ರಾಣಿ ಯೇನ ಪ್ರಜ್ಞಾ ವಿನಶ್ಯತಿ ।
ಯೇನಾಭಿಭೂತಃ ಪುರುಷೋ ಮರಣಂ ಬಹುಮನ್ಯತೇ ॥೯॥

ತದಿದಂ ವ್ಯಸನಂ ಪ್ರಾಪ್ತಂ ಮಯಾ ಭಾಗ್ಯವಿಪರ್ಯಯಾತ್ ।
ತಚ್ಚೈವಾಹಂ ಕರಿಷ್ಯಾಮಿ ಅದ್ಯೈವ ದ್ವಿಜಸತ್ತಮ ॥೧೦॥

ಯಾವುದರಿಂದ ದೇಹವು ದಹಿಸುವುದೊ, ಯಾವುದರಿಂದ ನಮ್ಮ ವಿವೇಕವೇ ನಾಶಹೊಂದುವುದೊ, ಯಾವುದನ್ನು ಹೊಂದುವುದರಿಂದ ಮನುಜನು ಮರಣವನ್ನೇ ಒಳಿತು ಎನ್ನುವನೋ, ಆ ವ್ಯಸನವು ನನ್ನ ಅದೃಷ್ಟದ ವ್ಯತ್ಯಯದಿಂದ ಈಗ ಪ್ರಾಪ್ತವಾಗಿದೆ, ಬ್ರಾಹ್ಮಣೋತ್ತಮನೆ (ಕೃಷ್ಣದ್ವೈಪಾಯನರೆ)! ನಾನು ಈಗ ಹಾಗೆಯೇ ಮಾಡುವೆನು (ಸಾವನ್ನು ಹೊಂದುವೆನು).

ವೈಶಂಪಾಯನಃ

ಇತ್ಯುಕ್ತ್ವಾ ಚ ಮಹಾತ್ಮಾನಂ ಪಿತರಂ ಬ್ರಹ್ಮವಿತ್ತಮಮ್ ।
ಧೃತರಾಷ್ಟ್ರೋऽಭವನ್ಮೂಢಃ ಶೋಕಂ ಚ ಪರಮಂ ಗತಃ ॥೧೧॥

ವೈಶಂಪಾಯನ– ಧೃತರಾಷ್ಟ್ರನು ಈ ರೀತಿಯಾಗಿ ಮಹಾತ್ಮನಾದ ಬ್ರಹ್ಮಜ್ಞಾನಿಯಾದ ತಂದೆಯನ್ನು (ಕೃಷ್ಣದ್ವೈಪಾಯನರನ್ನು) ಉದ್ದೇಶಿಸಿ ಹೇಳಿ, ಏನೂ ತಿಳಿಯದವನಾಗಿ ತುಂಬ ಶೋಕಕ್ಕೆ ಒಳಗಾದನು.

ಅಭೂಚ್ಚ ತೂಷ್ಣೀಂ ರಾಜಾಽಸೌ ಧ್ಯಾಯಮಾನೋ ಮಹೀಪತಿಃ ॥೧೨॥

ಮತ್ತೆ ಭೂಮಿಗೆ ಒಡೆಯನಾದ ರಾಜನು ಚಿಂತಿಸುತ್ತ ಮೌನಿಯಾದನು.

ತಸ್ಯ ತದ್ವಚನಂ ಶ್ರುತ್ವಾ ಕೃಷ್ಣದ್ವೈಪಾಯನಃ ಪ್ರಭುಃ ।
ಪುತ್ರಶೋಕಾಭಿಸಂತಪ್ತಂ ಪುತ್ರಂ ವಚನಮಬ್ರವೀತ್ ॥೧೩॥

ಒಡೆಯರಾದ ಕೃಷ್ಣದ್ವೈಪಾಯನರು ಆತನ ಆ ಮಾತುಗಳನ್ನು ಕೇಳಿ ಮಗನ ಶೋಕದಿಂದ ಪರಿತಪಿಸುತ್ತಿರುವ (ತನ್ನ) ಮಗನನ್ನು ಉದ್ದೇಶಿಸಿ ಮಾತುಗಳನ್ನು ಹೇಳಿದರು.

ವ್ಯಾಸಃ

ಧೃತರಾಷ್ಟ್ರ ಮಹಾಬಾಹೋ ಶೃಣು ವಕ್ಷ್ಯಾಮಿ ಪುತ್ರಕ ॥೧೪॥

ವ್ಯಾಸರು– ನೀಳಬಾಹುವೆ, ಧೃತರಾಷ್ಟ್ರ ಮಗನೆ! ಹೇಳುವೆನು, ಕೇಳು.

ಶ್ರುತವಾನಸಿ ಮೇಧಾವೀ ಧರ್ಮಾರ್ಥಕುಶಲಃ ಪ್ರಭೋ ।
ನ ತೇಽಸ್ಯವಿದಿತಂ ಕಿಂಚಿದ್ ವೇದಿತವ್ಯಂ ಪರಂತಪ ॥೧೫॥

ಶತ್ರುವಿಗೆ ದುಃಖದಾಯಕನೆ, ಒಡೆಯನೆ! ಶಾಸ್ತ್ರವನ್ನು ಕೇಳಿದವನಾಗಿರುವಿ, ಮೇಧಾವಿಯಾಗಿರುವಿ, ಧರ್ಮ-ಅರ್ಥಗಳಲ್ಲಿ ಕುಶಲನಾಗಿರುವಿ, ನೀನು ತಿಳಿಯದೇ ಇರುವುದು ಯಾವುದೂ ಇಲ್ಲ, ತಿಳಿಯಬೇಕಾದದ್ದು ಏನೂ ಇಲ್ಲ.

ಅನಿತ್ಯತಾಂ ಹಿ ಭೂತಾನಾಂ ವಿಜಾನಾಸಿ ನ ಸಂಶಯಃ ॥೧೬॥

ಪ್ರಾಣಿಗಳ ಅನಿತ್ಯತ್ವವನ್ನು ತಿಳಿದವನಾಗಿರುವಿ, ಇದರಲ್ಲಿ ಸಂದೇಹವಿಲ್ಲ.

ಅಧ್ರುವೇ ಜೀವಲೋಕೇಽಸ್ಮಿನ್ ಸ್ಥಾನೇ ವಾ ಶಾಶ್ವತೇ ಸತಿ ।
ಜೀವಿತೇ ಮರಣಾಂತೇ ಚ ಕಸ್ಮಾಚ್ಛೋಚಸಿ ಪುತ್ರಕ ॥೧೭॥

ಈ ಜೀವಿಸಮೂಹವು ಅನಿತ್ಯ, ಶಾಶ್ವತವಾದ ಸ್ಥಾನವು ಬೇರೆಯೇ ಇದೆ, ಬದುಕಿದವಗೆ ಸಾವೇ ಕೊನೆಯದು, ಮಗನೇ! ಯಾವ ಕಾರಣದಿಂದ ಶೋಕಿಸುತ್ತಿರುವಿ?

ಪ್ರತ್ಯಕ್ಷಸ್ತವ ರಾಜೇಂದ್ರ ವೈರಸ್ಯಾಸ್ಯ ಸಮುದ್ಭವಃ ।
ಪುತ್ರಂ ತೇ ಕಾರಣಂ ಕೃತ್ವಾ ಕಾಲಯೋಗೇನ ನಿರ್ಮಿತಃ ॥೧೮॥

ರಾಜರ ಒಡೆಯನೆ! ನಿನ್ನ ಸಮಕ್ಷಮದಲ್ಲಿಯೇ ಈ ದ್ವೇಷವು ಸಮುತ್ಪನ್ನವಾಯಿತು, ನಿನ್ನ ಮಗನನ್ನು ಕಾರಣವನ್ನಾಗಿಸಿಕೊಂಡು ಕಾಲಯೋಗವು (ಈ ದ್ವೇಷವನ್ನು) ನಿರ್ಮಿಸಿತು.

ಅವಶ್ಯಂ ಭವಿತವ್ಯೇ ಚ ಕುರೂಣಾಂ ಸಂಕ್ಷಯೇ ನೃಪ ।
ಕಸ್ಮಾಚ್ಛೋಚಸಿ ತಾನ್ ಶೂರಾನ್ ಗತಾನ್ ಪರಮಿಕಾಂ ಗತಿಮ್ ॥೧೯॥

ರಾಜನೆ! ಕುರುಗಳ ನಾಶವು ಅವಶ್ಯವಾಗಿ ಆಗಲೇ ಬೇಕಿತ್ತು, ಉತ್ತುಮಗತಿಯನ್ನು ಹೊಂದಿರುವ ಆ ಶೂರರನ್ನು ಉದ್ದೇಶಿಸಿ ಏತಕ್ಕಾಗಿ ದುಃಖಿಸುವಿ?

ಜಾನತಾ ಚ ಮಹಾಬಾಹೋ ವಿದುರೇಣ ಮಹಾತ್ಮನಾ ।
ಯತಿತಂ ಸರ್ವಯತ್ನೇನ ಶಮಂ ಪ್ರತಿ ನರೇಶ್ವರ ॥೨೦॥

ನೀಳಬಾಹುವೆ, ಜನರ ಒಡೆಯನೆ! ಮಹಾತ್ಮನಾದ ವಿದುರನು ಎಲ್ಲವಿಧದಿಂದಲೂ ಶಾಂತಿಗಾಗಿ ಯತ್ನಿಸಿದನು, ಅದನ್ನು ನೀನೂ ತಿಳಿದಿರುವಿ.

ನ ಚ ದೈವಕೃತೋ ಮಾರ್ಗಃ ಶಕ್ಯೋ ಭೂತೇನ ಕೇನಚಿತ್ ।
ಘಟತಾಽಪಿ ಚಿರಂ ಕಾಲಂ ನಿಯಂತುಮಿತಿ ಮೇ ಮತಿಃ ॥೨೧॥

ಯಾವುದೋ ವ್ಯಕ್ತಿಯಿಂದ ದೀರ್ಘಕಾಲದವರೆಗೆ ತಡೆಯಲು ಯತ್ನಿಸಿದರೂ ಸಹ, ದೈವವು ನಿಶ್ಚಯಿಸಿದ ಮಾರ್ಗವನ್ನು ತಡೆಯಲು ಶಕ್ಯವಿಲ್ಲ ಎನ್ನುವುದು ನನ್ನ ದೃಢನಿರ್ಣಯ.

ದೈವತಾನಾಂ ಹಿ ಯತ್ ಕಾರ್ಯಂ ಮಯಾ ಪ್ರತ್ಯಕ್ಷತಃ ಶ್ರುತಮ್ ।
ತತ್ ತೇಽಹಂ ಸಂಪ್ರವಕ್ಷ್ಯಾಮಿ ಕಥಂ ಸ್ಥೈರ್ಯಂ ಭವೇತ್ ತವ ॥೨೨॥

ದೇವತೆಗಳು ಯಾವುದನ್ನು, ಹೇಗೆ ಮಾಡಬೇಕು ಎನ್ನುವದನ್ನು ನಾನು ಸ್ವತಃ ಕೇಳಿರುವೆನು. ಅದನ್ನು ನಿನಗೆ ನಾನು ಹೇಳುವೆನು, ಆಗ ನಿನಗೆ ಧೈರ್ಯ ಬಂದೀತು.

ಪುರಾऽಹಂ ಸ್ವೇಚ್ಛಯಾ ಯಾತಃ ಸಭಾಮೈಂದ್ರೀಂ ಜಿತಕ್ಲಮಃ ।
ಅಪಶ್ಯಂ ತತ್ರ ಚ ಸದಾ ಸಮವೇತಾನ್ ದಿವೌಕಸಃ ॥೨೩॥

ನಾರದಪ್ರಮುಖಾಂಶ್ಚಾಪಿ ಸರ್ವಾನ್ ದೇವರ್ಷಿಸತ್ತಮಾನ್ ॥೨೪॥

ಹಿಂದೆ, ಶ್ರಮರಹಿತನಾದ ನಾನು ಸ್ವೇಚ್ಛೆಯಿಂದ ಇಂದ್ರಸಭೆಗೆ ಹೋದೆನು, ಅಲ್ಲಿ ಮಿಲಿತರಾದ ದೇವತೆಗಳನ್ನು, ನಾರದರೆ ಮುಂತಾದ ಎಲ್ಲ ದೇವರ್ಷಿಶ್ರೇಷ್ಠರನ್ನು ಕಂಡೆನು.

ತತ್ರಾಪಿ ಚ ಮಯಾ ದೃಷ್ಟಾ ಪೃಥಿವೀ ಪೃಥಿವೀಪತೇ ।
ಕಾರ್ಯಾರ್ಥಮುಪಸಂಪನ್ನಾ ದೇವತಾನಾಂ ಸಮೀಪತಃ ॥೨೫॥

ಭೂಮಿಯ ಒಡೆಯನೆ! ಅದರಲ್ಲೂ ಸಹ, ದೇವತೆಗಳ ಸಮೀಪದಲ್ಲಿ ಕಾರ್ಯಭಾರದಿಂದ ಆಗಮಿಸಿದ ಭೂದೇವಿಯನ್ನು ನಾನು ಕಂಡೆನು.

ಉಪಾಗಮ್ಯ ತದಾ ಧಾತ್ರೀ ದೇವಾನಾಹ ಸಮಾಗತಾನ್ ॥೨೬॥

ಆಗ ಅಲ್ಲಿಗೆ ಆಗಮಿಸಿದ ಭೂದೇವಿಯು ಮಿಲಿತರಾದ ದೇವತೆಗಳನ್ನು ಉದ್ದೇಶಿಸಿ ಹೇಳಿದಳು.

ಪೃಥಿವೀ

ಯತ್ ಕಾರ್ಯಂ ಮಮ ಯುಷ್ಮಾಭಿರ್ಬ್ರಹ್ಮಣಃ ಸದನೇ ತದಾ ।
ಪ್ರತಿಜ್ಞಾತಂ ಮಹಾಭಾಗಾಃ ತಚ್ಛೀಘ್ರಂ ಸಂವಿಧೀಯತಾಮ್ ॥೨೭॥

ಭೂದೇವಿ– ಮಹಾಮಹಿಮರೆ! ಅಂದು ಬ್ರಹ್ಮನ ಸದನದಲ್ಲಿ ನನ್ನ ಸಲುವಾಗಿ ಯಾವ ಕಾರ್ಯವನ್ನು ಮಾಡುವುದಾಗಿ ಶಪಿಸಿ ಹೇಳಿದ್ದಿರೋ ಅದನ್ನು ಶೀಘ್ರವಾಗಿ ಮಾಡಿರಿ.

ವ್ಯಾಸಃ

ತಸ್ಯಾಸ್ತದ್ವಚನಂ ಶ್ರುತ್ವಾ ವಿಷ್ಣುರ್ಲೋಕನಮಸ್ಕೃತಃ ।
ಉವಾಚ ಪ್ರಹಸನ್ ವಾಕ್ಯಂ ಪ್ರಭುಸ್ತಾಂ ದೇವಸಂಸದಿ ॥೨೮॥

ವೇದವ್ಯಾಸರು– ಆಕೆಯ ಆ ಮಾತನ್ನು ಕೇಳಿ, ಲೋಕವಂದ್ಯನಾದ ಸ್ವಾಮಿಯಾದ ವಿಷ್ಣುವು ಮುಗುಳುನಗುತ್ತಾ ಆಕೆಯನ್ನು ಉದ್ದೇಶಿಸಿ ದೇವತೆಗಳ ಸಭೆಯಲ್ಲಿ ಹೇಳಿದನು.

ಶ್ರೀಭಗವಾನ್

ಧೃತರಾಷ್ಟ್ರಸ್ಯ ಪುತ್ರಾಣಾಂ ಯಸ್ತು ಜ್ಯೇಷ್ಠಃ ಶತಸ್ಯ ವೈ ।
ದುರ್ಯೋಧನ ಇತಿ ಖ್ಯಾತಃ ಸ ತೇ ಕಾರ್ಯಂ ಕರಿಷ್ಯತಿ ॥೨೯॥

ಭಗವಂತ– ಧೃತರಾಷ್ಟ್ರನ ನೂರು ಮಕ್ಕಳಲ್ಲಿ ಹಿರಿಯನಾದ ಯಾವನು ದುರ್ಯೋಧನ ಎಂದಿರುವನೋ ಆತನು ನಿನ್ನ ಕಾರ್ಯವನ್ನು ಮಾಡುವನು.

ತಂ ಚ ಪ್ರಾಪ್ಯ ಮಹೀಪಾಲಂ ಕೃತಕೃತ್ಯಾ ಭವಿಷ್ಯಸಿ ॥೩೦॥

ಆ ಭೂಮಿಯ ಒಡೆಯನನ್ನು ಸೇರಿದಲ್ಲಿ ನೀನು ಕೃತಕೃತ್ಯಳಾಗುವಿ.

ತಸ್ಯಾರ್ಥೇ ಪೃಥಿವೀಪಾಲಾಃ ಕುರುಕ್ಷೇತ್ರಂ ಸಮಾಗತಾಃ ।
ಅನ್ಯೋನ್ಯಂ ಘಾತಯಿಷ್ಯಂತಿ ದೃಢೈಃ ಶಸ್ತ್ರೈಃ ಪ್ರಹಾರಿಣಃ ॥೩೧॥

ಆತನ ಸಲುವಾಗಿ ಭೂಮಿಯ ಒಡೆಯರು ಕುರುಕ್ಷೇತ್ರದಲ್ಲಿ ಮಿಲಿತರಾಗಿರುವರು. ಪ್ರಬಲವಾದ ಶಸ್ತ್ರಗಳಿಂದ ಪ್ರಹರಿಸುವ ಅವರು ಪರಸ್ಪರವಾಗಿ ಸಂಹರಿಸಿಕೊಳ್ಳುತ್ತಾರೆ.

ತತಸ್ತೇ ಭವಿತಾ ದೇವಿ ಭಾರಸ್ಯ ಯುಧಿ ನಾಶನಮ್ ।
ಗಚ್ಛ ಶೀಘ್ರಂ ಸ್ವಕಂ ಸ್ಥಾನಂ ಲೋಕಾನ್ ಧಾರಯ ಶೋಭನೇ ॥೩೨॥

ದೇವಿ, ಮಂಗಳಕರಳೆ! ಆದ್ದರಿಂದ ಯುದ್ಧದಲ್ಲಿ ನಿನ್ನ ಭಾರವು ನಾಶವಾಗಲಿದೆ (ನಿನಗೆ ಭಾರವಾದ ದುಷ್ಟರ ನಾಶವು ಸಂಭವಿಸುವುದು). ಶೀಘ್ರವಾಗಿ ನಿನ್ನ ಸ್ಥಾನಕ್ಕೆ ತೆರಳು, ಲೋಕವನ್ನು ಧರಿಸುವವಳಾಗು.

ವ್ಯಾಸಃ

ಸ ಏಷ ತೇ ಸುತೋ ರಾಜನ್ ಕಾಲಃ ಸಂಹಾರಕಾರಣಾತ್ ।
ಕಲೇರಂಶಃ ಸಮುತ್ಪನ್ನೋ ಗಾಂಧಾರ್ಯಾ ಜಠರೇ ನೃಪ ॥೩೩॥

ವೇದವ್ಯಾಸರು– ರಾಜನೆ! ಕಲಿಯ ಅಂಶಭೂತನಾದ ಆ ಈ ಯಾವ ನಿನ್ನ ಮಗನು (ಜಗವನ್ನು) ಸಂಹರಿಸಲು ಗಾಂಧಾರಿಯ ಹೊಟ್ಟೆಯಲ್ಲಿ ಕಾಲನಾಗಿ (ಮೃತ್ಯುವಾಗಿ) ಹುಟ್ಟಿರುವನು.

ಅಮರ್ಷೀ ಬಲವಾನ್ ಶೂರಃ ಕ್ರೋಧನೋ ದುಷ್ಟಸಾಧನಃ ।
ದೈವಯೋಗಾತ್ ಸಮುತ್ಪನ್ನಾ ಭ್ರಾತರಸ್ತಸ್ಯ ತಾದೃಶಾಃ ॥೩೪॥

ಬಲಿಷ್ಠನು, ಶೂರನು, ಸೇಡಿನ ಸ್ವಭಾವದವನು, ಸಿಟ್ಟಿಗೆ ಅಧೀನನಾದವನು, (ಎಷ್ಟೇ ಸಂಪತ್ತು ದೊರೆತರೂ) ತೃಪ್ತಿಯನ್ನು ಕಾಣದವನು (ದುರ್ಯೋಧನನು). ಅದೃಷ್ಟವಶಾತ್ ಆತನ ಸಹೋದರರೂ ಅಂತಹವರೇ ಹುಟ್ಟಿದರು.

ಶಕುನಿರ್ಮಾತುಲಶ್ಚೈವ ಕರ್ಣಶ್ಚ ಪರಮಃ ಸಖಾ ।
ಸಮುತ್ಪನ್ನಾ ವಿನಾಶಾರ್ಥಂ ಪೃಥಿವ್ಯಾಂ ಸಹಿತಾ ನೃಪಾಃ ॥೩೫॥

(ಆತನ) ಸೋದರಮಾವ ಶಕುನಿ ಮತ್ತು ಪರಮ ಮಿತ್ರ ಕರ್ಣ ಇವರೆಲ್ಲರೂ ಇತರ ದೊರೆಗಳಿಂದ ಕೂಡಿದವರಾಗಿ ಭೂಮಿಯಲ್ಲಿ (ಸರ್ವ) ನಾಶಕ್ಕಾಗಿಯೇ ಹುಟ್ಟಿದರು.

ಏತಮರ್ಥಂ ಮಹಾಬಾಹೋ ನಾರದೋ ವೇದ ತತ್ತ್ವತಃ ॥೩೬॥

ನೀಳಬಾಹುವೆ! ಈ ವಿಷಯವನ್ನು ನಾರದನು ಯಥಾರ್ಥವಾಗಿ ತಿಳಿದಿದ್ದನು.

ಆತ್ಮಾಪರಾಧಾತ್ ಪುತ್ರಾಸ್ತೇ ವಿನಷ್ಟಾಃ ಪೃಥಿವೀಪತೇ ।
ಮಾ ತಾನ್ ಶೋಚಸ್ವ ರಾಜೇಂದ್ರ ನ ಹಿ ಶೋಕೇऽಸ್ತಿ ಕಾರಣಮ್ ॥

ಭೂಮಿಯ ಒಡೆಯನೆ! ತಮ್ಮ ತಪ್ಪಿನಿಂದಲೇ ನಿನ್ನ ಮಕ್ಕಳು ನಾಶವನ್ನು ಹೊಂದಿದರು, ಅವರನ್ನು ಉದ್ದೇಶಿಸಿ ದುಃಖಿಸದಿರು, ರಾಜಶ್ರೇಷ್ಠನೆ! ದುಃಖಿಸಲು ಕಾರಣವಿಲ್ಲ.

ನ ಹಿ ತೇ ಪಾಂಡವಾಃ ಸ್ವಲ್ಪಮ್ ಅಪರಾಧ್ಯಂತಿ ತೇ ನೃಪ ।
ಪುತ್ರಾಸ್ತವ ದುರಾತ್ಮಾನೋ ಯೈರಿಯಂ ಘಾತಿತಾ ಮಹೀ ॥೩೮॥

ರಾಜನೆ! ಆ ಪಾಂಡುಪುತ್ರರು ನಿನಗೆ ಸ್ವಲ್ಪವೂ ದ್ರೋಹವನ್ನು ಮಾಡಿಲ್ಲ, ದುಷ್ಟಸ್ವಭಾವದ ನಿನ್ನ ಮಕ್ಕಳು, ಅವರಿಂದ ಈ ಭೂಮಿಯೇ ಹಾನಿಗೆ ಒಳಗಾಯಿತು.

ನಾರದೇನ ಸಮಾಖ್ಯಾತಂ ಪೂರ್ವಮೇವ ನ ಸಂಶಯಃ ।
ಯುಧಿಷ್ಠಿರಸ್ಯ ಸಮಿತೌ ರಾಜಸೂಯೇ ನಿವೇದಿತಮ್ ॥೩೯॥

ಈ ಮೊದಲೇ ನಾರದರು ಈ ವಿಚಾರವನ್ನು ಸಂದೇಹಕ್ಕೆ ಅವಕಾಶವಿಲ್ಲದಂತೆ ತಿಳಿಸಿದ್ದರು, ಯುಧಿಷ್ಠಿರನ ರಾಜಸೂಯೆಯ ಸಭೆಯಲ್ಲಿ ತಿಳಿಸಿದ್ದರು.

ಪಾಂಡವಾಃ ಕೌರವಾಶ್ಚೈವ ಸಮಾಸಾದ್ಯ ಪರಸ್ಪರಮ್ ।
ನ ಭವಿಷ್ಯಂತಿ ರಾಜೇಂದ್ರ ಯತ್ ತೇ ಕೃತ್ಯಂ ತದಾಚರ ॥೪೦॥

'ಪಾಂಡುಪುತ್ರರು ಕೌರವರು ಪರಸ್ಪರ (ಸಂಘರ್ಷದಲ್ಲಿ) ಮಿಲಿತರಾಗಿ ಉಳಿಯಲಾರರು, ರಾಜರ ಒಡೆಯನೆ! ಯಾವುದು ಕರ್ತವ್ಯವೋ ಅದನ್ನು ಆಚರಿಸು' ಎಂದು.

ನಾರದಸ್ಯ ವಚಃ ಶ್ರುತ್ವಾ ತಥಾऽಕುರ್ವತ ಪಾಂಡವಾಃ ।
ಏತತ್ ತೇ ಸರ್ವಮಾಖ್ಯಾತಂ ದೇವಗುಹ್ಯಂ ಸನಾತನಮ್ ॥೪೧॥

ನಾರದರ ಮಾತನ್ನು ಕೇಳಿ ಪಾಂಡುಪುತ್ರರು ಹಾಗೆಯೇ ಮಾಡಿದರು. ಪ್ರಾಚೀನವಾದ ಈ ಎಲ್ಲ ದೇವರಹಸ್ಯವನ್ನು ನಿನಗೆ ತಿಳಿಸಿರುವೆನು.

ಕಥಂ ತೇ ಶೋಕನಾಶಃ ಸ್ಯಾತ್ ಪ್ರಾಣೇಷು ಚ ದಯಾ ಪ್ರಭೋ ।
ಸ್ನೇಹಶ್ಚ ಪಾಂಡುಪುತ್ರೇಷು ಜ್ಞಾತ್ವಾ ದೈವಕೃತಂ ವಿಧಿಮ್ ॥೪೨॥

(ಈ ಸುದ್ದಿಯನ್ನು ತಿಳಿದ ಮೇಲೆ) ಹೇಗೆ ತಾನೆ ನಿನ್ನ ದುಃಖದ ನಾಶವು ಆಗದಿದ್ದೀತು? ನಿನ್ನ ಪ್ರಾಣದ ಮೇಲೆ ದಯೆತೋರು (ಆತ್ಮಹತ್ಯೆಗೆ ಯತ್ನಿಸದಿರು ಎಂದು ಭಾವ). (ಈ ಎಲ್ಲವೂ) ದೈವದಿಂದ ನಡೆಸಲಾಗಿದೆ ಎಂದು ತಿಳಿದು, ಪಾಂಡುಪುತ್ರರಲ್ಲಿ ಸ್ನೇಹವನ್ನು ಮಾಡು.

ಏಷ ಚಾರ್ಥೋ ಮಹಾರಾಜ ಪೂರ್ವಮೇವ ಮಯಾ ಶ್ರುತಃ ।
ಕಥಿತೋ ಧರ್ಮರಾಜಸ್ಯ ರಾಜಸೂಯೇ ಕುರೂತ್ತಮ ॥೪೩॥

ಮಹಾರಾಜನೆ! ಈ ವಿಷಯವನ್ನು ನಾನು ಮೊದಲೇ ಕೇಳಿದ್ದೆನು, ಕುರುಗಳಲ್ಲಿ ಹಿರಿಯನೆ! ರಾಜಸೂಯಯಾಗದ ಸಂದರ್ಭದಲ್ಲಿ ಧರ್ಮರಾಜನಿಗೆ ತಿಳಿಸಿದ್ದೆನು.

ಯತಿತಂ ಧರ್ಮಪುತ್ರೇಣ ಮಯಾ ಗುಹ್ಯೇ ನಿವೇದಿತೇ ।
ಅವಿಗ್ರಹೇ ಕೌರವಾಣಾಂ ದೈವಂ ತು ಬಲವತ್ತರಮ್ ॥೪೪॥

ನಾನು ರಹಸ್ಯದಲ್ಲಿ ತಿಳಿಸಿದ ನಂತರದಲ್ಲಿ ಧರ್ಮಪುತ್ರನು ಕೌರವರೊಡನೆ ಯುದ್ಧವಾಗದಿರಲು ಯತ್ನಿಸಿದನು, ಆದರೆ ದೈವವು ಬಲಿಷ್ಠವಾದದ್ದು.

ಅನತಿಕ್ರಮಣೀಯೋ ಹಿ ವಿಧೀ ರಾಜನ್ ಕಥಂಚನ ।
ಕೃತಾಂತಸ್ಯ ಹಿ ಭೂತೇನ ಚರೇಣ ಸ್ಥಾವರೇಣ ಚ ॥೪೫॥

ರಾಜನೆ! ಕೃತಾಂತನ ನಿರ್ಣಯವನ್ನು ಸ್ಥಿರಪ್ರಾಣಿಯಿಂದಾಗಲಿ, ಚರಪ್ರಾಣಿಯಿಂದಾಗಲಿ ಯಾವ ಪ್ರಯತ್ನದಿಂದಲೂ ಅತಿಕ್ರಮಿಸಲು ಆಗದು.

ಭವಾನ್ ಧರ್ಮಪರೋ ಯತ್ರ ಬುದ್ಧಿಶ್ರೇಷ್ಠಶ್ಚ ಭಾರತ ।
ಮುಹ್ಯತೇ ಪ್ರಾಣಿನಾಂ ಜ್ಞಾತ್ವಾ ಗತಿಮಾಗತಿಮೇವ ಚ ॥೪೬॥

ಭರತಕುಲೋತ್ಪನ್ನನೆ! ನೀನು ಧರ್ಮಪರನು, ಬುದ್ಧಿವಂತರಲ್ಲಿ ಹಿರಿಯ, ಪ್ರಾಣಿಗಳ ಹುಟ್ಟು-ಸಾವು ಇವುಗಳನ್ನು ತಿಳಿದಿದ್ದರೂ ಆದರೂ ಮೋಹಗೊಳ್ಳುತ್ತಿರುವಿ.

ತ್ವಾಂ ತು ಶೋಕೇನ ಸಂತಪ್ತಂ ಮುಹ್ಯಮಾನಮಚೇತನಮ್ ।
ಜ್ಞಾತ್ವಾ ಯುಧಿಷ್ಠಿರೋ ರಾಜಾ ಪ್ರಾಣಾನಪಿ ಪರಿತ್ಯಜೇತ್ ॥೪೭॥

ನೀನಾದರೋ ದುಃಖದಿಂದ ಪರಿತಪಿಸುತ್ತಿರುವವನಾಗಿ ಬುದ್ಧಿಶೂನ್ಯನಾಗಿ ಮೋಹಕ್ಕೆ ಒಳಗಾಗುವುದನ್ನು ತಿಳಿದ ರಾಜನಾದ ಯುಧಿಷ್ಠಿರನು ಪ್ರಾಣವನ್ನೇ ಪರಿತ್ಯಜಿಸಿಯಾನು.

ಕೃಪಾಲುರ್ನಿತ್ಯಶೋ ವೀರಃ ತಿರ್ಯಗ್ಯೋನಿಗತೇಷ್ವಪಿ ।
ಸ ಕಥಂ ತ್ವಯಿ ರಾಜೇಂದ್ರ ಕೃಪಾಂ ವೈ ನ ಕರಿಷ್ಯತಿ ॥೪೮॥

ರಾಜೇಂದ್ರ! ತಿರ್ಯಕ್‌ಪ್ರಾಣಿಗಳಲ್ಲೂ ದಯಾಪರನಾದ ವೀರನು, ನಿತ್ಯದಯಾಪರನೂ ಆದ ಆತನು ಹೇಗೆತಾನೇ ನಿನ್ನಲ್ಲಿ ದಯೆಯನ್ನು ತೋರದಿರುವನು?

ಮಮ ಚೈವ ನಿಯೋಗೇನ ವಿಧೇಶ್ಚಾಪ್ಯನಿವರ್ತನಾತ್ ।
ಪಾಂಡವಾನಾಂ ಚ ಕಾರುಣ್ಯಾತ್ ಪ್ರಾಣಾನ್ ಧಾರಯ ಭಾರತ ॥೪೯॥

ಭರತಕುಲೋತ್ಪನ್ನನೆ! ನನ್ನ ಆದೇಶದಂತೆ, ವಿಧಿಯ ನಿಯಮವನ್ನು ಮೀರಲಾಗದಿರುವುದರಿಂದ, ಪಾಂಡವರ ಮೇಲಿನ ಕಾರುಣ್ಯದಿಂದಲೂ ಸಹ ಪ್ರಾಣವನ್ನು ಧರಿಸು (ಆತ್ಮಹತ್ಯೆಗೆ ಯತ್ನಿಸದಿರು).

ಏವಂ ತೇ ವರ್ತಮಾನಸ್ಯ ಲೋಕೇ ಕೀರ್ತಿರ್ಭವಿಷ್ಯತಿ ।
ಧರ್ಮಶ್ಚ ಸುಮಹಾಂಸ್ತಾತ ತಪ್ತಸ್ಯ ತಪಸಶ್ಚಿರಾತ್ ॥೫೦॥

ಮಗನೆ! ಈ ರೀತಿಯಾಗಿರುವುದರಿಂದ ಪ್ರಪಂಚದಲ್ಲಿ ಕೀರ್ತಿಯು ಪ್ರಾಪ್ತವಾಗುವುದು, (ಮುಂದಿನ ದಿನಗಳಲ್ಲಿ) ದೀರ್ಘಕಾಲಪರ್ಯಂತ ತಪವನ್ನು ಆಚರಿಸುವುದರಿಂದ ಭಾರೀ ಧರ್ಮವನ್ನು ಆಚರಿಸಿದಂತೆಯೂ ಆಗುವುದು.

ಪುತ್ರಶೋಕಂ ಸಮುತ್ಪನ್ನಂ ಹುತಾಶಂ ಜ್ವಲಿತಂ ಯಥಾ ।
ಪ್ರಜ್ಞಾಂಭಸಾ ಮಹಾರಾಜ ನಿರ್ವಾಪಯ ಸದಾ ಸತಾ ॥೫೧॥

ಮಹಾರಾಜನೆ! ಪುತ್ರಶೋಕದಿಂದ ಉತ್ಪನ್ನವಾದ ಪ್ರಜ್ವಲಿಸುವ ಈ ಬೆಂಕಿಯನ್ನು ಸತ್‌ಪ್ರಜ್ಞೆ ಎಂಬ ನೀರಿನಿಂದ ನಿರಂತರ ಶಮನಗೊಳಿಸು.

ವೈಶಂಪಾಯನಃ

ಏತಚ್ಛ್ರುತ್ವಾ ತು ವಚನಂ ವ್ಯಾಸಸ್ಯಾಮಿತತೇಜಸಃ ।
ಮುಹೂರ್ತಂ ಸಮನುಧ್ಯಾಯ ಧೃತರಾಷ್ಟ್ರೋಽಭ್ಯಭಾಷತ ॥೫೨॥

ವೈಶಂಪಾಯನ– ಮಹಾತೇಜಸ್ವಿಯಾದ ವ್ಯಾಸರ ಈ ಮಾತನ್ನು ಕೇಳಿ, ಧೃತರಾಷ್ಟ್ರನು ಸ್ವಲ್ಪಹೊತ್ತು ಚಿಂತಿಸಿದವನಾಗಿ ಮಾತನಾಡಿದನು.

ಧೃತರಾಷ್ಟ್ರಃ

ಮಹತಾ ಶೋಕಜಾಲೇನ ಪ್ರಣುನ್ನೋಽಸ್ಮಿ ದ್ವಿಜೋತ್ತಮ ।
ನಾತ್ಮಾನಮವಬುದ್ಧ್ಯಾಮಿ ಮುಹ್ಯಮಾನೋ ಮುಹುರ್ಮುಹುಃ ॥೫೩॥

ಧೃತರಾಷ್ಟ್ರ– ಬ್ರಾಹ್ಮಣಶ್ರೇಷ್ಠನೆ! ಭಾರೀ ಶೋಕವೆಂಬ ಬಲೆಯಲ್ಲಿ ಸಿಲುಕಿರುವೆನು. ಮತ್ತೆ ಮತ್ತೆ ಮೋಹಕ್ಕೆ ಸಿಲುಕಿರುವ ನಾನು ನನ್ನ ತನವನ್ನೇ ಮರೆತಿರುವೆನು.

ಇದಂ ತು ವಚನಂ ಶ್ರುತ್ವಾ ತವ ದೈವನಿಯೋಗಜಮ್ ।
ಧಾರಯಿಷ್ಯಾಮ್ಯಹಂ ಪ್ರಾಣಾನ್ ಯತಿಷ್ಯೇ ಚ ನ ಶೋಚಿತುಮ್ ॥

ಆದರೆ 'ದೈವದ ನಿರ್ಣಯ' ಎಂಬ ಈ ನಿನ್ನ ಮಾತನ್ನು ಕೇಳಿ ಪ್ರಾಣವನ್ನು ಧರಿಸುವೆನು, ದುಃಖದಿಂದ ಹೊರಬರಲು ಯತ್ನಿಸುವೆನು.

ವೈಶಂಪಾಯನ

ಏತಚ್ಛ್ರುತ್ವಾ ತು ವಚನಂ ವ್ಯಾಸಃ ಸತ್ಯವತೀಸುತಃ ।
ಧೃತರಾಷ್ಟ್ರಸ್ಯ ರಾಜೇಂದ್ರ ತತ್ರೈವಾಂತರಧೀಯತ ॥೫೫॥

ವೈಶಂಪಾಯನ– ಸತ್ಯವತಿಯ ಪುತ್ರರಾದ ವ್ಯಾಸರು ಧೃತರಾಷ್ಟ್ರನ ಈ ಮಾತನ್ನು ಕೇಳಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಧೃತರಾಷ್ಟ್ರವಿಶೋಕೇ ಅಷ್ಟಮೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಪುನಃ ಶೋಕತಪ್ತನಾದ ಧೃತರಾಷ್ಟ್ರನಿಗೆ ವಿದುರನಿಂದ ಉಪದೇಶ.

ಜನಮೇಜಯಃ

ಗತೇ ಭಗವತಿ ವ್ಯಾಸೇ ಧೃತರಾಷ್ಟ್ರೇ ಮಹೀಪತಿಃ ।
ಕಿಮಚೇಷ್ಟತ ವಿಪ್ರರ್ಷೇ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

ಜನಮೇಜಯ– ಬ್ರಹ್ಮರ್ಷಿಯೆ! ಭಗವಂತರಾದ ವ್ಯಾಸರು ಅಂತರ್ಧಾನ ಹೊಂದಲು ಭೂಮಿಗೆ ಒಡೆಯನಾದ ಧೃತರಾಷ್ಟ್ರನು ಏನು ಮಾಡಿದನು? ಅದನ್ನು ನನಗೆ ತಿಳಿಸುವವರಾಗಿ.

ತಥೈವ ಕೌರವ್ಯೋ ರಾಜಾ ಧರ್ಮಪುತ್ರೋ ಮಹಾಮನಾಃ ।
ಕೃಪಪ್ರಭೃತಯಶ್ಚೈವ ಕಿಮಕುರ್ವತ ತೇ ತ್ರಯಃ ॥೨॥

ಹಾಗೆಯೆ ಮಹಾಮಹಿಮನಾದ ಕೌರವರ ರಾಜನಾದ ಧರ್ಮರಾಜನು, ಕೃಪನೇ ಮುಂತಾದ ಆ ಮೂವರು ಏನು ಮಾಡಿದರು?

ಅಶ್ವತ್ಥಾಮ್ನಃ ಶ್ರುತಂ ಕರ್ಮ ಶಾಪಶ್ಚಾನ್ಯೋನ್ಯಕಾರಿತಃ ।
ವೃತ್ತಾಂತಮುತ್ತರಂ ಬ್ರೂಹಿ ಯದಭಾಷತ ಸಂಜಯಃ ॥೩॥

ಅಶ್ವತ್ಥಾಮನು ಮಾಡಿದ ಕೆಲಸವನ್ನು ಕೇಳಿದೆನು, ಪರಸ್ಪರ ಒಬ್ಬರಿಗೆ ಮತ್ತೊಬ್ಬರು ನೀಡಿದ ಶಾಪದ ವಿಚಾರವನ್ನೂ ಕೇಳಿದೆನು, ಮುಂದಿನ ಸುದ್ದಿಯನ್ನು ಹೇಳಿ, ಸಂಜಯನು ಏನು ಹೇಳಿದನು?

ವೈಶಂಪಾಯನಃ

ಹತೇ ದುರ್ಯೋಧನೇ ಚೈವ ಹತೇ ಸೈನ್ಯೇ ಚ ಸರ್ವಶಃ ।
ಸಂಜಯೋ ವಿಗತಪ್ರಜ್ಞೋ ಧೃತರಾಷ್ಟ್ರಮುಪಸ್ಥಿತಃ ॥೪॥

ವೈಶಂಪಾಯನ– ಎಲ್ಲ ಸೈನ್ಯವು ನಾಶವಾಗಲು, ದುರ್ಯೋಧನನೂ ಮೃತನಾಗಲು, ದಿವ್ಯದೃಷ್ಟಿಯನ್ನು ಕಳೆದುಕೊಂಡ ಸಂಜಯನು ಧೃತರಾಷ್ಟ್ರನ ಬಳಿ ಆಗಮಿಸಿದನು.

ಸಂಜಯಃ

ಆಗಮ್ಯ ನಾನಾದೇಶೇಭ್ಯೋ ನಾನಾಜನಪದೇಶ್ವರಾಃ ।
ಪಿತೃಲೋಕಂ ಗತಾ ರಾಜನ್ ಸರ್ವೇ ತವ ಸುತೈಃ ಸಹ ॥೫॥

ಸಂಜಯ– ರಾಜನೆ! ನಾನಾ ದೇಶಗಳಿಂದ ಬಂದ ನಾನಾ ದೇಶಗಳ ರಾಜರೆಲ್ಲ ನಿನ್ನ ಮಕ್ಕಳಿಂದ ಕೂಡಿಕೊಂಡು ಪಿತೃಲೋಕಕ್ಕೆ ತೆರಳಿದರು.

ಯಾಚ್ಯಮಾನೇನ ಸತತಂ ತವ ಪುತ್ರೇಣ ಭಾರತ ।
ಘಾತಿತಾ ಪೃಥಿವೀ ಸರ್ವಾ ವೈರಸ್ಯಾಂತಂ ವಿಧಿತ್ಸತಾ ॥೬॥

ಭರತಕುಲೋತ್ಪನ್ನನೆ! ದ್ವೇಷದ ಕೊನೆಯನ್ನು ಬಯಸುವ ನಿನ್ನ ಮಗನು ನಿರಂತರವಾಗಿ ಪ್ರಾರ್ಥಿತನಾದರೂ (ಯುದ್ಧ ತರವಲ್ಲ, ಪಾಂಡವರೊಡನೆ ಸಂಧಾನಕ್ಕೆ ಒಪ್ಪಿಕೊ ಎಂದು ಅನೇಕ ಹಿರಿಯರು ತಿಳಿಸಿದರೂ ಹಟಹಿಡಿದ ದುರ್ಯೋಧನನು ಯುದ್ಧವನ್ನೇ ನಿರ್ಣಯಿಸಿದ್ದನು) ಸಮಗ್ರ ಭೂಮಿಯನ್ನು ನಾಶಗೊಳಿಸಿದನು.

ಪುತ್ರಾಣಾಮಥ ಪೌತ್ರಾಣಾಂ ಪಿತೄಣಾಂ ಚ ಮಹೀಪತೇ ।
ಆನುಪೂರ್ವ್ಯೇಣ ಸರ್ವೇಷಾಂ ಪ್ರೇತಕಾರ್ಯಾಣಿ ಕಾರಯ ॥೭॥

ಭೂಮಿಯ ಒಡೆಯನೆ! ಅನುಕ್ರಮವಾಗಿ ಮಕ್ಕಳ ಮೊಮ್ಮಕ್ಕಳ ಮತ್ತು ಹಿರಿಯರೆಲ್ಲರ ಪ್ರೇತಕರ್ಮವನ್ನು ಮಾಡು.

ವೈಶಂಪಾಯನಃ

ತಚ್ಛ್ರುತ್ವಾ ವಚನಂ ಘೋರಂ ಸಂಜಯಸ್ಯ ಮಹೀಪತಿಃ ।
ಗತಾಸುರಿವ ನಿಶ್ಚೇಷ್ಟೋ ನ್ಯಪತತ್ ಪೃಥಿವೀತಳೇ ॥೮॥

ವೈಶಂಪಾಯನ– ಭೂಮಿಯ ಒಡೆಯನು ಸಂಜಯನ ಆ ಘೋರವಾದ ಮಾತನ್ನು ಕೇಳಿ ಜೀವಹೋದಂಥವನಾಗಿ ನಿಷ್ಕ್ರಿಯನಾಗಿ ನೆಲಕ್ಕೆ ಉರುಳಿದನು.

ತಂ ಶಯಾನಮುಪಾಗಮ್ಯ ಪೃಥಿವ್ಯಾಂ ಪೃಥಿವೀಪತಿಮ್ ।
ವಿದುರಃ ಸರ್ವಧರ್ಮಜ್ಞ ಇದಂ ವಚನಮಬ್ರವೀತ್ ॥೯॥

ಭೂಮಿಯಲ್ಲಿ ಮಲಗಿರುವ ಆ ಭೂಮಿಯ ಒಡೆಯನನ್ನು ಉದ್ದೇಶಿಸಿ ಸರ್ವಧರ್ಮವನ್ನು ತಿಳಿದ ವಿದುರನು ಈ ಮಾತನ್ನು ಹೇಳಿದನು.

ವಿದುರಃ

ಉತ್ತಿಷ್ಠ ರಾಜನ್ ಕಿಂ ಶೇಷೇ ಮಾ ಶುಚೋ ಭರತರ್ಷಭ ।
ಏಷಾ ವೈ ಸರ್ವಸತ್ವಾನಾಂ ಲೋಕೇಶ್ವರ ಪರಾ ಗತಿಃ ॥೧೦॥

ವಿದುರ– ಭರತಕುಲದ ಹಿರಿಯನೆ, ರಾಜನೆ! ದುಃಖಿಸದಿರು, ಏಕೆ ಮಲಗಿರುವೆ? ಮೇಲೇಳು. ಲೋಕದೊಡೆಯ! ಎಲ್ಲ ಜೀವಿಗಳಿಗೂ ಇದುವೇ ಕೊನೆಯ ಗತಿಯು.

ಅಭಾವಾದೀನಿ ಭೂತಾನಿ ಭಾವಮಧ್ಯಾನಿ ಭಾರತ ।
ಅಭಾವನಿಧನಾನ್ಯೇವ ತತ್ರ ಕಾ ಪರಿದೇವನಾ ॥೧೧॥

ಜೀವಿಗಳು (ಹುಟ್ಟುವ) ಮೊದಲು ಕಾಣವು, ಮಧ್ಯದಲ್ಲಿ (ಹುಟ್ಟಿದಾಗ) ಕಾಣಿಸಿಗುವವು, ನಿಧನಾನಂತರದಲ್ಲಿ ಪುನಃ ಕಾಣವು, ಈ ವಿಷಯದಲ್ಲಿ ದುಃಖಕ್ಕೆ ಎಡೆಯಲ್ಲಿ?

ನ ಶೋಚನ್ ಮೃತಮನ್ವೇತಿ ನ ಶೋಚನ್ ಮ್ರಿಯತೇ ನರಃ ।
ಏವಂ ಸಾಂಸಿದ್ಧಿಕೇ ಲೋಕೇ ಕಿಮರ್ಥಮನುಶೋಚಸಿ ॥೧೨॥

ಮನುಜನು ದುಃಖಿಸುವುದರಿಂದ ಮೃತನನ್ನು ಅನುಸರಿಸಲಾಗದು, (ಮೃತನಿಗಾಗಿ) ದುಃಖಿಸುತ್ತಾ ಮರಣವನ್ನು ಹೊಂದಲಾಗುವುದಿಲ್ಲ. ಇದು ಲೋಕದಲ್ಲಿ ಸಿದ್ಧವಾದ ಸಂಗತಿ, ಏತಕ್ಕಾಗಿ ದುಃಖಿಸುವಿ?

ಯಾಂಶ್ಚಾಪಿ ನಿಹತಾನ್ ಯುದ್ಧೇ ರಾಜಂಸ್ತ್ವಮನುಶೋಚಸಿ ।
ನ ಶೋಚ್ಯಾ ಹಿ ಮಹಾತ್ಮಾನಃ ಸರ್ವೇ ತೇ ತ್ರಿದಿವಂ ಗತಾಃ ॥೧೩॥

ರಾಜನೆ! ಯುದ್ಧದಲ್ಲಿ ಮೃತರಾದ ಯಾರನ್ನು ಉದ್ದೇಶಿಸಿ ದುಃಖಿಸುವಿ? ಮಹಾತ್ಮರಾದ ಅವರು ಯಾರೂ ದುಃಖಕ್ಕೆ ವಿಷಯರಲ್ಲ, ಅವರೆಲ್ಲರೂ ಸ್ವರ್ಗಕ್ಕೆ ಹೋಗಿಯಾಗಿದೆ.

ನ ಯಜ್ಞೈರ್ದಕ್ಷಿಣಾವದ್ಭಿರ್ನ ತಪೋಭಿರ್ನ ವಿದ್ಯಯಾ ।
ತಥಾ ಸ್ವರ್ಗಮುಪಾಯಾಂತಿ ಯಥಾ ಶೂರಾಸ್ತನುತ್ಯಜಃ ॥೧೪॥

ಶೂರರು (ಯುದ್ಧದಲ್ಲಿ) ದೇಹವನ್ನು ತ್ಯಜಿಸುವುದರಿಂದ ಯಾವರೀತಿಯಾದ ಸ್ವರ್ಗವನ್ನು ಹೊಂದುವರೋ, ಆಂತಹ ಸ್ವರ್ಗವನ್ನು ಯಜ್ಞಗಳಿಂದ ಹೊಂದಲು ಶಕ್ಯವಿಲ್ಲ, ದಕ್ಷಿಣೆಯನ್ನು ನೀಡುವುದರಿಂದ ಹೊಂದಲು ಶಕ್ಯವಿಲ್ಲ, ತಪಸ್ಸಿನಿಂದ ಹೊಂದಲು ಶಕ್ಯವಿಲ್ಲ, ವಿದ್ಯೆಯಿಂದ ಹೊಂದಲು ಶಕ್ಯವಿಲ್ಲ.

ಸರ್ವೇ ವೇದವಿದಃ ಶೂರಾಃ ಸರ್ವೇ ಸುಚರಿತವ್ರತಾಃ ।
ಸರ್ವೇ ಚಾಭಿಮುಖಾಃ ಕ್ಷೀಣಾಸ್ತತ್ರ ಕಾ ಪರಿದೇವನಾ ॥೧೫॥

(ಯುದ್ಧದಲ್ಲಿ ಮೃತರಾದ) ಎಲ್ಲರೂ ವೇದವಿದರು, ಎಲ್ಲರೂ ಶೂರರು, ಎಲ್ಲರೂ ವ್ರತಗಳನ್ನು ಸರಿಯಾಗಿ ಆಚರಿಸಿದವರು, ಎಲ್ಲರೂ (ರಣರಂಗದಲ್ಲಿ ಶತ್ರುವಿನ) ಎದುರಿನಲ್ಲಿಯೇ ಮರಣವನ್ನು ಹೊಂದಿದವರು. ಇಲ್ಲಿ ದುಃಖಿಸಲು ಕಾರಣವೇನು?

ಶರೀರಾಗ್ನಿಷು ಶೂರಾಣಾಂ ಜುಹುವುಸ್ತೇ ಶರಾಹುತೀಃ ।
ಹೂಯಮಾನಾನ್ ಶರಾಂಶ್ಚೈವ ಸೇಹುರುತ್ತಮಪೂರುಷಾಃ ॥೧೬॥

ಆ ಶೂರರು ಬಾಣಗಳೆಂಬ ಆಹುತಿಗಳನ್ನು ಶರೀರ ಎಂಬ ಅಗ್ನಿಯಲ್ಲಿ ಹೋಮಿಸಿರುವರು. ಹೋಮಿಸಿದ ಶರಗಳನ್ನು ಶ್ರೇಷ್ಠಪುರುಷರು ಸಹಿಸುವರು.

ಏವಂ ರಾಜಂಸ್ತವಾಚಕ್ಷೇ ಸ್ವರ್ಗ್ಯಂ ಪಂಥಾನಮುತ್ತಮಮ್ ।
ನ ಯುದ್ಧಾದಧಿಕಂ ಕಿಂಚಿತ್ ಕ್ಷತ್ರಿಯಸ್ಯೇಹ ವಿದ್ಯತೇ ॥೧೭॥

ರಾಜನೆ! ನಿನಗೆ ಹೇಳುವೆನು, ಈ ಲೋಕದಲ್ಲಿ ಯುದ್ಧಕ್ಕಿಂತ ಉತ್ತಮವಾದ ಸ್ವರ್ಗಮಾರ್ಗವು ಕ್ಷತ್ರಿಯನಿಗೆ ಮತ್ತೊಂದು ಇಲ್ಲ.

ಕ್ಷತ್ರಿಯಾಸ್ತೇ ಮಹಾತ್ಮಾನಃ ಶೂರಾಃ ಸಮಿತಿಶೋಭನಾಃ ।
ಆಶಿಷಂ ಪರಮಾಂ ಪ್ರಾಪ್ತಾ ನ ಶೋಚ್ಯಾಃ ಸರ್ವ ಏವ ಹಿ ॥೧೮॥

ಆ ಮಹಾತ್ಮರಾದ ಶೂರರಾದ ಕ್ಷತ್ರಿಯರು (ಇಂದ್ರಾದಿಗಳ) ಸಭೆಗಳಲ್ಲಿ ಶೋಭಾಯಮಾನರು, ಮಹತ್ತರವಾದ ಆಶೀರ್ವಾದಕ್ಕೆ ಪಾತ್ರರಾಗಿರುವರು, ಅವರೆಲ್ಲರ ಬಗ್ಗೆ ಚಿಂತಿಸುವ ಅವಶ್ಯಕತೆ ಇರುವುದಿಲ್ಲ.

ಆತ್ಮನಾऽऽತ್ಮಾನಮಾಶ್ವಾಸ್ಯ ಮಾ ಶುಚಃ ಪುರುಷರ್ಷಭ ।
ನಾದ್ಯ ಶೋಕಾಭಿಭೂತಸ್ತ್ವಂ ಕಾರ್ಯಮುತ್ಸ್ಮೃಷ್ಟುಮರ್ಹಸಿ ॥೧೯॥

ಪುರುಷಶ್ರೇಷ್ಠನೆ! ನೀನೇ ನಿನ್ನನ್ನು ಸಮಾಧಾನಿಸಿಕೊಂಡು ದುಃಖಿಸದಿರು, ದುಃಖದ ಅಧೀನನಾಗಿ ಕರ್ತವ್ಯದಿಂದ ವಿಮುಖನಾಗಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಧೃತರಾಷ್ಟ್ರವಿಶೋಕೇ ನವಮೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ಪುನಃ ಶೋಕತಪ್ತನಾದ ಧೃತರಾಷ್ಟ್ರನಿಗೆ ವಿದುರನಿಂದ ಉಪದೇಶ.

ವೈಶಂಪಾಯನಃ

ವಿದುರಸ್ಯ ತು ತದ್ವಾಕ್ಯಂ ಶ್ರುತ್ವಾ ತು ಪುರುಷರ್ಷಭಃ ।
ಯುಜ್ಯತಾಂ ಯಾನಮಿತ್ಯುಕ್ತ್ವಾ ಪುನರ್ವಚನಮಬ್ರವೀತ್ ॥೧॥

ವೈಶಂಪಾಯನ– ವಿದುರನ ವಾಕ್ಯವನ್ನು ಕೇಳಿದ ಪುರುಷಶ್ರೇಷ್ಠನು 'ವಾಹನವನ್ನು ಯೋಜಿಸಿ' ಎಂದು ಹೇಳಿ, ಮತ್ತೆ ಈ ವಾಕ್ಯಗಳನ್ನು ಹೇಳಿದನು.

ಕ್ಷಿಪ್ರಮಾನಯ ಗಾಂಧಾರೀಂ ಸರ್ವಾಶ್ಚ ಭರತಸ್ತ್ರಿಯಃ ।
ಕುಂತೀಂ ಚೈವ ತಥಾ ಕ್ಷತ್ತಃ ಸಮಾನಯ ಮಮಾಂತಿಕಮ್ ॥೨॥

'ಸೂತನೆ! ಗಾಂಧಾರಿಯನ್ನು, ಭರತಕುಲೋತ್ಪನ್ನರ ಎಲ್ಲರ ಪತ್ನಿಯರನ್ನು (ಸೊಸೆಯರನ್ನು), ಕುಂತಿಯನ್ನು ಶೀಘ್ರವಾಗಿ ನನ್ನ ಸಮೀಪಕ್ಕೆ ಕರೆದು ತನ್ನಿರಿ' ಎಂದು.

ಏವಮುಕ್ತ್ವಾ ತು ಧರ್ಮಾತ್ಮಾ ವಿದುರಂ ಧರ್ಮವಿತ್ತಮಮ್ ।
ಶೋಕವಿಪ್ರಹತಜ್ಞಾನೋ ಯಾನಮೇವಾನ್ವರೋಹತ ॥೩॥

ಈ ರೀತಿಯಾಗಿ ಹೇಳಿ, ಧರ್ಮಜ್ಞನಾದ ವಿದುರನನ್ನು (ಕರೆದುಕೊಂಡು) ಶೋಕದಿಂದ ಅರಿವನ್ನೇ ಕಳೆದುಕೊಂಡ ಧರ್ಮಾತ್ಮನು ಯಾನವನ್ನು ಏರಿದನು.

ಗಾಂಧಾರೀ ಚೈವ ಶೋಕಾರ್ತಾ ಭರ್ತುರ್ವಚನಚೋದಿತಾ ।
ಸಹ ಕುಂತ್ಯಾ ಯತೋ ರಾಜಾ ಸಹ ಸ್ತ್ರೀಭಿಃ ಸಮಾದ್ರವತ್ ॥೪॥

ದುಃಖದಿಂದ ತಪ್ತಳಾದ ಗಾಂಧಾರಿಯು ಪತಿಯ ಮಾತಿನಿಂದ ಪ್ರೇರೇಪಿತಳಾಗಿ ಕುಂತಿಯಿಂದ, ಸೊಸೆಯರಿಂದ ಕೂಡಿಕೊಂಡು ಎಲ್ಲಿ ರಾಜನೋ ಅಲ್ಲಿಗೆ ಧಾವಿಸಿದಳು.

ತಾಃ ಸಮಾಸಾದ್ಯ ರಾಜಾನಂ ಭೃಶಂ ಶೋಕಸಮನ್ವಿತಾಃ ।
ಆಮಂತ್ರ್ಯಾನ್ಯೋನ್ಯಮಾಯಸ್ತಾ ಭೃಶಂ ವೈ ಚುಕ್ರುಶುಸ್ತಥಾ ॥೫॥

ಅತ್ಯಂತ ದುಃಖಿತರಾದ ಅವರು ರಾಜನ ಬಳಿ ಆಗಮಿಸಿ, ಪರಸ್ಪರ ಒಬ್ಬರನ್ನು ಮತ್ತೊಬ್ಬರು ಆಹ್ವಾನಿಸಿಕೊಂಡು ಆಗಮಿಸಿದ ಅವರು ಗಟ್ಟಿಯಾಗಿ ರೋದಿಸಿದರು.

ತಾಃ ಸಮಾಶ್ವಾಸಯತ್ ಕ್ಷತ್ತಾ ತಾಭ್ಯಶ್ಚಾರ್ತತರಃಸ್ವಯಮ್ ।
ಅಶ್ರುಕಂಠೀಃ ಸಮಾರೋಪ್ಯ ತತಸ್ತಾ ನಿರ್ಯಯುಃ ಪುರಾತ್ ॥೬॥

ಸೂತನು ಅವರುಗಳನ್ನು ಸಮಾಧಾನಗೊಳಿಸಿದನು, ಅವರುಗಳಿಂದ ತಾನೇ ಅತ್ಯಂತ ದುಃಖಿತನಾದನು. ಅನಂತರದಲ್ಲಿ ರೋದಿಸುತ್ತಿರುವ ಅವರುಗಳನ್ನು (ರಥದಲ್ಲಿ) ಏರಿಸಿಕೊಂಡು, ನಗರದಿಂದ ಹೊರಟರು.

ತತಃ ಪ್ರಣಾದಃ ಸಂಜಜ್ಞೇ ಸರ್ವೇಷು ಕುರುವೇಶ್ಮಸು ।
ಆಕುಮಾರಂ ಪುರಂ ತಚ್ಚಾಪ್ಯಭವಚ್ಶೋಕಕರ್ಶಿತಮ್ ॥೭॥

ಅನಂತರದಲ್ಲಿ ಎಲ್ಲ ಕುರುಗಳ ಮನೆಯಲ್ಲಿ ಆರ್ತಸ್ವರವು ಉಂಟಾಯಿತು, ಮಕ್ಕಳಿಂದ ಆರಂಭಿಸಿ ಸಮಸ್ತ ನಗರವು ಶೋಕದಿಂದ ಕುಗ್ಗಿತು.

ಅದೃಷ್ಟಪೂರ್ವಾ ಯಾ ನಾರ್ಯಃ ಪುರಾ ದೇವಗಣೈರಪಿ ।
ಪೃಥಗ್ಜನೇನ ದೃಶ್ಯಂತೇ ತಾಸ್ತದಾ ನಿಹತೇಶ್ವರಾಃ ॥೮॥

ದೇವತೆಗಳ ಸಮೂಹವೂ ಈ ಹಿಂದೆ ಕಾಣದ ಯಾವ ನಾರಿಯರೋ, ಗಂಡಂದಿರನ್ನು ಕಳೆದು ಕೊಂಡ ಅವರು ಸಾಮಾನ್ಯಜನರ ಕಣ್ಣಿಗೂ ವಿಷಯವಾದರು.

ಪ್ರಕೀರ್ಯ ಕೇಶಾನಸಿತಾನ್ ಭೂಷಣಾನ್ಯವಮುಚ್ಯ ಚ ।
ಏಕವಸ್ತ್ರಧರಾ ನಾರ್ಯಃ ಪರಿಪೇತುರನಾಥವತ್ ॥೯॥

ಕಪ್ಪಾದ ಕೂದಲುಗಳನ್ನು ಹರಡಿಕೊಂಡಿರುವ, ಭೂಷಣಗಳನ್ನು (ಆಭರಣಗಳನ್ನು) ಬಿಚ್ಚಿಟ್ಟಿರುವ, ಒಂದೇ ವಸ್ತ್ರವನ್ನು ಧರಿಸಿರುವ ಆ ಸ್ತ್ರೀಯರು ಅನಾಥರಂತೆ ಕೆಳಗೆ ಬಿದ್ದರು.

ಶ್ವೇತಪರ್ವತರೂಪೇಭ್ಯೋ ಗೃಹೇಭ್ಯಸ್ತಾ ನಿರಾಕ್ರಮನ್ ।
ಗುಹಾಭ್ಯ ಇವ ಶೈಲಾನಾಂ ಪೃಷತ್ಯೋ ಹತಯೂಥಪಾಃ ॥೧೦॥

ಬಿಳಿಪರ್ವತದ ಗುಹೆಯಿಂದ ನಾಯಕನನ್ನು ಕಳೆದುಕೊಡ ಜಿಂಕೆಗಳು ಹೊರಬರುವಂತೆ, ಮನೆಗಳಿಂದ (ತಮ್ಮ ತಮ್ಮ ಅರಮನೆಗಳಿಂದ) ಅವರುಗಳು (ಕೌರವರ ಪತ್ನಿಯರು) ಹೊರಬಂದರು.

ತಾನ್ಯುದೀರ್ಣಾನಿ ನಾರೀಣಾಂ ತದಾ ಬೃಂದಾನ್ಯನೇಕಶಃ ।
ಶೋಕಾರ್ತಾ ನ್ಯರುದನ್ ಘೋರಂ ಕಿಶೋರಾಣಾಮಿವಾಂಕಣೇ ॥೧೧॥

(ಅರಮನೆಯಿಂದ) ಹೊರಬಂದ, ದುಃಖದಿಂದ ಆರ್ತರಾದ ಮಹಿಳೆಯರ ಅನೇಕ ಗುಂಪುಗಳು , (ಮನೆಯ) ಅಂಗಳದಲ್ಲಿ ಚಿಕ್ಕಮಕ್ಕಳು ರೋದಿಸುವಂತೆ ಆಗ ರೋದಿಸಿದರು.

ಪ್ರಗೃಹ್ಯ ಬಾಹೂನ್ ಕ್ರೋಶಂತ್ಯಃ ಪುತ್ರಾನ್ ಭ್ರಾತೄನ್ ಪಿತೄನಪಿ ।
ದರ್ಶಯಂತ್ಯ ಇವಾಭಸ್ಮ ಯುಗಾಂತೇ ಲೋಕಸಂಕ್ಷಯೇ ॥೧೨॥

ವಿಲಪಂತ್ಯೋ ರುದಂತ್ಯಶ್ಚ ಧಾವಮಾನಾ ಇತಸ್ತತಃ ।
ಶೋಕೇನ ವಿಹತಜ್ಞಾನಾಃ ಕರ್ತವ್ಯಂ ನ ಪ್ರಜಜ್ಞಿರೇ ॥೧೩॥

ಮಕ್ಕಳನ್ನು, ಸಹೋದರರನ್ನು, ತಂದೆಯರನ್ನು ಕರೆಯುವವರಾಗಿ, ಪರಸ್ಪರ ಒಬ್ಬರ ಬಾಹುಗಳನ್ನು ಮತ್ತೊಬ್ಬರು ಪಿಡಿದವರಾಗಿ, ಲೋಕ ನಾಶವಾಗುವ ಯುಗದ ಅಂತ್ಯದಲ್ಲಿ ಸುತ್ತಲೂ ಹರಡಿರುವ ಭಸ್ಮವನ್ನು ಕಂಡವರಂತೆ, ದುಃಖಿಸುತ್ತಿರುವ, ರೋದಿಸುತ್ತಿರುವ, ಅತ್ತಿಂದಿತ್ತ ಪರದಾಡುತ್ತಿರುವ, ದುಃಖದಿಂದ ಅರಿವನ್ನೇ ಕಳೆದುಕೊಂಡಿರುವ ಅವರು ಕರ್ತವ್ಯಕರ್ಮದ ಎಚ್ಚರವಿಲ್ಲದವರಾದರು.

ವ್ರೀಡಾಂ ಜಗ್ಮುಃ ಪುರಾ ಯಾಃ ಸ್ಮ ಸಖೀನಾಮಪಿ ಯೋಷಿತಃ ।
ನಿರ್ಲಜ್ಜಾಸ್ತಾಸ್ತು ರಾಜೇಂದ್ರ ಶ್ವಶ್ರೂಣಾಮಪಿ ಸನ್ನಿಧೌ ॥೧೪॥

ರಾಜರ ಒಡೆಯನೆ! ಹಿಂದೆ ಯಾರು ತಮ್ಮ ಸಖಿಯರ ಬಳಿಯಲ್ಲೂ ನಾಚುತ್ತಿದ್ದರೋ, ಅವರು (ತಮ್ಮ) ಅತ್ತೆಯರ ಸನ್ನಿಧಿಯಲ್ಲಿ ಲಜ್ಜಾರಹಿತರಾಗಿ ವರ್ತಿಸಿದರು (ಏಕವಸ್ತ್ರಧಾರಿಗಳಾಗಿ ತಿರುಗಾಡಿದರು).

ಪರಸ್ಪರಂ ಸುಸೂಕ್ಷ್ಮೇಷು ಶೋಕೇಷ್ವಾಶ್ವಾಸಯಂತಿ ಯಾಃ ।
ತಾಃ ಶೋಕವಿಹ್ವಲಾ ರಾಜನ್ ನಾವೈಕ್ಷಂತ ಪರಸ್ಪರಮ್ ॥೧೫॥

ರಾಜನೆ! (ಹಿಂದೆ) ಯಾರು ಅತಿ ಸಣ್ಣ ದುಃಖದ ಸಂದರ್ಭಗಳಲ್ಲೂ ಪರಸ್ಪರ ಸಮಾಧಾನವನ್ನು ಹೇಳುತ್ತಿದ್ದರೋ ಅವರು ಶೋಕದಲ್ಲಿ ಮುಳುಗಿದ್ದರೂ ಒಬ್ಬರನ್ನು ಮತ್ತೊಬ್ಬರು ನೋಡಲೂ ಇಲ್ಲ.

ತಾಭಿಃ ಪರಿವೃತೋ ರಾಜಾ ರುದಂತೀಭಿಃ ಸಹಸ್ರಶಃ ।
ನಿರ್ಯಯೌ ನಗರಾತ್ ತೂರ್ಣಂ ದೀನಸ್ತ್ವಯೋಧನಂ ಪ್ರತಿ ॥೧೬॥

ರೋದಿಸುತ್ತಿರುವ ಸಹಸ್ರಾರು ಆ ಹೆಂಗಳೆಯರಿಂದ ಸುತ್ತುವರಿದಿರುವ ದೀನನಾದ ರಾಜನು (ಧೃತರಾಷ್ಟ್ರನು) ನಗರದಿಂದ ರಣರಂಗಕ್ಕೆ ಹೊರಟನು.

ಶಿಲ್ಪಿನೋ ವಣಿಜೋ ವೈಶ್ಯಾಃ ಸರ್ವಕರ್ಮೋಪಜೀವಿನಃ ।
ತೇ ಪಾರ್ಥಿವಂ ಪುರಸ್ಕೃತ್ಯ ನಿರ್ಯಯುರ್ನಗರಾದ್ ಬಹಿಃ ॥೧೭॥

ಶಿಲ್ಪಿಗಳು, ವ್ಯಾಪಾರಿಗಳು, ವೈಶ್ಯರು, ವಿವಿಧ ಕಸುಬುಗಳಿಂದ ಜೀವಿಸುವವರು ರಾಜನನ್ನು ಮುಂದೆಮಾಡಿಕೊಂಡು ನಗರದಿಂದ ಹೊರ ಹೊರಟರು.

ತೇಷಾಂ ವಿಕ್ರೋಶಮಾನಾನಾಮಾರ್ತಾನಾಂ ಕುರುಸಂಕ್ಷಯೇ ।
ಪ್ರಾದುರಾಸೀನ್ಮಹಾನ್ ಶಬ್ದೋ ವ್ಯಥಯನ್ ಭುವನಾನ್ಯುತ ॥೧೮॥

ಕುರುಗಳ ಯುದ್ಧದ ಸಂದರ್ಭದಲ್ಲಿ ದುಃಖಿತರಾದ, ರೋದಿಸುತ್ತಿರುವ ಅವರುಗಳಿಂದ ಭಾರೀ ಗದ್ದಲವು ಆರಂಭವಾಯಿತು. ಆ (ಗದ್ದಲದ) ಶಬ್ದವು ಲೋಕವನ್ನೇ ದುಃಖಕ್ಕೆ ಈಡುಮಾಡಿತು.

ಯುಗಾಂತಕಾಲೇ ಸಂಪ್ರಾಪ್ತೇ ಭೂತಾನಾಂ ದಹ್ಯತಾಮಿವ ।
ಅಭಾವಸ್ಯೋದಯಂ ಪ್ರಾಪ್ತ ಇತಿ ಭೂತಾನಿ ಮೇನಿರೇ ॥೧೯॥

ಯುಗಾಂತವು ಪ್ರಾಪ್ತವಾಗಲು ಪ್ರಾಣಿಗಳ ನಾಶವಾಗುವಂತೆ (ಜೀವಿಗಳ) ನಾಶವು ಸಂಪ್ರಾಪ್ತವಾಯಿತು ಎಂದು ಜೀವಿಗಳು ಭಾವಿಸಿದವು.

ಭೃಶಮುದ್ವಿಗ್ನಮನಸಸ್ತೇ ಪೌರಾ ಜನಸಂಕ್ಷಯೇ ।
ಪ್ರಾಕ್ರೋಶಂತ ಮಹಾರಾಜ ಸ್ವನುರಕ್ತಾಸ್ತದಾ ಭೃಶಮ್ ॥೨೦॥

ಮಹಾರಾಜನೆ! ಜನರ ನಾಶದ ಆ ಸಂದರ್ಭದಲ್ಲಿ ಅತ್ಯಂತ ಉದ್ವೇಗಕ್ಕೆ ಒಳಗಾದ (ಮತ್ತೆ ಅವರಲ್ಲಿ) ಅನುರಕ್ತರಾದ ಆ ನಾಗರಿಕರೂ ರೋದಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ದಶಮೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಮೃತಬಂಧುಗಳನ್ನು ಕಾಣಲು ರಣಭೂಮಿಗೆ ಹೊರಟ ಧೃತರಾಷ್ಟ್ರನಿಗೆ ಮಾರ್ಗಮಧ್ಯದಲ್ಲಿ ಅಶ್ವತ್ಥಾಮಾದಿ ಮೂವರ ಭೇಟ್ಟಿ, ಅವರು ಧೃತರಾಷ್ಟ್ರನಿಗೆ ಸಮಾಧಾನಕರ ಮಾತುಗಳನ್ನು ಹೇಳುವುದು, ಅವರು ತನುತಮಗೆ ಅಭಿಮತವಾದ ಸ್ಥಳಕ್ಕೆ ತೆರಳುವುದು.

ವೈಶಂಪಾಯನಃ

ಕ್ರೋಶಮಾತ್ರಂ ತತೋ ಗತ್ವಾ ದದೃಶುಸ್ತಾನ್ ಮಹಾರಥಾನ್ ।
ಶಾರದ್ವತಂ ಕೃಪಂ ದ್ರೌಣಿಂ ಕೃತವರ್ಮಾಣಮೇವ ಚ ॥೧॥

ವೈಶಂಪಾಯನ– ಅನಂತರದಲ್ಲಿ (ಅರಮನೆಯಿಂದ) ಒಂದು ಕೂಗು ಅಳತೆ ಮಾತ್ರ ಸಾಗಿ, ಶರದ್ವತಗೋತ್ರೋತ್ಪನ್ನನಾದ ಕೃಪಾಚಾರ್ಯ, ದ್ರೋಣಪುತ್ರ ಮತ್ತು ಕೃತವರ್ಮರೆಂಬ ಆ ಮಹಾರಥಿಕರನ್ನು (ಧೃತರಾಷ್ಟ್ರಾದಿಗಳು) ಕಂಡರು.

ತೇ ತು ದೃಷ್ಟ್ವೈವ ರಾಜಾನಂ ಪ್ರಜ್ಞಾಚಕ್ಷುಷಮೀಶ್ವರಮ್ ।
ಅಶ್ರುಕಂಠಾ ವಿನಿಃಶ್ವಸ್ಯ ರುದಂತ ಇದಮಬ್ರುವನ್ ॥೨॥

ಜ್ಞಾನನೇತ್ರನಾದ (ಬಾಹ್ಯನೇತ್ರವಿಲ್ಲದ), ಸ್ವಾಮಿಯಾದ ರಾಜನನ್ನು ಕಂಡ ಅವರು ಕುತ್ತಿಗೆ ಪರ್ಯಂತ ಕಣ್ಣೀರನ್ನು ಸುರಿಸುತ್ತಾ ನಿಟ್ಟುಸಿರನ್ನು ಬಿಡುತ್ತಾ ರೋದಿಸುತ್ತಿರುವ ಅವರು ಇದನ್ನು ಹೇಳಿದರು.

ಕೃಪಾದಯಃ

ಪುತ್ರಸ್ತವ ಮಹಾರಾಜ ಕೃತ್ವಾ ಕರ್ಮ ಸುದುಷ್ಕರಮ್ ।
ಗತಃ ಸಾನುಚರೋ ರಾಜಾ ಶಕ್ರಲೋಕಂ ಮಹಾರಥಃ ॥೩॥

ಕೃಪಾದಿಗಳು– ಮಹಾರಾಜನೆ! ನಿನ್ನ ಪುತ್ರನಾದ ಮಹಾರಥಿಕನಾದ ರಾಜನು ಮತ್ತೊಬ್ಬರು ಮಾಡಲಾಗದ ಕರ್ಮವನ್ನು ಮಾಡಿ, ಅನುಚರರ ಸಹಿತನಾಗಿ ಇಂದ್ರಲೋಕಕ್ಕೆ ಸಾಗಿದನು.

ದುರ್ಯೋಧನಬಲಾನ್ಮುಕ್ತಾ ವಯಮೇವ ತ್ರಯೋ ರಥಾಃ ।
ಸರ್ವಮನ್ಯತ್ ಪರಿಕ್ಷೀಣಂ ಸೈನ್ಯಂ ತೇ ಭರತರ್ಷಭ ॥೪॥

ಭರತಕುಲೋತ್ಪನ್ನನೆ! ನಾವು ಮೂವರು ಮಾತ್ರ ದುರ್ಯೋಧನನ ಬಲದಿಂದ ಮುಕ್ತರಾಗಿರುವೆವು, ನಿನ್ನ ಬೇರೆ ಎಲ್ಲಸೈನ್ಯವು ನಾಶವಾಯಿತು.

ವೈಶಂಪಾಯನಃ

ಇತ್ಯೇವಮುಕ್ತ್ವಾ ರಾಜಾನಂ ಕೃಪಃ ಶಾರದ್ವತಸ್ತದಾ ।
ಗಾಂಧಾರೀಂ ಪುತ್ರಶೋಕಾರ್ತಾಮಿದಂ ವಚನಮಬ್ರವೀತ್ ॥೫॥

ವೈಶಂಪಾಯನ– ಕೃಪನು ರಾಜನನ್ನು ಉದ್ದೇಶಿಸಿ ಹೀಗೆ ಹೇಳಿ, ಪುತ್ರಶೋಕದಿಂದ ಆರ್ತಳಾದ ಗಾಂಧಾರಿಯನ್ನು ಉದ್ದೇಶಿಸಿ ಹೀಗೆ ಹೇಳಿದನು.

ಕೃಪಃ

ಅಭೀತಾ ಯುದ್ಧ್ಯಮಾನಾಸ್ತೇ ಘ್ನಂತಃ ಶತ್ರುಗಣಾನ್ ಬಹೂನ್ ।
ವೀರಕರ್ಮಾಣಿ ಕುರ್ವಾಣಾಃ ಪುತ್ರಾಸ್ತೇ ನಿಧನಂ ಗತಾಃ ॥೬॥

ಕೃಪರು– ಹೆದರಿಕೆಯಿಲ್ಲದೇ ಯುದ್ಧಮಾಡುತ್ತಿರುವ ಆ ನಿನ್ನ ಪುತ್ರರು ಶತ್ರುಗಳ ಸಮೂಹದ ಬಹುಭಾಗವನ್ನು ಸಂಹರಿಸುತ್ತಾ, ವೀರರ ಕರ್ಮಗಳನ್ನು ಮಾಡುತ್ತಾ ಸಾವನ್ನು ಹೊಂದಿದರು.

ಧ್ರುವಂ ಸಂಪ್ರಾಪ್ಯ ಲೋಕಾಂಸ್ತೇ ನಿರ್ಮಲಾನ್ ಶಸ್ತ್ರನಿರ್ಜಿತಾನ್ ।
ಭಾಸ್ವರಂ ದೇಹಮಾಸ್ಥಾಯ ವಿಹರಂತ್ಯಮರಾ ಇವ ॥೭॥

ನಿಶ್ಚಯವಾಗಿಯೂ ಅವರು ಶಸ್ತ್ರದಿಂದ ಸೋತವರು ಹೊಂದಬಹುದಾದ ಶುದ್ಧವಾದ ಲೋಕವನ್ನು ಹೊಂದಿ, ಪ್ರಕಾಶಮಾನವಾದ ದೇಹವನ್ನು ಹೊಂದಿ ದೇವತೆಗಳಂತೆ ವಿಹರಿಸುತ್ತಿರುವರು.

ಸರ್ವೇ ಹ್ಯಭಿಮುಖಾ ರಾಜ್ಞೇ ಯುಧ್ಯಮಾನಾ ಹತಾ ಯುಧಿ ॥೮॥

ಎಲ್ಲರೂ ರಾಜರಿಗೆ ಅಭಿಮುಖರಾಗಿ ಹೋರಾಡುತ್ತಾ ಯುದ್ಧದಲ್ಲಿ ಮೃತರಾದರು.

ನ ಹಿ ಕಶ್ಚಿದ್ಧಿ ಶೂರಾಣಾಂ ಯುಧ್ಯಮಾನಃ ಪರಾಙ್ಮುಖಃ ।
ಶಸ್ತ್ರೇಣ ನಿಧನಂ ಪ್ರಾಪ್ತೋ ನ ಹಿ ಕಶ್ಚಿತ್ ಕೃತಾಂಜಲಿಃ ॥೯॥

ಶೂರರ ಎದುರಿನಲ್ಲಿ ಯುದ್ಧಮಾಡುತ್ತಿರುವ ಯಾರೊಬ್ಬರೂ ಹಿಂತಿರುಗಲಿಲ್ಲ, ಶಸ್ತ್ರದಿಂದ ಮರಣವನ್ನು ಹೊಂದಿದರು, ಯಾರೂ (ಶತ್ರುಗಳಿಗೆ) ಕೈಜೋಡಿಸಲಿಲ್ಲ.

ಏತಾಂ ತಾಂ ಕ್ಷತ್ರಿಯಸ್ಯಾಹುಃ ಪುರಾಣಾಃ ಪರಮಾಂ ಗತಿಮ್ ।
ಶಸ್ತ್ರೇಣ ನಿಧನಂ ಸಂಖೇ ತಾನ್ ನ ಶೋಚಿತುಮರ್ಹಸಿ ॥೧೦॥

ಕ್ಷತ್ರಿಯನಿಗೆ ಯುದ್ಧದಲ್ಲಿ ಶಸ್ತ್ರದಿಂದ ಸಾವು ಪ್ರಾಪ್ತವಾದಲ್ಲಿ ಯಾವ ಶ್ರೇಷ್ಠ ಗತಿಯನ್ನು ಪ್ರಾಚೀನರು ತಿಳಿಸಿರುವರೋ ಅದನ್ನು ಹೊಂದಿರುವ ಅವರನ್ನು ಉದ್ದೇಶಿಸಿ ದುಃಖಿಸುವುದು ತರವಲ್ಲ.

ನ ಚಾಪಿ ಶತ್ರವಸ್ತೇಷಾಮೃದ್ಧ್ಯಂತೇ ರಾಜ್ಞಿ ಪಾಂಡವಾಃ ।
ಶೃಣು ಯತ್ ಕೃತಮಸ್ಮಾಭಿರಶ್ವತ್ಥಾಮಪುರೋಗಮೈಃ ॥೧೧॥

ರಾಜನೆ! ಅವರುಗಳ (ನಿನ್ನ ಪುತ್ರರ) ಶತ್ರುಗಳಾದ ಪಾಂಡವರು ಹೆಚ್ಚಿನ ಲಾಭವನ್ನು ಹೊಂದಿಲ್ಲ. ಅಶ್ವತ್ಥಾಮನ ಮುಂದಾಳುತನದಲ್ಲಿ ನಾವು ಏನನ್ನು ಮಾಡಿದೆವು ಎನ್ನುವುದನ್ನು ಕೇಳು.

ಅಧರ್ಮೇಣ ಹತಂ ಶ್ರುತ್ವಾ ಭೀಮಸೇನೇನ ತೇ ಸುತಮ್ ।
ಸುಪ್ತಂ ಶಿಬಿರಮಾವಿಶ್ಯ ಪಾಂಡೂನಾಂ ಕದನಂ ಮಹತ್ ॥೧೨॥

ಅಧರ್ಮದಿಂದ ನಿನ್ನ ಮಗನನ್ನು ಭೀಮಸೇನನು ಸಂಹರಿಸಿದನು ಎನ್ನುವುದನ್ನು ಕೇಳಿ, ಮಲಗಿದ ಪಾಂಡವರ ಶಿಬಿರವನ್ನು ಹೊಕ್ಕು ಭಾರೀ ಕದನವನ್ನು ಸಾರಿದೆವು.

ಪಾಂಚಾಲಾ ನಿಹತಾಃ ಸರ್ವೇ ಧೃಷ್ಟದ್ಯುಮ್ನಪುರೋಗಮಾಃ ।
ದ್ರುಪದಸ್ಯಾತ್ಮಜಾಶ್ಚೈವ ದ್ರೌಪದೇಯಾಶ್ಚ ಪಾತಿತಾಃ ॥೧೩॥

ದ್ರುಪದನ ಮಕ್ಕಳಾದ ಧೃಷ್ಟದ್ಯುಮ್ನನೇ ಮುಂತಾದ ಎಲ್ಲ ಪಾಂಚಾಲರನ್ನು ಸಂಹರಿಸಿದೆವು. ದ್ರೌಪದಿಯ ಮಕ್ಕಳನ್ನೂ ಕೆಡವಿದೆವು.

ತಥಾ ವಿಶಸನಂ ಕೃತ್ವಾ ಪುತ್ರಶತ್ರುಗಣಸ್ಯ ತೇ ।
ಪ್ರಾದ್ರವಾಮ ನ ಹಿ ಸ್ಥಾತುಂ ರಣೇ ಶಕ್ಷ್ಯಾಮಹೇ ತ್ರಯಃ ॥೧೪॥

ನಿನ್ನ ಮಕ್ಕಳ ಶತ್ರುಗಣದ ನಾಶವನ್ನು ಮಾಡಿ (ಅಲ್ಲಿಂದ) ಓಡಿದೆವು, ನಾವು ಮೂವರೇ ರಣರಂಗದಲ್ಲಿ ನಿಲ್ಲಲು ಸಮರ್ಥರಲ್ಲ.

ತೇ ಹಿ ಶೂರಾ ಮಹೇಷ್ವಾಸಾಃ ಕ್ಷಿಪ್ರಮೇಷ್ಯಂತಿ ಪಾಂಡವಾಃ ।
ಅಮರ್ಷವಶಮಾಪನ್ನಾ ವೈರಂ ಪ್ರತಿಚಿಕೀರ್ಷವಃ ॥೧೫॥

ತೇ ಹತಾನಾತ್ಮಜಾನ್ ಶ್ರುತ್ವಾ ಪ್ರಮತ್ತಾಃ ಪುರುಷರ್ಷಭಾಃ ।
ಅನ್ವಿಷ್ಯಂತಃ ಪದಂ ಶೂರಾಃ ಕ್ಷಿಪ್ರಮೇಷ್ಯಂತಿ ಪಾಂಡವಾಃ ॥೧೬॥

ಶೂರರಾದ ಬಿಲ್ಲಾಳುಗಳಾದ ಆ ಪಾಂಡವರು ಶೀಘ್ರದಲ್ಲಿ ಬರಲಿದ್ದಾರೆ, ದ್ವೇಷಕ್ಕೆ ಪ್ರತೀಕಾರ ಮಾಡಬೇಕೆಂಬ ಇಚ್ಛೆಯಿರುವ ಸಿಟ್ಟಿನ ಅಧೀನರಾಗಿರುವ ಅವರು ಮಕ್ಕಳು ಮೃತರಾದರು ಎನ್ನುವುದನ್ನು ಕೇಳಿ, ಪ್ರಮಾದರಹಿತರಾದ ಪುರುಷಶ್ರೇಷ್ಠರಾದ ಶೂರರಾದ ಪಾಂಡವರು (ನಮ್ಮ) ಸ್ಥಾನವನ್ನು ಅರಸುತ್ತಾ ಶೀಘ್ರವಾಗಿ ಬರಲಿದ್ದಾರೆ.

ಪಾಂಡೂನಾಂ ಕಿಲ್ಬಿಷಂ ಕೃತ್ವಾ ಸಂಸ್ಥಾತುಂ ನೋತ್ಸಹಾಮಹೇ ।
ಅನುಜಾನೀಹಿ ಮಾಂ ರಾಜ್ಞಿ ಮಾ ಚ ಶೋಕೇ ಮನಃ ಕೃಥಾಃ ॥೧೭॥

ಪಾಂಡವರಿಗೆ ಅನ್ಯಾಯವನ್ನು ಮಾಡಿ (ನಾವು ಇಲ್ಲಿ) ನಿಲ್ಲಲು ಉತ್ಸಾಹವನ್ನು ಹೊಂದಿಲ್ಲ, ಮಹಾರಾಣಿಯೆ! ನನಗೆ ಅನುಮತಿಯನ್ನು ನೀಡು, ದುಃಖದಲ್ಲಿ ಮನವನ್ನು ಮಾಡದಿರು.

ರಾಜಂಸ್ತ್ವಮನುಜಾನೀಹಿ ಧೈರ್ಯಮಾತಿಷ್ಠ ಚೋತ್ತಮಮ್ ।
ದಿಷ್ಟಾಂತಂ ಪಶ್ಯ ಚಾಪಿ ತ್ವಂ ಕ್ಷತ್ರಧರ್ಮಂ ಚ ಕೇವಲಮ್ ॥೧೮॥

ರಾಜನೆ! ನೀನೂ ಅನುಮತಿಯನ್ನು ನೀಡು, ಹೆಚ್ಚಿನ ಧೈರ್ಯವನ್ನು ತೆಗೆದುಕೊ, ಕೇವಲ ಕ್ಷತ್ರಧರ್ಮವನ್ನು ಗಮನಿಸಿ (ಮಕ್ಕಳ) ಅಂತ್ಯವನ್ನು ಕಾಣುವವನಾಗು. (ಕ್ಷತ್ರಿಯನಾದವನು ರಣರಂಗದಲ್ಲಿ ಸಾವನ್ನು ಹೊಂದುವುದು ಹೆಮ್ಮೆಯ ಸಂಗತಿ ಎಂದು ತಿಳಿಯುವವನಾಗು ಎಂದು ಭಾವ).

ವೈಶಂಪಾಯನಃ

ಇತ್ಯೇವಮುಕ್ತ್ವಾ ರಾಜಾನಂ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಕೃಪಶ್ಚ ಕೃತವರ್ಮಾ ಚ ದ್ರೋಣಪುತ್ರಶ್ಚ ಭಾರತ ॥೧೯॥

ಅನ್ವೀಕ್ಷಮಾಣಂ ರಾಜಾನಂ ಧೃತರಾಷ್ಟ್ರಂ ಮನೀಷಿಣಮ್ ।
ಗಂಗಾಮನು ಮಹಾತ್ಮಾನಃ ತೂರ್ಣಮಶ್ವಾನಚೋದಯನ್ ॥೨೦॥

ಶೂರರ ಎದುರಿನಲ್ಲಿ ಯುದ್ಧಮಾಡುತ್ತಿರುವ ಯಾರೊಬ್ಬರೂ ಹಿಂತಿರುಗಲಿಲ್ಲ, ಶಸ್ತ್ರದಿಂದ ಮರಣವನ್ನು ಹೊಂದಿದರು, ಯಾರೂ (ಶತ್ರುಗಳಿಗೆ) ಕೈಜೋಡಿಸಲಿಲ್ಲ.

ಏತಾಂ ತಾಂ ಕ್ಷತ್ರಿಯಸ್ಯಾಹುಃ ಪುರಾಣಾಃ ಪರಮಾಂ ಗತಿಮ್ ।
ಶಸ್ತ್ರೇಣ ನಿಧನಂ ಸಂಖೇ ತಾನ್ ನ ಶೋಚಿತುಮರ್ಹಸಿ ॥೧೦॥

ಕ್ಷತ್ರಿಯನಿಗೆ ಯುದ್ಧದಲ್ಲಿ ಶಸ್ತ್ರದಿಂದ ಸಾವು ಪ್ರಾಪ್ತವಾದಲ್ಲಿ ಯಾವ ಶ್ರೇಷ್ಠ ಗತಿಯನ್ನು ಪ್ರಾಚೀನರು ತಿಳಿಸಿರುವರೋ ಅದನ್ನು ಹೊಂದಿರುವ ಅವರನ್ನು ಉದ್ದೇಶಿಸಿ ದುಃಖಿಸುವುದು ತರವಲ್ಲ.

ನ ಚಾಪಿ ಶತ್ರವಸ್ತೇಷಾಮೃದ್ಧ್ಯಂತೇ ರಾಜ್ಞಿ ಪಾಂಡವಾಃ ।
ಶೃಣು ಯತ್ ಕೃತಮಸ್ಮಾಭಿರಶ್ವತ್ಥಾಮಪುರೋಗಮೈಃ ॥೧೧॥

ರಾಜನೆ! ಅವರುಗಳ (ನಿನ್ನ ಪುತ್ರರ) ಶತ್ರುಗಳಾದ ಪಾಂಡವರು ಹೆಚ್ಚಿನ ಲಾಭವನ್ನು ಹೊಂದಿಲ್ಲ. ಅಶ್ವತ್ಥಾಮನ ಮುಂದಾಳುತನದಲ್ಲಿ ನಾವು ಏನನ್ನು ಮಾಡಿದೆವು ಎನ್ನುವುದನ್ನು ಕೇಳು.

ಅಧರ್ಮೇಣ ಹತಂ ಶ್ರುತ್ವಾ ಭೀಮಸೇನೇನ ತೇ ಸುತಮ್ ।
ಸುಪ್ತಂ ಶಿಬಿರಮಾವಿಶ್ಯ ಪಾಂಡೂನಾಂ ಕದನಂ ಮಹತ್ ॥೧೨॥

ಅಧರ್ಮದಿಂದ ನಿನ್ನ ಮಗನನ್ನು ಭೀಮಸೇನನು ಸಂಹರಿಸಿದನು ಎನ್ನುವುದನ್ನು ಕೇಳಿ, ಮಲಗಿದ ಪಾಂಡವರ ಶಿಬಿರವನ್ನು ಹೊಕ್ಕು ಭಾರೀ ಕದನವನ್ನು ಸಾರಿದೆವು.

ಪಾಂಚಾಲಾ ನಿಹತಾಃ ಸರ್ವೇ ಧೃಷ್ಟದ್ಯುಮ್ನಪುರೋಗಮಾಃ ।
ದ್ರುಪದಸ್ಯಾತ್ಮಜಾಶ್ಚೈವ ದ್ರೌಪದೇಯಾಶ್ಚ ಪಾತಿತಾಃ ॥೧೩॥

ದ್ರುಪದನ ಮಕ್ಕಳಾದ ಧೃಷ್ಟದ್ಯುಮ್ನನೇ ಮುಂತಾದ ಎಲ್ಲ ಪಾಂಚಾಲರನ್ನು ಸಂಹರಿಸಿದೆವು. ದ್ರೌಪದಿಯ ಮಕ್ಕಳನ್ನೂ ಕೆಡವಿದೆವು.

ತಥಾ ವಿಶಸನಂ ಕೃತ್ವಾ ಪುತ್ರಶತ್ರುಗಣಸ್ಯ ತೇ ।
ಪ್ರಾದ್ರವಾಮ ನ ಹಿ ಸ್ಥಾತುಂ ರಣೇ ಶಕ್ಷ್ಯಾಮಹೇ ತ್ರಯಃ ॥೧೪॥

ನಿನ್ನ ಮಕ್ಕಳ ಶತ್ರುಗಣದ ನಾಶವನ್ನು ಮಾಡಿ (ಅಲ್ಲಿಂದ) ಓಡಿದೆವು, ನಾವು ಮೂವರೇ ರಣರಂಗದಲ್ಲಿ ನಿಲ್ಲಲು ಸಮರ್ಥರಲ್ಲ.

ತೇ ಹಿ ಶೂರಾ ಮಹೇಷ್ವಾಸಾಃ ಕ್ಷಿಪ್ರಮೇಷ್ಯಂತಿ ಪಾಂಡವಾಃ ।
ಅಮರ್ಷವಶಮಾಪನ್ನಾ ವೈರಂ ಪ್ರತಿಚಿಕೀರ್ಷವಃ ॥೧೫॥

ತೇ ಹತಾನಾತ್ಮಜಾನ್ ಶ್ರುತ್ವಾ ಪ್ರಮತ್ತಾಃ ಪುರುಷರ್ಷಭಾಃ ।
ಅನ್ವಿಷ್ಯಂತಃ ಪದಂ ಶೂರಾಃ ಕ್ಷಿಪ್ರಮೇಷ್ಯಂತಿ ಪಾಂಡವಾಃ ॥೧೬॥

ಶೂರರಾದ ಬಿಲ್ಲಾಳುಗಳಾದ ಆ ಪಾಂಡವರು ಶೀಘ್ರದಲ್ಲಿ ಬರಲಿದ್ದಾರೆ, ದ್ವೇಷಕ್ಕೆ ಪ್ರತೀಕಾರ ಮಾಡಬೇಕೆಂಬ ಇಚ್ಛೆಯಿರುವ ಸಿಟ್ಟಿನ ಅಧೀನರಾಗಿರುವ ಅವರು ಮಕ್ಕಳು ಮೃತರಾದರು ಎನ್ನುವುದನ್ನು ಕೇಳಿ, ಪ್ರಮಾದರಹಿತರಾದ ಪುರುಷಶ್ರೇಷ್ಠರಾದ ಶೂರರಾದ ಪಾಂಡವರು (ನಮ್ಮ) ಸ್ಥಾನವನ್ನು ಅರಸುತ್ತಾ ಶೀಘ್ರವಾಗಿ ಬರಲಿದ್ದಾರೆ.

ಪಾಂಡೂನಾಂ ಕಿಲ್ಬಿಷಂ ಕೃತ್ವಾ ಸಂಸ್ಥಾತುಂ ನೋತ್ಸಹಾಮಹೇ ।
ಅನುಜಾನೀಹಿ ಮಾಂ ರಾಜ್ಞಿ ಮಾ ಚ ಶೋಕೇ ಮನಃ ಕೃಥಾಃ ॥೧೭॥

ಪಾಂಡವರಿಗೆ ಅನ್ಯಾಯವನ್ನು ಮಾಡಿ (ನಾವು ಇಲ್ಲಿ) ನಿಲ್ಲಲು ಉತ್ಸಾಹವನ್ನು ಹೊಂದಿಲ್ಲ, ಮಹಾರಾಣಿಯೆ! ನನಗೆ ಅನುಮತಿಯನ್ನು ನೀಡು, ದುಃಖದಲ್ಲಿ ಮನವನ್ನು ಮಾಡದಿರು.

ರಾಜಂಸ್ತ್ವಮನುಜಾನೀಹಿ ಧೈರ್ಯಮಾತಿಷ್ಠ ಚೋತ್ತಮಮ್ ।
ದಿಷ್ಟಾಂತಂ ಪಶ್ಯ ಚಾಪಿ ತ್ವಂ ಕ್ಷತ್ರಧರ್ಮಂ ಚ ಕೇವಲಮ್ ॥೧೮॥

ರಾಜನೆ! ನೀನೂ ಅನುಮತಿಯನ್ನು ನೀಡು, ಹೆಚ್ಚಿನ ಧೈರ್ಯವನ್ನು ತೆಗೆದುಕೊ, ಕೇವಲ ಕ್ಷತ್ರಧರ್ಮವನ್ನು ಗಮನಿಸಿ (ಮಕ್ಕಳ) ಅಂತ್ಯವನ್ನು ಕಾಣುವವನಾಗು. (ಕ್ಷತ್ರಿಯನಾದವನು ರಣರಂಗದಲ್ಲಿ ಸಾವನ್ನು ಹೊಂದುವುದು ಹೆಮ್ಮೆಯ ಸಂಗತಿ ಎಂದು ತಿಳಿಯುವವನಾಗು ಎಂದು ಭಾವ).

ವೈಶಂಪಾಯನಃ

ಇತ್ಯೇವಮುಕ್ತ್ವಾ ರಾಜಾನಂ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಕೃಪಶ್ಚ ಕೃತವರ್ಮಾ ಚ ದ್ರೋಣಪುತ್ರಶ್ಚ ಭಾರತ ॥೧೯॥

ಅನ್ವೀಕ್ಷಮಾಣಂ ರಾಜಾನಂ ಧೃತರಾಷ್ಟ್ರಂ ಮನೀಷಿಣಮ್ ।
ಗಂಗಾಮನು ಮಹಾತ್ಮಾನಃ ತೂರ್ಣಮಶ್ವಾನಚೋದಯನ್ ॥೨೦॥

ವೈಶಂಪಾಯನ– ಭರತಕುಲೋತ್ಪನ್ನನೆ! ಕೃಪ ಕೃತವರ್ಮ ದ್ರೋಣಪುತ್ರನೂ ಸಹ ರಾಜನನ್ನು ಉದ್ದೇಶಿಸಿ ಹೀಗೆ ಹೇಳಿ, ಪ್ರದಕ್ಷಿಣೆಯನ್ನೂ ಮಾಡಿ, ಜ್ಞಾನಿಯಾದ ರಾಜನಾದ ಧೃತರಾಷ್ಟ್ರನನ್ನು ಮತ್ತೆ ಮತ್ತೆ ನೋಡುತ್ತಾ ಗಂಗೆಯನ್ನು ಅನುಸರಿಸಿ ಆ ಮಹಾತ್ಮರು ಕುದುರೆಗಳನ್ನು ವೇಗವಾಗಿ ಪ್ರಚೋದಿಸಿದರು.

ಅಪಕ್ರಮ್ಯ ಚ ತೇ ಸರ್ವೇ ತ್ರಯೋ ರಾಜನ್ ಮಹಾರಥಾಃ ।
ಆಮಂತ್ರ್ಯಾನ್ಯೋನ್ಯಮುದ್ವಿಗ್ನಾಃ ತ್ರಿಧಾ ತೇ ಪ್ರಯಯುಸ್ತತಃ ॥೨೧॥

ರಾಜನೆ! ಆ ಎಲ್ಲ ಮೂವರೂ ಮಹಾರಥಿಕರು ಸ್ವಲ್ಪದೂರ ಸಾಗಿ, ಅನಂತರದಲ್ಲಿ ಹೆದರಿದ ಅವರು ಪರಸ್ಪರವಾಗಿ ಆಲೋಚಿಸಿ ಮೂರು ಹಾದಿಗಳಲ್ಲಿ ಸಾಗಿದರು.

ಜಗಾಮ ಹಸ್ತಿನಪುರಂ ಕೃಪಃ ಶಾರದ್ವತಸ್ತತಃ ।
ಸ್ವಮೇವ ರಾಷ್ಟ್ರಂ ಹಾರ್ದಿಕ್ಯೋ ದ್ರೌಣಿರ್ವ್ಯಾಸಾಶ್ರಮಂ ಯಯೌ ॥೨೨॥

ಅನಂತರದಲ್ಲಿ ಶರದ್ವತಗೋತ್ರೋತ್ಪನ್ನನಾದ ಕೃಪನು ಹಸ್ತಿನಪುರಕ್ಕೆ ತೆರಳಿದನು, ಕೃತವರ್ಮನು ತನ್ನ ನಗರಕ್ಕೆ ತೆರಳಿದನು, ದ್ರೋಣಪುತ್ರನು ವ್ಯಾಸಾಶ್ರಮಕ್ಕೆ ತೆರಳಿದನು.

ಏವಂ ತೇ ಪ್ರಯಯುರ್ವೀರಾಃ ವೀಕ್ಷಮಾಣಾಃ ಪರಸ್ಪರಮ್ ।
ಭಯಾರ್ತಾಃ ಪಾಂಡುಪುತ್ರಾಣಾಮಾಗಸ್ಕೃತ್ವಾ ಮಹಾತ್ಮನಾಮ್ ॥೨೩॥

ಮಹಾತ್ಮರಾದ ಪಾಂಡುಪುತ್ರರಿಗೆ ಪಾಪವನ್ನೆಸಗಿ, ಭಯಗ್ರಸ್ತರಾದ ವೀರರಾದ ಅವರು ಒಬ್ಬರನ್ನು ಮತ್ತೊಬ್ಬರು ನೋಡುತ್ತಾ ಹೊರಟರು.

ಸಮೇತ್ಯ ವೀರಂ ರಾಜಾನಂ ತದಾ ತ್ವನುದಿತೇ ರವೌ ।
ವಿಪ್ರಜಗ್ಮುರ್ಮಹಾರಾಜ ಯಥೇಷ್ಟಕಮರಿಂದಮಾಃ ॥೨೪॥

ಮಹಾರಾಜನೆ! ಶತ್ರುಗಳನ್ನು ಮಣಿಸುವ (ಆ ಮೂವರು) ವೀರನಾದ ರಾಜನನ್ನು (ಧೃತರಾಷ್ಟ್ರನನ್ನು) ಸಂಧಿಸಿ, ಸೂರ್ಯೋದಯವಾಗುವ ಮೊದಲು ಅವರಿಗೆ ಅಭೀಷ್ಟವಾದ ಸ್ಥಳಕ್ಕೆ ಸಾಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಏಕಾದಶೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಯುಧಿಷ್ಠಿರಸ್ಯಾನು ವಿಚಿತ್ರವೀರ್ಯ
ಸುತಸ್ಯ ಪಾದಾವಭಿವಂದಮಾನಮ್ ।
ಆಕೃಷ್ಯ ಭೀಮಂ ಪರಮೇಶ್ವರೋಽಯೋ-
ಮಯಾಕೃತಿಮಧಾತ್ ಪುರತೋ ನೃಪಸ್ಯ ॥

ಯುಧಿಷ್ಠಿರನ ಅನಂತರ ಭೀಮ ಬಂದು ಧೃತರಾಷ್ಟ್ರನಿಗೆ ಪಾದಾಭಿವಂದನೆ ಮಾಡುವಾಗ ಶ್ರೀಕೃಷ್ಣ ಅವನನ್ನು ಈಚೆಗೆ ಸೆಳೆದು, ಅವನ ಸ್ಥಾನದಲ್ಲಿ ಕಬ್ಬಿಣದ ಪ್ರತಿಮೆಯನ್ನು ಧೃತರಾಷ್ಟ್ರನ ಮುಂದೆ ನಿಲ್ಲಿಸಿದನು.

ಭೀಮಾಕೃತಿಂ ತಾಂ ಸ ಸುಯೋಧನೇನ
ಕಾರಾಪಿತಾಮಭ್ಯಸನೇ ಗದಾಯಾಃ ।
ಆಶ್ಲಿಷ್ಯ ಚೂರ್ಣೀಕೃತವಾನಸೃಗ್ ವಮನ್
ಹಾ ತಾತ ಭೀಮೇತಿ ವದನ್ ಪಪಾತ ॥

ದುರ್ಯೋಧನನ ಗದಾಭ್ಯಾಸಕ್ಕಾಗಿ ಮಾಡಿಸಿದ್ದ ಆ ಭೀಮಪ್ರತಿಮೆಯನ್ನು ಧೃತರಾಷ್ಟ್ರ ಬಿಗಿಯಾಗಿ ಅಪ್ಪಿ ಪುಡಿ ಮಾಡಿದನು. ತಾನೂ ನೆತ್ತರು ಕಾರುತ್ತಾ 'ಹಾ ಮಗು, ಭೀಮ! ಸತ್ತೆಯಾ?' ಎಂದು ಹೇಳುತ್ತಾ ಬಿದ್ದನು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ಧರ್ಮರಾಜನು ಕೃಷ್ಣಾದಿಗಳಿಂದ ಕೂಡಿಕೊಂಡು ಧೃತರಾಷ್ಟ್ರನ ಸಮೀಪಕ್ಕೆ ತೆರಳಿದನು, ಧೃತರಾಷ್ಟ್ರನು ಧರ್ಮರಾಜನನ್ನು ಮೃದುವಾಗಿ ಆಲಿಂಗನ ಮಾಡಿಕೊಂಡನು, ಅನಂತರದಲ್ಲಿ ಕೃಷ್ಣನು ಮುಂದೆ ಸರಿಸಿದ ಭೀಮನ ಲೋಹದ ಪ್ರತಿಮೆಯನ್ನು ಬಿಗಿಯಾಗಿ ಆಲಿಂಗಿಸಿ ಭಂಜಿಸಿದನು.

ವೈಶಂಪಾಯನಃ

ಹತೇಷು ಸರ್ವಸೈನ್ಯೇಷು ಪಾಂಡುಪುತ್ರೋ ಯುಧಿಷ್ಠಿರಃ ।
ಶುಶ್ರುವೇ ಪಿತರಂ ವೃದ್ಧಂ ನಿರ್ಯಾಂತಂ ಗಜಸಾಹ್ವಯಾತ್ ॥೧॥

ವೈಶಂಪಾಯನ– ಭರತಕುಲೋತ್ಪನ್ನನೆ! ಕೃಪ ಕೃತವರ್ಮ ದ್ರೋಣಪುತ್ರನೂ ಸಹ ರಾಜನನ್ನು ಉದ್ದೇಶಿಸಿ ಹೀಗೆ ಹೇಳಿ, ಪ್ರದಕ್ಷಿಣೆಯನ್ನೂ ಮಾಡಿ, ಜ್ಞಾನಿಯಾದ ರಾಜನಾದ ಧೃತರಾಷ್ಟ್ರನನ್ನು ಮತ್ತೆ ಮತ್ತೆ ನೋಡುತ್ತಾ ಗಂಗೆಯನ್ನು ಅನುಸರಿಸಿ ಆ ಮಹಾತ್ಮರು ಕುದುರೆಗಳನ್ನು ವೇಗವಾಗಿ ಪ್ರಚೋದಿಸಿದರು.

ಅಪಕ್ರಮ್ಯ ಚ ತೇ ಸರ್ವೇ ತ್ರಯೋ ರಾಜನ್ ಮಹಾರಥಾಃ ।
ಆಮಂತ್ರ್ಯಾನ್ಯೋನ್ಯಮುದ್ವಿಗ್ನಾಃ ತ್ರಿಧಾ ತೇ ಪ್ರಯಯುಸ್ತತಃ ॥೨೧॥

ರಾಜನೆ! ಆ ಎಲ್ಲ ಮೂವರೂ ಮಹಾರಥಿಕರು ಸ್ವಲ್ಪದೂರ ಸಾಗಿ, ಅನಂತರದಲ್ಲಿ ಹೆದರಿದ ಅವರು ಪರಸ್ಪರವಾಗಿ ಆಲೋಚಿಸಿ ಮೂರು ಹಾದಿಗಳಲ್ಲಿ ಸಾಗಿದರು.

ಜಗಾಮ ಹಸ್ತಿನಪುರಂ ಕೃಪಃ ಶಾರದ್ವತಸ್ತತಃ ।
ಸ್ವಮೇವ ರಾಷ್ಟ್ರಂ ಹಾರ್ದಿಕ್ಯೋ ದ್ರೌಣಿರ್ವ್ಯಾಸಾಶ್ರಮಂ ಯಯೌ ॥೨೨॥

ಅನಂತರದಲ್ಲಿ ಶರದ್ವತಗೋತ್ರೋತ್ಪನ್ನನಾದ ಕೃಪನು ಹಸ್ತಿನಪುರಕ್ಕೆ ತೆರಳಿದನು, ಕೃತವರ್ಮನು ತನ್ನ ನಗರಕ್ಕೆ ತೆರಳಿದನು, ದ್ರೋಣಪುತ್ರನು ವ್ಯಾಸಾಶ್ರಮಕ್ಕೆ ತೆರಳಿದನು.

ಏವಂ ತೇ ಪ್ರಯಯುರ್ವೀರಾಃ ವೀಕ್ಷಮಾಣಾಃ ಪರಸ್ಪರಮ್ ।
ಭಯಾರ್ತಾಃ ಪಾಂಡುಪುತ್ರಾಣಾಮಾಗಸ್ಕೃತ್ವಾ ಮಹಾತ್ಮನಾಮ್ ॥೨೩॥

ಮಹಾತ್ಮರಾದ ಪಾಂಡುಪುತ್ರರಿಗೆ ಪಾಪವನ್ನೆಸಗಿ, ಭಯಗ್ರಸ್ತರಾದ ವೀರರಾದ ಅವರು ಒಬ್ಬರನ್ನು ಮತ್ತೊಬ್ಬರು ನೋಡುತ್ತಾ ಹೊರಟರು.

ಸಮೇತ್ಯ ವೀರಂ ರಾಜಾನಂ ತದಾ ತ್ವನುದಿತೇ ರವೌ ।
ವಿಪ್ರಜಗ್ಮುರ್ಮಹಾರಾಜ ಯಥೇಷ್ಟಕಮರಿಂದಮಾಃ ॥೨೪॥

ಮಹಾರಾಜನೆ! ಶತ್ರುಗಳನ್ನು ಮಣಿಸುವ (ಆ ಮೂವರು) ವೀರನಾದ ರಾಜನನ್ನು (ಧೃತರಾಷ್ಟ್ರನನ್ನು) ಸಂಧಿಸಿ, ಸೂರ್ಯೋದಯವಾಗುವ ಮೊದಲು ಅವರಿಗೆ ಅಭೀಷ್ಟವಾದ ಸ್ಥಳಕ್ಕೆ ಸಾಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಏಕಾದಶೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ಯುಧಿಷ್ಠಿರಸ್ಯಾನು ವಿಚಿತ್ರವೀರ್ಯ
ಸುತಸ್ಯ ಪಾದಾವಭಿವಂದಮಾನಮ್ ।
ಆಕೃಷ್ಯ ಭೀಮಂ ಪರಮೇಶ್ವರೋऽಯೋ-
ಮಯಾಕೃತಿಮಧಾತ್ ಪುರತೋ ನೃಪಸ್ಯ ॥

ಯುಧಿಷ್ಠಿರನ ಅನಂತರ ಭೀಮ ಬಂದು ಧೃತರಾಷ್ಟ್ರನಿಗೆ ಪಾದಾಭಿವಂದನೆ ಮಾಡುವಾಗ ಶ್ರೀಕೃಷ್ಣ ಅವನನ್ನು ಈಚೆಗೆ ಸೆಳೆದು, ಅವನ ಸ್ಥಾನದಲ್ಲಿ ಕಬ್ಬಿಣದ ಪ್ರತಿಮೆಯನ್ನು ಧೃತರಾಷ್ಟ್ರನ ಮುಂದೆ ನಿಲ್ಲಿಸಿದನು.

ಭೀಮಾಕೃತಿಂ ತಾಂ ಸ ಸುಯೋಧನೇನ
ಕಾರಾಪಿತಾಮಭ್ಯಸನೇ ಗದಾಯಾಃ ।
ಆಶ್ಲಿಷ್ಯ ಚೂರ್ಣೇಕೃತವಾನಸೃಗ್ ವಮನ್
ಹಾ ತಾತ ಭೀಮೇತಿ ವದನ್ ಪಪಾತ ॥

ದುರ್ಯೋಧನನ ಗದಾಭ್ಯಾಸಕ್ಕಾಗಿ ಮಾಡಿಸಿದ್ದ ಆ ಭೀಮಪ್ರತಿಮೆಯನ್ನು ಧೃತರಾಷ್ಟ್ರ ಬಿಗಿಯಾಗಿ ಅಪ್ಪಿ ಪುಡಿ ಮಾಡಿದನು. ತಾನೂ ನೆತ್ತರು ಕಾರುತ್ತಾ 'ಹಾ ಮಗು, ಭೀಮ! ಸತ್ತೆಯಾ?' ಎಂದು ಹೇಳುತ್ತಾ ಬಿದ್ದನು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ಧರ್ಮರಾಜನು ಕೃಷ್ಣಾದಿಗಳಿಂದ ಕೂಡಿಕೊಂಡು ಧೃತರಾಷ್ಟ್ರನ ಸಮೀಪಕ್ಕೆ ತೆರಳಿದನು, ಧೃತರಾಷ್ಟ್ರನು ಧರ್ಮರಾಜನನ್ನು ಮೃದುವಾಗಿ ಆಲಿಂಗನ ಮಾಡಿಕೊಂಡನು, ಅನಂತರದಲ್ಲಿ ಕೃಷ್ಣನು ಮುಂದೆ ಸರಿಸಿದ ಭೀಮನ ಲೋಹದ ಪ್ರತಿಮೆಯನ್ನು ಬಿಗಿಯಾಗಿ ಆಲಿಂಗಿಸಿ ಭಂಜಿಸಿದನು.

ವೈಶಂಪಾಯನಃ

ಹತೇಷು ಸರ್ವಸೈನ್ಯೇಷು ಪಾಂಡುಪುತ್ರೋ ಯುಧಿಷ್ಠಿರಃ ।
ಶುಶ್ರುವೇ ಪಿತರಂ ವೃದ್ಧಂ ನಿರ್ಯಾಂತಂ ಗಜಸಾಹ್ವಯಾತ್ ॥೧॥

ವೈಶಂಪಾಯನ– ಪಾಂಡುಪುತ್ರನಾದ ಯುಧಿಷ್ಠಿರನು ಎಲ್ಲ ಸೈನ್ಯವು ಸಂಹೃತವಾಗಲು, ವೃದ್ಧನಾದ ತಂದೆಯು ಹಸ್ತಿನಾವತಿಯಿಂದ ಹೊರಟನು ಎಂಬುದನ್ನು ಕೇಳಿದನು.

ಸೋಽಭ್ಯಯಾತ್ ಪುತ್ರಶೋಕಾರ್ತಂ ಪುತ್ರಶೋಕಪರಿಪ್ಲುತಃ ।
ಶೋಚಮಾನೋ ಮಹಾರಾಜ ಭ್ರಾತೃಭಿಃ ಸಹಿತಸ್ತತಃ ॥೨॥

ಅನ್ವೀಯಮಾನೋ ವೀರೇಣ ದಾಶಾರ್ಹೇಣ ಮಹಾತ್ಮನಾ ।
ಯುಯುಧಾನೇನ ಚ ತಥಾ ತಥೈವ ಚ ಯುಯುತ್ಸುನಾ ॥೩॥

ಮಹಾರಾಜನೆ! ಅನಂತರದಲ್ಲಿ ಪುತ್ರಶೋಕದಿಂದ ಮುಳುಗಿಹೋದ ದುಃಖಿಸುತ್ತಿರುವ ಮಹಾತ್ಮನಾದ ದಶಾರ್ಹಕುಲೋತ್ಪನ್ನನಾದ ವೀರನಾದ ಕೃಷ್ಣನಿಂದ ಅನುಸರಿಸಿದವನಾದ, ಹಾಗೆಯೇ ಸಾತ್ಯಕಿಯಿಂದ ಮತ್ತು ಯುಯುತ್ಸುವಿನಿಂದಲೂ ಅನುಸರಿಸಿದವನಾದ ಆತನು (ಯುಧಿಷ್ಠಿರನು) ಸಹೋದರರಿಂದ ಕೂಡಿಕೊಂಡು ಪುತ್ರಶೋಕದಿಂದ ಆರ್ತನಾದವನನ್ನು (ಧೃತರಾಷ್ಟ್ರನನ್ನು) ಸಮೀಪಿಸಿದನು.

ತಮನ್ವಯಾತ್ ಸುದುಃಖಾರ್ತಾ ದ್ರೌಪದೀ ಶೋಕಕರ್ಶಿತಾ ।
ಸಹ ಪಾಂಚಾಲಯೋಷಿದ್ಭಿಃ ಯಾಸ್ತತ್ರಾಸನ್ ಸಮಾಗತಾಃ ॥೪॥

ಯಾರು ಯಾರು ಆ ಮೊದಲೇ ಅಲ್ಲಿಗೆ ಬಂದು ಸೇರಿದ್ದರೋ ಆ ಎಲ್ಲರಿಂದ ಪಾಂಚಾಲಸ್ತ್ರೀಯರಿಂದಲೂ ಒಡಗೂಡಿದ ದುಃಖದಿಂದ ಸೊರಗಿದ ಅತ್ಯಂತ ದುಃಖಿತಳಾದ ದ್ರೌಪದಿಯು ಆತನನ್ನು (ಧರ್ಮರಾಜನನ್ನು) ಅನುಸರಿಸಿದಳು.

ಸಂಗ್ರಾಮಮನು ಬೃಂದಾನಿ ಸ್ತ್ರೀಣಾಂ ಭರತಸತ್ತಮ ।
ಕುರರೀಣಾಮಿವಾರ್ತಾನಾಂ ಕ್ರೋಶಂತೀನಾಂ ದದರ್ಶ ಹ ॥೫॥

ತಾಭಿಃ ಪರಿವೃತೋ ರಾಜಾ ರುದಂತೀಭಿಃ ಸಮಂತತಃ ।
ಊರ್ಧ್ವಬಾಹುಭಿರಾರ್ತಾಭಿಃ ಬ್ರುವಂತೀಭಿಃ ಪ್ರಿಯಾಪ್ರಿಯೇ ॥೬॥

ಭರತಕುಲೋತ್ಪನ್ನರಲ್ಲಿ ಉತ್ತಮನೆ! ರೋದಿಸುತ್ತಿರುವ ಕುರರ ಪಕ್ಷಿಗಳಂತೆ ದುಃಖಿತರಾದ ಮಹಿಳೆಯರ ಗುಂಪನ್ನು ಧರ್ಮರಾಜನು ರಣರಂಗದ ಸಮೀಪದಲ್ಲಿ ಕಂಡನು. (ಪಾಂಡವರ ಬಗ್ಗೆ) ಪ್ರೀತಿಯ ದ್ವೇಷದ ಮಾತುಗಳನ್ನು ಆಡುತ್ತಿರುವ,

ದುಃಖಿತರಾಗಿ ಕೈಗಳನ್ನು ಮೇಲೆತ್ತಿ ರೋದಿಸುತ್ತಿರುವ ರಾಜನನ್ನು (ಧೃತರಾಷ್ಟ್ರನನ್ನು), ಸುತ್ತುವರೆದಿದ್ದ ಸ್ತ್ರೀಯರನ್ನು ಕಂಡನು.

ಸ್ತ್ರಿಯಃ

ಧರ್ಮಸ್ತೇ ಕ್ವ ನು ಧರ್ಮಜ್ಞ ಕ್ವ ನು ಸಾಽದ್ಯಾನೃಶಂಸತಾ ।
ಯಥಾಽವಧೀಃ ಪಿತೄನ್ ಭ್ರಾತೄನ್ ಗುರೂನ್ ಪುತ್ರಾನ್ ಸಖೀನಪಿ ॥

ಧರ್ಮಜ್ಞನೆ! ಪಿತೃಗಳನ್ನು ಸಹೋದರರನ್ನು ಗುರುಗಳನ್ನು ಮಕ್ಕಳನ್ನು ಸ್ನೇಹಿತರನ್ನು ಸಂಹರಿಸಿದ ನಿನ್ನ ಧರ್ಮವು ಎಲ್ಲಿದೆ? ಇಂದು (ನಿನ್ನ) ಆ ಸಾಧುತನವೆಲ್ಲಿದೆ?

ಘಾತಯಿತ್ವಾ ಕಥಂ ದ್ರೋಣಂ ಭೀಷ್ಮಂ ಚಾಪಿ ಪಿತಾಮಹಮ್ ।
ಮನಸ್ತೇಽಭೂನ್ಮಹಾರಾಜ ಹತ್ವಾ ಚಾಪಿ ಜಯದ್ರಥಮ್ ॥೮॥

ಮಹಾರಾಜನೆ! ದ್ರೋಣರನ್ನು ಸಂಹರಿಸಲು, ಪಿತಾಮಹರನ್ನು ಸಂಹರಿಸಲು, ಜಯದ್ರಥನನ್ನು ಸಂಹರಿಸಲು ನಿನಗೆ ಮನವು ಹೇಗೆ ಉಂಟಾಯಿತು?

ಕಿಂ ನು ರಾಜ್ಯೇನ ತೇ ಕಾರ್ಯಂ ಪಿತೄನ್ ಭ್ರಾತೄನಪಶ್ಯತಃ ।
ಅಭಿಮನ್ಯುಂ ಚ ದುರ್ಧರ್ಷಂ ದ್ರೌಪದೇಯಾಂಶ್ಚ ಭಾರತ ॥೯॥

ಭರತಕುಲೋತ್ಪನ್ನನೆ! ಪಿತೃಗಳನ್ನು ಕಾಣದೆ, ಸಹೋದರರನ್ನು ಕಾಣದೆ, ಶತ್ರುಗಳಿಂದ ಧರ್ಷಣಕ್ಕೆ ಒಳಗಾಗದ ಅಭಿಮನ್ಯುವನ್ನು ಕಾಣದ, ದ್ರೌಪದಿಯ ಪುತ್ರರನ್ನು ಕಾಣದ, ನಿನಗೆ ರಾಜ್ಯದಿಂದ ಏನು ಪ್ರಯೋಜನ?

ವೈಶಂಪಾಯನಃ

ಅತೀತ್ಯ ತಾಃ ಮಹಾರಾಜ ಕ್ರೋಶಂತೀಃ ಕುರರೀರಿವ ।
ವವಂದೇ ಪಿತರಂ ಜ್ಯೇಷ್ಠಂ ಧರ್ಮರಾಜೋ ಯುಧಿಷ್ಠಿರಃ ॥೧೦॥

ವೈಶಂಪಾಯನ– ಮಹಾರಾಜನೆ! ಕುರರ ಪಕ್ಷಿಗಳಂತೆ ಕೂಗುತ್ತಿರುವ ಅವರೆಲ್ಲರನ್ನೂ ದಾಟಿ ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುವ ಧರ್ಮರಾಜನು ದೊಡ್ಡಪ್ಪನನ್ನು ನಮಿಸಿದನು.

ತತೋಽಭಿವಾದ್ಯ ಪಿತರಂ ಕ್ರಮೇಣಾಮಿತ್ರಕರ್ಶನಾಃ ।
ನ್ಯವೇದಯಂತ ನಾಮಾನಿ ಪಾಂಡವಾಸ್ತೇಽಪಿ ಸರ್ವಶಃ ॥೧೧॥

ಅನಂತರದಲ್ಲಿ ಶತ್ರುಗಳನ್ನು ಬಗ್ಗುಬಡಿಯುವ ಆ ಎಲ್ಲ ಪಾಂಡವರು ಕ್ರಮವಾಗಿ ನಮಸ್ಕರಿಸಿ (ತಮ್ಮ) ಹೆಸರುಗಳನ್ನು ಹೇಳಿಕೊಂಡರು.

ತಮಾತ್ಮಜಾಂತಕರಣಂ ಪಿತಾ ಪುತ್ರವಧಾರ್ದಿತಃ ।
ಅಪ್ರೀಯಮಾಣಃ ಶೋಕಾರ್ತಃ ಪಾಂಡವಂ ಪರಿಷಸ್ವಜೇ ॥೧೨॥

ಮಕ್ಕಳ ಸಾವಿನಿಂದ ದುಃಖಿತನಾದ ದುಃಖದಿಂದ ಬೆಂದ (ಆ) ದೊಡ್ಡಪ್ಪನು ಮಕ್ಕಳ ಸಾವಿಗೆ ಕಾರಣನಾದ ಆ ಪಾಂಡುಪುತ್ರನನ್ನು (ಧರ್ಮರಾಜನನ್ನು) ಒಲ್ಲದ ಮನದಿಂದ ಅಪ್ಪಿಕೊಂಡನು.

ಧರ್ಮರಾಜಂ ಪರಿಷ್ವಜ್ಯ ಸಾಂತ್ವಯಿತ್ವಾ ಚ ಭಾರತ ।
ದುಷ್ಪಾತ್ಮಾ ಭೀಮಮನ್ವೈಚ್ಛದ್ ದಿಧಕ್ಷುರಿವ ಪಾವಕಃ ॥೧೩॥

ಭರತಕುಲೋತ್ಪನ್ನನೆ! ಧರ್ಮರಾಜನನ್ನು ಅಪ್ಪಿಕೊಂಡು ಸಮಾಧಾನಗೊಳಿಸಿದ ನಂತರದಲ್ಲಿ ದಹಿಸಲು ಬಯಸುವ ಬೆಂಕಿಯಂತೆ ಕೆಟ್ಟ ಅಂತರಂಗದವನಾದ (ಧೃತರಾಷ್ಟ್ರನು) ಭೀಮಸೇನನನ್ನು (ಆಲಿಂಗಿಸಿಕೊಳ್ಳಲು) ಬಯಸಿದನು.

ಸ ಕೋಪಪಾವಕಸ್ತಸ್ಯ ಶೋಕವಾಯುಸಮೀರಿತಃ ।
ಭೀಮಸೇನಮಯಂ ದಾವಂ ದಿದೃಕ್ಷುರಿವ ದೃಶ್ಯತೇ ॥೧೪॥

ಶೋಕವೆಂಬ ಗಾಳಿಯಿಂದ ಉದ್ದೀಪನಗೊಂಡ ಆತನ ಕೋಪವೆಂಬ ಬೆಂಕಿಯು ಭೀಮಸೇನನೆಂಬ ಅರಣ್ಯವನ್ನು ದಹಿಸಲು ಬಯಸಿರುವಂತೆ ಕಂಡಿತು.

ತಸ್ಯ ಸಂಕಲ್ಪಮಾಜ್ಞಾಯ ಭೀಮಂ ಪ್ರತ್ಯಶುಭಂ ಹರಿಃ ।
ಭೀಮಮಾಕ್ಷಿಪ್ಯ ಪಾಣಿಭ್ಯಾಂ ಪ್ರದದೌ ಭೀಮಮಾಯಸಮ್ ॥೧೫॥

ಭೀಮನ ಬಗ್ಗೆ ಕೆಟ್ಟಭಾವವಿರುವ ಆತನ ಇಚ್ಛೆಯನ್ನು ತಿಳಿದ ಹರಿಯು, ಕೈಗಳಿಂದ ಭೀಮನನ್ನು ತಳ್ಳಿ, ಕಬ್ಬಿಣದ ಭೀಮನನ್ನು (ಭೀಮಪ್ರತಿಮೆಯನ್ನು) ಮುಂದೆ ಮಾಡಿದನು.

ಪ್ರಾಗೇವ ತು ಮಹಾಬಾಹುರ್ಬುದ್ಧ್ವಾ ತಸ್ಯೇಂಗಿತಂ ಹರಿಃ ।
ಸಂವಿಧಾನಂ ಮಹಾಪ್ರಾಜ್ಞಸ್ತತ್ರ ಚಕ್ರೇ ಜನಾರ್ದನಃ ॥೧೬॥

ನೀಳಬಾಹುವಾದ ಮಹಾಜ್ಞಾನಿಯಾದ (ಪ್ರಳಯಕಾಲದಲ್ಲಿ ಎಲ್ಲ) ಜನರನ್ನು ಸಂಹರಿಸುವ ಹರಿಯು, ಮೊದಲೇ ಆತನ (ಧೃತರಾಷ್ಟ್ರನ) ಅಂತರಂಗವನ್ನು ತಿಳಿದು, ಪ್ರತಿತಂತ್ರವನ್ನು ಮಾಡಿದನು.

ಉಪಗೃಹ್ಯೈವ ಬಾಹುಭ್ಯಾಂ ರಾಜಾ ಸ್ತಂಭಮಯೋಮಯಮ್ ।
ಬಭಂಜ ಬಲವಾನ್ ರಾಜಾ ಮನ್ಯಮಾನೋ ವೃಕೋದರಮ್ ॥೧೭॥

ಪ್ರಜಾರಂಜಕನಾದ ಬಲಿಷ್ಟನಾದ ರಾಜನು ಸ್ತಂಭದಂತಿರುವ ಭೀಮಸೇನನನ್ನು (ಕಬ್ಬಿಣದ ಗೊಂಬೆಯನ್ನು) ಎರಡೂ ಕೈಗಳಿಂದ ಹಿಡಿದು ಪುಡಿಮಾಡಿದನು.

ನಾಗಾಯುತಸಮಪ್ರಾಣಃ ಸ ರಾಜಾ ಭೀಮಮಾಯಸಮ್ ।
ಭಂಕ್ತ್ವಾ ವಿಮಥಿತೋರಸ್ಕಃ ಸುಸ್ರಾವ ರುಧಿರಂ ಮುಖಾತ್ ॥೧೮॥

ಹತ್ತುಸಾವಿರ ಆನೆಯ ಬಲವನ್ನು ಹೊಂದಿರುವ ಆ ರಾಜನು ಕಬ್ಬಿಣದ ಭೀಮಸೇನನನ್ನು ಪುಡಿಮಾಡಿ, ಎದೆಯು ಜಜ್ಜಿದಂತಾದುದರಿಂದ ಬಾಯಿಯಿಂದ ರಕ್ತವನ್ನು ಸುರಿಸಿದನು.

ತತಃ ಪಪಾತ ಮೇದಿನ್ಯಾಂ ತಥೈವ ರುಧಿರೋಕ್ಷಿತಃ ।
ಪ್ರಪುಷ್ಪಿತಾಗ್ರಶಿಖರಃ ಪಾರಿಜಾತ ಇವ ದ್ರುಮಃ ॥೧೯॥

ಹಾಗೆಯೇ ರಕ್ತದಿಂದ ಸಿಕ್ತನಾದ (ಧೃತರಾಷ್ಟ್ರನು) ನೆಲಕ್ಕೆ ಉರುಳಿದನು, ಪರ್ವತದ ತುದಿಯಲ್ಲಿನ ಹೂಗಳಿಂದ ಭರಿತವಾದ ಪಾರಿಜಾತ ಮರಬಿದ್ದಂತೆ ಕಂಡನು.

ಪರ್ಯಗೃಹ್ಣೀತ ತಂ ವಿದ್ವಾನ್ ಸೂತೋ ಗಾವಲ್ಗಣೆಸ್ತದಾ ।
ಮೈವಮಿತ್ಯಬ್ರವೀಚ್ಚೈನಂ ಶಮಯನ್ ಸಾಂತ್ವಯನ್ನಪಿ ॥೨೦॥

ಜ್ಞಾನಿಯಾದ ಸೂತನಾದ ಗವಲ್ಗಣನ ಪುತ್ರನು (ಸಂಜಯನು) ಅತನನ್ನು ಹಿಡಿದುಕೊಂಡನು, ' ಹೀಗಾಗ ಕೂಡದು' ಎಂದು ಹೇಳಿದನು, ಆತನನ್ನು ಸಮಧಾನಪಡಿಸಿದನು, ಶೈತ್ಯೋಪಚಾರವನ್ನು ಮಾಡಿದನು.

ಹತೋ ಭೀಮ ಇತಿ ಜ್ಞಾತ್ವಾ ಗತಮನ್ಯುರ್ಮಹಾಮನಾಃ ।
ಹಾ ಹಾ ಭೀಮೇತಿ ಚುಕ್ರೋಶ ಭೂಯಃ ಶೋಕಸಮನ್ವಿತಃ ॥೨೧॥

ಭೀಮನು ಮೃತನಾದನು ಎಂದು ತಿಳಿದು ಕೋಪವನ್ನಡಗಿಸಿಕೊಂಡಿದ್ದ ಮಹಾಮನಸ್ವಿಯು 'ಅಯ್ಯಯ್ಯೋ ಭೀಮಸೇನ' ಎಂದು ಅರಚಿದನು, ಮತ್ತೆ ದುಃಖಾವಿಷ್ಟನಾದನು.

ತಂ ವಿದಿತ್ವಾ ಗತಕ್ರೋಧಂ ಭೀಮಸೇನವಧಾರ್ದಿತಮ್ ।
ವಾಸುದೇವೋ ವರಂ ಪುಂಸಾಮಿದಂ ವಚನಮಬ್ರವೀತ್ ॥೨೨॥

ಭೀಮಸೇನನ ಸಂಹರಣದಿಂದ ದುಃಖಿತನಾದ, ಕೋಪವನ್ನು ಅಡಗಿಸಿಕೊಂಡಿರುವ ಆತನ ಅಂತರಂಗವನ್ನು ತಿಳಿದು, ವಾಸುದೇವನು ಮನುಜರಿಗೆ ಹಿರಿಯನಾದ ಧೃತರಾಷ್ಟ್ರನನ್ನು ಉದ್ದೇಶಿಸಿ ಈ ಮಾತನ್ನು ತಿಳಿಸಿದನು.

ಶ್ರೀಭಗವಾನ್

ಮಾ ಶುಚೋ ಧೃತರಾಷ್ಟ್ರ ತ್ವಂ ನೈವ ಭೀಮಸ್ತ್ವಯಾ ಹತಃ ।
ಆಯಸೀ ಪ್ರತಿಮಾ ಹ್ಯೇಷಾ ತ್ವಯಾ ರಾಜನ್ ನಿಪಾತಿತಾ ॥೨೩॥

ಕೃಷ್ಣ– ರಾಜನೆ, ಧೃತರಾಷ್ಟ್ರನೇ! ನೀನು ದುಃಖಿಸದಿರು, ನಿನ್ನಿಂದ ಭೀಮಸೇನನು ಸಂಹೃತನಾಗಿಲ್ಲ. ಈ ಕಬ್ಬಿಣದ ಪ್ರತಿಮೆಯು ನಿನ್ನಿಂದ ಪುಡಿಮಾಡಲ್ಪಟ್ಟಿತು.

ತ್ವಾಂ ಕ್ರೋಧವಶಮಾಪನ್ನಂ ವಿದಿತ್ವಾ ಭರತರ್ಷಭ ।
ಮಯಾऽಪಕೃಷ್ಟಃ ಕೌಂತೇಯೋ ಮೃತ್ಯೋರ್ದಂಷ್ಟ್ರಾಂತರಂ ಗತಃ ॥೨೪॥

ಭರತಕುಲಶೇಷ್ಠನೆ! ನೀನು ಕ್ರೋಧದ ಅಧೀನನಾಗಿರುವದನ್ನು ತಿಳಿದು, ಮೃತ್ಯುವಿನ ದವಡೆಯಲ್ಲಿಸಿಲುಕಿದ ಕುಂತೀಪುತ್ರನನ್ನು ನಾನು ಪಾರುಮಾಡಿರುವೆ.

ನ ಹಿ ತೇ ರಾಜಶಾರ್ದೂಲ ಬಲೇ ತುಲ್ಯೋऽಸ್ತಿ ಕಶ್ಚನ ।
ಯಃ ಸಹೇತ ಮಹಾಬಾಹೋ ತವ ನಿಗ್ರಹಣಂ ನರಃ ॥೨೫॥

ರಾಜವ್ಯಾಘ್ರನೆ! ಬಲದಲ್ಲಿ ನಿನ್ನ ಸಮಾನರು ಯಾರೂ ಇಲ್ಲ. ನಿನ್ನ ಹಿಡಿತವನ್ನು ಯಾವ ಮನುಷ್ಯನು ಸಹಿಸಿಯಾನು?

ಯಥಾ ಹಿ ನಾಂತಕಂ ಪ್ರಾಪ್ಯ ಜೀವನ್ ಮುಚ್ಯೇತ ಕಶ್ಚನ ।
ಏವಂ ಬಾಹ್ವಂತರಂ ಪ್ರಾಪ್ಯ ನ ಜೀವೇದಿಹ ಕಶ್ಚನ ॥೨೬॥

ಹೇಗೆ ಅಂತಕನನ್ನು ಹೊಂದಿ ಯಾರೂ ಮುಕ್ತರಾಗುವುದಿಲ್ಲವೊ, ಹಾಗೆ ನಿನ್ನ ಬಾಹುವಿನ ಹಿಡಿತಕ್ಕೆ ಸಿಲುಕಿದವನು ಯಾವಾತನೂ ಬದುಕಲಾರ.

ತಸ್ಮಾತ್ ಪುತ್ರೇಣ ತೇ ಯಾ ಸಾ ಪ್ರತಿಮಾ ಕಾರಿತಾऽऽಯಸೀ ।
ಭೀಮಸ್ಯ ಸೇಯಂ ಕೌರವ್ಯ ತವೈವೋಪಹೃತಾ ಮಯಾ ॥೨೭॥

ಕುರುಕುಲೋತ್ಪನ್ನನೆ! ನಿನ್ನ ಪುತ್ರನು ಭೀಮನ ಕಬ್ಬಿಣದ ಪ್ರತಿಮೆಯನ್ನು ಮಾಡಿಸಿದ್ದನು(ನಿತ್ಯವು ಗದಾಯುದ್ಧವನ್ನು ಅಭ್ಯಸಿಸಲು ದುರ್ಯೋಧನನು ಭೀಮನ ಪ್ರತಿಮೆಯನ್ನು ಮಾಡಿಸಿಕೊಂಡಿದ್ದನು), ಆದ್ದರಿಂದ (ಭೀಮಸೇನನನ್ನು ಸಂಹರಿಸಬಾರದು ಎಂಬ ಉದ್ದೇಶದಿಂದ) ನಾನು ನಿನ್ನಿಂದ ಆ ಪ್ರತಿಮೆಯನ್ನು ನಾಶಗೊಳಿಸಿಸಿದೆನು.

ಪುತ್ರಶೋಕಾಭಿಸಂತಾಪಾದ್ ಧರ್ಮಾದಪಹೃತಂ ಮನಃ ।
ತವ ರಾಜೇಂದ್ರ ತೇನ ತ್ವಂ ಭೀಮಸೇನಂ ಜಿಘಾಂಸಸಿ ॥೨೮॥

ರಾಜರಲ್ಲಿ ಹಿರಿಯನೆ! ಮಕ್ಕಳ ಶೋಕದಿಂದ ಸಂತಪ್ತನಾದ್ದರಿಂದ ನಿನ್ನ ಮನವು ಧರ್ಮವನ್ನು ತೊರೆಯಿತು, ಆದ್ದರಿಂದ ಭೀಮಸೇನನನ್ನು ಸಂಹರಿಸಲು ಬಯಸಿದ್ದಿ.

ನ ಚ ತೇ ತತ್ ಕ್ಷಮಂ ರಾಜನ್ ಹನ್ಯಾಸ್ತ್ವಂ ಯದ್ ವೃಕೋದರಮ್ ।
ನ ಹಿ ಪುತ್ರಾ ಮಹಾರಾಜ ಜೀವೇಯುಸ್ತೇ ಕಥಂಚನ ॥೨೯॥

ರಾಜನೆ! ಅದು ನಿನ್ನಿಂದ ಶಕ್ಯವಿಲ್ಲದ್ದು, ಮತ್ತೂ ನೀನು ಭೀಮಸೇನನ್ನು ಸಂಹರಿಸಿದರೂ ಹೇಗಾದರೂ ನಿನ್ನ ಮಕ್ಕಳು ಬದುಕಿಬಾಳಲಾರರು (ಆಯುಷ್ಯವು ಮುಗಿದ ನಿನ್ನ ಪುತ್ರನು ಪಾಂಡವರಿಂದ ಬದುಕಿ ಉಳಿದಿದ್ದರೂ ಸಂಹೃತರಾಗಲೇ ಬೇಕಿತ್ತು ಎಂದು ಭಾವ).

ತಸ್ಮಾದ್ ಯತ್ ಕೃತಮಸ್ಮಾಭಿರ್ಮನ್ಯಮಾನೈಃ ಶಮಂ ಪ್ರತಿ ।
ಅನುಮನ್ಯಸ್ವ ರಾಜೇಂದ್ರ ಮಾ ಚ ಶೋಕೇ ಮನಃ ಕೃಥಾಃ ॥೩೦॥

ರಾಜಶ್ರೇಷ್ಠನೆ! ಶಾಂತಿಯನ್ನು ಬಯಸುವ ನಾವು ಏನೆಲ್ಲವನ್ನು ಮಾಡಿದೆವು (ಆದರೆ ಫಲಿಸಲಿಲ್ಲ). ಆದ್ದರಿಂದ (ನಮ್ಮನ್ನು) ಕ್ಷಮಿಸುವವನಾಗು, ದುಃಖದಲ್ಲಿ ಮನವನ್ನು ಮಾಡಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಅಯೋಮಯಭೀಮಪ್ರತಿಮಾಭಂಜನಂ ನಾಮ ದ್ವಾದಶೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ತಮಾಹ ಕೃಷ್ಣೋ ನ ಹತೋಽದ್ಯ ಭೀಮೋ
ನ ಚ ತ್ವಯಾಽನ್ಯೈರಪಿ ಶಕ್ಯತೇಽಸೌ ।
ಹಂತುಂ ಸ್ವಬುದ್ಧಿಃ ಪ್ರಥಿತಾ ತ್ವಯಾಽದ್ಯ
ಪಾಪಾ ಹಿ ತೇ ಬುದ್ಧಿರದ್ಯಾಪಿ ರಾಜನ್ ॥

ಆಗ ಧೃತರಾಷ್ಟ್ರನಿಗೆ ಶ್ರೀಕೃಷ್ಣನೆಂದ- 'ಭೀಮನೀಗ ಹತನಾಗಿಲ್ಲ. ನಿನಗಾಗಲಿ ಬೇರೆಯವರಿಗಾಗಲಿ ಅವನನ್ನು ಕೊಲ್ಲಲು ಶಕ್ಯವೂ ಇಲ್ಲ. ಆದರೆ ರಾಜನೆ, ನೀನೀಗ ನಿನ್ನ ಹಾಳು ಬುದ್ಧಿಯನ್ನೇ ತೋರಿಸಿಕೊಂಡೆ. ಇನ್ನೂ ನಿನ್ನದು ಪಾಪಬುದ್ಧಿಯೆ!

ಸ್ವಬುದ್ಧಿದೋಷಾದತಿಪಾಪಶೀಲ
ಪುತ್ರಾಖ್ಯಪಾಪಾನಿ ವಿವರ್ಧಯಿತ್ವಾ ।
ನೀತೋ ವಶಂ ತೈಃ ಫಲಮದ್ಯ ಭುಂಜನ್
ನ ಕ್ರೋಧಿತುಂ ಚಾರ್ಹಸಿ ಭೀಮಸೇನೇ ॥

ನಿನ್ನ ಈ ಬುದ್ಧಿ ದೋಷದಿಂದಲೆ ಅತಿಪಾಪಶೀಲರಾದ ಪುತ್ರರೂಪಿಪಾಪಗಳನ್ನೆ ಬೆಳೆಸಿ, ಅವರಿಗೆ ವಶನಾಗಿ, ಪಾಪದ ಫಲವನ್ನೇ ಉಣ್ಣುತ್ತಿರುವ ನೀನು ಇನ್ನಾದರೂ ಭೀಮಸೇನನಲ್ಲಿ ಕೋಪ ಮಾಡದಿರು.

ಇತ್ಯುಕ್ತೇ ಶಾಂತಬುದ್ಧಶ್ಚ ರಾಜ್ಞಾSSಹೂತೋ ವೃಕೋದರಃ ।
ಅಭ್ಯವಂದತ ತತ್ಪಾದಾವನುಜಾದ್ಯಾಶ್ಚ ತಸ್ಯ ಯೇ ॥

ಕೃಷ್ಣ ಹೀಗೆ ಹೇಳಿದಾಗ ಧೃತರಾಷ್ಟ್ರ ಶಾಂತಬುದ್ಧಿಯಿಂದಲೆ ಭೀಮನನ್ನು ಕರೆದ. ಅವನು ಬಂದು ಧೃತರಾಷ್ಟ್ರನ ಪಾದಗಳನ್ನು ವಂದಿಸಿದನು. ಬಳಿಕ ಅವನ ತಮ್ಮಂದಿರು ಮುಂತಾದವರೂ ಅಭಿವಾದನ ಮಾಡಿದರು.

ವಜ್ರಾಚ್ಚ ದೃಢದೇಹತ್ವಾದವಿಕಾರೇ ವೃಕೋದರೇ ।
ನ ದೋಷೋ ವಿವೃತೋSಸ್ಯ ಸ್ಯಾದಿತಿ ಕೃಷ್ಣೇನ ವಂಚಿತಃ ॥

ಭೀಮಸೇನನು ವಜ್ರಕ್ಕಿಂತಲೂ ಗಟ್ಟಿಯಾದ ಶರೀರದವನು. ಅವನ ಅಂಗಗಳಲ್ಲಿ ಯಾವ ವಿಕಾರಕ್ಕೂ ಆಸ್ಪದವಿಲ್ಲ. ಆದರೂ ಭೀಮನನ್ನು ಧೃತರಾಷ್ಟ್ರ ಅಪ್ಪಿದ್ದರೆ ಧೃತರಾಷ್ಟ್ರನ ದುಷ್ಟಬುದ್ಧಿ ಪ್ರಕಟವಾಗುತ್ತಿದ್ದಿಲ್ಲ. ಅದರಿಂದ ಕೃಷ್ಣ ಹೀಗೆ ವಂಚಿಸಿದ್ದ.

★ ★ ★ ★ ★

ಹದಿಮೂರನೆಯ ಅಧ್ಯಾಯ

ಕೃಷ್ಣನ ಉಪದೇಶದಿಂದ ಕೋಪವನ್ನು ಬಿಟ್ಟ ಧೃತರಾಷ್ಟ್ರನು
ಭೀಮಾದಿಗಳನ್ನು ಆಲಿಂಗಿಸಿಕೊಂಡನು.

ವೈಶಂಪಾಯನಃ

ತತ ಏನಮುಪಾತಿಷ್ಠನ್ ಶೌಚಾರ್ಥಂ ಪರಿಚಾರಕಾಃ ।
ಕೃತಶೌಚಂ ಪುನಶ್ಚೈನಂ ಪ್ರೋವಾಚ ಮಧುಸೂದನಃ ॥೧॥

ವೈಶಂಪಾಯನ– ಅನಂತರದಲ್ಲಿ ಪರಿಚಾರಕರು ಈತನನ್ನು (ಧೃತರಾಷ್ಟ್ರನನ್ನು) ಶೌಚಕ್ಕಾಗಿ ಸಮೀಪಿಸಿದರು, ಶೌಚವನ್ನು ಮುಗಿಸಿದ ಆತನನ್ನು ಉದ್ದೇಶಿಸಿ ಮಧಸೂದನನು ಉಪದೇಶಿಸಿದನು.

ಶ್ರೀಭಗವಾನ್

ರಾಜನ್ನಧೀತಾ ವೇದಾಸ್ತೇ ಶಾಸ್ತ್ರಾಣಿ ವಿವಿಧಾನಿ ಚ ।
ಶ್ರುತಾನಿ ಚ ಪುರಾಣಾನಿ ರಾಜಧರ್ಮಾಶ್ಚ ಕೇವಲಾಃ ॥೨॥

ಕೃಷ್ಣ– ರಾಜನೆ! ನೀನು ವೇದಗಳನ್ನು, ವಿವಿಧಶಾಸ್ತ್ರಗಳನ್ನು ಅಭ್ಯಸಿಸಿರುವಿ, ಪುರಾಣಗಳನ್ನು ಮುಖ್ಯವಾದ ರಾಜಧರ್ಮಗಳನ್ನು ಕೇಳಿರುವಿ.

ಏವಂ ವಿದ್ವಾನ್ ಮಹಾಪ್ರಾಜ್ಞಃ ಸಮರ್ಥಃ ಸತ್ವವಾನ್ ಬಲೀ ।
ಆತ್ಮಾಪರಾಧೇ ಕಸ್ಮಾತ್ ತ್ವಂ ಕುರುಷೇ ರೋಷಮೀದೃಶಮ್ ॥೩॥

ಈ ರೀತಿಯಾಗಿ ತಿಳಿದವನಾದ ಮಹಾಜ್ಞಾನಿಯಾದ ಸಮರ್ಥನಾದ ಅಂತಃಸತ್ವ ಬಹಿಃಸತ್ವವನ್ನು ಹೊಂದಿರುವ ನೀನು ನಿನ್ನ ಅಪರಾಧದಿಂದಲೇ (ಅನರ್ಥವು ಸಂಭವಿಸಿರಲು) ಏತಕ್ಕಾಗಿ ಇಂತಹ ರೋಷವನ್ನು (ಅನ್ಯರಲ್ಲಿ) ಮಾಡುತ್ತಿರುವಿ?

ಉಕ್ತವಾಂಸ್ತೇ ತಥೈವಾಹಂ ಭೀಷ್ಮದ್ರೋಣೌ ಚ ಭಾರತ ।
ವಿದುರಃ ಸಂಜಯಶ್ಚೈವ ತ್ವಂ ತು ರಾಜನ್ನಧಃ ಕೃಥಾಃ ॥೪॥

ರಾಜನೆ, ಭರತಕುಲೋತ್ಪನ್ನನೆ! ನಾನು (ಈಗ ಏನು ಹೇಳಿದೆನೊ) ಅದೇ ರೀತಿಯಲ್ಲಿ ಭೀಷ್ಮರು ದ್ರೋಣರು ವಿದುರನು ಸಂಜಯನು ನಿನ್ನನ್ನು ಉದ್ದೇಶಿಸಿ (ಈ ಹಿಂದೆಯೇ) ಹೇಳಿದ್ದರು, ಆದರೆ ನೀನು ಅದನ್ನು ಧಿಕ್ಕರಿಸಿದಿ.

ಸ ವಾರ್ಯಮಾಣೋ ನಾಸ್ಮಾಕಮಕಾರ್ಷೀರ್ವಚನಂ ತದಾ ।
ಪಾಂಡವಾನಧಿಕಾನ್ ಜಾನನ್ ಬಲೇ ಶೌರ್ಯೇ ಚ ಭಾರತ ॥೫॥

ಕುರುವಂಶೋದ್ಭವನೆ! ಬಲ ಶೌರ್ಯಗಳಲ್ಲಿ ಪಾಂಡುಪುತ್ರರು (ನಿನ್ನ ಮಕ್ಕಳಿಂದ) ಹೆಚ್ಚಿನವರು ಎಂದು ತಿಳಿದರೂ ಸಹ (ತಪ್ಪು ನಿರ್ಣಯವನ್ನು ತೆಗೆದುಕೊಂಡಿದ್ದ) ಆತನು (ನಿನ್ನ ಪುತ್ರನು) ನಿಷೇಧಕ್ಕೆ ಯೋಗ್ಯನಾಗಿದ್ದರೂ ಸಹ, ಆಗ ನಮ್ಮ ಮಾತುಗಳನ್ನು ಅನುಸರಿಸಲಿಲ್ಲ (ನಿನ್ನ ಪುತ್ರನನ್ನು ತಡೆಯಲಿಲ್ಲ).

ರಾಜಾ ಹಿ ಯಃ ಸ್ಥಿರಃ ಪ್ರಾಜ್ಞಃ ಸ್ವಯಂ ದೋಷಾನವೇಕ್ಷತೇ ।
ದೇಶಕಾಲವಿಭಾಗಂ ಚ ಪರಂ ಶ್ರೇಯಃ ಸ ವಿಂದತಿ ॥೬॥

ಯಾವಾತನು ಸ್ಥಿರ ಪ್ರಜ್ಞೆಯನ್ನು ಹೊಂದಿರುವನೋ ಆತನು ತನ್ನಲ್ಲಿಯ ದೋಷವನ್ನು ತಿಳಿದವನಾಗುವನೊ, ದೇಶದ ಕಾಲದ ಗತಿಯನ್ನು ತಿಳಿದವನಾಗುವನೊ (ಯಾವ ಕಾಲದಲ್ಲಿ ಏನನ್ನು ಆಚರಿಸಬೇಕು, ಆಚರಿಸಬಾರದು ಎಂದು ತಿಳಿದಂಥ ಕೊಂಡಿರುವನೊ) ಆತನು ಉತ್ತಮಗತಿಯನ್ನು ಹೊಂದುವನು.

ಉಚ್ಯಮಾನಂ ನ ಯಃ ಶ್ರೇಯೋ ಗೃಹ್ಣೀತೇ ವೈ ಯಥಾತಥಮ್ ।
ಆಪದಂ ಸಮನುಪ್ರಾಪ್ಯ ಸೋಽಭ್ಯೇತಿ ವಿಲಯಂ ಕಿಲ ॥೭॥

ಯಾವಾತನು ಉಪದಿಷ್ಟನಾದರೂ ಶ್ರೇಯೋಮಾರ್ಗವನ್ನು ಅನುಸರಿಸುವುದಿಲ್ಲವೊ ಆತನು ಆಪತ್ತಿಗೆ ಸಿಲುಕಿ, ನಾಶವನ್ನು ಹೊಂದುವುದು ನಿಶ್ಚಯ!

ಅತೋಽನ್ಯವೃತ್ತಮಾತ್ಮಾನಂ ಸಮವೇಕ್ಷಸ್ವ ಭಾರತ ।
ರಾಜಂಸ್ತ್ವಮವಿಧೇಯಾತ್ಮಾ ದುರ್ಯೋಧನವಶೇ ಸ್ಥಿತಃ ॥೮॥

ಭರತಕುಲೋತ್ಪನ್ನನೆ, ರಾಜನೆ! ದುಷ್ಪ್ರಭಾವದವನಾದ ದುರ್ಯೋಧನನ ವಶದಲ್ಲಿದ್ದಿ, ಆದ್ದರಿಂದ ಬೇರೇ ಹಾದಿಯಲ್ಲಿದ್ದ ನಿನ್ನನ್ನೇ ಪರಿಶೀಲಿಸಿಕೊ. (ನಿನ್ನ ಹಿಂದಿನ ದಿನಗಳಲ್ಲಿನ ನಿರ್ಣಯಗಳನ್ನು ಪರಿಶೀಲಿಸಿಕೊ).

ಆತ್ಮಾಪರಾಧಾದಾಪನ್ನಃ ತತ್ ಕಿಂ ಭೀಮಜಿಘಾಂಸಯಾ ।
ತಸ್ಮಾತ್ ಸಂಯಚ್ಛ ಕೋಪಂ ತ್ವಂ ಸ್ವಮನುಸ್ಮೃತ್ಯ ದುಷ್ಕೃತಮ್ ॥೯॥

ನಿನ್ನ ತಪ್ಪಿರುವಾಗ ನೀನು ಭೀಮಸೇನನನ್ನು ಕೊಲ್ಲಲು ಏಕೆ ಬಯಸುವಿ? ಆದ್ದರಿಂದ ನೀನು ನಿನ್ನ ದುಷ್ಕೃತ್ಯಗಳನ್ನು ಸ್ಮರಿಸಿಕೊಂಡು ಕೋಪವನ್ನು ನಿಗ್ರಹಿಸು.

ಯಸ್ತು ತಾಂ ಸ್ಪರ್ಧಯಾ ಕ್ಷುದ್ರಃ ಪಾಂಚಾಲೀಮಾನಯತ್ ಸಭಾಮ್ ।
ಸ ಹತೋ ಭೀಮಸೇನೇನ ವೈರಂ ಪ್ರತಿಚಿಕೀರ್ಷತಾ ॥೧೦॥

ಯಾವ ಕ್ಷುದ್ರನು (ದುರ್ಯೋಧನನು) ಪೈಪೋಟಿಯಿಂದ ಆ ಪಾಂಚಾಲಿಯನ್ನು ಸಭೆಗೆ ಸೆಳೆದು ತಂದನೊ, (ಆ) ದ್ವೇಷಕ್ಕೆ ಪ್ರತೀಕಾರ ಮಾಡಬೇಕೆಂಬ ಇಚ್ಛೆಯಿರುವ ಭೀಮಸೇನನು ಆತನನ್ನು ಸಂಹರಿಸಿದನು.

ಆತ್ಮನೋಽತಿಕ್ರಮಂ ಪಶ್ಯ ಪುತ್ರಸ್ಯ ಚ ದುರಾತ್ಮನಃ ।
ಯದನಾಗಸಿ ಪಾಂಡೂನಾಂ ಪರಿತ್ಯಾಗಃ ಪರಂತಪ ॥೧೧॥

ಶತ್ರುದುಃಖಕರನೆ! ನಿನ್ನ ಮತ್ತು ನಿನ್ನ ಮಕ್ಕಳಾದ ದುಷ್ಟರ ಅಪಚಾರಗಳನ್ನು ಗಮನಿಸು, ಹಿಂದೆ ನಿರಪರಾಧಿಗಳಾದ ಪಾಂಡುಪುತ್ರರ ಪರಿತ್ಯಾಗ ಮಾಡಿರುವಿ.

ವೈಶಂಪಾಯನಃ

ಏವಮುಕ್ತಃ ಸ ಕೃಷ್ಣೇನ ನೃಪಃ ಸತ್ಯಂ ಜನಾಧಿಪ ।
ಉವಾಚ ದೇವಕೀಪುತ್ರಂ ಧೃತರಾಷ್ಟ್ರೋ ಮಹೀಪತಿಃ ॥೧೨॥

ವೈಶಂಪಾಯನ– ಜನನಾಯಕನೆ! ಕೃಷ್ಣನು ಈರೀತಿಯಾಗಿ ಸತ್ಯವನ್ನು ಹೇಳಲು, ಭೂಮಿಯ ಒಡೆಯನಾದ ರಾಜನಾದ ಧೃತರಾಷ್ಟ್ರನು ದೇವಕೀಪುತ್ರನನ್ನು ಉದ್ದೇಶಿಸಿ ಹೇಳಿದನು.

ಧೃತರಾಷ್ಟ್ರಃ

ಏವಮೇತನ್ಮಹಾಭಾಗ ಯಥಾ ವದಸಿ ಮಾಧವ ।
ಪುತ್ರಸ್ನೇಹಸ್ತು ಧರ್ಮಾತ್ಮನ್ ಧರ್ಮಾನ್ಮಾಂ ಸಮಚಾಲಯತ್ ॥೧೩॥

ಧೃತರಾಷ್ಟ್ರ– ಭಾಗ್ಯವಂತನೆ ಮಧುಕುಲೋತ್ಪನ್ನನೆ! ನೀನು ಏನನ್ನು ಹೇಳಿರುವಿಯೋ ಅದು ಸರಿ. ಧರ್ಮಾತ್ಮನೆ! ಪುತ್ರಸ್ನೇಹವು ನನ್ನನ್ನು ಧರ್ಮದಿಂದ ಭ್ರಷ್ಟನನ್ನಾಗಿಸಿತು.

ದಿಷ್ಟ್ಯಾ ಸ ಪುರುಷವ್ಯಾಘ್ರೋ ಬಲವಾನ್ ಸತ್ಯವಿಕ್ರಮಃ ।
ತ್ವದ್ಗುಪ್ತೋ ನಾಗಮತ್ ಕೃಷ್ಣ ಭೀಮೋ ಬಾಹ್ವಂತರಂ ಮಮ ॥೧೪॥

ಕೃಷ್ಣ! ನೋಡಿದೆಯಾ? ಸತ್ಯದಿಂದಲೇ ಜಯಿಸುವ ಬಲಿಷ್ಟರಾದ ಪುರುಷರಲ್ಲಿ ಶ್ರೇಷ್ಠನಾದ ಆ ಭೀಮಸೇನನು ನಿನ್ನಿಂದ ರಕ್ಷಿತನಾಗಿ ನನ್ನ ತೋಳಿನ ಒಳಗಡೆ ಬಾರಲಿಲ್ಲ.

ಇದಾನೀಂ ತ್ವಹಮೇಕಾಗ್ರೋ ಗತಮನ್ಯುರ್ಗತಜ್ವರಃ ।
ಮಧ್ಯಮಂ ಪಾಂಡವಂ ವೀರಂ ಸ್ಪೃಷ್ಟುಮಿಚ್ಛಾಮಿ ಕೇಶವ ॥೧೫॥

ಕೇಶವನೆ! ಈಗಲಾದರೋ ನಾನು ಸ್ಥಿರಮನಸ್ಕನಾಗಿರುವೆ ಕೋಪವನ್ನು ಬಿಟ್ಟಿರುವೆ ಜ್ವರರಹಿತನಾಗಿರುವೆ (ದ್ವೇಷಾದಿಗಳನ್ನು ಪರಿತ್ಯಜಿಸಿರುವೆ), ವೀರನಾದ ಪಾಂಡುಪುತ್ರರಲ್ಲಿ ಮಧ್ಯಮನನ್ನು (ಭೀಮಸೇನನ್ನು) ಸ್ಪರ್ಶಿಸಲು ಇಚ್ಛಿಸುವೆನು.

ಹತೇಷು ಪಾರ್ಥಿವೇಷ್ವೇಷು ಪುತ್ರೇಷು ಚ ಹತೇಷು ಚ ।
ಪಾಂಡುಪುತ್ರೇಷು ಮೇ ಧರ್ಮಃ ಪ್ರೀತಿಶ್ಚಾಪ್ಯವತಿಷ್ಠತೇ ॥೧೬॥

ಈ ರಾಜರೆಲ್ಲರೂ ಮೃತರಾಗಲು, ನನ್ನ ಮಕ್ಕಳು ಮೃತರಾಗಲು, ಇನ್ನು ಪಾಂಡುಪುತ್ರರಲ್ಲಿಯೇ ನನ್ನ ಪ್ರೀತಿ ಧರ್ಮವು ಸ್ಥಿರವಾಗಿರುವುದು.

ವೈಶಂಪಾಯನಃ

ತತಃ ಸ ಭೀಮಂ ಚ ಧನಂಜಯಂ ಚ
ಮಾದ್ರ್ಯಾಶ್ಚ ಪುತ್ರೌ ಪುರುಷಪ್ರವೀರೌ ।
ಪಸ್ಪರ್ಶ ಗಾತ್ರೈಃ ಪ್ರರುದನ್ ಸುಗಾತ್ರಾನ್
ಆಶ್ವಾಸ್ಯ ಕಲ್ಯಾಣಮುವಾಚ ಚೈನಾನ್ ॥೧೭॥

ವೈಶಂಪಾಯನ– ಅನಂತರದಲ್ಲಿ ಆತನು ಭೀಮಸೇನ ಮತ್ತು ಧನಂಜಯನ ಪುರುಷಶ್ರೇಷ್ಠರಾದ ಮಾದ್ರಿಯ ಪುತ್ರರ ದೇಹಗಳನ್ನು ಸ್ಪರ್ಷಿಸಿದನು, ಸುಂದರ ಶರೀರಗಳಾದ ಅವರಿಗೆ ರೋದಿಸುತ್ತಾ ಮಂಗಳವಾಗಲಿ ಎಂದು ಹರಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಧೃತರಾಷ್ಟ್ರಕೋಪವಿಸರ್ಜನಂ ನಾಮ ತ್ರಯೋದಶೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ -೨೮ನೇ ಅಧ್ಯಾಯ

ಸರ್ವಾನಾಶ್ಲಿಷ್ಯ ಚ ಪ್ರೇಮ್ಣಾ ಯುಯೋಜ ನೃಪ ಆಶಿಷಃ ।
ಕುಲನಾಶಕರಃ ಪಾಪಃ ಶಾಪಯೋಗ್ಯಸ್ತವ ಹ್ಯಹಮ್ ॥

ಇತ್ಯುಕ್ತ್ವೈವ ಪ್ರಣಮತೋ ಗಾಂಧಾರೀ ಸುಪದಾಂಗುಲೀಃ ।
ದದರ್ಶ ಧರ್ಮರಾಜಸ್ಯ ಪಟ್ಟಾಂತೇನ ಪ್ರಕೋಪಿತಾ ।
ತಸ್ಯಾಃ ಕ್ರೋಧಾಗ್ನಿನಿರ್ದಗ್ಧನಖಿಃ ಸ ಕುನಖೋऽಭವತ್ ॥

ಧೃತರಾಷ್ಟ್ರನು ಪ್ರೀತಿಯಿಂದ ಎಲ್ಲರನ್ನೂ ಆಲಿಂಗಿಸಿ ಆಶೀರ್ವಾದ ಮಾಡಿದನು. ಆದರೆ ಧರ್ಮರಾಜ 'ನಾನು ಕುಲನಾಶಕರನಾದ ಪಾಪಿ, ನಿನ್ನ ಶಾಪಕ್ಕೆ ಅರ್ಹನಾಗಿದ್ದೇನೆ' ಎಂದು ಹೇಳಿ ಗಾಂಧಾರಿಗೆ ನಮಿಸಿದಾಗ ಅವಳು ಕುಪಿತಳಾಗಿ ಕಣ್ಣಿಗೆ ಕಟ್ಟಿದ ಬಟ್ಟೆಯ ಅಂಚಿನಿಂದ ಧರ್ಮರಾಜನ ಸುಂದರವಾದ ಪಾದದ ಬೆರಳುಗಳನ್ನು ಕಂಡಳು. ಆಗ ಅವಳ ಕ್ರೋಧಾಗ್ನಿಯಿಂದ ಕಾಳ್ಬೆರಳ ಉಗುರುಗಳು ಸುಟ್ಟು ಅವನು ಹಾಳುಗುರಿನವನೆನಿಸಿದನು.

ಹದಿನಾಲ್ಕನೆಯ ಅಧ್ಯಾಯ

ಕೃಷ್ಣ ಯುಧಿಷ್ಠಿರಾದಿಗಳು ಗಾಂಧಾರಿಯ ಸಮೀಪಕ್ಕೆ ತೆರಳಿದರು, ಗಾಂಧಾರಿಯು ಯುಧಿಷ್ಠಿರನನ್ನು ಶಪಿಸುವಳು ಎನ್ನುವುದನ್ನು ಮೊದಲೇ ತಿಳಿದ ವ್ಯಾಸರು ಗಾಂಧಾರಿಯ ಕೋಪವನ್ನು ಶಮನಗೊಳಿಸಿದರು.

ವೈಶಂಪಾಯನಃ

ಧೃತರಾಷ್ಟ್ರಾಭ್ಯನುಜ್ಞಾತಾಃ ತತಸ್ತೇ ಕುರುಪುಂಗವಾಃ ।
ಅಭ್ಯಯುರ್ಭ್ರಾತರಃ ಸರ್ವೇ ಗಾಂಧಾರೀಂ ಸಹಕೇಶವಾಃ ॥೧॥

ವೈಶಂಪಾಯನ– ಆನಂತರ ಧೃತರಾಷ್ಟ್ರನಿಂದ ಅನುಮತಿಯನ್ನು ಪಡೆದ ಕುರುವಂಶದ ಮೂರ್ಧನ್ಯರಾದ ಆ ಸಹೋದರರು ಕೇಶವನಿಂದ ಕೂಡಿಕೊಂಡು ಗಾಂಧಾರಿಯ ಬಳಿ ಸಾಗಿದರು.

ತತೋ ಜ್ಞಾತ್ವಾ ಹತಾಮಿತ್ರಂ ಧರ್ಮರಾಜಂ ಯುಧಿಷ್ಠಿರಮ್ ।
ಗಾಂಧಾರೀ ಪುತ್ರಶೋಕಾರ್ತಾ ಶಪ್ತುಮೈಚ್ಛದನಿಂದಿತಾ ॥೨॥

ತಸ್ಯಾಃ ಪಾಪಮಭಿಪ್ರಾಯಂ ವಿದಿತ್ವಾ ಪಾಂಡವಾನ್ ಪ್ರತಿ ।
ಋಷಿರ್ಗಂಧವತೀಪುತ್ರಃ ಪ್ರಾಗೇವ ಸಮಪದ್ಯತ ॥೩॥

ಅನಂತರ ಕಲಂಕರಹಿತಳಾದ, ಮಕ್ಕಳ ಶೋಕದಿಂದ ಆರ್ತಳಾದ ಗಾಂಧಾರಿಯು, ಶತ್ರುಗಳನ್ನು ಸಂಹರಿಸಿದ, ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುವ ಧರ್ಮರಾಜನನ್ನು ಶಪಿಸಲು ಬಯಸಿದ್ದಳು. ಪಾಂಡವರ ಬಗ್ಗೆ ಆಕೆಯ ಕೆಟ್ಟಭಾವನೆಯನ್ನು ಮೊದಲೇ ತಿಳಿದಿದ್ದ ಸತ್ಯವತಿಯ ಪುತ್ರನಾದ ಋಷಿಯು (ವ್ಯಾಸರು) ಮೊದಲೇ (ಪಾಂಡವರು ಅಲ್ಲಿಗೆ ಬರುವ ಮೊದಲೇ) ಆಗಮಿಸಿದ್ದರು.

ಸ ಗಂಗಾಯಾಮುಪಸ್ಪೃಶ್ಯ ಬ್ರಹ್ಮರ್ಷಿಃ ಪ್ರಯತಃ ಶುಚಿಃ ।
ತಂ ದೇಶಮುಪಸಂಪೇದೇ ಪಾರಾಶರ್ಯೋ ಮನೋಜವಃ ॥೪॥

ಪರಾಶರರ ಪುತ್ರನಾದ, ಮನೋವೇಗವನ್ನು ಹೊಂದಿರುವ ಆ ಬ್ರಹ್ಮಜ್ಞಾನಿಯು ಗಂಗೆಯ ಜಲದಿಂದ ಶುದ್ಧನಾಗಿ ಆ ಸ್ಥಳಕ್ಕೆ (ಗಾಂಧಾರಿಯ ಬಳಿಗೆ) ಆಗಮಿಸಿದನು.

ದಿವ್ಯೇನ ಚಕ್ಷುಷಾ ಜ್ಞಾತ್ವಾ ಮನಸಾऽನುದ್ಧತೇನ ಚ ।
ಸರ್ವಂ ಪ್ರಾಣಭೃತಾಂ ಭಾವಂ ಸತತಂ ಸಮಬುದ್ಧ್ಯತ ॥೫॥

ಎಲ್ಲ ಪ್ರಾಣಿಗಳ ವಿಚಾರವನ್ನು ನಿರಂತರ ತಿಳಿಯುವ ಅವರು, ದಿವ್ಯ ದೃಷ್ಟಿಯಿಂದ (ಯಾರು) ಮನದಲ್ಲಿ ಏನು ಚಿಂತಿಸುತ್ತಿರುವರು ಎಂಬುವುದನ್ನು ತಿಳಿದರು.

ಸ ಸ್ನುಷಾಮಬ್ರವೀತ್ ಕಾಲೇ ಕಲ್ಯಾಣಾನಿ ಮಹಾತಪಾಃ ।
ಶಾಪಕಾಲಮವಾಕ್ಷಿಪ್ಯ ಶಮಕಾಲಮುದೀರಯನ್ ॥೬॥

ಯೋಗ್ಯಕಾಲದಲ್ಲಿ ಮಹಾತಪಸ್ವಿಗಳಾದ ಅವರು ಶಾಪಪ್ರಸಂಗವನ್ನು ಹೋಗಲಾಡಿಸಿ ಶಾಂತಿಕಾಲವನ್ನು ಬೆಳಗುವ ಮಂಗಳಕರವಾದ ಮಾತುಗಳನ್ನು (ತಮ್ಮ) ಸೊಸೆಗೆ ಹೇಳಿದರು.

ವ್ಯಾಸಃ

ನ ಕೋಪಃ ಪಾಂಡವೇ ಕಾರ್ಯೋ ಗಾಂಧಾರಿ ಶಮಮಾಪ್ನುಹಿ ।
ರಜೋ ನಿಗೃಹ್ಯತಾಂ ಚೈವ ಶೃಣು ಚೇದಂ ವಚೋ ಮಮ ॥೭॥

ವ್ಯಾಸರು– ಗಾಂಧಾರಿ, ಪಾಂಡವರಲ್ಲಿ ಕೋಪವನ್ನು ಮಾಡುವುದು ತರವಲ್ಲ, ಶಾಂತಿಯನ್ನು ಹೊಂದುವವಳಾಗು, ರಜೋಭಾವವನ್ನು ನಿಗ್ರಹಿಸು, ನನ್ನ ಮಾತನ್ನು ಕೇಳುವವಳಾಗು.

ಪುರೋಕ್ತಾ ಯುದ್ಧಕಾಲೇ ತ್ವಂ ಪುತ್ರೇಣ ಜಯಮಿಚ್ಛತಾ ।
ಜಯಮಾಶಾಸ್ವ ಮೇ ಮಾತರ್ಯುದ್ಧ್ಯಮಾನಸ್ಯ ಶತ್ರುಭಿಃ ॥೮॥

ಜಯವನ್ನು ಬಯಸುವ ನಿನ್ನ ಪುತ್ರನು ಹಿಂದೆ ಯುದ್ಧಸಂದರ್ಭದಲ್ಲಿ ನಿನ್ನನ್ನು ಪ್ರಾರ್ಥಿಸಿದನು- 'ಅಮ್ಮ! ಶತ್ರುಗಳೊಡನೆ ಯುದ್ಧಮಾಡುವ ನನಗೆ ಜಯವಾಗಲಿ' ಎಂದು ಹರಸು' ಎಂದು.

ಸಾ ತಥಾ ಯಾಚ್ಯಮಾನಾ ತ್ವಂ ಯುದ್ಧಕಾಲೇ ಜಯೈಷಿಣಾ ।
ಉಕ್ತವತ್ಯಸಿ ಕಲ್ಯಾಣಿ ಯತೋ ಧರ್ಮಸ್ತತೋ ಜಯಃ ॥೯॥

ಯುದ್ಧಸಂದರ್ಭದಲ್ಲಿ ಜಯವನ್ನು ಬಯಸುವ ಆತನು ಆ ರೀತಿಯಾಗಿ ಪ್ರಾರ್ಥಿಸಲು, ಮಂಗಳಕರಳೆ! ನೀನು ' ಎಲ್ಲಿ ಧರ್ಮವೋ ಅಲ್ಲಿ ಜಯ' ಎಂದು ಹೇಳುತ್ತಿದ್ದಿ.

ವಾಕ್ಯೇ ವ್ಯತೀತೇ ಮಾ ಕ್ರೋಧೇ ಮನಃ ಕುರು ಯಶಸ್ವಿನಿ ।
ಸ್ಮರಾಮಿ ಭಾಷಮಾಣಾಂ ಹಿ ತ್ವಾಮಹಂ ಸತ್ಯವಾದಿನೀಮ್ ॥೧೦॥

ಕೀರ್ತಿವಂತಳೆ! (ಎಲ್ಲಿ ಧರ್ಮವೋ ಅಲ್ಲಿ ಜಯ ಎಂದು) ಮಾತು ನುಡಿದಾಯಿತು, ಇನ್ನು ಸಿಟ್ಟಿನಲ್ಲಿ ಮನವನ್ನು ಮಾಡದಿರು, 'ನೀನು ಎಂದೂ ಸತ್ಯವನ್ನೇ ನುಡಿದವಳು' ಎಂದು ನೆನಪಿಸಿಕೊಳ್ಳುವೆ.

ವಿಗ್ರಹೇ ತುಮುಲೇ ರಾಜ್ಞಾಂ ಗತ್ವಾ ಪರಮಸಂಶಯಮ್ ।
ಜಿತಂ ಪಾಂಡುಸುತೈರ್ಯುದ್ಧೇ ನೂನಂ ಧರ್ಮಸ್ತತೋಽಧಿಕಃ ॥೧೧॥

ಭಯಂಕರವಾದ ಯುದ್ಧದಲ್ಲಿ (ಪಾಂಡವರಿಗೆ ಜಯವು) ತುಂಬ ಸಂದೇಹ ಎಂದು ಭಾವಿಸಿರಲು, ಅಂತಹ ಯುದ್ಧದಲ್ಲಿ ಪಾಂಡುಪುತ್ರರು ಜಯಸಿರುವರು, ಆದ್ದರಿಂದ ನಿಶ್ಚಯವಾಗಿಯೂ ಅಧಿಕವಾದ ಧರ್ಮವು ಅವರಲ್ಲಿಯೇ ಇದೆ.

ಕ್ಷಮಾಶೀಲಾ ಪುರಾ ಭೂತ್ವಾ ಸಾಽದ್ಯ ನ ಕ್ಷಮಸೇ ಕಥಮ್ ।
ಅಧರ್ಮಂ ಜಹಿ ಧರ್ಮಜ್ಞೇ ಯತೋ ಧರ್ಮಸ್ತತೋ ಜಯಃ ॥೧೨॥

ಹಿಂದೆ ಶಾಂತಿಪ್ರಿಯಳಾಗಿದ್ದ ನೀನು, ಈಗೇಕೆ ಶಾಂತಿಯನ್ನು ಧಿಕ್ಕರಿಸುವಿ? ಧರ್ಮವನ್ನು ತಿಳಿದವಳೆ! ಅಧರ್ಮವನ್ನು ಬಿಡು. ಎಲ್ಲಿ ಧರ್ಮವೋ ಅಲ್ಲಿ ಜಯ.

ಸಾ ತ್ವಂ ಧರ್ಮಂ ಪರಿತ್ಯಜ್ಯ ವಾಚಂ ಚೋಕ್ತಾಂ ಮನಸ್ವಿನಿ ।
ಕೋಪಂ ಸಂಯಚ್ಛ ಗಾಂಧಾರಿ ಮೈವಂ ಭೂಃ ಸತ್ಯವಾದಿನಿ ॥೧೩॥

ಅಂತಹ ನೀನು ಧರ್ಮವನ್ನು , ಹಿಂದೆ ಹೇಳಿದ ಮಾತುಗಳನ್ನು ಪರಿತ್ಯಜಿಸುವುದೆ? ಗಾಂಧಾರಿ! ಕೋಪವನ್ನು ನಿಯಂತ್ರಿಸು, ಸತ್ಯವಾದಿನಿಯೆ! ಈ ರೀತಿಯಾಗಬೇಡ (ಕೋಪಿಸಿಕೊಳ್ಳಬೇಡ).

ಗಾಂಧಾರೀ

ಭಗವನ್ ನಾಭ್ಯಸೂಯಾಮಿ ನೈತಾನಿಚ್ಛಾಮಿ ನಶ್ಯತಃ ।
ಪುತ್ರಶೋಕೇನ ತು ಬಲಾನ್ಮನೋ ವಿಹ್ವಲತೀವ ಮೇ ॥೧೪॥

ಗಾಂಧಾರಿ– ಪೂಜ್ಯರೆ! ಅವರ ಬಗ್ಗೆ ಅಸೂಯೆಯನ್ನು ಹೊಂದಲಾರೆ, ಅವರ ನಾಶವನ್ನು ಬಯಸಲಾರೆ, ಪುತ್ರಶೋಕದಿಂದ ನನ್ನ ಮನವು ಅತಿಯಾಗಿ ವ್ಯಾಕುಲಗೊಂಡಂತಾಗಿದೆ.

ಯಥೈವ ಕುಂತ್ಯಾ ಕೌಂತೇಯಾ ರಕ್ಷಿತವ್ಯಾಸ್ತಥಾ ಮಯಾ ।
ತಥೈವ ಧೃತರಾಷ್ಟ್ರೇಣ ರಕ್ಷಿತವ್ಯಾ ಮಯಾ ಯಥಾ ॥೧೫॥

ಕುಂತಿಯು ಹೇಗೆ ಅವರನ್ನು ಸಂರಕ್ಷಿಸುವಳೊ, ಹಾಗೆ ನನ್ನಿಂದಲೂ ಅವರು ರಕ್ಷಣೀಯರು, ನನ್ನಿಂದ ಹೇಗೆ ರಕ್ಷಿತರೊ ಹಾಗೆಯೇ ಧೃತರಾಷ್ಟ್ರನಿಂದಲೂ ರಕ್ಷಣೀಯರು.

ದುಃಶಾಸನಾಪರಾಧೇನ ಶಕುನೇಃ ಸೌಬಲಸ್ಯ ಚ ।
ಕರ್ಣದುರ್ಯೋಧನಾಭ್ಯಾಂ ಚ ವೃತ್ತೋಽಯಂ ಕುರುಸಂಕ್ಷಯಃ ॥೧೬॥

ದುಃಶಾಸನನ ತಪ್ಪಿನಿಂದ ಹಾಗೂ ಸುಬಲಪುತ್ರನಾದ ಶಕುನಿಯ ತಪ್ಪಿನಿಂದ ಕರ್ಣ-ದುರ್ಯೋಧನರ ತಪ್ಪಿನಿಂದ ಈ ಕುರುಕುಲದ ನಾಶವು ಸಂಭವಿಸಿತು.

ನಾಪರಾಧ್ನೋತಿ ಬೀಭತ್ಸುಃ ನ ಚ ಪಾರ್ಥೋ ವೃಕೋದರಃ ।
ನಕುಲಃ ಸಹದೇವಶ್ಚ ನೈವ ಜಾತು ಯುಧಿಷ್ಠಿರಃ ॥೧೭॥

ಅರ್ಜುನನ ತಪ್ಪಿಲ್ಲ, ಕುಂತಿಯ ಪುತ್ರ ವೃಕೋದರನ ತಪ್ಪಿಲ್ಲ. ನಕುಲ-ಸಹದೇವರ ತಪ್ಪಿಲ್ಲ, ಎಂದೆಂದೂ ಯುಧಿಷ್ಠಿರನ ತಪ್ಪಿಲ್ಲ.

ಯುಧ್ಯಮಾನಾ ಹಿ ಕೌರವ್ಯಾಃ ಕೃಂತಮಾನಾಃ ಪರಸ್ಪರಮ್ ।
ನಿಹತಾಸ್ತೈರ್ಹತಾಶ್ಚಾನ್ಯೇ ತತ್ರ ನಾಸ್ತ್ಯಪ್ರಿಯಂ ಮಮ ॥೧೮॥

ಕುರುಕುಲೋತ್ಪನ್ನರು ಯುದ್ಧವನ್ನು ಮಾಡುತ್ತಾ, ಪರಸ್ಪರ ಕಿತ್ತಾಡುತ್ತಾ ಮರಣವನ್ನಪ್ಪಿದರು, ಅವರಿಂದ (ಪಾಡವರಿಂದ) ಮೃತರಾದರು, ಈ ವಿಷಯವು ನನಗೆ ಅಪ್ರಿಯವಲ್ಲ.

ಯತ್ ತು ಕರ್ಮಾಕರೋದ್ಭೀಮೋ ವಾಸುದೇವಸ್ಯ ಪಶ್ಯತಃ ।
ದುರ್ಯೋಧನಂ ಸಮಾಹೂಯ ಗದಾಯುದ್ಧೇ ಮಹಾಮನಾಃ ॥೧೯॥

ಶಿಕ್ಷಯಾऽಭ್ಯಧಿಕಂ ಜ್ಞಾತ್ವಾ ಚರಂತಂ ಬಹುಧಾ ರಣೇ ।
ಅಧೋ ನಾಭೇಃ ಪ್ರಹೃತವಾನ್ ತನ್ಮೇ ಕೋಪಯತೀವ ಹಿ ॥೨೦॥

ಆದರೆ ಮಹಾಭಿಮಾನಿಯಾದ ಭೀಮಸೇನನು ಗದಾಯುದ್ಧಕ್ಕೆ ದುರ್ಯೋಧನನನ್ನು ಆಹ್ವಾನಿಸಿ, (ಗದಾಯುದ್ಧದ) ನೈಪುಣ್ಯದಲ್ಲಿ ಅಧಿಕ ಎಂದು ತಿಳಿದು, ಬಹುವಿಚಿತ್ರವಾಗಿ ರಣರಂಗದಲ್ಲಿ ಹೋರಾಡುತ್ತಿರುವ (ದುರ್ಯೋಧನನ) ನಾಭಿಯಿಂದ ಕೆಳಭಾಗದಲ್ಲಿ, ಕೃಷ್ಣನು ನೋಡುತ್ತಿರುವಾಗಲೇ ಹೊಡೆದನು, ಅದು ನನ್ನ ಅತಿಕೋಪಕ್ಕೆ ಕಾರಣವಾಗಿದೆ.

ಕಥಂ ಹಿ ಧರ್ಮಂ ಧರ್ಮಜ್ಞಾಃ ಸಮುದ್ದಿಷ್ಟಂ ಮಹಾತ್ಮಭಿಃ ।
ತ್ಯಜೇಯುರಾಹವೇ ಶೂರಾಃ ಪ್ರಾಣಹೇತೋಃ ಕಥಂಚನ ॥೨೧॥

ಪ್ರಾಣಕ್ಕಾಗಿ ಶೂರರು ಧರ್ಮವನ್ನು ಅರಿತವರು ಹೇಗೆತಾನೆ ಮಹಾತ್ಮರಿಂದ ಉಪದಿಷ್ಟವಾದ ಧರ್ಮವನ್ನು ಪರಿತ್ಯಜಿಸಿದರು?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಗಾಂಧಾರೀವಾಕ್ಯಂ ನಾಮ ಚತುರ್ದಶೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ವಂದಮಾನಂ ಪುನರ್ಭೀಮಮಾಹ ಸಾ ಕ್ರೋಧವಿಹ್ವಲಾ ।
ಅಧರ್ಮತಃ ಕಥಂ ಭೀಮ ಸುತಂ ಮೇ ತ್ವಂ ನಿಜಘ್ನಿವಾನ್ ॥

ಭೀಮ ಗಾಂಧಾರಿಯನ್ನು ನಮಿಸುವಾಗ, ಅವಳು ಪುನಃ ಕ್ರೋಧ ಪರವಶಳಾಗಿ 'ಭೀಮ! ನೀನು ನನ್ನ ಮಗನನ್ನು ಅಧರ್ಮದಿಂದ ಹೇಗೆ ಕೊಂದೆ?' ಎಂದಳು.

ಇತ್ಯುಕ್ತೇऽಸ್ಯಾಃ ಶಮಯಿತುಂ ಕ್ರೋಧಮಗ್ರೇ ವೃಕೋದರಃ ।
ಪ್ರಾಹ ನ ಪ್ರಾಣಸಂದೇಹೇ ಪಾಪಂ ಸ್ಯಾತ್ ಪಾಪಿನೋ ವಧೇ ॥

ಗಾಂಧಾರಿ ಹೀಗೆ ಹೇಳಿದಾಗ ಭೀಮ ಅವಳ ಕೋಪವನ್ನು ತಗ್ಗಿಸಲು ಮೊದಲಿಗೆ ಹೀಗೆ ಹೇಳಿದ- 'ಪ್ರಾಣಾಪಾಯದ ಬಗ್ಗೆ ಸಂದೇಹ ಬಂದಾಗ ಪಾಪಿಯನ್ನು ಅಧರ್ಮದಿಂದ ಕೊಂದರೂ ಪಾಪವಿಲ್ಲ'.

ಇತ್ಯುಕ್ತ್ವಾ ತಾಂ ಪುನಃ ಪ್ರಾಹ ಪ್ರತಿಜ್ಞಾಹಾನಿಮಂತರಾ ।
ನ ಮೇಽಸ್ತಿ ಪ್ರಾಣಸಂದೇಹ ಇತಿ ಜಾನನ್ ವೃಕೋದರಃ ॥

ಯಥಾಪ್ರತಿಜ್ಞಂ ಭ್ರಾತೃವ್ಯಾನ್ ರಣೇ ಮಮ ನಿಜಘ್ರುಷಃ ।
ಕಾಽಧರ್ಮಃ ಕ್ಷತ್ರಜಾತೇಸ್ತು ತದ್ಧಾನೌ ಜೀವಿತಂ ನ ಹಿ ॥

ಹೀಗೆ ಹೇಳಿ, ಪ್ರತಿಜ್ಞಾಹಾನಿ ಪ್ರಸಕ್ತಿ ಹೊರತು ತನಗೆ ಪ್ರಾಣಾಪಾಯ ಸಂದೇಹ ಎಂಬುದಿಲ್ಲವೆಂದು ತಿಳಿದಿರುವ ಭೀಮ ತಿರುಗಿ ಗಾಂಧಾರಿಗೆ ಹೇಳಿದ- 'ಪ್ರತಿಜ್ಞಾನುಸಾರವಾಗಿ ಯುದ್ಧದಲ್ಲಿ ಶತ್ರುಗಳನ್ನು ಕೊಂದಿರುವ ಕ್ಷತ್ರಿಯ ಜಾತಿಯವನಾದ ನನಗೆ ಅಧರ್ಮ ಯಾವುದು? ಪ್ರತಿಜ್ಞಾಹಾನಿಯಾದರೆ ಕ್ಷತ್ರಿಯನಿಗೆ ಬದುಕೇ ಇಲ್ಲ ತಾನೆ?

ಪಾಪಾ ನ ಶುದ್ಧಧರ್ಮೇಣ ಹಂತವ್ಯಾ ಇತಿ ಚ ಶ್ರುತಿಃ ।
ಅನ್ಯವತ್ ಪಾಪಹನನಂ ಪಾಪಯೇತ್ಯಾಹ ಹಿ ಶ್ರುತಿಃ ।
ಅತೋಽಸುರಾನ್ ನೈಕೃತಿಕಾನ್ ನಿಕೃತ್ಯಾ ಘ್ನಂತಿ ದೇವತಾಃ ॥

ಪಾಪಿಗಳನ್ನು ಶುದ್ಧ ಧರ್ಮದಿಂದ ಕೊಲ್ಲಕೂಡದೆಂದು ಶ್ರುತಿಯೂ ಹೇಳಿದೆ. ಅನ್ಯರನ್ನು ಧರ್ಮದಿಂದ ಕೊಲ್ಲುವಂತೆ ಪಾಪಿಗಳನ್ನು ಧರ್ಮದಿಂದ ಕೊಲ್ಲುವುದು ಪಾಪಕರವಾಗುತ್ತದೆ ಎಂದೂ ಶ್ರುತಿ ಹೇಳಿದೆ. ಅದರಿಂದಲೇ ವಂಚಕರಾದ ಅಸುರರನ್ನು ದೇವತೆಗಳು ವಂಚನೆಯಿಂದಲೇ ಕೊಲ್ಲುತ್ತಾರೆ.

ನಿಕೃತ್ಯಾ ನಿಕೃತಿಂ ಹನ್ಯಾನ್ನಿಕೃತ್ಯಾ ನೈವ ಧಾರ್ಮಿಕಮ್ ।
ಇತಿ ಶ್ರುತಿರ್ಹಿ ಪರಮಾ ಪಠ್ಯತೇ ಪೈಂಗಿಭಿಃ ಸದಾ ॥

ವಂಚಕನನ್ನು ವಂಚನೆಯಿಂದ ಕೊಲ್ಲಬೇಕು. ಧಾರ್ಮಿಕರನ್ನು ವಂಚನೆಯಿಂದ ಕೊಲ್ಲಬಾರದು ಎಂಬ ಶ್ರುತಿಯನ್ನು ಪೈಂಗಿಶಾಖೆಯವರು ನಿತ್ಯ ಪಠಿಸುತ್ತಾರೆ.

★ ★ ★ ★ ★

ಯತ್ ತು ಕರ್ಮಾಕರೋದ್ಭೀಮೋ ವಾಸುದೇವಸ್ಯ ಪಶ್ಯತಃ ।
ದುರ್ಯೋಧನಂ ಸಮಾಹೂಯ ಗದಾಯುದ್ಧೇ ಮಹಾಮನಾಃ ॥೧೯॥

ಶಿಕ್ಷಯಾऽಭ್ಯಧಿಕಂ ಜ್ಞಾತ್ವಾ ಚರಂತಂ ಬಹುಧಾ ರಣೇ ।
ಅಧೋ ನಾಭೇಃ ಪ್ರಹೃತವಾನ್ ತನ್ಮೇ ಕೋಪಯತೀವ ಹಿ ॥೨೦॥

ಆದರೆ ಮಹಾಭಿಮಾನಿಯಾದ ಭೀಮಸೇನನು ಗದಾಯುದ್ಧಕ್ಕೆ ದುರ್ಯೋಧನನನ್ನು ಆಹ್ವಾನಿಸಿ, (ಗದಾಯುದ್ಧದ) ನೈಪುಣ್ಯದಲ್ಲಿ ಅಧಿಕ ಎಂದು ತಿಳಿದು, ಬಹುವಿಚಿತ್ರವಾಗಿ ರಣರಂಗದಲ್ಲಿ ಹೋರಾಡುತ್ತಿರುವ (ದುರ್ಯೋಧನನ) ನಾಭಿಯಿಂದ ಕೆಳಭಾಗದಲ್ಲಿ, ಕೃಷ್ಣನು ನೋಡುತ್ತಿರುವಾಗಲೇ ಹೊಡೆದನು, ಅದು ನನ್ನ ಅತಿಕೋಪಕ್ಕೆ ಕಾರಣವಾಗಿದೆ.

ಕಥಂ ಹಿ ಧರ್ಮಂ ಧರ್ಮಜ್ಞಾಃ ಸಮುದ್ದಿಷ್ಟಂ ಮಹಾತ್ಮಭಿಃ ।
ತ್ಯಜೇಯುರಾಹವೇ ಶೂರಾಃ ಪ್ರಾಣಹೇತೋಃ ಕಥಂಚನ ॥೨೧॥

ಪ್ರಾಣಕ್ಕಾಗಿ ಶೂರರು ಧರ್ಮವನ್ನು ಅರಿತವರು ಹೇಗೆತಾನೆ ಮಹಾತ್ಮರಿಂದ ಉಪದಿಷ್ಟವಾದ ಧರ್ಮವನ್ನು ಪರಿತ್ಯಜಿಸಿದರು?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಗಾಂಧಾರೀವಾಕ್ಯಂ ನಾಮ ಚತುರ್ದಶೋऽಧ್ಯಾಯಃ ॥

॥ ಜಲಪ್ರದಾನಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ವಂದಮಾನಂ ಪುನರ್ಭೀಮಮಾಹ ಸಾ ಕ್ರೋಧವಿಹ್ವಲಾ ।
ಅಧರ್ಮತಃ ಕಥಂ ಭೀಮ ಸುತಂ ಮೇ ತ್ವಂ ನಿಜಘ್ನಿವಾನ್ ॥

ಭೀಮ ಗಾಂಧಾರಿಯನ್ನು ನಮಿಸುವಾಗ, ಅವಳು ಪುನಃ ಕ್ರೋಧ ಪರವಶಳಾಗಿ 'ಭೀಮ! ನೀನು ನನ್ನ ಮಗನನ್ನು ಅಧರ್ಮದಿಂದ ಹೇಗೆ ಕೊಂದೆ?' ಎಂದಳು.

ಇತ್ಯುಕ್ತೇऽಸ್ಯಾಃ ಶಮಯಿತುಂ ಕ್ರೋಧಮಗ್ರೇ ವೃಕೋದರಃ ।
ಪ್ರಾಹ ನ ಪ್ರಾಣಸಂದೇಹೇ ಪಾಪಂ ಸ್ಯಾತ್ ಪಾಪಿನೋ ವಧೇ ॥

ಗಾಂಧಾರಿ ಹೀಗೆ ಹೇಳಿದಾಗ ಭೀಮ ಅವಳ ಕೋಪವನ್ನು ತಗ್ಗಿಸಲು ಮೊದಲಿಗೆ ಹೀಗೆ ಹೇಳಿದ- 'ಪ್ರಾಣಾಪಾಯದ ಬಗ್ಗೆ ಸಂದೇಹ ಬಂದಾಗ ಪಾಪಿಯನ್ನು ಅಧರ್ಮದಿಂದ ಕೊಂದರೂ ಪಾಪವಿಲ್ಲ'.

ಇತ್ಯುಕ್ತ್ವಾ ತಾಂ ಪುನಃ ಪ್ರಾಹ ಪ್ರತಿಜ್ಞಾಹಾನಿಮಂತರಾ ।
ನ ಮೇಽಸ್ತಿ ಪ್ರಾಣಸಂದೇಹ ಇತಿ ಜಾನನ್ ವೃಕೋದರಃ ॥

ಯಥಾಪ್ರತಿಜ್ಞಂ ಭ್ರಾತೃವ್ಯಾನ್ ರಣೇ ಮಮ ನಿಜಘ್ರುಷಃ ।
ಕಾಧರ್ಮಃ ಕ್ಷತ್ರಜಾತೇಸ್ತು ತದ್ದಾನೌ ಜೀವಿತಂ ನ ಹಿ ॥

ಹೀಗೆ ಹೇಳಿ, ಪ್ರತಿಜ್ಞಾಹಾನಿ ಪ್ರಸಕ್ತಿ ಹೊರತು ತನಗೆ ಪ್ರಾಣಾಪಾಯ ಸಂದೇಹ ಎಂಬುದಿಲ್ಲವೆಂದು ತಿಳಿದಿರುವ ಭೀಮ ತಿರುಗಿ ಗಾಂಧಾರಿಗೆ ಹೇಳಿದ- 'ಪ್ರತಿಜ್ಞಾನುಸಾರವಾಗಿ ಯುದ್ಧದಲ್ಲಿ ಶತ್ರುಗಳನ್ನು ಕೊಂದಿರುವ ಕ್ಷತ್ರಿಯ ಜಾತಿಯವನಾದ ನನಗೆ ಅಧರ್ಮ ಯಾವುದು? ಪ್ರತಿಜ್ಞಾಹಾನಿಯಾದರೆ ಕ್ಷತ್ರಿಯನಿಗೆ ಬದುಕೇ ಇಲ್ಲ ತಾನೆ?

ಪಾಪಾ ನ ಶುದ್ಧಧರ್ಮೇಣ ಹಂತವ್ಯಾ ಇತಿ ಚ ಶ್ರುತಿಃ ।
ಅನ್ಯವತ್ ಪಾಪಹನನಂ ಪಾಪಯೇತ್ಯಾಹ ಹಿ ಶ್ರುತಿಃ ।
ಅತೋಽಸುರಾನ್ ನೈಕೃತಿಕಾನ್ ನಿಕೃತ್ಯಾ ಘ್ನಂತಿ ದೇವತಾಃ ॥

ಪಾಪಿಗಳನ್ನು ಶುದ್ಧ ಧರ್ಮದಿಂದ ಕೊಲ್ಲಕೂಡದೆಂದು ಶ್ರುತಿಯೂ ಹೇಳಿದೆ. ಅನ್ಯರನ್ನು ಧರ್ಮದಿಂದ ಕೊಲ್ಲುವಂತೆ ಪಾಪಿಗಳನ್ನು ಧರ್ಮದಿಂದ ಕೊಲ್ಲುವುದು ಪಾಪಕರವಾಗುತ್ತದೆ ಎಂದೂ ಶ್ರುತಿ ಹೇಳಿದೆ. ಅದರಿಂದಲೇ ವಂಚಕರಾದ ಅಸುರರನ್ನು ದೇವತೆಗಳು ವಂಚನೆಯಿಂದಲೇ ಕೊಲ್ಲುತ್ತಾರೆ.

ನಿಕೃತ್ಯಾ ನಿಕೃತಿಂ ಹನ್ಯಾನ್ನಿಕೃತ್ಯಾ ನೈವ ಧಾರ್ಮಿಕಮ್ ।
ಇತಿ ಶ್ರುತಿರ್ಹಿ ಪರಮಾ ಪಠ್ಯತೇ ಪೈಂಗಿಭಿಃ ಸದಾ ॥

ವಂಚಕನನ್ನು ವಂಚನೆಯಿಂದ ಕೊಲ್ಲಬೇಕು. ಧಾರ್ಮಿಕರನ್ನು ವಂಚನೆಯಿಂದ ಕೊಲ್ಲಬಾರದು ಎಂಬ ಶ್ರುತಿಯನ್ನು ಪೈಂಗಿಶಾಖೆಯವರು ನಿತ್ಯ ಪಠಿಸುತ್ತಾರೆ.

★ ★ ★ ★ ★

ಹದಿನೈದನೆಯ ಅಧ್ಯಾಯ

ಭೀಮಸೇನ, ಗಾಂಧಾರಿಯರ ಸಂವಾದ, ಯುಧಿಷ್ಠಿರಾದಿಗಳು ಗಾಂಧಾರಿಗೆ ನಮಿಸುವುದು, ಕುಂತಿ ಮತ್ತು ಗಾಂಧಾರಿಯರು ದ್ರೌಪದಿಗೆ ಸಾಂತ್ವನವನ್ನು ಹೇಳಿದರು.

ವೈಶಂಪಾಯನಃ

ತಚ್ಛ್ರುತ್ವಾ ವಚನಂ ತಸ್ಯಾ ಭೀಮಸೇನೋऽಥ ಭೀತವತ್ ।
ಗಾಂಧಾರೀಂ ಪ್ರತ್ಯುವಾಚೇದಂ ವಚಃ ಸಾನುನಯಂ ತದಾ ॥೧॥

ವೈಶಂಪಾಯನ– ಅನಂತರದಲ್ಲಿ ಆಕೆಯ (ಗಾಂಧಾರಿಯ) ಮಾತನ್ನು ಕೇಳಿದ ಭೀಮಸೇನನು ಆಗ ಹೆದರಿದವನಂತೆ ಅನುನಯಪುರಃಸರವಾಗಿ ಗಾಂಧಾರಿಯನ್ನು ಉದ್ದೇಶಿಸಿ ಉತ್ತರಿಸಿದನು.

ಭೀಮಃ

ಅಧರ್ಮೋ ಯದಿ ವಾ ಧರ್ಮಃ ತ್ರಾಸಾತ್ ತತ್ರ ಮಯಾ ಕೃತಃ ।
ಆತ್ಮಾನಂ ತ್ರಾತುಕಾಮೇನ ತನ್ಮೇ ತ್ವಂ ಕ್ಷಂತುಮರ್ಹಸಿ ॥೨॥

ಭೀಮಸೇನ– ಅಧರ್ಮವೋ ಅಥವಾ ಧರ್ಮವೋ ಭಯದಿಂದ ಅಲ್ಲಿ ನಾನು ನನ್ನನ್ನು ರಕ್ಷಿಸಿಕೊಳ್ಳಬೇಕೆಂಬ ಬಯಕೆಯಿಂದ ಹಾಗೆ ಮಾಡಿದೆನು, ಆದರಿಂದ ನೀನು ನನ್ನನ್ನು ಕ್ಷಮಿಸಬೇಕು.

ನ ಹಿ ಯುದ್ಧೇನ ಪುತ್ರಸ್ತೇ ಧರ್ಮೇಣ ಸುಮಹಾಬಲಃ ।
ಶಕ್ಯಃ ಕೇನಚಿದುದ್ಧರ್ತುಂ ತಸ್ಮಾದ್ ವಿಷಮಮಾಚರನ್ ॥೩॥

ಮಹಾಬಲಿಷ್ಟನಾದ ನಿನ್ನ ಮಗನನ್ನು ಧರ್ಮಯುದ್ಧದಿಂದ ಗೆಲ್ಲಲೂ ಯಾರಿಂದಲೂ ಶಕ್ಯವಿಲ್ಲ, ಆದ್ದರಿಂದ ನಾನೂ ವಿಷಮವಾಗಿ ವರ್ತಿಸಿದೆನು.

ಅಧರ್ಮೇಣ ಜಿತಃ ಪೂರ್ವಂ ತೇನಾಪಿ ಚ ಯುಧಿಷ್ಠಿರಃ ।
ನಿಕೃತಾಶ್ಚ ಸದೈವ ಸ್ಮ ತತೋ ವಿಷಮಮಾಚರಮ್ ॥೪॥

ಯುಧಿಷ್ಠಿರನನ್ನು ಆತನು ಮೊದಲು ಅಧರ್ಮದಿಂದಲೇ ಗೆದ್ದಿದ್ದನು, ಯಾವಗಲೂ ಆತನಿಂದ ಮೋಸಗೊಂಡಿದ್ದೆವು, ಆದ್ದರಿಂದ ವಿಷಮವಾಗಿ ವರ್ತಿಸಿರುವೆನು.

ಸೈನ್ಯಸ್ಯೈಕೋಽವಶಿಷ್ಟೋಽಯಂ ಗದಾಯುದ್ಧೇ ಚ ವೀರ್ಯವಾನ್ ।
ನ ತ್ಯಕ್ಷ್ಯತಿ ಹೃತಂ ರಾಜ್ಯಮಿತಿ ಚೈವ ಕೃತಂ ಮಯಾ ॥೫॥

ವೀರ್ಯಶಾಲಿಯಾದ ಆತನೋರ್ವನೇ ಸೈನ್ಯದಲ್ಲಿ ಉಳಿದಿದ್ದನು, ಆದರೂ ಅಪಹರಿಸಿದ ರಾಜ್ಯವನ್ನು ಹಿಂತಿರುಗಿಸಲಾರ ಎಂದು ಗದಾಯುದ್ಧದಲ್ಲಿ ನಾನು ಹೀಗೆ ಆಚರಿಸಿದೆನು.

ಮಾಂ ಹತ್ವಾ ನ ಹರೇದ್ ರಾಜ್ಯಮಿತಿ ಚೈತತ್ ಕೃತಂ ಮಯಾ ॥೬॥

ನನ್ನನ್ನು ಸಂಹರಿಸಿ (ಆತನು) ರಾಜ್ಯವನ್ನು ಅಪಹರಿಸದಿರಲಿ ಎಂದು ನಾನು ಹಾಗೆ ಮಾಡಿದೆನು.

ಏಕಪತ್ನೀಂ ಚ ಪಾಂಚಾಲೀಮೇಕವಸ್ತ್ರಾಂ ರಜಸ್ವಲಾಮ್ ।
ಭವತ್ಯಾ ವಿದಿತಂ ಸರ್ವಮುಕ್ತವಾನ್ ಯತ್ ಸುತಸ್ತವ ॥೭॥

(ನಮ್ಮ) ಮುಖ್ಯಪತ್ನಿಯಾದ ರಜಸ್ವಲೆಯಾದ ಏಕವಸ್ತ್ರಧಾರಿಣಿಯಾದ ಪಾಂಚಾಲದೇಶದ ರಾಜನ ಪುತ್ರಿಯನ್ನು (ದ್ರೌಪದಿಯನ್ನು) ಉದ್ದೇಶಿಸಿ ನಿನ್ನ ಪುತ್ರನು ಏನೆಲ್ಲವನ್ನೂ ಹೇಳಿದನು ಎನ್ನುವದನ್ನು ನೀನು ತಿಳಿದವಳೇ ಆಗಿರುವಿ (ಆದ್ದರಿಂದ ನಾನು ಆತನ ತೊಡೆಯನ್ನು ಮುರಿದಿರುವೆನು).

ಸುಯೋಧನಮಸಂಹೃತ್ಯ ನ ಶಕ್ಯಾ ಭೂಃ ಸಸಾಗರಾ ।
ಕೇವಲಂ ಭೋಕ್ತುಮಸ್ಮಾಭಿರಿತಿ ಚೈತತ್ ಕೃತಂ ಮಯಾ ॥೮॥

ಸುಯೋಧನನನ್ನು ಸಂಹರಿಸದೇ ನಾವು ಸಾಗರಪರ್ಯಂತವಿರುವ ಈ ಭೂಮಿಯನ್ನು ಭೋಗಿಸಲು ಶಕ್ಯವಿಲ್ಲ, ಆದ್ದರಿಂದ ನಾನು ಹಾಗೆ ಮಾಡಿದೆನು.

ತಚ್ಚಾಪ್ಯಪ್ರಿಯಮಸ್ಮಾಕಂ ಪುತ್ರಸ್ತೇ ಸಮುದಾಚರತ್ ।
ದ್ರೌಪದ್ಯಾ ಯತ್ ಸಭಾಮಧ್ಯೇ ಸವ್ಯಮೂರುಮದರ್ಶಯತ್ ॥೯॥

ದ್ರೌಪದಿಗೆ ಬಲತೊಡೆಯನ್ನು ಸಭೆಯ ಮಧ್ಯದಲ್ಲಿ ತೋರಿಸಿದನು. ನಮಗೆ ಅಪ್ರಿಯವಾದ ಆದನ್ನೂ ಸಹ ನಿನ್ನ ಪುತ್ರನು ಮಾಡಿದನು.

ತತ್ರೈವ ವಧ್ಯಃ ಸೋಽಸ್ಮಾಕಂ ದುರಾಚಾರೋಽಂಬ ತೇ ಸುತಃ ।
ಧರ್ಮರಾಜಾಜ್ಞಯಾ ತ್ವೇವಂ ಸ್ಥಿತಾಃ ಸ್ಮ ಸಮಯೇ ಪುರಾ ॥೧೦॥

ಆಲ್ಲಿಯೇ ದುರಾಚಾರಿಯಾದ ನಿನ್ನ ಮಗನು ನಮ್ಮಿಂದ ಸಂಹೃತನಾಗಬೇಕಿತ್ತು, ಆದರೆ ಹಿಂದೆ ಧರ್ಮರಾಜನ ಆಜ್ಞೆಯಿಂದ ನಿಯಮಕ್ಕೆ ಕಟ್ಟುಬಿದ್ದೆವು.

ವೈರಂ ಸಂಧುಕ್ಷಿತಂ ರಾಜ್ಞಿ ಪುತ್ರೇಣ ತವ ಯನ್ಮಹತ್ ।
ಕ್ಲೇಶಿತಾಶ್ಚ ವನೇಽತ್ಯರ್ಥಂ ತಸ್ಮಾದೇತತ್ ಕೃತಂ ಮಯಾ ॥೧೧॥

ಮಹಾರಾಣಿಯೆ! ದ್ವೇಷವನ್ನು ಸಾಧಿಸುವ ನಿನ್ನ ಮಗನಿಂದ ವನದಲ್ಲಿ ತುಂಬಾ ಕ್ಲೇಶವನ್ನು ಅನುಭವಿಸಿದೆವು, ಆದ್ದರಿಂದ ನಾನು ಹಾಗೆ ಮಾಡಿದೆನು.

ವೈರಸ್ಯಾಸ್ಮಿ ಗತಃ ಪಾರಂ ಹತ್ವಾ ದುರ್ಯೋಧನಂ ರಣೇ ।
ರಾಜ್ಯಂ ಯುಧಿಷ್ಠಿರೇ ಪ್ರಾಪ್ತೇ ವಯಂ ವಿಗತಮನ್ಯವಃ ॥೧೨॥

ರಣದಲ್ಲಿ ದುರ್ಯೋಧನನನ್ನು ಸಂಹರಿಸಿ ದ್ವೇಷದ ಕೊನೆಯನ್ನು ಕಂಡೆನು, ಯುದಿಷ್ಠಿರನು ರಾಜ್ಯವನ್ನು ಹೊಂದಲು ನಮ್ಮ ಕೋಪವು ತಣಿಯಿತು.

ಗಾಂಧಾರೀ

ನ ತಸ್ಯೈವಂ ವಧಸ್ತಾತ ಯಂ ಪ್ರಶಂಸಸಿ ಮೇ ಸುತಮ್ ।
ಕೃತವಾಂಶ್ಚಾಪಿ ತತ್ಸರ್ವಂ ಯದಿದಂ ಭಾಷಸೇ ಮಯಿ ॥೧೩॥

ಗಾಂಧಾರಿ– ಮಗನೆ! 'ಆತನ ಸಂಹಾರವು ಹಾಗೆ ಶಕ್ಯವಿಲ್ಲ' ಎಂದು ಯಾವ ನನ್ನ ಮಗನನ್ನು ಹೊಗಳುತ್ತಿರುವಿ (ಇದು ನನಗೆ ಸಮಾಧಾನದ ಮಾತಾಯಿತು), ಆತನು ನೀನು ಹೇಳಿದ್ದೆಲ್ಲವನ್ನೂ ಮಾಡಿದ್ದನು ('ಗದಾಯುದ್ಧದಲ್ಲಿ ನಿಪುಣ, ಯುದ್ಧದಲ್ಲಿ ಆತನನ್ನು ಸಂಹರಿಸುವವರು ಭೂಮಿಯಲ್ಲಿ ಯಾರೂ ಇಲ್ಲ' ಎಂದು ಭೀಮನು ಈ ಹಿಂದೆ ಹೇಳಿದ್ದನು, ಅದು ದುರ್ಯೋಧನನ ಪ್ರಶಂಸೆ ಎಂದು ಗಾಂಧಾರಿಯ, ಭಾವಿಸಿದಳು, ಆದರೆ 'ನನ್ನ ಹೊರತಾಗಿ ಮತ್ತಾರೂ ಆತನನ್ನು ಕೊಲ್ಲಲಾರರು' ಎನ್ನುವ ಭೀಮನ ಭಾವವನ್ನು ಆಕೆ ತಿಳಿಯಲಿಲ್ಲ. ಮತ್ತೂ ಸಹ 'ದುರ್ಯೋಧನನು ನಮಗೆ ಮತ್ತು ದ್ರೌಪದಿಗೆ ತುಂಬಾ ಅನ್ಯಾಯವನ್ನು ಮಾಡಿದ್ದನು' ಎಂದು ಭೀಮನು ತಿಳಿಸಿದ್ದನು, ಅದು ಸತ್ಯ ಎಂದು ಗಾಂಧಾರಿಯು ಒಪ್ಪಿಕೊಂಡಳು ಎಂದು ಭಾವ).

ಹತಾಶ್ವೇ ನಕುಲೇ ಯತ್ ತದ್ ವೃಷಸೇನೇನ ಭಾರತ ।
ಅಪಿಬಃ ಶೋಣಿತಂ ಸಂಖೇ ದುಃಶಾಸನಶರೀರಜಮ್ ॥೧೪॥

ಭರತಕುಲೋತ್ಪನ್ನನೆ! ಯಾವಾಗ ವೃಷಸೇನನು (ಕರ್ಣನು) ನಕುಲನ ಅಶ್ವಗಳನ್ನು ಸಂಹರಿಸಿ, ಅವಮಾನಿಸಿದನೋ ಆಗ ನೀನು ಅದಕ್ಕೆ ಪ್ರತೀಕಾರವಾಗಿ ಯುದ್ಧದಲ್ಲಿ ದುಃಶಾಸನನ ಶರೀರಜನ್ಯವಾದ ರಕ್ತವನ್ನು ಕುಡಿದಿಯಲ್ಲವೆ?

ಸದ್ಭಿರ್ವಿಗರ್ಹಿತಂ ಘೋರಮನಾರ್ಯಜನಸೇವಿತಮ್ ।
ಕ್ರೂರಂ ಕರ್ಮಾಕರೋಃ ಕಸ್ಮಾತ್ ತದಯುಕ್ತಂ ವೃಕೋದರ ॥೧೫॥

ವೃಕೋದರ! ಅಯೋಗ್ಯರಿಂದ ಆಚರಿಸಲು ಯೋಗ್ಯವಾದ, ಭಯಂಕರವಾದ, ಸಜ್ಜನರಿಂದ ನಿಂದ್ಯವಾದ, ಕ್ರೂರವಾದ ಅಯುಕ್ತವಾದ ಆ ಕರ್ಮವನ್ನು ಏತಕ್ಕಾಗಿ ಮಾಡಿದಿ? ಅದು ಸರಿಯಲ್ಲ.

ಭೀಮಃ

ಅನ್ಯಸ್ಯಾಪಿ ನ ಪಾತವ್ಯಂ ರುಧಿರಂ ಕಿಂ ಪುನಃ ಸ್ವಕಮ್ ।
ಯಥೈವಾತ್ಮಾ ತಥಾ ಭ್ರಾತಾ ನ ವಿಶೇಷೋऽಸ್ತಿ ಕಶ್ಚನ ॥೧೬॥

ಭೀಮಸೇನ– ಅನ್ಯರ ರಕ್ತವೂ ಸಹ ಪಾನಕ್ಕೆ ಅಯೋಗ್ಯವಾಗಿದೆ, ಇನ್ನು ನಮ್ಮ ರಕ್ತವು ಪಾನಕ್ಕೆ ಯೋಗ್ಯವೆ? ನಾನು ಹೇಗೋ ನನ್ನ ತಮ್ಮನೂ ಹಾಗೆ. ನಮ್ಮೀರ್ವರಲ್ಲಿ ಯಾವ ಭೇದವೂ ಇಲ್ಲ. (ಸೋದರನ ರಕ್ತವನ್ನು ಪಾನಮಾಡಿದಲ್ಲಿ ತನ್ನ ರಕ್ತವನ್ನೇ ಪಾನಮಾಡಿದಂತೆ, ಈರ್ವರೂ ಒಂದೇ ಕುಲದಲ್ಲಿ ಬಂದವರು ಎಂದು ಭಾವ)

ಹತಾಶ್ವಂ ನಕುಲಂ ದೃಷ್ಟ್ವಾ ವೃಷಸೇನೇನ ಸಂಯುಗೇ ।
ಶತ್ರೂಣಾಂ ತು ಪ್ರಹೃಷ್ಟಾನಾಂ ತ್ರಾಸಃ ಸಂಜನಿತೋ ಮಯಾ ॥೧೭॥

ಯುದ್ಧದಲ್ಲಿ ವೃಷಸೇನನು ನಕುಲನ ಅಶ್ವಗಳನ್ನು ಸಂಹರಿಸಿರುವುದನ್ನು ಕಂಡು (ಆಗ ಕರ್ಣನು ನಕುಲನಿಗೆ ವಿಶೇಷವಾಗಿ ಅವಮಾನಿಸಿದ್ದನು. ಆದ್ದರಿಂದ) , ಶತ್ರುಗಳು ಹರ್ಷಿಸುತ್ತಿರಲು, ನಾನು (ಅವರೆಲ್ಲರಿಗೂ) ಭಯವನ್ನು ಉಂಟುಮಾಡಿದೆನು. (ಆಗ ಭೀಮಸೇನನು ದುಃಶಾಸನನನ್ನು ಸಂಹರಿಸಿ, ಆತನ ಎದೆಯನ್ನು ಬಗೆದು, ಅಲ್ಲಿ ನೆರೆದಿದ್ದ ಎಲ್ಲರಿಗೂ ಅತಿಭಯಂಕರನಾಗಿ ಕಂಡನು. ಹಿಂದೆ ದ್ರೌಪದಿಗೆ ಮತ್ತು

ಪಾಂಡವರಿಗೆ ಕೌರವರು ಮಾಡಿದ ಎಲ್ಲ ವಿಧವಾದ ಅಪಮಾನಗಳಿಗೆ ಅದು ಪ್ರತೀಕಾರವಾಗಿತ್ತು ಎಂದು ಭಾವ.)

ಸ ಪ್ರತಿಜ್ಞಾಮಕರವಂ ಪಿಬಾಮ್ಯಸೃಗರೇರಿತಿ ।
ರುಧಿರಂ ನಾತಿಚಕ್ರಾಮ ದಂತೋಷ್ಠಾನ್ಮೇऽಂಬ ಮಾ ಶುಚಃ ॥೧೮॥

'ಶತ್ರುವಿನ (ದುಃಶಾಸನನ) ರಕ್ತವನ್ನು ಪಾನ ಮಾಡುವೆನು' ಎಂಬ (ನನ್ನ) ಪ್ರತಿಜ್ಞೆಯನ್ನು ಮಾಡಿದ್ದೆ. ಆದರೆ ನನ್ನ ಹಲ್ಲುತುಟಿಗಳನ್ನು (ಆ ರಕ್ತವು) ದಾಟಲಿಲ್ಲ, ಆದ್ದರಿಂದ ತಾಯಿಯೆ! ದುಃಖಿಸದಿರು.

ವೈವಸ್ವತೋ ಹಿ ತದ್ವೇದ ಯಥಾವತ್ ಕುಲನಂದಿನಿ ।
ಮಾ ಕೃಥಾ ಹೃದಿ ತನ್ಮಾತಃ ನ ತತ್ ಪೀತಂ ಮಯಾऽನಘೇ ॥೧೯॥

ಕುಲಕ್ಕೆ ಆನಂದವನ್ನು ನೀಡುವವಳೆ! ಅದನ್ನು (ಅಂದು ಅಲ್ಲಿ ನಡೆದ ಘಟನೆಯನ್ನು) ಯಥಾರ್ಥವಾಗಿ ಸೂರ್ಯಸುತನು (ಕರ್ಣನು) ಬಲ್ಲ, ನಾನು ಅದನ್ನು ಪಾನಮಾಡಲಿಲ್ಲ, ಆದ್ದರಿಂದ ತಾಯಿಯೆ! ಮನದಲ್ಲಿ ಆ ವಿಷಯವನ್ನು ಚಿಂತಿಸದಿರು.

ಕೇಶಪಕ್ಷಪರಾಮರ್ಶೇ ದ್ರೌಪದ್ಯಾ ದ್ಯೂತಕಾರಿತೇ ।
ಕ್ರೋಧಾದ್ಯದಬ್ರುವಂ ಚಾಹಂ ತಚ್ಚ ಮೇ ಕ್ಷಂತುಮರ್ಹಸಿ ॥೨೦॥

ದ್ಯೂತವಾಡಿದ ಸಂದರ್ಭದಲ್ಲಿ ದ್ರೌಪದಿಯ ತುರುಬನ್ನು ಜಗ್ಗಿದಾಗ ಕೋಪದಿಂದ ಏನನ್ನೊ ಹೇಳಿದ್ದೆನು (ಆದರೆ ಅದನ್ನು ಆಚರಿಸಲಿಲ್ಲ). ಆದ್ದರಿಂದ ನನ್ನನ್ನು ಕ್ಷಮಿಸುವವಳಾಗು. (ಈ ಶ್ಲೋಕದ ಕೊನೆಯಪಾದದ ಪಾಠಾಂತರವು ಹೀಗಿದೆ- 'ತಚ್ಚ ಮೇ ಹೃದಿ ವರ್ತತೇ- ಅದು ಇನ್ನೂ ಮನದಲ್ಲಿ ನೆನಪಿದೆ' ಈ ಪಾಠದಲ್ಲಿ ಅಧ್ಯಾಹಾರದ ಕ್ಲೇಶವಿಲ್ಲ, ಪ್ರಕೃತಕ್ಕೆ ತುಂಬ ಸಂಗತ ಎಂದೂ ತೋರುವುದು.)

ಕ್ಷತ್ರಧರ್ಮಚ್ಯುತೋ ರಾಜ್ಞಿ ಭವೇಯಂ ಶಾಶ್ವತೀಃ ಸಮಾಃ ।
ಪ್ರತಿಜ್ಞಾಂ ತಾಮನಿಸ್ತೀರ್ಯ ತತಸ್ತತ್ ಕೃತವಾನಹಮ್ ॥೨೧॥

ಮಹಾರಾಣಿಯೆ! ಆ ಪ್ರತಿಜ್ಞೆಯನ್ನು ಸತ್ಯಗೊಳಿಸದೇ ಹೋದಲ್ಲಿ ನಿರಂತರವಾಗಿ ಕ್ಷತ್ರಧರ್ಮದಿಂದ ಚ್ಯುತನಾಗುತ್ತಿದ್ದೆನು, ಆದ್ದರಿಂದ ಅದನ್ನು ಆಚರಿಸುವವನಾದೆನು.

ಅನಿಗೃಹ್ಯ ಪುರಾ ಪುತ್ರಾನ್ ಅಸ್ಮಾಸ್ವನಪಕಾರಿಷು ।
ನ ಮಾಮರ್ಹಸಿ ಕಲ್ಯಾಣಿ ದೋಷೇಣ ಪರಿಶಂಕಿತುಮ್ ॥೨೨॥

ಮಂಗಳಕರಳೆ! ಹಿಂದೆ ನಮಗೆ ಅಪಕಾರವನ್ನು ಮಾಡುತ್ತಿದ್ದ (ನಿನ್ನ) ಮಕ್ಕಳನ್ನು (ನೀನು) ನಿಗ್ರಹಿಸದೆ, ನನ್ನನ್ನು ದೋಷಿಯಂದು ಆಶಂಕಿಸುವುದು ತರವಲ್ಲ.

ಗಾಂಧಾರೀ

ವೃದ್ಧಸ್ಯಾಸ್ಯ ಶತಂ ಪುತ್ರಾನ್ ನಿಘ್ನಂಸ್ತ್ವಮಪರಾಜಿತಃ ।
ಕಸ್ಮಾನ್ನ ಶೇಷಿತಃ ಕಂಚಿದ್ ಯೇನಾಲ್ಪಮಪರಾಧಿತಮ್ ॥೨೩॥

ಗಾಂಧಾರಿ– ಈ ಮುದುಕನ ನೂರು ಪುತ್ರರನ್ನು ಸಂಹರಿಸಿದ, ಸೋಲಿಲ್ಲದ ಸರದಾರನಾದ ನೀನು, ಯಾವ (ನನ್ನ) ಪುತ್ರನು ಅಲ್ಪತಪ್ಪೆಸಗಿದ್ದನೋ ಆತನನ್ನಾದರೂ ಏಕೆ ಉಳಿಸಲಿಲ್ಲ?

ಸಂತಾನಮಾವಯೋಸ್ತಾತ ವೃದ್ಧಯೋರ್ಹೃತರಾಜ್ಯಯೋಃ ।
ನಾಶೇಷಯಃ ಕಥಂ ಯಷ್ಟಿಮೇಕಾಂ ವೃದ್ಧಯುಗಸ್ಯ ವೈ ॥೨೪॥

ಮಗನೆ! ರಾಜ್ಯವನ್ನು ಕಳೆದುಕೊಂಡ ವೃದ್ಧರಾದ ನಮ್ಮ ಈ ಮುದಿಜೋಡಿಗೆ ಊರುಗೋಲಾಗುವ ಒಬ್ಬ ಮಗನನ್ನಾದರೂ ಏಕೆ ಉಳಿಸಲಿಲ್ಲ?

ಶೇಷೇ ಹ್ಯವಸ್ಥಿತೇ ತಾತ ಪುತ್ರಾಣಾಮಲ್ಪಕೇಽಪಿ ಚ ।
ನ ಮೇ ದುಃಖಂ ಭವೇದದ್ಯ ಯದಿ ತ್ವಂ ಧರ್ಮಮಾಚರೇಃ ॥೨೫॥

ಮಗನೆ! ನೀನು ಧರ್ಮವನ್ನು ಆಚರಿಸಿದ್ದರೂ (ತೊಡೆಯನ್ನು ಭೇದಿಸುವುದು, ರಕ್ತವನ್ನು ಪಾನಮಾಡುವುದು ನೂರು ಧೃತರಾಷ್ಟ್ರನಪುತ್ರರನ್ನು ಸಂಹರಿಸುವುದು ಈ ಮುಂತಾದ ಪ್ರತಿಜ್ಞೆಗಳನ್ನು ಪೂರ್ಣಗೊಳಿಸುವುದು ಕ್ಷತ್ರಿಯನಾದ ಭೀಮಸೇನನ ಧರ್ಮ) ಒಬ್ಬ ಮಗನನ್ನಾದರೂ ಉಳಿಸಿದ್ದಲ್ಲಿ, ನನಗೆ (ಇಷ್ಟು) ದುಃಖವು ಆಗುತ್ತಿರಲಿಲ್ಲ.

ವೈಶಂಪಾಯನಃ

ತಮೇವಮುಕ್ತ್ವಾ ಗಾಂಧಾರೀ ಯುಧಿಷ್ಠಿರಮಪೃಚ್ಛತ ।
ಕ್ವ ಸ ರಾಜೇತಿ ಸಕ್ರೋಧಾ ಪುತ್ರಪೌತ್ರವಧಾರ್ದಿತಾ ॥೨೬॥

ವೈಶಂಪಾಯನ– ಆತನನ್ನು (ಭೀಮಸೇನನನ್ನು ಉದ್ದೇಶಿಸಿ) ಈ ರೀತಿಯಾಗಿ ಹೇಳಿ, ಕ್ರೋಧಯುಕ್ತಳಾದ, ಮಕ್ಕಳ ಮೊಮ್ಮಕ್ಕಳ ಸಾವಿನಿಂದ ದುಃಖಿತಳಾದ ಗಾಂಧಾರಿಯು 'ಆ ರಾಜನು ಎಲ್ಲಿ?' ಎಂದು ಯುಧಿಷ್ಠಿರನ ಬಗ್ಗೆ ಪ್ರಶ್ನಿಸಿದಳು.

ತಾಮಭ್ಯಗಚ್ಛತ್ ಕೌಂತೇಯೋ ವೇಪಮಾನಃ ಕೃತಾಂಜಲಿಃ ।
ಯುಧಿಷ್ಠಿರಸ್ತು ಗಾಂಧಾರೀಂ ಮಧುರಂ ವಾಕ್ಯಮಬ್ರವೀತ್ ॥೨೭॥

ಕುಂತೀಪುತ್ರನು ನಡುಗುತ್ತಾ ಕೈಜೋಡಿಸಿದವನಾಗಿ ಆಕೆಯ ಬಳಿ ಸಾರಿದನು, ಯುಧಿಷ್ಠಿರನು ಗಾಂಧಾರಿಯನ್ನು ಉದ್ದೇಶಿಸಿ ಮಧುರ ನುಡಿಯನ್ನು ಆಡಿದನು.

ಯುಧಿಷ್ಠಿರಃ

ಪುತ್ರಹಂತಾ ನೃಶಂಸೋಽಹಂ ತವ ದೇವಿ ಯುಧಿಷ್ಠಿರಃ ।
ಶಾಪಾರ್ಹಃ ಪೃಥಿವೀನಾಶೇ ಹೇತುಭೂತಃ ಶಪಸ್ವ ಮಾಮ್ ॥೨೮॥

ಯುಧಿಷ್ಠಿರ– ನಿನ್ನ ಮಕ್ಕಳ ಕೊಲೆಗಡಕ, ನರ ಹಂತಕ, ಭೂಮಿಯ ನಾಶಕ್ಕೆ ಕಾರಣನು, ಶಾಪಿಸಲು ಯೋಗ್ಯನಾದ ನಾನು ಯುಧಿಷ್ಠಿರ, ನನ್ನನ್ನು ಶಪಿಸು.

ನ ಹಿ ಮೇ ಜೀವಿತೇನಾರ್ಥೋ ನ ರಾಜ್ಯೇನ ಸುಖೇನ ವಾ ।
ತಾದೃಶಾನ್ ಸುಹೃದೋ ಹತ್ವಾ ಸುಮೂಢಸ್ಯ ಸುತದ್ರುಹಃ ॥೨೯॥

(ನಿನ್ನ) ಮಕ್ಕಳಿಗೆ ದ್ರೋಹ ಮಾಡಿದ ಮಹಾ ಮೂರ್ಖನಾದ ಅಂತಹ ಸ್ನೇಹಿತರನ್ನು ಸಂಹರಿಸಿದ ನನಗೆ ಈ ಬದುಕಿನಿಂದ ಯಾವ ಪ್ರಯೋಜನವೂ ಇಲ್ಲ, ರಾಜ್ಯದಿಂದ ಸುಖದಿಂದ ಏನು ಪ್ರಯೋಜನವಿದೆ?

ವೈಶಂಪಾಯನಃ

ತಮೇವಂವಾದಿನಂ ಭೀತಂ ಸನ್ನಿಕರ್ಷಾಗತಂ ತದಾ ।
ನೋವಾಚ ಕಿಂಚಿದ್ ಗಾಂಧಾರೀ ನಿಃಶ್ವಾಸಪರಮಾ ನೃಪ ॥೩೦॥

ವೈಶಂಪಾಯನ– ರಾಜನೆ! ಸಮೀಪಕ್ಕೆ ಆಗಮಿಸಿದ ಭೀತನಾದ ಈ ರೀತಿಯಾಗಿ ಮಾತನಾಡುತ್ತಿರುವ ಆತನನ್ನು ಉದ್ದೇಶಿಸಿ ದೀರ್ಘವಾಗಿ ನಿಟ್ಟುಸುರನ್ನು ಬಿಡುತ್ತಿದ್ದ ಗಾಂಧಾರಿಯು ಏನನ್ನೂ ಹೇಳಲಿಲ್ಲ.

ತಸ್ಯಾವನತದೇಹಸ್ಯ ಪಾದಯೋರ್ನಿಪತಿಷ್ಯತಃ ।
ಯುಧಿಷ್ಠಿರಸ್ಯ ನೃಪತೇರ್ಧರ್ಮಾತ್ಮಾ ಧರ್ಮದರ್ಶಿನೀ ॥೩೧॥

ಅಂಗುಲ್ಯಗ್ರಾಣಿ ದದೃಶೇ ದೇವೀ ಪಟ್ಟಾಂತರೇಣ ಸಾ ।
ತತಃ ಸ ಕುನಖೀಭೂತೋ ದರ್ಶನೀಯನಖೋ ನೃಪಃ ॥೩೨॥

ಕಾಲುಗಳಿಗೆ ನಮಿಸುತ್ತಿರುವ ಬಾಗಿದ ದೇಹದ ಆ ರಾಜನಾದ ಯುಧಿಷ್ಠಿರನ ಕಾಲ್ಬೆರಳುಗಳ ತುದಿಗಳನ್ನು (ಕಣ್ಣಿಗೆ ಬಂಧಿಸಿದ ಬಟ್ಟೆಯ) ಪಟ್ಟಿಯ ಸಂದಿನಿಂದ ಆ ದೇವಿಯು ಕಂಡಳು, ಆದ್ದರಿಂದ ಸುಂದರವಾದ ಉಗುರುಗಳನ್ನು ಹೊಂದಿದ್ದ ಆ ರಾಜನು ಕರಟಿದ ಉಗುರುಗಳನ್ನು ಹೊಂದಿದವನಾದನು.

ತಂ ದೃಷ್ಟ್ವಾ ತಥಾರ್ಜುನೋಽಗಚ್ಛದ್ ವಾಸುದೇವಸ್ಯ ಪೃಷ್ಠತಃ ॥೩೩॥

ಅನಂತರದಲ್ಲಿ ಅದನ್ನು ಕಂಡ ಅರ್ಜುನನು ವಾಸುದೇವನ ಹಿಂಬದಿ ಸರಿದನು.

ಏವಂ ಸಂಚೀಷ್ಟಮಾನಾಂಸ್ತಾನ್ ಇತಶ್ಚೇತಶ್ಚ ಭಾರತ ।
ಗಾಂಧಾರೀ ವಿಗತಕ್ರೋಧಾ ಸಾಂತ್ವಯಾಮಾಸ ಮಾತೃವತ್ ॥೩೪॥

ಭರತಕುಲೋತ್ಪನ್ನನೆ! ಈರೀತಿಯಾಗಿ ಇತ್ತಿಂದತ್ತ ಸರಿದಾಡುತ್ತಿದ್ದ ಅವರೆಲ್ಲರನ್ನು (ಪಾಂಡುಪುತ್ರರನ್ನು) ಉಪಶಮನಗೊಂಡ ಕೋಪವುಳ್ಳ ಗಾಂಧಾರಿಯು ತಾಯಿಯಂತೆ ಸಮಾಧಾನಪಡಿಸಿದಳು.

ತೇ ಪಾಂಡವಾಸ್ತ್ವನುಜ್ಞಾತಾ ಮಾತರಂ ವೀತಮತ್ಸರಾಃ ।
ಅಭ್ಯಗಚ್ಛಂತ ಸಹಿತಾಃ ಪೃಥಾಂ ಪೃಥುಲವಕ್ಷಸಃ ॥೩೫॥

ಮಾತ್ಸರ್ಯರಹಿತರಾದ ವಿಶಾಲವಾದ ಎದೆಯನ್ನು ಹೊಂದಿರುವ ಪಾಂಡವರು ಒಟ್ಟಾಗಿ (ಆಕೆಯಿಂದ) ಅನುಮತಿಯನ್ನು ಪಡೆದು, ತಾಯಿಯಾದ ಪೃಥಾದೇವಿಯ ಬಳಿ ಸಾರಿದರು.

ಚಿರಸ್ಯ ದೃಷ್ಟ್ವಾ ಪುತ್ರಾಂಸ್ತಾನ್ ಪುತ್ರಾಧಿಭಿರಭಿಪ್ಲುತಾ ।
ಬಾಷ್ಪಮಾಹಾರಯಾಮಾಸ ವಸ್ತ್ರೇಣಾವೃತ್ಯ ವೈ ಮುಖಮ್ ॥೩೬॥

ಆ ಮಕ್ಕಳನ್ನು ದೀರ್ಘಕಾಲದ ಅನಂತರದಲ್ಲಿ ಕಂಡ ಕುಂತಿಯು ಮಕ್ಕಳು ಅನುಭವಿಸಿದ ದುಃಖವನ್ನು ನೆನೆಯುವುದರಿಂದ ಉಕ್ಕಿಬಂದ ಕಣ್ಣೀರನ್ನು, ಮುಖವನ್ನು ವಸ್ತ್ರದಿಂದ (ಸೆರಗಿನಿಂದ) ಮುಚ್ಚಿಕೊಂಡು ತಡೆದಳು.

ತತೋ ಬಾಷ್ಪಂ ಸಮುತ್ಸೃಜ್ಯ ಸಹ ಪುತ್ರೈಸ್ತಥಾ ಪೃಥಾ ।
ಅಪಶ್ಯದೇನಾನ್ ಶಸ್ತ್ರೌಘೈರ್ಬಹುಧಾ ಪರಿವಿಕ್ಷತಾನ್ ॥೩೭॥

ಅನಂತರದಲ್ಲಿ ಪೃಥಾದೇವಿಯು ಮಕ್ಕಳೊಡನೆ ಕಣ್ಣೀರನ್ನು ತಡೆದುಕೊಂಡು, ಆಯುಧಗಳಿಂದ ಬಹಳವಾಗಿ ಗಾಯಗೊಂಡ ಈ ಮಕ್ಕಳನ್ನು ನೋಡಿದಳು.

ಸಾ ತಾನೇಕೈಕಶಃ ಪುತ್ರಾನ್ ಸಂಸ್ಪೃಶಂತೀ ಪುನಃ ಪುನಃ ।
ಅನ್ವಶೋಚತ ದುಃಖಾರ್ತಾಂ ದ್ರೌಪದೀಂ ನಿಹತಾತ್ಮಜಾಮ್ ॥೩೮॥

ಆಕೆಯು ಮತ್ತೆ ಮತ್ತೆ ಆ ಎಲ್ಲ ಮಕ್ಕಳನ್ನು ಒಬ್ಬರನ್ನಾಗಿ ಸ್ಪರ್ಶಿಸುತ್ತಾ, ಮಕ್ಕಳನ್ನು ಕಳೆದುಕೊಂಡು ದುಃಖಿತಳಾದ ದ್ರೌಪದಿಯನ್ನು ಉದ್ದೇಶಿಸಿ ದುಃಖಿಸಿದಳು.

ರುದಂತೀಮಥ ಪಾಂಚಾಲೀಂ ದದರ್ಶ ಪತಿತಾಂ ಭುವಿ ॥೩೯॥

ನೆಲದಲ್ಲಿ ಮಲಗಿದ್ದ, ಅಳುತ್ತಿರುವ ಪಾಂಚಾಲರಾಜನ ಪುತ್ರಿಯನ್ನು ಕಂಡಳು.

ಪಾಂಚಾಲೀ

ಆರ್ಯೇ ಪೌತ್ರಾ ಕ್ವ ತೇ ಸರ್ವೇ ಸೌಭದ್ರಸಹಿತಾ ಗತಾಃ ।
ನ ತ್ವಾಂ ತೇಽದ್ಯಾಭಿಗಚ್ಛಂತಿ ಚಿರದೃಷ್ಟಾಮನಿಂದಿತೇ ॥೪೦॥

ದ್ರೌಪದಿ– ದೋಷರಹಿತಳೆ ಪೂಜ್ಯಳೆ! ಸುಭದ್ರೆಯ ಪುತ್ರಸಹಿತರಾದ ನಿನ್ನ ಎಲ್ಲ ಮೊಮ್ಮಕ್ಕಳು ಎಲ್ಲಿರುವರು? ಬಲುಹಿಂದೆ ನಿನ್ನನ್ನು ಕಂಡಿದ್ದ ಅವರು, ಏಕೆ ಇಂದು ನಿನ್ನ ಬಳಿ ಸಾರುತ್ತಿಲ್ಲ?

ಕಿಂ ನು ರಾಜ್ಯೇನ ಮೇ ಕಾರ್ಯಂ ವಿಹೀನಾಯಾಃ ಸುತೈರ್ವರೈಃ ॥೪೧॥

ಶ್ರೇಷ್ಠರಾದ ಮಕ್ಕಳನ್ನು ಕಳೆದುಕೊಂಡ ನನಗೆ ಈ ರಾಜ್ಯದಿಂದ ಏನು ಪ್ರಯೋಜನ?

ವೈಶಂಪಾಯನಃ

ತಾಂ ಸಮಾಶ್ವಾಸಯಾಮಾಸ ಪೃಥಾ ಪೃಥುಲಲೋಚನಾಮ್ ।
ಉತ್ಥಾಪ್ಯ ಯಾಜ್ಞಸೇನೀಂ ತು ರುದತೀಂ ಶೋಕಲಾಲಸಾಮ್ ॥೪೨॥

ವೈಶಂಪಾಯನ– ವಿಶಾಲವಾದ ನಯನಗಳನ್ನು ಹೊಂದಿರುವ ಪೃಥಾದೇವಿಯು ದುಃಖದಿಂದ ಆಯಾಸಗೊಂಡಿರುವ ರೋದಿಸುತ್ತಿರುವ ಆ ಯಾಜ್ಞಸೇನಿಯನ್ನು ಮೇಲೆತ್ತಿ ಸಮಾಧಾನಪಡಿಸಿದಳು.

ತಯೈವ ಸಹಿತಾ ತತ್ರ ಪುತ್ರೈರನುಗತಾ ಪೃಥಾ ।
ಅಭ್ಯಗಚ್ಛತ ಗಾಂಧಾರೀಮಾರ್ತಮಾರ್ತತರಾ ಸ್ವಯಮ್ ॥೪೩॥

ಅನುಸರಿಸಿ ಬರುತ್ತಿರುವ, ಮಕ್ಕಳಿಂದ ಕೂಡಿದವಳಾದ ಸ್ವತಃ ಅತ್ಯಂತ ದುಃಖಿತಳಾದ ಪೃಥಾದೇವಿಯು ಆಕೆಯಿಂದ (ದ್ರೌಪದೀದೇವಿಯಿಂದ) ಕೂಡಿಕೊಂಡು ದುಃಖಿತಳಾದ ಗಾಂಧಾರಿಯ ಬಳಿ ಸಾಗಿದಳು.

ತಾಮುವಾಚಾಥ ಗಾಂಧಾರೀ ಸಹ ಕುಂತ್ಯಾ ಯಶಸ್ವಿನೀಮ್ ॥೪೪॥

ಕೀರ್ತಿವಂತಳಾದ ಆಕೆಯನ್ನು (ದ್ರೌಪದಿಯನ್ನು) ಉದ್ದೇಶಿಸಿ, ಕುಂತೀದೇವಿಯಂದ ಕೂಡಿದ ಗಾಂಧಾರೀ ದೇವಿಯು ಉಪದೇಶಿಸಿದಳು.

ಗಾಂಧಾರೀ

ಮೈವಂ ಪುತ್ರೀತಿ ಶೋಕಾರ್ತಾ ಪಶ್ಯ ಮಾಮಪಿ ದುಃಖಿತಾಮ್ ।
ಮನ್ಯೇ ಲೋಕವಿನಾಶೋಽಯಂ ಕಾಲಪರ್ಯಾಯಚೋದಿತಃ ॥೪೫॥

ಗಾಂಧಾರಿ– ಮಗಳೆ! ಈರೀತಿಯಾಗಿ ದುಃಖಿಸದಿರು, ದುಃಖಿತಳಾದ ನನ್ನನ್ನು ನೋಡು, ವ್ಯತ್ಯಸ್ಥವಾದ ಕಾಲದಿಂದ ಪ್ರೇರಿತವಾಗಿ ಈ ಲೋಕನಾಶವು ಸಂಭವಿಸಿದೆ ಎಂದು ಭಾವಿಸಿರುವೆನು.

ಅವಶ್ಯಭಾವೀ ಸಂಪ್ರಾಪ್ತಃ ಸ್ವಭಾವಾದ್ ರೋಮಹರ್ಷಣಃ ॥೪೬॥

ಅವಶ್ಯವಾಗಿ ಸಂಭವಿಸಲೇ ಬೇಕಾದದ್ದು ರೋಮಾಂಚಕಾರಿಯಾದದ್ದು ಬಂದೊದಗಿದೆ.

ಇದಂ ತು ಸಮನುಪ್ರಾಪ್ತಂ ವಿದುರಸ್ಯ ವಚೋ ಮಹತ್ ।
ಅಸಿದ್ಧಾನುನಯೇ ಕೃಷ್ಣೇ ಯದುವಾಚ ಮಹಾದ್ಯುತಿಃ ॥೪೭॥

ಕೃಷ್ಣನ ಸಂಧಿಯು ಸಿದ್ಧಿಸದೇ ಹೋಗಲು ಮಹಾಜ್ಞಾನಿಯು (ವಿದುರನು) ಏನನ್ನು ಹೇಳಿದ್ದನೋ ಅದು ಬಂದೋದಗಿದೆ, ವಿದುರನ ಮಾತುಗಳು ಮಹತ್ತರವಾದವು.

ಅಸ್ಮಿನ್ನಪರಿಹಾರ್ಯೇಽರ್ಥೇ ವ್ಯತೀತೇ ಚ ವಿಶೇಷತಃ ।
ಮಾ ಶುಚೋ ನ ಹಿ ಶೋಚ್ಯಾಸ್ತೇ ಸಂಗ್ರಾಮೇ ನಿಧನಂ ಗತಾಃ ॥೪೮॥

ಈ ತಿದ್ದಲಾಗದ ಮತ್ತು ವಿಶೇಷವಾಗಿ ಗತಿಸಿಹೋದ ಘಟನೆಯಬಗ್ಗೆ ದುಃಖಿಸದಿರು, ಯುದ್ಧದಲ್ಲಿ ಮೃತರಾದ ಅವರು ಶೋಚ್ಯರಲ್ಲ (ವೀರಸ್ವರ್ಗದಲ್ಲಿ ವಿರಾಜಮಾನರಾಗುವರು).

ಯಥೈವ ತ್ವಂ ತಥೈವಾಹಂ ಕೋ ಮಾಮಾಶ್ವಾಸಯಿಷ್ಯತಿ ।
ಮಯ್ಯೇವ ಚಾಪರಾಧೇನ ಕುಲಮೇತದ್ ವಿನಾಶಿತಮ್ ॥೪೯॥

ನೀನು ಹೇಗೊ ನಾನೂ ಹಾಗೆ (ಪುತ್ರಮರಣದಿಂದ ದುಃಖಿತಳಾಗಿರುವೆನು), ನನ್ನನ್ನು ಯಾರು ತಾನೇ ಸಮಧಾನಗೊಳಿಸುವರು? ನನ್ನ ಅಪರಾಧದಿಂದಲೇ (ದುರ್ಯೋಧನನನ್ನು ಹತೋಟಿಯಲ್ಲಿ ಇಟ್ಟುಕೊಳ್ಳದಿದ್ದರಿಂದ) ಈ ಕುಲವು ವಿನಾಶವನ್ನು ಹೊಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಪಂಚದಶೋಽಧ್ಯಾಯಃ ॥

॥ ಜಲಪ್ರದಾನಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಜಲಪ್ರದಾನಪರ್ವ ॥

★ ★ ★ ★ ★

೨. ಸ್ತ್ರೀವಿಲಾಪಪರ್ವ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ತಸ್ಯಾ ಯಾಶ್ಚ ಸ್ನುಷಾಃ ಸರ್ವಾಸ್ತಾಭಿಃ ಸಹ ಪುರಸ್ಕೃತಾಮ್ ।
ಕೃತ್ವಾ ತಂ ಧೃತರಾಷ್ಟ್ರಂ ಚ ವಿದುರಾದೀಂಶ್ಚ ಸರ್ವಶಃ ॥

ಪಾಂಡವಾಃ ಪ್ರಧನಸ್ಥಾನಂ ಸಭಾರ್ಯಾಃ ಪೃಥಯಾ ಸಹ ।
ಕೃಷ್ಣಾಭ್ಯಾಂ ಚ ಯಯುಸ್ತತ್ರ ಗಾಂಧಾರ್ಯಾಸ್ತಪಸೋ ಬಲಮ್ ॥

ಜಾನನ್ ಪಾಂಡವರಕ್ಷಾರ್ಥಂ ಚಿಕೀರ್ಷುಸ್ತತ್ತಪೋವ್ಯಯಮ್ ।
ವೇದೇಶ್ವರೋ ದದೌ ದಿವ್ಯಂ ಚಕ್ಷುಃ ಸತ್ಯವತೀಸುತಃ ॥

ಗಾಂಧಾರಿಯನ್ನು ಅವಳ ಎಲ್ಲ ಸೊಸೆಯರೊಂದಿಗೆ ಮುಂದೆ ಮಾಡಿಕೊಂಡು, ಹಾಗೇ ಧೃತರಾಷ್ಟ್ರನನ್ನೂ ವಿದುರ ಮುಂತಾದವರನ್ನೂ ಎಲ್ಲರನ್ನೂ ಮುಂದೆ ಮಾಡಿಕೊಂಡು ಪಾಂಡವರು ಪತ್ನೀಸಮೇತರಾಗಿ ಕುಂತಿ ಮತ್ತು ವೇದವ್ಯಾಸ ಕೃಷ್ಣರೊಂದಿಗೆ ಒಡಗೂಡಿ ರಣಭೂಮಿಗೆ ಹೋದರು. ಅಲ್ಲಿ ಗಾಂಧಾರಿಯ ತಪೋಬಲವನ್ನು ಅರಿತಿದ್ದ ವೇದವ್ಯಾಸರು ಪಾಂಡವರ ರಕ್ಷಣೆಗಾಗಿ ಅವಳ ತಪಸ್ಸನ್ನು ವ್ಯಯ ಮಾಡಲು ಬಯಸಿ ಅವಳಿಗೆ ದಿವ್ಯ ಚಕ್ಷುಸ್ಸನ್ನು ನೀಡಿದರು.

★ ★ ★ ★ ★

ಹದಿನಾರನೆಯ ಅಧ್ಯಾಯ

ವ್ಯಾಸರ ಅನುಗ್ರಹದಿಂದ ದಿವ್ಯದೃಷ್ಟಿಯನ್ನು ಗಾಂಧಾರಿಯು ಹೊಂದುವುದು, ಧೃತರಾಷ್ಟ್ರ ಧರ್ಮನಂದನಾದಿಗಳು ಮಹಿಳೆಯರಿಂದ ಕೂಡಿಕೊಂಡು ರಣರಂಗಕ್ಕೆ ಬರುವುದು, ಮಹಿಳೆಯರ ರೋದನ, ಗಾಂಧಾರಿಯು ರೋದಿಸುತ್ತಿರುವ ತನ್ನ ಸೊಸೆಯರನ್ನು ಕೃಷ್ಣನಿಗೆ ತೋರಿಸುವುದು.

ವೈಶಂಪಾಯನಃ

ಏವಮುಕ್ತ್ವಾ ತು ಗಾಂಧಾರೀ ಕುರೂಣಾಮವಕರ್ತನಮ್ ।
ಅಪಶ್ಯತ್ ತತ್ರ ತಿಷ್ಠಂತೀ ಸರ್ವಂ ದಿವ್ಯೇನ ಚಕ್ಷುಷಾ ॥೧॥

ವೈಶಂಪಾಯನ– ಗಾಂಧಾರಿಯು ಈ ರೀತಿಯಾಗಿ ಹೇಳಿ, ಅಲ್ಲಿಯೇ ನಿಂತು ದಿವ್ಯ ದೃಷ್ಟಿಯಿಂದ ಕುರುಗಳ ನಾಶವನ್ನು ಕಂಡಳು.

ಗಾಂಧಾರೀ ಚ ಮಹಾಭಾಗಾ ಸಮಾನವ್ರತಚಾರಿಣೀ ।
ಉಗ್ರೇಣ ತಪಸಾ ಯುಕ್ತಾ ಸತತಂ ಸತ್ಯವಾದಿನೀ ॥೨॥

ವರದಾನೇನ ಕೃಷ್ಣಸ್ಯ ಮಹರ್ಷೇಃ ಪುಣ್ಯಕರ್ಮಣಃ ।
ದಿವ್ಯಜ್ಞಾನಬಲೋಪೇತಾ ವಿವಿಧಂ ಪರ್ಯದೇವಯತ್ ॥೩॥

ಗಾಂಧಾರಿಯಾದರೊ ಮಹಾಮಹಿಮೋಪೇತಳು, ಗಂಡನ ಸಮಾನವಾದ ವ್ರತವನ್ನು ಆಚರಿಸಿದವಳು, ಉಗ್ರವಾದ ತಪವನ್ನು ಆಚರಿಸಿದವಳು, ನಿರಂತರ ಸತ್ಯವನ್ನೇ ನುಡಿದವಳು, ಪುಣ್ಯಕರ್ಮಿಯಾದ ಮಹರ್ಷಿಗಳಾದ ಕೃಷ್ಣದ್ವೈಪಾಯನರ ವರದಿಂದ ದಿವ್ಯಜ್ಞಾನಸಹಿತಳಾಗಿ ವಿವಿಧ ಘಟನೆಗಳನ್ನು ನೋಡಿ ತಿಳಿದಳು.

ದದರ್ಶ ಸಾ ಬುದ್ಧಿಮತೀ ದೂರಾದೇವ ಯಥಾಽಂತಿಕೇ ।
ರಣಾಜಿರಂ ತದ್ವೀರಾಣಾಮದ್ಭುತಂ ರೋಮಹರ್ಷಣಮ್ ॥೪॥

ವೀರರಿಗೆ ರೋಮಾಂಚಕಾರಿಯಾದ ಅದ್ಭುತವಾದ ರಣಾಂಗಣವನ್ನು ದೂರದಿಂದಲೇ ಹತ್ತಿರದಿಂದ ನೋಡುವಂತೆ ಜ್ಞಾನಿಯಾದ ಆಕೆಯು (ಗಾಂಧಾರಿಯು) ಕಂಡಳು.

ಅಸ್ಥಿಕೇಶಪರಿಸ್ತೀರ್ಣಂ ರುಧಿರೌಘಪರಿಪ್ಲುತಮ್ ।
ಶರೀರೈರ್ಬಹುಸಾಹಸ್ರೈರ್ವಿನಿಕೀರ್ಣಂ ಸಮಂತತಃ ॥೫॥

ಯೂನಾಂ ಗಜಾನಾಮಶ್ವಾನಾಮಾವೃತಂ ರುಧಿರಾಶನೈಃ ।
ಶರೀರೈರಶಿರಸ್ಕೈಶ್ಚ ವಿದೇಹೈಶ್ಚ ಶಿರೋಗಣೈಃ ॥೬॥

ಗಜಾಶ್ವನರವೀರಾಣಾಂ ನಿಃಸತ್ತ್ವೈರಭಿಸಂವೃತಮ್ ।
ಸೃಗಾಲವಲಗೋಮಾಯುಕಂಕಕಾಕನಿಷೇವಿತಮ್ ॥೭॥

ಮೋದನಂ ಪುರುಷಾದಾನಾಂ ರಕ್ಷಸಾಂ ಕುಲಸಂಕುಲಮ್ ।
ಅಶಿವಾಭಿಃ ಶಿವಾಭಿಶ್ಚ ಸೇವಿತಂ ಗೃಧ್ರನಾದಿತಮ್ ॥೮॥

ಅಸ್ಥಿ-ಕೇಶಗಳನ್ನು ಚೆಲ್ಲಾಡಿದ, ರಕ್ತದ ಕೋಡಿಯು ಹರಿದ, ಸುತ್ತಲೂ ಸಾವಿರಾರು ದೇಹಗಳಿಂದ ಹರಡಿರುವ, ಪ್ರಾಯದ ಆನೆಕುದುರೆಗಳ ರಕ್ತವನ್ನು ಕುಡಿಯುವ ಪ್ರಾಣಿಗಳಿಂದ ವ್ಯಾಪ್ತವಾದ, ಮುಂಡವಿಲ್ಲದ ರುಂಡಗಳು, ರುಂಡವಿಲ್ಲದ ಮುಂಡಗಳು ಇವುಗಳ ಸಮೂಹದಿಂದ ವ್ಯಾಪ್ತವಾದ, ಆನೆ-ಕುದುರೆ-ವೀರರ ಕಳೇಬರಗಳಿಂದ ವ್ಯಾಪ್ತವಾದ, ನರಿ ಗುಳ್ಳೇನರಿ ತೋಳ ರಣಹದ್ದು ಕಾಗೆಗಳು ನೆರದಿದ್ದ, ಮನುಷ್ಯಮಾಂಸವನ್ನು ತಿನ್ನುವ ರಾಕ್ಷಸರಿಗೆ ಸಂತಸವನ್ನು ನೀಡುವ, ಅಮಂಗಳಕರಗಳಾದ ನರಿಗಳು ನೆರೆದಿದ್ದ, ರಣಹದ್ದುಗಳ ಕೂಗಾಟದಿಂದ ಕೂಡಿದ್ದ ರಣರಂಗವನ್ನು ಗಾಂಧಾರಿಯು ಕಂಡಳು.

ತತೋ ವ್ಯಾಸಾಭ್ಯನುಜ್ಞಾತೋ ಧೃತರಾಷ್ಟ್ರೋ ಮಹೀಪತಿಃ ।
ಪಾಂಡುಪುತ್ರಾಶ್ಚ ತೇ ಸರ್ವೇ ಯುಧಿಷ್ಠಿರಪುರೋಗಮಾಃ ॥೯॥

ವಾಸುದೇವಂ ಪುರಸ್ಕೃತ್ಯ ಹತಬಂಧುಂ ಚ ಪಾರ್ಥಿವಮ್ ।
ಕುರುಸ್ತ್ರಿಯಃ ಸಮಾಸಾದ್ಯ ಜಗ್ಮುರಾಯೋಧನಂ ಪ್ರತಿ ॥೧೦॥

ಆನಂತರದಲ್ಲಿ ವ್ಯಾಸರಿಂದ ಅನುಮತನಾದ, ಭೂಮಿಯ ಒಡೆಯನಾದ ಧೃತರಾಷ್ಟ್ರನು, ಯುಧಿಷ್ಠಿರನೇ ಮುಂತಾದ ಆ ಎಲ್ಲ ಪಾಂಡುಪುತ್ರರು ಬಂಧುಗಳನ್ನು ಕಳೆದುಕೊಂಡ ರಾಜನನ್ನು, ಕೃಷ್ಣನನ್ನು ಮುಂದೆ ಮಾಡಿಕೊಂಡು, ಕುರುಸ್ತ್ರೀಯರು-ಇವರಿಂದ ಕೂಡಿಕೊಂಡು ರಣರಂಗವನ್ನು ಉದ್ದೇಶಿಸಿ ಹೊರಟರು.

ಸಮಾಸಾದ್ಯ ಕುರುಕ್ಷೇತ್ರಂ ತಾಃ ಸ್ತ್ರಿಯೋ ನಿಹತೇಶ್ವರಾಃ ।
ಅಪಶ್ಯಂತ ಹತಾಂಸ್ತತ್ರ ಪುತ್ರಾನ್ ಭ್ರಾತೄನ್ ಪ್ರಿಯಾನ್ ಸಖೀನ್ ॥

ಗಂಡಂದಿರನ್ನು ಕಳೆದುಕೊಂಡ ಆ ಸ್ತ್ರೀಯರು ಕುರುಕ್ಷೇತ್ರವನ್ನು ಸೇರಿ, ಮೃತರಾದ ಮಕ್ಕಳನ್ನು ಸಹೋದರರನ್ನು ಪ್ರಿಯರನ್ನು ಸ್ನೇಹಿತರನ್ನು ಅಲ್ಲಿ ಕಂಡರು.

ಕ್ರವ್ಯಾದೈರ್ಭಕ್ಷ್ಯಮಾಣಾಂಶ್ಚ ಕಂಕಗೋಮಾಯುವಾಯಸೈಃ ।
ಭೂತೈಃ ಪಿಶಾಚೈ ರಕ್ಷೋಭಿರ್ವಿವಿಧೈಶ್ಚ ನಿಶಾಚರೈಃ ॥೧೨॥

ರುದ್ರಾಕ್ರೀಡನಿಭಂ ದೃಷ್ಟ್ವಾ ತದಾ ವಿಶಸನಂ ಸ್ತ್ರಿಯಃ ।
ಕುರರ್ಯ ಇವ ಶೋಕಾರ್ತಾ ವಿಕ್ರೋಶಂತ್ಯೋ ನಿಪೇತಿರೇ ॥೧೩॥

ಮಾಂಸಾಹಾರಿಗಳಾದ ಕಂಕಪಕ್ಷಿಗಳು, ನರಿಗಳು ಕಾಗೆಗಳು ಭೂತಗಳು ಪಿಶಾಚಗಳು ರಾಕ್ಷಸರು ಬೇರೇ ಬೇರೆ ರಾತ್ರಿಚರರು (ಮೃತವ್ಯಕ್ತಿಯ ದೇಹದಿಂದ ಮಾಂಸವನ್ನು ಭಕ್ಷಿಸುವುದನ್ನು) ರುದ್ರದೇವನ ಕ್ರೀಡಾಸ್ಥಾನವಾದ ಶ್ಮಶಾನದಂತಿರುವ ರಣರಂಗವನ್ನು ಕಂಡ ಸ್ತ್ರೀಯರು, ಹೆಣ್ಣು ಕುರರ ಪಕ್ಷಿಗಳಂತೆ ದುಃಖಿತರಾಗಿ ರೋದಿಸುತ್ತಾ ನೆಲಕ್ಕೆ ಉರುಳಿದರು.

ಅದೃಷ್ಟಪೂರ್ವಂ ಪಶ್ಯಂತ್ಯೋ ದುಃಖಾರ್ತಾ ಭರತಸ್ತ್ರಿಯಃ ।
ಶರೀರೇಷು ಸ್ಖಲಂತ್ಯಶ್ಚ ನ್ಯಪತಂಶ್ಚಾಪರಾ ಭುವಿ ॥೧೪॥

ಹಿಂದೆ ಕಾಣದಿದ್ದನ್ನು ಕಂಡ ಭರತಕುಲೋತ್ಪನ್ನ. ಸ್ತ್ರೀಯರು ದುಃಖಿತರಾಗಿ ಎಡವುತ್ತಾ ಶರೀರಗಳ ಮೇಲೆ (ಹೇಣಗಳ ಮೇಲೆ) ಬಿದ್ದರು, ಮತ್ತೆ ಕೆಲವರು ನೆಲದ ಮೇಲೆ ಬಿದ್ದರು.

ಶ್ರಾಂತಾನಾಂ ಚಾಪ್ಯನಾಥಾನಾಂ ಕ್ರಂದಂತೀನಾಂ ಭೃಶಂ ತಥಾ ।
ಪಾಂಚಾಲಕುರುಯೋಷಾಣಾಂ ಕೃಪಣಂ ತದಭೂನ್ಮಹತ್ ॥೧೫॥

ಆಯಾಸಗೊಂಡ, ಪತಿಗಳನ್ನು ಕಳೆದುಕೊಂಡ ಕುರು-ಪಾಂಚಾಲದ ಸ್ತ್ರೀಯರು ಅತ್ಯಂತವಾಗಿ ರೋದಿಸುತ್ತಿರಲು ಅದು ತುಂಬಾ ಕರುಣಾಜನಕವಾಗಿದ್ದಿತು.

ದುಃಖಾಭಿಹತಚಿತ್ತಾಭಿಃ ಸಮಂತಾದನುನಾದಿತಮ್ ।
ದೃಷ್ಟ್ವಾ ऽऽಯೋಧನಮತ್ಯುಗ್ರಂ ಧರ್ಮಜ್ಞಾ ಸುಬಲಾತ್ಮಜಾ ॥೧೬॥

ತತಃ ಸಾ ಪುಂಡರೀಕಾಕ್ಷಮಾಮಂತ್ರ್ಯ ಪುರುಷೋತ್ತಮಮ್ ।
ಕುರೂಣಾಂ ವೈಶಸಂ ದೃಷ್ಟ್ವಾ ದುಃಖಾದ್ ವಚನಮಬ್ರವೀತ್ ॥೧೭॥

ಧರ್ಮಜ್ಞಳಾದ ಸುಬಲನ ಪುತ್ರಿಯು (ಗಾಂಧಾರಿಯು) ಸುತ್ತಲೂ ದುಃಖದಿಂದ ಹೈರಾಣಗೊಂಡ ಮನದ ಸ್ತ್ರೀಯರು ರೋದಿಸುತ್ತಿರುವುದನ್ನು, ಅತ್ಯುಗ್ರವಾದ ರಣರಂಗವನ್ನು ನೋಡಿ, ಕುರುಗಳ ದುರವಸ್ಥೆಯನ್ನು ಕಂಡು, ಅನಂತರದಲ್ಲಿ ಪುರುಷೋತ್ತಮನಾದ ತಾವರೆಯ ಪತ್ರದಂತೆ ಕಣ್ಣುಗಳನ್ನು ಹೊಂದಿರುವವನನ್ನು (ಕೃಷ್ಣನನ್ನು) ಕರೆದು ಈ ರೀತಿಯಾಗಿ ಹೇಳಿದಳು.

ಗಾಂಧಾರೀ

ಪಶ್ಯೈತಾಃ ಪುಂಡರೀಕಾಕ್ಷ ಸ್ನುಷಾ ಮೇ ನಿಹತೇಶ್ವರಾಃ ।
ಪ್ರಕೀರ್ಣಕೇಶ್ಯಃ ಕ್ರೋಶಂತ್ಯಃ ಕುರರ್ಯ ಇವ ಮಾಧವ ॥೧೮॥

ಗಾಂಧಾರಿ– ತಾವರೆಯ ಪತ್ರದಂತೆ ಕಣ್ಣುಗಳನ್ನು ಹೊಂದಿರುವ ಮಾಧವನೆ! ಗಂಡಂದಿರನ್ನು ಕಳೆದುಕೊಂಡ ತಲೆಕೂದಲನ್ನು ಹರಡಿಕೊಂಡಿರುವ ಹೆಣ್ಣು ಕುರರ ಪಕ್ಷಿಯಂತೆ ರೋದಿಸುತ್ತಿರುವ ನನ್ನ ಈ ಸೊಸೆಯಂದಿರನ್ನು ನೋಡು,

ಅಮೂಸ್ತ್ವಭಿಸಮಾಗಮ್ಯ ಸ್ಮರಂತ್ಯೋ ಭರತರ್ಷಭಾನ್ ।
ಪೃಥಗೇವಾನುಪದ್ಯಂತೇ ಪುತ್ರಾನ್ ಭ್ರಾತೄನ್ ಪಿತೄನ್ ಪತೀನ್ ॥೧೯॥

ಈ ಹೆಣ್ಣುಗಳು ಇಲ್ಲಿಗೆ ಒಟ್ಟಿಗೆ ಆಗಮಿಸಿ, (ತಮ್ಮ) ಪುತ್ರರ ಸಹೋದರರ ಪಿತೃಗಳ ಗಂಡಂದಿರ ಆ ಭರತಶ್ರೇಷ್ಠರ ಗುಣಗಳನ್ನು ಸ್ಮರಿಸುತ್ತಾ, ಅವರ ಬಳಿ ಸಾಗಲು, ಬೇರೆ ಬೇರೆ ದಿಕ್ಕಿನೆಡೆಗೆ ನುಗ್ಗುತ್ತಿರುವರು. (ತಮ್ಮ ಅನುಬಂಧಿಗಳ ಶವವನ್ನು ಅರಸುತ್ತಾ ಅತ್ತ ಇತ್ತ ತಿರುಗಾಡುತ್ತಿರುವರು ಎಂದು ಭಾವ.)

ವೀರಸೂಭಿರ್ಮಹಾಬಾಹೋ ಹತಪುತ್ರಾಭಿರಾವೃತಮ್ ।
ಕ್ವಚಿಚ್ಚ ವೀರಪತ್ನೀಭಿರ್ಹತವೀರಾಭಿರಾವೃತಮ್ ॥೨೦॥

ನೀಳಬಾಹುವೆ! ಈ ರಣರಂಗವು ಮಕ್ಕಳನ್ನು ಕಳೆದುಕೊಂಡ ಕೆಲವು ವೀರಮಾತೆಯರಿಂದ, ಶೂರಗಂಡಂದಿರನ್ನು ಕಳೆದುಕೊಂಡ ಹಲವು ವೀರಪತ್ನಿಯರಿಂದ ತುಂಬಿರುವುದು.

ಶೋಭಿತಂ ಪುರುಷವ್ಯಾಘ್ರೈರ್ಭೀಷ್ಮಕರ್ಣಾಭಿಮನ್ಯುಭಿಃ ।
ದ್ರೋಣದ್ರುಪದಶಲ್ಯೈಶ್ಚ ಜ್ವಲದ್ಭಿರಿವ ಪಾವಕೈಃ ॥೨೧॥

ಅಗ್ನಿಯಂತೆ ಪ್ರಜ್ವಲಿಸುವ ಪುರುಷಶ್ರೇಷ್ಠರಾದ ಭೀಷ್ಮ ಕರ್ಣ ಅಭಿಮನ್ಯು ದ್ರೋಣ ದ್ರುಪದ ಶಲ್ಯ ಇವರೆಲ್ಲರಿಂದ ರಣರಂಗವು ಶೋಭಿತವಾಗಿದೆ.

ಕಾಂಚನೈಃ ಕವಚೈರ್ನಿಷ್ಕೈರ್ಮಣಿಭಿಶ್ಚ ಮಹಾಧನೈಃ ।
ಅದ್ಭುತೈರ್ಹಸ್ತಕೇಯೂರೈಃ ಸ್ರಗ್ಭಿಶ್ಚ ಸಮಲಂಕೃತಮ್ ॥೨೨॥

ಚಿನ್ನದ ಕವಚಗಳಿಂದ ಅತ್ಯಮೂಲ್ಯ ನಿಷ್ಕಮಣಿಗಳಿಂದ ಅದ್ಭುತವಾದ ಹಸ್ತಾಭರಣವಾದ ಕೇಯೂರಗಳಿಂದ ಹಾರಗಳಿಂದ (ಈ ರಣರಂಗವು) ಅಲಂಕೃತವಾಗಿದೆ.

ವೀರಬಾಹುವಿಸೃಷ್ಟಾಭಿಃ ಶಕ್ತಿಭಿಃ ಪರಿಘೈರಪಿ ।
ಖಡ್ಗೈಶ್ಚ ವಿಮಲೈಸ್ತೀಕ್ಷ್ಣೈಃ ಸಶರೈಶ್ಚ ಶರಾಸನೈಃ ॥೨೩॥

ಶೂರರ ಕೈಗಳಿಂದ ತ್ಯಕ್ತವಾದ ಶಕ್ತ್ಯಾಯುಧಗಳಿಂದ ಪರಿಘಗಳಿಂದ ಹರಿತವಾದ ಶುದ್ಧವಾದ ಕತ್ತಿಗಳಿಂದ ಬಾಣಗಳಿಂದ ಕೂಡಿರುವ ಬಿಲ್ಲುಗಳಿಂದ (ಈ ರಣರಂಗವು) ಅಲಂಕೃತವಾಗಿದೆ.

ಕ್ರವ್ಯಾದಸಂಘೈರ್ಮುದಿತೈಃ ತಿಷ್ಠದ್ಭಿಃ ಸಹಿತೈಃ ಕ್ವಚಿತ್ ।
ಕ್ವಚಿದಾಕ್ರೀಡಮಾನೈಶ್ಚ ಶಯಾನೈಶ್ಚಾಪರೈಃ ಕ್ವಚಿತ್ ॥೨೪॥

ಸಂತಸದಿಂದಿರುವ ಮಾಂಸಾಹಾರಿಗಳಲ್ಲಿ ಕೆಲವು ನಿಂತಿವೆ, ಕೆಲವು ಒಟ್ಟಾಗಿವೆ, ಕೆಲವು ಕ್ರೀಡಿಸುತ್ತಿವೆ ಮತ್ತೆ ಕೆಲವು ಮಲಗಿವೆ.

ಏತದೇವಂವಿಧಂ ವೀರ ಸಂಪಶ್ಯಾಯೋಧನಂ ಮಹತ್ ।
ತ್ವಯಾ ತು ಸಾಧಿತಂ ಕರ್ಮ ಪುಷ್ಕರಾಕ್ಷ ಮಹಾದ್ಯುತೇ ॥೨೫॥

ಹೆಬ್ಬೆಳಕಿನವನೆ ಪುಷ್ಕರಾಕ್ಷನೆ ವೀರನೆ! ಈ ಎಲ್ಲ ರೀತಿಯಲ್ಲಿನ ರಣರಂಗವನ್ನು ನೋಡು, ನೀನೇ ಸಾಧಿಸಿದ ಘನಕಾರ್ಯವಿದು.

ಪಶ್ಯಮಾನಾ ಚ ದಹ್ಯಾಮಿ ಶೋಕೇನಾಹಂ ಜನಾರ್ದನ ॥೨೬॥

ಜನಾರ್ದನನೆ! (ಈ ದೃಶ್ಯವನ್ನು) ನೋಡುತ್ತಿರುವ ನಾನು ದುಃಖದಿಂದ ಬೆಂದಿರುವೆ.

ಪಾಂಚಾಲಾನಾಂ ಕುರೂಣಾಂ ಚ ವಿನಾಶಂ ಮಧುಸೂದನ ।
ಪಂಚಾನಾಮಿವ ಭೂತಾನಾಮಹಂ ವಧಮಚಿಂತಯಮ್ ॥೨೭॥

ಮಧುಸೂದನ! ಪಾಂಚಾಲರ ಮತ್ತು ಕುರುಗಳ ಸಾವನ್ನು ಪಂಚಭೂತಾತ್ಮಕವಾದ ಪ್ರಪಂಚದ ವಿನಾಶವೆಂದೇ ಭಾವಿಸುವೆ.

ತಾನ್ ಸುಪರ್ಣಾಶ್ಚ ಗೃಧ್ರಾಶ್ಚ ವಿಕರ್ಷಂತ್ಯಸೃಗುಕ್ಷಿತಾನ್ ।
ನಿಗೃಹ್ಯ ಕವಚಾನುಗ್ರಾನ್ ಭಕ್ಷಯಂತಿ ಸಹಸ್ರಶಃ ॥೨೮॥

ಸಾವಿರಾರು ಗರುಡಪಕ್ಷಿಗಳು ಹದ್ದುಗಳು ರಕ್ತದಿಂದ ತೋಯ್ದುಹೋದ ಗಟ್ಟಿಯಾದ ಕವಚಗಳನ್ನು ಬದಿಗೆ ಸರಿಸಿ, ಅವರುಗಳನ್ನು (ಮೃತರಾದ ಪಾಂಚಾಲರ-ಕೌರವರ ದೇಹಗಳನ್ನು ಕಾಲುಗಳಿಂದ) ಹಿಡಿದುಕೊಂಡು ತಿನ್ನುತ್ತಿವೆ.

ಜಯದ್ರಥಸ್ಯ ಕರ್ಣಸ್ಯ ತಥೈವ ದ್ರೋಣಭೀಷ್ಮಯೋಃ ।
ಅಭಿಮನ್ಯೋರ್ವಿನಾಶಂ ಚ ಕಶ್ಚಿಂತಯಿತುಮರ್ಹತಿ ॥೨೯॥

ಜಯದ್ರಥನ ಕರ್ಣನ ಹಾಗೆಯೇ ದ್ರೋಣ-ಭೀಷ್ಮರ ಅಭಿಮನ್ಯುವಿನ ಸಾವನ್ನು ಯಾವನು ತಾನೇ ಊಹಿಸಿಯಾನು?

ಅವಧ್ಯಕಲ್ಪಾನ್ ನಿಹತಾನ್ ಗತಸತ್ವಾನಚೇತಸಃ ।
ಗೃಧ್ರಕಂಕವಲಶ್ಯೇನಶ್ವಸೃಗಾಲಸಮಾವೃತಾನ್ ॥೩೦॥

ಅಮರ್ಷವಶಮಾಪನ್ನಾನ್ ದುರ್ಯೋಧನವಶೇ ಸ್ಥಿತಾನ್ ।
ಪಶ್ಯೇಮಾನ್ ಪುರುಷವ್ಯಾಘ್ರಾನ್ ಸಂಶಾಂತಾನಿವ ಪಾವಕಾನ್ ॥೩೧॥

ದುರ್ಯೋಧನನ ಅಧೀನದಲ್ಲಿದ್ದ ಕೋಪಕ್ಕೆ ಅಧೀನರಾಗಿದ್ದ ಸಾವಿಲ್ಲದವರಿಗೆ ಸಮರಾದವರು (ಆದರೆ) ಮರಣವನ್ನು ಹೊಂದಿರುವ ಚೈತನ್ಯವಿಲ್ಲದ ಬಲಹೀನರಾದ ಹದ್ದು-ಕಂಕಪಕ್ಷಿ-ಗಿಡುಗ-ನರಿಗಳಿಂದ ಆವೃತರಾಗಿರುವ, ಶಾಂತವಾದ ಅಗ್ನಿಯಂತೆ ಇರುವ ಈ ಪುರುಷಶ್ರೇಷ್ಠರನ್ನು ನೋಡು.

ಶಯನಾನ್ಯುಚಿತಾಃ ಸರ್ವೇ ಮೃದೂನಿ ವಿಮಲಾನಿ ಚ ।
ವಿಪನಾಸ್ತೇऽದ್ಯ ವಸುಧಾಂ ವಿವೃತಾಮಧಿಶೇರತೇ ॥೩೨॥

ಶುಭ್ರವಾದ ಮೆತ್ತನೆಯ ಹಾಸಿಗೆಯಲ್ಲಿ ಪವಡಿಸಲು ಯೋಗ್ಯರಾದ ಎಲ್ಲರೂ ಬದಲಾದ ಈ ಸಂದರ್ಭದಲ್ಲಿ ಬಯಲು ನೆಲದಲ್ಲಿ ಬಿದ್ದಿರುವರು.

ವಂದಿಭಿಶ್ಚಾಧಿಕಂ ಕಾಲೇ ಸ್ತುವದ್ಭಿರಭಿನಂದಿತಾಃ ।
ಶಿವಾನಾಮಶಿವಾ ಘೋರಾಃ ಶೃಣ್ವಂತಿ ವಿವಿಧಾ ಗಿರಃ ॥೩೩॥

ಬದುಕಿದ ಹೆಚ್ಚಿನ ಸಂದರ್ಭದಲ್ಲಿ ಸ್ತುತಿಪಾಠಕರಿಂದ ಸ್ತುತಿಗಳಿಂದ ಸ್ತುತ್ಯರಾದ ಇವರು ಈಗ ಅಮಂಗಳಕರಗಳಾದ ಘೋರವಾದ ನರಿಗಳ ವಿವಿಧರೀತಿಯ ಮಾತನ್ನು (ಕೂಗನ್ನು) ಕೇಳುತ್ತಿರುವರು.

ಯೇ ಪುರಾ ಶೇರತೇ ವೀರಾಃ ಶಯನೇಷು ಯಶಸ್ವಿನಃ ।
ಚಂದನಾಗರುದಿಗ್ಧಾಂಗಾಸ್ತೇऽದ್ಯ ಪಾಂಸುಷು ಶೇರತೇ ॥೩೪॥

ಯಾರು ಚಂದನ-ಅಗರುಗಳಿಂದ ಲಿಪ್ತವಾದ ಅಂಗಗಳುಳ್ಳ ಕೀರ್ತಿವಂತರಾದ ವೀರರು ಹಿಂದೆ ಹಾಸಿಗೆಗಳಲ್ಲಿ ಪವಡಿಸುತ್ತಿದ್ದರೋ ಅವರು ಈಗ ಧೂಳಿನಲ್ಲಿ ಮಲಗಿರುವರು.

ತೇಷಾಮಾಭರಣಾನ್ಯೇತೇ ಗೃಧ್ರಗೋಮಾಯುವಾಯಸಾಃ ।
ಆಕ್ಷಿಪಂತಿ ಶಿವಾ ದೃಷ್ಟ್ವಾ ವಿನದಂತಿ ಪುನಃ ಪುನಃ ॥೩೫॥

ಅವರು ತೊಟ್ಟಿರುವ ಆಭರಣಗಳನ್ನು ಈ ಹದ್ದು-ನರಿ-ಕಾಗೆಗಳು ಎಳೆದಾಡುತ್ತಿವೆ, ನರಿಗಳನ್ನು ಕಂಡು ಮತ್ತೆ ಮತ್ತೆ ಹರ್ಷಿಸುತ್ತಿವೆ.

ಬಾಣಾನ್ ವಿಶಿತಾನ್ ಪೀತಾನ್ ನಿಸ್ತ್ರಿಂಶಾನ್ ವಿಮಲಾ ಗದಾಃ ।
ಯುದ್ಧಾಭಿಪಾತಿನಃ ಶೂರಾ ಜೀವಂತ ಇವ ಬಿಭ್ರತಿ ॥೩೬॥

ಚೂಪಾದ ಬಾಣಗಳನ್ನು, ಹಳದೀಬಣ್ಣದ ಕತ್ತಿಗಳನ್ನು ನಿರ್ಮಲವಾದ ಗದೆಗಳನ್ನು ಧರಿಸಿರುವ ಯುದ್ಧಭೂಮಿಯಲ್ಲಿ ಮಲಗಿರುವ ಈ ಶೂರರು ಜೀವಂತವಾಗಿರುವರೋ ಎಂಬಂತೆ ತೋರುತ್ತಿರುವರು.

ಅಪೀತವರ್ಣಾ ಬಹವಃ ಕ್ರವ್ಯಾದೈರಭಿಘಾತಿತಾಃ ।
ಋಷಭಪ್ರತಿರೂಪಾಕ್ಷಾಃ ಶೇರತೇ ಚ ಸಹಸ್ರಶಃ ॥೩೭॥

ಹೊಂಬಣ್ಣದ ಈ ಬಹುಮಂದಿಗಳು, ಮಾಂಸಾಹಾರಿ ಪಕ್ಷಿಗಳಿಂದ ಘಾಸಿಗೊಳಗಾಗಿ ವೃಷಭದ ಪ್ರತಿರೂಪದಂತೆ ಸಾವಿರಾರು ಮಂದಿಗಳಾಗಿ ತೋರುತ್ತಿರುವರು.

ಅಪರೇ ಪುನರಾಲಿಂಗ್ಯ ಗದಾಃ ಪರಿಘಬಾಹವಃ ।
ಶೇರತೇಽಭಿಮುಖಾಃ ಶೂರಾ ದಯಿತಾ ಇವ ಯೋಷಿತಃ ॥೩೮॥

ಪರಿಘವನ್ನು ಕೈಯಲ್ಲಿ ಹಿಡಿದಿರುವ ಮತ್ತೆ ಕೆಲವು ಶೂರರು ಗದೆಗಳನ್ನು ಆಲಿಂಗಿಸಿಕೊಂಡು ಮೇಲ್ಮುಖರಾಗಿ ಮಲಗಿರುವರು, ಪ್ರೀತಿಪಾತ್ರಳಾದ ಪತ್ನಿಯನ್ನು ಆಲಿಂಗಿಸಿಕೊಂಡಿರುವಂತೆ ತೋರುವರು.

ಬಿಭ್ರತಃ ಕವಚಾನ್ಯನ್ಯೇ ವಿಮಲಾನ್ಯಾಯುಧಾನಿ ಚ ।
ನ ಧರ್ಷಯಂತಿ ಕ್ರವ್ಯಾದಾ ಜೀವಂತೀತಿ ಜನಾರ್ದನ ॥೩೯॥

ಜನಾರ್ದನನೆ! ಕೆಲವರು ಕವಚಗಳನ್ನು ಧರಿಸಿರುವರು, ನಿರ್ಮಲವಾದ ಆಯುಧಗಳನ್ನು ಮತ್ತೆ ಕೆಲವರು ಧರಿಸಿರುವರು, ಇನ್ನೂ ಬದುಕಿರುವರು ಎಂದು ಭಾವಿಸಿದ (ಅವರ ದೇಹಗಳನ್ನು) ಮಾಂಸಾಹಾರಿ ಪಕ್ಷಿಗಳು ಎಳೆದಾಡುತ್ತಿಲ್ಲ.

ಕ್ರವ್ಯಾದೈಃ ಕೃಷ್ಯಮಾಣಾನಾಮಪರೇಷಾಂ ಮಹಾತ್ಮನಾಮ್ ।
ಶಾತಕುಂಭಸ್ರಜಶ್ಚಿತ್ರಾ ವಿಪ್ರಕೀರ್ಣಾಃ ಸಹಸ್ರಶಃ ॥೪೦॥

ಮಾಂಸಾಹಾರಿ ಪಕ್ಷಿಗಳಿಂದ ಕಿತ್ತಾಡಿದ ಮತ್ತೆ ಕೆಲವು ಮಹಾತ್ಮರ ಚಿನ್ನದ ಮಾಲೆಗಳು ವಿಚಿತ್ರವಾದ ಸಾವಿರಾರು ಮಾಲೆಗಳು ಚೆಲ್ಲಾಡಿಹೋಗಿರುವವು.

ಏತೇ ಗೋಮಾಯವೋಽಭೀತಾ ನಿಹತಾನಾಂ ಯಶಸ್ವಿನಾಮ್ ।
ಕಂಠಾಂತರಗತಾನ್ ದಿವ್ಯಾನ್ ಆಕ್ಷಿಪಂತಿ ಮಹಾಮಣೀನ್ ॥೪೧॥

ಹೆದರಿಕೆಯೇ ಇಲ್ಲದ ಈ ನರಿಗಳು ಮೃತರಾದ ಈ ಮಹಾತ್ಮರ ಕತ್ತಿನಲ್ಲಿರುವ ಅಮೂಲ್ಯವಾದ ಮಹಾರತ್ನಗಳನ್ನು ಕಿತ್ತೆಸೆಯುತ್ತಿವೆ.

ಸರ್ವೇಷ್ವಪರರಾತ್ರೇಷು ಯಾನವಂದಂತ ವಂದಿನಃ ।
ಸ್ತುತಿಭಿಶ್ಚ ಪರಾರ್ಘ್ಯಾಭಿರುಪಚಾರೈಶ್ಚ ಶಿಕ್ಷಿತಾಃ ॥೪೨॥

ತಾನದ್ಯ ಪರಿದೇವಂತಿ ದುಃಖಿತಾಃ ಪರಮಾಂಗನಾಃ ।
ಕೃಪಣಾ ವೃಷ್ಣಿಶಾರ್ದೂಲ ದುಃಖಶೋಕಾನ್ವಿತಾ ಭೃಶಮ್ ॥೪೩॥

ವೃಷ್ಣಿಕುಲದ ಹಿರಿಯನೆ! ವಿದ್ಯಾವಂತರಾದ ವಂದಿಮಾಗದರು ಮಧ್ಯರಾತ್ರಿಯಲ್ಲೂ ಸಹ ಯಾರನ್ನು ಉತ್ತಮವಾದ ಸ್ತುತಿಗಳಿಂದ ಉಪಚಾರದ ಮಾತುಗಳಿಂದ ನಮಿಸುತ್ತಿದ್ದರೋ, ಅವರನ್ನು ಉದ್ದೇಶಿಸಿ ಈಗ ಕಾರ್ಪಣ್ಯದಿಂದ ದುಃಖಶೋಕಗಳಿಂದ ಕೂಡಿದವರಾದ ಅವರ ಸ್ತ್ರೀಯರು ದುಃಖಿಸುತ್ತಿದ್ದಾರೆ.

ನೀಲೋತ್ಪಲವನಾನೀವ ವಿಭಾಂತಿ ರುಚಿರಾಣಿ ವೈ ।
ಮುಖಾನಿ ಪರಮಸ್ತ್ರೀಣಾಂ ಪರಿಶುಷ್ಕಾಣಿ ಕೇಶವ ॥೪೪॥

ಕೇಶವನೆ! ಈ ಉತ್ತಮಸ್ತ್ರೀಯರ ಬಾಡಿದ ಮುಖಗಳು ಸುಂದರವಾದ ನೈದಿಲೆಯ ವನದಂತೆ ತೋರುತ್ತಿವೆ (ಹತ್ತಾರು ಸುಂದರ ಸ್ತ್ರೀಯರ ಮುಖದಿಂದ ಮಿಲಿತವಾದ ಈ ರಣರಂಗವು ನೈದಿಲೆಯ ತೋಟದಂತೆ ಭಾಸವಾಗುತ್ತಿದೆ. ಉಮ್ಮಳಿಸಿರುವ ದುಃಖದ ಭರದಲ್ಲಿ ಮಾತಿನ ಹಿಡಿತವು ತಪ್ಪಿದೆ ಎಂದು ತಿಳಿಸುತ್ತಿರುವರು ಎಂದು ಭಾವ.)

ರುದಿತ್ವಾ ವಿರತಾ ಹ್ಯೇತಾ ಧ್ಯಾಯಂತಃ ಸಪರಿಕ್ಲಮಾಃ ।
ಕುರುಸ್ತ್ರಿಯೋಽಭಿಗಚ್ಛಂತಿ ತೇನ ತೇನೈವ ದುಃಖಿತಾಃ ॥೪೫॥

ರೋದನದಿಂದ ವಿರತರಾದ ಈ ಕುರುವನಿತೆಯರು ಆಯಾಸಗೊಂಡವರಾಗಿ, (ತಮ್ಮ ಅನುಬಂಧಿಗಳನ್ನು) ನೆನೆಯುತ್ತಾ ಸುತ್ತುತ್ತಿರುವರು, (ಮತ್ತೆ ಇನ್ನೊಬ್ಬ ಅನುಬಂಧಿಯ ದೇಹವು ಕಂಡೊಡನೆ) ಮತ್ತೆ ಅದೇ ರೀತಿಯಿಂದ ದುಃಖದಿಂದ ಬಳಲುವರು.

ಏತಾನ್ಯಾದಿತ್ಯವರ್ಣಾನಿ ಪುಂಡರೀಕನಿಭಾನಿ ಚ ।
ಪಶ್ಯ ರೋದನತಾಮ್ರಾಣಿ ವದನಾನೀಹ ಯೋಷಿತಾಮ್ ॥೪೬॥

ಕಮಲದಂತೆ ತೋರುತ್ತಿದ್ದ ಸೂರ್ಯನ ಬಣ್ಣವನ್ನು ಹೊಂದಿದ್ದ ಸ್ತ್ರೀಯರ ಮುಖಗಳು ರೋದಿಸುವುದರಿಂದ ಕೆಂಪುಬಣ್ಣಕ್ಕೆ ತಿರುಗಿರುವುದನ್ನು ಕಾಣುವವನಾಗು.

ಶ್ಯಾಮಾನಾಂ ವರವರ್ಣಾನಾಂ ಗೌರೀಣಾಮೇಕವಾಸಸಾಮ್ ।
ದುರ್ಯೋಧನವರಸ್ತ್ರೀಣಾಂ ಪಶ್ಯ ವೃಂದಾನಿ ಕೇಶವ ॥೪೭॥

ಕೇಶವ! ಸುಂದರಿಯರಾದ ಶ್ರೇಷ್ಠ ಮೈಬಣ್ಣವನ್ನು ಹೊಂದಿರುವ ಬಿಳಿಯ ವರ್ಣದಿಂದಿರುವ ದುರ್ಯೋಧನನ ಸ್ತ್ರೀಯರ ಗುಂಪು ಒಂಟಿವಸ್ತ್ರದಿಂದ ಕೂಡಿರುವುದನ್ನು ನೋಡು.

ಆಸಾಮಪರಿಪೂರ್ಣಾರ್ಥಂ ನಿಶಮ್ಯ ಪರಿದೇವಿತಮ್ ।
ಇತರೇತರಸಂಕ್ರಂದಾತ್ ನ ವಿಜಾನಂತಿ ಯೋಷಿತಃ ॥೪೮॥

ಓರ್ವ ಸ್ತ್ರೀಯ ಪೂರ್ಣವಾಗದ ರೋದನದ ಮಧ್ಯದಲ್ಲಿ ಮತ್ತೋರ್ವಳ ರೋದನದಿಂದ ಸಂಕ್ರಾಂತವಾದ್ದರಿಂದ (ಏನೆಂದು ರೋದಿಸುತ್ತಿರುವರು ಎನ್ನುವುದು) ತಿಳಿಯದಾಗಿದೆ.

ಏತಾ ದೀರ್ಘಮಿವೋಚ್ಛ್ವಸ್ಯ ನಿಃಶ್ವಸ್ಯ ಚ ವಿಲಪ್ಯ ಚ ।
ವಿಸ್ಪಂದಮಾನಾ ದುಃಖೇನ ಜೀವಿತಂ ನಾಜಹುಃ ಸ್ತ್ರಿಯಃ ॥೪೯॥

ಇವರು ದೀರ್ಘವಾಗಿ ಉಸಿರನ್ನು ಬಿಡುತ್ತಾ ನಿಟ್ಟುಸಿರನ್ನು ಬಿಡುತ್ತಾ ರೋದಿಸುತ್ತಾ ದುಃಖದಿಂದ ಹೊರಳಾಡುತ್ತಿರುವರು. ಆದರೆ ಈ ಮಹಿಳೆಯರು ಜೀವವನ್ನು ಪರಿತ್ಯಜಿಸಿಲ್ಲ (ಶವರಾಶಿಯ ಮಧ್ಯದಲ್ಲಿರುವ ಈ ಸ್ತ್ರೀಯರು ದುಃಖದಿಂದ

ಹೊರಳಾಡುತ್ತಿರುವುದರಿಂದ ಇವರು ಮೃತರಾಗಿಲ್ಲ ಎಂದು ಊಹಿಸಬಹುದು ಎಂದು ಭಾವ.)

ಬಹ್ವದೃಷ್ಟ್ವಾ ಶರೀರಾಣಿ ಕ್ರೋಶಂತಿ ವಿಲಪಂತಿ ಚ ।
ಪಾಣಿಭಿಶ್ಚಾಪರಾ ಘ್ನಂತಿ ಶಿರಾಂಸಿ ಮೃದುಪಾಣಯಃ ॥೫೦॥

ಕೋಮಲವಾದ ಕರಗಳನ್ನು ಹೊಂದಿರುವ ಈ ಸ್ತ್ರೀಯರು (ವಿಶಾಲವಾದ ರಣರಂಗದಲ್ಲಿ ಲಕ್ಷಾವಧಿ ಶರೀರಗಳ ಮಧ್ಯದಲ್ಲಿ ತಮ್ಮ ಅನುಬಂಧಿಗಳಲ್ಲಿ) ಅನೇಕರ ಶರೀರಗಳನ್ನು ಕಾಣದೆ, ಅರಚುತ್ತಾ ರೋದಿಸುತ್ತಾ (ತಮ್ಮ) ತಲೆಗಳನ್ನು (ತಮ್ಮ) ಕೈಗಳಿಂದ ಚಚ್ಚಿಕೊಳ್ಳುತ್ತಿರುವರು.

ಶಿರೋಭಿಃ ಪತಿತೈರ್ಹಸ್ತೈಃ ಸರ್ವಾಂಗೈಃ ಖಂಡಶಃ ಕೃತೈಃ ।
ಇತರೇತರಸಂಕ್ರಾಂತೈರಾಸ್ತೀರ್ಣಾ ಭಾತಿ ಮೇದಿನೀ ॥೫೧॥

ನೆಲದಲ್ಲಿ ಹರಡಿರುವ ತಲೆಗಳಿಂದ, ಕರಗಳಿಂದ, ತುಂಡಾಗಿರುವ ನಾನಾಬಗೆಯ ಅಂಗಗಳಿಂದ, ಯಾವುದೋ ಶರೀರ, ಮತ್ತಾವುದೋ ತಲೆ, ಯಾವುದೋ ತಲೆ ಮತ್ತಾವುದೋ ದೇಹ ಇಂತಹ ನಾನಾದೇಹಗಳಿಂದ ತುಂಬಿರುವ (ರಣ) ಭೂಮಿಯು ಭಾಸವಾಗುತ್ತಿದೆ.

ವಿಶಿರಸ್ಕಾನ್ ಅಧಃಕಾಯಾನ್ ದೃಷ್ಟ್ವಾ ಘೋರಾನನಿಂದಿತಾನ್ ।
ಮುಹ್ಯಂತ್ಯನುಚಿತಾ ನಾರ್ಯೋ ವಿದೇಹಾನಿ ಶಿರಾಂಸಿ ಚ ॥೫೨॥

ತಲೆಯಿಲ್ಲದ ಕೆಳಭಾಗದ ಶರೀರಗಳನ್ನು, ಶರೀರವಿಲ್ಲದ ತಲೆಗಳನ್ನು (ಇಂತಹ) ಭಯಂಕರವಾದವುಗಳನ್ನು ಕಂಡು ಅನಗತ್ಯವಾಗಿ ಸ್ತ್ರೀಯರು ಭಯಗ್ರಸ್ಥರಾಗುತ್ತಿರುವರು.

ಶಿರಃ ಕಾಯೇನ ಸಂಧಾಯ ವೀಕ್ಷಮಾಣಾ ವಿಚೇತಸಃ ॥೫೩॥

ಅಪಶ್ಯಂತ್ಯೋಽಪರಂ ತತ್ರ ನೇದಮಸ್ಯೇತಿ ದುಃಖಿತಾಃ ॥೫೪॥

ಬಾಹೂರುಚರಣಾನನ್ಯಾನ್ ವಿಶಿಖೋನ್ಮಥಿತಾನ್ ಪೃಥಕ್ ।
ಸಂದಧತ್ಯೋಽಸುಖಾವಿಷ್ಟಾ ಮೂರ್ಛಂತೀಹ ಪುನಃ ಪುನಃ ॥೫೫॥

ರುಂಡವನ್ನು ಮುಂಡದಿಂದ ಸಂಯೋಜಿಸಿ ನೋಡುವರು, ಇದು ಇದರದ್ದಲ್ಲ ಎಂದು (ತಿಳಿದು), ಮತ್ತೊಂದೆಡೆಯಲ್ಲಿ ಮತ್ತೊಂದನ್ನು ಅರಸುತ್ತಾರೆ, ಬಾಣಗಳಿಂದ ತುಂಡಾಗಿ ಪ್ರತ್ಯೇಕವಾಗಿ ಬಿದ್ದಿರುವ ಕರಗಳನ್ನು, ತೊಡೆಗಳನ್ನು ಜೋಡಿಸುತ್ತಾರೆ, ಮತ್ತೆ ಮತ್ತೆ ನೋಡುತ್ತಾರೆ, ಬುದ್ಧಿಗೆಟ್ಟವರಾಗಿ ದುಃಖದಿಂದ ಕೂಡಿದವರಾಗಿ ಮೂರ್ಛಿತರಾಗುವರು.

ಉತ್ಕೃತ್ತಶಿರಸಶ್ಚಾನ್ಯಾನ್ ವಿಜಗ್ಧಾನ್ ಮೃಗಪಕ್ಷಿಭಿಃ ।
ದೃಷ್ಟ್ವಾऽಪಿ ನ ವಿಜಾನಂತಿ ಭರ್ತೃನ್ ಭಾರತಯೋಷಿತಃ ॥೫೬॥

ತುಂಡರಿಸಿ ಎಸೆದ ತಲೆಗಳನ್ನು ಮೃಗ-ಪಕ್ಷಿಗಳು ಕಚ್ಚಿತಿಂದಿವೆ, ಭರತಕುಲೋತ್ಪನ್ನರ ಪತ್ನಿಯರು (ಅಂತಹ ಶರೀರಗಳನ್ನು) ಕಂಡರೂ (ತಮ್ಮ) ಗಂಡನದು ಎಂದು ತಿಳಿಯಲಾರರು.

ಪಾಣಿಭಿಶ್ಚಾಪರಾ ಘ್ನಂತಿ ಶಿರಾಂಸಿ ಮಧುಸೂದನ ।
ಪ್ರೇಕ್ಷ್ಯ ಭ್ರಾತೄನ್ ಪಿತೄನ್ ವಾऽಪಿ ಪತೀಂಶ್ಚ ನಿಹತಾನ್ ಪರೈಃ ॥೫೭॥

ಮಧುಸೂದನ! ಶತ್ರುಗಳಿಂದ ನಿಹತರಾದ ಸಹೋದರರನ್ನು ಗಂಡಂದಿರನ್ನು ತಂದೆಯರನ್ನು ಕಂಡು ಕೈಗಳಿಂದ ತಲೆಯನ್ನು ಚಚ್ಚಿಕೊಳ್ಳುತ್ತಿರುವರು.

ಬಾಹುಭಿಃ ಕಾರ್ಮುಕೈಃ ಖಡ್ಗೈಃ ಶಿರೋಭಿಶ್ಚ ಸಕುಂಡಲೈಃ ।
ಅಗಮ್ಯಕಲ್ಪಾ ಪೃಥಿವೀ ಮಾಂಸಶೋಣಿತಕರ್ದಮಾ ॥೫೮॥

ಅನೇಕ ಬಿಲ್ಲುಗಳಿಂದ ಖಡ್ಗಗಳಿಂದ ತಲೆಗಳಿಂದ ಕುಂಡಲಗಳಿಂದ ತುಂಬಿರುವ ಮಾಂಸ ರಕ್ತಗಳಿಂದ ಕೆಸರಾದ (ರಣರಂಗದ) ಭೂಭಾಗವು ಅಗಮ್ಯವಾಗಿದೆ.

ನ ದುಃಖೇಷೂಚಿತಾಃ ಪೂರ್ವಂ ದುಃಖಂ ಗಾಹಂತ್ಯನಿಂದಿತಾಃ ।
ಭ್ರಾತೃಭಿಃ ಪಿತೃಭಿಃ ಪುತ್ರೈರುಪಸ್ತೀರ್ಣಾಂ ವಸುಂಧರಾಮ್ ॥೫೯॥

ಯೂಥಾನೀವ ಕಿಶೋರೀಣಾಂ ಸುಕೇಶೀನಾಂ ಜನಾರ್ದನ ।
ಸ್ನುಷಾಣಾಂ ಧೃತರಾಷ್ಟ್ರಸ್ಯ ಪಶ್ಯ ಬೃಂದಾನ್ಯನೇಕಶಃ ॥೬೦॥

ಜನಾರ್ದನ! ಸಹೋದರರಿಂದ ತಂದೆಯರಿಂದ ಮಕ್ಕಳಿಂದ ಚೆಲ್ಲಾಡಿರುವ ಈ ರಣರಂಗದಲ್ಲಿ, ಹಿಂದೆ ದುಃಖವನ್ನು ಅನುಭವಿಸಿರದ ದೋಷರಹಿತರಾದ , ಹೆಣ್ಣುಕುದುರೆಗಳ ಗುಂಪಿನಂತಿರುವ, ಸುಂದರ ಕೇಶಗಳನ್ನು ಹೊಂದಿರುವ, ದುಃಖದಲ್ಲಿ ಮುಳುಗಿರುವ ಧೃತರಾಷ್ಟ್ರನ ಸೊಸೆಯರ ಸಮೂಹವನ್ನು ನೋಡು.

ನಾತೋ ದುಃಖತರಂ ಕಿಂಚಿತ್ ಕೇಶವ ಪ್ರತಿಭಾತಿ ಮೇ ।
ಯದಿಮಾಃ ಕುರ್ವತೇ ಸರ್ವಾ ರವಮುಚ್ಚಾವಚಂ ಸ್ತ್ರಿಯಃ ॥೬೧॥

ಕೇಶವ! ಈ ಎಲ್ಲ ಹೆಂಗಳೆಯರು ಗಟ್ಟಿಯಾಗಿ ರೋದಿಸುತ್ತಿರುವರು, ಇದಕ್ಕಿಂತ ಹೆಚ್ಚಿನ ದುಃಖವು ಮತ್ತೊಂದಿಲ್ಲ ಎಂದು ತೋರುವುದು.

ನೂನಂ ವೈ ಚರಿತಂ ಪಾಪಂ ಮಯಾ ಪೂರ್ವೇಷು ಜನ್ಮಸು ।
ಯಾನ್ ಪಶ್ಯಾಮಿ ಹತಾನ್ ಪುತ್ರಾನ್ ಪೌತ್ರಾನ್ ಭ್ರಾತೄಂಶ್ಚ ಕೇಶವ ॥

ಕೇಶವ! ಯಾವ ಮೃತರಾದ ಪುತ್ರರನ್ನು ಮೊಮ್ಮಕ್ಕಳನ್ನು ಸಹೋದರರನ್ನು ನೋಡುತ್ತಿರುವೆನೋ, (ಇದರಿಂದ ಊಹಿಸುವೆನು) ನಿಶ್ಚಯವಾಗಿಯೂ ನಾನು ನನ್ನ ಹಿಂದಿನ ಎಲ್ಲ ಜನ್ಮಗಳಲ್ಲಿ ಪಾಪವನ್ನು ಮಾಡಿರುವೆನು.

ವೈಶಂಪಾಯನಃ

ಏವಮಾರ್ತಾ ವಿಲಪತೀ ಸಮಾಭಾಷ್ಯ ಜನಾರ್ದನಮ್ ।
ಗಾಂಧಾರೀ ಪುತ್ರಶೋಕಾರ್ತಾ ದದರ್ಶ ನಿಹತಂ ಸುತಮ್ ॥೬೩॥

ವೈಶಂಪಾಯನ– ಜನಾರ್ದನನನ್ನು ಉದ್ದೇಶಿಸಿ ಈ ರೀತಿಯಾಗಿ ಹೇಳಿ, ದುಃಖಿತಳಾದ ಪುತ್ರಶೋಕದಿಂದ ಆರ್ತಳಾದ ಗಾಂಧಾರಿಯು ರೋದಿಸುತ್ತಾ ಮೃತನಾದ ಮಗನನ್ನು ಕಂಡಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಸ್ತ್ರೀಪ್ರಲಾಪೋ ನಾಮ ಷೋಡಶೋಽಧ್ಯಾಯಃ ॥

॥ ಸ್ತ್ರೀಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಪುತ್ರ ದುರ್ಯೋಧನನನ್ನು ಕಂಡ ಗಾಂಧಾರಿಯ ರೋದನ.

ವೈಶಂಪಾಯನಃ

ಹತಂ ದುರ್ಯೋಧನಂ ದೃಷ್ಟ್ವಾ ಗಾಂಧಾರೀ ಶೋಕಕರ್ಶಿತಾ ।
ಸಹಸಾ ನ್ಯಪತದ್ ಭೂಮೌ ಛಿನ್ನೇವ ಕದಲೀ ವನೇ ॥೧॥

ವೈಶಂಪಾಯನ– ಮೃತನಾದ ದುರ್ಯೋಧನನನ್ನು ಕಂಡ ಗಾಂಧಾರಿಯು ದುಃಖದ ಪ್ರಭಾವಕ್ಕೆ ಒಳಗಾಗಿ, ತೋಟದ ತುಂಡರಿಸಿದ ಬಾಳೇಗಿಡದಂತೆ ಭೂಮಿಯಲ್ಲಿ ಬಿದ್ದಳು.

ಸಾ ತು ಲಬ್ಧ್ವಾ ಪುನಃ ಸಂಜ್ಞಾಂ ವಿಕ್ರುಶ್ಯ ಚ ಪುನಃ ಪುನಃ ।
ದುರ್ಯೋಧನಮಭಿಪ್ರೇಕ್ಷ್ಯ ಶಯಾನಂ ರುಧಿರೋಕ್ಷಿತಮ್ ॥೨॥

ಪರಿಷ್ವಜ್ಯಾಥ ಗಾಂಧಾರೀ ಕೃಪಣಂ ಪರ್ಯದೇವಯತ್ ॥೩॥

ಮತ್ತೆ ಎಚ್ಚರವನ್ನು ಪಡೆದ ಆ ಗಾಂಧಾರಿಯಾದರೊ ಮತ್ತೆ ಮತ್ತೆ ಅರಚುತ್ತಾ ರಕ್ತದಿಂದ ಒದ್ದೆಯಾದ ನೆಲದಲ್ಲಿ ಬಿದ್ದ ದುರ್ಯೋಧನನನ್ನು ಕಂಡು ಅನಂತರದಲ್ಲಿ (ಆತನ ಶರೀರವನ್ನು) ಅಪ್ಪಿಕೊಂಡು ಅತ್ಯಂತವಾಗಿ ದುಃಖಿಸಿದಳು.

ಹಾ ಹಾ ಪುತ್ರೇತಿ ದುಃಖಾರ್ತಾ ವಿಲಲಾಪಾಕುಲೇಂದ್ರಿಯಾ ॥೪॥

ಕಳವಳಗೊಂಡ ಇಂದ್ರಿಯಳಾದ ಗಾಂಧಾರಿಯು ಅಯ್ಯೋ ಅಯ್ಯೋ ಪುತ್ರನೆ! ಎಂದು ರೋದಿಸಿದಳು.

ಸುಗೂಢಜತ್ರುಂ ವಿಮಲಂ ಹಾರನಿಷ್ಕನಿಷೇವಿತಮ್ ।
ವಾರಿಣಾ ನೇತ್ರಜೇನೋರಃ ಸಿಂಚಂತೀ ಶೋಕಕರ್ಶಿತಾ ॥೫॥

ಸ್ವಚ್ಛವಾದ ಮಾಂಸದಿಂದ ಪುಷ್ಟವಾದ (ದುರ್ಯೋಧನನ) ಎದೆಯ ಭಾಗವನ್ನು ದುಃಖದಿಂದ ಬೆಂದ ಗಾಂಧಾರಿಯು ಕಣ್ಣೀರಿನಿಂದ ಒದ್ದೆಗೊಳಿಸಿದಳು.

ಸಮೀಪಸ್ಥಂ ಹೃಷೀಕೇಶಮಿದಂ ವಚನಮಬ್ರವೀತ್ ॥೬॥

ಸಮೀಪದಲ್ಲಿದ್ದ ಹೃಷೀಕೇಶನನ್ನು ಉದ್ದೇಶಿಸಿ ಈ ಮಾತನ್ನು ಹೇಳಿದಳು.

ಗಾಂಧಾರೀ

ಉಪಸ್ಥಿತೇಽಸ್ಮಿನ್ ಸಂಗ್ರಾಮೇ ಜ್ಞಾತೀನಾಂ ಸಂಕ್ಷಯೇ ವಿಭೋ ।
ಮಾಮಯಂ ಪ್ರಾಹ ವಾರ್ಷ್ಣೇಯ ಪ್ರಾಂಜಲಿರ್ನ್ಯಪಸತ್ತಮಃ ॥೭॥

ಅಸ್ಮಿನ್ ಜ್ಞಾತಿಸಮುದ್ಧರ್ಷೇ ಜಯಮಂಬಾ ಬ್ರವೀತು ಮೇ ॥೮॥

ಗಾಂಧಾರಿ– ಪ್ರಭುವೆ, ವೃಷ್ಣಿಕುಲೋತ್ಪನ್ನನೆ! ಜ್ಞಾತಿಗಳ ನಾಶಕ್ಕೆ ಕಾರಣವಾದ ಈ ಯುದ್ಧವು ಆರಂಭವಾಗಲು, ಒಡೆಯರಲ್ಲಿ ಶ್ರೇಷ್ಠನಾದ ಈತನು (ದುರ್ಯೋಧನನು) ನನ್ನನ್ನು ಉದ್ದೇಶಿಸಿ 'ಅಮ್ಮಾ! ಈ ಜ್ಞಾತಿಕಲಹದಲ್ಲಿ ನನಗೆ ಜಯವಾಗಲಿ ಎಂದು ಹೇಳು' ಎಂದು ಬೇಡಿದನು.

ಇತ್ಯುಕ್ತಾ ಜಾನತೀ ಸರ್ವಮಹಂ ತ್ವಂ ವ್ಯಸನಾಗಮಮ್ ।
ಅಬ್ರುವಂ ಪುರುಷವ್ಯಾಘ್ರ 'ಯತೋ ಧರ್ಮಸ್ತತೋ ಜಯಃ' ॥೯॥

ಯದಾ ತು ಯುಧ್ಯಮಾನಸ್ತ್ವಂ ಸಂಪ್ರಮುಹ್ಯಸಿ ಪುತ್ರಕ ।
ಧ್ರುವಂ ಶಸ್ತ್ರಹತಾನ್ ಲೋಕಾನ್ ಪ್ರಾಪ್ತೋಽಸ್ಯಮರವತ್ ಪ್ರಭೋ ॥

ಪುರುಷಶ್ರೇಷ್ಠನೆ, ಪ್ರಭುವೆ! ಈರೀತಿಯಾಗಿ ಹೇಳಿಸಿಕೊಂಡ ನಾನು, ಮುಂದೆ ಒದಗಲಿರುವ ಎಲ್ಲ ವ್ಯಸನವನ್ನೂ ತಿಳಿದವಳಾಗಿದ್ದೆನು, 'ಎಲ್ಲಿ ಧರ್ಮವೋ ಅಲ್ಲಿಯೇ ವಿಜಯ, ಒಂದು ವೇಳೆ ಯುದ್ಧಮಾಡುವ ಸಂದರ್ಭದಲ್ಲಿ ಮೋಹಿತನಾದಲ್ಲಿ (ಮೈಮರೆತಲ್ಲಿ) ಮಗನೆ! ದೇವತೆಗಳಂತೆ ನಿಶ್ಚಯವಾಗಿಯೂ ಶಸ್ತ್ರದಿಂದ ಮೃತರಾದವರು ಹೊಂದುವ ಲೋಕಗಳನ್ನು ಹೊಂದುವಿ' ಎಂದು ಹೇಳಿದ್ದೆನು.

ಇತ್ಯೇವಮಬ್ರುವಂ ಪೂರ್ವಂ ನೈನಂ ಶೋಚಾಮ್ಯಹಂ ಪ್ರಭೋ ॥೧೧॥

ಧೃತರಾಷ್ಟ್ರಂ ತು ಶೋಚಾಮಿ ಕೃಪಣಂ ಹತಬಾಂಧವಮ್ ॥೧೨॥

ಸ್ವಾಮಿಯೆ! ಮೊದಲೇ ಈರೀತಿಯಾಗಿ ಹೇಳಿದ ನಾನು ಈತನನ್ನು ಉದ್ದೇಶಿಸಿ ದುಃಖಿಸುವುದಿಲ್ಲ, ಕೃಪಣನಾದ ಬಂಧುಹೀನನಾದ ಧೃತರಾಷ್ಟ್ರನ ವಿಷಯದಲ್ಲಿ ದುಃಖಿಸುವೆನು.

ಅಮರ್ಷಣಂ ಯುಧಾಂ ಶ್ರೇಷ್ಠಂ ಕೃತಾಸ್ತ್ರಂ ಯುದ್ಧದುರ್ಮದಮ್ ।
ಶಯಾನಂ ವೀರಶಯನೇ ಪಶ್ಯ ಮಾಧವ ಮೇ ಸುತಮ್ ॥೧೩॥

ಮಾಧವ! ಯುದ್ಧದಲ್ಲಿ ಸೋಲನ್ನು ಕಾಣದವರಲ್ಲಿ ಹಿರಿಯನಾದ, ಅಸ್ತ್ರಗಳನ್ನು ಹೊಂದಿದ್ದ, ಯುದ್ಧದಲ್ಲಿ ಆಯಾಸಗೊಳ್ಳದ, ವೀರರ ಶಯನದಲ್ಲಿ ಮಲಗಿರುವ ನನ್ನ ಪುತ್ರನನ್ನು ನೋಡು.

ಯೋಽಯಂ ಮೂರ್ಧಾವಸಿಕ್ತಾನಾಮಗ್ರೇ ಯಾತಿ ಪರಂತಪಃ ।
ಸೋಽಯಂ ಪಾಂಸುಷು ಶೇತೇಽದ್ಯ ಪಶ್ಯ ಕಾಲಸ್ಯ ಪರ್ಯಯಮ್ ॥

ಶತ್ರುಗಳಿಗೆ ದುಃಖಕಾರಕನೆ! ಯಾವ ಈತನು ಪಟ್ಟಾಭಿಷಿಕ್ತರ ಮುಂದಾಳಾಗಿ ಸಾಗುತ್ತಿದ್ದನೊ, ಅಂತಹ ಈತನು ಈಗ ಧೂಳಿನಲ್ಲಿ ಬಿದ್ದಿರುವನು, ಕಾಲದ ಬದಲಾವಣೆಯನ್ನು ಕಾಣುವವನಾಗು.

ಏವಂ ದುರ್ಯೋಧನೋ ವೀರೋ ಗತಿಂ ತ್ವಸುಲಭಾಂ ಗತಃ ।
ತಥಾ ಹ್ಯಭಿಮುಖಃ ಶೇತೇ ಶಯನೇ ವೀರಸೇವಿತೇ ॥೧೫॥

ಸುಲಭದಲ್ಲಿ ಹೊಂದಲು ಆಗದ ಸ್ಥಾನವನ್ನು ವೀರನಾದ ದುರ್ಯೋಧನನು ಈ ರೀತಿಯಾಗಿ ಹೊಂದಿ, ವೀರರು ಹೊಂದಬಹುದಾದ ಹಾಸಿನಲ್ಲಿ (ಶತ್ರುವಿನ) ಎದುರಿನಲ್ಲಿ ಪವಡಿಸಿರುವನು.

ಯಂ ಪುರಾ ಪರ್ಯುಪಾಸೀನಾ ರಮಯಂತಿ ವರಸ್ತ್ರಿಯಃ ।
ತಂ ವೀರಶಯನೇ ಸುಪ್ತಂ ರಮಯಂತ್ಯಶಿವಾಃ ಶಿವಾಃ ॥೧೬॥

ಹಿಂದೆ ಯಾರನ್ನು ಸೇವಿಸುವುದರಿಂದ ಶ್ರೇಷ್ಠಸ್ತ್ರೀಯರು ಸಂತಸಗೊಳ್ಳುತ್ತಿದ್ದರೋ, (ಈಗ) ವೀರಶಯನದಲ್ಲಿ (ರಣರಂಗದ ನೆಲದಲ್ಲಿ) ಮಲಗಿರುವ ಆತನನ್ನು ಅಮಂಗಳಕರಗಳಾದ ನರಿಗಳು ಸುತ್ತುವರೆದು ಸಂತಸಗೊಳ್ಳುತ್ತಿವೆ.

ಯಂ ಪುರಾ ಪರ್ಯುಪಾಸೀನಾ ರಮಯಂತಿ ಮಹೀಕ್ಷಿತಃ ।
ಮಹೀತಳಸ್ಥಂ ನಿಹತಂ ಗೃಧ್ರಾಸ್ತಂ ಪರ್ಯುಪಾಸತೇ ॥೧೭॥

ಯಾರನ್ನು ಭೂಮಿಯ ಒಡೆಯರು ಹಿಂದೆ ಸುತ್ತುವರೆಯುತ್ತಿದ್ದರೊ, (ಇಂದು) ಮೃತನಾಗಿ ನೆಲದಲ್ಲಿ ಬಿದ್ದಿರುವ ಆತನನ್ನು ಹದ್ದುಗಳು ಸುತ್ತುವರೆದಿವೆ.

ಯಂ ಪುರಾ ವ್ಯಜನೈರಗ್ರ್ಯೈರುಪಜೀವಂತಿ ಯೋಷಿತಃ ।
ತಮದ್ಯ ಪಕ್ಷವ್ಯಜನೈರುಪಜೀವಂತಿ ಪಕ್ಷಿಣಃ ॥೧೮॥

ಯಾರಿಗೆ ಶ್ರೇಷ್ಠವಾದ ವ್ಯಜನ (ಬೀಸಣಿಗೆ)ಗಳನ್ನು ಧರಿಸಿ ಸ್ತ್ರೀಯರು ಉಪಜೀವಿಸುತ್ತಿದ್ದರೋ ಇಂದು ಆತನನ್ನು ಪಕ್ಷಿಗಳು ತಮ್ಮ ರೆಕ್ಕೆಗಳೆಂಬ ವ್ಯಜನದಿಂದ ಉಪಜೀವಿಸುತ್ತಿವೆ.

ಏಷ ಶೇತೇ ಮಹಾಬಾಹುರ್ಬಲವಾನ್ ಸತ್ಯವಿಕ್ರಮಃ ।
ಸಿಂಹೇನೇವ ದ್ವಿಪಃ ಸಂಖ್ಯೇ ಭೀಮಸೇನೇನ ಪಾತಿತಃ ॥೧೯॥

ಭೀಮಸೇನನಿಂದ ಕೆಡಹಲಾದ ನಿಜಬಲಿಷ್ಠನಾದ ನೀಳಬಾಹುವಾದ ಬಲಶಾಲಿಯು, ಕದನದಲ್ಲಿ ಸಿಂಹದಿಂದ ಕೆಡಹಲಾದ ಆನೆಯಂತೆ ಮಲಗಿರುವನು.

ಪಶ್ಯ ದುರ್ಯೋಧನಂ ಕೃಷ್ಣ ಶಯಾನಂ ರುಧಿರೋಕ್ಷಿತಮ್ ।
ನಿಹತಂ ಭೀಮಸೇನೇನ ಗದಾಮಾಲಿಂಗ್ಯ ಭಾರತಮ್ ॥೨೦॥

ಕೃಷ್ಣ! ಭೀಮಸೇನನಿಂದ ಮೃತನಾದ, ಗದೆಯನ್ನು ಅಪ್ಪಿಕೊಂಡಿರುವ, ರಕ್ತಸಿಕ್ತನಾಗಿ ಮಲಗಿರುವ, ಭರತಕುಲೋತ್ಪನ್ನನಾದ ದುರ್ಯೋಧನನನ್ನು ನೋಡು.

ಅಕ್ಷೌಹಿಣೀರ್ಮಹಾಬಾಹುರ್ದಶ ಚೈಕಂ ಚ ಕೇಶವ ।
ಆನಯದ್ಯಃ ಪುರಾ ಸಂಖ್ಯೇ ಸೋಽನಯಾ ನಿಧನಂ ಗತಃ ॥೨೧॥

ಕೇಶವ! ಹನ್ನೊಂದು ಅಕ್ಷೋಹಿಣೀ ಸೇನೆಯನ್ನು ಯಾವನು ಈ ಹಿಂದೆ ಸಂಗ್ರಹಿಸಿದನೋ ಆತನು ಅದರೊಡನೆ (ಆ ಎಲ್ಲ ಸೇನೆಯೊಡನೆ) ಯುದ್ಧದಲ್ಲಿ ಅನ್ಯಾಯದಿಂದ ಸಾವನ್ನು ಹೊಂದಿರುವನು.

ಏಷ ದುರ್ಯೋಧನಃ ಶೇತೇ ಮಹೇಷ್ವಾಸೋ ಮಹಾರಥಃ ।
ಶಾರ್ದೂಲ ಇವ ಸಿಂಹೇನ ಭೀಮೇನ ವಿನಿಪಾತಿತಃ ॥೨೨॥

ಭೀಮನಿಂದ ಸಂಹೃತನಾದ ದೊಡ್ಡಬಿಲ್ಲಾಳಾದ ಮಹಾರಥಿಕನಾದ ಈ ದುರ್ಯೋಧನನು ಸಿಂಹದಿಂದ ಸಂಹೃತವಾದ ಹುಲಿಯಂತೆ ಮಲಗಿರುವನು.

ವಿದುರಂ ಹ್ಯವಮತ್ಯೈಷಃ ಪಿತರಂ ಚೈವ ಮಂದಭಾಕ್ ।
ಬಾಲೋ ವೃದ್ಧಾವಮಾನೇನ ಮಂದೋ ಮೃತ್ಯುವಶಂ ಗತಃ ॥೨೩॥

ಅಲ್ಪಭಾಗ್ಯಶಾಲಿಯಾದ ಈತನು ವಿದುರನನ್ನು ಹಾಗು ತಂದೆಯನ್ನು ಅತಿಕ್ರಮಿಸುತ್ತಿದ್ದನು, ಮೂರ್ಖನಾದ ಬಾಲನು (ತಿಳಿವಳಿಕೆಯಿಲ್ಲದವನು) ಹಿರಿಯರನ್ನು ಅವಮಾನಿಸಿದ್ದರಿಂದ ಸಾವಿನ ವಶವಾದನು.

ನಿಃಸಪತ್ನಾ ಮಹೀ ಯಸ್ಯ ತ್ರಯೋದಶ ಸಮಾಃ ಸ್ಥಿತಾ ।
ಸ ಶೇತೇ ನಿಹತಃ ಸಂಖೇ ಪುತ್ರೋ ಮೇ ಪೃಥಿವೀಪತಿಃ ॥೨೪॥

ಶತ್ರುರಹಿತವಾದ ಭೂಮಿಯು ಹದಿಮೂರುವರ್ಷ ಯಾರ ಅಧೀನದಲ್ಲಿದ್ದಿತೋ, ಆ ಪೃಥಿವೀಪತಿಯಾದ ನನ್ನ ಮಗನು ಯುದ್ಧದಲ್ಲಿ ನಿಹತನಾಗಿ ಮಲಗಿರುವನು.

ಅಪಶ್ಯಂ ಕೃಷ್ಣ ಪೃಥಿವೀಂ ಧಾರ್ತರಾಷ್ಟ್ರವಶಾನುಗಾಮ್ ।
ಪೂರ್ಣಾಂ ಹಸ್ತಿಗವಾಶ್ವೈಶ್ಚ ವಾರ್ಷ್ಣೇಯ ನ ತು ತಚ್ಚಿರಮ್ ॥೨೫॥

ವೃಷ್ಣಿಕುಲೋತ್ಪನ್ನನೆ, ಕೃಷ್ಣನೆ! ನೋಡು, ಆನೆ ಗೋವು ಕುದುರೆ ಇವುಗಳಿಂದ ಪೂರ್ಣವಾದ ಸಮಗ್ರ ಭೂಮಿಯು ಧೃತರಾಷ್ಟ್ರನ ಪುತ್ರನ ಅಧೀನದಲ್ಲಿದ್ದಿತ್ತು, ಆದರೆ ಅದು ಬಹುಕಾಲವಲ್ಲ.

ತಾಮೇವಾದ್ಯ ಮಹಾಬಾಹೋ ಪಶ್ಯಾಮ್ಯನ್ಯಾನುಶಾಸಿತಾಮ್ ।
ಹೀನಾಂ ಹಸ್ತಿಗವಾಶ್ವೈಶ್ಚ ಕಿಂ ನು ಜೀವಾಮಿ ಮಾಧವ ॥೨೬॥

ನೀಳಬಾಹುವೆ, ಮಾಧವ! ಆನೆ ಗೋವು ಇವುಗಳಿಂದ ರಹಿತವಾದ (ಬರಿದಾದ) ಅದೇ ಭೂಮಿಯು ಇಂದು ಅನ್ಯರ ಅಧೀನವಾಗಿರುವುದನ್ನು ಕಾಣುತ್ತಿರುವೆನು, (ಹೀಗಿರಲು ನಾನು) ಹೇಗೆ ಬದುಕಲಿ?

ಇದಂ ಕೃಚ್ಛ್ರತರಂ ಪಶ್ಯ ಪುತ್ರಸ್ಯಾಪಿ ವಧಾನ್ಮಮ ।
ಯಾ ಇಮಾಃ ಪರ್ಯುಪಾಸಂತೇ ಹತಾನ್ ಶೂರಾನ್ ರಣೇ ಸ್ತ್ರಿಯಃ ॥

ನನ್ನ ಮಕ್ಕಳ ಸಾವಿಗಿಂತಲೂ ಕ್ಲೇಶಕರವಾದದ್ದು ಇದು- ರಣರಂಗದಲ್ಲಿ ಮೃತರಾದ ಶೂರರನ್ನು ಸುತ್ತುವರೆದು ನಿಂತಿರುವ ಈ ಯಾವ ಸ್ತ್ರೀಯರು (ಇವರನ್ನು ಕಾಣುವುದು).

ಪ್ರಕೀರ್ಣಕೇಶಾಂ ಸುಶ್ರೋಣೀಂ ದುರ್ಯೋಧನಭುಜಾಂಕಗಾಮ್ ।
ರುಕ್ಮ(ಗ್ಮ)ವೇದಿನಿಭಾಂ ಪಶ್ಯ ಕೃಷ್ಣ ಲಕ್ಷ್ಮ(ಕ್ಷ)ಣಮಾತರಮ್ ॥೨೮॥

ಕೃಷ್ಣ! ತಲೆಕೂದಲನ್ನು ಹರಡಿಕೊಂಡಿರುವ ಸುಂದರ ಕಟಿಯನ್ನು ಹೊಂದಿರುವ ದುರ್ಯೋಧನನ ಭುಜದ ಬಳಿಯಿರುವ ಚಿನ್ನದ ವೇದಿಕೆಯಂತೆ ತೋರುವ (ಸುಂದರಳಾದ) ಲಕ್ಷಣನ ತಾಯಿಯನ್ನು ನೋಡು.

ನೂನಮೇಷಾ ಪುರಾ ಬಾಲಾ ಜೀವಮಾನೇ ಮಹಾಭುಜೇ ।
ಭುಜಮಾಶ್ರಿತ್ಯ ರಮತೇ ಸುಭುಜಸ್ಯ ಮನಸ್ವಿನೀ ॥೨೯॥

ಹಿಂದೆ ನೀಳಬಾಹುವು (ದುರ್ಯೋಧನನು) ಬದುಕಿರುವಾಗ ಸ್ವಾಭಿಮಾನಿನಿಯಾದ ಈ ಬಾಲಿಕೆಯು ಸುಂದರ ಭುಜನ (ದುರ್ಯೋಧನನ) ಭುಜಗಳನ್ನು ಆಶ್ರಯಿಸಿ ಸಂತಸದಿಂದಿದ್ದಳು.

ಕಥಂ ನು ಶತಧಾ ನೇದಂ ಹೃದಯಂ ಮಮ ದೀರ್ಯತೇ ।
ಪಶ್ಯಂತ್ಯಾ ನಿಹತಂ ಪುತ್ರಂ ಪೌತ್ರೇಣ ಸಹಿತಂ ರಣೇ ॥೩೦॥

ಮೊಮ್ಮಕ್ಕಳಿಂದ ಸಹಿತನಾದ ಮೃತನಾದ ಮಗನನ್ನು ನೋಡುತ್ತಿರುವ ನನ್ನ ಹೃದಯವು ಏಕೆ ನೂರು ಹೋಳಾಗಿ ಸೀಳುತ್ತಿಲ್ಲ?

ಪುತ್ರಂ ರುಧಿರಸಂಸಿಕ್ತಮುಪಜಿಘ್ರತ್ಯನಿಂದಿತಾ ।
ದುರ್ಯೋಧನಂ ತು ಮೃದುನಾ ಪಾಣಿನಾ ಪರಿಮಾರ್ಜತಿ ॥೩೧॥

ದೋಷರಹಿತಳು (ನನ್ನ ಸೊಸೆಯು) ರಕ್ತದಿಂದ ನೆಂದಿರುವ ಪುತ್ರನನ್ನು ಆಘ್ರಾಣಿಸುತ್ತಿರುವಳು, ದುರ್ಯೋಧನನನ್ನಾದರೊ ಮೃದು ಕರಗಳಿಂದ ಸವರುತ್ತಿರುವಳು.

ಕಿಂ ನು ಶೋಚತಿ ಭರ್ತಾರಮಥ ಪುತ್ರಂ ಮನಸ್ವಿನೀ ।
ತಥಾ ಹ್ಯವಸ್ಥಿತಾ ಭಾತಿ ಪುತ್ರಂ ಚಾಪ್ಯಭಿವೀಕ್ಷತೇ ॥೩೨॥

ಸ್ವಶಿರಃ ಪಂಚಶಾಖಾಭ್ಯಾಮಭಿಹತ್ಯಾಯತೇಕ್ಷಣಾ ।
ಪತತ್ಯುರಸಿ ವೀರಸ್ಯ ಕುರುರಾಜಸ್ಯ ಮಾಧವ ॥೩೩॥

ಮಾಧವ! ನೋಡು, ಸ್ವಾಭಿಮಾನಿನಿಯು ಅಗಲವಾದ ಕಣ್ಣುಗಳನ್ನು ಹೊಂದಿರುವವಳು (ನನ್ನ ಸೊಸೆಯು ತನ್ನ) ಗಂಡನಿಗಾಗಿ ದುಃಖಿಸುವಳೋ ಅಥವಾ ಮಗನಿಗಾಗಿ ದುಃಖಿಸುವಳೋ? ಆ ರೀತಿಯಾದ ಅವಸ್ಥೆಯಲ್ಲಿ ಇರುವಂತೆ ತೋರುತ್ತಿರುವಳು, (ಒಮ್ಮೆ) ಮಗನನ್ನು ನೋಡುವಳು, ಮತ್ತೊಮ್ಮೆ ವೀರನಾದ ಕುರುರಾಜನಾದ ಗಂಡನ ಎದೆಯಲ್ಲಿ ಒರಗುವಳು, ಎರಡೂ ಕೈಗಳಿಂದ ತನ್ನ ತಲೆಯನ್ನು ಚೆಚ್ಚಿಕೊಳ್ಳುತ್ತಿರುವಳು. (ಪಂಚಶಾಖಾಭ್ಯಾಂ- ಎರಡೂ ಕೈಗಳಿಂದ, 'ಪಂಚಶಾಖಃ ಶಯಃ ಪಾಣಿಃ' ಎಂದು ಅಮರಕೋಶವು, ಲಕ್ಷಾಲಂಕಾರ.)

ಪುಂಡರೀಕಮಿವಾಘ್ರಾತಿ ಪುಂಡರೀಕಾಂತರಪ್ರಭಾ ।
ಮುಖಂ ಪ್ರಮೃಜ್ಯ ಪುತ್ರಸ್ಯ ಭರ್ತುಶ್ಚೈವ ತಪಸ್ವಿನೀ ॥೩೪॥

ಕಮಲದ ಎಸಳಿನಂತೆ ಕಾಂತಿಯನ್ನು ಹೊಂದಿರುವ ತಪಸ್ವಿನಿಯಾದ ಆಕೆಯು (ನನ್ನ ಸೊಸೆಯು) ಕಮಲವನ್ನು ಮೂಸುತ್ತಿರುವಳೊ ಎನ್ನುವಂತೆ (ತನ್ನ) ಮಗನ ಮುಖವನ್ನು ಮೂಸುತ್ತಿರುವಳು, ಹಾಗೆಯೇ (ತನ್ನ) ಗಂಡನ ಮುಖವನ್ನೂ ಆಘ್ರಾಣಿಸುತ್ತಿರುವಳು.

ಯದಿ ವಾಪ್ಯಾಗಮಾಃ ಸಂತಿ ಯದಿ ಚ ಶ್ರುತಯಸ್ತಥಾ ।
ಧ್ರುವಂ ಲೋಕಮವಾಪ್ತೋಽಯಂ ನೃಪೋ ಬಾಹುಬಲಾರ್ಜಿತಮ್ ॥

ಸ್ಮೃತಿಗಳು ಪ್ರಮಾಣವಾಗಿದ್ದಲ್ಲಿ ಹಾಗೆಯೇ ವೇದಗಳು ಪ್ರಮಾಣವಾಗಿದ್ದಲ್ಲಿ ಬಾಹುಬಲದಿಂದ ಸಂಪಾದಿಸಿದ ಲೋಕವನ್ನು ಈ ರಾಜನು ನಿಶ್ಚಯವಾಗಿಯೂ ಹೊಂದಿರುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಗಾಂಧಾರೀಪ್ರಲಾಪೋ ನಾಮ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ಕೃಷ್ಣನಲ್ಲಿ ಸೊಸೆಯರ ರೋದನವನ್ನು ಕಂಡ ಗಾಂಧಾರಿಯ ಅಳಲು.

ಗಾಂಧಾರೀ

ಪಶ್ಯ ಮಾಧವ ಪುತ್ರಾನ್ ಮೇ ಶತಸಂಖ್ಯಾನ್ ಜಿತಕ್ಲಮಾನ್ ।
ಗದಯಾ ಭೀಮಸೇನೇನ ಭೂಯಿಷ್ಠಂ ನಿಹತಾನ್ ರಣೇ ॥೧॥

ಗಾಂಧಾರಿ– ಮಾಧವ! ಯುದ್ಧದಲ್ಲಿ ಪ್ರಾಯಶಃ ಭೀಮಸೇನನ ಗದೆಯಿಂದ ಮೃತರಾದ, ಆಯಾಸವನ್ನೇ ಅರಿಯದ ನೂರುಸಂಖ್ಯಾಕರಾದ ನನ್ನ ಪುತ್ರರನ್ನು ನೋಡು.

ಇದಂ ದುಃಖತರಂ ಮೇऽದ್ಯ ಯದಿಮಾ ಮುಕ್ತಮೂರ್ಧಜಾಃ ।
ಹತಭರ್ತೄ್ಯ ರಣೇ ಬಾಲಾಃ ಪರಿಧಾವಂತಿ ಮೇ ಸ್ನುಷಾಃ ॥೨॥

ಗಂಡಂದಿರನ್ನು ಕಳೆದುಕೊಂಡಿರುವ ಬಾಲೆಯರಾದ ತಲೆಕೂದಲನ್ನು ಹರಡಿ ಕೊಂಡಿರುವ ಯಾವ ಈ ನನ್ನ ಸೊಸೆಯರು ರಣರಂಗದಲ್ಲಿ ಸುತ್ತಾಡುತ್ತಿರುವರೋ, ಇದು ಈಗ ನನಗೆ ಅತಿದುಃಖಕ್ಕೆ ಕಾರಣವಾಗಿದೆ.

ಪ್ರಾಸಾದತಳಚಾರಿಣ್ಯಃ ಚರಣೈರ್ಭೂಷಣಾನ್ವಿತೈಃ ।
ಕಾಯೇನಾದ್ಯ ಸ್ಪೃಶಂತೀಮಾಂ ರುಧಿರಾರ್ದ್ರಾಂ ವಸುಂಧರಾಮ್ ॥೩॥

ಆಭರಣಗಳಿಂದ ಭೂಷಿತವಾದ ಕಾಲುಗಳಿಂದ ಮಹಡಿಯ ಮೇಲೆ ಸಂಚರಿಸುತ್ತಿದ್ದ ನನ್ನ ಸೊಸೆಯರು ಇಂದು ಬರಿಗಾಲಲ್ಲಿ ರಕ್ತದಿಂದ ಒದ್ದೆಯಾದ ಭೂಮಿಯಲ್ಲಿ ಸಂಚರಿಸುತ್ತಿರುವರು.

ಗೃಧ್ರಾನುತ್ಸಾರಯಂತ್ಯಶ್ಚ ಗೋಮಾಯೂಂಶ್ಚ ತಥಾऽಪರಾಃ ।
ಶೋಕೇನಾರ್ತಾ ವಿಘೂರ್ಣಂತ್ಯೋ ಮತ್ತಾ ಇವ ಚರಂತ್ಯುತ ॥೪॥

ಕೆಲವರು ಹದ್ದುಗಳನ್ನು ಓಡಿಸುತ್ತಿರುವರು, ಮತ್ತೆ ಕೆಲವರು ನರಿಗಳನ್ನು ಓಡಿಸುತ್ತಿರುವರು, ದುಃಖದಿಂದ ಬಳಲಿದ ಕೆಲವರು ನಿಟ್ಟುಸಿರನ್ನು ಬಿಡುತ್ತಿರುವರು, ಮತ್ತೆ ಕೆಲವರು ಹುಚ್ಚರಂತೆ ಸುತ್ತುತ್ತಿರುವರು.

ಏಷಾಂ ಯಾ ತ್ವನವದ್ಯಾಂಗೀ ಕರಸಮ್ಮಿತಮಧ್ಯಮಾ ।
ಘೋರಮಾಯೋಧನಂ ದೃಷ್ಟ್ವಾ ಪತತ್ಯಸುಖಿತಾ ಭುವಿ ॥೫॥

ಇವರಲ್ಲಿ ಯಾವನು ಕೈಯಂತೆ ತೆಳುವಾದ ಸೊಂಟವನ್ನು ಹೊಂದಿರುವ ದೋಷವಿಲ್ಲದ ಅವಯವಗಳನ್ನು ಹೊಂದಿರುವ ಭಾನುಮತಿಯು ಭಯಂಕರವಾದ ರಣರಂಗವನ್ನು ಕಂಡು ದುಃಖಿತಳಾಗಿ ನೆಲದಲ್ಲಿ ಬಿದ್ದಿರುವಳು.

ದೃಷ್ಟ್ವಾ ಮೇ ಪಾರ್ಥಿವಸುತಾಮೇನಾಂ ಲಕ್ಷ್ಮಣಮಾತರಮ್ ।
ರಾಜಪತ್ನೀಂ ಮಹಾಬಾಹೋ ಮನೋ ಮೇऽಭ್ಯುಪತಾಮ್ಯತಿ ॥೬॥

ನೀಳಬಾಹುವನ್ನು ಹೊಂದಿದವನೆ! ನನ್ನ ಈ ರಾಜನ ಸುತೆಯಾದ ಲಕ್ಷಣನ ತಾಯಿಯಾದ ರಾಜಪತ್ನಿಯನ್ನು ಕಂಡು ನನ್ನ ಮನವು ದುಃಖಿಸುವುದು. (ಅಭ್ಯುಪತಾಮ್ಯತಿ- 'ತಮು- ಗ್ಲಾನೌ' ಎಂಬ ಧಾತುವಿನಿಂದ ನಿಷ್ಪನ್ನವಾದ ರೂಪ, ಲಕ್ಷಾಲಂಕಾರ).

ಭ್ರಾತೄಂಶ್ಚಾನ್ಯಾಃ ಪಿತೄಂಶ್ಚಾನ್ಯಾಃ ಪುತ್ರಾಂಶ್ಚ ನಿಹತಾನ್ ಭುವಿ ।
ದೃಷ್ಟ್ವಾ ಪರಿಪತಂತ್ಯೇತಾಃ ಪ್ರಗೃಹ್ಯ ಸುಭುಜಾ ಭುಜಾನ್ ॥೭॥

ಮೃತರಾದ ಸಹೋದರರನ್ನು, ಮತ್ತೆ ಮೃತರಾದ ತಂದೆಯರನ್ನು, ಮತ್ತೆ ಮೃತರಾದ ಮಕ್ಕಳನ್ನು ಭೂಮಿಯಲ್ಲಿ (ರಣರಂಗದಲ್ಲಿ) ಕಂಡು, ಸುಂದರವಾದ ಭುಜಗಳನ್ನು ಹೊಂದಿರುವ ಇವರು ಪರಸ್ಪರ ಕೈಗಳನ್ನು ಹಿಡಿದುಕೊಂಡು ನೆಲಕ್ಕೆ ಉರುಳುತ್ತಿರುವರು.

ಮಧ್ಯಾನಾಮಥ ವೃದ್ಧಾನಾಂ ಬಾಲಾನಾಂ ಚಾಪರಾಜಿತ ।
ಆಕ್ರಂದಂ ಹತಬಂಧೂನಾಂ ದಾರುಣೇ ವೈಶಸೇ ಶೃಣು ॥೮॥

ಸೋಲಿಲ್ಲದವನೆ! ಬಂಧುಗಳನ್ನು ಕಳೆದುಕೊಂಡ ನಡುವಯದವರ, ವಯಸ್ಸಾದವರ ಚಿಕ್ಕವಯಸ್ಸಿನವರ ದಾರುಣವಾದ ಮನಕರಗುವ ರೋದನವನ್ನು ಕೇಳು.

ರಥನೀಡಾಂಶ್ಚ ದೇಹಾಂಶ್ಚ ಹತಾನಾಂ ಗಜವಾಜಿನಾಮ್ ।
ಆಶ್ರಿತ್ಯ ಶ್ರಮಮೋಹಾರ್ತಾಃ ಸ್ಥಿತಾ ಪಶ್ಯ ಮಹಾಭುಜ ॥೯॥

ನೀಳಬಾಹುವೆ! ಆಯಾಸ, ಮೋಹಗಳಿಂದ ದುಃಖಿತರಾದ ಇವರು ರಥಗಳ ಅವಶೇಷಗಳನ್ನು, ಮೃತವಾದ ಆನೆಕುದುರೆಗಳ ದೇಹಗಳನ್ನು ಆಶ್ರಯಿಸಿ ನಿಂತಿರುವುದನ್ನು ನೋಡು.

ಅನ್ಯಾ ಹ್ಯಪಹೃತಂ ಕಾಯಾಚ್ಚಾರುಕುಂಡಲಮುನ್ನಸಮ್ ।
ಸ್ವಸ್ಯ ಬಂಧೋಃ ಶಿರಃ ಕೃಷ್ಣ ಗೃಹೀತ್ವಾ ಪಶ್ಯ ತಿಷ್ಠತಿ ॥೧೦॥

ಕೃಷ್ಣ! ನೋಡು, ಮತ್ತೊಬ್ಬಳು ದೇಹದಿಂದ ಕಿತ್ತೆಸೆದ ಸುಂದರವಾದ ಕುಂಡಲ-ಮೂಗುಗಳನ್ನು ಹೊಂದಿರುವ ತನ್ನ ಬಂಧುವಿನ ತಲೆಯನ್ನು ಹಿಡಿದುಕೊಂಡು ನಿಂತಿರುವಳು.

ಪೂರ್ವಜನ್ಮಕೃತಂ ಪಾಪಂ ಮನ್ಯೇ ನಾಲ್ಪಮಿವಾನಘ ।
ಏತಾಭಿರನವದ್ಯಾಭಿರ್ಮಯಾ ಚೈವಾಲ್ಪಪುಣ್ಯಯಾ ॥೧೧॥

ಪಾಪರಹಿತನೆ! ದೋಷರಹಿತರಾದ ಈ ಸ್ತ್ರೀಯರು ಮತ್ತು ಅಲ್ಪಪುಣ್ಯವಂತಳಾದ ನಾನೂ ಸಹ ಹಿಂದಿನ ಜನ್ಮದಲ್ಲಿ ಭಾರೀ ಪಾಪವನ್ನು ಮಾಡಿರುವೆವು.

ತದಿದಂ ಧರ್ಮರಾಜೇನ ಘಾತಿತಂ ನೋ ಜನಾರ್ದನ ।
ನ ಹಿ ನಾಶೋಽಸ್ತಿ ವಾರ್ಷ್ಣೇಯ ಕರ್ಮಣೋಃ ಶುಭಪಾಪಯೋಃ ॥

ಜನಾರ್ದನ! ಆದ್ದರಿಂದಲೇ ಧರ್ಮರಾಜನು ನಮ್ಮನ್ನು ಘಾಸಿಗೊಳಿಸಿರುವನು, ವೃಷ್ಣಿಕುಲೋತ್ಪನ್ನನೆ! ಶುಭಾಶುಭಕರ್ಮಗಳಿಗೆ ನಾಶವಿಲ್ಲ (ಮಾಡಿದ ಪಾಪ-ಪುಣ್ಯಗಳನ್ನು ಅನುಭವಿಸಲೇಬೇಕು ಎಂದು ಭಾವ).

ಪ್ರತ್ಯಗ್ರವಯಸಃ ಪಶ್ಯ ದರ್ಶನೀಯಕುಚಾನನಾಃ ।
ಕುಲೇಷು ಜಾತಾ ಹ್ರೀಮತ್ಯಃ ಕೃಷ್ಣಪಕ್ಷ್ಮಾಕ್ಷಿಮೂರ್ಧಜಾಃ ॥೧೩॥

ಹಂಸಗದ್ಗದಭಾಷಿಣ್ಯೋ ದುಃಖಶೋಕಪ್ರಮೋಹಿತಾಃ ।
ಸಾರಸ್ಯ ಇವ ಪಶ್ಯಂತ್ಯಃ ಪತಿತಾಃ ಪಶ್ಯ ಮಾಧವ ॥೧೪॥

ಮಾಧವ! ನೋಡು, (ನನ್ನ ಸೊಸೆಯರು) ಹದಿಹರೆಯದವರು, ಸುಂದರವಾದ ಎದೆ ಮುಖಗಳನ್ನು ಹೊಂದಿರುವರು, ಸತ್ಕುಲದಲ್ಲಿ ಜನ್ಮವನ್ನು ಹೊಂದಿರುವರು,

ಲಜ್ಜಾಶೀಲರು, ಕರಿಯದಾದ ಕಣ್ಣಿನ ರೆಪ್ಪೆಗಳನ್ನು ತಲೆಕೂದಲುಗಳನ್ನು ಹೊಂದಿರುವರು, ಹಂಸದ ಧ್ವನಿಯಂತೆ ಮೆದು ಮಾತಿನವರು, ದುಃಖ-ಶೋಕಗಳಿಂದ ಮೋಹಿತರಾದ ಇವರು ಸಾರಸಪಕ್ಷಿಯಂತೆ ಕಾಣುತ್ತಿರುವರು, ನೆಲದಲ್ಲಿ ಬಿದ್ದಿರುವರು.

ಫುಲ್ಲಪದ್ಮಪ್ರಕಾಶಾನಿ ಪುಂಡರೀಕಾಕ್ಷ ಯೋಷಿತಾಮ್ ।
ಅನವದ್ಯಾನಿ ವಕ್ತ್ರಾಣಿ ತಪತ್ಯಂಶುಭಿರಂಶುಮಾನ್ ॥೧೫॥

ಪುಂಡರೀಕನಯನನೆ! ಅರಳಿದ ಕಮಲಗಳಂತಿರುವ ದೋಷರಹಿತವಾದ ಈ ಮಹಿಳೆಯರ ಮುಖಗಳನ್ನು ಸೂರ್ಯನು ತನ್ನ ಕಿರಣಗಳಿಂದ ದಹಿಸುತ್ತಿರುವನು.

ಸೇರ್ಷ್ಯಾಣಾಂ ಮಮ ಪುತ್ರಾಣಾಂ ವಾಸುದೇವಾವರೋಧನಮ್ ।
ಮತ್ತಮಾತಂಗದರ್ಪಾಣಾಂ ಪಶ್ಯಂತ್ಯದ್ಯ ಪೃಥಗ್ಜನಾಃ ॥೧೬॥

ವಾಸುದೇವ! ಮದಿಸಿದ ಆನೆಗಳಂತೆ ಗರ್ವಿಷ್ಟರಾದ ಅಸೂಯಾರತರಾಗಿದ್ದ ನನ್ನ ಮಕ್ಕಳು, (ಅವರ ಪತ್ನಿಯರನ್ನು ಅನ್ಯರು ನೋಡದಿರಲಿ ಎಂದು ಸೆರಗಿನ ಮುಸುಕು ಮುಂತಾದವುಗಳಿಂದ) ತಡೆಯುತ್ತಿದ್ದರು, ಇಂತಹ ಕಳಂಕರಹಿತರಾದವರನ್ನು ಇಂದು ಸಾಮಾನ್ಯಜನರೂ ನೋಡುತ್ತಿರುವರು.

ಶತಚಂದ್ರಾಣಿ ಚರ್ಮಾಣಿ ಧ್ವಜಾಂಶ್ಚಾದಿತ್ಯಸನ್ನಿಭಾನ್ ।
ರೌಕ್ಮಾಣಿ ಚೈವ ವರ್ಮಾಣಿ ನಿಷ್ಕಾನಪಿ ಚ ಕಾಂಚನಾನ್ ॥೧೭॥

ಶಿರಸ್ತ್ರಾಣಾನಿ ಚೈತಾನಿ ಪುತ್ರಾಣಾಂ ಚ ಮಹೀತಲೇ ।
ಪಶ್ಯ ದೀಪ್ತಾನಿ ಗೋವಿಂದ ಪಾವಕಾನ್ ಸುಹುತಾನಿವ ॥೧೮॥

ಗೋವಿಂದ! ನನ್ನ ಮಕ್ಕಳ ಪ್ರಕಾಶಮಾನವಾದ ನೂರುಚಂದ್ರರಂತಿರುವ ಗುರಾಣಿಗಳು, ಸೂರ್ಯನಿಗೆ ಸಮವಾದ ಧ್ವಜಗಳು, ಹೊನ್ನಿನ ಕವಚಗಳು, ಚಿನ್ನದ ನಿಷ್ಕಗಳು (ಎದೆಯ ಅಲಂಕಾರ), ಈ ತಲೆಯ ಆವಾರಕಗಳು ಪ್ರಜ್ವಲಿಸಿ ಶಾಂತವಾದ ಅಗ್ನಿಯಂತೆ ಭೂಮಿಯಲ್ಲಿ ಬಿದ್ದಿವೆ ನೋಡು.

ಏಷ ದುಃಶಾಸನಃ ಶೇತೇ ಶೂರೇಣಾಮಿತ್ರಘಾತಿನಾ ।
ಪೀತಶೋಣಿತಸರ್ವಾಂಗೋ ಭೀಮಸೇನೇನ ಪಾತಿತಃ ॥೧೯॥

ದ್ಯೂತಕ್ಲೇಶಾನನುಸ್ಮೃತ್ಯ ದ್ರೌಪದೀಚೋದಿತೇನ ಚ ॥೨೦॥

ದ್ಯೂತದ ಕ್ಲೇಶಗಳನ್ನು ಸ್ಮರಿಸಿಕೊಂಡು, ದ್ರೌಪದಿಯಿಂದ ಪ್ರೇರಿತನಾದ ಶತ್ರುಸಂಹಾರಕನಾದ ಶೂರನಾದ ಭೀಮಸೇನನು ಎಲ್ಲ ಅವಯವಗಳಿಂದ ರಕ್ತವನ್ನು ಹೀರಿ ಈ ದುಶ್ಶಾಸನನನ್ನು (ಇಲ್ಲಿ) ಕೆಡವಿರುವನು.

ಉಕ್ತಾ ಹ್ಯನೇನ ಪಾಂಚಾಲೀ ಸಭಾಯಾಂ ದ್ಯೂತನಿರ್ಜಿತಾ ।
ಪ್ರಿಯಂ ಚಿಕೀರ್ಷತಾ ಭ್ರಾತುಃ ಕರ್ಣಸ್ಯ ಚ ಜನಾರ್ದನ ॥೨೧॥

ಸಹೈವ ಸಹದೇವೇನ ನಕುಲೇನಾರ್ಜುನೇನ ಚ ॥೨೨॥

ದಾಸೀಭೂತಾऽಸಿ ಪಾಂಚಾಲಿ ಕ್ಷಿಪ್ರಂ ಪ್ರವಿಶ ನೋ ಗೃಹಾನ್ ।
ತತೋऽಹಮಬ್ರುವಂ ಕೃಷ್ಣ ತದಾ ದುರ್ಯೋಧನಂ ನೃಪಮ್ ॥೨೩॥

ಜನಾರ್ದನ! ಕರ್ಣನಿಗೆ ಮತ್ತು (ತನ್ನ) ಅಣ್ಣನಿಗೆ ಖುಷಿಯನ್ನು ಉಂಟುಮಾಡಬೇಕೆಂದು ಈತನು, ಸಭೆಯಲ್ಲಿ ದ್ಯೂತದಲ್ಲಿ ಸೋತ ಪಾಂಚಾಲಿಯನ್ನು ಉದ್ದೇಶಿಸಿ ಹೇಳಿದನು- ' ಪಾಂಚಾಲಿ! ಸಹದೇವ ನಕುಲ ಅರ್ಜುನ ಇವರಿಂದ ಒಡಗೂಡಿದ (ನೀನು) ದಾಸಿಯಾಗಿರುವಿ, ಈ ಕೂಡಲೇ ನಮ್ಮ ಮನೆಗೆ ಹೋಗು' ಎಂದು. ಆಗ ನಾನು ರಾಜನಾದ ದುರ್ಯೋಧನನನ್ನು ಉದ್ದೇಶಿಸಿ ಹೇಳಿದೆನು.

ಮೃತ್ಯುಪಾಶಪರಿಕ್ಷಿಪ್ತಂ ಶಕುನಿಂ ಪುತ್ರ ವರ್ಜಯ ।
ಗಾಂಧಾರರಾಜಂ ದುರ್ಬುದ್ಧಿಂ ಮಾತುಲಂ ಕಲಹಪ್ರಿಯಮ್ ॥೨೪॥

ಮಗನೆ! ಮೃತ್ಯುಪಾಶವನ್ನು ಎಸೆಯುವ ದುರ್ಬುದ್ಧಿಯವನಾದ ಗಾಂಧಾರ ರಾಜನಾದ (ನಿನ್ನ) ಸೋದರಮಾವನಾದ ಜಗಳಗಂಟನಾದ ಈ ಶಕುನಿಯನ್ನು ಪರಿತ್ಯಜಿಸು.

ಕ್ಷಿಪ್ರಮೇನಂ ಪರಿತ್ಯಜ್ಯ ಪುತ್ರ ಸಂಶಾಮ್ಯ ಪಾಂಡವೈಃ ।
ನ ತ್ವಂ ಬುದ್ಧ್ಯಸಿ ದುರ್ಬುದ್ಧೇ ಭೀಮಸೇನಮಮರ್ಷಿಣಮ್ ॥೨೫॥

ತಿಳಿಗೇಡಿ ಮಗನೆ! ಕೂಡಲೇ ಈತನನ್ನು ಪರಿತ್ಯಜಿಸಿ, ಪಾಂಡವರೊಡನೆ ಸಂಧಿಯನ್ನು ಮಾಡಿಕೊ, ನೀನು ಕೋಪಿಷ್ಟನಾದ ಭೀಮನನ್ನು (ಸರಿಯಾಗಿ) ತಿಳಿದಿಲ್ಲ.

ವಾಙ್ನಾರಾಚೈಸ್ತುದಂಸ್ತೀಕ್ಷ್ಣೈರುಲ್ಕಾಭಿರಿವ ಕುಂಜರಮ್ ।
ತಾನೇವಂ ರಹಸಿ ಕ್ರುದ್ಧೋ ವಾಕ್ಶಲ್ಯಾನ್ನವಧಾರಯನ್ ॥೨೬॥

ಉತ್ಸಸರ್ಜ ವಿಷಂ ತೇಷು ಸರ್ಪೋ ಗೋವೃಷಭೇಷ್ವಿವ ॥೨೭॥

ಬೆಂಕಿಯ ಕೊಳ್ಳಿಯಿಂದ ಆನೆಯನ್ನು ತಿವಿಯುವಂತೆ ತೀಕ್ಷ್ಣವಾದ ಮಾತುಗಳೆಂಬ ಬಾಣಗಳಿಂದ (ಪಾಂಡವರನ್ನು) ತಿವಿದನು. ಒಳಗೇ ಕೋಪಿಸಿಕೊಂಡಿದ್ದ ಭೀಮಸೇನನು ಆ ಮಾತುಗಳೆಂಬ ಬಾಣಗಳನ್ನು ಸಹಿಸಿಕೊಂಡಿದ್ದು (ಸರಿಯಾದ ಸಮಯದಲ್ಲಿ) ಸರ್ಪವು ವೃಷಭಗಳಲ್ಲಿ ವಿಷವನ್ನು ಕಾರುವಂತೆ ಅವರುಗಳಲ್ಲಿ ವಿಷವನ್ನು ಕಾರಿರುವನು.

ಏಷ ದುಃಶಾಸನಃ ಶೇತೇ ನಿಕ್ಷಿಪ್ಯ ವಿಪುಲೌ ಭುಜೌ ।
ನಿಹತೋ ಭೀಮಸೇನೇನ ಸಿಂಹೇನೇವ ಮಹರ್ಷಭಃ ॥೨೮॥

ಸಿಂಹದಿಂದ ನಿಹತವಾದ ಮಹಾವೃಷಭದಂತೆ ಭೀಮನಿಂದ ನಿಹತನಾದ ಈ ದುಃಶಾಸನನು ನೀಳವಾದ ಭುಜಗಳನ್ನು ಭೂಮಿಯಲ್ಲಿ ಚಾಚಿಕೊಂಡು ಮಲಗಿರುವನು.

ಅತ್ಯರ್ಥಮಕರೋದ್ ರೌದ್ರಂ ಭೀಮಸೇನೋऽತ್ಯಮರ್ಷಣಃ ।
ದುಃಶಾಸನಸ್ಯ ಯತ್ ಕ್ರುದ್ಧೋऽಪಿಬಚ್ಛೋಣಿತಮಾಹವೇ ॥೨೯॥

ತುಂಬಕೋಪಿಯಾದ ಭೀಮಸೇನನು ಯುದ್ಧದಲ್ಲಿ ದುಃಶಾಸನನ ರಕ್ತವನ್ನು ಪಾನ ಮಾಡಿ, ಕೋಪದ ಅತಿರೇಕವನ್ನು ಪ್ರದರ್ಶಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಜಲಪ್ರದಾನಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಕೃಷ್ಣನಲ್ಲಿ ಮೃತರಾದ ತನ್ನ ಮಕ್ಕಳಿಗಾಗಿ ಗಾಂಧಾರಿಯ ಅಳಲು

ಗಾಂಧಾರೀ

ಏಷ ಮಾಧವ ಪುತ್ರೋ ಮೇ ವಿಕರ್ಣಃ ಪ್ರಾಜ್ಞಸಮ್ಮತಃ ।
ಭೂಮೌ ವಿನಿಹತಃ ಶೇತೇ ಭೀಮೇನ ಶತಧಾ ಕೃತಃ ॥೧॥

ಗಾಂಧಾರಿ– ಮಾಧವ! ಈ ನನ್ನ ಮಗನಾದ ಜ್ಞಾನಿಗಳಿಗೆ ಸಂಮತನಾದ ಈ ವಿಕರ್ಣನು ಭೀಮನಿಂದ ನೂರಾರು ಸೀಳಾಗಿ ಹತನಾಗಿ ಬಿದ್ದಿರುವನು.

ಗಜಮಧ್ಯೇ ಹತಃ ಶೇತೇ ವಿಕರ್ಣೋ ಮಧುಸೂದನ ।
ನೀಲಮೇಘಪರಿಕ್ಷಿಪ್ತಃ ಶರದೀವ ದಿವಾಕರಃ ॥೨॥

ಮಧುಸೂದನ! ಶರತ್ಕಾಲದಲ್ಲಿ ಕರಿಮೋಡಗಳ ಮಧ್ಯೆ ಎಸೆದ ಸೂರ್ಯನಂತೆ ವಿಕರ್ಣನು ಆನೆಗಳ ಮಧ್ಯೆ ಹತನಾಗಿ ಬಿದ್ದಿರುವನು.

ಅಸ್ಯ ಚಾಪಗ್ರಹೇಣೈಷ ಪಾಣಿಃ ಕೃತಕಿಣೋ ಮಹಾನ್ ।
ಕಥಂಚಿಚ್ಛಿದ್ಯತೇ ಗೃಧ್ನೈರತ್ತುಕಾಮೈಸ್ತಳತ್ರವಾನ್ ॥೩॥

ಈತನ ನೀಳವಾದ ಕರವು ಧನುಸ್ಸನ್ನು ಧರಿಸಿದ್ದರಿಂದ ಜಡ್ಡುಗಟ್ಟಿಹುದು, ಕೈಗಳು ಕವಚಗಳಿಂದ ಯುಕ್ತವಾಗಿದ್ದರೂ ಸಹ (ಮಾಂಸವನ್ನು) ತಿನ್ನಬೇಕೆಂಬ ಬಯಕೆಯ ರಣಹದ್ದುಗಳು ಹೇಗೋ (ಆತನ ಕೈಗಳನ್ನು) ತುಂಡರಿಸಿವೆ.

ಅಸ್ಯ ಭಾರ್ಯಾSSಮಿಷಪ್ರೇಪ್ಸೂನ್ ಗೃದ್ಧಕಾಕಾನ್ ತಪಸ್ವಿನೀ ।
ವಾರಯತ್ಯನಿಶಂ ಬಾಲಾ ನ ಚ ಶಕ್ನೋತಿ ಮಾಧವ ॥೪॥

ಮಾಧವ! ಈತನ ಪತ್ನಿಯಾದ ಬಾಲಿಕೆಯು ಮಾಂಸಕಾಮಿಗಳಾದ ಹದ್ದು ಕಾಗೆಗಳನ್ನು ಓಡಿಸಲು ನಿರಂತರ ಯತ್ನಿಸುತ್ತಿರುವಳು, ಆದರೂ ಆಗುತ್ತಿಲ್ಲ.

ಯುವಾ ವೃಂದಾರಕಃ ಶೂರೋ ವಿಕರ್ಣಃ ಪುರುಷರ್ಷಭ ।
ಸುಖೋಷಿತಃ ಸುಖಾರ್ಹಶ್ಚ ಶೇತೇ ಪಾಂಸುಷು ಮಾಧವ ॥೫॥

ಮಾಧವ! ಯುವಕನಾದ ದೇವತೆಯಂತಿರುವ ಪುರುಷಶ್ರೇಷ್ಠನಾದ ಸುಖವಾಗಿ ಬೆಳೆದ ಸುಖವನ್ನು ಉಣ್ಣಲು ಯೋಗ್ಯನಾದ ವಿಕರ್ಣನು ಧೂಳಿನಲ್ಲಿ ಬಿದ್ದಿರುವನು. ('ವೃಂದಾರಕ ಇವ ವಿದ್ಯಮಾನಃ- ವೃಂದಾರಕಃ' ಎಂದು ಲುಪ್ತೋಪಮಾ-ಲಕ್ಷಾಲಂಕಾರ).

ಕರ್ಣನಾಲೀಕನಾರಾಚೈರ್ಭಿನ್ನವರ್ಮಾಣಮಾಹವೇ ।
ಅದ್ಯಾಪಿ ನ ಜಹಾತ್ಯೇನಂ ಲಕ್ಷ್ಮೀರ್ಭರತಸತ್ತಮಮ್ ॥೬॥

ಯುದ್ಧದಲ್ಲಿ ಕರ್ಣ ನಾಲೀಕ ಬಾಣಗಳಿಂದ ಭಿನ್ನಕವಚಿಯಾದ ಭಾರತೋತ್ತಮನಾದ ಈತನನ್ನು ಕಾಂತಿಯು ಈಗಲೂ ಬಿಟ್ಟಿಲ್ಲ. (ಮೃತನಾಗಿ ಕೆಲವು ದಿನಗಳು ಸಂದಿದ್ದರೂ ದೇಹದ ಕಾಂತಿಗೆ ಕುಂದಾಗಿಲ್ಲ ಎಂದು ಭಾವ.)

ಏಷ ಸಂಗ್ರಾಮಶೂರೇಣ ಪ್ರತಿಜ್ಞಾಂ ಪಾಲಯಿಷ್ಯತಾ ।
ದುರ್ಮುಖೋ ನಿಹತಃ ಶೇತೇ ಭೀಮೇನಾರಿನಿಬರ್ಹಣಃ ॥೭॥

ಯುದ್ಧಶೂರನಾದ ಪ್ರತಿಜ್ಞೆಯನ್ನು ಪರಿಪಾಲಿಸುವ ಭೀಮನಿಂದ ಶತ್ರುನಾಶಕನಾದ ಈ ದುರ್ಮುಖನು ಮೃತನಾಗಿ ಬಿದ್ದಿರುವನು.

ತಸ್ಯೈತದ್ವದನಂ ಕೃಷ್ಣ ಶ್ವಾಪದೈರರ್ಧಭಕ್ಷಿತಮ್ ।
ವಿಭಾತ್ಯಭ್ಯಧಿಕಂ ತಾತ ಸಪ್ತಮ್ಯಾಮಿವ ಚಂದ್ರಮಾಃ ॥೮॥

ತಂದೆಯೆ, ಕೃಷ್ಣ! ಈತನ ಈ ಮುಖವು ನಾಯಿಯಿಂದ ಅರ್ಧತಿನ್ನಲಾಗಿದೆ, ಆದರೂ ಸಪ್ತಮಿಯ ಚಂದ್ರನಂತೆ ಕಂಗೊಳಿಸುತ್ತಿದ್ದಾನೆ.

ಶೂರಸ್ಯಾಸ್ಯ ರಣೇ ಕೃಷ್ಣ ಪಶ್ಯಾನನಮಥೇದೃಶಮ್ ॥೯॥

ಕೃಷ್ಣ! ಶೂರನಾದ ಈತನ ಇಂತಹ ಮುಖವನ್ನಾದರೂ ನೋಡು.

ಸ ಕಥಂ ನಿಹತೋऽಮಿತ್ರೈಃ ಪಾಂಸೂನ್ ಗ್ರಸತಿ ಮತ್ಸುತಃ ।
ಯಸ್ಯಾಹವಮುಖೇ ಸೌಮ್ಯ ಸ್ಥಾತಾ ನೈವೋಪಲಭ್ಯತೇ ॥೧೦॥

ಸೌಮ್ಯನೆ! ಯಾರ ಯುದ್ಧದಲ್ಲಿ ಎದುರಿನಲ್ಲಿ ನಿಲ್ಲುವವನೇ ಇರಲಿಲ್ಲವೋ, ಅಂತಹ ನನ್ನ ಮಗನು ಹೇಗೋ ಶತ್ರುಗಳಿಂದ ಸಂಹೃತನಾಗಿ ಮಣ್ಣನ್ನು ಮುಕ್ಕುತ್ತಿರುವನು.

ಚಿತ್ರಸೇನಂ ಹತಂ ಭೂಮೌ ಶಯಾನಂ ಮಧುಸೂದನ ।
ಧಾರ್ತರಾಷ್ಟ್ರಮಿಮಂ ಪಶ್ಯ ಪ್ರತಿಮಾನಂ ಧನುರ್ಭೃತಾಮ್ ॥೧೧॥

ಮಧುಸೂದನ! ಧನುರ್ಧಾರಿಗಳ ಮಾದರಿಯಾಗಿ ಧೃತರಾಷ್ಟ್ರನ ಪುತ್ರನಾಗಿ ಸಂಭೃತನಾಗಿ ಭೂಮಿಯಲ್ಲಿ ಮಲಗಿರುವ ಈ ಚಿತ್ರಸೇನನನ್ನು ಕಾಣು.

ತಂ ಚಿತ್ರಮಾಲ್ಯಾಭರಣಂ ಯುವತ್ಯಃ ಶೋಕಕರ್ಶಿತಾಃ ।
ಕ್ರವ್ಯಾದಸಂಘಸಹಿತಾ ರುದಂತ್ಯಃ ಪರ್ಯುಪಾಸತೇ ॥೧೨॥

ಬೆಲೆಬಾಳುವ ಮಾಲೆ ಮತ್ತು ಆಭರಣಗಳನ್ನು ಧರಿಸಿರುವ ಈತನನ್ನು, ದುಃಖದಿಂದ ಬಳಲಿದ ರೋದಿಸುತ್ತಿರುವ ಯುವತಿಯರು, ಮಾಂಸಭಕ್ಷಿಗಳಾದ ಪ್ರಾಣಿಗಳೂ ಸುತ್ತುವರೆದಿವೆ.

ಸ್ತ್ರೀಣಾಂ ರುದಿತನಿರ್ಘೋಷಂ ಶ್ವಾಪದಾನಾಂ ಚ ಗರ್ಜಿತಮ್ ।
ಚಿತ್ರರೂಪಮಿದಂ ಕೃಷ್ಣ ವಿಮಿಶ್ರಂ ಪ್ರತಿಭಾತಿ ಮೇ ॥೧೩॥

ಕೃಷ್ಣ! ನಾಯಿಗಳ ಬೊಗಳುವಿಕೆ ಮತ್ತು ಹೆಂಗಳೆಯರ ಅಳುವಿನ ಸದ್ದು ಕೂಡಿಕೊಂಡು ಇದು ವಿಚಿತ್ರವಾಗಿ ನನಗೆ ತೋರುತ್ತಿದೆ.

ಯುವಾ ವೃಂದಾರಕೋ ನಿತ್ಯಂ ಪ್ರವರಸ್ತ್ರೀನಿಷೇವಿತಃ ।
ವಿವಿಂಶತಿರಸೌ ಶೇತೇ ಧ್ವಸ್ತಃ ಪಾಂಸುಷು ಮಾಧವ ॥೧೪॥

ದೇವತೆಗಳಂತೆ ನಿತ್ಯ ಯುವಕನಾದ ಉತ್ತಮಸ್ತ್ರೀಯರಿಂದ ಸೇವಿತನಾದ ಈ ವಿವಿಂಶತಿಯು ಮೃತನಾಗಿ ಧೂಳಿನಲ್ಲಿ ಮಲಗಿರುವನು.

ಶರಸಂಕೃತ್ತವರ್ಮಾಣಂ ವೀರಂ ವಿಶಸನೇ ಹತಮ್ ।
ಪರಿವಾರ್ಯಾಸತೇ ಗೃಧ್ರಾಃ ಪಶ್ಯ ಕೃಷ್ಣ ವಿವಿಂಶತಿಮ್ ॥೧೫॥

ಕೃಷ್ಣ! ನೋಡು, ಬಾಣಗಳಿಂದ ತುಂಡಾದ ಕವಚಿಯಾದ ಯುದ್ಧದಲ್ಲಿ ಮೃತನಾದ ವಿವಿಂಶತಿಯನ್ನು ರಣಹದ್ದುಗಳು ಸುತ್ತುವರೆದಿವೆ.

ಪ್ರಮಥ್ಯ ಸಮರೇ ವೀರಃ ಪಾಂಡವಾನಾಮನೀಕಿನೀಮ್ ।
ಆವಿಶ್ಯ ಶಯನಂ ಶೇತೇ ಪುನಃ ಸತ್ಪುರುಷೋಚಿತಮ್ ॥೧೬॥

ವೀರನು ಯುದ್ಧದಲ್ಲಿ ಪಾಂಡವರ ಸೇನೆಯನ್ನು ಸೆದೆಬಡಿದು, ಮತ್ತೆ ಸತ್ಪುರುಷರಿಗೆ ಯೋಗ್ಯವಾದ ಹಾಸಿಗೆಯಲ್ಲಿ (ರಣರಂಗದಲ್ಲಿ) ಮಲಗಿರುವನು.

ಸ್ಮಿತೋಪಪನ್ನಂ ಸುನಸಂ ಸುಭ್ರು ತಾರಾಧಿಪೋಪಮಮ್ ।
ಅತೀವ ಸೌಮ್ಯಂ ವದನಂ ಕೃಷ್ಣ ಪಶ್ಯ ವಿವಿಂಶತೇಃ ॥೧೭॥

ಕೃಷ್ಣ! ಮುಗಳುನಗೆಯಿಂದ ಕೂಡಿರುವ, ಸುಂದರವಾದ ಮೂಗನ್ನು ಹೊಂದಿರುವ, ಚಂದ್ರನಿಗೆ ಹೋಲಿಕೆಯಾಗುವ ಹುಬ್ಬುಗಳನ್ನು ಹೊಂದಿರುವ, ವಿವಿಂಶತಿಯ ಅತಿಸೌಮ್ಯವಾದ ಮುಖವನ್ನು ನೋಡು.

ಏನಂ ಹಿ ಪರ್ಯುಪಾತಿಷ್ಠನ್ ಬಹುಧಾ ವರಯೋಷಿತಃ ।
ಕ್ರೀಡಂತಮಿವ ಗಂಧರ್ವಂ ದೇವಕನ್ಯಾಃ ಸಹಸ್ರಶಃ ॥೧೮॥

ಕ್ರೀಡಿಸುತ್ತಿರುವ ಗಂಧರ್ವನನ್ನು ಸಾವಿರಾರು ದೇವಕನ್ಯೆಯರು ಸೇವಿಸುತ್ತಿರುವಂತೆ ಅನೇಕ ಮಹಿಳಾಮಣಿಯರು ಈತನನ್ನು ಸುತ್ತುವರೆದಿರುವರು.

ಹಂತಾರಮರಿಸೈನ್ಯಾನಾಂ ವೀರಂ ಸಮಿತಿಶೋಭನಮ್ ।
ನಿಬರ್ಹಣಮಮಿತ್ರಾಣಾಂ ದುಸ್ಸಹಂ ಪ್ರಸಹೇತ ಕಃ ॥೧೯॥

ಶತ್ರುಸೈನ್ಯವನ್ನು ಸಂಹರಿಸುವ ರಣರಂಗದಲ್ಲಿ ಶೋಭಾಯಮಾನನಾದ ಶತ್ರುಗಳಿಂದ ಧರ್ಷಿತನಾಗದ ದುಃಸಹನನ್ನು ಯಾರು ಎದುರಿಸುವರು?

ದುಸ್ಸಹಸ್ಯೈತದಾಭಾತಿ ಶರೀರಂ ಸಂವೃತಂ ಶರೈಃ ।
ಗಿರಿರಾತ್ಮರುಹೈಃ ಫುಲ್ಲೈಃ ಕರ್ಣಿಕಾರೈರಿವಾವೃತಃ ॥೨೦॥

ಬಾಣಗಳಿಂದ ಕೂಡಿರುವ ದುಃಸಹನ ಶರೀರವು, ತನ್ನಲ್ಲಿ ಬೆಳೆದ ಕಾಡುಕಣಗಿಲೆಯ ಪುಷ್ಪಗಳಿಂದ ಕೂಡಿದ ಬೆಟ್ಟದಂತೆ ಕಾಣುತ್ತಿದೆ.

ಶಾತಕುಂಭಸ್ರಜಾ ಭಾತಿ ಕವಚೇನ ಚ ಭಾಸ್ವತಾ ।
ಅಗ್ನಿನೇವ ಗಿರಿಃ ಶ್ವೇತೋ ಗತಾಸುರಪಿ ದುಸ್ಸಹಃ ॥೨೧॥

ಚಿನ್ನದ ಮಾಲೆಯಿಂದ ಹೊಳೆಯುವ ಕವಚದಿಂದ ಕೂಡಿರುವ ದುಃಸಹನು ಮೃತನಾದರೂ ಬೆಂಕಿಯಿಂದ ಕೂಡಿರುವ ಶ್ವೇತಪರ್ವತದಂತೆ ಕಾಣುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಕೃಷ್ಣನಲ್ಲಿ ಅಭಿಮನ್ಯುವಿಗಾಗಿ ಗಾಂಧಾರಿಯ ಅಳಲು

ಗಾಂಧಾರೀ

ಅಧ್ಯರ್ಧಗುಣಮಾಹುರ್ಯಂ ಬಲೇ ಶೌರ್ಯೇ ಚ ಮಾಧವ ।
ಪಿತ್ರಾ ತ್ವಯಾ ಚ ದಾಶಾರ್ಹ ದೃಪ್ತಂ ಸಿಂಹಮಿವೋತ್ಕಟಮ್ ॥೧॥

ಗಾಂಧಾರಿ– ದಶಾರ್ಹಕುಲೋತ್ಪನ್ನನೆ, ಮಾಧವ! ಶ್ರೇಷ್ಠಸಿಂಹದಂತೆ ದೃಪ್ತನಾದ ಅಭಿಮನ್ಯುವು ಬಲದಿಂದ ಶೌರ್ಯದಿಂದ (ಆತನ) ತಂದೆಗೆ ಮತ್ತು ನಿನಗೆ (ಕೃಷ್ಣನಿಗೆ) ಒಂದೂವರೆ ಪಟ್ಟು ಹೆಚ್ಚಿನವನು ಎಂದು ಹೇಳುವರು.

ಯೋ ಬಿಭೇದ ಚಮೂಮೇಕೋ ಮಮ ಪುತ್ರಸ್ಯ ದುರ್ಭಿದಾಮ್ ।
ಸ ಭೂತ್ವಾ ಮೃತ್ಯುರನ್ಯೇಷಾಂ ಸ್ವಯಂ ಮೃತ್ಯುವಶಂ ಗತಃ ॥೨॥

ನನ್ನ ಮಗನ ಅಭೇದ್ಯವಾದ ಸೇನೆಯನ್ನು ಯಾವನು ಓರ್ವನೆ ಭೇದಿಸಿದನೋ, ಶತ್ರುಗಳಿಗೆ ಮೃತ್ಯುಪ್ರಾಯನಾಗಿದ್ದನೋ ಆತನು ಸ್ವತಃ ಮೃತ್ಯುವಿನ ವಶನಾದನು.

ತಸ್ಯೋಪಲಕ್ಷಯೇ ಕೃಷ್ಣ ಕಾರ್ಷ್ಣೇರಮಿತತೇಜಸಃ ।
ಅಭಿಮನ್ಯೋರ್ಹತಸ್ಯಾಪಿ ಪ್ರಭಾ ನೈವೋಪಶಾಮ್ಯತಿ ॥೩॥

ಕೃಷ್ಣ! ಮೃತನಾದರೂ ಮಹಾತೇಜಸ್ವಿಯಾದ ಅರ್ಜುನನ ಪುತ್ರನಾದ ಆ ಅಭಿಮನ್ಯುವಿನ ಕಾಂತಿಯು ಶಾಂತವಾಗಿಲ್ಲ.

ಏಷಾ ವಿರಾಟದುಹಿತಾ ಸ್ನುಷಾ ಗಾಂಡೀವಧನ್ವನಃ ।
ಹತಂ ಬಾಲಾ ಪತಿಂ ವೀರಂ ದೃಷ್ಟ್ವಾ ಶೋಚತ್ಯನಿಂದಿತಾ ॥೪॥

ದೋಷರಹಿತಳಾದ ವಿರಾಟರಾಜನ ಪುತ್ರಿಯಾದ ಬಾಲಕಿಯಾದ ಗಾಂಡೀವ ಧನುರ್ಧಾರಿಯ ಸೊಸೆಯಾದ ಈಕೆಯು ಮೃತನಾದ ವೀರನಾದ ಗಂಡನನ್ನು ಕಂಡು ದುಃಖಿಸುತ್ತಿರುವಳು.

ತಮೇಷಾ ಹಿ ಸಮಾಸಾದ್ಯ ಭಾರ್ಯಾ ಭರ್ತಾರಮಂತಿಕಾತ್ ।
ವಿರಾಟದುಹಿತಾ ಕೃಷ್ಣ ಪಾಣಿನಾ ಪರಿಮಾರ್ಜತಿ ॥೫॥

ಕೃಷ್ಣ! (ಅಭಿಮನ್ಯುವಿನ) ಪತ್ನಿಯಾದ ಈ ವಿರಾಟನ ಪುತ್ರಿಯು ಆ (ತನ್ನ) ಗಂಡನನ್ನು ಸಮೀಪಿಸಿ, ಕರಗಳಿಂದ ಸವರುತ್ತಿರುವಳು.

ತಥಾ ವಕ್ತ್ರಮುಪಾಘ್ರಾಯ ಸೌಭದ್ರಸ್ಯ ಯಶಸ್ವಿನೀ ।
ವಿಬುದ್ಧಕಮಲಾಕಾರಂ ಕಂಬುವೃತ್ತಶಿರೋಧರಮ್ ॥೬॥

ಹಾಗೆಯೆ ಸುಭದ್ರೆಯ ಮಗನ ಅರಳಿದ ಕಮಲದಂತಿರುವ ಮುಖವನ್ನು, ಶಂಖದಂತೆ ದುಂಡಾದ ಕತ್ತನ್ನು ಆಘ್ರಾಣಿಸುತ್ತಿರುವಳು.

ಕಾಮರೂಪಮತೀವೈಷಾ ಪರಿಷ್ವಜತಿ ಭಾಮಿನೀ ॥೭॥

ಲಜ್ಜಮಾನಾ ಪುರಾ ಚೈನಂ ಮಾಧ್ವೀಕಮದಮೂರ್ಚ್ಛಿತಾ ॥೮॥

ಹಿಂದೆ ಈ ಸುಂದರಿಯು ಮದ್ಯಪಾನದಿಂದ ಮತ್ತಳಾಗಿ ನಾಚಿಕೆಯಿಂದ ಮನ್ಮಥನಂತಿರುವ (ತನ್ನ ಗಂಡನನ್ನು) ಅಪ್ಪಿಕೊಳ್ಳುತ್ತಿದ್ದಳು.

ತಸ್ಯ ಕ್ಷತಜಸಂದಿಗ್ಧಂ ಜಾತರೂಪಪರಿಷ್ಕೃತಮ್ ।
ವಿಮುಚ್ಯ ಕವಚಂ ಕೃಷ್ಣ ಶರೀರಮಭಿವೀಕ್ಷತೇ ॥೯॥

ಕೃಷ್ಣ! ರಕ್ತದಿಂದ ಅಂಟಿಕೊಂಡಿದ್ದ ಚಿನ್ನದ ಕುಸುರೀ ಕೆಲಸದಿಂದ ಕೂಡಿದ ಕವಚವನ್ನು ಬಿಚ್ಚಿ (ಅತನ) ಶರೀರವನ್ನು ಪರಿಶೀಲಿಸುತ್ತಿರುವಳು.

ಅವೇಕ್ಷಮಾಣಾ ತಂ ಬಾಲಾ ಕೃಷ್ಣ ತ್ವಾಮಭಿವೀಕ್ಷತೇ ॥೧೦॥

ಆತನನ್ನು ಪರಿಶೀಲಿಸುತ್ತಿರುವ ಆ ಬಾಲಕಿಯು ನಿನ್ನನ್ನು ಗಮನಿಸುತ್ತಿರುವಳು.

ಕಥಂ ತೇ ಪುಂಡರೀಕಾಕ್ಷ ಸದೃಶಾಕ್ಷೋ ನಿಪಾತಿತಃ ।
ಬಲೇ ಶೌರ್ಯೇ ಚ ಸದೃಶಸ್ತೇಜಸಾ ಚೈವ ತೇಽನಘ ॥೧೧॥

ಪಾಪರಹಿತನೆ, ಕಮಲನಯನನೆ! ನಿನ್ನಂತೆ ಕಣ್ಣುಗಳನ್ನು ಹೊಂದಿರುವ, ಬಲದಲ್ಲಿ ಶೌರ್ಯದಲ್ಲಿ ತೇಜಸ್ಸಿನಲ್ಲಿಯೂ ನಿನಗೆ ಸಮನಾಗಿದ್ದ ಈತನು ಹೇಗೆ ತಾನೆ ಕೆಡಹಲ್ಪಟ್ಟನು?

ರೂಪೇಣ ಚ ತವಾತ್ಯರ್ಥಂ ಶೇತೇ ಭುವಿ ನಿಪಾತಿತಃ ॥೧೨॥

'ರೂಪದಿಂದ ನಿನಗೆ ಅತಿಯಾಗಿ ಹೋಲಿಕೆಯಿರುವ ಈತನು ನೆಲದಲ್ಲಿ ಬಿದ್ದಿರುವನು' (ಹೀಗೆಂದು ಕೃಷ್ಣನಲ್ಲಿ ತಿಳಿಸಿ, ಇನ್ನು ಮೃತ ಪತಿಯನ್ನು ಸಂಬೋಧಿಸಿ ಮಾತನಾಡುತ್ತಿರುವಳು.)

ಅತ್ಯಂತಸುಕುಮಾರಸ್ಯ ರಾಂಕವಾಜಿನಶಾಯಿನಃ ।
ಕಚ್ಚಿದದ್ಯ ಶರೀರಂ ತೇ ಭೂಮೌ ನ ಪರಿತಪ್ಯತೇ ॥೧೩॥

ಅತ್ಯಂತಕೋಮಲನಾದ ನೀನು ರಾಂಕಪ್ರಾಣಿಯಥಡಿಯಲ್ಲಿ (ಮೆತ್ತನೆಯ ಚರ್ಮವನ್ನು ಹೊಂದಿರುವ ಒಂದು ಪ್ರಾಣಿ) ಮಲಗುತ್ತಿದ್ದಿ ಈಗ ನೆಲದಲ್ಲಿ ಬಿದ್ದಿರುವ ಶರೀರಕ್ಕೆ ತುಂಬಾ ನೋವಾಗುತ್ತಿದೆಯೆ?

ಮಾತಂಗಭುಜವರ್ಷ್ಮಾಣೌ ಜ್ಯಾಕ್ಷೇಪಕಠಿನತ್ವಚೌ ।
ಕಾಂಚನಾಂಗದಿನೌ ಶೇತೇ ವಿಕ್ಷಿಪ್ಯ ವಿಪುಲೌ ಭುಜೌ ॥೧೪॥

ಆನೆಯ ಸೊಂಡಿಲಿನಂತಿರುವ ಬಿಲ್ಲಿನ ಹಗ್ಗದ ತಿಕ್ಕುವಿಕೆಯಿಂದ ಜಡ್ಡುಗಟ್ಟಿದ ಚರ್ಮವನ್ನು ಹೊಂದಿರುವ ಚಿನ್ನದ ಉಡುಗೆಗಳನ್ನು ತೊಟ್ಟಿರುವ ದಪ್ಪವಾದ ಭುಜಗಳನ್ನು ಚಾಚಿಕೊಂಡು ಮಲಗಿರುವನು.

ವ್ಯಾಯಮ್ಯ ಬಹುಧಾ ನೂನಂ ಸುಖಸುಪ್ತಃ ಶ್ರಮಾದಿವ ।
ಏವಂ ವಿಲಪತೀಮಾರ್ತಾಂ ಕಿಂ ಮಾಂ ನ ಪ್ರತಿಭಾಷಸೇ ॥೧೫॥

ವ್ಯಾಯಾಮವನ್ನು ಮಾಡಿ ಬಹು ಶ್ರಮವಾದಾಗ ಸುಖವಾಗಿ ಮಲಗಿದಂತೆ ತೋರುವನು, ಈ ರೀತಿಯಾಗಿ ರೋದಿಸುತ್ತಿರುವ ದುಃಖಿತಳಾದ ನನ್ನನ್ನು ಏಕೆ ಮಾತನಾಡಿಸುತ್ತಿಲ್ಲ?

ನನು ಮಾಂ ತ್ವಂ ಪುರಾ ದೂರಾದ್ ಅಭಿವೀಕ್ಷ್ಯಾಭಿಭಾಷಸೇ ।
ನ ಸ್ಮರಾಮ್ಯಪರಾಧಂ ಮೇ ಕಿಂ ಮಾಂ ನ ಪ್ರತಿಭಾಷಸೇ ॥೧೬॥

ನೀನು ಹಿಂದೆ ದೂರದಿಂದ ನನ್ನನ್ನು ಕಂಡರೂ ಮಾತನಾಡಿಸುತ್ತಿದ್ದಿ, (ನನ್ನಿಂದ) ಯಾವ ಅಪರಾಧವೂ (ಸಂದಿರುವುದು) ನನ್ನ ಸ್ಮರಣೆಗೆ ಬರುತ್ತಿಲ್ಲ, ಏಕೆ ನನ್ನನ್ನು ಮಾತನಾಡಿಸುತ್ತಿಲ್ಲ?

ಆರ್ಯಾಮಾರ್ಯ ಸುಭದ್ರಾಂ ತ್ವಮಿಮಾಂಶ್ಚ ತ್ರಿದಶೋಪಮಾನ್ ।
ಪಿತೄನ್ ಮಾತೄಂಶ್ಚ ದುಃಖಾರ್ತಾನ್ ವಿಹಾಯ ಕ್ವ ಗಮಿಷ್ಯಸಿ ॥೧೭॥

ಪೂಜ್ಯನೆ! ನೀನು ಪೂಜ್ಯಳಾದ ಸುಭದ್ರೆಯನ್ನು, ದೇವತೆಗಳಂತಿರುವ ದುಃಖಿತರಾದ ತಂದೆಯನ್ನು, ತಾಯಂದಿರನ್ನು ಪರಿತ್ಯಜಿಸಿ ಎಲ್ಲಿಗೆ ಹೋಗುವಿ?

ವೈಶಂಪಾಯನಃ

ತಸ್ಯ ಶೋಣಿತಸಂದಿಗ್ಧಾನ್ ಕೇಶಾನುನ್ನಮ್ಯ ಪಾಣಿನಾ ।
ಉತ್ಸಂಗೇ ವಕ್ತ್ರಮಾಧಾಯ ಜೀವಂತಮಿವ ಪೃಚ್ಛತಿ ॥೧೮॥

ವೈಶಂಪಾಯನ– ಆತನ ರಕ್ತಸಿಕ್ತವಾದ ಕೂದಲುಗಳನ್ನು ಮೇಲೆತ್ತಿ, ತೊಡೆಯ ಮೇಲೆ ಕೈಗಳಿಂದ ಮುಖವನ್ನು ಇಟ್ಟುಕೊಂಡು ಬದುಕಿರುವವನನ್ನು ಪ್ರಶ್ನಿಸುವಂತೆ ಪ್ರಶ್ನಿಸುತ್ತಿರುವಳು.

ಸ್ವಸ್ರೀಯಂ ವಾಸುದೇವಸ್ಯ ಪುತ್ರಂ ಗಾಂಡೀವಧನ್ವನಃ ।
ಕಥಂ ತ್ವಾಂ ರಣಮಧ್ಯಸ್ಥಂ ಜಘ್ನುರೇತೇ ಮಹಾರಥಾಃ ॥೧೯॥

ವಾಸುದೇವನ ತಂಗಿಯ ಮಗನಾದ, ಗಾಂಡಿವಧನುಸ್ಸನ್ನು ಧರಿಸಿದವನ ಪುತ್ರನಾದ (ನೀನೂ ಸಾಮಾನ್ಯನಲ್ಲ) ರಣರಂಗದ ಮಧ್ಯದಲ್ಲಿರುವ ನಿನ್ನನ್ನು ಈ ಮಹಾರಥರು ಹೇಗೆ ಸಂಹರಿಸಿದರು?

ಧಿಗಸ್ತು ಕ್ರೂರಕರ್ಮಾಣಸ್ತಾನ್ ಕೃಪಕರ್ಣಜಯದ್ರಥಾನ್ ।
ದ್ರೋಣದ್ರೌಣಾಯನೀ ಚೋಭೌ ಯೈರಹಂ ವಿಧವಾ ಕೃತಾ ॥೨೦॥

ಯಾರು ನನ್ನನ್ನು ವಿಧವೆಯನ್ನಾಗಿ ಮಾಡಿದರೋ ಆ ಕ್ರೂರಕರ್ಮಿಗಳಾದ ಕೃಪ ಕರ್ಣ ಜಯದ್ರಥರಿಗೆ , ದ್ರೋಣ ದ್ರೋಣಪುತ್ರರೀರ್ವರಿಗೆ ಧಿಕ್ಕಾರವಿರಲಿ.

ರಥರ್ಷಭಾಣಾಂ ಸರ್ವೇಷಾಂ ಕಥಮಾಸೀತ್ ತದಾ ಮನಃ ।
ಬಾಲಂ ತ್ವಾಂ ಪರಿವಾರ್ಯೈಕಮನೇಕೇಷಾಂ ನಿಜಘ್ನತಾಮ್ ॥೨೧॥

ಬಾಲಕನಾದ ಏಕಾಕಿಯಾದ ನಿನ್ನನ್ನು ಸುತ್ತುವರೆದ ಬಹುಸಂಖ್ಯಾಕರಾದ ಮಹಾರಥಿಕರಾದ (ನಿನ್ನನ್ನು) ಸಂಹರಿಸಿದ ಎಲ್ಲರ ಮನವು ಆಗ ಹೇಗಿದ್ದಿತು? (ಅವರೆಲ್ಲರ ಮನವು ಕಲ್ಲಾಗಿತ್ತೆನು?)

ಕಥಂ ನು ಪಾಂಡವಾನಾಂ ಚ ಪಾಂಚಾಲಾನಾಂ ಚ ಪಶ್ಯತಾಮ್ ।
ತ್ವಂ ವೀರ ನಿಧನಂ ಪ್ರಾಪ್ತೋ ನಾಥವಾನ್ ಸನ್ನನಾಥವತ್ ॥೨೨॥

ಹೇ ವೀರನೆ! ಪಾಂಡವರು ಪಾಂಚಾಲರು ನೋಡುತ್ತಿರುವಾಗ ಪಾಲಕರನ್ನು ಹೊಂದಿದ ನೀನು ಅನಾಥನಂತೆ ಹೇಗೆ ಸಾವನ್ನು ಹೊಂದಿದಿ?

ದೃಷ್ಟ್ವಾ ಬಹುಭಿರಾಕ್ರಂದೈರ್ನಿಹಿತಂ ತ್ವಾಮನಾಥವತ್ ।
ವೀರಾಃ ಪುರುಷಶಾರ್ದೂಲಃ ಕಥಂ ಜೀವಂತಿ ಪಾಂಡವಾಃ ॥೨೩॥

ಅನೇಕಜನರು ಆಕ್ರಮಿಸಿ ಗತಿಯಿಲ್ಲದವರಂತೆ ನಿನ್ನನ್ನು ಸಂಹರಿಸಿರುವುದನ್ನು ಕಂಡು ವೀರರಾದ ಪುರುಷಶ್ರೇಷ್ಠರಾದ ಪಾಂಡವರು ಹೇಗೆ ತಾನೆ ಜೀವಿಸುವರು?

ನ ರಾಜ್ಯಲಾಭೋ ವಿಪುಲಃ ಶತ್ರೂಣಾಂ ವಾ ಪರಾಭವಃ ।
ಪ್ರೀತಿಂ ದಾಸ್ಯತಿ ಪಾರ್ಥಾನಾಂ ತ್ವಾಮೃತೇ ಪುಷ್ಕರೇಕ್ಷಣ ॥೨೪॥

ಕಮಲದಂತೆ ನಯನಗಳನ್ನು ಹೊಂದಿದವನೆ! ನೀನಿಲ್ಲದೆ ಪೃಥೆಯ ಪುತ್ರರಿಗೆ ಸಮೃದ್ಧವಾದ ರಾಜ್ಯದ ಲಾಭವಾಗಲಿ, ಶತ್ರುಗಳ ಸೋಲಾಗಲಿ ಖುಷಿಯನ್ನು ನೀಡುವುದೆ?

ತವ ಶಸ್ತ್ರಜಿತಾನ್ ಲೋಕಾನ್ ಧರ್ಮೇಣ ಚ ದಮೇನ ಚ ।
ಕ್ಷಿಪ್ರಮನ್ವಾಗಮಿಷ್ಯಾಮಿ ತತ್ರ ಮಾಂ ಪ್ರತಿಪಾಲಯ ॥೨೫॥

ನೀನು ಧರ್ಮದಿಂದ ಇಂದ್ರಿಯನಿಗ್ರಹದಿಂದ ಶಸ್ತ್ರದಿಂದ ಜಯಿಸಿದ ಆ ಲೋಕಕ್ಕೆ ಶೀಘ್ರವಾಗಿ ಬರಲಿದ್ದೇನೆ, ಅಲ್ಲಿ ನನ್ನನ್ನು ನಿರೀಕ್ಷಿಸು.

ದುಷ್ಕರಂ ಪುನರಪ್ರಾಪ್ತೇ ಕಾಲೇ ಭವತಿ ಕೇನಚಿತ್ ।
ಯದಹಂ ತ್ವಾ(ತ್ವಾಂ) ರಣೇ ದೃಷ್ಟ್ವಾ ಹತಂ ಜೀವಾಮಿ ದುರ್ಭಗಾ ॥

ಯಾರಿಗಾದರೂ ಮರಣಕಾಲವು ಸನ್ನಿಹಿತವಾಗದಿದ್ದಲ್ಲಿ ಸಾವು ಕಷ್ಟವೆ, ಈಯಾವ ನಾನು ರಣರಂಗದಲ್ಲಿ (ಮೃತನಾದ) ನಿನ್ನನ್ನು ನೋಡಿಯೂ ಅದೃಷ್ಟಹೀನಳಾದ ನಾನು ಬದುಕಿರುವೆನು.

ಕಾಮಿದಾನೀಂ ನರವ್ಯಾಘ್ರ ತ್ವಂ ಶ್ಲಕ್ಷ್ಣಸ್ಮಿತಯಾ ಗಿರಾ ।
ಪಿತೃಲೋಕೇ ಸಮೇತ್ಯಾನ್ಯಾಂ ಮಾಮಿವಾಮಂತ್ರಯಿಷ್ಯಸಿ ॥೨೭॥

ಪುರುಷಶ್ರೇಷ್ಠನೆ! ಈಗ ಪಿತೃಲೋಕವನ್ನು ಸೇರಿ, ಇಲ್ಲಿ ನನ್ನನ್ನು ಮಾತನಾಡಿಸುತ್ತಿದ್ದಂತೆ ಅಲ್ಲಿ ಬೇರೇ ಯಾವ ಕನ್ಯೆಯನ್ನು ಮಾತನಾಡಿಸುತ್ತೀಯಾ?

ನೂನಮಪ್ಸರಸಾಂ ಸ್ವರ್ಗೇ ಮನಾಂಸಿ ಪ್ರಮಥಿಷ್ಯಸಿ ।
ಪರಮೇಣ ಚ ರೂಪೇಣ ಗಿರಾ ಚ ಸ್ಮಿತಪೂರ್ವಯಾ ॥೨೮॥

ನಿಶ್ಚಯವಾಗಿಯೂ ಸ್ವರ್ಗದಲ್ಲಿ (ನಿನ್ನ) ಶ್ರೇಷ್ಠ ರೂಪದಿಂದ, ಮುಗುಳ್ನಗೆಯಿಂದ ಕೂಡಿದ ಮಾತುಗಳಿಂದ ಅಪ್ಸರೆಯರ ಮನಸನ್ನು ಕಲುಕುತ್ತಿರುವಿ.

ಪ್ರಾಪ್ಯ ಪುಣ್ಯಕೃತಾಲ್ಲೋಕಾನಪ್ಸರೋಭಿಃ ಸಮೇಯಿವಾನ್ ।
ಸೌಭದ್ರ ವಿಹರನ್ ಕಾಲೇ ಸ್ಮರೇಥಾಃ ಸುಕೃತಾನಿ ಮೇ ॥೨೯॥

ಸುಭದ್ರಾತನಯನೆ! ಪುಣ್ಯಾಚರಣದಿಂದ ಲಭ್ಯವಾಗುವ ಲೋಕಗಳನ್ನು ಹೊಂದಿ, ಅಪ್ಸರೆಯರಿಂದ ಒಡಗೂಡಿ ವಿಹರಿಸುವ ಕಾಲದಲ್ಲಿ ನನ್ನ ಸತ್ಕರ್ಮಗಳನ್ನು ಸ್ಮರಿಸು.

ಏತಾವಾನಿಹ ಸಂವಾಸೋ ವಿಹಿತಸ್ತೇ ಮಯಾ ಸಹ ।
ಷಣ್ಮಾಸಾನ್ ಸಪ್ತಮೇ ಮಾಸೇ ತ್ವಂ ವೀರ ನಿಧನಂ ಗತಃ ॥೩೦॥

ಕೇವಲ ಆರು ತಿಂಗಳುಗಳ ಕಾಲಮಾತ್ರ ಇಲ್ಲಿ ನನ್ನೊಡನೆ ನಿನಗೆ ವಿಹಿತವಾಗಿತ್ತು (ವಿಧಿ ನಿಶ್ಚಯಿಸಿತ್ತು), ಏಳನೆ ತಿಂಗಳಲ್ಲಿ ವೀರನೆ! ಸಾವನ್ನು ಹೊಂದಿರುವಿ.

ಗಾಂಧಾರೀ

ಇತ್ಯುಕ್ತವಚನಾಮೇನಾಮಪಾಕರ್ಷಂತಿ ದುಃಖಿತಾಮ್ ।
ಉತ್ತರಾಂ ಮೋಘಸಂಕಲ್ಪಾಂ ಮತ್ಸ್ಯರಾಜಕುಲಸ್ತ್ರಿಯಃ ॥೩೧॥

ಗಾಂಧಾರಿ– ಈ ರೀತಿಯಾಗಿ ಹೇಳುತ್ತಿರುವ ಹತಾಶಳಾದ ದುಃಖಿತಳಾದ ಈ ಉತ್ತರೆಯನ್ನು ಮತ್ಸ್ಯರಾಜನ ಕುಲದ ಮಹಿಳೆಯರು ದೂರಸೆಳೆಯುತ್ತಿರುವರು.

ಉತ್ತರಾಮಪಕೃಷ್ಯೈತಾಮಾರ್ತಾಮಾರ್ತತರಾಃ ಸ್ವಯಮ್ ।
ವಿರಾಟಂ ನಿಹತಂ ದೃಷ್ಟ್ವಾ ಕ್ರೋಶಂತಿ ವಿಲಪಂತಿ ಚ ॥೩೨॥

ದುಃಖಿತಳಾದ ಉತ್ತರೆಯನ್ನು ಸೆಳೆಯುತ್ತಿರುವ ಸ್ವತಃ ಅತ್ಯಂತ ದುಃಖಿತರಾದ ಇವರು ಮೃತನಾದ ವಿರಾಟನನ್ನು ಕಂಡು ಅರಚುತ್ತಿರುವರು, ರೋದಿಸುತ್ತಿರುವರು.

ದ್ರೋಣಾಸ್ತ್ರಶರಸಂಕೃತ್ತಂ ಶಯಾನಂ ಶೋಣಿತೋಕ್ಷಿತಮ್ ।
ವಿರಾಟಂ ವಿತುದಂತ್ಯೇತೇ ಗೃಧ್ರಗೋಮಾಯುವಾಯಸಾಃ ॥೩೩॥

ದ್ರೋಣನ ಅಸ್ತ್ರ-ಬಾಣಗಳಿಂದ ಘಾಸಿಗೊಂಡು ರಕ್ತಸಿಕ್ತನಾಗಿ ಮಲಗಿರುವ ವಿರಾಟನನ್ನು ಹದ್ದು ನರಿ ಕಾಗೆಗಳು ಕಿತ್ತಿ ತಿನ್ನುತ್ತಿವೆ.

ವಿತುದ್ಯಮಾನಂ ವಿಹಗೈರ್ವಿರಾಟಮಸಿತೇಕ್ಷಣಾಃ ।
ನ ಶಕ್ನುವಂತಿ ವಿವಶಾ ವಿಸರ್ಜಯಿತುಮಾತುರಾಃ ॥೩೪॥

ಕಪ್ಪುಕಣ್ಣಿನ ಕಾತುರರಾದ ಪರಾಧೀನರಾದ ಮಹಿಳೆಯರು ಕಾಗೆಗಳಿಂದ ಕುಕ್ಕಲ್ಪಡುವ ವಿರಾಟನನ್ನು (ಅವುಗಳಿಂದ) ಪಾರುಮಾಡಲು ಸಮರ್ಥರಾಗುತ್ತಿಲ್ಲ.

ಆಸಾಮಾತಪತಪ್ತಾನಾಮಾಯಾಸೇನ ಚ ಯೋಷಿತಾಮ್ ।
ಶ್ರಮೇಣ ಚ ವಿವರ್ಣಾನಾಂ ರೂಪಾಣಾಂ ವಿಕೃತಂ ವಪುಃ ॥೩೫॥

ಬಿಸಿಲಿನಿಂದ ಬೆಂದು ಆಯಾಸದಿಂದ ಬಣ್ಣವನ್ನು ಕಳೆದುಕೊಂಡ ಈ ಮಹಿಳೆಯರ ದೇಹವು ಶ್ರಮದಿಂದ ಬಳಲುವಿಕೆಯಿಂದ ವಿಕೃತವಾಗಿದೆ.

ಉತ್ತರಾಂ ಚಾಭಿಮನ್ಯುಂ ಚ ಕಾಂಭೋಜಂ ಚ ಸುದಕ್ಷಿಣಮ್ ।
ಶಿಶೂನೇತಾನ್ ಹತಾನ್ ಪಶ್ಯ ಲಕ್ಷ್ಮ(ಕ್ಷ್ಮ)ಣಂ ಚ ಸುದರ್ಶನಮ್॥೩೬॥

ಮೃತರಾದ ಅಭಿಮನ್ಯುವನ್ನು, ಕಾಂಭೋಜದೇಶದ ಸುದಕ್ಷಿಣನನ್ನು, ಈ ಎಲ್ಲ ಪುತ್ರರನ್ನು ಸುಂದರನಾದ ಲಕ್ಷಣನನ್ನು ಮತ್ತೂ ಈ ಉತ್ತರೆಯನ್ನು ನೋಡು.

ಕಾರ್ಷ್ಣಿನಾऽಭಿಹತಂ ಕೃಷ್ಣ ಲಕ್ಷಣಂ ಪ್ರಿಯದರ್ಶನಮ್ ।
ಆಯೋಧನಶಿರೋಮಧ್ಯೇ ಶಯಾನಂ ಪಶ್ಯ ಮಾಧವ ॥೩೭॥

ಮಾಧವ, ಕೃಷ್ಣ! ನೋಡಲು ಚಂದವಿದ್ದ, ಅರ್ಜುನನ ಪುತ್ರನಿಂದ ಸಂಹೃತನಾಗಿ ರಣರಂಗದ ಮಧ್ಯೆ ಮಲಗಿರುವ ಲಕ್ಷಣನನ್ನು ನೋಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಸ್ತ್ರೀಪರ್ವಣಿ ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಕೃಷ್ಣನಲ್ಲಿ ಕರ್ಣನಿಗಾಗಿ ಗಾಂಧಾರಿಯ ಅಳಲು

ಗಾಂಧಾರೀ

ಏಷ ವೈಕರ್ತನಃ ಶೇತೇ ಮಹೇಷ್ವಾಸೋ ಮಹಾರಥಃ ।
ಜ್ವಲಿತಾನಲವತ್ ಸಂಖೇ ಸಂಶಾಂತಃ ಪಾರ್ಥತೇಜಸಾ ॥೧॥

ಗಾಂಧಾರಿ– ದೊಡ್ಡಬಿಲ್ಲಾಳಾದ ಮಹಾರಥಿಕನಾದ ಈ ಕರ್ಣನು ಯುದ್ಧದಲ್ಲಿ ಪೃಥೆಯ ಪುತ್ರನ ಬಲದಿಂದ ಶಾಂತನಾಗಿ (ಸಂಹೃತನಾಗಿ), ಉರಿದು ಶಾಂತವಾದ ಅಗ್ನಿಯಂತೆ ಮಲಗಿರುವನು.

ಪಶ್ಯ ವೈಕರ್ತನಂ ಕರ್ಣಂ ನಿಪಾತ್ಯಾತಿರಥಾನ್ ಬಹೂನ್ ।
ಶೋಣಿತೌಘಪರೀತಾಂಗಂ ಶಯಾನಂ ಪತಿತಂ ಭುವಿ ॥೨॥

ಅನೇಕ ಅತಿರಥರನ್ನು ಕೆಡವಿ ರಕ್ತದಿಂದ ತೊಯ್ದ ಅವಯವಗಳನ್ನು ಹೊಂದಿರುವ ನೆಲದಲ್ಲಿ ಬಿದ್ದು ಮಲಗಿರುವ ಕರ್ಣನನ್ನು ನೋಡು.

ಅಮರ್ಷೀ ದೀರ್ಘರೋಷಶ್ಚ ಮಹೇಷ್ವಾಸೋ ಮಹಾರಥಃ ।
ರಣೇ ನಿಹತಃ ಶೇತೇ ಶೂರೋ ಗಾಂಡೀವಧನ್ವನಾ ॥೩॥

ಕೋಪವನ್ನು ಹೊಂದಿದ್ದ ದೀರ್ಘರೋಷವನ್ನು ಹೊಂದಿದ್ದ ದೊಡ್ಡಬಿಲ್ಲಾಳಾದ ಮಹಾರಥಿಕನಾದ ಶೂರನು ರಣರಂಗದಲ್ಲಿ ಗಾಂಡೀವಧನುವನ್ನು ಧರಿಸಿದ ಅರ್ಜುನನಿಂದ ಸಂಹೃತನಾಗಿ ಮಲಗಿರುವನು.

ಯಂ ಸ್ಮ ಪಾಂಡವಸನ್ತ್ರಾಸಾನ್ಮಮ ಪುತ್ರಾ ಮಹಾರಥಾಃ ।
ಪ್ರಾಯುದ್ಧ್ಯಂತ ಪುರಸ್ಕೃತ್ಯ ಮಾತಂಗಮಿವ ಯೂಥಪಮ್ ॥೪॥

ಶಾರ್ದೂಲಮಿವ ಸಿಂಹೇನ ಸಮರೇ ಸವ್ಯಸಾಚಿನಾ ।
ಮಾತಂಗಮಿವ ಮತ್ತೇನ ಮಾತಂಗೇನ ನಿಪಾತಿತಮ್ ॥೫॥

ಆನೆಯ ಹಿಂಡು, ನಾಯಕ ಸಲಗವನ್ನು ಮುಂದೆಮಾಡಿಕೊಂಡು ಸಾಗುವಂತೆ, ಮಹಾರಥಿಕರಾದ ನನ್ನ ಪುತ್ರರು ಪಾಂಡವರ ಭೀತಿಯಿಂದ ಯಾರನ್ನು ಮುಂದೆ ಮಾಡಿಕೊಂಡು ಯುದ್ಧವನ್ನು ಮಾಡುತ್ತಿದ್ದರೋ, ಆ ಕರ್ಣನನ್ನು ಯುದ್ಧದಲ್ಲಿ ಸವ್ಯಸಾಚಿಯು, ಸಿಂಹವು ಹುಲಿಯನ್ನು ಸಂಹರಿಸುವಂತೆ, ಮದಿಸಿದ ಆನೆಯು ಆನೆಯನ್ನು ಕೆಡಹುವಂತೆ ಕೆಡಹಿರುವನು.

ತ ಏತಾಃ ಪುರುಷವ್ಯಾಘ್ರ ನಿಹತಂ ಶೂರಮಾಹವೇ ।
ಪ್ರಕೀರ್ಣಮೂರ್ಧಜಾಸ್ತಸ್ಯ ಸ್ತ್ರಿಯಸ್ತಂ ಪರ್ಯುಪಾಸತೇ ॥೬॥

ಪುರುಷಶ್ರೇಷ್ಠನೆ! ಯುದ್ಧದಲ್ಲಿ ಸಂಹೃತನಾದ ಆ ಶೂರನನ್ನು ಆ ಈ ಯಾವ ಸ್ತ್ರೀಯರು ತಲೆಕೂದಲನ್ನು ಹರಡಿಕೊಂಡು ಸುತ್ತುವರೆದಿರುವರು.

ಉದ್ವಿಗ್ನಃ ಸತತಂ ಯಸ್ಮಾದ್ ಧರ್ಮರಾಜೋ ಯುಧಿಷ್ಠಿರಃ ।
ತ್ರಯೋದಶ ಸಮಾ ನಿದ್ರಾಂ ಚಿಂತಯನ್ ನಾಧಿಗಚ್ಛತಿ ॥೭॥

ಅನಾಧೃಷ್ಯಃ ಪರೈರ್ಯುದ್ಧೇ ಶತ್ರುಭಿರ್ಮಘವಾನಿವ ।
ಯುಗಾಂತಾಗ್ನಿರಿವಾರ್ಚಿಷ್ಮಾನ್ ಹಿಮವಾನಿವ ಸುಸ್ಥಿರಃ ॥೮॥

ಸ ಭೂತ್ವಾ ಶರಣಂ ಪೂರ್ವಂ ಧಾರ್ತರಾಷ್ಟ್ರಸ್ಯ ಮಾಧವ ।
ಭೂಮೌ ನಿಹತಃ ಶೇತೇ ವಾತರುಗ್ಣ ಇವ ದ್ರುಮಃ ॥೯॥

ಮಾಧವ! ಯುದ್ಧದಲ್ಲಿ ಸ್ಥಿರವಾಗಿನಿಲ್ಲುವ ಧರ್ಮರಾಜನು ಯಾರಿಂದ ನಿರಂತರ ಉದ್ವಿಗ್ನನಾಗಿದ್ದನೊ, ಈತನ ಚಿಂತೆಯಿಂದ ಹದಿಮೂರುವರ್ಷ ನಿದ್ರೆಯನ್ನು ಹೊಂದಿರಲಿಲ್ಲವೋ, ಶತ್ರುಗಳಿಂದ ಯುದ್ಧದಲ್ಲಿ ಧರ್ಷಣಕ್ಕೆ ಒಳಗಾಗದ ಇಂದ್ರನಂತಿದ್ದ ಯುಗದ ಕೊನೆಯ ಅಗ್ನಿಯಂತೆ ಕಾಂತಿಮಂತನಾದ ಹಿಮಾಲಯದಂತೆ ನಿಶ್ಚಲನಾಗಿ ನಿಲ್ಲುವ, ಈಹಿಂದೆ ಧೃತರಾಷ್ಟ್ರನ ಮಕ್ಕಳಿಗೆ ಆಶ್ರಯನಾಗಿದ್ದ ಆತನು ಗಾಳಿಯಿಂದ ಬಿದ್ದ ಮರದಂತೆ ಭೂಮಿಯಲ್ಲಿ ಮೃತನಾಗಿ ಮಲಗಿರುವನು.

ಪಶ್ಯ ಕರ್ಣಸ್ಯ ಪತ್ನೀಂ ತ್ವಂ ವೃಷಸೇನಸ್ಯ ಮಾತರಮ್ ।
ಲಾಲಪ್ಯಮಾನಾಂ ಕರುಣಂ ರುದಂತೀಂ ಪತಿತಾಂ ಭುವಿ ॥೧೦॥

ಮನಕರಗುವಂತೆ ರೋದಿಸುತ್ತಿರುವ ನೆಲದಲ್ಲಿ ಬಿದ್ದಿರುವ ಕರ್ಣನ ಪತ್ನಿಯನ್ನು ಸಮಾಧಾನಪಡಿಸುತ್ತಿರುವ ಕರ್ಣನ ತಾಯಿಯನ್ನು ನೀನು ನೋಡು.

ಆಚಾರ್ಯಶಾಪೋಽನುಗತೋ ಧ್ರುವಂ ತ್ವಾಂ
ಯದಗ್ರಸಚ್ಚಕ್ರಮಿದಂ ಧರಾ ತೇ ।
ತತಃ ಶರೇಣಾಭಿಹತಂ ಶಿರಸ್ತೇ
ಧನಂಜಯೇನಾಹವಚಕ್ರಮಧ್ಯೇ ॥೧೧॥

ಆಚಾರ್ಯನ ಶಾಪವು ನಿನ್ನನ್ನು ನಿಶ್ಚಯವಾಗಿಯೂ ಅನುಸರಿಸಿತು, ಆದ್ದರಿಂದಲೇ ಯುದ್ಧಮಧ್ಯದಲ್ಲಿ ಭೂಮಿಯು ಯಾವಾಗ ಈ ಚಕ್ರವನ್ನು ನುಂಗಿತೊ ಆ ಕೂಡಲೆ ಧನಂಜಯನು ನಿನ್ನ ತಲೆಯನ್ನು ಬಾಣದಿಂದ ತೆಗೆದನು. (ಹಿಂದೆ ಕಾರಣಾಂತರದಿಂದ ಕರ್ಣನು ಬ್ರಾಹ್ಮಣನೋರ್ವನ ಗೋವನ್ನು ಸಂಹರಿಸಿದ್ದನು, ತನ್ನಿಮಿತ್ತ ಆತನು ಈ ರೀತಿಯಲ್ಲಿ ಶಪಿಸಿದ್ದನು, ಆ ಶಾಪವು ಈಗ ಫಲಿಸಿತು ಎಂದು ಕರ್ಣನ ತಾಯಿಯು ನುಡಿಯುತ್ತಿರುವಳು.)

ಅಹೋ ಧಿಗೇಷಾ ಪತಿತಾ ವಿಸಂಜ್ಞಾ
ಸಮೀಕ್ಷ್ಯ ಜಾಂಬೂನದಬದ್ಧನಿಷ್ಕಮ್ ।
ಕರ್ಣಂ ಮಹಾಬಾಹುರದೀನಸತ್ತ್ವಂ
ಸುಷೇಣಮಾತಾ ರುದತೀ ಭೃಶಾರ್ತಾ ॥೧೨॥

ಬಹು ಆರ್ತಳಾದ ಸುಷೇಣನ ತಾಯಿಯು, ಮಹಾ ಅದಟಿನ ನೀಳಬಾಹುವಿನ ಚಿನ್ನದ ಕವಚದಿಂದ ಬಂಧಿತನಾದ ಕರ್ಣನನ್ನು ನೋಡಿ ಮೂರ್ಛಿತಳಾಗಿ ಬಿದ್ದು ರೋದಿಸುತ್ತಿರುವಳು, (ಈ ಸನ್ನಿವೇಶಕ್ಕೆ) ಧಿಕ್ಕಾರವಿರಲಿ.

ಅಲ್ಪಾವಶೇಷೋ ಹಿ ಕೃತೋ ಮಹಾತ್ಮಾ
ಶರೀರಭಕ್ಷೈಃ ಪರಿಭಕ್ಷಯದ್ಭಿಃ ।
ದ್ರಷ್ಟುಂ ನ ಸಂಪ್ರೀತಿಕರಃ ಶಶೀವ ।
ಕೃಷ್ಣಸ್ಯ ಪಕ್ಷಸ್ಯ ಚತುರ್ದಶಾಹೇ ॥೧೩॥

ಮಾಂಸವನ್ನು ತಿನ್ನುವ ಪ್ರಾಣಿಗಳಿಂದ (ಆತನ ಶರೀರವನ್ನು ತಿಂದು) ಸ್ವಲ್ಪಮಾತ್ರ ಉಳಿದಿರುವ ಮಹಾತ್ಮನು, ಕೃಷ್ಣಪಕ್ಷದ ಚತುರ್ದಶೀದಿನದಂದಿನ ಚಂದ್ರನಂತೆ ನೋಡಲು ಪ್ರೀತಿಕರನಾಗಿಲ್ಲ.

ವಿವರ್ತಮಾನಾ ಪತಿತಾ ಪೃಥಿವ್ಯಾಮ್
ಉತ್ಥಾಯ ದೀನಾ ಪುನರೇವ ಚೈಷಾ ।
ಕರ್ಣಸ್ಯ ವಕ್ತ್ರಂ ಪರಿಜಿಘ್ರಮಾಣಾ
ರೋರೂಯತೇ ಪುತ್ರವಧಾಭಿತಪ್ತಾ ॥೧೪॥

ದುಃಖಿತಳಾದ ಈಕೆಯು ಭೂಮಿಯಲ್ಲಿ ಮುಖಅಡಿಮಾಡಿಕೊಂಡು ಬಿದ್ದಿರುವ (ಕರ್ಣನನ್ನು) ಮೇಲೆತ್ತಿ, ಮತ್ತೆ ಕರ್ಣನ ಮುಖವನ್ನು ಆಘ್ರಾಣಿಸುವವಳಾಗಿ ಮಗನ ಸಾವಿನಿಂದ ದುಃಖಿತಳಾಗಿ ರೋದಿಸುತ್ತಿರುವಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ಬಾಹ್ಲೀಕನಿಗಾಗಿ ಗಾಂಧಾರಿಯ ಅಳಲು.

ಗಾಂಧಾರೀ

ಅವಂತ್ಯಂ ಭೀಮಸೇನೇನ ಭಕ್ಷಯಂತಿ ನಿಪಾತಿತಮ್ ।
ಗೃಧ್ರಗೋಮಾಯವಃ ಶೂರಂ ಬಹುಬಂಧುಮಬಂಧುವತ್ ॥೧॥

ಗಾಂಧಾರಿ– ಭೀಮಸೇನನಿಂದ ಸಂಹೃತನಾದ ಶೂರನಾದ ಬಹುಬಂಧುಗಳನ್ನು ಹೊಂದಿರುವ ಅವಂತೀದೇಶದ ರಾಜನನ್ನು (ಬಾಹ್ಲೀಕರಾಜನನ್ನು) ಹದ್ದು ನರಿಗಳು ಅನಾಥನನ್ನು (ಶರೀರವನ್ನು ತಿನ್ನುವಂತೆ) ತಿನ್ನುತ್ತಿವೆ.

ತಂ ಪಶ್ಯ ಕದನಂ ಕೃತ್ವಾ ಶತ್ರೂಣಾಂ ಮಧುಸೂದನ ।
ಶಯಾನಂ ವೀರಶಯನೇ ರುಧಿರೇಣ ಸಮುಕ್ಷಿತಮ್ ॥೨॥

ಮಧುಸೂದನ! ಶತ್ರುಗಳೊಡನೆ ಯುದ್ಧವನ್ನು ಮಾಡಿ ರಕ್ತದಿಂದ ನೆನೆದವನಾಗಿ ವೀರರ ಹಾಸಿಗೆಯಲ್ಲಿ ಮಲಗಿರುವ ಆತನನ್ನು ನೋಡು.

ತಂ ಸೃಗಾಲಾಶ್ಚ ಕಂಕಾಶ್ಚ ಕ್ರವ್ಯಾದಾಶ್ಚ ಪೃಥಗ್ವಿಧಾಃ ।
ತೇನ ತೇನ ವಿಕರ್ಷಂತಿ ಪಶ್ಯ ಕಾಲಸ್ಯ ಪರ್ಯಯಮ್ ॥೩॥

ನರಿಗಳು ಕಂಕಪಕ್ಷಿಗಳು ಬೇರೆ ಬೇರೆ ಮಾಂಸಭಕ್ಷಿಪ್ರಾಣಿಗಳು (ಮೃತರ ದೇಹಗಳಿಂದ) ಆ ಅವಯವಗಳನ್ನು ಕಿತ್ತುತ್ತಿವೆ, ಕಾಲದ ವ್ಯತ್ಯಯವನ್ನು ಕಾಣು.

ಶಯಾನಂ ವೀರಶಯನೇ ಶೂರಮಾಕ್ರಂದಕಾರಿಣಮ್ ।
ಅವಂತ್ಯಮಭಿತೋ ನಾರ್ಯೋ ರುದಂತ್ಯಃ ಪರ್ಯುಪಾಸತೇ ॥೪॥

ವೀರಶಯನದಲ್ಲಿ ಮಲಗಿರುವ ಶೂರನಾದ ಆಕ್ರಮಣಕಾರಿಯಾದ ಅವಂತಿದೇಶದ ರಾಜನನ್ನು ರೋದಿಸುತ್ತಾ ಆತನ ಮಹಿಳೆಯರು ಸುತ್ತಲೂ ನೆರೆದಿರುವರು.

ಪ್ರಾತಿಪೇಯಂ ಮಹೇಷ್ವಾಸಂ ಹತಂ ಭೀಮೇನ ಬಾಹ್ಲಿಕಮ್ ।
ಪ್ರಸುಪ್ತಮಿವ ಶಾರ್ದೂಲಂ ಪಶ್ಯ ಕೃಷ್ಣ ಮನಸ್ವಿನಮ್ ॥೫॥

ಪ್ರತೀಪರಾಜನ ಪುತ್ರನಾದ ದೊಡ್ಡಬಿಲ್ಲಾಳಾದ ಭೀಮನಿಂದ ಮೃತನಾದ ಸ್ವಾಭಿಮಾನಿಯಾದ ಹುಲಿಯು ಮಲಗಿರುವಂತೆ ಮಲಗಿರುವ ಬಾಹ್ಲೀಕನನ್ನು ಕೃಷ್ಣ! ನೋಡು. (ಬಾಹ್ಲೀಕ ದೇವಾಪಿ ಶಂತನು ಮೂವರು ಪ್ರತೀಪರಾಜನ ಪುತ್ರರು. ಬಾಹ್ಲೀಕನ ತಾಯಿಯು ಅವಂತಿದೇಶದ ರಾಜನ ಪುತ್ರಿ. ಈತನು ಮಾತಾಮಹನ ಮನೆಯಲ್ಲಿಯೇ ನೆಲೆಸಿದ್ದ).

ಅತೀವ ಮುಖಿವರ್ಣೋ೯ಽಸ್ಯ ನಿಹತಸ್ಯಾಪಿ ಶೋಭತೇ ।
ಸೋಮಸ್ಯೇವಾಭಿಪೂರ್ಣಸ್ಯ ಪೌರ್ಣಮಾಸ್ಯಾಂ ಸಮುದ್ಯತಃ ॥೬॥

ಮೃತನಾಗಿದ್ದರೂ ಈತನ ಮುಖದ ವರ್ಣವು ಹುಣ್ಣಿಮೆಯಂದು ಉದಿಸಿದ ಪೂರ್ಣನಾದ ಚಂದ್ರನಂತೆ ಶೋಭಿಸುತ್ತಿದೆ.

ಪುತ್ರಶೋಕಾಭಿತಪ್ತೇನ ಪ್ರತಿಜ್ಞಾಂ ಚೈವ ರಕ್ಷತಾ ।
ಪಾಕಶಾಸನಿನಾ ಸಂಖೇ ವಾರ್ಧಕ್ಷತ್ರಿರ್ನಿಪಾತಿತಃ ॥೭॥

ಪುತ್ರಶೋಕದಿಂದ ತಪ್ತನಾದ (ತನ್ನ) ಪ್ರತಿಜ್ಞೆಯನ್ನು ರಕ್ಷಿಸಿಕೊಳ್ಳುವ ಪಾಕಶಾಸನನ (ಇಂದ್ರನ) ಪುತ್ರನು (ಅರ್ಜುನನು) ವೃದ್ಧಕ್ಷತ್ರನ ಪುತ್ರನನ್ನು (ಸೈಂಧವನನ್ನು ಜಯದ್ರಥ) ಯುದ್ಧದಲ್ಲಿ ಕೆಡಹಿರುವನು.

ಏಕಾದಶ ಚಮೂಭರ್ತ್ರಾ ರಕ್ಷ್ಯಮಾಣಂ ಮಹಾತ್ಮನಾ ।
ಸತ್ಯಂ ಚಿಕೀರ್ಷತಾ ಪಶ್ಯ ಹತಮೇನಂ ಜಯದ್ರಥಮ್ ॥೮॥

ಹನ್ನೊಂದು ಅಕ್ಷೋಹಿಣೀಸೇನೆಯ ಒಡೆಯನಿಂದ (ದುರ್ಯೋಧನನಿಂದ) ರಕ್ಷಿತನಾದ ಮಹಾತ್ಮರಿಂದ (ದ್ರೋಣಾದಿಗಳಿಂದ) ರಕ್ಷಿತನಾದ ಈ ಜಯದ್ರಥನನ್ನು, ಸತ್ಯವನ್ನು ಸಂರಕ್ಷಿಸಬೇಕೆಂದು ಬಯಸುವ ಅರ್ಜುನನು ಸಂಹರಿಸಿರುವನು, ನೋಡು.

ಸಿಂಧುಸೌವೀರಭರ್ತಾರಂ ದರ್ಪಪೂರ್ಣಂ ಮನಸ್ವಿನಮ್ ।
ಭಕ್ಷಯಂತಿ ಶಿವಾ ಗೃಧ್ರಾ ಜನಾರ್ದನ ಜಯದ್ರಥಮ್ ॥೯॥

ಜನಾರ್ದನ! ಸ್ವಾಭಿಮಾನಿಯಾದ ದರ್ಪಭರಿತನಾದ ಸಿಂಧುಸೌವಿರ ದೇಶದ ಒಡೆಯನಾದ ಜಯದ್ರಥನನ್ನು ನರಿಗಳು ಹದ್ದುಗಳು ತಿನ್ನುತ್ತಿವೆ.

ಸಂರಕ್ಷ್ಯಮಾಣಂ ಭಾರ್ಯಾಭಿರನುರಕ್ತಾಭಿರಚ್ಯುತ ।
ಭಷಂತೋಽಪ್ಯಪಕರ್ಷಂತಿ ಗಹನಂ ನಿಮ್ನಮಂತಿಕಾತ್ ॥೧೦॥

ಅಚ್ಯುತ! (ತಮ್ಮ ಗಂಡಂದಿರಲ್ಲಿ) ಅನುರಕ್ತರಾದ ಹೆಂಡಂದಿರಿಂದ ಸಂರಕ್ಷಿತವಾದರೂ, ಹೆದರಿಸುತ್ತಿದ್ದರೂ (ಶೂ ಶೂ... ಎಂದು ನರಿ ಮುಂತಾದ ಮಾಂಸಾಶಿಗಳನ್ನು ಹೆದರಿಸುತ್ತಿದ್ದರೂ, ಅವರ) ಹತ್ತಿರದಿಂದ ಆಳದ ತಗ್ಗಿಗೆ (ಶವಗಳನ್ನು) ಎಳೆಯುತ್ತಿವೆ.

ತಮೇತಾಃ ಪರ್ಯುಪಾಸಂತೇ ವೀಕ್ಷಮಾಣಾ ಮಹಾಭುಜಮ್ ।
ಸಿಂಧುಸೌವೀರಕಾಂಭೋಜಗಾಂಧಾರಯವನಸ್ತ್ರಿಯಃ ॥೧೧॥

ನೀಳಬಾಹುವಾದ ಆತನನ್ನು ಈ ಸಿಂಧು ಸೌವಿರ ಕಾಂಭೋಜ ಗಾಂಧಾರ ಯವನ ಸ್ತ್ರೀಯರು ನೋಡುತ್ತಾ ಸುತ್ತುವರೆದಿರುವರು.

ಯದಾ ಕೃಷ್ಣಾಮುಪಾದಾಯ ಪ್ರಾದ್ರವತ್ ಕೇಕಯೈಃ ಸಹ ।
ತದೈವ ವಧ್ಯಃ ಪಾಂಡೂನಾಂ ಜನಾರ್ದನ ಜಯದ್ರಥಃ ॥೧೨॥

ದುಃಶಲಾಂ ಮಾನಯದ್ಭಿಸ್ತು ತದಾ ಮುಕ್ತೋ ಜಯದ್ರಥಃ ।
ಕಥಮದ್ಯ ನ ತಾಂ ಕೃಷ್ಣ ಮಾನಯಂತಿ ಸ್ಮ ತೇ ಸುತಾಃ ॥೧೩॥

ಜನಾರ್ದನ! ಯಾವಾಗ ಕೃಷ್ಣೆಯನ್ನು (ದ್ರೌಪದಿಯನ್ನು) ಅಪಹರಿಸಿಕೊಂಡು ಕೇಕಯರೊಡನೆ ಓಡಿದನೋ ಅಂದೇ ಪಾಂಡವರಿಂದ ಸಂಹೃತನಾಗಬೇಕಿತ್ತು, ದುಃಶಲೆಯನ್ನು (ಜಯದ್ರಥನ ಪತ್ನಿ ಮತ್ತು ದುರ್ಯೋಧನನ ತಂಗಿ) ಆದರಿಸಿದ್ದರಿಂದ ಆಗ ಜಯದ್ರಥನು ಮುಕ್ತನಾದನು, ಕೃಷ್ಣ! ಆ ಮಕ್ಕಳು (ಪಾಂಡವರು) ಆಕೆಯನ್ನು (ದುಃಶಲೆಯನ್ನು) ಇಂದು ಏಕೆ ಆದರಿಸುತ್ತಿಲ್ಲ? (ದುಃಶಲೆಯ ಮೇಲಿನ ಪ್ರೀತಿಯಿಂದ ಆಕೆಯ ಗಂಡನಾದ ಜಯದ್ರಥನನ್ನು ಸಂಹರಿಸದೇ ಬಿಡಬಹುದಿತ್ತಲ್ಲವೇ? ಎಂದು ಭಾವ.)

ಸೈಂಧವಂ ಮೇ ಸುತಾ ಬಾಲಾ ಪ್ರಲಪಂತೀವ ದುಃಖಿತಾ ।
ಪ್ರಮಾಪಯತಿ ಚಾತ್ಮಾನಂ ಪ್ರಾಕ್ರೋಶಂತೀ ಚ ಪಾಂಡವಾನ್ ॥೧೪॥

ಅತ್ಯಂತ ದುಃಖಿತಳಾದ ಚಿಕ್ಕವಯದವಳಾದ ನನ್ನ ಮಗಳು ಸೈಂಧವನನ್ನು ಉದ್ದೇಶಿಸಿ ರೋದಿಸುತ್ತಿರುವಳು, ತನ್ನನ್ನೇ ನಿಂದಿಸಿಕೊಳ್ಳುತ್ತಿರುವಳು (ಪೂರ್ವಜನ್ಮದಲ್ಲಿ ಮಹಾಪಾಪಿಯಾಗಿದ್ದೆ ಇತ್ಯಾದಿಯಾಗಿ ತನ್ನನ್ನೇ ತಾನು ನಿಂದಿಸಿಕೊಳ್ಳುತ್ತಿರುವಳು), ಪಾಂಡವರ ವಿಷಯದಲ್ಲಿ ಕೋಪಿಸಿಕೊಳ್ಳುತ್ತಿರುವಳು.

ಕಿಂ ನು ದುಃಖತರಂ ಕೃಷ್ಣ ಪರಂ ಮಮ ಭವಿಷ್ಯತಿ ।
ಯತ್ ಸುತಾ ವಿಧವಾ ಬಾಲಾ ಸ್ನುಷಾಶ್ಚ ನಿಹತೇಶ್ವರಾಃ ॥೧೫॥

ಬಾಲಿಕೆಯಾದ ಮಗಳು ವಿಧವೆಯಾದಳು, ಸೊಸೆಯಂದಿರಾದರೋ ಗಂಡಂದಿರನ್ನು ಕಳೆದುಕೊಂಡಿರುವರು, ಕೃಷ್ಣ! ನನಗೆ ಇದಕ್ಕಿಂತಲೂ ಹೆಚ್ಚಿನ ಬೇರೆ ಯಾವ ದುಃಖವು ಒದಗಬಹುದು?

ಅಹೋ ಧಿಗ್ ದುಃಶಲಾಂ ಪಶ್ಯ ವೀತಶೋಕಭಯಾದಿವ ।
ಭರ್ತುಃ ಶಿರ ಅಪಶ್ಯಂತೀಂ ಧಾವಮಾನಾಮಿತಸ್ತತಃ ॥೧೬॥

ಕೃಷ್ಣ! ದುಃಶಲೆಯನ್ನು ನೋಡು, ಗಂಡನ ತಲೆಯನ್ನು ಕಾಣದೆ ಶೋಕರಹಿತಳಂತೆ ಭಯರಹಿತಳಷ್ಟೆ. ಇತ್ತಿಂದತ್ತ ಓಡುತ್ತಿರುವಳು. (ಆತನ ತಲೆಯು ಈ ರಣರಂಗದಲ್ಲಿಲ್ಲ, ಆತನ ಶಿರವನ್ನು ತೆಗೆದ ಅರ್ಜುನನು ಪಾಶುಪತಾಸ್ತ್ರದ ಪ್ರಭಾವದಿಂದ ಆ ತಲೆಯನ್ನು ಎಲ್ಲೋ ದೂರದಲ್ಲಿರುವ ಆತನ ತಂದೆಯ ಕರಗಳಲ್ಲಿ ಬೀಳುವಂತೆ ಮಾಡಿದ್ದನು) ಇಂತಹ ಘೋರಾವಸ್ಥೆಗೆ ಕಾರಣವಾದ ಯುದ್ಧಕ್ಕೆ ಧಿಕ್ಕಾರವಿರಲಿ.

ವಾರಯಾಮಾಸ ಯಃ ಸರ್ವಾನ್ ಪಾಂಡವಾನ್ ಪುತ್ರಗರ್ಧಿನಃ ।
ಸ ಹತ್ವಾ ವಿಶಿಖೈಃ ಸೇನಾಂ ಸ್ವಯಂ ಮೃತ್ಯುವಶಂ ಗತಃ ॥೧೭॥

ಯಾವನು ಬಾಣಗಳಿಂದ ಸೇನೆಯನ್ನು ಸಂಹರಿಸಿ, ಪುತ್ರಪ್ರೇಮಿಗಳಾದ ಎಲ್ಲ ಪಾಂಡವರನ್ನು (ಅಭಿಮನ್ಯುವನ್ನು ಸಂಹರಿಸುವ ದಿನದಂದು ವರಪ್ರಭಾವದಿಂದ ಸೇನೆಯ ವ್ಯೂಹದ ಮುಖದಲ್ಲಿ ನಿಂತು) ತಡೆದಿದ್ದನೊ, ಆತನು ಸ್ವತಃ ಮೃತ್ಯುವಿನ ವಶನಾಗಿರುವನು.

ತಂ ಸುಪ್ತಮಿವ ಮಾತಂಗಂ ವೀರಂ ಪರಮದುರ್ಜಯಮ್ ।
ಪರಿವಾರ್ಯ ರುದಂತ್ಯೇತಾಃ ಸ್ತ್ರಿಯಶ್ಚಂದ್ರೋಪಮಾನನಾಃ ॥೧೮॥

ವೀರನಾದ ಮತ್ತೊಬ್ಬರಿಂದ ಸೋಲನ್ನೇ ಕಾಣದ ಆನೆಯಂತೆ ಮಲಗಿರುವ ಆತನನ್ನು ಚಂದ್ರನಂತೆ ಮುಖಗಳನ್ನು ಹೊಂದಿರುವ ಈ ಮಹಿಳೆಯರು ಸುತ್ತುವರೆದು ರೋದಿಸುತ್ತಿರುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಸ್ತ್ರೀಪರ್ವಣಿ ಸೈಂಧವದರ್ಶನಂ ನಾಮ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ಶಲ್ಯ-ಭೀಷ್ಮಾದಿಗಳಿಗಾಗಿ ಗಾಂಧಾರಿಯ ಅಳಲು

ಗಾಂಧಾರೀ

ಏಷ ಶಲ್ಯೋ ಹತಃ ಶೇತೇ ಸಾಕ್ಷಾನ್ನಕುಲಮಾತುಲಃ ।
ಧರ್ಮಜ್ಞೇನ ಸತಾ ತಾತ ಧರ್ಮರಾಜೇನ ಸಂಯುಗೇ ॥೧॥

ಗಾಂಧಾರಿ– ಸಜ್ಜನನಾದ ಧರ್ಮವನ್ನು ತಿಳಿದ ಧರ್ಮರಾಜನಿಂದ ಯುದ್ಧದಲ್ಲಿ ನಕುಲನ ಸ್ವಂತ ಸೋದರಮಾವನಾದ ಈ ಶಲ್ಯರಾಜನು ಸಂಹೃತನಾಗಿ ಬಿದ್ದಿರುವನು.

ಯಸ್ತ್ವಯಾ ಸ್ಪರ್ಧತೇ ನಿತ್ಯಂ ಸರ್ವತ್ರ ಮಧುಸೂದನ ।
ಸ ಏಷ ನಿಹತಃ ಶೇತೇ ಮದ್ರರಾಜೋ ಮಹಾಬಲಃ ॥೨॥

ಮಾಧವ! ಮಹಾಬಲಶಾಲಿಯಾದ ಯಾವಾಗಲೂ ಎಲ್ಲ ಸಂದರ್ಭಗಳಲ್ಲಿಯೂ ನಿನ್ನೊಡನೆ ಸ್ಪರ್ಧಿಸುತ್ತಿದ್ದನೋ ಆ ಇ ಮದ್ರರಾಜನು ಮೃತನಾಗಿ ಬಿದ್ದಿರುವನು.

ಜಯದ್ರಥೇ ಯದಿ ಬ್ರೂಯುರಪರಾಧಂ ಕಥಂಚನ ।
ಮದ್ರಪುತ್ರೇ ಕಥಂ ಬ್ರೂಯುರಪರಾಧಂ ವಿವಕ್ಷವಃ ॥೩॥

ಜಯದ್ರಥನ ವಿಷಯದಲ್ಲಿ ಹೇಗಾದರೂ ತಪ್ಪನ್ನು ಹೇಳಬಹುದು, ಆದರೆ ಮದ್ರಪುತ್ರನ ವಿಷಯದಲ್ಲಿ ತಿಳಿದವರು ತಪ್ಪನ್ನು ಹೇಗೆ ಹೇಳಿಯಾರು?

ತೇನ ಸಂಗೃಹ್ಣತಾ ತಾತ ರಥಮಾಧಿರಥೇರ್ಯುಧಿ ।
ಜಯಾರ್ಥಂ ಪಾಂಡುಪುತ್ರಾಣಾಂ ತಥಾ ತೇಜೋವಧಃ ಕೃತಃ ॥೪॥

ತಂದೆಯೆ! ಯುದ್ಧದಲ್ಲಿ ಅಧಿರಥನ ಪುತ್ರನ (ಕರ್ಣನ) ರಥದ ಸಾರಥಿಯಾಗಿದ್ದ ಆತನು ಹಾಗೆಯೇ ಪಾಂಡುಪುತ್ರರ ಜಯಕ್ಕಾಗಿ (ಕರ್ಣನ) ತೇಜೋವಧೆಯನ್ನು ಮಾಡಿದನು.

ಅಹೋ ಧಿಕ್ ಪಶ್ಯ ಶಲ್ಯಸ್ಯ ಪೂರ್ಣಚಂದ್ರಸುದರ್ಶನಮ್ ।
ಮುಖಂ ಪದ್ಮಪಲಾಶಾಕ್ಷಂ ಕಾಕೈರಾದಷ್ಟಮವ್ರಣಮ್ ॥೫॥

ಪದ್ಮದ ಎಲೆಯಂತಿರುವ ಕಣ್ಣುಗಳನ್ನು ಹೊಂದಿರುವ ಪೂರ್ಣಚಂದ್ರನಂತೆ ಸುಂದರವಾದ ವ್ರಣವಿಲ್ಲದ ಶಲ್ಯರಾಜನ ಮುಖವನ್ನು ಕಾಗೆಗಳು ಕುಕ್ಕುತ್ತಿವೆ, ಅಯ್ಯೋ ಧಿಕ್ಕಾರವಿರಲಿ.

ಏಷಾ ಚಾಮೀಕರಾಭಸ್ಯ ತಪ್ತಕಾಂಚನಸಪ್ರಭಾ ।
ಆಸ್ಯಾದ್ ವಿನಿಃಸೃತಾ ಜಿಹ್ವಾ ಭಕ್ಷ್ಯತೇ ಕೃಷ್ಣಪಕ್ಷಿಭಿಃ ॥೬॥

ಹೊಂಬಣ್ಣದ ಈತನ ಮುಖದಿಂದ ಹೊರಬಂದ ಪುಟಕ್ಕಿಟ್ಟ ಚಿನ್ನದಂತಿರುವ ನಾಲಿಗೆಯನ್ನು ಕಾಗೆಗಳು ತಿನ್ನುತ್ತಿವೆ.

ಯುಧಿಷ್ಠಿರೇಣ ನಿಹತಂ ಶಲ್ಯಂ ಸಮಿತಿಶೋಭನಮ್ ।
ರುದಂತ್ಯಃ ಪರ್ಯುಪಾಸಂತೇ ಮದ್ರರಾಜಕುಲಾಂಗನಾಃ ॥೭॥

ರಣರಂಗಕ್ಕೆ ಶೋಭಾವಹನಾದ ಶಲ್ಯನನ್ನು ಯುಧಿಷ್ಠಿರನು ಸಂಹರಿಸಿದನು, ರೋದಿಸುತ್ತಿರುವ ಮದ್ರರಾಜನ ಮಹಿಳೆಯರು ಆತನನ್ನು ಸುತ್ತುವರೆದಿರುವರು.

ಏತಾಃ ಸುಸೂಕ್ಷ್ಮವಸನಾ ಮದ್ರರಾಜಂ ನರರ್ಷಭಮ್ ।
ಕ್ರೋಶಂತ್ಯಭಿಸಮಾಸಾದ್ಯ ಕ್ಷತ್ರಿಯಾಃ ಕ್ಷತ್ರಿಯರ್ಷಭಮ್ ॥೮॥

ಅತಿತೆಳುವಾದ ವಸ್ತ್ರವನ್ನು ತೊಟ್ಟಿರುವ ಕ್ಷತ್ರಿಯಕುಲೋತ್ಪನ್ನೆಯರಾದ ಇವರು ಕ್ಷತ್ರಿಯಶ್ರೇಷ್ಠನಾದ ಮನುಷ್ಯರಲ್ಲಿ ಹಿರಿಯನಾದ ಮದ್ರರಾಜನ ಬಳಿ ಬಂದು ರೋದಿಸುತ್ತಿರುವರು.

ಶಲ್ಯಂ ನಿಪತಿತಂ ನಾರ್ಯಃ ಪರಿವಾರ್ಯಾಭಿತಃ ಸ್ಥಿತಾಃ ।
ವಾಶಿತಾಗೃಷ್ಟಯಃ ಪಂಕೇ ಪರಿಮಗ್ನಮಿವಾರ್ಷಭಮ್ ॥೯॥

ಕೆಸರಿನಲ್ಲಿ ಸಿಲುಕಿದ ವೃಷಭವನ್ನು ಕಡಸುಗಳು ಸುತ್ತುವರೆದಂತೆ, ಬಿದ್ದಿರುವ ಶಲ್ಯನನ್ನು ಸ್ತ್ರೀಯರು ಸುತ್ತುವರೆದು ನಿಂತಿರುವರು.

ಶಲ್ಯಂ ಶರಣದಂ ಶೂರಂ ಪಶ್ಯೈನಂ ರಥಸತ್ತಮಮ್ ।
ಶಯಾನಂ ವೀರಶಯನೇ ಶರೈರ್ವಿಶಕಲೀಕೃತಮ್ ॥೧೦॥

ಆಶ್ರಯದಾತನಾಗಿದ್ದ ರಥಿಕರಲ್ಲಿ ಉತ್ತಮನಾದ ಬಾಣಗಳಿಂದ ಘಾಸಿಗೊಂಡಿರುವ ವೀರಶಯನದಲ್ಲಿ ಮಲಗಿರುವ ಶೂರನಾದ ಈ ಶಲ್ಯನನ್ನು ನೋಡು.

ಏಷ ಶೈಲಾಲಯೋ ರಾಜಾ ಭಗದತ್ತಃ ಪ್ರತಾಪವಾನ್ ।
ಗಜಾಂಕುಶಧರಃ ಶ್ರೀಮಾನ್ ಶೇತೇ ಯುಧಿ ನಿಪಾತಿತಃ ॥೧೧॥

ಗುಡ್ಡಗಾಡಿನ ರಾಜನಾದ ಪ್ರತಾಪಶಾಲಿಯಾದ ಆನೆಯ ಅಂಕುಶವನ್ನು ಧರಿಸಿರುವ ಕಾಂತಿಮಂತನಾದ ಈ ಭಗದತ್ತನು, ಯುದ್ಧದಲ್ಲಿ (ಶತ್ರುಗಳಿಂದ) ಕೆಡಹಲಾಗಿ ಮಲಗಿರುವನು.

ಯಸ್ಯ ರುಗ್ಣಮಯೀ ಮಾಲಾ ಶಿರಸ್ಯೇಷಾ ವಿರಾಜತೇ ।
ಶ್ವಾಪದೈರ್ಭಕ್ಷ್ಯಮಾಣಸ್ಯ ಶೋಭಯತ್ಯೇವ ಮೂರ್ಧಜಾನ್ ॥೧೨॥

ಯಾವನು ನಾಯಿಗಳಿಂದ ತಿನ್ನಲ್ಪಟ್ಟಿರುವನೋ ಆತನ ಚಿನ್ನದ ಈ ಮಾಲೆಯು ತಲೆಯಲ್ಲಿ ವಿರಾಜಿಸುತ್ತಿದೆ, ತಲೆಕೂದಲುಗಳನ್ನು ಚೆಂದಗೊಳಿಸುತ್ತಿದೆ.

ಏತೇನ ಕಿಲ ಪಾರ್ಥಸ್ಯ ಯುದ್ಧಮಾಸೀತ್ ಸುದಾರುಣಮ್ ।
ರೋಮಹರ್ಷಣಮತ್ಯುಗ್ರಂ ಶಕ್ರಸ್ಯ ಬಲಿನಾ ಯಥಾ ॥೧೩॥

ಇಂದ್ರನಿಗೂ ಬಲಿಚಕ್ರವರ್ತಿಗೂ ನಡೆದಂತೆ, ಈತನಿಗೂ ಪೃಥೆಯ ಪುತ್ರನಿಗೂ ಭಯಂಕರವಾದ ರೋಮಾಂಚಕಾರಿಯಾದ ಯುದ್ಧವಾಯಿತು.

ಯೋಧಯಿತ್ವಾ ಮಹಾಬಾಹುರೇಷ ಪಾರ್ಥಂ ಧನಂಜಯಮ್ ।
ಸಂಶಯಂ ಗಮಯಿತ್ವಾ ಚ ಕುಂತೀಪುತ್ರೇಣ ಪಾತಿತಃ ॥೧೪॥

ಈ ನೀಳಬಾಹುವು ಯುದ್ಧಮಾಡಿ ಪೃಥೆಯ ಪುತ್ರನಾದ ಧನಂಜಯನಿಗೆ (ಗೆಲುವಿನ) ಸಂದೇಹವನ್ನು ಉಂಟುಮಾಡಿ, (ಕೊನೆಗೆ) ಕುಂತೀಪುತ್ರನೇ (ಈತನನ್ನು) ಕೆಡಹಿದನು.

ಯಸ್ಯ ನಾಸ್ತಿ ಸಮೋ ಲೋಕೇ ಶೌರ್ಯೇ ವೀರ್ಯೇ ಚ ಕಶ್ಚನ ।
ಸ ಏಷ ನಿಹತಃ ಶೇತೇ ಭೀಷ್ಮೋ ಭೀಮಕೃದಾಹವೇ ॥೧೫॥

ಶೌರ್ಯದಲ್ಲಿ ವೀರ್ಯದಲ್ಲಿ ಯಾರಿಗೆ ಸಮರು ಈ ಲೋಕದಲ್ಲಿ ಯಾರೂ ಇಲ್ಲವೊ ಅಂತಹ ಈ ಭೀಷ್ಮನು ಯುದ್ಧದಲ್ಲಿ ಭಯಂಕರವಾದ ಕರ್ಮವನ್ನು ಮಾಡಿ ನಿಹತನಾಗಿ ಮಲಗಿರುವನು.

ಪಶ್ಯ ಶಾಂತನವಂ ಕೃಷ್ಣ ಶಯಾನಂ ಸೂರ್ಯವರ್ಚಸಮ್ ।
ಯುಗಾಂತ ಇವ ಕಾಲೇನ ಪಾತಿತಂ ಸೂರ್ಯಮಂಬರಾತ್ ॥೧೬॥

ಸೂರ್ಯನಂತೆ ಕಾಂತಿಯಿರುವ ಮಲಗಿರುವ ಶಂತನುವಿನ ಪುತ್ರನನ್ನು ನೋಡು, ಕೃಷ್ಣ! ಪ್ರಳಯಕಾಲದಲ್ಲಿ ಗಗನದಿಂದ ಕಾಲನು ಕೆಡಹಿರುವ ಸೂರ್ಯನಂತೆ ತೋರುತ್ತಿರುವನು.

ಏಷ ಜಿತ್ವಾ ರಣೇ ಶತ್ರೂನ್ ಶಸ್ತ್ರಘಾತೇನ ವೀರ್ಯವಾನ್ ।
ನರಸೂರ್ಯೋಽಸ್ತಮಭ್ಯೇತಿ ಸೂರ್ಯೋಽಸ್ತಮಿವ ಕೇಶವ ॥೧೭॥

ಕೇಶವ! ರಣರಂಗದಲ್ಲಿ ಶಸ್ತ್ರಗಳಿಂದ ಪ್ರಹರಿಸಿ ಶತ್ರುಗಳನ್ನು ಗೆದ್ದಿರುವ ಈ ನರಸೂರ್ಯನು ಸೂರ್ಯನು ಅಸ್ತಂಗತನಾಗುವಂತೆ ಅಸ್ತಮಯನಾಗಲಿರುವನು.

ಶರತಲ್ಪಗತಂ ವೀರಂ ಧರ್ಮೇ ದೇವರ್ಷಿಣಾ ಸಮಮ್ ।
ಶಯಾನಂ ವೀರಶಯನೇ ಪಶ್ಯ ಶೂರನಿಷೇವಿತೇ ॥೧೮॥

ಧರ್ಮದಲ್ಲಿ ದೇವರ್ಷಿಗಳಿಗೆ ಸಮನಾದ ಶೂರರು ಮಲಗುವ ವೀರಶಯನದಲ್ಲಿ ಮಲಗಿರುವ ಶರತಲ್ಪದಲ್ಲಿರುವ ವೀರನನ್ನು ನೋಡು.

ಕರ್ಣನಾಲೀಕನಾರಾಚೈರಾಸ್ತೀರ್ಯ ಶಯನೋತ್ತಮಮ್ ।
ಆವಿಶ್ಯ ಶೇತೇ ಭಗವಾನ್ ಸ್ಕಂದಃ ಶರವಣಂ ಯಥಾ ॥೧೯॥

ಸ್ಕಂದನು ಜಂಬೂಹುಲ್ಲಿನಲ್ಲಿ ಮಲಗಿರುವಂತೆ, ಕರ್ಣಗಳನ್ನು ನಾಲೀಕಗಳನ್ನು ಬಾಣಗಳನ್ನು ಹರಡಿಕೊಂಡು ಶ್ರೇಷ್ಠವಾದ ಹಾಸನ್ನು ಏರಿ ಮಲಗಿರುವನು.

ಅತೂಲಪೂರ್ಣಂ ಗಾಂಗೇಯಃ ತ್ರಿಭಿರ್ಬಾಣೈಃ ಸಮನ್ವಿತಮ್ ।
ಉಪಧಾಯೋಪಧಾನಾರ್ಥಂ ದತ್ತಂ ಗಾಂಡೀವಧನ್ವನಾ ॥೨೦॥

ಹತ್ತಿಯಿಲ್ಲದೆ ಪೂರ್ಣವಾದ, ಮೂರುಬಾಣಗಳಿಂದ ಕೂಡಿರುವ, ಗಾಂಡೀವ ಧನುರ್ಧಾರಿಯಾದ ಅರ್ಜುನನು ನೀಡಿದ ತಲೆದಿಂಬನ್ನು ತಲೆಯ ಆಧಾರಕ್ಕಾಗಿ ಗಂಗಾಪುತ್ರನು ಸ್ವೀಕರಿಸಿರುವನು.

ಪಾಲಯಾನಃ ಪಿತುಃಶಾಸ್ತ್ರಮೂರ್ಧ್ವರೇತಾ ಮಹಾಯಶಾಃ ।
ಏಷ ಶಾಂತನವಃ ಶೇತೇ ಮಾಧವಾಪ್ರತಿಮೋ ರಥಃ ॥೨೧॥

ಮಾಧವ! ತಂದೆಯ ಶಾಸನವನ್ನು ಪರಿಪಾಲಿಸುವ ಊರ್ಧ್ವರೇತಸ್ಕನಾದ ಮಹಾಕೀರ್ತಿಶಾಲಿಯಾದ ರಥಿಕರಲ್ಲಿ ಸರಿಸಾಟಿಯಿಲ್ಲದ ಈ ಶಾಂತ ಮಲಗಿರುವನು.

ಧರ್ಮಾತ್ಮಾ ತಾತ ಸರ್ವಜ್ಞಃ ಪಾರಂಪರ್ಯೇಽಥ ನಿರ್ಣಯೇ ।
ಅಮರ್ತ್ಯ ಇವ ಮರ್ತ್ಯಃ ಸನ್ನೇಷ ಪ್ರಾಣಾನಧಾರಯತ್ ॥೨೨॥

ತಂದೆಯೆ! ಧರ್ಮಾತ್ಮನಾದ ಸರ್ವಜ್ಞನಾದ ಮನುಜನಾದರೂ ದೇವತೆಗಳಂತೆ ಇರುವವನಾಗಿ ಉತ್ತರಾಯಣಕಾಲದ ಪ್ರಾಪ್ತಿಗಾಗಿ ಪ್ರಾಣವನ್ನು ಧರಿಸಿರುವನು (ಪಾರಂಪರ್ಯೇ ಅಥ ನಿರ್ಣಯೇ- ಮುಮುಕ್ಷುಗಳ ಪರಂಪರೆಯಲ್ಲಿ ಬಂದಿರುವ ಉತ್ತರಾಯಣಕಾಲಕ್ಕಾಗಿ ಎಂದು ಅರ್ಥೈಸಲಾಗಿದೆ. ಉತ್ತರಾಯಣ ಕಾಲದಲ್ಲಿ ಮರಣವನ್ನು ಹೊಂದುವುದು ಶ್ರೇಷ್ಠ ಎಂಬುವುದು ಶಾಸ್ತ್ರಸಂಮತ ನಿರ್ಣಯ ಎಂದು ಒಟ್ಟು ಭಾವ.)

ನಾಸ್ತಿ ಯುದ್ಧೇ ಸಮಃ ಕಶ್ಚಿನ್ನ ವಿದ್ಯಾಸು ಪರಾಕ್ರಮೇ ।
ಯತ್ರ ಶಾಂತನವೋ ಭೀಷ್ಮಃ ಶೇತೇಽದ್ಯ ನಿಹತಃ ಪರೈಃ ॥೨೩॥

ವಿದ್ಯೆಯಲ್ಲಿ ಪರಾಕ್ರಮದಲ್ಲಿ ಯುದ್ಧದಲ್ಲಿ ಯಾರೂ (ಆತನಿಗೆ) ಸಮರಿಲ್ಲವೋ, ಅಂತಹ ಶಂತನುವಿನ ಪುತ್ರನಾದ ಭೀಷ್ಮನು ಈಗ ಶತ್ರುವಿನಿಂದ ಹತನಾಗಿ ಮಲಗಿರುವನು.

ಸ್ವಯಮೇತೇನ ಶೂರೇಣ ಪೃಚ್ಛ್ಯಮಾನೇನ ಪಾಂಡವೈಃ ।
ಧರ್ಮಜ್ಞೇನಾಹವೇ ಮೃತ್ಯುಃ ಆಖ್ಯಾತಃ ಸತ್ಯವಾದಿನಾ ॥೨೪॥

ಪಾಂಡವರಿಂದ ಕೇಳಲಾಗಿ, ಧರ್ಮಜ್ಞನಾದ ಶೂರನಾದ ಸತ್ಯವಾದಿಯಾದ ಈತನು ಯುದ್ಧದಲ್ಲಿ ತನ್ನ ಸಾವಿನ ರಹಸ್ಯವನ್ನು ಹೇಳಿದನು.

ಪ್ರನಷ್ಟಃ ಕುರುವಂಶಃ ಸ ಪುನರ್ಯೇನ ಸಮುದ್ಧತಃ ।
ಸ ಗತಃ ಕುರುಭಿಃ ಸಾರ್ಧಂ ಮಹಾಬುದ್ಧಿಃ ಪರಾಜಯಮ್ ॥೨೫॥

ನಿಂತುಹೋಗಿದ್ದ ಆ ಕುರುವಂಶವನ್ನು ಯಾರು ಮತ್ತೆ ಉದ್ಧರಿಸಿದನೊ, ಆ ಮಹಾಜ್ಞಾನಿಯು ಕುರುಗಳಿಂದ ಕೂಡಿಕೊಂಡು ಸೋಲನ್ನು ಹೊಂದಿದನು.

ಧರ್ಮೇಣ ಕುರವಃ ಕಂ ನು ಪರಿಪ್ರಕ್ಷ್ಯಂತಿ ಮಾಧವ ।
ಹತೇ ದೇವವ್ರತೇ ಭೀಷ್ಮೇ ದೇವಕಲ್ಪೇ ನರರ್ಷಭೇ ॥೨೬॥

ಮಾಧವ! ಪುರುಷಶ್ರೇಷ್ಠನಾದ ದೇವತೆಯಂತಿರುವ ದೇವವ್ರತನಾದ ಭೀಷ್ಮನು ಮರಣವನ್ನು ಹೊಂದಲು (ಮುಂದಿನ ದಿನಗಳಲ್ಲಿ) ಕುರುಗಳು ಧರ್ಮದ ವಿಷಯದಲ್ಲಿ ಪರಿಪರಿಯಾಗಿ ಯಾರನ್ನು ಪ್ರಶ್ನಿಸುವರು?

ಅರ್ಜುನಸ್ಯ ವಿನೇತಾರಮಾಚಾರ್ಯಂ ಸಾತ್ಯಕೇಸ್ತಥಾ ।
ತಂ ಪಶ್ಯ ಪತಿತಂ ದ್ರೋಣಂ ಕುರೂಣಾಂ ಗುರುಸತ್ತಮಮ್ ॥೨೭॥

ಅರ್ಜುನನ ಗುರುವು ಹಾಗೆ ಸಾತ್ಯಕಿಯ ಪರಮಗುರುವು ಮತ್ತು ಕುರುಗಳಿಗೆ ಮುಖ್ಯಗುರುವಾದ ಬಿದ್ದಿರುವ ದ್ರೋಣರನ್ನು ನೋಡು.

ಅಸ್ತ್ರೇ ಚತುರ್ವಿಧಂ ವೇದ ಯಥೈವ ತ್ರಿದಶೇಶ್ವರಃ ॥೨೮॥

ದೇವತೆಗಳ ಸ್ವಾಮಿಯಂತೆ (ಇಂದ್ರನಂತೆ) ನಾಲ್ಕುವಿಧ ಅಸ್ತ್ರಗಳನ್ನು ಬಲ್ಲವನು.

ವಿಧಿಪಾದೋ ಮಂತ್ರಪಾದಃ ಪೂಜಾಪಾದಸ್ತಥೈವ ಚ ।
ರಹಸ್ಯಪಾದ ಇತ್ಯೇತತ್ ಪ್ರೋಕ್ತಂ ಪಾದಚತುಷ್ಟಯಮ್ ॥೨೯॥

ವಿಧಿಪಾದ ಮಂತ್ರಪಾದ ಹಾಗೂ ಪೂಜ್ಯಪಾದ ಮತ್ತು ರಹಸ್ಯಪಾದ ಹೀಗೆ ನಾಲ್ಕುಪಾದಗಳೆಂದು ಉಕ್ತವಾಗಿವೆ.

ಪೈಶಾಚಮಾಸುರಂ ಗಾಂಧರ್ವಂ ಮಾನುಷಂ ಚ ಚತುರ್ವಿಧಮ್ ।
ಭಾರ್ಗವೋ ವಾ ಮಹಾವೀರ್ಯಸ್ತಥಾ ದ್ರೋಣೋಽಪಿ ಮಾಧವ ॥

ಮಾಧವ! ಪೈಶಾಚ ಆಸುರ ಗಾಂಧರ್ವ ಮತ್ತು ಮಾನುಷ ಎಂದು ನಾಲ್ಕುವಿಧ ವಿದ್ಯೆಗಳನ್ನು ಭೃಗುಗೋತ್ರೋತ್ಪನ್ನನಾದ ಮಹಾವಿರ್ಯವಂತನಾದ ಪರುಶುರಾಮ ಮತ್ತು ದ್ರೋಣನೂ ಬಲ್ಲವನಾಗಿದ್ದನು.

ಯಸ್ಯ ಪ್ರಸಾದಾದ್ ಬೀಭತ್ಸುಃ ಪಾಂಡವಃ ಕರ್ಮ ದುಷ್ಕರಮ್ ।
ಚಕಾರ ಸ ಹತಃ ಶೇತೇ ನೈನಮಸ್ತ್ರಾಣ್ಯಪಾಲಯನ್ ॥೩೧॥

ಯಾರ ಅನುಗ್ರಹದಿಂದ ಪಾಡುವಿನ ಪುತ್ರನಾದ ಬೀಭತ್ಸುವು ಮತ್ತೊಬ್ಬರಿಂದ ಮಾಡಲಾಗದಂತಹ ಸಾಹಸಕರ್ಮವನ್ನು ಮಾಡಿದನೋ ಆತನು (ದ್ರೋಣನು) ಮೃತನಾಗಿ ಬಿದ್ದಿರುವನು, ಈತನನ್ನು (ಆ) ಅಸ್ತ್ರಗಳು ಕಾಪಾಡಲಿಲ್ಲ.

ಯಂ ಪುರೋಧಾಯ ಕುರವ ಆಹ್ವಯಂತಿ ಸ್ಮ ಪಾಂಡವಾನ್ ।
ಸೋಽಯಮಸ್ತ್ರಭೃತಾಂ ಶ್ರೇಷ್ಠೋ ದ್ರೋಣಃ ಶಸ್ತ್ರೈಃ ಪೃಥಕ್ ಕೃತಃ ॥೩೨॥

ಯಾವಾತನನ್ನು ಮುಂದೆ ಮಾಡಿಕೊಂಡು ಕುರುಗಳು ಪಾಂಡವರನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದರೋ, ಆ ಈ ಯಾವ ಅಸ್ತ್ರಧಾರಿಗಳಲ್ಲಿ ಹಿರಿಯನಾದ ದ್ರೋಣನು ಶಸ್ತ್ರಗಳಿಂದ ಛಿದ್ರನಾಗಿರುವನು.

ಯಸ್ಯ ನಿರ್ದಹತಃ ಸೇನಾಂ ಗತಿರಗ್ನೇರಿವಾಭವತ್ ।
ಸ ಭೂಮೌ ನಿಹತಃ ಶೇತೇ ಶಾಂತಾರ್ಚಿರಿವ ಪಾವಕಃ ॥೩೩॥

(ಶತ್ರು) ಸೇನೆಯನ್ನು ದಹಿಸುವ ಯಾರ ಗತಿಯು ಅಗ್ನಿಯ ಗತಿಯಂತೆ ಇತ್ತೋ (ಅಪ್ರತಿಹತಗತಿಯವನಾಗಿದ್ದನೋ) ಆತನು ಭೂಮಿಯಲ್ಲಿ ನಿಹತನಾಗಿ, ಪ್ರಜ್ವಲಿಸಿ ಶಾಂತವಾದ ಅಗ್ನಿಯಂತೆ ಬಿದ್ದಿರುವನು.

ಧನುರ್ಮುಷ್ಟಿರಶೀರ್ಣಶ್ಚ ಹಸ್ತಾವಾಪಶ್ಚ ಮಾಧವ ।
ದ್ರೋಣಸ್ಯ ನಿಹತಸ್ಯಾಪಿ ದದೃಶೇ ಜೀವತೋ ಯಥಾ ॥೩೪॥

ಮಾಧವ! ಮೃತರಾಗಿದ್ದರೂ ಬಿಲ್ಲನ್ನು ಧರಿಸಿದ ದ್ರೋಣನ ಮುಷ್ಟಿಯು ಸಡಿಲವಾಗಿಲ್ಲ, ಮತ್ತು ಕೈಕವಚಗಳೂ ಕಳಚಿಲ್ಲ, ಬದುಕಿರುವಂತೆ ತೋರುತ್ತಿರುವರು.

ವೇದಾಶ್ಚ ಯಸ್ಮಾಚ್ಚತ್ವಾರಃ ಸರ್ವಾಸ್ತ್ರಾಣಿ ಚ ಕೇಶವ ।
ಅನಪೇತಾನಿ ವೈ ಶೂರಾದ್ ಯಥೈವಾऽऽದೌ ಪ್ರಜಾಪತೇಃ ॥೩೫॥

ಕೇಶವ! ಸೃಷ್ಟಿಯ ಆದಿಯಲ್ಲಿ ಪ್ರಜಾಪತಿಯನ್ನು ವೇದಗಳು ಹೇಗೆ ಬಿಟ್ಟಿರಲಿಲ್ಲವೋ ಹಾಗೆ ಈ ಶೂರನನ್ನು ನಾಲ್ಕುವೇದಗಳು ಸರ್ವಅಸ್ತ್ರಗಳು ಬಿಟ್ಟಿರಲಿಲ್ಲ.

ವಂದನಾರ್ಹಾವಿಮೌ ತಸ್ಯ ವಂದಿಭಿರ್ವಂದಿತೌ ಶುಭೌ ।
ಗೋಮಾಯವೋ ವಿಕರ್ಷಂತಿ ಪಾದೌ ಕ್ಷತ್ರಶತಾರ್ಚಿತೌ ॥೩೬॥

ವಿಶೇಷಪೂಜಾರ್ಹಗಳಾದ ವಂದಿಮಾಗಧರಿಂದ ವಂದಿತವಾದ ಮಂಗಳಕರ-ಗಳಾದ ನೂರಾರು ಕ್ಷತ್ರಿಯರಿಂದ ಪೂಜಿತವಾದ ಆತನ (ದ್ರೋಣನ) ಪಾದಗಳನ್ನು ನರಿಗಳು ಕಿತ್ತೆಳೆಯುತ್ತಿವೆ.

ದ್ರೋಣಂ ದ್ರುಪದಪುತ್ರೇಣ ನಿಹತಂ ಮಧುಸೂದನ ।
ಕೃಪೀ ಕೃಪಣಮಾಸ್ತೇ ದುಃಖೋಪಹತಚೇತನಾ ॥೩೭॥

ಮಧುಸೂದನ! ದ್ರುಪದಪುತ್ರನಿಂದ ಸಂಹೃತನಾದ ದ್ರೋಣನನ್ನು ದುಃಖದಿಂದ ಕುಗ್ಗಿದ ಮನವುಳ್ಳ ಕೃಪಿಯು ತಲೆತಗ್ಗಿಸಿಕೊಂಡು ಅನುಸರಿಸುತ್ತಿರುವಳು.

ತಾಂ ಪಶ್ಯ ರುದತೀಮಾರ್ತಾಂ ಮುಕ್ತಕೇಶೀಮಧೋಮುಖೀಮ್ ।
ಹತಂ ಪತಿಮುಪಾಸ್ಯಂತೀಂ ದ್ರೋಣಂ ಶಸ್ತ್ರಭೃತಾಂ ವರಮ್ ॥೩೮॥

ದುಃಖಿತಳಾಗಿ ರೋದಿಸುತ್ತಿರುವ ತಲೆಕೂದಲನ್ನು ಹರಡಿಕೊಂಡಿರುವ ತಲೆಯನ್ನು ತಗ್ಗಿಸಿಕೊಂಡಿರುವ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಗಂಡನಾದ ಮೃತನಾದ ದ್ರೋಣನನ್ನು ಸೇವಿಸುತ್ತಿರುವ ಆಕೆಯನ್ನು ನೋಡು.

ಬಾಣೈರ್ಭಿನ್ನತನುತ್ರಾಣಂ ಧೃಷ್ಟದ್ಯುಮ್ನೇನ ಕೇಶವ ।
ಉಪಾಸತೇ ಮೃಧೇ ದ್ರೋಣಂ ಜಟಿಲಾ ಬ್ರಹ್ಮಚಾರಿಣೀ ॥೩೯॥

ಕೇಶವ! ಧೃಷ್ಟದ್ಯುಮ್ನನ ಬಾಣಗಳಿಂದ ಭಿನ್ನವಾದ ಕವಚವನ್ನು ಹೊಂದಿರುವ ದ್ರೋಣನನ್ನು ಜಟಾಧಾರಿಣಿಯಾದ ಬ್ರಹ್ಮಚಾರಿಣಿಯಾದ ಕೃಪಿಯು ಉಪಾಸಿಸುತ್ತಿರುವಳು.

ಪ್ರೇತಕೃತ್ಯೇ ಚ ಯತತೇ ಕೃಪೀ ಕೃಪಣಮಾತುರಾ ।
ಹತಸ್ಯ ಸಮರೇ ಭರ್ತುಃ ಸುಕುಮಾರೀ ಯಶಸ್ವಿನೀ ॥೪೦॥

ಸುಕೋಮಲಳಾದ ಕೀರ್ತಿವಂತಳಾದ ಗಾಬರಿಗೊಂಡಿರುವ ದೀನಳಾದ ಕೃಪಿಯು ಯುದ್ಧದಲ್ಲಿ ಮೃತನಾದ ಗಂಡನಿಗೆ ಪ್ರೇತಕಾರ್ಯವನ್ನು (ಔರ್ಧ್ವದೈಹಿಕಕ್ರಿಯೆಯನ್ನು) ಮಾಡಲು ಹವಣಿಸುತ್ತಿರುವಳು.

ಅಗ್ನೀನಾಹೃತ್ಯ ವಿಧಿವತ್ ಚಿತಾಂ ಪ್ರಜ್ವಾಲ್ಯ ಸರ್ವಶಃ ।
ದ್ರೋಣಮಾದಾಯ ಗಾಯಂತಿ ತ್ರೀಣಿ ಸಾಮಾನಿ ಗಾಯಕಾಃ ॥೪೧॥

ವಿಧಿಯ ಪ್ರಕಾರವಾಗಿ ಅಗ್ನಿಯನ್ನು ತಂದು ಸುತ್ತಲೂ ಚಿತೆಯನ್ನು ಅಗ್ನಿಯಿಂದ ಪ್ರಜ್ವಲಿಸಿ ದ್ರೋಣನನ್ನು (ದೇಹವನ್ನು) ತಂದು ಸಾಮಗಾನಿಗಳು ಮೂರು ಸಾಮಮಂತ್ರಗಳನ್ನು ಹಾಡುತ್ತಿರುವರು.

ಕಿರಂತಿ ಚ ಚಿತಾಮೇತೇ ಜಟಿಲಾ ಬ್ರಹ್ಮಚಾರಿಣಃ ।
ಧನುರ್ಭಿಃ ಶಕ್ತಿಭಿಶ್ಚೈವ ರಥನೀಡೈಶ್ಚ ಮಾಧವ ॥೪೨॥

ಮಾಧವ! ಜಟಾಧಾರಿಗಳಾದ ಈ ಬ್ರಹ್ಮಚಾರಿಗಳು ಬಿಲ್ಲಿನಿಂದ ಶಕ್ತ್ಯಾಯುಧದಿಂದ ರಥದ ನೀಡದಿಂದ ಚಿತೆಯನ್ನು ಕೆದರುತ್ತಿರುವರು.

ಶಸ್ತ್ರೈಶ್ಚ ವಿವಿಧೈರನ್ಯೈರ್ದಗ್ಧ್ವಾಂತೋ ಭೂರಿತೇಜಸಮ್ ॥೪೩॥

ಅತಿತೇಜಸ್ವಿಯಾದ ದ್ರೋಣರನ್ನು (ಆ ಬ್ರಹ್ಮಚಾರಿಗಳು ಅಲ್ಲೇ ಬಿದ್ದಿರುವ) ಬೇರೆ ಬೇರೆ ಶಸ್ತ್ರಗಳಿಂದಲೇ ದಹಿಸುತ್ತಿರುವರು. (ದ್ರೋಣರಿಗೆ ಅಗ್ನಿಸಂಸ್ಕಾರಮಾಡಿದ ಬ್ರಹ್ಮಚಾರಿಗಳು ಯುದ್ಧಭೂಮಿಯಲ್ಲಿ ಬಿದ್ದಿರುವ ಬಿಲ್ಲು ಮುಂತಾದ ಯುದ್ಧಸಾಮಗ್ರಿಗಳಿಂದಲೇ ಚಿತೆಯನ್ನು ಕೆದರಿ ಅಗ್ನಿಯನ್ನು ಒಟ್ಟುಮಾಡುತ್ತಿರುವರು ಎಂದು ಭಾವ).

ತ ಏತೇ ದ್ರೋಣಮಾಧಾಯ ಗಾಯಂತಿ ಚ ರುದಂತಿ ಚ ।
ಸಾಮಭಿಸ್ತ್ರಿಭಿರಂತಸ್ಥೈರನುಶಂಸಂತಿ ಚಾಪರೇ ॥೪೪॥

ಆ ಈಯಾವ ಬ್ರಹ್ಮಚಾರಿಗಳು ದ್ರೋಣನನ್ನು ಚಿತೆಯಲ್ಲಿ ಇಟ್ಟು ರೋದಿಸುತ್ತಿರುವರು ಮತ್ತು ಕೊನೆಯಲ್ಲಿ ಹೇಳಬೇಕಾಗಿರುವ ಮೂರು ಸಾಮ

ಮಂತ್ರಗಳನ್ನು ಗಾನ ಮಾಡುತ್ತಿರುವರು, ಮತ್ತೆ ಕೆಲವರು (ದ್ರೋಣರನ್ನು) ಸ್ತುತಿಸುತ್ತಿರುವರು.

ಅಗ್ನಾವಗ್ನಿಮಿವಾಧಾಯ ದ್ರೋಣಂ ಹುತ್ವಾ ಹುತಾಶನೇ ।
ಗಚ್ಛಂತ್ಯಭಿಮುಖಾ ಗಂಗಾಂ ದ್ರೋಣಶಿಷ್ಯಾ ದ್ವಿಜಾತಯಃ ॥೪೫॥

ಅಪಸವ್ಯಾಂ ಚಿತಾಂ ಕೃತ್ವಾ ಪುರಸೃತ್ಯ ಕೃಪೀಂ ತಥಾ ॥೪೬॥

ಅಗ್ನಿಯನ್ನೇ ಅಗ್ನಿಯಲ್ಲಿ ಸೇರಿಸಿದಂತೆ ಅಗ್ನಿಯಲ್ಲಿ ದ್ರೋಣನನ್ನು ಹೋಮಿಸಿ, ಚಿತೆಯನ್ನು ಅಪ್ರದಕ್ಷಿಣಾಕಾರವಾಗಿ ಸುತ್ತುಹಾಕಿ, ಕೃಪಿಯನ್ನು ಮುಂದೆ ಮಾಡಿಕೊಂಡು, ಬ್ರಾಹ್ಮಣಜಾತಿಯ ದ್ರೋಣಶಿಷ್ಯರು ಗಂಗೆಯ ಅಭಿಮುಖರಾಗಿ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಶಲ್ಯಭೀಷ್ಮದ್ರೋಣದರ್ಶನಂ ನಾಮ ತ್ರಯೋವಿಂಶೋಽಧ್ಯಾಯಃ ॥

॥ ಸ್ತ್ರೀಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾಲ್ಕನೆಯ ಅಧ್ಯಾಯ

ಗಾಂಧಾರಿಯು ಭೂರಿಶ್ರವಸ್ ಮುಂತಾದವರ ಸ್ತ್ರೀಯರಿಗಾಗಿ ಪರಿತಪಿಸುವುದು.

ಗಾಂಧಾರೀ

ಸೌಮದತ್ತಿಂ ಚ ಪಶ್ಯೈನಂ ಯುಯುಧಾನೇನ ಪಾತಿತಮ್ ।
ವಿತುದ್ಯಮಾನಂ ಬಹುಭಿರ್ವಿಹಗೈರ್ಮಾಧವಾಂತಿಕೇ ॥೧॥

ಗಾಂಧಾರಿ– ಮಾಧವ! ಸಾತ್ಯಕಿಯು ಕೆಡಹಿರುವ ಸಮೀಪದಲ್ಲಿರುವ ಸೋಮದತ್ತಿಯನ್ನು (ಭೂರಿಶ್ರವಸನನ್ನು) ನೋಡು, ಅನೇಕ ಪಕ್ಷಿಗಳು (ಆತನ ದೇಹವನ್ನು) ಕುಕ್ಕುತ್ತಿವೆ.

ಪುತ್ರಶೋಕಾಭಿಸಂತಪ್ತಃ ಸೋಮದತ್ತೋ ಜನಾರ್ದನ ।
ಯುಯುಧಾನಂ ಮಹೇಷ್ವಾಸಂ ಗರ್ಹಯನ್ನಿವ ದೃಶ್ಯತೇ ॥೨॥

ಜನಾರ್ದನ! ಪುತ್ರಶೋಕದಿಂದ ಬಳಲಿದ ಸೋಮದತ್ತನು ದೊಡ್ಡಬಿಲ್ಲಾಳಾದ ಸಾತ್ಯಕಿಯನ್ನು ನಿಂದಿಸುತ್ತಿರುವನೋ ಎಂಬಂತೆ ಕಾಣುತ್ತಿರುವನು.

ಅಸೌ ತು ಭೂರಿಶ್ರವಸೋ ಮಾತಾ ಶೋಕಪರಿಪ್ಲುತಾ ।
ಆಶ್ವಾಸಯತಿ ಭರ್ತಾರಂ ಸೋಮದತ್ತಮನಿಂದಿತಾ ॥೩॥

ದೋಷರಹಿತಳಾದ ಶೋಕದಿಂದ ಬಳಲಿದ ಈ ಭೂರಿಶ್ರವಸನ ತಾಯಿಯು ಗಂಡನಾದ ಸೋಮದತ್ತನನ್ನು ಸಮಾಧಾನಪಡಿಸುತ್ತಿರುವಳು.

ದಿಷ್ಟ್ಯಾ ತ್ವಿಯಂ ಮಹಾರಾಜ ದಾರುಣಂ ಭರತಕ್ಷಯಮ್ ।
ಕುರೂಣಾಂ ಕದನಂ ಘೋರಂ ಯುಗಾಂತಂ ನಾನುಪಶ್ಯಸಿ ॥೪॥

ಮಹಾರಾಜನೆ! ಅದೃಷ್ಟವಶಾತ್ ಪ್ರಳಯಕ್ಕೆ ಸಮವಾದ ಈ ಕುರುಗಳ ಘೋರವಾದ ಕದನವನ್ನು ಭರತವಂಶೀಯರ ಸಾವನ್ನು ನೀನು ನೋಡುತ್ತಿಲ್ಲ.

ದಿಷ್ಟ್ಯಾ ಯೂಪಧ್ವಜಂ ವೀರಂ ಪುತ್ರಂ ಭೂರಿಸಹಸ್ರದಮ್ ।
ಅನೇಕಕ್ರತುಯಜ್ವಾನಂ ನಿಹತಂ ನಾದ್ಯ ಪಶ್ಯಸಿ ॥೫॥

ಅದೃಷ್ಟದಿಂದಲೇ ಯೂಪಧ್ವಜನಾದ (ಯಜ್ಞಸ್ತಂಭವನ್ನೇ ತನ್ನ ಧ್ವಜದಲ್ಲಿ ಕುರುಹನ್ನಾಗಿ ಮಾಡಿಕೊಂಡಿದ್ದ.) ಅನೇಕ ಯಜ್ಞಗಳನ್ನು ಆಚರಿಸಿದ್ದ ವೀರನಾದ ಮಗನಾದ ಭೂರಿಶ್ರವಸನನ್ನು ಈ ಸಂದರ್ಭದಲ್ಲಿ ಕಾಣುತ್ತಿಲ್ಲ.

ದಿಷ್ಟ್ಯಾ ಸ್ನುಷಾಣಾಮಾಕ್ರಂದೇ ಘೋರಂ ವಿಲಪಿತಂ ಬಹು ।
ನ ಶೃಣೋಷಿ ಮಹಾರಾಜ ಸಾರಸೀನಾಮಿವಾರ್ಣವೇ ॥೬॥

ಮಹಾರಾಜ! ಸಮುದ್ರತೀರದಲ್ಲಿ ಸಾರಂಗಪಕ್ಷಿಗಳು ಕೂಗುವಂತೆ ಬಹುವಾಗಿ ರೋದಿಸುತ್ತಿರುವ ನಿನ್ನ ಸೊಸೆಯರ ಘೋರವಾದ ಕೂಗನ್ನು ನೀನು ಕೇಳುತ್ತಿಲ್ಲ.

ಏಕವಸ್ತ್ರಾನುಸಂವೀತಾಃ ಪ್ರಕೀರ್ಣಾಸಿತಮೂರ್ಧಜಾಃ ।
ಸ್ನುಷಾಸ್ತೇ ಪರಿಧಾವಂತಿ ಹತಾಪತ್ಯಾ ಹತೇಶ್ವರಾಃ ॥೭॥

ಗಂಡಂದಿರನ್ನು ಕಳೆದುಕೊಂಡಂತಹ ಸ್ವಾಮಿರಹಿತರಾದ (ಅನಾಥರಾದ) ನಿನ್ನ ಸೊಸೆಯರು ಒಂದೇ ವಸ್ತ್ರವನ್ನು ತೊಟ್ಟುಕರಿದಾದ ತಲೆಯ ಕೂದಲನ್ನು ಹರಡಿಕೊಂಡು ಸುತ್ತಲೂ ಅಲೆದಾಡುತ್ತಿದ್ದಾರೆ.

ಶ್ವಾಪದೈರ್ಭಕ್ಷ್ಯಮಾಣಂ ತ್ವಮಹೋ ದಿಷ್ಟ್ಯಾ ನ ಪಶ್ಯಸಿ ॥೮೪॥

(ನಿನ್ನ ಮಗನನ್ನು) ನಾಯಿಗಳು ತಿನ್ನುತ್ತಿರುವದನ್ನು ನೀನು ಅದೃಷ್ಟವಶಾತ್ ನೋಡಲಾರಿ.

ಛಿನ್ನಬಾಹುಂ ನರವ್ಯಾಘ್ರಮರ್ಜುನೇನ ನಿಪಾತಿತಮ್ ।
ಶಲಂ ವಿನಿಹತಂ ಸಂಖ್ಯೇ ಭೂರಿಶ್ರವಸಮೇವ ಚ ॥೯॥

ಸುಷಾಶ್ಚ ವಿಧವಾಃ ಸರ್ವಾ ದಿಷ್ಟ್ಯಾ ನಾದ್ಯೇಹ ಪಶ್ಯಸಿ ॥೧೦॥

ಅರ್ಜುನನಿಂದ ಛಿನ್ನಬಾಹುವಾದ ಮನುಜಶ್ರೇಷ್ಠನಾದ (ರಣರಂಗದಲ್ಲಿ) ಬಿದ್ದಿರುವ ಭೂರಿಶ್ರವಸ್‌ನನ್ನು, ಯುದ್ಧದಲ್ಲಿ ಮೃತನಾದ ಶಲನನ್ನು ವಿಧವೆಯರಾದ ಎಲ್ಲ ಸೊಸೆಯರನ್ನು ಅದೃಷ್ಟದಿಂದ ಈಗ ನೋಡಲಾರಿ.

ದಿಷ್ಟ್ಯಾ ತತ್ ಕಾಂಚನಂ ಛತ್ರಂ ಯೂಪಕೇತೋರ್ಮಹಾತ್ಮನಃ ।
ವಿನಿಕೀರ್ಣಂ ರಥೋಪಸ್ಥೇ ಸೌಮದತ್ತೇರ್ನ ಪಶ್ಯಸಿ ॥೧೧॥

ಯೂಪಕೇತುವಾದ ಮಹಾತ್ಮನಾದ ಸೋಮದತ್ತಿಯ ಆ ಚಿನ್ನದ ಛತ್ರವು ರಥದ ಸಮೀಪದಲ್ಲಿಯೇ ತುಂಡಾಗಿ ಬಿದ್ದಿರುವುದನ್ನು ಅದಷ್ಟವಶಾತ್ ಕಾಣಲಾರಿ.

ಅಮೂಸ್ತು ಭೂರಿಶ್ರವಸೋ ಭಾರ್ಯಾಃ ಸಾತ್ಯಕಿನಾ ಹತಮ್ ।
ಪರಿವಾರ್ಯಾನುಶೋಚಂತಿ ಭರ್ತಾರಮಸಿತೇಕ್ಷಣಾಃ ॥೧೨॥

ಸಾತ್ಯಕಿಯಿಂದ ಸಂಹೃತನಾದ (ತಮ್ಮ) ಗಂಡನಾದ ಭೂರಿಶ್ರವಸನನ್ನು, ಕಪ್ಪುನಯನಗಳನ್ನು ಹೊಂದಿರುವ (ಆತನ) ಈ ಮಹಿಳೆಯರು ಸುತ್ತುವರೆದು ದುಃಖಿಸುತ್ತಿರುವರು.

ಏತಾ ವಿಲಪ್ಯ ಬಹುಲಂ ಭರ್ತುಃ ಶೋಕೇನ ಕರ್ಶಿತಾಃ ।
ಪತಂತ್ಯಭಿಮುಖಾ ಭೂಮೌ ಕೃಪಣಂ ಬತ ಕೇಶವ ॥೧೩॥

ಕೇಶವ! ಗಂಡನ ದುಃಖದಿಂದ ತಪ್ತರಾಗಿ ತುಂಬಾ ರೋದಿಸಿದವರಾಗಿ ದೀನರಾದ ಇವರು (ತಮ್ಮ) ಗಂಡನ ಅಭಿಮುಖರಾಗಿ ಭೂಮಿಯಲ್ಲಿ ಬೀಳುತ್ತಿರುವರು.

ಬೀಭತ್ಸುರತಿಬೀಭತ್ಸಂ ಕರ್ಮೇದಮಕರೋತ್ ಕಥಮ್ ।
ಪ್ರಮತ್ತಸ್ಯ ಯದಚ್ಛೈತ್ಸೀತ್ ಬಾಹುಂ ಶೂರಸ್ಯ ಯಜ್ವನಃ ॥೧೪॥

ಯಜ್ಞಗಳನ್ನು ಆಚರಿಸಿದ ಶೂರನಾದ (ಅರ್ಜುನನನ್ನು) ಲಕ್ಷಿಸದೇ ಇದ್ದ ಅವನ (ನಿನ್ನ ಪುತ್ರನ) ಬಾಹುವನ್ನು ಕತ್ತರಿಸಿದನು, ಅಂತಹ ಅತಿ ಹೇಸಿಗೆಯ ಕರ್ಮವನ್ನು ಅರ್ಜುನನು ಹೇಗೆ ಮಾಡಿದನು?

ತತಃ ಪಾಪತರಂ ಕರ್ಮ ಕೃತವಾನಿಹ ಸಾತ್ಯಕಿಃ ।
ಯಸ್ಯ ಪ್ರಾಯೋಪವಿಷ್ಟಸ್ಯ ಪ್ರಾಹಾರ್ಷೀತ್ ಸಂಶಿತಾತ್ಮನಃ ॥೧೫॥

ಈ ಯುದ್ಧದಲ್ಲಿ ಸಾತ್ಯಕಿಯು ಪ್ರಾಯೋಪವಿಷ್ಟನಾಗಿದ್ದ ಆತ್ಮನಿಯಮನದಲ್ಲಿದ್ದ ಆತನನ್ನು ಪ್ರಹರಿಸಿದನು, ಆತನು ಅದಕ್ಕಿಂತಲೂ ಪಾಪಕರವಾದ ಕರ್ಮವನ್ನು ಮಾಡಿದನು.

ಏಕೋ ದ್ವಾಭ್ಯಾಂ ಹತಃ ಶೇಷೇ ತ್ವಮಧರ್ಮೇಣ ಧಾರ್ಮಿಕ ।
ಇತಿ ಯೂಪಧ್ವಜಸ್ಯೈತಾ ಭಾರ್ಯಾಃ ಕ್ರೋಶಂತಿ ಮಾಧವ ॥೧೬॥

ಮಾಧವ! ಯೂಪಧ್ವಜನ ಹೆಂಡಂದಿರು 'ಧಾರ್ಮಿಕನೆ! ನೀನು ಒಬ್ಬನೆ ಇಬ್ಬರಿಂದ ಅನ್ಯಾಯದಿಂದ ಸಂಹೃತನಾಗಿ ಮಲಗಿರುವಿ' ಎಂದು ಅರಚುತ್ತಿರುವರು.

ಭಾರ್ಯಾ ಯೂಪಧ್ವಜಸ್ಯೈಷಾ ಕರಸಮ್ಮಿತಮಧ್ಯಮಾ ।
ಕೃತ್ತೋತ್ಸಂಗೇ ಭುಜಂ ಭರ್ತುಃ ಕೃಪಣಂ ಪರ್ಯದೇವಯತ್ ॥೧೭॥

ಕೈಯಂತೆ ತೆಳುವಾದ ಕಟಿಯನ್ನು ಹೊಂದಿರುವ, ಯೂಪಧ್ವಜನ ಪತ್ನಿಯಾದ ಈಕೆಯು ಗಂಡನ (ಕತ್ತರಿಸಿ ಕೆಳಬಿದ್ದ) ಕರವನ್ನು ತೊಡೆಯ ಮೇಲೆ ಇಟ್ಟುಕೊಂಡು ದೀನಳಾಗಿ ರೋದಿಸುತ್ತಿರುವಳು.

ಸೌಮದತ್ತಿಪ್ರಿಯಾ

ಅಯಂ ಸ ರಶನೋತ್ಕರ್ಷೀ ಪೀನಸ್ತನವಿಮರ್ದನಃ ।
ನಾಭ್ಯೂರುಜಘನಸ್ಪರ್ಶೀ ನೀವೀವಿಸ್ರಂಸನಃ ಕರಃ ॥೧೮॥

ಸೋಮದತ್ತನ ಪತ್ನಿ– ಈ ಕರವು (ತನ್ನ ಪತ್ನಿಯರೊಡನೆ ಸರಸದಲ್ಲಿರುವಾಗ) ಒಡ್ಡ್ಯಾಣವನ್ನು ಕಳಚುತ್ತಿತ್ತು, ತುಂಬಿದ ಎದೆಗಳ ಮರ್ದನ ಮಾಡುತ್ತಿತ್ತು, ನಾಭಿ ತೊಡೆ ಸೊಂಟಗಳ ಸ್ಪರ್ಶವನ್ನು ಮಾಡುತ್ತಿತ್ತು, ಕೆಳ ಉಡುಪನ್ನು ಬಿಚ್ಚುತ್ತಿತ್ತು.

ಅಯಂ ಸ ಹಂತಾ ಶತ್ರೂಣಾಂ ಮಿತ್ರಾಣಾಮಭಯಂಕರಃ ।
ಪ್ರದಾತಾ ಗೋಸಹಸ್ರಾಣಾಂ ಕ್ಷತ್ರಿಯಾಂತಕರಃ ಕರಃ ॥೧೯॥

ಇದು ಶತ್ರುಗಳನ್ನು ಸಂಹರಿಸಿದ ಕರ, ಮಿತ್ರರಿಗೆ ಆಸರೆಯಾದ ಕರ, ಸಾವಿರಾರು ಗೋಗಳನ್ನು ನೀಡಿದ ಕರ, ಕ್ಷತ್ರಿಯರಿಗೆ ಆತಂಕವಾದ ಕರ.

ವಾಸುದೇವಸ್ಯ ಸಾನ್ನಿಧ್ಯೇ ಪಾರ್ಥೇನಾಕ್ಲಿಷ್ಟಕರ್ಮಣಾ ।
ಯುಧ್ಯತಃ ಸಮರೇಽನ್ಯೇನ ಪ್ರಮತ್ತಸ್ಯ ನಿಪಾತಿತಃ ॥೨೦॥

ಶ್ರಮಸಾಧ್ಯಕರ್ಮಗಳನ್ನು ಮಾಡುವ ಪೃಥೆಯ ಪುತ್ರನು (ಅರ್ಜುನನು), ಬೇರೊಬ್ಬರೊಡನೆ ಯುದ್ಧದಲ್ಲಿ ರತನಾಗಿದ್ದ (ಅರ್ಜುನನ ವಿಷಯದಲ್ಲಿ) ಲಕ್ಷ್ಯವಿರದವನನ್ನು (ನಿನ್ನನ್ನು) ವಾಸುದೇವನ ಸಮಕ್ಷಮದಲ್ಲಿ ಕೆಡಹಿರುವನು. (ಸಾತ್ಯಕಿಯು ಮೂರ್ಛಿತನಾಗಿದ್ದನು ಆಗ ಭೂರಿಶ್ರವಸನು ಆತನ ಶಿರವನ್ನು ಕತ್ತರಿಸಲು ಹವಣಿಸುತ್ತಿದ್ದನು, ಇದನ್ನು ಗಮನಿಸಿದ ಶ್ರೀಕೃಷ್ಣನು ಅರ್ಜುನನಿಗೆ ಸಾತ್ಯಕಿಯನ್ನು ಸಂರಕ್ಷಿಸಲು ಸೂಚಿಸಿದನು, ಆಗ ದೂರದಲ್ಲಿದ್ದ ಅರ್ಜುನನು ಭೂರಿಶ್ರವಸನ ಕೈಯನ್ನು ತನ್ನ ಬಾಣಗಳಿಂದ ಕತ್ತರಿಸಿದ್ದನು ಈ ಘಟನೆಯನ್ನು ನೆನಸಿಕೊಳ್ಳುತ್ತಿರುವರು ಎಂದು ಭಾವ.)

ಕಿಂ ನು ವಕ್ಷ್ಯತಿ ಸಂಸತ್ಸು ಕಥಾಸು ಚ ಜನಾರ್ದನಃ ।
ಅರ್ಜುನಸ್ಯ ತು ತತ್ಕರ್ಮ ಸ್ವಯಂ ಚಾಪಿ ಕಿರೀಟವಾನ್ ॥೨೧॥

ಅರ್ಜುನನ ಆ ಕೆಲಸದ ಬಗ್ಗೆ ಜನಾರ್ದನನು ಸಭೆಗಳಲ್ಲಿನ ಸಂವಾದದಲ್ಲಿ ಏನೆಂದು ಹೇಳುತ್ತಾನೆ? ಸ್ವತಃ ಕಿರೀಟಧಾರಿಯಾಗಿ (ಧರ್ಮಶಾಸಕನಾಗಿ) ಏನೆಂದು ಹೇಳಿಕೊಳ್ಳುವನು? (ತಮ್ಮ ತಪ್ಪನ್ನು ಹೇಗೆ ಸಮರ್ಥಿಸಿಕೊಳ್ಳುವರು? ಎಂದು ಭಾವ.)

ಗಾಂಧಾರೀ

ಇತ್ಯೇವಂ ಗರ್ಹಯಿತ್ವೈಷಾ ತೂಷ್ಣೀಮಾಸ್ತೇ ವರಾಂಗನಾ ।
ತಾಮೇತಾಮನುಶೋಚಂತಿ ಸಪತ್ನ್ಯಃ ಸ್ವಾಮಿನಃ ಸ್ನುಷಾಃ ॥೨೨॥

ಗಾಂಧಾರಿ– ಈ ರೀತಿಯಾಗಿ ನಿಂದಿಸಿ ಆ ಶ್ರೇಷ್ಠಮಹಿಳೆಯು ಸುಮ್ಮನಾದಳು, ಆಕೆಯ ಸವತಿಯರು ಆಕೆಯ ಮತ್ತು ಆಕೆಯ ಸೊಸೆಯರ ವಿಷಯದಲ್ಲಿ ದುಃಖಿಸುತ್ತಿರುವರು.

ಗಾಂಧಾರರಾಜಃ ಶಕುನಿರ್ಬಲವಾನ್ ಸತ್ಯವಿಕ್ರಮಃ ।
ನಿಹತಃ ಸಹದೇವೇನ ಭಾಗಿನೇಯೇನ ಮಾತುಲಃ ॥೨೩॥

ನಿಜಪರಾಕ್ರಮಿಯಾದ ಗಾಂಧಾರದ ರಾಜನಾದ ಬಲಿಷ್ಠನಾದ ಸೋದರ ಮಾವನಾದ ಶಕುನಿಯು ತಂಗಿಯ ಮಗನಾದ ಸಹದೇವನಿಂದ ಮೃತನಾದನು.

ಯಃ ಪುರಾ ಹೇಮದಂಡಾಭ್ಯಾಂ ವ್ಯಜನಾಭ್ಯಾಂ ಚ ವೀಜ್ಯತೇ ।
ಸ ಏಷ ಪಕ್ಷಿಭಿಃ ಪಕ್ಷೈಃ ಶಯಾನ ಉಪವೀಜ್ಯತೇ ॥೨೪॥

ಯಾರು ಈ ಮೊದಲು ಚಿನ್ನದ ಹಿಡಿಗೋಲನ್ನು ಹೊಂದಿರುವ ವ್ಯಜನಗಳಿಂದ ಬೀಸಿಸಿಗೊಳ್ಳುತ್ತಿದ್ದನೋ ಆ ಈತನು ಇಲ್ಲಿ ಬಿದ್ದು ಪಕ್ಷಿಗಳ ರೆಕ್ಕೆಗಳಿಂದ ಬೀಸಿಸಿ-ಕೊಳ್ಳುತ್ತಿರುವನು.

ಯಶ್ಚ ರೂಪಾಣಿ ಕುರುತೇ ಶತಶೋಽಥ ಸಹಸ್ರಶಃ ।
ತಸ್ಯ ಮಾಯಾವಿನೋ ಮಾಯಾ ದಗ್ಧಾಃ ಪಾಂಡವತೇಜಸಾ ॥೨೫॥

ಯಾವನು ನೂರೊ ಸಾವಿರವೋ ಬಣ್ಣದ ಬದುಕನ್ನು ಕಟ್ಟುತ್ತಿದ್ದನೋ, ಆ ಕಪಟಿಯ ಬಣ್ಣವೆಲ್ಲ ಪಾಂಡವರ ತೇಜಸ್ಸಿನಿಂದ ಬೂದಿಯಾಯಿತು.

ಮಾಯಯಾ ನಿಕೃತಿಪ್ರಜ್ಞೋ ಯೋ ಜಿಗಾಯ ಯುಧಿಷ್ಠಿರಮ್ ।
ಸಭಾಯಾಂ ವಿಪುಲಂ ರಾಜ್ಯಂ ಸ ಕಥಂ ಜೀವಿತಂ ಜಹೌ ॥೨೬॥

ಯಾವನು ಕಪಟತನದಲ್ಲಿ ನಿಪುಣನೋ, ಕಪಟದಿಂದ ಸಭೆಯಲ್ಲಿ ಯುಧಿಷ್ಠಿರನನ್ನು ವಿಪುಲರಾಜ್ಯವನ್ನು ಗೆದ್ದನೋ, ಆತನು ಜೀವಿತವನ್ನು ಹೇಗೆ ತ್ಯಜಿಸಿದನು?

ಶಕುಂತಾಃ ಶಕುನಿಂ ಕೃಷ್ಣ ಸಮಂತಾತ್ ಪರ್ಯುಪಾಸತೇ ।
ಕಿತವಂ ಮಮ ಪುತ್ರಾಣಾಂ ವಿನಾಶಾಯೋಪಶಿಕ್ಷಿತಮ್ ॥೨೭॥

ಕೃಷ್ಣ! ನನ್ನ ಮಕ್ಕಳ ವಿನಾಶಕ್ಕಾಗಿ ಕಪಟವನ್ನು ಬೋಧಿಸಿದ ಶಕುನಿಯನ್ನು ಸುತ್ತಲೂ ಪಕ್ಷಿಗಳು ಸುತ್ತುವರೆದಿವೆ.

ಏತೇನೈತನ್ಮಹದ್ ವೈರಮಾಹಿತಂ ಪಾಂಡವೈಃ ಸಹ ।
ವಧಾಯ ಮಮ ಪುತ್ರಾಣಾಮಾತ್ಮನಃ ಸಗಣಸ್ಯ ಚ ॥೨೮॥

ತನ್ನ (ಶಕುನಿಯ) ಪರಿವಾರದವರ ನನ್ನ ಮಕ್ಕಳ ನಾಶಕ್ಕಾಗಿ, ಈತನೇ ಪಾಂಡವರೊಡನೆ ಭಾರೀ ದ್ವೇಷವನ್ನು ಹುಟ್ಟುಹಾಕಿದನು.

ಯಥೈವ ಮಮ ಪುತ್ರಾಣಾಂ ಲೋಕಾಃ ಶಸ್ತ್ರಜಿತಾಃ ಪ್ರಭೋ ।
ಏವಮಸ್ಯಾಪಿ ದುರ್ಬುದ್ಧೇರ್ಲೋಕಾಃ ಶಸ್ತ್ರೇಣ ನಿರ್ಜಿತಾಃ ॥೨೯॥

ಸ್ವಾಮಿಯೆ! ನನ್ನ ಮಕ್ಕಳಿಗೆ ಹೇಗೆ ಶಸ್ತ್ರದಿಂದ ಸಂಪಾದಿತವಾದ ಲೋಕಗಳು ಪ್ರಾಪ್ತವಾಗುವವೋ, ಹಾಗೆಯೇ ಈ ದುರ್ಬುದ್ಧಿಯವನಿಗೂ ಶಸ್ತ್ರದಿಂದ ಪ್ರಾಪ್ತವಾಗುವ ಲೋಕಗಳು ಪ್ರಾಪ್ತವಾಗುವವು.

ಕಥಂ ಚ ನಾಯಂ ತತ್ರಾಪಿ ಪುತ್ರಾನ್ ಮೇ ಭ್ರಾತೃಭಿಃ ಸಹ ।
ವಿರೋಧಯೇದ್ ಋಜುಪ್ರಜ್ಞಾನ್ ಅನೃಜುರ್ಮಧುಸೂದನ ॥೩೦॥

ಮಧುಸೂದನ! ನೇರನಡೆನುಡಿಗಳಿರದ ಈತನು (ಕಪಟಿಯು) ನೇರನಡೆನುಡಿಗಳಿರುವ ಸಹೋದರರಿಂದ ಒಡಗೂಡಿರುವ ನನ್ನ ಮಕ್ಕಳಲ್ಲಿ ಅಲ್ಲಿಯೂ ಸಹ ವಿರೋಧವನ್ನು ಹುಟ್ಟುಹಾಕಬಹುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಸೋಮದತ್ತಶಕುನಿದರ್ಶನಂ ನಾಮ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ತೇನ ದೃಷ್ಟ್ವಾ ಪ್ರೇತದೇಹಾನ್ ಸರ್ವಾಂಸ್ತತ್ರ ಸಮಾಕುಲಾ ।
ಶಶಾಪ ಯಾದವೇಶಾನಂ ತ್ವಯಾऽಸ್ಮತ್ಕುಲನಾಶನಮ್ ॥

ಯತ್ಕೃತಂ ತತ್ ತವ ಕುಲಂ ಗಚ್ಛತ್ವನ್ಯೋನ್ಯತಃ ಕ್ಷಯಮ್ ।
ಇತ್ಯುಕ್ತೋ ಭಗವಾನ್ ಕೃಷ್ಣಃ ಸ್ವಚಿಕೀರ್ಷಿತಮೇವ ತತ್ ॥

ಅಸ್ತ್ವೇವಮಿತ್ಯಾಹ ವಿಭುರೀಶ್ವರೋಪ್ಯನ್ಯಥಾ ಕೃತೌ ।
ತೇನ ತಸ್ಯಾಸ್ತಪೋ ನಷ್ಟಂ ಹೀನಾ ಸಾऽತೋ ಹಿ ಭರ್ತೃತಃ ।
ನಾಶಯೇದ್ಧಿ ಸದಾ ವಿಷ್ಣುಃ ಸ್ವಯೋಗ್ಯಾದಧಿಕಾನ್ ಗುಣಾನ್ ॥

ಗಾಂಧಾರಿ ದಿವ್ಯದೃಷ್ಟಿಯಿಂದ ರಣಭೂಮಿಯಲ್ಲಿ ಬಿದ್ದಿದ್ದ ಎಲ್ಲ ಶವಗಳನ್ನೂ ಕಂಡು ಶೋಕಾರ್ತಳಾಗಿ ಕೃಷ್ಣನನ್ನು ಶಪಿಸಿದಳು- 'ನೀನು ನಮ್ಮ ಕುಲವನ್ನು ಪರಸ್ಪರ ಕಲಹದಿಂದ ನಾಶ ಮಾಡಿದೆಯಾದ್ದರಿಂದ ನಿನ್ನ ಕುಲವೂ ಪರಸ್ಪರ ಕಲಹದಿಂದ ನಾಶ ಹೊಂದಲಿ' ಎಂದು. ಗಾಂಧಾರಿ ಹೀಗೆ ಶಪಿಸಿದಾಗ ಆ ಶಾಪವನ್ನು ಹುಸಿ ಮಾಡಲು ಶಕ್ತನಾಗಿದ್ದರೂ ಭಗವಾನ್ ಶ್ರೀಕೃಷ್ಣ 'ನನ್ನ ಕುಲನಾಶವನ್ನು ನಾನೇ ಮಾಡಬೇಕೆಂದಿದ್ದೆ. ಅದರಿಂದ ಹಾಗೇ ಆಗಲಿ' ಎಂದನು. ಹೀಗೆ ಶಾಪ ಕೊಟ್ಟಿದ್ದರಿಂದ ಗಾಂಧಾರಿಯ ತಪೋಬಲ ನಷ್ಟವಾಯಿತು. ಅದರಿಂದ ತಪೋಬಲದಲ್ಲಿ ಅವಳು ತನ್ನ ಪತಿಗಿಂತ ಕಡಿಮೆಯೂ ಆದಳು. ಯಾರೇ ಆಗಲಿ, ತಮ್ಮ ಯೋಗ್ಯತೆಗೆ ಮೀರಿದ ಪುಣ್ಯ ಮಾಡಿದರೆ ವಿಷ್ಣು ಸ್ವಯಂ ಅದನ್ನು ನಾಶಮಾಡುತ್ತಾನೆ ಎನ್ನುವುದು ಪ್ರಸಿದ್ಧವಿದೆ.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಗಾಂಧಾರಿಯು ಕುರು-ಪಾಂಡವರ ಸಂಕ್ಷಯಕ್ಕೆ ಕೃಷ್ಣನೇ ಕಾರಣ,
ಆದ್ದರಿಂದ ಕೃಷ್ಣನ ಎಲ್ಲ ಬಂಧುಗಳು ಪರಸ್ಪರ ಕಲಹದಿಂದ
ನಾಶವಾಗಲಿ ಎಂದು ಶಪಿಸಿದಳು.

ಗಾಂಧಾರೀ

ಕಾಂಭೋಜಂ ಪಶ್ಯ ದುರ್ಧರ್ಷಂ ಕಾಂಭೋಜಾಸ್ತರಣೋಚಿತಮ್ ।
ಶಯಾನಮೃಷಭಸ್ಕಂಧಂ ಹತಂ ಪಾಂಸುಷು ಮಾಧವ ॥೧॥

ಶಕುಂತಾಃ ಶಕುನಿಂ ಕೃಷ್ಣ ಸಮಂತಾತ್ ಪರ್ಯುಪಾಸತೇ ।
ಕಿತವಂ ಮಮ ಪುತ್ರಾಣಾಂ ವಿನಾಶಾಯೋಪಶಿಕ್ಷಿತಮ್ ॥೨೭॥

ಕೃಷ್ಣ! ನನ್ನ ಮಕ್ಕಳ ವಿನಾಶಕ್ಕಾಗಿ ಕಪಟವನ್ನು ಬೋಧಿಸಿದ ಶಕುನಿಯನ್ನು ಸುತ್ತಲೂ ಪಕ್ಷಿಗಳು ಸುತ್ತುವರೆದಿವೆ.

ಏತೇನೈತನ್ಮಹದ್ ವೈರಮಾಹಿತಂ ಪಾಂಡವೈಃ ಸಹ ।
ವಧಾಯ ಮಮ ಪುತ್ರಾಣಾಮಾತ್ಮನಃ ಸಗಣಸ್ಯ ಚ ॥೨೮॥

ತನ್ನ (ಶಕುನಿಯ) ಪರಿವಾರದವರ ನನ್ನ ಮಕ್ಕಳ ನಾಶಕ್ಕಾಗಿ, ಈತನೇ ಪಾಂಡವರೊಡನೆ ಭಾರೀ ದ್ವೇಷವನ್ನು ಹುಟ್ಟುಹಾಕಿದನು.

ಯಥೈವ ಮಮ ಪುತ್ರಾಣಾಂ ಲೋಕಾಃ ಶಸ್ತ್ರಜಿತಾಃ ಪ್ರಭೋ ।
ಏವಮಸ್ಯಾಪಿ ದುರ್ಬುದ್ಧೇರ್ಲೋಕಾಃ ಶಸ್ತ್ರೇಣ ನಿರ್ಜಿತಾಃ ॥೨೯॥

ಸ್ವಾಮಿಯೆ! ನನ್ನ ಮಕ್ಕಳಿಗೆ ಹೇಗೆ ಶಸ್ತ್ರದಿಂದ ಸಂಪಾದಿತವಾದ ಲೋಕಗಳು ಪ್ರಾಪ್ತವಾಗುವವೋ, ಹಾಗೆಯೇ ಈ ದುರ್ಬುದ್ಧಿಯವನಿಗೂ ಶಸ್ತ್ರದಿಂದ ಪ್ರಾಪ್ತವಾಗುವ ಲೋಕಗಳು ಪ್ರಾಪ್ತವಾಗುವವು.

ಕಥಂ ಚ ನಾಯಂ ತತ್ರಾಪಿ ಪುತ್ರಾನ್ ಮೇ ಭ್ರಾತೃಭಿಃ ಸಹ ।
ವಿರೋಧಯೇದ್ ಋಜುಪ್ರಜ್ಞಾನ್ ಅನೃಜುರ್ಮಧುಸೂದನ ॥೩೦॥

ಮಧುಸೂದನ! ನೇರನಡೆನುಡಿಗಳಿರದ ಈತನು (ಕಪಟಿಯು) ನೇರನಡೆನುಡಿಗಳಿರುವ ಸಹೋದರರಿಂದ ಒಡಗೂಡಿರುವ ನನ್ನ ಮಕ್ಕಳಲ್ಲಿ ಅಲ್ಲಿಯೂ ಸಹ ವಿರೋಧವನ್ನು ಹುಟ್ಟುಹಾಕಬಹುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಸೋಮದತ್ತಶಕುನಿದರ್ಶನಂ ನಾಮ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ತಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ - ೨೮ನೇ ಅಧ್ಯಾಯ

ತೇನ ದೃಷ್ಟ್ವಾ ಪ್ರೇತದೇಹಾನ್ ಸರ್ವಾಂಸ್ತತ್ರ ಸಮಾಕುಲಾ ।
ಶಶಾಪ ಯಾದವೇಶಾನಂ ತ್ವಯಾऽಸ್ಮತ್ಕುಲನಾಶನಮ್ ॥

ಯತ್ಕೃತಂ ತತ್ ತವ ಕುಲಂ ಗಚ್ಛತ್ವನ್ಯೋನ್ಯತಃ ಕ್ಷಯಮ್ ।
ಇತ್ಯುಕ್ತೋ ಭಗವಾನ್ ಕೃಷ್ಣಃ ಸ್ವಚಿಕೀರ್ಷಿತಮೇವ ತತ್ ॥

ಅಸ್ತ್ವೇವಮಿತ್ಯಾಹ ವಿಭುರೀಶ್ವರೋಪ್ಯನ್ಯಥಾ ಕೃತೌ ।
ತೇನ ತಸ್ಯಾಸ್ತಪೋ ನಷ್ಟಂ ಹೀನಾ ಸಾऽತೋ ಹಿ ಭರ್ತೃತಃ ।
ನಾಶಯೇದ್ಧಿ ಸದಾ ವಿಷ್ಣುಃ ಸ್ವಯೋಗ್ಯಾದಧಿಕಾನ್ ಗುಣಾನ್ ॥

ಗಾಂಧಾರಿ ದಿವ್ಯದೃಷ್ಟಿಯಿಂದ ರಣಭೂಮಿಯಲ್ಲಿ ಬಿದ್ದಿದ್ದ ಎಲ್ಲ ಶವಗಳನ್ನೂ ಕಂಡು ಶೋಕಾರ್ತಳಾಗಿ ಕೃಷ್ಣನನ್ನು ಶಪಿಸಿದಳು- 'ನೀನು ನಮ್ಮ ಕುಲವನ್ನು ಪರಸ್ಪರ ಕಲಹದಿಂದ ನಾಶ ಮಾಡಿದೆಯಾದ್ದರಿಂದ ನಿನ್ನ ಕುಲವೂ ಪರಸ್ಪರ ಕಲಹದಿಂದ ನಾಶ ಹೊಂದಲಿ' ಎಂದು. ಗಾಂಧಾರಿ ಹೀಗೆ ಶಪಿಸಿದಾಗ ಆ ಶಾಪವನ್ನು ಹುಸಿ ಮಾಡಲು ಶಕ್ತನಾಗಿದ್ದರೂ ಭಗವಾನ್ ಶ್ರೀಕೃಷ್ಣ 'ನನ್ನ ಕುಲನಾಶವನ್ನು ನಾನೇ ಮಾಡಬೇಕೆಂದಿದ್ದೆ. ಅದರಿಂದ ಹಾಗೇ ಆಗಲಿ' ಎಂದನು. ಹೀಗೆ ಶಾಪ ಕೊಟ್ಟಿದ್ದರಿಂದ ಗಾಂಧಾರಿಯ ತಪೋಬಲ ನಷ್ಟವಾಯಿತು. ಅದರಿಂದ ತಪೋಬಲದಲ್ಲಿ ಅವಳು ತನ್ನ ಪತಿಗಿಂತ ಕಡಿಮೆಯೂ ಆದಳು. ಯಾರೇ ಆಗಲಿ, ತಮ್ಮ ಯೋಗ್ಯತೆಗೆ ಮೀರಿದ ಪುಣ್ಯ ಮಾಡಿದರೆ ವಿಷ್ಣು ಸ್ವಯಂ ಅದನ್ನು ನಾಶಮಾಡುತ್ತಾನೆ ಎನ್ನುವುದು ಪ್ರಸಿದ್ಧವಿದೆ.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಗಾಂಧಾರಿಯು ಕುರು-ಪಾಂಡವರ ಸಂಕ್ಷಯಕ್ಕೆ ಕೃಷ್ಣನೇ ಕಾರಣ,
ಆದ್ದರಿಂದ ಕೃಷ್ಣನ ಎಲ್ಲ ಬಂಧುಗಳು ಪರಸ್ಪರ ಕಲಹದಿಂದ
ನಾಶವಾಗಲಿ ಎಂದು ಶಪಿಸಿದಳು.

ಗಾಂಧಾರೀ

ಕಾಂಭೋಜಂ ಪಶ್ಯ ದುರ್ಧರ್ಷಂ ಕಾಂಭೋಜಾಸ್ತರಣೋಚಿತಮ್ ।
ಶಯಾನಮೃಷಭಸ್ಕಂಧಂ ಹತಂ ಪಾಂಸುಷು ಮಾಧವ ॥೧॥

ಗಾಂಧಾರಿ– ಮಾಧವ! ಕಾಂಭೋಜದೇಶದಲ್ಲಿ ತಯಾರಾಗುವ ಶಯನದಲ್ಲಿ ಮಲಗಲು ಯೋಗ್ಯನಾದ ಎತ್ತಿನ ಹೆಗಲಿನಂತೆ ಎತ್ತರದ ಹೆಗಲನ್ನು ಹೊಂದಿರುವ ಮೃತನಾಗಿ ಮಣ್ಣಿನಲ್ಲಿ ಮಲಗಿರುವ ಶತ್ರುಗಳಿಂದ ಧರ್ಷಣಕ್ಕೆ ಒಳಗಾಗದ ಕಾಂಭೋಜರಾಜನನ್ನು ನೋಡು.

ಅಸ್ಯ ಕ್ಷತಜಸಂದಿಗ್ಧೌ ಬಾಹೂ ಚಂದನರೂಷಿತೌ ।
ಅವೇಕ್ಷ್ಯ ಕೃಪಣಂ ಭಾರ್ಯಾ ವಿಲಪತ್ಯತಿದುಃಖಿತಾ ॥೨॥

ಶ್ರೀಗಂಧದಿಂದ ಪೂಸಿತವಾಗಿದ್ದ (ಈಗ) ಘಾಸಿಯಿಂದ ರಕ್ತದಿಂದ ಒದ್ದೆಯಾದ ಬಾಹುಗಳನ್ನು ಕಂಡು ಆತನ ಹೆಂಡತಿಯು ಅತ್ಯಂತ ದುಃಖಿತಳಾಗಿ ರೋದಿಸುತ್ತಿರುವಳು.

ಕಾಂಭೋಜಭಾರ್ಯಾ

ಇಮೌ ತೌ ಪರಿಘಪ್ರಖ್ಯೌ ಬಾಹೂ ಶುಭತಲಾಂಗುಲೀ ।
ಯಯೋರ್ವಿವರಮಾಪನ್ನಾಂ ಮಾಂ ರತಿರ್ಮಾ ಪುರಾऽಜಹತ್ ॥೩॥

ಕಾಂಭೋಜನ ಪತ್ನಿ– ಪರಿಘಯುದ್ದಕ್ಕೆ ಸಮವಾದ ಸುಂದರ ಬೆರಳುಗಳಿಂದ ಯುಕ್ತವಾದ ಆ ಈ ಬಾಹುಗಳು, ಹಿಂದೆ ಅವುಗಳ ಮಧ್ಯದಲ್ಲಿ ಸೇರಿದ ನನ್ನನ್ನು ರತಿಸೌಖ್ಯವು ಬಿಟ್ಟುಹೋಗುತ್ತಿರಲಿಲ್ಲ. ('ನಿನ್ನ ಆಲಿಂಗನದಿಂದ ರತಿಸೌಖ್ಯವನ್ನು ಹೊಂದಿದ್ದೆ' ಎಂದು ತನ್ನ ಹಿಂದಿನ ನೆನಪನ್ನು ಮೆಲುಕು ಹಾಕುತ್ತಿರುವಳು.)

ಗಾಂಧಾರೀ

ಕಾಂ ಗತಿಂ ತು ಗಮಿಷ್ಯಾಮಿ ತ್ವಯಾ ಹೀನಾ ನರೇಶ್ವರ ।
ದೂರಬಂಧುರನಾಥಾऽದ್ಯ ಹ್ಯತೀವ ಮಧುರಸ್ವರಾ ॥೪॥

ಗಾಂಧಾರಿ– ಅತ್ಯಂತ ಕೋಮಲಧ್ವನಿಯ ಆಕೆಯು 'ಮನುಜರ ಒಡೆಯನೆ! ನಿನ್ನನ್ನು ಕಳೆದುಕೊಂಡಿರುವ ಈಗ ಬಂಧುಗಳಿಂದ ದೂರಳಾದ ಅನಾಥಳಾದ ನಾನು ಯಾವ ಗತಿಯನ್ನು ಹೊಂದುವೆನು?' (ಎಂದು ರೋದಿಸುತ್ತಿರುವಳು.)

ಆತಪೇ ಕ್ಲಾಮ್ಯಮಾನಾನಾಂ ವಿವಿಧಾನಾಮಿವ ಸ್ರಜಾಮ್ ।
ಕ್ಲಾಂತಾನಾಮಪಿ ನಾರೀಣಾಂ ಜಹಾತಿ ಶ್ರೀರ್ನ ವೈ ತನುಮ್ ॥೫॥

ಬಿಸಿಲಿನಲ್ಲಿ ಬಾಡುವ ವಿವಿಧಪುಷ್ಪಮಾಲೆಯಂತೆ ಬಾಡಿರುವರು ಈ ಮಹಿಳೆಯರು, ಆದರೆ ಇವರ ದೇಹದ ಕಾಂತಿಯು ಕುಂದಿಲ್ಲ.

ಶಯಾನಮಭಿತಃ ಶೂರಂ ಕಲಿಂಗಂ ಮಧುಸೂದನ ।
ಪಶ್ಯ ದೀಪ್ತಾಂಗದಯುಗಪ್ರತಿನದ್ಧಂ ಮಹಾಭುಜಮ್ ॥೬॥

ಮಧುಸೂದನ! ಶೂರನಾದ ಮುರಿದುಹೋದ ಪ್ರಕಾಶಮಾನವಾದ ಭುಜಕೀರ್ತಿಯನ್ನು ಹೊಂದಿರುವ ಮಹಾಪುರುಷನಾದ ಕಲಿಂಗನು ಸನಿಹದಲ್ಲಿ ಮಲಗಿರುವುದನ್ನು ನೋಡು.

ಮಾಗಧಾನಾಮಧಿಪತಿಂ ಜಯತ್ಸೇನಂ ಜನಾರ್ದನ ।
ಪರಿವಾರ್ಯ ಪ್ರರುದಿತಾ ಮಾಗಧ್ಯಃ ಪಶ್ಯ ಯೋಷಿತಃ ॥೭॥

ಜನಾರ್ದನ! ಮಗಧದ ಅಧಿಪತಿ ಜಯತ್ಸೇನನನ್ನು ಸುತ್ತುವರೆದು ಮಗಧರಾಜನ ಪತ್ನಿಯರು ರೋದಿಸುತ್ತಿರುವುದನ್ನು ನೋಡು.

ಹರಿಣ್ಯಾಯತನೇತ್ರಾಣಾಂ ಸುಸ್ವರಾಣಾಂ ಜನಾರ್ದನ ।
ಮಮ ಶ್ರುತಿಹರೋ ನಾದೋ ಮನೋ ಮೋಹಯತೀವ ಮೇ ॥೮॥

ಜನಾರ್ದನ! ಜಿಂಕೆಯ ಕಣ್ಣುಗಳಂತೆ ಅಗಲವಾದ ಕಣ್ಣುಗಳನ್ನು ಹೊಂದಿರುವ ಮಧುರಸ್ವರವನ್ನು ಹೊಂದಿರುವ ನಾರಿಯರ, ಕಿವಿಗಳನ್ನು ಸೆಳೆಯುವ (ಆ) ನಾದವು ನನ್ನ ಮನವನ್ನು ಮೋಹಿಸುತ್ತದೆ.

ಪ್ರಕೀರ್ಣಸರ್ವಾಭರಣಾ ರುದಂತ್ಯಃ ಶೋಕಕರ್ಶಿತಾಃ ।
ಸ್ವಾಸ್ತೀರ್ಣಶಯನೋಪೇತಾ ಮಾಗಧ್ಯಃ ಶೇರತೇ ಭುವಿ ॥೯॥

ಆಭರಣಗಳೆಲ್ಲವೂ ವ್ಯತ್ಯಸ್ತವಾಗಿರುವ ದುಃಖದಿಂದ ಬಳಲಿರುವ ಉತ್ತಮವಾದ ಹಾಸಿನಲ್ಲಿ ಆಸೀನರಾಗಲು ಯೋಗ್ಯರಾದ ಮಗಧರಾಜನ ಪತ್ನಿಯರು ನೆಲದಲ್ಲಿ ಕುಳಿತಿರುವರು.

ಕೋಸಲಾನಾಮಧಿಪತಿಂ ರಾಜಪುತ್ರಂ ಬೃಹದ್ಬಲಮ್ ।
ಭರ್ತಾರಂ ಪರಿವಾರ್ಯೈತಾಃ ಪೃಥಕ್ ಪ್ರರುದಿತಾಃ ಸ್ತ್ರಿಯಃ ॥೧೦॥

ಅಸ್ಯ ಗಾತ್ರಗತಾನ್ ಬಾಣಾನ್ ಕಾರ್ಷ್ಣಿಬಾಹುಬಲೇರಿತಾನ್ ।
ಉದ್ಧರಂತ್ಯಸುಖಾವಿಷ್ಟಾ ಮೂರ್ಚ್ಛಮಾನಾಃ ಪುನಃ ಪುನಃ ॥೧೧॥

ಕೋಸಲದ ಅಧಿಪತಿಯಾದ ರಾಜಕುವರನಾದ (ತಮ್ಮ) ಗಂಡನಾದ ಬೃಹದ್ಬಲನನ್ನು ಸುತ್ತುವರೆದು ರೋದಿಸುತ್ತಿರುವ ಸ್ತ್ರೀಯರು ದುಃಖದಿಂದ ಕುಳಿತುಕೊಂಡು, ಮತ್ತೆ ಮತ್ತೆ ಮೂರ್ಛಿತರಾಗುತ್ತಾ ಈತನ ದೇಹದಲ್ಲಿ ನೆಟ್ಟಿರುವ ಕೃಷ್ಣನ ಸೋದರಳಿಯನ ಬಾಹುಬಲದಿಂದ ಪ್ರೇರಿತವಾದ ಬಾಣಗಳನ್ನು ಕಿತ್ತೊಗೆಯುತ್ತಿರುವರು.

ಆಸಾಂ ಸರ್ವಾನವದ್ಯಾನಾಮಾತಪೇನ ಪರಿಕ್ಲಮಾತ್ ।
ಪ್ರಮ್ಲಾನನಲಿನಾಭಾನಿ ಭಾಂತಿ ವಕ್ತ್ರಾಣಿ ಮಾಧವ ॥೧೨॥

ಮಾಧವ! ದೋಷರಹಿತವಾದ ಅವಯವಗಳನ್ನು ಹೊಂದಿರುವ ಬಿಸಿಲಿನಿಂದ ಬಾಡಿರುವ ಈ ಸ್ತ್ರೀಯರ ಮುಖಗಳು ಬಾಡಿದ ಕಮಲಗಳಂತೆ ತೋರುತ್ತವೆ.

ದ್ರೋಣೇನ ನಿಹತಾಃ ಶೂರಾಃ ಶೇರತೇ ರುಧಿರೋಕ್ಷಿತಾಃ ।
ಧೃಷ್ಟದ್ಯುಮ್ನಸುತಾಃ ಸರ್ವೇ ಭ್ರಾತರೋ ಹೇಮಮಾಲಿನಃ ॥೧೩॥

ದ್ರೋಣರಿಂದ ಮೃತರಾದ ಧೃಷ್ಟದ್ಯುಮ್ನನ ಮಕ್ಕಳಾದ ಚಿನ್ನದ ಮಾಲೆಗಳನ್ನು ಧರಿಸಿರುವ ರಕ್ತದಿಂದ ತೋಯ್ದುಹೋಗಿರುವ ಶೂರರಾದ ಎಲ್ಲ ಸಹೋದರರು ಮಲಗಿರುವರು.

ರಥಾಶ್ವವಾಯುಂ ಚಾಪಾರ್ಚಿಂ ಶರಶಕ್ತಿಗದೇಂಧನಮ್ ।
ದ್ರೋಣಮಾಸಾದ್ಯ ನಿರ್ದಗ್ಧಾಃ ಶಲಭಾ ಇವ ಪಾವಕಮ್ ॥೧೪॥

ರಥ-ಕುದುರೆಗಳೆಂಬ ಗಾಳಿಯನ್ನು ಹೊಂದಿರುವ ಬಿಲ್ಲೆಂಬ ಜ್ವಾಲೆಯಿಂದ ಕೂಡಿರುವ ಬಾಣ-ಶಕ್ತಿ-ಗದೆಗಳೆಂಬ ಇಂಧನವನ್ನು ಹೊಂದಿರುವ ದ್ರೋಣನೆಂಬ ಬೆಂಕಿಯನ್ನು ಹೊಕ್ಕ ಇವರುಗಳು ದೀಪದ ಹುಳುಗಳಂತೆ ದಗ್ಧರಾದರು.

ತಥೈವ ನಿಹತಾಃ ಶೂರಾಃ ಶೇರತೇ ರುಚಿರಾಂಗದಾಃ ।
ದ್ರೋಣೇನಾಭಿಹತಾಃ ಸಂಖೇ ಭ್ರಾತರಃ ಪಂಚ ಕೇಕಯಾಃ ॥೧೫॥

ಹಾಗೆಯೆ ಚೆಂದದ ಭುಜಕೀರ್ತಿಗಳನ್ನು ಹೊಂದಿರುವ ಯುದ್ಧದಲ್ಲಿ ದ್ರೋಣರಿಂದ ಹತರಾದ ಶೂರರಾದ ಕೇಕಯದ ಐವರು ಸಹೋದರರು ಮಲಗಿರುವರು.

ತಪ್ತಕಾಂಚನವರ್ಣಾಭಾಃ ತಾಮ್ರಧ್ವಜರಥವ್ರಜಾಃ ।
ಭಾಸಯಂತಿ ಮಹೀಂ ಭಾಸಾ ಜ್ವಲಿತಾ ಇವ ಪಾವಕಾಃ ॥೧೬॥

ಪುಟವಿಟ್ಟ ಚಿನ್ನದಂತೆ ಕಾಂತಿಯನ್ನು ಹೊಂದಿರುವ ತಾಮ್ರಧ್ವಜಗಳನ್ನು ಹೊಂದಿರುವ ರಥಗಳ ಸಮೂಹವನ್ನು ಹೊಂದಿರುವ ಪ್ರಜ್ವಲಿಸುವ ಬೆಂಕಿಯಂತಿರುವ ಇವರು ತಮ್ಮ ಕಾಂತಿಯಿಂದ ಭೂಮಿಯನ್ನು ಬೆಳಗಿಸುವರು.

ದ್ರೋಣೇನ ದ್ರುಪದಂ ಸಂಖೇ ಪಶ್ಯ ಮಾಧವ ಪಾತಿತಮ್ ।
ಮಹಾದ್ವಿಪಮಿವಾರಣ್ಯೇ ಸಿಂಹೇನ ಮಹತಾ ಹತಮ್ ॥೧೭॥

ಮಾಧವ! ದ್ರೋಣನಿಂದ ಯುದ್ಧದಲ್ಲಿ ಕೆಡಹಲಾದ ದ್ರುಪದನನ್ನು ನೋಡು, ಅರಣ್ಯದಲ್ಲಿ ಬಲಿಷ್ಠ ಸಿಂಹವು ದೊಡ್ಡ ಆನೆಯನ್ನು ಕೆಡಹಿದಂತಿದೆ.

ಪಾಂಚಾಲರಾಜ್ಞೋ ವಿಮಲಂ ಪುಂಡರೀಕಾಕ್ಷ ಪಾಂಡರಮ್ ।
ಆತಪತ್ರಂ ಸಮಾಭಾತಿ ಶರದೀವ ದಿವಾಕರಃ ॥೧೮॥

ಪುಂಡರೀಕಾಕ್ಷ! ಪಾಂಚಾಲರಾಜನ ಶುದ್ಧವಾದ ಬಿಳಿಯದಾದ ಛತ್ರವು ಶರತ್ಕಾಲದ ಸೂರ್ಯನಂತೆ ತೋರುವುದು.

ಏತಾಸ್ತು ದ್ರುಪದಂ ವೃದ್ಧಂ ಸ್ನುಷಾ ಭಾರ್ಯಾಶ್ಚ ದುಃಖಿತಾಃ ।
ದಗ್ಧ್ವಾ ಗಚ್ಛಂತಿ ಪಾಂಚಾಲರಾಜಾನಮಪಸವ್ಯತಃ ॥೧೯॥

ದುಃಖಿತರಾದ ಈ (ದ್ರುಪದರಾಜನ) ಹೆಂಡಂದಿರು ಸೊಸೆಯರು ವೃದ್ಧನಾದ ಪಾಂಚಾಲದ ರಾಜನಾದ ದ್ರುಪದನನ್ನು ದಹಿಸಿ ಎಡದಿಂದ ಸಾಗುತ್ತಿರುವರು.

ಧೃಷ್ಟಕೇತುಂ ಮಹೇಷ್ವಾಸಂ ಚೇದಿಪುಂಗವಮಂಗನಾಃ ।
ದ್ರೋಣೇನ ನಿಹತಂ ಶೂರಂ ಹರಂತಿ ಹೃತಚೇತಸಃ ॥೨೦॥

ದ್ರೋಣನಿಂದ ಮೃತನಾದ ಚೇದಿದೇಶದ ಹಿರಿಯನಾದ ಶೂರನಾದ ಧೃಷ್ಟಕೇತುವನ್ನು (ಆತನ) ಮಹಿಳೆಯರು ಭಾರದ ಮನದಿಂದ ಹೊರುತ್ತಿರುವರು.

ದ್ರೋಣಾಸ್ತ್ರಮಭಿಹತ್ಯೈವ ವಿಮರ್ದೇ ಮಧುಸೂದನ ।
ಮಹೇಷ್ವಾಸೋ ಹತಃ ಶೇತೇ ವಜ್ರಾಹತ ಇವ ದ್ರುಮಃ ॥೨೧॥

ಮಧುಸೂದನ! ದೊಡ್ಡಬಿಲ್ಲಾಳಾದ ಧೃಷ್ಟಕೇತುವು ಯುದ್ಧದಲ್ಲಿ ದ್ರೋಣನ ಅಸ್ತ್ರದಿಂದ ಪ್ರತಿಹತನಾದ ಕೂಡಲೆ, ಸಿಡಿಲಿನಿಂದ ಕೆಡಹಲಾದ ವೃಕ್ಷದಂತೆ ಮೃತನಾಗಿ ಉರುಳಿರುವನು.

ಏಷ ಚೇದಿಪತಿಃ ಶೂರೋ ಧೃಷ್ಟಕೇತುರ್ಮಹಾರಥಃ ।
ಶೇತೇ ವಿನಿಹತಃ ಸಂಖ್ಯೇ ಹತ್ವಾ ಶತ್ರೂನ್ ಸಹಸ್ರಶಃ ॥೨೨॥

ಮಹಾರಥಿಕನಾದ ಶೂರನಾದ ಚೇದಿದೇಶದ ರಾಜನಾದ ಧೃಷ್ಟಕೇತುವು ಯುದ್ಧದಲ್ಲಿ ಸಾವಿರಾರು ಶತ್ರುಗಳನ್ನು ಸಂಹರಿಸಿ (ದ್ರೋಣರಿಂದ) ಹತನಾಗಿ ಮಲಗಿರುವನು.

ವಿತುದ್ಯಮಾನಂ ವಿಹಗೈಸ್ತಂ ಭಾರ್ಯಾಃ ಪ್ರತ್ಯುಪಸ್ಥಿತಾಃ ।
ಚೇದಿರಾಜಂ ಹೃಷೀಕೇಶ ಹತಂ ಸಬಲಬಾಂಧವಮ್ ॥೨೩॥

ಹೃಷೀಕೇಶನೆ! ಬಂಧುಸಹಿತನಾಗಿ ಮೃತನಾದ ಪಕ್ಷಿಗಳಿಂದ ಕುಕ್ಕಿಸಿಕೊಳ್ಳುತ್ತಿರುವ ಆ ಚೇದಿದೇಶದ ರಾಜನನ್ನು ಅವನ ಪತ್ನಿಯರು ಸುತ್ತುವರೆದಿರುವರು.

ದಾಶಾರ್ಹೀಪುತ್ರಜಂ ವೀರಂ ಶಯಾನಂ ಸತ್ಯವಿಕ್ರಮಮ್ ।
ಆದಾಯಾಂಕೇ ರುದಂತ್ಯೇತಾ ಚೇದಿರಾಜವರಾಂಗನಾಃ ॥೨೪॥

ದಶಾರ್ಹಕನ್ಯೆಯ ಮೊಮ್ಮಗನಾದ (ದಶಾರ್ಹಕುಲದ ಶೂರನ ಪುತ್ರಿ ಹಾಗೂ ವಸುದೇವನ ಸೋದರಿಯು ಶ್ರುತಶ್ರವಳು. ಆಕೆಯ ಪುತ್ರ ಶಿಶುಪಾಲ, ಆತನ ಪುತ್ರನು ಈ ಧೃಷ್ಟಕೇತು) ನಿಜಪರಾಕ್ರಮಿಯಾದ ಶೂರನಾದ (ರಣರಂಗದಲ್ಲಿ) ಮಲಗಿರುವ ಧೃಷ್ಟಕೇತುವನ್ನು ಈ ಚೇದಿರಾಜನ ಪತ್ನಿಯರು ತೊಡೆಯ ಮೇಲಿರಿಸಿಕೊಂಡು ರೋದಿಸುತ್ತಿರುವರು.

ಅಸ್ಯ ಪುತ್ರಂ ಹೃಷೀಕೇಶ ಸುವಕ್ತ್ರಂ ಚಾರುಕುಂಡಲಮ್ ।
ದ್ರೋಣೇನ ಸಮರೇ ಪಶ್ಯ ನಿಕೃತ್ತಂ ಬಹುಭಿಃ ಶರೈಃ ॥೨೫॥

ಹೃಷೀಕೇಶ! ಈತನ ಪುತ್ರನಾದ ಸುಂದರಕುಂಡಲಗಳನ್ನು ಧರಿಸಿರುವ ಸುವಕ್ತ್ರನನ್ನು ದ್ರೋಣರು ಅನೇಕ ಬಾಣಗಳಿಂದ ತುಂಡರಿಸಿರುವುದನ್ನು ಕಾಣು.

ಪಿತರಂ ನೂನಮಾಜಿಸ್ಥಂ ಯುಧ್ಯಮಾನಂ ಪರೈಃ ಸಹ ।
ನಾಜಹಾತ್ ಪಿತರಂ ವೀರಮದ್ಯಾಪಿ ಮಧುಸೂದನ ॥೨೬॥

ಮಧುಸೂದನ! ಯುದ್ಧಭೂಮಿಯಲ್ಲಿ ಶತ್ರುಗಳೊಡನೆ ಯುದ್ಧಮಾಡುತ್ತಿದ್ದಾಗ ತಂದೆಯನ್ನು (ಸುವಕ್ತ್ರನು) ಬಿಟ್ಟಿರುತ್ತಿರಲಿಲ್ಲ, ಈಗಲೂ (ಮರಣ ಸಂದರ್ಭದಲ್ಲೂ) ಶೂರನು ತಂದೆಯನ್ನು ಬಿಟ್ಟಿಲ್ಲ.

ಏವಂ ಮಮಾಪಿ ಪುತ್ರಸ್ಯ ಪುತ್ರಃ ಪಿತರಮನ್ವಗಾತ್ ।
ದುರ್ಯೋಧನಂ ಮಹಾಬಾಹೋ ಲಕ್ಷ್ಮ(ಕ್ಷ)ಣಃ ಪರವೀರಹಾ ॥೨೭॥

ನೀಳಬಾಹುವೆ! ಇದೇ ರೀತಿಯಾಗಿ ನನ್ನ ಮಗನ ಮಗನಾದ ಶತ್ರುಗಳ ವೀರ್ಯವನ್ನು ನಾಶಗೊಳಿಸುವ ಲಕ್ಷಣನು ತಂದೆಯಾದ ದುರ್ಯೋಧನನನ್ನು ಅನುಸರಿಸಿ ಹೋದನು.

ವಿಂದಾನುವಿಂದಾವಾವಂತ್ಯೌ ಪತಿತೌ ಪಶ್ಯ ಮಾಧವ ।
ವನೇಷು ಪುಷ್ಪಿತೌ ಸಾಲೌ ಮರುತಾ ಗಲಿತಾವಿವ ॥೨೮॥

ಕಾಂಚನಾಂಗದವರ್ಮಾಣೌ ಬಾಣಖಡ್ಗಧನುರ್ಧರೌ ।
ಋಷಭಪ್ರತಿರೂಪಾಕ್ಷೌ ಶಯಾನೌ ವಿಮಲಸ್ರಜೌ ॥೨೯॥

ಮಾಧವ! ಕಾಡಿನಲ್ಲಿ ಗಾಳಿಯಿಂದ ಕೆಡಹಲಾದ ಹೂವುಗಳಿಂದ ಕೂಡಿದ ತಾಲವಕ್ಷಗಳಂತೆ ಅವಂತಿದೇಶದ ಕುವರರಾದ ವಿಂದಾನುವಿಂದರು ಚಿನ್ನದ ಭುಜಕೀರ್ತಿ ಮತ್ತು ಕವಚವನ್ನು ಧರಿಸಿರುವರು, ಬಾಣ ಖಡ್ಗ ಬಿಲ್ಲುಗಳನ್ನು ಧರಿಸಿರುವರು, ಗೂಳಿಯ ಕಣ್ಣಿನಂತೆ ಅಗಲವಾದ ಕಣ್ಣುಗಳನ್ನು ಹೊಂದಿರುವರು, ಶುದ್ಧವಾದ ಮಾಲೆಗಳನ್ನು ತೊಟ್ಟಿರುವರು, (ಮೃತರಾಗಿ) ಬಿದ್ದಿರುವ ಇವರನ್ನು ಗಮನಿಸು.

ಅವಧ್ಯಾಃ ಪಾಂಡವಾಃ ಕೃಷ್ಣ ಸರ್ವ ಏವ ತ್ವಯಾ ಸಹ ।
ಯೇ ಮುಕ್ತಾ ದ್ರೋಣಭೀಷ್ಮಾಭ್ಯಾಂ ಕರ್ಣಾದ್ ವೈಕರ್ತನಾತ್ ಕೃಪಾತ್ ॥

ದುರ್ಯೋಧನಾದ್ ದ್ರೋಣಸುತಾನ್ ಸೈಂಧವಾಚ್ಚ ಜಯದ್ರಥಾತ್ ।
ಸೌಮದತ್ತೇರ್ವಿಕರ್ಣಾಚ್ಚ ಶೂರಾಚ್ಚ ಕೃತವರ್ಮಣಃ ॥೩೧॥

ಕೃಷ್ಣ! ದುರ್ಯೋಧನನಿಂದ, ಅಶ್ವತ್ಥಾಮನಿಂದ, ಸಿಂಧುದೇಶದ ರಾಜನಾದ ಜಯದ್ರಥನಿಂದ,ಸೋಮದತ್ತಿಯಿಂದ, ವಿಕರ್ಣನಿಂದ,ಶೂರನಾದ ಕೃತವರ್ಮನಿಂದ, ದ್ರೋಣ-ಭೀಷ್ಮರಿಂದ, ಸೂರ್ಯಸುತನಾದ ಕರ್ಣನಿಂದ, ಕೃಪರಿಂದ ಯಾರು ಮುಕ್ತರಾಗಿರುವರೋ, ಆ ನಿನ್ನನ್ನೂ ಸೇರಿಸಿಕೊಂಡು ಈ ಎಲ್ಲ ಪಾಂಡುಪುತ್ರರು ಅವಧ್ಯರೇ ಸರಿ.

ಯೇ ಹನ್ಯುಃ ಶಸ್ತ್ರವೇಗೇನ ದೇವಾನಪಿ ನರರ್ಷಭಾಃ ।
ತ ಇಮೇ ನಿಹತಾಃ ಸರ್ವೇ ಪಶ್ಯ ಕಾಲಸ್ಯ ಪರ್ಯಯಮ್ ॥೩೨॥

ಯಾವ ಪುರುಷಶ್ರೇಷ್ಠರು ಶಸ್ತ್ರಗಳ ವೇಗದಿಂದ ದೇವತೆಗಳನ್ನೂ ಸಂಹರಿಸಲು ಸಮರ್ಥರೋ, ಈ ಆ ಎಲ್ಲರೂ (ದ್ರೋಣಾದಿಗಳು) ಮೃತರಾಗಿರುವರು, ಕಾಲದ ಬದಲಾವಣೆಯನ್ನು ಗಮನಿಸು.

ನಾತಿಭಾರೋऽಸ್ತಿ ದೈವಸ್ಯ ಧ್ರುವಂ ಮಾಧವ ಕಶ್ಚನ ।
ಯತ್ರೇಮೇ ನಿಹತಾಃ ಶೂರಾಃ ಕ್ಷತ್ರಿಯಾಃ ಕ್ಷತ್ರಿಯೈಃ ಸಹ ॥೩೩॥

ಶೂರಾಶ್ಚ ಕೃತವಿದ್ಯಾಶ್ಚ ಮಮ ಪುತ್ರಾ ಮನಸ್ವಿನಃ ॥೩೪॥

ಮಾಧವ! ಶೂರರಾದ ಶಿಕ್ಷಿತರಾದ ಸ್ವಾಭಿಮಾನಿಗಳಾದ ನನ್ನ ಮಕ್ಕಳು, ಶೂರರಾದ ಈ ಎಲ್ಲ ಕ್ಷತ್ರಿಯರು ಕ್ಷತ್ರಿಯರಿಂದಲೇ ಮೃತರಾದರು, (ಇದನ್ನು ಗಮನಿಸಿದಲ್ಲಿ) ನಿಶ್ಚಯವಾಗಿಯೂ ದೈವಕ್ಕೆ ಯಾವುದೂ ಅತಿಭಾರವಾದದ್ದಿಲ್ಲ ಎಂದು ತಿಳಿಯುವುದು.

ತದೈವ ನಿಹತಾಃ ಕೃಷ್ಣ ಮಮ ಪುತ್ರಾ ಯಶಸ್ವಿನಃ ।
ಯದೈವಾಕೃತಕಾಮಸ್ತ್ವಮುಪಪ್ಲಾವ್ಯಂ ಗತಃ ಪುನಃ ॥೩೫॥

ಕೃಷ್ಣ! ಎಂದು ನೀನು ಇಚ್ಛೆಯು ಪೂರ್ಣಗೊಳ್ಳದೆ (ಸಂಧಿಯು ವಿಫಲವಾಗಿ) ಉಪಪ್ಲಾವ್ಯನಗರಕ್ಕೆ ಹಿಂದಿರುಗಿದೆಯೋ ಅಂದೇ ಕೀರ್ತಿವಂತರಾದ ನನ್ನ ಪುತ್ರರು ಮೃತರಾದರು ಎಂದು ತಿಳಿದುಕೊಂಡಿದ್ದೆ.

ಶಂತನೋಶ್ಚೈವ ಪುತ್ರೇಣ ಪ್ರಾಜ್ಞೇನ ವಿದುರೇಣ ಚ ।
ತದೈವೋಕ್ತಾಸ್ಮಿ ಮಾ ಸ್ನೇಹಂ ಕುರುಷ್ವಾತ್ಮಸುತೇಷ್ವಿತಿ ॥೩೫॥

ಶಂತನುವಿನ ಮಗ ಭೀಷ್ಮನು, ಪ್ರಾಜ್ಞನಾದ ವಿದುರನು ಅಂದೇ ನನ್ನನ್ನು ಉದ್ದೇಶಿಸಿ ' ನಿನ್ನ ಮಕ್ಕಳಲ್ಲಿ ಸ್ನೇಹವನ್ನು ಮಾಡದಿರು' ಎಂದು ಹೇಳಿದ್ದರು.

ನ ತಯೋರ್ವಚನಂ ತಾತ ಮಿಥ್ಯಾ ಭವಿತುಮರ್ಹತಿ ।
ಅಚಿರೇಣೈವ ಮೇ ಪುತ್ರಾ ಭಸ್ಮೀಭೂತಾ ಜನಾರ್ದನ ॥೩೭॥

ತಂದೆಯೆ! ಅವರೀರ್ವರ ವಚನವು ಸುಳ್ಳಾಗಲು ಶಕ್ಯವಿಲ್ಲ. ಜನಾರ್ದನ! ಬಹುಬೇಗ ನನ್ನ ಪುತ್ರರು ಬೂದಿಯಾದರು.

ವೈಶಂಪಾಯನಃ

ಇತ್ಯುಕ್ತ್ವಾ ನ್ಯಪತದ್ ಭೂಮೌ ಗಾಂಧಾರೀ ಶೋಕಕರ್ಶಿತಾ ।
ದುಃಖೋಪಹತವಿಜ್ಞಾನಾ ಧೈರ್ಯಮುತ್ಸೃಜ್ಯ ಭಾರತ ॥೩೮॥

ವೈಶಂಪಾಯನ– ಭರತಕುಲೋತ್ಪನ್ನನೆ! ದುಃಖದಿಂದ ಎಚ್ಚರವನ್ನು ಕಳೆದುಕೊಂಡ ದುಃಖದಿಂದ ಬಳಲಿದ ಗಾಂಧಾರಿಯು ಈ ರೀತಿಯಾಗಿ ಹೇಳುತ್ತಾ ಧೈರ್ಯವನ್ನು ಕಳೆದುಕೊಂಡವಳಾಗಿ ಭೂಮಿಯಲ್ಲಿ ಬಿದ್ದಳು.

ತತಃ ಕೋಪಪರೀತಾಂಗೀ ದುಃಖಶೋಕಪರಿಪ್ಲುತಾ ।
ಜಗಾದ ಶೌರಿಂ ರೋಷೇಣ ಗಾಂಧಾರೀ ವ್ಯಥಿತೇಂದ್ರಿಯಾ ॥೩೯॥

ಅನಂತರದಲ್ಲಿ ಬಳಲಿದ ಇಂದ್ರಿಯಗಳುಳ್ಳ ಕೋಪಪೂರಿತಳಾದ ದುಃಖ ಶೋಕಗಳಿಂದ ತುಂಬಿಹೋಗಿದ್ದ ಗಾಂಧಾರಿಯು ರೋಷದಿಂದ ಶೂರನ ಮೊಮ್ಮಗನನ್ನು ಉದ್ದೇಶಿಸಿ ಹೇಳಿದಳು.

ಗಾಂಧಾರೀ

ಪಾಂಡವಾ ಧಾರ್ತರಾಷ್ಟ್ರಾಶ್ಚ ಕ್ರುದ್ಧಾಃ ಕೃಷ್ಣ ಪರಸ್ಪರಮ್ ।
ಉಪೇಕ್ಷಿತಾ ವಿನಶ್ಯಂತಃ ತ್ವಯಾ ಕಸ್ಮಾಜ್ಜನಾರ್ದನ ॥೪೦॥

ಗಾಂಧಾರಿ– ಕೃಷ್ಣ, ಜನಾರ್ದನ! ಪರಸ್ಪರ ಕೋಪಗೊಂಡು ವಿನಾಶವನ್ನು ಹೊಂದುತ್ತಿರುವ ಪಾಂಡವರ ಕೌರವರ ವಿಷಯದಲ್ಲಿ ನೀನು ಏಕೆ ಉದಾಸೀನನಾದಿ?

ಶಕ್ತೇನ ಬಹುಭೃತ್ಯೇನ ವಿಪುಲೇ ತಿಷ್ಠತಾ ಬಲೇ ॥೪೧॥

ಉಭಯತ್ರ ಸಮತ್ವೇನ ಶ್ರುತವಾಕ್ಯೇನ ಚೈವ ಹಿ ।
ಇಚ್ಛತೋಪೇಕ್ಷಿತೋ ನಾಶಃ ಕುರೂಣಾಂ ಮಧುಸೂದನ ॥೪೨॥

ಯಸ್ಮಾತ್ ತ್ವಯಾ ಮಹಾಬಾಹೋ ಫಲಂ ತಸ್ಮಾದವಾಪ್ನುಹಿ ॥೪೩॥

ಸ್ವತಃ ಸಮರ್ಥ, ಭಾರೀ ಸೇನೆಯು ನಿನ್ನಲ್ಲಿದೆ, ಶಾಸ್ತ್ರಗಳನ್ನು ಬಲ್ಲವ, ಉಭಯರೂ ಸಮರಾಗಿದ್ದರು (ಕುರು-ಪಾಂಡವರು ಉಭಯರೂ ಅನುಬಂಧಿಗಳು, ಅವರಿಗೆ ಆಜ್ಞೆಯನ್ನು ಮಾಡಿ ಸರಿದಾರಿಗೆ ತರಲು ಸಮರ್ಥ ಎಂದು ಭಾವ) ಹೀಗಿದ್ದರೂ ಯಾವ ಕಾರಣದಿಂದ ಅವರ ನಾಶವನ್ನು ಬಯಸಿದ್ದಿಯೋ ಆದ್ದರಿಂದ ಅದರ ಫಲವನ್ನು ಹೊಂದುವಿ.

ಪತಿಶುಶ್ರೂಷಯಾ ಯನ್ಮೇ ತಪಃ ಕಿಂಚಿದುಪಾರ್ಜಿತಮ್ ।
ತೇನ ತ್ವಾಂ ದುರವಾಪೇನ ಶಪೇ ಚಕ್ರಗದಾಧರ ॥೪೪॥

ಚಕ್ರಗದಾಧರನೆ! ಗಂಡನ ಸೇವೆಯಿಂದ ನಾನು ಸ್ವಲ್ಪ ತಪವನ್ನು ಆಚರಿಸಿದ್ದೇ ಆದಲ್ಲಿ, ಕಷ್ಟದಿಂದ ಸಂಪಾದಿಸಿದ ಆ ಪುಣ್ಯದಿಂದ ಶಪಿಸುವೆನು.

ಯಸ್ಮಾತ್ ಪರಸ್ಪರಂ ಘ್ನಂತೋ ಜ್ಞಾತಯಃ ಕುರುಪಾಂಡವಾಃ ।
ಉಪೇಕ್ಷಿತಾಸ್ತೇ ಗೋವಿಂದ ತಸ್ಮಾಜ್ಜ್ಞಾತೀನ್ ವಧಿಷ್ಯಸಿ ॥೪೫॥

ಗೋವಿಂದ! ಪರಸ್ಪರವಾಗಿ ಸಂಹರಿಸಿಕೊಳ್ಳುತ್ತಿರುವ ಜ್ಞಾತಿಗಳಾದ ಕುರು-ಪಾಂಡವರನ್ನು ಯಾವ ಕಾರಣದಿಂದ (ತಡೆಯಲು ಸಮರ್ಥನಾಗಿದ್ದರೂ) ಅಲಕ್ಷಿಸಿದೆಯೋ ಆದ್ದರಿಂದ ನಿನ್ನ ಜ್ಞಾತಿಗಳನ್ನೂ (ನೀನೇ) ಸಂಹರಿಸುವಿ.

ತ್ವಮಪ್ಯುಪಸ್ಥಿತೇ ವರ್ಷೇ ಷಟ್‌ತ್ರಿಂಶೇ ಮಧುಸೂದನ ।
ಹತಜ್ಞಾತಿರ್ಹತಾಮಾತ್ಯೋ ಹತಪುತ್ರೋ ವನೇಚರಃ ॥೪೬॥

ಅನಾಥವದಭಿಜ್ಞಾತೋ ಲೋಕೇಷ್ವನಭಿಲಕ್ಷಿತಃ ।
ಕುತ್ಸಿತೇನಾಭ್ಯುಪಾಯೇನ ನಿಧನಂ ಸಮವಾಪ್ಸ್ಯಸಿ ॥೪೭॥

ಮಧುಸೂದನ! ಇನ್ನು ಮೂವತ್ತಾರು ವರ್ಷಗಳು ಸಂದಲು ಅನುಬಂಧಿಗಳನ್ನು ಕಳೆದುಕೊಂಡವನಾಗಿ ಮಂತ್ರಿಗಳನ್ನು ಕಳೆದುಕೊಂಡವನಾಗಿ ಮಕ್ಕಳನ್ನು ಕಳೆದುಕೊಂಡವನಾಗಿ ಕಾಡಿನಲ್ಲಿ ಸುತ್ತುವವನಾಗಿ ಲೋಕದಲ್ಲಿ (ಎಲ್ಲರಿಂದಲೂ) ಉಪೇಕ್ಷಿತನಾಗಿ ಅನಾಥರಂತೆ ಅಪರಿಚಿತನಾಗಿ ಯಾವುದೋ ಸಣ್ಣನೆವದಿಂದ ಸಾವನ್ನು ಅಪ್ಪುವಿ.

ತವಾಪ್ಯೇವಂ ಹತಸುತಾ ನಿಹತಜ್ಞಾತಿಬಾಂಧವಾಃ ।
ಸ್ತ್ರಿಯಃ ಪರಿಪತಿಷ್ಯಂತಿ ಯಥೇಮಾ ಭರತಸ್ತ್ರಿಯಃ ॥೪೮॥

ನೀನು ಸಹ ಇದೇರೀತಿಯಲ್ಲಿ ಮಕ್ಕಳನ್ನು ಕಳೆದುಕೊಂಡಾಗ ಜ್ಞಾತಿಬಾಂಧವರನ್ನು ಕಳೆದುಕೊಂಡಾಗ, ಈ ಭರತಕುಲೋತ್ಪನ್ನರ ಹೆಂಡಂದಿರಂತೆ ಆ ಸ್ತ್ರೀಯರು ಪರಿತಪಿಸುವರು.

ವೈಶಂಪಾಯನಃ

ತಚ್ಚ್ರುತ್ವಾ ವಚನಂ ಘೋರಂ ವಾಸುದೇವೋ ಮಹಾಮನಾಃ ।
ಉವಾಚ ದೇವೀಂ ಗಾಂಧಾರೀಮಿದಮಭ್ಯುತ್ಸ್ಮಯನ್ನಿವ ॥೪೯॥

ವೈಶಂಪಾಯನ– ಮುಗಳುನಗುತ್ತಿರುವಂತೆ ಇರುವ ಮಹಾತ್ಮನಾದ ವಾಸುದೇವನು ಘೋರವಾದ ಆ ಮಾತನ್ನು ಕೇಳಿ ಸಮ್ಮತಿಸಿದವನಂತೆ ದೇವೀ ಗಾಂಧಾರಿಯನ್ನು ಉದ್ದೇಶಿಸಿ ಈರೀತಿಯಾಗಿ ಹೇಳಿದನು.

ಶ್ರೀಭಗವಾನ್

ಸಂಹರ್ತಾ ವೃಷ್ಣಿಚಕ್ರಸ್ಯ ನಾನ್ಯೋ ಮದ್ ವಿದ್ಯತೇ ಶುಭೇ ।
ಜಾನೇಽಹಮೇತದಪ್ಯೇವಂ ಚೀರ್ಣಂ ಚರಸಿ ಕ್ಷತ್ರಿಯೇ ॥೫೦॥

ಶ್ರೀಕೃಷ್ಣ– ಮಂಗಳಕರಳೆ ಕ್ಷತ್ರಿಯಳೆ ! ವೃಷ್ಣಿಗಳ ಸಮೂಹವನ್ನು ಸಂಹರಿಸಲು ನನ್ನಿಂದ ಬೇರೆ ಯಾರೂ ಇರುವುದಿಲ್ಲ ಎಂದು ನಾನು ತಿಳಿದಿರುವೆನು, ಇದನ್ನೇ ನಾನು ಸಂಕಲ್ಪಿಸಿದ್ದೆ, ನೀನೂ ಅದನ್ನು ಮಾತಿನಿಂದ ತಿಳಿಸಿರುವಿ.

ಅವಧ್ಯಾಸ್ತೇ ನರೈರನ್ಯೈರಪಿ ವಾ ದೇವದಾನವೈಃ ।
ಪರಸ್ಪರಕೃತಂ ನಾಶಮತಃ ಪ್ರಾಪ್ಸ್ಯಂತಿ ಯಾದವಾಃ ॥೫೧॥

ಆ ಯಾದವರು ಬೇರೇ ಮನುಷ್ಯರಿಂದ ಅಥವಾ ದೇವತೆಗಳಿಂದ ದಾನವರಿಂದ ಅವಧ್ಯರು, ಆದ್ದರಿಂದ ಪರಸ್ಪರ ಹೊಡೆದಾಡಿಕೊಂಡು ನಾಶವನ್ನು ಹೊಂದಲಿರುವರು.

ವೈಶಂಪಾಯನಃ

ಇತ್ಯುಕ್ತವತಿ ದಾಶಾರ್ಹೇ ಪಾಂಡವಾಸ್ತ್ವಮಾನಸಾಃ ।
ಬಭೂವುರ್ಭೃಶಸಂವಿಗ್ನಾ ನಿರಾಶಾಸ್ತೇಽಪಿ ಜೀವಿತೇ ॥೫೨॥

ವೈಶಂಪಾಯನ– ಈ ರೀತಿಯಾಗಿ ದಶಾರ್ಹಕುಲೋತ್ಪನ್ನನು ಹೇಳುತ್ತಿರಲು ಪಾಂಡವರು ಹೆದರಿದ ಮನಸಿನವರಾದರು, ಉದ್ವೇಗಗೊಂಡವರಾಗಿ ಇನ್ನು ಬದುಕಿದರೂ ವ್ಯರ್ಥ ಎಂದು ಭಾವಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ವಾಸುದೇವಶಾಪೋ ನಾಮ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಸ್ತ್ರೀವಿಲಾಪಪರ್ವ ॥

★ ★ ★ ★ ★ ★

೩. ಶ್ರಾದ್ಧಪರ್ವ

ಇಪ್ಪತ್ತಾರನೆಯ ಅಧ್ಯಾಯ

ದುಃಖದಿಂದ ಭೂಮಿಯಲ್ಲಿ ಬಿದ್ದಿದ್ದ ಗಾಂಧಾರಿಗೆ ಶ್ರೀಕೃಷ್ಣನು ಸಮಾಧಾನವನ್ನು ಹೇಳಿದನು. ಧರ್ಮರಾಜನ ಸೂಚನೆಯಂತೆ ಸಂಜಯ ಮತ್ತು ವಿದುರರು ಮೃತರಿಗೆ ಉತ್ತರಕ್ರಿಯೆಗಳನ್ನು ನಡೆಸಿದರು

ಶ್ರೀಭಗವಾನ್

ಉತ್ತಿಷ್ಠೋತ್ತಿಷ್ಠ ಗಾಂಧಾರಿ ಮಾ ಚ ಶೋಕೇ ಮನಃ ಕೃಥಾಃ ।
ತವೈವ ಹ್ಯಪರಾಧೇನ ಕುರವೋ ನಿಧನಂ ಗತಾಃ ॥೧॥

ಶ್ರೀಕೃಷ್ಣ– ಗಾಂಧಾರಿ! ಮೇಲೇಳು ಮೇಲೇಳು, ಮನದಲ್ಲಿ ದುಃಖಿಸದಿರು, ನಿನ್ನ ಅಪರಾಧದಿಂದಲೇ ಕುರುಗಳು ಮರಣವನ್ನು ಹೊಂದಿದರು.

ಯಾ ತ್ವಂ ಪುತ್ರಂ ದುರಾತ್ಮಾನಮ್ ಈರ್ಷುಮತ್ಯಂತಮಾನಿನಮ್ ।
ದುರ್ಯೋಧನಂ ಪುರಸ್ಕೃತ್ಯ ದುಷ್ಕೃತಂ ಸಾಧು ಮನ್ಯಸೇ ॥೨॥

ನಿಷ್ಠುರಂ ಚೈವ ಪರುಷಂ ವೃದ್ಧಾನಾಂ ಶಾಸನಾತಿಗಮ್ ।
ಕಥಮಾತ್ಮಕೃತಂ ದೋಷಂ ಮಯ್ಯಾಧಾತುಮಿಹೇಚ್ಛಸಿ ॥೩॥

ಯಾವ ನೀನು ದುರಾತ್ಮನಾದ ಅಸೂಯಾಪರನಾದ ದುರಭಿಮಾನಿಯಾದ ನಿಷ್ಠುರನುಡಿಗಳನ್ನಾಡುವ, ಚುಚ್ಚುಮಾತುಗಳನ್ನಾಡುವ ಹಿರಿಯರನ್ನು ಧಿಕ್ಕರಿಸುವ (ನಿನ್ನ)

ಮಗನಾದ ದುರ್ಯೋಧನನನ್ನು ಮುಂದಿಟ್ಟುಕೊಂಡು ತಪ್ಪಿಸಗಿ ಸರಿಯಾದದ್ದನ್ನು ನಡೆಸಿರುವೆನು ಎಂದು ಭಾವಿಸುವಿ? ನಿನ್ನಲ್ಲಿನ ತಪ್ಪನ್ನು ನನ್ನಲ್ಲಿ ಆರೋಪಿಸಲು ಏಕೆ ಬಯಸುವಿ?

ಮೃತಂ ವಾ ಯದಿ ವಾ ನಷ್ಟಂ ಯೋಽತೀತಮನುಶೋಚತಿ ।
ದುಃಖೇನ ಲಭತೇ ದುಃಖಂ ದ್ವಾವನರ್ಥೌ ಪ್ರಪದ್ಯತೇ ॥೪॥

ಮರಣವನ್ನು ಹೊಂದಿದವರ ವಿಷಯದಲ್ಲಾಗಲಿ, ಹಾಳುಗೆಡವಿದ ವಸ್ತುವಿನ ವಿಷಯದಲ್ಲಾಗಲಿ, ಗತಿಸಿಹೋದದ್ದರ ಬಗ್ಗೆಯಾಗಲಿ ದುಃಖಿಸುವುದರಿಂದ ಮತ್ತಷ್ಟು ದುಃಖವು ಹೆಚ್ಚುವುದು, (ಚಿಂತಿಸುವುದರಿಂದ ಕರ್ತವ್ಯಕರ್ಮದಿಂದ ವಿಮುಖನಾಗಿ ಕಾಲವೂ ವ್ಯರ್ಥವಾಗುವುದು, ಹೀಗಾಗಿ) ಎರಡೆರಡು ನಷ್ಟವನ್ನು ಹೊಂದುವನು.

ತಪೋರ್ಥಿನಂ ಬ್ರಾಹ್ಮಣೀ ದತ್ತಗರ್ಭಾ
ಗೌರ್ವೋಢಾರಂ ಧಾವಿತಾರಂ ತುರಂಗಃ ।
ಶೂದ್ರಾ ದಾಸಂ ಪಶುಪಾಲಂ ತು ವೈಶ್ಯಾ
ವಧಾರ್ಥಿನಂ ತದ್ವಿಧಾ ರಾಜಪುತ್ರೀ ॥೫॥

ಗರ್ಭಧರಿಸಿದ ಬ್ರಾಹ್ಮಣಿಯು ತಪಸ್ವಿಪುತ್ರನನ್ನು, ಹಸುವು ಭಾರಹೊರುವ ಎತ್ತನ್ನು, ಕುದುರೆಯು ವೇಗವಾಗಿ ಓಡುವ ಕುದುರೆಯನ್ನು, ಶೂದ್ರಳು ಸೇವಾಸಮರ್ಥನನ್ನು, ವೈಶ್ಯಳು ಪಶುಸಂರಕ್ಷಕನನ್ನು, ನಿನ್ನಂಥ ರಾಜಪುತ್ರಿಯು (ರಣರಂಗದಲ್ಲಿ) ಸಾವನ್ನು ಬಯಸುವ ಪುತ್ರನನ್ನು ಇಚ್ಛಿಸುತ್ತಾರೆ.

ವೈಶಂಪಾಯನಃ

ತಚ್ಛ್ರುತ್ವಾ ವಾಸುದೇವಸ್ಯ ಪುನರುಕ್ತಂ ವಚೋಽಪ್ರಿಯಮ್ ।
ತೂಷ್ಣೀಂ ಬಭೂವ ಗಾಂಧಾರೀ ಶೋಕವ್ಯಾಕುಲಲೋಚನಾ ॥೬॥

ವೈಶಂಪಾಯನ– ಮತ್ತೆ ಹೇಳಿದ ವಾಸುದೇವನ ಅಪ್ರಿಯವಾದ ಆ ಮಾತನ್ನು ಕೇಳಿ, ದುಃಖದಿಂದ ಬಳಲಿದ ಕಂಗಳುಳ್ಳ ಗಾಂಧಾರಿಯು ಮೌನವಹಿಸಿದಳು.

ಧೃತರಾಷ್ಟ್ರಸ್ತು ರಾಜರ್ಷಿರ್ನಿಗೃಹ್ಯಾಬುದ್ಧಿಜಂ ತಮಃ ।
ಪರ್ಯಪೃಚ್ಛತ ಧರ್ಮಾತ್ಮಾ ಧರ್ಮರಾಜಂ ಯುಧಿಷ್ಠಿರಮ್ ॥೭॥

ರಾಜರ್ಷಿಯಾದ ಧರ್ಮಾತ್ಮನಾದ ಧೃತರಾಷ್ಟ್ರನು ಅಜ್ಞಾನದಿಂದ ಉಂಟಾದ ಮೋಹವನ್ನು ನಿಯಂತ್ರಿಸಿ, ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುವ ಧರ್ಮರಾಜನನ್ನು ಪ್ರಶ್ನಿಸಿದನು.

ಧೃತರಾಷ್ಟ್ರಃ

ಜೀವತಾಂ ಪರಿಮಾಣಜ್ಞಃ ಸೈನ್ಯಾನಾಮಸಿ ಪಾಂಡವ ।
ಹತಾನಾಂ ಯದಿ ಜಾನೀಷೇ ಪರಿಮಾಣಂ ಬ್ರವೀಹಿ ಮೇ ॥೮॥

ಧೃತರಾಷ್ಟ್ರ– ಪಾಂಡುಪುತ್ರನೆ! ಬದುಕಿರುವ ಸೈನ್ಯದ ಪರಿಮಾಣವನ್ನು ತಿಳಿದವನಾಗಿರುವಿ, ಮೃತರಾದವರ (ಸೈನ್ಯದ) ಪರಿಮಾಣವು ತಿಳಿದ ಪಕ್ಷದಲ್ಲಿ ನನಗೆ ತಿಳಿಸು.

ಯುಧಿಷ್ಠಿರಃ

ದಶಾಯುತಸಹಸ್ರಾಣಿ ಸಹಸ್ರಾಣಿ ಚ ವಿಂಶತಿಃ ।
ಕೋಟ್ಯಃ ಷಷ್ಟಿಶ್ಚ ಷಟ್ ಚೈವ ಅಸ್ಮಿನ್ ರಾಜನ್ ಮೃಧೇ ಹತಾಃ ॥೯॥

ಅಲಕ್ಷಾಣಾಂ ತು ಶೂರಾಣಾಂ ಸಹಸ್ರಾಣಿ ಚತುರ್ದಶ ।
ದಶ ಚಾನ್ಯಾನಿ ರಾಜೇಂದ್ರ ಶತಂ ಷಷ್ಟಿಶ್ಚ ಭಾರತ ॥೧೦॥

ಧರ್ಮರಾಜ– ಭರತಕುಲೋತ್ಪನ್ನನೆ! ಒಂದುನೂರಾರವತ್ತಾರುಕೋಟಿ ಇಪ್ಪತ್ತು ಸಾವಿರ ಯೋಧರು ಮೃತರಾಗಿದ್ದಾರೆ. ಇಪ್ಪತ್ನಾಲ್ಕುಸಾವಿರದ ನೂರಾ ಅರವತ್ತು ಶೂರರು ಏನಾದರೆಂದು (ಮೃತರಾಗಿರುವರೋ ತಲೆತಪ್ಪಿಸಿಕೊಂಡು ಪರಾರಿಯಾಗಿರುವರೋ) ತಿಳಿಯದು.

ಧೃತರಾಷ್ಟ್ರಃ

ಯುಧಿಷ್ಠಿರ ಗತಿಂ ಕಾಂ ತೇ ಗತಾಃ ಪುರುಷಸತ್ತಮಾಃ ।
ಆಚಕ್ಷ್ವ ಮೇ ಮಹಾಬಾಹೋ ಸರ್ವಜ್ಞೋ ಹ್ಯಸಿ ಮೇ ಮತಃ ॥೧೧॥

ಧೃತರಾಷ್ಟ್ರ– ನೀಳಬಾಹುವೆ ಯುಧಿಷ್ಠಿರ ! ನನ್ನ ಅಭಿಪ್ರಾಯದಂತೆ ನೀನು ಎಲ್ಲವನ್ನೂ ಬಲ್ಲವ, ಆ ಪುರುಷಶ್ರೇಷ್ಠರು ಯಾವ ಗತಿಯನ್ನು ಹೊಂದಿರುವರು? ನನಗೆ ತಿಳಿಸು.

ಯುಧಿಷ್ಠಿರಃ

ಯೈರ್ಹುತಾನಿ ಶರೀರಾಣಿ ಹೃಷ್ಟೈಃ ಪರಮಸಂಯುಗೇ ।
ದೇವರಾಜಸಮಾಸ್ತೇ ತು ದೇವರಾಜೇನ ಪೂಜಿತಾಃ ॥೧೨॥

ಧರ್ಮರಾಜ– ಶ್ರೇಷ್ಠವಾದ ಯುದ್ಧದಲ್ಲಿ ಸಂತಸದ ಮನದಿಂದ ಯಾರು (ತಮ್ಮ) ಶರೀರವನ್ನು ಆಹುತಿಯನ್ನಾಗಿ ನೀಡಿರುವರೋ (ಮರಣವನ್ನು ಹೊಂದಿರುವರೊ) ಅವರು ಇಂದ್ರನಿಗೆ ಸಮರು, ದೇವರಾಜನಿಂದ ಸನ್ಮಾನಿತರಾಗುವರು.

ಯೇ ತ್ವಹೃಷ್ಟೇನ ಮನಸಾ ಮರ್ತವ್ಯಮಿತಿ ಭಾರತ ।
ಗಂಧರ್ವಲೋಕೇ ಪೂಜ್ಯಂತೇ ತೇ ಗಂಧರ್ವೈಃ ಸಮಾಗತಾಃ ॥೧೩॥

ಭರತಕುಲೋತ್ಪನ್ನನೆ! ಯಾರು ಮನಸಿಲ್ಲದೇ (ಅನಿವಾರ್ಯವಾಗಿ) ಸಾಯುವುದು ಅನಿವಾರ್ಯ ಎಂಬ ಭಾವದಿಂದ ಮರಣವನ್ನು ಹೊಂದಿರುವರೋ ಅವರು ಗಂಧರ್ವಲೋಕದಲ್ಲಿ ಗಂಧರ್ವರಿಂದ ಮಾನಿತರಾಗುವರು.

ಯೇ ತು ಸಂಗ್ರಾಮಭೂಮಿಷ್ಠಾ ಯಾಚಮಾನಾಃ ಪರಾಙ್ಮುಖಾಃ ।
ಶಸ್ತ್ರೇಣ ನಿಧನಂ ಪ್ರಾಪ್ತಾಸ್ತೇ ಗತಾ ಗುಹ್ಯಕಾನ್ ಪ್ರತಿ ॥೧೪॥

ಯಾರು ಯುದ್ಧಭೂಮಿಯಲ್ಲಿದ್ದು (ಶತ್ರುವಿನಲ್ಲಿ) ಯಾಚಿಸುವವರಾಗಿ (ಯುದ್ಧದಿಂದ) ಪರಾಙ್ಮುಖರಾದವರು ಶಸ್ತ್ರಗಳಿಂದ ಸಾವನ್ನು ಹೊಂದಿದಲ್ಲಿ ಅವರು ಗುಹ್ಯಲೋಕಕ್ಕೆ ಹೋಗುವರು.

ವಿಧ್ಯಮಾನಾಃ ಪರೈರ್ಯೇ ತು ಹ್ರೀಯಮಾಣಾ ನಿರಾಯುಧಾಃ ।
ಹ್ರೀನಿಷೇಧಾ ಮಹಾತ್ಮಾನಃ ಪರಾನಭಿಮುಖಾನ್ ರಣೇ ॥೧೫॥

ಭಿದ್ಯಮಾನಾಃ ಶಿತೈರ್ಬಾಣೈಃ ಕ್ಷತ್ರಧರ್ಮಪರಾಯಣಾಃ ।
ಹತಾಸ್ತೇ ಬ್ರಹ್ಮಸದನಂ ಗತಾ ವೀರಾಃ ಸುವರ್ಚಸಃ ॥೧೬॥

ಯಾರು ಶತ್ರುಗಳಿಂದ ಹೊಡೆಸಿಕೊಂಡು ನಿರಾಯುಧರಾಗಿ (ತಮ್ಮ ವಾಹನದಿಂದ) ಕೆಡಹಿಸಿಕೊಂಡವರಾಗಿಯೂ ನಾಚಿಕೆಯಿಂದ ತಡೆಯಲ್ಪಡುವವರಾಗಿ (ರಣರಂಗದಿಂದ ಪಲಾಯನ ಮಾಡುವುದು ಲಜ್ಜೆಗೆಟ್ಟ ಕೆಲಸ ಎಂದು ಭಾವಿಸಿ) ರಣರಂಗದಲ್ಲಿ ಶತ್ರುವಿನ

ಅಭಿಮುಖವಾಗಿ ನಿಲ್ಲುವರೊ ಕ್ಷತ್ರಧರ್ಮಪರಾಯಣರಾದವರನ್ನು (ಶತ್ರುಗಳು) ಹರಿತ ಬಾಣಗಳಿಂದ ತುಂಡರಿಸುವರು, ಮೃತರಾದ ಕಾಂತಿಮಂತರಾದ ವೀರರಾದ ಆ ಮಹಾತ್ಮರು ಬ್ರಹ್ಮಸದನವನ್ನು ಸೇರಿರುವರು.

ಕ್ಷತ್ರಧರ್ಮೇಣ ನಿಹತಾಸ್ತೇ ಗತಾಃ ಪರಮಾಂ ಗತಿಮ್ ॥೧೭॥

(ಒಟ್ಟಿನಲ್ಲಿ ಯಾರು) ಕ್ಷತ್ರಧರ್ಮದಿಂದ ನಿಹತರಾದರೋ ಅವರು (ಎಲ್ಲರೂ) ಉತ್ತಮಗತಿಯನ್ನು ಹೊಂದಿರುವರು.

ಯೇ ತತ್ರ ನಿಹತಾ ರಾಜನ್ನಂತರಾಯೋಧನಂ ಪ್ರತಿ ।
ಯಥಾಕಥಂಚಿತ್ ಪುರುಷಾಸ್ತೇ ಗತಾ ಹ್ಯುತ್ತರಾನ್ ಕುರೂನ್ ॥೧೮॥

ರಾಜನೆ! ಈ ರಣರಂಗದಲ್ಲಿ ಯಾವುದೇ ರೀತಿಯಲ್ಲಿ ಯಾರು ಮೃತರಾಗಿರುವರೋ ಆ ಪುರುಷರು ಉತ್ತರಕುರುದೇಶವನ್ನು ಹೊಂದುವರು.

ಧೃತರಾಷ್ಟ್ರಃ

ಯೇನ ಜ್ಞಾನಬಲೇನೈವ ಪುತ್ರ ಪಶ್ಯಸಿ ಸಿದ್ಧವತ್ ।
ತನ್ಮೇ ವದ ಮಹಾಬಾಹೋ ಶ್ರೋತವ್ಯಂ ಯದಿ ವೈ ಮಯಾ ॥೧೯॥

ಧೃತರಾಷ್ಟ್ರ– ಮಗನೇ! ಯಾವ ಜ್ಞಾನದ ಬಲದಿಂದ ಸಿದ್ಧಪುರುಷರಂತೆ (ಈ ಎಲ್ಲವನ್ನು) ತಿಳಿದಿರುವಿ? ಒಂದು ವೇಳೆ ನಾನು ಅದನ್ನು ತಿಳಿಯಬಹುದಾದಲ್ಲಿ ನನಗೆ ತಿಳಿಸು.

ಯುಧಿಷ್ಠಿರಃ

ನಿದೇಶಾತ್ ಭವತಃ ಪೂರ್ವಂ ವನೇ ವಿಚರತಾ ಮಯಾ ।
ತೀರ್ಥಯಾತ್ರಾಪ್ರಸಂಗೇನ ಸಂಪ್ರಾಪ್ತೋ ಯಮುನಾತಟಮ್ ॥೨೦॥

ಧರ್ಮರಾಜ– ನಿನ್ನ ಆಜ್ಞೆಯಂತೆ ಈ ಹಿಂದೆ ವನದಲ್ಲಿ ತಿರುಗಾಡುತ್ತಿದ್ದ ನಾನು ತೀರ್ಥಯಾತ್ರಾ ಸಂದರ್ಭದಲ್ಲಿ ಯಮುನಾತೀರಕ್ಕೆ ಹೋಗಿದ್ದೆನು.

ದೇವರ್ಷಿರ್ನಾರದೋ ದೃಷ್ಟ್ವತಃ ಪ್ರಾಪ್ತೋಽಸ್ಮ್ಯನುಸ್ಮೃತಿಮ್ ।
ದಿವ್ಯಂ ಚಕ್ಷುರನುಪ್ರಾಪ್ತಂ ಜ್ಞಾನಯೋಗೇನ ವೈ ಪುರಾ ॥೨೧॥

ದೇವರ್ಷಿಗಳಾದ ಲೋಮಶರನ್ನು ಕಂಡೆನು, ಅವರಿಂದ ಅನುಸ್ಮೃತಿವಿದ್ಯೆಯನ್ನು ಹೊಂದಿದೆನು, ಹಿಂದೆಯೇ ಜ್ಞಾನಯೋಗದಿಂದ ದಿವ್ಯ ಚಕ್ಷುಸ್ಸನ್ನು ಹೊಂದಿದ್ದೆ.

ಧೃತರಾಷ್ಟ್ರಃ

ಯಥಾऽನಾಥಾ ಜನಾಸ್ತಾತ ನಾಥವಂತಶ್ಚ ಪಾಂಡವ ।
ಕಚ್ಚಿತ್ತೇಷಾಂ ಶರೀರಾಣಿ ಧಕ್ಷ್ಯಂತೇ ವಿಧಿಪೂರ್ವಕಮ್ ॥೨೨॥

ಧೃತರಾಷ್ಟ್ರ– ಮಗನೆ ಪಾಂಡುಪುತ್ರನೆ! ಕೆಲವರು ಅನಾಥರು ಮತ್ತೆ ಕೆಲವರು ಸನಾಥರು ಇವರೆಲ್ಲರಿಗೂ ವಿಧಿಪೂರ್ವಕವಾಗಿ ದಹನಕ್ರಿಯೆಯನ್ನು ನಡೆಸುವಿಯೆನು?

ಯುಧಿಷ್ಠಿರಃ

ನ ಯೇಷಾಂ ಶಾಂತಿಕರ್ತಾರೋ ನ ಚ ಯೇ ಹ್ಯಾಹಿತಾಗ್ನಯಃ ।
ವಯಂ ತು ತೇಷಾಂ ಕುರ್ಮೋऽದ್ಯ ಬಹುತ್ವಾತ್ ತಾತ ಕರ್ಮಣಃ ॥

ಧರ್ಮರಾಜ– ತಂದೆಯೇ! ಯಾರಿಗೆ ಉತ್ತರಕ್ರಿಯೆಯನ್ನು ಮಾಡುವವರು ಇಲ್ಲವೋ, ಯಾರು ಆಹಿತಾಗ್ನಿಗಳಲ್ಲವೊ ಬಹುಜನರಾದ್ದರಿಂದ ಅವರೆಲ್ಲರಿಗೂ ನಾವೇ ಉತ್ತರಕ್ರಿಯೆಯನ್ನು ಈಗ ಮಾಡುವೆವು.

ಯಾನ್ ಸುಪರ್ಣಾಶ್ಚ ಗೃಧ್ರಾಶ್ಚ ವಿಕರ್ಷಂತಿ ತತಸ್ತತಃ ।
ತೇಷಾಂ ಸಂಕರ್ಷಣಾ ಲೋಕಾ ಭವಿಷ್ಯಂತಿ ನ ಸಂಶಯಃ ॥೨೪॥

ಯಾರನ್ನು ಗರುಡಪಕ್ಷಿಗಳು ಹದ್ದುಗಳು ಮತ್ತೆ ಮತ್ತೆ ಎಳೆದಾಡಿವೆಯೋ ಅವರಿಗೆ ಸಂಕರ್ಷಣ ಲೋಕವು ಪ್ರಾಪ್ತವಾಗುವುದು, ಸಂದೇಹವಿಲ್ಲ.

ವೈಶಂಪಾಯನಃ

ಏವಮುಕ್ತ್ವಾ ಮಹಾಪ್ರಾಜ್ಞಃ ಕುಂತೀಪುತ್ರೋ ಯುಧಿಷ್ಠಿರಃ ।
ಆದಿದೇಶ ಸುಧರ್ಮಾಣಂ ಧೌಮ್ಯಂ ಸೂತಂ ಚ ಸಂಜಯಮ್ ॥೨೫॥

ವಿದುರಂ ಚ ಮಹಾಬುದ್ಧಿಂ ಯುಯುತ್ಸುಂ ಚಾಪಿ ಕೌರವಮ್ ।
ಇಂದ್ರಸೇನಮುಖಾನ್ ಭೃತ್ಯಾನ್ ಸೂತಾಂಶ್ಚೈವ ಚ ಸರ್ವಶಃ ॥೨೬॥

ವೈಶಂಪಾಯನ– ಮಹಾಜ್ಞಾನಿಯಾದ ಕುಂತೀಪುತ್ರನಾದ ಯುಧಿಷ್ಠಿರನು ಹೀಗೆ ಹೇಳಿ ಸುಧರ್ಮನಿಗೆ ಧೌಮ್ಯರಿಗೆ ಸೂತನಾದ ಸಂಜಯನಿಗೆ ಮಹಾಜ್ಞಾನಿಯಾದ ವಿದುರನಿಗೆ ಕೌರವನಾದ ಯುಯುತ್ಸುವಿಗೆ ಇಂದ್ರಸೇನ ಮುಂತಾದ ಭೃತ್ಯರಿಗೆ ಎಲ್ಲ ಸಾರಥಿಗಳಿಗೆ ಆಜ್ಞಾಪಿಸಿದನು.

ಯುಧಿಷ್ಠಿರಃ

ಭವಂತಃ ಕಾರಯಂತ್ವೇಷಾಂ ಪ್ರೇತಕಾರ್ಯಾಣಿ ಸರ್ವಶಃ ।
ಯಥಾ ನಾಥವತಾಂ ಕಿಂಚಿಚ್ಛರೀರಂ ನ ವಿನಶ್ಯತೇ ॥೨೭॥

ಧರ್ಮರಾಜ– ನೀವು ಈ ಎಲ್ಲರಿಗೂ ಪ್ರೇತಕಾರ್ಯವನ್ನು ನಡೆಸಿರಿ, ವಾರಸುದಾರರ ಶರೀರಗಳಿಗೆ ಹೇಗೆ ನಾಶಗೊಳ್ಳದಂತೆ ಪ್ರೇತಕಾರ್ಯವನ್ನು ಮಾಡಲಾಗುವುದೋ ಹಾಗೆ ಇವರುಗಳಿಗೂ ಮಾಡುವುದು.

ವೈಶಂಪಾಯನಃ

ಶಾಸನಾದ್ಧರ್ಮರಾಜಸ್ಯ ಕ್ಷತ್ತಾ ಸೂತಶ್ಚ ಸಂಜಯಃ ।
ಸುಧರ್ಮಾ ಧೌಮ್ಯಸಹಿತ ಇಂದ್ರಸೇನಾದಯಸ್ತಥಾ ॥೨೮॥

ಚಂದನಾಗುರುಕಾಷ್ಠಾನಿ ತಥಾ ಕಾಲೇಯಕಾನ್ಯಪಿ ।
ಘೃತಂ ತೈಲಂ ಚ ಗಂಧಾಂಶ್ಚ ಕ್ಷೌಮಾಣಿ ವಸನಾನಿ ಚ ॥೨೯॥

ಸಮಾಹೃತ್ಯ ಮಹಾರ್ಹಾಣಿ ದಾರೂಣಾಂ ಚೈವ ಸಂಚಯಾನ್ ।
ರಥಾಂಶ್ಚ ಮೃದಿತಾಂಸ್ತತ್ರ ನಾನಾಪ್ರಹರಣಾನಿ ಚ ॥೩೦॥

ಚಿತಾಃ ಕೃತ್ವಾ ಪ್ರಯತ್ನೇನ ಯಥಾ ಮುಖ್ಯಾನ್ ನರಾಧಿಪಾನ್ ।
ದಾಹಯಾಮಾಸುರವ್ಯಗ್ರಾ ವಿಧಿದೃಷ್ಟೇನ ಕರ್ಮಣಾ ॥೩೧॥

ವೈಶಂಪಾಯನ– ಧರ್ಮರಾಜನ ಶಾಸನದಿಂದ ವಿದುರ ಸೂತನಾದ ಸಂಜಯ ಸುಧರ್ಮ ಹಾಗೂ ಧೌಮ್ಯ ಇವರಿಂದ ಸೇರಿಕೊಂಡ ಇಂದ್ರಸೇನಾದಿಗಳು ಶ್ರಿಗಂಧದ ಕಟ್ಟಿಗೆಗಳನ್ನು ಕಾಲೀಯಕವನ್ನು (ಸುಗಂಧದ್ರವ್ಯ) ತುಪ್ಪ ಎಣ್ಣೆ ಗಂಧ ನುಣುಪಾದ ವಸ್ತ್ರಗಳನ್ನು ಭಾರೀ ಕಾಷ್ಠರಾಶಿಯನ್ನು ಅಲ್ಲಿಯೇ ಮುರಿದುಬಿದ್ದಿದ್ದ ರಥಗಳನ್ನು ನಾನಾ

ಆಯುಧಗಳನ್ನು ಒಟ್ಟುಮಾಡಿ, ಪ್ರಯತ್ನದಿಂದ ಚಿತೆಯನ್ನು ನಿರ್ಮಿಸಿ ಆದ್ಯತೆಯ ಅನುಸಾರ ರಾಜರೆಲ್ಲರನ್ನು ವಿಧ್ಯುಕ್ತಕ್ರಮದಲ್ಲಿ ಬೇಸರಿಸಿಕೊಳ್ಳದಂತೆ ದಹಿಸಿದರು.

ದುರ್ಯೋಧನಂ ಚ ರಾಜಾನಂ ಭ್ರಾತೄಂಶ್ಚಾಸ್ಯ ಮಹಾರಥಾನ್ ।
ಶಲ್ಯಂ ಶಲಂ ಚ ರಾಜಾನಂ ಭೂರಿಶ್ರವಸಮೇವ ಚ ॥೩೨॥

ಜಯದ್ರಥಂ ಚ ರಾಜಾನಮಭಿಮನ್ಯುಂ ಚ ಭಾರತ ।
ದೌಃಶಾಸನಿಂ ಲಕ್ಷ್ಮಣಂ ಚ ಧೃಷ್ಟಕೇತುಂ ಚ ಭಾರತ ॥೩೩॥

ಬೃಹದ್ಬಲಂ ಸೋಮದತ್ತಂ ಸೃಂಜಯಂ ಚ ಮಹಾರಥಮ್ ।
ರಾಜಾನಂ ಕ್ಷೇಮಧನ್ವಾನಂ ವಿರಾಟದ್ರುಪದೌ ತಥಾ ॥೩೪॥

ಶಿಖಂಡಿನಂ ಚ ಪಾಂಚಾಲ್ಯಂ ಧೃಷ್ಟದ್ಯುಮ್ನಂ ಚ ಭಾರತ ।
ಯುಧಾಮನ್ಯುಂ ಚ ದುರ್ಧರ್ಷಮುತ್ತಮೌಜಸಮೇವ ಚ ॥೩೫॥

ಕೋಸಲೇಂದ್ರಂ ದ್ರೌಪದೇಯಾನ್ ಶಕುನಿಂ ಚೈವ ಸೌಬಲಮ್ ।
ಅಚಲಂ ವೃಷ್ಕಲಂ ಚೈವ ಭಗದತ್ತಂ ಚ ಭಾರತ ॥೩೬॥

ಕರ್ಣಂ ವೈಕರ್ತನಂ ಚೈವ ಸಹಪುತ್ರಮಮರ್ಷಣಮ್ ।
ಕೇಕಯಾಂಶ್ಚ ಮಹೇಷ್ವಾಸಾನ್ ತ್ರಿಗರ್ತಾಂಶ್ಚ ಮಹಾರಥಾನ್ ॥೩೭॥

ಘಟೋತ್ಕಚಂ ರಾಕ್ಷಸೇಂದ್ರಂ ಬಕಭ್ರಾತರಮೇವ ಚ ।
ಅಲಂಬುಸಂ ಚ ರಾಜಾನಂ ಜಲಸಂಧಂ ಚ ಪಾರ್ಥಿವಮ್ ॥೩೮॥

ಅನ್ಯಾಂಶ್ಚ ಪಾರ್ಥಿವಾನ್ ಶೂರಾನ್ ಶತಶೋಽಥ ಸಹಸ್ರಶಃ ।
ಘೃತಧಾರಾಹುತೈರ್ದೀಪ್ತೈಃ ಪಾವಕೈಃ ಸಮದಾಹಯನ್ ॥೩೯॥

ಭರತಕುಲೋತ್ಪನ್ನನೆ! ರಾಜನಾದ ದುರ್ಯೋಧನನನ್ನು ಮಹಾರಥಿಕರಾದ ಆತನ ಸಹೋದರರನ್ನು ಶಲ್ಯನನ್ನು ಶಲನನ್ನು ರಾಜನಾದ ಭೂರಿಶ್ರವಸ್‌ನನ್ನು ರಾಜನಾದ ಜಯದ್ರಥನನ್ನು ಅಭಿಮನ್ಯುವನ್ನು ದುಃಶಾಸನನ ಮಗನನ್ನು ಲಕ್ಷಣನನ್ನು ಧೃಷ್ಟಕೇತುವನ್ನು ಬೃಹದ್ಬಲನನ್ನು ಮಹಾರಥಿಕನಾದ ಸಂಜಯನನ್ನು ರಾಜನಾದ ಕ್ಷೇಮಧನ್ವನನ್ನು ವಿರಾಟ-ದ್ರುಪದರನ್ನು ಶಿಖಂಡಿಯನ್ನು ಪಾಂಚಾಲಾಧಿಪನಾದ ಧೃಷ್ಟದ್ಯುಮ್ನನನ್ನು

ಉತ್ತಮ ಪರಾಕ್ರಮಿಯಾದ ಧರ್ಷಣಕ್ಕೆ ಒಳಗಾಗದ ಉತ್ತಮೌಜನನ್ನು ಕೋಸಲದ ಅಧಿಪತಿಯನ್ನು ದ್ರೌಪದಿಯ ಮಕ್ಕಳನ್ನು ಸುಬಲದೇಶದ ಶಕುನಿಯನ್ನು ಅಚಲನನ್ನು ಪುಷ್ಕಲನನ್ನು ಭಗದತ್ತನನ್ನು ಕೋಪಿಯಾದ ಪುತ್ರಸಹಿತನಾದ ಸೂರ್ಯಪುತ್ರ ಕರ್ಣನನ್ನು ದೊಡ್ಡಬಿಲ್ಲಾಳುಗಳಾದ ಕೇಕಯದೇಶದ ರಾಜಕುಮಾರರನ್ನು ಮಹಾರಥಿಕರಾದ ತ್ರಿಗರ್ತದ ರಾಜಕುಮಾರರನ್ನು ರಾಕ್ಷಸೇಂದ್ರನಾದ ಘಟೋತ್ಕಚನನ್ನು ಬಕಾಸುರನ ಸಹೋದರನಾದ ಅಲಂಬುಸನನ್ನು ರಾಜನಾದ ಜಲಸಂಧನನ್ನು ಇನ್ನೂ ಬೇರೆಯವರಾದ ಶೂರರಾದ ಸಾವಿರಾರು ಭೂಮಿಯ ಒಡೆಯರನ್ನು ತುಪ್ಪದ ಧಾರೆಯ ಆಹುತಿಗಳಿಂದ ಜ್ವಲಿತವಾದ ಅಗ್ನಿಗಳಿಂದ ದಹಿಸಿದರು.

ಪಿತೃಮೇಧಾಂಶ್ಚ ಕೇಷಾಂಚಿತ್ ಪಾರ್ಥಿವಾನಾಂ ಮಹಾತ್ಮನಾಮ್ ।
ಸಾಮಾನಿ ಚಾನ್ವಗೀಯಂತ ತೇಽನ್ವಶಾಸತ ಚಾಪರೇ ॥೪೦॥

ಮಹಾತ್ಮರಾದ ಕೆಲವು ಭೂಮಿಯ ಒಡೆಯರಿಗೆ ಪಿತೃಮೇಧಕ ವಿಧಿಯಿಂದ ಉತ್ತರಕ್ರಿಯೆಗಳನ್ನು ಮಾಡಿದರು, ಸಾಮಮಂತ್ರಗಳನ್ನು ಹಾಡಿದರು, ಮತ್ತೆ ಕೆಲವರು ಅವರುಗಳನ್ನು ಅನುಸರಿಸಿ ಕ್ರಿಯೆಗಳನ್ನು ಮಾಡಿದರು.

ಸಾಮ್ನಾಮೃಚಾಂ ಚ ನಾದೇನ ಸ್ತ್ರೀಣಾಂ ಚ ರುದಿತಸ್ವನೈಃ ।
ಕಶ್ಮಲಂ ಸರ್ವಭೂತಾನಾಂ ತದಾನೀಮನ್ವಪದ್ಯತ ॥೪೧॥

ಋಕ್ ಮತ್ತು ಸಾಮಗಳ ಗಾನದಿಂದ ಹೆಣ್ಣುಮಕ್ಕಳ ರೋದನದ ಶಬ್ದದಿಂದ ಆಗ ಎಲ್ಲ ಪ್ರಾಣಿಗಳು ವ್ಯಾಕುಲವಾದವು.

ಹುತಾಶ್ಚ ತತ್ರ ದೀಪ್ತಾಶ್ಚ ದೀಪ್ಯಮಾನಾಶ್ಚ ಪಾವಕಾಃ ।
ನಭಸೀವಾನ್ವದೃಶ್ಯಂತ ಗ್ರಹಾಸ್ತನ್ವಭ್ರಸಂವೃತಾಃ ॥೪೨॥

ಉರಿಯುತ್ತಿರುವ ಧಗಧಗಿಸುತ್ತಿರುವ ಪ್ರಜ್ವಲಿಸುತ್ತಿರುವ ಚಿತಾಗ್ನಿಗಳು, ಮೋಡದಿಂದ ಆವೃತವಾದ ಗಗನದಲ್ಲಿನ ಗ್ರಹಗಳಂತೆ ಭಾಸವಾಗುತ್ತಿದ್ದವು.

ಯೇ ಚಾಪ್ಯನಾಥಾಸ್ತತ್ರಾಸನ್ ನಾನಾದೇಶಸಮಾಗತಾಃ ॥೪೩॥

ತಾಂಶ್ಚ ಸರ್ವಾನ್ ಸಮಾನೀಯ ರಾಶೀನ್ ಕೃತ್ವಾ ಸಹಸ್ರಶಃ ।
ಚಿತಾದಾರುಭಿರತ್ಯುಗ್ರೈಃ ಪ್ರಭೂತಸ್ನೇಹಮೂರ್ಚ್ಛಿತೈಃ ॥೪೪॥

ದಾಹಯಾಮಾಸ ವಿದುರೋ ಧರ್ಮರಾಜಸ್ಯ ಶಾಸನಾತ್ ॥೪೫॥

ಅಲ್ಲಿ ನಾನಾದೇಶಗಳಿಂದ ಬಂದ ಸೇನಾನಿಗಳ ಶವಗಳು ವಾರಸುದಾರರು ಇಲ್ಲದೇ ಬಿದ್ದಿದ್ದವು. ಧರ್ಮರಾಜನ ಆದೇಶದಂತೆ ವಿದುರನು (ಆ ಶವಗಳನ್ನು) ಸಾವಿರಾರು ರಾಶಿಗಳನ್ನಾಗಿಸಿ ಹೆಚ್ಚು ಎಣ್ಣೆಯಿಂದ ನೆನೆಸಿ ತುಂಬಾ ಕಟ್ಟಿಗೆಗಳನ್ನು ಸೇರಿಸಿ ಸುಡಿಸಿದನು.

ಕಾರಯಿತ್ವಾ ಕ್ರಿಯಾಸ್ತೇಷಾಂ ಕುರುರಾಜೋ ಯುಧಿಷ್ಠಿರಃ ।
ಧೃತರಾಷ್ಟ್ರಂ ಪುರಸ್ಕೃತ್ಯ ಗಂಗಾಮಭಿಮುಖೋಽಗಮತ್ ॥೪೬॥

(ಮೃತರಿಗೆ ಉತ್ತರ)ಕ್ರಿಯೆಯನ್ನು ಪೂರ್ಣಗೊಳಿಸಿ ಕುರುರಾಜನಾದ ಯುಧಿಷ್ಠಿರನು ಧೃತರಾಷ್ಟ್ರನನ್ನು ಮುಂದೆಮಾಡಿಕೊಂಡು ಗಂಗೆಯ ಕಡೆಗೆ ಸಾಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಷಟ್‌ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಮೃತರಿಗೆ ತರ್ಪಣವನ್ನೀಯಲು ಧೃತರಾಷ್ಟ್ರಾದಿಗಳು ಗಂಗಾತೀರಕ್ಕೆ ತೆರಳುವುದು, ತರ್ಪಣವನ್ನು ಈಯುವ ಸಂದರ್ಭದಲ್ಲಿ ಕುಂತಿಯು, ಕರ್ಣನು ತನ್ನ ಪುತ್ರ ಎಂದು ಧರ್ಮರಾಜಾದಿಗಳಿಗೆ ತಿಳಿಸುವುದು, ಧೃತರಾಷ್ಟ್ರಾದಿಗಳು ತಮ್ಮ ತಮ್ಮ ಬಂಧುಗಳಿಗೆ ತರ್ಪಣವನ್ನು ನೀಡಿದರು.

ವೈಶಂಪಾಯನಃ

ತೇ ಸಮಾಸಾದ್ಯ ಗಂಗಾಂ ತು ಶಿವಾಂ ಪುಣ್ಯಜಲಾನ್ವಿತಾಮ್ ।
ಹ್ರಾದಿನೀಂ ವಪ್ರಸಂಪನ್ನಾಂ ಮಹಾನೂಪಾಂ ಮಹಾವನಾಮ್ ॥೧॥

ಭೂಷಣಾನ್ಯುತ್ತರೀಯಾಣಿ ವೇಷ್ಟನಾನ್ಯವಮುಚ್ಯ ಚ ।
ಕವಚಾನಿ ವಿಚಿತ್ರಾಣಿ ಗಂಗಾಮವಜಗಾಹಿರೇ ॥೨॥

ವೈಶಂಪಾಯನ– ಅವರು ಮಂಗಳಕರವಾದ ಜಲದಿಂದ ಕೂಡಿರುವ ಶುಭಕರವಾದ ಮಡುಗಳಿಂದ ಯುಕ್ತವಾಗಿರುವ ವಿಶಾಲವಾದ ಕಾಡಿನಿಂದ ಸುತ್ತುವರೆದಿರುವ

ಗಂಗೆಯನ್ನು ಸೇರಿ, ಭೂಷಣಗಳನ್ನು ಉತ್ತರೀಯವಸ್ತ್ರಗಳನ್ನು ಕಟಿಬಂಧಗಳನ್ನು ವಿಚಿತ್ರವಾದ ಕವಚಗಳನ್ನು ಕಳಚಿ ಗಂಗೆಯಲ್ಲಿ ಮುಳುಗಿ ಸ್ನಾನ ಮಾಡಿದರು.

ತತಃ ಪಿತೄಣಾಂ ಪುತ್ರಾಣಾಂ ಗುರೂಣಾಂ ಸ್ವಜನಸ್ಯ ಚ ।
ಭ್ರಾತೄಣಾಮಾರ್ಯಕಾಣಾಂ ಚ ಪತೀನಾಂ ಚ ಕುರುಸ್ತ್ರಿಯಃ ॥೩॥

ಉದಕಂ ಚಕ್ರಿರೇ ಸರ್ವಾ ರುದಂತ್ಯೋ ಭೃಶದುಃಖಿತಾಃ ॥೪॥

ಅನಂತರದಲ್ಲಿ ತುಂಬಾ ದುಃಖಿತರಾದ ಎಲ್ಲ ಕುರುಮಹಿಳೆಯರು ರೋದಿಸುತ್ತಾ ತಂದೆಯರಿಗೆ ಮಕ್ಕಳಿಗೆ ಗುರುಗಳಿಗೆ ತಮ್ಮ ಅನುಬಂಧಿಗಳಿಗೆ ಸಹೋದರರಿಗೆ ಪೂಜ್ಯರಿಗೆ ಗಂಡಂದಿರಿಗೆ ಜಲತರ್ಪಣವನ್ನು ಇತ್ತರು.

ಸುಹೃದಾಂ ಚಾಪಿ ಧರ್ಮಜ್ಞಾಃ ಪ್ರಚಕ್ರುಃ ಸಲಿಲಕ್ರಿಯಾಃ ॥೫॥

ಧರ್ಮವನ್ನು ತಿಳಿದ ಆ ಸ್ತ್ರೀಯರು ಸ್ನೇಹಿತರಿಗೂ ಸಹ ಜಲತರ್ಪಣವನ್ನು ಇತ್ತರು.

ಉದಕೇ ಕ್ರಿಯಮಾಣೇ ತು ವೀರಾಣಾಂ ವೀರಪತ್ನಿಭಿಃ ।
ಸೂಪತೀರ್ಥಾऽಭವದ್ ಗಂಗಾ ಭೂಯೋ ವಿಪ್ರಸಸಾರ ಚ ॥೬॥

ವೀರಪತ್ನಿಯರು ವೀರರಿಗೆ ಜಲತರ್ಪಣವನ್ನು ನೀಡಲು, ಗಂಗೆಯು (ಆ ಮೃತರಿಗೆ ಉತ್ತಮಲೋಕವನ್ನು ದೊರಕಿಸಿಕೊಡಬೇಕೆಂಬ ಉದ್ದೇಶದಿಂದ ಬ್ರಹ್ಮಾಂಡದಲ್ಲಿರುವ ಎಲ್ಲ ತೀರ್ಥಗಳಿಂದ ಕೂಡಿದವಳಾದಳು) ಸೂಪತೀರ್ಥಳು ಆದಳು, ಹೆಚ್ಚುವೇಗದಿಂದಲೂ ಪ್ರವಹಿಸಿದಳು.

ತನ್ಮಹೋದಧಿಸಂಕಾಶಂ ನಿರಾನಂದನಿರುತ್ಸವಮ್ ।
ವೀರಪತ್ನೀಭಿರಾಕೀರ್ಣಂ ಗಂಗಾತೀರಮಶೋಭತ ॥೭॥

ದೊಡ್ಡ ಸಮುದ್ರದಂತಿರುವ ವೀರಪತ್ನಿಯರು ಜಮಾಯಿಸಿದ ಗಂಗೆಯ ತೀರವು ಲವಲವಿಕೆಯಿಲ್ಲದೆಯೂ ಸಂಭ್ರಮ ರಹಿತವಾಗಿಯೂ ತೋರಿತು.

ತತಃ ಕುಂತೀ ಮಹಾರಾಜ ರುದಂತೀ ಶೋಕಕರ್ಶಿತಾ ।
ವ್ರೀಡಯಾ ಮಂದಯಾ ವಾಚಾ ಪುತ್ರಾನ್ ವಚನಮಬ್ರವೀತ್ ॥೮॥

ಮಹಾರಾಜ! ಅನಂತರದಲ್ಲಿ ಕುಂತಿಯು ಶೋಕದಿಂದ ಬಳಲಿ ರೋದಿಸುತ್ತಾ ನಾಚಿಕೆಯಿಂದ ಮೆದು ಧ್ವನಿಯಿಂದ ಮಕ್ಕಳನ್ನು ಉದ್ದೇಶಿಸಿ ಮಾತೊಂದನ್ನು ಹೇಳಿದಳು.

ಕುಂತೀ

ಯಃ ಸ ಶೂರೋ ಮಹೇಷ್ವಾಸೋ ರಥಯೂಥಪಯೂಥಪಃ ।
ಅರ್ಜುನೇನ ಹತಃ ಸಂಖೇ ವೀರಲಕ್ಷಣಲಕ್ಷಿತಃ ॥೯॥

ಯಂ ಸೂತಪುತ್ರಂ ಮನ್ಯಧ್ವಂ ರಾಧೇಯ ಇತಿ ಪಾಂಡವಾಃ ।
ಯೋ ವ್ಯರಾಜಚ್ಚಮೂಮಧ್ಯೇ ದಿವಾಕರ ಇವ ಪ್ರಭುಃ ॥೧೦॥

ಅತ್ಯರಿಚ್ಯತ ಯಃ ಸರ್ವಾನ್ ಪುರಾ ವಃ ಸಪದಾನುಗಾನ್ ।
ದುರ್ಯೋಧನಬಲಂ ಸರ್ವಂ ಯಃ ಪ್ರಕರ್ಷನ್ ವ್ಯರೋಚತ ॥೧೧॥

ಯಸ್ಯ ನಾಸ್ತಿ ಸಮೋ ಲೋಕೇ ಪೃಥಿವ್ಯಾಮಪಿ ಕಶ್ಚನ ।
ಯೋಽವೃಣೀತ ಯಶಃ ಶೂರಃ ಪ್ರಾಣೈರಪಿ ಸದಾ ಭುವಿ ॥೧೨॥

ಸತ್ಯಸಂಧಸ್ಯ ಶೂರಸ್ಯ ಸಂಗ್ರಾಮೇಷ್ವಪಲಾಯಿನಃ ।
ಕುರುಧ್ವಮುದಕಂ ತಸ್ಯ ಭ್ರಾತುರಕ್ಲಿಷ್ಟಕರ್ಮಣಃ ॥೧೩॥

ಕುಂತಿ– ಯಾವನು ಶೂರನೊ ದೊಡ್ಡಬಿಲ್ಲಾಳೋ ರಥಿಕರ ರಥಿಕನೊ ಯುದ್ಧದಲ್ಲಿ ಅರ್ಜುನನಿಂದ ಸಾವನ್ನು ಅಪ್ಪಿದನೊ ವೀರರ ಲಕ್ಷಣಗಳಿಂದ ಕೂಡಿದ್ದನೊ, ಪಾಂಡು ಪುತ್ರರೆ! ನೀವು ಯಾವನನ್ನು ಸೂತಪುತ್ರ ರಾಧೆಯ ಪುತ್ರ ಎಂದು ತಿಳಿದಿದ್ದಿರೊ ಯಾವನು ಸೈನ್ಯದ ಮಧ್ಯದಲ್ಲಿ ಸ್ವಾಮಿ ಸೂರ್ಯನಂತೆ ಪ್ರಕಾಶಮಾನನಾಗಿದ್ದನೋ, ಹಿಂದೆ (ಯುದ್ಧದಲ್ಲಿ) ಸಹಾಯಕರಿಂದ ಕೂಡಿಕೊಂಡು ಎಲ್ಲರಿಂದಲೂ ಮಿಗಿಲಾಗಿದ್ದನೊ ದುರ್ಯೋಧನನ ಸಮಸ್ತ ಬಲವನ್ನು ಮುಂದೆ ಸಾಗಿಸುತ್ತ ಪ್ರಕಾಶಿಸಿದನೊ, ಈ ಭೂಲೋಕದಲ್ಲಿ ಯಾರಿಗೆ ಯಾವೊಬ್ಬನೂ (ಅವನಿಗೆ) ಸಮನಲ್ಲವೋ ಯಾವ ಶೂರನು ಸದಾ ಭೂಮಿಯಲ್ಲಿ ಪ್ರಾಣಕ್ಕಿಂತಲೂ (ಹೆಚ್ಚೆಂದು) ಕೀರ್ತಿಯನ್ನೇ ವರಿಸುತ್ತಿದ್ದನೊ, ಸತ್ಯಸಂಧನಾದ ಶೂರನಾದ ಯುದ್ಧದಲ್ಲಿ ಬೆನ್ನು ಮಾಡದ ದುಃಶಕ್ಯವಾದ ಕೆಲಸವನ್ನು ಮಾಡುತ್ತಿದ್ದ (ನಿಮ್ಮ) ಸೋದರನಿಗೆ ತರ್ಪಣವನ್ನು ನೀಡಿ.

ಸ ಹಿ ತೇ ಪೂರ್ವಜೋ ಭ್ರಾತಾ ಭಾಸ್ಕರಾನ್ಮಯ್ಯಜಾಯತ ।
ಕುಂಡಲೀ ಕವಚೀ ಶೂರೋ ದಿವಾಕರಸಮಪ್ರಭಃ ॥೧೪॥

ಆತನು ನಿಮ್ಮ ಹಿರಿಯ ಅಣ್ಣ, ನನ್ನಲ್ಲಿ ಸೂರ್ಯದೇವನಿಂದ ಹುಟ್ಟಿದ್ದನು, ಕುಂಡಲ ಸಹಿತನಾಗಿ ಕವಚಸಹಿತನಾಗಿ ಇದ್ದ ಶೂರನು ಸೂರ್ಯನ ಸಮವಾದ ಕಾಂತಿಯನ್ನು ಹೊಂದಿದ್ದನು.

ವೈಶಂಪಾಯನಃ

ಶ್ರುತ್ವಾ ತು ಪಾಂಡವಾಃ ಸರ್ವೇ ಮಾತುರ್ವಚನಮಪ್ರಿಯಮ್ ।
ಕರ್ಣಮೇವಾಭ್ಯರೋಚಂತ ಭೂಯಶ್ಚಾತ್ಯಾತುರಾ ಭವನ್ ॥೧೫॥

ವೈಶಂಪಾಯನ– ಎಲ್ಲ ಪಾಂಡುಪುತ್ರರು ಅಪ್ರಿಯವಾದ ತಾಯಿಯ ಮಾತನ್ನು ಕೇಳಿ ಕರ್ಣನಿಗಾಗಿ ದುಃಖಿಸಿದರು ಮತ್ತು ಅತ್ಯಂತ ಆತುರರಾದರು.

ತತಃ ಸ ಪುರುಷವ್ಯಾಘ್ರಃ ಕುಂತೀಪುತ್ರೋ ಯುಧಿಷ್ಠಿರಃ ।
ಉವಾಚ ಮಾತರಂ ವೀರೋ ನಿಃಶ್ವಸನ್ನಿವ ಪನ್ನಗಃ ॥೧೬॥

ಅನಂತರದಲ್ಲಿ ಆ ಪುರುಷಶ್ರೇಷ್ಠನಾದ ಕುಂತೀಪುತ್ರನಾದ ವೀರನಾದ ಯುಧಿಷ್ಠಿರನು ಹಾವಿನಂತೆ ಭುಸುಗುಟ್ಟುತ್ತಾ ತಾಯಿಯನ್ನು ಉದ್ದೇಶಿಸಿ ನುಡಿದನು.

ಯುಧಿಷ್ಠಿರಃ

ಯಃ ಶರೋರ್ಮಿಧ್ವಜಾವರ್ತೋ ಮಹಾಭುಜಮಹಾಗ್ರಹಃ ।
ತಳಶಬ್ದಪ್ರಣುದಿತೋ ಮಹಾರಥಮಹಾದ್ರುಮಃ ॥೧೭॥

ಯಸ್ಯೇಷುಪಾತಮಾಸಾದ್ಯ ಕೋಽನ್ಯಸ್ತಿಷ್ಠೇದ್ಧನಂಜಯಾತ್ ॥೧೮॥

ಕಥಂ ಪುತ್ರೋ ಭವತ್ಯಾಽಽಶು ದೇವಗರ್ಭಃ ಪುರಾಽಭವತ್ ।
ಕುಂಡಲೀ ಕವಚೀ ಶೂರೋ ದಿವಾಕರಸಮಪ್ರಭಃ ॥೧೯॥

ಯಸ್ಯ ಬಾಹುಪ್ರತಾಪೇನ ತಾಪಿತಾಃ ಸರ್ವತೋ ವಯಮ್ ।
ತಮಗ್ನಿರಿವ ವಸ್ತ್ರೇಣ ಕಥಂ ಛಾದಿತವತ್ಯಸಿ ॥೨೦॥

ಯುಧಿಷ್ಠಿರ– ಬಾಣಗಳೆಂಬ ತೆರೆಯಿಂದ ಧ್ವಜವೆಂಬ ಸುಳಿಯಿಂದ (ತನ್ನ) ದೊಡ್ಡಭುಜಗಳೆಂಬ ಮೊಸಳೆಗಳಿಂದ ಬಿಲ್ಲಿನ ಹಗ್ಗದ ಝೇಂಕಾರವೆಂಬ ಪ್ರಖರಶಬ್ದದಿಂದ ಮಹಾರಥವೆಂಬ ಮೋಡದಿಂದ ಯುಕ್ತವಾದ (ಸಮುದ್ರನು

ಕರ್ಣ), ಅರ್ಜುನನ ಹೊರತಾಗಿ ಮತ್ತಾರೂ ಯಾರ ಬಾಣದ ಎದುರು ನಿಲ್ಲಲು ಶಕ್ಯವಿರಲಿಲ್ಲವೋ ಅಂತಹ ಶೂರನಾದ ದೇವಸದೃಶನಾದ (ಹುಟ್ಟುವಾಗಲೇ) ಕುಂಡಲಗಳನ್ನು ಕವಚವನ್ನು ಧರಿಸಿದ್ದ ಸೂರ್ಯನಿಗೆ ಸಮವಾದ ಕಾಂತಿಯನ್ನು ಹೊಂದಿದ್ದ ಕರ್ಣನು ಹಿಂದೆ ಹೇಗೆ ನಿನ್ನ ಪುತ್ರನಾಗಿ ಜನಿಸಿದನು? ಯಾರ ಬಾಹುಬಲದಿಂದ ನಾವೆಲ್ಲರೂ ಪರಿತಪ್ತರಾದೆವೊ ಆತನನ್ನು ವಸ್ತ್ರದಿಂದ ಬೆಂಕಿಯನ್ನು ಮುಚ್ಚಿಡುವುದು ಹೇಗೆ ಶಕ್ಯವಿಲ್ಲವೋ (ಅಂತಹವನನ್ನು) ಹೇಗೆ ಮರೆಮಾಚಿದ್ದಿ?

ಯಸ್ಯ ಬಾಹುಪ್ರಭಾವೇನ ವೈರಮಸ್ಮಾಸ್ವರೋಚಯತ್ ।
ಸುಯೋಧನಸ್ತು ತಂ ಜ್ಯೇಷ್ಠಂ ಕಥಂ ನೋದಿತವತ್ಯಸಿ ॥೨೧॥

ಯಾವಾತನ ಬಾಹುಬಲದಿಂದ ದುರ್ಯೋಧನನು ನಮ್ಮಲ್ಲಿ ವೈರವನ್ನು ಮಾಡುತ್ತಿದ್ದನೋ ಅಂತಹ ಅಣ್ಣನ ವಿಷಯವನ್ನು ಏಕೆ ಹೇಳಲಿಲ್ಲ?

ತಥಾ ಕರ್ಣಂ ಮಹೇಶ್ವಾಸಂ ಧಾರ್ತರಾಷ್ಟ್ರೈರುಪಾಸಿತಮ್ ।
ಉಪಾಸಿತಂ ಯಥಾಽಸ್ಮಾಭಿರ್ಬಲಂ ಗಾಂಡೀವಧನ್ವನಃ ॥೨೨॥

ನಾವು ಹೇಗೆ ಗಾಂಡಿವಧನುರ್ಧಾರಿಯನ್ನು ಆಧರಿಸಿಕೊಂಡಿದ್ದೆವೋ ಹಾಗೆ ದೊಡ್ಡಬಿಲ್ಲಾಳಾದ ಕರ್ಣನನ್ನು ಧೃತರಾಷ್ಟ್ರನ ಪುತ್ರರು ಆಶ್ರಯಿಸಿದ್ದರು.

ಭೂಮಿಪಾನಾಂ ಚ ಸರ್ವೇಷಾಂ ಲೋಕೇ ಬಲವತಾಂ ವರಮ್ ।
ನಾನ್ಯಃ ಕುಂತೀಸುತಾಜ್ಜಿಷ್ಣೋರ್ನಿಹನ್ಯಾದ್ ರಥಿನೋ ರಥೀ ॥೨೩॥

ಈ ಜಗದಲ್ಲಿ ಬಲಿಷ್ಠರಾದ ಎಲ್ಲ ಭೂಮಿಪಾಲರಿಂದ ಶ್ರೇಷ್ಠನಾದ ರಥಿಕರ ರಥಿಕನಾದ ಕರ್ಣನನ್ನು ಕುಂತೀಪುತ್ರನಾದ ಅರ್ಜುನನ ಹೊರತಾಗಿ ಮತ್ತಾರು ಸಂಹರಿಸುತ್ತಿದ್ದರು?

ಸ ನಃ ಪ್ರಥಮಜೋ ಭ್ರಾತಾ ಸರ್ವಶಸ್ತ್ರಭೃತಾಂ ವರಃ ।
ಅಸೂತ ತಂ ಭವತ್ಯಗ್ರೇ ಕಥಮದ್ಭುತವಿಕ್ರಮಮ್ ॥೨೪॥

ಎಲ್ಲ ಶಸ್ತ್ರಧಾರಿಗಳಿಂದ ಉತ್ತಮನಾದ ನಮ್ಮ ದೊಡ್ಡ ಅಣ್ಣನು, ಅಂತಹ ಮಹಾಪರಾಕ್ರಮಿಯನ್ನು ನೀನು ಮೊದಲು ಹೇಗೆ ಹೆತ್ತಿರುವಿ?

ಅಹೋ ಭವತ್ಯಾ ಮಂತ್ರೇಣ ಗೃಹೀತೇನ ವಯಂ ಹತಾಃ ।
ನಿಧನೇನ ಹಿ ಕರ್ಣಸ್ಯ ಪೀಡಿತಾಃ ಸಹಬಾಂಧವಾಃ ॥೨೫॥

ಅಯ್ಯೋ! ನಿನ್ನ ಗುಟ್ಟಿನಿಂದ ನಾವು ಮೃತರಾದೆವು, ಕರ್ಣನ ಸಾವಿನಿಂದ ಬಂಧುಗಳಿಂದ ಕೂಡಿದ ನಾವು ಪೀಡೆಗೆ ಒಳಗಾದೆವು.

ಅಭಿಮನ್ಯೋರ್ವಿನಾಶಾದ್ಧಿ ದ್ರೌಪದೇಯವಧಾದಪಿ ।
ಪಾಂಚಾಲಾನಾಂ ವಧಾಚ್ಚಾಪಿ ಕುರೂಣಾಂ ಘಾತನಾದಪಿ ॥೨೬॥

ತತಃ ಶತಗುಣಂ ದುಃಖಮಿದಮಾಪತಿತಂ ಮಹತ್ ॥೨೭॥

ಅಭಿಮನ್ಯುವಿನ ಸಾವಿಗಿಂತಲೂ ದ್ರೌಪದಿಯ ಮಕ್ಕಳ ಸಾವಿಗಿಂತಲೂ ಪಾಂಚಾಲರ ಸಾವಿಗಿಂತಲೂ ಕೌರವರ ಸಾವಿಗಿಂತಲೂ ನೂರುಪಟ್ಟು ಹೆಚ್ಚು ದುಃಖವು ಬಂದೊದಗಿತು.

ಕರ್ಣಮೇವಾನುಶೋಚಾಮಿ ದಹ್ಯಮಾನಾಗ್ನಿವಾಹಿತಾಃ ।
ನ ಚ ಮೇ ಕಿಂಚಿದಪ್ರಾಪ್ಯಂ ಭವೇದಪಿ ದಿವಿ ಸ್ಥಿತಮ್ ॥೨೮॥

ನ ಚ ಸ್ಮ ವೈಶಸಂ ಘೋರಂ ಕೌರವಾಣಾಂ ಕೃತಂ ಭವೇತ್ ॥೨೯॥

ಕರ್ಣನ ಬಗ್ಗೆ ಚಿಂತಿಸುವೆ, ಬೆಂಕಿಯಲ್ಲಿ ದೂಡಿಸಿಕೊಂಡವನಂತೆ ಪರಿತಪಿಸುತ್ತಿರುವೆನು, ನನಗೆ ಹೊಂದಲಾಗದ್ದು ಯಾವುದೂ ಇರಲಿಲ್ಲ, ಸ್ವರ್ಗದಲ್ಲಿದ್ದರೂ (ಆ ಪದಾರ್ಥವನ್ನು) ಹೊಂದುತ್ತಿದ್ದೆ, ಕೌರವರನ್ನು ಕತ್ತರಿಸುವ ಘೋರಕತ್ಯವೇ (ಕರ್ಣನು ನಮ್ಮ ಅಣ್ಣ ಎಂದು ಮೊದಲೇ ತಿಳಿದಿದ್ದರೆ) ನಡೆಯುತ್ತಿರಲಿಲ್ಲ.

ವೈಶಂಪಾಯನಃ

ಏವಂ ವಿಲಪ್ಯ ಕರುಣಂ ಧರ್ಮರಾಜೋ ಯುಧಿಷ್ಠಿರಃ ।
ವದನ್ ಸ ಶನಕೈ ರಾಜನ್ ಚಕಾರಾಸ್ಯೋದಕಂ ಪ್ರಭುಃ ॥೩೦॥

ವೈಶಂಪಾಯನ– ರಾಜನೆ! ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುವ ಧರ್ಮರಾಜನು ಈ ರೀತಿಯ ಕರುಣಾಜನಕವಾಗುವಂತೆ ರೋದಿಸಿ, (ಆತನ ವಿಷಯವನ್ನು) ಮೆತ್ತಗೆ ಹೇಳಿ, ಸ್ವಾಮಿಯಾದ ಧರ್ಮಜನು ತರ್ಪಣವನ್ನು ನೀಡಿದನು.

ತತೋ ಏನೇದುಃ ಸಹಸಾ ಸ್ತ್ರಿಯಃ ಪುಂಭಿಶ್ಚ ಸರ್ವಶಃ ।
ಅಭಿತೋ ಯಾಃ ಸ್ಥಿತಾಸ್ತತ್ರ ತಸ್ಮಿನ್ನುದಕಕರ್ಮಣಿ ॥೩೧॥

ಅನಂತರದಲ್ಲಿ ಸುತ್ತಲೂ ಅಲ್ಲಿ ಆ ತರ್ಪಣಕ್ರಿಯೆಗಾಗಿ ಜಮೆಯಾಗಿದ್ದರೋ ಆ ಎಲ್ಲ ಸ್ತ್ರೀಯರು ಪುರುಷರು ಗಟ್ಟಿಯಾಗಿ ರೋದಿಸಿದರು.

ತತಃ ಸಮಾನಯಾಮಾಸ ಕರ್ಣಸ್ಯ ಚ ಪರಿಚ್ಛದಮ್ ।
ಸ್ತ್ರಿಯಃ ಕುರುಪತಿಃ ಶ್ರೀಮಾನ್ ಪ್ರೇಮ್ಣಾ ಭ್ರಾತುರ್ಯುಧಿಷ್ಠಿರಃ ॥೩೨॥

ಅನಂತರದಲ್ಲಿ ಕಾಂತಿಮಂತನಾದ ಕುರುಪತಿಯಾದ ಯುಧಿಷ್ಠಿರನು ಅಣ್ಣನಾದ ಕರ್ಣನ ಪರಿವಾರದವರನ್ನು ಪತ್ನಿಯರನ್ನು ಕರೆಸಿದನು.

ಸ ತಾಭಿಃ ಸಹ ಧರ್ಮಾತ್ಮಾ ಪ್ರೇತಕಾರ್ಯಮನಂತರಮ್ ।
ಕೃತ್ವೋತ್ತತಾರ ಗಂಗಾಯಾಃ ಸಲಿಲಾದ್ವ್ಯಾಕುಲೇಂದ್ರಿಯಃ ॥೩೩॥

ಕಳವಳಗೊಂಡ ಇಂದ್ರಿಯನಾದ ಧರ್ಮಾತ್ಮನು ಅವರೆಲ್ಲರಿಂದ ಕೂಡಿಕೊಂಡು ಆನಂತರದ ಪ್ರೇತಕಾರ್ಯಗಳನ್ನು ಮುಗಿಸಿ ಗಂಗೆಯಿಂದ ಮೇಲೆದ್ದನು.

ಸರ್ವಂ ಚಕಾರ ಕರ್ಣಸ್ಯ ವಿಧಿವದ್ ಭೂರಿದಕ್ಷಿಣಮ್ ॥೩೪॥

ಕರ್ಣನಿಗಾಗಿ ವಿಧೀ-ಶಾಸ್ತ್ರಾನುಸಾರವಾಗಿ ಭಾರಿ ದಕ್ಷಿಣೆಯನ್ನು ನೀಡುವುದೇ ಮುಂತಾದ ಎಲ್ಲವನ್ನೂ ಮಾಡಿದನು.

ಪಾಪೇನಾऽಸೌ ಮಯಾ ಶ್ರೇಷ್ಠೋ ಭ್ರಾತಾ ಜ್ಞಾತಿರ್ನಿಪಾತಿತಃ ।
ಅತೋ ಮನಸಿ ಯದ್‌ಗುಹ್ಯಂ ಸ್ತ್ರೀಣಾಂ ತನ್ನ ಭವಿಷ್ಯತಿ ॥೩೪॥

ದುಷ್ಕರ್ಮದ ಪ್ರಭಾವದಿಂದ ಶ್ರೇಷ್ಠನಾದ ಅಣ್ಣನನ್ನು ಸಂಹರಿಸಿರುವೆನು. ಆದ್ದರಿಂದ ಇನ್ನು ಮಹಿಳೆಯರ ಮನದಲ್ಲಿ ಗುಟ್ಟು ನಿಲ್ಲದಿರಲಿ (ಎಂದು ಧರ್ಮರಾಜನು ನುಡಿದನು).

ಸ ರಾಜಾ ಧೃತರಾಷ್ಟ್ರಶ್ಚ ಕೃತಾಂಜಲಿರತಂದ್ರಿತಃ ।
ಸಮುತ್ತತಾರ ಗಂಗಾಯಾಂ ಭ್ರಾತೃಭಿಃ ಸಹ ಭಾರತ ॥೩೫॥

ಭರತಕುಲೋತ್ಪನ್ನನೇ! ಆಲಸ್ಯವಿಲ್ಲದಂತೆ ಸಹೋದರರಿಂದ ಕೂಡಿದ ರಾಜನು ಮತ್ತು ಧೃತರಾಷ್ಟ್ರನು ತರ್ಪಣವನ್ನು ಇತ್ತು, ಗಂಗೆಯಿಂದ ಮೇಲೆದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಸ್ತ್ರೀಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಸ್ತ್ರೀಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಶ್ರಾದ್ಧಪರ್ವ ॥

॥ ಸಮಾಪ್ತಂ ಸ್ತ್ರೀಪರ್ವ ॥

★ ★ ★ ★ ★

ನ ಹಿ ಪ್ರಮಾದಾತ್ ಪರಮಸ್ತಿ ಕಶ್ಚಿದ್
ವಧೋ ನರಾಣಾಮಿಹ ಜೀವಲೋಕೇ ।
ಪ್ರಮತ್ತಮರ್ಥಾ ಹಿ ನರಂ ಸಮಂತಾತ್
ತ್ಯಜಂತ್ಯನರ್ಥಾಶ್ಚ ಸಮಾವಿಶಂತಿ ॥

ಈ ಮನುಜಲೋಕದಲ್ಲಿ ಅಜಾಗರೂಕತೆಗಿಂತಲೂ
ದೊಡ್ಡದಾದ ಮೃತ್ಯುವು ಮತ್ತೊಂದಿಲ್ಲ, ಪ್ರಮತ್ತನಾದ
ಮನುಜನ ಸಮಸ್ತ ಅರ್ಥವು ನಾಶವಾಗುವುದು,
ಅನರ್ಥಗಳು (ಪ್ರಮತ್ತನನ್ನು) ಮುತ್ತುವವು.

ISBN : 978-93-88813-01-3